ಭಾಗ-6

ಸತ್ತರ್ಕದೀಪಾವಳಿ ತತ್ವಪ್ರಕಾಶಿಕಾ ತತ್ವಪ್ರದೀಪ

ಭಾವದೀಪ

ಅಧ್ಯಕ್ಷರು :

ಪರಮಪೂಜ್ಯ ॥ ಶ್ರೀ ಸುಬುಧೇಂದ್ರತೀರ್ಥಶ್ರೀಪಾದರು

ಪೀಠಾಧಿಪತಿಗಳು, ಶ್ರೀರಾಘವೇಂದ್ರಸ್ವಾಮಿಗಳ ಮಠ, ಮಂತ್ರಾಲಯ.

ಗೌರವ ಸಂಪಾದಕರು :

ವಿ॥ ರಾಜಾ ಎಸ್. ನಿರಿ ಆಚಾರ್ಯ

ಮಂತ್ರಾಲಯ.

ಸಂಪಾದನೆ ಮತ್ತು ಅನುವಾದ :

ವಿ॥ ಬೆಮ್ಮತ್ತಿ ವೇಂಕಟೇಶಾಚಾರ್ಯ

ಬೆಂಗಳೂರು.

॥ ಶ್ರೀಮನ್ಮೂಲರಾಮೋ ವಿಜಯತೇ ॥ ॥ ಶ್ರೀ ಗುರುರಾಜೋ ವಿಜಯತೇ ॥

ಭಾಗ - ೬

ಶ್ರೀಪದ್ಮನಾಭತೀರ್ಥಮುನಿ ವಿರಚಿತ
ಸತ್ತರ್ಕದೀಪಾವಳಿ

ಶ್ರೀತ್ರಿವಿಕ್ರಮಪಂಡಿತಾಚಾರ್ಯ ವಿರಚಿತ
ತತ್ವಪ್ರದೀಪ

ಶ್ರೀಜಯತೀರ್ಥಮುನಿ ವಿರಚಿತ
ತತ್ವಪ್ರಕಾಶಿಕಾ

ಭಾವದೀಪ

ಶ್ರೀವೇದವ್ಯಾಸರ ಬ್ರಹ್ಮಸೂತ್ರ, ಶ್ರೀಮಧ್ವಾಚಾರ್ಯರ ಭಾಷ್ಯ,
ಸತ್ತರ್ಕದೀಪಾವಳಿ, ತತ್ವಪ್ರದೀಪ, ತತ್ವಪ್ರಕಾಶಿಕಾ ಟೀಕೆಗಳೊಂದಿಗೆ
ಶ್ರೀಮಂತ್ರಾಲಯಪ್ರಭುಗಳ ಭಾವದೀಪ
ಸಂಸ್ಕೃತ ಮೂಲ ಹಾಗೂ ಕನ್ನಡ ಅನುವಾದ

ವಿಶೇಷ ವಿಚಾರ ಹಾಗೂ ಸಮಗ್ರ ವಿಶ್ಲೇಷಣೆಯೊಂದಿಗೆ

* * * * * *

ಪ್ರಕಾಶನ :
ಶ್ರೀಗುರುಸಾರ್ವಭೌಮ ಸಂಶೋಧನ ಮಂದಿರ,
ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ,
ಶ್ರೀರಾಘವೇಂದ್ರಸ್ವಾಮಿಗಳ ಮಠ, ಮಂತ್ರಾಲಯ - 518 345 ಆಂಧ್ರಪ್ರದೇಶ.

॥

'ಭಾವದೀಪ' : ಮಂತ್ರಾಲಯ ಕ್ಷೇತ್ರದಲ್ಲಿ ಮನ್ಮಥ ॥ ಫಾಲ್ಗುಣ ಬಹುಳ ॥ ಷಷ್ಠಿ ದಿನಾಂಕ : ೨೯-೦೩-೨೦೧೬ ಶ್ರೀ ಸುಯತೀಂದ್ರತೀರ್ಥ ಶ್ರೀಪಾದಂಗಳವರ ಮೂರನೆಯ ಮಹಾಸಮಾರಾಧನೆಯ ಉತ್ತರಾರಾಧನೆಯ ಶುಭಸಂದರ್ಭದಲ್ಲಿ ಪರಮಪೂಜ್ಯ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರು ಈ ಕೃತಿಯನ್ನು ಲೋಕೇಶಾರ್ಪಣೆ ಹಾಗೂ ಲೋಕಾರ್ಪಣೆ ಮಾಡಿದರು.

ಪ್ರಕಾಶನ : ಶ್ರೀಗುರುಸಾರ್ವಭೌಮ ಸಂಶೋಧನ ಮಂದಿರ,
ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ,
ಶ್ರೀರಾಘವೇಂದ್ರಸ್ವಾಮಿಗಳ ಮಠ, ಮಂತ್ರಾಲಯ - 518 345
ಆಂಧ್ರಪ್ರದೇಶ.

ಸಂಪಾದನೆ ಮತ್ತು ಅನುವಾದ : ವಿ ॥ ಬೆಮ್ಮತ್ತಿ ವೇಂಕಟೇಶಾಚಾರ್ಯ, ಬೆಂಗಳೂರು.
ದೂರವಾಣಿ : 914149120

ಪ್ರಥಮಮುದ್ರಣ : 2015

ಪುಟಗಳು : 704

ಬೆಲೆ : 600 ರೂ

ಪ್ರತಿಗಳು : 1000

©

Publication Copy right :

ಶ್ರೀಗುರುಸಾರ್ವಭೌಮ ಸಂಶೋಧನ ಮಂದಿರ,
ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ,
ಶ್ರೀರಾಘವೇಂದ್ರಸ್ವಾಮಿಗಳ ಮಠ, ಮಂತ್ರಾಲಯ - 518 345 ಆಂಧ್ರಪ್ರದೇಶ.

ಅಕ್ಷರಜೋಡಣೆ :

ಶ್ರೀ ಬೆಮ್ಮತ್ತಿ ಶ್ರೀನಿವಾಸ
ಶ್ರೀಮತಿ ಎಸ್. ನಾಗಲತಾ

ಮುದ್ರಣ :
ಮುಕ್ತಿಪಥ ಮುದ್ರಣಾಲಯ, ಬೆಂಗಳೂರು.

॥ Srimanmoola Ramo Vijayate ॥ ॥ Sri Gururajo Vijayate ॥

Vol. - 6

SRI PADMANABHATIRTHAMUNI'S
SATTARKADIPAVALI

SRIJAYATIRTHAMUNI'S
TATVAPRAKAASHIKAA

SRI TRIVIKRMAPANDITAACHARYA'S
TATVAPRADIPA

BHAVADIPA

Sri Vedavyasa's Brahmasutra,
Sri Madhvacharya's Bhashya,
Teekas - Sattarkadipawali, Tatvapradipa, Tatvaprakaashikaa

Bhavadipa by Sri Mantrayala Prabhu

Sanskrit Original Text with Kannada Translation

with special debate from many commentaries & overall critisism

Published by :

Sri Gurusarvabhouma Samshodhana Mandira,
Jagadguru Srimanmadhvacharya Mula Mahasamsthana,
Sri Raghavendraswamy Mutt, Mantralayam - 518 345 A.P.

'BHAVADIPA' : 25-11-2015 HH Sri Sri Subhudendra Thirta sripada has submitted this 6th volume to Sri Raghavendraswamiji at Mantralaya.

Publication : Sri Gurusarvabhouma Sanshodhana Mandira,
Jagadguru Srimanmadhvacharya Mula
Mahasamsthana, Sri Raghavendraswamy mutt,
Mantralayam. A.P.

Edited & Translated by : Vidwan Bemmatti Venkateshacharya,
Bangalore. Ph : 9141495120

First Edition : 2015

Price : Rs. 600

Copies : 1000

©

Publication Copy right :

Sri Gurusarvabhouma Samshodhana Mandira,
Jagadguru Srimanmadhvacharya Mula Mahasamsthana,
Sri Raghavendraswamy Mutt, Mantralayam - 518 345 A.P.

Type set :

Smt. S. Nagalatha, Bangalore.
Sri Sri Bemmatti Srinivasa

Printed at :

Muktipatha Mudranalaya, Bangalore.

॥ ಶ್ರೀಮನ್ಮೂಲರಾಮೋ ವಿಜಯತೇ ॥ ॥ ಶ್ರೀಗುರುರಾಜೋ ವಿಜಯತೇ ॥

ಬ್ರಹ್ಮಸೂತ್ರ ಭಾಷ್ಯ

ಸತ್ತರ್ಕದೀಪಾವಳಿ ತತ್ವಪ್ರಕಾಶಿಕಾ ತತ್ವಪ್ರದೀಪ

ಭಾವದೀಪ

* * * *

ಅಧ್ಯಕ್ಷರು :

ಶ್ರೀ ಸುಬುಧೇಂದ್ರತೀರ್ಥಶ್ರೀಪಾದರು

ಪೀಠಾಧಿಪತಿಗಳು, ಶ್ರೀರಾಘವೇಂದ್ರಸ್ವಾಮಿಗಳ ಮಠ, ಮಂತ್ರಾಲಯ.

ಗೌರವ ಸಂಪಾದಕರು :

ವಿ॥ ರಾಜಾ ಎಸ್. ಗಿರಿಆಚಾರ್ಯ

ಮಂತ್ರಾಲಯ

ಸಂಪಾದನೆ ಮತ್ತು ಅನುವಾದ :

ವಿ॥ ಬೆಮ್ಮತ್ತಿ ವೇಂಕಟೇಶಾಚಾರ್ಯ

ಬೆಂಗಳೂರು.

॥ Srimanmoola Ramo Vijayate ॥ ॥ Sri Gururajo Vijayate ॥

Brahmasutra Bhashya

Sattrakadipavali Tatvaprakaashikaa

Tatvapradipa

BHAVADIPA

******

President:

HH Sri Subhudhendratirtha Sripadaru

PeeTadhipati of Sri Raghavendraswamy Mutt,
Mantralayam.

Honorary Editor:

Sri Vidwan Raja S. Giri Acharya

Mantralayam.

Edited & Translated by :

Vidwan Bemmatti Venkateshacharya,

Bangalore.

ಆರನೆಯ
ವಾಙ್ಮಯ-ಕುಸುಮಹಾರ
ಸಮರ್ಪಣೆ

ಶ್ರೀರಾಘವೇಂದ್ರಸ್ವಾಮಿಗಳ ಮಠಾಧೀಶರಾದ ಪರಮಪೂಜ್ಯ ॥ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರು ಶ್ರೀರಾಘವೇಂದ್ರತೀರ್ಥಶ್ರೀಪಾದರ ಅಂತರ್ಯಾಮಿಗಳಾದ ಶ್ರೀಮನ್ಮಧ್ವಾಚಾರ್ಯರ ಅಂತರ್ಯಾಮಿಗಳಾದ ಶ್ರೀಮನ್ ಮೂಲರಾಮಚಂದ್ರದೇವರಿಗೆ ಈ ಕೃತಿಯನ್ನು ಆರನೆಯ ವಾಙ್ಮಯ ಕುಸುಮಹಾರವನ್ನಾಗಿ ಸಮರ್ಪಣೆ ಮಾಡಿದ್ದಾರೆ.

ಪರಮಪೂಜ್ಯ ॥ ಶ್ರೀಸುಬುಧೇಂದ್ರತೀರ್ಥಶ್ರೀಪಾದರ ಜ್ಞಾನದೀಕ್ಷೆ

ಈಕೃತಿಯಮುದ್ರಣಕ್ಕೆತಗಲುವದುಬಾರಿವೆಚ್ಚವನ್ನುತಮ್ಮಪಾದಕಾಣಿಕೆಯಿಂದಲೇ ನಿರ್ವಹಿಸಿದ ಪರಮಪೂಜ್ಯ॥ ಶ್ರೀಸುಬುಧೇಂದ್ರತೀರ್ಥಶ್ರೀಪಾದಂಗಳವರು ಈ ಕೃತಿಯ ಆಮೂಲಾಗ್ರ ಪರಿಪೂರ್ಣತೆಗೂ ಕೂಡ ಮುಖ್ಯಕಾರಣರಾಗಿದ್ದಾರೆ. ಮೊದಲನೆಯ ಸಂಪುಟದಲ್ಲಿ ಭಾವದೀಪ ಅನುವಾದವು ವಿಶೇಷವಿಚಾರದೊಂದಿಗೆ ಮುದ್ರಣವಾಯಿತು. ಎರಡನೆಯ ಸಂಪುಟದಲ್ಲಿ ಶ್ರೀಪಾದಂಗಳವರು ಸತ್ತರ್ಕದೀಪಾವಳಿ ಹಾಗೂ ತತ್ವಪ್ರದೀಪಗಳ ಅನುವಾದವನ್ನು ಸೇರಿಸುವಂತೆ ಆದೇಶಿಸಿದರು. ಮೂರನೆಯ ಸಂಪುಟದಲ್ಲಿ ಮೂರು ಟೀಕೆಗಳ ಜೊತೆ ಭಾವದೀಪದ ಅನುವಾದವು ಅಚ್ಚುಕಟ್ಟಾಗಿ ಮುದ್ರಣವಾಯಿತು. ನಾಕು ಹಾಗೂ ಐದನೆಯ ಸಂಪುಟದಲ್ಲಿ ಮೂರು ಟೀಕೆಗಳ ಜೊತೆ ಭಾವದೀಪದ ಅನುವಾದ ಮಾತ್ರವಲ್ಲದೇ ತತ್ವಪ್ರಕಾಶಿಕೆಗೆ ಸಂಬಂಧಪಟ್ಟ ಅನೇಕ ಟಿಪ್ಪಣಿಗಳ ವಿಶೇಷ ವಿಚಾರ ಹಾಗೂ ವೇದ-ಉಪನಿಷತ್ತುಗಳ ಸಂಪೂರ್ಣವ್ಯಾಖ್ಯಾನವು ಮುದ್ರಣವಾಯಿತು. ಪ್ರಕೃತ ಆರನೆಯ ಸಂಪುಟದಲ್ಲಿ ಅನೇಕ ವಿಮರ್ಶೆಗಳನ್ನು ನೀಡಲಾಗಿದೆ, ಹೀಗೆ ಹಂತ ಹಂತವಾಗಿ ಭಾವದೀಪದ ಈ ಯೋಜನೆಯು ಉತ್ತಮಗುಣಮಟ್ಟವನ್ನು ಹೊಂದುತ್ತಿದೆ. ಈ ಗುಣಮಟ್ಟಕ್ಕೆ ಮುಖ್ಯಕಾರಣರು ಪರಮಪೂಜ್ಯ॥ ಶ್ರೀಸುಬುಧೇಂದ್ರತೀರ್ಥ ಶ್ರೀಪಾದಂಗಳವರೇ ಆಗಿದ್ದಾರೆ. ಆದ್ದರಿಂದ ಶ್ರೀಪಾದಂಗಳವರು ಈ ಕೃತಿಗೆ ಮುಖ್ಯಮಾರ್ಗದರ್ಶಕರು, ಮುಖ್ಯಸಂಪಾದಕರು, ಪರಿಪೂರ್ಣ ಪರಿಕಲ್ಪನೆಯುಳ್ಳವರೂ ಆಗಿರುತ್ತಾರೆ.

ಬ್ರಹ್ಮಸೂತ್ರಭಾಷ್ಯವನ್ನು ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಕಾಮಧೇನು ಕಲ್ಪವೃಕ್ಷದಂತೆ ಈ ಕೃತಿಯನ್ನು ನೀಡುತ್ತಿರುವ ಶ್ರೀಪಾದಂಗಳವರ ಉದಾರತೆ, ವಿಶಾಲಮನೋಭಾವನೆ ಹಾಗೂ ಜ್ಞಾನದೀಕ್ಷೆ ಈ ಎಲ್ಲಾ ಗುಣಗಳಿಗೆ ಎಂದೆಂದೂ ಶರಣೆನ್ನೋಣ.

- ಸಂಪಾದಕ

॥ ಶ್ರೀಮನ್‌ಮೂಲರಾಮೋ ವಿಜಯತೇ ॥ ॥ ಶ್ರೀಗುರುರಾಜೋ ವಿಜಯತೇ ॥

ಶ್ರೀಮತ್-ಪರಮಹಂಸ-ಪರಿವ್ರಾಜಕಾಚಾರ್ಯ-ಪದ-ವಾಕ್ಯ-ಪ್ರವೀಣ-ಪಾರಾವಾರ-ಪಾರಂಗತ-
ಸರ್ವತಂತ್ರ-ಸ್ವತಂತ್ರ-ಶ್ರೀಮನ್-ಮೂಲರಘುಪತಿ-ವೇದವ್ಯಾಸ-ದೇವ-ದಿವ್ಯ-ಶ್ರೀಪಾದ
ಪದ್ಮಾರಾಧಕ-ಜಗದ್ಗುರು-ಶ್ರೀಮನ್-ಮಧ್ವಾಚಾರ್ಯ-ಮೂಲಮಹಾಸಂಸ್ಥಾನ-
ಮಂತ್ರಾಲಯ-ಶ್ರೀರಾಘವೇಂದ್ರಸ್ವಾಮಿಗಳವರ ಮಠದ ವೇದಾಂತ-ಸಾಮ್ರಾಜ್ಯ-
ದಿಗ್ವಿಜಯ-ವಿದ್ಯಾಸಿಂಹಾಸನಾಧೀಶ್ವರರಾದ
ಪರಮಪೂಜ್ಯ ಶ್ರೀ ಸುಶಮೀಂದ್ರತೀರ್ಥ ಶ್ರೀಪಾದಂಗಳವರ ಕರಕಮಲಸಂಜಾತರಾದ
ಪರಮಪೂಜ್ಯ ಶ್ರೀ ಸುಯತೀಂದ್ರತೀರ್ಥ ಶ್ರೀಪಾದಂಗಳವರ ವರಕುಮಾರರಾದ
ಪರಮಪೂಜ್ಯ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ

ಅನುಗ್ರಹ ಸಂದೇಶ

ಮಂತ್ರಾಲಯ ಪ್ರಭುಗಳಾದ ಶ್ರೀಮದ್ ರಾಘವೇಂದ್ರತೀರ್ಥಗುರುಸಾರ್ವಭೌಮರ ಇಚ್ಛೆಯಂತೆ ಭಾವದೀಪ ಯೋಜನೆಯು ನಿರಾತಂಕವಾಗಿ ಸಾಗುತ್ತಿದೆ. ಪ್ರಕೃತ ಆರನೆಯ ಸಂಪುಟವು ಪ್ರಕಾಶನಗೊಳ್ಳುತ್ತಿರುವುದು ನಮಗೆ ಅತ್ಯಂತ ಮುದ ತಂದಿದೆ. ಇಲ್ಲಿಯತನಕ ಮುದ್ರಿತವಾದ ಸಂಪುಟಗಳನ್ನು ಜಿಜ್ಞಾಸುಗಳು ಬಹಳ ಮೆಚ್ಚಿದ್ದಾರೆ. ಮತ್ತಷ್ಟು ವ್ಯಾಪಕವಾಗಿ ಇದರ ಉಪಯೋಗ ಸಜ್ಜನರಿಗೆ ತಲುಪಬೇಕೆಂಬುದೇ ನಮ್ಮ ಹೆಬ್ಬಯಕೆ.

ಒಟ್ಟು ಈ ಸಂಪುಟದಲ್ಲಿರುವ ಆರು ಅಧಿಕರಣಗಳಿಂದ ಆರು ಪ್ರಮೇಯಗಳನ್ನು ಅವಶ್ಯವಾಗಿ ನಾವು ತಿಳಿದು ಅನುಷ್ಠಾನಕ್ಕೆ ತಂದುಕೊಳ್ಳಬೇಕು.

ಭೂಮಾಧಿಕರಣ - ನಾಮಾಭಿಮಾನಿಯಾದ ಆಶಾ ಎಂಬ ದೇವತೆಯಿಂದ ಪ್ರಾರಂಭಿಸಿ ವಾಗಭಿಮಾನಿಯಾದ ಭಾರತಿದೇವಿಯ ತನಕ ತಾರತಮ್ಯವನ್ನು ತಿಳಿಯಬೇಕು. ಅವಳಿಗಿಂತಲೂ ಮುಖ್ಯಪ್ರಾಣದೇವರು ಉತ್ತಮರಾಗಿದ್ದಾರೆ ಎಂದು ತಿಳಿದು ಅವರಿಗಿಂತಲೂ ಪರಮೋತ್ತಮನಾದವನು ಮಹಾವಿಷ್ಣುವೇ ಆಗಿದ್ದಾನೆಂದು ತಿಳಿಯಬೇಕು. ಈ ತಾರತಮ್ಯ ಜ್ಞಾನವು ಬಹಳ ಪ್ರಧಾನವಾದದ್ದು. ಮೋಕ್ಷದ ಮೊದಲ ಮೆಟ್ಟಿಲೇ ಇದು. ಈ ತಾರತಮ್ಯವನ್ನು ಅರಿಯ ಬೇಕೆಂದರೆ ಭೂಮಾಧಿಕರಣವನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡಬೇಕು. ಆಗ ಮಾತ್ರ ಉಪನಿಷತ್ತುಗಳಲ್ಲಿ ಹೇಳಲ್ಪಟ್ಟ ತಾರತಮ್ಯದ ಅರಿವು ಹಾಗೂ ವಿಷ್ಣುಸರ್ವೋತ್ತಮತ್ವದ ದಾರ್ಢ್ಯ ಬರಲು ಸಾಧ್ಯ.

ಅಕ್ಷರಾಧಿಕರಣ - ಇದರಲ್ಲಿ ಅಕ್ಷರಳೆನಿಸಿದ ಲಕ್ಷ್ಮೀದೇವಿಯ ತನಕ ಸಕಲ ವಸ್ತುಗಳನ್ನು ಧರಿಸಿದವನು ಮಹಾವಿಷ್ಣುವೆಂದು ಸಮರ್ಥಿಸಲಾಗಿದೆ. ಆಜ್ಞೆಮಾತ್ರದಿಂದಲೇ ಸಕಲವಸ್ತುಗಳನ್ನು ಧರಿಸಿದವನು ಮಹಾವಿಷ್ಣುವೇ ಆಗಿರುವುದರಿಂದ ಪ್ರತಿನಿತ್ಯ ಪ್ರತಿಕ್ಷಣ ನಮ್ಮನ್ನು ಧರಿಸಿ ಸಲಹುತ್ತಿರುವ ಭಗವಂತನನ್ನು ನಾವು ಅಕ್ಷರ ನಾಮಕವಾಗಿ ಉಪಾಸನೆಗೈಯಬೇಕು. ನಮ್ಮೆಲ್ಲರ ಜೀವನವನ್ನು ಧರಿಸಿದ ಆ ಮಹಾವಿಷ್ಣುವಿನ ಸರ್ವಧಾರಕತ್ವಗುಣವನ್ನು ಅರಿಯಬೇಕೆಂದರೆ ಅಕ್ಷರಾಧಿಕರಣ ಅಧ್ಯಯನವನ್ನು ಮಾಡಬೇಕು.

ಸದಧಿಕರಣ - ಪ್ರಳಯಕಾಲದಲ್ಲಿ ಯಾರೂ ಇಲ್ಲದಿದ್ದಾಗ ಏಕೈಕನಾಗಿ ನೆಲೆಸಿದವನು ಮಹಾವಿಷ್ಣು. 'ಸದೇವ ಸೌಮ್ಯ ಇದಮಗ್ರ ಆಸೀತ್' ಎಂಬ ಶ್ರುತಿಯಲ್ಲಿರುವ ಸತ್ ಎಂಬ ಪದವು ಇಂಥ ಪರಮಾತ್ಮನನ್ನೇ ಪ್ರತಿಪಾದನೆ ಮಾಡುತ್ತಿದೆ. ಜ್ಞಾನ ಕ್ರಿಯೆ ಮೊದಲಾದ ಗುಣಗಳಿಂದ ಕೂಡಿದವನಾಗಿ ಪ್ರಳಯಕಾಲದಲ್ಲಿ ನೆಲೆಸಿರುವುದರಿಂದ ಅವನೊಬ್ಬನೇ ಸರ್ವಶ್ರೇಷ್ಠ ಎಂಬುದು ಈ ಅಧಿಕರಣದಿಂದ ನಿರ್ಣಯವಾಗುತ್ತದೆ. ಅತ್ಯವಶ್ಯವಾದ ಇದರ ಉಪಾಸನೆಗಾಗಿ ಸದಧಿಕರಣವನ್ನೇ ಅಧ್ಯಯನ ಮಾಡಬೇಕು.

ದಹರಾಧಿಕರಣ - ದೇಹದಲ್ಲಿ ೭೨೦೦೦ ಪ್ರಧಾನ ನಾಡಿಗಳಿವೆ. ಅದರಲ್ಲಿ ಸುಷುಮ್ನಾನಾಡಿ ಬಹುಮುಖ್ಯವಾದದ್ದು. ದೇಹ ಮಧ್ಯದಲ್ಲಿರುವ ಸುಷುಮ್ನಾನಾಡಿಯ ಹೃದಯ ಪ್ರದೇಶದಲ್ಲಿ ಕಮಲವಿದೆ. ಅದರಲ್ಲಿ ಇರುವುದು ಜಡವಾದ ಆಕಾಶವಲ್ಲ ಮಹಾವಿಷ್ಣುವೇ ಆಗಿದ್ದಾನೆ. ಪ್ರತಿನಿತ್ಯ ಪ್ರತಿಕ್ಷಣ ಈ ಹೃದಯಪದ್ಮದಲ್ಲಿರುವ ಬಿಂಬರೂಪಿಯಾದ ಭಗವಂತನನ್ನು ಉಪಾಸನೆ ಮಾಡಬೇಕೆಂಬ ಅರಿವು ಮೂಡಬೇಕೆಂದರೆ ದಹರಾಧಿಕರಣವನ್ನು ಅಧ್ಯಯನ ಮಾಡಬೇಕು. ದಹರ ಶಬ್ದಕ್ಕೆ ಹೃದಯದಲ್ಲಿರುವ ಆಕಾಶ ಎಂದರ್ಥ. ಇದರಲ್ಲಿರುವ ವಹ್ನಿಮಂಡಲದಲ್ಲಿ ಪರಮಾತ್ಮನು ಸನ್ನಿಹಿತನಾಗಿದ್ದಾನೆ.

ಅನುಕೃತ್ಯಧಿಕರಣ - ಅನುಕೂಲ್ಯೇನ ಗೃಹ್ಯಮಾಣತ್ವ ಎಂಬ ಲಿಂಗಸಮನ್ವಯವನ್ನು ಈ ಅಧಿಕರಣದಲ್ಲಿ ಮಾಡಿದ್ದಾರೆ. ಇದರ ಮುಖ್ಯ ಉದ್ದೇಶ ಜ್ಞಾನಕ್ಕೋಸ್ಕರ ಪರಮಾತ್ಮನನ್ನೇ ನಾವು ಮೊರೆ ಹೋಗಬೇಕು. ಪರಮಾತ್ಮನನ್ನು ಬಿಟ್ಟು ಬೇರೆ ಯಾರನ್ನು ಕೂಡ ಪ್ರಾರ್ಥನೆ ಮಾಡಬಾರದು. ಅನಿರ್ದೇಶ್ಯಸುಖಸ್ವರೂಪನಾದವನು ಪರಮಾತ್ಮನೇ ಆಗಿರುವುದರಿಂದ ಅನಂತ ಸುಖದ ಪಾತ್ರವೂ ಕೂಡ ಅವನೇ ಆಗಿದ್ದಾನೆ. ಆದ್ದರಿಂದ ಮೋಕ್ಷಕ್ಕಾಗಿ ನಾವು ಪರಮಾತ್ಮನನ್ನೇ ಶರಣೆನ್ನಬೇಕು. ಅದಕ್ಕಾಗಿ ಅನುಕೃತ್ಯಧಿಕರಣವನ್ನು ಅಧ್ಯಯನ ಮಾಡಬೇಕು.

ವಾಮನಾಧಿರಕಣ - ರುದ್ರನಲ್ಲಿ ಪ್ರಸಿದ್ಧವಾದ ಈಶಾನ ಎಂಬ ಶಬ್ದವನ್ನು ಮಹಾವಿಷ್ಣುವಿನಲ್ಲಿ ಪ್ರತಿಪಾದನೆ ಮಾಡುವುದು ಈ ಅಧಿಕರಣದ ಉದ್ದೇಶವಾಗಿದ್ದರೂ ಕೂಡ ಹೃದಯದಲ್ಲಿ ಅವರವರ ದೇಹದ ಅಂಗುಷ್ಠಪರಿಮಾಣವಿರುವಷ್ಟು ಪ್ರದೇಶವಿರುತ್ತದೆ. ಅಲ್ಲಿ ಪರಮಾತ್ಮನು ವ್ಯಾಪ್ತನಾಗಿದ್ದಾನೆ. ಹೃದಯಸ್ಥ ಭಗವದ್‌ರೂಪದ ಉಪಾಸನೆಯನ್ನು ಹೇಳುವ ಮೂಲಕ ಈಶಾನ ಶಬ್ದದ ಸಮನ್ವಯವನ್ನು ಈ ಅಧಿಕರಣವು ಮಾಡುತ್ತಿದೆ. ಇದರಿಂದ ಅಂಗುಷ್ಠ ಇರುವವರು ಮಾತ್ರ ಭಗವದುಪಾಸನೆಗೆ ಅರ್ಹರಾಗುತ್ತಾರೆ ಇತ್ಯಾದಿ ಪ್ರಮೇಯಗಳನ್ನು ಈ ಅಧಿಕರಣವು ನಿರೂಪಣೆಮಾಡುತ್ತಿದೆ. ಹೀಗೆ ತಾರತಮ್ಯ, ಸರ್ವಧಾರಕತ್ವ, ಪ್ರಳಯಕಾಲಸ್ಥಿತತ್ವ, ಹೃದಯಪದ್ಮಸ್ಥಿತತ್ವ, ಆನುಕೂಲ್ಯೇನ ಗೃಹ್ಯಮಾಣತ್ವ, ಹೃದಯೇ ಅಂಗುಷ್ಠ ಪರಿಮಾಣೇನಸ್ಥಿತತ್ವ ಇತ್ಯಾದಿ ಆರು ಪ್ರಮೇಯಗಳನ್ನು ಈ ಆರು ಅಧಿಕರಣಗಳಿಂದ ಮುಖ್ಯವಾಗಿ ತಿಳಿಯಬೇಕು. ಇನ್ನೂ ಅನೇಕ ಪ್ರಮೇಯಗಳು ಈ ಅಧಿಕರಣಗಳಲ್ಲಿ ಇರುತ್ತವೆ.

ಮಂತ್ರಾಲಯಪ್ರಭುಗಳು ಈ ಸಂಪುಟದಲ್ಲಿರುವ ಅನೇಕ ಅಧಿಕರಣಗಳಲ್ಲಿ ಪಾಠಾಂತರಗಳ ಬಗ್ಗೆ ಹಾಗೂ ತತ್ವಪ್ರದೀಪದಲ್ಲಿರುವ ಅನೇಕ ವಿಶೇಷ ವಿಚಾರಗಳ ಬಗ್ಗೆ ಅದ್ಭುತ ವಿಷಯಗಳನ್ನು ತಿಳಿಸಿದ್ದಾರೆ. ಅಧ್ಯಯನ ಮಾಡುವವರು ಅದನ್ನು ಗಮನಿಸಿ ಶ್ರೀಮದ್‌ರಾಘವೇಂದ್ರತೀರ್ಥಗುರುಸಾರ್ವಭೌಮರ ಅನುಗ್ರಹಕ್ಕೆ ಪಾತ್ರರಾಗಬೇಕು.

ಪ್ರತಿಯೊಂದು ಸಂಪುಟದಂತೆ ಈ ಸಂಪುಟದಲ್ಲಿಯೂ ಕೂಡ ಶ್ರಮವಹಿಸಿ ಅನುವಾದ ಮಾಡಿದ ವಿದ್ವಾನ್ ಬೆಮ್ಮತ್ತಿ ವೇಂಕಟೇಶಾಚಾರ್ಯರಿಗೆ ಅಸ್ಮದ್ಗುರ್ವಂತರ್ಗತ ಶ್ರೀಮದ್ರಾಘವೇಂದ್ರತೀರ್ಥ-ಗುರ್ವಂತರ್ಗತ-ಭಾರತೀರಮಣ - ಮುಖ್ಯಪ್ರಾಣಾಂತರ್ಗತ - ಶ್ರೀಮನ್‌ಮೂಲರಘುಪತಿ - ವೇದವ್ಯಾಸದೇವರು ಸಂಪೂರ್ಣವಾಗಿ ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇವೆ.

ಶ್ರೀಕೃಷ್ಣಾರ್ಪಣಮಸ್ತು.

ಇತಿ ನಾರಾಯಣಸ್ಮರಣೆಗಳು.

Brahmasutra Bhashya
With
Select Commentaries including
Bhavadipa of Sri Raghavendra Tirtha

By

Vachaspati Dr. V. R. Panchamukhi

At the outset we express our Dandapranams with gratitude to His Holiness Sri Sri Subudhendra Thirtharau for providing Anugraha Vachana to this Sixth Volume. This volume consists of six adhikaranas of which Bhoomadhikarna is the First one. Bhoomadhikarna consists of two sutras. Bhooma is explained to be in the form "complete bliss".

''यो वै भूमा तत्सुखम्''

The Chandogya upanishad explains the gradation from Naamabhimani Usha to Bharathi Devi. At the end, it declares that Mahavishnu is the Bhooma and He is the supreme. The first sutra ascertains the supremacy of the Lord Vishnu. The second sutra **''धर्मोपपत्तेश्च''** describes that Lord Vishnu has the attributes of omninpresence (**सर्वगतत्व**) independence (**स्वतन्त्रत्व**) etc., & hence he is the unique one to be known as "Bhooma".

Next adhikarna is Akshara Adikarna. This consists of three sutras. The word Akshara conveys Goddess Lakshmi. But Bruhadranyaka states that

''एतस्मिन् खल्वक्षरे गार्गी आकाश ओतश्च प्रोतश्च''

the supreme God is the base for all matters upto Lakshmi Devi.

Threfore, the first sutra establishes that the word **अक्षर** conveys only to Lord Vishnu.

The Second sutra establishes that Vishnu is the sustainer of every object. This sutra explains the peculiar attributes of Lord Vishnu.

The third sutra says that since the attributes of other objects are not conveyed by the Shruthi, they are not denoted by the word Akshara.

Next Adhikarna is Sadadhikarana. This consists of one Sutra i.e., **''ईक्षतिकर्मव्यपदेशात्सः''**.

''सदेव सोम्येदमग्र आसीत् तदैक्षत तत्तेजोऽसृजत''

(बृहदारण्यक उपनिषत्)

Bruhadarnyaka and Chandogya upanishads state that only the object 'Sat' (**सत्**) was present at the begining of creation. Knowledge is a necessity for a meaningful and concerte creation. This is not possible by an inert prakruthi. Hence Vishnu is denoted by the word **सत्**

Next Adhikarna is Daharadhikarana. It consists of eight sutras. "**अथ यदिदमस्मिन्**" & other Riks of Chandogya Upanishad say that one who is "**द्युम्वाद्यायतनम्**" himself is present in the '**दहराकाश**' of the **हृदयकमल**. Since the attributes such as **अपहतपाप्मत्व** are unique for Vishnu, Adhikarana deals with only Lord Vishnu is reachable in the status of deep sleep. **सर्वधारकत्व, अपहतपाप्मत्व, सुप्तप्राप्यत्व** and **अरण्याश्रयत्व** etc are also the peculiar characters of Mahavishnu in the opinion of second & third sutras.

दहं विपाप्मं परवेश्मभूतं यत्पुण्डरीकं पुरमध्यसंस्थम् ।
तत्रापि दहरं गगनं विशोकः तस्मिन् यदन्तस्तदुपासितव्यम् ।।

(तैत्तिरेयोपनिषत्)

The above verse of taitareyopanishad states that only Vishnu resides in the **हृदयकमल**. Though it is popular in the world that jeeva resides in the **हृदयकमल**, the attributes such as **अपहतपाप्मत्व, सत्यकामत्व, पापलेपाभाव** are not appropriate to Jeeva. Hence, Maha Vishnu is the one who resides in **दहराकाश.**

Fourth, fifth, sixth and seventh sutras also establish the same.

The last sutra of this adhikarana clearly suggests to meditate Vishnu in **हृदयाकाश.**

Next adhikarna is **अनुकृत्यधिकरण**. It consists of two sutras. Linga Samanvaya of "**अनुकूल्येन गृह्यमाणत्व**" is done here. This suggests that Lord Vishnu should be prayed for seeking knowledge.

The Last Adhikarna in the present volume is **वामनाधिकरण ईशान** mentioned in the sentence of Kathaka Upanishad "**इशानो भूत भव्यस्य**"

is none other than Mahavishnu himself. This is justified from that next sentence **"मध्ये वामनमासीनम्"** in which the word "Vamana" asserts it. Mahavishnu is said to be in the size of a person's thumb in **हृदयाकाश**. Though, animlas have no thumb, it doesn't matter as humans are the authority for the measurement of thumb and it is the justification of this adhikarna.

The author of this volume, Vidwan Sri Bemmatti Venkateshacharya gives the critical analysis at various points. For example, in the sentence from **वामनाधिकरण**

"श्रुतिर्लिङ्गं समाख्या च वाक्यं प्रकरणं तथा । पूर्वं पूर्वं बलीयः स्यादेवमागमनिर्णयः"

The word Samakhya is considered as third part & the smallest among all. This has been critically analysed by the author. Sri Madhavaacharya himself has stated in his work that smakaya is inferior to Prakarana. Thereafter, in accordance to **"पूर्वं पूर्वं बलीयः स्यात्"** former one's are considered to be superior to the later ones.

In Bhoomadhikarna, Srimadacharya quotes as **एतस्मिन्नु** instead of **एतस्मिन्**

"एतस्मिन्नु खल्वक्षरे गार्गि आकाशः"

This clearly shows that Sri Acharya quotes parallel interpretation from another shakha. This new concept is disussed in this volume by the author. In the Bhashya vakya **"यस्मिन् इदं सञ्च वि चैधि सर्वं यस्मिन् देवा अधिविश्वे निषेधुः"**, Bemmatti acharya opines that the

word सर्वं need not be recognised. However this reading is prevalent everywhere. Since the aspect of Sarvam is not discussed in Tika & Prachina Kosha, it is not justifiable in not considering its value. According to the author, this aspect needs discussion.

He justifies the point of studying Upanaishads before Brahmasutras at many instances in his work I am of the opinion that such analytical work is necessary to create enthusiasm and thinking among the students. Mere translation is not much advantageous in analysing such issues.

Sri Subhudhendra Swamiji is to be venerated highly. Though he is entangled in many mutt affairs, he has never neglected the Jnanakarya. I salute the lotus feet of Sri Swamiji for nurturing, estbalishing & propagating knowledge among the inquisitive public.

I sincerely render my pranams at the feet of Sri Harivayu Gurus and pray to bestow their blessings on all who participated in this Janakarya.

Vachaspati Dr. V. R. Panchamukhi
Chancellor, Sri GuruSarvabhouma Sanskrit Vidyapeeth and
Executive Director,
Sri Gurusarvabhouma Samsodhan Mandir
Mantralayam

ಆರನೆಯ ಸಂಪುಟ
ಓದುವ ಮೊದಲು

ಹೊರಜಗತ್ತಿನ ಕದ ಮುಚ್ಚಿದೆ ಒಳಜಗತ್ತಿನ ಕದ ತೆರೆದಿದೆ. ಇಷ್ಟು ದಿವಸ ಹೊರಜಗತ್ತಿನ ಬೆಳಕಿನ ನೋಟ. ಇಂದು ಒಳಜಗತ್ತಿನ ಬೆಳಕಿನ ನೋಟ. ಇಷ್ಟು ದಿವಸ ಜಗತ್ತು ಮಲಗಿದರೆ ನನಗೆ ರಾತ್ರಿ; ಜಗತ್ತು ಎದ್ದರೆ ಹಗಲು. ಇಂದು ಜಗತ್ತು ಮಲಗಿದಾಗ ನನಗೆ ಹಗಲು. ಜಗತ್ತು ಎಚ್ಚರವಾದಾಗ ರಾತ್ರಿ.

XVIII

''ಹರಿಯುವ ನೀರಿಗೆ ದೊಣ್ಣೆರಾಯನ ಅಪ್ಪಣೆ ಏಕೆ?'' ಎಂಬ ಗಾದೆಯ ಮಾತಿನಂತೆ ಬೇಕೆಂದರೂ ಬೇಡವೆಂದರೂ ಪ್ರತಿನಿತ್ಯ ಹೊರಜಗತ್ತಿನಲ್ಲಿ ಸೂರ್ಯ ಹುಟ್ಟುತ್ತಾನೆ, ಮುಳುಗುತ್ತಾನೆ. ಆದರೆ ಒಳಜಗತ್ತಿನ ಸೂರ್ಯೋದಯ ಸುಲಭವಲ್ಲ. ಅದಕ್ಕೆ ಹರಿಯ ಕರುಣೆ ಬೇಕು. ಗುರುಕರುಣೆಯ ಶಕ್ತಿ ಬೇಕು. ಸೂರ್ಯಬಿಂಬ ಹುಟ್ಟಿದಾಗ ಕಮಲ ಅರಳುವುದು ಲೋಕದ ಸೌಂದರ್ಯ. ಹೃದಯಕಮಲ ಅರಳಿದಾಗ ಬಿಂಬಸೂರ್ಯ ಹುಟ್ಟುವುದು ಒಳಜಗತ್ತಿನ ಸೌಂದರ್ಯ.

ಭೂತಬಂಗಲೆಯಾಗಿದ್ದ ಮನಸ್ಸು ಇಂದು ಭಗವಂತನ ಅರಮನೆ. ಧಿಮಿಕಿಟಿ ಎನ್ನುತ್ತಿದ್ದ ರಕ್ಕಸರ ಒಳಗಿನ ರಂಗಸ್ಥಳ ಇಂದು ಭಗವಂತನ ಸಿಂಹಾಸನ. ಕ್ಷುದ್ರಪ್ರಾಣಿಗಳ ಕತ್ತಲಿನ ಹೃದಯಕವಾಟ ಇಂದು ಬೆಳಕಿನ ಪುಂಜ. ಮಾಂಸದ ಹೃದಯದಲ್ಲಿ ಇಷ್ಟು ದಿವಸ ಅನ್ನ ನೀರು ರಕ್ತಗಳು ಹರಿಯುತ್ತಿದ್ದವು. ಇಂದು ಬೆಳ್ಳಂಬೆಳಕಿನ ಕ್ಷೀರಸಮುದ್ರವೇ ಹರಿಯುತ್ತಿದೆ.

ಉಪ್ಪಿನ ಸಮುದ್ರದಲ್ಲಿ ಹುಟ್ಟಿಬರುತ್ತಿದ್ದ ಸೂರ್ಯ ಇಂದು ಕ್ಷೀರಸಮುದ್ರದಲ್ಲಿ ಉದಯಿಸಿದ್ದಾನೆ. ಮುಖವಾಡ ಹೊತ್ತುನಿಂತ ಮನುಷ್ಯರ ಸಹವಾಸ ಇಲ್ಲಿಲ್ಲ. ಗೊಬ್ಬರದ ಆಹಾರಪದಾರ್ಥಗಳು ವಿಷಮಿಶ್ರಿತ ಮರಬಳ್ಳಿಗಳು ಪ್ಲಾಸ್ಟಿಕ್ ಹೂವುಗಳು, ಕಾಂಕ್ರೇಟಿನ ಕಟ್ಟಡಗಳು, ಇಂಥ ವಿಕೃತಿಯ ಪ್ರಕೃತಿ ಇಲ್ಲಿಲ್ಲ. ಎಲ್ಲವೂ ಸಹಜ ಪ್ರಕೃತಿಯಲ್ಲಿ ಬೆಳೆದುನಿಂತ ಉದ್ಯಾನವನದ ತಂಗಾಳಿಯ ಸುಖಸ್ಪರ್ಶದಲ್ಲಿ ತೇಲುವಂತಹ ಆನಂದಕ್ಷಣವಿದು.

ಒಂದೆಡೆ ಭೋರ್ಗರೆಯುವ ಕ್ಷೀರಸಮುದ್ರದ ನಿನಾದ. ಮತ್ತೊಂದೆಡೆ ಘಮಘಮಿಸುವ ಉದ್ಯಾನವನದ ಪುಷ್ಪಗಳ ಪರಿಮಳ. ಮಗದೊಂದೆಡೆ ಕಣ್‌ಕುಕ್ಕುವ ದಿವ್ಯ ಶ್ವೇತದ್ವೀಪ. ದಿಕ್ಕು ಎದಿಕ್ಕುಗಳಲ್ಲಿ ವೇದ ಘೋಷದ ಮಂಗಳ ನಿನಾದ. ಒಂದೊಂದೂ ಆಶ್ಚರ್ಯಕರ. ವರ್ಣಿಸಲು ಸಾಧ್ಯವಾಗದ ನಿಬ್ಬೆರಗಾಗಿಸುವ ಸೌಂದರ್ಯದ ಖನಿ.

ಹೃದಯಪಟ್ಟಣದಲ್ಲಿರುವ ಅರಮನೆ ಎಂದರೆ ಶ್ವೇತದ್ವೀಪ. ಇಲ್ಲಿ ಎಲ್ಲರೂ ನೆಲೆಸಿದ್ದಾರೆ. ದೇವತೆಗಳು, ಋಷಿಗಳು, ಪಿತೃಗಳು, ಗಂಧರ್ವರು, ಅಪ್ಸರೆಯರು, ಗುರುಗಳು, ಹರಿದಾಸರುಗಳು. ಪ್ರತಿಯೊಬ್ಬರ ಸಂಖ್ಯೆ ಸಾವಿರಗಟ್ಟಲೆ, ಲಕ್ಷಗಟ್ಟಲೆ. ಆಹ್ಹಾ....ಜಗತ್ತಿನಲ್ಲಿ ಇದಕ್ಕಿಂತ ಆಚ್ಚರಿಯ ಸಂಗತಿ ಮತ್ತೊಂದಿಲ್ಲ.

ಅಚ್ಚರಿ! ಕಡು ಅಚ್ಚರಿ!! ದೇಹ ಈಗ ಚಿತ್ರಪಟದಂತೆ ಸ್ತಬ್ಧ. ಬಿಂಬರೂಪಿಯಾದ ಶ್ರೀಹರಿಯಿಂದ ಕಂಗಳನ್ನು ಕೀಳಲಾಗುತ್ತಿಲ್ಲ. ಲೋಕವಾರ್ತೆಯಲ್ಲಿ ಚಟಪಟಿಸುತ್ತಿದ್ದ ನಾಲಿಗೆ ಇಂದು ಹರಿಮಂತ್ರವನ್ನು ತನ್ನಷ್ಟಕ್ಕೆ ನುಡಿಯುತ್ತಿದೆ.

ದಹ್ರಂ ವಿಪಾಪ್ಮಂ ಪರವೇಶ್ಮಭೂತಮ್ ಯತ್ ಪುಂಡರೀಕಂ ಪುರಮಧ್ಯಸಂಸ್ಥಮ್ ।
ತತ್ರಾಪಿ ದಹ್ರಂ ಗಗನಂ ವಿಶೋಕಃ ತಸ್ಮಿನ್ ಯದಂತಸ್ತದುಪಾಸಿತವ್ಯಮ್॥

ದೇಹವೇ ಒಂದು ಪಟ್ಟಣ. ಇದರ ಮಧ್ಯ ಹೃದಯವು ಒಂದು ಸರೋವರ. ಇದರಲ್ಲಿರುವ ಕಮಲವೇ ಭಗವಂತನ ಪುಟ್ಟ ಮನೆ. ಎಂದೂ ಪಾಪದ ಕೆಸರು ಇದಕ್ಕೆ ತಟ್ಟುವುದಿಲ್ಲ. ಅತ್ಯಂತ ಪವಿತ್ರವಾದ ತಾಣವಿದು. ಈ ಕಮಲದ ನಡುವೆ ಒಂದು ಸಣ್ಣ ಆಕಾಶವಿದೆ. ಅದರಲ್ಲಿ ಮಹಾವಿಷ್ಣು ಕುಳಿತಿದ್ದಾನೆ. ಅವನನ್ನು ತವಕದಿಂದ ಒಲಿಸಿಕೊಳ್ಳಬೇಕು.

ಈ ಜಗದೊಡಯನಾದರೂ ಹೃದಯಕಮಲದ ಮಧ್ಯ ಸೂರ್ಯನಂತೆ ಕಂಗೊಳಿಸುತ್ತಿದ್ದಾನೆ. ಇಡೀ ಬ್ರಹ್ಮಾಂಡವನ್ನು ರಕ್ಷಣೆ ಮಾಡುವವನಾಗಿದ್ದರೂ ಈ ಪುಟ್ಟ ಹೃದಯದಲ್ಲಿ ನೆಲೆಸಿ ನನ್ನನ್ನು ರಕ್ಷಿಸುತ್ತಿದ್ದಾನೆ. ಇವನು ವಾಸಿಸುವ ಈ ಕಮಲವಾದರೂ ಒಂದು ದಿವ್ಯಮಂಟಪದ ಮಧ್ಯದಲ್ಲಿ ಕಂಗೊಳಿಸುತ್ತಿದೆ. ಝಗಝಗಿಸುವ ಅಸಂಖ್ಯಮಣಿಗಳ ಮಾಲೆಯಿಂದ ಮಂಟಪ ಬೆಳಗುತ್ತಿದೆ. ಎಲ್ಲಿಯೂ ಕಾಣದ ವಿಶಾಲವಾದ ಕ್ಷೀರಸಮುದ್ರದಲ್ಲಿ ಈ ಮಂಟಪವಿದೆ. ಇದನ್ನು ಶ್ವೇತದ್ವೀಪವೆಂದು ಕರೆಯುತ್ತಾರೆ. ಹೆಸರಿಗಷ್ಟೇ ಇದು ಶ್ವೇತದ್ವೀಪ. ಇದರ ಬಣ್ಣ ಸಂಪೂರ್ಣ ಬಂಗಾರ. ಆದರೆ ಲೋಹಮಯವಲ್ಲ. ಮಹಾಲಕ್ಷ್ಮಿದೇವಿಯೇ ಹೀಗೆ ಮಂಟಪರೂಪವನ್ನು ತಾಳಿದ್ದಾಳೆ. ನಾಕು ದಿಕ್ಕುಗಳಲ್ಲಿಯೂ ಬಾಗಿಲುಗಳಿವೆ. ನೂರು ಕಂಭಗಳಿವೆ. ತಳಿರು ತೋರಣಗಳು ಆಪ್ಯಾಯಮಾನವಾಗಿದೆ. ಎಲ್ಲೆಡೆಯು ದ್ವಾರಪಾಲಕರಿದ್ದಾರೆ. ದಿಗಭಿಮಾನಿ ದೇವತೆಗಳಿದ್ದಾರೆ. ಸರಸ್ವತಿ ಭಾರತಿಯರಿದ್ದಾರೆ. ಲಕ್ಷ್ಮೀದೇವಿಯ ವಿವಿಧ ರೂಪಗಳೂ ಇವೆ. ಈ ಶ್ವೇತದ್ವೀಪದ ಮಧ್ಯದಲ್ಲಿ ರತ್ನಸಿಂಹಾಸನ ಝಗಝಗಿಸುತ್ತಿದೆ. ಅಲ್ಲಿ ಒಂದು ಕಮಲ ಕೆಳಮುಖವಾಗಿದೆ.

ಅಕಾರ, ಉಕಾರ, ಮಕಾರ, ನಾದ, ಬಿಂದು, ಘೋಷ, ಶಾಂತ, ಅತಿಶಾಂತವೆಂಬ ಎಂಟು ಮುಖವನ್ನು ಹೊಂದಿರುವ ಪ್ರಣವವನ್ನು ಭಕ್ತಿಯಿಂದ ಉಚ್ಚರಿಸಿದ ಕೂಡಲೆ ಕೆಳಮುಖವಾದ ಮೊಗ್ಗು ಮೇಲ್ ಮುಖವಾಗಿದೆ. ಪುನಃ ಅದೇ ಪ್ರಣವವನ್ನು ಹೇಳಿದ ಕೂಡಲೇ ಕಮಲದ ಮೊಗ್ಗು ನಸುನಗುತ್ತಾ ಅರಳುತ್ತದೆ. ಕಮಲದ ಮಧ್ಯ ನಸುಗೆಂಪಿನ ಕರ್ಣಿಕೆಯಲ್ಲಿ ಬಿಂಬರೂಪಿಯಾದ ಶ್ರೀಮನ್ನಾರಾಯಣನು ಕುಳಿತಿದ್ದಾನೆ. ಎಷ್ಟು ನೋಡಿದರೂ ನೋಡಬೇಕೆಂಬ, ಕೇಳಿದರೂ ಪುನಃ ಕೇಳಬೇಕೆಂಬ ಎಷ್ಟು ಅಧ್ಯಯನ ಮಾಡಿ ತಿಳಿದರೂ ಪುನಃ ತಿಳಿಯಬೇಕೆಂಬ ಚಮತ್ಕಾರದ ಹೃದಯವನ್ನು ಹೊತ್ತು ನಿಂತಿದ್ದಾನೆ. ಇದುವೇ ಈ ಸಂಪುಟದಲ್ಲಿರುವ ದಹರಾಧಿಕರಣದ ಮುಖ್ಯತಾತ್ಪರ್ಯ.

ಮೊದ-ಮೊದಲು ಇದೊಂದು ಹಾಸ್ಯಕಥೆ. ಹೊರಗಣ್ಣಿಗೆ ಕೇವಲ ಕಥೆ. ಒಳ ನುಗ್ಗಿದಾಗ ಐತಿಹಾಸಿಕ ಕಥೆ. ಒಳಗಣ್ಣಿಗೆ ಮನೋರಂಗದ ಸತ್ಯಕಥೆ. ತಿಳಿಗಣ್ಣಿಗೆ ಭಗವಂತನ ಗುಣಗಾಥೆಯ ಸ್ವರಸ ಕಥೆ.

ಅದರಾಚೆಗೆ ಇದೊಂದು ಶಾಸ್ತ್ರ. ಜೀವನ ಬೆಳಗುವ ಸಚ್ಛಾಸ್ತ್ರ. ಮನ ಅರಳಿಸುವ ಮನಃಶಾಸ್ತ್ರ. ಮೂಲತಃ ತತ್ವಶಾಸ್ತ್ರ. ಇದಕ್ಕಾಗಿಯೇ ಹೊರಟಿತು ಬ್ರಹ್ಮಮೀಮಾಂಸಾಶಾಸ್ತ್ರ.

'ಬದುಕಲು ಇದೂ ಒಂದು ದಾರಿ' ಎನ್ನದಿರಿ. ಇಲ್ಲಿಯೂ ವ್ಯಾಪಾರೀಕರಣ ನಡೆದರೆ ಮರಳಿಬಾರದ ಪ್ರಪಾತ ಖಚಿತ.

'ಗುರಿ ತಲುಪಲು ಈ ಬದುಕೊಂದು ದಾರಿ' ಎನ್ನಿರಿ. ಆಗ ಶಾಶ್ವತ ಸುಖದ ತಾಣ ಖಚಿತ.

ಹಾಗಾದರೆ ' ನನ್ನಷ್ಟಕ್ಕೆ ನಾನು ಕುಳಿತು ಮೂಜಗದೊಡೆಯನ ಒಳಗಣ್ಣಿನೊಳಗೆ ನೋಡುವೆ' ಎನ್ನುವಂತಿಲ್ಲ. ಸಂಶಯಜ್ಞಾನ, ವಿಪರೀತಜ್ಞಾನ, ಅಜ್ಞಾನಗಳೆಂಬ ರಕ್ಕಸರು ದಿಕ್ಕು ತಪ್ಪಿಸಲು ಒಳಗೆ ನಿಂತು ಕಾಯುತಿಹರು. ಧ್ಯಾನದ ಮೊದಲು ಅವರ ನಿಗ್ರಹ ಅನಿವಾರ್ಯ.

ಒಳಶತ್ರುಗಳ ನಿಗ್ರಹಕ್ಕಾಗಿ ಬಾಹ್ಯಶತ್ರುಗಳ ನಿಗ್ರಹವು ಅನಿವಾರ್ಯ. ತತ್ವಜ್ಞಾನದ ವಿರೋಧಿಗಳೇ ಅಂತಃಶತ್ರುಗಳು. ಈ ಬಾಹ್ಯಶತ್ರುಗಳ ಮತ್ತು ಅಂತರಂಗಶತ್ರುಗಳ ನಿಗ್ರಹವಾದ ಮೇಲೆ ಬಿಂಬರೂಪಿಯ ಕಡೆ ನಡಿಗೆ ಸುಲಭ. ಇದುವೆ ಈ ಸಂಪುಟದ ಮುಖ್ಯಸಾರ.

'ಶ್ರೀಸುಬುಧೇಂದ್ರತೀರ್ಥರ ದೀಕ್ಷೆ'

ಶ್ರೀಸುಬುಧೇಂದ್ರತೀರ್ಥಶ್ರೀಪಾದರ ಅಧ್ಯಕ್ಷತೆಯಲ್ಲಿ ಆದೊಂದು ಸಭೆ. ಕಿಕ್ಕಿರಿದಿತ್ತು ಜನಸ್ತೋಮ. ಬೇರೇನೂ ಅಲ್ಲ. ಮೂರನೆಯ ಚಾರ್ತುಮಾಸ್ಯದ ಸಮಾರೋಪಸಮಾರಂಭ. ತರ್ಕತಾಂಡವ ಹಾಗೂ ಭಾವದೀಪ ಕೃತಿಗಳ ಬಿಡುಗಡೆಯೂ ಇತ್ತು. ಕೆಲವು ಗಣ್ಯರಿಗೆ ಸನ್ಮಾನವಿತ್ತು. ಕೊನೆಯಲ್ಲಿ ಶ್ರೀಪಾದರ ಅನುಗ್ರಹ ಭಾಷಣವಿತ್ತು. ಅದಕ್ಕಾಗಿ ಎಲ್ಲರ ಕಾತರವೂ ಕಾದಿತ್ತು. ಕೆಲವರ ಮನ ಶ್ರೀಪಾದರು ತಮ್ಮ ಚಾರ್ತುಮಾಸ್ಯದ ಅನುಭವ ಹಂಚಿಕೊಳ್ಳುತ್ತಾರೆ ಅನ್ನುತಿತ್ತು. ಕೆಲವರಿಗೆ ತಮ್ಮ ಯೋಜನೆಗಳ ಬಗ್ಗೆ ಹೇಳುತ್ತಾರೆ ಎಂದು ಅನಿಸಿತ್ತು. ಹಿರಿಯರ ಮನ ಯಾವುದಾದರೂ ಗ್ರಾಂಥಿಕವಿಷಯ ಮಾತನಾಡುವರು ಎಂದು ನಿರ್ಣಯಿಸಿತ್ತು. 'ಎನ್ನ ಬಗ್ಗೆ' 'ನಿಮ್ಮ ಬಗ್ಗೆ' 'ಅವರ ಬಗ್ಗೆ' ಮಾತನಾಡುತ್ತಾರೆಂದೆಲ್ಲಾ ಸಭೆ ಪಿಸುಗುಟ್ಟಿತ್ತು.

ಶ್ರೀಪಾದರ ಭಾಷಣ ಪ್ರಾರಂಭವಾಯಿತು. ಯಾರ ನಿರೀಕ್ಷೆಗೂ ಅಲ್ಲಿ ಉತ್ತರ ಇರಲಿಲ್ಲ. ಅದು ಎಂದಿನ ಭಾಷಣವೂ ಆಗಿರಲಿಲ್ಲ. ಶ್ರೀಪಾದರ ಮಾತುಗಳಲ್ಲಿ ಆವೇಶ ತುಂಬಿತು ಧ್ವನಿ ಗಡುಸಾಯಿತು. ಸಭೆ ಗುಡುಗಿತು. ಕೇಳುಗರ ಮನದಲ್ಲಿ ಮಿಂಚು ಚಳಕ್ ಎಂದಿತು. ಮೊದಲೇ ನಿಃಶಬ್ದ ಸಭೆ ಮತ್ತಷ್ಟು ನಿಶಬ್ದ ಎಂದಿತು.

ಅಂದಹಾಗೆ ಅದು ಭಾಷಣವಲ್ಲ. ಯುದ್ಧಕ್ಕೆ ಪಂಥಾಹ್ವಾನ. ಅಂದು ಕೌರವರ ಸಭೆಯಲ್ಲಿ ಆರ್ಭಟಿಸಿದ ಭೀಮಸೇನದೇವರು ಕೌರವರಿಗೆ ಪಂಥಾಹ್ವಾನ ಮಾಡಿದರು. ಇಂದು ಶ್ರೀಪಾದರು ಸತ್ಯಾನ್ವೇಷಿಗಳೆಂಬ ಮುಖವಾಡ ಹೊತ್ತ ಕೆಲವು ಸನಾತನ ಧರ್ಮದ್ವೇಷಿಗಳಿಗೆ ಪಂಥಾಹ್ವಾನ ನೀಡಿದರು.

ಆಗತಾನೆ ದಿನಪತ್ರಿಕೆಯಲ್ಲಿ ತನ್ನನ್ನು ಪ್ರಗತಿಪರನೆಂದು ತಿಳಿದವನೊಬ್ಬ ಹೇಳಿಕೆ ನೀಡಿದ್ದ -

'ಶ್ರೀರಾಮನು ವ್ಯಭಿಚಾರಿಪುರುಷ. ಸಾಮಾನ್ಯಮನುಷ್ಯರಿಗಿಂತಲೂ ಅವನು ಕೀಳು. ರಾಮಾಯಣ, ಗೀತೆ, ಮೊದಲಾದ ಗ್ರಂಥಗಳು ಅಮಾಯಕಜನರನ್ನು ಶೋಷಣೆಗೈಯುತ್ತಿವೆ. ಅವುಗಳನ್ನು ಬಹಿರಂಗಸಭೆಯಲ್ಲಿ ಸುಡಬೇಕು'. ಈ ವಿಷಯ ಓದಿದ ಶ್ರೀಪಾದರು,ಅಂದು ಕೌರವ ಸಭೆಯಲ್ಲಿ ಭೀಮಸೇನದೇವರು ಆರ್ಭಟಿಸಿದಂತೆ ಈ ಸಭೆಯಲ್ಲಿ ಆರ್ಭಟಿಸಿದರು.

'ರಾಮಾಯಣ ಮಹಾಭಾರತ ಇತರ ಯಾವುದೇ ಗ್ರಂಥಗಳಲ್ಲಿ ಒಂದೇ ಒಂದು ದೋಷಗಳನ್ನು ತೋರಿಸಿರಿ. ಅಥವಾ ಶ್ರೀಮನ್ ನಾರಾಯಣನ ಸ್ವರೂಪನಾದ ಶ್ರೀರಾಮಚಂದ್ರನ ವ್ಯಕ್ತಿತ್ವದಲ್ಲಿ ಒಂದೇ ಒಂದು ದೋಷವನ್ನು ತೋರಿಸಿರಿ. ಸಮಸ್ತ ಭಾರತದೇಶದಲ್ಲಿ ನೀವು ಎಲ್ಲಿ ಕರೆದರು ನಾವು ಬರಲು ಸಿದ್ಧರಿದ್ದೇವೆ. ಅಥವಾ ನಾವಿರುವಲ್ಲೇ ನೀವು ಬನ್ನಿ. ರಾಮಾಯಣ ಮಹಾಭಾರತ ಗೀತೆ ಮೊದಲಾದ ಗ್ರಂಥಗಳಲ್ಲಿರುವ ಅಧ್ಯಾಯಗಳಲ್ಲಿ ಅಥವಾ ಶ್ಲೋಕಗಳಲ್ಲಿ ಅಥವಾ ಪದಗಳಲ್ಲಿ ಅಥವಾ ಅಕ್ಷರಗಳಲ್ಲಿ ಒಂದನ್ನಾದರು ತಪ್ಪು ತೋರಿಸಿ. ನಿಮಗಿದು ನಮ್ಮ ಬಹಿರಂಗ ಪಂಥಾಹ್ವಾನ. ಮುಕ್ತಮನಸ್ಸಿನಿಂದ ನಮ್ಮ ಪಂಥಾಹ್ವಾನಕ್ಕೆ ನೀವು ಬಾರದಿದ್ದರೆ ನೀವು ಸತ್ಯಾನ್ವೇಷಿಗಳಲ್ಲ. ಮಿಥ್ಯಾನ್ವೇಷಿಗಳು. ನೀವು ಪ್ರಗತಿಪರರಲ್ಲ. ದುರ್ಗತಿಪರರು. ನೀವು ಸನಾತನ ಸಂಸ್ಕೃತಿಯ ಹಿತಚಿಂತಕರಲ್ಲ. ವೈಯಕ್ತಿಕ ದ್ವೇಷಿಗಳು ಎಂಬುದು ಸಾಬೀತಾಗುತ್ತದೆ. ಈ ಸವಾಲನ್ನು ಎಲ್ಲೆಡೆಯೂ ವ್ಯಾಪಕವಾಗಿ ಮಾಧ್ಯಮದವರು ಪ್ರಚಾರ ಮಾಡಿದಾಗಲೂ ನೀವು ಬಾರದಿದ್ದರೆ ನಿಮ್ಮ ಬಣ್ಣ ಬಯಲಾಗುವುದರಲ್ಲಿ ಸಂಶಯವಿಲ್ಲ.

XXII

ಹೀಗೆ ರಭಸವಾದ ಪುಂಖಾನುಪುಂಖವಾಗಿ ವಾಗ್ಝರಿಯು ಶ್ರೀಪಾದರ ಮುಖದಿಂದ ಧುಮುಕುತ್ತಿತ್ತು. ಶ್ರೀಪಾದರ ನೇರ ಧೀರತನದ ಮಾತುಗಳೆಂಬ ಹರಿತ ಬಾಣಗಳಿಗೆ ಎದೆಯೊಡ್ಡುವ ವ್ಯಕ್ತಿ ಯಾರೂ ಇಲ್ಲವೆಂದು ಸಭೆ ಅಂದೇ ನಿರ್ಣಯಿಸಿತ್ತು. ಮುಂದಿನ ದಿನಗಳಲ್ಲಿ ಅದು ಸತ್ಯವೂ ಆಯಿತು.

ಇದುವೆ ಯತಿದೀಕ್ಷೆ. ಇದುವೆ ಸನ್ಯಾಸದೀಕ್ಷೆ. ಇದುವೆ ತತ್ವದೀಕ್ಷೆ. ಇದುವೆ ಅಂತರಂಗದೀಕ್ಷೆ. ಇದುವೆ ವೈಷ್ಣವದೀಕ್ಷೆ. ಇದುವೆ ಸುದೀಕ್ಷೆ. ಇದುವೆ ಸತ್ಯವಾದ ದೀಕ್ಷೆ.

ಇದೊಂದಿಲ್ಲದೆ ಉಳಿದಿದ್ದೆಲ್ಲಾ ಇದ್ದರೂ ಇಲ್ಲದಂತೆ. ಇದೊಂದಿದ್ದರೆ ಎಲ್ಲವೂ ಇದ್ದಂತೆ.

ಅಂತರಂಗ ಶತ್ರುಗಳನ್ನು ಗೆಲ್ಲಲು ಬಾಹ್ಯ ಶತ್ರುಗಳನ್ನು ಹೀಗೆ ಶ್ರೀಪಾದರ ಆದರ್ಶದಲ್ಲಿ ನಿಗ್ರಹಿಸಲೇಬೇಕು.

ಆರನೆಯ ಸಂಪುಟದ ಮುಖ್ಯವಿಷಯವೇ ಇದು. ಇದೇ ಸಂದರ್ಭದಲ್ಲಿ ಶ್ರೀಪಾದರ ಅನುಗ್ರಹ ಭಾಷಣ ಒಂದು ಯೋಗಾಯೋಗ. ಇಂಥ ಶ್ರೀಪಾದಂಗಳವರ ಅನುಗ್ರಹ ನಿರಂತರ ಇರಲಿ ಎಂದಷ್ಟೇ ಕೇಳಿಕೊಳ್ಳುತ್ತೇನೆ.

ಲೇಖಕ - ಬೆಮ್ಮತ್ತಿ ವೇಂಕಟೇಶಾಚಾರ್ಯ

ಅನುಕ್ರಮಣಿಕಾ

ಅನುಗ್ರಹ ಸಂದೇಶ	IX-XI
ಪ್ರಾಸ್ತಾವಿಕ - (ಆಂಗ್ಲಭಾಷೆ)	XII-XVI
ಅಧಿಕರಣ ಸಾರಾಂಶ	XXIV-LXXI
ಭೂಮಾಧಿಕರಣ	೧-೯೦
ಅಕ್ಷರಾಧಿಕರಣ	೯೧-೧೭೮
ಸದಧಿಕರಣ	೧೭೯-೨೩೨
ದಹರಾಧಿಕರಣ	೨೩೩-೪೨೬
ಅನುಕೃತ್ಯಧಿಕರಣ	೪೨೭-೪೯೪
ವಾಮನಾಧಿಕರಣ	೪೯೫-೬೦೬
ವಿವರವಾದ ವಿಷಯಾನುಕ್ರಮಣಿಕೆ	೬೦೭-೬೩೩

ತತ್ವಪ್ರಕಾಶಿಕಾ - ಭಾವದೀಪ

ಸಾರಾಂಶ

ಈ ಸಂಪುಟದಲ್ಲಿ ಪ್ರಥಮಾಧ್ಯಾಯದ ತೃತೀಯಪಾದದಲ್ಲಿ ಬರುವ ಭೂಮಾಧಿಕರಣದಿಂದ ಪ್ರಾರಂಭಿಸಿ ವಾಮನಾಧಿಕರಣದ ತನಕ ವಿಷಯ ನಿರೂಪಣೆ ಇರುತ್ತದೆ. ಪ್ರಕೃತ ಈ ಆರು ಅಧಿಕರಣಗಳ ಸಾರಾಂಶವನ್ನು ತಿಳಿಯೋಣ. ಭೂಮಾಧಿಕರಣದ ಸಾರಾಂಶ ಹೀಗಿದೆ -

ಭೂಮಾಧಿಕರಣ

'ಭೂಮಾ' ಎಂಬ ನಾಮಾತ್ಮಕ ಶಬ್ದವನ್ನು ಈ ಅಧಿಕರಣದಲ್ಲಿ ಸಮನ್ವಯ ಮಾಡುತ್ತಿದ್ದಾರೆ. 'ಪ್ರಾಣೋ ವಾ ಆಶಾಯಾ ಭೂಯಾನ್' ಎಂಬುದಾಗಿ ಛಾಂದೋಗ್ಯದಲ್ಲಿ ಪ್ರಾಣನನ್ನು 'ಭೂಮಾ' ಎನ್ನಲಾಗಿದೆ. 'ವಿಷ್ಣುರ್ವೈ ದೇವೇಭ್ಯೋ ಭೂಯಾನ್' ಎಂಬುದಾಗಿ ವಿಷ್ಣುವನ್ನೂ ಸಹ 'ಭೂಮಾ' ಎನ್ನಲಾಗಿದೆ. ಆದ್ದರಿಂದ ಪ್ರಾಣ ಹಾಗೂ ವಿಷ್ಣು ಇಬ್ಬರಲ್ಲಿಯೂ ಪ್ರಸಿದ್ಧವಾದ 'ಭೂಮಾ' ಎಂಬ ಶಬ್ದವು ಉಭಯತ್ರಪ್ರಸಿದ್ಧವಾಯಿತು.

ವಸ್ತುತಃ 'ಬಹು' ಎಂಬ ಶಬ್ದದ ಮೇಲೆ 'ಇಮನಿಚ್' ಪ್ರತ್ಯಯ ಹಾಗೂ ಭೂ ಆದೇಶಗಳು ಬಂದು 'ಭೂಮಾ' ಎಂಬ ಶಬ್ದವು ನಿಷ್ಪನ್ನವಾಗಿದೆ. ಆದ್ದರಿಂದ ಸಂಖ್ಯಾವಾಚಕವಾದ 'ಭೂಮಾ' ಎಂಬ ಶಬ್ದವು ಧರ್ಮವಾಚಕವಾಗುವುದರಿಂದ ಲಿಂಗಾತ್ಮಕವಾಗಿದೆಯೆಂದೆನಿಸುತ್ತದೆ. ಆದರೆ 'ಯೋ ವೈ ಭೂಮಾ ತದಮೃತಮ್' ಇತ್ಯಾದಿಯಾಗಿ ಶ್ರೇಷ್ಠನೆಂಬರ್ಥದಲ್ಲಿ ಉಪನಿಷತ್ತು 'ಭೂಮಾ' ಶಬ್ದವನ್ನು ಪ್ರಯೋಗ ಮಾಡುತ್ತಿದೆ. ಮತ್ತು 'ವಾಗ್ವಾವ ನಾಮ್ನೋ ಭೂಯಸೀ' ಇತ್ಯಾದಿ ಸ್ಥಳಗಳಲ್ಲಿ ಕೇಳಿಸುತ್ತಿರುವ 'ಭೂಮಾ' ಎಂಬ ಶಬ್ದಕ್ಕೆ ಸಮಾನಾರ್ಥಕವಾದ 'ಭೂಯಸ್' ಶಬ್ದವನ್ನು ಸಂಖ್ಯಾದ್ಯರ್ಥದಲ್ಲಿ ವಿವಕ್ಷಿಸಲು ಸಾಧ್ಯವಿಲ್ಲ. ಆದ್ದರಿಂದ ಶ್ರೇಷ್ಠನೆಂಬ ಧರ್ಮವಾಚಕತ್ವವನ್ನೇ 'ಭೂಮಾ' ಎಂಬ ಶಬ್ದಕ್ಕೆ ಒಪ್ಪಬೇಕು.

ಇಂತಹ 'ಭೂಮಾ' ಎಂಬ ಶಬ್ದವು ಉಭಯತ್ರಪ್ರಸಿದ್ಧವಾಗಿದೆ. 'ಪ್ರಾಣೋ ವಾ ಆಶಾಯಾ ಭೂಯಾನ್' ಎಂಬ ಛಾಂದೋಗ್ಯೋಪನಿಷತ್ತಿನ ಉಪಕ್ರಮದಲ್ಲಿ ಪ್ರಾಣನಲ್ಲಿ ಪ್ರಸಿದ್ಧವಾದ 'ಭೂಮಾ' ಎಂಬ ಶಬ್ದವು 'ವಿಷ್ಣುರ್ವೈ ದೇವೇಭ್ಯೋ ಭೂಯಾನ್' ಎಂಬ ಸಮಾಖ್ಯಾಪ್ರಮಾಣದಲ್ಲಿ ವಿಷ್ಣುವಿನಲ್ಲಿಯೂ ಪ್ರಸಿದ್ಧವಾಗಿದೆ. ಉಪಕ್ರಮ ಪ್ರಮಾಣಕ್ಕಿಂತ ಸಮಾಖ್ಯಾಪ್ರಮಾಣವು ದುರ್ಬಲವಾಗಿದ್ದರೂ ಕೂಡ ಇಲ್ಲಿರುವ ಸಮಾಖ್ಯಾಪ್ರಮಾಣವು ಅಭ್ಯಾಸ ಹಾಗೂ ಉಪಪತ್ತಿಗಳಿಂದ ಸಹಿತವಾಗಿದೆ. ಆದ್ದರಿಂದ ಉಪಕ್ರಮದಿಂದ ಸಮಾನಬಲವುಳ್ಳದ್ದೇ ಆಗಿದೆ. ಹೀಗೆ ಸಮಬಲವಾದ ಉಪಕ್ರಮ ಹಾಗೂ ಸಮಾಖ್ಯಾಪ್ರಮಾಣಗಳು ಪ್ರಾಣ ಹಾಗೂ ವಿಷ್ಣುವಿನಲ್ಲಿ 'ಭೂಮಾ' ಶಬ್ದವನ್ನು ಪ್ರಯೋಗಿಸುತ್ತಿರುವ ಕಾರಣ ಉಭಯತ್ರಪ್ರಸಿದ್ಧವಾಗಿದೆಯೆಂದು ತಿಳಿಯಬೇಕು. ಅಥವಾ ಉಪಕ್ರಮ ಹಾಗೂ

ಸಮಾಖ್ಯಾಪ್ರಮಾಣಗಳಲ್ಲಿ ಯಾರಿಗೆ ಪ್ರಾಬಲ್ಯ ಹಾಗೂ ದೌರ್ಬಲ್ಯ ವಿಚಾರವು ಬಂದಿರುವುದಿಲ್ಲವೋ, ಅಂತಹ ವ್ಯಕ್ತಿಯ ವಿಷಯದಲ್ಲಿ 'ಭೂಮಾ' ಎಂಬ ಶಬ್ದವು ಉಭಯಸಾಧಾರಣವಾಗಿದೆಯೆಂದು ತಿಳಿಯಬಹುದು.

ಅಥವಾ 'ಅತ ಏವ ಪ್ರಾಣಃ' ಎಂಬ ಸೂತ್ರದಲ್ಲಿಯೇ ಪ್ರಾಣಶಬ್ದವನ್ನು ವಿಷ್ಣುಪರವೆಂದು ನಿರ್ಣಯಿಸಿದ್ದಾಗಿದೆ. ಆದ್ದರಿಂದ ಉಪಕ್ರಮದಲ್ಲಿರುವ ಪ್ರಾಣಶಬ್ದವು ಸಾವಕಾಶವಾಯಿತು. ಸಮಾಖ್ಯಾಪ್ರಮಾಣದಲ್ಲಿರುವ ವಿಷ್ಣುಶಬ್ದವು ಪ್ರಾಣನಲ್ಲಿ ಸಮನ್ವಯವಾಗದ ಕಾರಣ ನಿರವಕಾಶವಾಗಿದೆ. ವಾಸ್ತವಿಕವಾಗಿ ಉಪಕ್ರಮವು ಸಮಾಖ್ಯಾಪ್ರಮಾಣಕ್ಕಿಂತ ಬಲಿಷ್ಠವಾಗಿದ್ದರೂ ಸಾವಕಾಶವಾಗಿರುವುದರಿಂದ ಸಮಾಖ್ಯಾಪ್ರಮಾಣಕ್ಕೆ ಹಾಗೂ ಉಪಕ್ರಮ ಪ್ರಮಾಣಕ್ಕೆ ಸಮಾನ ಬಲವನ್ನು ಹೇಳಬಹುದು.

ಈ ಅಧಿಕರಣದಲ್ಲಿ 'ಭೂಮಾ' ಎಂಬ ಶಬ್ದವು ಉಭಯಸಾಧಾರಣವಾಗಿದೆಯೆನ್ನಲು ಉಪಕ್ರಮ ವಾಕ್ಯ ಹಾಗೂ ಸಮಾಖ್ಯಾಪ್ರಮಾಣಗಳನ್ನು ಆಧರಿಸುತ್ತಿದ್ದಾರೆ. ಆದರೆ 'ಪ್ರಾಣೋ ವಾವ ಸರ್ವೇಭ್ಯೋ ಭೂಯಾನ್' ಎಂಬುದಾಗಿ ಪ್ರಾಣನ ವಿಷಯದಲ್ಲಿಯೂ ಸಮಾಖ್ಯಾಪ್ರಮಾಣವನ್ನೇ ಹೇಳಬಹುದು. ಹೀಗೆ ಹೇಳಿದಾಗ ಪೂರ್ವಪಕ್ಷ ಹಾಗೂ ಸಿದ್ಧಾಂತ ಪಕ್ಷಗಳಲ್ಲಿ ಸಮಬಲವಾದ ಪ್ರಮಾಣಗಳನ್ನು ಹೇಳಿದಂತಾಗುತ್ತದೆ. ಆದರೆ 'ಪ್ರಾಣೋ ವಾವ ಸರ್ವೇಭ್ಯೋ ಭೂಯಾನ್' ಎಂಬ ಸಮಾಖ್ಯಾಪ್ರಮಾಣದಲ್ಲಿ ಸಕಲ ದೇವತೆಗಳಿಗಿಂತಲೂ ಪ್ರಾಣನು ಉತ್ತಮನೆಂದು ಸ್ಪಷ್ಟವಾಗಿ ತಿಳಿಯುವುದಿಲ್ಲ. ಕೇವಲ ಉಪಾಸಕರಿಗಿಂತ ಉತ್ತಮನಾಗಿದ್ದಾನೆಂದಷ್ಟೇ ತಿಳಿಯುತ್ತದೆ. ಈ ಕಾರಣಕ್ಕಾಗಿ ಉಪಕ್ರಮಪ್ರಮಾಣವನ್ನೇ ಆಧರಿಸಿದ್ದಾರೆ.

ಹಿಂದಿನ ದ್ಯುಭ್ವಾದ್ಯಧಿಕರಣದಲ್ಲಿಯೂ ಉಪಕ್ರಮಪ್ರಮಾಣವನ್ನೇ ಹೇಳಬಹುದಿತ್ತಲ್ಲವೇ? ಎಂದು ಪ್ರಶ್ನಿಸಬಾರದು. ಅಲ್ಲಿ ರುದ್ರಾದಿ ಪ್ರಾಪಕವಾದ ಉಪಕ್ರಮಪ್ರಮಾಣವು ಇಲ್ಲದ ಕಾರಣದಿಂದಲೇ ಪೂರ್ವಪಕ್ಷ ಹಾಗೂ ಸಿದ್ಧಾಂತ ಪಕ್ಷಗಳಲ್ಲಿ ಸಮಬಲವಾದ ಸಮಾಖ್ಯಾಪ್ರಮಾಣಗಳನ್ನೇ ಆಶ್ರಯಿಸಲಾಗಿದೆ.

ಉಪಕ್ರಮ ಹಾಗೂ ಸಮಾಖ್ಯಾಪ್ರಮಾಣಗಳಿಂದ 'ಭೂಮಾ' ಎಂಬ ಶಬ್ದವು ಉಭಯ ಸಾಧಾರಣವಾಗಿದೆಯೆಂದು ಹೇಳುವುದಾದರೆ ಸರ್ವಗತತ್ವಾಧಿಕರಣದಲ್ಲಿಯೂ 'ತಸ್ಯೈತಸ್ಯಾವಾದಿತ್ಯೋ ರಸಃ' ಎಂದು ಆದಿತ್ಯನಲ್ಲಿ ಶ್ರುತಿರೂಪ ಉಪಕ್ರಮಪ್ರಮಾಣವಿದೆ. ಬ್ರಹ್ಮನ ವಿಷಯದಲ್ಲಿ ಸಮಾಖ್ಯಾಪ್ರಮಾಣವಿದೆ. ಹಾಗಾಗಿ 'ಭೂಮಾ' ಎಂಬ ಶಬ್ದದಂತೆ ಸರ್ವಗತತ್ವವೂ ಸಹ ಉಭಯತ್ರಪ್ರಸಿದ್ಧವಾಗಬೇಕಲ್ಲವೇ? ಎಂಬುದು ಮುಂದಿನ ಪ್ರಶ್ನೆ. ಈ ಪ್ರಶ್ನೆಗೆ ಹೀಗೆ ಉತ್ತರಿಸಬೇಕು. ಸರ್ವಗತತ್ವಾಧಿಕರಣದಲ್ಲಿ ಯಾವುದೇ ಶ್ರುತಿಯಲ್ಲಿಯೂ ಸಹ ಅಲೌಕಸ್ತ್ವವೆಂಬ ಸರ್ವಭೂತಗತತ್ವವನ್ನು ಪೂರ್ವಪಕ್ಷಿಯು ಬ್ರಹ್ಮನಲ್ಲಿ ಒಪ್ಪಿರುವುದಿಲ್ಲ. ಆದ್ದರಿಂದ ಸಮಾಖ್ಯಾಪ್ರಮಾಣವನ್ನೇ ಅಲ್ಲಿ ಹೇಳಲು ಸಾಧ್ಯವಿಲ್ಲ. ಆದರೆ ಪ್ರಕೃತ ಈ ಅಧಿಕರಣದ ಪೂರ್ವಪಕ್ಷಿಯು ಸಮಾಖ್ಯಾಶ್ರುತಿಯು ವಿಷ್ಣುಪರವಾಗಬಹುದೆಂದು ಒಪ್ಪಿಕೊಂಡು ಉಪಕ್ರಮದಲ್ಲಿರುವ 'ಭೂಮಾ' ಎಂಬ ಶಬ್ದವನ್ನಷ್ಟೇ ವಿಷ್ಣುಪರವಲ್ಲವೆಂದು ಆಕ್ಷೇಪಿಸುತ್ತಿದ್ದಾನೆ. ಹೀಗೆ ಎರಡೂ ಅಧಿಕರಣಗಳ ವ್ಯತ್ಯಾಸವನ್ನು ಗಮನಿಸಬೇಕು.

'ಯೋ ವೈ ಭೂಮಾ ತತ್ಸುಖಮ್' ಇತ್ಯಾದಿಯಾಗಿ ಭೂಮರೂಪನಾದವಾಯು, ಆನಂದಮಯನಾಗದಿದ್ದರೆ ಇಲ್ಲಿ ಭೂಮನಿಗೆ ಹೇಳಲ್ಪಟ್ಟ ಸುಖವೂ ಸಹ ಕೂಡುವುದಿಲ್ಲ. ಆದ್ದರಿಂದ ಭೂಮನೆನಿಸಿದ ಮುಖ್ಯಪ್ರಾಣನೇ

ಆನಂದಮಯನಾಗುತ್ತಾನೆ. ಹೀಗೆ 'ಭೂಮಾ' ಎಂಬ ಶಬ್ದವು ವಿಷ್ಣು ಹಾಗೂ ವಾಯು ಇಬ್ಬರಲ್ಲಿಯೂ ಸಾಧಾರಣವಾಗಿರುವುದರಿಂದ ಪಾದಸಂಗತಿಯು ಯುಕ್ತವಾಗಿದೆ.

ಭೂಮನಲ್ಲಿ ಸರ್ವಗತತ್ವ, ಆತ್ಮಕ್ರೀಡಾತ್ವ, ಅಮೃತತ್ವ ಇವೇ ಮೊದಲಾದ ಧರ್ಮಗಳು ಕೇಳಿಸುತ್ತಿವೆ. ದ್ಯುಭ್ವಾದ್ಯಾಯತನನಲ್ಲಿಯೂ ಕೂಡ ಇವೇ ಧರ್ಮಗಳು ಕೇಳಿಸುತ್ತಿವೆ. ಆದ್ದರಿಂದ ಭೂಮಾ ಹಾಗೂ ದ್ಯುಭ್ವಾದ್ಯಾಯತನರು ಒಬ್ಬನೇ ಎಂದು ತಿಳಿಯುತ್ತದೆ. ಒಂದು ವೇಳೆ ಈಗಾಗಲೇ ಹೇಳಿದಂತೆ ಭೂಮನು ಮುಖ್ಯಪ್ರಾಣನಾದರೆ ದ್ಯುಭ್ವಾದ್ಯಾಯತನನೂ ಸಹ ಅವನೇ ಆಗುತ್ತಾನೆ. ಹೀಗಿರುವಾಗ ದ್ಯುಭ್ವಾದ್ಯಾಯತನನು ವಿಷ್ಣುವೆಂದು ಹಿಂದಿನ ಅಧಿಕರಣದಲ್ಲಿ ಹೇಗೆ ನಿರ್ಣಯಿಸಿದಿರಿ ? ಎಂದು ಆಕ್ಷೇಪಿಕೀ ಸಂಗತಿಯನ್ನು ತಿಳಿಯಬೇಕು. ಟೀಕೆಯಲ್ಲಿ ಆನಂದಮಯಾಧಿಕರಣದಿಂದ ಸಂಗತಿಯನ್ನು ತೋರಿಸಿರುತ್ತಾರೆ. ಯಾವ ನ್ಯಾಯವನ್ನು ವಿವಕ್ಷಿಸಿ ಆನಂದಮಯಾಧಿಕರಣದಿಂದ ಸಂಗತಿಯನ್ನು ತೋರಿಸಿದ್ದಾರೋ ಅದೇ ನ್ಯಾಯವು ಹಿಂದಿನ ಅಧಿಕರಣದಿಂದ ತೋರಿಸುವ ಸಂಗತಿಯಲ್ಲಿಯೂ ಇರುವುದರಿಂದ ಟೀಕೆಯಿಂದಲೇ ಪೂರ್ವಾಧಿಕರಣದ ಸಂಗತಿಯನ್ನು ಸೂಚಿಸಿದ್ದಾರೆ.

ಸಿದ್ಧಾಂತ ಹಾಗೂ ಪೂರ್ವಪಕ್ಷಗಳ ಫಲಫಲಿಭಾವವನ್ನು ಹೀಗೆ ತಿಳಿಯಬೇಕು - ಒಂದು ವೇಳೆ ಪ್ರಾಣನಲ್ಲಿ ಶ್ರುತವಾದ ಉತ್ತಮಣಲಿಂಗವು ಮುಂದೆ ಹೇಳುವ ಪ್ರಕಾರ ಸರ್ವಗತನಾದ ಬ್ರಹ್ಮನಲ್ಲಿ ಅಯುಕ್ತವಾದರೆ ಉಪಕ್ರಮದಲ್ಲಿ ಶ್ರುತನಾದ ಪ್ರಾಣನು ವಾಯುವೇ ಆಗುತ್ತಾನೆ. ಅಂತಹ ವಾಯುವಿಗಿಂತ ಬ್ರಹ್ಮನು ಶ್ರೇಷ್ಠನೆಂದು ಸಿದ್ಧಾಂತಿಯು ಒಪ್ಪಿರುವುದರಿಂದ ಪ್ರಶ್ನೆ ಹಾಗೂ ಉತ್ತರಗಳಿಂದ ಪ್ರಾಣನಿಗಿಂತ ಉತ್ತಮತ್ವವನ್ನು ಬ್ರಹ್ಮನಿಗೆ ಹೇಳಬೇಕು. ಆದರೆ ಹಾಗೆ ಉಪನಿಷತ್ತಿನಲ್ಲಿ ಹೇಳಿರುವುದಿಲ್ಲ. ಹೀಗೆ ಹೇಳದಿರುವಿಕೆಯೇ ಮುಖ್ಯಪ್ರಾಣನಿಗೆ ಪೂರ್ಣಸುಖತ್ವವನ್ನು ಹಾಗೂ ಭೂಮತ್ವವನ್ನು ಹೇಳಬೇಕೆಂಬುದಕ್ಕೆ ಗಮಕ ಎಂದು ಪೂರ್ವಪಕ್ಷಕಾರರ ಆಶಯ.

ಒಂದು ವೇಳೆ ಭಗವಂತನ ಅನೇಕ ರೂಪಗಳ ಭೇದದಿಂದ ತನ್ನಿಂದಲೇ ತನಗೆ ಭೂಯಸ್ತ್ವವನ್ನು ಹೇಳಿದ್ದು ಯುಕ್ತವಾಗುವುದಾದರೆ ಪ್ರಾಣನೂ ಸಹ ಬ್ರಹ್ಮನೇ ಆಗುತ್ತಾನೆ. ಆವಾಗ ತನ್ನಿಂದಲೇ ತನಗೆ ಉತ್ತಮತ್ವವು ಬರುವುದಿಲ್ಲವಾದ್ದರಿಂದ ಭೂಯಸ್ತ್ವದ ಅನುಕ್ತಿಯು ಯುಕ್ತವಾಗುತ್ತದೆ. ಆದ್ದರಿಂದ ಪೂರ್ಣಸುಖತ್ವ ಹಾಗೂ ಭೂಮತ್ವಗಳೆರಡೂ ವಿಷ್ಣುವಿನಲ್ಲೇ ಬರುತ್ತದೆಂಬುದು ಸಿದ್ಧಾಂತದ ಉದ್ದೇಶ.

ಮುಖ್ಯಪ್ರಾಣನೇ ಭೂಮನಾಗಿದ್ದಾನೆ. 'ಪ್ರಾಣೋ ವಾ ಆಶಾಯಾ ಭೂಯಾನ್' ಎಂಬ ಉಪಕ್ರಮ ಪ್ರಮಾಣವೇ ಈ ವಿಷಯದಲ್ಲಿ ಆಧಾರವಾಗಿದೆ. ಪ್ರಾಣ ಹಾಗೂ ಭೂಮಾ ಇಬ್ಬರಿಗೂ ಭೇದವನ್ನು ಹೇಳಬಾರದು. ಏಕೆಂದರೆ ಹಾಗೇನಾದರೂ ಭೇದವಿದ್ದಿದ್ದರೆ ಪ್ರಾಣನಿಗಿಂತ ಭೂಮನನ್ನು ಉತ್ತಮನೆಂದು ಹೇಳಬೇಕಿತ್ತು. ಆದರೆ ಹಾಗೆ ಹೇಳಿರುವುದಿಲ್ಲ. ಅಥವಾ ಪ್ರಾಣನಿಗಿಂತ ಉತ್ತಮನೊಬ್ಬ ಇದ್ದಾನೆಂಬ ಪ್ರಶ್ನೆಯನ್ನೂ ಸಹ ಮಾಡಿರುವುದಿಲ್ಲ. ಆದ್ದರಿಂದ ಮುಖ್ಯಪ್ರಾಣನೇ ಭೂಮನಾಗಿದ್ದಾನೆಂದು ಸ್ಪಷ್ಟವಾಗುತ್ತದೆ. ಇನ್ನು ವಿಷ್ಣುವಿನ ವಿಷಯದಲ್ಲಿಯೂ ಸಮಾಖ್ಯಾಪ್ರಮಾಣವಿದೆಯೆಂದು ಹೇಳಬಹುದು. ಆದರೆ ಉಪಕ್ರಮ ಹಾಗೂ ಸಮಾಖ್ಯಾಪ್ರಮಾಣಗಳೆರಡರ ಮಧ್ಯದಲ್ಲಿ ಉಪಕ್ರಮ ಪ್ರಮಾಣವೇ ಶ್ರೇಷ್ಠವಾಗಿರುತ್ತದೆ. ಆದ್ದರಿಂದ ವಿಷ್ಣುವಿನ ಸಮಾಖ್ಯಾಪ್ರಮಾಣವು ಇದನ್ನು ವಿರೋಧಿಸುವುದಿಲ್ಲ.

ಭೂಮರೆನಿಸಿದವರು ಮುಖ್ಯಪ್ರಾಣದೇವರೇ ಹೊರತು, ಬ್ರಹ್ಮನಲ್ಲ. ಪ್ರಾಣಶಬ್ದದಿಂದ ಬ್ರಹ್ಮನೂ ಪ್ರತಿಪಾದ್ಯನಾದ್ದರಿಂದ ಬ್ರಹ್ಮನನ್ನೂ ಸಹ ಭೂಮನೆನ್ನಬಹುದಲ್ಲವೇ? ಎಂದು ಪ್ರಶ್ನಿಸಬಾರದು. ಪ್ರಥಮ ಪಾದದಲ್ಲಿ ಪ್ರಾಣಶಬ್ದವನ್ನು ಬ್ರಹ್ಮನೆಂದು ಸಮರ್ಥಿಸಲು ನಿರವಕಾಶವಾದ ವಿಷ್ಣುವಿನ ಲಿಂಗವಿತ್ತು. ಆದರೆ ಇಲ್ಲಿ ಅಂತಹ ವಿಷ್ಣುಲಿಂಗಗಳೇನೂ ಇರುವುದಿಲ್ಲ. ವಿಪರೀತವಾಗಿ 'ದೇಹಾದುತ್ಕ್ರಮಣ' ಎಂಬ ಲಿಂಗವೇ ಇರುತ್ತದೆ. ಮುಖ್ಯಪ್ರಾಣದೇವರು ಭೂಮರೆಂದು ಹೇಳಿದರೆ ಯಾವುದೇ ಬಾಧಕಗಳೂ ಸಹ ಇರುವುದಿಲ್ಲ. ಎಲ್ಲೆಡೆ ವ್ಯಾಪ್ತನಾಗಿದ್ದರೆ ಮಾತ್ರ ಭೂಮನೆನಿಸಬೇಕಾಗಿಲ್ಲ. ಭೂಮಪ್ರಕರಣವನ್ನು ಹಿಂದಿನ, ಮುಂದಿನ ವಾಕ್ಯಗಳಿಂದ ವಿಚಾರ ಮಾಡಿದಾಗ ಅಲ್ಲಿ ಗುಣತಃ ಉತ್ತಮತ್ವವೇ ಪ್ರಸಕ್ತವಾಗಿದೆ ಎಂದು ತಿಳಿಯುತ್ತದೆ. ಆದ್ದರಿಂದ ಆಶಾಯೆನಿಸಿದ ಭಾರತಿಗಿಂತ ಉತ್ತಮನಾಗಿದ್ದಾನೆಂದರೆ ಹೆಚ್ಚಿನ ದೇಶದಲ್ಲಿದ್ದಾನೆಂದು ಅರ್ಥವಲ್ಲ. ಹೆಚ್ಚಿನ ಗುಣಗಳುಳ್ಳವನಾಗಿದ್ದಾನೆಂದಷ್ಟೇ ಅರ್ಥ. ಆದ್ದರಿಂದ ಅಣುಸ್ವರೂಪರಾಗಿದ್ದರೂ ಸಹ ಮುಖ್ಯಪ್ರಾಣದೇವರಲ್ಲಿ ಭೂಮತ್ವವು ಯುಕ್ತವಾಗುತ್ತದೆ. ಅವರೇ ಆನಂದಮಯರೂ ಸಹ ಆಗುತ್ತಾರೆಂದು ಆಕ್ಷೇಪ ಮಾಡಬಹುದು.

ಭೂಮಪ್ರಕರಣದಲ್ಲಿ ಸರ್ವಗತತ್ವವು ಕೇಳಿಸುತ್ತಿದೆ. ಅದಕ್ಕನುಸಾರಿಯಾಗಿ ಪ್ರಾಣನಲ್ಲಿ ಕೇಳಿಸುತ್ತಿರುವ ದೇಹಾದ್ಯುತ್ಕ್ರಮಣವೆಂಬ ಲಿಂಗವನ್ನು ಗೌಣವಾಗಿ ವ್ಯಾಖ್ಯಾನಿಸಬೇಕೆಂದು ಹೇಳಬಾರದು. ಏಕೆಂದರೆ 'ಉತ್ಕ್ರಾಂತ' ಎಂಬ ಶಬ್ದದಿಂದಲೇ ನೇರವಾಗಿ ಪ್ರಾಣೋತ್ಕ್ರಮಣವೆಂಬ ಲಿಂಗವು ತಿಳಿಯುತ್ತಿದೆ. ಹಾಗೇ ಸರ್ವಗತತ್ವವನ್ನು ನೇರವಾಗಿ ಹೇಳುವ ಯಾವುದೇ ಶಬ್ದಗಳು ಶ್ರುತಿಯಲ್ಲಿರುವುದಿಲ್ಲ. ಆದ್ದರಿಂದ ಸರ್ವಗತತ್ವವನ್ನೇ ಗೌಣವನ್ನಾಗಿ ಅರ್ಥೈಸಬೇಕು. ಒಟ್ಟಾರೆ ಸಂಪ್ರಸಾದವೆಂಬ ಪೂರ್ಣಾನಂದತ್ವವು ವಿಷ್ಣುವಿನಲ್ಲಿ ಮಾತ್ರ ಬರುತ್ತದೆಂಬ ನಿಯಮವನ್ನು ಸಿದ್ಧಾಂತಿಗಳು ಮಾಡಲು ಸಾಧ್ಯವಿಲ್ಲ. ಮುಖ್ಯಪ್ರಾಣದೇವರಲ್ಲಿಯೂ ಈ ಲಿಂಗವು ಬರುತ್ತಿದೆ.

ಪರಮಾತ್ಮನು ವ್ಯಾಪ್ತನಾದ ಕಾರಣ 'ದೇಹದಿಂದ ಹೊರಗೆ ಹೊರಟಿದ್ದಾನೆ'. ಅಥವಾ 'ದೇಹದಲ್ಲಿ ಪ್ರವೇಶ ಮಾಡಿದ್ದಾನೆ' ಇತ್ಯಾದಿಯಾಗಿ ಯಾವುದೇ ಕ್ರಿಯೆಯನ್ನು ಹೇಳಲು ಸಾಧ್ಯವಿಲ್ಲ. ಇಂತಹ ಕ್ರಿಯೆಯನ್ನು ಅಣುಸ್ವರೂಪನಾದ ಮುಖ್ಯಪ್ರಾಣನಲ್ಲಿ ಮಾತ್ರ ಹೇಳಬೇಕೆಂದು ಪೂರ್ವಪಕ್ಷದ ಅಭಿಪ್ರಾಯ. ಬ್ರಹ್ಮನು ವ್ಯಾಪ್ತನಾಗಿದ್ದರೂ ಸಹ ಅಣುಸ್ವರೂಪನೂ ಆಗಿರುವ ಪ್ರಯುಕ್ತ ಕ್ರಿಯೆಯನ್ನು ಹೇಳಬಹುದಲ್ಲವೇ? ಎಂಬ ಪ್ರಶ್ನೆ ಸಹಜವಾಗಿ ಬರುತ್ತದೆ. ಆದರೆ ಅಣುತ್ವವಿರುವ ಪ್ರಯುಕ್ತ ಕ್ರಿಯೆಯು ಬರುತ್ತದೆಂದು ಹೇಳುವುದಾದರೆ ಮಹತ್ತ್ವವಿರುವ ಪ್ರಯುಕ್ತ ಕ್ರಿಯೆಯು ಬರುವುದಿಲ್ಲವೆಂದು ಹೇಳಿದರೆ ಈ ರೀತಿಯ ಪೂರ್ವಪಕ್ಷಿಗಳ ಪ್ರತಿಬಂದಿಗೆ ಉತ್ತರವನ್ನು ನೀಡಲು ಸಾಧ್ಯವಿಲ್ಲ. ಆದ್ದರಿಂದ ವ್ಯಾಪ್ತನಾದ ಪರಮಾತ್ಮನಿಗೆ ಕ್ರಿಯೆಯು ಕೂಡುವುದಿಲ್ಲವೆಂಬುದೇ ಈ ಅಧಿಕರಣದ ಪೂರ್ವಪಕ್ಷ. ಇದರ ನಿರಾಕರಣೆಯೇ ಸಿದ್ಧಾಂತ.

ಈ ಪೂರ್ವಪಕ್ಷ ಹಾಗೂ ಸಿದ್ಧಾಂತಗಳನ್ನು ಬೇರೆ ಯಾವುದೇ ಅಧಿಕರಣಗಳಲ್ಲಿಯೂ ಸಹ ಮಾಡಿರುವುದಿಲ್ಲ. 'ಸರ್ವತ್ರ ಪ್ರಸಿದ್ಧೋಪದೇಶಾತ್' ಎಂಬ ಸೂತ್ರದಲ್ಲಿ ಸರ್ವಗತನಾದ ಪರಮಾತ್ಮನು ಹೃದಯದಲ್ಲಿದ್ದಾನೆಂದು ಹೇಳಿದ್ದಾರೆ ಹೊರತು, ವ್ಯಾಪ್ತನಾದ ಪರಮಾತ್ಮನಿಗೆ ಕ್ರಿಯೆಯು ಬರುತ್ತದೆಂದು ಹೇಳಿರುವುದಿಲ್ಲ. ಇದರಂತೆ 'ಜ್ಯೋತಿರ್ದರ್ಶನಾತ್' ಎಂಬ ಸೂತ್ರದಲ್ಲಿ ಕರ್ಮಾಧೀನವಾಗಿ ಸಂಚಾರವು ಬರುತ್ತದೆಂದು ಹೇಳಿದ್ದಾರೆ ಹೊರತು, ವ್ಯಾಪ್ತನಾದ ಪರಮಾತ್ಮನಿಗೆ ಕ್ರಿಯೆಯು ಬರುವುದಿಲ್ಲವೆಂದು ಪೂರ್ವಪಕ್ಷವನ್ನು ಮಾಡಿರುವುದಿಲ್ಲ. ಮತ್ತು ಅದರ ಖಂಡನೆಯನ್ನೂ ಸಹ ಮಾಡಿರುವುದಿಲ್ಲ. ಆದ್ದರಿಂದ ಈ ಅಧಿಕರಣವು ಬೇರೆ ಅಧಿಕರಣದಿಂದ ಗತಾರ್ಥವಾಗಲು

ಸಾಧ್ಯವಿಲ್ಲ. ಆದ್ದರಿಂದ ಉತ್ತಮಣವೆಂಬ ಲಿಂಗವು ಮುಖ್ಯಪ್ರಾಣನಲ್ಲಿ ಮಾತ್ರ ಬರುತ್ತದೆ. ಪ್ರಾಣಶಬ್ದದಿಂದ ಮುಖ್ಯಪ್ರಾಣದೇವರೇ ಪ್ರತಿಪಾದ್ಯರಾಗುತ್ತಾರೆ, ಅವರೇ ಭೂಮರೂ ಸಹ ಆಗುತ್ತಾರೆಂಬ ಎಂಬ ಪೂರ್ವಪಕ್ಷವು ಉದಯವಾಯಿತು.

ಯಾರು ಭೂಮನಾಗಿದ್ದಾನೋ, ಅವನು ಪರಿಪೂರ್ಣವಾದ ಸುಖವುಳ್ಳವನೆಂದು 'ಯೋ ವೈ ಭೂಮಾ ತತ್ಸುಖಮ್' ಎಂಬ ಶ್ರುತಿಯು ಪ್ರತಿಪಾದನೆ ಮಾಡುತ್ತಿದೆ. ನಿರುಪಪದವಾದ ಸುಖಶಬ್ದಕ್ಕೆ ಪರಿಪೂರ್ಣವೆಂದೇ ಅರ್ಥ. ಪರಿಪೂರ್ಣಸುಖ ಇರುವುದು ಪರಮಾತ್ಮನಲ್ಲಿಮಾತ್ರವೇ. ಬೇರೆಯವರೆಲ್ಲರೂ ಅಲ್ಪವಾದ ಸುಖವುಳ್ಳವರು. ಆದ್ದರಿಂದ ಬೇರೆಯವರು ಯಾರೂ ಸಹ 'ಭೂಮಾ' ಎಂಬ ಶಬ್ದದಿಂದ ಪ್ರತಿಪಾದ್ಯರಾಗುವುದಿಲ್ಲ. ಈ ಎಲ್ಲ ವಿಷಯವನ್ನು 'ಸಂಪ್ರಸಾದಾತ್' ಎಂಬ ಲಿಂಗದಿಂದ ಸೂತ್ರಕಾರರು ಹೇಳಿರುತ್ತಾರೆ.

'ವಿಶ್ವಶಂಭುವಮ್' ಎಂಬ ಶ್ರುತಿಯು ಪೂರ್ಣವಾದ ಸುಖಕ್ಕೆ ಆಶಯನಾದವನು ವಿಷ್ಣುವೇ ಆಗಿದ್ದಾನೆಂದು ಹೇಳುತ್ತಿರುವುದರಿಂದ ಮುಖ್ಯಪ್ರಾಣದೇವರನ್ನು ಪೂರ್ಣಸುಖಸ್ವರೂಪರೆಂದು ಹೇಳಬಾರದು.

ಭೂಮನೇ ವಿಷ್ಣುವಾಗಿದ್ದಾನೆಂಬ ವಿಷಯದಲ್ಲಿ ಅನೇಕ ಸಾಧಕ ಪ್ರಮಾಣಗಳಿವೆ. ಅಷ್ಟೇ ಅಲ್ಲದೇ ಪೂರ್ವಪಕ್ಷಕಾರರು ಹೇಳಲ್ಪಟ್ಟ ಅನುಕ್ತಿ ಹಾಗೂ ಉತ್ತಮಣ ಎಂಬ ಬಾಧಕಗಳೂ ಸಹ ಇರುವುದಿಲ್ಲ. ಏಕೆಂದರೆ ಪ್ರಾಣನಿಗಿಂತ ವಿಷ್ಣು ಅಧಿಕನಾಗಿದ್ದಾನೆಂದು ಹೇಳದಿರುವಿಕೆಯು ಬಾಧಕವಾಗುತ್ತದೆಂದು ಪೂರ್ವಪಕ್ಷಕಾರರು ಹೇಗೆ ಹೇಳುತ್ತಾರೋ ಅದರಂತೆ ವಿಷ್ಣುವಿಗಿಂತ ಪ್ರಾಣನು ಉತ್ತಮನಾಗಿದ್ದಾನೆಂಬ ಹೇಳದಿರುವಿಕೆಯು ಪೂರ್ವಪಕ್ಷಕಾರರಿಗೂ ಬಾಧಕವಾಗಿದೆ. ಪ್ರಾಣನು ಸರ್ವೋತ್ತಮನೆಂದೇ ಪೂರ್ವಪಕ್ಷಕಾರರು ಸಮರ್ಥಿಸಬೇಕು. ಆದ್ದರಿಂದ ವಿಷ್ಣುವಿಗಿಂತಲೂ ಪ್ರಾಣನಿಗೆ ಉತ್ತಮತ್ವವನ್ನು ಅವರು ಪ್ರತಿಪಾದಿಸಿದರೆ ಮಾತ್ರ ಭೂಮನು ಪ್ರಾಣನಾಗಿದ್ದಾನೆಂಬ ಸಮರ್ಥನೆಯು ಸಾಧ್ಯವಾಗುತ್ತದೆ. ಆದ್ದರಿಂದ ನಮ್ಮನ್ನು ಕುರಿತು ಯಾವ ಅನುಕ್ತಿಯನ್ನು ಬಾಧಕವನ್ನಾಗಿ ಹೇಳುತ್ತಿದ್ದಾರೋ, ಅದೇ ಅನುಕ್ತಿಯೆಂಬ ಲಿಂಗವು ಪೂರ್ವಪಕ್ಷಕಾರರಿಗೇನೇ ಮಾರಕವಾಗಿದೆ.

'ಅಧ್ಯುಪದೇಶಾತ್' ಎಂಬಲ್ಲಿ 'ಅಧಿ' ಎಂದರೆ 'ಸರ್ವಾಧಿಕ' ಎಂದರ್ಥ. ಪ್ರಾಣನನ್ನು ಸರ್ವೋತ್ತಮನೆಂದು ಶ್ರುತಿಯು ಹೇಳಿದೆ. ಶ್ರುತಿಯಲ್ಲಿ ಪ್ರಸಕ್ತವಾದ ಪ್ರಕರಣ ಹೀಗಿದೆ - ನಾರದರು ಸನತ್ಕುರಮಾರರನ್ನು ಬ್ರಹ್ಮೋಪದೇಶಕ್ಕಾಗಿ ಉಪಸತ್ತಿ ಮಾಡುತ್ತಾರೆ. ಅಂತಹ ನಾರದರನ್ನು ಕುರಿತು ಸನತ್ಕುಮಾರರು 'ನಾಮ ಬ್ರಹ್ಮೇತ್ಯುಪಾಸೀತ' ನಾಮಾಭಿಮಾನಿಯಾದ ಉಷಾದೇವಿಯನ್ನು ಪೂರ್ಣಳೆಂದು ಉಪಾಸನೆ ಮಾಡಬೇಕು ಎಂದು ಪ್ರಾರಂಭ ಮಾಡಿ ಆಶಾನಾಮಕಳಾದ ಭಾರತೀದೇವಿಯ ತನಕ ಉಪಾಸನೆಯನ್ನು ತಾರತಮ್ಯ ಪ್ರಕಾರವಾಗಿ ಉಪದೇಶಿಸಿದರು. ಕೊನೆಯಲ್ಲಿ ಆಶಾನಾಮಕಳಾದ ಭಾರತೀದೇವಿಗಿಂತ ಪ್ರಾಣನನ್ನು ಉತ್ತಮನೆಂದು ಹೇಳಿದರು. ಅಂತಹ ಪ್ರಾಣನಿಗಿಂತ ಉತ್ತಮನಾದ ಮತ್ತೊಬ್ಬನನ್ನು ಹೇಳಲಿಲ್ಲ. ಇದರಿಂದ ಸರ್ವೋತ್ತಮನಾದ ವ್ಯಕ್ತಿ ಪ್ರಾಣನೆಂದೇ ತಿಳಿಯುತ್ತದೆ. ಈ ಪ್ರಾಣಶಬ್ದದಿಂದ ಪ್ರತಿಪಾದ್ಯನಾದವನು ವಿಷ್ಣುವೇ ಆಗಿದ್ದಾನೆ ಹೊರತು, ಮುಖ್ಯಪ್ರಾಣದೇವರಲ್ಲ. ಆದ್ದರಿಂದ ವಿಷ್ಣುವೇ ಭೂಮನೆನಿಸುತ್ತಾನೆಂಬುದು ಒಟ್ಟು ಅಭಿಪ್ರಾಯ.

'ವ್ಯತಿಹಾರೋ ವಿಶಿಂಷಂತಿ' ಎಂಬ ಸೂತ್ರದಲ್ಲಿಯೂ ಮುಂದೆ ಇದೇ ವಿಷಯವನ್ನು ಪ್ರತಿಪಾದಿಸುವರಿದ್ದಾರೆ. ಆದ್ದರಿಂದ ಪ್ರಶ್ನಪ್ರತಿವಚನಗಳನ್ನು ಉಪನಿಷತ್ತಿನಲ್ಲಿ ಅನುಸಂಧಾನ ಮಾಡಿಕೊಂಡು ವಿಷ್ಣುವೇ ಭೂಮನಾಗಿದ್ದಾನೆಂದು

ಸಮರ್ಥಿಸುವುದು ಯುಕ್ತವಲ್ಲವೆಂದು ಹೇಳಬಾರದು. ಹಾಗೂ 'ವ್ಯತಿಹಾರೋ ವಿಶಿಂಷಂತಿ' ಎಂಬ ಸೂತ್ರದಲ್ಲಿ ಅಧ್ಯಾಹಾರ ಮಾಡಿಕೊಳ್ಳಬೇಕೆಂಬುದನ್ನು ಹೇಳಿದ್ದು ಸತ್ಯ. ಆದರೆ ಅದನ್ನೇ ಇಲ್ಲಿ ಆಕ್ಷೇಪ ಮಾಡುತ್ತಿರುವುದರಿಂದ ಪುನುರುಕ್ತಿಗೆ ಅವಕಾಶವಿಲ್ಲವೆಂದು ತಿಳಿಯಬೇಕು.

ನ್ಯಾಯವಿವರಣ ಹಾಗೂ ಛಾಂದೋಗ್ಯ ಭಾಷ್ಯಗಳಲ್ಲಿ ಪ್ರಾಣಶಬ್ದಕ್ಕೆ ಮುಖ್ಯಪ್ರಾಣನೆಂದೇ ವ್ಯಾಖ್ಯಾನಿಸಿದ್ದಾರೆ. ಹಾಗಾದರೆ ಶ್ರುತಿಯಲ್ಲಿ ವಿಷ್ಣುವನ್ನು ಉಲ್ಲೇಖಿಸಿದಂತೆಯೇ ಆಗಲಿಲ್ಲವಲ್ಲಾ? ಎಂದು ಪ್ರಶ್ನಿಸಬಾರದು. ಮುಖ್ಯಪ್ರಾಣದೇವರ ಅನಂತರ ಸತ್ಯವು ಪ್ರಸ್ತುತವಾಗಿದೆ. ಅಂತಹ ಸತ್ಯಶಬ್ದದಿಂದ ವಿಷ್ಣುವೇ ಪ್ರತಿಪಾದ್ಯನೆಂದು ತಿಳಿಯಬೇಕು. ಆದ್ದರಿಂದಲೇ 'ಏವಂ ವಿಜಾನನ್ ಅತಿವಾದೀ' ಎಂದು ಮುಖ್ಯಪ್ರಾಣದೇವರನ್ನು ಯಾರು ತಿಳಿಯುತ್ತಾರೋ, ಅವನನ್ನು 'ಅತಿವಾದಿ' ಅಂದರೆ ಅಧಿಕಜ್ಞಾನಿಯೆಂದು ಶ್ರುತಿಯು ಪ್ರಶಂಸಿಸಿದೆ. ಅನಂತರ 'ಏಷ ತು ವಾ ಅತಿವದತಿ ಯಃ ಸತ್ಯೇನಾತಿವದತಿ' ಎಂಬುದಾಗಿ ಯಾರು ಸತ್ಯಸ್ವರೂಪನಾದ ಬ್ರಹ್ಮನನ್ನು ತಿಳಿಯುತ್ತಾರೋ ಅವನು ಅತ್ಯಧಿಕವಾದ ಜ್ಞಾನಿ ಎಂಬುದಾಗಿ 'ತು' ಶಬ್ದವು ಅತಿಶಯವನ್ನು ತಿಳಿಸುತ್ತಿದೆ. ಆದ್ದರಿಂದ ಸತ್ಯಶಬ್ದದಿಂದ ಪರಬ್ರಹ್ಮನೇ ಪ್ರತಿಪಾದ್ಯನೆಂದು ಸಿದ್ಧವಾಗುತ್ತದೆ. ಆದ್ದರಿಂದ ಶ್ರುತಿಯಲ್ಲಿ ವಿಷ್ಣುವಿನ ಉಲ್ಲೇಖವಿದೆ ಎಂದು ಸಿದ್ಧವಾಗುತ್ತದೆ.

'ಪ್ರಾಣೋವಾ ಆಶಾಯಾ ಭೂಯಾನ್' ಎಂಬ ಛಾಂದೋಗ್ಯದಲ್ಲಿರುವ ಪ್ರಾಣಶಬ್ದಕ್ಕೆ 'ವಿಷ್ಣು' ಎಂಬರ್ಥವನ್ನು ಒಪ್ಪಿ ಸಿದ್ಧಾಂತ ಮಾಡಿರುತ್ತಾರೆ. ಆದರೆ ನ್ಯಾಯವಿವರಣದಲ್ಲಿ ಮುಖ್ಯಪ್ರಾಣನೆಂಬರ್ಥವನ್ನೂ ಒಪ್ಪಿಯೇ ಸಿದ್ಧಾಂತ ಮಾಡಿರುತ್ತಾರೆ. ವಿಚಾರಮಾಡಿದರೆ ನ್ಯಾಯವಿವರಣದ ಅಭಿಪ್ರಾಯವು ಅತ್ಯಂತ ಸಮಂಜಸವೆಂದೆನಿಸುತ್ತದೆ. ಏಕೆಂದರೆ ಪ್ರಾಣಶಬ್ದವು ವಿಷ್ಣುಪರವಾಗುವುದರಿಂದ 'ಏಷ ತು ವಾ ಅತಿವದಿತಿ' ಎಂಬಲ್ಲಿರುವ 'ತು' ಶಬ್ದವು ಸ್ವಾರಸ್ಯವಾಗುತ್ತದೆ. ಮತ್ತು ಆಶಾನಾಮಕಳಾದ ಭಾರತೀದೇವಿಗಿಂತ ಮುಖ್ಯಪ್ರಾಣದೇವರಿಗೆ ಉತ್ತಮತ್ವವನ್ನು ಹೇಳಿದಂತಾಗುತ್ತದೆ. ಅಷ್ಟೇ ಅಲ್ಲದೆ 'ಇಯದಾಮನನಾತ್' ಇತ್ಯಾದಿ ಸೂತ್ರಗಳಲ್ಲಿ ಹಾಗೂ ಛಾಂದೋಗ್ಯಭಾಷ್ಯದಲ್ಲೆಲ್ಲಾ ಪ್ರಾಣಶಬ್ದಕ್ಕೆ ಮುಖ್ಯಪ್ರಾಣನೆಂಬರ್ಥವನ್ನೇ ಅಂಗೀಕರಿಸಿದ್ದಾರೆ. ಹೀಗಿರುವಾಗ ಭಾಷ್ಯದಲ್ಲಿ ವಿಷ್ಣುವೆಂಬರ್ಥವನ್ನು ಅಂಗೀಕರಿಸಿದ್ದು ವಿರುದ್ಧವಾಗುತ್ತದಲ್ಲವೆ ಎಂಬ ವಿರೋಧಾಶಂಕೆಯು ಬರುತ್ತದೆ.

ಇದಕ್ಕೆ ಸಮಾಧಾನ ಹೀಗೆ - ಶ್ರೀಮದಾಚಾರ್ಯರು ಭಾಷ್ಯದಲ್ಲಿ ಪ್ರಾಣಶಬ್ದಕ್ಕೆ ವಿಷ್ಣುವೆಂಬರ್ಥವನ್ನು ಒಪ್ಪಲು ಅನೇಕ ಕಾರಣಗಳಿವೆ. ಪೂರ್ವಪಕ್ಷಕಾರರಂತೆ ನಾವು ಕೇವಲ ಪ್ರಾಣಪರತ್ವವನ್ನು ಮಾತ್ರ ಒಪ್ಪಿರುವುದಿಲ್ಲ. ವಿಷ್ಣುಪರತ್ವವನ್ನೂ ಸಹ ಒಪ್ಪುತ್ತೇವೆ. ಅಥವಾ ಮುಖ್ಯಪ್ರಾಣದೇವರಿಗಿಂತ ವಿಷ್ಣು ಉತ್ತಮನಾಗಿದ್ದಾನೆಂದು ಹೇಳಬೇಕಾಗಿದೆ. ಅಥವಾ ಅಂತರ್ಯಾಮಿತ್ವೇನೈವ ಉತ್ಕ್ರಮಣಾದಿಲಿಂಗವನ್ನು ವಿಷ್ಣುವಿನಲ್ಲಿ ಕೂಡಿಸಬೇಕಾಗಿದೆ. ಈ ಎಲ್ಲಾ ಕಾರಣಕ್ಕೋಸ್ಕರ ವಿಷ್ಣುಪರತ್ವವನ್ನು ಪ್ರಾಣಶಬ್ದಕ್ಕೆ ಒಪ್ಪಿರುತ್ತಾರೆ. ಆದ್ದರಿಂದ ಬೇರೆ ಬೇರೆ ವಿವಕ್ಷೆಗಳಿಂದ ಪ್ರಾಣಶಬ್ದದಿಂದ ಮುಖ್ಯಪ್ರಾಣ ಹಾಗೂ ವಿಷ್ಣು ಪ್ರತಿಪಾದ್ಯರಾಗಿದ್ದಾರೆಂದು ಉತ್ತರಿಸಬೇಕಾಗಿಲ್ಲ ಹೊರತಾಗಿ ಮುಖ್ಯಪ್ರಾಣ ಹಾಗೂ ವಿಷ್ಣು ಇಬ್ಬರೂ ಸಹ ಪ್ರತಿಪಾದ್ಯರೇ ಆಗಿದ್ದಾರೆಂದು ಒಪ್ಪಬೇಕು. ವಿಕಲ್ಪಪಕ್ಷವನ್ನು ಆಶ್ರಯಿಸಬಾರದು. ಸಮುಚ್ಚಯಪಕ್ಷವನ್ನೇ ಆಶ್ರಯಿಸಬೇಕು.

ಉತ್ಕ್ರಮಣವೆಂಬ ಕ್ರಿಯೆಯು ವ್ಯಾಪ್ತನಾದ ಭಗವಂತನಲ್ಲಿ ಹೇಗೆ ಕೂಡುತ್ತದೆ? ಎಂಬ ಗೊಂದಲವು ಬೇಡ. ಎಲ್ಲೆಡೆ ವ್ಯಾಪ್ತವಾದ ಜಾತಿಯು ಮಡಿಕೆ ಮೊದಲಾದವುಗಳಲ್ಲಿ ಇರುತ್ತದೆಂದು ಒಪ್ಪಿದ್ದಾರೆ. ಮತ್ತು ಆಕಾಶ, ದಿಕ್

ಇವೆರಡೂ ವ್ಯಾಪ್ತವಾಗಿರುವುದರಿಂದ ಪರಸ್ಪರ ಸಂಯೋಗವಿದ್ದರೂ ತಾರ್ಕಿಕರು ನಿತ್ಯದ್ರವ್ಯಗಳಿಗೆ ಸಂಯೋಗವನ್ನು ಒಪ್ಪಿರುವುದಿಲ್ಲ. ಅದರಂತೆ ಎಲ್ಲೆಡೆ ಭಗವಂತನು ವ್ಯಾಪ್ತನಾಗಿದ್ದರೂ ಕ್ರಿಯೆಯನ್ನು ಒಪ್ಪಲು ಅಡ್ಡಿಯಿಲ್ಲ.

'ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ' ಇವೇ ಮೊದಲಾದ ಪ್ರಮಾಣಗಳ ಆಧಾರದಿಂದ ಭಗವಂತನಲ್ಲಿರುವ ಕ್ರಿಯೆ ಮೊದಲಾದವು ಸ್ವಾಭಾವಿಕವಾಗಿರುತ್ತವೆ ಎಂದು ತಿಳಿದು ಬರುತ್ತಿದೆ. ಮತ್ತು ಭಗವಂತನಲ್ಲಿ ಇಂತಹ ಕ್ರಿಯೆಯಿರಲು ಅಣುತ್ವವೆಂಬ ಧರ್ಮವಿದೆ. ಅಣುವಾದ ಪದಾರ್ಥಗಳಲ್ಲಿ ಕ್ರಿಯೆಯಿರುವುದು ಲೋಕದಲ್ಲಿ ಕಾಣುತ್ತೇವೆ. ಭಗವಂತನಿಗೆ ಅಣುರೂಪವೂ ಇರುವುದರಿಂದ ಕ್ರಿಯೆಯನ್ನು ಹೇಳಲು ಏನೂ ತೊಂದರೆಯಿಲ್ಲ. ಮತ್ತು ಇವನಲ್ಲಿರುವ ಕ್ರಿಯೆಯು ಲೋಕವಿಲಕ್ಷಣವಾಗಿರುವುರಿಂದ ಉತ್ತರದೇಶಸಂಯೋಗ, ಪೂರ್ವದೇಶವಿಭಾಗ ಮೊದಲಾದ ಪ್ರಯೋಜನಗಳಿಲ್ಲದಿದ್ದರೂ ಸ್ವಾಭಾವಿಕವಾಗಿ ಇರುತ್ತದೆಂದು ಒಪ್ಪಬೇಕು.

ಆದ್ದರಿಂದ ಉತ್ಕ್ರಮಣವೆಂಬ ಪೂರ್ವಪಕ್ಷಲಿಂಗವು ವಿಷ್ಣುವಿನಲ್ಲಿ ಸಾವಕಾಶವಾಯಿತು. ಈ ಲಿಂಗದಿಂದ ಮುಖ್ಯಪ್ರಾಣನೇ ಭೂಮನಾಗಿದ್ದಾನೆಂದು ಸಾಧಿಸಲು ಬರುವುದಿಲ್ಲ.

ಯಾವುದೇ ಪದಾರ್ಥದಲ್ಲಿ ಕ್ರಿಯೆ ಉಂಟಾಗಬೇಕೆಂದರೆ ಅದು ಅಣುರೂಪವಾಗಿರಬೇಕು. ಅಥವಾ ಮಧ್ಯಮ ಪರಿಮಾಣವುಳ್ಳದ್ದಾಗಿರಬೇಕು. ಏಕೆಂದರೆ ಕ್ರಿಯೆ ಎಂದರೆ ತಾನು ಯಾವ ಸ್ಥಳದಲ್ಲಿ ಇರುತ್ತದೋ, ಆ ಸ್ಥಳವನ್ನು ಬಿಟ್ಟು ಮತ್ತೊಂದು ಸ್ಥಳಕ್ಕೆ ಹೋಗುವುದು ಎಂದರ್ಥ. ಎಲ್ಲೆಡೆ ತುಂಬಿರುವ ವಸ್ತು ಇರುವ ಸ್ಥಳದಿಂದ ಹೊರಟು ಮತ್ತೊಂದು ಸ್ಥಳಕ್ಕೆ ಹೋಗಲು ಸಾಧ್ಯವೇ ಇಲ್ಲ. ಭಗವಂತನು ಎಲ್ಲೆಡೆ ವ್ಯಾಪ್ತನಾಗಿದ್ದಲ್ಲಿ ಇಂತಹ ಕ್ರಿಯೆಯನ್ನು ಒಪ್ಪುವುದು ಹೇಗೆ ? ಎಂಬುದೇ ಇಲ್ಲಿ ಬಂದಿರುವ ದೊಡ್ಡ ಗೊಂದಲ.

ಈ ಗೊಂದಲಕ್ಕೆ ಅನೇಕ ಬಗೆಯಲ್ಲಿ ಪರಿಹಾರಗಳನ್ನು ತಿಳಿದುಕೊಳ್ಳಬಹುದು. ಭಗವಂತನು ಅಣುವಿಗಿಂತ ಅಣುಸ್ವರೂಪನು, ಹಾಗೂ ಮಹತ್‌ಪದಾರ್ಥಕ್ಕಿಂತಲೂ ಮಹತ್‌ಸ್ವರೂಪನೂ ಆಗಿರುತ್ತಾನೆ. ಈ ವಿರುದ್ಧ ಧರ್ಮವು ಒಬ್ಬನೇ ಭಗವಂತನಲ್ಲಿ ಒಪ್ಪಲು ಹೇಗೆ ಸಾಧ್ಯ ? ಎಂಬುದು ಮತ್ತೊಂದು ಗೊಂದಲ. ಈ ಗೊಂದಲವನ್ನು ಪರಿಹರಿಸಿಕೊಂಡರೆ ಎಲ್ಲೆಡೆ ವ್ಯಾಪ್ತನಾದ ಭಗವಂತನಲ್ಲಿ ಕ್ರಿಯೆಯೂ ಸಹ ಉಪಪನ್ನವಾಗುತ್ತದೆಂದು ಸುಲಭವಾಗಿ ತಿಳಿಯಬಹುದು. ನ್ಯಾಯಸುಧಾ, ಅನುವ್ಯಾಖ್ಯಾನ ಹಾಗೂ ತತ್ವಪ್ರಕಾಶಿಕೆ ಮೊದಲಾದ ಗ್ರಂಥಗಳಲ್ಲಿ ಹೇಳಿರುವ ಪ್ರಮೇಯಗಳನ್ನು ಗ್ರಂಥಕಾರರು ಇಲ್ಲಿ ಸಂಗ್ರಹಿಸಿ, ಈ ಎಲ್ಲಾ ಪ್ರಶ್ನೆಗಳನ್ನು ಪರಿಹರಿಸುತ್ತಿದ್ದಾರೆ. ಭಗವಂತನಲ್ಲಿ ಯಾವಾಗ ಅಣುತ್ವವೆಂಬ ಧರ್ಮವಿರುತ್ತದೋ, ಆವಾಗಲೇ ಮಹತ್ತ್ವವೆಂಬ ಧರ್ಮವು ಅದೇ ಪ್ರಕಾರದಲ್ಲಿರುತ್ತದೆಂದು ನಾವು ಹೇಳುವುದಿಲ್ಲ, ಸ್ವಲ್ಪ ವ್ಯತ್ಯಾಸವಿದೆ. ಪ್ರತಿಯೊಂದು ಗುಣಗಳೂ ಸಹ ಶಕ್ತಿ ಹಾಗೂ ವ್ಯಕ್ತಿ ಸ್ವರೂಪದಲ್ಲಿರುತ್ತದೆ. ಅಣುತ್ವವು ಯಾವಾಗ ಶಕ್ತಿಸ್ವರೂಪದಲ್ಲಿರುತ್ತದೋ, ಆವಾಗ ಮಹತ್ತ್ವವು ವ್ಯಕ್ತಿರೂಪದಲ್ಲಿರುತ್ತದೆ. ಶಕ್ತಿರೂಪವೆಂದರೆ ಆ ಸಂದರ್ಭದಲ್ಲಿ ಆ ರೂಪದಿಂದ ಕೆಲಸವಾಗುತ್ತಿರುವುದಿಲ್ಲ ಎಂದರ್ಥ. ವ್ಯಕ್ತಿಸ್ವರೂಪವೆಂದರೆ ಅದೇ ಸಂದರ್ಭದಲ್ಲಿ ಆ ರೂಪದಿಂದ ಆ ಕಾರ್ಯವು ನಡೆಯುತ್ತಿರುತ್ತದೆ ಎಂದರ್ಥ. ಆದ್ದರಿಂದ ಅಣುತ್ವ ಹಾಗೂ ಮಹತ್ತ್ವಗಳು ನಿರಂತರವಾಗಿ ಭಗವಂತನಲ್ಲಿ ಇದ್ದರೂ ಸಹ ಎರಡೂ ಧರ್ಮಗಳು ಕೇವಲ ಶಕ್ತಿರೂಪದಿಂದಾಗಲೀ ಅಥವಾ ವ್ಯಕ್ತಿರೂಪದಿಂದಾಗಲೀ, ಇರುವುದಿಲ್ಲವೆಂಬ ಸೂಕ್ಷ್ಮಪ್ರಮೇಯವನ್ನು ಗಮನಿಸಬೇಕು. ಅಂತೂ ಭಗವಂತನಲ್ಲಿ ಅಣುತ್ವವು ಯಾವಾಗ ವ್ಯಕ್ತಿಸ್ವರೂಪದಿಂದ ಇರುತ್ತದೋ, ಆವಾಗ ಮಹತ್ತ್ವವು ವ್ಯಕ್ತಿಸ್ವರೂಪದಿಂದ ಇರುವುದಿಲ್ಲವೆಂದಂತಾಯಿತು. ಈ ಬಗೆಯಲ್ಲಿ ಚಿಂತಿಸಿದಾಗ ಅಣುಸ್ವರೂಪನಾದ

ಭಗವಂತನಿಗೆ ಪೂರ್ವದೇಶ ವಿಭಾಗ, ಉತ್ತರದೇಶ ಸಂಯೋಗ ಮೊದಲಾದವುಗಳೆಲ್ಲವೂ ಸಿದ್ಧವಾಗುತ್ತವೆ. ಯಾವಾಗ ಮಹತ್ತ್ವವು ವ್ಯಕ್ತವಾಗಿರುತ್ತದೋ, ಆವಾಗ ಅಣುತ್ವವು ಶಕ್ತಿರೂಪದಲ್ಲಿರುವುದರಿಂದ ಪೂರ್ವದೇಶವಿಭಾಗ ಅಥವಾ ಉತ್ತರದೇಶಸಂಯೋಗಗಳನ್ನು ಒಪ್ಪಲು ಸಾಧ್ಯವಿಲ್ಲ. ಅಂದರೆ ವ್ಯಕ್ತನಾದ ಅಣುಸ್ವರೂಪವುಳ್ಳ ಭಗವಂತನಲ್ಲಿ ಕ್ರಿಯೆಯು ನಡೆಯುತ್ತದೆಂದು ಇದರ ಅಭಿಪ್ರಾಯ. ಭಗವಂತನಲ್ಲಿ ಅನೇಕ ಕ್ರಿಯೆಗಳಿವೆ. ಸೃಷ್ಟಿ ಮಾಡುವ ಕ್ರಿಯೆ, ಸಂಹಾರ ಮಾಡುವ ಕ್ರಿಯೆ ಇತ್ಯಾದಿಯಾಗಿ ಎಣಿಸಲು ಸಾಧ್ಯವಾಗದಷ್ಟು ಕ್ರಿಯೆಗಳಿವೆ. ಇವೆಲ್ಲವೂ ಸಹ ಭಗವತ್ ಸ್ವರೂಪವೇ ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಸೃಷ್ಟಿ ಮಾಡುವ ಕ್ರಿಯೆಯು ಭಗವತ್‌ಸ್ವರೂಪವಾದ್ದರಿಂದ ನಿರಂತರವಾಗಿರುವುದಾದರೆ, ನಿರಂತರ ಸೃಷ್ಟಿಯೇ ಆಗುತ್ತಿರಬೇಕಾಗುತ್ತದೆ. ಸಂಹಾರ, ನಿಯಮನ ಮೊದಲಾದ ಕ್ರಿಯೆಗಳು ನಡೆಯಲು ಸಾಧ್ಯವಿಲ್ಲದಂತಾಗುತ್ತದೆ. ಈಗಾಗಲೇ ಹೇಳಿದಂತೆ ಪ್ರತಿಯೊಂದೂ ಕ್ರಿಯೆಯನ್ನು ಶಕ್ತ್ಯಾತ್ಮನಾ, ವ್ಯಕ್ತ್ಯಾತ್ಮನಾ ವಿಭಾಗ ಮಾಡಿಕೊಂಡಾಗ ಯಾವಾಗ ಸೃಷ್ಟಿ ಸಮಯವು ಪ್ರಾಪ್ತವಾಗುತ್ತದೋ, ಆವಾಗ ಮಾತ್ರ ಸೃಷ್ಟಿ ಮಾಡುವ ಕ್ರಿಯೆಯು ಅಭಿವ್ಯಕ್ತವಾಗುತ್ತದೆ. ಸಂಹಾರ ಮಾಡುವ ಕಾಲವು ಪ್ರಾಪ್ತವಾದಾಗ ಸಂಹಾರ ಮಾಡುವಂತಹ ಕ್ರಿಯೆಯು ಪ್ರಾಪ್ತವಾಗುತ್ತದೆ. ಹೀಗೆ ಹೇಳಿದಾಗ ಎಲ್ಲಾ ವಿಧದ ಸಮಾಧಾನಗಳನ್ನು ಹೇಳಿದಂತಾಗುತ್ತದೆ. ಶ್ರೀರಾಮಚಂದ್ರನು ರಾವಣನನ್ನು ಕೊಂದನು ಎಂದು ಹೇಳಿದಾಗ ರಾವಣನ ಹನನವೆಂಬ ಕ್ರಿಯೆಯು ಶ್ರೀರಾಮಚಂದ್ರನಲ್ಲಿ ನಿರಂತರವಾಗಿ ಇರುತ್ತದೆ. ಅಂದ ಮಾತ್ರಕ್ಕೆ ಯಾವಾಗಲೂ ರಾವಣನನ್ನು ಸಂಹಾರ ಮಾಡುತ್ತಲೇ ಇರುತ್ತಾನೆ ಎಂದರ್ಥವಲ್ಲ. ಹೊರತಾಗಿ ಯಾವಾಗ ಆ ಸಮಯವು ಪ್ರಾಪ್ತವಾಗುತ್ತದೋ, ಆ ಸಂದರ್ಭದಲ್ಲಿ ಮಾತ್ರ ರಾವಣನನ್ನು ಕೊಲ್ಲುವಂತಹ ಕ್ರಿಯೆಯು ಅಭಿವ್ಯಕ್ತವಾಗುತ್ತದೆ. ಉಳಿದ ಕಾಲಗಳೆಲ್ಲಾ ಶಕ್ತಿಸ್ವರೂಪದಲ್ಲಿರುತ್ತದೆ ಎಂದು ತಿಳಿಯ ಬೇಕಾದ ಮುಖ್ಯಪ್ರಮೇಯ.

ಹೀಗೆ ಭಗವಂತನ ಕ್ರಿಯೆಗಳು ಅಣುತ್ವ, ಮಹತ್ತ್ವ ಮೊದಲಾದ ಗುಣಗಳು ಶಕ್ತಿ ಹಾಗೂ ವ್ಯಕ್ತಿಸ್ವರೂಪ ಎಂಬ ಎರಡು ಬಗೆಯನ್ನು ಹೊಂದಿರುತ್ತವೆ ಎಂದಷ್ಟೇ ಅಲ್ಲ. ಭಗವಂತನಿಗೆ ಅನೇಕ ರೂಪಗಳು ಪ್ರಮಾಣಸಿದ್ಧವಾಗಿದೆ. ಒಂದು ರೂಪದಲ್ಲಿ ಅಣುತ್ವವು ವ್ಯಕ್ತವಾಗಬಹುದು. ಮತ್ತೊಂದು ರೂಪದಲ್ಲಿ ಮಹತ್ತ್ವವು ವ್ಯಕ್ತವಾಗಬಹುದು. ಹೀಗೆ ರೂಪಗಳ ಭೇದದಿಂದಲೂ ಅಣುತ್ವ ಮಹತ್ತ್ವಗಳನ್ನು ಉಪಪಾದಿಸುವುದು ಸುಲಭ. ಸವಿಶೇಷ ಭೇದವಿರುವುದರಿಂದ ಹೀಗೆ ಭೇದದ ಕಾರ್ಯವು ಆಯಾ ರೂಪಗಳಲ್ಲಿ ನಡೆಯುತ್ತವೆ. ಅಥವಾ ಅಚಿಂತ್ಯಾತ್ಮಕ ಶಕ್ತಿಯನ್ನು ಹೊಂದಿರುವ ಭಗವಂತನಲ್ಲಿ ನಮ್ಮ ಕಲ್ಪನೆಗೆ ಮೀರಿದ ವಿಚಾರಗಳೇ ಇರುತ್ತವೆ.

ಸೂತ್ರದಲ್ಲಿ 'ಸಂಪ್ರಸಾದಾತ್' ಎಂದು ಹೇಳಿದ್ದಾರೆ. 'ಸಂಪ್ರಸಾದಾತ್' ಎಂಬ ಶಬ್ದಕ್ಕೆ ಪೂರ್ಣಸುಖವುಳ್ಳವನಾದ್ದರಿಂದ ಎಂದರ್ಥ. ಒಂದು ವೇಳೆ 'ಸಂಪ್ರಸಾದಾತ್' ಶಬ್ದವನ್ನು ಬಳಸದೇ 'ಪೂರ್ಣಸುಖಾತ್' ಎಂದೇ ಹೇಳಿದ್ದರೆ, ಸುಖವಿರುವುದಾದರೆ ದುಃಖವು ಬರಲಿ, ಅಥವಾ ಸುಖದ ಜೊತೆಗೆ ದುಃಖವು ಅವಿನಾಭೂತವಾಗಿದೆ, ಇತ್ಯಾದಿಯಾಗಿ ಪ್ರಶ್ನೆಗಳು ಹುಟ್ಟುತ್ತಿದ್ದವು. 'ಸಂಪ್ರಸಾದಾತ್' ಶಬ್ದವನ್ನು ಬಳಸಿದ್ದರಿಂದ ಸುಖದ ಕಾರ್ಯವೆನಿಸಿದ ಪ್ರಸಾದವು ಈಶ್ವರನಲ್ಲಿ ಪೂರ್ಣವಾಗಿರುವುದರಿಂದ ದುಃಖಕ್ಕೆ ಅವಕಾಶವಿಲ್ಲ. ಮತ್ತು ಜ್ಞಾನದಂತೆ ಸುಖವೂ ಸಹ ದುಃಖದಿಂದ ಅವಿನಾಭೂತವಾಗಿಲ್ಲ ಎಂಬೆರಡು ಪ್ರಮೇಯಗಳನ್ನು ಸೂತ್ರಕಾರರು ಸೂಚಿಸಿದ್ದಾರೆ. ಉಪನಿಷತ್ತಿನಲ್ಲಿರುವ ವಿಷಯವಾಕ್ಯಕ್ಕೆ ಅನುಗುಣವಾಗಿಯೇ ಸೂತ್ರಗಳ ಕ್ರಮವಿರುವುದರಿಂದ ಸೂತ್ರಗಳ ವಿನ್ಯಾಸ ಶೈಲಿಯು ಅತ್ಯಂತ ಅರ್ಥಪೂರ್ಣವಾಗಿದೆ.

ಅಕ್ಷರಾಧಿಕರಣ

ಈ ಅಧಿಕರಣದಲ್ಲಿ 'ಅಕ್ಷರ' ಎಂಬ ನಾಮಾತ್ಮಕ ಶಬ್ದವನ್ನು ಮಹಾವಿಷ್ಣುವಿನಲ್ಲಿ ಸಮರ್ಥನೆ ಮಾಡುತ್ತಿದ್ದಾರೆ. ಲಕ್ಷ್ಮೀದೇವಿಯಲ್ಲಿಯೂ ಅಕ್ಷರಶಬ್ದವನ್ನು ಪ್ರಯೋಗಿಸಬಹುದಲ್ಲವೇ? ಎಂಬ ಪೂರ್ವಪಕ್ಷವನ್ನು ನಿರಾಕರಿಸಿದ್ದಾರೆ. ಆದ್ದರಿಂದ ಲಕ್ಷ್ಮೀದೇವಿ ಹಾಗೂ ಮಹಾವಿಷ್ಣು ಇಬ್ಬರಲ್ಲಿ ಮಾತ್ರ ಅಕ್ಷರಶಬ್ದವು ಸಾಧಾರಣವಾಗಿದೆಯೆಂದು ಉಭಯತ್ರಪ್ರಸಿದ್ಧವೆನಿಸುತ್ತದೆ.

ಲಕ್ಷ್ಮೀ ಹಾಗೂ ಮಹಾವಿಷ್ಣು ಇಬ್ಬರಲ್ಲಿ ಮಾತ್ರ ಅಕ್ಷರಶಬ್ದವು ಸಾಧಾರಣವಾಗಿದೆಯೆಂದು ಹೇಳುವುದು ಎಷ್ಟು ಸ್ವರಸ? ಏಕೆಂದರೆ ಅಕಾರಾದಿ ವರ್ಣಗಳಲ್ಲಿಯೂ ಅಕ್ಷರಶಬ್ದದ ಪ್ರಯೋಗವು ಲೋಕದಲ್ಲಿ ಕಾಣಿಸುತ್ತಿದೆ. ಆದ್ದರಿಂದ ಲೋಕರೂಢಿಯನ್ನು ವಿವಕ್ಷಿಸಿದಾಗ ಅಕ್ಷರಶಬ್ದವು ಅನ್ಯತ್ರಪ್ರಸಿದ್ಧವಾಗಬೇಕಲ್ಲವೇ? ಎಂಬ ಪ್ರಶ್ನೆ ಸಹಜವಾಗಿ ಹುಟ್ಟುತ್ತದೆ. ಆದರೆ ಸಮನ್ವಯ ಮಾಡಬೇಕಾಗಿರುವ ಶಬ್ದವು ಬ್ರಹ್ಮನನ್ನು ಬಿಟ್ಟು ಬೇರೆ ಎಲ್ಲಾದರೂ ಪ್ರಸಿದ್ಧವಾಗಿರಬೇಕೆಂಬ ಅಭಿಪ್ರಾಯವನ್ನು ಹೇಳಬಾರದು. ಆ ಸಮನ್ವಯ ಮಾಡಬೇಕಾದ ಶಬ್ದವನ್ನು ಪೂರ್ವಪಕ್ಷಿಯು ಯಾವ ಪದಾರ್ಥದಲ್ಲಿ ಸಮರ್ಥಿಸುತ್ತಾನೋ ಅಂತಹ ಪದಾರ್ಥದಲ್ಲಿ ಮತ್ತು ಸಿದ್ಧಾಂತಕ್ಕೆ ವಿಷಯವಾದ ವಸ್ತುವಿನಲ್ಲಿ ಸಾಧಾರಣವಾಗಿದ್ದರೆ ಸಾಕು. ಪೂರ್ವಪಕ್ಷಿಯು ಅಕಾರಾದಿ ವರ್ಣಗಳನ್ನಾಗಲೀ, ಜಡಪ್ರಕೃತಿಯನ್ನಾಗಲೀ ಅಕ್ಷರವೆಂದು ಆಕ್ಷೇಪಿಸುತ್ತಿಲ್ಲವಾದ್ದರಿಂದ ಅವುಗಳಲ್ಲಿರುವ ರೂಢಿಯನ್ನು ವಿವಕ್ಷಿಸಬೇಕಾಗಿಲ್ಲ. ಆದ್ದರಿಂದಲೇ ಈ ಅಕ್ಷರಶಬ್ದವು ಅನ್ಯತ್ರಪ್ರಸಿದ್ಧವೂ ಸಹ ಆಗುವುದಿಲ್ಲವೆಂದು ತಿಳಿಯಬೇಕು. ಅವಿನಾಶಿತ್ವ ಎಂಬ ಪ್ರವೃತ್ತಿನಿಮಿತ್ತವನ್ನು ಅನುಸರಿಸಿದಾಗ ಕೇವಲ ವಿಷ್ಣು ಹಾಗೂ ಲಕ್ಷ್ಮೀ ಇಬ್ಬರಲ್ಲಿ ಮಾತ್ರ ಸಾಧಾರಣವಾಗುತ್ತದೆಂದು ನ್ಯಾಯವಿವರಣಕಾರರು ತಿಳಿಸಿರುತ್ತಾರೆ. ಆದ್ದರಿಂದ ಪ್ರಯೋಗಸಾಧಾರಣ್ಯದಿಂದ ಉಭಯತ್ರಪ್ರಸಿದ್ಧತ್ವವನ್ನು ನಾವು ತಿಳಿಯಬಾರದು. ವಾಸ್ತವಿಕವಾಗಿ ಮಹಾಲಕ್ಷ್ಮೀ ಹಾಗೂ ವಿಷ್ಣು ಇಬ್ಬರಲ್ಲಿಯೂ ಅಕ್ಷರಶಬ್ದದ ಪ್ರಯೋಗಸಾಧಾರಣ್ಯವನ್ನು ಹೇಳಬಹುದು. ಆದರೆ ಯಾವ ಪೂರ್ವಪಕ್ಷಿಯು ಮಹಾಲಕ್ಷ್ಮಿಯೇ ಅಕ್ಷರಳಾಗಿದ್ದಾಳೆಂದು ಆಕ್ಷೇಪಿಸುತ್ತಿದ್ದಾನೋ, ಅವನು ವಿಷ್ಣುವಿನಲ್ಲೂ ಅಕ್ಷರಶಬ್ದದ ಪ್ರಯೋಗವನ್ನು ಒಪ್ಪಲಾರನು. ಆದ್ದರಿಂದ ಅವಿನಾಶಿತ್ವವೆಂಬ ಧರ್ಮದ ಮೂಲಕವಾಗಿಯೇ ಉಭಯಸಾಧಾರಣ್ಯವನ್ನು ಹೇಳಬೇಕು.

ಅಕ್ಷರಶಬ್ದಕ್ಕೆ ಅವಿನಾಶಿತ್ವವೆಂಬ ಪ್ರವೃತ್ತಿನಿಮಿತ್ತವನ್ನಷ್ಟೇ ಆಶ್ರಯಿಸಿದರೆ ಅಕಾರಾದಿವರ್ಣಗಳಲ್ಲಿಯೂ ಇದು ಇರುವುದರಿಂದ ಅತಿಪ್ರಸಕ್ತಿ ಬರುತ್ತದೆ. ಆದ್ದರಿಂದ ರೂಢಿಯನ್ನೂ ಸಹ ಆಶ್ರಯಿಸಬೇಕು. ಇದರಿಂದ ಅಕ್ಷರಶಬ್ದವು ಪಂಕಜಾದಿಶಬ್ದಗಳಂತೆ ಯೋಗರೂಢವಾದ ಶಬ್ದವೆಂದು ಸ್ಪಷ್ಟವಾಗುತ್ತದೆ.

ಅಕ್ಷರಶಬ್ದವು ಸಂಶಯಕೋಟಿಗಳಲ್ಲಷ್ಟೇ ಸಾಧಾರಣವಾಗಬೇಕು. ಆದರೆ ಅಕಾರಾದಿವರ್ಣಗಳಲ್ಲಿಯೂ ಸಹ ಅಕ್ಷರಶಬ್ದದ ಪ್ರಯೋಗವಿರುವುದರಿಂದ ಉಭಯಪ್ರಸಿದ್ಧವೆಂದು ಹೇಗೆ ಹೇಳುತ್ತೀರಿ? ಎಂಬುದು ಮುಂದಿನ ಪ್ರಶ್ನೆ. ಈ ಪ್ರಶ್ನೆಗೆ ಗ್ರಂಥಕಾರರು ಎರಡು ಬಗೆಯಲ್ಲಿ ಉತ್ತರಿಸಿದ್ದಾರೆ. ಉಭಯತ್ರಪ್ರಸಿದ್ಧವಾಗಬೇಕೆಂದರೆ ಸಂಶಯಕೋಟಿಗಳಲ್ಲಿ ಸಾಧಾರಣವಾಗಿದ್ದರೆ ಸಾಕು, ಬೇರೆಡೆ ಇರಬಾರದೆಂದೇನೂ ಇಲ್ಲ. ಸಂಶಯಕೋಟಿಗಳೆರಡರಲ್ಲಿ ಸಾಧಾರಣವಾಗಿರುವ ಪ್ರಯುಕ್ತವೇ ಉಭಯತ್ರ-ಪ್ರಸಿದ್ಧವೆನಿಸುತ್ತದೆಂಬುದು ಒಂದು ಬಗೆಯ ಪರಿಹಾರ.

ಶರೀರವಿಯೋಗ ಇಲ್ಲದಿರುವಿಕೆ ಎಂಬ ಯೋಗಾರ್ಥವನ್ನು ಆಶ್ರಯಿಸಿದಾಗ ಅಕ್ಷರಶಬ್ದವು ಲಕ್ಷ್ಮೀ ಹಾಗೂ ಮಹಾವಿಷ್ಣು ಇಬ್ಬರಲ್ಲಿ ಮಾತ್ರ ಸಾಧಾರಣವಾಗುತ್ತದೆ. ಅಕಾರಾದಿ ವರ್ಣಗಳಲ್ಲಾಗಲೀ, ಜಡಪ್ರಕೃತಿಯಲ್ಲಾಗಲೀ ಈ ಪ್ರವೃತ್ತಿನಿಮಿತ್ತವು ಬರುವುದೇ ಇಲ್ಲ. ಹಿಂದೆ ಹೇಳಿದಂತೆ ಕೇವಲ ಅವಿನಾಶಿತ್ವವೆಂಬ ಪ್ರವೃತ್ತಿನಿಮಿತ್ತವನ್ನು ಆಶ್ರಯಿಸಿದರೆ ಅಕಾರಾದಿ ವರ್ಣಗಳಲ್ಲಿಯೂ ಸಹ ಅಕ್ಷರಶಬ್ದವು ಸಾಧಾರಣವಾಗುತ್ತಿತ್ತು. ಅದರ ಪರಿಹಾರಕ್ಕಾಗಿ ರೂಢ್ಯರ್ಥವನ್ನು ಸ್ವೀಕರಿಸುವ ಅವಶ್ಯಕತೆಯಿರುತ್ತಿತ್ತು. ಆದರೆ ಶರೀರವಿಯೋಗರಾಹಿತ್ಯವೆಂಬ ಪ್ರವೃತ್ತಿನಿಮಿತ್ತವನ್ನು ಆಶ್ರಯಿಸಿದಾಗ ಅಕಾರಾದಿ ವರ್ಣಗಳಲ್ಲಿ ಇದು ಬರುವುದೇ ಇಲ್ಲ.

ನಾಶ ಶಬ್ದಕ್ಕೆ ಸ್ವರೂಪನಾಶವೆಂಬರ್ಥ ಇರುವಂತೆ ಶರೀರವಿಯೋಗವೆಂಬರ್ಥವೂ ಸಹ ಇರುವುದರಿಂದ 'ದ್ವಾವಿಮೌ ಪುರುಷೌ ಲೋಕೇ' ಎಂಬ ಭಗವದ್ಗೀತೆಯ ಆಧಾರದಿಂದ ಶರೀರವಿಯೋಗ ಇಲ್ಲದಿರುವಿಕೆಯೂ ಸಹ ಲಕ್ಷ್ಮೀದೇವಿ ಹಾಗೂ ವಿಷ್ಣು ಇಬ್ಬರಲ್ಲಿ ಮಾತ್ರ ಬರುತ್ತದೆಂದು ಸ್ಪಷ್ಟವಾಗುತ್ತದೆ. ಹೀಗೆ ಅಕ್ಷರಶಬ್ದದ ಅರ್ಥವನ್ನು ಹೇಳಿದಾಗ ಲಕ್ಷ್ಮೀ ಹಾಗೂ ಮಹಾವಿಷ್ಣು ಇಬ್ಬರಲ್ಲಿ ಮಾತ್ರ ಅಕ್ಷರಶಬ್ದವು ಸಾಧಾರಣವಾಗುತ್ತದೆ ಹೊರತು, ಅಕಾರಾದಿ ವರ್ಣಗಳಲ್ಲಿ ಸಾಧಾರಣವಾಗುವುದಿಲ್ಲ. ಆದ್ದರಿಂದ ಸಂಶಯಪೂರ್ವಪಕ್ಷಕೋಟಿ ಹಾಗೂ ಸಿದ್ಧಾಂತಕೋಟಿಗಳಲ್ಲಷ್ಟೇ ಸಾಧಾರಣವಾದದ್ದನ್ನು ಉಭಯತ್ರಪ್ರಸಿದ್ಧವೆಂದು ಹೇಳಬಹುದು.

ಹಾಗಾದರೆ ಪಂಕಜಾದಿಶಬ್ದಗಳಂತೆ ಇದನ್ನು ಯೋಗರೂಢವೆಂದು ಹೇಗೆ ಹೇಳುತ್ತೀರಿ? ಎಂದು ಪ್ರಶ್ನಿಸಬಹುದು. ಆದರೆ ಇಲ್ಲಿಗೂ ಅಲ್ಲಿಗೂ ವ್ಯತ್ಯಾಸವಿದೆ. ಹೇಗೆಂದರೆ ಪಂಕಜಶಬ್ದಕ್ಕೆ ಕೇವಲ ಯೌಗಿಕಾರ್ಥವನ್ನು ಸ್ವೀಕರಿಸಿದರೆ, ಕುಮುದಾದಿಗಳಲ್ಲಿ ಅತಿಪ್ರಸಕ್ತಿ ಬರುತ್ತದೆ. ಮತ್ತು ಪದ್ಮತ್ವಜಾತಿ ಉಪಸ್ಥಿತಿಯೂ ಸಹ ಬರುತ್ತಿದೆ. ಮತ್ತು ಕೇವಲ ಪಂಕಜನಿಕರ್ತೃತ್ವವೆಂಬ ಯೌಗಿಕಾರ್ಥವನ್ನು ವಿವಕ್ಷಿಸಲು ಪ್ರಮಾಣವೂ ಸಹ ಇರುವುದಿಲ್ಲ. ಆದರೆ ಅಕ್ಷರಶಬ್ದದಲ್ಲಿ ಕೇವಲ ಶರೀರವಿಯೋಗರಾಹಿತ್ಯವೆಂಬ ಯೌಗಿಕಾರ್ಥವನ್ನು ವಿವಕ್ಷಿಸಿದಾಗ ಯಾವುದೇ ಅತಿಪ್ರಸಂಗವು ಬರುತ್ತಿಲ್ಲ. ಅಕ್ಷರತ್ವವೆಂಬ ಜಾತಿಯ ಉಪಸ್ಥಿತಿಯೂ ಬರುತ್ತಿಲ್ಲ. ಕೇವಲ ಯೋಗಾರ್ಥವನ್ನು ಸ್ವೀಕರಿಸಲು ಪ್ರಮಾಣವೂ ಕೂಡ ಇರುತ್ತದೆ. ಆದ್ದರಿಂದ ಪಂಕಜಶಬ್ದದಂತೆ ಇದನ್ನು ಯೋಗರೂಢವೆಂದು ವಿವಕ್ಷಿಸಬಾರದು. ಇಲ್ಲಿ ಶರೀರವಿಯೋಗರಾಹಿತ್ಯವೆಂಬ ಅರ್ಥವನ್ನು ವಿವಕ್ಷಿಸಿದಾಗ ಮಹಾವಿಷ್ಣು ಹಾಗೂ ಲಕ್ಷ್ಮೀದೇವಿ ಇಬ್ಬರಲ್ಲಿ ಯೌಗಿಕಾರ್ಥವಾಗಿದೆ. ಈ ಅರ್ಥವನ್ನು ವಿವಕ್ಷಿಸದೇ ಕೇವಲ ಅಕ್ಷರತ್ವ ಎಂಬ ಜಾತಿಯನ್ನು ಪ್ರವೃತ್ತಿನಿಮಿತ್ತವೆಂದು ಹೇಳಿದಾಗ ಅಕಾರಾದಿವರ್ಣಗಳಲ್ಲಿ ರೂಢವಾಗಿದೆ. ಆದ್ದರಿಂದ ಶಬ್ದವು ಒಂದೇ ಆಗಿದ್ದರೂ ಈ ಶಬ್ದದ ಧರ್ಮವು ಬೇರೆ ಬೇರೆ ಆಗಿರುವುದರಿಂದ ಧರ್ಮಗಳ ಭೇದದಿಂದಷ್ಟೇ ಯೋಗ ಹಾಗೂ ರೂಢಿಯೆಂದು ಈ ಅಕ್ಷರಶಬ್ದವನ್ನು ಕರೆಯಲಾಗಿದೆ. ಹೊರತಾಗಿ ಒಂದೇ ಅರ್ಥದಲ್ಲಿ ಯೋಗರೂಢವೆಂದು ಹೇಳಬಾರದು. ಹೀಗೆ ವ್ಯತ್ಯಾಸವಿದೆ.

ಹಾಗಾದರೆ ಪ್ರಥಮಪಾದದಲ್ಲಿ ಸಮನ್ವಯ ಮಾಡಲ್ಪಟ್ಟ ಇಂದ್ರಾದಿ ಶಬ್ದಗಳೂ ಕೂಡ ಅನ್ಯತ್ರಪ್ರಸಿದ್ಧವೆಂದೆನಿಸಲಾರವು. ಏಕೆಂದರೆ ಅವುಗಳಲ್ಲಿಯೂ ಪರಮೈಶ್ವರ್ಯಾದಿ ಪ್ರವೃತ್ತಿನಿಮಿತ್ತವನ್ನು ಅಪೇಕ್ಷಿಸಿ ಉಭಯಸಾಧಾರಣ್ಯವನ್ನು ಹೇಳಲು ಬರುವುದರಿಂದ ಉಭಯತ್ರಪ್ರಸಿದ್ಧತ್ವವನ್ನೇ ಅವುಗಳಿಗೂ ಹೇಳಬೇಕಲ್ಲವೇ? ಎಂಬುದು ಇಲ್ಲಿ ಬರುವ ಮತ್ತೊಂದು ಗೊಂದಲ. ಆದರೆ ನಮ್ಮ ಬುದ್ಧಿಯ ವಿವಕ್ಷೆಯಿಂದಷ್ಟೇ ಆಯಾಶಬ್ದಗಳನ್ನು ಅನ್ಯತ್ರಪ್ರಸಿದ್ಧ, ಉಭಯತ್ರಪ್ರಸಿದ್ಧವೆಂದು ಪರಿಗಣಿಸಬೇಕು. ಕೇವಲ ರೂಢ್ಯರ್ಥವನ್ನಷ್ಟೇ ಸ್ವೀಕರಿಸಿ ಇಂದ್ರಾದಿ ಶಬ್ದಗಳನ್ನು ಅನ್ಯತ್ರಪ್ರಸಿದ್ಧವೆಂದು ಪ್ರಥಮಪಾದದಲ್ಲಿ ವಿವಕ್ಷಿಸಲಾಗಿದೆ. ಒಂದು ವೇಳೆ ಪರಮೈಶ್ವರ್ಯಾದಿ

ಪ್ರವೃತ್ತಿನಿಮಿತ್ತವನ್ನು ಅಪೇಕ್ಷಿಸಿದರೆ ಅಂತಹ ಶಬ್ದಗಳೆಲ್ಲವೂ ಉಭಯತ್ರಪ್ರಸಿದ್ಧವೆನಿಸುವುದರಿಂದ ಈ ಪಾದದಲ್ಲಿಯೇ ಅವುಗಳ ಸಮನ್ವಯವು ಸಿದ್ಧವಾಗುತ್ತದೆಂಬ ಉತ್ತರವನ್ನು ತಿಳಿಯಬೇಕು.

ಅಥವಾ ನಿತ್ಯದೇಹತ್ವವನ್ನು ಅಕ್ಷರಶಬ್ದದ ಪ್ರವೃತ್ತಿನಿಮಿತ್ತವೆಂದು ಹೇಳಬಹುದು. ನಿತ್ಯದೇಹತ್ವವು ಸರ್ವಾಧಾರತ್ವದ ಅನ್ಯಥಾನುಪಪತ್ತಿಯಿಂದ ಪ್ರವೃತ್ತಿನಿಮಿತ್ತವೆಂದು ಸಿದ್ಧವಾಗುತ್ತದೆ. ಇಂತಹ ನಿತ್ಯದೇಹತ್ವವೆಂಬ ಪ್ರವೃತ್ತಿನಿಮಿತ್ತವು ವಿಷ್ಣು ಹಾಗೂ ಲಕ್ಷ್ಮೀ ಇಬ್ಬರಲ್ಲಿ ಮಾತ್ರ ಸಾಧಾರಣವಾಗಿದೆಯೆಂದೂ ಸಹ ಹೇಳಬಹುದು.

ಟೀಕೆಯಲ್ಲಿ ಅಕ್ಷರಶಬ್ದವನ್ನು ನಾಮಾತ್ಮಕವೆಂದು ಹೇಳಿದ್ದಾರೆ. ಇದೇನೂ ತಪ್ಪಲ್ಲ. ಈಗಾಗಲೇ ಸಮರ್ಥಿಸಿದ ಮೂರು ವಿಧವಾದ ಪಕ್ಷಗಳಲ್ಲಿಯೂ ಅಕ್ಷರಶಬ್ದಕ್ಕೆ ನಾಮಾತ್ಮಕತ್ವವನ್ನು ಒಪ್ಪಲಾಗಿದೆ. ಕೇವಲ ಯೌಗಿಕಪಕ್ಷವನ್ನು ವಿವಕ್ಷಿಸಿದಾಗ ಅಕಾರಾದಿ ವರ್ಣಗಳಲ್ಲಿ ಅಕ್ಷರಶಬ್ದವು ರೂಢವಾಗಿರುವ ಪ್ರಯುಕ್ತ ನಾಮಾತ್ಮಕವಾಗಿದೆಯೆಂದು, ಯೋಗರೂಢಪಕ್ಷದಲ್ಲಿ ವಿಷ್ಣು ಹಾಗೂ ಲಕ್ಷ್ಮೀ ಇಬ್ಬರಲ್ಲಿಯೂ ನಾಮಾತ್ಮಕವಾಗಿದೆಯೆಂದು, ಕೇವಲ ನಾಮಾತ್ಮಕವೆಂಬ ಪಕ್ಷದಲ್ಲಂತೂ ನಾಮಾತ್ಮಕವೆಂದು ಹೇಳಿದ್ದು ಸಮಂಜಸವೇ ಆಗುತ್ತದೆ.

ಸೂತ್ರಕಾರರ ಅಧಿಕರಣ ರಚನೆಯು ಬಹಳ ಸ್ವಾರಸ್ಯಮಯವಾಗಿದೆ. ಈ ಅಧಿಕರಣಗಳ ಈ ಕ್ರಮಕ್ಕೆ ನಾಲ್ಕು ರೀತಿ ಕಾರಣವನ್ನು ತಿಳಿಯಬಹುದು - ಏಕೆಂದರೆ ಮೊದಲನೆಯ ದ್ಯುಭ್ವಾದ್ಯಧಿ- ಕರಣದಲ್ಲಿ ದ್ಯುಭ್ವಾದ್ಯಾಯತನತ್ವವನ್ನು ಜಡವಾದ ಪ್ರಕೃತಿ ಹಾಗೂ ಸಕಲಜೀವರಲ್ಲಿ ನಿರಾಕರಿಸಿ ಅದನ್ನು ವಿಷ್ಣುವಿನಲ್ಲಿ ಸಮರ್ಥಿಸಿದರು. ಎರಡನೆಯ ಭೂಮಾಧಿಕರಣದಲ್ಲಿ ಸಕಲಜೀವರಿಗಿಂತ ಶ್ರೇಷ್ಠರಾದ ಮುಖ್ಯಪ್ರಾಣದೇವರಲ್ಲಿ ಭೂಮತ್ವವನ್ನು ನಿರಾಕರಿಸಿ ಅದನ್ನು ವಿಷ್ಣುವಿನಲ್ಲಿ ಸಮರ್ಥಿಸಿದರು. ಮೂರನೆಯ ಈ ಅಕ್ಷರಾಧಿಕರಣದಲ್ಲಿ ಲಕ್ಷ್ಮೀದೇವಿಯಲ್ಲಿರುವ ಅಕ್ಷರತ್ವವನ್ನು ನಿರಾಕರಿಸಿ ವಿಷ್ಣುವಿನಲ್ಲಿ ಅದನ್ನು ಸಮನ್ವಯ ಮಾಡುತ್ತಿರುವುದರಿಂದ ಅಧಿಕರಣಗಳ ತಾರತಮ್ಯವು ಅತ್ಯಂತ ಸಂಗತವಾಗಿದೆ.

ಅಥವಾ ಮೊದಲನೆಯ ದ್ಯುಭ್ವಾದ್ಯಧಿಕರಣದಲ್ಲಿ ಕೇವಲ ಬಹಿರಂಗವಾದ ಎರಡು ಸಮಾಖ್ಯಾಪ್ರಮಾಣಗಳಿಂದಲೇ ಆಕ್ಷೇಪ ಮಾಡಿದರು, ಮತ್ತೆ ಎರಡನೆಯ ಭೂಮಾಧಿಕರಣದಲ್ಲಿ ಸಮಾಖ್ಯಾ-ಪ್ರಮಾಣಕ್ಕಿಂತಲೂ ಬಲಿಷ್ಠವಾದ ಉಪಕ್ರಮಪ್ರಮಾಣವನ್ನು ಆಶ್ರಯಿಸಿದರು. ಹಾಗೂ ಈ ಅಧಿಕರಣದಲ್ಲಿ ಆ ಎರಡು ಪ್ರಮಾಣಗಳಿಗಿಂತಲೂ ಬಲಿಷ್ಠವಾದ ಪ್ರವೃತ್ತಿನಿಮಿತ್ತದಿಂದ ಆಕ್ಷೇಪ ಮಾಡಿ ವಿಷ್ಣುವಿನಲ್ಲಿ ಅಕ್ಷರಶಬ್ದವನ್ನು ಸಮನ್ವಯ ಮಾಡುತ್ತಿದ್ದಾರೆ.

ಅಥವಾ ಮೊದಲನೆಯ ದ್ಯುಭ್ವಾದ್ಯಧಿಕರಣದಲ್ಲಿ ಬೇರೆ ಬೇರೆ ಪ್ರಕರಣಗಳಲ್ಲಿರುವ ಧರ್ಮಗಳಿಗೆ ವಿರೋಧಗಳನ್ನು ಪರಿಹರಿಸಿದರು. ಎರಡನೆಯ ಭೂಮಾಧಿಕರಣದಲ್ಲಿ ಒಂದೇ ಪ್ರಕರಣದಲ್ಲಿರುವ ಧರ್ಮಗಳಿಗೆ ವಿರೋಧವನ್ನು ಪರಿಹರಿಸಿದರು. ಈ ಅಧಿಕರಣದಲ್ಲಿ ಒಂದೇ ವಾಕ್ಯದಲ್ಲಿರುವ ಧರ್ಮಗಳಿಗೆ ವಿರೋಧವನ್ನು ಪರಿಹರಿಸುತ್ತಿದ್ದಾರೆ.

ಅಥವಾ ಹಿಂದಿನೆರಡು ಅಧಿಕರಣಗಳಲ್ಲಿ ಕೇವಲ ಒಂದೊಂದು ಧರ್ಮಗಳಿಗೆ ವಿರೋಧವನ್ನು ಪರಿಹರಿಸಿದರು, ಆದರೆ ಈ ಅಧಿಕರಣದಲ್ಲಿ ಅನೇಕ ಧರ್ಮಗಳಿಗಿರುವ ವಿರೋಧವನ್ನು ಪರಿಹರಿಸಿದ್ದಾರೆ.

'ನ ತದಶ್ನಾತಿ ಕಿಂಚನ' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಅನಶನವು ಬ್ರಹ್ಮನಲ್ಲಿ ಯುಕ್ತವಾಗುವುದಿಲ್ಲ. ಆದ್ದರಿಂದ ಶ್ರುತಿಯಲ್ಲಿರುವ ಆಕಾಶಶಬ್ದ್ಕ್ಕೆ ಲಕ್ಷ್ಮೀದೇವಿಯೆಂಬರ್ಥವನ್ನು ಸ್ವೀಕರಿಸದೇ, ಉಳಿದ ಪದಾರ್ಥಗಳನ್ನಷ್ಟೇ ಅರ್ಥವನ್ನಾಗಿ ವ್ಯಾಖ್ಯಾನಿಸಬೇಕು. ಅಂತಹ ಆಕಾಶಾದಿ ಜಡಪದಾರ್ಥಗಳಿಗೆ ಆಶ್ರಯಳಾದವಳು ಲಕ್ಷ್ಮೀದೇವಿಯೆಂದು ಆವಾಗ ಹೇಳಬಹುದು. ಆದ್ದರಿಂದ ಲಕ್ಷ್ಮೀದೇವಿಯೇ ಅಕ್ಷರಶಬ್ದವಾಚ್ಯಳಾಗುತ್ತಾಳೆಂಬುದು ಪೂರ್ವಪಕ್ಷಕಾರರ ಉದ್ದೇಶ.

'ನ ತದಶ್ನಾತಿ ಕಿಂಚನ' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಅನಶನವು ಬ್ರಹ್ಮನಲ್ಲಿ ಯುಕ್ತವಾಗುತ್ತದೆ. ಆದ್ದರಿಂದ ಶ್ರುತಿಯಲ್ಲಿರುವ ಆಕಾಶಶಬ್ದಕ್ಕೆ ಲಕ್ಷ್ಮೀದೇವಿಯ ತನಕ ಇರುವ ಸಕಲಪದಾರ್ಥಗಳನ್ನು ವಿವಕ್ಷಿಸಬೇಕು. ಅಂತಹ ಸಕಲಪದಾರ್ಥಗಳಿಗೆ ಆಶ್ರಯನಾದವನು ವಿಷ್ಣು ಒಬ್ಬನೇ ಆಗುತ್ತಾನೆ. ಆದ್ದರಿಂದ ವಿಷ್ಣುವೇ ಅಕ್ಷರಶಬ್ದವಾಚ್ಯನಾಗುತ್ತಾನೆಂಬುದು ಸಿದ್ಧಾಂತಿಗಳ ಉದ್ದೇಶ.

ಅಕ್ಷರಶಬ್ದದಿಂದ ಪ್ರತಿಪಾದ್ಯಳಾದವಳು ಲಕ್ಷ್ಮೀದೇವಿಯೆಂದು ಪೂರ್ವಪಕ್ಷ. ವಿಷ್ಣುವು ಕ್ಷರಾಕ್ಷರ ಪುರುಷಾತೀತನಾದ್ದರಿಂದ ಅಕ್ಷರನೆನಿಸುವುದಿಲ್ಲ. ಲಕ್ಷ್ಮೀದೇವಿ ಮಾತ್ರ ಅಕ್ಷರಶಬ್ದದಿಂದ ಪ್ರತಿಪಾದ್ಯಳಾಗುತ್ತಾಳೆ. 'ಯಯಾ ತದಕ್ಷರಮಧಿಗಮ್ಯತೇ' ಇತ್ಯಾದಿ ವಾಕ್ಯಗಳಲ್ಲಿರುವ ಅಕ್ಷರಶಬ್ದದಿಂದಲೂ ಸಹ ಲಕ್ಷ್ಮೀದೇವಿಯೇ ಪ್ರತಿಪಾದ್ಯಳು ಹೊರತು; ವಿಷ್ಣುವಲ್ಲ. ಆದ್ದರಿಂದ ಯಾವುದೇ ಶ್ರುತಿಗಳಲ್ಲಿರುವ ಅಕ್ಷರಶಬ್ದವು ಲಕ್ಷ್ಮೀದೇವಿಯನ್ನಷ್ಟೇ ಪ್ರತಿಪಾದಿಸುವ ಪ್ರಯುಕ್ತ ಅಕ್ಷರಶ್ರುತಿಯು ನಿರವಕಾಶವಾಗಿದೆ. ಇಂತಹ ನಿರವಕಾಶವಾದ ಶ್ರುತಿಯ ಬಲದಿಂದ ಲಕ್ಷ್ಮೀದೇವಿಯು ಅಕ್ಷರಳೆಂದು ನಿರ್ಣಯಿಸಬೇಕು.

ವೈದಿಕಪ್ರಯೋಗವನ್ನೆಲ್ಲಾ ಲಕ್ಷ್ಮೀದೇವಿಯಲ್ಲಿಯೇ ಪೂರ್ವಪಕ್ಷದಲ್ಲಿ ಹೇಳುವುದಾದರೆ, ಉಭಯತ್ರಪ್ರಸಿದ್ಧವೆಂದು ಹೇಗೆ ಪರಿಗಣಿಸುವುದು ಎಂದು ಸಹಜವಾಗಿ ಪ್ರಶ್ನೆ ಬರುತ್ತದೆ. ಆದರೆ ಅವಿನಾಶಿತ್ವವೆಂಬ ಪ್ರವೃತ್ತಿನಿಮಿತ್ತದಿಂದ ಸಾಧಾರಣ್ಯದಿಂದಷ್ಟೇ ಅಕ್ಷರಶಬ್ದವನ್ನು ಉಭಯತ್ರಪ್ರಸಿದ್ಧವೆಂದು ಪರಿಗಣಿಸಿದ್ದಾರೆ ಹೊರತು, ಅಕ್ಷರಶಬ್ದದ ಪ್ರಯೋಗವ ು ಎರಡೂ ಕಡೆ ಸಮಾನವಾದ್ದರಿಂದ ಉಭಯತ್ರಪ್ರಸಿದ್ಧವೆಂದು ವಿವಕ್ಷಿಸಬಾರದು.

ಅಥವಾ ಸೂರ್ಯಚಂದ್ರಾದ್ಯಾಧಾರತ್ವ, ಅದೃಶ್ಯತ್ವ ಮೊದಲಾದ ಲಿಂಗಗಳು ಲಕ್ಷ್ಮೀದೇವಿ ಯಲ್ಲಿರುವಂತೆ ವಿಷ್ಣುವಿನಲ್ಲೂ ಸಹ ಒಪ್ಪೋಣ. ಆದರೆ 'ನ ತದಶ್ನಾತಿ ಕಿಂಚನ' ಇತ್ಯಾದಿ ಶ್ರುತಿಯಲ್ಲಿ ಹೇಳಲ್ಪಟ್ಟ ಅನಶನತ್ವವನ್ನು ವಿಷ್ಣುವಿನಲ್ಲಿ ಹೇಳಲು ಸಾಧ್ಯವಿಲ್ಲ. 'ಅತ್ತಾ ಚರಾಚರಗ್ರಹಣಾತ್' ಎಂಬ ಸೂತ್ರದಂತೆ ಸಕಲ ಭಕ್ಷಕನಾದ ವಿಷ್ಣುವಿನಲ್ಲಿ ಏನನ್ನೂ ತಿನ್ನುವುದಿರುವಿಕೆಯು ಕೂಡುವುದಿಲ್ಲ. ಹಾಗಾಗಿ ಸ್ವತಂತ್ರವಾಗಿ ಏನನ್ನೂ ತಿನ್ನದ ಲಕ್ಷ್ಮೀದೇವಿಯಲ್ಲಿಯೇ ಈ ಅನತ್ಯತ್ವವು ಉಪಪನ್ನವಾಗುತ್ತದೆ. ನಿರವಕಾಶವಾದ ಈ ಒಂದೇ ಒಂದು ಅನಶನತ್ವಲಿಂಗದ ಬಲದಿಂದ ಪೂರ್ವಪಕ್ಷವು ಬಲಿಷ್ಠವಾಗುತ್ತದೆ. ಈ ಲಿಂಗಕ್ಕೆ ಅನುಸಾರಿಯಾಗಿ 'ಅಂಬರಾಂತಧೃತಿ', 'ಪ್ರಶಾಸನ' ಮೊದಲಾದ ಲಿಂಗಗಳೆಲ್ಲವನ್ನೂ ಲಕ್ಷ್ಮೀದೇವಿಯಲ್ಲಿಯೇ ಕೂಡಿಸಬೇಕು. ಆದ್ದರಿಂದ ಮಧ್ಯಮಾಕ್ಷರಳೆನಿಸಿದ ಲಕ್ಷ್ಮೀದೇವಿಯೇ ಅಕ್ಷರಶಬ್ದವಾಚ್ಯಳಾಗುತ್ತಾಳೆ ಹೊರತು, ಮಹಾವಿಷ್ಣು ಆ ಅಕ್ಷರಶಬ್ದವಾಚ್ಯನಾಗುವುದಿಲ್ಲವೆಂಬುದು ಎರಡನೆಯ ಪೂರ್ವಪಕ್ಷ.

ಸಿದ್ಧಾಂತ ಹೀಗಿದೆ - ಅಕ್ಷರಶಬ್ದದಿಂದ ಪ್ರತಿಪಾದ್ಯನಾದವನು ಮಹಾವಿಷ್ಣುವೇ ಹೊರತು, ಲಕ್ಷ್ಮೀದೇವಿಯಲ್ಲ. ಅಕ್ಷರಶಬ್ದದ ಪ್ರವೃತ್ತಿನಿಮಿತ್ತವೆನಿಸಿದ ಅವಿನಾಶಿತ್ವವು ಪುಷ್ಕಳವಾಗಿ ಮತ್ತು ಸ್ವತಂತ್ರವಾಗಿ ಮಹಾವಿಷ್ಣುವಿನಲ್ಲಿ ಮಾತ್ರ

ಇರುವ ಪ್ರಯುಕ್ತ ಅವನೇ ಅಕ್ಷರನಾಗಬೇಕು. ಅನೇಕ ಶ್ರುತಿ, ಸ್ಮೃತಿಗಳಲ್ಲಿ ಬ್ರಹ್ಮನನ್ನು ಅಕ್ಷರನೆಂದು ಹೇಳಿದ್ದಷ್ಟೇ ಅಲ್ಲದೆ, ಉತ್ತಮಾಕ್ಷರನೆಂಬ ಪ್ರಸಿದ್ಧಿಯೂ ಸಹ ಇದೆ.

'ಆಕಾಶ ಏವ ತದೋತಂ ಚ ಪ್ರೋತಂ ಚ' ಎಂಬ ಶ್ರುತಿಯಲ್ಲಿರುವ ಆಕಾಶಶಬ್ದಕ್ಕೆ ಸರ್ವತ್ರಪ್ರಕಾಶಮಾನಳಾದ ಲಕ್ಷ್ಮೀದೇವಿಯೆಂದರ್ಥ. ಸಕಲಪದಾರ್ಥಗಳಿಗೆ ಲಕ್ಷ್ಮೀದೇವಿಯು ಆಶ್ರಯಳಾಗಿದ್ದಾಳೆ. ಇಂತಹ ಲಕ್ಷ್ಮೀದೇವಿಗೂ ಸಹ ಮಹಾವಿಷ್ಣು ಆಧಾರನಾಗಿದ್ದಾನೆ. ಇಂತಹ ಲಕ್ಷ್ಮೀದೇವಿಗೂ ಆಧಾರನಾದವನು ಮಹಾವಿಷ್ಣುವೆಂದು 'ಏತಸ್ಮಿನ್ ಖಲ್ವಕ್ಷರೇ' ಇತ್ಯಾದಿ ಶ್ರುತಿಯು ಪ್ರತಿಪಾದಿಸುತ್ತಿದೆ. ಒಂದು ವೇಳೆ ಅಕ್ಷರಶಬ್ದಕ್ಕೆ ಲಕ್ಷ್ಮೀದೇವಿಯೆಂಬರ್ಥವನ್ನು ಹೇಳಿದರೆ ಆಕಾಶನಾಮಕಳಾದ ಲಕ್ಷ್ಮೀದೇವಿಗೆ ತಾನೇ ಆಶ್ರಯಳೆಂದು ಹೇಳಿದಂತಾಗುತ್ತದೆ. ಇದು ಅಯುಕ್ತವಾದ ಕಾರಣ ಆಕಾಶಶಬ್ದಕ್ಕೆ ಲಕ್ಷ್ಮೀದೇವಿಯೆಂಬರ್ಥವನ್ನು ಸ್ವೀಕರಿಸಿ ಅಕ್ಷರಶಬ್ದಕ್ಕೆ ಮಹಾವಿಷ್ಣು ಎಂಬರ್ಥವನ್ನು ಸ್ವೀಕರಿಸಬೇಕು. ಇದನ್ನೇ ಸೂತ್ರಕಾರರು 'ಅಂಬರಾಂತಧೃತೇಃ' ಎಂದು ಹೇಳಿರುತ್ತಾರೆ. ಲಕ್ಷ್ಮೀದೇವಿಯನ್ನು ಧರಿಸಿರುವಿಕೆ ಎಂಬ ಹೇತು, ವಿಷ್ಣುವಿನಲ್ಲಿ ಬಿಟ್ಟು ಬೇರೆ ಯಾರಲ್ಲೂ ಸಹ ಬಾರದ ಕಾರಣ ಅಕ್ಷರಶಬ್ದದಿಂದ ವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆಂಬುದು ಸೂತ್ರದ ಅಭಿಪ್ರಾಯ.

ಸಕಲ ಪದಾರ್ಥಗಳು ಆಕಾಶದಲ್ಲಿ ಓತಪ್ರೋತವಾಗಿವೆ ಎಂಬುದಕ್ಕೆ ಉಪಾದೇಯವಾಗಿವೆ ಅಥವಾ ಆಧೇಯವಾಗಿವೆಯೆಂಬುದಾಗಿ ಪೂರ್ವಪಕ್ಷಕಾರರು ವ್ಯಾಖ್ಯಾನಿಸಲು ಪ್ರಯತ್ನಿಸುತ್ತಾರೆ. ಆದರೆ 'ಕಸ್ಮಿನ್ನು ಖಲ್ವಿಂದ್ರಲೋಕಾ ಓತಾಶ್ಚ ಪ್ರೋತಾಶ್ಚ' ಇತ್ಯಾದಿಯಾದ ಅದೇ ಪ್ರಕರಣದಲ್ಲಿರುವ 'ಓತ' 'ಪ್ರೋತ' ಶಬ್ದಗಳಿಗೆ ಆಧೇಯತ್ವವನ್ನಾಗಲೀ ಉಪಾದೇಯತ್ವವೆಂಬರ್ಥವನ್ನಾಗಲೀ ಹೇಳಲು ಸಾಧ್ಯವಿಲ್ಲ ಹೊರತು, ಪೋಷ್ಯತ್ವ ಎಂಬರ್ಥವನ್ನೇ ಹೇಳಬೇಕು. ಅದರಂತೆ ಇಲ್ಲಿಯೂ ಸಹ ಆಕಾಶದಿಂದ ಸಕಲ ಪದಾರ್ಥಗಳು ಪೋಷ್ಯವಾಗಿವೆ. ಅಂದರೆ ಲಕ್ಷ್ಮೀದೇವಿಯು ಸಕಲಪದಾರ್ಥಗಳನ್ನು ಪೋಷಣೆ ಮಾಡುತ್ತಾಳೆ. ಇಂತಹ ಲಕ್ಷ್ಮೀದೇವಿಯನ್ನು ಪರಮಾತ್ಮನು ಪೋಷಣೆ ಮಾಡುತ್ತಾನೆ ಎಂಬರ್ಥವನ್ನೇ ಹೇಳಬೇಕು. ಆದ್ದರಿಂದ ಯಾವುದೇ ಬಾಧಕಗಳಿಲ್ಲವೆಂದು ತಿಳಿಯಬೇಕು.

ಯಾವರೀತಿಯಾಗಿ ಪ್ರಥಮ ಸೂತ್ರದಲ್ಲಿರುವ 'ಅಂಬರಾಂತಧೃತಿ' ಎಂಬ ಹೇತು ನಿರವಕಾಶವಾಗಿದೆಯೋ, ಅದರಂತೆ ಎರಡನೆಯ ಸೂತ್ರದಲ್ಲಿ ಹೇಳಲ್ಪಟ್ಟ ಪ್ರಶಾಸನ ಎಂಬ ಹೇತು, ಮತ್ತು ಮೂರನೆಯ ಸೂತ್ರದಲ್ಲಿ ಹೇಳಲ್ಪಟ್ಟ ಪ್ರಾಕೃತ ಸ್ಥೌಲ್ಯಾದಿರಾಹಿತ್ಯವೆಂಬ ಹೇತುಗಳೂ ಸಹ ನಿರವಕಾಶವೇ ಆಗಿವೆ. ಪ್ರಶಾಸನ ಎಂಬ ಹೇತುವಿನಲ್ಲಿ 'ಪ್ರ' ಎಂಬ ಉಪಸರ್ಗವು ಅಸಂಕುಚಿತವಾಗಿರುವಿಕೆ ಮತ್ತು ಸ್ವತಂತ್ರವಾಗಿರುವಿಕೆ ಎಂಬ ಉತ್ಕರ್ಷವನ್ನು (ಶಾಸನ) ಆಜ್ಞೆಯಲ್ಲಿ ಹೇಳುತ್ತಿದೆ. ಸಾಮಾನ್ಯವಾದ ಆಜ್ಞೆಯು ಇತರ ದೇವತೆಗಳಲ್ಲಿರಬಹುದಾದರೂ ಅಸಂಕುಚಿತವಾದ ಸ್ವತಂತ್ರವಾದ ಆಜ್ಞೆ ವಿಷ್ಣುವಿನಲ್ಲಿ ಮಾತ್ರ ಇರುತ್ತದೆ. ಆದ್ದರಿಂದ ನಿರವಕಾಶವೆಂದು ತಿಳಿಯಬೇಕು.

ಮೂರನೆಯ ಸೂತ್ರದಲ್ಲಿ ಸ್ಥೌಲ್ಯಾದಿರಾಹಿತ್ಯವನ್ನು ಹೇಳಿರುತ್ತಾರೆ. ಇಲ್ಲಿ ಹೇಳಲ್ಪಟ್ಟ ಸ್ಥೌಲ್ಯಾದಿರಾಹಿತ್ಯಕ್ಕೆ ಪ್ರಾಕೃತಸ್ಥೌಲ್ಯಾದಿರಾಹಿತ್ಯವೆಂದೇ ವಿವಕ್ಷಿಸಬೇಕು. ಮತ್ತು ಸ್ವತಂತ್ರವಾಗಿದೆಯೆಂದು ವಿವಕ್ಷಿಸಬೇಕು. ಸ್ವತಂತ್ರವೂ ಪ್ರಾಕೃತವೂ ಅಲ್ಲದ ಸ್ಥೌಲ್ಯ, ಅಣುತ್ವ ಮೊದಲಾದ ಧರ್ಮಗಳು ಪರಮಾತ್ಮನನ್ನು ಬಿಟ್ಟು ಬೇರೆ ಯಾರಲ್ಲೂ ಸಹ ಬರಲು ಸಾಧ್ಯವಿಲ್ಲ.

ಬ್ರಹ್ಮನಲ್ಲಿ ಶ್ರುತಿಯು ಸ್ಥೌಲ್ಯ, ಅಣುತ್ವ ಮೊದಲಾದ ಧರ್ಮಗಳೆಲ್ಲವನ್ನೂ ಸಹ ನಿಷೇಧ ಮಾಡುತ್ತಿದೆ. ವಾಸ್ತವಿಕವಾಗಿ ಸ್ಥೂಲತ್ವವನ್ನು ನಿಷೇಧ ಮಾಡಿದ ಮೇಲೆ ಅಣುತ್ವವನ್ನು ವಿಧಾನ ಮಾಡಲೇ ಬೇಕು. ಅಣುತ್ವವೂ, ಸ್ಥೂಲತ್ವವೂ ಇಲ್ಲದ ವಸ್ತುವಿರಲು ಸಾಧ್ಯವಿಲ್ಲ. ಆದರೆ ಮಹಾವಿಷ್ಣುವು ಅಪ್ರಾಕೃತಸ್ವರೂಪನಾದ್ದರಿಂದ ಪ್ರಾಕೃತಸ್ಥೂಲತ್ವವಾಗಲೀ, ಪ್ರಾಕೃತವಾದ ಅಣುತ್ವವಾಗಲೀ ಅವನಲ್ಲಿ ಇರುವುದಿಲ್ಲವೆಂದು ಹೇಳಬಹುದು. ಅಪ್ರಾಕೃತಸ್ವರೂಪನಲ್ಲಿ ಪ್ರಾಕೃತವಾದ ಎರಡು ವಿರುದ್ಧಧರ್ಮಗಳ ಅಭಾವವನ್ನು ಹೇಳುವುದರಿಂದ ಯಾವುದೇ ಬಾಧಕಗಳಿರುವುದಿಲ್ಲ.

'ಅಸ್ಥೂಲೋ ಅನಣುಃ' ಇತ್ಯಾದಿ ಶ್ರುತಿಯು ಅಣುತ್ವ ಮೊದಲಾದ ವಿರುದ್ಧ ಧರ್ಮಗಳನ್ನು ಭಗವಂತನಲ್ಲಿ ಹೇಳುತ್ತಿದೆಯೆಂದೇ ವ್ಯಾಖ್ಯಾನಿಸಬಹುದು. ಒಬ್ಬನೇ ಪರಮಾತ್ಮನಲ್ಲಿ ಅಣುತ್ವಮಹತ್ವಗಳೆರಡನ್ನೂ ಸಹ ಒಪ್ಪಲು ಹೇಗೆ ಸಾಧ್ಯ ? ಯಾವ ಪದಾರ್ಥವು ಅಣುವಾಗಿರುತ್ತದೋ, ಅದು ಮಹತ್ತಾಗಲು ಸಾಧ್ಯವಿಲ್ಲ. ಅಥವಾ ಮಹತ್ತಾಗಿರುವ ಪದಾರ್ಥವು ಅಣುವಾಗಲೂ ಸಹ ಸಾಧ್ಯವಿಲ್ಲವೆಂದು ಲೋಕದಲ್ಲಿ ಅನುಭವಸಿದ್ಧವಾಗಿದೆ. ಹೀಗಿರುವಾಗ ಪರಮಾತ್ಮನ ವಿಷಯದಲ್ಲಿ ಇಂತಹ ವಿರುದ್ಧ ಧರ್ಮವನ್ನು ಒಪ್ಪುವ ಮೂಲಕ ಶ್ರುತಿಯನ್ನು ವ್ಯಾಖ್ಯಾನಿಸುವುದು ತಪ್ಪಲ್ಲವೇ? ಎಂದು ಶಂಕೆಯು ಪ್ರಾಪ್ತವಾಗುತ್ತದೆ. ಆದರೆ ಬೇರೆ ಬೇರೆ ಕಡೆ ವಿರುದ್ಧವಾಗಿ ಕಂಡಿರುವ ಪದಾರ್ಥಗಳು ಕೆಲವೆಡೆ ಒಟ್ಟಿಗೆ ಇರುವುದು ಲೋಕದಲ್ಲಿಯೇ ಕಂಡಿದೆ. ಪೂರ್ವಮೀಮಾಂಸೆಯಲ್ಲಿಯೂ ಸಹ ಇಂತಹ ದೃಷ್ಟಾಂತಗಳು ಅನೇಕವಿರುತ್ತವೆ. ಅಥವಾ ಭಗವಂತನಲ್ಲಿ ಇಂತಹ ಧರ್ಮಗಳಿಗೆ ವಿರೋಧವಿಲ್ಲವೆನ್ನಲು ಪ್ರತ್ಯಕ್ಷ, ಅನುಮಾನ, ಆಗಮಗಳೆಂಬ ಪ್ರಮಾಣಗಳೇ ಆಧಾರವಾಗಿವೆ. ಶ್ರೀಕೃಷ್ಣನ ಪುಟ್ಟ ಮುಖಕಮಲದಲ್ಲಿ ಯಶೋದಾದೇವಿಯು ಸಮಗ್ರ ಬ್ರಹ್ಮಾಂಡವನ್ನೇ ಕಂಡಳು. ಶ್ರೀಕೃಷ್ಣನ ಬಾಯಿ ಅತ್ಯಂತ ಸಣ್ಣದಾಗಿದೆ. ಅಂತಹ ಸಣ್ಣ ಬಾಯಿಯಲ್ಲಿ ಇಷ್ಟು ದೊಡ್ಡ ಜಗತ್ತನ್ನು ಕಾಣಬೇಕೆಂದರೆ ಮಹತ್ತ್ವವು ಇರಲೇಬೇಕಲ್ಲವೇ? ಹೀಗೆ ಅಣುತ್ವ-ಮಹತ್ತ್ವಗಳೆರಡೂ ಒಟ್ಟಿಗೆ ಇರಲು ಯಶೋದೆಯ ಪ್ರತ್ಯಕ್ಷವೇ ಪ್ರಮಾಣ. ಅಥವಾ ಒಂದೇ ಹಗ್ಗದಿಂದ ಕೃಷ್ಣನನ್ನು ಒರಳುಕಲ್ಲಿಗೆ ಕಟ್ಟಹಾಕಿದ ಕಥೆಯನ್ನು ನಾವು ಕೇಳುತ್ತೇವೆ. ಅಷ್ಟೇ ಅಲ್ಲದೆ, ಅನೇಕ ಹಗ್ಗಗಳನ್ನು ಸೇರಿಸಿದಾಗಲೂ ಅವನನ್ನು ಕಟ್ಟಲು ಸಾಧ್ಯವಾಗದ ಕಥೆಯನ್ನೂ ಸಹ ಕೇಳಿದ್ದೇವೆ. ಇದರಿಂದ ಅವನಲ್ಲಿ ಅಣುತ್ವ-ಮಹತ್ತ್ವಗಳೆರಡೂ ಒಟ್ಟಿಗೆ ಇರುತ್ತವೆಂದು ಅನುಮಾನ ಮಾಡಬಹುದು. 'ಅಣೋರಣೀಯಾನ್ ಮಹತೋ ಮಹೀಯಾನ್' ಇತ್ಯಾದಿ ಆಗಮಗಳೂ ಸಹ ಈ ವಿಷಯದಲ್ಲಿ ಪ್ರಮಾಣಗಳಾಗಿವೆ. ಆದ್ದರಿಂದ ಬೇರೆಡೆ ವಿರುದ್ಧವಾದ ಧರ್ಮಗಳನ್ನು ಪರಮಾತ್ಮನಲ್ಲಿ ಒಟ್ಟಿಗೆ ಒಪ್ಪಿದಾಗ ಯಾವುದೇ ವಿರೋಧಕ್ಕೂ ಸಹ ಆಸ್ಪದವಿಲ್ಲವೆಂಬ ಪ್ರಮೇಯವನ್ನು ಅವಶ್ಯವಾಗಿ ತಿಳಿಯಬೇಕು. ಪರಮಾತ್ಮನ ಅಚಿಂತ್ಯಾದ್ಭುತ - ಶಕ್ತಿಯಿಂದ ಭೇದಪ್ರತಿನಿಧಿಯಾದ ವಿಶೇಷದ ಬಲದಿಂದ ಇವುಗಳ ವಿರೋಧವು ಪರಿಹಾರವಾಗುತ್ತವೆ.

ಪರಮಾತ್ಮನಲ್ಲಿರುವ ಅಣುತ್ವ-ಮಹತ್ತ್ವಗಳಿಗೆ ವಿರೋಧವಿರುವುದಿಲ್ಲವೆಂದು ಪ್ರಮಾಣಗಳ ಆಧಾರದಿಂದ ಸಮರ್ಥಿಸಿದ್ದಾಯಿತು. ಲೌಕಿಕದೃಷ್ಟಾಂತದ ಬಲದಿಂದಲೂ ವಿರೋಧವಿಲ್ಲವೆಂದು ತಿಳಿಯಬಹುದು. ಆಕಾಶ ಮೊದಲಾದ್ದರಲ್ಲಿ ಮಹತ್‌ಪರಿಣಾಮವಿರುವುದು ಸರ್ವಾನುಭವಸಿದ್ಧವಾಗಿದೆ. ಇಂತಹ ಆಕಾಶಾದಿಗಳಲ್ಲಿಯೇ ಅಣುಪರಿಮಾಣವೂ ಸಹ ಇರುತ್ತದೆಂಬುದನ್ನು ಗಮನಿಸಬೇಕು. ಏಕೆಂದರೆ ಪರಮಾಣುವಿನ ಸಂಯೋಗ ಆಕಾಶದಲ್ಲಿ ಉಂಟಾಗುತ್ತದೆ. ಯಾವ ಪದಾರ್ಥದಿಂದ ಯಾವ ಪದಾರ್ಥಕ್ಕೆ ಸಂಬಂಧವಾಗುತ್ತದೋ, ಅದರಲ್ಲಿ ಸಮಾನ ಪರಿಮಾಣವನ್ನು ಒಪ್ಪಲೇ ಬೇಕು. ಒಂದು ಸಣ್ಣ ಸೂಜಿಯ ತುದಿಯು ಪರ್ವತದ ಪ್ರದೇಶಕ್ಕೆ

ಸಂಬದ್ಧವಾಯಿತೆಂದರೆ ಆ ಸೂಜಿಯ ಸಣ್ಣ ಭಾಗದಷ್ಟೇ ಪರಿಮಾಣವನ್ನು ಆ ಪರ್ವತದ ಸಂಬದ್ಧಭಾಗಕ್ಕೆ ಒಪ್ಪುವುದು ಅನುಭವಸಿದ್ಧವಾಗಿದೆ. ಅದರಂತೆ ಪರಮಾಣುವಿನ ಸಂಯೋಗವು ಆಕಾಶದಲ್ಲಿ ಉಂಟಾದರೆ ಪರಮಾಣುವಿನ ಪರಿಮಾಣವೇ ಆಕಾಶದಪ್ರದೇಶಲ್ಲಿದೆಯೆಂದು ಹೇಳಿದಂತಾಗುತ್ತದೆ. ಆಕಾಶಪ್ರದೇಶ ಹಾಗೂ ಆಕಾಶ ಎರಡಕ್ಕೂ ಅಭೇದವಿರುವುದರಿಂದ ಆಕಾಶವೂ ಸಹ ಅಣುಪರಿಮಾಣವುಳ್ಳದ್ದೆಂದು ಸಿದ್ಧವಾಗುತ್ತದೆ.

ಅಕ್ಷರನಾಮಕನಿಗೆ ಅನಶನವನ್ನು ಶ್ರುತಿಯು ಹೇಳುತ್ತಿದೆ. ಅಕ್ಷರನೇ ಪರಮಾತ್ಮನಾದಲ್ಲಿ ಪರಮಾತ್ಮನು ಏನನ್ನೂ ಸಹ ತಿನ್ನುವುದಿಲ್ಲವೆಂದು ಹೇಳಿದಂತಾಗುತ್ತದೆ. ಆವಾಗ ಅತ್ಯತ್ವಾಧಿಕರಣದಿಂದ ವಿರೋಧ ಬರುತ್ತದೆಂದು ಪೂರ್ವಪಕ್ಷಿಯು ಹಿಂದೆ ಆಕ್ಷೇಪಿಸಿದ್ದನು. ಅದಕ್ಕೂ ಸಹ ಈಗ ಅವಕಾಶವಿಲ್ಲ. ನಾವು ಯಾವ ಆಹಾರವನ್ನು ತಿನ್ನುತ್ತೇವೋ, ಅದನ್ನು ಉಪಜೀವಿಸಿಕೊಂಡು ಬದುಕುತ್ತಿದ್ದೇವೆ. ಆದರೆ ಪರಮಾತ್ಮನಿಗೆ ಇಂತಹ ಸ್ಥಿತಿ ಇರುವುದಿಲ್ಲ. ಏನನ್ನೂ ತಿನ್ನದಿದ್ದರೂ ಸಹ ದಷ್ಟಪುಷ್ಟನಾಗಿ ಇರುತ್ತಾನೆ. ಉಳಿದ ಆಹಾರಪದಾರ್ಥಗಳನ್ನು ತಿಂದು ಅವನು ಬದುಕಬೇಕಾಗಿಲ್ಲ. ಈ ದೃಷ್ಟಿಯಿಂದಷ್ಟೇ 'ಏನನ್ನೂ ಅವನು ತಿನ್ನಲಾರ' ಇತ್ಯಾದಿಯಾಗಿ ಶ್ರುತಿಯು ಅವನನ್ನು ಪ್ರತಿಪಾದಿಸುತ್ತಿದೆ. ಸಕಲ ಜಗತ್ತನ್ನು ಸಂಹಾರ ಮಾಡುವ ಕಾರಣ 'ಸಕಲಜಗದ್ಭೋಕ್ತಾ' ಎಂಬುದಾಗಿ ಅತ್ತ್ಯತ್ವಾಧಿ ಕರಣವು ಸಮರ್ಥಿಸುತ್ತಿದೆ. ಹೀಗಿರುವಾಗ ವಿರೋಧಕ್ಕೆ ಅವಕಾಶವೇ ಇಲ್ಲ.

ಇಲ್ಲಿಯ ತನಕ ಸಮರ್ಥನೆ ಮಾಡಿದಂತೆ ಮಹತ್ತ್ವವುಳ್ಳ ಪರಮಾತ್ಮನಲ್ಲಿ ಅಣುತ್ವವೂ ಸಹ ಇರುತ್ತದೆಂದು ತಿಳಿದಂತಾಯಿತು. ಇದೇ ವಿಚಾರವು ಬೇರೆ ಅಧಿಕರಣಗಳಲ್ಲಿಯೂ ಸಮರ್ಥಿಸಿದ್ದರಿಂದ ಪುನರುಕ್ತಿ ಬಂದಂತೆ ಕಾಣಿಸುತ್ತದೆ. ಸರ್ವಗತತ್ವಾಧಿಕರಣದ ಅರ್ಭಕೌಕಸ್ತ್ವಸೂತ್ರದಲ್ಲಿ ಸರ್ವತ್ರ ವ್ಯಾಪ್ತನಾದ ಪರಮಾತ್ಮನಿಗೆ ಹೃದಯವೆಂಬ ಅಲ್ಪದೇಶಸ್ಥಾನವನ್ನು ಪ್ರತಿಪಾದಿಸಲಾಗಿದೆ. ಇದರಿಂದ ಸರ್ವಗತತ್ವಾಧಿಕರಣದಲ್ಲಿಯೇ ಅಣುತ್ವವನ್ನು ಸಮರ್ಥಿಸಿದಂತಾಯಿತು. ಪುನಃ ಇಲ್ಲಿಯೂ ಅದನ್ನೇ ಹೇಳಿದರೆ, ಹೇಳಿದ ವಿಷಯವನ್ನೇ ಪುನಃ ಹೇಳಿದಂತಾಗುತ್ತದಲ್ಲವೇ? ಎಂಬ ಪ್ರಶ್ನೆಯು ಸಹಜವಾಗಿ ಮನಸ್ಸಿನಲ್ಲಿ ಹುಟ್ಟುತ್ತದೆ. ಆದರೆ ವ್ಯತ್ಯಾಸವಿದೆ. ನೂರುರೂಪಾಯಿ ಇರುವವನಲ್ಲಿ ಐವತ್ತು ರೂಪಾಯಿ ಹೇಗೆ ಇದ್ದೇ ಇರುತ್ತದೋ, ಅದರಂತೆ ಎಲ್ಲೆಡೆ ವ್ಯಾಪ್ತನಾದ ಪರಮಾತ್ಮನಲ್ಲಿ ಅಲ್ಪದೇಶಸ್ಥಿತಿಯೂ ಸಹ ಇರುತ್ತದೆಂಬ ಅಭಿಪ್ರಾಯವಷ್ಟೇ ಅರ್ಭಕೌಕಸ್ತ್ವ ಸೂತ್ರದ್ದಾಗಿದೆ.

ಭೂಮಾಧಿಕರಣದಲ್ಲಿಯೂ ಸಹ ಇಲ್ಲಿ ಸಮರ್ಥಿಸುವ ಅಣುತ್ವವನ್ನು ಮೊದಲೇ ವಿವಕ್ಷಿಸಿ ಉತ್ತಮಣಲಿಂಗವನ್ನು ಸಮರ್ಥಿಸಿದ್ದಾರೆ. ಆದರೆ ಈ ಅಧಿಕರಣದಲ್ಲಿ ಮಹತ್ತ್ವವಿದ್ದರೂ ಸಹ ಪರಮಾತ್ಮನಲ್ಲಿ ಅಣುತ್ವವೂ ಇರುತ್ತದೆಂದು ಸಮರ್ಥಿಸುತ್ತಿದ್ದಾರೆ. ಈ ವಿಷಯವು ಸರ್ವಗತತ್ವಾಧಿಕರಣದಲ್ಲಾಗಲೀ, ಭೂಮಾಧಿ ಕರಣದಲ್ಲಾಗಲೀ ಸಮರ್ಥಿಸಲ್ಪಟ್ಟಿಲ್ಲ.

ದಹರಾಧಿಕರಣದ 'ಅಲ್ಪಶ್ರುತೇಃ' ಎಂಬ ಸೂತ್ರದಲ್ಲಿಯೂ ಸಹ ಗಗನಕ್ಕೆ ಕೇವಲ ಅವಯವಿ ರೂಪದಿಂದ ಮಹತ್ತ್ವವಿದ್ದಂತೆ, ಪರಮಾತ್ಮನಿಗಲ್ಲ. ಪರಮಾತ್ಮನು ತನ್ನ ಅವಯವರೂಪದಿಂದಲೂ ಸಹ ಮಹತ್ತ್ವವನ್ನು ಪಡೆದಿದ್ದಾನೆಂಬುದಾಗಿ ಸಮರ್ಥಿಸಲಾಗಿದೆ. ಹೀಗೆ ಬೇರೆ ಅಧಿಕರಣಗಳಿಂದ ಪುನರುಕ್ತಿ ಬರುವುದಿಲ್ಲವೆಂಬುದನ್ನು ಗಮನಿಸಬೇಕು.

ಈ ಅಧಿಕರಣದಲ್ಲಿ ಒಟ್ಟು ಮೂರುಸೂತ್ರಗಳಿವೆ. 'ಅಕ್ಷರಂಅಂಬರಾಂತಧೃತೇಃ' ಎಂಬ ಪ್ರಥಮಸೂತ್ರದಲ್ಲಿ ವಿಷಯವಾಕ್ಯದಲ್ಲಿರುವ ಅಂಬರಾಂತಧಾರಕತ್ವವೆಂಬ ಹೇತುವನ್ನು ಸಮರ್ಥಿಸಿದ್ದಾರೆ. ಆದ್ದರಿಂದ ಪ್ರಾಥಮ್ಯವು ಯುಕ್ತವಾಗಿದೆ. 'ಸಾ ಚ ಪ್ರಶಾಸಾನತ್' ಎಂಬ ಎರಡನೆಯ ಸೂತ್ರದಲ್ಲಿ, 'ಕೇವಲ ತನ್ನ ಆಜ್ಞೆಯಿಂದಲೇ ಸೂರ್ಯ,

ಚಂದ್ರ ಮೊದಲಾದವರು ತಮ್ಮ ತಮ್ಮ ಸ್ಥಾನದಲ್ಲಿ ನಿಂತು ಲೋಕವನ್ನು ಬೆಳಗುತ್ತಾರೆ. ಪೂರ್ವಾದಿ ದಿಕ್ಕುಗಳಲ್ಲಿ ನದಿಗಳು ಹರಿಯುತ್ತವೆ' ಇತ್ಯಾದಿ ವಿಚಾರವನ್ನು ಹೇಳುತ್ತಾ ಪ್ರಶಾಸನವೆಂಬ ಲಿಂಗವನ್ನು ಹೇಳಿದ್ದಾರೆ. ಈ ಲಿಂಗವು ವಿಷಯವಾಕ್ಯದ ಮುಂದಿನ ವಾಕ್ಯದಲ್ಲಿರುವುದರಿಂದ ದ್ವಿತೀಯ ಸ್ಥಾನವು ಇದಕ್ಕೆ ಯುಕ್ತವಾಗಿದೆ.

ಮೂರನೆಯ 'ಅನ್ಯಭಾವವ್ಯಾವೃತ್ತೇಶ್ಚ' ಎಂಬ ಸೂತ್ರದಲ್ಲಿ ಅಸ್ಥೂಲತ್ವಾದಿ ಸಾಧಕಪ್ರಮಾಣಗಳನ್ನು ಹೇಳುವುದರ ಜೊತೆಗೆ ಪೂರ್ವಪಕ್ಷಕಾರನು ಹೇಳಿದ ಬಾಧಕಪ್ರಮಾಣಗಳೆಲ್ಲವನ್ನೂ ನಿರಾಕರಿಸಲಾಗಿದೆ. ಪರಮಾತ್ಮನು ಅಸ್ಥೂಲತ್ವ, ಅನಣುತ್ವ ಮೊದಲಾದ ವಿರುದ್ಧಧರ್ಮಗಳಿಗೆ ಆಶ್ರಯನಾಗುವುದಾದರೆ ನಿಃಸ್ವಭಾವನಾಗಲಿ ಅಥವಾ ವಿರುದ್ಧವಾದ ಧರ್ಮಗಳನ್ನು ಒಬ್ಬನಲ್ಲೇ ಹೇಳಲು ಸಾಧ್ಯವಿಲ್ಲ. ಇತ್ಯಾದಿ ಬಾಧಕಗಳನ್ನು ಆಶಂಕಿಸಿದರೆ ಪರಮಾತ್ಮನು ಅಪ್ರಾಕೃತನಾದ್ದರಿಂದ ಅಚಿಂತ್ಯವಾದ ಐಶ್ವರ್ಯಶಕ್ತಿಯನ್ನು ಹೊಂದಿರುವುದರಿಂದ ಇಂತಹ ಯಾವುದೇ ವಿರೋಧಕ್ಕೂ ಸಹ ಅವಕಾಶವಿಲ್ಲವೆಂಬುದಾಗಿ ಮೂರನೆಯ ಸೂತ್ರವು ಪ್ರತಿಪಾದಿಸುತ್ತಿದೆ. ಆದ್ದರಿಂದ ಮೂರನೆಯ ಸ್ಥಾನವನ್ನು ಇದು ಪಡೆದಿದೆ. ಹೀಗೆ ಅಕ್ಷರಾಧಿಕರಣದಲ್ಲಿರುವ ಮೂರು ಸೂತ್ರಗಳ ಜೋಡಣೆಯ ಶೈಲಿಯು ಅತ್ಯಂತ ಹೃದಯಂಗಮವಾಗಿದೆಯೆಂದು ತಿಳಿದುಕೊಳ್ಳಬೇಕು.

ಸದಧಿಕರಣ

ಸದಧಿಕರಣದಲ್ಲಿ 'ಸತ್' ಎಂಬ ನಾಮಾತ್ಮಕ ಶಬ್ದವನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡುತ್ತಿದ್ದಾರೆ. ಈ ಶಬ್ದವು ವಿಷ್ಣು ಹಾಗೂ ಪ್ರಕೃತಿ ಇಬ್ಬರಲ್ಲಿಯೂ ಸಾಧಾರಣವಾಗಿದೆ. ಆದ್ದರಿಂದಲೇ ಉಭಯತ್ರಪ್ರಸಿದ್ಧ-ವಾಗುವುದರಿಂದ ಮೂರನೆಯ ಪಾದದಲ್ಲಿ ಇದರ ಸಮನ್ವಯವು ಸಂಗತವಾಗುತ್ತದೆ.

ಜಗತ್ಕಾರಣತ್ವವನ್ನು ಪ್ರತಿಪಾದಿಸುವ 'ಸದೇವ ಸೌಮ್ಯ ಇದಮಗ್ರ ಆಸೀತ್' ಇತ್ಯಾದಿ ಅನೇಕ ವಾಕ್ಯಗಳು ವೇದದಲ್ಲಿರುತ್ತವೆ. ಸೃಷ್ಟಿಪ್ರತಿಪಾದಕವಾದ ವಾಕ್ಯಗಳನ್ನೆಲ್ಲ 'ಸೃಷ್ಟಿಸ್ಥಾನ' ಎಂದು ಕರೆಯುತ್ತಾರೆ. 'ಸತ್' ಎಂಬ ಪದಾರ್ಥಕ್ಕೆ ಜಗತ್ಕಾರಣತ್ವವು ಶ್ರುತವಾಗಿದೆ. ಈ 'ಸತ್' ಎಂಬ ಪದವು ಜಡಪ್ರಕೃತಿಯನ್ನು ಅಥವಾ ವಿಷ್ಣುವನ್ನು ಪ್ರತಿಪಾದಿಸಬೇಕು. ಏಕೆಂದರೆ ಇಬ್ಬರಲ್ಲಿಯೂ ಕಾರಣತ್ವವೆಂಬ ಧರ್ಮವು ಸಾಧಾರಣವಾಗಿದೆ.

ಕಾರಣತ್ವವನ್ನು ನಿರೂಪಿಸುವ ಪ್ರಕರಣದಲ್ಲಿ 'ಸದೇವ ಸೌಮ್ಯ' ಎಂಬ ವಾಕ್ಯವಷ್ಟೇ ಶ್ರುತವಾಗಿಲ್ಲ. 'ತದೈಕ್ಷತ' ಎಂಬ ವಾಕ್ಯವು 'ಬಹು ಸ್ಯಾಂ ಪ್ರಜಾಯೇಯ' ಎಂಬ ವಾಕ್ಯವೂ ಸಹ ಶ್ರುತವಾಗಿದೆ. 'ತದೈಕ್ಷತ' ಎಂಬ ವಾಕ್ಯದಲ್ಲಿ ಶ್ರುತವಾದ ಈಕ್ಷಿತೃತ್ವವು ಪ್ರಕೃತಿಯಲ್ಲಿ ಬರುತ್ತಿಲ್ಲ. 'ಬಹು ಸ್ಯಾಂ ಪ್ರಜಾಯೇಯ' ಎಂಬ ವಾಕ್ಯದಲ್ಲಿ ಶ್ರುತವಾದ ಬಹುಭವನವು ಬ್ರಹ್ಮನಲ್ಲಿ ಬರುತ್ತಿಲ್ಲ. ಹೀಗಿರುವಾಗ ಸೃಷ್ಟಿಪ್ರತಿಪಾದಕ ವಾಕ್ಯಗಳಲ್ಲಿ ಉಭಯಸಾಧಾರಣವಾದ ಧರ್ಮವೇ ಶ್ರುತವಾಗಿದೆಯೆಂದು ಹೇಗೆ ಹೇಳುತ್ತೀರಿ? ಎಂಬುದು ಇಲ್ಲಿ ಬರುವ ಪ್ರಶ್ನೆ. ಆದರೆ 'ಸದೇವ ಸೌಮ್ಯ' ಎಂಬ ವಾಕ್ಯದಲ್ಲಿರುವ ಕಾರಣತ್ವವನ್ನಷ್ಟೇ ಇಲ್ಲಿ ವಿವಕ್ಷಿಸಬೇಕು ಹೊರತು, ಮುಂದಿನ ವಾಕ್ಯಗಳನ್ನು ವಿವಕ್ಷಿಸಬಾರದು. ಈ ವಾಕ್ಯದಲ್ಲಿ ಶ್ರುತವಾದ ಕಾರಣತ್ವವು ಉಭಯಸಾಧಾರಣ- ವಾಗಿದೆ. ಆದ್ದರಿಂದಲೇ 'ಸತ್' ಎಂಬ ನಾಮಾತ್ಮಕ ಶಬ್ದವು ಉಭಯತ್ರಪ್ರಸಿದ್ಧವಾಗುತ್ತದೆಂದು ನ್ಯಾಯವಿವರಣದಲ್ಲಿ ಹೇಳಿರುತ್ತಾರೆ.

'ಸತ್' ಎಂಬ ನಾಮಾತ್ಮಕ ಶಬ್ದವು ಪ್ರಕೃತಿ ಹಾಗೂ ವಿಷ್ಣು ಇಬ್ಬರಲ್ಲಿಯೂ ಪ್ರಸಿದ್ಧವಾಗಿದೆ. ಆದ್ದರಿಂದಲೇ ಉಭಯತ್ರಪ್ರಸಿದ್ಧವಾಗಿದೆಯೆಂದು ಕರೆಯಲಾಗಿದೆ. ನೇರವಾಗಿ 'ಸತ್' ಎಂಬ ಶಬ್ದವು ಉಭಯತ್ರಪ್ರಸಿದ್ಧವಾಗಿಲ್ಲ.

ಶ್ರುತಿಯಲ್ಲಿ ಹೇಳಲ್ಪಟ್ಟ ಕಾರಣತ್ವ ಧರ್ಮದ ಮೂಲಕವಾಗಿ ಇದು ಉಭಯತ್ರಪ್ರಸಿದ್ಧವೆನಿಸಿದೆ. ಕಾರಣತ್ವ ಸಾಮಾನ್ಯವು ಎರಡೂ ಕಡೆ ಸಮಾನವಾಗಿರುವುದರಿಂದಷ್ಟೇ ಇದೂ ಸಹ ಎರಡೂ ಕಡೆ ಸಮಾನವಾಗಿದೆಯೆಂದು ವಿವಕ್ಷಿಸಬೇಕು. ಹೀಗೆ ವಿವಕ್ಷಿಸದಿದ್ದರೆ, 'ಸತ್' ಎಂಬ ಶಬ್ದವು ಪ್ರಕೃತಿ ಹಾಗೂ ವಿಷ್ಣು ಇಬ್ಬರಲ್ಲಿ ಮಾತ್ರ ಸಾಧಾರಣವಾಗಿದೆಯೆಂದು ಹೇಳಲು ಹೇಗೆ ಸಾಧ್ಯ? ಘಟ, ಪಟಾದಿಗಳಲ್ಲಿಯೂ ಸಹ 'ಸತ್' ಎಂಬ ಶಬ್ದವು ಪ್ರಸಿದ್ಧವಾಗಿದೆಯಲ್ಲವೇ? ಎಂಬ ಪ್ರಶ್ನೆಗೆ ಅವಕಾಶವಿರುತ್ತಿತ್ತು. ಅದಕ್ಕೋಸ್ಕರವೇ ಕಾರಣತ್ವಧರ್ಮದ ಮೂಲಕವಾಗಿ ಉಭಯತ್ರಪ್ರಸಿದ್ಧವೆಂದು ಹೇಳುತ್ತಿದ್ದಾರೆ.

ಹೀಗೆ ಹೇಳಿದಾಗಲೂ ಪ್ರಶ್ನೆಯು ತಪ್ಪಿದ್ದಲ್ಲ. ಏಕೆಂದರೆ ಕಾರಣತ್ವವು ಕೇವಲ ಬ್ರಹ್ಮ ಹಾಗೂ ಪ್ರಕೃತಿಗಳಲ್ಲಿ ಮಾತ್ರ ಇರುವುದಿಲ್ಲ. ಅದೃಷ್ಟಾದಿಗಳಲ್ಲಿಯೂ ಸಹ ಇರುತ್ತದೆ. ಆದ್ದರಿಂದ ಕಾರಣತ್ವಧರ್ಮವನ್ನು ಆಶ್ರಯಿಸಿದ ಮಾತ್ರದಿಂದ ಉಭಯತ್ರಪ್ರಸಿದ್ಧವಾಗುತ್ತದೆಂದು ಹೇಗೆ ಹೇಳುತ್ತೀರಿ? ಆದ್ದರಿಂದ ಯಾವರೀತಿಯಲ್ಲಿ ವಿವಕ್ಷಿಸಬೇಕೆಂಬುದನ್ನು ಸ್ಪಷ್ಟವಾಗಿ ತಿಳಿಯಬೇಕು. ಅದು ಹೀಗೆ - ಒಂದೇ ವ್ಯಕ್ತಿಯಲ್ಲಿರಬೇಕು. ಹಾಗೂ ಕಾರಣವಾಗಿರಬೇಕು. ಅಥವಾ ಉಪಾದಾನತ್ವ ಅಥವಾ ಕರ್ತೃತ್ವವಿರಬೇಕು. ಹಾಗೂ ಕಾರಣವಾಗಿರಬೇಕು. ಹೀಗೆ ಹೇಳಿದಾಗ ಅದೃಷ್ಟಾದಿಗಳಲ್ಲಿ ಕಾರಣತ್ವವನ್ನು ಹೇಳಲು ಸಾಧ್ಯವಿಲ್ಲ. ಅದೃಷ್ಟಗಳು ಅನೇಕವಾಗಿರುವುದರಿಂದ ಏಕವ್ಯಕ್ತಿಕವಾಗಿಲ್ಲ. ಆದ್ದರಿಂದ 'ಏಕ ವ್ಯಕ್ತಿತ್ವೇ ಸತಿ ಕಾರಣತ್ವಂ' ಅಥವಾ 'ಉಪಾದಾನತ್ವಕರ್ತೃತ್ವಾನ್ಯತರತ್ವೇ ಸತಿ ಕಾರಣತ್ವಂ' ಎಂದು ಕಾರಣತ್ವಲಕ್ಷಣವನ್ನು ಪರಿಷ್ಕರಿಸಿ ಹೇಳಿದಂತಾಯಿತು.

ಕಾರಣತ್ವಧರ್ಮದ ಮೂಲಕವಾಗಿ 'ಸತ್' ಶಬ್ದವನ್ನು ಸಮನ್ವಯ ಮಾಡುವುದಾದರೆ 'ಆಕಾಶ' ಶಬ್ದದ ಸಮನ್ವಯವನ್ನೂ ಸಹ ಮಾಡಬೇಕಾಗುತ್ತದೆ. ಏಕೆಂದರೆ 'ಸತ್' ಶಬ್ದಾರ್ಥದಿಂದ ಕಾರಣತ್ವವೂ ತಿಳಿಯುತ್ತಿರುವಂತೆ 'ಆಕಾಶ' ಶಬ್ದಾರ್ಥದಿಂದಲೂ ಸಹ ಕಾರಣತ್ವವು ತಿಳಿಯುತ್ತಿದೆ. ಹೀಗೆ ಶಂಕೆಯು ಮನಸ್ಸಿನಲ್ಲಿ ಹುಟ್ಟುತ್ತದೆ. ಆದರೆ 'ಆಕಾಶ' ಎಂಬ ಶಬ್ದವು ವ್ಯಕ್ತಿವಿಶೇಷಕ್ಕೆ ವಾಚಕವಾಗಿದೆ. ಅದರಂತೆ 'ಸತ್' ಎಂಬ ಶಬ್ದವು ವ್ಯಕ್ತಿವಿಶೇಷಕ್ಕೆ ವಾಚಕವಾಗಿಲ್ಲ. ಸಕಲ ಪದಾರ್ಥಗಳೂ ಸಹ ಸತ್ಯವಾಗಿರುವುದರಿಂದ ಎಲ್ಲವನ್ನೂ ನಾವು ಸತ್ಯವೆಂದು ಕರೆಯುತ್ತೇವೆ. ಆದ್ದರಿಂದ ಇಂತಹ 'ಸತ್' ಶಬ್ದವನ್ನು ವಿಷ್ಣು ಹಾಗೂ ಪ್ರಕೃತಿ ಇಬ್ಬರಲ್ಲಿ ಮಾತ್ರ ಸಾಧಾರಣವೆಂದು ಸಮರ್ಥಿಸಲು ಕಾರಣತ್ವಧರ್ಮದ ಆಕಾಂಕ್ಷೆಯಿರುತ್ತದೆ. ಆದರೆ 'ಆಕಾಶ' ಶಬ್ದದ ಸಮನ್ವಯಕ್ಕೆ ಇಂತಹ ಕಾರಣತ್ವದ ಆಕಾಂಕ್ಷೆ ಇರುವುದಿಲ್ಲ. ಹಾಗಾಗಿ ಈ ಅಧಿಕರಣದಲ್ಲಿ 'ಸತ್' ಎಂಬ ನಾಮಾತ್ಮಕ ಶಬ್ದವನ್ನೇ ಸಮನ್ವಯ ಮಾಡುತ್ತಿದ್ದಾರೆ.

ಕಾರಣತ್ವ ಧರ್ಮದ ಮೂಲಕವಾಗಿ 'ಸತ್' ಶಬ್ದವನ್ನು ಸಮನ್ವಯ ಮಾಡುವುದಾದರೆ ನೇರವಾಗಿ ಕಾರಣತ್ವಧರ್ಮವನ್ನೇ ಸಮನ್ವಯ ಮಾಡಿ ಆರ್ಥಾತ್ 'ಸತ್' ಶಬ್ದದ ಸಮನ್ವಯವೂ ಸಹ ಸಿದ್ಧವಾಯಿತೆಂದು ಸಮರ್ಥಿಸಬಹುದಲ್ಲವೇ? ಎಂಬುದು ಮುಂದಿನ ಪ್ರಶ್ನೆ. ಆದರೆ ಶ್ರುತಿಯಲ್ಲಿ ಕಾರಣತ್ವಧರ್ಮಕ್ಕಿಂತಲೂ ಮೊದಲು 'ಸತ್' ಶಬ್ದವೇ ಕೇಳಿಸುತ್ತಿದೆ. ಮತ್ತು ಹಿಂದಿನ ಅಧಿಕರಣದಲ್ಲಿ ಮಾಡಿದ ನಾಮಾತ್ಮಕ ಶಬ್ದದ ಸಮನ್ವಯವೇ ಬುದ್ಧಿಸ್ಥವಾಗಿದೆ. ಮತ್ತು ಲಿಂಗಕ್ಕಿಂತ ಶ್ರುತಿಯು ಪ್ರಬಲವಾಗಿರುವುದರಿಂದ ಶ್ರುತಿಸಮನ್ವಯವನ್ನು ನೇರವಾಗಿ ಮಾಡಿ ಆರ್ಥಾತ್ ಲಿಂಗಸಮನ್ವಯವನ್ನು ಸ್ಥಾಪಿಸುವುದು ನ್ಯಾಯಸಮ್ಮತವಾಗುತ್ತದೆ. ಮತ್ತು ಒಂದು 'ಸತ್' ಶಬ್ದವನ್ನು ಸಮನ್ವಯ ಮಾಡುವುದರಿಂದ ಸರ್ವಾಧಾರತ್ವ, ಸುಪ್ತುಪ್ತಿಗಮ್ಯತ್ವ ಮೊದಲಾದ ಅನೇಕ ಗುಣಗಳು ಬ್ರಹ್ಮನಲ್ಲಿ ಸಮನ್ವಯವಾಗುತ್ತವೆ. ಅಂದರೆ ಕೇವಲ ಒಂದು 'ಸತ್' ಶಬ್ದದ ಸಮನ್ವಯವನ್ನಷ್ಟೇ ಇಲ್ಲಿ ವಿವಕ್ಷಿಸಿಲ್ಲ. ಸಂಪೂರ್ಣ

ಸ್ಥಾನದ ಸಮನ್ವಯವೇ ವಿವಕ್ಷಿತವಾಗಿದೆ. ಆದ್ದರಿಂದಲೇ ಅನುವ್ಯಾಖ್ಯಾನದಲ್ಲಿ ಸ್ಥಾನದ ಸಮನ್ವಯವೇ ಈ ಅಧಿಕರಣದ ಉದ್ದೇಶವೆಂದು ಹೇಳಿರುತ್ತಾರೆ.

ಈ ಪಾದದಲ್ಲಿ ನಾಮಾತ್ಮಕ ಹಾಗೂ ಲಿಂಗಾತ್ಮಕಶಬ್ದಗಳ ಸಮನ್ವಯವಷ್ಟೇ ವಿವಕ್ಷಿತವೆಂಬ ಅಭಿಪ್ರಾಯದಿಂದ ಶ್ರೀಮದಾಚಾರ್ಯರು 'ಲಿಂಗನಾಮ್ನಾಮ್' ಎಂದು ಹೇಳಿರುವುದಲ್ಲ. ಸ್ಥಾನಸಮನ್ವಯದ ದೃಷ್ಟಿಯೂ ಸಹ ಶ್ರೀಮದಾಚಾರ್ಯರಿಗೆ ಇರುತ್ತದೆ. ಹಾಗಾದರೆ 'ಲಿಂಗನಾಮ್ನಾಮ್' ಎಂದೇಕೆ ಹೇಳಿದ್ದಾರೆಂದರೆ, ಹಿಂದಿನ ಎರಡು ಪಾದಗಳಲ್ಲಿ ಕೇವಲ ಲಿಂಗದ ಸಮನ್ವಯ ಅಥವಾ ನಾಮದ ಸಮನ್ವಯವಷ್ಟೇ ವಿವಕ್ಷಿತವಾಗಿದೆ. ಅದರಂತೆ ಇಲ್ಲಿ ಇರುವುದಿಲ್ಲವೆಂಬ ಉದ್ದೇಶದಿಂದ. ಆದ್ದರಿಂದ ಬೇರೆ ಅಧಿಕರಣಗಳಲ್ಲಿಯೂ ಆಯಾ ನಾಮಾತ್ಮಕ ಶಬ್ದಗಳ ಅಥವಾ ಲಿಂಗಾತ್ಮಕಶಬ್ದಗಳ ಸಮನ್ವಯದಿಂದ ಸಂಪೂರ್ಣ ಸ್ಥಾನದ ಸಮನ್ವಯವನ್ನೂ ಸಹ ನಾವು ವಿವಕ್ಷಿಸಬೇಕೆಂಬುದೇ ಇಲ್ಲಿರುವ ಪರಮ ಪ್ರಮೇಯ ವಿಚಾರ.

ಈ ಸದಧಿಕರಣದಲ್ಲಿ 'ಸ್ಥಾನ' ಎಂಬುದರ ಸಮನ್ವಯವನ್ನು ಮಾಡುತ್ತಿದ್ದಾರೆ. ಬೇರೆ ಅಧಿಕರಣಗಳಲ್ಲಿಯೂ ಸಹ ಸ್ಥಾನದ ಸಮನ್ವಯವು ಇರುವಾಗ ಈ ಅಧಿಕರಣದಲ್ಲಿ ಮಾತ್ರ ಇದನ್ನು ಉಲ್ಲೇಖಿಸಲು ವಿಶೇಷ ಕಾರಣವಿದೆ. ಏನೆಂದರೆ ಸಮನ್ವಯ ಮಾಡುವಂತಹ 'ಸತ್' ಎಂಬ ಶಬ್ದದಿಂದಲೇ ಘಟಿತವಾದ ಅನೇಕ ಅವಾಂತರ ಪ್ರಕರಣಗಳಿವೆ. ಅವೆಲ್ಲವೂ ಭಗವಂತನ ಸೃಷ್ಟಿಕಾರಣತ್ವವನ್ನು ಪ್ರತಿಪಾದಿಸುತ್ತಿವೆ. ಅವುಗಳ ಸಮನ್ವಯದ ಸಿದ್ಧಿಗಾಗಿ ಇಲ್ಲಿ ಸ್ಥಾನದ ಸಮನ್ವಯವನ್ನು ಹೇಳಿದ್ದಾರೆ. ಆದರೆ ಬೇರೆ ಅಧಿಕರಣಗಳಲ್ಲಿ ಸಮನ್ವಯ ಮಾಡುವಂತಹ ಶಬ್ದದಿಂದಲೇ ಘಟಿತವಾದ ಅನೇಕ ಅವಾಂತರ ಪ್ರಕರಣಗಳಿರುವುದು ಕಾಣಿಸುವುದಿಲ್ಲ.

ಅಥವಾ ಸೃಷ್ಟಿಕಾರಣತ್ವವನ್ನು ಹೇಳುವ ಕೆಲವು ವಾಕ್ಯಗಳಲ್ಲಿ 'ಸತ್' ಎಂಬ ಶಬ್ದವಿರಬಹುದು. ಅದರಂತೆ ಇನ್ನೂ ಕೆಲವು ವಾಕ್ಯಗಳಲ್ಲಿ ಆತ್ಮಾ, ಬ್ರಹ್ಮ ಮೊದಲಾದ ಶಬ್ದಗಳಿರುತ್ತವೆ. ಅದೆಲ್ಲದರ ಸಮನ್ವಯದ ಸಿದ್ಧಿಗಾಗಿಯೂ ಸಹ ಸ್ಥಾನದ ಸಮನ್ವಯವನ್ನು ಇಲ್ಲಿ ಹೇಳಿರುತ್ತಾರೆ.

ಹೀಗೆ ಸ್ಥಾನದ ಸಮನ್ವಯವು ಸಿದ್ಧವಾದ ಮೇಲೆ ತದೇಕದೇಶವೇ ಆಗಿರುವಂತಹ ಪ್ರಕರಣ ಹಾಗೂ ವಾಕ್ಯಗಳ ಸಮನ್ವಯವು ಸಹಜವಾಗಿ ಕೈಮುತ್ಯನ್ಯಾಯದಿಂದಲೇ ಸಿದ್ಧವಾಗುತ್ತದೆಂದು ಅವುಗಳ ಸಮನ್ವಯವನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಆದ್ದರಿಂದ ಈ ಅಧಿಕರಣದಲ್ಲಿ 'ಸತ್' ಎಂಬ ಶ್ರುತಿಯ ಸಮನ್ವಯ ಹಾಗೂ ಜಗತ್‌ಕಾರಣತ್ವವೆಂಬ ಲಿಂಗದ ಸಮನ್ವಯ, (ಸಮಾಖ್ಯಾಪ್ರಮಾಣದ ಸಮನ್ವಯವನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.) 'ಸತ್' ಶಬ್ದ ಘಟಿತವಾದ ವಾಕ್ಯದ ಸಮನ್ವಯ ಮತ್ತು ಅದರ ಪ್ರಕರಣದ ಸಮನ್ವಯ ಮತ್ತು ಸ್ಥಾನದ ಸಮನ್ವಯ. ಹೀಗೆ ಆಗಮನಿರ್ಣಾಯಕವಾದ ಅರೂವಿಧವಾದ ಲಿಂಗಗಳ ಸಮನ್ವಯವನ್ನು ಮಾಡಿದಂತಾಗುತ್ತದೆ. ಇಂತಹ ವೈಶಿಷ್ಟ್ಯವು ಈ ಅಧಿಕರಣಕ್ಕೆ ಮಾತ್ರ ಇರುವುದು ಎಂಬುದನ್ನು ಗಮನಿಸಬೇಕು.

ನ್ಯಾಯವಿವರಣ ಟೀಕೆಯಲ್ಲಿ 'ಸ್ಥಾನ' ಪದಕ್ಕೆ 'ಸೃಷ್ಟಿಗೋಸ್ಕರ ಪ್ರಳಯಕಾಲದಲ್ಲಿರುವಿಕೆ' ಎಂಬ ಲಿಂಗದ ಸಮನ್ವಯವನ್ನು ಈ ಅಧಿಕರಣದಲ್ಲಿ ಮಾಡಲಾಗಿದೆಯೆಂದು ವ್ಯಾಖ್ಯಾನಿಸಿದ್ದಾರೆ. ಇಲ್ಲಿಯ ತನಕ 'ಸ್ಥಾನ' ಶಬ್ದಕ್ಕೆ

ಶ್ರುತಿಯ ನಿರ್ಣಾಯಕವಾದ ಷಡ್ವಿಧ ತಾತ್ಪರ್ಯಲಿಂಗಗಳ ನಡುವೆ ಇರುವ ಸ್ಥಾನದ ಸಮನ್ವಯವೆಂದು ನಿರೂಪಣೆ ಮಾಡಲಾಯಿತು. ಆದರೆ ಈಗ 'ಸ್ಥಾನ' ಶಬ್ದಕ್ಕೆ ಇರುವಿಕೆ ಎಂಬ ಲಿಂಗದ ಸಮನ್ವಯವೆಂಬ ಅಭಿಪ್ರಾಯವನ್ನು ವಿವಕ್ಷಿಸಿದ್ದಾರೆ. ಸ್ಥಾನದ ಸಮನ್ವಯವಾಗಲೀ, ಅಥವಾ ಲಿಂಗದ ಸಮನ್ವಯವಾಗಲೀ ಈ ಅಧಿಕರಣದಲ್ಲಿ ಮಾಡಿದರೂ ಸಹ ಪಾದಸಂಗತಿಯಿರುತ್ತದೆಂಬುದನ್ನು ತಿಳಿಯಬೇಕು.

ಈ ಅಧಿಕರಣದಲ್ಲಿ ಹಿಂದಿನ ಅಧಿಕರಣದ ಪೂರ್ವಪಕ್ಷಕ್ಕಿಂತ ವಿಭಿನ್ನವಾದ ಪೂರ್ವಪಕ್ಷವನ್ನು ಮಾಡುತ್ತಿರುವುದರಿಂದ ಪ್ರತ್ಯುದಾಹರಣ ಸಂಗತಿಯನ್ನು, ಹಿಂದಿನ ಅಧಿಕರಣದ ಸಿದ್ಧಾಂತವನ್ನೇ ಅವಲಂಬಿಸಿ ಪೂರ್ವಪಕ್ಷ ಮಾಡುತ್ತಿರುವುದರಿಂದ ಆಪವಾದಕೀ ಸಂಗತಿಯನ್ನು ಹಿಂದಿನ ಅಧಿಕರಣದ ಸಿದ್ಧಾಂತ ಹೇತುವನ್ನು ಆಕ್ಷೇಪಿಸಿ ಪೂರ್ವಪಕ್ಷ ಮಾಡುತ್ತಿರುವುದರಿಂದ ಆಕ್ಷೇಪಿಕೀ ಸಂಗತಿಯನ್ನೂ ತಿಳಿಯಬೇಕು. ಮುಂದೆ ಮೂರು ಬಗೆಯ ಪೂರ್ವಪಕ್ಷಗಳನ್ನು ವಿವರಣೆ ಮಾಡಿದಾಗ ಸ್ಪಷ್ಟವಾಗುತ್ತವೆ.

ಈ ಅಧಿಕರಣಕ್ಕೆ ಛಾಂದೋಗ್ಯದ ಆರನೇ ಅಧ್ಯಾಯದಲ್ಲಿರುವ 'ಸದೇವ ಸೋಮ್ಯ ಇದಮಗ್ರ ಆಸೀತ್' ಇತ್ಯಾದಿ ಸಮಸ್ತ ಪ್ರಕರಣವೇ ವಿಷಯವಾಗಿದೆ. ಅಲ್ಲಿ ಮುಖ್ಯವಾಗಿರುವ 'ಸತ್' ಎಂಬ ಶಬ್ದವನ್ನು ವಿಶೇಷವಾಗಿ ಉಲ್ಲೇಖಿಸಿ ಸಮನ್ವಯ ಮಾಡಲು ಹೊರಟಿದ್ದಾರೆ.

'ಬಹು ಸ್ಯಾಂ ಪ್ರಜಾಯೇಯ' ಎಂಬ ಶ್ರುತಿಯಲ್ಲಿ 'ಸತ್' ಪದಾರ್ಥಕ್ಕೆ ಬಹುಭವನವು ಶ್ರುತವಾಗಿದೆ. ಬಹುಭವನವೆಂದರೆ 'ವಿಕಾರ' ಎಂದು ಒಪ್ಪಬೇಕಾದ್ದರಿಂದ 'ತದ್ಧೈಕ್ಷತ' ಎಂಬ ಶ್ರುತಿಯಲ್ಲಿರುವ ಈಕ್ಷಿತೃತ್ವವನ್ನು ಗೌಣವನ್ನಾಗಿ ವಿವಕ್ಷಿಸಬೇಕು. ಆವಾಗ ಜಡಪ್ರಕೃತಿಯೇ 'ಸತ್' ಶಬ್ದದಿಂದ ಪ್ರತಿಪಾದ್ಯವಾಗುತ್ತದೆಂದು ಪೂರ್ವಪಕ್ಷಕಾರರ ಧೋರಣೆ.

'ಸತ್' ಪದಾರ್ಥಕ್ಕೆ ಶ್ರುತವಾದ ಬಹುಭವನವು ಸ್ವರೂಪತಃ ಬಹುಭಾವವನ್ನೇ ಹೇಳುತ್ತಿದೆ. ಭಗವಂತನಿಗೆ ಸ್ವರೂಪತಃ ಅನೇಕ ರೂಪಗಳು ಇರುವುದರಿಂದ 'ತದ್ಧೈಕ್ಷತ' ಎಂಬಲ್ಲಿರುವ ಈಕ್ಷಿತೃತ್ವವನ್ನು ಗೌಣವನ್ನಾಗಿ ವಿವಕ್ಷಿಸಬೇಕಾಗಿಲ್ಲ. ಆದ್ದರಿಂದ 'ಸತ್' ಶಬ್ದದಿಂದ ಪ್ರತಿಪಾದ್ಯನಾದವನು ಮಹಾವಿಷ್ಣುವೇ ಆಗಿದ್ದಾನೆಂಬುದು ಸಿದ್ಧಾಂತಿಗಳ ವಿಚಾರ ಧಾರೆ.

ಪೂರ್ವಪಕ್ಷ ಹೀಗಿದೆ - ಶ್ರುತಿಯಲ್ಲಿರುವ 'ಸತ್' ಶಬ್ದವು ಪ್ರಕೃತಿಯನ್ನು ಪ್ರತಿಪಾದಿಸಬೇಕು ಹೊರತು, ಬ್ರಹ್ಮನನ್ನು ಪ್ರತಿಪಾದಿಸಲು ಸಾಧ್ಯವಿಲ್ಲ. ಏಕೆಂದರೆ ಜಗತ್ತಿಗೆ ಕಾರಣವಾದ ಯಾವ ಸತ್‌ಪದಾರ್ಥವಿದೆಯೋ, ಅದು 'ಬಹು ಸ್ಯಾಂ ಪ್ರಜಾಯೇಯ' ಇತ್ಯಾದಿ ಶ್ರುತಿಯು ಹೇಳುವಂತೆ ಪೃಥಿವೀ, ತೇಜಸ್ಸು ಮೊದಲಾದವುಗಳ ಸ್ವರೂಪವನ್ನು ತಾಳುತ್ತದೆಂದು ತಿಳಿಯುತ್ತದೆ. ಪರಬ್ರಹ್ಮನನ್ನೇ 'ಸತ್' ಶಬ್ದದಿಂದ ಪ್ರತಿಪಾದ್ಯನೆಂದು ಹೇಳಿದರೆ ಇಂತಹ ವಿಕಾರಸ್ವರೂಪವನ್ನು ಹೇಳುವುದು ತಪ್ಪಾಗುತ್ತದೆ. ಅವನು ಯಾವುದೇ ವಿಕಾರಕ್ಕೆ ಒಳಗಾಗುವುದಿಲ್ಲವೆಂದು ಶ್ರುತಿಗಳು ಹೇಳುತ್ತಿರುವಾಗ ಪೃಥಿವೀ, ತೇಜಸ್ಸು ಮೊದಲಾದವುಗಳ ಸ್ವರೂಪದಲ್ಲಿ ವಿಕಾರವನ್ನು ತಾಳುತ್ತಾನೆಂದು ಹೇಳಿದರೆ ಅದು ಅತ್ಯಂತ ವಿರುದ್ಧವಾದ ಗುಣವಾದೀತು.

ಹಿಂದಿನ ಭೂಮಾಧಿಕರಣದಲ್ಲಿ ಉತ್ತಮಣವೆಂಬ ಲಿಂಗಕ್ಕೂ ಸರ್ವಗತತ್ವಕ್ಕೂ ಪರಸ್ಪರ ವಿರೋಧವು ಪ್ರಾಪ್ತವಾದಾಗ ಸರ್ವಗತನಾದರೂ ಸಹ ಬ್ರಹ್ಮನಲ್ಲಿ ಉತ್ತಮಣವು ಇರಬಹುದೆಂದು ವಿರೋಧವನ್ನು

ಪರಿಹರಿಸಲಾಯಿತು. ಅದೇ ನ್ಯಾಯದಿಂದ ಇಲ್ಲಿಯೂ ಸಹ ವಿಕಾರ ಹಾಗೂ ತದಭಾವಗಳಿಗೆ ವಿರೋಧವನ್ನು ಪರಿಹರಿಸಬಹುದಲ್ಲವೇ? ಅಥವಾ ಅಕ್ಷರಾಧಿಕರಣದಲ್ಲಿ ಮಹತ್ತ್ವ ಹಾಗೂ ಅಣುತ್ವಗಳಿಗೆ ಪರಸ್ಪರ ವಿರೋಧವಿರುವುದರಿಂದ ಒಬ್ಬನೇ ಪರಮಾತ್ಮನಲ್ಲಿ ಈ ವಿರುದ್ಧ ಧರ್ಮಗಳನ್ನು ಹೇಳುವುದು ಹೇಗೆ ಸಾಧ್ಯ ? ಇದರಂತೆ ಸ್ಥೌಲ್ಯಾಭಾವ ಹಾಗೂ ಅಣುತ್ವಾಭಾವಗಳಿಗೂ ಲೋಕದಲ್ಲಿ ವಿರೋಧ ಕಂಡಿರುವುದರಿಂದ ಒಬ್ಬನೇ ಪರಮಾತ್ಮನಲ್ಲಿ ಇವೆರಡನ್ನು ಹೇಳುವುದು ಹೇಗೆ ಸಾಧ್ಯ ? ಮತ್ತು ಅತ್ಯತ್ವ ಅನಶನಗಳಿಗೂ ವಿರೋಧವು ಕಂಡಿದ್ದರಿಂದ, ಇವುಗಳ ವಿರೋಧವನ್ನಾದರೂ ಪರಮಾತ್ಮನಲ್ಲಿ ಪರಿಹರಿಸುವುದು ಹೇಗೆ ಸಾಧ್ಯ ? ಇತ್ಯಾದಿ ಪ್ರಶ್ನೆಗಳು ಪ್ರಸಕ್ತವಾಗಿದ್ದವು. ಅವುಗಳಿಗೆ ಉತ್ತರವನ್ನು ಈ ಹಿಂದೆ ನೀಡಲಾಗಿತ್ತು. ಅದೇನು ತಪ್ಪಲ್ಲ. ಏಕೆಂದರೆ ಮಹತ್ತ್ವ-ಅಣುತ್ವಗಳಿಗೆ ಪ್ರತಿಯೋಗಿ-ಅನುಯೋಗಿಭಾವವಿದ್ದರೂ ಎರಡೂ ಸಹ ಭಾವರೂಪವೇ ಆಗಿವೆ. ಭಾವರೂಪವಾದ ಎರಡು ಧರ್ಮಗಳಿಗೆ ವಿರೋಧವನ್ನು ಪರಿಹರಿಸುವುದು ಕಷ್ಟವಾಗುವುದಿಲ್ಲ. ಸ್ಥೌಲ್ಯಾಭಾವ-ಅಣುತ್ವಾಭಾವಗಳೆರಡೂ ಅಭಾವರೂಪಗಳೇ ಆಗಿರುವುದರಿಂದ ಇವೆರಡರ ವಿರೋಧ ಪರಿಹಾರವೂ ಸಹ ಕಷ್ಟವಲ್ಲ. ಇನ್ನೂ ಅತ್ಯತ್ವ ಹಾಗೂ ಅನಶನ (ಅತ್ಯತ್ವಾಭಾವ)ಗಳಿಗೆ ವಿರೋಧವನ್ನೂ ಸಹ ಪರಿಹರಿಸಬಹುದು. ಏಕೆಂದರೆ ಅನಶನವು (ಅತ್ಯತ್ವಾಭಾವವು) ವಿಶೇಷಾಭಾವ ಸ್ವರೂಪವಾಗಿದೆ. ಅತ್ಯತ್ವವು ಸಾಮಾನ್ಯರೂಪವಾಗಿದೆ. ವಿಶೇಷಾಭಾವ ಹಾಗೂ ಸಾಮಾನ್ಯಗಳಿಗೆ ವಿರೋಧವಿರುವುದಿಲ್ಲ. ಉದಾಹರಣೆ : ಹಲಸಿನ ಮರದಲ್ಲಿ ವೃಕ್ಷತ್ವ ಎಂಬ ಸಾಮಾನ್ಯ ಧರ್ಮವಿದ್ದರೂ 'ಚೂತತ್ವ' ಎಂಬ ವಿಶೇಷಧರ್ಮ ಇಲ್ಲ. ಅಂದರೆ ವೃಕ್ಷತ್ವ ಸಾಮಾನ್ಯಕ್ಕೂ ಚೂತತ್ವಾಭಾವರೂಪ ವಿಶೇಷಧರ್ಮಕ್ಕೂ ವಿರೋಧವಿರುವುದಿಲ್ಲ. ಆದರೆ ಪ್ರಕೃತ 'ಬಹು ಸ್ಯಾಮ್' ಎಂಬ ಶ್ರುತಿಯಿಂದ ತಿಳಿಯುತ್ತಿರುವ ವಿಕಾರಕ್ಕೂ 'ನಿರ್ವಿಕಾರಃ ಸದಾ ಶುದ್ಧಃ' ಎಂಬುದರಿಂದ ತಿಳಿಯುತ್ತಿರುವ ವಿಕಾರಾಭಾವಕ್ಕೂ ವಿರೋಧವನ್ನು ಪರಿಹರಿಸಲು ಸಾಧ್ಯವೇ ಇಲ್ಲ. ಏಕೆಂದರೆ ವಿಕಾರಾಭಾವವು ವಿಕಾರಸಾಮಾನ್ಯಾಭಾವರೂಪವಾಗಿದೆ. 'ಬಹು ಸ್ಯಾಮ್' ಎಂಬಲ್ಲಿ ಹೇಳಲ್ಪಟ್ಟ ವಿಕಾರವು ವಿಶೇಷರೂಪವಾಗಿದೆ. ವಿಶೇಷಾಭಾವಕ್ಕೂ ಸಾಮಾನ್ಯಕ್ಕೂ ವಿರೋಧವಿಲ್ಲದಿರಬಹುದು. ಆದರೆ ಸಾಮಾನ್ಯಾಭಾವಕ್ಕೂ ವಿಶೇಷಕ್ಕೂ ವಿರೋಧವಿದ್ದೇ ಇರುತ್ತದೆ. ಅಂದರೆ ಘಟದಲ್ಲಿ ವೃಕ್ಷತ್ವವಿಲ್ಲವೆಂದು ಹೇಳಿದ ಮೇಲೆ ಚೂತ ವೃಕ್ಷತ್ವವಿದೆ ಎಂದು ಹೇಳಲು ಸಾಧ್ಯವಿಲ್ಲ. ಹಾಗಾಗಿ ವಿಕಾರ ತದಭಾವವೆಂಬ ಪೂರ್ವಪಕ್ಷ ಯುಕ್ತಿಯು ನಿರವಕಾಶವಾಗಿದೆ.

ನಾನಾವಿಧವಾದ ಜಡವಾದ ಪದಾರ್ಥಗಳ ಸ್ವರೂಪವನ್ನು ತಾಳುವಿಕೆಯು ಪರಮಾತ್ಮನಿಗೆ ಗುಣವೂ ಆಗುವುದಿಲ್ಲ. ಒಂದು ವೇಳೆ ಗುಣವಾಗಿದ್ದಲ್ಲಿ 'ಗುಣಾಃ ಶ್ರುತಾಃ ಸುವಿರುದ್ಧಾಶ್ಚ ದೇವೇ ಸಂತಿ' ಇತ್ಯಾದಿ ಶ್ರುತಿಯಿಂದ ವಿರುದ್ಧವಾಗಿದ್ದ ಗುಣಗಳನ್ನೂ ಒಪ್ಪಬಹುದಿತ್ತು. ಆದರೆ ಇಂತಹ ವಿಕಾರವು ಅನರ್ಥಸ್ವರೂಪ ವಾಗಿರುವುದರಿಂದ ವಿರುದ್ಧವಾದ ಇಂತಹ ಧರ್ಮವನ್ನು ಪರಮಾತ್ಮನಲ್ಲಿ ಒಪ್ಪುವುದು ಅನಾವಶ್ಯಕ.

'ವಿಕಾರ-ತದಭಾವ' ಎಂಬ ಹೇತುವಿನಿಂದ ಬ್ರಹ್ಮನು 'ಸತ್' ಶಬ್ದದಿಂದ ವಾಚ್ಯನಾಗುವುದಿಲ್ಲವೆಂದು ಸಮರ್ಥಿಸಲಾಯಿತು. ಹಾಗಾದರೆ 'ತದೈಕ್ಷತ' ಎಂಬ ಶ್ರುತಿಯು 'ಸತ್' ಪದಾರ್ಥದಲ್ಲಿ ಈಕ್ಷಣವನ್ನು ಹೇಳುತ್ತಿದೆ. ಇದು ಪ್ರಕೃತಿಯಲ್ಲಿ ಬಾರದ ಕಾರಣ ಬ್ರಹ್ಮನಂತೆ ಪ್ರಕೃತಿಯೂ ಕೂಡ 'ಸತ್' ಶಬ್ದದಿಂದ ಪ್ರತಿಪಾದ್ಯವಾಗಲು ಸಾಧ್ಯವಿಲ್ಲವಲ್ಲವೇ?

ಹೀಗೆ ಪ್ರಶ್ನಿಸಬಾರದು. ಶ್ರುತಿಯಲ್ಲಿರುವ ಈಕ್ಷಣಕ್ಕೆ ಗೌಣಾರ್ಥವನ್ನು ಅನಿವಾರ್ಯವಾಗಿ ಆಶ್ರಯಿಸಬೇಕು. ಜ್ಞಾನವು ಹುಟ್ಟಬೇಕೆಂದರೆ ಸತ್ವಗುಣವಿರಬೇಕೆಂದು ಗೀತೆಯು ಹೇಳಿದೆ. ಇಂತಹ ಸತ್ವಗುಣಕ್ಕೆ ಪ್ರಕೃತಿಯು ಆಶ್ರಯವಾದ್ದರಿಂದ, ಪ್ರಕೃತಿಯೆನ್ನು ಶ್ರುತಿಯು ಜ್ಞಾನವುಳ್ಳದ್ದೆಂದು ಕರೆಯುತ್ತಿದೆ. ಅಥವಾ

ಅಭಿಮಾನಿದೇವತೆಯಲ್ಲಿರುವ ಜ್ಞಾನವನ್ನು ಅಭಿಮನ್ಯವಾದ ಪ್ರಕೃತಿಯಲ್ಲಿ ಪ್ರಯೋಗಿಸಲಾಗಿದೆ. ಹೀಗೆ ಗೌಣಾರ್ಥವನ್ನು ಮಾಡುವುದೇ ಅನಿವಾರ್ಯ. ಇಲ್ಲದಿದ್ದರೆ, 'ತತ್ತೇಜ ಐಕ್ಷತ' 'ತಾ ಆಪ ಐಕ್ಷಂತ' ಇತ್ಯಾದಿ ಸ್ಥಳಗಳಲ್ಲಿ ತೇಜಸ್ಸು, ನೀರು ಮೊದಲಾದವುಗಳಲ್ಲಿಯೂ ಜ್ಞಾನದ ಅಸ್ತಿತ್ವವನ್ನು ಒಪ್ಪಬೇಕಾಗುತ್ತದೆ. ಆದ್ದರಿಂದ ಶ್ರುತಿಯ ಹಿಂದಿನ-ಮುಂದಿನ ವಾಕ್ಯಗಳೆಲ್ಲಾ ಜಡಪದಾರ್ಥಗಳಲ್ಲಿ ಜ್ಞಾನದ ಇರುವಿಕೆಯನ್ನು ಹೇಳಿದ್ದು ಮೇಲ್ನೋಟಕ್ಕೆ ಕಂಡರೂ ಕೂಡ, ಗೌಣಾರ್ಥವನ್ನೇ ಮಾಡಬೇಕೆಂದು ಸ್ಪಷ್ಟವಾಗುತ್ತದೆ. ಪ್ರಾಯಪಾಠದ ಬಲದಿಂದ 'ಸತ್' ಪದಾರ್ಥದಲ್ಲಿ ಕೇಳಿಸುತ್ತಿರುವ ಜ್ಞಾನವೂ ಕೂಡ ಗೌಣವೆಂದೇ ತಿಳಿಯಬೇಕು.

ಈಕ್ಷಣವನ್ನು ಗೌಣವನ್ನಾಗಿ ಸ್ವೀಕರಿಸದೇ ಮುಖ್ಯವೆಂದೇ ಸ್ವೀಕರಿಸಿ, ವಿಕಾರವನ್ನು ಗೌಣವೆಂದು ಹೇಳಿದಾಗ ಬ್ರಹ್ಮನು 'ಸತ್' ಶಬ್ದದಿಂದ ವಾಚ್ಯನಾಗಬಹುದು. ಆದರೆ ಉಪಕ್ರಮಕ್ಕಿಂತ ಉಪಸಂಹಾರವೇ ಪ್ರಬಲವೆಂಬುದು ನಮ್ಮ ಸಿದ್ಧಾಂತ. ಆದ್ದರಿಂದ ಚರಮಶ್ರುತವಾದ ವಿಕಾರವನ್ನು ಮುಖ್ಯವೆಂದು ಸ್ವೀಕರಿಸಬೇಕೆಂದರೆ ಪ್ರಥಮ ಶ್ರುತವಾದ ಈಕ್ಷಣಕ್ಕೆ ಗೌಣಾರ್ಥವನ್ನು ಸ್ವೀಕರಿಸುವುದು ನ್ಯಾಯಸಮ್ಮತವಾಗಿದೆ. ಆದ್ದರಿಂದ ಪ್ರಕೃತಿಯು 'ಸತ್' ಶಬ್ದದಿಂದ ಪ್ರತಿಪಾದ್ಯವಾಗುತ್ತದೆ.

ಪ್ರಧಾನವು ಉಪಾದಾನ ಕಾರಣವೇ ಆಗಲಿ, ಬ್ರಹ್ಮನು ನಿಮಿತ್ತಕಾರಣವಾಗಬಹುದಲ್ಲವೇ? ಎಂಬ ಪ್ರಶ್ನೆಯನ್ನು ಅತ್ಯಂತ ಮಹತ್ವಪೂರ್ಣವಾಗಿ ವಿಚಾರ ಮಾಡುತ್ತಿದ್ದಾರೆ. ಈ ಪ್ರಶ್ನೆಗೆ ಐದು ಬಗೆಯಲ್ಲಿ ಉತ್ತರಿಸುತ್ತಾ, ಮೊದಲನೆಯ ಉತ್ತರವನ್ನು ಹೀಗೆ ಸಮರ್ಥಿಸಿದ್ದಾರೆ -

ಶ್ರುತಿಯಲ್ಲಿ 'ಸದೇವ ಸೌಮ್ಯ' ಎಂಬ ಅವಧಾರಣವಿರುವ ಪ್ರಯುಕ್ತ ಪ್ರಕೃತಿಯು ಮಾತ್ರ ಜಗತ್ತಿಗೆ ಕಾರಣವೆಂದು ಹೇಳಿದಾಗ ಬ್ರಹ್ಮನು ಕಾರಣನಲ್ಲವೆಂದು ತಿಳಿಯುತ್ತದೆ. ಕ್ಷೀರವು ಸ್ವಾಭಾವಿಕವಾಗಿ ಮೊಸರಾಗುವಂತೆ, ಪ್ರಕೃತಿಯು ಸ್ವಾಭಾವಿಕವಾಗಿಯೇ ಜಗತ್ತಾಗುತ್ತದೆ. ಈಶ್ವರನ ಆಧೀನ್ಯವು ಬೇಕಾಗಿಲ್ಲ. ಅಥವಾ ಶ್ರುತಿಯು ಅಭಿಮಾನಿಚೇತನದಲ್ಲಿ ಇರುವಂತಹ ಕಾರಣತ್ವವನ್ನು ವಿವಕ್ಷಿಸಿ ಪ್ರಕೃತಿಗೆ ಶ್ರುತಿಯು ಕಾರಣತ್ವವನ್ನು ಹೇಳುತ್ತಿದೆ. ಈ ಪಕ್ಷದಲ್ಲಿ ಈಶ್ವರನಿಗೆ ಜಗತ್ಕಾರಣತ್ವವೇ ಬರುವುದಿಲ್ಲ. ಪ್ರಕೃತಿಗೆ ಮಾತ್ರ ಜಗತ್ಕಾರಣತ್ವ ಬರುತ್ತದೆಂದು ತಿಳಿಯಬೇಕು. ಹಾಗಾಗಿ ಜನ್ಮಾಧಿಕರಣದಲ್ಲಿ ಹೇಳಲ್ಪಟ್ಟ ಜಗತ್ಕಾರಣತ್ವ ಲಕ್ಷಣಕ್ಕೆ ಅಸಂಭವ ದೋಷವನ್ನು ಹೇಳಿದಂತಾಯಿತು.

ಅಥವಾ ಈಶ್ವರನಿಗೆ ಅನನ್ಯಾಧೀನವಾದ ಸ್ರಷ್ಟೃತ್ವವು ಹೇಗೆ ಇದೆಯೋ ಅದರಂತೆ ಪ್ರಕೃತಿಯಲ್ಲಿಯೂ ಅನನ್ಯಾಧೀನವಾದ ಜಗತ್ಕಾರಣತ್ವವಿದೆಯೆಂದು ಹೇಳಬಹುದು. ಈಶ್ವರನಿಗೂ ಸ್ರಷ್ಟೃತ್ವವನ್ನು ಒಪ್ಪಿ, ಪ್ರಕೃತಿಯಲ್ಲಿಯೂ ಜಗತ್ಕಾರಣತ್ವವನ್ನು ಒಪ್ಪುತ್ತಿರುವುದರಿಂದ ಅತಿವ್ಯಾಪ್ತಿದೋಷವನ್ನು ಹೇಳಿದಂತಾಗುತ್ತದೆ. ಆದ್ದರಿಂದ ಜನ್ಮಾಧಿಕರಣದಲ್ಲಿ ಹೇಳಲ್ಪಟ್ಟ ಜಗತ್ಕಾರಣತ್ವವಾಗಲೀ, ಜಗತ್ಸ್ರಷ್ಟೃತ್ವವಾಗಲೀ ಈಶ್ವರನಲ್ಲಿ ಯುಕ್ತವಾಗುವುದಿಲ್ಲ.

ಶ್ರುತಿಯಲ್ಲಿರುವ ಈಕ್ಷಣಾದಿಗಳಿಗೆ ಗೌಣಾರ್ಥವನ್ನು ಆಶ್ರಯಿಸಬೇಕಾಗಿಲ್ಲ. ವಿವರ್ತಮತದಲ್ಲಿ ನಿರ್ವಿಕಾರಬ್ರಹ್ಮನಿಗೆ ತಾತ್ವಿಕವಾದ ವಿಕಾರವನ್ನು ಒಪ್ಪದಿದ್ದರೂ ಅತಾತ್ವಿಕವಾದ ವಿಕಾರವನ್ನು ಹೇಗೆ ಒಪ್ಪಿದ್ದಾರೋ, ಅದರಂತೆ ಅಚೇತನವಾದ ಪ್ರಕೃತಿಗೆ ತಾತ್ವಿಕವಾದ ಈಕ್ಷಣವನ್ನು ಒಪ್ಪಲು ಸಾಧ್ಯವಾಗದಿದ್ದರೂ ಅತಾತ್ವಿಕವಾದ ಈಕ್ಷಣವನ್ನು ಒಪ್ಪಬಹುದು. ಇದು ಎರಡನೆಯ ಪೂರ್ವಪಕ್ಷ.

ಅಥವಾ ವಿಶಿಷ್ಟಬ್ರಹ್ಮನಿಗೆ ಉಪಾದಾನಕಾರಣತ್ವವನ್ನು ಒಪ್ಪುವ ಅದ್ವೈತ ಮತದಲ್ಲಿ ವಿಶೇಷ್ಯನಲ್ಲಿ ನಿರ್ವಿಕಾರತ್ವವಿದ್ದರೂ ವಿಶಿಷ್ಟನಲ್ಲಿ ತಾತ್ವಿಕವಾದ ವಿಕಾರವೇ ಇರುತ್ತದೆಂದು ಒಪ್ಪಿದ್ದಾರೆ. ಅದರಂತೆ ಪ್ರಧಾನವು

ಅಚೇತನವಾಗಿದ್ದರೂ ಅಭಿಮಾನಿ ಚೇತನರಿಂದ ವಿಶಿಷ್ಟವಾದಾಗ ಅದಕ್ಕೆ ತಾತ್ವಿಕವಾದ ಈಕ್ಷಣವನ್ನೇ ಒಪ್ಪಬಹುದೆಂಬುದು ಮೂರನೆಯ ಪೂರ್ವಪಕ್ಷ.

ಸಾಂಖ್ಯಮತವನ್ನೇ ಅವಲಂಬಿಸಿ ಈ ಅಧಿಕರಣದ ಪೂರ್ವಪಕ್ಷವು ಹೊರಟಿಲ್ಲ. ಆದ್ದರಿಂದ ಶ್ರುತಿಯಲ್ಲಿ ಹೇಳಿದ್ದನ್ನು ಅವಲಂಬಿಸಿ ಪೂರ್ವಪಕ್ಷವು ಹೇಗೆ ಸುದೃಢವಾಗುತ್ತದೆಂಬುದನ್ನು ಗಮನಹರಿಸಬೇಕು. ಶ್ರುತಿಯಲ್ಲಿ ಒಂದೆಡೆ ಜಗತ್ಕಾರಣವಾದದ್ದಕ್ಕೆ ಈಕ್ಷಣವನ್ನು ಹೇಳಲಾಗಿದೆ. ಮತ್ತೊಂದೆಡೆ ಜಡತ್ವವನ್ನು ಹೇಳಲಾಗಿದೆ. ಶ್ರುತಿಯಲ್ಲಿ ಹೇಳಿರುವ ಕಾರಣದಿಂದಲೇ ಜಡತ್ವ ಹಾಗೂ ಈಕ್ಷಣಗಳಿಗೆ ಲೋಕದಲ್ಲಿ ವಿರೋಧವಿದ್ದರೂ ಪ್ರಕೃತ ಪ್ರಧಾನದ ವಿಷಯದಲ್ಲಿ ವಿರೋಧವಿರುವುದಿಲ್ಲ. ಹಿಂದಿನ ಅಧಿಕರಣದಲ್ಲಿ 'ಶ್ರುತಿಯಲ್ಲಿ ಹೇಳಿದೆ' ಎಂಬ ಕಾರಣದಿಂದಲೇ ಒಬ್ಬನೇ ಬ್ರಹ್ಮನಲ್ಲಿ ಅಣುತ್ವ ಹಾಗೂ ಮಹತ್ತ್ವಗಳನ್ನು ಸಿದ್ಧಾಂತಿಗಳೇ ಒಪ್ಪಿದ್ದಾರೆ. ಆ ಅಧಿಕರಣದ ಸಿದ್ಧಾಂತನ್ಯಾಯವನ್ನೇ ಇಲ್ಲಿಯೂ ವಿವಕ್ಷಿಸಿ ಪೂರ್ವಪಕ್ಷವು ಉದಯವಾಗುತ್ತದೆ.

ಅಥವಾ ಪ್ರಕೃತಿಯು ಸಾಂಶವಾದ ಪದಾರ್ಥ. ಒಂದಂಶದಿಂದ ಚೇತನತ್ವ, ಸ್ರಷ್ಟೃತ್ವಗಳೂ ಇದರಲ್ಲಿ ಇರುತ್ತದೆ. ಮತ್ತೊಂದು ಅಂಶದಿಂದ ಅಚೇತನತ್ವ, ವಿಕಾರಿತ್ವಗಳೂ ಕೂಡ ಇರುತ್ತದೆ. ಹೀಗೆ ಹೇಳಿದಾಗ, ಪ್ರಧಾನದಲ್ಲಿ ಜಗತ್ ಸ್ರಷ್ಟೃತ್ವವನ್ನು ಸುಲಭವಾಗಿ ಸಮರ್ಥಿಸಿದಂತಾಗುತ್ತದೆ. ಹೀಗೆ ಪ್ರಧಾನವೇ ಜಗತ್ಕಾರಣವೆಂದು, ಜಗತ್ ಸ್ರಷ್ಟೃವೆಂದು ಹೇಳಲು ಬರುವ ಕಾರಣ ಜನ್ಮಾಧಿಕರಣದಲ್ಲಿ ಜಗತ್ಕಾರಣತ್ವವು ಮಹಾವಿಷ್ಣುವಿನ ಲಕ್ಷಣವೆಂದು ಹೇಳಿದ್ದು ತಪ್ಪಾಗುತ್ತದೆ.

ಈ ಅಧಿಕರಣದಲ್ಲಿ 'ಸದಾಯತನಾಃ' ಎಂಬ ವಿಷಯವಾಕ್ಯವನ್ನು ಗಮನಿಸಿದಾಗ ಸರ್ವಾಧಾರತ್ವವೇ ಮೊದಲಾದ ಧರ್ಮಗಳೂ ಕೂಡ ತೋರುತ್ತವೆ. ಇವುಗಳನ್ನು ಆಕ್ಷೇಪ ಮಾಡಿದಾಗ, ಹಿಂದಿನ ಅಧಿಕರಣದಿಂದ ಅಥವಾ ದ್ಯುಭ್ವಾದ್ಯಧಿಕರಣದಿಂದ ಸಂಗತಿಯನ್ನು ಸುಲಭವಾಗಿ ತೋರಿಸಿದಂತಾಗುತ್ತದೆ. ಇದನ್ನು ಬಿಟ್ಟು ಜನ್ಮಾಧಿಕರಣದಿಂದ ಆಕ್ಷೇಪ ತೋರಿಸುವುದು ಗೌರವವಲ್ಲವೇ? ಎಂಬ ಪ್ರಶ್ನೆಗೆ ಹೀಗೆ ಉತ್ತರ ತಿಳಿಯಬೇಕು. ಸಮನ್ವಯಾಧ್ಯಾಯದಲ್ಲಿರುವ ಪ್ರತಿಯೊಂದು ಅಧಿಕರಣಗಳೂ ಕೂಡ ಜನ್ಮಾಧಿಕರಣದಲ್ಲಿ ಹೇಳಲ್ಪಟ್ಟ ಜಗಜ್ಜನ್ಮಾದಿಕಾರಣತ್ವ ಲಕ್ಷಣವನ್ನು ಸಮರ್ಥಿಸುವುದಕ್ಕಾಗಿಯೇ ಹೊರಟಿವೆ. ಜನ್ಮಾಧಿಕರಣದಿಂದ ನೇರವಾಗಿ ಆಕ್ಷೇಪ ತೋರಿಸಿದ್ದರಿಂದ ಈ ಪ್ರಮೇಯವನ್ನು ತಿಳಿಸಿದಂತಾಗುತ್ತದೆ.

ಅಥವಾ ಜಿಜ್ಞಾಸಾಧಿಕರಣದಿಂದಲೂ ಕೂಡ ಆಕ್ಷೇಪಮಾಡಬಹುದು. ಏಕೆಂದರೆ 'ಸತ್'ಶಬ್ದದಿಂದ ಪ್ರತಿಪಾದ್ಯನಾದವನು ವಿಷ್ಣುವಾಗದಿದ್ದರೆ, 'ಸೋऽಕಾಮಯತ ಬಹುಸ್ಯಾಂ ಪ್ರಜಾಯೇಯ' ಎಂಬ ಶ್ರುತಿಯಲ್ಲಿ ಪ್ರತಿಪಾದ್ಯನಾದ ಆನಂದಮಯನೂ ಕೂಡ ವಿಷ್ಣುವಾಗಲು ಸಾಧ್ಯವಿಲ್ಲ. ಆಗ ಆನಂದಮಯನ ಅವಯವವೆನಿಸಿದ ಬ್ರಹ್ಮನೂ ಕೂಡ ವಿಷ್ಣುವಾಗುವುದಿಲ್ಲವೆಂದು ಆಕ್ಷೇಪವನ್ನು ತೋರಿಸಬಹುದಿತ್ತು. ಅಂದರೆ ಜಿಜ್ಞಾಸಾಧಿ ಕರಣದಿಂದ ನೇರವಾಗಿ ಆಕ್ಷೇಪವನ್ನು ತೋರಿಸಬೇಕೆಂದರೆ, ಆನಂದಮಯನನ್ನು ಆಕ್ಷೇಪ ಮಾಡುವ ಮೂಲಕ ತೋರಿಸಬೇಕಾಗುತ್ತದೆ. ಇದು ದೀರ್ಘವಾದ್ದರಿಂದ ಸುಲಭವಾಗಿ ಜನ್ಮಾಧಿಕರಣದಿಂದ ಆಕ್ಷೇಪವನ್ನು ತಿಳಿಯಬೇಕು.

ಅನುವ್ಯಾಖ್ಯಾನದಲ್ಲಿ ಸ್ಥಾನದ ಸಮನ್ವಯವನ್ನು ಈ ಅಧಿಕರಣದ ಪ್ರಮೇಯವನ್ನಾಗಿ ಹೇಳಿದ್ದಾರೆ. ಇದರಿಂದ ಸ್ರಷ್ಟೃತ್ವಧರ್ಮವನ್ನು ಆಕ್ಷೇಪ ಮಾಡುವುದಷ್ಟೇ ಅಲ್ಲದೇ ಸರ್ವೋತ್ತಮತ್ವವೇ ಮೊದಲಾದ ಉಳಿದ ಬ್ರಹ್ಮನ ಧರ್ಮಗಳನ್ನೂ ಕೂಡ ಆಕ್ಷೇಪ ಮಾಡಬೇಕೆಂದು ತಿಳಿಯಬೇಕು.

ಸಿದ್ಧಾಂತ ಹೀಗಿದೆ - ಹಿಂದೆ ಮಾಡಿದ ಐದು ಬಗೆಯ ಪೂರ್ವಪಕ್ಷಗಳಲ್ಲಿ ಮೊದಲನೆಯ ಪೂರ್ವಪಕ್ಷದ ನಿರಾಕರಣೆ ಹೀಗಿದೆ - ಪ್ರಕೃತಿಯೇ 'ಸತ್' ಶಬ್ದ ವಾಚ್ಯವಾದರೆ ಈಕ್ಷಣವನ್ನು ಗೌಣವನ್ನಾಗಿ ವ್ಯಾಖ್ಯಾನಿಸಬೇಕಾದರೂ ಬಹುಭವನವನ್ನು ಗೌಣವನ್ನಾಗಿ ಸ್ವೀಕರಿಸಬೇಕಾಗಿಲ್ಲವೆಂದು ಪೂರ್ವಪಕ್ಷದಲ್ಲಿ ಹೇಳಿದ್ದರು. ಆದರೆ ಈಕ್ಷಣದ ಜೊತೆಗೆ ಬಹುಭವನವನ್ನೂ ಸಹ ಗೌಣವೆಂದೇ ಅವರು ಒಪ್ಪಬೇಕಾಗುತ್ತದೆ. ಏಕೆಂದರೆ 'ತತ್ತೇಜ ಐಕ್ಷತ ತದತಪೋ ಅಸೃಜತ' ಇತ್ಯಾದಿ ಶ್ರುತಿಯಲ್ಲಿ ಹೇಳಲ್ಪಟ್ಟ 'ತೇಜಸ್' ಮೊದಲಾದ ಶಬ್ದಗಳು ಜಡಪದಾರ್ಥವನ್ನು ಪ್ರತಿಪಾದಿಸುತ್ತಿಲ್ಲ ಹೊರತಾಗಿ, ದೇವತೆಗಳನ್ನೇ ಪ್ರತಿಪಾದಿಸುತ್ತಿವೆ. ಪ್ರಕೃತಿಗೆ ದೇವತಾಸ್ವರೂಪವನ್ನು ತಾಳಲು ಸಾಧ್ಯವಿಲ್ಲ. ಹಾಗಾಗಿ 'ಸತ್' ಪದಾರ್ಥದಿಂದ 'ತೇಜಸ್' ಮೊದಲಾದವುಗಳು ಹುಟ್ಟಿದವು ಎಂಬ ಶ್ರುತಿಗೆ ಪ್ರಕೃತಿಪರತ್ವವನ್ನು ಸುಲಭವಾಗಿ ಹೇಳಲು ಅವರಿಂದಾಗದು.

ಆದರೆ ಬ್ರಹ್ಮನೇ 'ಸತ್' ಶಬ್ದದಿಂದ ಪ್ರತಿಪಾದ್ಯನಾದಾಗ ಈ ಸಮಸ್ಯೆ ಬರುವುದಿಲ್ಲ. ಬ್ರಹ್ಮನು ಚೇತನನಾದ್ದರಿಂದ ಈಕ್ಷಣವನ್ನು ಮುಖ್ಯವಾಗಿ ಹೇಳಬಹುದು. ಬಹುಭವನವೂ ಸಹ ಪ್ರಾದುರ್ಭಾವರೂಪದಿಂದ ಮುಖ್ಯವಾಗಿಯೇ ಉಪಪನ್ನವಾಗುತ್ತದೆ. ಬ್ರಹ್ಮನು ಒಬ್ಬನೇ ಆಗಿದ್ದರೂ, ಅಜಾಯಮಾನನಾಗಿದ್ದರೂ ಕೂಡ ದ್ಯುಭ್ವಾದ್ಯಧಿಕರಣದಲ್ಲಿ ಹಾಗೂ ಗುಹಾಧಿಕರಣದಲ್ಲಿ ಹೇಳಿದಂತೆ ಅನೇಕ ರೂಪಗಳಿಂದ ಪ್ರಾದುರ್ಭಾವವಾಗುವಿಕೆ ಮತ್ತು ಪ್ರಾದುರ್ಭಾವವಿರುವುದರಿಂದ ಹುಟ್ಟುವಿಕೆ ಮೊದಲಾದವುಗಳೂ ಕೂಡ ಅವನಲ್ಲಿ ಯುಕ್ತವಾಗುತ್ತದೆಂದು ತಿಳಿಯಬೇಕು. ಆದ್ದರಿಂದ 'ಸತ್' ಶಬ್ದದಿಂದ ಪ್ರತಿಪಾದ್ಯನಾದವನು ಬ್ರಹ್ಮನೇ ಆಗುತ್ತಾನೆ.

ಪರಮಾತ್ಮನು ಅನೇಕ ರೂಪಗಳನ್ನು ತಾಳಲು ಸಂಕಲ್ಪ ಮಾಡಿದನು. ಅನಂತರ ಆ ರೂಪಗಳ ಅಧಿಷ್ಠಾನಕ್ಕಾಗಿ ಸಮಸ್ತ ಜಗತ್ತಿನಲ್ಲಿ ನಾನಾವಿಧವಾದ ಪದಾರ್ಥಗಳನ್ನು ಸೃಷ್ಟಿ ಮಾಡಿದನು. ಅನಂತರ ಆ ಪದಾರ್ಥಗಳ ಒಳಗಡೆ ನಿಯಾಮಕನಾಗಿ ಪ್ರವೇಶ ಮಾಡಿದನು. ಹೀಗೆ ಶ್ರುತಿಯು ಹೇಳುತ್ತಿದೆ. ನಿಯಾಮಕವಾದ ಅನೇಕ ರೂಪಗಳನ್ನು ತಾಳಬೇಕೆಂದು ಸಂಕಲ್ಪ ಮಾಡಿ, ನಿಯಮ್ಯ ಪದಾರ್ಥಗಳನ್ನು ಸೃಷ್ಟಿ ಮಾಡುವುದೇನೂ ತಪ್ಪಾಗುವುದಿಲ್ಲ. ನಾನು ಗುರುವಾಗಬೇಕು ಎಂಬ ಸಂಕಲ್ಪವನ್ನು ಮಾಡಿರುವಂತಹ ವ್ಯಕ್ತಿಯು ಶಿಷ್ಯ ಸಂಪಾದನೆಯಲ್ಲಿ ತೊಡಗಿರುತ್ತಾನೆ. ನಾನು ರಾಜನಾಗಬೇಕೆಂದು ಸಂಕಲ್ಪಿಸಿದ ವ್ಯಕ್ತಿಯು ಭೃತ್ಯರ ಸಂಪಾದನೆಯಲ್ಲಿ ತೊಡಗುತ್ತಾನೆ. ಇವುಗಳು ಹೇಗೆ ತಪ್ಪಲ್ಲವೋ, ಅದರಂತೆ ಅನೇಕ ರೂಪಗಳನ್ನು ತಾಳಬೇಕೆಂದು ಸಂಕಲ್ಪಮಾಡಿದ ಪರಮಾತ್ಮನ ವಿಷಯದಲ್ಲೂ ಅನೇಕ ಪದಾರ್ಥಗಳ ಸೃಷ್ಟಿ ಮಾಡುವಿಕೆಯು ತಪ್ಪಾಗುವುದಿಲ್ಲ. ಈ ಅಭಿಪ್ರಾಯದಿಂದಲೇ 'ಸಚ್ಚ ತ್ಯಚ್ಚಾಭವತ್' ಎಂಬ ಶ್ರುತಿ ಮತ್ತು 'ಬಹು ಸ್ಯಾಂ ಪ್ರಜಾಯೇಯ' ಎಂಬ ಶ್ರುತಿಯು ಹೊರಟಿದೆ. ಆದ್ದರಿಂದ ಪರಮಾತ್ಮನೇ 'ಸತ್' ಶಬ್ದದಿಂದ ವಾಚ್ಯನಾದಾಗ ಅವನಲ್ಲಿಯೇ ಈಕ್ಷಣ ಮತ್ತು ಬಹುಭವನಗಳೆರಡೂ ಮುಖ್ಯವಾಗಿಯೇ ಉಪಪನ್ನವಾಗುತ್ತದೆ.

ಈ ಹಿಂದೆ ಮೊದಲನೆಯ ಪೂರ್ವಪಕ್ಷವನ್ನು ನಿರಾಕರಿಸಿದ್ದಾಯಿತು. ಈಗ ಉಳಿದ ನಾಲ್ಕು ಬಗೆಯ ಪೂರ್ವಪಕ್ಷಗಳೂ ಸಹ ಅಸಮಂಜಸವಾಗಿವೆಯೆಂದು ನಿರಾಕರಿಸಲಾಗಿದೆ. ಎರಡನೆಯ ಹಾಗೂ ಮೂರನೆಯ ಪೂರ್ವಪಕ್ಷಗಳು ವಿವರ್ತಮತ ಮತ್ತು ವಿಕಾರಮತಗಳಲ್ಲಿ ಸೇರ್ಪಡೆಯಾಗುವುದರಿಂದ ಪ್ರಕೃತ್ಯಧಿಕರಣದಲ್ಲಿ ಇವುಗಳನ್ನು ವಿವರವಾಗಿ ನಿರಾಕರಿಸಲಾಗಿದೆ. ನಾಲ್ಕನೆಯ ಪೂರ್ವಪಕ್ಷದಲ್ಲಿ ವಿಚಿತ್ರಶಕ್ತಿಯೋಗಿತ್ವ ಮತ್ತು ವಿರುದ್ಧಗುಣಭಾಗಿತ್ವ ಎಂಬೆರಡು ಧರ್ಮಗಳು ಬ್ರಹ್ಮನಲ್ಲಿ ಮಾತ್ರ ಇರುತ್ತವೆಂದು ಸಾಧಿಸಲಾಗದು. ಬ್ರಹ್ಮನಂತೆ

ಪ್ರಕೃತಿಯಲ್ಲೂ ಕೂಡ ಈ ಧರ್ಮಗಳು ಇರುತ್ತವೆ. ಐದನೆಯ ಪೂರ್ವಪಕ್ಷದಲ್ಲಿ ಪ್ರಕೃತಿಯನ್ನು ಎರಡು ಭಾಗ ಮಾಡಿ ಚೇತನಾಚೇತನತ್ವವನ್ನು ಒಪ್ಪುವುದು ಅತ್ಯಂತ ಕಠಿಣ ಕಲ್ಪನೆಯಾಗಿದೆ. ಆದ್ದರಿಂದ ಬ್ರಹ್ಮನೇ 'ಸತ್' ಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆಂದು ಹೇಳುವುದೇ ಅತ್ಯಂತ ಶ್ರೇಷ್ಠ.

ಸೂತ್ರದಲ್ಲಿ 'ಕರ್ಮ' ಎಂಬ ಪದವನ್ನೇಕೆ ಹೇಳಿದರು. ಶ್ರುತಿಯಲ್ಲಿ ಈಕ್ಷಣವು ಹೇಳಲ್ಪಟ್ಟಿದ್ದರಿಂದ ಭಗವಂತನೇ 'ಸತ್' ಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆಂದು ತಿಳಿಸಲು 'ಈಕ್ಷತಿ ವ್ಯಪದೇಶಾತ್ ಸಃ' ಎಂದಷ್ಟೇ ಹೇಳಿದ್ದರೆ ಸಾಕಾಗುತ್ತಿತ್ತು. ಕರ್ಮಪದವನ್ನು ಹೇಳಿದ್ದರಿಂದ ಹೆಚ್ಚಿನ ವಿಷಯವನ್ನೇನೂ ತಿಳಿಸಿದಂತಾಗಲಿಲ್ಲವಲ್ಲ ಎಂಬ ಪ್ರಶ್ನೆಗೆ ಟೀಕೆಯ ಪ್ರಕಾರ ಹೀಗೆ ಸಮಾಧಾನ ತಿಳಿಯಬೇಕು. ಪರಮಾತ್ಮನು ಜ್ಞಾನಸ್ವರೂಪನಾದ್ದರಿಂದ 'ಏಕ್ಷತ' ಎಂಬಲ್ಲಿ ಹೇಳಲ್ಪಟ್ಟ ಜ್ಞಾನಕರ್ತೃತ್ವವನ್ನು ಅವನಲ್ಲಿ ಹೇಳಲು ಸಾಧ್ಯವಿಲ್ಲ. ಏಕೆಂದರೆ ಲೋಕದಲ್ಲಿ ಕ್ರಿಯೆ ಹಾಗೂ ಕರ್ತೃತ್ವಗಳಿಗೆ ಭೇದವೇ ಇರುತ್ತದೆ. ದೇವದತ್ತನು ಕೊಡಲಿಯಿಂದ ಮರವನ್ನು ಕಡಿಯುತ್ತಾನೆ ಎಂದು ಹೇಳಿದಾಗ 'ಕಡಿಯುವಿಕೆ' ಎಂಬ ಕ್ರಿಯೆಗೂ, ದೇವದತ್ತನಿಗೂ ಭೇದವೇ ಇರುತ್ತದೆ ಹೊರತು, ಕಡಿಯುವಿಕೆಯೇ ದೇವದತ್ತನಾಗಲು ಸಾಧ್ಯವಿಲ್ಲ. ಅದರಂತೆ ಜ್ಞಾನಸ್ವರೂಪನಾದ ಬ್ರಹ್ಮನು ಜ್ಞಾನಾಶ್ರಯನಾಗಲು ಸಾಧ್ಯವಿಲ್ಲ. ಹಾಗಾಗಿ 'ಸತ್ಯಂ ಜ್ಞಾನಮ್ ಅನಂತಂ ಬ್ರಹ್ಮ' ಎಂಬ ಶ್ರುತಿಯಿಂದ ಜ್ಞಾನರೂಪನೆಂದು ನಿರ್ಣೀತನಾದ ಬ್ರಹ್ಮನಿಗೆ 'ಏಕ್ಷತ' ಎಂಬುದಾಗಿ ಜ್ಞಾನಕರ್ತೃತ್ವವನ್ನು ಹೇಗೆ ಹೇಳುತ್ತೀರಿ? ಎಂಬ ಪ್ರಶ್ನೆಯು ಬರುತ್ತದೆ. ಇದರ ಪರಿಹಾರಕ್ಕೋಸ್ಕರ ಸೂತ್ರಕಾರರು 'ಈಕ್ಷತಿಕರ್ಮ' ಎಂಬ ಪದವನ್ನು ಪ್ರಯೋಗಿಸಿದ್ದಾರೆ. ಅಂದರೆ 'ಜ್ಞಾನರೂಪವಾದ ಕ್ರಿಯೆ' ಎಂದು ಒತ್ತಿ ಹೇಳಿದ್ದರಿಂದ ಜ್ಞಾನಕರ್ತೃವಾಗಿದ್ದರೂ ಪರಮಾತ್ಮನು ಜ್ಞಾನಸ್ವರೂಪನು ಆಗುತ್ತಾನೆಂದು ಹೇಳಿದಂತಾಗುತ್ತದೆ. ಇಲ್ಲಿರುವ ಕರ್ಮಪದಕ್ಕೆ 'ಕ್ರಿಯೆ' ಎಂದರ್ಥ. ಭಗವಂತನ ವಿಷಯದಲ್ಲಿ ಕ್ರಿಯೆಗೂ ಕರ್ತೃತ್ವಕ್ಕೂ ಭೇದವಿರಬೇಕೆಂಬ ನಿಯಮವಿಲ್ಲ. ವಿಶೇಷದ ಬಲದಿಂದ ಈ ಕ್ರಿಯಾಕರ್ತೃಭಾವವು ಉಪಪನ್ನವಾಗುತ್ತದೆ. ಇದು ಟೀಕಾರಾಯರ ಅಭಿಪ್ರಾಯ.

ತತ್ವಪ್ರದೀಪಕಾರರ ಅಭಿಪ್ರಾಯ ಹೀಗಿದೆ - ಸೂತ್ರದಲ್ಲಿ ಇರುವ ಕರ್ಮಶಬ್ದಕ್ಕೆ 'ಸೃಷ್ಟ್ಯಾದಿ ಕ್ರಿಯೆ' ಎಂದರ್ಥ. ಗೀತಾತಾತ್ಪರ್ಯದಲ್ಲಿ ಶ್ರೀಮದಾಚಾರ್ಯರು 'ನ ಕರ್ತೃತ್ವಂ ನ ಕರ್ಮಾಣಿ' ಎಂಬ ಶ್ಲೋಕಕ್ಕೆ ವ್ಯಾಖ್ಯಾನವನ್ನು ಮಾಡುವಾಗ ಕರ್ಮಶಬ್ದಕ್ಕೆ ಅದೃಷ್ಟೋತ್ಪಾದನವೆಂಬ ಕ್ರಿಯಾವಿಶೇಷವೆಂಬರ್ಥವನ್ನು ಹೇಳುತ್ತಾರೆ. ಅದರಂತೆ ಇಲ್ಲಿಯೂ ಕೂಡ ಸೃಷ್ಟ್ಯಾದಿ ಕ್ರಿಯಾವಿಶೇಷವೆಂಬರ್ಥವನ್ನು ತಿಳಿಸುವುದಕ್ಕಾಗಿ ಕರ್ಮಪದವನ್ನು ತಿಳಿಸಿರುತ್ತಾರೆ. ಹೀಗೆ ಕ್ರಿಯಾವಿಶೇಷವನ್ನು ಹೇಳಿದ್ದರಿಂದ ಪ್ರಧಾನ ಪಕ್ಷದಲ್ಲಿ ಈಕ್ಷಿತೃತ್ವವು ಅಯುಕ್ತವಾಗುತ್ತದೆಂದಷ್ಟೇ ಅಲ್ಲ, ಸ್ರಷ್ಟ್ರಾದಿಗಳೂ ಕೂಡ ಅಯುಕ್ತವಾಗುತ್ತದೆಂದು ತಿಳಿಯಬೇಕು.

ಸೂತ್ರದಲ್ಲಿರುವ ಕರ್ಮಪದವು ಹೇಗೆ ಸಾರ್ಥಕವೋ, ಅದರಂತೆ 'ಸಃ' ಎಂಬ ಪದವೂ ಕೂಡ ಸಾರ್ಥಕವಾಗಿದೆ. ವಾಸ್ತವಿಕವಾಗಿ 'ತತ್ತುಸಮನ್ವಯಾತ್' ಎಂಬ ಸೂತ್ರದಿಂದ 'ಸತ್' ಎಂಬ ಪದವೇ ಅನುವೃತ್ತವಾಗುತ್ತಿರುವಾಗ 'ಸಃ' ಎಂಬ ಪದವನ್ನೇಕೆ ಪ್ರತ್ಯೇಕವಾಗಿ ಹೇಳಿದರೆಂಬ ಪ್ರಶ್ನೆಯು ಪ್ರಾಪ್ತವಾಗುತ್ತದೆ. ಆದರೆ 'ಏಕೋ ನಾರಾಯಣ ಆಸೀತ್' ಮೊದಲಾದ ಸಮಾಖ್ಯಾಪ್ರಮಾಣವನ್ನು ಉಲ್ಲೇಖಿಸುವುದಕ್ಕಾಗಿ 'ತತ್' ಎಂಬುದನ್ನು ಅನುಷಂಗ ಮಾಡಿಕೊಳ್ಳದೇ 'ಸಃ' ಎಂಬ ಪದವನ್ನು ಉಲ್ಲೇಖಿಸಿದ್ದಾರೆ. ಆದ್ದರಿಂದ ಸೂತ್ರದಲ್ಲಿರುವ ಎಲ್ಲ ಪದಗಳು ಅತ್ಯಂತ ಅರ್ಥಪೂರ್ಣವಾಗಿವೆಯೆಂದು ಭಾವಿಸಬೇಕು.

ಸಾಮಾನ್ಯವಾಗಿ ಪ್ರತಿಯೊಂದು ಅಧಿಕರಣಗಳ ಪ್ರಥಮಸೂತ್ರದಲ್ಲಿ ಸಮನ್ವಯ ಮಾಡಬೇಕಾದ ಶಬ್ದವನ್ನು ಉಲ್ಲೇಖ ಮಾಡುತ್ತಾರೆ. ಆದರೆ ಇದೇ ಮೊದಲ ಬಾರಿ ಈ ಅಧಿಕರಣದ ಸೂತ್ರದಲ್ಲಿ ಸಮನ್ವಯ ಮಾಡಬೇಕಾದ ಶಬ್ದವನ್ನೇ ಸೂತ್ರಕಾರರು ಉಲ್ಲೇಖ ಮಾಡಿಲ್ಲ. ಇದಕ್ಕೆ ಕಾರಣ ಏನು? ಎಂಬ ಪ್ರಶ್ನೆಗೆ ಹಲವು ಬಗೆಯಲ್ಲಿ ಇದರ ಉತ್ತರವನ್ನು ತಿಳಿಯಬಹುದು -

ಸೂತ್ರದಲ್ಲಿರುವ ಹೇತುವನ್ನು ಗಮನಿಸಿ, ಶಿಷ್ಯಂದಿರೇ ಸ್ವತಃ ಸಮನ್ವಯ ಮಾಡಬೇಕಾದ ಶಬ್ದವನ್ನು ಊಹಿಸಿಕೊಳ್ಳಲಿ ಎಂದು ಉಲ್ಲೇಖ ಮಾಡದಿರಬಹುದು. ಅಥವಾ ಸ್ಥಾನದ ಸಮನ್ವಯವು ಈ ಅಧಿಕರಣದ ಉದ್ದೇಶವಾದ್ದರಿಂದ ಶಬ್ದವಿಶೇಷವನ್ನು ಉಲ್ಲೇಖ ಮಾಡಲು ಸಾಧ್ಯವಿಲ್ಲವೆಂದಿರಬಹುದು. ಅಥವಾ ಸೂತ್ರವು ಅಲ್ಪಾಕ್ಷರವಾಗಿರಲಿ ಎಂಬ ಉದ್ದೇಶವಿರಬಹುದು. ಅಥವಾ ಯಾವ ಸೂತ್ರದಲ್ಲಿ ಹೇತುವಿನಿಂದಲೇ ಸ್ಪಷ್ಟವಾಗಿ 'ಸಮನ್ವೇತವ್ಯಶಬ್ದ'ವು ತಿಳಿಯುತ್ತದೋ, ಅಲ್ಲಿ ಪುನಃ ಸಾಧ್ಯನಿರ್ದೇಶವನ್ನು ಮಾಡಬೇಕಾಗಿಲ್ಲವೆಂದು ಸೂಚಿಸುವ ಉದ್ದೇಶವಿರಬಹುದು. ಹೀಗೆ ಅನೇಕ ಉದ್ದೇಶಗಳಿಂದ ಸೂತ್ರಕಾರರು 'ಸಮನ್ವೇತವ್ಯಶಬ್ದ'ವನ್ನು ಸೂತ್ರದಲ್ಲಿ ಉಲ್ಲೇಖಿಸಿಲ್ಲ.

ಅಥವಾ 'ಈಕ್ಷತಿಕರ್ಮವ್ಯಪದೇಶಾತ್ಸಃ' ಎಂಬ ಸೂತ್ರದಲ್ಲಿ 'ಸಃ' ಎಂಬ ಪದವು ಸಮನ್ವೇತವ್ಯಶಬ್ದವೇ ಆಗಿದೆ. 'ಸ ಈಕ್ಷಾಂಚಕ್ರೇ' ಎಂಬ ಶ್ರುತಿಯಲ್ಲಿರುವ 'ಸಃ' ಎಂಬ ಪದವನ್ನೇ ಇದು ಉಲ್ಲೇಖ ಮಾಡುತ್ತಿರುವುದರಿಂದ ಸೂತ್ರಕಾರರು ಸಮನ್ವೇತವ್ಯಶಬ್ದವನ್ನು ಉಲ್ಲೇಖಿಸಿಲ್ಲವೆಂದು ಹೇಳಬಾರದು.

ದಹರಾಧಿಕರಣ

ದಹರಾಧಿಕರಣದಲ್ಲಿ 'ಹೃತ್ಪದ್ಮಸ್ಥತ್ವ' ಎಂಬ ಲಿಂಗವನ್ನು ಪರಮಾತ್ಮನಲ್ಲಿ ಸಮನ್ವಯ ಮಾಡುತ್ತಾರೆ. 'ಯೋ ವೇದ ನಿಹಿತಂ' ಎಂಬ ಶ್ರುತಿಯನ್ನು ನೋಡಿದಾಗ ಹೃತ್ಪದ್ಮಸ್ಥತ್ವಲಿಂಗವು ಪರಮಾತ್ಮನಲ್ಲಿ ಶ್ರುತವಾದರೂ ಕೂಡ 'ತಸ್ಯಾಂತೇ ಸುಷಿರಂ ಸೂಕ್ಷ್ಮಮ್' ಎಂಬ ಶ್ರುತಿಯಿಂದ ಆಕಾಶದಲ್ಲಿ ಹಾಗೂ 'ಹೃದಿ ಹ್ಯೇಷ' ಎಂಬ ಶ್ರುತಿಯಿಂದ ಜೀವನಲ್ಲಿ ಪ್ರಸಿದ್ಧವಾಗಿದೆಯೆಂದು ತೋರುತ್ತದೆ. ಹೀಗೆ ಪರಮಾತ್ಮ, ಭೂತಾಕಾಶ ಮತ್ತು ಜೀವ ಈ ಮೂವರಲ್ಲಿ 'ಹೃತ್ಪದ್ಮಸ್ಥತ್ವ' ಎಂಬ ಲಿಂಗವು ಸಾಧಾರಣವಾಗಿರುವುದರಿಂದ ಉಭಯತ್ರಪ್ರಸಿದ್ಧವೆಂದಂತಾಯಿತು. ಹೀಗೆ ಈ ಪಾದದಲ್ಲಿ ದಹರಾಧಿಕರಣವು ಸಂಗತವಾಗುತ್ತದೆಂದು ತಿಳಿಯಬೇಕು.

ಹಿಂದಿನ ಅಧಿಕರಣದಲ್ಲಿ ಯಾವ ಪರಮಾತ್ಮನಿಗೆ ಅನ್ವೇಷ್ಟವ್ಯತ್ವವನ್ನು ಹೇಳಲಾಯಿತೋ, ಅದನ್ನೇ ಇಲ್ಲಿ ಹೃತ್ಪದ್ಮಸ್ಥನಲ್ಲಿ ಹೇಳಲಾಗಿದೆ. ಮತ್ತು ಸರ್ವಾಧಾರತ್ವ, ಸೃಷ್ಟಿ-ಹೇತುತ್ವಗಳನ್ನೂ ಕೂಡ ಹೃತ್ಪದ್ಮಸ್ಥನಲ್ಲಿ ಹೇಳಿದ ಕಾರಣ, ಹೃತ್ಪದ್ಮಸ್ಥನು ವಿಷ್ಣುವಿಗಿಂತ ಭಿನ್ನನಾದರೆ, ಹಿಂದಿನ ಅಧಿಕರಣದಲ್ಲಿ ಪ್ರತಿಪಾದ್ಯನಾದವನೂ ಕೂಡ ಅನ್ಯನೇ ಆಗುತ್ತಾನೆಂದು ಆನಂತರ್ಯಸಂಗತಿಯನ್ನು ತಿಳಿಯಬೇಕು. ಇಷ್ಟು ಸಂಗತಿ ವಿಚಾರ.

ಒಂದು ವೇಳೆ 'ಯಾವಾನ್ವಾ ಅಯಮಾಕಾಶಃ' ಎಂಬ ಪ್ರತಿವಚನವು ಬ್ರಹ್ಮಪರವಾದಲ್ಲಿ ಎಲ್ಲವೂ ಕೂಡ ಬ್ರಹ್ಮನಲ್ಲೇ ಇದೆ ಎಂದು ನಿರ್ಣಯವಾಗುತ್ತದೆ. ಆವಾಗ 'ತಸ್ಯಾಂತೇ ಸುಷಿರಂ ಸೂಕ್ಷ್ಮಂ' ಎಂಬ ಸುಷಿರ ಶ್ರುತಿಯ ವಿರೋಧವು ಬರುತ್ತದೆ. ಏಕೆಂದರೆ ಸುಷಿರ ಶ್ರುತಿಯು ಎಲ್ಲಾ ಪದಾರ್ಥಗಳು ಭೂತಾಕಾಶದಲ್ಲಿದೆಯೆಂದೇ ಹೇಳುತ್ತಿದೆ. ಆದ್ದರಿಂದ 'ಯಾವಾನ್ವಾ' ಇತ್ಯಾದಿ ಪ್ರತಿವಚನವು ಭೂತಾಕಾಶವನ್ನು ಅನುವಾದ ಮಾಡಿ, ಅಂತಹ ಭೂತಾಕಾಶದಲ್ಲಿ

ದ್ಯಾವಾಪೃಥಿವ್ಯಾದಿಗಳೆಲ್ಲವೂ ಕೂಡ ಇರುತ್ತವೆಂದು ಅನ್ವೇಷಣೆ ಮಾಡಬೇಕೆಂದು ಪ್ರತಿಪಾದಿಸುತ್ತಿದೆಯೆಂದು ವ್ಯಾಖ್ಯಾನಿಸಬೇಕು. ಯಾವಾಗ ಪ್ರತಿವಚನವು ಭೂತಾಕಾಶಪರವೆಂದು ಸಿದ್ಧವಾಗುತ್ತದೋ, ಆವಾಗ ಹಿಂದಿನ ವಾಕ್ಯದಲ್ಲಿ ಹೇಳಲ್ಪಟ್ಟ, ಹೃತ್ಪದ್ಮಸ್ಥತ್ವವು ಕೂಡ ಭೂತಾಕಾಶದಲ್ಲಿಯೇ ಪ್ರಾಪ್ತವಾಗುತ್ತದೆ. ಈ ಪ್ರತಿವಚನಕ್ಕೆ ಅನುಸಾರಿಯಾಗಿ ಅಪಹತಪಾಪ್ಮತ್ವಾದಿಗಳನ್ನು ಗೌಣವಾಗಿ ವ್ಯಾಖ್ಯಾನಿಸಬೇಕು. ಹಿಂದೆ ಹೇಳಲ್ಪಟ್ಟ ಹೃತ್ಪದ್ಮಸ್ಥತ್ವವನ್ನೂ ಕೂಡ ಭೂತಾಕಾಶದಲ್ಲಿಯೇ ಹೇಳಬೇಕು. ಇದು ಪೂರ್ವಪಕ್ಷಕಾರರ ಉದ್ದೇಶ.

ಒಂದುವೇಳೆ 'ಯಾವಾನ್ವಾ' ಎಂಬ ಪ್ರತಿವಚನವು 'ಕಿಂ ತದತ್ರ ವಿದ್ಯತೇ' ಎಂಬ ಪ್ರಶ್ನೆಗೆ, ಆಕಾಶಶಬ್ದ ಪ್ರತಿಪಾದ್ಯನಾದ ಬ್ರಹ್ಮನೇ ಇದ್ದಾನೆಂದು ಅವನನ್ನೇ ಅನ್ವೇಷಣೆ ಮಾಡಬೇಕೆಂದು ಬ್ರಹ್ಮಪರವಾಗಿ ಉತ್ತರ ನೀಡುವುದಾದರೆ, ವಿಷ್ಣುವೇ ಸಕಲ ಪದಾರ್ಥಗಳಿಗೂ ಆಧಾರನಾಗಿ ಹೃತ್ಪದ್ಮಸ್ಥಿತನೆಂದು ಸಿದ್ಧವಾಗುತ್ತದೆ. ಆವಾಗ ಪ್ರತಿವಚನದ ವಾಕ್ಯವಿರೋಧವು ಬರುವುದಿಲ್ಲ.ಹಿಂದೆ ಹೇಳಲ್ಪಟ್ಟ ಹೃತ್ಪದ್ಮಸ್ಥತ್ವವೆಂಬ ಲಿಂಗವೂ ಕೂಡ ವಿಷ್ಣುವಿನಲ್ಲೇ ಯುಕ್ತವಾಗುತ್ತದೆ.

ಆದ್ದರಿಂದ ಅಪಹತಪಾಪ್ಮತ್ವವೇ ಮೊದಲಾದ ಲಿಂಗಗಳೆಲ್ಲವೂ ಮುಖ್ಯವಾಗಿಯೇ ಉಪಪನ್ನವಾಗುತ್ತವೆ. ಮತ್ತು ಸುಷಿರಶ್ರುತಿಯ ವಿರೋಧವೂ ಕೂಡ ಬರುವುದಿಲ್ಲ. ಸುಷಿರಕ್ಕೆ ದ್ಯಾವಾಪೃಥಿವ್ಯಾದ್ಯಾಶ್ರಯತ್ವವು ಅತ್ಯಂತ ಅಯುಕ್ತವಾದ್ದರಿಂದ ಸುಷಿರದಲ್ಲಿರುವ ಪರಮಾತ್ಮನು ದ್ಯಾವಾಪೃಥಿವ್ಯಾದಿಗಳಿಗೆಲ್ಲಾ ಆಶ್ರಯ- ನಾಗಿದ್ದಾನೆಂಬ ಅಭಿಪ್ರಾಯದಿಂದ ಸುಷಿರಶ್ರುತಿಯು ಸುಷಿರಕ್ಕೆ ಸರ್ವಾಧಾರತ್ವವನ್ನು ಹೇಳುತ್ತಿದೆ. ಆದ್ದರಿಂದ ಸುಷಿರಶ್ರುತಿಯ ವಿರೋಧಕ್ಕೂ ಅವಕಾಶವಿಲ್ಲ. ಹೀಗೆ ಹೃತ್ಪದ್ಮಸ್ಥತ್ವವೆಂಬ ಲಿಂಗವು ವಿಷ್ಣುವಿನಲ್ಲಿ ಮಾತ್ರ ಇರುತ್ತದೆಂದು ಸಿದ್ಧವಾಗುತ್ತದೆ. ಇದು ಸಿದ್ಧಾಂತಿಗಳ ಉದ್ದೇಶ.

ಈ ಅಧಿಕರಣದಲ್ಲಿ 'ದಹರೋऽಸ್ಮಿನ್ ಅಂತರಾಕಾಶಃ' ಎಂಬ ವಾಕ್ಯದಲ್ಲಿರುವ ಹೃತ್ಪದ್ಮಸ್ಥತ್ವದ ಬಗ್ಗೆ ವಿಚಾರ ಮಾಡುತ್ತಿಲ್ಲ. ಏಕೆಂದರೆ ಇದು ಭೂತಾಕಾಶನಿಷ್ಠವೆಂದು ಸಿದ್ಧಾಂತದಲ್ಲಿಯೂ ಒಪ್ಪಲಾಗಿದೆ.

'ತಸ್ಮಿನ್ಯದಂತಸ್ತದನ್ವೇಷ್ಟವ್ಯಮ್' ಎಂಬ ವಾಕ್ಯದಲ್ಲಿರುವ ಹೃತ್ಪದ್ಮಸ್ಥತ್ವದಹರಾಕಾಶಸ್ಥತ್ವವೆಂಬ ಲಿಂಗದ- ಸಮನ್ವಯವು ಈ ಅಧಿಕರಣದ ಉದ್ದೇಶವಲ್ಲ. ಏಕೆಂದರೆ ಈ ವಾಕ್ಯದಲ್ಲಿ ಆಕಾಶಶಬ್ದವೆಂಬ ಪೂರ್ವಪಕ್ಷ ಬೀಜವೇ ಇರುವುದಿಲ್ಲ.

'ಸರ್ವಾಧಾರತ್ವ' ಎಂಬ ಲಿಂಗದ ಸಮನ್ವಯವೂ ಕೂಡ ಈ ಅಧಿಕರಣದ ಉದ್ದೇಶವಲ್ಲ. 'ಚಂದ್ರಾದ್ಯಾಧಾರತ್ವಮ್' ಇತ್ಯಾದಿ ಭಾಷ್ಯದ ಮಾತನ್ನು ನೋಡಿದಾಗ ಸರ್ವಾಧಾರತ್ವದ ಸಮನ್ವಯವನ್ನು ಮಾಡುತ್ತಿರಬಹುದೆಂದು ತೋರುತ್ತದೆ. ಆದರೆ 'ಲಿಂಗಂ ಹೃತ್ಪದ್ಮಸ್ಥತ್ವಂ' ಎಂಬ ನ್ಯಾಯವಿವರಣದಲ್ಲಿ ಹಾಗೂ 'ಸೋऽಕ್ಷರಃ ಸನ್ಹೃದಬ್ಜಗಃ' ಎಂಬ ಅಣುಭಾಷ್ಯದಲ್ಲಿ ಶ್ರೀಮದಾಚಾರ್ಯರೇ ಸ್ಪಷ್ಟವಾಗಿ 'ಹೃತ್ಪದ್ಮಸ್ಥತ್ವ' ಎಂಬ ಲಿಂಗದ ಸಮನ್ವಯವೇ ಈ ಅಧಿಕರಣದ ಉದ್ದೇಶವೆಂದು ಹೇಳಿರುತ್ತಾರೆ.

ಆದ್ದರಿಂದ 'ಯಾವಾನ್ವಾ ಅಯಮಾಕಾಶಃ ತಾವಾನೇಷೋऽಂತರ್ಹೃದಯೇ' ಎಂಬ ವಾಕ್ಯದಲ್ಲಿರುವ 'ಹೃತ್ಪದ್ಮಸ್ಥತ್ವ' ಎಂಬ ಲಿಂಗದ ಸಮನ್ವಯವೇ ಈ ಅಧಿಕರಣದ ಉದ್ದೇಶವೆಂದು ಸ್ಪಷ್ಟವಾಗಿ ತಿಳಿಯಬೇಕು.

ಅಥವಾ 'ಅನ್ವೇಷ್ಟವ್ಯಃ' ಎಂಬ ವಾಕ್ಯದಲ್ಲಿರುವ ಹೃತ್ಪದ್ಮಸ್ಥತ್ವದ ಬಗ್ಗೆಯೇ ವಿಚಾರವನ್ನು ಮಾಡುತ್ತಿದ್ದೇವೆ. ಪೂರ್ವಪಕ್ಷದಲ್ಲಿ 'ತಸ್ಮಿನ್ಯದಂತಃ' ಎಂಬಲ್ಲಿರುವ 'ತತ್' ಶಬ್ದದಿಂದ ವ್ಯವಹಿತವಾದ ಪುಂಡರೀಕದ ಪರಾಮರ್ಶವನ್ನು ಮಾಡಲಾಗುತ್ತದೆ. ಸಿದ್ಧಾಂತದಲ್ಲಿ ಆಕಾಶದ ಪರಾಮರ್ಶವನ್ನು ಮಾಡಲಾಗುತ್ತದೆ. ಅಥವಾ

L

ಈ ಪ್ರಕರಣದಲ್ಲಿರುವ ಹೃತ್ಪದ್ಮಸ್ಥತ್ವವೆಂಬ ಸಾಮಾನ್ಯಧರ್ಮದ ಬಗ್ಗೆ ವಿಚಾರ ಮಾಡಲಾಗಿದೆಯೆಂದು ಉತ್ತರಿಸಬಹುದು. ಅಂದರೆ ಶೃಂಗಗ್ರಾಹಿಕತಯಾ ಇದೇ ವಾಕ್ಯವು ವಿಚಾರಕ್ಕೆ ಯೋಗ್ಯವಾಗಿದೆಯೆಂದು ಉಲ್ಲೇಖ ಮಾಡದೇ ಸಾಮಾನ್ಯವಾಗಿ ಈ ಪ್ರಕರಣವನ್ನು ನೋಡಿದಾಗ, ಹೃತ್ಪದ್ಮಸ್ಥತ್ವವು ಶ್ರುತವಾಗಿದೆ. ಇದು ಭೂತಾಕಾಶದಲ್ಲಿ ಬರುತ್ತದೋ, ಅಥವಾ ವಿಷ್ಣುವಿನಲ್ಲೋ ಎಂಬ ಬಗೆಯಲ್ಲಿ ವಿಚಾರವನ್ನು ಮಾಡುತ್ತಿದ್ದೇವೆ. ಸಾಕ್ಷಾದ್ಧೃತ್ಪದ್ಮಸ್ಥತ್ವವು ಭೂತಾಕಾಶದಲ್ಲಿದೆಯೆಂದು ತೋರಿದರೂ ಸಹ ಪರಂಪರೆಯಿಂದ ಹೃತ್ಪದ್ಮಸ್ಥತ್ವವು ವಿಷ್ಣುವಿನಲ್ಲಿದೆಯೆಂದೇ ಕಾಣಿಸುತ್ತದೆ. ಆದ್ದರಿಂದ ದ್ಯಾವಾಪೃಥಿವ್ಯಾದಿಗಳಿಗೆ ಆಶ್ರಯನಾಗಿ ಅನ್ವೇಷಣಕ್ಕೆ ವಿಷಯನಾದವನು ವಿಷ್ಣು ಆಗಿದ್ದಾನೋ, ಇಲ್ಲವೋ ಎಂಬ ವಿಚಾರವನ್ನು ಮಾಡುವುದು ಅತ್ಯಂತ ಸಂಗತವೆಂದು ತಿಳಿಯಬೇಕು.

ಹೃತ್ಪದ್ಮಸ್ಥತ್ವವೆಂಬ ಲಿಂಗವು ಭೂತಾಕಾಶದಲ್ಲಿ ಬರುತ್ತದೆ ಹೊರತು, ಬ್ರಹ್ಮನಲ್ಲ. ಹೃತ್ಪದ್ಮಸ್ಥತ್ವ ಲಿಂಗವು ಬ್ರಹ್ಮನಲ್ಲಿ ಬರುತ್ತದೆಂದು ಹೇಳುವ ನಿಮ್ಮ ಅಭಿಪ್ರಾಯವೇನು? ಹೃತ್ಪದ್ಮದಲ್ಲಿರುವ ದಹರಾಕಾಶವನ್ನೇ ಬ್ರಹ್ಮನೆನ್ನುತ್ತೀರೋ, ಅಥವಾ ದಹರಾಕಾಶದಲ್ಲಿ ಜಿಜ್ಞಾಸ್ಯನಾದವನನ್ನು ಬ್ರಹ್ಮನೆನ್ನುತ್ತೀರೋ?

ಪ್ರಥಮ ಪಕ್ಷ ತಪ್ಪು. 'ದಹರೋऽಸ್ಮಿನ್ನಂತರಾಕಾಶಃ' ಎಂಬ ಹಿಂದಿನ ವಾಕ್ಯದಲ್ಲಿ ಮತ್ತು 'ತಾವಾನೇಷೋऽಂತರ್ಹೃದಯ' ಎಂಬ ಮುಂದಿನ ವಾಕ್ಯದಲ್ಲಿ ಭೂತಾಕಾಶದಲ್ಲಿ ಪ್ರಸಿದ್ಧವಾದ ಆಕಾಶ ಶಬ್ದವನ್ನು ಪ್ರಯೋಗಿಸಿ ದಹರಾಕಾಶವೆಂದು ಪ್ರಯೋಗಿಸಲಾಗಿದೆ. ಆದ್ದರಿಂದ ಆಕಾಶ ಶ್ರುತಿಯ ಬಲದಿಂದ ಭೂತಾಕಾಶವೇ ದಹರಾಕಾಶವಾಗುತ್ತದೆ. ಮತ್ತು 'ತಸ್ಯಾಂತೇ ಸುಷಿರಂ ಸೂಕ್ಷ್ಮಮ್' ಎಂಬ ನಾರಾಯಣೋಪನಿಷತ್ತಿನ ಸಮಾಖ್ಯಾಪ್ರಮಾಣದ ಬೆಂಬಲವು ಈ ವಿಷಯದಲ್ಲಿದೆ. ಅಷ್ಟೇ ಅಲ್ಲದೇ ಭೂತಾಕಾಶದ ಬಗ್ಗೆ ವಿಚಾರವು ಪ್ರಸಕ್ತವಾಗುತ್ತಿರುವಾಗ ಮಧ್ಯದಲ್ಲಿರುವ ದಹರಾಕಾಶವನ್ನು ಬ್ರಹ್ಮವೆಂದು ಹೇಳಿದರೆ, 'ತಸ್ಮಿನ್ ಯದಂತಸ್ತದನ್ವೇಷ್ಟವ್ಯಮ್' ಎಂಬ ಶ್ರುತಿಯಲ್ಲಿ ದಹರಾಕಾಶದಲ್ಲಿರುವವನ ಜಿಜ್ಞಾಸೆಯನ್ನು ಮಾಡಬೇಕೆಂದು ಹೇಳಿದ್ದು ತಪ್ಪಾಗುತ್ತದೆ. ಏಕೆಂದರೆ ನಿಮ್ಮ ಪ್ರಕಾರ ಬ್ರಹ್ಮನೇ ದಹರಾಕಾಶನೆಂದಾದ ಮೇಲೆ, ದಹರಾಕಾಶದಲ್ಲಿರುವವನ ಬಗ್ಗೆ ಜಿಜ್ಞಾಸೆ ಮಾಡಬೇಕೆಂದು ಹೇಳಿದ್ದು ಹೇಗೆ ಯುಕ್ತವಾಗುತ್ತದೆ. ತನ್ನಲ್ಲೇ ತಾನಿದ್ದಾನೆಂಬ ಜಿಜ್ಞಾಸೆಯನ್ನು ಮಾಡಬೇಕೆಂದು ಹೇಳುವುದು ತಪ್ಪಲ್ಲವೇ? ಆದ್ದರಿಂದ ದಹರಾಕಾಶವನ್ನು ಬ್ರಹ್ಮನೆಂದು ಹೇಳಲು ಸಾಧ್ಯವಿಲ್ಲ. ಭೂತಾಕಾಶವನ್ನೇ ದಹರಾಕಾಶವೆನ್ನಬೇಕು. ಈ ವಿಷಯದಲ್ಲಿ 'ಸಮಾಖ್ಯಾಶ್ರುತಿ' ಹಾಗೂ 'ಅನ್ಯಸ್ಯಅನ್ವೇಷ್ಟವ್ಯತ್ವೋಕ್ತಿ' ಎಂಬ ಲಿಂಗ ಇವೆರಡು ಆಕಾಶ ಶ್ರುತಿಯನ್ನು ಉಪೋದ್ಬಲಿಸುತ್ತಿವೆ. ಇಂತಹ ಆಕಾಶ ಶ್ರುತಿಯ ಆಧಾರದಿಂದ ಭೂತಾಕಾಶವೇ ದಹರಾಕಾಶವೆನಿಸುತ್ತದೆಂಬುದು ಪ್ರಥಮ ಪೂರ್ವಪಕ್ಷ.

ದಹರಾಕಾಶದಲ್ಲಿ ದ್ಯಾವಾಪೃಥಿವೀಗಳು ಇರುತ್ತವೆಂದೇ ಶ್ರುತಿ ಹೇಳುತ್ತಿದೆ ಹೊರತು, ಬ್ರಹ್ಮನು ಇರುತ್ತಾನೆಂದು ಹೇಳುತ್ತಿಲ್ಲ. ಒಂದು ವೇಳೆ ಜಿಜ್ಞಾಸ್ಯನಾದವನು ಬ್ರಹ್ಮನೇ ಆಗಿದ್ದಾನೆಂದು ಹೇಳುವುದಾದಲ್ಲಿ 'ಕಿಂ ತದತ್ರ ವಿದ್ಯತೇ' ಎಂಬ ಪ್ರಶ್ನೆಗೆ 'ಬ್ರಹ್ಮ ವಿದ್ಯತೇ' ಎಂದೇ ಉತ್ತರಿಸಬೇಕಿತ್ತು. ಅದನ್ನು ಬಿಟ್ಟು 'ಯಾವಾನ್ವಾ ಅಯಮಾಕಾಶಃ' ಇತ್ಯಾದಿಯಾಗಿ ದ್ಯಾವಾಪೃಥಿವೀಗಳಿಗೆ ಆಶ್ರಯವಾದ ಆಕಾಶವಿದೆಯೆಂದು ಹೇಳಿರುವುದು ತಪ್ಪಾಗುತ್ತದೆ.

ಮುಂದೆ ಬ್ರಹ್ಮನೇ ದಹರಾಕಾಶದಲ್ಲಿದ್ದಾನೆಂದು ಜಿಜ್ಞಾಸೆ ಮಾಡಬೇಕೆಂದು ಹೇಳಲಾಗುತ್ತದೆ. ಅದಕ್ಕೆ ಪೂರಕವಾಗಿ ಬ್ರಹ್ಮನಿಗೆ ಆಧಾರವಾದದ್ದು, ಆಕಾಶವೆಂದು ಈ ಶ್ರುತಿಯು ಹೇಳುತ್ತಿದೆ. ಆದ್ದರಿಂದ ಬ್ರಹ್ಮನು ಜಿಜ್ಞಾಸ್ಯನಲ್ಲವೆಂದು ಹೇಗೆ ಹೇಳುತ್ತೀರಿ? ಎಂದು ಪ್ರಶ್ನಿಸಬಾರದು. ಏಕೆಂದರೆ ಆಧೇಯದ ಬಗ್ಗೆ ಪ್ರಶ್ನೆಯನ್ನು

ಮಾಡಿದಾಗ, ಆಧಾರದ ಬಗ್ಗೆ ವಿವರಣೆಯು ತಪ್ಪಾಗುತ್ತದೆ. ನಿಮ್ಮ ಮನೆಯಲ್ಲಿ ಏನಿದೆ? ಎಂದು ಪ್ರಶ್ನಿಸಿದಾಗ. ಮನೆಯ ಆಕಾರವನ್ನು ವರ್ಣಿಸುವುದು, ಅಥವಾ ಮನೆಯ ಬಗ್ಗೆ ವಿಶ್ಲೇಷಣೆ ಮಾಡುವುದು ಹೇಗೆ ತಪ್ಪಾಗುತ್ತದೋ, ಅದರಂತೆ ಹೃದಯಾಕಾಶದಲ್ಲಿ ಯಾರಿದ್ದಾರೆ? ಎಂದು ಪ್ರಶ್ನಿಸಿದಾಗ ಬ್ರಹ್ಮನಿದ್ದಾನೆಂದು ಉತ್ತರಿಸದೇ, ಪುನಃ ಹೃದಯಾಕಾಶವನ್ನೇ ವರ್ಣಿಸುವುದು ತಪ್ಪಾಗುತ್ತದೆ. ಆದ್ದರಿಂದ ಭೂತಾಕಾಶವೇ ಹೃತ್ಪದ್ಮಸ್ಥವಾಗಿದೆಯೆಂದು ಹೇಳಬೇಕು. ಇಂತಹ ಹೃತ್ಪದ್ಮಸ್ಥವಾದ ಭೂತಾಕಾಶದಲ್ಲಿ ದ್ಯಾವಾಪೃಥಿವ್ಯಾದಿಗಳೆಲ್ಲವೂ ಆಧೇಯವಾಗಿದೆಯೆಂದು ಹೇಳಿದಾಗ ಪೂರ್ವೋತ್ತರ ವಾಕ್ಯಗಳಿಗೆ ಸಾಂಗತ್ಯ ಬರುತ್ತದೆ. ಇಲ್ಲದಿದ್ದರೆ ಅಸಾಂಗತ್ಯ ದೋಷಬಂದು, ಅನನ್ವಯ ದೋಷಕ್ಕೆ ಅವಕಾಶವಿದೆ.

'ಯಾವಾನ್ವಾ ಅಯಮಾಕಾಶಃ' ಎಂಬ ಪ್ರತಿವಚನದಲ್ಲಿರುವ 'ಆಕಾಶ' ಶಬ್ದವು ಬ್ರಹ್ಮಪರವಾಗುತ್ತದೆಂದು ಹೇಳುವುದೇ ತಪ್ಪು. ಏಕೆಂದರೆ 'ಹೃದಯಾಕಾಶದಲ್ಲಿ ಏನಿದೆ ?' ಎಂದು ಪ್ರಶ್ನಿಸಿದಾಗ. 'ಹೃದಯಾಕಾಶದಲ್ಲಿ ದ್ಯಾವಾಪೃಥಿವ್ಯಾದಿಗಳು ಇರುತ್ತವೆ' ಎಂದು ಉತ್ತರಿಸುವುದೇ ಅತ್ಯಂತ ಸಮಂಜಸವಾಗುತ್ತದೆ. ಅದನ್ನು ಬಿಟ್ಟು ಹೃದಯಾಕಾಶದಲ್ಲಿ ಬ್ರಹ್ಮನಿದ್ದಾನೆ. ಅವನಲ್ಲಿ ಎಲ್ಲವೂ ಇದೆ ಎಂಬ ಉತ್ತರವು ಅಸಂಗತವಾಗುತ್ತದೆ. ಮತ್ತು 'ತಸ್ಮಿನ್ ಸರ್ವಂ ಪ್ರತಿಷ್ಠಿತಮ್' ಎಂದು ಸುಷಿರದಲ್ಲಿಯೇ ದ್ಯಾವಾಪೃಥಿವ್ಯಾದಿಗಳೆಲ್ಲವೂ ಇರುತ್ತವೆಂದು ಸಮಾಖ್ಯಾ-ರೂಪವಾದ ನಾರಾಯಣೋಪನಿಷತ್ತು ಹೇಳುತ್ತಿದೆ. ಅದರ ವಿರೋಧವೂ ಕೂಡ ಬರುತ್ತಿದೆ. ಹೀಗೆ ಅನನ್ವಯ ಮತ್ತು ಸಮಾಖ್ಯಾಶ್ರುತಿ ವಿರೋಧ ಈ ಎರಡೂ ದೋಷಗಳು ಬರುವ ಪ್ರಯುಕ್ತ, 'ಯಾವಾನ್ವಾ ಅಯಮಾಕಾಶಃ' ಎಂಬಲ್ಲಿರುವ 'ಆಕಾಶ' ಶಬ್ದವು ಬ್ರಹ್ಮಪರವಾಗುತ್ತದೆಂದು ಹೇಳಲು ಸಾಧ್ಯವಿಲ್ಲ.

ಆದ್ದರಿಂದ ಭೂತಾಕಾಶವೇ ಹೃತ್ಪದ್ಮಸ್ಥವಾಗಿದೆಯೆಂದು ಹೇಳಬೇಕು. ಶ್ರುತಿಯಲ್ಲಿರುವ ಅಪಹತಪಾಪ್ಮತ್ವ, ಸತ್ಯಕಾಮತ್ವ ಮೊದಲಾದ ಲಿಂಗಗಳ ವಿರೋಧವೂ ಕೂಡ ಬರುವುದಿಲ್ಲ. ಅಚೇತನವಾದ ಆಕಾಶದಲ್ಲಿ ಚೇತನನಿಷ್ಠವಾದ ಪಾಪಾದಿಗಳ ಅತ್ಯಂತಾಭಾವ ಇದೆ. ಆದ್ದರಿಂದ ಅಪಹತಪಾಪ್ಮತ್ವವನ್ನು ಶ್ರುತಿಯು ಹೇಳುತ್ತಿದೆ. ಇದರಂತೆ ಕಾಮ್ಯ ಸಾಮಾನ್ಯವೇ ಜಡವಾದ ಪದಾರ್ಥದಲ್ಲಿ ಹುಟ್ಟಲು ಸಾಧ್ಯವಿಲ್ಲವಾದ್ದರಿಂದ ಪ್ರತಿಹತ ಕಾಮಾದಿಗಳನ್ನು ಹೇಳಲಾಗದು. ಈ ದೃಷ್ಟಿಯಿಂದ ಸತ್ಯಕಾಮತ್ವಾದಿಗಳನ್ನು ಉಪಪಾದಿಸಬೇಕು. ಆದ್ದರಿಂದ ಭೂತಾಕಾಶವು ಹೃತ್ಪದ್ಮಸ್ಥವಾಗಿದೆಯೆಂದು ಹೇಳಿದರೆ ಯಾವುದೇ ಬಾಧಕಗಳಿಲ್ಲ.

ಅಥವಾ ಜೀವನೇ ಹೃತ್ಪದ್ಮಸ್ಥನೆಂದು ಹೇಳಬಹುದು. 'ಏಷ ಸಂಪ್ರಸಾದಃ' ಇತ್ಯಾದಿ ಶ್ರುತಿಯು ಜೀವನ ಬಗ್ಗೆ ಹೇಳುತ್ತಿದೆ. ಪ್ರಸಕ್ತನಾದ ಇಂತಹ ಜೀವನಲ್ಲಿಯೇ ಹೃತ್ಪದ್ಮಸ್ಥತ್ವವನ್ನು ಹೇಳುವುದು ಸಂಗತವಾಗುತ್ತದೆ. ಅಪಹತಪಾಪ್ಮತ್ವಾದಿಗಳನ್ನು ಮೋಕ್ಷವನ್ನು ಹೊಂದಿದ ಮೇಲೆ ಪಡೆಯುತ್ತಾನಾದ್ದರಿಂದ ಈ ಅಭಿಪ್ರಾಯದಿಂದ ಮೊದಲೇ ಜೀವನನ್ನು ಅಪಹತಪಾಪ್ಮನೆಂದು ಶ್ರುತಿಯು ಕರೆದಿದೆ. ಆದ್ದರಿಂದ ಜೀವನನ್ನು ಹೃತ್ಪದ್ಮಸ್ಥನೆಂದು ಹೇಳಿದರೆ ಯಾವ ತೊಂದರೆಯು ಬರುವುದಿಲ್ಲ.

ಹೃದಯಕಮಲದಲ್ಲಿ ಸಣ್ಣ ಆಕಾಶವಿದೆ. ಅದರಲ್ಲಿ ಕುಳಿತಿರುವವನು ಮಹಾವಿಷ್ಣುವೇ ಆಗಿದ್ದಾನೆಂದು ಸಿದ್ಧಾಂತ.ಏಕೆಂದರೆ ಯಾವ ಪ್ರಕರಣದಲ್ಲಿ ಈ ವಿಚಾರವು ಪ್ರಸಕ್ತವಾಗುತ್ತದೋ, ಅದೇ ಪ್ರಕರಣದ ಮುಂದಿನ ಭಾಗದಲ್ಲಿ ಅಪಹತಪಾಪ್ಮತ್ವ, ಸತ್ಯಕಾಮತ್ವ ಮೊದಲಾದ ವಿಷ್ಣುವಿನ ಅಸಾಧಾರಣ ಲಿಂಗಗಳೇ ಶ್ರುತವಾಗಿವೆ.

ಈ ಪ್ರಕರಣದಲ್ಲಿರುವ ಹೃತ್ಪದ್ಮಸ್ಥತ್ವವೆಂಬ ಸಾಮಾನ್ಯಧರ್ಮದ ಬಗ್ಗೆ ವಿಚಾರ ಮಾಡಲಾಗಿದೆಯೆಂದು ಉತ್ತರಿಸಬಹುದು. ಅಂದರೆ ಶೃಂಗಗ್ರಾಹಿಕತಯಾ ಇದೇ ವಾಕ್ಯವು ವಿಚಾರಕ್ಕೆ ಯೋಗ್ಯವಾಗಿದೆಯೆಂದು ಉಲ್ಲೇಖ ಮಾಡದೇ ಸಾಮಾನ್ಯವಾಗಿ ಈ ಪ್ರಕರಣವನ್ನು ನೋಡಿದಾಗ, ಹೃತ್ಪದ್ಮಸ್ಥತ್ವವು ಶ್ರುತವಾಗಿದೆ. ಇದು ಭೂತಾಕಾಶದಲ್ಲಿ ಬರುತ್ತದೋ, ಅಥವಾ ವಿಷ್ಣುವಿನಲ್ಲೋ ಎಂಬ ಬಗೆಯಲ್ಲಿ ವಿಚಾರವನ್ನು ಮಾಡುತ್ತಿದ್ದೇವೆ. ಸಾಕ್ಷಾದ್ಧೃತ್ಪದ್ಮಸ್ಥತ್ವವು ಭೂತಾಕಾಶದಲ್ಲಿದೆಯೆಂದು ತೋರಿದರೂ ಸಹ ಪರಂಪರೆಯಿಂದ ಹೃತ್ಪದ್ಮಸ್ಥತ್ವವು ವಿಷ್ಣುವಿನಲ್ಲಿದೆಯೆಂದೇ ಕಾಣಸುತ್ತದೆ. ಆದ್ದರಿಂದ ದ್ಯಾವಾಪೃಥಿವ್ಯಾದಿಗಳಿಗೆ ಆಶ್ರಯನಾಗಿ ಅನ್ವೇಷಣಕ್ಕೆ ವಿಷಯನಾದವನು ವಿಷ್ಣು ಆಗಿದ್ದಾನೋ, ಇಲ್ಲವೋ ಎಂಬ ವಿಚಾರವನ್ನು ಮಾಡುವುದು ಅತ್ಯಂತ ಸಂಗತವೆಂದು ತಿಳಿಯಬೇಕು.

ಹೃತ್ಪದ್ಮಸ್ಥತ್ವವೆಂಬ ಲಿಂಗವು ಭೂತಾಕಾಶದಲ್ಲಿ ಬರುತ್ತದೆ ಹೊರತು, ಬ್ರಹ್ಮನಲ್ಲ. ಹೃತ್ಪದ್ಮಸ್ಥತ್ವ ಲಿಂಗವು ಬ್ರಹ್ಮನಲ್ಲಿ ಬರುತ್ತದೆಂದು ಹೇಳುವ ನಿಮ್ಮ ಅಭಿಪ್ರಾಯವೇನು? ಹೃತ್ಪದ್ಮದಲ್ಲಿರುವ ದಹರಾಕಾಶವನ್ನೇ ಬ್ರಹ್ಮನೆನ್ನುತ್ತೀರೋ, ಅಥವಾ ದಹರಾಕಾಶದಲ್ಲಿ ಜಿಜ್ಞಾಸ್ಯನಾದವನನ್ನು ಬ್ರಹ್ಮನೆನ್ನುತ್ತೀರೋ?

ಪ್ರಥಮ ಪಕ್ಷ ತಪ್ಪು. 'ದಹರೋऽಸ್ಮಿನ್ನಂತರಾಕಾಶಃ' ಎಂಬ ಹಿಂದಿನ ವಾಕ್ಯದಲ್ಲಿ ಮತ್ತು 'ತಾವಾನೇಷೋऽಂತರ್ಹೃದಯ' ಎಂಬ ಮುಂದಿನ ವಾಕ್ಯದಲ್ಲಿ ಭೂತಾಕಾಶದಲ್ಲಿ ಪ್ರಸಿದ್ಧವಾದ ಆಕಾಶ ಶಬ್ದವನ್ನು ಪ್ರಯೋಗಿಸಿ ದಹರಾಕಾಶವೆಂದು ಪ್ರಯೋಗಿಸಲಾಗಿದೆ. ಆದ್ದರಿಂದ ಆಕಾಶ ಶ್ರುತಿಯ ಬಲದಿಂದ ಭೂತಾಕಾಶವೇ ದಹರಾಕಾಶವಾಗುತ್ತದೆ. ಮತ್ತು 'ತಸ್ಯಾಂತೇ ಸುಷಿರಂ ಸೂಕ್ಷ್ಮಮ್' ಎಂಬ ನಾರಾಯಣೋಪನಿಷತ್ತಿನ ಸಮಾಖ್ಯಾಪ್ರಮಾಣದ ಬೆಂಬಲವು ಈ ವಿಷಯದಲ್ಲಿದೆ. ಅಷ್ಟೇ ಅಲ್ಲದೇ ಭೂತಾಕಾಶದ ಬಗ್ಗೆ ವಿಚಾರವು ಪ್ರಸಕ್ತವಾಗುತ್ತಿರುವಾಗ ಮಧ್ಯದಲ್ಲಿರುವ ದಹರಾಕಾಶವನ್ನು ಬ್ರಹ್ಮವೆಂದು ಹೇಳಿದರೆ, 'ತಸ್ಮಿನ್ ಯದಂತಸ್ತದನ್ವೇಷ್ಟವ್ಯಮ್' ಎಂಬ ಶ್ರುತಿಯಲ್ಲಿ ದಹರಾಕಾಶದಲ್ಲಿರುವವನ ಜಿಜ್ಞಾಸೆಯನ್ನು ಮಾಡಬೇಕೆಂದು ಹೇಳಿದ್ದು ತಪ್ಪಾಗುತ್ತದೆ. ಏಕೆಂದರೆ ನಿಮ್ಮ ಪ್ರಕಾರ ಬ್ರಹ್ಮನೇ ದಹರಾಕಾಶನೆಂದಾದ ಮೇಲೆ, ದಹರಾಕಾಶದಲ್ಲಿರುವವನ ಬಗ್ಗೆ ಜಿಜ್ಞಾಸೆ ಮಾಡಬೇಕೆಂದು ಹೇಳಿದ್ದು ಹೇಗೆ ಯುಕ್ತವಾಗುತ್ತದೆ. ತನ್ನಲ್ಲೇ ತಾನಿದ್ದಾನೆಂಬ ಜಿಜ್ಞಾಸೆಯನ್ನು ಮಾಡಬೇಕೆಂದು ಹೇಳುವುದು ತಪ್ಪಲ್ಲವೇ? ಆದ್ದರಿಂದ ದಹರಾಕಾಶವನ್ನು ಬ್ರಹ್ಮನೆಂದು ಹೇಳಲು ಸಾಧ್ಯವಿಲ್ಲ. ಭೂತಾಕಾಶವನ್ನೇ ದಹರಾಕಾಶವೆನ್ನಬೇಕು. ಈ ವಿಷಯದಲ್ಲಿ 'ಸಮಾಖ್ಯಾಶ್ರುತಿ' ಹಾಗೂ 'ಅನ್ಯಸ್ಯಅನ್ವೇಷ್ಟವ್ಯತ್ವೋಕ್ತಿ' ಎಂಬ ಲಿಂಗ ಇವೆರಡು ಆಕಾಶ ಶ್ರುತಿಯನ್ನು ಉಪೋದ್ಬಲಿಸುತ್ತಿವೆ. ಇಂತಹ ಆಕಾಶ ಶ್ರುತಿಯ ಆಧಾರದಿಂದ ಭೂತಾಕಾಶವೇ ದಹರಾಕಾಶವೆನಿಸುತ್ತದೆಂಬುದು ಪ್ರಥಮ ಪೂರ್ವಪಕ್ಷ.

ದಹರಾಕಾಶದಲ್ಲಿ ದ್ಯಾವಾಪೃಥಿವೀಗಳು ಇರುತ್ತವೆಂದೇ ಶ್ರುತಿ ಹೇಳುತ್ತಿದೆ ಹೊರತು, ಬ್ರಹ್ಮನು ಇರುತ್ತಾನೆಂದು ಹೇಳುತ್ತಿಲ್ಲ. ಒಂದು ವೇಳೆ ಜಿಜ್ಞಾಸ್ಯನಾದವನು ಬ್ರಹ್ಮನೇ ಆಗಿದ್ದಾನೆಂದು ಹೇಳುವುದಾದಲ್ಲಿ 'ಕಿಂ ತದತ್ರ ವಿದ್ಯತೇ' ಎಂಬ ಪ್ರಶ್ನೆಗೆ 'ಬ್ರಹ್ಮ ವಿದ್ಯತೇ' ಎಂದೇ ಉತ್ತರಿಸಬೇಕಿತ್ತು. ಅದನ್ನು ಬಿಟ್ಟು 'ಯಾವಾನ್ವಾ ಅಯಮಾಕಾಶಃ' ಇತ್ಯಾದಿಯಾಗಿ ದ್ಯಾವಾಪೃಥಿವೀಗಳಿಗೆ ಆಶ್ರಯವಾದ ಆಕಾಶವಿದೆಯೆಂದು ಹೇಳಿರುವುದು ತಪ್ಪಾಗುತ್ತದೆ.

ಮುಂದೆ ಬ್ರಹ್ಮನೇ ದಹರಾಕಾಶದಲ್ಲಿದ್ದಾನೆಂದು ಜಿಜ್ಞಾಸೆ ಮಾಡಬೇಕೆಂದು ಹೇಳಲಾಗುತ್ತದೆ. ಅದಕ್ಕೆ ಪೂರಕವಾಗಿ ಬ್ರಹ್ಮನಿಗೆ ಆಧಾರವಾದದ್ದು, ಆಕಾಶವೆಂದು ಈ ಶ್ರುತಿಯು ಹೇಳುತ್ತಿದೆ. ಆದ್ದರಿಂದ ಬ್ರಹ್ಮನು ಜಿಜ್ಞಾಸ್ಯನಲ್ಲವೆಂದು ಹೇಗೆ ಹೇಳುತ್ತೀರಿ? ಎಂದು ಪ್ರಶ್ನಿಸಬಾರದು. ಏಕೆಂದರೆ ಆಧೇಯದ ಬಗ್ಗೆ ಪ್ರಶ್ನೆಯನ್ನು

ಮಾಡಿದಾಗ, ಆಧಾರದ ಬಗ್ಗೆ ವಿವರಣೆಯು ತಪ್ಪಾಗುತ್ತದೆ. ನಿಮ್ಮ ಮನೆಯಲ್ಲಿ ಏನಿದೆ? ಎಂದು ಪ್ರಶ್ನಿಸಿದಾಗ. ಮನೆಯ ಆಕಾರವನ್ನು ವರ್ಣಿಸುವುದು, ಅಥವಾ ಮನೆಯ ಬಗ್ಗೆ ವಿಶ್ಲೇಷಣೆ ಮಾಡುವುದು ಹೇಗೆ ತಪ್ಪಾಗುತ್ತದೋ, ಆದರಂತೆ ಹೃದಯಾಕಾಶದಲ್ಲಿ ಯಾರಿದ್ದಾರೆ? ಎಂದು ಪ್ರಶ್ನಿಸಿದಾಗ ಬ್ರಹ್ಮನಿದ್ದಾನೆಂದು ಉತ್ತರಿಸದೇ, ಪುನಃ ಹೃದಯಾಕಾಶವನ್ನೇ ವರ್ಣಿಸುವುದು ತಪ್ಪಾಗುತ್ತದೆ. ಆದ್ದರಿಂದ ಭೂತಾಕಾಶವೇ ಹೃತ್ಪದ್ಮಸ್ಥವಾಗಿದೆಯೆಂದು ಹೇಳಬೇಕು. ಇಂತಹ ಹೃತ್ಪದ್ಮಸ್ಥವಾದ ಭೂತಾಕಾಶದಲ್ಲಿ ದ್ಯಾವಾಪೃಥಿವ್ಯಾದಿಗಳೆಲ್ಲವೂ ಆಧೇಯವಾಗಿದೆಯೆಂದು ಹೇಳಿದಾಗ ಪೂರ್ವೋತ್ತರ ವಾಕ್ಯಗಳಿಗೆ ಸಾಂಗತ್ಯ ಬರುತ್ತದೆ. ಇಲ್ಲದಿದ್ದರೆ ಅಸಾಂಗತ್ಯ ದೋಷಬಂದು, ಅನನ್ವಯ ದೋಷಕ್ಕೆ ಅವಕಾಶವಿದೆ.

'ಯಾವಾನ್ವಾ ಅಯಮಾಕಾಶಃ' ಎಂಬ ಪ್ರತಿವಚನದಲ್ಲಿರುವ 'ಆಕಾಶ' ಶಬ್ದವು ಬ್ರಹ್ಮಪರವಾಗುತ್ತದೆಂದು ಹೇಳುವುದೇ ತಪ್ಪು. ಏಕೆಂದರೆ 'ಹೃದಯಾಕಾಶದಲ್ಲಿ ಏನಿದೆ ?' ಎಂದು ಪ್ರಶ್ನಿಸಿದಾಗ. 'ಹೃದಯಾಕಾಶದಲ್ಲಿ ದ್ಯಾವಾಪೃಥಿವ್ಯಾದಿಗಳು ಇರುತ್ತವೆ' ಎಂದು ಉತ್ತರಿಸುವುದೇ ಅತ್ಯಂತ ಸಮಂಜಸವಾಗುತ್ತದೆ. ಅದನ್ನು ಬಿಟ್ಟು ಹೃದಯಾಕಾಶದಲ್ಲಿ ಬ್ರಹ್ಮನಿದ್ದಾನೆ. ಅವನಲ್ಲಿ ಎಲ್ಲವೂ ಇದೆ ಎಂಬ ಉತ್ತರವು ಅಸಂಗತವಾಗುತ್ತದೆ. ಮತ್ತು 'ತಸ್ಮಿನ್ ಸರ್ವಂ ಪ್ರತಿಷ್ಠಿತಮ್' ಎಂದು ಸುಷಿರದಲ್ಲಿಯೇ ದ್ಯಾವಾಪೃಥಿವ್ಯಾದಿಗಳೆಲ್ಲವೂ ಇರುತ್ತವೆಂದು ಸಮಾಖ್ಯಾ-ರೂಪವಾದ ನಾರಾಯಣೋಪನಿಷತ್ತು ಹೇಳುತ್ತಿದೆ. ಆದರ ವಿರೋಧವೂ ಕೂಡ ಬರುತ್ತಿದೆ. ಹೀಗೆ ಅನನ್ವಯ ಮತ್ತು ಸಮಾಖ್ಯಾಶ್ರುತಿ ವಿರೋಧ ಈ ಎರಡೂ ದೋಷಗಳು ಬರುವ ಪ್ರಯುಕ್ತ, 'ಯಾವಾನ್ವಾ ಅಯಮಾಕಾಶಃ' ಎಂಬಲ್ಲಿರುವ 'ಆಕಾಶ' ಶಬ್ದವು ಬ್ರಹ್ಮಪರವಾಗುತ್ತದೆಂದು ಹೇಳಲು ಸಾಧ್ಯವಿಲ್ಲ.

ಆದ್ದರಿಂದ ಭೂತಾಕಾಶವೇ ಹೃತ್ಪದ್ಮಸ್ಥವಾಗಿದೆಯೆಂದು ಹೇಳಬೇಕು. ಶ್ರುತಿಯಲ್ಲಿರುವ ಅಪಹತಪಾಪತ್ವ, ಸತ್ಯಕಾಮತ್ವ ಮೊದಲಾದ ಲಿಂಗಗಳ ವಿರೋಧವೂ ಕೂಡ ಬರುವುದಿಲ್ಲ. ಅಚೇತನವಾದ ಆಕಾಶದಲ್ಲಿ ಚೇತನನಿಷ್ಠವಾದ ಪಾಪಾದಿಗಳ ಅತ್ಯಂತಾಭಾವ ಇದೆ. ಆದ್ದರಿಂದ ಅಪಹತಪಾಪತ್ವವನ್ನು ಶ್ರುತಿಯು ಹೇಳುತ್ತಿದೆ. ಇದರಂತೆ ಕಾಮ ಸಾಮಾನ್ಯವೇ ಜಡವಾದ ಪದಾರ್ಥದಲ್ಲಿ ಹುಟ್ಟಲು ಸಾಧ್ಯವಿಲ್ಲವಾದ್ದರಿಂದ ಪ್ರತಿಹತ ಕಾಮಾದಿಗಳನ್ನು ಹೇಳಲಾಗದು. ಈ ದೃಷ್ಟಿಯಿಂದ ಸತ್ಯಕಾಮತ್ವಾದಿಗಳನ್ನು ಉಪಪಾದಿಸಬೇಕು. ಆದ್ದರಿಂದ ಭೂತಾಕಾಶವು ಹೃತ್ಪದ್ಮಸ್ಥವಾಗಿದೆಯೆಂದು ಹೇಳಿದರೆ ಯಾವುದೇ ಬಾಧಕಗಳಿಲ್ಲ.

ಅಥವಾ ಜೀವನೇ ಹೃತ್ಪದ್ಮಸ್ಥನೆಂದು ಹೇಳಬಹುದು. 'ಏಷ ಸಂಪ್ರಸಾದಃ' ಇತ್ಯಾದಿ ಶ್ರುತಿಯು ಜೀವನ ಬಗ್ಗೆ ಹೇಳುತ್ತಿದೆ. ಪ್ರಸಕ್ತನಾದ ಇಂತಹ ಜೀವನಲ್ಲಿಯೇ ಹೃತ್ಪದ್ಮಸ್ಥತ್ವವನ್ನು ಹೇಳುವುದು ಸಂಗತವಾಗುತ್ತದೆ. ಅಪಹತಪಾಪತ್ವಾದಿಗಳನ್ನು ಮೋಕ್ಷವನ್ನು ಹೊಂದಿದ ಮೇಲೆ ಪಡೆಯುತ್ತಾನಾದ್ದರಿಂದ ಈ ಅಭಿಪ್ರಾಯದಿಂದ ಮೊದಲೇ ಜೀವನನ್ನು ಅಪಹತಪಾಪ್ಮನೆಂದು ಶ್ರುತಿಯು ಕರೆದಿದೆ. ಆದ್ದರಿಂದ ಜೀವನನ್ನು ಹೃತ್ಪದ್ಮಸ್ಥನೆಂದು ಹೇಳಿದರೆ ಯಾವ ತೊಂದರೆಯು ಬರುವುದಿಲ್ಲ.

ಹೃದಯಕಮಲದಲ್ಲಿ ಸಣ್ಣ ಆಕಾಶವಿದೆ. ಅದರಲ್ಲಿ ಕುಳಿತಿರುವವನು ಮಹಾವಿಷ್ಣುವೇ ಆಗಿದ್ದಾನೆಂದು ಸಿದ್ಧಾಂತ.ಏಕೆಂದರೆ ಯಾವ ಪ್ರಕರಣದಲ್ಲಿ ಈ ವಿಚಾರವು ಪ್ರಸಕ್ತವಾಗುತ್ತದೋ, ಅದೇ ಪ್ರಕರಣದ ಮುಂದಿನ ಭಾಗದಲ್ಲಿ ಅಪಹತಪಾಪತ್ವ, ಸತ್ಯಕಾಮತ್ವ ಮೊದಲಾದ ವಿಷ್ಣುವಿನ ಅಸಾಧಾರಣ ಲಿಂಗಗಳೇ ಶ್ರುತವಾಗಿವೆ.

ಅಪಹತಪಾಪತ್ವಾದಿಗಳನ್ನು ಆಕಾಶದಲ್ಲಿ ಹೇಳಲೇ ಬಾರದು. ಒಂದು ವೇಳೆ ಪಾಪ ಮೊದಲಾದವುಗಳಿಗೆ ಪ್ರಸಕ್ತಿಯಿದ್ದಲ್ಲಿ ಅವುಗಳ ನಿಷೇಧಕ್ಕೆ ಅವಕಾಶವಿರುತ್ತಿತ್ತು. ಜೀವನಲ್ಲಿಯೂ ಕೂಡ ಅಪಹತಪಾಪತ್ವಾದಿಗಳನ್ನು ಸಂಸಾರದಸೆಯಲ್ಲಿ ಹೇಳಲು ಸಾಧ್ಯವಿಲ್ಲ. ಆದ್ದರಿಂದ ಭಾಷ್ಯದಲ್ಲಿ ಉದಾಹರಿಸಿದ ಅನೇಕ ಶ್ರುತಿ-ಸ್ಮೃತಿಗಳ ಆಧಾರದಂತೆ ಅಪಹತಪಾಪತ್ವಾದಿಗಳೆಲ್ಲವೂ ವಿಷ್ಣುವಿನಲ್ಲೇ ಸ್ವತಂತ್ರವಾಗಿರುತ್ತವೆ. ಜೀವಾದಿಗಳಲ್ಲಿದ್ದರೂ ಕೂಡ ಅಸ್ವತಂತ್ರವಾಗಿರುತ್ತದೆ. ಸಾಪೇಕ್ಷ ಹಾಗೂ ನಿರಪೇಕ್ಷಗಳಲ್ಲಿ ನಿರಪೇಕ್ಷಿತವಾದ ಅರ್ಥವನ್ನು ಸ್ವೀಕರಿಸುವುದೇ ಶ್ರೇಷ್ಠವಾದ್ದರಿಂದ, ಸ್ವತಂತ್ರವಾದ ಸತ್ಯಕಾಮತ್ವಾದಿಗಳನ್ನೇ ಸ್ವೀಕರಿಸಬೇಕು. ಆದ್ದರಿಂದ ಪರಮಾತ್ಮನೇ ಹೃದಯಪದ್ಮದಲ್ಲಿದ್ದಾನೆ ಸ್ಪಷ್ಟವಾಗುತ್ತದೆ.

ಹಿಂದೆ ಪೂರ್ವಪಕ್ಷ ಮಾಡುವಾಗ ಹೃದಯಕಮಲದಲ್ಲಿ ಬ್ರಹ್ಮನ ಮಹಿಮೆಯನ್ನು ಹೇಳಿದರೆ ಅಸಾಂಗತ್ಯ ದೋಷವನ್ನು ಹೇಳಲಾಗಿತ್ತು. 'ಕಿಂ ತದತ್ರ ವಿದ್ಯತೇ' ಎಂದು ಪ್ರಶ್ನಿಸಿದಾಗ ಹೃದಯದಲ್ಲಿ ಆಕಾಶವಿದೆ ಎಂಬ ಉತ್ತರವು ಅತ್ಯಂತ ಅಸಂಗತವಾಗುತ್ತದೆಂದು ಪೂರ್ವಪಕ್ಷಕಾರರ ಅಭಿಪ್ರಾಯ. ಆದರೆ ನಮ್ಮೆಲ್ಲರ ಶರೀರವು ಪರಮಾತ್ಮನ ಪಟ್ಟಣವಾಗಿದೆ. ಹೃದಯ ಕಮಲವು ಪರಮಾತ್ಮನ ಮನೆಯಾಗಿದೆ. ಹೀಗೆ ಉಪನಿಷತ್ತು ವರ್ಣಿಸುತ್ತಾ 'ಕಿಂ ತದತ್ರ ವಿದ್ಯತೇ' ಎಂದು ಪ್ರಶ್ನಿಸಿದೆ. ಅಂದರೆ ಶರೀರವೆಂಬ ಪಟ್ಟಣದಲ್ಲಿ ಹೃದಯಕಮಲವೆಂಬ ಮನೆಯಲ್ಲಿರುವ ಪರಮಾತ್ಮನ ಮಹಿಮೆಯೇನು? ಎಂದೇ ಪ್ರಶ್ನೆಯ ಅಭಿಪ್ರಾಯ ಹೊರತು ಹೃದಯದಲ್ಲಿ ಯಾವ ಪದಾರ್ಥವಿದೆಯೆಂಬ ಪ್ರಶ್ನೆ ಇಲ್ಲಿ ಹುಟ್ಟುವುದಿಲ್ಲ. ಹೀಗೆ ಪ್ರಶ್ನಿಸಿದಾಗ 'ಯಾವಾನ್ವಾ ಅಯಮಾಕಾಶಃ' ಇತ್ಯಾದಿ ಶ್ರುತಿಯು ಹೃದಯ ಕಮಲದಲ್ಲಿರುವ ಪರಮಾತ್ಮನ ಹೃದಯದಲ್ಲಿ ಎಷ್ಟು ಆಕಾಶವಿದೆಯೆಂದರೆ ಹೊರಗಡೆ ಎಷ್ಟು ವಿಶಾಲವಾದ ಆಕಾಶವಿದೆಯೋ ಅಷ್ಟು ಆಕಾಶ ಪರಮಾತ್ಮನ ಹೃದಯದಲ್ಲಿದೆಯೆಂದು ಅವನ ಮಹಿಮೆಯನ್ನು ಹೇಳುತ್ತಿದೆ. ಅಂದರೆ ಅಷ್ಟೊಂದು ವಿಶಾಲವಾದ ಆಕಾಶವೂ ಅಣುಸ್ವರೂಪನಾದ ಪರಮಾತ್ಮನಹೃದಯದಲ್ಲಿದೆ ಎಂದರೆ, ಪರಮಾತ್ಮನು ಎಲ್ಲೆಡೆ ವ್ಯಾಪ್ತನಾಗಿದ್ದಾನೆ ಎಂದೇ ಹೇಳಿದಂತಾಯಿತು. ಹೀಗೆ ಬ್ರಹ್ಮನ ಮಹಿಮೆಯ ಬಗ್ಗೆ ಪ್ರಶ್ನಿಸಿದಾಗ ಅವನ ಅದ್ಭುತವಾದ ಮಹಿಮೆಯನ್ನೇ ಉಪನಿಷತ್ತು ಹೇಳುತ್ತಿದೆ. ಆದ್ದರಿಂದ ಪ್ರಶ್ನೋತ್ತರಗಳಲ್ಲಿ ಅಸಾಂಗತ್ಯ ದೋಷವನ್ನು ಪೂರ್ವಪಕ್ಷಕಾರರಿಗೆ ಹೇಳಲು ಸಾಧ್ಯವಿಲ್ಲ. ಆದ್ದರಿಂದ 'ಅನನ್ವಯ' ಎಂಬ ಬಾಧಕವನ್ನು ಸಿದ್ಧಾಂತಿಗಳಿಗೆ ಹೇಳಲು ಸಾಧ್ಯವಿಲ್ಲ.

ಛಾಂದೋಗ್ಯ ಭಾಷ್ಯದ ಪ್ರಕಾರ ವಿಷಯವಾಕ್ಯದ ಅರ್ಥವನ್ನು ಹೀಗೆ ತಿಳಿಯಬೇಕು - ಶಿಷ್ಯರಿಗೆ ಗುರುಗಳು ಹೀಗೆ ಹೇಳುತ್ತಾರೆ. ಶರೀರದಲ್ಲಿ ವ್ಯಾಪ್ತನಾದ ಪೂರ್ಣಗುಣವುಳ್ಳವನು, ಪೂರ್ಣಕಾಮನೂ ಆದ ಪರಮಾತ್ಮನಲ್ಲಿ ಹೃದಯಕಮಲವೆಂಬ ಸಣ್ಣಮನೆಯೂ ಆಶ್ರಿತವಾಗಿದೆ. ಈ ಮನೆಯಲ್ಲಿ ಸಣ್ಣ ಆಕಾಶವಿದೆ. ಅದರಲ್ಲಿರುವುದನ್ನು ಹುಡುಕಬೇಕು. ಮನನ ಮಾಡಬೇಕು.

ಶಿಷ್ಯರು ಗುರುಗಳನ್ನು ಹೀಗೆ ಪ್ರಶ್ನಿಸುತ್ತಾರೆ - ಸಣ್ಣದಾದ ಹೃದಯಕಮಲದಲ್ಲಿರುವ ಆಕಾಶದಲ್ಲಿ ಏನನ್ನು ಹುಡುಕಬೇಕು, ಏನನ್ನು ಮನನ ಮಾಡಬೇಕು ? ಎಂದು.

ಗುರುಗಳು ಉತ್ತರಿಸುತ್ತಾರೆ - ಶರೀರದಲ್ಲಿರುವ ಹೃದಯಕಮಲದಲ್ಲಿ ಸಣ್ಣ ಆಕಾಶವಿದೆ. ಅದರೊಳಗೆ ಆಕಾಶನಾಮಕನಾದ ಪರಬ್ರಹ್ಮನಿದ್ದಾನೆ. ಹೃದಯದ ಹೊರಗೆ ದೇಶ ಕಾಲಗುಣಗಳಿಂದ ಎಷ್ಟು ವ್ಯಾಪ್ತನಾಗಿದ್ದಾನೋ, ಅದರಂತೆ ಹೃತ್ಕಮಲದಲ್ಲಿರುವ ಆಕಾಶದಲ್ಲಿಯೂ ವ್ಯಾಪ್ತನಾಗಿದ್ದಾನೆ. ಒಬ್ಬನೇ ಪರಬ್ರಹ್ಮನು, ಅಣುವೂ-ಮಹತ್ತೂ

ಆಗಿರುವುದರಿಂದ ಇದು ಅಸಂಭಾವಿತವಲ್ಲ. ಆದ್ದರಿಂದ ಅವನನ್ನೇ ಮನನ ಮಾಡಬೇಕು. ಮುಕ್ತಾಮುಕ್ತರು, ಸಕಲ ಲೋಕಗಳು, ಸಕಲ ದೇವತೆಗಳು ಇವನನ್ನೇ ಆಶ್ರಿಯಿಸಿದ್ದಾರೆ.

ಹೀಗೆ ಛಾಂದೋಗ್ಯಭಾಷ್ಯದ ಪ್ರಕಾರ, ಶ್ರುತ್ಯರ್ಥವನ್ನು ತಿಳಿಯಬೇಕು. ಬ್ರಹ್ಮನ ಪಟ್ಟಣವೆನಿಸಿದ ಈ ಶರೀರದಲ್ಲಿ ಯಾವ ಹೃತ್ಕಮಲವೆಂಬ ಮನೆಯಿದೆಯೋ, ಆ ಮನೆಯಲ್ಲಿರುವ ಭೂತಾಕಾಶದಲ್ಲಿ ಪರಮಾತ್ಮನೆಂಬ ವಸ್ತುವಿದೆಯೆಂದು ಹೇಳಿದಂತಾಯಿತು. ಆದ್ದರಿಂದ 'ಅಂತರ್ಹೃದಯೇ ಆಕಾಶಃ' ಎಂಬ ಮುಂದಿನ ವಾಕ್ಯದಲ್ಲಿರುವ ಹೃದಯಶಬ್ದದಿಂದ ಅಂತಃಕರಣದಲ್ಲಿರುವ ಭೂತಾಕಾಶವನ್ನು ಹೇಳಲಾಗಿದೆ ಹೊರತು, ಅಂತಃಕರಣವನ್ನಲ್ಲ. 'ಹೃದಿ ಅಯನಾತ್ ಹೃದಯಂ' ಅಂತಃಕರಣದಲ್ಲಿರುವುದರಿಂದ ಹೃದಯವೆನಿಸಿದೆ ಎಂಬ ವ್ಯುತ್ಪತ್ತಿಯನ್ನಿಟ್ಟುಕೊಂಡಾಗ ಹೃದಯ ಶಬ್ದವು ಅಂತಃಕರಣದಲ್ಲಿರುವ ಭೂತಾಕಾಶವನ್ನು ಪ್ರತಿಪಾದಿಸುತ್ತದೆ. ಹೀಗೆ 'ಅಂತರ್ಹೃದಯೇ ಆಕಾಶಃ' ಎಂಬ ಮುಂದಿನ ವಾಕ್ಯಕ್ಕೆ ಅಂತಃಕರಣದಲ್ಲಿರುವ ಭೂತಾಕಾಶದಲ್ಲಿ ಆಕಾಶನಾಮಕನಾದ ಪರಬ್ರಹ್ಮನಿದ್ದಾನೆಂದು ಅಭಿಪ್ರಾಯ ಹೊರತಾಗಿ, ಅಂತಃಕರಣದಲ್ಲಿ ಭೂತಾಕಾಶವಿದೆ ಎಂದಲ್ಲ. ಆದ್ದರಿಂದ 'ಅಂತರ್ಹೃದಯೇ ಆಕಾಶಃ' ಎಂಬ ವಾಕ್ಯದಲ್ಲಿ ಹೇಳಲ್ಪಟ್ಟಿರುವ ಆಕಾಶವು ಭೂತಾಕಾಶ ಪರವಾಗದೇ, ಬ್ರಹ್ಮಪರವೇ ಆಗುತ್ತದೆ.

'ದಹರೋಽಸ್ಮಿನ್ನಂತರಾಕಾಶಃ' ಎಂದು ಮೊದಲು ಹೇಳಿರುವ 'ಆಕಾಶ' ಶಬ್ದವು ಭೂತಾಕಾಶಪರವಾದರೆ, 'ಅಂತರ್ಹೃದಯ ಆಕಾಶಃ' ಎಂಬ ಮುಂದಿರುವ ಆಕಾಶವು ಭೂತಾಕಾಶವೇ ಆಗಲಿ, ಪರಬ್ರಹ್ಮನಲ್ಲವೆಂದು ಆಕ್ಷೇಪಮಾಡಬಾರದು. ಈ ಆಕಾಶವು ಭೂತಾಕಾಶ ಪರವಾದಲ್ಲಿ, 'ಉಭೇ ಅಸ್ಮಿನ್' ಇತ್ಯಾದಿಯಾಗಿ ಮುಂದಿನ ವಾಕ್ಯದಲ್ಲಿ ಹೇಳಲ್ಪಟ್ಟ ಸರ್ವಾಧಾರತ್ವ, ನಿತ್ಯತ್ವ, ಪೂರ್ಣಕಾಮತ್ವ ಮೊದಲಾದ ಧರ್ಮಗಳು ವಿರುದ್ಧವಾಗುತ್ತವೆ. ಆದ್ದರಿಂದ ಹಿಂದಿನ 'ಆಕಾಶ' ಶಬ್ದದಿಂದ ಭೂತಾಕಾಶವೇ ಪ್ರತಿಪಾದ್ಯವಾಗಿದೆ. ಮುಂದಿನ 'ಆಕಾಶ' ಶಬ್ದದಿಂದ ಪರಮಾತ್ಮನೇ ಪ್ರತಿಪಾದ್ಯನಾಗಿದ್ದಾನೆ.

ಪೂರ್ವಪಕ್ಷಕಾರರು ಹಿಂದೆ ನಮ್ಮನ್ನು ಕುರಿತು ಅಸಾಂಗತ್ಯ ದೋಷವನ್ನು ಹೇಳುತ್ತಿದ್ದರು. ಇಲ್ಲಿಯ ತನಕ ವಿಚಾರ ಮಾಡಿದಂತೆ ಅಸಾಂಗತ್ಯ ದೋಷ ನಮಗೆ ತಟ್ಟುವುದೇ ಇಲ್ಲ. ಹೊರತಾಗಿ ಪೂರ್ವಪಕ್ಷಕಾರರಿಗೇನೇ ಹಲವು ಬಗೆಯಲ್ಲಿ ಹತ್ತಾರು ಕ್ರಮದಿಂದ ಅಸಾಂಗತ್ಯ ದೋಷವು ಬಾಧಿಸುತ್ತದೆ. ಅದು ಹೀಗೆ -

೧. ಹೃತ್ಪದ್ಮಸ್ಥವಾದ ಆಕಾಶದಲ್ಲಿ ಏನಿದೆ? ಎಂದು ಪ್ರಶ್ನಿಸಿದಾಗ, ಭೂತಾಕಾಶವಿದೆ ಎಂಬ ಉತ್ತರ ಅಸಂಗತ.

೨. 'ದಹರೋಽಸ್ಮಿನ್ನಂತರಾಕಾಶಃ' ಎಂಬ ಹಿಂದಿನ ವಾಕ್ಯದಲ್ಲಿಯೇ ಹೃತ್ಪದ್ಮಸ್ಥವಾದದ್ದು ಆಕಾಶವೆಂದು ಹೇಳಿದ ಮೇಲೆ ಪುನಃ ಮುಂದಿನ ವಾಕ್ಯದಲ್ಲಿ ಅದೇ ವಿಚಾರವನ್ನು ಹೇಳುವುದು ಅಸಂಗತ.

೩. ಪೂರ್ವಪಕ್ಷಕಾರರು 'ಯಾವಾನ್ವಾ' ಎಂಬ ವಾಕ್ಯದಲ್ಲಿರುವ ಆಕಾಶ ಪದವನ್ನು ಸಪ್ತಮ್ಯಂತವೆಂದು ಹೇಳುತ್ತಾರೆ. ಆವಾಗ ಹೃದಯದಲ್ಲಿರುವ ಸಣ್ಣ ಆಕಾಶದಲ್ಲಿ ಬಾಹ್ಯವಾದ ವ್ಯಾಪ್ತಾಕಾಶವಿದೆ ಎಂದು ಹೇಳಿದಂತಾಗುತ್ತದೆ. ಸಣ್ಣದಾದ ಆಕಾಶದಲ್ಲಿ ವ್ಯಾಪ್ತಾಕಾಶ ಇರಲು ಹೇಗೆ ಸಾಧ್ಯ ? ಪರಮಾತ್ಮನಲ್ಲಿ ಅಚಿಂತ್ಯಾದ್ಭುತ ಶಕ್ತಿಯಿರುವುದರಿಂದ ವಿರೋಧವಿಲ್ಲ. ಆದರೆ ಜಡಪದಾರ್ಥದಲ್ಲಿ ಇಂತಹ ಅಚಿಂತ್ಯ ಶಕ್ತಿಯಿಲ್ಲದ ಕಾರಣ. ಸಣ್ಣ ಆಕಾಶದಲ್ಲಿ ವ್ಯಾಪ್ತಾಕಾಶದ ಇರುವಿಕೆಯನ್ನು ಹೇಳುವುದು ಅಸಂಗತ.

೪. 'ತಮೇವೈಕಂ ಜಾನಥ' ಎಂಬ ಸೂತ್ರದಲ್ಲಿ ಬ್ರಹ್ಮನು ಮಾತ್ರ ಜಿಜ್ಞಾಸ್ಯನೆಂದು ಹೇಳಲಾಗಿದೆ. ಆದರೆ

ನೀವು ಹೃದಯದಲ್ಲಿರುವ ಆಕಾಶದಲ್ಲಿ ಜಿಜ್ಞಾಸ್ಯತ್ವವನ್ನು, ಸರ್ವಾಧಾರತ್ವವನ್ನು ಹೇಳುತ್ತಿದ್ದೀರಿ. ಇವೆರಡೂ ಅಸಂಗತವಾಗಿದೆ.

೫. ಪರಿಚ್ಛಿನ್ನವಾದ ಹೃದಯಾಕಾಶದಲ್ಲಿ ಅಪರಿಚ್ಛಿನ್ನತ್ವವನ್ನು ವಿಧಾನ ಮಾಡಿ, ದ್ಯಾವಾಪೃಥಿವ್ಯಾದಿಗಳನ್ನು ಜಿಜ್ಞಾಸೆ ಮಾಡಬೇಕೆಂದು ಹೇಳಿದರೆ ಪರಿಚ್ಛಿನ್ನದಲ್ಲಿ ಅಪರಿಚ್ಛಿನ್ನತ್ವವನ್ನು ಹೇಳುವುದು ಅಯೋಗ್ಯವಾದ್ದರಿಂದ ಅಸಂಗತವಾಗಿದೆ.

೬. 'ಕಿಂ ತದತ್ರ ವಿದ್ಯತೇ' ಎಂದು ಪ್ರಶ್ನಿಸಿದಾಗ ಮುಂದಿರುವ 'ಯಾವಾನ್ವಾ ಅಯಮಾಕಾಶಃ' ಎಂಬ ವಾಕ್ಯವನ್ನೇ ಉತ್ತರರೂಪವೆಂದು ಪರಿಗಣಿಸಲು ಬರುವಾಗ ದೂರದಲ್ಲಿರುವ 'ಉಭೇ ಅಸ್ಮಿನ್ ದ್ಯಾವ್ಯಾಪೃಥಿವೀ' ಎಂಬ ವಾಕ್ಯವನ್ನು ಉತ್ತರರೂಪವಾಗಿದೆಯೆಂದು ಹೇಳುವುದು ಅಸಂಗತ.

೭. 'ಕಿಂ ತದತ್ರ ವಿದ್ಯತೇ' ಎಂಬ ವಾಕ್ಯದಿಂದ ಯಾವುದನ್ನು ಜಿಜ್ಞಾಸೆ ಮಾಡಬೇಕೆಂದು ಚರ್ಚಿಸಿದಾಗ ಜಿಜ್ಞಾಸೆಗೆ ಅನರ್ಹವಾದ ದ್ಯಾವಾಪೃಥಿವ್ಯಾದಿಗಳ ಜಿಜ್ಞಾಸೆಯನ್ನು ಹೇಳುವುದು ಅಸಂಗತ.

೮. 'ತಮೇವೈಕಂ ಜಾನಥ' ಎಂಬ ಶ್ರುತಿಯಲ್ಲಿ ದ್ಯುಭ್ವಾದಿಗಳಿಗೆ ಯಾವುದು ಆಧಾರವಾಗಿದೆಯೋ, ಅದರ ಜಿಜ್ಞಾಸೆಯನ್ನು ಮಾಡಬೇಕೆಂದು ಹೇಳಲಾಗಿದೆ. ನೀವು ಆಧೇಯವಾದ ದ್ಯುಭ್ವಾದಿಗಳ ಜಿಜ್ಞಾಸೆಯನ್ನು ಮಾಡಬೇಕೆಂದು ಹೇಳುತ್ತಿದ್ದೀರಿ. ಇದು ಅಸಂಗತ.

೯. 'ತದನ್ವೇಷ್ಟವ್ಯಮ್' ಎಂಬುದು ಉದ್ದೇಶವಾಗಿದೆ. ಉದ್ದೇಶದಲ್ಲಿ ವಿಶೇಷಣವಾದ ಏಕತ್ವವನ್ನು ತಿರಸ್ಕರಿಸಬಾರದು. ಆದ್ದರಿಂದ ಒಂದು ಪದಾರ್ಥದ ಜಿಜ್ಞಾಸೆಯನ್ನೇ ಶ್ರುತಿಯು ಹೇಳುತ್ತಿದೆ ಹೊರತು, ಸ್ವರ್ಗಲೋಕ, ಭೂಲೋಕ, ಸೂರ್ಯ-ಚಂದ್ರ ಮೊದಲಾದ ಅನೇಕ ಪದಾರ್ಥಗಳ ಜಿಜ್ಞಾಸೆಯನ್ನು ಶ್ರುತಿಯು ಹೇಳುತ್ತಿಲ್ಲ. ನೀವು ಹಾಗೇ ವ್ಯಾಖ್ಯಾನಿಸಿದರೆ ಅಸಂಗತವಾಗುತ್ತದೆ.

೧೦. 'ತದ್ವಾವ ವಿಜಿಜ್ಞಾಸಿತವ್ಯಮ್' ಎಂಬಲ್ಲಿ 'ವಾ' ಶಬ್ದದಿಂದ ಅವಧಾರಣೆಯನ್ನು ಮಾಡುತ್ತಾ ಬೇರೆ ಪದಾರ್ಥಗಳ ಜಿಜ್ಞಾಸೆಯನ್ನು ವ್ಯಾವರ್ತನೆ ಮಾಡಿ, ಒಂದೇ ಪದಾರ್ಥದ ಜಿಜ್ಞಾಸೆಯನ್ನು ವಿಧಿಸಲಾಗಿದೆ. ನೀವು ಅನೇಕ ಪದಾರ್ಥಗಳ ಜಿಜ್ಞಾಸೆಯನ್ನು ಹೇಳುವುದು ಅಸಂಗತ.

೧೧. ಹೃತ್ಪದ್ಮದಲ್ಲಿರುವ ಆಕಾಶದಲ್ಲಿ ಜಡವಾದ ಆಕಾಶವೇ ಇದೆಯೆಂದು ಹೇಳುವುದಾದರೆ, ಶರೀರವನ್ನು ಪಟ್ಟಣವೆಂದು, ಪುಂಡರೀಕವನ್ನು ಮನೆಯೆಂದು ಹೇಳಿದ್ದು ಅಸಂಗತ. ಚೇತನರಿಗೆ ಮಾತ್ರ ಆಧಾರವಾಗಿ ಪಟ್ಟಣ-ಮನೆಯೆಂಬ ವ್ಯವಹಾರವಿದೆ. ಜಡಪದಾರ್ಥಗಳಿಗೆ ಆಧಾರವಾದದ್ದನ್ನು ಪಟ್ಟಣ ಅಥವಾ ಮನೆಯೆಂದು ಯಾರೂ ವ್ಯವಹರಿಸುವುದಿಲ್ಲ.

ಹೀಗೆ ಪೂರ್ವಪಕ್ಷಕಾರರಿಗೆ ಹತ್ತಾರು ಮುಖದಲ್ಲಿ ಅಸಾಂಗತ್ಯದೋಷವು ಬಾಧಿಸುತ್ತದೆ.

ಹಿಂದೆ ಜೀವನೇ ಹೃತ್ಪದ್ಮಸ್ಥನಾಗಿದ್ದಾನೆಂದು ಪೂರ್ವಪಕ್ಷ ಮಾಡುವಾಗ ಸಿದ್ಧಾಂತಿಗಳಿಗೆ ಬಾಧಕವೊಂದನ್ನು ಹೇಳಲಾಗಿತ್ತು. 'ಏತತ್' ಶಬ್ದದಿಂದ ಪರಮಾತ್ಮನನ್ನು ಪರಾಮರ್ಶಿಸಲು ಸಾಧ್ಯವಿಲ್ಲ. ಏಕೆಂದರೆ 'ಪರಂಜ್ಯೋತಿಃ' ಎಂಬ ಶಬ್ದವು ನಪುಂಸಕಲಿಂಗದಲ್ಲಿದೆ. ಈ ಶಬ್ದದಿಂದ ಪ್ರತಿಪಾದ್ಯನಾದ ಬ್ರಹ್ಮನನ್ನು ಪುಲ್ಲಿಂಗ ಶಬ್ದದಲ್ಲಿರುವ 'ಏಷಃ' ಎಂಬ ಶಬ್ದದಿಂದ ಪರಾಮರ್ಶಿಸಲು ಸಾಧ್ಯವಿಲ್ಲವೆಂದು.

ಇದೂ ಸಹ ತಪ್ಪು. ವಿಧೇಯವು ಯಾವ ಲಿಂಗದಲ್ಲಿರುತ್ತದೋ, ಆ ಲಿಂಗವನ್ನೇ ಅನುಸರಿಸಿ ಪರಾಮರ್ಶ ಮಾಡುವಂತಹ ಸರ್ವನಾಮ ಶಬ್ದವನ್ನು ಪ್ರಯೋಗಿಸುವುದು ಕಾಣಿಸುತ್ತದೆ. ''ಶೈತ್ಯಂ ಹಿ ಯತ್ಸಾ ಪ್ರಕೃತಿರ್ಜಲಸ್ಯ' ಎಂಬ ಪ್ರಯೋಗವು ಲೋಕದಲ್ಲಿ ಪ್ರಸಿದ್ಧವಾಗಿದೆ. 'ನೀರಿನ ಸ್ವಭಾವ ಶೈತ್ಯ' ಎಂಬುದು ಇದರ ಅರ್ಥ. 'ಸಾ'

ಎಂಬ ಸ್ತ್ರೀಲಿಂಗವಾದ ಶಬ್ದದಿಂದ ಶೈತ್ಯವನ್ನು ಪರಾಮರ್ಶಿಸುತ್ತಾರೆ. ಆದರೆ ಶೈತ್ಯ ಶಬ್ದವು ನಪುಂಸಕಲಿಂಗದಲ್ಲೇ ಇದೆ. ಆದ್ದರಿಂದ ಪ್ರಕೃತಿ ಶಬ್ದವು ಸ್ತ್ರೀಲಿಂಗದಲ್ಲಿರುವುದರಿಂದ ವಿಧೇಯಕವಾದ ಲಿಂಗವನ್ನೇ 'ತತ್' ಶಬ್ದವು ಅನುಸರಿಸಿದೆಯೆಂದು ಉತ್ತರಿಸಬೇಕು. ಅದರಂತೆ ಪ್ರಕೃತ 'ಆತ್ಮ' ಎಂಬ ವಿಧೇಯವಾಚಕ ಶಬ್ದವು ಪುಲ್ಲಿಂಗದಲ್ಲಿರುವ ಪ್ರಯುಕ್ತ 'ಏಷಃ' ಎಂಬುದಾಗಿ ಪುಲ್ಲಿಂಗ ಪ್ರಯೋಗವು ಯುಕ್ತವಾಗಿದೆಯೆಂದು ತಿಳಿಯಬೇಕು. ಮತ್ತು ಅಮೃತತ್ವ, ಅಭಯತ್ವ ಮೊದಲಾದ ನಿರವಕಾಶವಾದ ಬ್ರಹ್ಮನ ಲಿಂಗಗಳು ಕೇಳಿಸುತ್ತಿರುವುದರಿಂದ ಪರಮಾತ್ಮನೇ ಪರಾಮರ್ಶಕ್ಕೆ ಯೋಗ್ಯನಾಗಿದ್ದಾನೆಂದು ಸ್ಪಷ್ಟವಾಗುತ್ತದೆ. 'ಏತತ್' ಶಬ್ದದಿಂದ ಪರಾಮರ್ಶ ಮಾಡಬೇಕಾದರೆ ಸಮಾನವಿಭಕ್ತಿಯಾಗಲೀ, ಸಮಾನಲಿಂಗವಾಗಲೀ ಪ್ರಯೋಜಕವಲ್ಲ. ಹಿಂದೆ ಪ್ರಸ್ತುತನಾಗಿದ್ದರೆ ಸಾಕು. ಚೈತ್ರನು ಬಂದನು; ಅವನಿಗೆ ಊಟ ಮಾಡಿಸು. 'ಚೈತ್ರಃ ಆಗತಃ ತಂ ಭೋಜಯ' ಎಂಬ ಪ್ರಯೋಗವಿದೆ. ಚೈತ್ರ ಶಬ್ದವು ಪ್ರಥಮಾವಿಭಕ್ತಿಯಲ್ಲಿದ್ದರೂ ಕೂಡ ದ್ವಿತೀಯಾವಿಭಕ್ತ್ಯಂತದಲ್ಲಿರುವ 'ತಂ' ಎಂಬ 'ತತ್' ಶಬ್ದದಿಂದ ಚೈತ್ರನನ್ನು ಪರಾಮರ್ಶಿಸುವುದು ಲೋಕದಲ್ಲಿ ಕಂಡಿದೆ. ಆದ್ದರಿಂದ ಲಿಂಗವಾಗಲೀ, ವಿಭಕ್ತಿಯಾಗಲೀ ಪ್ರಯೋಜಕವಲ್ಲವೆಂದು ತಿಳಿಯಬೇಕು.

ಮತ್ತು ಪರಮಾತ್ಮನೇ ಎಲ್ಲಕ್ಕೂ ಆಧಾರನಾಗಿದ್ದಾನೆಂದು ಹೇಳುವುದಾದರೆ, ಸುಷಿರ ಶ್ರುತಿಯಲ್ಲಿ ಸುಷಿರಕ್ಕೆ ಹೇಳಲ್ಪಟ್ಟ ಸರ್ವಾಧಾರತ್ವವು ಎಂಬುದು ಪೂರ್ವಪಕ್ಷಕಾರರ ಮತ್ತೊಂದು ಪ್ರಶ್ನೆ. ಇದೂ ಕೂಡ ತಪ್ಪು. ಮನೆಯಲ್ಲಿ ಮಣಿಮಾಲೆಯಿದೆ ಎಂಬ ಪ್ರಯೋಗವಿದೆ. ಮಣಿಮಾಲೆಯನ್ನು ಮನೆಯಲ್ಲಿಟ್ಟಿರುವುದಿಲ್ಲ ಹೊರತಾಗಿ ಮನೆಯಲ್ಲಿರುವ ಪೆಟ್ಟಿಗೆಯಲ್ಲಿ ಭದ್ರವಾಗಿ ಇಟ್ಟಿರುತ್ತಾರೆ. ಆದರೂ ಕೂಡ 'ಮನೆಯಲ್ಲಿ ಮಣಿಮಾಲೆಯಿದೆ' ಎಂಬ ಪ್ರಯೋಗವನ್ನು ಹೇಗೆ ಮಾಡುತ್ತೇವೋ, ಅದರಂತೆ ಸುಷಿರದಲ್ಲಿ ಎಲ್ಲವೂ ಇದೆಯೆಂದರೆ ಸುಷಿರದಲ್ಲಿ ಬ್ರಹ್ಮನಿದ್ದಾನೆ. ಅವನಲ್ಲಿ ಎಲ್ಲ ಪದಾರ್ಥವೂ ಕೂಡ ಅಡಕವಾಗಿದೆಯೆಂದೇ ಅಭಿಪ್ರಾಯ. ಯಾವುದೇ ಬಾಧಕಗಳಿಲ್ಲದ ಕಾರಣ ಹೃದಯಪದ್ಮದಲ್ಲಿರುವ ಸುಷಿರದಲ್ಲಿ ನೆಲೆಸಿರುವವನು ಪರಮಾತ್ಮನೇ ಆಗಿದ್ದಾನೆಂದು ತೀರ್ಮಾನವಾಯಿತು.

'ದಹರ ಉತ್ತರೇಭ್ಯಃ' ಎಂಬ ಪ್ರಥಮ ಸೂತ್ರದಲ್ಲಿ ಸ್ವಪಕ್ಷಸಾಧಕಪ್ರಮಾಣವನ್ನು ಹೇಳುತ್ತಿದ್ದಾರೆ. ಮತ್ತು ವಿಷಯವಾಕ್ಯಕ್ಕೆ ಅತ್ಯಂತ ಹತ್ತಿರವಿರುವ ಆತ್ಮಶ್ರುತಿ ಮತ್ತು ಅಪಹತಪಾಪ್ಮತ್ವಾದಿ ಲಿಂಗಗಳನ್ನು ಸಾಧಿಸುತ್ತಿದ್ದಾರೆ. ಈ ಕಾರಣದಿಂದ ಸೂತ್ರಕ್ಕೆ ಪ್ರಾಥಮ್ಯವು ಸಮಂಜಸವಾಗಿದೆ.

'ಗತಿಶಬ್ದಾಭ್ಯಾಂ ತಥಾಹಿ ದೃಷ್ಟಂ ಚ' ಈ ಸೂತ್ರದಲ್ಲಿಯೂ ಕೂಡ ಬ್ರಹ್ಮಶ್ರುತಿ, ಮತ್ತು ಸುಪ್ತಗಮ್ಯತ್ವ ಎಂಬೆರಡು ಲಿಂಗಗಳನ್ನೇ ಹೃತ್ಪದ್ಮಸ್ಥನಾದವನು ಪರಮಾತ್ಮನೇ ಆಗಿದ್ದಾನೆನ್ನಲು ಪ್ರಮಾಣವನ್ನಾಗಿ ಹೇಳಿರುತ್ತಾರೆ. ಆದರೆ ವಿಷಯವಾಕ್ಯಕ್ಕಿಂತ ಸ್ವಲ್ಪದೂರದಲ್ಲಿರುವ ಶ್ರುತಿಯಲ್ಲಿ ಹೇಳಲ್ಪಟ್ಟ ಶ್ರುತಿಲಿಂಗಗಳನ್ನು ಈ ಸೂತ್ರವು ಉಲ್ಲೇಖ ಮಾಡುತ್ತಿರುವ ಕಾರಣ, ಎರಡನೆಯ ಸ್ಥಾನವನ್ನು ಪಡೆದಿರುತ್ತದೆ.

ಸೂತ್ರದಲ್ಲಿರುವ 'ಗತಿಶಬ್ದಾಭ್ಯಾಂ' ಎಂಬ ಪದವನ್ನು ಗಮನಿಸಿದಾಗ ಸುಪ್ತಗಮ್ಯತ್ವ ಹಾಗೂ ಬ್ರಹ್ಮಶಬ್ದ ಇವೆರಡೂ ವಿಷ್ಣುವಿನ ಹೃತ್ಪದ್ಮಸ್ಥತ್ವಕ್ಕೆ ಆಧಾರವಾದ ಪ್ರಮಾಣಗಳಾಗಿವೆ ಎಂದು ತಿಳಿಯುತ್ತದೆ. ಆದರೆ 'ತಥಾ ಹಿ ದೃಷ್ಟಂ ಲಿಂಗಂ ಚ' ಎಂಬ ಮುಂದಿನ ಮಾತುಗಳು ಏಕೆ ಹೊರಟಿವೆ ? ಎಂದು ಸ್ಪಷ್ಟವಾಗಿ ನಮಗೆ ತಿಳಿಯುವುದಿಲ್ಲ. ಇಲ್ಲಿರುವ ಪ್ರತಿಯೊಂದು ಪದಗಳ ಸ್ವಾರಸ್ಯವನ್ನು ಚಂದ್ರಿಕಾಚಾರ್ಯರು ಹೃದಯಂಗಮವಾಗಿ ವರ್ಣಿಸಿದ್ದಾರೆ.

'ಅರ' ಮತ್ತು 'ಣ್ಯ' ಎಂಬೆರಡು ಅಮೃತಸಮುದ್ರಗಳು ವಿಷ್ಣುಲೋಕದಲ್ಲಿವೆ. ವಿಷ್ಣುಲೋಕದಲ್ಲಿ ಬಿಟ್ಟು ಬೇರೆ ಎಲ್ಲಿಯೂ ಸಹ ಈ ಲೋಕಗಳಿಲ್ಲ. ಹೀಗೆ ವಿಷ್ಣುವಿನ ಲೋಕದಲ್ಲಿ ಅಸಾಧಾರಣವಾದ ಲಿಂಗಗಳಿರುವುದನ್ನು

ಶ್ರುತಿಯು ವರ್ಣನೆ ಮಾಡಿದೆ. ಹಾಗೆ ವಿಷ್ಣುಲೋಕವನ್ನು ವರ್ಣಿಸುವಾಗ ಅದೇ ಶ್ರುತಿಯು 'ಬ್ರಹ್ಮಲೋಕ' ಎಂಬ ಪದವನ್ನು ಪ್ರಯೋಗಿಸಿದೆ. ಆದ್ದರಿಂದ ವಿಷ್ಣುಲೋಕವನ್ನೇ ಬ್ರಹ್ಮಲೋಕವೆನ್ನಬೇಕೆಂದು ನಮಗೆ ಸ್ಪಷ್ಟವಾಗುತ್ತದೆ. ಅದೇ 'ಬ್ರಹ್ಮಲೋಕ' ಶಬ್ದವು ಹೃತ್ಪದ್ಮಸ್ಥ ಪ್ರಕರಣದಲ್ಲಿಯೂ ಇರುತ್ತದೆ. ಇದರಿಂದ ನಾವು ಏನನ್ನು ತಿಳಿಯಬೇಕೆಂದರೆ ಹೃತ್ಪದ್ಮವು ವಿಷ್ಣುವಿನ ಲೋಕವೇ ಆಗಿದೆ. ವಿಷ್ಣುವಿನ ಲೋಕವಾಗಬೇಕೆಂದರೆ ಹೃತ್ಪದ್ಮದಲ್ಲಿರುವವನು ವಿಷ್ಣುವೇ ಆಗಿದ್ದಾನೆಂದು ತಿಳಿಯಬೇಕು.

ಈ ಸ್ವಾರಸ್ಯವನ್ನು ತಿಳಿಸುವುದಕ್ಕಾಗಿ 'ತಥಾಹಿ ದೃಷ್ಟಂ ಲಿಂಗಂ ಚ' ಎಂಬ ಮುಂದಿನ ಸೂತ್ರದ ಭಾಗವು ಹೊರಟಿದೆ. ಹಾಗಾದರೆ ಗತಿ ಶಬ್ದಾಭ್ಯಾಂ' ಎಂಬ ದ್ವಂದ್ವಸಮಾಸದಲ್ಲಿಯೇ ಈ ಲಿಂಗವನ್ನೂ ಕೂಡ ಸೇರಿಸಬಹುದಿತ್ತಲ್ಲವೇ? ಪ್ರತ್ಯೇಕವಾಗಿ ಏಕೆ ಹೇಳಿದರು ಎಂಬುದು ಮುಂದಿನ ಪ್ರಶ್ನೆ. ಆದರೆ ಸ್ವಲ್ಪ ವ್ಯತ್ಯಾಸವಿದೆ. ಸುಪ್ತಗಮ್ಯತ್ವ ಹಾಗೂ ಬ್ರಹ್ಮಶಬ್ದಗಳು ಹೃತ್ಪದ್ಮಸ್ಥನಾದವನು ಬ್ರಹ್ಮನೇ ಆಗಿದ್ದಾನೆನ್ನಲು ನೇರವಾದ ಹೇತುಗಳು.

'ಅರ' 'ಣ್ಯ' ಎಂಬ ಸುಧಾಸಮುದ್ರಾಶ್ರಯತ್ವವು ನೇರವಾದ ಹೇತುಗಳಾಗುವುದಿಲ್ಲ, ಹೊರತಾಗಿ ಹೇತುಸಾಧಕ ಹೇತುಗಳಾಗಿವೆ. ಆದ್ದರಿಂದ ಪ್ರತ್ಯೇಕವಾಗಿ ಸೂತ್ರಕಾರರು ಇದನ್ನು ಉಲ್ಲೇಖ ಮಾಡಿದ್ದಾರೆ. ಮತ್ತು 'ಅಹರಹರ್ಗಚ್ಛಂತ್ಯಃ' ಇತ್ಯಾದಿ ಶ್ರುತಿಯನ್ನು ಗಮನಿಸಿದಾಗ ಗತಿ ಮತ್ತು ಶಬ್ದಗಳು ಹೃತ್ಪದ್ಮಸ್ಥನಲ್ಲಿವೆ ಎಂದು ಸಿದ್ಧವಾಗಿವೆ. ಸುಧಾಸಮುದ್ರಾಶ್ರಯತ್ವವು ಹೃತ್ಪದ್ಮಸ್ಥನಲ್ಲಿದೆಯೆಂದು ಸಿದ್ಧವಾಗಿಲ್ಲ ಹೊರತು, ಸಾಧ್ಯವಾಗಿದೆ. ಸಿದ್ಧವಾದ ಹೇತುಗಳ ಜೊತೆಗೆ ಸಾಧ್ಯವಾದದ್ದನ್ನು ಸೇರಿಸುವುದು ಸ್ವರಸವಲ್ಲ ಎಂಬ ದೃಷ್ಟಿಯಿಂದ ಪ್ರತ್ಯೇಕವಾಗಿ ಹೇಳಿದ್ದಾರೆ. ಸಾಧ್ಯವಾದದ್ದನ್ನು ಸುಪ್ತಗಮ್ಯತ್ವ ಲಿಂಗದ ಉದಾಹರಣೆಯಿಂದ ಹೃತ್ಪದ್ಮಸ್ಥನಲ್ಲಿ ಇದೆಯೆಂದು ಸಾಧಿಸಬೇಕು. ಅದಕ್ಕೋಸ್ಕರವೇ 'ತಥಾ ದೃಷ್ಟಮ್' ಎಂಬ ಪದಗಳನ್ನು ಪ್ರಯೋಗಿಸಿದ್ದಾರೆ.

ಸುಧಾಸಮುದ್ರಾಶ್ರಯತ್ವವೆಂಬ ಲಿಂಗವು ಹೃತ್ಪದ್ಮಸ್ಥವೆಂಬ ಪಕ್ಷದಲ್ಲಿ ಇದೆಯೋ? ಇಲ್ಲವೋ? ಎಂಬ ಸಂಶಯವು ಬಂದರೆ 'ಹಿ' ಶಬ್ದವನ್ನು ಸೂತ್ರಕಾರರು ಪ್ರಯೋಗಿಸುತ್ತಾರೆ. ಅನೇಕ ಸ್ಮೃತಿವಾಕ್ಯಗಳ ಆಧಾರದಿಂದ ಹೃತ್ಪದ್ಮಸ್ಥನಲ್ಲಿ ಇಂತಹ ಸುಧಾಸಮುದ್ರಾಶ್ರಯಲೋಕವತ್ವವು ಇರುತ್ತದೆಂಬುದು ಪ್ರಸಿದ್ಧವಾಗಿದೆ. ಹೀಗೆ ಸೂತ್ರದಲ್ಲಿರುವ ಪ್ರತಿಯೊಂದು ಪದಗಳು ಅತ್ಯಂತ ಸ್ವರಸವಾಗಿವೆ. ಮತ್ತು 'ಗತಿಶಬ್ದಾಭ್ಯಾಂ ಎಂಬ ಸೂತ್ರಕ್ಕೆ ಎರಡನೆಯ ಸ್ಥಾನವನ್ನು ನೀಡಿದ್ದೂ ಕೂಡ ಅತ್ಯಂತ ಪೂರ್ಣವಾಗಿದೆಯೆಂದು ತಿಳಿಯಬೇಕು.

ಪ್ರಥಮಸೂತ್ರದಲ್ಲಿ ದಹರಸ್ಥನಾದವನು ಪರಮಾತ್ಮನೇ ಆಗಿದ್ದಾನೆನ್ನಲು ಪ್ರಬಲವಾದ ಶ್ರುತಿ ಹಾಗೂ ಲಿಂಗಪ್ರಮಾಣಗಳನ್ನು ಹೇಳಲಾಯಿತು. ವಿಷಯವಾಕ್ಯಕ್ಕಿಂತ ಸ್ವಲ್ಪದೂರದಲ್ಲಿರುವ ಶ್ರುತಿಲಿಂಗಗಳನ್ನು ಎರಡನೆಯ ಸೂತ್ರದಲ್ಲಿ ಹೇಳಿ ಹೇತುಸಾಧಕ ಹೇತುವನ್ನೂ ಕೂಡ ಸಮರ್ಥಿಸಲಾಯಿತು. ಹೀಗೆ ಶ್ರುತಿಲಿಂಗ ಪ್ರಮಾಣಗಳನ್ನು ಮೊದಲೆರಡು ಸೂತ್ರಗಳಲ್ಲಿ ಹೇಳಿದ ಮೇಲೆ ಸಮಾಖ್ಯಾಪ್ರಮಾಣವನ್ನು ಹೇಳುವುದಕ್ಕಾಗಿ ಮೂರನೆಯ ಸೂತ್ರವು ಹೊರಟಿದೆ. ಛಾಂದೋಗ್ಯದಲ್ಲಿ ಹೃತ್ಪದ್ಮದಲ್ಲಿರುವ ಆಕಾಶಸ್ಥನಾದವನನ್ನು ಪರಮಾತ್ಮನೆಂದು ಹೇಗೆ ವರ್ಣಿಸಲಾಗಿದೆಯೋ, ಅದರಂತೆ ಬೃಹದಾರಣ್ಯಕೋಪನಿಷತ್ತಿನಲ್ಲಿಯೂ ಕೂಡ ವರ್ಣನೆ ಇರುತ್ತದೆ. ಆದ್ದರಿಂದ ವಿಷ್ಣುವೇ ದಹರಾಕಾಶಸ್ಥನೆಂದು ಸ್ಪಷ್ಟವಾಗುತ್ತದೆ. ಮೂರನೆಯ ಈ ಸೂತ್ರದಲ್ಲಿ ಸಮಾಖ್ಯಾಪ್ರಮಾಣವನ್ನಷ್ಟೇ ಹೇಳುವುದಷ್ಟೇ ಅಲ್ಲದೇ ಭೂತಾಧಿಪತಿತ್ವ ಮೊದಲಾದ ವಿಷ್ಣುವಿನ ಮಹಿಮೆಯನ್ನೂ ಕೂಡ ಹೇಳಲಾಗಿದೆ.

'ಪ್ರಸಿದ್ಧೇಶ್ಚ' ಎಂಬ ನಾಲ್ಕನೆಯ ಸೂತ್ರಲ್ಲಿ ಕೇವಲ ಸಮಾಖ್ಯಾಪ್ರಮಾಣವನ್ನು ಹೇಳಿದ್ದಾರೆ. ಆದ್ದರಿಂದ. ಮೂರನೆಯ ಸೂತ್ರದ ಅನಂತರವೇ ಇದು ಪ್ರಸಕ್ತವಾಗುತ್ತದೆ. 'ಇತರಪರಾಮರ್ಶಾತ್ಸ ಇತಿ ಚೇನ್ನಾಸಂಭವಾತ್'

ಎಂಬ ಐದನೆಯ ಸೂತ್ರದಲ್ಲಿ ಸ್ವಪಕ್ಷ ಬಾಧಕ ಪ್ರಮಾಣವನ್ನು ಹೇಳಿ, ಪರಪಕ್ಷ ಸಾಧಕ ಪ್ರಮಾಣವನ್ನು ಆಶಂಕಿಸಿ; ಈ ಆಶಂಕೆಗಳನ್ನು ಪರಿಹರಿಸುವ ಮೂಲಕ ಪರಮಾತ್ಮನಲ್ಲಿಯೇ ಹೃತ್ಪದ್ಮಸ್ಥತ್ವವು ಬರುತ್ತದೆಂದು ಸಾಧಿಸಿರುವ ಕಾರಣ ಪರಪಕ್ಷ ನಿರಾಕರಣೆಗಾಗಿ ಹೊರಟಿರುವ ಈ ಸೂತ್ರಕ್ಕೆ ಐದನೆಯ ಸ್ಥಾನವು ಅತ್ಯಂತ ಸಮಂಜಸವಾಗಿದೆ. 'ಉತ್ತರಾಚ್ಚೇದಾವಿರ್ಭೂತಸ್ವರೂಪಸ್ತು' ಎಂಬ ಆರನೆಯ ಸೂತ್ರದಲ್ಲಿ ಜೀವನಲ್ಲಿಯೂ ಕೂಡ ಬ್ರಹ್ಮನ ಧರ್ಮಗಳನ್ನು ಹೇಳಬಹುದಲ್ಲವೇ? ಎಂಬ ಪ್ರಶ್ನೆಗೆ ಮೋಕ್ಷಾವಸ್ಥೆಯಲ್ಲಿ ಅಪಹತಪಾಪತ್ವಾದಿಗಳನ್ನು ಹೇಳಬಹುದಾದರೂ ಕೂಡ ಭಗವದಧೀನವೇ ಆಗಿರುವುದರಿಂದ ಸ್ವತಂತ್ರವಾದ, ಮುಖ್ಯವಾದ ಲಿಂಗವನ್ನು ಜೀವನಲ್ಲಿ ಉಪಪಾದಿಸಲು ಬರುವುದಿಲ್ಲವೆಂದು ಉತ್ತರಿಸಿದ್ದಾರೆ.

'ಅನ್ಯಾರ್ಥಾಶ್ಚ ಪರಾಮರ್ಶಃ' ಎಂಬ ಏಳನೆಯ ಸೂತ್ರದಲ್ಲಿ ಹಿಂದೆ ಪ್ರಸಕ್ತನಾದವನು ಪರಮಾತ್ಮನೇ ಆಗಿದ್ದಾನೆ. ಅವನನ್ನೇ 'ಏತತ್' ಶಬ್ದದಿಂದ ಪರಾಮರ್ಶಿಸಬೇಕೆಂದು ಸಮರ್ಥಿಸಲಾಗಿದೆ. 'ಅಲ್ಪಶ್ರುತೇರಿತಿ ಚೇತ್ ತದುಕ್ತಮ್' ಎಂಬ ಎಂಟನೆಯ ಸೂತ್ರದಲ್ಲಿ ಅಲ್ಪಸ್ಥಾನಸ್ಥಿತನಾದ ಪರಮಾತ್ಮನಿಗೆ ಸರ್ವಗತತ್ವವನ್ನು ಹೇಳುವುದು ಅನುಪಪನ್ನವಲ್ಲ. ಈ ವಿಷಯವನ್ನು 'ಅರ್ಭಕೌಕಸ್ತ್ವಾತ್' ಎಂಬ ಸರ್ವಗತಾಧಿಕರಣದಲ್ಲಿಯೇ ವಿವರಿಸಿದ್ದೇವೆಂದು ಸ್ಮರಿಸಿದ್ದಾರೆ. ಭಗವಂತನು ಹೇಗೆ ಪರಿಪೂರ್ಣನೋ, ಅದರಂತೆ ಅವನ ಅಂಶವೂ ಕೂಡ ಪರಿಪೂರ್ಣವಾದ್ದರಿಂದ ಎಲ್ಲೆಡೆ ವ್ಯಾಪ್ತನಾದ ಪರಮಾತ್ಮನು ಅಲ್ಪವಾದ ಹೃದಯಪ್ರದೇಶದಲ್ಲೂ ಇರುತ್ತಾನೆಂಬುದನ್ನು ತಿಳಿಯಬೇಕು. ಈ ವಿಷಯದಲ್ಲಿ ಶ್ರುತಿ-ಸ್ಮೃತಿಗಳೇ ಆಧಾರವಾಗಿವೆ.

ಅನುಕೃತ್ಯಧಿಕರಣ

ಈ ಅಧಿಕರಣದಲ್ಲಿ 'ಅನುಗ್ರಹ' ಎಂಬ ಲಿಂಗದ ಸಮನ್ವಯವನ್ನು ಮಾಡಲಾಗುತ್ತಿದೆ. 'ಅನುಗ್ರಹ' ಎಂದರೆ 'ಅನುಕೂಲ್ಯೇನ ಗೃಹ್ಯಮಾಣತ್ವ' ಎಂದರ್ಥ. 'ಅನುಕೂಲ್ಯೇನ ಗೃಹ್ಯಮಾಣತ್ವ' ಎಂದರೆ 'ಜ್ಞಾನಾರ್ಥಂ ಜ್ಞೇಯಸ್ಯ ಪ್ರಾರ್ಥನಾ' ಎಂದರ್ಥ. ಅಂದರೆ ಜ್ಞಾನಕ್ಕಾಗಿ ಜ್ಞಾನಿಜನರು ಮಾಡುವಂತಹ ಪ್ರಾರ್ಥನೆಯೇ 'ಅನುಕೂಲ್ಯೇನ ಗೃಹ್ಯಮಾಣತ್ವ' ಎನಿಸುತ್ತದೆ.

ಇದನ್ನು ಸ್ಪಷ್ಟವಾಗಿ ಹೀಗೆ ತಿಳಿಯಬೇಕು - ಮಗನನ್ನು ಹೇಗೆ ಕಾಣಲಿ? ಅವನು ಬರುತ್ತಾನೋ ? ಇಲ್ಲವೋ? ಎಂದು ಹೇಳಿದಾಗ ಮಗನ ಆಗಮನವೇ ತಂದೆಗೆ ಮುಖ್ಯಗುರಿಯಲ್ಲ. ಹೊರತು, ಅವನನ್ನು ನೋಡುವಿಕೆಯೇ ಮುಖ್ಯಗುರಿ. ಅದರಂತೆ ಪ್ರಕೃತದಲ್ಲಿ 'ಕಥಂ ನು ತದ್ವಿಜಾನೀಯಾಂ ಕಿಮು ಭಾತಿ ನ ಭಾತಿ ವಾ' ಎಂಬುದಾಗಿ ಭಗವಂತನ ಆವಿರ್ಭಾವಕ್ಕೋಸ್ಕರ ಜ್ಞಾನಿಯಾದವನು ಭಗವಂತನ ಜ್ಞಾನವನ್ನು ಪ್ರಾರ್ಥಿಸುತ್ತಾನೆ. ಈ ಪ್ರಾರ್ಥನೆಗೆ ಮುಖ್ಯವಿಷಯನಾದವನು ಅವನ ಜ್ಞಾನವಲ್ಲ. ಹೊರತು ಪರಮಾತ್ಮನೇ. ಹೀಗೆ ಅನುಕೂಲ್ಯೇನ ಗೃಹ್ಯಮಾಣತ್ವವು ಪರಮಾತ್ಮನಲ್ಲಿ ಬರುತ್ತದೆಂದು ಈ ಅಧಿಕರಣದಲ್ಲಿ ಸಿದ್ಧಾಂತ ಮಾಡಲಾಗುತ್ತದೆ. ಆದರೆ ಯಾವ ರೀತಿಯಾಗಿ ಪರಮಾತ್ಮನು ಜ್ಞಾನಿಜನರಿಗೆ ಪ್ರಿಯನಾದ್ದರಿಂದ ಪ್ರಾರ್ಥನಾವಿಷಯನಾಗಿದ್ದಾನೋ ಅದರಂತೆ ತಮ್ಮ ಸುಖವೂ ಸಹ ಜ್ಞಾನಿಗಳಿಗೆ ಪ್ರಿಯವೇ ಆಗಿರುತ್ತದೆ. ಹಾಗಾಗಿ ಅನುಕೂಲ್ಯೇನ ಗೃಹ್ಯಮಾಣತ್ವವು ಜ್ಞಾನಿಜನರ ಸುಖದಲ್ಲಿಯೂ ಕೂಡ ಬರುತ್ತದೆ. ಹೀಗೆ 'ಅನುಕೂಲ್ಯೇನ ಗೃಹ್ಯಮಾಣತ್ವ' ಎಂಬ ಲಿಂಗವು ಜ್ಞಾನಿಸುಖ ಮತ್ತು ಪರಮಾತ್ಮ ಇಬ್ಬರಲ್ಲಿಯೂ ಸಾಧಾರಣವಾದ್ದರಿಂದ ಉಭಯತ್ರಪ್ರಸಿದ್ಧವಾಯಿತು.

ಈ ಅಧಿಕರಣಕ್ಕೆ ಹಿಂದಿನ ಅಧಿಕರಣದಿಂದ ಆನಂತರ್ಯ ಸಂಗತಿಯು ಇರುತ್ತದೆ. ಹಿಂದಿನ ಅಧಿಕರಣದಲ್ಲಿ 'ತಸ್ಮಿನ್ ಯದಂತಃ' ಇತ್ಯಾದಿ ವಾಕ್ಯದಲ್ಲಿರುವ 'ತತ್' ಶಬ್ದದಿಂದ ಸನ್ನಿಹಿತವಾದದ್ದನ್ನೇ ಪರಾಮರ್ಶ ಮಾಡಬೇಕೆಂದು ಸಾಧಿಸಲಾಯಿತು. ಇಲ್ಲಿಯೂ ಸಹ ಸನ್ನಿಹಿತವಾದ ಜ್ಞಾನಿಸುಖವನ್ನೇ 'ತದೇತದಿತಿ ಮನ್ಯಂತೇ' ಎಂಬಲ್ಲಿರುವ 'ತತ್ ಶಬ್ದದಿಂದ ಪರಾಮರ್ಶ ಮಾಡಬೇಕೆಂದು ಪೂರ್ವಪಕ್ಷ ಮಾಡಲಾಗುತ್ತಿದೆ. ಹಿಂದಿನ ಅಧಿಕರಣದ ಸಿದ್ಧಾಂತ ನ್ಯಾಯವನ್ನು ಅವಲಂಬಿಸಿ, ಪೂರ್ವಪಕ್ಷ ಮಾಡುತ್ತಿರುವುದರಿಂದ ಆಪವಾದಿಕೀ ಸಂಗತಿ ಇರುತ್ತದೆ. ಅಥವಾ ಹಿಂದಿನ ಅಧಿಕರಣದಲ್ಲಿ 'ಏಷ ಆತ್ಮಾ' ಎಂಬಲ್ಲಿರುವ 'ಏಷಃ' ಎಂಬ ಶಬ್ದವು ಪುಲ್ಲಿಂಗದಲ್ಲಿದ್ದರೂ ನಪುಂಸಕಲಿಂಗದಿಂದ ಪ್ರಸಕ್ತನಾದ ಪರಮಾತ್ಮನನ್ನು ಪರಾಮರ್ಶ ಮಾಡಬಹುದೆಂದು ಸಮರ್ಥಿಸಲಾಯಿತು. ಆದರೆ ಈ ಅಧಿಕರಣದಲ್ಲಿ 'ತದೇತತ್' ಎಂಬಲ್ಲಿರುವ ಎರಡು ನಪುಂಸಕಲಿಂಗದ ಶಬ್ದಗಳು ತಪ್ಪಾಗುತ್ತವೆ ಎಂದು ಹಿಂದಿನ ಅಧಿಕರಣದ ಸಿದ್ಧಾಂತನ್ಯಾಯಕ್ಕೆ ವಿಪರೀತವಾದ ಮತವನ್ನು ಅವಲಂಬಿಸಿ ಪೂರ್ವಪಕ್ಷ ಮಾಡುತ್ತಿರುವುದರಿಂದ ಪ್ರತ್ಯುದಾಹರಣಸಂಗತಿಯನ್ನೂ ಕೂಡ ತಿಳಿಯಬಹುದು.

ಪೂರ್ವಪಕ್ಷದ ಫಲ - ಈ ವಿಕಲ್ಪಗಳಲ್ಲಿ ಮೊದಲನೆಯ ಪಕ್ಷವನ್ನು ಅಂಗೀಕಾರ ಮಾಡಿದರೆ, ಅನುಕೃತಿಯು ಆನುಕೂಲೇನ ಗೃಹ್ಯಮಾಣದಲ್ಲಿದೆಯೆಂದು ಹೇಳಿದಂತಾಗುವುದಿಲ್ಲ. ಆವಾಗ ಬ್ರಹ್ಮಪಕ್ಷದಲ್ಲಿ ಸಾಧಕಪ್ರಮಾಣವೂ ಕೂಡ ಬಾರದ ಕಾರಣ, 'ತದೇತತ್' ಎಂಬಲ್ಲಿರುವ 'ತತ್' ಶಬ್ದಾದಿಗಳಿಗೆ ಸನ್ನಿಹಿತವಾದ ಜ್ಞಾನಿಸುಖವನ್ನು ಪರಿತ್ಯಾಗ ಮಾಡಿ, ಕಾರಣವಿರುವುದಿಲ್ಲ. ಜ್ಞಾನಿಸುಖಪಕ್ಷದಲ್ಲಿ ಸಾಧಕಪ್ರಮಾಣವಿರುವುದರಿಂದ ಆನುಕೂಲ್ಯೇನ ಗೃಹ್ಯಮಾಣವಾದದ್ದು ಜ್ಞಾನಿಗಳ ಸುಖವೆಂದೇ ಹೇಳಬೇಕು.

ಸಿದ್ಧಾಂತದ ಫಲ - ಒಂದು ವೇಳೆ ಎರಡನೆಯ ಪಕ್ಷವನ್ನು ಒಪ್ಪಿದರೆ, ಆವಾಗ ಅನುಕೃತಿಗೆ ಆನುಕೂಲ್ಯೇನ ಗೃಹ್ಯಮಾಣನಿಷ್ಠತ್ವವನ್ನು ಹೇಳಿದಂತಾಗುತ್ತದೆ. ಬ್ರಹ್ಮಪಕ್ಷದಲ್ಲಿ ಸಾಧಕಪ್ರಮಾಣವಿರುವುದರಿಂದ ಅದೇ ಕಾರಣದಿಂದಲೇ 'ತದೇತತ್' ಎಂಬಲ್ಲಿರುವ 'ತತ್' ಶಬ್ದಾದಿಗಳಿಗೆ ಸನ್ನಿಹಿತವಾದ ಜ್ಞಾನಿಸುಖಪರತ್ವವನ್ನು ಹೇಳಲಾಗದು. ಜ್ಞಾನಿಸುಖ ಪಕ್ಷದಲ್ಲಿ ಸಾಧಕಪ್ರಮಾಣಗಳೂ ಕೂಡ ಇಲ್ಲದ ಕಾರಣ ಆನುಕೂಲ್ಯೇನ ಗೃಹ್ಯಮಾಣನಾದವನು ಬ್ರಹ್ಮನೆಂದೇ ಸಿದ್ಧವಾಗುತ್ತದೆ.

ಕಾಠಕೋಪನಿಷತ್ತಿನಲ್ಲಿ ಹೇಳಲ್ಪಟ್ಟ ಆನುಕೂಲ್ಯೇನ ಗೃಹ್ಯಮಾಣವು ಜ್ಞಾನಿಸುಖವೇ ಆಗಿದೆ ಹೊರತು, ಬ್ರಹ್ಮನಲ್ಲ. ಏಕೆಂದರೆ 'ಕಥಂ ನು ತದ್ವಿಜಾನೀಯಾಮ್' ಎಂಬಲ್ಲಿರುವ 'ತತ್' ಶಬ್ದದಿಂದ ಹಿಂದೆ ಪ್ರಕೃತವಾದ ಜ್ಞಾನಿಸುಖವನ್ನೇ ಪರಾಮರ್ಶ ಮಾಡಬೇಕು.

ಇದು ಬ್ರಹ್ಮಪ್ರಕರಣವಾಗಿರುವುದರಿಂದ ಮತ್ತು ಬ್ರಹ್ಮನ ಲಿಂಗವು ಕೇಳಿಸುತ್ತಿರುವುದರಿಂದ ಆನುಕೂಲ್ಯೇನ ಗೃಹ್ಯಮಾಣನಾದವನು ಬ್ರಹ್ಮನೇ ಏಕೆ ಆಗಬಾರದು ಎಂದು ಪ್ರಶ್ನಿಸಬಾರದು. ಏಕೆಂದರೆ ಪ್ರಕರಣ ಹಾಗೂ ಲಿಂಗಗಳಿಗಿಂತಲೂ 'ತತ್' 'ಏತತ್' ಎಂಬೆರಡು ಶ್ರುತಿಗಳು ಬಲಿಷ್ಠವಾಗಿವೆ. ಆದ್ದರಿಂದ 'ತಮಾತ್ಮಸ್ಥಂ ಯೇऽನುಪಶ್ಯಂತಿಧೀರಾಸ್ತೇಷಾಂ ಸುಖಂ ಶಾಶ್ವತಂ ನೇತರೇಷಾಮ್' ಎಂಬಲ್ಲಿ ಪರಮಾತ್ಮನನ್ನು ಕಂಡ ಜ್ಞಾನಿಗಳಿಗೆ ಪರಮಸುಖವಾಗುತ್ತದೆಂದು ಹೇಳಲಾಗಿದೆ. ಆ ಸುಖವನ್ನು 'ತದೇತದಿತಿ ಮನ್ಯಂತೇ' ಎಂಬ ಮುಂದಿನ ವಾಕ್ಯದಲ್ಲಿ 'ತದೇತತ್' ಎಂದು ಪರಾಮರ್ಶ ಮಾಡಿ, ಅನಿರ್ದೇಶ್ಯತ್ವವನ್ನು ಹೇಳಿದ್ದರಿಂದ ಜ್ಞಾನಿಸುಖವೇ ಆನುಕೂಲ್ಯೇನ ಗೃಹ್ಯಮಾಣವಾಗಿದೆಯೆಂದು ತಿಳಿಯುತ್ತದೆ.

ಹಿಂದಿನ ದಹರಾಧಿಕರಣದಲ್ಲಿ ವಿಧೇಯವಾದ ಆತ್ಮಶಬ್ದದ ಬಲದಿಂದ 'ಏತತ್' ಶಬ್ದವು ಪುಲ್ಲಿಂಗದಲ್ಲಿ ಪ್ರಯುಕ್ತವಾಗಿರುವುದು ಸಾಧುವೇ ಆಗಿದೆಯೆಂದು ಸಮರ್ಥಿಸಲಾಯಿತು. ಆದರಂತೆ ಪ್ರಕೃತ 'ತದೇತತ್' ಎಂಬಲ್ಲಿರುವ ಎರಡು ನಪುಂಸಕಲಿಂಗದ ಶಬ್ದಗಳಲ್ಲಿ ಒಂದು ಮಾತ್ರ ಉದ್ದೇಶ್ಯವಾಚಕ ಪದಕ್ಕೆ ಸಮಾನಾಧಿಕರಣವಾಗಬಹುದು. ಹೊರತು, ಎರಡೂ ಅಲ್ಲ ಆದ್ದರಿಂದ ಎರಡಕ್ಕೂ ನಪುಂಸಕಲಿಂಗತ್ವವನ್ನು ಸಮರ್ಥಿಸಲು ಬರುವುದಿಲ್ಲ. ಆದ್ದರಿಂದ ಪುಲ್ಲಿಂಗದಿಂದ ಪ್ರಸಕ್ತನಾದ ಪರಮಾತ್ಮನನ್ನು ಪರಾಮರ್ಶ ಮಾಡದೇ ಜ್ಞಾನಿಸುಖವನ್ನೇ ಪರಾಮರ್ಶ ಮಾಡಬೇಕು.

'ಅನಿರ್ದೇಶ್ಯಂ ಪರಮಂ ಸುಖಮ್' ಎಂಬ ವಾಕ್ಯದಲ್ಲಿ 'ರೂಪ' ಶಬ್ದವನ್ನು ಅಧ್ಯಾಹಾರ ಮಾಡಿ ಅಂತಹ ನಪುಂಸಕಲಿಂಗದ 'ರೂಪ' ಶಬ್ದದಿಂದ ಪರಮಾತ್ಮನು ಪ್ರಸಕ್ತನಾಗಿದ್ದಾನೆಂದು ಉತ್ತರಿಸಬೇಕು. ಆದರೆ ಯಾವುದೇ ಶಬ್ದಗಳನ್ನು ಅಧ್ಯಾಹಾರ ಮಾಡದೇ ನೇರವಾಗಿ ಜ್ಞಾನಿಸುಖಪರಾಮರ್ಶಕವೆಂದು ಸುಲಭವಾಗಿ ಹೇಳಲು ಬರುವಾಗ, ಕ್ಲಿಷ್ಟಕಲ್ಪನೆಯನ್ನು ಮಾಡಬಾರದು. ಮತ್ತು 'ತಮೇವ ಭಾಂತಮ್ ಅನುಭಾತಿ ಸರ್ವಮ್' ಎಂಬ ಶ್ರುತಿಯಲ್ಲಿರುವ 'ತಂ' ಎಂಬ ಶಬ್ದದಿಂದ ಪರಮಾತ್ಮನೇ ಪ್ರತಿಪಾದ್ಯನಾಗಿದ್ದಾನೆ. ಹಾಗೂ ಸೂರ್ಯಾದಿ ಪ್ರಕಾಶಕತ್ವ ಮೊದಲಾದ ಲಿಂಗಗಳು ಪರಮಾತ್ಮಪರವಾಗಿದ್ದರೂ 'ತದೇತತ್' ಎಂಬ ಶ್ರುತಿಯು ಜ್ಞಾನಿಸುಖವನ್ನೇ ಪರಾಮರ್ಶ ಮಾಡುತ್ತದೆ. ಆದ್ದರಿಂದ ಅನುಕೂಲ್ಯೇನ ಗೃಹ್ಯಮಾಣವಾದದ್ದು ಜ್ಞಾನಿಸುಖವೇ ಆಗುತ್ತದೆಂದು ಪೂರ್ವಪಕ್ಷವು ದೃಢವಾಯಿತು.

ಕಠೋಪನಿಷತ್ತಿನ ಕೊನೆಯಲ್ಲಿ 'ನ ತತ್ರ ಸೂರ್ಯೋ ಭಾತಿ ನ ಚಂದ್ರತಾರಕಮ್' ಇತ್ಯಾದಿ ವಾಕ್ಯಗಳಿಂದ 'ಸೂರ್ಯಾದ್ಯಪ್ರಕಾಶ್ಯತ್ವ' ಎಂಬ ಹೇತುವು, ಹಾಗೂ 'ತಮೇವ ಭಾಂತಮ್ ಅನುಭಾತಿ ಸರ್ವಮ್' ಇತ್ಯಾದಿ ವಾಕ್ಯದಿಂದ 'ಸೂರ್ಯಾದಿಪ್ರಕಾಶಹೇತುತ್ವ' ಎಂಬ ಹೇತುವು, ಮತ್ತು 'ತಸ್ಯ ಭಾಸಾ ಸರ್ವಮಿದಂ ವಿಭಾತಿ' ಇತ್ಯಾದಿ ವಾಕ್ಯದಿಂದ 'ಸರ್ವಜಗತ್‌ಪ್ರಕಾಶಕತ್ವ' ಹೇತುವು ಹೇಳಲ್ಪಟ್ಟಿದೆ. ಈ ಎಲ್ಲಾ ಹೇತುಗಳು ಪರಮಾತ್ಮನ ಅಸಾಧಾರಣ ಧರ್ಮವಾಗಿವೆ ಎಂಬುದು ಶ್ರುತಿ-ಸ್ಮೃತಿಗಳಿಂದ ಸಿದ್ಧವಾದ ವಿಚಾರ. ಆದ್ದರಿಂದ 'ಕಥಂ ನು ತದ್ವಿಜಾನೀಯಾಮ್' ಇತ್ಯಾದಿ ಹತ್ತಿರದಲ್ಲಿರುವ ವಾಕ್ಯದಿಂದ ಪ್ರಕೃತವಾದ ಅನುಕೂಲ್ಯೇನ ಗೃಹ್ಯಮಾಣನಾದವನು ಪರಮಾತ್ಮನೇ ಆಗುತ್ತಾನೆ.

ವಾಸ್ತವಿಕವಾಗಿ ಈಶ್ವರ ಪ್ರತಿಪಾದಕವಾದ 'ನಿತ್ಯೋ ನಿತ್ಯಾನಾಮ್' ಇತ್ಯಾದಿ ವಾಕ್ಯವು 'ನ ತತ್ರ ಸೂರ್ಯೋ ಭಾತಿ' ಎಂಬ ವಾಕ್ಯಕ್ಕಿಂತಲೂ ದೂರದಲ್ಲಿದೆ. 'ಕಥಂ ನು ತದ್ವಿಜಾನೀಯಾಮ್' ಇತ್ಯಾದಿ ವಾಕ್ಯವು ಹತ್ತಿರದಲ್ಲಿದೆ. ಆದರೂ 'ತಮೇವ ಭಾಂತಮ್' ಎಂಬ ಶ್ರುತಿಯಲ್ಲಿ 'ತಮ್' ಎಂಬ ಶಬ್ದವು ಪುಲ್ಲಿಂಗವಾದ್ದರಿಂದ ಈಶ್ವರ ಪರವೇ ಆಗಿದೆ. ಇದರ ಜೊತೆಗೆ ಸಮಾನಾರ್ಥವನ್ನು ಹೇಳಬೇಕಾದ್ದರಿಂದ, 'ನ ತತ್ರ ಸೂರ್ಯಃ' 'ತಸ್ಯ ಭಾಸಾ' ಇತ್ಯಾದಿ ವಾಕ್ಯಗಳೂ ಕೂಡ ಈಶ್ವರ ಪರವೇ ಆಗಿರುತ್ತವೆ. ಆದ್ದರಿಂದ ಸೂರ್ಯಾದಿ ಪ್ರಕಾಶ ಹೇತುತ್ವಾದಿಗಳನ್ನು ಅನುಕೂಲ್ಯೇನ ಗೃಹ್ಯಮಾಣನಲ್ಲಿ ಹೇಳಲು ಸಾಧ್ಯವಿಲ್ಲ. ಅಂದರೆ ಈಶ್ವರನನ್ನು ಸೂರ್ಯಾದಿ ಪ್ರಕಾಶಗಳಿಗೆ ಕಾರಣನಾಗಿದ್ದಾನೆಂದು ಒಪ್ಪೋಣ. ಹೊರತು, ಅನುಕೂಲ್ಯೇನ ಗೃಹ್ಯಮಾಣನಾಗಿದ್ದಾನೆಂದು ಒಪ್ಪಬೇಕಾಗಿಲ್ಲವಲ್ಲವೇ?

ಹೀಗೆ ಪ್ರಶ್ನಿಸಬಾರದು. ಏಕೆಂದರೆ, 'ಕಿಮು ಭಾತಿ ನ ಭಾತಿ ವಾ' ಎಂಬ ವಾಕ್ಯದಲ್ಲಿ ಯಾರಿಂದಲೂ ತಿಳಿಯಲು ಸಾಧ್ಯವಿಲ್ಲದವನೆಂದು ಹೇಳಲಾಗಿದೆ. ಅಂತಹ ವ್ಯಕ್ತಿಯೇ, 'ನ ತತ್ರ ಸೂರ್ಯೋ ಭಾತಿ' ಎಂಬ ವಾಕ್ಯದಿಂದ ಪ್ರತ್ಯಭಿಜ್ಞಾಯಮಾನನಾಗಿದ್ದಾನೆ. ಆದ್ದರಿಂದ ಗೌಣವಾದ ಪುಲ್ಲಿಂಗವೆಂಬ ಪ್ರತ್ಯಯಾರ್ಥವನ್ನು

ಅನುಸರಿಸುವುದಕ್ಕಾಗಿ ಪ್ರಧಾನವಾದ 'ತತ್ರ' 'ತಮ್', ತಸ್ಯ' ಇವೇ ಮೊದಲಾದ ಅನೇಕ ಪ್ರಾತಿಪದಿಕಗಳ ಅರ್ಥಕ್ಕೆ ಅಸ್ವಾರಸ್ಯವನ್ನು ಹೇಳುವುದು ಸರ್ವಥಾ ಅನ್ಯಾಯವಾಗುತ್ತದೆ.

ವಿಚಾರ ಮಾಡಿದರೆ 'ತತ್', 'ಏತತ್' ಎಂಬ ಶ್ರುತಿವಾಕ್ಯದಲ್ಲಿ ನಪುಂಸಕಲಿಂಗದ ಪ್ರಯೋಗ ಬಿಟ್ಟರೆ, ಹಿಂದಿನ-ಮುಂದಿನ ವಾಕ್ಯಗಳೆಲ್ಲೆಲ್ಲಾ ಇಂತಹ ಪುಲ್ಲಿಂಗ ಪ್ರಯೋಗವೇ ಕಾಣಿಸುತ್ತಿದೆ. ಇಂತಹ ಪುಲ್ಲಿಂಗ ಶಬ್ದಗಳಿಗಳಿಂದೆಲ್ಲಾ ಪರಮಾತ್ಮನೇ ಪ್ರತಿಪಾದ್ಯನಾಗಿದ್ದಾನೆ. ಆದ್ದರಿಂದ 'ತದೇತತ್' ಎಂಬಲ್ಲಿ ಮಾತ್ರ 'ರೂಪಮ್' ಎಂಬ ಶಬ್ದವನ್ನು ಅಧ್ಯಾಹಾರ ಮಾಡಿ ಸಮಸ್ಯೆಯನ್ನು ಪರಿಹರಿಸಲು ಬರುವಾಗ, ಈಶ್ವರಪರತ್ವವನ್ನು ಬಿಡುವುದರಲ್ಲಿ ಅರ್ಥವಿಲ್ಲ. ಆದ್ದರಿಂದ ಕಠೋಪನಿಷತ್ತಿನಲ್ಲಿ ಅನುಕೂಲ್ಯೇನ ಗೃಹ್ಯಮಾಣನಾದವನೆಂದು ಪ್ರತಿಪಾದ್ಯನಾದವನು ಪರಮಾತ್ಮನೇ ಆಗಿದ್ದಾನೆಂದು ತಿಳಿಯಬೇಕು.

'ಕಥಂ ನು ತದ್ವಿಜಾನೀಯಾತ್' ಎಂಬಲ್ಲಿರುವ 'ತತ್' ಶಬ್ದಕ್ಕೆ ಸನ್ನಿಹಿತ ಪರತ್ವವನ್ನು ಹೇಳುವುದಕ್ಕಾಗಿ ಜ್ಞಾನಿಸುಖವೇ ಅನುಕೂಲ್ಯೇನ ಗೃಹ್ಯಮಾಣವೆಂದು ಪೂರ್ವಪಕ್ಷಿಯು ಆಗ್ರಹಿಸುತ್ತಾನೆ. ಅದಕ್ಕಾಗಿ 'ತಮೇವ ಭಾಂತಮ್' ಎಂಬಲ್ಲಿರುವ 'ತಮ್' ಎಂಬ ಶಬ್ದವು ವ್ಯವಹಿತವಾದ ಈಶ್ವರಪರವಾಗಿದೆಯೆಂದೂ ಕೂಡ ಅವನು ಒಪ್ಪುತ್ತಾನೆ. ನಾವು 'ತಮೇವ ಭಾಂತಮ್' ಇತ್ಯಾದಿ ವಾಕ್ಯದಲ್ಲಿ ಸನ್ನಿಹಿತವಾದದ್ದು ಅನುಕೂಲ್ಯೇನ ಗೃಹ್ಯಮಾಣವಾಗಿರುವುದರಿಂದ 'ಕಥಂ ನು ತದ್ವಿಜಾನೀಯಾಂ' ಎಂಬಲ್ಲಿರುವ 'ತತ್' ಶಬ್ದಕ್ಕೆ ವ್ಯವಹಿತ ಈಶ್ವರಪರತ್ವವನ್ನು ಒಪ್ಪುತ್ತೇವೆ. ಈ ಎರಡು ಪಕ್ಷಗಳಲ್ಲಿ ಯಾವುದನ್ನು ಸ್ವೀಕರಿಸಬೇಕು ಎಂದರೆ, 'ತತ್ರ' 'ತಸ್ಯ' 'ತಮ್' ಎಂಬ ಮೂರು ಸ್ಥಳಗಳ ಮಧ್ಯದಲ್ಲಿ 'ತಮ್' ಎಂಬಲ್ಲಿ ಮಾತ್ರ ಪುಲ್ಲಿಂಗ ಇರುವುದನ್ನು ನೋಡಿ, ಅದು ಅನುಕೂಲ್ಯೇನ ಗೃಹ್ಯಮಾಣಪರವಲ್ಲವೆಂದು ಅದಕ್ಕೆ ವ್ಯವಹಿತವಾದ ಈಶ್ವರಪರತ್ವವನ್ನು ಪೂರ್ವಪಕ್ಷಿಯು ಒಪ್ಪುತ್ತಾನೆ. ಆದರೆ ನಾವು 'ನ ತತ್ರ ಸೂರ್ಯೋ ಭಾತಿ' ಇತ್ಯಾದಿ ಸ್ಥಳಗಳಲ್ಲಿರುವ 'ತತ್ರ' 'ತಸ್ಯ' 'ತಮ್' ಇತ್ಯಾದಿ ಪದಗಳಿಗೆ, ಸನ್ನಿಹಿತವಾದ ಅನುಕೂಲ್ಯೇನ ಗೃಹ್ಯಮಾಣಪರತ್ವವನ್ನೇ ಒಪ್ಪುತ್ತೇವೆ. ಆದರೆ 'ತದೇತದಿತಿ ಮನ್ಯಂತೇ' ಎಂಬಲ್ಲಿರುವ 'ತದೇತತ್' ಶಬ್ದಗಳಿಗೆ ವ್ಯವಹಿತವಾದ ಈಶ್ವರ ಪರತ್ವವನ್ನೇ ಸಾಧಿಸುತ್ತೇವೆ. ಈಶ್ವರ ಪರವಾದಾಗ ನಪುಂಸಕಪದ ಪ್ರಯೋಗವು ಹೇಗೆ ಉಪಪನ್ನವಾಗುತ್ತದೆ ? ಎಂಬುದು ಮುಂದಿನ ಪ್ರಶ್ನೆ. ಇದಕ್ಕೆ ಹೀಗೆ ಉತ್ತರಿಸಬೇಕು. 'ಯದ್ಬ್ರಹ್ಮ ಅನಿರ್ದೇಶ್ಯಮ್' 'ಯತ್ ಬ್ರಹ್ಮಣಃ ಅನಿರ್ದೇಶ್ಯಂ ಸುಖಂ ಸ್ವರೂಪಂ ತದ್ ಬ್ರಹ್ಮಣಃ ಸ್ವರೂಪಮ್' ಎಂದು ಯೋಜನೆಯನ್ನು ಮಾಡಬೇಕು. ಹೀಗೆ ಯೋಜನಾಭೇದದಿಂದ ನಪುಂಸಕಲಿಂಗದ ಪ್ರಯೋಗದ ವಿರೋಧವನ್ನು ಪರಿಹರಿಸಬಹುದು. ಆದ್ದರಿಂದ 'ತದೇತತ್' ಶಬ್ದಗಳು ಈಶ್ವರಪರವಾದರೆ ಏನೂ ಬಾಧಕವಿರುವುದಿಲ್ಲ.

ಈಶ್ವರನು ವ್ಯವಹಿತನಾಗಿದ್ದಾನೆಂದು ಪೂರ್ವಪಕ್ಷಿಗಳು ಹೇಳಿದ್ದು ತಪ್ಪು. ಎರಡು ಬಗೆಯಲ್ಲಿ ಈಶ್ವರನ ಪರಾಮರ್ಶವೇ 'ತದೇತತ್' ಶಬ್ದಗಳಿಂದ ಮಾಡಬೇಕೆಂಬುದು ಸಿದ್ಧವಾಗುತ್ತದೆ. 'ತದೇತದಿತಿಮನ್ಯಂತೇ' ಎಂಬ ಶ್ರುತಿಯ ಹಿಂದಿನ ವಾಕ್ಯದಲ್ಲಿ ಜ್ಞಾನಿಸುಖವು ಪ್ರಕೃತವಾಗಿದೆಯೆಂದು ಪೂರ್ವಪಕ್ಷಿಗಳು ಹೇಗೆ ಹೇಳುತ್ತಾರೆ? ಏಕೆಂದರೆ 'ತಮಾತ್ಮಸ್ಥಂ ಯೇऽನುಪಶ್ಯಂತಿ ಧೀರಾಃ ತೇಷಾಂ ಶಾಂತಿಃ ಶಾಶ್ವತೀ ನೇತರೇಷಾಮ್' ಎಂಬಲ್ಲಿ ಶಾಂತಿಶಬ್ದದಿಂದ ಜ್ಞಾನಿಸುಖವು ಪ್ರಕೃತವಾಗಿದೆಯೆಂದು ಹೇಳುವುದಾದರೆ, 'ತದೇತತ್' ಶಬ್ದಗಳಿಂದ ಇಂತಹ ಸುಖವನ್ನು ಪರಾಮರ್ಶ ಮಾಡಲು ಸಾಧ್ಯವಿಲ್ಲ. ಏಕೆಂದರೆ ಶಾಂತಿಶಬ್ದವು ಸ್ತ್ರೀಲಿಂಗದಲ್ಲಿರುವುದರಿಂದ ನಪುಂಸಕಲಿಂಗದ 'ತದೇತತ್' ಶಬ್ದಗಳಿಂದ ಪರಾಮರ್ಶ ಮಾಡಲು ಪೂರ್ವಪಕ್ಷಿಗಳಿಗೆ ಸಾಧ್ಯವಿಲ್ಲ. ಆದ್ದರಿಂದ ಅದಕ್ಕಿಂತಲೂ ಹಿಂದಿರುವ

'ತೇಷಾಂ ಸುಖಮ್' ಎಂಬ ವಾಕ್ಯದಲ್ಲಿ ಸುಖಶಬ್ದದಿಂದ ಪ್ರಕೃತವಾದದ್ದನ್ನು ಪರಾಮರ್ಶ ಮಾಡಬೇಕು. ಸುಖಶಬ್ದವು ನಪುಂಸಕಲಿಂಗದಲ್ಲಿರುವುದರಿಂದ 'ತದೇತತ್' ಶಬ್ದಗಳಿಂದ ಇದನ್ನು ಪರಾಮರ್ಶ ಮಾಡುವುದು ಸುಲಭವಾಗುತ್ತದೆ. ಆದರೆ 'ತೇಷಾಂ ಸುಖಮ್' ಎಂಬ ವಾಕ್ಯದ ಅನಂತರ 'ನಿತ್ಯೋ ನಿತ್ಯಾನಾಂ ಚೇತನಶ್ಚೇತನಾನಾಮ್' ಎಂಬ ವಾಕ್ಯವು ಪ್ರಸಕ್ತವಾಗಿದೆ. ಈ ವಾಕ್ಯದಿಂದ ಈಶ್ವರನೇ ಪ್ರತಿಪಾದ್ಯನೆಂಬುದು ಪೂರ್ವಪಕ್ಷಿಗಳಿಗೂ ಸಮ್ಮತ. ಆದ್ದರಿಂದ 'ತದೇತತ್' ಶ್ರುತಿಗೆ ಅತ್ಯಂತ ಹತ್ತಿರದಲ್ಲೇ ಇರುವ ಈಶ್ವರನನ್ನು ಪರಾಮರ್ಶ ಮಾಡಲು ಸಾಧ್ಯವಿರುವಾಗ 'ತೇಷಾಂ ಸುಖಮ್' ಎಂಬ ದೂರದ ವಾಕ್ಯದಲ್ಲಿರುವ ಜ್ಞಾನಿಸುಖವನ್ನು ಪರಾಮರ್ಶ ಮಾಡುವುದು ತಪ್ಪಾಗುತ್ತದೆ.

ಈಶ್ವರನು 'ಏಕೋ ವಶೀ ಸರ್ವಭೂತಾಂತರಾತ್ಮಾ' ಎಂಬ ವಾಕ್ಯದಿಂದ ಪ್ರಕೃತನಾಗಿದ್ದಾನೆ. ಈ ವಾಕ್ಯವು 'ತೇಷಾಂ ಸುಖಮ್' ಎಂಬ ವಾಕ್ಯಕ್ಕಿಂತಲೂ ದೂರದಲ್ಲಿದೆ. ಆದ್ದರಿಂದ ಜ್ಞಾನಿಸುಖದ ಪರಾಮರ್ಶವೇ ಹತ್ತಿರವಾಗುತ್ತದೆಂದು ಪೂರ್ವಪಕ್ಷಿಗಳು ಇದರ ಮೇಲೆ ವಾದ ಮಾಡಬಹುದು. ಆದರೆ ಹಾಗೇ ಒಪ್ಪಿದರೂ ಕೂಡ ಈಶ್ವರನ ಪರಾಮರ್ಶವೇ ಯುಕ್ತವಾಗುತ್ತದೆ. ವ್ಯವಹಿತವಾಗಿದ್ದರೂ ಯೋಗ್ಯತಾವಿದ್ದಲ್ಲಿ ಅದರ ಪರಾಮರ್ಶವು ನ್ಯಾಯಸಮ್ಮತ. ಆದ್ದರಿಂದ ಸನ್ನಿಹಿತವಾಗಿದೆಯೆಂಬ ಕಾರಣದಿಂದ ಯೋಗ್ಯತಾವಿಲ್ಲದಿದ್ದರೂ ಜ್ಞಾನಿಸುಖವನ್ನು ಪರಾಮರ್ಶ ಮಾಡುವುದು ತಪ್ಪಾಗುತ್ತದೆ. ದೂರದಲ್ಲಿದ್ದರೂ ಯೋಗ್ಯತಾದಿಗಳಿರುವ ಕಾರಣ ಈಶ್ವರನನ್ನು ಪರಾಮರ್ಶ ಮಾಡುವುದು ಸಮಂಜಸವಾಗುತ್ತದೆ.

ಅಥವಾ 'ನಿತ್ಯೋ ನಿತ್ಯಾನಾಮ್' ಎಂಬ ವಾಕ್ಯಕ್ಕಿಂತಲೂ 'ತಮಾತ್ಮಸ್ಥಂ ಯೇऽನುಪಶ್ಯಂತಿ ಧೀರಾಃ ತೇಷಾಂ ಶಾಂತಿಃ ಶಾಶ್ವತೀ ನೇತರೇಷಾಮ್' ಎಂಬ ವಾಕ್ಯವು ಹತ್ತಿರದಲ್ಲಿದೆ. ಇದರಿಂದ ಜ್ಞಾನಿಸುಖವನ್ನು ನಾವು ಪರಾಮರ್ಶ ಮಾಡುತ್ತೇವೆ. ಶಾಂತಿಶಬ್ದವು ಸ್ತ್ರೀಲಿಂಗದಲ್ಲಿದ್ದರೂ ಕೂಡ ಶಾಂತಿಶಬ್ದದ ಅರ್ಥ ಸುಖವಾದ್ದರಿಂದ, ಅದನ್ನು ವಿವಕ್ಷಿಸಿ ನಪುಂಸಕಲಿಂಗದ ಪ್ರಯೋಗವು ತಪ್ಪಾಗುವುದಿಲ್ಲವೆಂದು ಪೂರ್ವಪಕ್ಷಿಗಳ ಈ ಆಕ್ಷೇಪವು ತಪ್ಪು. ಏಕೆಂದರೆ ಜ್ಞಾನಿಸುಖವು ಹೀಗೆ ಅತ್ಯಂತ ಸನ್ನಿಹಿತವಾಗಿರಬಹುದು. ಆದರೆ ಅನಿರ್ದೇಶ್ಯತ್ವ, ಸೂರ್ಯಪ್ರಕಾಶಹೇತುತ್ವ, ಮೊದಲಾದ ಧರ್ಮಗಳಿಲ್ಲದ ಕಾರಣ ಯೋಗ್ಯತೆಯೇ ಇರುವುದಿಲ್ಲ. ಇಂತಹ ಧರ್ಮಗಳನ್ನು ಹೊಂದಿರುವ ಕಾರಣ ಯೋಗ್ಯತೆಯಿರುವಂತಹ ಈಶ್ವರನನ್ನು ವ್ಯವಹಿತನಾಗಿದ್ದರೂ ಪರಾಮರ್ಶ ಮಾಡುವುದು ನ್ಯಾಯಸಮ್ಮತವಾಗುತ್ತದೆ. ಆದ್ದರಿಂದ 'ತದೇತತ್' ಶಬ್ದಗಳಿಂದ ಈಶ್ವರನ ಪರಾಮರ್ಶ ಮಾಡುವುದೇ ಯುಕ್ತಿಯುಕ್ತವೆಂದು ಸಿದ್ಧವಾಯಿತು.

ಈ ಅಧಿಕರಣದಲ್ಲಿ 'ಅನುಕೃತೇಸ್ತಸ್ಯ ಚ' ಎಂದು 'ಅಪಿ ಸ್ಮರ್ಯತೇ' ಎಂದು ಎರಡು ಸೂತ್ರಗಳಿವೆ. ಪ್ರಥಮಸೂತ್ರದಲ್ಲಿರುವ 'ತಸ್ಯ'ಎಂಬ ಪದದಿಂದ ಸಮನ್ವಯ ಮಾಡುವಂತಹ 'ಅನುಕೂಲ್ಯೇನ ಗೃಹ್ಯಮಾಣತ್ವ' ಎಂಬ ಲಿಂಗವು ತಿಳಿಯುತ್ತಿದೆ. ಯಾವ 'ತಸ್ಯ' ಎಂಬ ಪದವು ಸಮನ್ವಯ ಮಾಡುವಂತಹ ಲಿಂಗವನ್ನು ತಿಳಿಸುತ್ತಿದೆಯೋ, ಅದೇ ಪದವು 'ತಸ್ಯಭಾಸಾ' ಎಂಬ ಶ್ರುತಿಯ ಪ್ರತೀಕಗ್ರಹಣವೂ ಆಗಿದೆಯೆಂಬುದೇ ಇಲ್ಲಿ ಗಮನಿಸಬೇಕಾದ ಸ್ವಾರಸ್ಯ . ಸೂತ್ರದಲ್ಲಿರುವ 'ಅನುಕೃತೇಃ' ಎಂಬ ಪದದಿಂದ ಸೂರ್ಯಾದಿಪ್ರಕಾಶ ಹೇತುತ್ವವೆಂಬ ಹೇತು ತಿಳಿಯುತ್ತದೆ. 'ತಸ್ಯ' ಎಂಬ ಪ್ರತೀಕ ಗ್ರಹಣದಿಂದ ಸಕಲಜಗತ್ಪ್ರಕಾಶಕತ್ವವೆಂಬ ಹೇತು, ಹಾಗೂ 'ಚ' ಶಬ್ದದಿಂದ ಸೂರ್ಯಾದ್ಯಪ್ರಕಾಶ್ಯತ್ವ ಎಂಬ ಹೇತು ತಿಳಿಯುತ್ತದೆ. ಹೀಗೆ ಸೂತ್ರದಲ್ಲಿರುವ ಮೂರು ಪದಗಳಿಂದ ಮೂರು ಹೇತುಗಳನ್ನು ಸೂತ್ರಕಾರರು ಹೇಳಿರುತ್ತಾರೆ.

ಸೂತ್ರದಲ್ಲಿರುವ 'ಚ' ಶಬ್ದವೂ ಕೂಡ ಎರಡು ಪ್ರಕಾರಗಳಲ್ಲಿ ಸಮುಚ್ಚಯವನ್ನು ಹೇಳುತ್ತಿದೆ. 'ಅಪಿ ಸ್ಮರ್ಯತೇ' ಎಂಬ ಸೂತ್ರಕ್ಕೆ ಎರಡು ಅರ್ಥಗಳಿವೆ. ಮೊದಲನೆಯ ಅರ್ಥದಲ್ಲಿ ಸೂರ್ಯಾದ್ಯಪ್ರಕಾಶತ್ವ ಹೇತುವನ್ನು

ಶ್ರುತಿ-ಸ್ಮೃತಿಸಿದ್ಧವಾಗಿದೆಯೆಂದು ಹೇಳುವುದಿಲ್ಲ. ಅದನ್ನು ಈ ಸೂತ್ರದಲ್ಲಿರುವ 'ಚ' ಶಬ್ದವು ಸಮುಚ್ಚಯ ಮಾಡುತ್ತಿದೆ. ಎರಡನೆಯ ವ್ಯಾಖ್ಯಾನದಲ್ಲಿ ಸರ್ವಜಗತ್‌ಪ್ರಕಾಶಕತ್ವವೆಂಬ ಹೇತುವನ್ನು ಸಮುಚ್ಚಯ ಮಾಡಲು 'ಚ' ಶಬ್ದವು ನಿವಿಷ್ಟವಾಗಿದೆಯೆಂದು ಹೇಳಿದಂತಾಗುತ್ತದೆ.

ಸ್ಪಷ್ಟವಾಗಿ ಹೀಗೆ ತಿಳಿಯಬೇಕು - 'ಅನುಕೃತೇಸ್ತಸ್ಯ ಚ' ಎಂಬ ಸೂತ್ರದಲ್ಲಿ ಅನುಕೃತಿಯೆಂಬ ಶಬ್ದದಿಂದ ಒಂದು ಲಿಂಗವನ್ನು 'ತಸ್ಯ' ಎಂಬ ವಾಕ್ಯಪ್ರತೀಕದಿಂದ ಮತ್ತೊಂದು ಲಿಂಗವನ್ನು 'ಚ' ಶಬ್ದದಿಂದ 'ಸೂರ್ಯಾದ್ಯಪ್ರಕಾಶ್ಯತ್ವ' ಎಂಬ ಮೂರನೆಯ ಲಿಂಗವನ್ನು ಹೇಳಿದಂತಾಯಿತು. ಅನಂತರ 'ಅಪಿ ಸ್ಮರ್ಯತೇ' ಎಂಬ ಎರಡನೆಯ ಸೂತ್ರದಲ್ಲಿ ಮೂರೂ ಲಿಂಗಗಳಿಗೂ ಶ್ರುತಿಸಮಾಖ್ಯಾವನ್ನು ಹೇಳುತ್ತಿಲ್ಲ. ಹೊರತಾಗಿ, 'ಸರ್ವಜಗತ್‌ಪ್ರಕಾಶಕತ್ವ' ಮತ್ತು 'ಸೂರ್ಯಾದಿಪ್ರಕಾಶಹೇತುತ್ವ' ಎಂಬೆರಡು ಹೇತುಗಳಿಗೆ ಮಾತ್ರ ಶ್ರುತಿಸಮಾಖ್ಯಾಪ್ರಮಾಣವನ್ನು ಹೇಳಲಾಗಿದೆ. 'ಚ'ಶಬ್ದದಿಂದ ಸೂಚಿತವಾದ ಸೂರ್ಯಾದ್ಯಪ್ರಕಾಶ್ಯತ್ವ ಎಂಬ ಹೇತುವಿಗೆ ಶ್ರುತಿಸಮಾಖ್ಯಾಪ್ರಮಾಣವನ್ನು ಹೇಳುತ್ತಿಲ್ಲ. ಇದು ಮೊದಲನೆಯ ವ್ಯಾಖ್ಯಾನ. 'ಅಪಿ ಸ್ಮರ್ಯತೇ' ಎಂಬ ಸೂತ್ರದ ಎರಡನೆಯ ವ್ಯಾಖ್ಯಾನದಲ್ಲಿ ಮೊದಲನೆಯ ಸೂತ್ರದಲ್ಲಿ ಹೇಳಲ್ಪಟ್ಟ ಮೂರೂ ಲಿಂಗಗಳಿಗೂ ಕೂಡ ಸ್ಮೃತಿಸಮಾಖ್ಯಾಪ್ರಮಾಣವನ್ನು ಹೇಳುತ್ತಿದ್ದಾರೆಂದು ಸಮರ್ಥಿಸಿದ್ದಾರೆ. 'ಅಪ್ರಿ ಸ್ಮರ್ಯತೇ' ಎಂಬ ಸೂತ್ರಕ್ಕೆ ಮೊದಲನೆಯ ವ್ಯಾಖ್ಯಾನವನ್ನು ವಿವಕ್ಷಿಸಿದಾಗ 'ಸೂರ್ಯಾದ್ಯಪ್ರಕಾಶಕತ್ವ' ಎಂಬ ಹೇತು ಅನುಕ್ತವಾಗುತ್ತದೆ. ಅದನ್ನು ಇಲ್ಲಿಯರುವ 'ಚ' ಶಬ್ದವು ಸಮುಚ್ಚಯ ಮಾಡುತ್ತಿದೆ ಎಂದು ಹೇಳಿದಂತಾಗುತ್ತದೆ. ಎರಡನೆಯ ವ್ಯಾಖ್ಯಾನದಲ್ಲಿ ಸೂರ್ಯಾದ್ಯಪ್ರಕಾಶ್ಯತ್ವವು ಎರಡನೆಯ ಸೂತ್ರದಿಂದ ಅನುಕ್ತವಾಗುವುದಿಲ್ಲ; ಉಕ್ತಪ್ರಾಯವೇ ಆಗುತ್ತದೆ. ಈ ಪಕ್ಷದಲ್ಲಿ 'ಸರ್ವಜಗತ್‌ಪ್ರಕಾಶಕತ್ವ' ಎಂಬ ಉಕ್ತವಾದ ಹೇತುವನ್ನೇ ಸಮುಚ್ಚಯ ಮಾಡುತ್ತಿದೆಯೆಂದು ಹೇಳಿದಂತಾಗುತ್ತದೆ. ಅಂದರೆ ಇಲ್ಲಿರುವ ಸಣ್ಣ ವ್ಯತ್ಯಾಸವನ್ನು ಗಮನಿಸಬೇಕು -

ರಾಮಾನುಜರು ಈ ಸೂತ್ರದಲ್ಲಿ 'ಚ' ಶಬ್ದವಿರುವುದರಿಂದ ಇದು ಬೇರೆ ಅಧಿಕರಣವೇ ಆಗುವುದಿಲ್ಲವೆಂದು ವಾದ ಮಾಡುತ್ತಾರೆ. ಅವರನ್ನು ಈಗ ನಿರಾಕರಿಸಿದಂತಾಯಿತು.

ಸೂರ್ಯನಲ್ಲಿ ಕೇವಲ ಪ್ರಕಾಶಶಕ್ತಿಯಷ್ಟೇ ಇರುವುದಲ್ಲ.

'ತಾಪಿನೀ ಪಾಚಿನೀ ಚೈವ ಶೋಷಿಣೀ ಚ ಪ್ರಕಾಶಿನೀ ।
ನೈವ ರಾಜನ್ ರವೇಃ ಶಕ್ತಿಃ ಶಕ್ತಿರ್ನಾರಾಯಣಸ್ಯ ಸಾ ॥

ಎಲೈ ! ರಾಜನೇ, ಸೂರ್ಯನು ಎಲ್ಲವನ್ನೂ ಸುಡುತ್ತಾನೆ, ಬೇಯಿಸುತ್ತಾನೆ, ಒಣಗಿಸುತ್ತಾನೆ. ಪ್ರಕಾಶ ಪಡಿಸುತ್ತಾನೆ. ಆದರೆ ಅವನಲ್ಲಿರುವ ಈ ಎಲ್ಲ ಶಕ್ತಿಗಳು ನಾರಾಯಣನದ್ದೇ ಹೊರತು, ಅವನದ್ದಲ್ಲ ಎಂದು. ಮಹಾಭಾರತದ ಈ ಮಾತಿನಂತೆ ಪಾಚನ ಮೊದಲಾದ ಕೃತಿಗಳು ಸೂರ್ಯನಲ್ಲಿ ಪ್ರಸಿದ್ಧವಾಗಿವೆ. ಇವುಗಳ ಸಮನ್ವಯ ಮಾಡುವ ಉದ್ದೇಶದಿಂದ ಸೂತ್ರದಲ್ಲಿ 'ಅನುಭಾನಮ್' ಎಂದು ಹೇಳದೇ 'ಅನುಕೃತೇಃ' ಎಂದು ಹೇಳಿದ್ದಾರೆ.

ಎರಡನೆಯ ಸೂತ್ರದಲ್ಲಿ ಸ್ಮೃತಿಯನ್ನೇ ಕಂಠತಃ ಹೇಳಿ, ಶ್ರುತಿಯನ್ನು 'ಅಪಿ' ಶಬ್ದದಿಂದ ಸಮುಚ್ಚಯ ಮಾಡಿದ್ದಾರೆ. ಸ್ಮೃತಿಗಿಂತಲೂ ಶ್ರುತಿಯೇ ಪ್ರಬಲವಾದ್ದರಿಂದ.

ವಾಮನಾಧಿಕರಣ

ವಾಮನಾಧಿಕರಣವು ಪ್ರಾರಂಭವಾಗುತ್ತಿದೆ. ಈ ಅಧಿಕರಣದಲ್ಲಿ 'ಈಶಾನ' ಶಬ್ದವನ್ನು ವಿಷ್ಣುಪರನಲ್ಲಿ ಸಮನ್ವಯ ಮಾಡುತ್ತಿದ್ದಾರೆ. 'ಪ್ರೇರಕತ್ವ' ಎಂಬ ಧರ್ಮವು 'ಈಶಾನ' ಶಬ್ದದ ಪ್ರವೃತ್ತಿನಿಮಿತ್ತ. ಕಿಂಚಿತ್ ಸಂಕುಚಿತವಾದ ಪ್ರೇರಕತ್ವವನ್ನೇ ಪ್ರವೃತ್ತಿನಿಮಿತ್ತವೆನ್ನಬೇಕು. ಏಕೆಂದರೆ ಅಸಂಕುಚಿತವಾದ ಪ್ರವೃತ್ತಿನಿಮಿತ್ತ ವಾಯುದೇವರಲ್ಲಿಯೂ ಬರುವುದಿಲ್ಲ. ಅತ್ಯಂತ ಸಂಕುಚಿತವಾದ ಪ್ರವೃತ್ತಿನಿಮಿತ್ತ ರುದ್ರಾದಿಗಳಲ್ಲಿಯೂ ಬರುತ್ತದೆ. ಆದ್ದರಿಂದ ಕಿಂಚಿತ್ ಸಂಕುಚಿತವಾದ ಪ್ರವೃತ್ತಿನಿಮಿತ್ತ ವಾಯುದೇವರಲ್ಲಿ ಮಾತ್ರ ಬರುವುದರಿಂದ 'ಈಶಾನ' ಶಬ್ದವು ವಿಷ್ಣು ಹಾಗೂ ವಾಯು ಇಬ್ಬರಲ್ಲಿ ಪ್ರಸಿದ್ಧವಾಗಿದೆಯೆಂದು ಹೇಳಿದಂತಾಗುತ್ತದೆ.

ಹಿಂದಿನ ಅಧಿಕರಣದಲ್ಲಿ 'ತಮಾತ್ಮಸ್ಥಂ ಯೇऽನುಪಶ್ಯಂತಿ ಧೀರಾಃ ತೇಷಾಂ ಸುಖಂ ಶಾಶ್ವತಮ್' ಎಂಬ ಶ್ರುತಿಯಿಂದ ವಿಷ್ಣು ಜ್ಞಾನದಿಂದಲೇ ಮೋಕ್ಷವಾಗುತ್ತದೆಂದು ಹೇಳಿದರು. ಆದರೆ 'ವಿಶ್ವೇದೇವಾ ಉಪಾಸತೇ' ಎಂಬ ವಾಕ್ಯವನ್ನು ನೋಡಿದಾಗ, ವಾಯುದೇವರ ಜ್ಞಾನದಿಂದಲೂ ಮೋಕ್ಷವಾಗುತ್ತದೆಂದು ತಿಳಿಯುತ್ತಿದೆ. ಹೀಗಿರುವಾಗ ವಿಷ್ಣುಜ್ಞಾನದಿಂದಲೇ ಮೋಕ್ಷವಾಗುತ್ತದೆಂದು ಹಿಂದಿನ ಅಧಿಕರಣದಲ್ಲಿ ಹೇಳಿದ್ದು ಹೇಗೆ ಸಮಂಜಸವಾಗುತ್ತದೆ ? ಎಂಬ ಆಕ್ಷೇಪಕ್ಕೆ ಈ ಅಧಿಕರಣದಲ್ಲಿ ಉತ್ತರಿಸುತ್ತಿರುವುದರಿಂದ ಅನುಕೃತ್ಯಧಿಕರಣದ ಅನಂತರವೇ ವಾಮನಾಧಿಕರಣವು ಹೊರಡುವುದು ಸಂಗತವಾಗಿದೆ. ಹೀಗೆ ಹಿಂದಿನ ಅಧಿಕರಣದಿಂದ ಅನಂತರ್ಯಸಂಗತಿಯನ್ನು ತಿಳಿಯಬೇಕು.

ಈ ಅಧಿಕರಣದಲ್ಲಿ ಕಾಠಕೋಪನಿಷತ್ತಿನ ಎರಡನೆಯ ಅಧ್ಯಾಯದಲ್ಲಿರುವ 'ಮಧ್ಯೇ ವಾಮನಮಾಸೀನಂ ವಿಶ್ವದೇವಾ ಉಪಾಸತೇ' ಎಂಬ ವಾಕ್ಯವು ವಿಷಯವಾಗಿದೆ. ಈ ವಾಕ್ಯದಲ್ಲಿರುವ 'ವಾಮನ' ಶಬ್ದವು ಮುಖ್ಯಪ್ರಾಣದೇವರನ್ನು ಪ್ರತಿಪಾದಿಸುತ್ತಿದೆಯೋ, ಅಥವಾ ವಿಷ್ಣುವನ್ನು ಪ್ರತಿಪಾದಿಸುತ್ತಿದೆಯೋ? ಎಂಬ ಗೊಂದಲವು ಪ್ರಾಪ್ತವಾದಾಗ ಅನೇಕ ಮುಖ್ಯಪ್ರಾಣಲಿಂಗಗಳಿರುವುದರಿಂದ ಲಿಂಗಗಳು ನಿರವಕಾಶವಾಗಿರುವುದರಿಂದ ವಿಷ್ಣುವಿಷಯಕವಾದ ವಾಮನಶ್ರುತಿಯು ಬಾಧಿತವಾಗುತ್ತದೆ. ಆದ್ದರಿಂದ ಮುಖ್ಯಪ್ರಾಣದೇವರೇ 'ಈಶಾನ' ಶಬ್ದದಿಂದ ಪ್ರತಿಪಾದ್ಯರಾಗುತ್ತಾರೆಂಬುದು ಪೂರ್ವಪಕ್ಷಕಾರರು ಸಮರ್ಥಿಸುತ್ತಾರೆ.

ಲಿಂಗಗಳು ಮುಖ್ಯಪ್ರಾಣದೇವರಲ್ಲಿ ಅನೇಕವಾಗಿದ್ದರೂ ಅವೆಲ್ಲವೂ ಸಾವಕಾಶವಾಗಿರುವುದರಿಂದ, ಶ್ರುತಿಯು ಸ್ವಭಾವತಃ ಮತ್ತು ನಿರವಕಾಶತ್ವ ಪ್ರಯುಕ್ತವಾಗಿ ಬಲಿಷ್ಠವಾದ್ದರಿಂದ, ಅನೇಕ ಲಿಂಗಗಳನ್ನೆಲ್ಲಾ ಬಾಧಿಸುತ್ತದೆ. ಆದ್ದರಿಂದ ವಿಷ್ಣುವೇ 'ಈಶಾನ' ಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆಂದು ಸಿದ್ಧಾಂತಿಗಳು ಸ್ಥಾಪನೆ ಮಾಡುತ್ತಾರೆ.

ಕಾಠಕೋಪನಿಷತ್ತಿನಲ್ಲಿ 'ಊರ್ಧ್ವಂ ಪ್ರಾಣಮ್ ಉನ್ನಯತಿ ಅಪಾನಂ ಪ್ರತ್ಯಗಸ್ಯತಿ। ಮಧ್ಯೇ ವಾಮನಮಾಸೀನಂ ವಿಶ್ವೇದೇವಾ ಉಪಾಸತೇ' ಎಂಬ ವಾಕ್ಯವಿದೆ. ತಾನು ಮಧ್ಯದಲ್ಲಿದ್ದು ಪ್ರಾಣನನ್ನು ಮೇಲ್ಮುಖವಾಗಿ, ಅಪಾನನನ್ನು ಕೆಳಮುಖವಾಗಿ ನಿಯಂತ್ರಿಸುವ ವಾಮನನನ್ನು ಎಲ್ಲ ದೇವತೆಗಳು ಉಪಾಸನೆ ಮಾಡುತ್ತಾರೆ ಎಂದು ಈ ಶ್ರುತಿಯ ಅರ್ಥ. ಇದರ ಹಿಂದಿನ ವಾಕ್ಯದಲ್ಲಿ 'ಈಶಾನೋ ಭೂತಭವ್ಯಸ್ಯ' ಹಿಂದಿನ-ಮುಂದಿನ ಪದಾರ್ಥಗಳಿಗೆಲ್ಲಾ ಅವನೇ ಒಡೆಯನು ಎಂಬುದಾಗಿ 'ಈಶಾನ' ಎಂಬ ಶಬ್ದದ ಉಲ್ಲೇಖವಿದೆ. ಇದರಿಂದ ಪ್ರಾಣಾದಿಗಳ ವ್ಯವಸ್ಥಾಪಕನು ಈಶಾನನೆಂದು ಹೇಳಿದಂತಾಗುತ್ತದೆ. ಪ್ರಾಣಾದಿ ವ್ಯವಸ್ಥಾಪಕತ್ವವು ಮುಖ್ಯಪ್ರಾಣದೇವರ ಲಿಂಗವಾದ್ದರಿಂದ

ವಾಯುದೇವರೇ 'ಈಶಾನ' ಎನಿಸುತ್ತಾರೆ. ಏಕೆಂದರೆ ಈ ಮಂತ್ರದಲ್ಲಿ ಮೂರು ಲಿಂಗಗಳಿವೆ. ಒಂದು ಪ್ರಾಣಾದಿ ವ್ಯವಸ್ಥಾಪಕತ್ವ, ೨. ಮಧ್ಯಮತ್ವ, ೩. ಸರ್ವದೇವೋಪಾಸ್ಯತ್ವ. ಈ ಮೂರೂ ಲಿಂಗಗಳು ಮುಖ್ಯಪ್ರಾಣದೇವರ ಧರ್ಮಗಳೇ ಆಗಿವೆ. ಷಟ್‌ಪ್ರಶ್ನೋಪನಿಷತ್ತಿನಲ್ಲಿ 'ಏವಮೇವ ಏಷಃ ಪ್ರಾಣಃ' ಎಂಬ ವಾಕ್ಯದಿಂದ ಪ್ರಾಣಾದಿ ವ್ಯವಸ್ಥಾಪಕತ್ವವು ಮುಖ್ಯಪ್ರಾಣದೇವರಲಿಂಗವೆಂದು ನಿರ್ಣಯಿಸಲಾಗಿದೆ. ಬೃಹದಾರಣ್ಯಕೋಪನಿಷತ್ತಿನಲ್ಲಿ 'ಯೋಽಯಂ ಮಧ್ಯಮಃ ಪ್ರಾಣಃ' ಎಂಬ ವಾಕ್ಯದಿಂದ ಮಧ್ಯಮತ್ವವು ಮುಖ್ಯಪ್ರಾಣದೇವರ ಲಿಂಗವೆಂದು ಸಮರ್ಥಿಸಲಾಗಿದೆ. 'ಕುವಿದಂಗ' ಎಂಬ 'ಋಚ್' ಮಂತ್ರದಲ್ಲಿ ಸರ್ವದೇವೋಪಾಸ್ಯತ್ವವು ಮುಖ್ಯಪ್ರಾಣದೇವರ ಲಿಂಗವೆಂದು ನಿರ್ಣಯಿಸಲಾಗಿದೆ. ಇದೇ ಮೂರು ಲಿಂಗಗಳು ಈಶಾನನಲ್ಲಿ ಸ್ಥಿತವಾದ್ದರಿಂದ ಈಶಾನನು ಮುಖ್ಯಪ್ರಾಣದೇವರೇ ಆಗುತ್ತಾರೆ.

'ಪ್ರಾಣಾದಿ ನಿಯಾಮಕತ್ವ', 'ಮಧ್ಯಮತ್ವ', 'ಸರ್ವದೇವೋಪಾಸ್ಯತ್ವ' ಈ ಮೂರು ಲಿಂಗಗಳು ಮುಖ್ಯಪ್ರಾಣದೇವರೇ ಈಶಾನರಾಗಿದ್ದಾರೆನ್ನಲು ಹೇತುಗಳಾಗಿವೆ. ಈ ಮೂರೂ ವಿಧವಾದ ಲಿಂಗಗಳು ವಿಷ್ಣುವಿನಲ್ಲಿ ಸಾವಕಾಶವಾಗಿವೆಯೆಂದು ಶಂಕಿಸಬಾರದು. ಏಕೆಂದರೆ 'ಅಯಂವಾವ ಶಿಶುರ್ಯೋಽಯಂ ಮಧ್ಯಮಃ ಪ್ರಾಣಃ' ಎಂಬ ಶ್ರುತಿಯು ಶಿಶುವೆನಿಸಿದ ಮುಖ್ಯಪ್ರಾಣದೇವರನ್ನೇ 'ಮಧ್ಯಮ' ಎಂದು ಕರೆಯುತ್ತಿದೆ. ಈ ಶ್ರುತಿಯ ಸಮಾಖ್ಯಾನದಿಂದ 'ಮಧ್ಯೇ ವಾಮನಮಾಸೀನಂ' ಎಂಬಲ್ಲಿಯೂ ಕೂಡ ಮುಖ್ಯಪ್ರಾಣದೇವರೇ ಪ್ರತಿಪಾದ್ಯರಾಗಿದ್ದಾರೆ. ಈ ಮಧ್ಯಮ ಶಬ್ದವು ತಾರತಮ್ಯ ಕಕ್ಷೆಯಲ್ಲಿ ಮುಖ್ಯಪ್ರಾಣದೇವರು ಅವಾಂತರನಿಯಾಮಕರಾಗಿದ್ದಾರೆಂದೇ ಹೇಳುತ್ತಿದೆ. ಹೊರತು, ಹೃದಯಮಧ್ಯದಲ್ಲಿರುತ್ತಾರೆ ಎಂಬರ್ಥವನ್ನು ಹೇಳುತ್ತಿಲ್ಲ. ಆದ್ದರಿಂದ ಈ ಮಧ್ಯಮತ್ವವು ಮುಖ್ಯಪ್ರಾಣದೇವರನ್ನು ಬಿಟ್ಟು ವಿಷ್ಣುವಿನಲ್ಲಿ ಸರ್ವಥಾ ಬರುವುದಿಲ್ಲ.

ಇನ್ನು ಸರ್ವನಿಯಾಮಕತ್ವವಾಗಲೀ, 'ಊರ್ಧ್ವಂ ಪ್ರಾಣಮುನ್ನಯತಿ' ಎಂಬ ಶ್ರುತಿಯು ಪ್ರಾಣವ್ಯವಸ್ಥಾಪಕತ್ವ ಲಿಂಗವನ್ನು ಹೇಳುತ್ತಿದೆ. 'ವಿಶ್ವೇದೇವಾ ಉಪಾಸತೇ' ಎಂಬ ಶ್ರುತಿಯು ದೇವೋಪಾಸ್ಯತ್ವವನ್ನು ಹೇಳುತ್ತಿದೆ. ಈ ಲಿಂಗಗಳು ವಿಷ್ಣುವಿನಲ್ಲಿ ಸಾವಕಾಶವಾಗಿವೆ. ಏಕೆಂದರೆ, ಸರ್ವನಿಯಾಮಕನಾದ್ದರಿಂದ ಸರ್ವದೇವೋಪಾಸ್ಯನಾದ್ದರಿಂದ, ಮಹಾವಿಷ್ಣುವು ಪ್ರಾಣಾದಿ ವ್ಯವಸ್ಥಾಪಕನು ಮತ್ತು ದೇವೋಪಾಸ್ಯನು ಆಗುತ್ತಾನಲ್ಲವೇ? ಎಂದು ಪ್ರಶ್ನಿಸಬಾರದು. ಶ್ರುತಿಯಲ್ಲಿ ಸ್ಪಷ್ಟವಾಗಿ ಪ್ರಾಣನಿಯಾಮಕತ್ವ, ದೇವೋಪಾಸ್ಯತ್ವಗಳನ್ನು ಹೇಳಿರುವಾಗ, ಸಕಲ ನಿಯಾಮಕತ್ವವನ್ನಾಗಲೀ, ಸಕಲ ದೇವೋಪಾಸ್ಯತ್ವವನ್ನಾಗಲೀ ಇಟ್ಟುಕೊಳ್ಳುವುದು ತಪ್ಪಾಗುತ್ತದೆ. ಪೂರ್ವಮೀಮಾಂಸೆಯ 'ಶೇಷಸ್ತು ಗುಣಸಂಯುಕ್ತಃ' ಎಂಬ ಅಧಿಕರಣದಲ್ಲಿ ಆಗ್ನೇಯ ಶಬ್ದದಿಂದ ಆಗ್ನೇಯಪುರೋಡಾಶವನ್ನಷ್ಟೇ ವಿವಕ್ಷಿಸಬೇಕು ಹೊರತು, ಐಂದ್ರಾಗ್ನ್ಯಾದಿ ಪುರೋಡಾಶಗಳನ್ನು ವಿವಕ್ಷಿಸಬಾರದೆಂದು ನಿರ್ಣಯಿಸಿದ್ದಾರೆ. ಅದರಂತೆ ಇಲ್ಲಿಯೂ ಕೂಡ ಶ್ರುತ್ಯಂತರದಲ್ಲಿ ಕೇವಲ ಪ್ರಾಣನಿಯಾಮಕತ್ವ, ದೇವೋಪಾಸ್ಯತ್ವಗಳಷ್ಟೇ ಕೇಳಿಸುತ್ತಿರುವಾಗ ಇದರಿಂದ ವಿಷ್ಣುವಿನಲ್ಲಿರುವ ಸಕಲ ನಿಯಾಮಕತ್ವವನ್ನಾಗಲೀ, ಸಕಲ ದೇವೋಪಾಸ್ಯತ್ವವನ್ನಾಗಲೀ ವಿವಕ್ಷಿಸುವುದು ತಪ್ಪಾಗುತ್ತದೆ. ಆದ್ದರಿಂದ ಮೂರೂ ವಿಧವಾದ ಲಿಂಗಗಳು ನಿರವಕಾಶಗಳಾಗಿದೆ ಎಂದು ತಿಳಿಯಬೇಕು.

ವಿಷ್ಣುವೇ 'ಈಶಾನ' ಎಂಬ ಶಬ್ದದಿಂದ ಪ್ರತಿಪಾದ್ಯನು ಹೊರತು, ಮುಖ್ಯಪ್ರಾಣದೇವರಲ್ಲ. ಕಾರಣವೇನೆಂದರೆ 'ಮಧ್ಯೇ ವಾಮನಮಾಸೀನಂ' ಎಂಬ ವಾಮನ ಶ್ರುತಿಯು ವಿಷ್ಣುಪ್ರತಿಪಾದಕವಾಗಿದೆ. ಅದೇ ಶ್ರುತಿಯಲ್ಲಿ 'ಈಶಾನ' ಶಬ್ದವಿರುವುದರಿಂದ, ವಿಷ್ಣುವೇ ಈಶಾನನಾಗುತ್ತಾನೆಂದು ಸಿದ್ಧಾಂತ.

ವಾಮನ ಶ್ರುತಿಯು ವಿಷ್ಣುಪರವಾಗಿದೆಯೆಂದು ಹೇಗೆ ನಿರ್ಣಯಿಸುತ್ತೀರಿ ? ಎಂಬ ಪ್ರಶ್ನೆಗೆ ಹೀಗೆ ಉತ್ತರಿಸಬೇಕು. ಶ್ರುತಿಯು ಸಹಜವಾಗಿ ಸಾವಿರಲಿಂಗಗಳಿಗಿಂತಲೂ ಬಲಿಷ್ಠವಾಗಿರುತ್ತದೆ. ಒಂದು ವೇಳೆ ನಿರವಕಾಶವಾಗಿದ್ದಲ್ಲಿ ಅದೇ ಶ್ರುತಿಯು ಸಾವಕಾಶವಾದ ಸಾವಿರಾರು ಶ್ರುತಿಗಳಿಗಿಂತ ಬಲಿಷ್ಠವಾಗಿದೆಯೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಪ್ರಕೃತ ಪೂರ್ವಪಕ್ಷಕಾರರು ಹೇಳಿದ ಸಕಲಲಿಂಗಗಳು ಸಾವಕಾಶವಾಗಿದೆ. ವಿಷ್ಣುವಿಷಯಕವಾದ ವಾಮನಶ್ರುತಿಯು ನಿರವಕಾಶವಾಗಿದೆ.

'ಏಷ ಉ ಏವ ವಾಮನಿಃ ಏಷ ಹಿ ಸರ್ವಾಣಿ ವಾಮಾನಿ ನಯತಿ' ಎಂಬ ಶ್ರುತಿಯಲ್ಲಿ ಅವಧಾರಣ-ಪುರಸ್ಸರವಾಗಿ ವಿಷ್ಣುವೇ ವಾಮನನೆಂದು ಸಮರ್ಥಿಸಲಾಗಿದೆ. 'ಉಪೇಂದ್ರೋ ವಾಮನಃ ಪ್ರಾಂಶುಃ' ಎಂಬ ವಿಷ್ಣುಸಹಸ್ರನಾಮವೂ ಸಹ ಈ ವಿಷಯದಲ್ಲಿ ಪರಮಪ್ರಮಾಣವಾಗಿದೆ. ಲೋಕದಲ್ಲಿಯೂ ಜ್ಞಾನಿ-ಜನರೆಲ್ಲರೂ ವಿಷ್ಣುವನ್ನೇ ವಾಮನನೆನ್ನುತ್ತಾರೆ. ಆದ್ದರಿಂದ 'ವಾಮನ' ಶಬ್ದವು ವಿಷ್ಣುಪರವಾಗಿದೆ- ಯೆಂಬುದರಲ್ಲಿ ಎರಡು ಮಾತಿಲ್ಲ. ಇನ್ನು ಇಲ್ಲಿರುವ 'ವಾಮನ' ಶಬ್ದಕ್ಕೆ ದೀರ್ಘಕ್ಕೆ ಪ್ರತಿಯೋಗಿಯಾದ ಹ್ರಸ್ವ ಎಂಬರ್ಥವನ್ನು ವಿವಕ್ಷಿಸಬಾರದು. ಅಂದರೆ ಗಿಡ್ಡದಾದ ಯಾವುದಾದರೊಂದು ವಸ್ತುವನ್ನು ಪ್ರತಿಪಾದನೆ ಮಾಡುತ್ತಿದೆಯೆಂದು ಹೇಳಬಾರದು. ಏಕೆಂದರೆ 'ವಾಮನ' ಶಬ್ದಕ್ಕೆ ನಿರಪೇಕ್ಷಿತವಾದ ರೂಢಿಯ ಬಲದಿಂದ ವಿಷ್ಣುವೆಂಬರ್ಥವನ್ನು ಸಹಜವಾಗಿ ಸ್ವೀಕರಿಸಲು ಬರುವಾಗ ಸಾಪೇಕ್ಷವಾದ ಹ್ರಸ್ವ ಎಂಬರ್ಥವನ್ನು ಯೋಗಬಲದಿಂದ ಸ್ವೀಕರಿಸುವುದು ಬಹಳ ತಪ್ಪಾಗುತ್ತದೆ. ಪೂರ್ವಮೀಮಾಂಸೆಯ 'ಯದೋऽನ್ಯಾಂ ತದುತ್ತರಯೋರ್ಗಾಯತಿ' ಎಂಬ ಅಧಿಕರಣವು ಸಾಪೇಕ್ಷವಾದ ಅರ್ಥಕ್ಕಿಂತಲೂ ನಿರಪೇಕ್ಷಿತವಾದ ಅರ್ಥವೇ ಪ್ರಬಲವೆಂದು ಸಮರ್ಥಿಸಿದೆ. ಆದ್ದರಿಂದ ವಾಮನಶ್ರುತಿಯು ವಿಷ್ಣುವಿನಲ್ಲಿ ನಿರವಕಾಶವಾಗಿದೆಯೆಂದು ತಿಳಿಯಬೇಕು.

ಪೂರ್ವಪಕ್ಷ ಮಾಡುವಾಗ ಪ್ರಾಣಾದಿನಿಯಾಮಕತ್ವ ಹಾಗೂ ಸರ್ವದೇವೋಪಾಸ್ಯತ್ವ ಎಂಬೆರಡು ಲಿಂಗಗಳು ಮುಖ್ಯಪ್ರಾಣದೇವರಲ್ಲಿ ಸಾವಕಾಶವಾಗಿವೆ. ವಿಷ್ಣುವಿನಲ್ಲಿ ಕಥಂಚಿದಪಿ ಬರಲು ಸಾಧ್ಯವಿಲ್ಲವೆಂದು ಸಮರ್ಥಿಸಿದ್ದರು. ಆದರೆ ಎಲ್ಲರನ್ನು ನಿಯಮನ ಮಾಡುವಂತಹ ಭಗವಂತನಿಗೆ ಪ್ರಾಣಾದಿನಿಯಾಮಕತ್ವವು ಬಂದೇ ಬರುತ್ತದೆ. ಆದರೆ ಸಕಲ ದೇವತೆಗಳಿಂದ ಉಪಾಸ್ಯನಾದ ವಿಷ್ಣುವಿನಲ್ಲಿ ದೇವೋಪಾಸ್ಯತ್ವವೂ ಕೂಡ ಬಂದೇ ಬರುತ್ತದೆ. ಉದಾಹರಣೆ - ಮಹಡಿಯಲ್ಲಿ ಮನೆಯನ್ನು ಕಟ್ಟಿ ವಾಸಿಸುತ್ತಾರೆ. ಕೆಲವರು ಭೂಮಿಯಲ್ಲಿ ಮನೆಯನ್ನು ಕಟ್ಟಿ ವಾಸಿಸುತ್ತಾರೆ. ಕೆಲವರು ಎರಡೂ ಕಡೆಯೂ ವಾಸಮಾಡುತ್ತಿರುತ್ತಾರೆ. ಭೂಮಿಯಲ್ಲಿ ವಾಸಿಸುವವರು ಎಂದು ಹೇಳಿದಾಗ ಎರಡೂ ಕಡೆ ವಾಸಿಸುವವರನ್ನು ವಿವಕ್ಷಿಸಲು ಬರುತ್ತದೆ. ಮಹಡಿಯಲ್ಲಿ ವಾಸಿಸುವವರು ಎಂದು ಹೇಳಿದಾಗಲೂ, ಎರಡೂ ಕಡೆ ವಾಸಿಸುವವರನ್ನು ವಿವಕ್ಷಿಸಲು ಬರುತ್ತದೆ. ಇದು ಲೋಕಪ್ರಸಿದ್ಧವಾದ ಪ್ರಾಸಾದವಾಸಿನ್ಯಾಯ. ಈ ನ್ಯಾಯದಂತೆ ಪ್ರಕೃತ ಸರ್ವನಿಯಾಮಕನಾದ ವಿಷ್ಣು ಪ್ರಾಣಾಪಾನಾದಿಗಳಿಗೂ ಕೂಡ ನಿಯಾಮಕನಾಗಲೇ ಬೇಕು. ಆದರಂತೆ ಸಕಲ ದೇವತೆಗಳಿಂದ ಉಪಾಸ್ಯನಾದ ವಿಷ್ಣು ಕೆಲವು ದೇವತೆಗಳಿಂದಲೂ ಉಪಾಸ್ಯನಾಗಲೇಬೇಕು. ಆದ್ದರಿಂದ ವಿಷ್ಣುವಿನಲ್ಲಿ ಈ ಎರಡು ಮುಖ್ಯಪ್ರಾಣದೇವರ ಲಿಂಗಗಳು ಸಾವಕಾಶವಾಗಿವೆಯೆಂದು ತಿಳಿಯಬೇಕು.

ಪೂರ್ವಪಕ್ಷಕಾರರು ಮಧ್ಯಮತ್ವವೆಂಬ ಲಿಂಗವನ್ನು ನಿರವಕಾಶವೆಂದು ಸಮರ್ಥನೆ ಮಾಡಿದ್ದರು. ಅದು ಸರಿಯಲ್ಲ. ಏಕೆಂದರೆ 'ಮಧ್ಯೇ ವಾಮನಮಾಸೀನಂ' ಎಂಬ ಶ್ರುತಿವಾಕ್ಯವನ್ನು ವಿಚಾರ ಮಾಡಿದಾಗ ಮಧ್ಯಶಬ್ದವು ದೇಶವಿಶೇಷವನ್ನೇ ಹೇಳುತ್ತಿದೆ ಹೊರತು, ತಾರತಮ್ಯವಿಚಾರವನ್ನು ಹೇಳುತ್ತಿಲ್ಲ. 'ಊರ್ಧ್ವಂ ಪ್ರಾಣ'ಮ್ ಎಂಬ

ಶ್ರುತಿಯಲ್ಲಿ ಪ್ರಾಣದೇವರು ಊರ್ಧ್ವದೇಶದಲ್ಲಿದ್ದಾರೆಂದು ಹೇಳಿ 'ಮಧ್ಯೇ ವಾಮನಮಾಸೀನಮ್' ಎಂದು ಹೇಳಿದಾಗ ಹೃದಯಮಧ್ಯಪ್ರದೇಶದಲ್ಲಿ ವಾಮನರೂಪಿಯಾದ ಪರಮಾತ್ಮನಿದ್ದಾನೆಂದೇ ಶ್ರುತಿಯ ಅಭಿಪ್ರಾಯ. ಊರ್ಧ್ವದೇಶದಲ್ಲಿ ಮುಖ್ಯಪ್ರಾಣದೇವರನ್ನು ಹೇಳಿದ ಮೇಲೆ, ಪುನಃ ಮಧ್ಯಪ್ರದೇಶದಲ್ಲಿ ಮುಖ್ಯಪ್ರಾಣದೇವರನ್ನು ಹೇಳಲು ಸಾಧ್ಯವಿಲ್ಲ. ಅಥವಾ ಅಪ್ರಸ್ತುತವಾಗಿ ತಾರತಮ್ಯವಿಚಾರವನ್ನೂ ಸಹ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಬೇರೆ ಶ್ರುತಿಯಲ್ಲಿರುವ ಮಧ್ಯಮ ಶಬ್ದದಿಂದ ಮುಖ್ಯಪ್ರಾಣದೇವರು ಪ್ರತಿಪಾದಿತರಾಗಿದ್ದಾರೆಂದ ಮಾತ್ರಕ್ಕೆ ಇಲ್ಲಿರುವ ಮಧ್ಯಶಬ್ದದಿಂದಲೂ ಅವರೇ ಪ್ರತಿಪಾದ್ಯರಾಗಬೇಕೆಂದೇನೂ ನಿಯಮವಿಲ್ಲ. ಹೀಗೆ ಮಧ್ಯಮತ್ವವೆಂಬ ಲಿಂಗವು ವಿಷ್ಣುವಿನಲ್ಲಿ ಸಾವಕಾಶವಾಗಿದೆ. ಈ ಕಾರಣದಿಂದಲೂ ವಿಷ್ಣುವನ್ನೇ 'ಈಶಾನ' ಶಬ್ದ ಪ್ರತಿಪಾದ್ಯನೆಂದು ಹೇಳಬಹುದು.

ಅಂಗುಷ್ಠಮಾತ್ರತ್ವವೂ ಸಹ ವಿಷ್ಣುವಿನಲ್ಲಿ ಸಾವಕಾಶವಾಗಿದೆ. ಪರಮಾತ್ಮನು ಎಲ್ಲೆಡೆ ವ್ಯಾಪ್ತನಾದ್ದರಿಂದ, ಅಂಗುಷ್ಠದಷ್ಟೇ ಪರಿಮಾಣವನ್ನು ಹೇಳಲು ಸಾಧ್ಯವಿಲ್ಲ. ಆದ್ದರಿಂದ ಮುಖ್ಯಪ್ರಾಣದೇವರನ್ನೇ ವಿವಕ್ಷಿಸಬೇಕೆಂದು ಹಿಂದೆ ಪೂರ್ವಪಕ್ಷಿಯು ಹೇಳಿದ್ದನು. ಆದರೆ ಪರಮಾತ್ಮನು ಸರ್ವಗತನಾಗಿದ್ದರೂ ಹೃದಯದಲ್ಲಿರುವ ಪರಮಾತ್ಮನ ಮೂರ್ತಿವಿಶೇಷವು ವ್ಯಕ್ತಿರೂಪದಿಂದ ಅಂಗುಷ್ಠದಷ್ಟೇ ಪರಿಮಾಣವನ್ನು ಹೊಂದಿರುತ್ತದೆ. ಶಕ್ತಿರೂಪದಿಂದ ಅಣುತ್ವ-ಮಹತ್ವಗಳೆರಡೂ ಇದ್ದರೂ ಅದನ್ನು ಶ್ರುತಿಯು ವಿವಕ್ಷಿಸಿಲ್ಲ. ಅಥವಾ ಪರಮಾತ್ಮನು ವಾಸಮಾಡುವಂತಹ ಹೃದಯಪ್ರದೇಶವು ಅಂಗುಷ್ಠದಷ್ಟೇ ಪರಿಮಾಣವನ್ನು ಹೊಂದಿರುವುದರಿಂದಲೂ ಅಂಗುಷ್ಠಮಾತ್ರತ್ವವನ್ನು ಪರಮಾತ್ಮನಿಗೆ ಗೌಣವಾಗಿ ಶ್ರುತಿಯು ಹೇಳುತ್ತಿದೆ. ಆದ್ದರಿಂದ ಅಂಗುಷ್ಠಮಾತ್ರ ಪರಿಮಾಣವನ್ನು ಪರಮಾತ್ಮನಿಗೆ ಹೇಳುವುದರಿಂದ ಯಾವುದೇ ಬಾಧಕಗಳಿಗೆ ಅವಕಾಶಗಳಿಲ್ಲ.

ಪ್ರಾಣಿಗಳಿಗೆ ಅಂಗುಷ್ಠಪರಿಮಾಣವೇ ಇಲ್ಲದ ಕಾರಣ, ಅವುಗಳ ಅಂತರ್ಯಾಮಿಯಾದ ಪರಮಾತ್ಮನಿಗೆ ಅಂಗುಷ್ಠಪರಿಮಾಣವನ್ನು ಹೇಳುವುದು ಹೇಗೆ ಸಾಧ್ಯ ? ಎಂಬ ಪ್ರಶ್ನೆ ಸಹಜವಾಗಿ ಬರುತ್ತದೆ. ಆದರೆ ಈ ಶಾಸ್ತ್ರವು ಮನುಷ್ಯರನ್ನು ಕುರಿತು ಹೊರಟಿರುವುದರಿಂದ ಅವರ ಅಂತರ್ಯಾಮಿಯ ಬಗ್ಗೆ ಮಾತ್ರ ಇಲ್ಲಿ ವಿಚಾರ ಮಾಡಲಾಗಿದೆ. ಮನುಷ್ಯರೆಲ್ಲರಿಗೂ ಅಂಗುಷ್ಠವಿರುವುದರಿಂದ ಅವರ ಹೃದಯವೂ ಸಹ ಅಂಗುಷ್ಠಪರಿಮಾಣವನ್ನು ಹೊಂದಿರುತ್ತದೆ. ಅಲ್ಲಿರುವಂತಹ ಭಗವಂತನ ಮೂರ್ತಿವಿಶೇಷದಲ್ಲಿಯೂ ಅಂಗುಷ್ಠಮಾತ್ರಪರಿಮಾಣವನ್ನು ಹೇಳಬಹುದು.

ಒಟ್ಟು ಅಭಿಪ್ರಾಯ -

ಪ್ರಮಿತಗ್ರಹಣೇನಾತ್ರ ಶ್ರುತೇರ್ನಿರವಕಾಶತಾಮ್ ।
ಏವಕಾರೇಣ ಲಿಂಗೇಭ್ಯಃ ಪ್ರಾಬಲ್ಯಂ ಸೂತ್ರಕೃಜ್ಜಗೌ ॥೧॥

'ಶಬ್ದಾದೇವಪ್ರಮಿತಃ' ಎಂಬಲ್ಲಿರುವ 'ಪ್ರಮಿತ' ಶಬ್ದದಿಂದ ವಾಮನಶ್ರುತಿಗೆ ಪರಮಾತ್ಮನಲ್ಲಿ ನಿರವಕಾಶತ್ವವನ್ನು ಹೇಳಿರುತ್ತಾರೆ. ಏವಕಾರದಿಂದ ಪೂರ್ವಪಕ್ಷಲಿಂಗಗಳಿಗಿಂತಲೂ ಶ್ರುತಿಯು ಬಲಿಷ್ಠವಾಗಿದೆಯೆಂದು ಸೂತ್ರಕಾರರು ಹೇಳಿರುತ್ತಾರೆ.

ಶ್ರುತಿ, ಲಿಂಗ, ವಾಕ್ಯ, ಪ್ರಕರಣ, ಸ್ಥಾನ, ಸಮಾಖ್ಯಾ ಈ ಆರು ಬಗೆಯ ಲಿಂಗಗಳು ವೇದದ ಅರ್ಥವನ್ನು ನಿಶ್ಚಯಿಸುತ್ತವೆ. ಇವುಗಳ ಸ್ವರೂಪವನ್ನು ಹಿಂದೆ ಸಮನ್ವಯಾಧಿಕರಣದಲ್ಲಿಯೂ ತೋರಿಸಿದ್ದಾರೆ.

ಪ್ರಕೃತ ಇವುಗಳಿಗೆ ಪರಸ್ಪರ ವಿರೋಧ ಬಂದಾಗ ಮುಂದಿನಪ್ರಮಾಣಗಳಿಗಿಂತ ಹಿಂದಿನ ಪ್ರಮಾಣಗಳೇ ಬಲಿಷ್ಠವಾಗುತ್ತವೆ ಎಂದು ಸ್ಪಷ್ಟಪಡಿಸುತ್ತಿದ್ದಾರೆ. ಉದಾಹರಣೆ : ಶ್ರುತಿಗೂ ಲಿಂಗಕ್ಕೂ ಪರಸ್ಪರ ವಿರೋಧ ಬಂದರೆ ಶ್ರುತಿಯೇ ಪ್ರಬಲವಾಗುತ್ತದೆ. ಪ್ರಕೃತ ವಾಮನಾಧಿಕರಣದಲ್ಲಿ 'ಈಶಾನ' ಎಂಬ ಶಬ್ದವು ಶ್ರುತಿರೂಪವಾಗಿದೆ. ಪ್ರಾಣವ್ಯವಸ್ಥಾಪಕತ್ವವು ಲಿಂಗ-ರೂಪವಾಗಿದೆ. ಶ್ರುತಿಯಿಂದ ವಿಷ್ಣುವೇ ವಾಮನನೆಂದು ನಿರ್ಧಾರವಾದರೆ, ಲಿಂಗದಿಂದ ಮುಖ್ಯ ಪ್ರಾಣ- ದೇವರು ವಾಮನಶಬ್ದಪ್ರತಿಪಾದ್ಯರೆಂದು ನಿರ್ಣಯವಾಗುತ್ತದೆ. ಹೀಗೆ ಶ್ರುತಿಯಿಂದ ಒಂದು ನಿರ್ಧಾರವಾದರೆ, ಲಿಂಗದಿಂದ ಮತ್ತೊಂದು ನಿರ್ಧಾರವಾಗುವ ಪರಿಸ್ಥಿತಿಯಿದೆ. ಈ ಸಂದರ್ಭದಲ್ಲಿ ಶ್ರುತಿಯನ್ನೇ ಬೆಂಬಲಿಸಿ, ಲಿಂಗವನ್ನು ಶ್ರುತಿಗನುಗುಣವಾಗಿ ಅರ್ಥೈಸಬೇಕಾಗುತ್ತದೆ. ಹೀಗೆ ಮುಂದಿನ ಪ್ರಮಾಣಗಳಲ್ಲಿಯೂ ಪರಸ್ಪರ ವಿರೋಧ ಬಂದಾಗ ಹಿಂದಿನ ಪ್ರಮಾಣವನ್ನೇ ಪ್ರಬಲವೆಂದು ಪರಿಗಣಿಸಬೇಕು.

ಒಂದು ವೇಳೆ ಲಿಂಗವು ನಿರವಕಾಶವಾಗಿದ್ದರೆ, ಶ್ರುತಿಯು ಲಿಂಗಕ್ಕಿಂತ ದುರ್ಬಲವಾಗುತ್ತದೆಂಬುದನ್ನು ಮರೆಯಬಾರದು.

ಅಸಾಧಾರಣಧರ್ಮಕ್ಕೆ ಅರ್ಪಕವಾದ ಶಬ್ದವೇ 'ಲಿಂಗ'. ಅಥವಾ ಶಬ್ದದಿಂದ ಅರ್ಪಿತವಾದ ಅಸಾಧಾರಣಲಿಂಗವೆನಿಸುತ್ತದೆ.

ಲಿಂಗವು ಎರಡು ವಿಧ - 'ಏಕ ಪದಾತ್ಮಕ', 'ಅನೇಕ ಪದಾತ್ಮಕ' ಎಂದು. 'ಅನಂತ' ಇತ್ಯಾದಿ ಶಬ್ದವು 'ಅನಂತತ್ವ' ಎಂಬ ಅಸಾಧಾರಣಧರ್ಮಕ್ಕೆ ಅರ್ಪಕವಾದ್ದರಿಂದ, ಏಕಪದಸ್ವರೂಪವಾದ ಲಿಂಗವೆನಿಸುತ್ತದೆ. 'ಶ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ' ಎಂಬುದು ಅನೇಕ ಪದಗಳ ಸ್ವರೂಪವಾದ ಲಿಂಗ. ಈ ಎಲ್ಲ ಪದಗಳೂ ಸೇರಿ, 'ಶ್ರೀಲಕ್ಷ್ಮೀಪತಿತ್ವ' ಎಂಬ ಅಸಾಧಾರಣಧರ್ಮಕ್ಕೆ ಅರ್ಪಕಗಳಾಗಿವೆ.

ಇಂತಹ ಲಿಂಗವು ಶ್ರುತಿಗಿಂತಲೂ ದುರ್ಬಲವಾಗಿದೆ. ಏಕೆಂದರೆ ಶ್ರುತಿಯು ನೇರವಾಗಿ ಪ್ರತಿಪಾದ್ಯವಾದ ಅರ್ಥವನ್ನು ತಿಳಿಸುತ್ತದೆ. ಆದರೆ ಲಿಂಗವು ವ್ಯಾಪ್ಯಜ್ಞಾನವನ್ನು ಹುಟ್ಟಿಸುವ ಮೂಲಕ ವ್ಯಾಪಕಜ್ಞಾನವನ್ನು ಹುಟ್ಟಿಸಬೇಕಾದ್ದರಿಂದ ದುರ್ಬಲವಾಗಿದೆ. ಉದಾಹರಣೆ ವಾಮನಶ್ರುತಿಯು ನೇರವಾಗಿ ವಿಷ್ಣುವೆಂಬರ್ಥವನ್ನು ತಿಳಿಸುತ್ತದೆ. ಆದರೆ 'ಊರ್ಧ್ವಂ ಪ್ರಾಣಮುನ್ನಯತಿ' ಎಂಬ ಲಿಂಗಸ್ವರೂಪವಾದ ವಾಕ್ಯವು ಸ್ವಾರ್ಥವಾದ ವ್ಯಾಪ್ಯವನ್ನು ಮೊದಲು ತಿಳಿಸಿ, 'ಈಶಾನ' ಶಬ್ದ ಪ್ರತಿಪಾದ್ಯನು ವಾಯುದೇವನಾಗಿದ್ದಾನೆಂದು ತಿಳಿಸಿ, ವಾಕ್ಯಕ್ಕೆ ತತ್ಪರತ್ವವನ್ನು ಅನಂತರ ತಿಳಿಸುತ್ತದೆ. ಹೀಗೆ ವಿಳಂಬವಾಗಿ ಅರ್ಥಬೋಧಕವಾಗುವುದರಿಂದ ಶ್ರುತಿಗಿಂತಲೂ ದುರ್ಬಲವಾಗಿರುತ್ತದೆ.

ವಾಕ್ಯದ ಲಕ್ಷಣ ಹೀಗಿದೆ. ತನ್ನಲ್ಲಿರುವ ಪದಗಳಿಂದಲೇ ಆಕಾಂಕ್ಷೆಯು ಪೂರ್ಣವಾಗಿರಬೇಕು. ಮತ್ತು ಬೇರೆ ಪದಗಳಿಂದ ಆಕಾಂಕ್ಷಾ ಇರಬಾರದು. ಇಂತಹ ವಾಕ್ಯವು ಸ್ವಾರ್ಥದಲ್ಲಿ ಶಬ್ದರೂಪವಾಗಿ ಪ್ರಮಾಣವಾಗುತ್ತದೆ. ಆದರೆ ಸ್ವಾಂತರ್ಗತವಾದ ಪದಾರ್ಥಗಳ ನಿರ್ಣಯದಲ್ಲಿ ಮತ್ತು ತನ್ನ ಜೊತೆಗೆ ಸಮಭಿವ್ಯಾಹೃತವಾದ ಬೇರೆ ವಾಕ್ಯಗಳ ಅರ್ಥನಿರ್ಣಯದಲ್ಲಿ ಅನುಮಾನರೂಪದಿಂದ ಪ್ರಮಾಣವಾಗಿರುತ್ತದೆ. ಉದಾಹರಣೆ 'ತತ್ತ್ವಮಸಿ' ಎಂಬ ವಾಕ್ಯದಲ್ಲಿ 'ತತ್' ಎಂಬ ಪದದ ಅರ್ಥವನ್ನು ನಿರ್ಣಯಿಸುವಾಗ 'ತ್ವಮಸಿ' ಎಂಬ ಪದಗಳು ಅನುಮಾನರೂಪದಿಂದ ಪ್ರಮಾಣವಾಗಿವೆ. ಅಂದರೆ 'ತತ್' ಎಂಬ ಪದಕ್ಕೆ 'ತತ್‌ಸದೃಶ' ಎಂಬರ್ಥವನ್ನು ಸ್ವೀಕರಿಸಬೇಕು. ಏಕೆಂದರೆ

ವಿರುದ್ಧಧರ್ಮಾಧಿಕರಣ ಬೋಧಕವಾದ 'ತ್ವಮಸಿ' ಎಂಬ ಪದಗಳಿರುವುದರಿಂದ, ಹೀಗೆ ಸ್ವಾಂತರ್ಗತವಾದ ಪದಾರ್ಥನಿರ್ಣಯದಲ್ಲಿ 'ತ್ವಮಸಿ' ಎಂಬ ಪದಗಳು ಅನುಮಾನರೂಪದಿಂದ ಪ್ರಮಾಣವಾಗಿವೆ.

ಬೇರೆ ವಾಕ್ಯದ ಅರ್ಥವನ್ನು ನಿರ್ಣಯಿಸುವಾಗಲೂ ಶ್ರುತಿಲಿಂಗಾದಿಗಳಿಂದ ಉಪಪನ್ನವಾಗಿ ವಾಕ್ಯವು ನಿರ್ಣಾಯಕವಾಗಬಹುದು ಅಥವಾ ಅಂತಹ ಶ್ರುತಿಲಿಂಗಾದಿಗಳಿಲ್ಲದೇ ಕೇವಲ ಪ್ರಶ್ನೋತ್ತರಾದಿ ಭಾವದಿಂದಲೂ ವಾಕ್ಯಾರ್ಥಕ್ಕೆ ನಿರ್ಣಾಯಕವಾಗಬಹುದು. 'ಆಕಾಶ ಇತಿ ಹೋವಾಚ' ಎಂಬ ವಾಕ್ಯದಲ್ಲಿ ಬ್ರಹ್ಮನೇ ಆಕಾಶಶಬ್ದಪ್ರತಿಪಾದ್ಯನಾಗಿದ್ದಾನೆನ್ನಲು 'ಆಕಾಶಪರಾಯಣಂ' ಎಂಬ ವಾಕ್ಯವು 'ಪರಾಯಣತ್ವ' ಎಂಬ ಲಿಂಗದಿಂದ ಸಹಿತವಾಗಿ ಅರ್ಥನಿರ್ಣಾಯಕವಾಗಿದೆ. 'ಹೃದ್ಯಂತರ್ಜ್ಯೋತಿಃ' ಎಂಬ ವಾಕ್ಯದಲ್ಲಿ 'ಜ್ಯೋತಿಃ' ಶಬ್ದದಿಂದ ಬ್ರಹ್ಮನೇ ಪ್ರತಿಪಾದ್ಯನಾಗಿದ್ದಾನೆನ್ನಲು 'ಕತಮ ಆತ್ಮಾ' ಎಂಬ ಪ್ರಶ್ನೋತ್ತರ ಭಾವವು ನಿರ್ಣಾಯಕವಾಗಿದೆ. ಹೀಗೆ ವಾಕ್ಯವು ಮೂರುಬಗೆಯಲ್ಲಿ ಅರ್ಥನಿರ್ಣಾಯಕವಾಗುತ್ತದೆಂಬುದನ್ನು ತಿಳಿಯಬೇಕು.

ಲಿಂಗಕ್ಕಿಂತಲೂ ವಾಕ್ಯವು ದುರ್ಬಲ. ಏಕೆಂದರೆ ಲಿಂಗವು ನೇರವಾಗಿ ವ್ಯಾಪ್ತಜ್ಞಾನದ ಮೂಲಕ ವ್ಯಾಪಕಜ್ಞಾನವನ್ನು ತಂದುಕೊಡುತ್ತದೆ. ಆದರೆ ವಾಕ್ಯವು ಅನೇಕ ಪದಗಳ ಅರ್ಥವನ್ನು ತಿಳಿಸುತ್ತಾ, ಶ್ರುತಿ-ಲಿಂಗ ಇವುಗಳೆನ್ನೆಲ್ಲಾ ಅಪೇಕ್ಷಿಸಿ, ವಾಕ್ಯದ ಅರ್ಥದಲ್ಲಿ ಅನುಮಾಪಕವಾಗಿ ಅರ್ಥವನ್ನು ನಿರ್ಣಯಿಸುತ್ತದೆ. ಹೀಗೆ ಲಿಂಗಕ್ಕಿಂತಲೂ ವಿಳಂಬವಾಗಿ ಅರ್ಥನಿರ್ಣಾಯಕವಾಗುವುದರಿಂದ, ಲಿಂಗಕ್ಕಿಂತಲೂ ದುರ್ಬಲವೆಂದು ತಿಳಿಯಬೇಕು.

ಲಿಂಗವು ಹೇಗೆ ಅರ್ಥವನ್ನು ನಿರ್ಣಯಿಸುತ್ತದೋ, ಅದರಂತೆ ವಾಕ್ಯಪ್ರಮಾಣವೂ ಸಹ, ಅರ್ಥವನ್ನು ನಿರ್ಣಯಿಸುತ್ತದೆ. ಇವೆರಡರಲ್ಲಿ ತಾರತಮ್ಯವನ್ನು ಕಲ್ಪಿಸುವುದೇ ತಪ್ಪಾಗುತ್ತದೆಂಬ ಆಶಂಕೆಗೆ ಅವಕಾಶವಿಲ್ಲ. ಏಕೆಂದರೆ ಲಿಂಗವು ನೇರವಾಗಿಯೇ ವ್ಯಾಪ್ಯಜ್ಞಾನವನ್ನು ಹುಟ್ಟಿಸಿ, ಅರ್ಥನಿರ್ಣಾಯಕವಾದರೆ, ವಾಕ್ಯವು ಪದಾರ್ಥಜ್ಞಾನವನ್ನು ಹುಟ್ಟಿಸಿ, ಅನಂತರ ವ್ಯಾಪ್ಯಜ್ಞಾನವನ್ನು ಹುಟ್ಟಿಸುವ ಮೂಲಕ ಅರ್ಥನಿರ್ಣಾಯಕವಾಗಬೇಕು. ಒಂದು ಹಂತದಲ್ಲಿ ಇದು ವಿಳಂಬಪ್ರವೃತ್ತಿ ಮಾಡುವುದರಿಂದ ವಾಕ್ಯವು ದುರ್ಬಲವಾಗಿದೆಯೆಂದು ಅಭಿಪ್ರಾಯ. ವಿಚಾರ ಮಾಡಿದರೆ, ಲಿಂಗದಲ್ಲಿಯೇ ಪರಸ್ಪರ ತಾರತಮ್ಯವಿದೆ. ಕೆಲವು ಲಿಂಗಗಳು ಒಂದೇ ಪದದಿಂದ ತಿಳಿಯುತ್ತವೆ. ಇನ್ನೂ ಕೆಲವು ಲಿಂಗಗಳು ಅನೇಕ ಪದಗಳಿಂದ ತಿಳಿಯುತ್ತವೆ. ಒಂದೇ ಪದದಿಂದ ತಿಳಿಯುವಂತಹ ಲಿಂಗದಲ್ಲಿ ಅನೇಕ ಪದಾರ್ಥಗಳ ಜ್ಞಾನದ ಅನಿವಾರ್ಯತೆ ಇಲ್ಲದ ಕಾರಣ ಕೂಡಲೇ ಅರ್ಥವು ನಿಶ್ಚಯವಾಗುತ್ತದೆ. ಅನೇಕ ಪದಗಳಿಂದ ಲಿಂಗಜ್ಞಾನ ಬರುವಾಗ ಆ ಎಲ್ಲಾ ಪದಾರ್ಥಗಳನ್ನು ತಿಳಿದು ಅನಂತರ ಅರ್ಥನಿಶ್ಚಯವಾಗಬೇಕಾದ ಕಾರಣ ವಿಳಂಬವಾಗಿ ಅರ್ಥನಿರ್ಣಯವಾಗುತ್ತದೆ. ಹೀಗೆ ಲಿಂಗದಲ್ಲೇ ಯಾವರೀತಿಯಾಗಿ ಅವಾಂತರ ತಾರತಮ್ಯವಿದೆಯೋ, ಅದರಂತೆ ಲಿಂಗ ಮತ್ತು ವಾಕ್ಯಗಳ ನಡುವೆಯೂ ತಾರತಮ್ಯವು ಇದ್ದೇ ಇರುತ್ತದೆ.

ಅನೇಕ ಪದಗಳಿಂದ ಅರ್ಪಿತವಾದ ಅಸಾಧಾರಣಧರ್ಮವು ಲಿಂಗವಾಗುವುದಿಲ್ಲವೆಂದು ಶಂಕಿಸಬಾರದು. 'ಅಂತಸ್ತದ್ಧರ್ಮೋಪದೇಶಾತ್' 'ಅತ ಏವ ಪ್ರಾಣಃ' ಇತ್ಯಾದಿ ಸೂತ್ರಗಳೆಲ್ಲಾ ಸೂತ್ರಕಾರರು ಉಲ್ಲೇಖ ಮಾಡುವಂತಹ ಸಮುದ್ರಶಾಯಿತ್ವ, ಶ್ರೀಲಕ್ಷ್ಮೀಪತಿತ್ವ ಮೊದಲಾದ ಲಿಂಗಗಳು ಒಂದೊಂದು ಪದಗಳಿಂದ ತಿಳಿಯುವಂತಹದ್ದಲ್ಲ, ಅನೇಕ ಪದಗಳಿಂದಲೇ ತಿಳಿಯುತ್ತದೆ. ಆದ್ದರಿಂದ, ಸೂತ್ರಕಾರರಿಗೆ ಅಭಿಪ್ರೇತವಾದದ್ದನ್ನೇ ಗ್ರಂಥಕಾರರು ಇಲ್ಲಿ ಉಲ್ಲೇಖಿಸುತ್ತಿದ್ದಾರೆಂಬುದನ್ನು ಗಮನಿಸಬೇಕು.

ವಾಕ್ಯವು ನೇರವಾಗಿ ವ್ಯಾಪ್ಯಾರ್ಪಕವಾಗುವುದಿಲ್ಲವೆಂದು ಹೇಗೆ ಹೇಳಿದಿರಿ? ಏಕೆಂದರೆ ಸೂರ್ಯನು ಮುಳುಗಿದನು ಎಂದು ಹೇಳಿದಾಗ, ಒಬ್ಬೊಬ್ಬ ವ್ಯಕ್ತಿಗೆ ಒಂದೊಂದು ಬಗೆಯಲ್ಲಿ ಅರ್ಥವಾಗುತ್ತದೆ. ವಿಪ್ರನಿಗೆ ಸಂಧ್ಯಾವಂದನೆ ಮಾಡು ಎಂದು, ಕಳ್ಳನಿಗೆ ಕಳ್ಳತನದಲ್ಲಿ ಉದ್ಯುಕ್ತನಾಗು ಎಂದು, ದಾರಿಹೋಕನಿಗೆ ಮುಂದೆ ಹೋಗಬೇಡ ಎಂದು, ಕಾಮಿನಿಸ್ತ್ರೀಗೆ ರತಿಕ್ರೀಡೆಗಾಗಿ ಕಾಂತಪುರುಷನನ್ನು ಪ್ರಲೋಭನೆ ಮಾಡು ಎಂದು ಅರ್ಥವಾಗುತ್ತದೆ. ಹೀಗೆ ಸೂರ್ಯನ ಅಸ್ತಂಗಮನದಿಂದ ವ್ಯಾಪ್ಯವಾದ ಅರ್ಥಗಳನ್ನು 'ಅಸ್ತಂಗತಃ ಸವಿತಾ' ಎಂಬ ವಾಕ್ಯವು ತಿಳಿಸುವುದರಿಂದ ವಾಕ್ಯವು ಲಿಂಗರೂಪವೇ ಆಗಿದೆ. ಹೀಗಿರುವಾಗ ಲಿಂಗಕ್ಕಿಂತಲೂ ದುರ್ಬಲವೆಂದು ಹೇಗೆ ಹೇಳುತ್ತೀರಿ?

ಈ ಆಕ್ಷೇಪವೂ ಸಹ ತಪ್ಪು. ಏಕೆಂದರೆ ಪ್ರಕೃತ ಉಲ್ಲೇಖಿಸುತ್ತಿರುವ ಶ್ರುತಿ, ಲಿಂಗ, ವಾಕ್ಯ ಇವೆಲ್ಲವೂ ವೇದದ ಅರ್ಥನಿರ್ಣಯದಲ್ಲಿ ಲಿಂಗರೂಪವಾಗಿರಬೇಕು ಹೊರತು, ವಕ್ತೃವಿನ ವಿವಕ್ಷೆಯನ್ನು ಅರ್ಥಮಾಡಿಕೊಳ್ಳುವುದಕ್ಕಾಗಿ ಪ್ರಮಾಣವನ್ನಾಗಿ ಉಲ್ಲೇಖಿಸುತ್ತಿಲ್ಲ. 'ಅಸ್ತಂಗತಃ ಸವಿತಾ' ಇತ್ಯಾದಿ ವಾಕ್ಯವನ್ನು ನೀವು ಉದಾಹರಿಸಿದ್ದು, ವಕ್ತೃವಿನ ವಿವಕ್ಷೆಯನ್ನು ತಿಳಿಯಲಷ್ಟೇ ಅನುಮಾಪಕವಾಗಿದೆ, ಆದ್ದರಿಂದ ದೃಷ್ಟಾಂತವು ವಿಷಮವಾದ್ದರಿಂದ ಆಕ್ಷೇಪವೂ ತಪ್ಪು. ಆದ್ದರಿಂದ 'ಆಗಮಾರ್ಥಾವಸಿತ್ಯರ್ಥಾ ನಿಯತವ್ಯಾಪ್ತಯೋಽಖಿಲಾಃ । ವಾಕ್ಯಂ ಪ್ರಕರಣಂ ಸ್ಥಾನಂ ಸಮಾಖ್ಯಾಚ ತಥಾವಿಧಾಃ ॥' ಎಂದರೆ ವಾಕ್ಯ, ಪ್ರಕರಣ, ಸ್ಥಾನ, ಸಮಾಖ್ಯಾಗಳೆಲ್ಲವೂ ವೇದಾರ್ಥದ ನಿರ್ಣಯದಲ್ಲಿ ನಿಯತವ್ಯಾಪ್ತವಾಗಿವೆ ಆದ್ದರಿಂದ ಅನುಮಾನರೂಪವಾಗಿವೆಯೆಂದು ಅನುವ್ಯಾಖ್ಯಾನದಲ್ಲಿ ಹೇಳಿದ್ದಾರೆ.

ಒಂದೇ ಅರ್ಥದಲ್ಲಿ ತಾತ್ಪರ್ಯವುಳ್ಳ ಅನೇಕ ವಾಕ್ಯಗಳ ಪುಂಜವೇ ಪ್ರಕರಣ ಎನಿಸುತ್ತದೆ. ಈ ಪ್ರಕರಣವು ಅನೇಕ ಅವಾಂತರ ವಾಕ್ಯಾರ್ಥಗಳನ್ನು ತಿಳಿಸುವ ಮೂಲಕ ವಿಪ್ರತಿಪನ್ನವಾದ ವಾಕ್ಯವನ್ನು ಪ್ರಕರಣಕ್ಕೆ ಅನುಗುಣವಾಗಿ ಅರ್ಥೈಸಬೇಕಾದ್ದರಿಂದಲೂ ವಾಕ್ಯಕ್ಕಿಂತಲೂ ವಿಳಂಬವಾಗಿ ಪ್ರವೃತ್ತಿ ಮಾಡುತ್ತದೆ. ಆದ್ದರಿಂದ ಪ್ರಕರಣಕ್ಕಿಂತ ವಾಕ್ಯವೇ ಪ್ರಬಲವಾಗುತ್ತದೆ -

ಬೃಹದಾರಣ್ಯಕೋಪನಿಷತ್ತಿನಲ್ಲಿ 'ಯೋಽಯಂ ವಿಜ್ಞಾನಮಯಃ ಪ್ರಾಣೇಽಹೃದ್ಯಂತರ್ಜ್ಯೋತಿಃ ಪುರುಷಃ' ಎಂದು ಪ್ರಾರಂಭವಾಗುವ ವಾಕ್ಯವು ಜೀವನನ್ನು ಪ್ರತಿಪಾದನೆ ಮಾಡುತ್ತಿದೆ. 'ಕಿಂ ಜ್ಯೋತಿರಯ ಪುರುಷಃ' ಎಂದು ಜನಕರಾಜರು ಜೀವನು ಯಾವರೀತಿಯ ಜ್ಞಾನಸಾಧನವನ್ನು ಹೊಂದಿದ್ದಾನೆಂದು ಪ್ರಶ್ನಿಸಿದ್ದಾರೆ. ಅದಕ್ಕೆ ಯಾಜ್ಞವಲ್ಕ್ಯರು ಉತ್ತರಿಸುವ ಪ್ರಕರಣವೇ ಇದಾಗಿದೆ. ಇಲ್ಲಿ ಜೀವಾತ್ಮನ ಬಗ್ಗೆ ಪ್ರಶ್ನೆ ಹಾಗೂ ಉತ್ತರಗಳಿರುವುದರಿಂದ 'ಜ್ಯೋತಿಸ್' ಶಬ್ದದಿಂದ ಜೀವನೇ ಪ್ರತಿಪಾದ್ಯನಾಗಿದ್ದಾನೆಂದು ಈ ಪ್ರಕರಣ ಸಮರ್ಥಿಸುತ್ತದೆ. ಆದರೆ ಅದಕ್ಕಿಂತ ಮೊದಲೇ 'ಕತಮ ಆತ್ಮಾ' ಎಂಬ ವಾಕ್ಯವು ವಿಷ್ಣುವೇ 'ಜ್ಯೋತಿಸ್' ಶಬ್ದ ಪ್ರತಿಪಾದ್ಯನೆಂದು ಸಮರ್ಥಿಸಿಬಿಡುತ್ತದೆ. ಏಕೆಂದರೆ ಒಂದು 'ಜ್ಯೋತಿಸ್' ಶಬ್ದ ಪ್ರತಿಪಾದ್ಯನು ಜೀವಾತ್ಮನಾದಲ್ಲಿ 'ಕತಮ ಆತ್ಮಾ' ಆತ್ಮನೆಂದರೆ ಯಾರು ? ಎಂಬ ಪ್ರಶ್ನೆಯೇ ಕೂಡುವುದಿಲ್ಲ. ಹೀಗೆ ಪ್ರಶ್ನೆಯನ್ನು ಮಾಡಿದ್ದರಿಂದಲೇ ವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆಂದು ತಿಳಿಯುತ್ತದೆ. ಆದ್ದರಿಂದ ಹೀಗೆ ಪ್ರಕರಣಕ್ಕಿಂತ ವಾಕ್ಯವೇ ಪ್ರಬಲ.

ಲಿಂಗ ಹಾಗೂ ವಾಕ್ಯಗಳ ಲಕ್ಷಣವನ್ನು ಮತ್ತೊಂದು ಬಗೆಯಲ್ಲಿ ತಿಳಿಯಬಹುದು. ವ್ಯಾಪ್ಯಾರ್ಪಕವಾದ ಪದವು ಲಿಂಗ. ವ್ಯಾಪ್ಯಾರ್ಪಕವಾದ ಅನೇಕ ಪದಗಳೇ ವಾಕ್ಯ ಎಂದು. ಹಿಂದೆ ಲಿಂಗವೇ ಏಕಪದಾತ್ಮಕವಾಗಿದೆ. ಮತ್ತು ಅನೇಕ ಪದಾತ್ಮಕವಾಗಿದೆಯೆಂದು ಎರಡು ಪ್ರಕಾರದಿಂದ ಲಿಂಗವನ್ನು ವಿಭಾಗಮಾಡಲಾಗಿತ್ತು. ಆದರೆ

ವಿರುದ್ಧಧರ್ಮಾಧಿಕರಣ ಬೋಧಕವಾದ 'ತ್ವಮಸಿ' ಎಂಬ ಪದಗಳಿರುವುದರಿಂದ, ಹೀಗೆ ಸ್ವಾಂತರ್ಗತವಾದ ಪದಾರ್ಥನಿರ್ಣಯದಲ್ಲಿ 'ತ್ವಮಸಿ' ಎಂಬ ಪದಗಳು ಅನುಮಾನರೂಪದಿಂದ ಪ್ರಮಾಣವಾಗಿವೆ.

ಬೇರೆ ವಾಕ್ಯದ ಅರ್ಥವನ್ನು ನಿರ್ಣಯಿಸುವಾಗಲೂ ಶ್ರುತಿಲಿಂಗಾದಿಗಳಿಂದ ಉಪಪನ್ನವಾಗಿ ವಾಕ್ಯವು ನಿರ್ಣಾಯಕವಾಗಬಹುದು ಅಥವಾ ಅಂತಹ ಶ್ರುತಿಲಿಂಗಾದಿಗಳಿಲ್ಲದೇ ಕೇವಲ ಪ್ರಶ್ನೋತ್ತರಾದಿ ಭಾವದಿಂದಲೂ ವಾಕ್ಯಾರ್ಥಕ್ಕೆ ನಿರ್ಣಾಯಕವಾಗಬಹುದು. 'ಆಕಾಶ ಇತಿ ಹೋವಾಚ' ಎಂಬ ವಾಕ್ಯದಲ್ಲಿ ಬ್ರಹ್ಮನೇ ಆಕಾಶಶಬ್ದಪ್ರತಿಪಾದ್ಯನಾಗಿದ್ದಾನೆನ್ನಲು 'ಆಕಾಶಪರಾಯಣಂ' ಎಂಬ ವಾಕ್ಯವು 'ಪರಾಯಣತ್ವ' ಎಂಬ ಲಿಂಗದಿಂದ ಸಹಿತವಾಗಿ ಅರ್ಥನಿರ್ಣಾಯಕವಾಗಿದೆ. 'ಹೃದ್ಯಂತರ್ಜ್ಯೋತಿಃ' ಎಂಬ ವಾಕ್ಯದಲ್ಲಿ 'ಜ್ಯೋತಿಃ' ಶಬ್ದದಿಂದ ಬ್ರಹ್ಮನೇ ಪ್ರತಿಪಾದ್ಯನಾಗಿದ್ದಾನೆನ್ನಲು 'ಕತಮ ಆತ್ಮಾ' ಎಂಬ ಪ್ರಶ್ನೋತ್ತರ ಭಾವವು ನಿರ್ಣಾಯಕವಾಗಿದೆ. ಹೀಗೆ ವಾಕ್ಯವು ಮೂರುಬಗೆಯಲ್ಲಿ ಅರ್ಥನಿರ್ಣಾಯಕವಾಗುತ್ತದೆಂಬುದನ್ನು ತಿಳಿಯಬೇಕು.

ಲಿಂಗಕ್ಕಿಂತಲೂ ವಾಕ್ಯವು ದುರ್ಬಲ. ಏಕೆಂದರೆ ಲಿಂಗವು ನೇರವಾಗಿ ವ್ಯಾಪ್ತಜ್ಞಾನದ ಮೂಲಕ ವ್ಯಾಪಕಜ್ಞಾನವನ್ನು ತಂದುಕೊಡುತ್ತದೆ. ಆದರೆ ವಾಕ್ಯವು ಅನೇಕ ಪದಗಳ ಅರ್ಥವನ್ನು ತಿಳಿಸುತ್ತಾ, ಶ್ರುತಿ-ಲಿಂಗ ಇವುಗಳೆನ್ನೆಲ್ಲಾ ಅಪೇಕ್ಷಿಸಿ, ವಾಕ್ಯದ ಅರ್ಥದಲ್ಲಿ ಅನುಮಾಪಕವಾಗಿ ಅರ್ಥವನ್ನು ನಿರ್ಣಯಿಸುತ್ತದೆ. ಹೀಗೆ ಲಿಂಗಕ್ಕಿಂತಲೂ ವಿಳಂಬವಾಗಿ ಅರ್ಥನಿರ್ಣಾಯಕವಾಗ್ಗುವುದರಿಂದ, ಲಿಂಗಕ್ಕಿಂತಲೂ ದುರ್ಬಲವೆಂದು ತಿಳಿಯಬೇಕು.

ಲಿಂಗವು ಹೇಗೆ ಅರ್ಥವನ್ನು ನಿರ್ಣಯಿಸುತ್ತದೋ, ಅದರಂತೆ ವಾಕ್ಯಪ್ರಮಾಣವೂ ಸಹ, ಅರ್ಥವನ್ನು ನಿರ್ಣಯಿಸುತ್ತದೆ. ಇವೆರಡರಲ್ಲಿ ತಾರತಮ್ಯವನ್ನು ಕಲ್ಪಿಸುವುದೇ ತಪ್ಪಾಗುತ್ತದೆಂಬ ಆಶಂಕೆಗೆ ಅವಕಾಶವಿಲ್ಲ. ಏಕೆಂದರೆ ಲಿಂಗವು ನೇರವಾಗಿಯೇ ವ್ಯಾಪ್ಯಜ್ಞಾನವನ್ನು ಹುಟ್ಟಿಸಿ, ಅರ್ಥನಿರ್ಣಾಯಕವಾದರೆ, ವಾಕ್ಯವು ಪದಾರ್ಥಜ್ಞಾನವನ್ನು ಹುಟ್ಟಿಸಿ, ಅನಂತರ ವ್ಯಾಪ್ಯಜ್ಞಾನವನ್ನು ಹುಟ್ಟಿಸುವ ಮೂಲಕ ಅರ್ಥನಿರ್ಣಾಯಕವಾಗಬೇಕು. ಒಂದು ಹಂತದಲ್ಲಿ ಇದು ವಿಳಂಬಪ್ರವೃತ್ತಿ ಮಾಡುವುದರಿಂದ ವಾಕ್ಯವು ದುರ್ಬಲವಾಗಿದೆಯೆಂದು ಅಭಿಪ್ರಾಯ. ವಿಚಾರ ಮಾಡಿದರೆ, ಲಿಂಗದಲ್ಲಿಯೇ ಪರಸ್ಪರ ತಾರತಮ್ಯವಿದೆ. ಕೆಲವು ಲಿಂಗಗಳು ಒಂದೇ ಪದದಿಂದ ತಿಳಿಯುತ್ತವೆ. ಇನ್ನೂ ಕೆಲವು ಲಿಂಗಗಳು ಅನೇಕ ಪದಗಳಿಂದ ತಿಳಿಯುತ್ತವೆ. ಒಂದೇ ಪದದಿಂದ ತಿಳಿಯುವಂತಹ ಲಿಂಗದಲ್ಲಿ ಅನೇಕ ಪದಾರ್ಥಗಳ ಜ್ಞಾನದ ಅನಿವಾರ್ಯತೆ ಇಲ್ಲದ ಕಾರಣ ಕೂಡಲೇ ಅರ್ಥವು ನಿಶ್ಚಯವಾಗುತ್ತದೆ. ಅನೇಕ ಪದಗಳಿಂದ ಲಿಂಗಜ್ಞಾನ ಬರುವಾಗ ಆ ಎಲ್ಲಾ ಪದಾರ್ಥಗಳನ್ನು ತಿಳಿದು ಅನಂತರ ಅರ್ಥನಿಶ್ಚಯವಾಗಬೇಕಾದ ಕಾರಣ ವಿಳಂಬವಾಗಿ ಅರ್ಥನಿರ್ಣಯವಾಗುತ್ತದೆ. ಹೀಗೆ ಲಿಂಗದಲ್ಲೇ ಯಾವರೀತಿಯಾಗಿ ಅವಾಂತರ ತಾರತಮ್ಯವಿದೆಯೋ, ಅದರಂತೆ ಲಿಂಗ ಮತ್ತು ವಾಕ್ಯಗಳ ನಡುವೆಯೂ ತಾರತಮ್ಯವು ಇದ್ದೇ ಇರುತ್ತದೆ.

ಅನೇಕ ಪದಗಳಿಂದ ಅರ್ಪಿತವಾದ ಅಸಾಧಾರಣಧರ್ಮವು ಲಿಂಗವಾಗುವುದಿಲ್ಲವೆಂದು ಶಂಕಿಸಬಾರದು. 'ಅಂತಸ್ತದ್ಧರ್ಮೋಪದೇಶಾತ್' 'ಅತ ಏವ ಪ್ರಾಣಃ' ಇತ್ಯಾದಿ ಸೂತ್ರಗಳೆಲ್ಲಾ ಸೂತ್ರಕಾರರು ಉಲ್ಲೇಖ ಮಾಡುವಂತಹ ಸಮುದ್ರಶಾಯಿತ್ವ, ಶ್ರೀಲಕ್ಷ್ಮೀಪತಿತ್ವ ಮೊದಲಾದ ಲಿಂಗಗಳು ಒಂದೊಂದು ಪದಗಳಿಂದ ತಿಳಿಯುವಂತಹದ್ದಲ್ಲ, ಅನೇಕ ಪದಗಳಿಂದಲೇ ತಿಳಿಯುತ್ತದೆ. ಆದ್ದರಿಂದ, ಸೂತ್ರಕಾರರಿಗೆ ಅಭಿಪ್ರೇತವಾದದ್ದನ್ನೇ ಗ್ರಂಥಕಾರರು ಇಲ್ಲಿ ಉಲ್ಲೇಖಿಸುತ್ತಿದ್ದಾರೆಂಬುದನ್ನು ಗಮನಿಸಬೇಕು.

ವಾಕ್ಯವು ನೇರವಾಗಿ ವ್ಯಾಪ್ಯಾರ್ಪಕವಾಗುವುದಿಲ್ಲವೆಂದು ಹೇಗೆ ಹೇಳಿದಿರಿ? ಏಕೆಂದರೆ ಸೂರ್ಯನು ಮುಳುಗಿದನು ಎಂದು ಹೇಳಿದಾಗ, ಒಬ್ಬೊಬ್ಬ ವ್ಯಕ್ತಿಗೆ ಒಂದೊಂದು ಬಗೆಯಲ್ಲಿ ಅರ್ಥವಾಗುತ್ತದೆ. ವಿಪ್ರನಿಗೆ ಸಂಧ್ಯಾವಂದನೆ ಮಾಡು ಎಂದು, ಕಳ್ಳನಿಗೆ ಕಳ್ಳತನದಲ್ಲಿ ಉದ್ಯುಕ್ತನಾಗು ಎಂದು, ದಾಡಿಹೋಕನಿಗೆ ಮುಂದೆ ಹೋಗಬೇಡ ಎಂದು, ಕಾಮಿನಿಸ್ತ್ರೀಗೆ ರತಿಕ್ರೀಡೆಗಾಗಿ ಕಾಂತಪುರುಷನನ್ನು ಪ್ರಲೋಭನೆ ಮಾಡು ಎಂದು ಅರ್ಥವಾಗುತ್ತದೆ. ಹೀಗೆ ಸೂರ್ಯನ ಅಸ್ತಂಗಮನದಿಂದ ವ್ಯಾಪ್ಯವಾದ ಅರ್ಥಗಳನ್ನು 'ಅಸ್ತಂಗತಃ ಸವಿತಾ' ಎಂಬ ವಾಕ್ಯವು ತಿಳಿಸುವುದರಿಂದ ವಾಕ್ಯವು ಲಿಂಗರೂಪವೇ ಆಗಿದೆ. ಹೀಗಿರುವಾಗ ಲಿಂಗಕ್ಕಿಂತಲೂ ದುರ್ಬಲವೆಂದು ಹೇಗೆ ಹೇಳುತ್ತೀರಿ?

ಈ ಆಕ್ಷೇಪವೂ ಸಹ ತಪ್ಪು. ಏಕೆಂದರೆ ಪ್ರಕೃತ ಉಲ್ಲೇಖಿಸುತ್ತಿರುವ ಶ್ರುತಿ, ಲಿಂಗ, ವಾಕ್ಯ ಇವೆಲ್ಲವೂ ವೇದದ ಅರ್ಥನಿರ್ಣಯದಲ್ಲಿ ಲಿಂಗರೂಪವಾಗಿರಬೇಕು ಹೊರತು, ವಕ್ತೃವಿನ ವಿವಕ್ಷೆಯನ್ನು ಅರ್ಥಮಾಡಿಕೊಳ್ಳುವುದಕ್ಕಾಗಿ ಪ್ರಮಾಣವನ್ನಾಗಿ ಉಲ್ಲೇಖಿಸುತ್ತಿಲ್ಲ. 'ಅಸ್ತಂಗತಃ ಸವಿತಾ' ಇತ್ಯಾದಿ ವಾಕ್ಯವನ್ನು ನೀವು ಉದಾಹರಿಸಿದ್ದು, ವಕ್ತೃವಿನ ವಿವಕ್ಷೆಯನ್ನು ತಿಳಿಯಲಷ್ಟೇ ಅನುಮಾಪಕವಾಗಿದೆ, ಆದ್ದರಿಂದ ದೃಷ್ಟಾಂತವು ವಿಷಮವಾದ್ದರಿಂದ ಆಕ್ಷೇಪವೂ ತಪ್ಪು. ಆದ್ದರಿಂದ 'ಆಗಮಾರ್ಥಾವಸಿತ್ಯರ್ಥಾ ನಿಯತವ್ಯಾಪ್ತಯೋಽಖಿಲಾಃ । ವಾಕ್ಯಂ ಪ್ರಕರಣಂ ಸ್ಥಾನಂ ಸಮಾಖ್ಯಾಚ ತಥಾವಿಧಾಃ ॥' ಎಂದರೆ ವಾಕ್ಯ, ಪ್ರಕರಣ, ಸ್ಥಾನ, ಸಮಾಖ್ಯಾಗಳೆಲ್ಲವೂ ವೇದಾರ್ಥದ ನಿರ್ಣಯದಲ್ಲಿ ನಿಯತವ್ಯಾಪ್ತವಾಗಿವೆ ಆದ್ದರಿಂದ ಅನುಮಾನರೂಪವಾಗಿವೆಯೆಂದು ಅನುವ್ಯಾಖ್ಯಾನದಲ್ಲಿ ಹೇಳಿದ್ದಾರೆ.

ಒಂದೇ ಅರ್ಥದಲ್ಲಿ ತಾತ್ಪರ್ಯವುಳ್ಳ ಅನೇಕ ವಾಕ್ಯಗಳ ಪುಂಜವೇ ಪ್ರಕರಣ ಎನಿಸುತ್ತದೆ. ಈ ಪ್ರಕರಣವು ಅನೇಕ ಅವಾಂತರ ವಾಕ್ಯಾರ್ಥಗಳನ್ನು ತಿಳಿಸುವ ಮೂಲಕ ವಿಪ್ರತಿಪನ್ನವಾದ ವಾಕ್ಯವನ್ನು ಪ್ರಕರಣಕ್ಕೆ ಅನುಗುಣವಾಗಿ ಅರ್ಥೈಸಬೇಕಾದ್ದರಿಂದಲೂ ವಾಕ್ಯಕ್ಕಿಂತಲೂ ವಿಳಂಬವಾಗಿ ಪ್ರವೃತ್ತಿ ಮಾಡುತ್ತದೆ. ಆದ್ದರಿಂದ ಪ್ರಕರಣಕ್ಕಿಂತ ವಾಕ್ಯವೇ ಪ್ರಬಲವಾಗುತ್ತದೆ -

ಬೃಹದಾರಣ್ಯಕೋಪನಿಷತ್ತಿನಲ್ಲಿ 'ಯೋಽಯಂ ವಿಜ್ಞಾನಮಯಃ ಪ್ರಾಣೇಽಹೃದ್ಯಂತರ್ಜ್ಯೋತಿಃ ಪುರುಷಃ' ಎಂದು ಪ್ರಾರಂಭವಾಗುವ ವಾಕ್ಯವು ಜೀವನನ್ನು ಪ್ರತಿಪಾದನೆ ಮಾಡುತ್ತಿದೆ. 'ಕಿಂ ಜ್ಯೋತಿರಯಂ ಪುರುಷಃ' ಎಂದು ಜನಕರಾಜರು ಜೀವನು ಯಾವರೀತಿಯ ಜ್ಞಾನಸಾಧನವನ್ನು ಹೊಂದಿದ್ದಾನೆಂದು ಪ್ರಶ್ನಿಸಿದ್ದಾರೆ. ಅದಕ್ಕೆ ಯಾಜ್ಞವಲ್ಕ್ಯರು ಉತ್ತರಿಸುವ ಪ್ರಕರಣವೇ ಇದಾಗಿದೆ. ಇಲ್ಲಿ ಜೀವಾತ್ಮನ ಬಗ್ಗೆ ಪ್ರಶ್ನೆ ಹಾಗೂ ಉತ್ತರಗಳಿರುವುದರಿಂದ 'ಜ್ಯೋತಿಸ್' ಶಬ್ದದಿಂದ ಜೀವನೇ ಪ್ರತಿಪಾದ್ಯನಾಗಿದ್ದಾನೆಂದು ಈ ಪ್ರಕರಣ ಸಮರ್ಥಿಸುತ್ತದೆ. ಆದರೆ ಅದಕ್ಕಿಂತ ಮೊದಲೇ 'ಕತಮ ಆತ್ಮಾ' ಎಂಬ ವಾಕ್ಯವು ವಿಷ್ಣುವೇ 'ಜ್ಯೋತಿಸ್' ಶಬ್ದ ಪ್ರತಿಪಾದ್ಯನೆಂದು ಸಮರ್ಥಿಸಿಬಿಡುತ್ತದೆ. ಏಕೆಂದರೆ ಒಂದು 'ಜ್ಯೋತಿಸ್' ಶಬ್ದ ಪ್ರತಿಪಾದ್ಯನು ಜೀವಾತ್ಮನಾದಲ್ಲಿ 'ಕತಮ ಆತ್ಮಾ' ಆತ್ಮನೆಂದರೆ ಯಾರು ? ಎಂಬ ಪ್ರಶ್ನೆಯೇ ಕೂಡುವುದಿಲ್ಲ. ಹೀಗೆ ಪ್ರಶ್ನೆಯನ್ನು ಮಾಡಿದ್ದರಿಂದಲೇ ವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆಂದು ತಿಳಿಯುತ್ತದೆ. ಆದ್ದರಿಂದ ಹೀಗೆ ಪ್ರಕರಣಕ್ಕಿಂತ ವಾಕ್ಯವೇ ಪ್ರಬಲ.

ಲಿಂಗ ಹಾಗೂ ವಾಕ್ಯಗಳ ಲಕ್ಷಣವನ್ನು ಮತ್ತೊಂದು ಬಗೆಯಲ್ಲಿ ತಿಳಿಯಬಹುದು. ವ್ಯಾಪ್ಯಾರ್ಪಕವಾದ ಪದವು ಲಿಂಗ. ವ್ಯಾಪ್ಯಾರ್ಪಕವಾದ ಅನೇಕ ಪದಗಳೇ ವಾಕ್ಯ ಎಂದು. ಹಿಂದೆ ಲಿಂಗವೇ ಏಕಪದಾತ್ಮಕವಾಗಿದೆ. ಮತ್ತು ಅನೇಕ ಪದಾತ್ಮಕವಾಗಿದೆಯೆಂದು ಎರಡು ಪ್ರಕಾರದಿಂದ ಲಿಂಗವನ್ನು ವಿಭಾಗಮಾಡಲಾಗಿತ್ತು. ಆದರೆ

ಈಗ ವ್ಯಾಪ್ಯಧರ್ಮವನ್ನು ತಿಳಿಸುವ ಒಂದು ಪದವಿದ್ದರೆ ಲಿಂಗವೆಂದು, ಅನೇಕ ಪದಗಳಿದ್ದರೆ ವಾಕ್ಯವೆಂದು ವಿಭಿನ್ನವಾಗಿ ಮತ್ತೊಂದು ಪ್ರಕಾರದಲ್ಲಿ ಲಿಂಗ ಹಾಗೂ ವಾಕ್ಯಗಳ ಲಕ್ಷಣವನ್ನು ಹೇಳಿದ್ದಾರೆ. ಹಾಗಾದರೆ ಲಿಂಗವು ವಾಕ್ಯಕ್ಕಿಂತಲೂ ಪ್ರಬಲವೆಂದು ಹೇಗೆ ಹೇಳುವುದು ಎಂದರೆ? 'ಒಬ್ಬ ಕರ್ತೃವು ವರ್ತಮಾನ ಕಾಲದಲ್ಲಿ ತನಗಾಗಿ ಪಾಕಕ್ರಿಯೆಯಲ್ಲಿ ತೊಡಗುತ್ತಾನೆ' ಎಂದು ಉದ್ದವಾದ ವಾಕ್ಯದಿಂದ ಯಾವ ಶಾಬ್ದಬೋಧವು ಬರುತ್ತದೋ ಅದನ್ನು 'ಪಚತೇ' ಎಂಬ ಒಂದೇ ಕ್ರಿಯಾಪದದಿಂದ ಅಷ್ಟೂ ಶಾಬ್ದಬೋಧವನ್ನು ಪಡೆಯಬಹುದು. ಇಲ್ಲಿರುವ 'ಪಚತೇ' ಎಂಬ ಒಂದೇ ಪದವು ವ್ಯಾಪ್ಯಾರ್ಪಕವಾದ ಲಿಂಗರೂಪವಾದ ಪದವಾಗಿದೆ. ಒಬ್ಬ ಕರ್ತೃ ವರ್ತಮಾನ ಕಾಲದಲ್ಲಿ ತನಗಾಗಿ ಪಾಕಕ್ರಿಯೆಯಲ್ಲಿ ತೊಡಗುತ್ತಾನೆ ಎಂಬುದು ಅನೇಕ ಪದಗಳುಳ್ಳ ವಾಕ್ಯರೂಪವಾಗಿದೆ. ಯಾವುದರಿಂದ ಶೀಘ್ರವಾಗಿ ಶಾಬ್ದಬೋಧವು ಬರುತ್ತದೋ ಅದೇ ಪ್ರಬಲವಾದ್ದರಿಂದ 'ಪಚತೇ' ಎಂಬ ಲಿಂಗರೂಪವಾದ ಪದವೇ ಪ್ರಬಲವೆಂದು ಸಿದ್ಧವಾಗುತ್ತದೆ. ಅದರಂತೆ 'ಸರ್ವಾಣಿ ಹವಾ ಇಮಾನಿ ಭೂತಾನಿ ಆಕಾಶಾದೇವ ಸಮುತ್ಪದ್ಯಂತೇ' ಎಂಬ ದೀರ್ಘವಾದ ವಾಕ್ಯದಿಂದ ವಾಯ್ವಾದಿ ಭೂತಕಾರಣತ್ವವನ್ನು ತಿಳಿಯುವುದಕ್ಕಿಂತಲೂ 'ಅನಂತಃ' ಎಂಬ ಒಂದೇ ಪದದಿಂದ ಅನಂತತ್ವ ಲಿಂಗವನ್ನು ತಿಳಿಯುವುದೇ ಶ್ರೇಷ್ಠ. ಇದರಂತೆ ಅಗ್ನಿ ಪ್ರಕರಣದಿಂದ ಅಗ್ನಿಯೇ ಪ್ರತಿಪಾದ್ಯನೆಂದು ತಿಳಿಯುವುದಕ್ಕಿಂತಲೂ 'ವಿಮೇ ಕರ್ಣಾ ಪತಯತಃ' ಎಂಬ ಒಂದೇ ವಾಕ್ಯದಿಂದ ವಿಷ್ಣುವೇ 'ಜ್ಯೋತಿಸ್' ಶಬ್ದದಿಂದ ಪ್ರತಿಪಾದ್ಯನೆಂದು ತಿಳಿಯುವುದು ಶ್ರೇಷ್ಠವಾಗಿದೆ. ಆದ್ದರಿಂದ ಪ್ರಕರಣಕ್ಕಿಂತ ವಾಕ್ಯವು ಪ್ರಬಲವಾಗಿದೆಯೆಂದೂ ಸಹ ತಿಳಿಯಬೇಕು.

ಹಾಗಾದರೆ 'ಅತ ಏವ ಪ್ರಾಣಃ' ಇತ್ಯಾದಿ ಸೂತ್ರಗಳಲ್ಲಿ ಶ್ರೀಲಕ್ಷ್ಮೀಪತಿತ್ವ ಮೊದಲಾದವುಗಳನ್ನು ಲಿಂಗವೆಂದೇಕೆ ಹೇಳಿದ್ದಾರೆ ಈಗ ಹೇಳಿದ ಲಕ್ಷಣದಂತೆ ಅವುಗಳು ವಾಕ್ಯವಾಗಬೇಕಲ್ಲವೇ? ಎಂಬ ಪ್ರಶ್ನೆಗೆ ಹೀಗೆ ಉತ್ತರಿಸಬೇಕು. ವ್ಯಾಪ್ಯಾರ್ಪಕವಾದ ಅನೇಕ ಪದಗಳ ಸಮೂಹವು ವಾಕ್ಯವೆನಿಸಿದ್ದರಿಂದ 'ಶ್ರೀಶ್ಚ ತೇ ಲಕ್ಷ್ಮೀಶ್ಚ' ಇತ್ಯಾದಿ ಪದಸಮೂಹವು ವಾಕ್ಯರೂಪ ಪ್ರಮಾಣವೇ ಆಗಿದೆ. ಆದರೆ ಇದರಿಂದ ತಿಳಿಯುವಂತಹ 'ಶ್ರೀಲಕ್ಷ್ಮೀ ಪತಿತ್ವ' ಎಂಬ ಅಸಾಧಾರಣ ಧರ್ಮವು ಲಿಂಗರೂಪವಾಗಿರುವುದರಿಂದ ಅವಾಂತರ ಭೇದವನ್ನು ವಿವಕ್ಷಿಸದೇ ಇದನ್ನು ಮಾತ್ರ ವಿವಕ್ಷಿಸಿ, ಸೂತ್ರಕಾರರು ಲಿಂಗವೆಂದು ಪ್ರಯೋಗಿಸಿದ್ದಾರೆ.

ಪ್ರಕರಣ ಪ್ರಮಾಣಕ್ಕಿಂತಲೂ ಸ್ಥಾನಪ್ರಮಾಣವು ದುರ್ಬಲವಾಗಿದೆ - ಸಮಗ್ರ ಷಟ್‌ಪ್ರಶ್ನೋಪನಿಷತ್ತು ಅನೇಕ ಪ್ರಕರಣದಿಂದ ಕೂಡಿರುವಂತಹ ಸ್ಥಾನರೂಪವಾದ ಪ್ರಮಾಣ. ಆದರೆ ಉಪನಿಷತ್ತಿನ ಮೂರನೆಯ ಪ್ರಶ್ನೆಯಲ್ಲಿ 'ಆತ್ಮತಃ ಏಷ ಪ್ರಾಣೋ ಜಾಯತೇ' ಎಂಬುದಾಗಿ ಪ್ರಾಣನ ಉಲ್ಲೇಖವಿದೆ. ಪ್ರಕರಣ ಪ್ರಮಾಣವು ಮುಖ್ಯಪ್ರಾಣನ ಅಸಾಧಾರಣ ಲಿಂಗಗಳಿಂದ 'ಭಗವನ್‌ಕುತ ಏಷ ಪ್ರಾಣೋಜಾಯತೇ' ಎಂಬ ವಾಕ್ಯವು ಮುಖ್ಯಪ್ರಾಣಪರವಾಗಿದೆಯೆಂದು ಸಮರ್ಥಿಸುತ್ತದೆ. ಸ್ಥಾನಪ್ರಮಾಣವು ಸ್ವಲ್ಪ ವಿಳಂಬವಾಗಿ 'ಏವಮೇವ ಏಷ ಪ್ರಾಣಃ ಎಂಬುದನ್ನು ವಿಷ್ಣುಪರವಾಗಿದೆಯೆಂದು ಸಮರ್ಥಿಸುತ್ತದೆ. ವಿಳಂಬವಾಗಿ ಸಮರ್ಥಿಸುವಂತಹ ಸ್ಥಾನ ಪ್ರಮಾಣಕ್ಕಿಂತಲೂ ಶೀಘ್ರವಾಗಿ ವಾಯುಪರತ್ವವನ್ನು ಸಮರ್ಥಿಸುವ ಪ್ರಕರಣ ಪ್ರಮಾಣವೇ ಪ್ರಬಲವಾಗಿದೆಯೆಂದು ಇದರಿಂದ ನಿಶ್ಚಯವಾಗುತ್ತದೆ.

ಸಮಾಖ್ಯಾಪ್ರಮಾಣವು ಸ್ಥಾನಪ್ರಮಾಣಕ್ಕಿಂತಲೂ ದುರ್ಬಲವಾಗಿದೆ. 'ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯಾ ಮೇ ಶುಧ್ಯಂತಾಮ್' ಎಂಬ ಮಹಾನಾರಾಯಣೋಪನಿಷತ್ತಿ-

ನಲ್ಲಿರುವ ಸಮಾಖ್ಯಾಪ್ರಮಾಣಕ್ಕಿಂತಲೂ ತೈತ್ತಿರೀಯೋಪನಿಷತ್ತಿನಲ್ಲಿರುವ ಪ್ರಾಣಮಯಾದಿ ಶಬ್ದಗಳು ಕೋಶವಾಚಕವಾಗಿದೆಯೆಂದು ಹೇಳಬಹುದು. ಇದರಂತೆ ಬ್ರಹ್ಮಶಬ್ದದ ಉಲ್ಲೇಖವಿರುವಂತಹ ಪ್ರಕರಣದಲ್ಲಿ ಹೇಳಿರುವುದರಿಂದ, ಅನ್ನಮಯಾದಿ ಶಬ್ದಗಳು ಬ್ರಹ್ಮವಾಚಕಗಳೂ ಆಗಿವೆಯೆಂದು ಹೇಳಬಹುದು. ಆದರೆ ಸಮಾಖ್ಯಾಪ್ರಮಾಣಕ್ಕಿಂತಲೂ ಪ್ರಕರಣಪ್ರಮಾಣವು ಪ್ರಬಲವಾದ್ದರಿಂದ ಅನ್ನಮಯಾದಿಗಳೆಲ್ಲವೂ ಬ್ರಹ್ಮವಾಚಕಗಳಾಗುತ್ತವೆಂದೇ ಸಿದ್ಧಾಂತ.

ಆದ್ದರಿಂದ ಶ್ರುತಿಯು ಲಿಂಗಕ್ಕಿಂತಲೂ ಪ್ರಬಲವಾಗಿದೆ. ವಾಕ್ಯಕ್ಕಿಂತ ಲಿಂಗವು ಪ್ರಬಲವಾಗಿದೆ. ಪ್ರಕರಣ ಪ್ರಮಾಣಕ್ಕಿಂತ ವಾಕ್ಯವು ಪ್ರಬಲವಾಗಿದೆ. ಸ್ಥಾನಪ್ರಮಾಣಕ್ಕಿಂತ ಪ್ರಕರಣವು ಪ್ರಬಲವಾಗಿದೆ. ಸ್ಥಾನಪ್ರಮಾಣವು ಸಮಾಖ್ಯಾಪ್ರಮಾಣಕ್ಕಿಂತಲೂ ಪ್ರಬಲವಾಗಿದೆಯೆಂದು ನಿಶ್ಚಯವಾಯಿತು.

ಶ್ರುತಿ, ಲಿಂಗ, ವಾಕ್ಯ : ಪ್ರಕರಣ, ಸ್ಥಾನ, ಸಮಾಖ್ಯಾ ಎಂಬ ಆರು ಬಗೆಯ ಈ ತಾತ್ಪರ್ಯಲಿಂಗಗಳೆಲ್ಲವೂ ಅನುಮಾನರೂಪದಲ್ಲಿಯೇ ಅರ್ಥನಿಶ್ಚಾಯಕವಾಗುತ್ತವೆ. ಆದರೆ ಶ್ರುತಿ ಮಾತ್ರ ಶ್ರುತಿತ್ವಪ್ರಯುಕ್ತವಾಗಿ ಅರ್ಥನಿರ್ಣಾಯಕವಾಗುತ್ತದೆ.

ವೇದದಲ್ಲಿರುವ ಯಾವ ವಾಕ್ಯದ ಅರ್ಥವನ್ನು ನಿಶ್ಚಯ ಮಾಡಲು ಶ್ರುತಿ-ಲಿಂಗಾದಿಗಳನ್ನು ಅವಲಂಬಿಸುತ್ತೇವೋ, ಅಂತಹ ಶ್ರುತಿ-ಲಿಂಗಾದಿಗಳು ಅದೇ ವಾಕ್ಯದಲ್ಲಿಯೇ ಇರಬೇಕಾಗುತ್ತವೆ. ಅಂದರೆ ವಿಪ್ರತಿಪನ್ನವಾದ ವಾಕ್ಯದಲ್ಲಿರುವ ಶ್ರುತಿ-ಲಿಂಗ ಮೊದಲಾದವುಗಳನ್ನು ಅವಲಂಬಿಸಿ, ಅದರ ಅರ್ಥವನ್ನು ನಾವು ನಿಶ್ಚಯಮಾಡಬೇಕು. ಒಂದು ವೇಳೆ ವಿಪ್ರತಿಪನ್ನವಾದ ವಾಕ್ಯದಲ್ಲಿ ಶ್ರುತಿ-ಲಿಂಗಾದಿಗಳಿಲ್ಲದೇ, ಅದರ ಹಿಂದಿನ ಅಥವಾ ಮುಂದಿನ ವಾಕ್ಯದಲ್ಲಿ ಶ್ರುತಿ-ಲಿಂಗಾದಿಗಳಿದ್ದರೆ ಹಿಂದಿನ-ಮುಂದಿನ ವಾಕ್ಯಗಳ ಅರ್ಥವನ್ನು ನಿರ್ಣಯಿಸಿ ಅನಂತರ ವಿಪ್ರತಿಪನ್ನವಾದ ವಾಕ್ಯದ ಅರ್ಥವನ್ನು ನಿಶ್ಚಯಿಸಬೇಕು.

ಒಂದು ವೇಳೆ ಹಿಂದಿನ-ಮುಂದಿನ ವಾಕ್ಯಗಳಲ್ಲಿಯೂ ಮತ್ತು ವಿಪ್ರತಿಪನ್ನವಾದ ವಾಕ್ಯದಲ್ಲಿಯೂ ಶ್ರುತಿ-ಲಿಂಗಾದಿಗಳಿಲ್ಲದೇ ಬೇರೆ ಕಡೆ ಇದ್ದರೆ, ಆವಾಗ ಪ್ರಕರಣಕ್ಕೆ ನಿಶ್ಚಾಯಕವಾಗುವ ಮೂಲಕ ಅವು ತಾತ್ಪರ್ಯಲಿಂಗಗಳೆನಿಸುತ್ತವೆ.

ಒಂದು ವೇಳೆ ಶ್ರುತ್ಯಾದಿಗಳಿಂದ ಅರ್ಥನಿಶ್ಚಯವಾಗಿ ಉಪಕ್ರಮ-ಉಪಸಂಹಾರಗಳು ಅನುಗುಣವಾಗಿದ್ದರೆ ಅಲ್ಲಿ ತಾತ್ಪರ್ಯಾತಿಶಯವು ಉಂಟಾಗುತ್ತದೆ. ಶ್ರುತ್ಯಾದಿಗಳಿಂದ ಅರ್ಥನಿಶ್ಚಯವಾಗದೇ ಉಪಕ್ರಮೋಪಸಂಹಾರಗಳು ಮಾತ್ರವಿದ್ದಲ್ಲಿ ಪ್ರಕರಣವು ನಿರ್ಣಯದ್ವಾರಾ ವಿಪ್ರತಿಪನ್ನವಾದ ಅರ್ಥನಿರ್ಣಾಯಕವಾಗುತ್ತದೆ. ಇನ್ನು ಶ್ರುತ್ಯಾದಿಗಳಿಂದ ಅರ್ಥನಿಶ್ಚಯವು ಉಂಟಾಗಿ, ಉಪಕ್ರಮೋಪಸಂಹಾರಗಳು ವಿಪರೀತವಾದ ಅರ್ಥದಲ್ಲಿದ್ದರೆ ಶ್ರುತಿ-ಲಿಂಗಾದಿಗಳಿಂದ ಈ ವಾಕ್ಯವು ಬೇರೆ ಅರ್ಥವನ್ನೇ ನಿರ್ಣಯಿಸುತ್ತದೆ. ಉಪಕ್ರಮಾದಿಗಳಿಂದ ಪ್ರಕರಣವು ಅನ್ಯಪರವೆಂದು ನಿರ್ಣಯವಾಗುತ್ತದೆ. ಹೀಗೆ ವ್ಯವಸ್ಥೆಯನ್ನು ತಿಳಿಯಬೇಕು.

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥

ಭೂಮಾಧಿಕರಣ

ಬ್ರಹ್ಮಸೂತ್ರ, ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ವಪ್ರದೀಪ, ತತ್ವಪ್ರಕಾಶಿಕಾ, ಭಾವದೀಪ

ವಿಶೇಷವಿಚಾರದೊಂದಿಗೆ ಕನ್ನಡಭಾಷೆಯಲ್ಲಿ ಅನುವಾದ

ಮತ್ತು

ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆ

॥ ಹರಿಃ ಓಂ ॥

॥ ಶ್ರೀವೇದವ್ಯಾಸಾಯ ನಮಃ ॥

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಗುರುಭ್ಯೋ ನಮಃ ॥

॥ ಶ್ರೀಮದ್ರಾಘವೇಂದ್ರತೀರ್ಥಗುರುಭ್ಯೋ ನಮಃ ॥

॥ ಶ್ರೀಗುರುಭ್ಯೋ ನಮಃ ॥

ಭೂಮಾಧಿಕರಣ

ಬ್ರಹ್ಮಸೂತ್ರ

'ಭೂಮಾ ಸಂಪ್ರಸಾದಾದಧ್ಯುಪದೇಶಾತ್' ಎಂಬ ಸೂತ್ರವ್ಯಾಖ್ಯಾನ

ब्रह्मसूत्रम् – ।। भूमा सम्प्रसादादध्युपदेशात् ।।

ಯಾವಾತನು ಭೂಮಾ ಎಂಬ ಶಬ್ದದಿಂದ ಪ್ರತಿಪಾದ್ಯನೋ ಅವನು ಪೂರ್ಣಸುಖಸ್ವರೂಪನಾಗಿದ್ದಾನೆಂದು, ಮತ್ತು ನಾಮಾಭಿಮಾನಿಯಾದ ಉಷಾದೇವಿಯಿಂದ ಪ್ರಾರಂಭಿಸಿ ವಾಯುದೇವತೆಗಿಂತ ಅಧಿಕನನ್ನಾಗಿ ಹೇಳಿರುವುದರಿಂದಲೂ ಭೂಮಾ ಎಂಬ ಪದದಿಂದ ವಿಷ್ಣುವೇ ಪ್ರತಿಪಾದ್ಯನಾಗುತ್ತಾನೆ.

ಭೂಮಾ = ಯೋ ವೈ ಭೂಮಾ ಎಂಬ ಶ್ರುತಿಯಲ್ಲಿ ಭೂಮಾ ಎಂಬ ಶಬ್ದದಿಂದ ಪ್ರತಿಪಾದ್ಯನಾದವನು ಸುಖಪೂರ್ಣನಾದ ವಿಷ್ಣುವೇ ಆಗಿದ್ದಾನೆ. ಏಕೆಂದರೆ, ಸಂಪ್ರಸಾದಾತ್ = ತತ್ಸುಖಂ ಎಂಬುದರಿಂದ ಪೂರ್ಣಸುಖಸ್ವರೂಪತ್ವವನ್ನು ಹೇಳಿರುವುದರಿಂದ ಮತ್ತು ಅಧ್ಯುಪದೇಶಾತ್ = ನಾಮಾಭಿಮಾನಿಯಾದ ದೇವತೆಗಿಂತ ಅಧಿಕರಾದ ವಾಯುದೇವತೆಗಿಂತಲೂ ಉತ್ತಮನೆಂದು ಭೂಮನನ್ನು ಹೇಳಿರುವುದರಿಂದ.

ಜಗದ್ಗುರು ಶ್ರೀಮಧ್ವಾಚಾರ್ಯರಿಂದ ವಿರಚಿತವಾದ

ಬ್ರಹ್ಮಸೂತ್ರಭಾಷ್ಯ

'ಭೂಮಾ' ಎಂದರೆ ವಾಯು ಎಂದು ಪೂರ್ವಪಕ್ಷ

ब्रह्मसूत्रभाष्यम् – 'प्राणो वा आशाया भूयान्' इत्युक्त्वा 'यो वै भूमा तत् सुखम्' (छां. ७–२३.) इत्युक्तेस्तस्यैव भूमत्वप्राप्तिः ।

ಅನುವಾದ - ಛಾಂದೋಗ್ಯಶ್ರುತಿಯಲ್ಲಿ ಪ್ರಾಣನಾದರೂ ಆಶಾ ಎಂಬ ಭಾರತೀದೇವಿಗಿಂತ ದೊಡ್ಡವನಾಗಿದ್ದಾನೆಂದು ಹೇಳಿ, ಮುಂದೆ ಪ್ರಸಿದ್ಧವಾದ ಯಾವ ವಾಯುದೇವನಿದ್ದಾನೋ ಅವನೇ ಸುಖಪೂರ್ಣನಾಗಿದ್ದಾನೆಂದು ಹೇಳಲಾಗಿದೆ. ಆದ್ದರಿಂದ ಭೂಮಾ ಎಂಬ ಶಬ್ದದಿಂದ ತಿಳಿಯುವ ಆನಂದಪೂರ್ಣತ್ವವು ವಾಯುದೇವನಲ್ಲೇ ಬರುತ್ತದೆ.

ಪ್ರತಿಪದಾರ್ಥ -- ಈ ಅಧಿಕರಣದಲ್ಲಿ ಭೂಮಾ ಎಂಬ ನಾಮಾತ್ಮಕಶಬ್ದವನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡುತ್ತಿದ್ದಾರೆ. ಭೂಮ್ನಾ ಕ್ರತುವತ್ ಎಂಬ ಸೂತ್ರದಲ್ಲಿ ಭೂಮಾಶಬ್ದವನ್ನು ಧರ್ಮವಾಚಕವಾಗಿ ವಿವಕ್ಷಿಸಿದ್ದರೂ ಈ ಅಧಿಕರಣದಲ್ಲಿ ಪೂರ್ಣವಾಗಿರುವಿಕೆ ಎಂದು ಧರ್ಮ್ಯರ್ಥದಲ್ಲಿ ಪ್ರಯೋಗಿಸಲಾಗಿದೆ. ಅಂದರೆ ಗುಣಗಳಿಂದ ಉತ್ತಮನಾಗಿದ್ದಾನೆಂದರ್ಥ. ಶ್ರುತ್ಯಾದಿಸಂಗತಿ ಹಾಗೂ ವಿಷಯಾದಿಗಳನ್ನು ಸೂಚಿಸುತ್ತಾ, ಯುಕ್ತಿಬದ್ಧವಾದ ಪೂರ್ವಪಕ್ಷವನ್ನು 'ಪ್ರಾಣೋ ವಾ' ಇತ್ಯಾದಿ ಭಾಷ್ಯದಿಂದ ತೋರಿಸುತ್ತಿದ್ದಾರೆ.

ಪ್ರಾಣೋ ವಾ = ಮುಖ್ಯಪ್ರಾಣನಾದರೋ, ಆಶಾಯಾಃ = ಆಶಾ ಎಂಬ ಹೆಸರಿನ ಭಾರತೀದೇವಿಗಿಂತ, ಭೂಯಾನ್ = ಗುಣದಲ್ಲಿ ದೊಡ್ಡವನು, ಇತ್ಯುಕ್ತ್ವಾ = ಹೀಗೆ ಹೇಳಿ, ಮುಂದೆ ಯೋ ವೈ ಭೂಮಾ = ಯಾವ ಪ್ರಸಿದ್ಧನಾದ ವಾಯುದೇವನಿದ್ದಾನೋ, ತತ್ = ಅವನೇ, ಸುಖಪೂರ್ಣನು, ಇತ್ಯುಕ್ತೇಃ = ಹೀಗೆ ಹೇಳಿರುವುದರಿಂದ, ತಸ್ಯೈವ = ಮುಖ್ಯಪ್ರಾಣನಿಗೇನೇ, ಭೂಮತ್ವಪ್ರಾಪ್ತಿಃ = ಭೂಮಾ ಎಂಬ ಶಬ್ದಪ್ರತಿಪಾದ್ಯತ್ವವು, ಯುಕ್ತವಾಗುತ್ತದೆ.

ವಾಯುದೇವನೇ ಪ್ರತಿಪಾದ್ಯನೆನ್ನಲು ಕಾರಣ

ಬ್ರಹ್ಮಸೂತ್ರಭಾಷ್ಯಮ್ – 'उत्क्रान्तप्राणान्' (छां. ७–१५–३.) इत्यादिलिङ्गात् प्राणशब्दश्च वायुवाचीति ।

ಮುಖ್ಯಪ್ರಾಣನು ನಿರ್ಗಮಿಸಿದ ಮೇಲೆ ತಂದೆ ಮೊದಲಾದವರನ್ನು ಸುಟ್ಟರೂ ಪಾಪವಿಲ್ಲ ಎಂದು ದೇಹದಿಂದ ನಿರ್ಗಮನರೂಪವಾದ ಪ್ರಾಣನ ಲಿಂಗವು ಕೇಳಿಸುತ್ತಿದೆ. ಆದ್ದರಿಂದ ಪ್ರಾಣೋ ವಾ' ಎಂಬ ವಾಕ್ಯದಲ್ಲಿರುವ ಪ್ರಾಣಶಬ್ದದಿಂದ ಮುಖ್ಯಪ್ರಾಣನೇ ಪ್ರತಿಪಾದ್ಯನಾಗುತ್ತಾನೆ. ಆದ್ದರಿಂದಲೇ ಭೂಮಾಶಬ್ದದಿಂದಲೂ ಅವನೇ ಪ್ರತಿಪಾದ್ಯನಾಗುತ್ತಾನೆ.

ಪ್ರತಿಪದಾರ್ಥ -- 'ಪ್ರಾಣೋ ವಾ ಆಶಾಯಾ ಭೂಯಾನ್' ಎಂಬಲ್ಲಿ ಕೇಳಿಸುತ್ತಿರುವ ಪ್ರಾಣಶಬ್ದವು 'ಅತ ಏವ ಪ್ರಾಣಃ' ಎಂಬ ಸೂತ್ರದಲ್ಲಿ ಹೇಳಿರುವ ಪ್ರಕಾರ ವಿಷ್ಣುವನ್ನೇ ಪ್ರತಿಪಾದಿಸುತ್ತದೆ. ಆದ್ದರಿಂದ ವಿಷ್ಣುವೇ ಭೂಮನೆನಿಸುತ್ತಾನೆ. ಹೀಗಿರುವಾಗ ಪ್ರಾಣಶಬ್ದದ ಬಲದಿಂದ ಮುಖ್ಯಪ್ರಾಣನಲ್ಲಿ ಭೂಮತ್ವವನ್ನು ಹೇಳಲು ಹೇಗೆ ಸಾಧ್ಯ? ಈ ಆಕ್ಷೇಪಕ್ಕೆ ಉತ್ತರಿಸುತ್ತಿದ್ದಾರೆ.

ಉತ್ಕ್ರಾಂತಪ್ರಾಣಾನ್ = ದೇಹದಿಂದ ನಿರ್ಗಮಿಸಿರುವ ಪ್ರಾಣನುಳ್ಳ ತಂದೆ ಮೊದಲಾದವರನ್ನು, ಇತ್ಯಾದಿ = ಇವೇ ಮೊದಲಾದ, ಲಿಂಗಾತ್= ಮುಖ್ಯಪ್ರಾಣನ ಲಿಂಗಗಳಿರುವುದರಿಂದ, ಪ್ರಾಣಶಬ್ದಶ್ಚ = ಪ್ರಾಣೋ ವಾ ಆಶಾಯಾಃ' ಎಂಬಲ್ಲಿರುವ ಪ್ರಾಣಶಬ್ದವಾದರೋ, ವಾಯುವಾಚೀ = ಮುಖ್ಯಪ್ರಾಣನನ್ನೇ ಪ್ರತಿಪಾದಿಸುತ್ತದೆ, ಇತಿ = ಇಷ್ಟು ಪೂರ್ವಪಕ್ಷ.

ಪೂರ್ಣಸುಖಸ್ವರೂಪನಾದ ವಿಷ್ಣುವೇ 'ಭೂಮಾ'

ಬ್ರಹ್ಮಸೂತ್ರಭಾಷ್ಯಮ್ – अतो वक्ति –

।। भूमा सम्प्रसादादध्युपदेशात् ।।

'सम्प्रसादात्' पूर्णसुखरूपत्वात् 'अध्युपदेशात्' सर्वेषामुपर्युपदेशाच्च विष्णुरेव भूमा ।

ಅನುವಾದ - ಈ ಪೂರ್ವಪಕ್ಷವು ಪ್ರಾಪ್ತವಾದಾಗ ಸೂತ್ರಕಾರರು ಸೂತ್ರವನ್ನು ಪಠಿಸುತ್ತಿದ್ದಾರೆ. ಭೂಮಾ ಸಂಪ್ರಸಾದಾದಧ್ಯುಪದೇಶಾತ್' ಸಂಪ್ರಸಾದಾತ್' ಎಂದರೆ ಪೂರ್ಣಸುಖವನ್ನು ಉಲ್ಲೇಖಿಸಿರುವುದರಿಂದ, ಅಧ್ಯುಪದೇಶಾತ್ = ಸಕಲದೇವತೆಗಳಿಗಿಂತಲೂ ಅಧಿಕನಾಗಿದ್ದಾನೆಂದು ಹೇಳಿರುವ ಕಾರಣ, ಭೂಮಾ = ಭೂಮಾಶಬ್ದದಿಂದ ವಿಷ್ಣುವೇ ಪ್ರತಿಪಾದ್ಯನು.

ಪ್ರತಿಪದಾರ್ಥ -- ಸಿದ್ಧಾಂತವನ್ನು ಸ್ಥಾಪಿಸುವುದಕ್ಕಾಗಿ ಸೂತ್ರವನ್ನು ಪಠಿಸುತ್ತಿದ್ದಾರೆ.

ಅತಃ = ಪೂರ್ವಪಕ್ಷದ ಪರಿಹಾರಕ್ಕಾಗಿ, ವಕ್ತಿ = ಸೂತ್ರಕಾರರು ಸೂತ್ರವನ್ನು ಪಠಿಸುತ್ತಿದ್ದಾರೆ. ಸಂಪ್ರಸಾದಾತ್ = ಪೂರ್ಣಸುಖ-ಸ್ವರೂಪನೆಂದು ಹೇಳಿರುವುದರಿಂದ, ಅಧ್ಯುಪದೇಶಾತ್ = ಪ್ರಾಣನೇ ಮೊದಲಾದ ದೇವತೆಗಳಿಗಿಂತಲೂ ಅತ್ಯಧಿಕನೆಂದು ಹೇಳಿರುವುದ-ರಿಂದಲೂ, ವಿಷ್ಣುರೇವ = ವಿಷ್ಣುವೇ, ಭೂಮಾ = ಭೂಮಾ ಎಂಬ ಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆ.

ಪೂರ್ಣಸುಖತ್ವಾದಿಗಳು ವಿಷ್ಣುವಿನದ್ದೇ ಧರ್ಮ

ब्रह्मसूत्रभाष्यम् — 'सहस्रशीर्षं देवं विश्वाक्षं विश्वशम्भुवम् ।
विश्वं नारायणं देवमक्षरं परमं पदम् ।।

विश्वतः परमां नित्यम्' (महाना. ११.) इति हि श्रुतिः ।

ಅನುವಾದ - ಅನಂತ ಶಿರಸ್ಸುಳ್ಳ ಕ್ರೀಡಾದಿಗುಣವಿಶಿಷ್ಟನಾದ, ಎಲ್ಲೆಡೆ ದೃಷ್ಟಿಯುಳ್ಳ ಪೂರ್ಣಸುಖಾಶ್ರಯನಾದ, ಜಗತ್ತಿನ ಒಳಗಡೆ ಪ್ರವೇಶಿಸಿರುವ ನಾರಾಯಣಶಬ್ದವಾಚ್ಯನಾದ, ಸರ್ವಪ್ರೇರಕನಾದ, ತ್ರಿವಿಧನಾಶರಹಿತನಾದ, ಸರ್ವೋತ್ತಮನಾದ, ಶಶ್ವದೇಕಪ್ರಕಾರನಾದ ನಾರಾಯಣನನ್ನು ಎಲ್ಲರೂ ಉಪಜೀವಿಸಿದ್ದಾರೆಂದು ಶ್ರುತಿಯು ಹೇಳುತ್ತಿದೆ.

ಪ್ರತಿಪದಾರ್ಥ -- ಪೂರ್ಣಸುಖತ್ವಾದಿಗಳು ವಿಷ್ಣುವೇ ಭೂಮಾ ಎಂಬ ಶಬ್ದದಿಂದ ಪ್ರತಿಪಾದ್ಯನೆನ್ನಲು ಹೇಗೆ ಲಿಂಗಗಳಾಗುತ್ತವೆ? ಎಂಬ ಆಕ್ಷೇಪಕ್ಕೆ ಉತ್ತರಿಸುತ್ತಿದ್ದಾರೆ.

ಸಹಸ್ರಶೀರ್ಷಂ = ಅನಂತಶಿರಸ್ಸುಗಳುಳ್ಳ, ದೇವಂ = ಕ್ರೀಡಾದಿಗುಣವಿಶಿಷ್ಟನಾದ, ಪ್ರಕಾಶಸ್ವರೂಪನಾದ, ವಿಶ್ವಾಕ್ಷಂ = ಎಲ್ಲೆಡೆ ದೃಷ್ಟಿಯುಳ್ಳ, ವಿಶ್ವಶಂಭುವಮ್ = ಪೂರ್ಣಸುಖಾಶ್ರಯನಾದ, ವಿಶ್ವಂ = ಜಗತ್ತನ್ನು ಪ್ರವೇಶಿಸಿರುವ, ನಾರಾಯಣಂ = ಮುಕ್ತರ ಸಮೂಹದಲ್ಲಿ ವ್ಯಕ್ತನಾದ, ಅಕ್ಷರಂ = ಸ್ವರೂಪತಃ ನಾಶರಹಿತನಾದ, ಪರಮಂ = ಬ್ರಹ್ಮಾದಿಗಳಿಗಿಂತಲೂ ಉತ್ತಮನಾದ, ಪದಂ = ಪ್ರಾಪ್ಯನಾದ, ವಿಶ್ವತಃ = ವಿಶ್ವಕ್ಕಿಂತಲೂ, ಪರಮಂ = ಉತ್ತಮನಾದ, ನಿತ್ಯಂ = ಶಶ್ವದೇಕ-ಪ್ರಕಾರನಾದ ನಾರಾಯಣನನ್ನು ಎಲ್ಲರೂ ಉಪಜೀವಿಸಿದ್ದಾರೆ, ಇತಿ ಹಿ = ಹೀಗಷ್ಟೇ, ಶ್ರುತಿಃ = ಶ್ರುತಿಯು ಇರುತ್ತದೆ.

ब्रह्मसूत्रभाष्यम् — 'तमुत्क्रामन्तं प्राणोऽनूत्क्रामति' (बृ. ६—४—२.) इत्यादिना नोत्क्रमणादिलिङ्गविरोधोऽपि ।।

ಅನುವಾದ - 'ಪ್ರಾಣನು ವಿಷ್ಣುವನ್ನು ಅನುಸರಿಸಿ ದೇಹದಿಂದ ನಿರ್ಗಮಿಸುತ್ತಾನೆ' ಇವೇ ಮೊದಲಾದ ಪ್ರಮಾಣಗಳಿಂದ ದೇಹದಿಂದ ನಿರ್ಗಮನವು ವಿಷ್ಣುವಿಗೆ ವಿರುದ್ಧವಾದ ಧರ್ಮವಾಗುವುದಿಲ್ಲ.

ಪ್ರತಿಪದಾರ್ಥ -- ಪ್ರಾಣಶಬ್ದದಿಂದ ವಿಷ್ಣು ಪ್ರತಿಪಾದ್ಯನಾದರೆ ಹಿಂದೆ ಹೇಳಲ್ಪಟ್ಟ ಉತ್ಕ್ರಮಣಾದಿಲಿಂಗಗಳ ವಿರೋಧ ಬರುತ್ತದಲ್ಲವೇ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ.

ಉತ್ಕ್ರಮಂತಂ = ದೇಹದಿಂದ ನಿರ್ಗಮಿಸುವ, ತಂ = ಪರಮಾತ್ಮನನ್ನು, ಅನು = ಅನುಸರಿಸಿ, ಪ್ರಾಣಃ = ಮುಖ್ಯಪ್ರಾಣನು, ಉತ್ಕ್ರಮತಿ = ಹೊರಗೆ ಹೊರಡುತ್ತಾನೆ. ಇತ್ಯಾದಿನಾ = ಇವೇ ಮೊದಲಾದ ಪ್ರಮಾಣಗಳಿಂದ, ಉತ್ಕ್ರಮಣಾದಿ = ದೇಹದಿಂದ ನಿರ್ಗಮಿಸುವಿಕೆ ಮೊದಲಾದ, ಲಿಂಗವಿರೋಧೋऽಪಿ = ಲಿಂಗಗಳ ವಿರೋಧವೂ ಸಹ ಬರುವುದಿಲ್ಲ.

ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ

ಸತ್ತರ್ಕದೀಪಾವಳಿ

'ಯೋ ವೈ ಭೂಮಾ ತತ್ ಸುಖಮ್' ಎಂಬ ವಿಷಯವಾಕ್ಯದಿಂದ ಯಾರು ಪ್ರತಿಪಾದ್ಯರು?

सत्तर्कदीपावलिः – भूमा सम्प्रसादादध्युपदेशात् ।।

।। धर्मोपपत्तेश्च ।।

'यो वै भूमा तत्सुखम्' इति श्रूयमाणोऽपि भूमा (पुनर्भूत्वा) विष्णुरित्येतदाक्षिप्य समाधीयते – प्राणो वा इत्यादिना ।। 'प्राणो वा आशाया भूयान्' इति सन्निहितवाक्यबलात् प्राणशब्देनोक्तो वायुरेव भूमा इति चेत्,

'ಯೋ ವೈ ಭೂಮಾ ತತ್ಸುಖಮ್' ಎಂಬಲ್ಲಿ ಶ್ರುತವಾಗಿರುವ ಭೂಮನು ವಿಷ್ಣುವೇ ಆಗಿದ್ದಾನೆಂಬುದನ್ನು ಆಕ್ಷೇಪ ಮಾಡಿ ಉತ್ತರಿಸುತ್ತಿದ್ದಾರೆ - ''ಪ್ರಾಣೋ ವಾ'' ಇತ್ಯಾದಿಯಾದ ಭಾಷ್ಯದಿಂದ. 'ಪ್ರಾಣೋ ವಾ ಆಶಾಯಾ ಭೂಯಾನ್' ಎಂಬ ಹತ್ತಿರದಲ್ಲಿರುವ ವಾಕ್ಯದ ಸಾಮರ್ಥ್ಯದಿಂದ ಪ್ರಾಣಶಬ್ದಪ್ರತಿಪಾದ್ಯನಾದವನು ವಾಯುವೇ ಆಗಿದ್ದಾನೆ. ಯಾರು ಪ್ರಾಣನೋ ಅವನೇ ಭೂಮನಾದ್ದರಿಂದ ಭೂಮಾ ಎಂಬ ಶಬ್ದದಿಂದ ಮುಖ್ಯಪ್ರಾಣನೇ ಪ್ರತಿಪಾದ್ಯನಾಗುತ್ತಾನೆ. ಇಷ್ಟು ಪೂರ್ವಪಕ್ಷ.

ಮುಖ್ಯಪ್ರಾಣಪ್ರತಿಪಾದಕವಾದ ಯಾವುದೇ ನಿಂದೆಗಳು ಕೇಳಿಸುತ್ತಿಲ್ಲ

सत्तर्कदीपावलिः – मैवम् । प्राणशब्दस्य विष्णावप्युपपन्नत्वेन अत्र वायुप्रापकशब्दाभावात् । नन्वस्य प्राणस्योत्क्रमणं श्रूयते 'अथ

यद्यप्येनमुत्क्रान्तप्राणान् शूलेन समासं व्यतिषं दहेत् । न चैनं ब्रूयुः पितृहासीति न मातृहासि' इति ।। उत्क्रमणं मुख्यप्राणस्यैव लिङ्गमिति चेत्,

ಪ್ರಾಣಶಬ್ದವು ವಿಷ್ಣುವಿನಲ್ಲೂ ಸಹ ಉಪಪನ್ನವಾಗುತ್ತದೆ. ಆದ್ದರಿಂದ ಮುಖ್ಯಪ್ರಾಣನನ್ನು ಪ್ರತಿಪಾದಿಸುವ ಬೇರೆ ಯಾವುದೇ ಶಬ್ದಗಳೂ ಇಲ್ಲಿ ಇರುವುದಿಲ್ಲ.

ಪ್ರಾಣನಿಗೆ ದೇಹದಿಂದ ಉತ್ಕ್ರಮಣವು ಶ್ರುತವಾಗುತ್ತಿದೆ. 'ಅಥ ಯದ್ಯಪಿ ಏನಮುತ್ಕ್ರಾಂತಪ್ರಾಣಾನ್ ಶೂಲೇನ ಸಮಾಸಂ ವ್ಯತಿಷಂ ದಹೇತ್ । ನ ಚೈನಂ ಬ್ರೂಯುಃ ಪಿತೃಹಾಸೀತಿ ಮಾತೃಹಾಸಿ' ಯಾವಾಗ ಮುಖ್ಯಪ್ರಾಣನು ದೇಹದಿಂದ ನಿರ್ಗಮಿಸುತ್ತಾನೋ ಅನಂತರ, ಪಿತೃ ಹಾಗೂ ಮಾತೃ ಮೊದಲಾದ ಹಿರಿಯರ ದೇಹವನ್ನು ಶೂಲದಿಂದ ಚುಚ್ಚಿದರೂ, ಬೆಂಕಿಯಿಂದ ಸುಟ್ಟರೂ ಸಹ ತಂದೆಯನ್ನು ಕೊಂದವನು ತಾಯಿಯನ್ನು ಕೊಂದವನು ಇತ್ಯಾದಿಯಾಗಿ ಯಾರೂ ಹೇಳುವುದಿಲ್ಲ. ಹೀಗೆ ಈ ಶ್ರುತಿಯಲ್ಲಿ ಕೇಳಿಸುತ್ತಿರುವ ಉತ್ಕ್ರಮಣವು ಮುಖ್ಯಪ್ರಾಣನ ಲಿಂಗವಾಗಿದೆಯಲ್ಲವೇ?

ಮಹಾವಿಷ್ಣುವೇ ಭೂಮಾ

सत्तर्कदीपावलिः – मैवम् । विष्णुरप्युत्क्रमणसंश्रवणात् 'तमुत्क्रामन्तं प्राणोनूत्क्रामति' इति श्रुत्यन्तरे । अतो 'वाग् वाव नाम्नो भूयसी मनो वाव वाचो भूयः' इत्यारभ्य सर्वेषामुपर्युपदेशात् 'तत्सुखं नाल्पे सुखमस्ति' इति पूर्णसुखत्वोपदेशाच्च विष्णुरेव भूमा ।

ಇದು ತಪ್ಪು. ದೇಹದಿಂದ ವಿಷ್ಣುವಿನ ಉತ್ಕ್ರಮಣವೇ ಮುಖ್ಯವಾಗಿ ಆಗುತ್ತದೆಂದು 'ತಮುತ್ಕ್ರಾಮಂತಂ ಪ್ರಾಣೋನೂತ್ಕ್ರಾಮತಿ' ಎಂಬ ಮತ್ತೊಂದು ಶ್ರುತಿಯಲ್ಲಿ ಹೇಳಲಾಗಿದೆ. ವಿಷ್ಣುವಿನ ನಿರ್ಗಮನವನ್ನು ಅನುಸರಿಸಿ ಮುಖ್ಯಪ್ರಾಣನ ನಿರ್ಗಮನವಿರುತ್ತದೆ. ಆದ್ದರಿಂದ 'ವಾಗ್ ವಾವ ನಾಮ್ನೋ ಭೂಯಸೀ ಮನೋ ವಾವ ವಾಚೋ ಭೂಯಃ' ಎಂಬುದಾಗಿ ಪ್ರಾರಂಭಿಸಿ, ಎಲ್ಲ ದೇವತೆಗಳಿಗಿಂತಲೂ ಉತ್ತಮನೆಂದು ಭಗವಂತನನ್ನು ಪ್ರತಿಪಾದಿಸುತ್ತಾ, 'ತತ್ಸುಖಂ ನಾಲ್ಪೇ ಸುಖಮಸ್ತಿ' ಎಂಬುದಾಗಿ ಪೂರ್ಣಸುಖಸ್ವರೂಪನೆಂದು ಶ್ರುತಿಯು ಹೇಳುತ್ತಿರುವುದರಿಂದ ವಿಷ್ಣುವೇ ಭೂಮಾ ಎಂಬ ಪದದಿಂದ ಪ್ರತಿಪಾದ್ಯನಾಗುತ್ತಾನೆ.

ಪೂರ್ಣಸುಖಾಶ್ರಯತ್ವ ಸರ್ವೋತ್ತಮತ್ವಗಳು ವಿಷ್ಣುವಿನ ಧರ್ಮ

सत्तर्कदीपावलिः – पूर्णसुखाश्रयत्वं सर्वोत्तमत्वं चान्यत्र विष्णोरेव श्रूयते। 'सहस्रशीर्षं देवम्' इति ।। विश्वशम्भुवम् । पुर्णसुखास्पदं परमश्चासावश्चेति परमाम् इत्यर्थः ।

ಪೂರ್ಣಸುಖಾಶ್ರಯತ್ವ ಹಾಗೂ ಸರ್ವೋತ್ತಮತ್ವಗಳು ವಿಷ್ಣುವಿನ ಧರ್ಮಗಳೇ ಆಗಿವೆಯೆಂದು ಬೇರೆ ಶ್ರುತಿಯಿಂದ ಸಿದ್ಧವಾಗಿದೆ. 'ಸಹಸ್ರಶೀರ್ಷಂ ದೇವಮ್' ಎಂಬಲ್ಲಿರುವ ವಿಶ್ವಶಂಭುವಂ ಎಂಬ ಪದದಿಂದ ಪರಮಾತ್ಮನು ಪೂರ್ಣಸುಖಸ್ವರೂಪನೆಂದು ಸ್ಪಷ್ಟವಾಗುತ್ತದೆ. 'ವಿಶ್ವತಃ ಪರಮಾಂ ನಿತ್ಯಮ್' ಎಂಬಲ್ಲಿರುವ ಪರಮಾಂ ಎಂಬ ಪದಕ್ಕೆ 'ಪರಮಶ್ಚಾಸೌ ಅಶ್ಚ' ಎಂಬ ನಿಷ್ಪತ್ತಿಯನ್ನು ವಿವಕ್ಷಿಸಬೇಕು.

ಇಯದಾಮನನಾತ್ ಎಂಬಲ್ಲಿ ಪ್ರಾಣಶಬ್ದವಾಚ್ಯತ್ವದ ವಿಚಾರವಿದೆ

सत्तर्कदीपावलिः – 'यो वै भूमा तदमृतं स एवाधस्तात्सोपरिष्टात्' इत्यादिना सर्वगतत्वादिधर्मत्वेन व्यपदेशाच्च भूमा विष्णुः न मुख्यप्राणः । अत्र प्राणशब्दस्य मुख्यतया मुख्यप्राणपरत्वमङ्गीक्रियते । 'इदयामननात्' इत्यादौ उत्तरत्र प्रतिपादयिष्यमाणत्वादित्यर्थः इत्यनवद्यम् ।।८।।

'ಯೋ ವೈ ಭೂಮಾ ತದಮೃತಂ ಸ ಏವಾಧಸ್ತಾತ್ ಸೋಪರಿಷ್ಟಾತ್' ಇತ್ಯಾದಿಯಾದ ಶ್ರುತಿಯಿಂದ ಸರ್ವಗತತ್ವವೇ ಮೊದಲಾದ ಧರ್ಮಗಳನ್ನು ಹೇಳಿರುವ ಪ್ರಯುಕ್ತ ಭೂಮಾ ಎಂಬ ಶಬ್ದದಿಂದ ವಿಷ್ಣುವೇ ಪ್ರತಿಪಾದ್ಯನಾಗುತ್ತಾನೆ ಹೊರತು ಮುಖ್ಯಪ್ರಾಣನಲ್ಲ. ಇಲ್ಲಿ ಪ್ರಾಣಶಬ್ದದಿಂದ ಮುಖ್ಯವಾಗಿ ಮುಖ್ಯಪ್ರಾಣನನ್ನು ವಾಚ್ಯನೆಂದು ಅಂಗೀಕರಿಸಲಾಗಿದೆ. 'ಇಯದಾಮನನಾತ್' ಎಂಬ ಮುಂದೆ ಬರುವ ಅಧಿಕರಣದಲ್ಲಿ ಈ ವಿಷಯವನ್ನು ಪ್ರತಿಪಾದನೆ ಮಾಡುತ್ತಾರೆ.

॥ ಇಲ್ಲಿಗೆ ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ ಸತ್ತರ್ಕದೀಪಾವಳಿಯಲ್ಲಿ
ಭೂಮಾಧಿಕರಣದ ಕನ್ನಡಾನುವಾದವು ಸಮಾಪ್ತವಾಯಿತು ॥

ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ

ತತ್ವಪ್ರದೀಪ

ಛಾಂದೋಗ್ಯೋಪನಿಷತ್ತಿನಲ್ಲಿರುವ 'ಭೂಮಾ' ಎಂದರೆ ಯಾರು ?

तत्वप्रदीपः – ''यो वै भूमा तत्सुखं नाल्पे सुखमस्ति, भूमेव सुखम्'' इति श्रूयते । तत्र संशयः । किमयं भूमा प्राण उत परमात्मेति । ''प्राणो वा आशाया भूयान्'' इत्युक्त्वा ''यो वै भूमा तत्सुखम्'' इत्युक्तेः प्राणस्य भूमत्वप्राप्तिः ।

''ಯೋ ವೈ ಭೂಮಾ ತತ್ ಸುಖಂ ನಾಲ್ಪೇ ಸುಖಮಸ್ತಿ, ಭೂಮೇವ ಸುಖಮ್'' 'ಯಾರು ಪೂರ್ಣವಾದ ಗುಣಗಳುಳ್ಳವನೋ, ಅವನೇ ಪೂರ್ಣಸುಖವುಳ್ಳವನು. ಅಲ್ಪರಾದವರಲ್ಲಿ ಪೂರ್ಣವಾದ ಸುಖವಿರಲು ಸಾಧ್ಯವಿಲ್ಲ. ಆದ್ದರಿಂದ ಪೂರ್ಣವಾದ ಗುಣಗಳುಳ್ಳವನೇ ಪೂರ್ಣವಾದ ಸುಖವುಳ್ಳವನು'' ಈ ವಾಕ್ಯವನ್ನು ನೋಡಿದಾಗ ಸಂಶಯ ಹೀಗೆ ಹುಟ್ಟುತ್ತದೆ - ಭೂಮಾ ಎಂದರೆ ಮುಖ್ಯಪ್ರಾಣನೋ ? ಅಥವಾ ಪರಮಾತ್ಮನೋ? ಎಂದು. ಮುಖ್ಯಪ್ರಾಣನೇ 'ಭೂಮಾ' ಎಂಬ ಶಬ್ದದಿಂದ ಪ್ರತಿಪಾದ್ಯನೆಂದು ಪೂರ್ವಪಕ್ಷ - ಏಕೆಂದರೆ 'ಪ್ರಾಣೋ ವಾ ಆಶಾಯಾ ಭೂಯಾನ್' ಆಶಾಗಿಂತ ಮುಖ್ಯಪ್ರಾಣನು ಶ್ರೇಷ್ಠನು ಎಂಬುದಾಗಿ ಹೇಳಿ, 'ಯೋ ವೈ ಭೂಮಾ ತತ್ ಸುಖಮ್' ಯಾರು ಭೂಮಾ ಎಂದು ಕರೆಸಿಕೊಳ್ಳುತ್ತಾನೋ, ಅವನೇ ಸುಖಪೂರ್ಣನು ಎಂದು ಹೇಳಿದ್ದರಿಂದ ಮುಖ್ಯಪ್ರಾಣನೇ 'ಭೂಮಾ' ಶಬ್ದದಿಂದ ಪ್ರತಿಪಾದ್ಯನಾಗುತ್ತಾನೆ.

ಉತ್ಕ್ರಮಣಲಿಂಗದಿಂದ ಮುಖ್ಯಪ್ರಾಣನೇ ಭೂಮಾ

तत्वप्रदीपः –''अथ यद्यप्येतानुत्क्रान्तप्राणान् शूलेन समासं व्यतिषं दहेत्, नैवैनं ब्रूयुः, पितृहाऽसि मातृहाऽसि'' इत्युत्क्रमणादिलिङ्गादत्र प्राणशब्दो

वायुवाची । नहि विष्णोर्व्यापिनस्य देहोत्क्रमणं समस्ति । अत आह – 'भूमा सम्प्रसादादध्युपदेशात्' ।

'ಅಥ ಯದ್ಯಪ್ಯೇತಾನುತ್ಕ್ರಾಂತಪ್ರಾಣಾನ್ ಶೂಲೇನ ಸಮಾಸಂ ವ್ಯತಿಷಂ ದಹೇತ್, ನೈವೈನಂ ಬ್ರೂಯುಃ, ಪಿತೃಹಾऽಸಿ ಮಾತೃಹಾऽಸಿ' 'ಹಾಗಾದರೂ ಪ್ರಾಣೋತ್ಕ್ರಮಣವನ್ನು ಹೊಂದಿದ ಅನಂತರ ಈ ತಂದೆ, ತಾಯಿ ಮೊದಲಾದವರನ್ನು ಶೂಲದಿಂದ ಸಂಪೂರ್ಣವಾಗಿ ತಿವಿದು ಸುಟ್ಟರೂ, ಅಂಥವರನ್ನು ಜನರು ಪಿತೃಘಾತುಕನೆಂದು, ಮಾತೃಘಾತುಕನೆಂದು ಹೇಳುವುದಿಲ್ಲ'. ಹೀಗೆ ಉತ್ಕ್ರಮಣಾದಿ ಲಿಂಗಗಳಿಂದ ಪ್ರಾಣಶಬ್ದವು ಮುಖ್ಯಪ್ರಾಣನನ್ನೇ ಪ್ರತಿಪಾದನೆ ಮಾಡುತ್ತದೆ. ವ್ಯಾಪ್ತನಾದ ವಿಷ್ಣುವಿಗೆ ದೇಹದಿಂದ ಉತ್ಕ್ರಮಣವು ಯುಕ್ತವಾಗುವುದಿಲ್ಲ.

ಈ ಪೂರ್ವಪಕ್ಷವನ್ನು ನಿರಾಕರಣೆ ಮಾಡುವುದಕ್ಕಾಗಿ 'ಭೂಮಾ ಸಂಪ್ರಸಾದಧ್ಯುಪದೇಶಾತ್' ಎಂಬ ಸೂತ್ರವು ಹೊರಟಿದೆ.

ವಿಶೇಷವಿಚಾರ - ಛಾಂದೋಗ್ಯೋಪನಿಷತ್ತಿನ ೭ನೆಯ ಅಧ್ಯಾಯವನ್ನು ಈ ಅಧಿಕರಣವು ಪರಮಾತ್ಮನಲ್ಲಿ ಸಮನ್ವಯ ಮಾಡುತ್ತಿದೆ. ಆದ್ದರಿಂದ ಆಮೂಲಾಗ್ರವಾಗಿ ಛಾಂದೋಗ್ಯೋಪನಿಷತ್ತಿನ ಏಳನೆಯ ಅಧ್ಯಾಯವನ್ನು ಈ ಸಂದರ್ಭದಲ್ಲಿ ಅಧ್ಯಯನ ಮಾಡಬೇಕು. ಸಂಪೂರ್ಣ ಸಪ್ತಮಾಧ್ಯಾಯವು ಹೀಗಿದೆ -

(ಸಂಗ್ರಹ ಅ.ಭಾ.ಮಾ)

'ಅಧೀಹಿ ಭಗವಃ' ಇತಿ ಹೋಪಸಸಾದ ಸನತ್ಕುಮಾರಂ ನಾರದಃ। ತಂ ಹೋವಾಚ 'ಯದ್ ವೇತ್ಥ ತೇನ ಮೋಪಸೀದ। ತತಸ್ತ ಊರ್ಧ್ವಂ ವಕ್ಷ್ಯಾಮಿ' ಇತಿ।

'ಪೂಜ್ಯರೇ ನನಗೆ ಪರತತ್ವವನ್ನು ಉಪದೇಶಿಸಿರಿ' ಎಂದು ಪ್ರಾರ್ಥಿಸುತ್ತಾ ಸನತ್ಕುಮಾರರನ್ನು ನಾರದರು ಶರಣು ಹೊಂದಿದರು. ಆಗ ಸನತ್ಕುಮಾರರು 'ನೀವು ತಿಳಿದಿದ್ದುದನ್ನು ಮಾತ್ರ ನಾನು ಉಪದೇಶಿಸಬೇಕು. ಅದಕ್ಕಾಗಿ ನೀವು ಇಷ್ಟರತನಕ ಅಧ್ಯಯನ ಮಾಡಿರುವ ವಿಷಯಗಳಾವುವೆಂದು ವಿಶದ ಪಡಿಸಿರಿ' ಎಂದು ಹೇಳಿದರು.

'ಸ ಹೋವಾಚ ಋಗ್ವೇದಂ ಭಗವೋऽಧ್ಯೇಮಿ ಯಜುರ್ವೇದಂ ಸಾಮವೇದಮಥರ್ವಣಂ ಚತುರ್ಥಮಿತಿಹಾಸಪುರಾಣಂ ಪಂಚಮಂ ವೇದಾನಾಂ ವೇದಂ ಪಿತ್ರ್ಯಂ ರಾಶಿಂ ದೈವಂ ನಿಧಿಂ ವಾಕೋವಾಕ್ಯಮೇಕಾಯನಂ ದೇವವಿದ್ಯಾಂ

ಬ್ರಹ್ಮವಿದ್ಯಾಂ ಭೂತವಿದ್ಯಾಂ ಕ್ಷತ್ರವಿದ್ಯಾಂ ನಕ್ಷತ್ರವಿದ್ಯಾಂ ಸರ್ಪದೇವಜನವಿದ್ಯಾಂ ಏತತ್ ಭಗವೋಽಧ್ಯೇಮಿ ॥

ನಾರದರು ಉತ್ತರಿಸಿದರು - 'ಪೂಜ್ಯರೇ ! ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೆಂಬ ನಾಲ್ಕು ಅವಾಂತರ ವೇದಗಳನ್ನೂ, ವೇದಗಳಿಗೆ ಅನುಕೂಲವಾಗಿದ್ದು ಐದನೇ ವೇದವೆನಿಸಿದ ಇತಿಹಾಸ-ಪುರಾಣಗಳನ್ನೂ, ಶ್ರಾದ್ಧಕಲಾಪವನ್ನೂ, ಗಣಿತಶಾಸ್ತ್ರವನ್ನೂ, ದೈವಲಕ್ಷಣ ಶಾಸ್ತ್ರವನ್ನೂ, ನಿಧಿ ಶಾಸ್ತ್ರವನ್ನೂ, ಮೂಲ ವೇದವನ್ನೂ, ಪಂಚರಾತ್ರಾಗಮನವನ್ನೂ ದೇವತಾವಿದ್ಯೆಯನ್ನೂ, ಆರಣ್ಯಕವೆಂಬ ವೇದಭಾಗವನ್ನೂ, ಭೂತಲಕ್ಷಣ ಶಾಸ್ತ್ರವನ್ನೂ, ನೀತಿಶಾಸ್ತ್ರವನ್ನೂ, ಜ್ಯೋತಿಃಶಾಸ್ತ್ರವನ್ನೂ, ಗಾರುಡವಿದ್ಯೆಯನ್ನೂ, ದೇವಜನವಿದ್ಯೆಯನ್ನೂ ಅಧ್ಯಯನ ಮಾಡಿರುವೆನು' ಎಂದು.

ಸೋಽಹಂ ಭಗವೋ ಮಂತ್ರವಿದೇವಾಸ್ಮಿ । ನಾತ್ಮವಿತ್ । ಶ್ರುತಂ ಹ್ಯೇವ ಮೇ ಭಗವದ್ದೃಶೇಭ್ಯಃ 'ತರತಿ ಶೋಕಮಾತ್ಮವಿತ್' ಇತಿ । 'ಸೋಽಹಂ ಭಗವಃ ಶೋಚಾಮಿ। ತನ್ಮಾ ಭಗವಾನ್ ಶೋಕಸ್ಯ ಪಾರಂ ತಾರಯತು' ಇತಿ । ತಂ ಹೋವಾಚ 'ಯದ್ವೈ ಕಿಂಚೈತದಧ್ಯಗೀಷ್ಠಾ ನಾಮೈವೈತತ್' ॥

''ಪೂಜ್ಯರೇ ! ಹೀಗೆ ಎಲ್ಲಾ ವಿದ್ಯೆಗಳನ್ನೂ ಅಧ್ಯಯನ ಮಾಡಿರುವವನಾದರೂ ನಾನು ಶ್ರೀಹರಿಯ ನಾಮಗಳೆನಿಸಿರುವ ಶಬ್ದಗಳನ್ನು ಮಾತ್ರ ಅರಿತಂತಾಗಿದೆ. ಅವುಗಳ ತಾತ್ಪರ್ಯವನ್ನೂ ನಿರ್ಣಯಿಸಿಕೊಂಡು, ಪರಮಾತ್ಮನಾದ ಶ್ರೀಹರಿಯ ತತ್ವಜ್ಞಾನವನ್ನು ಸಂಪಾದಿಸಿದವನಾಗಿಲ್ಲ. ತಮ್ಮಂಥ ಜ್ಞಾನಿಗಳಿಂದ 'ಪರಮಾತ್ಮನನ್ನರಿತು ಕೊಂಡವರೇ ದುಃಖವನ್ನು ದಾಟಿ ಮೋಕ್ಷವನ್ನು ಪಡೆಯುವರು' ಎಂದು ಕೇಳಿದ್ದೇನೆ. ಪೂಜ್ಯರೇ ನಾನಿನ್ನೂ ದುಃಖದಲ್ಲೇ ಮುಳುಗಿರುವೆನು. ಆದುದರಿಂದ ಪೂಜ್ಯರಾದ ತಾವು ನನ್ನನ್ನು ದುಃಖಸಾಗರದ ಆಚೆ ದಡವನ್ನು ತಲುಪಿಸಿರಿ'' ಎಂದು ನಾರದರು ಪ್ರಾರ್ಥಿಸಿದರು. ಆ ನಾರದರನ್ನು ಕುರಿತು ಸನತ್ಕುಮಾರರು 'ನೀನು ಅಧ್ಯಯನ ಮಾಡಿರುವುದೆಲ್ಲ ಪರಮಾತ್ಮನ ಗುಣಪ್ರತಿಪಾದಕವಾದ ನಾಮವೇ ಆಗಿವೆ' ಎಂದರು.

'ನಾಮ ವಾ ಋಗ್ವೇದೋ ಯಜುರ್ವೇದಃ ಸಾಮವೇದ ಅಥರ್ವಣಶ್ಚತುರ್ಥ ಇತಿಹಾಸಪುರಾಣಃ ಪಂಚಮೋ ವೇದಾನಾಂ ವೇದಃ ಪಿತ್ರ್ಯೋ ರಾಶಿರ್ದೈವೋ ನಿಧಿರ್ವಾಕೋವಾಕ್ಯಮೇಕಾಯನಂ ದೇವವಿದ್ಯಾ ಬ್ರಹ್ಮವಿದ್ಯಾ ಭೂತವಿದ್ಯಾ ಕ್ಷತ್ರವಿದ್ಯಾ ನಕ್ಷತ್ರವಿದ್ಯಾ ಸರ್ಪದೇವಜನವಿದ್ಯಾ । ನಾಮೈವೈತತ್ । ನಾಮೋಪಾಸ್ವ' ಇತಿ ॥

ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ ಎಂಬ ನಾಕು ಅವಾಂತರ ವೇದಗಳು. ವೇದಾನುಕೂಲವಾಗಿದ್ದು ಪಂಚಮವೇದ- ವೆನಿಸಿರುವ ಇತಿಹಾಸ ಪುರಾಣಗಳು, ಶ್ರಾದ್ಧಕಲಾಪ, ಗಣಿತಶಾಸ್ತ್ರ ದೇವತಾಲಕ್ಷಣಶಾಸ್ತ್ರ, ನಿಧಿಶಾಸ್ತ್ರ ಮೂಲವೇದ, ಪಂಚರಾತ್ರಾಗಮ, ದೇವವಿದ್ಯೆ, ಆರಣ್ಯಕ, ಭೂತಲಕ್ಷಣಶಾಸ್ತ್ರ, ನೀತಿಶಾಸ್ತ್ರ, ಜ್ಯೋತಿರ್ವಿದ್ಯೆ, ಗಾರುಡವಿದ್ಯೆ, ದೇವಜನವಿದ್ಯೆ ಇವೆಲ್ಲವೂ ಶ್ರೀಹರಿಯ ನಾಮವೇ ಆಗಿವೆ. ಇವೆಲ್ಲವೂ ನಾಮಾ ಎಂಬ ಉಷಃಕಾಲಾಭಿಮಾನಿದೇವತೆಯಿಂದ ಅಭಿಮನ್ಯಮಾನವಾಗಿವೆ. ಆ ದೇವತೆಯಲ್ಲಿ ನಿಯಾಮಕನಾಗಿರುವ ಪರಬ್ರಹ್ಮನನ್ನು ಆರಾಧಿಸು.

ಸ ಯೋ ನಾಮ ಬ್ರಹ್ಮೇತ್ಯುಪಾಸ್ತೇ ಯಾವನ್ನಾಮ್ನೋ ಗತಂ ತತ್ರಾಸ್ಯ ಯಥಾ ಕಾಮಚಾರೋ ಭವತಿ । ಯೋ ನಾಮ ಬ್ರಹ್ಮೇತ್ಯುಪಾಸ್ತೇ' । 'ಅಸ್ತಿ ಭಗವೋ ನಾಮ್ನೋ ಭೂಯಃ' ಇತಿ । 'ನಾಮ್ನೋ ವಾವ ಭೂಯೋಽಸ್ತಿ' ಇತಿ । 'ತನ್ಮೇ ಭಗವಾನ್ ಬ್ರವೀತು' ಇತಿ ॥

ಯಾರು ನಾಮಾ ಎಂಬ ಹೆಸರುಳ್ಳ ಉಷಾದೇವಿಯಲ್ಲಿ ಬ್ರಹ್ಮನನ್ನು ಆರಾಧಿಸುವನೋ ಅವನು ಉಷಾದೇವಿಯ ಲೋಕವನ್ನು ಹೊಂದಿ, ಎಲ್ಲಿಯ ತನಕ ಅವಳ ವ್ಯಾಪ್ತಿಯಿದೆಯೋ ಆ ಎಲ್ಲಾ ಪ್ರದೇಶಗಳಲ್ಲಿ ಇಚ್ಛಾನುಸಾರೇಣ ಸಂಚರಿಸಲು ಶಕ್ತನಾಗುವನು. ನಾರದರು ಕೇಳಿದರು 'ಪೂಜ್ಯರೇ ! ನಾಮಾಭಿಮಾನಿನಿಯಾದ ಉಷಾದೇವಿಗಿಂತಲೂ ಶ್ರೇಷ್ಠರಾದವರು ಇರುವರೇನು ? ಎಂದು. ಸನತ್ಕುಮಾರರು 'ನಾಮಾಭಿಮಾನಿನಿಗಿಂತಲೂ ಶ್ರೇಷ್ಠರಿರುವರು' ಎಂದು ಉತ್ತರಿಸಲು, 'ಹಾಗಿದ್ದರೆ ಅದನ್ನು ನನಗೆ ಪೂಜ್ಯರಾದ ತಾವು ಉಪದೇಶಿಸಿರಿ' ಎಂದು ನಾರದರು ಪ್ರಾರ್ಥಿಸಿದರು.

'ವಾಗ್ವಾವ ನಾಮ್ನೋ ಭೂಯಸೀ। ವಾಗ್ವಾ ಋಗ್ವೇದಂ ವಿಜ್ಞಾಪಯತಿ, ಯಜುರ್ವೇದಂ ಸಾಮವೇದಮಾಥರ್ವಣಂ ಚತುರ್ಥಮಿತಿಹಾಸ ಪುರಾಣಂ ಪಂಚಮಂ ವೇದಾನಾಂ ವೇದಂ ಪಿತ್ರ್ಯಂ ರಾಶಿಂ ದೈವಂ ನಿಧಿಂ ವಾಕೋವಾಕ್ಯಮೇಕಾಯನಂ ದೇವವಿದ್ಯಾಂ ಬ್ರಹ್ಮ ವಿದ್ಯಾಂ ಭೂತವಿದ್ಯಾಂ ಕ್ಷತ್ರವಿದ್ಯಾಂ ನಕ್ಷತ್ರವಿದ್ಯಾಂ ಸರ್ಪದೇವಜನ ವಿದ್ಯಾಂ ದಿವಂ ಚ ಪೃಥಿವೀಂ ಚ ವಾಯುಂ ಚಾಕಾಶಂ ಚಾಪಶ್ಚ ತೇಜಶ್ಚ ದೇವಾಂಶ್ಚ ಮನುಷ್ಯಾಂಶ್ಚ ಪಶೂಂಶ್ಚ ವಯಾಂಸಿ ಚ ತೃಣ ವನಸ್ಪತೀನ್ ಶ್ವಾಪದಾನ್ಯಾಕೀಟ ಪತಂಗ ಪಿಪೀಲಿಕಂ ಧರ್ಮಂ ಚಾಧರ್ಮಂ ಚ ಸತ್ಯಂ ಚಾನೃತಂ ಚ ಸಾಧು ಚಾಸಾಧು ಚ ಹೃದಯಜ್ಞಂ ಚಾಹೃದಯಜ್ಞಂ ಚ । ಯದ್ವೈ ವಾಙ್ ನಾಭವಿಷ್ಯನ್ನ ಧರ್ಮೋ ನಾಧರ್ಮೋ ವ್ಯಜ್ಞಾಪಯಿಷ್ಯನ್ನ ಸತ್ಯಂ ನಾನೃತಂ ನ ಸಾಧು ನಾಸಾಧು

ನ ಹೃದಯಜ್ಞೋ ನಾಹೃದಯಜ್ಞಃ । ವಾಗೇವೈತತ್ ಸರ್ವಂ ವಿಜ್ಞಾಪಯತಿ । ವಾಚಮುಪಾಸ್ಸ ಇತಿ।

ವಾಗಿಂದ್ರಿಯಕ್ಕೆ ಅಭಿಮಾನಿನಿಯಾದ ಅಗ್ನಿಪತ್ನಿ ಸ್ವಾಹಾದೇವಿಯು, ನಾಮಾಭಿಮಾನಿನಿ ಉಷಾದೇವಿಗಿಂತಲೂ ಶ್ರೇಷ್ಠಳು. ವಾಗಿಂದ್ರಿಯದ ಸಹಾಯದಿಂದಲೇ ಎಲ್ಲರೂ ಇದು ಋಗ್ವೇದ, ಇದು ಯಜುರ್ವೇದ ಎಂದು ಮುಂತಾಗಿ ಗುರುಗಳು ಹೇಳಿಕೊಟ್ಟಂತೆ ತಿಳಿಯುವುದರಿಂದ ವಾಗಭಿಮಾನಿನಿ ಸ್ವಾಹಾದೇವಿಯೇ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದವೆಂಬ ನಾಕು ಅವಾಂತರವೇದಗಳು ಪಂಚಮವೇದವೆನಿಸಿರುವ ಇತಿಹಾಸ ಪುರಾಣಗಳು, ಶ್ರಾದ್ಧಕಲಾಪ, ಸಂಖ್ಯಾಶಾಸ್ತ್ರ ದೇವಲಕ್ಷಣಶಾಸ್ತ್ರ, ನಿಧಿಲಕ್ಷಣಶಾಸ್ತ್ರ, ಮೂಲವೇದ, ಪಂಚರಾತ್ರಾಗಮ, ದೇವವಿದ್ಯೆ, ಆರಣ್ಯಕ, ಭೂತಲಕ್ಷಣವಿದ್ಯೆ, ನೀತಿಶಾಸ್ತ್ರ ಜ್ಯೋತಿಃಶಾಸ್ತ್ರ, ಸರ್ಪಲಕ್ಷಣವಿದ್ಯೆ, ದೇವಜನವಿದ್ಯೆ, ಸ್ವರ್ಗ, ಪೃಥಿವೀ, ವಾಯು, ಆಕಾಶ, ಜಲ ತೇಜಸ್ಸು, ದೇವತೆಗಳು, ಮನುಷ್ಯರು, ಪಶುಗಳು, ಹಕ್ಕಿಗಳು, ಹುಲ್ಲುಮರಗಳು, ಚಿರತೆಗಳು, ಕೀಟ, ಚಿಟ್ಟೆ, ಇರುವೆಗಳ ತನಕ ಎಲ್ಲ ಜೀವರಾಶಿಗಳು, ಧರ್ಮ-ಅಧರ್ಮ, ಸತ್ಯ-ಅಸತ್ಯ, ಯೋಗ್ಯವಾದದ್ದು - ಅಯೋಗ್ಯವಾದದ್ದು, ಹೃದಯದಲ್ಲಿರುವ ಬ್ರಹ್ಮನನ್ನು ತಿಳಿದವನು-ತಿಳಿಯದವನು ಎಂದು ಎಲ್ಲ ನಾಮರೂಪಾತ್ಮಕ ಪ್ರಪಂಚವನ್ನೂ ತಿಳಿಸಿಕೊಡುವಳು. ವಾಗಭಿಮಾನಿನಿಯಾದ ಸ್ವಾಹಾದೇವಿಯ ಅನುಗ್ರಹ ಇಲ್ಲದಿರುತ್ತಿದ್ದರೆ, ವಾಗಿಂದ್ರಿಯವೇ ಶಕ್ತಿಹೀನವೆನಿಸಿ, ಧರ್ಮ-ಅಧರ್ಮ, ಸತ್ಯ-ಅಸತ್ಯ, ಯೋಗ್ಯವಾದದ್ದು-ಅಯೋಗ್ಯವಾದದ್ದು, ಹೃದಯದಲ್ಲಿರುವ ಪರಮಾತ್ಮನನ್ನು ತಿಳಿದವನು-ತಿಳಿಯದವನು ಇವು ಯಾವುದರ ಅರಿವೂ ಜೀವರಿಗೆ ಉಂಟಾಗುತ್ತಿರಲಿಲ್ಲ. ಆದುದರಿಂದ ಎಲ್ಲವನ್ನೂ ವಾಗಿಂದ್ರಿಯಾಭಿಮಾನಿನಿಯಾದ ಸ್ವಾಹಾದೇವಿಯೇ ತಿಳಿಸಿಕೊಡುತ್ತಾಳೆ. ಇಂತಹ ವಾಗಭಿಮಾನಿನಿಯಾದ ಸ್ವಾಹಾದೇವಿಯಲ್ಲಿ ಪರಮಾತ್ಮನನ್ನು ಆರಾಧಿಸು.

'ಸ ಯೋ ವಾಚಂ ಬ್ರಹ್ಮೇತ್ಯುಪಾಸ್ತೇ । ಯಾವತ್ ವಾಚೋ ಗತಂ ತತ್ಾಸ್ಯ ಯಥಾಕಾಮಚಾರೋ ಭವತಿ ಯೋ ವಾಚಂ ಬ್ರಹ್ಮೇತ್ಯುಪಾಸ್ತೇ ।' 'ಅಸ್ತಿ ಭಗವೋ ವಾಚೋ ಭೂಯಃ?' ಇತಿ । 'ವಾಚೋ ವಾವ ಭೂಯೋಽಸ್ತಿ' ಇತಿ । 'ತನ್ಮೇ ಭಗವಾನ್ ಬ್ರವೀತು' ಇತಿ ॥

'ಯಾರು ವಾಗಭಿಮಾನಿನಿಯಾದ ಸ್ವಾಹಾದೇವಿಯಲ್ಲಿ ಪರಬ್ರಹ್ಮನನ್ನಾರಾಧಿಸುವನೋ ಅವನು ಸ್ವಾಹಾದೇವಿಯ ಲೋಕವನ್ನು ಹೊಂದಿ, ಅಲ್ಲಿ ಅವಳು ಎಲ್ಲಿಯ ತನಕ ವ್ಯಾಪಿಸಿಕೊಂಡಿರುವಳೋ ಅಲ್ಲೆಲ್ಲಾ ಇಚ್ಛಾನುಸಾರೇಣ ಸಂಚರಿಸುವ ಶಕ್ತಿ

ಉಳ್ಳವನಾಗುವನು' ಎಂದು ಸನತ್ಕುಮಾರರು ಉಪದೇಶಿಸಿದಾಗ ನಾರದರು 'ಪೂಜ್ಯರೇ ! ವಾಗಭಿಮಾನಿನಿಯಾದ ಸ್ವಾಹಾದೇವಿಗಿಂತಲೂ ಉತ್ತಮರಾದವರು ಇರುವರೇನು ?' ಎಂದು ಪ್ರಶ್ನಿಸಿದರು. ಅದಕ್ಕುತ್ತರವಾಗಿ ಸನತ್ಕುಮಾರರು 'ಸ್ವಾಹಾದೇವಿಗಿಂತಲೂ ಉತ್ತಮರಿದ್ದಾರೆ' ಎಂದು ಹೇಳಿದಾಗ ನಾರದರು 'ಪೂಜ್ಯರಾದ ತಾವು ಅದನ್ನು ನನಗೆ ತಿಳಿಸಿ ಹೇಳಿ' ಎಂದು ಪ್ರಾರ್ಥಿಸಿದರು.

'ಮನೋ ವಾ ವಾಚೋ ಭೂಯಃ । ಯಥಾ ವೈ ದ್ವೇ ವಾऽऽಮಲಕೇ, ದ್ವೇ ವಾ ಕೋಲೇ, ದ್ವೌ ವಾऽಕ್ಷೌ ಮುಷ್ಟಿರನು ಭವತ್ಯೇವಂ ವಾಚಂ ಚ ನಾಮ ಚ ಮನೋऽನುಭವತಿ । ಸ ಯದಾ ಮನಸಾ ಮನಸ್ಯತಿ ಮಂತ್ರಾನಧಿಯೀಯೇತಿ ಅಥಾಧೀತೇ । ಕರ್ಮಾಣಿ ಕುರ್ವೀಯೇತಿ ಅಥ ಕುರುತೇ । ಪುತ್ರಾಂಶ್ಚ ಪಶೂಂಶ್ಚೇಚ್ಛೇಯೇತಿ ಅಥೇಚ್ಛತೇ । ಇಮಂ ಚ ಲೋಕಮಮುಂ ಚೇಚ್ಛೇಯೇತಿ ಅಥೇಚ್ಛತೇ । ಮನೋಹ್ಯಾತ್ಮಾ । ಮನೋ ಹಿ ಲೋಕಃ । ಮನೋ ಹಿ ಬ್ರಹ್ಮ । ಮನ ಉಪಾಸ್ವ' ಇತಿ ॥

ಮಳೆಯನ್ನು ಸುರಿಸುವ ಮೂಲಕ ಬೀಜದಿಂದ ಮೊಳಕೆಯುಂಟು ಮಾಡುವುದರಿಂದಲೂ ಮನಸ್ಸಿಗೆ ಅಭಿಮಾನಿನಿಯಾದ್ದರಿಂದಲೂ ಮನಃ ಎಂಬ ಹೆಸರುಳ್ಳ ಪರ್ಜನ್ಯನು ವಾಗಭಿಮಾನಿನಿಯಾದ ಸ್ವಾಹಾದೇವಿಗಿಂತಲೂ ಉತ್ತಮನು. ಹೇಗೆ ಎರಡು ನೆಲ್ಲಿಕಾಯಿಗಳನ್ನಾಗಲೀ, ಎರಡು ಅಡಿಕೆಗಳಗನ್ನಾಗಲೀ, ಎರಡು ದಾಳಗಳನ್ನಾಗಲೀ ಮುಷ್ಟಿಯು ತನ್ನೊಳಗೆ ಸೇರಿಸಿಕೊಳ್ಳುವುದೋ ಹಾಗೆಯೇ ಮನೋಭಿಮಾನಿಯಾದ ಪರ್ಜನ್ಯನು ವಾಗಭಿಮಾನಿನಿಯಾದ ಸ್ವಾಹಾದೇವಿಯನ್ನೂ ನಾಮಾಭಿಮಾನಿಯಾದ ಉಷಾದೇವಿಯನ್ನೂ ತನ್ನ ಅಧೀನದಲ್ಲಿಟ್ಟುಕೊಂಡಿರುವನು, ತಾನು ಮಂತ್ರಗಳನ್ನು ಅಧ್ಯಯನ ಮಾಡಬೇಕೆಂದು ಯಾವಾಗ ಪುರುಷನು ಮನಸ್ಸಿನಲ್ಲಿ ಆಲೋಚಿಸುತ್ತಾನೋ ಆಗಲೇ ಮಂತ್ರಗಳನ್ನು ಅಧ್ಯಯನ ಮಾಡುತ್ತಾನೆ. ತಾನು ಕರ್ಮಗಳನ್ನು ಮಾಡಬೇಕೆಂದು ಯಾವಾಗ ಮನಸ್ಸಿನಲ್ಲಿ ಆಲೋಚಿಸುತ್ತಾನೋ ಆಗಲೇ ಕರ್ಮಗಳನ್ನು ಆಚರಿಸುತ್ತಾನೆ. ಪುತ್ರರನ್ನು ಪಶುಗಳನ್ನು ಯಾವಾಗ ಮನಸ್ಸಿನಲ್ಲಿ ಬೇಕೆಂದು ಆಲೋಚಿಸುತ್ತಾನೋ ಆಗ ಅವನ್ನು ಇಚ್ಛಿಸಿ ಪಡೆಯುತ್ತಾನೆ. ಈ ಲೋಕವನ್ನೇ ಆಗಲೀ, ಪರಲೋಕವನ್ನೇ ಆಗಲಿ ಹೊಂದಬೇಕೆಂದು ಯಾವಾಗ ಮನಸ್ಸಿನಲ್ಲಿ ಆಲೋಚಿಸುತ್ತಾನೋ ಆಗ ಅವನ್ನು ಇಚ್ಛಿಸಿ ಹೊಂದುತ್ತಾನೆ. ಹೀಗೆ ಜೀವನು ಮನಸ್ಸಿಗೆ ಅಧೀನನಾಗಿರುವುದರಿಂದ ಮನಸ್ಸು ಅವನ ಸ್ವಾಮಿ (ಆತ್ಮಾ) ಎನಿಸಿಕೊಂಡಿದೆ. ಲೋಕವೆಲ್ಲವೂ

ಮನಸ್ಸಿನ ಅಧೀನವಾಗಿರುವುದರಿಂದ ಮನಸ್ಸೇ ಲೋಕವೆನಿಸಿದೆ. ಈ ಮನೋಭಿಮಾನಿಯಾದ ಪರ್ಜನ್ಯನಲ್ಲಿ ನಿಯಾಮಕನಾಗಿ ಪರಬ್ರಹ್ಮನಿರುವನು. ಮನೋನಿಯಾಮಕನಾದ ಪರ್ಜನ್ಯನಲ್ಲಿ ಪರಬ್ರಹ್ಮನನ್ನು ಆರಾಧಿಸು.

'ಸ ಯೋ ಮನೋ ಬ್ರಹ್ಮೇತ್ಯುಪಾಸ್ತೇ । ಯಾವನ್ಮನಸೋ ಗತಂ ತತ್ರಾಸ್ಯ ಯಥಾಕಾಮಚಾರೋ ಭವತಿ ಯೋ ಮನೋ ಬ್ರಹ್ಮೇತ್ಯುಪಾಸ್ತೇ।' 'ಅಸ್ತಿ ಭಗವೋ ಮನಸೋ ಭೂಯಃ?' ಇತಿ । 'ಮನಸೋವಾವ ಭೂಯೋಽಸ್ತಿ' ಇತಿ । 'ತನ್ಮೇ ಭಗವಾನ್ ಬ್ರವೀತು' ಇತಿ।

'ಯಾರು ಪರ್ಜನ್ಯನಲ್ಲಿ ಪರಬ್ರಹ್ಮನಿರುವನೆಂದು ಉಪಾಸನೆಗೈಯುವನೋ ಅವನು ಪರ್ಜನ್ಯಲೋಕವನ್ನು ಹೊಂದಿ ಎಲ್ಲಿಯ ತನಕ ಪರ್ಜನ್ಯನ ವ್ಯಾಪ್ತಿ ಇರುವುದೋ ಆ ಎಲ್ಲ ಪ್ರದೇಶಗಳಲ್ಲಿ ಇಚ್ಛಾನುಸಾರೇಣ ಸಂಚರಿಸಲು ಶಕ್ತನಾಗುವನು' ಎಂದು ಸನತ್ಕುಮಾರರು ಉಪದೇಶಿಸಲು ನಾರದರು 'ಪೂಜ್ಯರೇ ! ಮನೋಭಿಮಾನಿನಿಯಾದ ಪರ್ಜನ್ಯನಿಗಿಂತಲೂ ಶ್ರೇಷ್ಠರಾದವರಿರುವರೇನು ?' ಎಂದು ಪ್ರಶ್ನಿಸಿದರು. 'ಮನೋಭಿಮಾನಿಯಾದ ಪರ್ಜನ್ಯನಿಗಿಂತಲೂ ಉತ್ತಮರಾದವರಿರುವರು' ಎಂದು ಸನತ್ಕುಮಾರರು ಉತ್ತರಿಸಲು 'ಅದನ್ನು ನನಗೆ ಪೂಜ್ಯರಾದ ತಾವು ಉಪದೇಶಿಸಿರಿ' ಎಂದು ನಾರದರು ಪ್ರಾರ್ಥಿಸಿದರು.

'ಸಂಕಲ್ಪೋ ವಾವ ಮನಸೋ ಭೂಯಾನ್ । ಯದಾ ವೈ ಸಂಕಲ್ಪಯತೇಽಥ ಮನಸ್ಯತಿ । ಅಥ ವಾಚಮೀರಯತಿ । ತಾಮು ನಾಮ್ನೀರಯತಿ । ನಾಮ್ನಿ ಮಂತ್ರಾ ಏಕಂ ಭವಂತಿ । ಮಂತ್ರೇಷು ಕರ್ಮಾಣಿ' ।

ಸಂಕಲ್ಪಕ್ಕೆ ಅಭಿಮಾನಿಯಾದುದರಿಂದ ಸಂಕಲ್ಪವೆನಿಸಿಕೊಂಡಿರುವ ಮಿತ್ರದೇವನು, ಮನಸ್ಸಿಗೆ ಅಭಿಮಾನಿಯಾಗಿದ್ದು ಮನೋನಾಮಕನಾದ ಪರ್ಜನ್ಯನಿಗಿಂತ ಶ್ರೇಷ್ಠನು. ಪುರುಷನು ಯಾವಾಗ ಯಾವುದಾದರೊಂದು ಕರ್ಮವನ್ನು ಮಾಡಬೇಕೆಂದು ಸಂಕಲ್ಪಿಸುತ್ತಾನೋ ಆಗ ಆ ವಿಷಯದಲ್ಲಿ ಮನಸ್ಸನ್ನು ಪ್ರೇರಿಸುತ್ತಾನೆ. ಹೀಗೆ ಮನಸ್ಸನ್ನು ಪ್ರೇರಿಸಿದ ನಂತರ, ವಾಗಿಂದ್ರಿಯವನ್ನು ಆ ವಿಷಯದಲ್ಲಿ ಪ್ರೇರಿಸುತ್ತಾನೆ. ಆ ವಾಗಿಂದ್ರಿಯವನ್ನೇ ವಿಷ್ಣುವಿನ ನಾಮವೆನಿಸಿಕೊಂಡಿರುವ ಋಗ್ವೇದಾದಿಗಳಲ್ಲಿ ಪ್ರೇರಿಸಿ ಅವುಗಳನ್ನು ಪಠಿಸುವಂತೆ ಮಾಡುತ್ತಾನೆ. ನಾಮವೆನಿಸಿರುವ ಈ ಋಗ್ವೇದಾದಿ ಶಬ್ದರಾಶಿಯಲ್ಲಿ ಮಂತ್ರಗಳೂ ಸೇರಿಕೊಂಡಿವೆ. ಈ ಮಂತ್ರಗಳಿಂದ ಪ್ರಕಾಶಿತವಾದಾಗ ಕರ್ಮಗಳು ಆಚರಿಸಲ್ಪಡುವುದರಿಂದ ಕರ್ಮಗಳು ಮಂತ್ರದಲ್ಲಿ ಸೇರಿಕೊಂಡಿವೆ.

ತಾನಿ ಹ ವಾ ಏತಾನಿ ಸಂಕಲ್ಪ್ಯೈಕಾಯನಾನಿ, ಸಂಕಲ್ಪಾತ್ಮಕಾನಿ, ಸಂಕಲ್ಪೇ ಪ್ರತಿಷ್ಠಿತಾನಿ। ಸಮಕ್ಲೃಪತಾಂ ದ್ಯಾವಾ ಪೃಥಿವೀ। ಸಮಕಲ್ಪೇತಾಂ ವಾಯುಶ್ಚಾಕಾಶಶ್ಚ। ಸಮಕಲ್ಪಂತಾಪಶ್ಚ ತೇಜಶ್ಚ। ತೇಷಾಂ ಸಂಕ್ಲೃಪ್ತ್ಯೈ ವರ್ಷಂ ಸಂಕಲ್ಪತೇ । ವರ್ಷಸ್ಯ ಸಂಕ್ಲೃಪ್ತ್ಯಾ ಅನ್ನಂ ಸಂಕಲ್ಪತೇ। ಅನ್ನಸ್ಯ ಸಂಕ್ಲೃಪ್ತ್ಯೈ ಪ್ರಾಣಾಃ ಸಂಕಲ್ಪಂತೇ। ಪ್ರಾಣಾನಾಂ ಸಂಕ್ಲೃಪ್ತ್ಯೈ ಮಂತ್ರಃ ಸಂಕಲ್ಪಂತೇ। ಮಂತ್ರಾಣಾಂ ಸಂಕ್ಲೃಪ್ತ್ಯೈ ಕರ್ಮಾಣಿ ಸಂಕಲ್ಪಂತೇ। ಕರ್ಮಣಾ ಸಂಕಲ್ಪ್ತ್ಯೈ ಲೋಕಾಃ ಸಂಕಲ್ಪಂತೇ । ಲೋಕಾನಾಂ ಸಂಕ್ಲೃಪ್ತ್ಯೈ ಸರ್ವಂ ಸಂಕಲ್ಪತೇ। ಸ ಏಷ ಸಂಕಲ್ಪಃ। ಸಂಕಲ್ಪಮುಪಾಸ್ಸ' ಇತಿ ॥

ಈ ಮನಸ್ಸು ವಾಗಿಂದ್ರಿಯ, ನಾಮ, ಮಂತ್ರ, ಕರ್ಮ ಹಾಗೂ ಇವೆಲ್ಲವುಗಳ ಅಭಿಮಾನಿದೇವತೆಗಳಾದ ಉಷಾದೇವಿ ಮೊದಲಾದವರು ಸಂಕಲ್ಪನೆನಿಸಿಕೊಂಡಿರುವ ಮಿತ್ರದೇವನನ್ನು ಆಶ್ರಯಿಸಿಕೊಂಡಿರುವರು. ಈ ಮಿತ್ರನು ಅವರಿಗೆ ಸ್ವಾಮಿಯಾಗಿ ಇರುವನು. ಮೋಕ್ಷದಲ್ಲೂ ಅವು ಮಿತ್ರನ ಅಧೀನವಾಗಿರುವುವು. ಸಂಕಲ್ಪವೆನಿಸಿಕೊಂಡಿರುವ ಈ ಮಿತ್ರನಿಂದಲೇ ಭೂಮಿ ಹಾಗೂ ಸ್ವರ್ಗಗಳು ಹುಟ್ಟಿರುವವು. ವಾಯು ಹಾಗೂ ಆಕಾಶಗಳಿಗೂ ಈ ಮಿತ್ರನಿಂದಲೇ ಉತ್ಪತ್ತಿ. ನೀರು ಹಾಗೂ ತೇಜಸ್ಸುಗಳು ಈ ಮಿತ್ರನ ಸೃಷ್ಟಿಯೇ ಆಗಿವೆ. ಆ ಭೂಮಿ, ಸ್ವರ್ಗ, ವಾಯು, ಆಕಾಶ, ನೀರು ಹಾಗೂ ತೇಜಸ್ಸುಗಳ ಸ್ಥಿತಿಗೋಸ್ಕರವೇ ಮಿತ್ರನಿಂದ ಮಳೆಯುಂಟಾಗುತ್ತದೆ. ಮಳೆಯ ಸೃಷ್ಟಿಯಿಂದಾಗಿ ಅನ್ನದ ಉತ್ಪತ್ತಿಯಾಗುತ್ತದೆ. ಅನ್ನದ ಸ್ಥಿತಿಗೋಸ್ಕರ ಪ್ರಾಣಗಳು ಪೋಷಿಸಲ್ಪಡುತ್ತವೆ. ಪ್ರಾಣಗಳ ಪೋಷಣೆಗಾಗಿ ಮಿತ್ರನಿಂದ ಮಂತ್ರಗಳ ಪ್ರವೃತ್ತಿಯುಂಟಾಗುತ್ತದೆ. ಮಂತ್ರಗಳ ಪ್ರವೃತ್ತಿಗೋಸ್ಕರ ಕರ್ಮಗಳು ಸೃಷ್ಟಿಸಲ್ಪಡುತ್ತವೆ. ಕರ್ಮಗಳ ಅನುಷ್ಠಾನಕ್ಕಾಗಿ ಲೋಕಗಳು ಸೃಷ್ಟಿಸಲ್ಪಡುತ್ತವೆ. ಲೋಕಗಳ ಸೃಷ್ಟಿಗಾಗಿ ಇತರ ಎಲ್ಲಾ ಅಚೇತನ ವಸ್ತುಗಳೂ ಈ ಮಿತ್ರನಿಂದಲೇ ಸೃಷ್ಟಿಸಲ್ಪಡುತ್ತವೆ. ಹೀಗೆ ಎಲ್ಲವೂ ಸಂಕಲ್ಪನೆನಿಸಿರುವ ಮಿತ್ರನ ಅಧೀನವಾಗಿವೆ. ಈ ಮಿತ್ರನಲ್ಲಿ ನಿಯಾಮಕನಾಗಿ ಬ್ರಹ್ಮನಿರುವನೆಂದು ಆರಾಧಿಸು.

'ಸ ಯಃ ಸಂಕಲ್ಪಂ ಬ್ರಹ್ಮೇತ್ಯುಪಾಸ್ತೇ ಕ್ಲೃಪ್ತಾನ್ ವೈ ಸ ಲೋಕಾನ್ ಧ್ರುವಾನ್ ಧ್ರುವಃ ಪ್ರತಿಷ್ಠಿತಾನ್ ಪ್ರತಿಷ್ಠಿತೋಽವ್ಯಥಮಾನಾನ ವ್ಯಥಮಾನೋಽಭಿಸಿದ್ಧತಿ । ಯಾವತ್ ಸಂಕಲ್ಪಸ್ಯ ಗತಂ ತತ್ರಾಸ್ಯ ಯಥಾಕಾಮಚಾರೋ ಭವತಿ ಯಃ ಸಂಕಲ್ಪಂ ಬ್ರಹ್ಮೇತ್ಯುಪಾಸ್ತೇ ।' 'ಅಸ್ತಿ ಭಗವತಃ ಸಂಕಲ್ಪಾದ್ಭೂಯಃ ?' ಇತಿ । ಸಂಕಲ್ಪಾದ್ಭಾವ ಭೂಯೋಽಸ್ತಿ' ಇತಿ। 'ತನ್ಮೇ ಭಗವಾನ್ ಬ್ರವೀತು' ಇತಿ।

'ಯಾರು ಸಂಕಲ್ಪನೆನಿಸಿರುವ ಮಿತ್ರನಲ್ಲಿ ಪರಬ್ರಹ್ಮನಿರುವನೆಂದು ಆರಾಧಿಸುವನೋ ಅವನು ಸ್ವತಃ ನಿತ್ಯನೂ ಸುಸ್ಥಿತಿ ಉಳ್ಳವನೂ, ದುಃಖರಹಿತನೂ ಆಗಿ ಮಿತ್ರನಿಂದ ಅಧಿಷ್ಠಿತವಾದ ಪ್ರತಿಷ್ಠಿತವಾದ ಹಾಗೂ ದುಃಖರಹಿತವಾದ ಲೋಕಗಳನ್ನೂ ಹೊಂದುವನು. ಸಂಕಲ್ಪನೆನಿಸಿರುವ ಮಿತ್ರನು ಎಷ್ಟು ಪ್ರದೇಶಗಳಲ್ಲಿ ವ್ಯಾಪಿಸಿಕೊಂಡಿರುವನೋ ಆ ದೇಶಗಳಲ್ಲೆಲ್ಲಾ ಆ ಉಪಾಸಕನು ಇಚ್ಛಾನುಸಾರವಾಗಿ ಸಂಚರಿಸಬಲ್ಲವನಾಗುವನು' ಎಂದು ಸನತ್ಕುಮಾರರು ನಾರದರಿಗೆ ಉಪದೇಶಿಸಿದರು. ಆಗ ನಾರದರು 'ಪೂಜ್ಯರೇ ! ಸಂಕಲ್ಪನೆನಿಸಿರುವ ಮಿತ್ರನಿಗಿಂತಲೂ ಉತ್ತಮರಾದವರು ಇರುವರೇನು ?' ಎಂದು ಪ್ರಶ್ನಿಸಲು, ಸನತ್ಕುಮಾರರು 'ಸಂಕಲ್ಪನೆನಿಸಿರುವ ಮಿತ್ರನಿಗಿಂತಲೂ ಉತ್ತಮರಿರುವರು' ಎಂದುತ್ತರಿಸಿದರು. 'ಹಾಗಿದ್ದರೆ ಪೂಜ್ಯರಾದ ತಾವು ನನಗೆ ಅದನ್ನು ಉಪದೇಶಿಸಿರಿ' ಎಂದು ಅವರನ್ನು ನಾರದರು ಪ್ರಾರ್ಥಿಸಿದರು.

ಚಿತ್ತಂ ವಾವ ಸಂಕಲ್ಪಾತ್ ಭೂಯಃ। ಯದಾ ವೈ ಚೇತಯತೇಽಥ ಸಂಕಲ್ಪಯತೇ। ಅಥ ಮನಸ್ಯತಿ। ಅಥ ವಾಚಮೀರಯತಿ। ತಾಮು ನಾಮ್ನೀರಯತಿ ನಾಮ್ನಿ ಮಂತ್ರಾಃ ಏಕಂ ಭವಂತಿ। ಮಂತ್ರೇಷು ಕರ್ಮಾಣಿ॥

ಸಂಕಲ್ಪನೆನಿಸಿರುವ ಮಿತ್ರನಿಗಿಂತ ಚಿತ್ತಕ್ಕೆ ಅಂದರೆ ಅಸ್ಥಿರವಾದ ಸ್ಮರಣೆಗೆ ನಿಯಾಮಕನಾಗಿದ್ದು, ಅಗ್ನಿಕುಂಡದಲ್ಲ ಪೂಜಿತನಾಗುವ ಕಾರಣ ಚಿತ್ತ ಎಂದೆನಿಸಿಕೊಂಡಿರುವ ಅಗ್ನಿದೇವನು ಉತ್ತಮನು. ಯಾವಾಗ ಪುರುಷನು ಕರ್ತವ್ಯಾಕರ್ತವ್ಯಗಳನ್ನು ಸ್ಮರಿಸುತ್ತಾನೋ ಆಗ 'ಇದು ನನ್ನ ಕರ್ತವ್ಯ' ಎಂದು ಸಂಕಲ್ಪಿಸುತ್ತಾನೆ. ಆ ಮೇಲೆ ಆ ಸಂಕಲ್ಪದಂತೆ ಮನಸ್ಸನ್ನು ಪ್ರೇರಿಸುತ್ತಾನೆ. ಅನಂತರ ಅದಕ್ಕನುಗುಣವಾಗಿ ವಾಗಿಂದ್ರಿಯವನ್ನು ಪ್ರಚೋದಿಸುತ್ತಾನೆ. ಆ ವಾಗಿಂದ್ರಿಯವನ್ನೇ ವಿಷ್ಣುವಿನ ನಾಮವೆನಿಸಿರುವ ಋಗ್ವೇದಾದಿಗಳನ್ನು ಪಠಿಸಲು ಪ್ರೇರಿಸುತ್ತಾನೆ. ನಾಮವೆನಿಸಿರುವ ಋಗ್ವೇದಾದಿಗಳಲ್ಲಿ ಮಂತ್ರಗಳು ಸೇರಿಕೊಂಡಿವೆ. ಮಂತ್ರಗಳಲ್ಲಿ ಅವುಗಳಿಂದ ಪ್ರಕಾಶಿತವಾದ ಜ್ಯೋತಿಷ್ಟೋಮಾದಿ ಕರ್ಮಗಳನ್ನು ಸೇರಿಕೊಂಡಿವೆ.

'ತಾನಿ ಹವಾ ಏತಾನಿ ಚಿತ್ಯೈಕಾಯನಾನಿ ಚಿತ್ತಾತ್ಮಕಾನಿ ಚಿತ್ತೇ ಪ್ರತಿಷ್ಠಿತಾನಿ। ತಸ್ಮಾದ್ಯದ್ಯಪಿ ಬಹುವಿದಚಿತ್ತೋ ಭವತಿ ನಾಯಮಸ್ತೀತ್ಯೇವೈನಮಾಹುಃ। ಯದಯಂ ವೇದ ಯದ್ವಾ ಅಯಂ ವಿದ್ವಾನ್ ನೇತ್ಥಮಚಿತ್ತಃ ಸ್ಯಾದಿತಿ। ಅಥ ಯದ್ಯಲ್ಪವಿತ್ ಚಿತ್ತವಾನ್ ಭವತಿ ತಸ್ಮಾದೇತತ್ ಶುಶ್ರೂಷಂತೇ। ಚಿತ್ತಂ ಹ್ಯೇವೈಷಾಮೇಕಾಯನಂ। ಚಿತ್ತಮಾತ್ಮಾ। ಚಿತ್ತಂ ಪ್ರತಿಷ್ಠಾ। ಚಿತ್ತಮುಪಾಸ್ಯ' ಇತಿ।

ಈ ಸಂಕಲ್ಪ, ಮನಸ್ಸು, ವಾಕ್, ನಾಮ, ಮಂತ್ರ, ಕರ್ಮ ಹಾಗೂ ಇವುಗಳ ಅಭಿಮಾನಿದೇವತೆಗಳು ಚಿತ್ತನೆನಿಸಿರುವ ಅಗ್ನಿಯನ್ನು ಆಶ್ರಯಿಸಿಕೊಂಡಿವೆ. ಈ ಅಗ್ನಿಯು ಅವರಿಗೆ ಸ್ವಾಮಿಯಾಗಿರುವನು. ಮೋಕ್ಷದಲ್ಲೂ ಅವು ಅಗ್ನಿಯ ಅಧೀನ. ಚಿತ್ತವು ಸಂಕಲ್ಪಾದಿಗಳಿಗಿಂತ ಉತ್ತಮವಾಗಿರುವುದರಿಂದಲೇ ಬಹುಶಾಸ್ತ್ರಗಳನ್ನು ಅರಿತಿರುವನಾಗಿದ್ದು ಸ್ಮರಣಶಕ್ತಿರಹಿತನಾಗಿದ್ದರೆ, ಅವನು ಇದ್ದರೂ ಇಲ್ಲವೆಂದೇ ಜ್ಞಾನಿಗಳು ಹೇಳುತ್ತಾರೆ. ಅಂದರೆ ಅವನು ವಿದ್ವಾಂಸನಾಗಿದ್ದರೂ ವಿದ್ವಾಂಸನಾಗಿಲ್ಲ ಎಂದೆನ್ನುತ್ತಾರೆ. ಅವನು ಒಂದು ವೇಳೆ ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಶಾಸ್ತ್ರಗಳನ್ನು ಅರಿತವನಾಗಿದ್ದರೆ, ಈ ರೀತಿಯಾಗಿ ಸ್ಮರಣಶಕ್ತಿರಹಿತನಾಗುತ್ತಿರಲಿಲ್ಲ. ಸ್ಮರಣೆ ರಹಿತನಾಗಿರುವುದರಿಂದ ಅವನು ವಿದ್ವಾಂಸನಲ್ಲವೆಂದು ಆ ಜ್ಞಾನಿಗಳು ಅಭಿಪ್ರಾಯಪಡುತ್ತಾರೆ. ಒಂದುವೇಳೆ ಅಲ್ಪಜ್ಞಾನಿಯಾಗಿದ್ದರೂ ಸ್ಮರಣಶಕ್ತಿಯುಳ್ಳವನಾಗಿದ್ದರೆ ಅವನಿಂದ ತಮಗೆ ಇಷ್ಟವಾದ ಪ್ರಮೇಯಗಳನ್ನು ಕೇಳಿ ತಿಳಿದುಕೊಳ್ಳಲು ಇಚ್ಛಿಸುತ್ತಾರೆ. ಹೀಗೆ ಸಂಕಲ್ಪ, ಮನಸ್ಸು, ವಾಕ್, ನಾಮ, ಮಂತ್ರ, ಕರ್ಮ ಹಾಗೂ ಅವುಗಳ ಅಭಿಮಾನಿದೇವತೆಗಳಿಗೆ, ಚಿತ್ತನೆನಿಸಿರುವ ಅಗ್ನಿದೇವನೇ ಆಶ್ರಯನು. ಅವನೇ ಸ್ವಾಮಿಯು. ಮೋಕ್ಷದಲ್ಲೂ ಇವರೆಲ್ಲರೂ ಈ ಅಗ್ನಿದೇವನ ಅಧೀನ. ಚಿತ್ತನೆನಿಸಿರುವ ಈ ಅಗ್ನಿದೇವನಲ್ಲಿ ನಿಯಾಮಕನಾಗಿ ಪರಬ್ರಹ್ಮನಿರುವನೆಂದು ಉಪಾಸಿಸು.

'ಸ ಯಶ್ಚಿತ್ತಂ ಬ್ರಹ್ಮೇತ್ಯುಪಾಸ್ತೇ ಚಿತ್ತಾನ್ವೈ ಸ ಲೋಕಾನ್ ಧ್ರುವಾನ್ ಧ್ರುವಃ ಪ್ರತಿಷ್ಠಿತಾನ್ ಪ್ರತಿಷ್ಠಿತೋಽವ್ಯಥಮಾನಾನವ್ಯಥಮಾನೋಽಭಿ-ಸಿದ್ಧ್ಯತಿ। ಯಾವತ್ ಚಿತ್ತಸ್ಯ ಗತಂ ತತ್ರಾಸ್ಯ ಯಥಾ ಕಾಮಚಾರೋ ಭವತಿ ಯಃ ಚಿತ್ತಂ ಬ್ರಹ್ಮೇತ್ಯುಪಾಸ್ತೇ'। 'ಅಸ್ತಿ ಭಗವಃ ಚಿತ್ತಾತ್ ಭೂಯಃ?' ಇತಿ। ಚಿತ್ತಾದ್ವಾವ ಭೂಯೋಽಸ್ತಿ' ಇತಿ। 'ತನ್ಮೇ ಭಗವಾನ್ ಬ್ರವೀತು' ಇತಿ।

ಯಾರು ಚಿತ್ತನೆನಿಸಿರುವ ಅಗ್ನಿಯಲ್ಲಿ ನಿಯಾಮಕನಾಗಿ ಪರಬ್ರಹ್ಮನಿರುವನೆಂದು ಉಪಾಸನೆ ಗೈಯುವನೋ ಅವನು ಸ್ವತಃ ನಾಶರಹಿತನೂ, ಒಳ್ಳೆಯ ಸ್ಥಿತಿವಂತನೂ, ದುಃಖರಹಿತನೂ ಆಗಿ, ನಾಶರಹಿತವಾದ, ಪ್ರತಿಷ್ಠಿತವಾದ ದುಃಖರಹಿತವಾದ ಚಿತ್ತಾಭಿಮಾನಿ ಅಗ್ನಿಯಿಂದ ಅಧಿಷ್ಠಿತವಾದ ಲೋಕಗಳನ್ನು ತಲುಪುತ್ತಾನೆ. ಅಲ್ಲಿ ಎಲ್ಲಿಯ ತನಕ ಚಿತ್ತನೆನಿಸಿರುವ ಅಗ್ನಿಯ ವ್ಯಾಪ್ತಿ ಇದೆಯೋ ಅಲ್ಲೆಲ್ಲಾ ತನ್ನ ಇಚ್ಛಾನುಸಾರವಾಗಿ ಸಂಚರಿಸಬಲ್ಲವನಾಗುವನು ಎಂದು ಸನತ್ಕುಮಾರರು ಉಪದೇಶಿಸಿದಾಗ ನಾರದರು, ಪೂಜ್ಯರೇ ! ಚಿತ್ತನೆನಿಸಿರುವ ಈ

ಅಗ್ನಿಗಿಂತಲೂ ಶ್ರೇಷ್ಠರಿರುವರೇನು ?' ಎಂದು ಪ್ರಶ್ನಿಸಿದರು. ಅದಕ್ಕುತ್ತರವಾಗಿ 'ಚಿತ್ತನಿಗಿಂತಲೂ ಉತ್ತಮರಿರುವರು' ಎಂದು ಸನತ್ಕುಮಾರರು ಹೇಳಿದ್ದಾಗ 'ಹಾಗಿದ್ದಲ್ಲಿ ಪೂಜ್ಯರಾದ ತಾವು ಅದನ್ನು ನನಗೆ ತಿಳಿಯಹೇಳಿ' ಎಂದು ನಾರದರು ಪ್ರಾರ್ಥಿಸಿದರು.

ಧ್ಯಾನಂ ವಾವ ಚಿತ್ತಾತ್ ಭೂಯಃ । ಧ್ಯಾಯತೀವ ಪೃಥಿವೀ । ಧ್ಯಾಯತೀವ ದ್ಯೌಃ । ಧ್ಯಾಯತೀವಾಂತರಿಕ್ಷಮ್ । ಧ್ಯಾಯಂತೀವಾಪಃ । ಧ್ಯಾಯಂತೀವ ಪರ್ವತಾಃ । ಧ್ಯಾಯಂತೀವ ದೇವಮನುಷ್ಯಾಃ । ತಸ್ಮಾದ್ಯ ಇಹ ಮನುಷ್ಯಾಣಾಂ ಮಹತ್ತಾಂ ಪ್ರಾಪ್ನುವಂತಿ ಧ್ಯಾನಾಪಾದಂಶಾ ಇವೈವ ತೇ ಭವಂತಿ । ಅಥ ಯೇಽಲ್ಪಾಃ ಕಲಹಿನಃ ಪಿಶುನಾ ಉಪವಾದಿನಸ್ತೇ । ಅಥ ಯೇ ಪ್ರಭವೋ ಧ್ಯಾನಾಪಾದಂಶಾ ಇವೈವ ತೇ ಭವಂತಿ । ಧ್ಯಾನಮುಪಾಸ್ವ ಇತಿ ॥

ಮುಕ್ತಿ ಹಾಗೂ ಸಂಸಾರಾವಸ್ಥೆಗಳಲ್ಲಿ ಚಿತ್ತನೆನಿಸಿಕೊಂಡಿರುವ ಅಗ್ನಿದೇವನಿಗಿಂತ ಧ್ಯಾನಾಭಿಮಾನಿಯಾಗಿದ್ದು ಧ್ಯಾನನೆನಿಸಿರುವ ವರುಣದೇವನು ಶ್ರೇಷ್ಠನು. ಆದುದರಿಂದ ಪೃಥಿವೀ, ಸ್ವರ್ಗ, ಅಂತರಿಕ್ಷ ನೀರು ಹಾಗೂ ಪರ್ವತ ಇವುಗಳಿಗೆ ಅಭಿಮಾನಿಗಳಾಗಿರುವ ದೇವತೆಗಳು ಹಾಗೂ ಮನುಷ್ಯದೇಹವನ್ನು ಹೊಂದಿರುವ ದೇವತೆಗಳು ಬಹುಭಾಷಿಗಳಾಗಿರದೆ, ಧ್ಯಾನವಿಷಯದಲ್ಲಿ ಅಸ್ವತಂತ್ರರಾಗಿದ್ದರೂ, ಪರಮಾತ್ಮನ ಪ್ರೇರಣೆಯಿಂದ ಧ್ಯಾನದಲ್ಲೇ ಮಗ್ನರಾಗಿರುತ್ತಾರೆ. ಧ್ಯಾನಾಭಿಮಾನಿಯು ಶ್ರೇಷ್ಠನಾಗಿರುವುದರಿಂದಲೇ ಮನುಷ್ಯರ ಮಧ್ಯದಲ್ಲಿ ಯಾರು ಜ್ಞಾನ, ಬಲ, ಐಶ್ವರ್ಯ, ಭಕ್ತಿ ಮೊದಲಾದ ಸದ್ಗುಣಗಳ ವಿಷಯದಲ್ಲಿ ಶ್ರೇಷ್ಠರೆನಿಸಿಕೊಂಡಿರುವರೋ ಅಂತಹವರ ಆ ಶ್ರೇಷ್ಠತೆಯು ಪರಮಾತ್ಮನ ಅನುಗ್ರಹದಿಂದ ಲಭಿಸಿದ ಧ್ಯಾನಫಲದ ಒಂದಂಶವಾಗಿದೆ. ಧ್ಯಾನ ಫಲೈಕದೇಶವಾದ ಇಂತಹ ಶ್ರೇಷ್ಠತೆ ಇಲ್ಲದಿರುವುದರಿಂದ ಮನುಷ್ಯರಲ್ಲಿ ಯಾರು ಅಲ್ಪರೆನಿಸಿಕೊಂಡಿರುವರೋ ಅವರು ಧ್ಯಾನದ ಲೇಶವನ್ನು ಮಾಡಲಾರದವರಾಗಿ ಕಲಹಶೀಲರೂ, ಚಾಡಿ ಹೇಳುವ ಸ್ವಭಾವದವರೂ, ಪರರನ್ನು ನಿಂದಿಸುವವರೂ ಆಗಿರುವರು. ಯಾರು ಶ್ರೇಷ್ಠರಾಗಬೇಕೆಂಬ ಇಚ್ಛೆಯುಳ್ಳವರೋ ಅವರ ಅಂತಹ ಇಚ್ಛೆಯೂ ಪರಮಾತ್ಮನ ಅನುಗ್ರಹದಿಂದ ಲಭಿಸಿದ ಧ್ಯಾನಫಲದ ಒಂದಂಶವಾಗಿದೆ. ಧ್ಯಾನಾಭಿಮಾನಿಯಾಗಿದ್ದು ಧ್ಯಾನನೆನಿಸಿರುವ ವರುಣನಲ್ಲಿ ನಿಯಾಮಕನಾಗಿ ಪರಬ್ರಹ್ಮನಿರುವನೆಂದು ಆರಾಧಿಸು.

'ಸ ಯೋ ಧ್ಯಾನಂ ಬ್ರಹ್ಮೇತ್ಯುಪಾಸ್ತೇ । ಯಾವತ್ ಧ್ಯಾನಸ್ಯ ಗತಂ ತತ್ರಾಸ್ಯ ಯಥಾಕಾಮಚಾರೋ ಭವತಿ ಯೋ ಧ್ಯಾನಂ ಬ್ರಹ್ಮೇತ್ಯುಪಾಸ್ತೇ' । 'ಅಸ್ತಿ ಭಗವೋ

ಧ್ಯಾನಾತ್ ಭೂಯಃ ?' ಇತಿ । 'ಧ್ಯಾನಾದ್ವಾವಭೂಯೋಽಸ್ತಿ' ಇತಿ । 'ತನ್ಮೇ ಭಗವಾನ್ ಬ್ರವೀತು' ಇತಿ ॥

ಮುಕ್ತಿ ಹಾಗೂ ಸಂಸಾರಾವಸ್ಥೆಗಳಲ್ಲಿ 'ಧ್ಯಾನಾಭಿಮಾನಿಯಾಗಿರುವ ವರುಣನಲ್ಲಿ ನಿಯಾಮಕನಾಗಿರುವ ಪರಬ್ರಹ್ಮನನ್ನು ಯಾರು ಉಪಾಸಿಸುವನೋ ಅವನು ವರುಣಲೋಕವನ್ನು ಹೊಂದಿ, ಅಲ್ಲಿ ಎಲ್ಲಿಯತನಕ ವರುಣನ ವ್ಯಾಪ್ತಿ ಇರುವುದೋ ಅಲ್ಲೆಲ್ಲಾ ತನ್ನ ಇಚ್ಛಾನುಸಾರವಾಗಿ ಸಂಚರಿಸಬಲ್ಲವನಾಗುವನು' ಎಂದು ಸನತ್ಕುಮಾರರು ಉಪದೇಶಿಸಲು ನಾರದರು 'ಪೂಜ್ಯರೇ ! ಧ್ಯಾನನಾಮಕನಾದ ವರುಣದೇವನಿಗಿಂತಲೂ ಶ್ರೇಷ್ಠರಿರುವರೇನು ?' ಎಂದು ಪ್ರಶ್ನಿಸಿದರು. ಆಗ ಸನತ್ಕುಮಾರರು 'ಧ್ಯಾನನಾಮಕನಾದ ವರುಣನಿಗಿಂತಲೂ ಶ್ರೇಷ್ಠರಿರುವರು' ಎಂದು ಉತ್ತರಿಸಲು, 'ಹಾಗಿದ್ದಲ್ಲಿ ಪೂಜ್ಯರಾದ ತಾವು ಅದನ್ನು ನನಗೆ ಉಪದೇಶಿಸಿರಿ' ಎಂದು ನಾರದರು ಪ್ರಾರ್ಥಿಸಿದರು.

'ವಿಜ್ಞಾನಂ ವಾವ ಧ್ಯಾನಾತ್ ಭೂಯಃ । ವಿಜ್ಞಾನೇನ ವಾ ಋಗ್ವೇದಂ ವಿಜಾನಾತಿ । ಯಜುರ್ವೇದಂ ಸಾಮವೇದಮಾಥರ್ವಣಂ ಚತುರ್ಥಮಿತಿಹಾಸ ಪುರಾಣಂ ಪಂಚಮಂ ವೇದಾನಾಂ ವೇದಂ ಪಿತ್ರ್ಯಂ ರಾಶಿಂ ದೈವಂ ನಿಧಿಂ ವಾಕೋವಾಕ್ಯಮೇಕಾಯನಂ ದೇವವಿದ್ಯಾಂ ಬ್ರಹ್ಮವಿದ್ಯಾಂ ಭೂತವಿದ್ಯಾಂ ಕ್ಷತ್ರವಿದ್ಯಾಂ ನಕ್ಷತ್ರವಿದ್ಯಾಂ ಸರ್ಪ ದೇವಜನವಿದ್ಯಾಂ ದಿವಂ ಚ ಪೃಥಿವೀಂ ಚ ವಾಯುಂ ಚಾಕಾಶಂ ಚ ಆಪಶ್ಚ ತೇಪಶ್ಚ ದೇವಾಂಶ್ಚ ಮನುಷ್ಯಾಂಶ್ಚ ಪಶೂಂಶ್ಚ ವಯಾಂಸಿ ಚ ತೃಣ ವನಸ್ಪತೀನ್ ಶ್ವಾಪದಾನ್ಯಾಕೀಟಪತಂಗಪಿಪೀಲಿಕಂ ಧರ್ಮಂ ಚಾಧರ್ಮಂ ಚ ಸತ್ಯಂ ಚಾನೃತಂ ಚ ಸಾಧು ಚಾಸಾಧು ಚ ಹೃದಯಜ್ಞಂ ಚಾಹೃದಯಜ್ಞಂ ಚಾನ್ನಂ ಚ ರಸಂ ಚೇಮಂ ಚ ಲೋಕ ಮಮುಂ ಚ ವಿಜ್ಞಾನೇ ನೈವ ವಿಜಾನಾತಿ । ವಿಜ್ಞಾನಮುಪಾಸ್ಯ' ಇತಿ ॥

ವಿಜ್ಞಾನಕ್ಕೆ ಅಭಿಮಾನಿಯಾಗಿರುವುದರಿಂದಲೂ, ಸತ್ಯವನ್ನು ಶೋಧಿಸುವ ನಿಮಿತ್ತದಿಂದಲೂ ವಿಜ್ಞಾನನೆನಿಸಿರುವ ಚಂದ್ರನು ಧ್ಯಾನನೆನಿಸಿರುವ ವರುಣನಿಗಿಂತಲೂ ಉತ್ತಮನು. ವಿಜ್ಞಾನನೆನಿಸಿರುವ ಚಂದ್ರನಿಂದಾಗಿಯೇ ಋಗ್ವೇದವನ್ನು ಯಜುರ್ವೇದವನ್ನೂ, ಸಾಮವೇದವನ್ನೂ, ಅಥರ್ವಣವೇದವನ್ನೂ, ವೇದಗಳ ಸರಿಸಮಾನವಾಗಿರುವುದರಿಂದ ಪಂಚಮವೇದವೆನಿಸಿರುವ ಇತಿಹಾಸಪುರಾಣಗಳನ್ನೂ ಪಿತೃಲಕ್ಷಣವನ್ನು ನಿರೂಪಿಸುವ ಶಾಸ್ತ್ರವನ್ನೂ, ಗಣಿತವಾಸ್ತ್ರವನ್ನೂ, ದೇವತೆಗಳ ಲಕ್ಷಣವನ್ನು ನಿರೂಪಿಸುವ ಶಾಸ್ತ್ರವನ್ನೂ

ನಿಧಿಯ ಚಿಹ್ನೆಯನ್ನು ತಿಳಿಸಿಕೊಡುವ ಶಾಸ್ತ್ರವನ್ನೂ, ಮೂಲವೇದವನ್ನೂ, ಪಂಚರಾತ್ರವನ್ನೂ, ದೇವತೆಗಳಿಗೆ ಮಾತ್ರ ಅರ್ಥವಾಗುವುದರಿಂದ ದೇವತಾ ವಿದ್ಯೆಯೆನಿಸಿರುವ ಶಾಸ್ತ್ರವನ್ನೂ, ಆರಣ್ಯಕಗಳನ್ನೂ, ಪಂಚಭೂತಗಳ ಲಕ್ಷಣಪರಶಾಸ್ತ್ರವನ್ನೂ, ನೀತಿಶಾಸ್ತ್ರವನ್ನೂ, ಜ್ಯೋತಿಃ ಶಾಸ್ತ್ರವನ್ನೂ, ಸರ್ಪಗಳ ಹಾಗೂ ದೇವಸೇವಕರೂಪ ಗಂಧರ್ವರ ಪರಿಚಾಯಕವಾದ ಶಾಸ್ತ್ರವನ್ನೂ ಆಯಾಯಾ ಶಾಸ್ತ್ರಗಳಿಗೆ ಸಂಬಂಧಿಸಿದ ಅಧ್ಯೇತೃಗಳು ಅರಿತುಕೊಳ್ಳುತ್ತಾರೆ. ಸ್ವರ್ಗ, ಪೃಥಿವೀ, ವಾಯು, ಆಕಾಶ, ಜಲ, ತೇಜಸ್ಸು, ದೇವತೆಗಳು, ಮನುಷ್ಯರು, ಪಶುಪಕ್ಷಿಗಳು, ಹುಲ್ಲು, ಮರ, ಅರಣ್ಯದಲ್ಲಿರುವ ಜಂತುಗಳು, ಕೀಟ, ಪತಂಗ, ಇರುವೆ ಇವೇ ಮೊದಲಾದ ಎಲ್ಲಾ ಪ್ರಾಣಿಗಳನ್ನೂ ಧರ್ಮವನ್ನೂ, ಅಧರ್ಮವನ್ನೂ, ಸತ್ಯಾಸತ್ಯಗಳನ್ನು, ಯೋಗ್ಯ ಹಾಗೂ ಅಯೋಗ್ಯ ವಿಷಯಗಳನ್ನೂ, ಹೃದಯದಲ್ಲಿ ನಿಯಾಮಕನಾಗಿರುವ ಪರತತ್ತ್ವವನ್ನರಿತವನನ್ನೂ, ಇಂತಹ ಪರತತ್ತ್ವಕ್ಕಿಂತ ಇತರವಾದ ಜಗತ್ತನ್ನು ಅರಿತವನನ್ನೂ, ಅನ್ನವನ್ನೂ, ರಸವನ್ನೂ, ಇಹ ಹಾಗೂ ಪರಲೋಕಗಳನ್ನೂ ವಿಜ್ಞಾನನೆನಿಸಿರುವ ಚಂದ್ರನ ಅನುಗ್ರಹದಿಂದಲೇ ಅಧಿಕಾರಿಗಳು ಅರಿತುಕೊಳ್ಳುವರು. ವಿಜ್ಞಾನನೆನಿಸಿರುವ ಚಂದ್ರನಲ್ಲಿ ನಿಯಾಮಕನಾಗಿರುವ ಪರಮಾತ್ಮನನ್ನು ಆರಾಧಿಸು.

> 'ಸ ಯೋ ವಿಜ್ಞಾನಂ ಬ್ರಹ್ಮಮೇತ್ಯುಪಾಸ್ತೇ ವಿಜ್ಞಾನವತೋ ಹ ವೈ ಲೋಕಾನ್ ಜ್ಞಾನವತೋಽಭಿಸಿಧ್ಯತಿ । ಯಾವತ್ ವಿಜ್ಞಾನಸ್ಯ ಗತಂ ತತ್ರಾಸ್ಯ ಯಥಾಕಾಮಚಾರೋ ಭವತಿ ಯೋ ವಿಜ್ಞಾನಂ ಬ್ರಹ್ಮೇತ್ಯುಪಾಸ್ತೇ' । 'ಅಸ್ತಿ ಭಗವೋ ವಿಜ್ಞಾನಾತ್ ಭೂಯಃ?' ಇತಿ । ವಿಜ್ಞಾನಾದ್ವಾವ ಭೂಯೋಽಸ್ತಿ' ಇತಿ । ತನ್ಮೇ ಭಗವಾನ್ ಬ್ರವೀತು' ಇತಿ ।

'ಯಾರು ವಿಜ್ಞಾನನೆನಿಸಿರುವ ಚಂದ್ರನಲ್ಲಿ ನಿಯಾಮಕನಾಗಿ ಪರಬ್ರಹ್ಮನಿರುವನೆಂದು ಉಪಾಸನೆಗೈಯುವನೋ ಅವನು ವಿಶೇಷ ಜ್ಞಾನ ಹಾಗೂ ಸಾಮಾನ್ಯಜ್ಞಾನಗಳಿಗೆ ಅಭಿಮಾನಿಯಾದ ಚಂದ್ರನಿಂದ ಅಧಿಷ್ಠಿತ ಲೋಕಗಳನ್ನು ಸಾಧಿಸಿಕೊಳ್ಳುವನು. ಆ ಲೋಕಗಳಲ್ಲಿ ಎಲ್ಲಿಯ ತನಕ ವಿಜ್ಞಾನನೆನಿಸಿರುವ ಚಂದ್ರನ ವ್ಯಾಪ್ತಿಯಿರುವುದೋ ಅಲ್ಲೆಲ್ಲಾ ಆ ಉಪಾಸಕನು ಇಚ್ಛಾನುಸಾರವಾಗಿ ಸಂಚರಿಸಬಲ್ಲವ- ನಾಗುವನು' ಎಂದು ಸನತ್ಕುಮಾರರು ಉಪದೇಶಿಸಿದಾಗ ನಾರದರು, 'ಪೂಜ್ಯರೇ ! ವಿಜ್ಞಾನನೆನಿಸಿರುವ ಚಂದ್ರನಿಗಿಂತಲೂ ಶ್ರೇಷ್ಠರಿರುವರೇನು?' ಎಂದು ಪ್ರಶ್ನಿಸಿದರು. ಅದಕ್ಕೆ ಉತ್ತರವಾಗಿ ಸನತ್ಕುಮಾರರು 'ವಿಜ್ಞಾನನಿಗಿಂತಲೂ ಉತ್ತಮರಿರುವರು' ಎಂದು ಹೇಳಲು, 'ಪೂಜ್ಯರಾದ ತಾವು ನನಗೆ ಅದನ್ನು ತಿಳಿಯ ಹೇಳಿ' ಎಂದು ನಾರದರು ಪ್ರಾರ್ಥಿಸಿದರು.

ಬಲಂ ವಾವ ವಿಜ್ಞಾನಾತ್ ಭೂಯಃ । ಅಪೀಹ ಶತಂ ವಿಜ್ಞಾನವತಾಮೇಕೋ ಬಲವಾನಾಕಂಪಯತೇ । ಸ ಯದಾ ಬಲೀ ಭವತ್ಯಥೋತ್ಥಾತಾ ಭವತಿ । ಉತ್ತಿಷ್ಠನ್ ಪರಿಚರಿತಾ ಭವತಿ । ಪರಿಚರನ್ನುಪಸತ್ತಾ ಭವತಿ । ಉಪಸೀದನ್ ದ್ರಷ್ಟಾ ಭವತಿ । ಶ್ರೋತಾ ಭವತಿ । ಮಂತಾ ಭವತಿ । ಬೋದ್ಧಾ ಭವತಿ । ಕರ್ತಾ ಭವತಿ । ವಿಜ್ಞಾತಾ ಭವತಿ । ಬಲೇನ ವೈ ಪೃಥಿವೀ ತಿಷ್ಠತಿ । ಬಲೇನಾಂತರಿಕ್ಷಮ್। ಬಲೇನ ದ್ಯೌಃ । ಬಲೇನಾಪಃ । ಬಲೇನ ಪರ್ವತಾಃ । ಬಲೇನ ದೇವಮನುಷ್ಯಾಃ । ಬಲೇನ ಪಶವಶ್ಚ ವಯಾಂಸಿ ಚ ತೃಣ ವನಸ್ಪತಯಃ ಶ್ವಾಪದಾನ್ಯಾಕೀಟ ಪತಂಗ ಪಿಪೀಲಿಕಮ್ । ಬಲೇನ ವೈ ಲೋಕಃ ತಿಷ್ಠತಿ । ಬಲಮುಪಾಸ್ವ' ಇತಿ ॥

'ಯುಕ್ತಿಯಿಂದ ವಿವೇಚಿಸಿ ಸಂಪಾದಿಸಲ್ಪಟ್ಟ ದೃಢವಾದ ನಿರ್ಣಯವು ಆಂತರಿಕ ಬಲ, ದೇಹದಾರ್ಢ್ಯವು ಬಾಹ್ಯಬಲ, ಇವೆರಡಕ್ಕೂ ಅಭಿಮಾನಿಯಾಗಿರುವುದರಿಂದ ಬಲವೆನಿಸಿರುವ ಭೂತ ವಾಯ್ವಭಿಮಾನಿದೇವತೆಯು ವಿಜ್ಞಾನನಾಮಕನಾದ ಚಂದ್ರನಿಗಿಂತಲೂ ಶ್ರೇಷ್ಠನು. ಆಂತರಿಕಬಲಶಾಲಿಯೆನಿಸಿದ ಒಬ್ಬ ಜ್ಞಾನಿಯು. ಇಂತಹ ನಿರ್ಣಯವನ್ನು ಸಂಪಾದಿಸದೇ ಇರುವ ನೂರಾರು ಜ್ಞಾನಿಗಳನ್ನು, ತನ್ನ ಆ ಬಲದ ಸಹಾಯದಿಂದ ನಡುಗಿಸಬಲ್ಲನು. ಪುರುಷನು ಯಾವಾಗ ಆಂತರಿಕ ಬಲವುಳ್ಳವನಾಗುತ್ತಾನೋ ಆಗ ಸಂಸಾರ ಮೋಹದಿಂದ ಎಚ್ಚೆತ್ತವನಾಗುವನು. ಹೀಗೆ ಎಚ್ಚೆತ್ತವನು ಜ್ಞಾನಸಂಪಾದನೆಗಾಗಿ ಗುರುಗಳನ್ನು ಸೇವಿಸುವನು. ಗುರುಗಳನ್ನು ಸೇವಿಸಿದವನು ಅವರ ಪ್ರೀತಿಪಾತ್ರನೆನಿಸಿ ಆಪ್ತನಾಗುವನು. ಆಪ್ತನೆನಿಸಿದವನು ಶಾಸ್ತ್ರಶ್ರವಣ ಮಾಡಿದವನೂ, ಶಾಸ್ತ್ರಾರ್ಥ ವಿಚಾರ ಮಾಡಿದವನೂ, ಪರತತ್ತ್ವವನ್ನು ಸಾಕ್ಷಾತ್ಕರಿಸಿಕೊಂಡವನೂ, ವರ್ಣಾಶ್ರಮೋಚಿತ ಕರ್ಮಾನುಷ್ಠಾನಗೈಯುವವನೂ, ವಿಶೇಷಜ್ಞಾನವನ್ನು ಸಂಪಾದಿಸಿಕೊಂಡವನೂ ಆಗುವನು. ದೇಹದಾರ್ಢ್ಯರೂಪಬಲವುಳ್ಳವನು ಆವಶ್ಯಕವಾದ ಕೆಲಸಗಳನ್ನು ಮಾಡಲು ಎದ್ದೇಳುತ್ತಾನೆ. ಮೇಲೆದ್ದವನು ಎಲ್ಲಾ ಕಡೆ ತಿರುಗಾಡುತ್ತಾನೆ. ತಿರುಗಾಡುತ್ತಾ ತನಗೆ ಯೋಗ್ಯರಾದ ಗುರುಗಳನ್ನು ಸಮೀಪಿಸಿ, ಅವರನ್ನು ಸೇವಿಸಿ, ಅವರಿಗೆ ಪ್ರೀತಿಪಾತ್ರನೆನಿಸಿ, ಅವರ ಅನುಗ್ರಹದಿಂದ ಶಾಸ್ತ್ರಾರ್ಥಶ್ರವಣ ಹಾಗೂ ಶಾಸ್ತ್ರಾರ್ಥವಿಚಾರಗಳನ್ನು ಮಾಡಿ ಪರತತ್ತ್ವವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ. ದೇಹದಾರ್ಢ್ಯ- ವಿರುವುದರಿಂದಲೇ ವರ್ಣಾಶ್ರಮೋಚಿತ ಕರ್ಮಾನುಷ್ಠಾನಗೈಯುವನು. ಮೋಕ್ಷೋಪಯೋಗಿಯಾದ ವಿಶೇಷಜ್ಞಾನವನ್ನೂ ಹೊಂದುವನು. ಹೀಗೆ ಶ್ರೇಯಸ್ಸಿಗೆ ಆಂತರಿಕ ಹಾಗೂ ಬಾಹ್ಯಬಲಗಳೇ ಕಾರಣವಾಗಿರುವುದರಿಂದ ಬಲಾಭಿಮಾನಿಯಾದ ವಾಯುದೇವನು

ಶ್ರೇಷ್ಠನೆಂದು ಸಿದ್ಧಿಸುತ್ತದೆ. ಬಲಾಭಿಮಾನಿಯಾದ ಈ ವಾಯುದೇವನ ಅನುಗ್ರಹದಿಂದಲೇ ಪೃಥಿವೀ, ಅಂತರಿಕ್ಷ, ಸ್ವರ್ಗ, ನೀರು, ಪರ್ವತಗಳು ಇವುಗಳ ಅಭಿಮಾನಿದೇವತೆಗಳೂ, ಮನುಷ್ಯರಾಗಿ ಅವತರಿಸಿದ ದೇವತೆಗಳೂ ಒಳ್ಳೆಯ ಸ್ಥಿತಿಯುಳ್ಳವರಾಗಿರುವರು. ಪಶುಗಳೂ, ಹಕ್ಕಿಗಳೂ, ತೃಣಗಳೂ, ಮರಗಳೂ, ದುಷ್ಟಮೃಗಗಳೂ, ಹುಳು, ಚಿಟ್ಟೆ, ಇರುವೆ ಪರ್ಯಂತ ಎಲ್ಲಾ ಜೀವಿಗಳೂ ಬಲಾಭಿಮಾನಿಯಾದ ಈ ವಾಯುದೇವನ ಅನುಗ್ರಹದಿಂದಲೇ ನಿಯತವಾದ ಸ್ಥಿತಿಯುಳ್ಳವುಗಳಾಗಿವೆ. ಇಂತಹ ಬಲಾಭಿಮಾನಿಯಾದ ಭೂತ ವಾಯ್ವಾಭಿಮಾನಿ ದೇವತೆಯಲ್ಲಿ ನಿಯಾಮಕನಾಗಿ ಪರಬ್ರಹ್ಮನಿರುವನೆಂದು ಆರಾಧಿಸು.

> 'ಸ ಯೋ ಬಲಂ ಬ್ರಹ್ಮೇತ್ಯುಪಾಸ್ತೇ । ಯಾವದ್ಬಲಸ್ಯ ಗತಂ ತತ್ರಾಸ್ಯ ಯಥಾಕಾಮಚಾರೋ ಭವತಿ ಯೋ ಬಲಂ ಬ್ರಹ್ಮೇತ್ಯುಪಾಸ್ತೇ' । 'ಅಸ್ತಿ ಭಗವೋ ಬಲಾತ್ ಭೂಯಃ?' ಇತಿ। 'ಬಲಾದ್ವಾವ ಭೂಯೋಽಸ್ತಿ' ಇತಿ। 'ತನ್ಮೇ ಭಗವಾನ್ ಬ್ರವೀತು' ಇತಿ।

ಯಾರು ಬಲನೆನಿಸಿಕೊಂಡಿರುವ ಈ ವಾಯುದೇವನಲ್ಲಿ ಪರಬ್ರಹ್ಮನನ್ನು ಉಪಾಸಿಸುವನೋ ಅವನು ಈ ಬಲಾಭಿಮಾನಿಯ ಲೋಕವನ್ನು ಹೊಂದಿ, ಅಲ್ಲಿ ಎಷ್ಟು ಪ್ರದೇಶದಲ್ಲಿ ಬಲಾಭಿಮಾನಿಯ ವ್ಯಾಪ್ತಿಯಿದೆಯೋ ಅಲ್ಲೆಲ್ಲಾ ಇಚ್ಛಾನುಸಾರವಾಗಿ ತಿರುಗಾಡಲು ಶಕ್ತನಾಗುವನು ಎಂದು ಸನತ್ಕುಮಾರರು ಉಪದೇಶಿಸಲು ನಾರದರು 'ಪೂಜ್ಯರೇ, ಈ ಬಲಾಭಿಮಾನಿ ವಾಯುದೇವನಿಗಿಂತಲೂ ಶ್ರೇಷ್ಠರು ಇರುವರೇನು?' ಎಂದು ಪ್ರಶ್ನಿಸಿದರು. ಇದಕ್ಕೆ ಉತ್ತರವಾಗಿ ಸನತ್ಕುಮಾರರು ಬಲಾಭಿಮಾನಿಗಿಂತಲೂ ಶ್ರೇಷ್ಠರಿರುವರು' ಎಂದು ಹೇಳಿದಾಗ ನಾರದರು 'ಪೂಜ್ಯರಾದ ತಾವು ನನಗೆ ಅದನ್ನು ತಿಳಿಯಹೇಳಿ' ಎಂದು ಪ್ರಾರ್ಥಿಸಿದರು.

> ಅನ್ನಂ ವಾವ ಬಲಾತ್ ಭೂಯಃ । ತಸ್ಮಾದ್ಯದ್ಯಪಿ ದಶರಾತ್ರೀರ್ನಾಶ್ನೀಯಾತ್ ಯದ್ಯುಹ ಜೀವೇದಥಾಽದ್ರಷ್ಟಾಽಶ್ರೋತಾಽಮಂತಾಽಬೋದ್ಧಾಽಕರ್ತಾಽ-ವಿಜ್ಞಾತಾ ಭವತಿ । ಅಥಾನ್ನಸ್ಯಾಶೀ ದ್ರಷ್ಟಾ ಭವತಿ । ಶ್ರೋತಾ ಭವತಿ । ಮಂತಾ ಭವತಿ । ಬೋದ್ಧಾ ಭವತಿ । ಕರ್ತಾ ಭವತಿ । ವಿಜ್ಞಾತಾ ಭವತಿ । ಅನ್ನಮುಪಾಸ್ವ' ಇತಿ।

ಬಲಾಭಿಮಾನಿಯಾದ ಪ್ರವಹನಿಗಿಂತಲೂ, ಅನ್ನಾಭಿಮಾನಿಯಾಗಿದ್ದು ಅನ್ನನೆನಿಸಿರುವ ಅನಿರುದ್ಧನು ಶ್ರೇಷ್ಠನು. ಈ ಅನ್ನಾಭಿಮಾನಿಯು ಶ್ರೇಷ್ಠನಾಗಿರುವುದರಿಂದಲೇ ಹತ್ತು ದಿವಸ ಉಣ್ಣದೇ ಇರುವವನು ಒಂದು ವೇಳೆ ಜೀವಿಸಿದರೂ ಶ್ರವಣ, ಮನನ,

ಸಾಕ್ಷಾತ್ಕಾರ, ಸ್ವಕರ್ಮಾಚರಣೆ, ವಿಶೇಷವಾದ ಅರಿವು ಎಂಬೀ ಯಾವ ವ್ಯಾಪಾರಗಳಿಗೂ ಅಶಕ್ತನೆನಿಸುವನು. ಅನ್ನವನ್ನು ಸೇವಿಸಿದನೆಂದರೆ ಆಗ ಶ್ರವಣ, ಮನನ, ಸಾಕ್ಷಾತ್ಕಾರ, ನಾನಾ ಕರ್ಮಾಚರಣೆ, ವಿಶೇಷವಾದ ಅರಿವು ಎಂಬೀ ಎಲ್ಲಾ ವ್ಯಾಪಾರಗಳಲ್ಲೂ ಶಕ್ತನೆನಿಸುವನು. ಅನ್ನಕ್ಕಭಿಮಾನಿಯಾಗಿದ್ದು ಅನ್ನನೆನಿಸಿರುವ ಅನಿರುದ್ಧನಲ್ಲಿ ಪರಬ್ರಹ್ಮನಿರುವನೆಂದು ಉಪಾಸಿಸು.

'ಸ ಯೋऽನ್ನಂ ಬ್ರಹ್ಮೇತ್ಯುಪಾಸ್ತೇ ಅನ್ನವತೋ ಹ ವೈ ಲೋಕಾನ್ ಪಾನವತೋऽಭಿ-ಸಿದ್ಧ್ಯತಿ। ಯಾವದನ್ನಸ್ಯ ಗತಂ ತತ್ರಾಸ್ಯ ಯಥಾಕಾಮಚಾರೋ ಭವತಿ ಯೋऽನ್ನಂ ಬ್ರಹ್ಮೇತ್ಯುಪಾಸ್ತೇ'। 'ಅಸ್ತಿ ಭಗವೋऽನ್ನಾದ್ಭೂಯಃ?' ಇತಿ। ಅನ್ನಾದ್ವಾವ ಭೂಯೋऽಸ್ತಿ' ಇತಿ। 'ತನ್ಮೇ ಭಗವಾನ್ ಬ್ರವೀತು' ಇತಿ।

'ಯಾರು ಅನ್ನನೆನಿಸಿರುವ ಅನಿರುದ್ಧನಲ್ಲಿ ಪರಬ್ರಹ್ಮನಿರುವನೆಂದು ಉಪಾಸಿಸುವನೋ ಅವನು ಅನ್ನಪಾನಾದಿಗಳಿಂದ ಸಮೃದ್ಧವಾದ ಅನಿರುದ್ಧನ ಲೋಕಗಳನ್ನು ಹೊಂದುತ್ತಾನೆ. ಅಲ್ಲಿ ಎಲ್ಲಿಯ ತನಕ ಅನಿರುದ್ಧನ ವ್ಯಾಪ್ತಿಯಿದೆಯೋ ಅಲ್ಲೆಲ್ಲಾ ಇಚ್ಛಾನುಸಾರವಾಗಿ ಸಂಚರಿಸಲು ಶಕ್ತನಾಗುವನು' ಎಂದು ಸನತ್ಕುಮಾರರು ಉಪದೇಶಿಸಿದರು. ಆಗ ನಾರದರು 'ಪೂಜ್ಯರೇ ! ಅನ್ನಾಭಿಮಾನಿಗಿಂತಲೂ ಶ್ರೇಷ್ಠರೆನಿಸಿದವರಿರುವರೇನು ?' ಎಂದು ಪ್ರಶ್ನಿಸಲು, ಸನತ್ಕುಮಾರರು 'ಅನ್ನಾಭಿಮಾನಿಗಿಂತಲೂ ಉತ್ತಮರಿರುವರು' ಎಂದುತ್ತರಿಸಿದರು. 'ಹಾಗಿದ್ದರೆ ಪೂಜ್ಯರಾದ ತಾವು ನನಗದನ್ನು ಉಪದೇಶಿಸಿರಿ' ಎಂದು ನಾರದರು ಪ್ರಾರ್ಥಿಸಿದರು.

'ಆಪೋ ವಾವಾನ್ನಾತ್ ಭೂಯಸ್ಯಃ । ತಸ್ಮಾದ್ಯದಾ ಸುವೃಷ್ಟಿರ್ನ ಭವತಿ ವ್ಯಾಧೀಯಂತೇ ಪ್ರಾಣಾ 'ಅನ್ನಂ ಕನೀಯೋ ಭವಿಷ್ಯತಿ' ಇತಿ' । 'ಅಥ ಯದಾ ವೃಷ್ಟಿರ್ಭವತ್ಯಾನಂದಿನಃ ಪ್ರಾಣಾ ಭವಂತಿ 'ಅನ್ನಂ ಬಹು ಭವಿಷ್ಯತಿ' ಇತಿ । ಅಪ ಏವೇಮಾ ಮೂರ್ತಾ ಯೇऽಯಂ ಪೃಥಿವೀ, ಯದಂತರಿಕ್ಷಂ, ಯತ್ ದ್ಯೌಃ, ಯತ್ ಪರ್ವತಾಃ, ಯತ್ ದೇವಮನುಷ್ಯಾಃ, ಯತ್ ಪಶವಶ್ಚ ವಯಾಂಸಿ ಚ ತೃಣ ವನಸ್ಪತಯಃ ಶ್ವಾಪದಾನ್ಯಾಕೀಟಪತಂಗಪಿಪೀಲಿಕಮ್ । ಆಪ ಏವೇಮಾ ಮೂರ್ತಾಃ। ಆಪ ಉಪಾಸ್ವ' ಇತಿ ॥

ಅನ್ನಾಭಿಮಾನಿ ಅನಿರುದ್ಧನಿಗಿಂತಲೂ, ತೃಪ್ತಿಯೆಂಬ ಅಂತರಜಲ ಹಾಗೂ ದ್ರವರೂಪವಾದ ಬಾಹ್ಯಜಲ ಎಂಬೀ ಎರಡು ರೀತಿಯ ಜಲಕ್ಕೂ ಅಭಿಮಾನಿಯಾಗಿರುವುದರಿಂದಲೂ, ದೇಹವನ್ನು ವ್ಯಾಪಿಸಿಕೊಂಡಿರುವುದರಿಂದಲೂ 'ಆಪ್' ಎನಿಸಿಕೊಂಡಿರುವ

ಅಹಂಕಾರಿಕ ಪ್ರಾಣನು ಉತ್ತಮನಾಗಿರುವನು. ಅನ್ನಾಭಿಮಾನಿಗಿಂತ ಅಭಿಮಾನಿಯು ಶ್ರೇಷ್ಠನಾಗಿರುವುದರಿಂದಲೇ ಯಾವಾಗ ಚೆನ್ನಾಗಿ ಮಳೆಯಾಗುವುದಿಲ್ಲವೋ ಆಗ ಅನ್ನವು ಕಡಿಮೆ ಉಂಟಾಗುವುದೆಂದು ಪ್ರಾಣಿಗಳು ವ್ಯಥೆಪಡುತ್ತವೆ. ಯಾವಾಗ ಚೆನ್ನಾಗಿ ಮಳೆ ಸುರಿಯುತ್ತದೋ ಆಗ ಬಹಳ ಅನ್ನವುಂಟಾಗುವುದೆಂದು ಸಂತೋಷಗೊಳ್ಳುತ್ತವೆ. ಭೂಮಿ, ಆಕಾಶ, ಸ್ವರ್ಗ, ಪರ್ವತಗಳು, ದೇವತೆಗಳು, ಮನುಷ್ಯರು, ಪಶುಗಳು, ಪಕ್ಷಿಗಳು, ಹುಲ್ಲು, ಮರಗಳು, ಚಿರತೆಗಳು, ಹುಳು, ಹಾತೆ, ಇರುವೆ ವರೆಗಿನ ಎಲ್ಲಾ ಜಂತುಗಳು, ಹೀಗೆ ಎಲ್ಲಾ ಮೂರ್ತ ವಸ್ತುಗಳು ಅಬಭಿಮಾನಿಯ ಅಧೀನವಾಗಿರುವುದರಿಂದಲೇ 'ಆಪ್' ಎನಿಸಿಕೊಂಡಿವೆ. ಅಬಭಿಮಾನಿ ಅಹಂಕಾರಿಕ ಪ್ರಾಣನಲ್ಲಿ ಪರಬ್ರಹ್ಮನಿರುವನೆಂದು ಆರಾಧಿಸು.

'ಸ ಯೋಽಪೋ ಬ್ರಹ್ಮೇತ್ಯುಪಾಸ್ತೇ ಆಪ್ನೋತಿ ಸರ್ವಾನ್ ಕಾಮಾನ್ ತೃಪ್ತಿಮಾನ್ ಭವತಿ। ಯಾವದಪಾಂ ಗತಂ ತತ್ರಾಸ್ಯ ಯಥಾಕಾಮಚಾರೋ ಭವತಿ ಯೋಽಪೋ ಬ್ರಹ್ಮೇತ್ಯುಪಾಸ್ತೇ' । 'ಅಸ್ತಿ ಭಗವೋಽದ್ಭ್ಯೋ ಭೂಯ?' ಇತಿ । 'ಅದ್ಭ್ಯೋವಾವ ಭೂಯೋಽಸ್ತಿ' ಇತಿ। 'ತನ್ಮೇ ಭಗವಾನ್ ಬ್ರವೀತು' ಇತಿ।

ಅಬಭಿಮಾನಿ ಅಹಂಕಾರಿಕ ಪ್ರಾಣನಲ್ಲಿ ಪರಮಾತ್ಮನನ್ನು ಯಾರು ಆರಾಧಿಸುವನೋ ಅವನು ಎಲ್ಲ ಅಭೀಷ್ಟಗಳನ್ನು ಹೊಂದಿ ತೃಪ್ತನಾಗುವನು. ಈ ಪ್ರಾಣನ ವ್ಯಾಪ್ತಿಯು ಎಲ್ಲಿಯತನಕ ಇರುವುದೋ ಅಲ್ಲೆಲ್ಲಾ ಉಪಾಸಕನು ಇಚ್ಛಾನುಸಾರವಾಗಿ ಸಂಚರಿಸಲು ಶಕ್ತನಾಗುವನು. ಹೀಗೆ ಸನತ್ಕುಮಾರರು ಉಪದೇಶಿಸಿದಾಗ ನಾರದರು 'ಪೂಜ್ಯರೇ ! ಅಬಭಿಮಾನಿಗಿಂತಲೂ ಉತ್ತಮರಾದವರಿರುವರೇನು?' ಎಂದು ಪ್ರಶ್ನಿಸಿದರು. ಆಗ ಸನತ್ಕುಮಾರರು 'ಅಬಭಿಮಾನಿಗಿಂತಲೂ ಉತ್ತಮರಾದವರಿರುವರು' ಎಂದುತ್ತರಿಸಲು 'ಹಾಗಿದ್ದಲ್ಲಿ ಅದನ್ನು ಪೂಜ್ಯರಾದ ತಾವು ನನಗೆ ತಿಳಿಸಿ ಕೊಡಿ' ಎಂದು ನಾರದರು ಪ್ರಾರ್ಥಿಸಿದರು.

'ತೇಜೋವಾವಾದ್ಭ್ಯೋಭೂಯಃ। ತದ್ವಾ ಏತದ್ವಾಯುಮಾಗೃಹ್ಯಾಕಾಶಮಭಿತಪತಿ ತದಾಹುರ್ನಿಶೋಚತಿ ನಿತಪತಿ ವರ್ಷಿಷ್ಯತಿ ವಾ ಇತಿ । ತೇಜ ಏವ ತತ್ ಪೂರ್ವಂ ದರ್ಶಯಿತ್ವಾಽಥಾऽऽಪಃ ಸೃಜತೇ । ತದೇತದೂರ್ಧ್ವಾಭಿಶ್ಚತಿರಶ್ಚೀಭಿಶ್ಚ ವಿದ್ಯುದ್ಭಿರಾಹ್ರಾದಾಶ್ಚರಂತಿ । ತಸ್ಮಾದಾಹುರ್ವಿದ್ಯೋತತೇ ಸ್ತನಯತಿ ವರ್ಷಿಷ್ಯತಿ ವಾ ಇತಿ। ತೇಜ ಏವ ತತ್ ಪೂರ್ವಂ ದರ್ಶಯಿತ್ವಾಽಥಾऽऽಪಃ ಸೃಜತೇ। ತೇಜ ಉಪಾಸ್ಸ್ವ' ಇತಿ।

ಪ್ರತಿಭಾ ಎಂಬ ಅಂತರತೇಜಸ್ಸು ಹಾಗೂ ಬಾಹ್ಯತೇಜಸ್ಸು ಇವುಗಳಿಗೆ ಅಭಿಮಾನಿಯಾಗಿದ್ದು ಓಜೋರೂಪ, ಅಂದರೆ ಇತರರನ್ನು ತಿರಸ್ಕರಿಸುವ ಶಕ್ತಿರೂಪನಾದುದರಿಂದ ತೇಜ ಎಂಬ ಹೆಸರುಳ್ಳ ಪುರಂದರನೂ ಅವನಿಗೆ ಸಮನಾದ ಕಾಮನೂ ಅಪ್ ನಾಮಕ ಅಹಂಕಾರಿಕ ಪ್ರಾಣನಿಗಿಂತ ಉತ್ತಮ. ಹೀಗೆ ಪುರಂದರನು ಶ್ರೇಷ್ಠನಾಗಿರುವುದರಿಂದಲೇ ತೇಜನೆನಿಸಿಕೊಂಡಿರುವ ಅವನು ವಾಯುವನ್ನು ನಿಶ್ಚಲಗೊಳಿಸಿ ಆಕಾಶದಲ್ಲೆಲ್ಲಾ ತಾಪವನ್ನುಂಟುಮಾಡುತ್ತಾನೆ. ಆಗ ಲೋಕದ ಜನರು ಆದಿತ್ಯನು ಈಗ ಎಲ್ಲರಿಗೂ ದುಃಖವನ್ನುಂಟುಮಾಡುತ್ತಿದ್ದಾನೆ. ಏಕೆಂದರೆ ಬಹಳ ತಾಪವನ್ನುಂಟು- ಮಾಡುತ್ತಿದ್ದಾನೆ. ಆದುದರಿಂದ ಬೇಗನೆ ಮಳೆ ಸುರಿಸಲಿರುವನು ಎಂದು ಹೇಳಿಕೊಳ್ಳುತ್ತಾರೆ. ತೇಜೋನಾಮಕ ಪುರಂದರನೇ ತೇಜಸ್ಸನ್ನು ಮೊದಲು ವ್ಯಕ್ತಮಾಡಿ ಆಮೇಲೆ ನೀರನ್ನು ಸುರಿಸುತ್ತಾನೆ. ತೇಜೋಭಿಮಾನಿಯಾದ ಪುರಂದರನಿಂದಾಗಿಯೇ ಗುಡುಗಿನಿಂದ ಕೂಡಿದ ಮೇಘಗಳು ಮೇಲ್ಮುಖವಾಗಿಯೂ ಅಡ್ಡವಾಗಿಯೂ ಬೆಳಗುವ ಮಿಂಚುಗಳಿಂದ ಕೂಡಿ ಸಂಚರಿಸುತ್ತದೆ. ಆದ್ದರಿಂದ ಅದನ್ನು ನೋಡಿ ಜನರು ಮಿಂಚುತ್ತಿದೆ, ಗುಡುಗುತ್ತಿದೆ. ಆದ್ದರಿಂದ ಮಳೆ ಸುರಿಯುತ್ತದೆ ಎನ್ನುತ್ತಾರೆ. ತೇಜಸ್ಸಿಗೆ ಅಭಿಮಾನಿಯಾದ ಪುರಂದರನೇ ತೇಜೋರೂಪದ ಮಿಂಚನ್ನು ತೋರಿಸಿ ಮಳೆಯನ್ನು ಸುರಿಸುತ್ತಾನೆ. ತೇಜೋಭಿಮಾನಿಯಾದ ಪುರಂದರನಲ್ಲಿ ಪರಬ್ರಹ್ಮನನ್ನು ಉಪಾಸಿಸು.'

'ಸ ಯಸ್ತೇಜೋ ಬ್ರಹ್ಮೇತ್ಯುಪಾಸ್ತೇ ತೇಜಸ್ವೀ ವೈಸ ತೇಜಸ್ವತೋ ಲೋಕಾನ್ ಭಾಸ್ವತೋऽಪಹತತಮಸ್ಕಾನಭಿಸಿದ್ಧ್ಯತಿ । ಯಾವತ್ ತೇಜಸೋ ಗತಂ ತತ್ರಾಸ್ಯ ಯಥಾಕಾಮಚಾರೋ ಭವತಿ ಯಸ್ತೇಜೋ ಬ್ರಹ್ಮೇತ್ಯುಪಾಸ್ತೇ' । 'ಅಸ್ತಿ ಭಗವಸ್ತೇಜಸೋ ಭೂಯಃ?' ಇತಿ । 'ತೇಜಸೋ ಭೂಯೋऽಸ್ತಿ' ಇತಿ । 'ತನ್ಮೇ ಭಗವಾನ್ ಬ್ರವೀತು' ಇತಿ ।

'ಯಾರು ತೇಜಸ್ಸಿಗೆ ಅಭಿಮಾನಿಯಾಗಿದ್ದು ತೇಜ ಎಂಬ ಹೆಸರುಳ್ಳ ಪುರಂದರನಲ್ಲಿ ನಿಯಾಮಕನಾಗಿರುವ ಪರಬ್ರಹ್ಮನನ್ನು ಉಪಾಸಿಸುವನೋ, ಅವನು ತೇಜಸ್ವಿಯಾಗಿ ತೇಜೋಭಿಮಾನಿಯಾದ ಪುರಂದರನ ಸುಡುವ ಹಾಗೂ ಪ್ರಕಾಶಗೊಳಿಸುವ ಶಕ್ತಿಗಳುಳ್ಳ, ಅಜ್ಞಾನಂಧಾಕಾರರಹಿತವಾದ ಲೋಕಗಳನ್ನು ಪಡೆಯುತ್ತಾನೆ. ತೇಜ ಎನಿಸಿರುವ ಪುರಂದರನ ವ್ಯಾಪ್ತಿಯು ಎಲ್ಲಿಯ ತನಕ ಇದೆಯೋ ಅಲ್ಲೆಲ್ಲಾ ಇಚ್ಛಾನುಸಾರವಾಗಿ ಸಂಚರಿಸಲು ಶಕ್ತನಾಗುವನು' ಎಂದು ಸನತ್ಕುಮಾರರು ಉಪದೇಶಿಸಿದರು. ಆಗ ನಾರದರು 'ಪೂಜ್ಯರೇ! ತೇಜೋಭಿಮಾನಿಯಾದ ಪುರಂದರನಿಗಿಂತಲೂ ಉತ್ತಮರಾದವರಿರುವರೇನು ?'

ಎಂದು ಪ್ರಶ್ನಿಸಲು, ಅದಕ್ಕೆ ಉತ್ತರವಾಗಿ ಸನತ್ಕುಮಾರರು 'ತೇಜೋಭಿಮಾನಿಯಾದ ಪುರಂದರನಿಗಿಂತಲೂ ಉತ್ತಮರಿರುವರು' ಎಂದು ಹೇಳಿದರು. 'ಹಾಗಿದ್ದಲ್ಲಿ ಪೂಜ್ಯರಾದ ತಾವು ನನಗೆ ಅದನ್ನು ಉಪದೇಶಿಸಿರಿ' ಎಂದು ನಾರದರು ಪ್ರಾರ್ಥಿಸಿದರು.

'ಆಕಾಶೋ ವಾವತೇಜಸೋ ಭೂಯಾನ್। ಆಕಾಶೇ ವೈ ಸೂರ್ಯಾಚಂಪ್ರಮಸಾವುಭೌ ವಿದ್ಯುನ್ನಕ್ಷತ್ರಾಣಗ್ನಿಃ । ಆಕಾಶೇನಾಹ್ವಯತಿ। ಆಕಾಶೇನ ಶೃಣೋತಿ । ಆಕಾಶೇನ ಪ್ರತಿಶೃಣೋತಿ । ಆಕಾಶೇ ರಮತೇ। ಆಕಾಶೇ ನ ರಮತೇ । ಆಕಾಶೇ ಜಾಯತೇ ಆಕಾಶಮಭಿಜಾಯತೇ । ಆಕಾಶಮುಪಾಸ್ವ' ಇತಿ ॥

ತೇಜಸ್ಸಿಗೆ ಅಭಿಮಾನಿಯಾದ ಪುರಂದರನಿಗಿಂತಲೂ ಬಾಹ್ಯ ಹಾಗೂ ಆಂತರಿಕ ಆಕಾಶಗಳಿಗೆ ಅಭಿಮಾನಿನಿಯಾಗಿದ್ದು ಚೆನ್ನಾಗಿ ಪ್ರಕಾಶಿಸುವುದರಿಂದ ಆಕಾಶ ಎಂಬ ಹೆಸರುಳ್ಳ ಉಮಾದೇವಿಯು ಶ್ರೇಷ್ಠಳು. ಆಕಾಶಾಭಿಮಾನಿನಿಯ ಅಧೀನದಲ್ಲಿ ಸೂರ್ಯ-ಚಂದ್ರರು ಮಿಂಚು, ನಕ್ಷತ್ರ, ಅಗ್ನಿ ಇವರೆಲ್ಲರೂ ಇರುವರು. ಆಕಾಶಾಭಿಮಾನಿನಿಯ ಪ್ರೇರಣೆಯಿಂದಲೇ ಭಕ್ತನು ದೇವತೆಗಳನ್ನು ಆಹ್ವಾನಿಸುವನು. ಆಕಾಶಾಭಿಮಾನಿನಿಯ ಪ್ರೇರಣೆಯಿಂದಲೇ ದೇವತೆಗಳು ಆ ಆಹ್ವಾನವನ್ನು ಕೇಳಿಸಿಕೊಳ್ಳುವರು. ಆಕಾಶಾಭಿಮಾನಿನಿಯ ಪ್ರೇರಣೆಯಿಂದಲೇ ದೇವತೆಗಳು ಹೇಳಿದ ಮಾತನ್ನು ಭಕ್ತನು ಕೇಳಿಸಿಕೊಳ್ಳುವನು. ಆಕಾಶಾಭಿಮಾನಿನಿಯ ಪ್ರೇರಣೆಯಿಂದಲೇ ಸುಖ-ದುಃಖಗಳನ್ನು ಪ್ರತಿಯೊಬ್ಬನೂ ಅನುಭವಿಸುವನು. ಆಕಾಶಾಭಿಮಾನಿನಿಯ ಪ್ರೇರಣೆಯಿಂದಲೇ ಸಂತತಿ ಹುಟ್ಟುವುದು. ಆಕಾಶಾಭಿಮಾನಿನಿಯ ಪ್ರೇರಣೆಯಿಂದಲೇ ಎಲ್ಲವೂ ಹುಟ್ಟುತ್ತದೆ. ಆಕಾಶಾಭಿಮಾನಿನಿಯಲ್ಲಿ ಪರಬ್ರಹ್ಮನನ್ನು ಉಪಾಸಿಸು.

'ಸ ಯ ಆಕಾಶಂ ಬ್ರಹ್ಮೇತ್ಯುಪಾಸ್ತೇ ಆಕಾಶವತೋ ಹ ವೈ ಸ ಲೋಕಾನ್ ಪ್ರಕಾಶವತೋಽಸಂಬಾಧಾನುರುಗಾಯವತೋಽಭಿಸಿದ್ಧ್ಯತಿ । ಯಾವದಾಕಾಶಸ್ಯ ಗತಂ ತತ್ರಾಸ್ಯ ಯಥಾಕಾಮಚಾರೋ ಭವತಿ ಯ ಆಕಾಶಂ ಬ್ರಹ್ಮೇತ್ಯುಪಾಸ್ತೇ' । 'ಅಸ್ತಿ ಭಗವ ಆಕಾಶಾತ್ ಭೂಯಃ?' ಇತಿ। 'ಆಕಾಶಾದ್ವಾವ ಭೂಯೋಽಸ್ತಿ' ಇತಿ। ತನ್ಮೇ ಭಗವಾನ್ ಬ್ರವೀತು' ಇತಿ।

'ಯಾರು ಆಕಾಶಾಭಿಮಾನಿನಿ ಪಾರ್ವತಿಯಲ್ಲಿ ಪರಬ್ರಹ್ಮನನ್ನು ಉಪಾಸಿಸುವನೋ ಅವನು ಆಕಾಶಾಭಿಮಾನಿನಿ ಪಾರ್ವತಿಯ ಅಧೀನದಲ್ಲಿರುವ ಪ್ರಕಾಶಯುಕ್ತವಾಗಿರುವ ಜನನಿಬಿಡವಾಗದಿರುವ ಶ್ರೀಹರಿಯಿರುವ ಲೋಕಗಳನ್ನು ಹೊಂದುತ್ತಾನೆ. ಅಲ್ಲಿ ಎಲ್ಲಿಯ ತನಕ

ಆಕಾಶಾಭಿಮಾನಿನಿ ಪಾರ್ವತಿಯ ವ್ಯಾಪ್ತಿಯಿದೆಯೋ ಅಲ್ಲೆಲ್ಲಾ ಇಚ್ಛಾನುಸಾರ ಸಂಚರಿಲು ಶಕ್ತನಾಗುವನು' ಹೀಗೆ ಸನತ್ಕುಮಾರರು ಉಪದೇಶಿಸಿದಾಗ ನಾರದರು 'ಪೂಜ್ಯರೇ ! ಆಕಾಶಾಭಿಮಾನಿನಿಗಿಂತಲೂ ಉತ್ತಮರಿರುವರೇನು?' ಎಂದು ಪ್ರಶ್ನಿಸಿದರು. ಸನತ್ಕುಮಾರರು 'ಆಕಾಶಾಭಿಮಾನಿನಿ ಪಾರ್ವತಿಗಿಂತಲೂ ಉತ್ತಮರಿರುವರು' ಎಂದು ಹೇಳಲು, 'ಹಾಗಿದ್ದಲ್ಲಿ ಪೂಜ್ಯರಾದ ತಾವು ನನಗೆ ಅದನ್ನು ತಿಳಿಯಹೇಳಿ' ಎಂದು ನಾರದರು ಪ್ರಾರ್ಥಿಸಿದರು.

'ಸ್ಮರೋ ವಾ ಆಕಾಶಾತ್ ಭೂಯಾನ್ । ತಸ್ಮಾದ್ಯದ್ಯಪಿ ಬಹವ ಆಸೀರನ್ನ ಸ್ಮರಂತೋ ನೈವ ತೇ ಕಂಚನ ಶೃಣುಯುಃ । ನ ಮನ್ವೀರನ್। ನ ವಿಜಾನೀರನ್ । ಯದಾ ವಾವ ತೇ ಸ್ಮರೇಯುರಥ ಶೃಣುಯುಃ । ಅಥ ಮನ್ವೀರನ್ । ಅಥ ವಿಜಾನೀರನ್ । ಸ್ಮರೇಣ ವೈ ಪುತ್ರಾನ್ ವಿಜಾನಾತಿ । ಸ್ಮರೇಣ ಪಶೂನ್ । ಸ್ಮರಮುಪಾಸ್ಸ' ಇತಿ ॥

'ಆಕಾಶಾಭಿಮಾನಿನಿಯಾದ ಪಾರ್ವತಿಗಿಂತಲೂ ಸ್ಥಿರಸ್ಮರಣೆಗೆ ಅಭಿಮಾನಿಯಾಗಿರುವುದರಿಂದಲೂ, ಏಕಪ್ರಕಾರವಾಗಿ ಭಗವಂತನ ಆರಾಧನೆಯಲ್ಲಿ ನಿರತರಾದುದರಿಂದಲೂ, ಸ್ಮರನೆನಿಸಿರುವ ರುದ್ರದೇವರು ಉತ್ತಮರು. ಆದುದರಿಂದ ಅನೇಕ ಜನರು ಗುರುಗಳ ಬಳಿ ಕುಳಿತರೂ, ಅವರು ಸ್ಮರಣಶಕ್ತಿರಹಿತರಾದರೆ ಶ್ರವಣ, ಮನನ, ಜ್ಞಾನಗಳಿಂದ ವಿರಹಿತರೇ ಆಗುವರು. ಸ್ಮರಣಶಕ್ತಿ ಉಳ್ಳವರಾದರೆ ಶ್ರವಣ, ಮನನ, ಜ್ಞಾನಸಂಪನ್ನರಾಗುವರು. ಸ್ಥಿರಸ್ಮರಣೆಗೆ ಅಭಿಮಾನಿಯಾದ ರುದ್ರದೇವರ ಅನುಗ್ರಹದಿಂದಲೇ ಜನರು ತಮ್ಮ ಮಕ್ಕಳನ್ನೂ ಪಶುಗಳನ್ನೂ ಸದಾ ಗುರುತಿಸುವರು. ಸ್ಥಿರಸ್ಮರಣೆಗೆ ಅಭಿಮಾನಿಯಾದ ರುದ್ರದೇವರಲ್ಲಿ ಪರಬ್ರಹ್ಮನಿರುವನೆಂದು ಉಪಾಸಿಸು.

'ಸ ಯಃ ಸ್ಮರಂ ಬ್ರಹ್ಮೇತ್ಯುಪಾಸ್ತೇ ಯಾವತ್ ಸ್ಮರಸ್ಯ ಗತಂ ತತ್ರಾಸ್ಯ ಯಥಾಕಾಮಚಾರೋ ಭವತಿ ಯಃ ಸ್ಮರಂ ಬ್ರಹ್ಮೇತ್ಯುಪಾಸ್ತೇ । 'ಅಸ್ತಿ ಭಗವಃ ಸ್ಮರಾತ್ ಭೂಯಃ?' ಇತಿ । 'ಸ್ಮರಾದ್ವಾವ ಭೂಯೋಽಸ್ತಿ' ಇತಿ । 'ತನ್ಮೇ ಭಗವಾನ್ ಬ್ರವೀತು' ಇತಿ ।

'ಯಾರು ಸ್ಥಿರಸ್ಮರಣಾಭಿಮಾನಿ ರುದ್ರದೇವರಲ್ಲಿ ಪರಬ್ರಹ್ಮನನ್ನು ಉಪಾಸಿಸುವನೋ ಅವನು ಆ ರುದ್ರದೇವರ ಲೋಕಗಳನ್ನು ಸೇರಿ ಅಲ್ಲಿ ಅವರ ವ್ಯಾಪ್ತಿಯು ಎಲ್ಲಿಯ ತನಕ ಇರುವುದೋ ಅಲ್ಲೆಲ್ಲಾ ಇಚ್ಛಾನುಸಾರವಾಗಿ ಸಂಚರಿಸಲು ಶಕ್ತನಾಗುವನು' ಎಂದು ಸನತ್ಕುಮಾರರು ಉಪದೇಶಿಸಿದಾಗ ನಾರದರು 'ಪೂಜ್ಯರೇ ! ಸ್ಥಿರಸ್ಮರಣಾಭಿಮಾನಿ ರುದ್ರದೇವರಿಗಿಂತಲೂ ಶ್ರೇಷ್ಠರಾದವರಿರುವರೇನು ?' ಎಂದು ಪ್ರಶ್ನಿಸಿದರು. ಆಗ

ಸನತ್ಕುಮಾರರು 'ಸ್ಥಿರಸ್ಮರಣಾಭಿಮಾನಿ ರುದ್ರದೇವರಿಗಿಂತಲೂ ಶ್ರೇಷ್ಠರಿರುವರು' ಎಂದುತ್ತರಿಸಲು, 'ಹಾಗಿದ್ದಲ್ಲಿ ಪೂಜ್ಯರಾದ ತಾವು ನನಗೆ ಅದನ್ನು ಉಪದೇಶಿಸಿರಿ' ಎಂದು ನಾರದರು ಪ್ರಾರ್ಥಿಸಿದರು.

ಆಶಾ ವಾವ ಸ್ಮರಾತ್ ಭೂಯಸೀ । ಆಶೇದೋ ವೈ ಸ್ಮರೋಮಂತ್ರಾನಧೀತೇ । ಕರ್ಮಾಣಿ ಕುರುತೇ । ಪುತ್ರಾಂಶ್ಚ ಪಶೂಂಶ್ಚೇಚ್ಛತೇ। ಇಮಂ ಚ ಲೋಕಮಮುಂ ಚೇಚ್ಛತೇ । ಆಶಾಮುಪಾಸ್ವ ಇತಿ ।

ಸ್ಥಿರ ಸ್ಮರಣಾಭಿಮಾನಿ ರುದ್ರದೇವರಿಗಿಂತಲೂ ಪೂರ್ಣಸುಖಿಳಾಗಿರುವುದರಿಂದಲೂ, ಆಶೆಗೆ ಅಭಿಮಾನಿನಿಯಾಗಿರುವುದರಿಂದಲೂ ಆಶಾನಾಮಕಳಾದ ಸರಸ್ವತೀದೇವಿಯು ಶ್ರೇಷ್ಠಳು. ಜೀವನು ಅಧ್ಯಯನ ಕರ್ಮಾದಿಗಳನ್ನು ಮಾಡಬೇಕೆಂಬ ಪ್ರಬಲ ಆಶೆಯಿಂದ ಯುಕ್ತನಾದಾಗ ಸ್ಮರಣಶಕ್ತಿ ಹೊಂದಿ ಮಂತ್ರಗಳನ್ನು ಅಧ್ಯಯನ ಮಾಡುವನು. ಕರ್ಮಗಳನ್ನು ಆಚರಿಸುವನು, ಮಕ್ಕಳು ಹಾಗೂ ಪಶುಗಳನ್ನು ಇಚ್ಛಿಸುತ್ತಾನೆ. ಇಹ ಪರಲೋಕಗಳನ್ನು ಇಚ್ಛಿಸುತ್ತಾನೆ, ಆಶಾಭಿಮಾನಿನಿಯಾದ ಸರಸ್ವತೀದೇವಿಯಲ್ಲಿ ಪರಬ್ರಹ್ಮನಿರುವನೆಂದು ಆರಾಧಿಸು.

ಸ ಯ ಆಶಾಂ ಬ್ರಹ್ಮೇತ್ಯುಪಾಸ್ತೇ ಆಶಯಾऽಸ್ಯ ಸರ್ವೇ ಕಾಮಾಃ ಸಮೃದ್ಧ್ಯಂತಿ । ಅಮೋಘಾ ಹಾಸ್ಯಾऽಶಿಷೋ ಭವಂತಿ । ಯಾವದಾಶಾಯಾ ಗತಂ ತತ್ರಾಸ್ಯ ಯಥಾಕಾಮಚಾರೋ ಭವತಿ ಯ ಆಶಾಂ ಬ್ರಹ್ಮೇತ್ಯುಪಾಸ್ತೇ' । 'ತನ್ಮೇ ಭಗವಾನ್ ಬ್ರವೀತು' ಇತಿ ।

'ಯಾರು ಆಶಾಭಿಮಾನಿನಿಯಾದ ಸರಸ್ವತೀ ದೇವಿಯಲ್ಲಿ ಪರಬ್ರಹ್ಮನನ್ನು ಆರಾಧಿಸುವನೋ ಅವನು ಬಯಸಿದುದೆಲ್ಲಾ ಇಚ್ಛಾಮಾತ್ರದಿಂದ ಕೈಗೂಡುವುವು. ಅವನ ಆಸೆ ವ್ಯರ್ಥವಾಗುವುದಿಲ್ಲ. ಆಶಾಭಿಮಾನಿನಿ ಸರಸ್ವತೀದೇವಿಯ ವ್ಯಾಪ್ತಿಯು ಎಲ್ಲಿಯ ತನಕ ಇರುತ್ತದೋ ಅಲ್ಲೆಲ್ಲಾ ಅವನು ತನ್ನ ಇಚ್ಛಾನುಸಾರವಾಗಿ ಸಂಚರಿಸಲು ಶಕ್ತನಾಗುವನು' ಎಂದು ಸನತ್ಕುಮಾರರು ಉಪದೇಶಿಸಲು, ನಾರದರು 'ಪೂಜ್ಯರೇ ! ಆಶಾಭಿಮಾನಿನಿಯಾದ ಸರಸ್ವತೀದೇವಿಗಿಂತಲೂ ಉತ್ತಮರಿರುವರೇನು? ಎಂದು ಕೇಳಿದರು. ಆಗ ಸನತ್ಕುಮಾರರು 'ಆಶಾಭಿಮಾನಿನಿ ಸರಸ್ವತೀದೇವಿಗಿಂತಲೂ ಉತ್ತಮರಿರುವರು' ಎಂದು ಉತ್ತರಿಸಲು, ಹಾಗಿದ್ದಲ್ಲಿ 'ಪೂಜ್ಯರಾದ ತಾವು ನನಗದನ್ನು ವಿಶದಪಡಿಸಿರಿ' ಎಂದು ನಾರದರು ಪ್ರಾರ್ಥಿಸಿದರು.

ಪ್ರಾಣೋ ವಾ ಆಶಾಯಾ ಭೂಯಾನ್ । ಯಥಾ ವಾ ಅರಾ ನಾಭೌ ಸಮರ್ಪಿತಾ ಏವಮಸ್ಮಿನ್ ಪ್ರಾಣೇ ಸರ್ವಂ ಸಮರ್ಪಿತಂ । ಪ್ರಾಣಃ ಪ್ರಾಣೇನ ಯಾತಿ । ಪ್ರಾಣಃ ಪ್ರಾಣಂ ದದಾತಿ । ಪ್ರಾಣಾಯ ದದಾತಿ । ಪ್ರಾಣೋ ಹ ಪಿತಾ । ಪ್ರಾಣೋ ಮಾತಾ । ಪ್ರಾಣೋ ಭ್ರಾತಾ । ಪ್ರಾಣಃ ಸ್ವಸಾ । ಪ್ರಾಣ ಆಚಾರ್ಯಃ । ಪ್ರಾಣೋ ಬ್ರಾಹ್ಮಣಃ ।

ಪೂರ್ಣಾನಂದ ಸ್ವರೂಪರಾದ ಭಾರತೀ ಸರಸ್ವತೀ ದೇವಿಯರಿಗಿಂತ ಉತ್ತಮರಾದ್ದರಿಂದಲೂ ಪ್ರಾಣಾಭಿಮಾನಿಯಾಗಿರುವುದರಿಂದಲೂ, ಉತ್ತಮರಾದ ನಾಮಾದಿದೇವತೆಗಳೆಲ್ಲರಿಗೂ ನಾಯಕರಾದುದರಿಂದಲೂ ಪ್ರಾಣರೆನಿಸಿರುವ ಮುಖ್ಯಪ್ರಾಣ-ಬ್ರಹ್ಮದೇವರು ಆಶಾಳೆನಿಸಿರುವ ಭಾರತೀ-ಸರಸ್ವತೀ ದೇವಿಯರಿಗಿಂತಲೂ ಉತ್ತಮರು. ಹೇಗೆ ಅಚ್ಚುಮರಗಳು ರಥಚಕ್ರದ ಮಧ್ಯಭಾಗದಲ್ಲಿ ಸೇರಿಸಲ್ಪಟ್ಟು, ಅದನ್ನೇ ಆಶ್ರಯಿಸಿರುತ್ತವೋ ಹಾಗೆಯೇ ಆ ಮುಖ್ಯಪ್ರಾಣದೇವರಲ್ಲಿ ಸರ್ವ ಜಗತ್ತೂ ಆಶ್ರಯ ಪಡೆದಿದೆ. ಈ ಮುಖ್ಯಪ್ರಾಣದೇವರು ತನಗೂ ಪ್ರೇರಕನಾದ ಪ್ರಾಣನಾಮಕ ಪರಮಾತ್ಮನ ಪ್ರೇರಣೆಯಿಂದಲೇ ಪ್ರವೃತ್ತಿ ಮಾಡುವರು. ಪ್ರಾಣನಾಮಕ ಪರಮಾತ್ಮನನ್ನು ಶಿಷ್ಯರಿಗೆ ತೋರಿಸಿಕೊಡುವರು. ಪ್ರಾಣನಾಮಕ ಪರಮಾತ್ಮನಿಗೆ ಭಕ್ತರನ್ನು ಒಯ್ದುಕೊಡುವರು. ಆದ್ದರಿಂದ ಪರಮಾತ್ಮನು ಪ್ರಾಣದೇವರಿಗೆ ಸಕಲಾಭೀಷ್ಟನೀಡುವನು. ಲೋಕದಲ್ಲಿ ತಂದೆ ತಾಯಿ ಸಹೋದರ ಸಹೋದರಿ ಗುರು ಬ್ರಾಹ್ಮಣ ಇವರೆಲ್ಲರ ಬದುಕಿಗೆ ಕಾರಣರಾಗಿದ್ದು ಅವರಲ್ಲೆಲ್ಲ ಇರುವುದರಿಂದ ಈ ಮುಖ್ಯಪ್ರಾಣದೇವರೇ ಮುಖ್ಯವಾಗಿ ಲೋಕಕ್ಕೆ ತಂದೆ-ತಾಯಿ ಸಹೋದರ ಸಹೋದರಿ ಗುರು ಬ್ರಾಹ್ಮಣ ಎಲ್ಲ ಆಗಿರುವರು.

ಸ ಯದಿ ಪಿತರಂ ವಾ ಮಾತರಂ ವಾ ಭ್ರಾತರಂ ವಾ ಸ್ವಸಾರಂ ವಾऽऽಚಾರ್ಯಂ ವಾ ಬ್ರಾಹ್ಮಣಂ ವಾ ಕಿಂಚಿತ್ ಭೃಶಮಿವ ಪ್ರತ್ಯಾಹ 'ಧಿಕ್ ತ್ವಾऽಸ್ತು' ಇತ್ಯೇವೈನಮಾಹುಃ। 'ಪಿತೃಹಾ ವೈ ತ್ವಮಸಿ, ಮಾತೃಹಾ ವೈ ತ್ವಮಸಿ, ಭ್ರಾತೃಹಾ ವೈ ತ್ವಮಸಿ, ಸ್ವಸೃಹಾ ವೈ ತ್ವಮಸಿ, ಆಚಾರ್ಯಹಾ ವೈ ತ್ವಮಸಿ, ಬ್ರಾಹ್ಮಣಹಾ ವೈ ತ್ವಮಸಿ' ಇತಿ ॥

'ಪ್ರಾಣದೇವರು ತಂದೆ, ತಾಯಿ ಸೋದರ ಮೊದಲಾದವರಿಗೆ ಜೀವನಪ್ರದರಾಗಿದ್ದು ಅವರಲ್ಲಿ ಇರುವಾಗ ಯಾರಾದನೊಬ್ಬನು ತನ್ನ ತಂದೆಯನ್ನೋ, ತಾಯಿಯನ್ನೋ, ಸಹೋದರರನ್ನೋ, ಸಹೋದರಿಯನ್ನೋ, ಆಚಾರ್ಯನನ್ನೋ, ಬ್ರಾಹ್ಮಣನನ್ನೋ ಸ್ವಲ್ಪ ಕಠಿಣವಾಗಿ ಅವಮಾನಿಸಿದರೆ ಸಾಕು, ಜನರು 'ನಿನಗೆ ಧಿಕ್ಕಾರ ! ನೀನು ತಂದೆಯನ್ನು ಕೊಂದವ,

ತಾಯಿಯನ್ನು ಕೊಂದವ, ಸಹೋದರನನ್ನು ಕೊಂದವ, ಸಹೋದರಿಯನ್ನು ಕೊಂದವ, ಆಚಾರ್ಯರನ್ನು ಕೊಂದವ, ಬ್ರಾಹ್ಮಣಹತ್ಯೆ ಮಾಡಿರುವವ' ಎನ್ನುವರು

> ಅಥ ಯದ್ಯಪ್ಯೇನಾನುತ್ಕ್ರಾಂತ ಪ್ರಾಣಾನ್ ಶೂಲೇನ ಸಮಾಸಂ.ಸ್ಕತಿಷಂ ದಹೇತ್, ನೈವೈನಂ ಬ್ರೂಯುಃ ಪಿತೃಹಾಽಸೀತಿ, ನ ಮಾತೃಹಾಽಸೀತಿ, ನ ಭ್ರಾತೃಹಾಽಸೀತಿ, ನ ಸ್ವಸೃಹಾಽಸೀತಿ, ನಾಚಾರ್ಯಹಾಽಸೀತಿ, ನ ಬ್ರಾಹ್ಮಣಹಾಽಸೀತಿ ॥

ಆದರೆ ಪ್ರಾಣೋತ್ಕ್ರಮಣ ಹೊಂದಿದ ಬಳಿಕ ಈ ತಂದೆ ತಾಯಿ ಮೊದಲಾದವರನ್ನು ಶೂಲದಿಂದ ಸಂಪೂರ್ಣವಾಗಿ ತಿವಿದು ಸುಟ್ಟರೂ, ಅಂತಹವರನ್ನು ಜನರು ಪಿತೃಘಾತುಕನೆಂದಾಗಲೀ, ಮಾತೃಘಾತಿಯೆಂದಾಗಲೀ, ಸಹೋದರ ಹಂತಕನೆಂದಾಗಲೀ, ಸಹೋದರಿಯನ್ನು ಕೊಂದವನೆಂದಾಗಲೀ, ಆಚಾರ್ಯರನ್ನು ಹಿಂಸಿಸಿದವನೆಂದಾಗಲೀ, ಬ್ರಹ್ಮಹತ್ಯೆಯನ್ನು ಗೈದವನೆಂದಾಗಲೀ ಜರಿಯುವುದಿಲ್ಲ. ಇದರಿಂದ ತಂದೆ ತಾಯಿ ಮೊದಲಾದವರಲ್ಲಿರುವ ಮಹತ್ವ ಪ್ರಾಣದೇವರ ಸನ್ನಿಧಾನದಿಂದಲೇ ಎಂಬುದು ಸ್ಫುಟವಾಗುತ್ತದೆ.

> ಪ್ರಾಣೋ ಹ್ಯೇವೈತಾನಿ ಸರ್ವಾಣಿ ಭವತಿ । ಸ ವಾ ಏಷ ಏವಂ ಪಶ್ಯನ್ನೇವಂ ಮನ್ವಾನ ಏವಂ ವಿಜಾನನ್ನತಿವಾದೀ ಭವತಿ । ತಂ ಚೇದ್ಬ್ರೂವಯುರತಿವಾದ್ಯಸೀತಿ, ಅತಿವಾದ್ಯಸ್ಮೀತ್ಯೇವ ಬ್ರೂಯಾತ್ । ನಾಪಹ್ನುವೀತ ॥

ಈ ತಂದೆ ತಾಯಿ ಮೊದಲಾದವರೆಲ್ಲ ಪ್ರಾಣದೇವರ ಅಧೀನರು. ಯಾರು ಹೀಗೆ ಮುಖ್ಯಪ್ರಾಣದೇವರ ಮಹಿಮೆಯನ್ನು ಕೇಳಿ, ಮನನ ಮಾಡಿ ಸಾಕ್ಷಾತ್ಕರಿಸಿಕೊಳ್ಳುವನೋ ಅವನು ಅತ್ಯುತ್ಕೃಷ್ಟತತ್ತ್ವ ಬೋಧಕನೆನಿಸುತ್ತಾನೆ. ಅವನನ್ನು ಯಾರಾದರೂ 'ನೀನು ಅತ್ಯುತ್ಕೃಷ್ಟ-ತತ್ತ್ವಬೋಧಕನಾಗಿರುವಿ' ಎಂದು ಹೇಳಿದರೆ ಆಗ ಅವನು 'ನಾನು ಅತ್ಯುತ್ಕೃಷ್ಟತತ್ತ್ವಬೋಧಕನು ಹೌದು' ಎಂದೇ ಹೇಳಬೇಕು. ಪ್ರಾಣತತ್ತ್ವಬೋಧಕನಿಗೆ ಭಯವಿಲ್ಲದಿರುವುದರಿಂದ ನಿರಾಕರಣೆ ಕೂಡದು.

> ಏಷ ತು ಆ ಅತಿವದತಿ ಯಃ ಸತ್ಯೇನಾತಿವದತಿ । 'ಸೋಽಹಂ ಭಗವಃ ಸತ್ಯೇನಾತಿವದಾನಿ' ಇತಿ । 'ಸತ್ಯಂ ತ್ವೇವ ವಿಜಿಜ್ಞಾಸಿತವ್ಯಂ' ಇತಿ । 'ಸತ್ಯಂ ಭಗವೋ ವಿಜಿಜ್ಞಾಸ' ಇತಿ ।

'ಪೂಜ್ಯರೇ ! ಪ್ರಾಣದೇವರಿಗಿಂತಲೂ ಉತ್ತಮರಾದವರಿರುವರೇನು ? ಎಂದು ನಾರದರು ಪ್ರಶ್ನಿಸಲು, ಸನತ್ಕುಮಾರರು 'ಪ್ರಾಣದೇವರಿಗಿಂತಲೂ ಉತ್ತಮರಿರುವರು'

ಎಂದುತ್ತರಿಸಿದರು. 'ಅದನ್ನು ನನಗೆ ತಿಳಿಯಹೇಳಿ' ಎಂದು ನಾರದರು ಪ್ರಾರ್ಥಿಸಲು ಸನತ್ಕುಮಾರರು, 'ಸತ್ಯನಾಮಕ ಪರಮಾತ್ಮನು ಪ್ರಾಣನಿಗಿಂತ ಉತ್ತಮನು' ಎಂದರು. 'ಯಾರು ನಿರ್ದೋಷನೂ ಸರ್ವನಿಯಾಮಕನೂ ಆಗಿರುವುದರಿಂದ ಸತ್ಯನೆನಿಸಿರುವ ಪರಮಾತ್ಮನನ್ನು ಸರ್ವೋತ್ತಮನೆಂದು ಉಪದೇಶಿಸುವೆನೋ, ಅವನೇ ಮುಖ್ಯಪ್ರಾಣಬೋಧಕನಿಗಿಂತಲೂ ಅತ್ಯುತ್ಕೃಷ್ಟತತ್ತ್ವಬೋಧಕನೆನಿಸಿಕೊಳ್ಳುವನು' 'ಪೂಜ್ಯರಾದ ಸನತ್ಕುಮಾರರೇ ! ನಾನು, ಸತ್ಯನೆನಿಸಿರುವ ಸರ್ವೋತ್ಕೃಷ್ಟನಾದ ಪರಬ್ರಹ್ಮನನ್ನು ಉಪದೇಶಿಸಲು ಶಕ್ತನಾಗುವಂತೆ ಅನುಗ್ರಹಿಸಿ' ಎಂದು ನಾರದರು ಬೇಡಿಕೊಂಡಾಗ ಸನತ್ಕುಮಾರರು ಹೇಳಿದರು. 'ಅದಕ್ಕೆ ಸತ್ಯನೆನಿಸಿರುವ ಪರಬ್ರಹ್ಮನನ್ನೇ ವಿಶೇಷವಾಗಿ ವಿಚಾರ ಮಾಡಬೇಕು.' ಆಗ ನಾರದರು 'ಪೂಜ್ಯರೇ ! ಸತ್ಯನಾಮಕ ಪರಮಾತ್ಮನ ಗುಣವನ್ನರಿಯಲು ಅಪೇಕ್ಷಿಸುವೆನು. ನನಗೆ ಉಪದೇಶಿಸಿರಿ' ಎಂದು ಕೇಳಿಕೊಂಡರು.

'ಯದಾ ವೈ ವಿಜಾನಾತಿ ಅಥ ಸತ್ಯಂ ವದತಿ । ನಾವಿಜಾನನ್ ಸತ್ಯಂ ವದತಿ । ವಿಜಾನನ್ನೇವ ಸತ್ಯಂ ವದತಿ । ವಿಜ್ಞಾನಂ ತ್ವೇವ ವಿಜಿಜ್ಞಾಸಿತವ್ಯಂ' ಇತಿ । 'ವಿಜ್ಞಾನಂ ಭಗವೋ ವಿಜಿಜ್ಞಾಸ' ಇತಿ ।

'ಜನರು ಯಾವಾಗ ಸರಿಯಾಗಿ ತಿಳಿಯುವರೋ ಆಗಲೇ ಸತ್ಯವನ್ನು ನುಡಿಯುತ್ತಾರೆ, ಸರಿಯಾದ ಅರಿವಿಲ್ಲದವರು ಸತ್ಯವನ್ನು ನುಡಿಯಲಾರರು. ಆದ್ದರಿಂದ ಸರಿಯಾದ ಅರಿವು ಇರುವವರೇ ಸತ್ಯವನ್ನು ನುಡಿಯುತ್ತಾರೆ. ಹೀಗೆ ಸತ್ಯಕ್ಕೂ ವಿಜ್ಞಾನಕ್ಕೂ ಕಾರ್ಯಕಾರಣಭಾವ ಸಂಬಂಧವಿದೆ. ಆದುದರಿಂದ ಸತ್ಯನಾಮಕ ಪರಮಾತ್ಮನನ್ನು ಅರಿಯಬಯಸುವವನು, ಅವನು ವಿಜ್ಞಾನವೆಂಬ ಗುಣವನ್ನು ಅರಿತುಕೊಳ್ಳಬೇಕು' ಎಂದು ಸನತ್ಕುಮಾರರು ಉತ್ತರಿಸಲು, ನಾರದರು 'ಪೂಜ್ಯರೇ ! ಪರಮಾತ್ಮನ ವಿಜ್ಞಾನವೆಂಬ ಗುಣವನ್ನು ಅರಿಯಲು ಅಪೇಕ್ಷಿಸುವೆನು. ಅದನ್ನು ನನಗೆ ತಿಳಿಸಿಕೊಡಿರಿ' ಎಂದು ಪ್ರಾರ್ಥಿಸಿದರು.

ಯದಾ ವೈ ಮನುತೇऽಥ ವಿಜಾನಾತಿ । ನಾಮತ್ವಾ ವಿಜಾನಾತಿ । ಮತ್ತ್ವೈವ ವಿಜಾನಾತಿ । ಮತಿಸ್ತ್ವೇವ ವಿಜಿಜ್ಞಾಸಿತವ್ಯಾ ಇತಿ । ಮತಿಂ ಭಗವೋ ವಿಜಿಜ್ಞಾಸ ಇತಿ ।

'ಜನರು ಯಾವಾಗ ಸಾಮಾನ್ಯಜ್ಞಾನ ಸಂಪಾದಿಸುವರೋ ಆಗಲೇ ವಿಶೇಷ ಜ್ಞಾನವನ್ನೂ ಸಂಪಾದಿಸಿಕೊಳ್ಳುವರು. ಸಾಮಾನ್ಯಜ್ಞಾನವನ್ನು ಸಂಪಾದಿಸದೆ ವಿಶೇಷಜ್ಞಾನವನ್ನು ಸಂಪಾದಿಸಿಕೊಳ್ಳಲಾರರು. ಆದ್ದರಿಂದ ಸಾಮಾನ್ಯಜ್ಞಾನವನ್ನು ಸಂಪಾದಿಸಿಯೇ ವಿಶೇಷಜ್ಞಾನ

ಸಂಪಾದಿಸುವರು. ಹೀಗೆ ಸಾಮಾನ್ಯಜ್ಞಾನ ಹಾಗೂ ವಿಶೇಷಜ್ಞಾನಗಳಿಗೆ ಕಾರ್ಯಕಾರಣ-ಭಾವವಿರುವುದರಿಂದ ಪರಮಾತ್ಮನ ವಿಜ್ಞಾನ ರೂಪಗುಣವನ್ನು ಅರಿಯ ಬಯಸುವವರು 'ಮನನ' ಅಂದರೆ ಸಾಮಾನ್ಯಜ್ಞಾನ ರೂಪಗುಣವನ್ನು ಅರಿತುಕೊಳ್ಳಬೇಕು' ಎಂದು ಸನತ್ಕುಮಾರರು ಹೇಳಿದಾಗ, 'ಹಾಗಿದ್ದಲ್ಲಿ ಪೂಜ್ಯರೇ ! ಪರಬ್ರಹ್ಮನ ಮನನರೂಪ ಗುಣವನ್ನು ತಿಳಿಯಲಪೇಕ್ಷಿಸುವೆನು. ಪೂಜ್ಯರಾದ ತಾವು ಅದನ್ನು ಉಪದೇಶಿಸಿರಿ' ಎಂದು ನಾರದರು ಪ್ರಾರ್ಥಿಸಿದರು.

> ಯದಾ ವೈ ಶ್ರದ್ದಧಾತ್ಯಥ ಮನುತೇ । ನಾಶ್ರದ್ದಧತ್ ಮನುತೇ । ಶ್ರದ್ದಧದೇವ ಮನುತೇ । ಶ್ರದ್ಧಾತ್ವೇವ ವಿಜಿಜ್ಞಾಸಿತವ್ಯಾ ಇತಿ । ಶ್ರದ್ಧಾಂ ಭಗವೋ ವಿಜಿಜ್ಞಾಸ ಇತಿ ।

'ಜನರು ಯಾವಾಗ ಶ್ರದ್ಧಾಯುಕ್ತರಾಗುವರೋ ಆಗ ಸಾಮಾನ್ಯ ಜ್ಞಾನರೂಪವಾದ ಮನನವನ್ನು ಸಂಪಾದಿಸಿಕೊಳ್ಳುವರು. ಶ್ರದ್ಧಾಯುಕ್ತರೆನಿಸದವರು ಇಂತಹ ಸಾಮಾನ್ಯಜ್ಞಾನವನ್ನು ಪಡೆಯಲಾರರು. ಆದ್ದರಿಂದ ಶ್ರದ್ಧಾಯುಕ್ತರೇ ಮನನ ಉಳ್ಳವರಾಗುವರು. ಹೀಗೆ ಶ್ರದ್ಧೆ ಹಾಗೂ ಮನನಗಳಿಗೆ ಕಾರ್ಯಕಾರಣಭಾವ ಸಂಬಂಧವಿರುವುದರಿಂದ, ಪರಮಾತ್ಮನ ಮನನರೂಪ ಗುಣವನ್ನು ಅರಿಯಬಯಸುವವನು ಅವನ ಶ್ರದ್ಧಾಗುಣವನ್ನು ತಿಳಿಯಬೇಕು' ಎಂದು ಸನತ್ಕುಮಾರರು ಉಪದೇಶಿಸಿದಾಗ, ನಾರದರು 'ಪೂಜ್ಯರೇ ! ಪರಬ್ರಹ್ಮನ ಶ್ರದ್ಧಾರೂಪಗುಣವನ್ನರಿಯಲು ಅಪೇಕ್ಷಿಸುವೆನು, ಉಪದೇಶಿಸಿರಿ' ಎಂದು ಪ್ರಾರ್ಥಿಸಿದರು.

> ಯದಾ ವೈ ನಿಸ್ತಿಷ್ಠತ್ಯಥ ಶ್ರದ್ದಧಾತಿ । ನಾನಿಸ್ತಿಷ್ಠನ್ ಶ್ರದ್ದಧಾತಿ । ನಿಸ್ತಿಷ್ಠನ್ನೇವ ಶ್ರದ್ದಧಾತಿ । ನಿಷ್ಠಾತ್ವೇವ ವಿಜಿಜ್ಞಾಸಿತವ್ಯಾ' ಇತಿ । 'ನಿಷ್ಠಾಂ ಭಗವೋ ವಿಜಿಜ್ಞಾಸ' ಇತಿ ।

'ಜನರು ಯಾವಾಗ ಸ್ಥಿರಚಿತ್ತವುಳ್ಳವರಾಗುವರೋ ಆಗಲೇ ಶ್ರದ್ಧಾಯುಕ್ತರಾಗುವರು. ಚಿತ್ತಸ್ಥೈರ್ಯವನ್ನು ಸಂಪಾದಿಸದೆ ಶ್ರದ್ಧಾಯುಕ್ತರಾಗಲಾರರು. ಆದ್ದರಿಂದ ಚಿತ್ತಸ್ಥೈರ್ಯವಿದ್ದರೇನೇ ಶ್ರದ್ಧಾಯುಕ್ತರೆನಿಸುವರು. ಹೀಗೆ ಚಿತ್ತಸ್ಥೈರ್ಯ ಹಾಗೂ ಶ್ರದ್ಧೆಗಳಿಗೆ ಕಾರ್ಯಕಾರಣಭಾವ ಸಂಬಂಧವಿರುವುದರಿಂದ ಪರಮಾತ್ಮನ ಶ್ರದ್ಧಾರೂಪಗುಣವನ್ನು ಅರಿಯ ಬಯಸುವವನು ಅವನು ಚಿತ್ತಸ್ಥೈರ್ಯಗುಣವನ್ನು ತಿಳಿದುಕೊಳ್ಳಬೇಕು' ಎಂದು ಸನತ್ಕುಮಾರರು ಉಪದೇಶಿಸಲು, ನಾರದರು 'ಪೂಜ್ಯರೇ ! ಪರಮಾತ್ಮನ ಚಿತ್ತಸ್ಥೈರ್ಯಗುಣವನ್ನು ಉಪದೇಶಿಸಿ ಎಂದು ಬೇಡಿಕೊಂಡರು.

'ಯದಾ ವೈ ಕರೋತ್ಯಥ ನಿಸ್ತಿಷ್ಠತಿ। ನಾಕೃತ್ವಾ ನಿಸ್ತಿಷ್ಠತಿ। ಕೃತ್ವ್ಯೇವ ನಿಸ್ತಿಷ್ಠತಿ। ಕೃತಿಸ್ತ್ವೇವ ವಿಜಿಜ್ಞಾಸಿತವ್ಯಾ' ಇತಿ। 'ಕೃತಿಂ ಭಗವೋ ವಿಜಿಜ್ಞಾಸ' ಇತಿ।

'ಜನರು ತಮ್ಮ ಕರ್ತವ್ಯಕರ್ಮವನ್ನು ನಿರ್ವಹಿಸಿದರೇನೇ ಸ್ಥಿರಚಿತ್ತರೆನಿಸುವರು. ಕರ್ತವ್ಯವನ್ನು ನಿರ್ವಹಿಸದೆ ಸ್ಥಿರಚಿತ್ತರೆನಿಸಲಾರರು. ಆದ್ದರಿಂದ ಕರ್ತವ್ಯವನ್ನು ನಿರ್ವಹಿಸಿಯೇ ಸ್ಥಿರಚಿತ್ತರೆನಿಸುವರು. ಹೀಗೆ ಕೃತಿ ಹಾಗೂ ಚಿತ್ತಸ್ಥೈರ್ಯಗಳಿಗೆ ಕಾರ್ಯಕಾರಣಭಾವ ಸಂಬಂಧವಿರುವುದರಿಂದ ಪರಮಾತ್ಮನಲ್ಲಿರುವ ಚಿತ್ತಸ್ಥೈರ್ಯಗುಣವನ್ನು ಅರಿಯಲು ಅವನ ಸೃಷ್ಟಿಕರ್ತೃತ್ವರೂಪವಾದ ಕೃತಿ ಎಂಬ ಗುಣವನ್ನು ತಿಳಿದುಕೊಳ್ಳಬೇಕು' ಎಂದು ಸನತ್ಕುಮಾರರು ಉಪದೇಶಿಸಿದಾಗ, ನಾರದರು 'ಪೂಜ್ಯರೇ ! ಪರಮಾತ್ಮನ ಕೃತಿರೂಪ ಗುಣವನ್ನರಿಯಲು ಅಪೇಕ್ಷಿಸುವೆನು. ಅದನ್ನು ಉಪದೇಶಿಸಿರಿ' ಎಂದು ಪ್ರಾರ್ಥಿಸಿದರು.

ಯದಾ ವೈ ಸುಖಂ ಲಭತೇऽಥ ಕರೋತಿ। ನಾಸುಖಂ ಲಬ್ಧ್ವಾ ಕರೋತಿ। ಸುಖಮೇವ ಲಬ್ಧ್ವಾ ಕರೋತಿ। ಸುಖಂ ತ್ವೇವ ವಿಜಿಜ್ಞಾಸಿತವ್ಯಂ ಇತಿ। ಸುಖಂ ಭಗವೋ ವಿಜಿಜ್ಞಾಸ ಇತಿ।

'ಜನರು ಯಾವಾಗ ಸುಖಿಗಳಾಗುತ್ತಾರೋ ಆಗಲೇ ಕರ್ತವ್ಯವನ್ನು ನಿರ್ವಹಿಸುತ್ತಾರೆ. ದುಃಖಿಗಳಾಗಿದ್ದಾರೆ ಕರ್ತವ್ಯವನ್ನು ನಿರ್ವಹಿಸಲಾರರು. ಹೀಗೆ ಸುಖ ಹಾಗೂ ಕೃತಿಗಳಿಗೆ ಕಾರ್ಯಕಾರಣಭಾವ ಸಂಬಂಧವಿರುವುದರಿಂದ ಪರಮಾತ್ಮನ ಕೃತಿರೂಪಗುಣವನ್ನರಿಯ ಬಯಸುವವನು ಅವನ ಸುಖರೂಪ ಗುಣವನ್ನು ಅರಿಯಬೇಕು' ಎಂದು ಸನತ್ಕುಮಾರರು ಉಪದೇಶಿಸಲು ನಾರದರು 'ಪೂಜ್ಯರೇ ! ಪರಬ್ರಹ್ಮನ ಸುಖರೂಪ ಗುಣವನ್ನರಿಯಲು ಅಪೇಕ್ಷಿಸುವೆನು, ಉಪದೇಶಿಸಿರಿ' ಎಂದು ಬಿನ್ನವಿಸಿಕೊಂಡರು.

'ಯೋ ವೈ ಭೂಮಾ ತತ್ ಸುಖಮ್ । ನಾಲ್ಪೇ ಸುಖಮಸ್ತಿ । ಭೂಮೈವ ಸುಖಮ್ । ಭೂಮಾ ತ್ವೇವ ವಿಜಿಜ್ಞಾಸಿತವ್ಯ' ಇತಿ । 'ಭೂಮಾನಂ ಭಗವೋ ವಿಜಿಜ್ಞಾಸ' ಇತಿ।

'ಯಾರು ಪೂರ್ಣಗುಣಗಳ್ಳವನಾಗಿರುವನೋ ಅವನೇ ಪೂರ್ಣಸುಖನು. ಅಲ್ಪರಾದ ಮುಕ್ತರಲ್ಲಿಯೂ ಪೂರ್ಣಸುಖವಿರಲಾರದು. ಆದ್ದರಿಂದ ಪೂರ್ಣಗುಣನೇ ಪೂರ್ಣಸುಖನು. ಹೀಗೆ ಪರಮಾತ್ಮನ ಈ ಸುಖರೂಪಗುಣವನ್ನು ಅರಿಯಬಯಸುವವನು ಅವನ ಗುಣಪರಿಪೂರ್ಣತೆಯನ್ನು ತಿಳಿದುಕೊಳ್ಳಬೇಕು' ಎಂದು ಸನತ್ಕುಮಾರರು ಉಪದೇಶಿಸಿದಾಗ,

ನಾರದರು 'ಪೂಜ್ಯರೇ ! ಪರಮಾತ್ಮನ ಗುಣಪರಿಪೂರ್ಣತೆಯನ್ನು ತಿಳಿಯಲಪೇಕ್ಷಿಸುತ್ತೇನೆ. ಅದನ್ನು ನನಗೆ ಉಪದೇಶಿಸಿರಿ' ಎಂದು ಪ್ರಾರ್ಥಿಸಿದರು.

'ಯತ್ರ ನಾನ್ಯತ್ ಪಶ್ಯತಿ ನಾನ್ಯತ್ ಶೃಣೋತಿ ನಾನ್ಯತ್ ವಿಜಾನಾತಿ ಸ ಭೂಮಾ । ಅಥ ಯತ್ರಾನ್ಯತ್ ಪಶ್ಯತ್ಯನ್ಯತ್ ಶೃಣೋತ್ಯನ್ಯತ್ ವಿಜಾನಾತಿ ತದಲ್ಪಮ್ । ಯೋ ವೈ ಭೂಮಾ ತದಮೃತಮ್ । ಅಥ ಯದಲ್ಪಂ ತನ್ಮರ್ತ್ಯಮ್' । 'ಸ ಭಗವಃ ಕಸ್ಮಿನ್ ಪ್ರತಿಷ್ಠಿತ' ಇತಿ ! 'ಸ್ವೇ ಮಹಿಮ್ನಿ, ಯದಿ ವಾ ನ ಮಹಿಮ್ನಿ' ಇತಿ ॥

'ಯಾರ ಅಧೀನವಲ್ಲದೆ ಸ್ವತಂತ್ರವಾಗಿ ಬೇರೆ ಯಾವುದೂ ದರ್ಶನ ಶ್ರವಣ ವಿಶೇಷಜ್ಞಾನಗಳಿಗೆ ಗೋಚರಿಸದೋ ಅವನೇ ಪರಿಪೂರ್ಣಗುಣಸ್ವರೂಪನಾದ ಪರಮಾತ್ಮ ಯಾರ ಅಧೀನವಲ್ಲದೆ ಸ್ವತಂತ್ರವಾಗಿ ಬೇರೆ ಪದಾರ್ಥವು ದರ್ಶನ ಶ್ರವಣ ವಿಶೇಷಜ್ಞಾನಗಳಿಗೆ ಗೋಚರವಾಗುತ್ತದೋ ಅವರು ಅಲ್ಪಗುಣವುಳ್ಳವರು. ಪೂರ್ಣಗುಣ ಸ್ವರೂಪನಾದ ಪರಬ್ರಹ್ಮನು ನಿತ್ಯಮುಕ್ತನು. ಮುಕ್ತರಾದ ಅಲ್ಪಗುಣರಾದ ಬ್ರಹ್ಮಾದಿಗಳು ಮೊದಲಿಗೆ ಮರಣವುಳ್ಳವರೇ ಆಗಿರುತ್ತಾರೆ' ಎಂದು ಸನತ್ಕುಮಾರರು ಪರಿಪೂರ್ಣಗುಣಸ್ವರೂಪನಾದ ಪರಮಾತ್ಮನ ಮಹಿಮೆಯನ್ನು ಉಪದೇಶಿಸಿದಾಗ, ನಾರದರು 'ಪೂಜ್ಯರೇ ! ಆ ಪರಮಾತ್ಮನು ಯಾವುದನ್ನು ಆಶ್ರಯಿಸಿಕೊಂಡಿರುವನು?' ಎಂದು ಪ್ರಶ್ನಿಸಿದರು. ಆಗ ಸನತ್ಕುಮಾರರು ಅವನು ತನ್ನ ಸ್ವರೂಪಭೂತವಾದ ಸಂಪತ್ತನ್ನು ಆಶ್ರಯಿಸಿಕೊಂಡಿರುವನು ಎನ್ನಬಹದು ಅಥವಾ ಬೇರೆ ಸಂಪತ್ತನ್ನು ಆಶ್ರಯಿಸಿಕೊಂಡಿಲ್ಲ ಎಂದೂ ಎನ್ನಬಹುದು' ಎಂದು ಉತ್ತರಿಸಿದರು.

ಗೋಅಶ್ವಮಿಶ ಮಹಿಮೇತ್ಯಾಚಕ್ಷ್ಯತೇ । ಹಸ್ತಿಹಿರಣ್ಯಂ ದಾಸ ಭಾರ್ಯಂ ಕ್ಷೇತ್ರಾಣ್ಯಾಯತಾನಾನಿ ಇತಿ । 'ನಾಹಮೇವಂ ಬ್ರವೀಮಿ' ಇತಿ ಹೋವಾಚ । 'ಅನ್ಯೋ ಹ್ಯನ್ಯಸ್ಮಿನ್ ಪ್ರತಿಷ್ಠಿತ' ಇತಿ ।

'ಹಸು ಕುದುರೆ ಆನೆ ಸುವರ್ಣ ಸೇವಕರು ಹೆಂಡತಿ ಭೂಮಿ ಮನೆ ಇವೆಲ್ಲವನ್ನೂ ಲೋಕದಲ್ಲಿ ಸಂಪತ್ತು ಎಂದೆನ್ನುವರು. ಆದರೆ ಇಂತಹ ಅಲ್ಪವಾದ ಸಂಪತ್ತನ್ನು ಪೂರ್ಣಗುಣನಾದ ಪರಮಾತ್ಮನು ಆಶ್ರಯಿಸಿರುವನೆಂದು ನಾನು ಹೇಳುವುದಿಲ್ಲ. ಪರಮಾತ್ಮನನ್ನು ಹೊರತು ಬೇರೆ ಎಲ್ಲರೂ ತಮ್ಮ ಸ್ವರೂಪಭೂತವಲ್ಲದ ಅಲ್ಪವಾದ ಸಂಪತ್ತನ್ನೇ ಆಶ್ರಯಿಸಿರುತ್ತಾರೆ ಪರಮಾತ್ಮನು ಹಾಗೆ ಮಾಡುವುದಿಲ್ಲ' ಎಂದು ಹೇಳಿದರು.

'ಸ ಏವಾಧಸ್ತಾತ್ । ಸ ಉಪರಿಷ್ಟಾತ್ । ಸ ಪಶ್ಚಾತ್ । ಸ ಪುರಸ್ತಾತ್ । ಸ ದಕ್ಷಿಣತಃ । ಸ ಉತ್ತರತಃ । ಸ ಏವೇದಂ ಸರ್ವಂ' ಇತಿ ।

ಈ ಗುಣಪೂರ್ಣನಾದ ನಾರಾಯಣನಾಮಕ ಪರಮಾತ್ಮನ ಲಕ್ಷಣ ಇದು. ಅವನೆ ಕೆಳಗೆ ಮೇಲೆ ಹಿಂದೆ ಮುಂದೆ ಎಡಗಡೆ ಬಲಗಡೆ ಹೀಗೆ ಎಲ್ಲೆಡೆ ವ್ಯಾಪಿಸಿಕೊಂಡಿರುವನು. ಎಲ್ಲವೂ ಅವನ ಅಧೀನ. ಅವನೇ ಸ್ವತಂತ್ರ.

'ಅಥಾತೋ೬ಹಂಕಾರಾದೇಶ ಏವ। ಅಹಮೇವಾಧಸ್ತಾತ್ । ಅಹಮುಪರಿಷ್ಟಾತ್। ಅಹಂ ಪಶ್ಚಾತ್ । ಅಹಂ ಪುರಸ್ತಾತ್ । ಅಹಂ ದಕ್ಷಿಣತಃ । ಅಹಮುತ್ತರತಃ । ಅಹಮೇವೇದಂ ಸರ್ವಂ' ಇತಿ।

ಹೀಗೆ ಗುಣಪೂರ್ಣನಾದ ಪರಮಾತ್ಮನ ಉಪದೇಶವಾದ ಮೇಲೆ ಅವನ ಅನುಗ್ರಹದಿಂದ, ಜೀವಾಂತರ್ಗತ ಅಹಂಕನಾಮಕ ಅನಿರುದ್ಧನ ಉಪದೇಶವನ್ನೂ ಮಾಡುತ್ತೇವೆ. ಈ ಅನಿರುದ್ಧನು ಯಾರೆಂದರೆ ಗುಣಪೂರ್ಣನಾರಾಯಣನ ಲಕ್ಷಣವೆ ಅವನ ಲಕ್ಷಣ. ಇಬ್ಬರೂ ಒಂದೇ. ಅವನೆ ಕೆಳಗೆ ಮೇಲೆ ಹಿಂದೆ ಮುಂದೆ ಎಡಗಡೆ ಬಲಗಡೆ ಹೀಗೆ ಎಲ್ಲೆಡೆ ವ್ಯಾಪಿಸಿಕೊಂಡಿರುವನು. ಎಲ್ಲವೂ ಅವನ ಅಧೀನವೇ ಅವನೇ ಸ್ವತಂತ್ರ.

ಅಥಾತ ಆತ್ಮಾದೇಶ ಏವ। ಆತ್ಮೈವಾಧಸ್ತಾತ್ । ಆತ್ಮೋಪರಿಷ್ಟಾತ್ । ಆತ್ಮಾ ಪಶ್ಚಾತ್। ಆತ್ಮಾ ಪುರಸ್ತಾತ್ । ಆತ್ಮಾ ದಕ್ಷಿಣತಃ । ಆತ್ಮೋತ್ತರತಃ। ಆತ್ಮೈವೇದಂ ಸರ್ವಂ ಇತಿ।

ಹೀಗೆ ಅಹಂನಾಮಕನಾದ ಜೀವಾಂತರ್ಗತ ಅನಿರುದ್ಧನ ಉಪದೇಶದ ಅನಂತರ ಅವನ ಅನುಗ್ರಹದಿಂದ. ಸರ್ವತ್ರವ್ಯಾಪ್ತನಾದುದರಿಂದ ಆತ್ಮಾ ಎಂಬ ಹೆಸರುಳ್ಳ ವಾಸುದೇವನ ಉಪದೇಶವನ್ನೂ ಮಾಡುತ್ತೇವೆ. ಈ ವಾಸುದೇವನು ಯಾರೆಂದರೆ ಗುಣಪೂರ್ಣ-ನಾರಾಯಣನ ಲಕ್ಷಣವೆ ಅವನ ಲಕ್ಷಣ. ಇಬ್ಬರೂ ಒಂದೇ. ಅವನೇ ಕೆಳಗೆ ಮೇಲೆ ಹಿಂದೆ ಮುಂದೆ ಎಡಗಡೆ ಬಲಗಡೆಗೆ ಹೀಗೆ ಎಲ್ಲೆಡೆ ವ್ಯಾಪಿಸಿಕೊಂಡಿರುವನು. ಎಲ್ಲವೂ ಅವನ ಅಧೀನ. ಅವನೇ ಸ್ವತಂತ್ರ.

ಸ ವಾ ಏಷ ಏವಂ ಪಶ್ಯನ್ನೇವಂ ಮನ್ವಾನ ಏವಂ ವಿಜಾನನ್ನಾತ್ಮರತಿರಾತ್ಮಕ್ರೀಡ ಆತ್ಮಮಿಥುನ ಆತ್ಮಾನಂದಃ । ಸ ಸ್ವರಾಟ್ ಭವತಿ । ತಸ್ಯ ಸರ್ವೇಷು ಲೋಕೇಷು ಕಾಮಚಾರೋ ಭವತಿ। ಅಥಯೇ೬ನ್ಯಥಾತೋ ವಿದುರನ್ಯರಾಜಾನಸ್ತೇ ಕ್ಷಯ್ಯಲೋಕಾ ಭವಂತಿ। ತೇಷಾಂ ಸರ್ವೇಷು ಲೋಕೇಷ್ವಕಾಮಚಾರೋ ಭವತಿ' ಇತಿ।

ನಾಮಾದಿ ಪ್ರಾಣಪರ್ಯಂತ ಸಕಲದೇವತೆಗಳಿಗಿಂತ ಉತ್ತಮನೆಂದೂ, ಸರ್ವಗುಣಪೂರ್ಣ, ಸರ್ವವ್ಯಾಪ್ತನೆಂದೂ ಈ ಪರಮಾತ್ಮನನ್ನು ಕೇಳಿ, ತಿಳಿದು, ಧ್ಯಾನಮಾಡಿ

ಸಾಕ್ಷಾತ್ಕರಿಸಿಕೊಳ್ಳುವ ಉಪಾಸಕನು, ಮುಖ್ಯವಾಗಿ ಚತುರ್ಮುಖ ಬ್ರಹ್ಮನು, ಪರಮಾತ್ಮನ ದರ್ಶನದಿಂದಲೇ ಪೂರ್ಣತೃಪ್ತನಾಗಿ, ಪರಮಾತ್ಮನೊಡನೆ ವಿಹರಿಸುತ್ತ, ಪರಮಾತ್ಮನೊಡನೆ ತಾನು ಸ್ತ್ರೀರೂಪದಿಂದ ರಮಿಸುತ್ತ, ಪರಮಾತ್ಮನ ಅನುಗ್ರಹದಿಂದ ಅಭಿವ್ಯಕ್ತವಾದ ಸ್ವರೂಪಾನಂದ ಭೋಗಿಸುತ್ತ, ಪ್ರತ್ಯಕ್ಷವಾಗಿ ಪರಮಾತ್ಮನ ಆಜ್ಞೆಗೆ ತಲೆಬಾಗುತ್ತಾನೆ. ಎಲ್ಲಾ ಲೋಕಗಳಲ್ಲಿ ಸ್ವೇಚ್ಛಾನುಸಾರವಾಗಿ ಸಂಚರಿಸಲು ಶಕ್ತನಾಗುತ್ತಾನೆ. ಇದಕ್ಕೆ ವಿರುದ್ಧವಾದ ರೀತಿಯಲ್ಲಿ ಯಾರು ಪರಮಾತ್ಮನನ್ನು ತಿಳಿಯುವನೋ ಅವನು ತನಗಿಂತ ಹೀನರಾದವರ ಅಧೀನನಾಗಿರುತ್ತಾನೆ. ಅವನಿಗೆ ಕೇವಲ ನಶ್ವರಲೋಕ ಪ್ರಾಪ್ತಿಯಾಗುತ್ತದೆ. ಅವನಿಗೆ ಸ್ವೇಚ್ಛಾನುಸಾರವಾಗಿ ಎಲ್ಲ ಲೋಕಗಳಲ್ಲಿ ಸಂಚರಿಸುವ ಸಾಮರ್ಥ್ಯವು ಸಿದ್ಧಿಸದು.

ತಸ್ಯ ಹ ವಾ ಏತಸ್ಯೈವಂ ಪಶ್ಯತ ಏವಂ ಮನ್ವಾನಸ್ಯೈವಂ ವಿಜಾನತ ಆತ್ಮತಃ ಪ್ರಾಣತಃ । ಆತ್ಮತ ಆಶಾ । ಆತ್ಮತಃ ಸ್ಮರಃ । ಆತ್ಮತಃ ಆಕಾಶಃ । ಆತ್ಮತಃ ತೇಜಃ । ಆತ್ಮತಃ ಆಪಃ । ಆತ್ಮತ ಆವಿರ್ಭಾವತಿರೋಭಾವೌ । ಆತ್ಮತೋಽನ್ನಂ । ಆತ್ಮತೋ ಬಲಂ । ಆತ್ಮತೋ ವಿಜ್ಞಾನಂ । ಆತ್ಮತೋ ಧ್ಯಾನಂ । ಆತ್ಮತಃ ಚಿತ್ತಂ । ಆತ್ಮತಃ ಸಂಕಲ್ಪಃ । ಆತ್ಮತೋ ಮನಃ । ಆತ್ಮತೋ ವಾಗ್ । ಆತ್ಮತೋ ನಾಮ। ಆತ್ಮತೋ ಮಂತ್ರಾಃ । ಆತ್ಮತಃ ಕರ್ಮಾಣಿ । ಆತ್ಮತಃ ಏವೇದಂ ಸರ್ವಮಿತಿ ॥

ಶ್ರವಣ-ಮನನಪೂರ್ವಕವಾಗಿ ಈ ರೀತಿಯಲ್ಲಿ ಪರಮಾತ್ಮನನ್ನು ಸಾಕ್ಷಾತ್ಕರಿಸಿ ಮುಕ್ತರಾಗಿರುವ ಬ್ರಹ್ಮದೇವರೇ ಮೊದಲಾದ ಮುಕ್ತರಿಗೆ ಪರಮಾತ್ಮನಿಂದ ಪ್ರಾಣ ಆಶಾ ಸ್ಮರ ಆಕಾಶ ತೇಜಸ್ಸು ಅಪ್ ಅನ್ನ ಬಲ ವಿಜ್ಞಾನ ಧ್ಯಾನ ಚಿತ್ತ ಸಂಕಲ್ಪ ಮನಸ್ಸು ವಾಕ್ ನಾಮ ಮಂತ್ರಕರ್ಮ ಎಂಬೀ ಎಲ್ಲಾ ದೇವತೆಗಳು ಹಾಗೂ ಹುಟ್ಟುವುದು, ರಕ್ಷಿಸಲ್ಪಡುವುದು, ಲಯ ಹೊಂದುವುದು, ನಿಯಮಿಸಲ್ಪಡುವುದು ಇವೆಲ್ಲವೂ ಪ್ರತ್ಯಕ್ಷವಾಗಿ ಗೋಚರಿಸುತ್ತವೆ. ಇದೇ ರೀತಿಯಾಗಿ ಪರಮಾತ್ಮನಿಂದ ಉಂಟಾಗುತ್ತಿರುವ ಎಲ್ಲ ಜಗತ್ತಿನ ಉತ್ಪತ್ತಿ ಹಾಗೂ ನಾಶಗಳು ಆ ಮುಕ್ತರಿಗೆ ಪ್ರತ್ಯಕ್ಷವಾಗಿ ಗೋಚರಿಸುತ್ತವೆ.

ತದೇಷ ಶ್ಲೋಕಃ -

ನ ಪಶ್ಯೋ ಮೃತ್ಯುಂ ಪಶ್ಯತಿ
ನ ರೋಗಂ ನೋ ದುಃಖಿತಾಂ।
ಸರ್ವಂ ಹ ಪಶ್ಯಃ ಪಶ್ಯತಿ
ಸರ್ವಮಾಪ್ನೋತಿ ಸರ್ವಶ ಇತಿ।
ಸ ಏಕಧಾ ಭವತಿ ತ್ರಿಧಾ ಭವತಿ ಪಂಚಧಾ।

ಸಪ್ತಧಾ ನವಧಾ ಚೈವ ಪುನಶ್ಚೈಕಾದಶಃ ಸ್ಮೃತಃ ॥
ಶತಂ ಚ ದಶ ಚೈಕಶ್ಚ ಸಹಸ್ರಾಣಿ ಚ ವಿಂಶತಿಃ ।
ಆಹಾರಶುದ್ಧೌ ಸತ್ತ್ವಶುದ್ಧಿಃ ಸತ್ತ್ವಶುದ್ಧೌ ಧ್ರುವಾ ಸ್ಮೃತಿಃ ।
ಸ್ಮೃತಿಲಂಭೇ ಸರ್ವಗ್ರಂಥೀನಾಂ ವಿಪ್ರಮೋಕ್ಷಃ ॥

ತಸ್ಮೈ ಮೃದಿತಕಷಾಯಾಯ ತಮಸಃ ಪಾರಂ ದರ್ಶಯತಿ ದೇವರ್ಷಯೇ ನಾರದಾಯ ಭಗವಾನ್ ಸನತ್ಕುಮಾರ । ತಂ ಸ್ಕಂದ ಇತ್ಯಾಚಕ್ಷತೇ । ತಂ ಸ್ಕಂದ ಇತ್ಯಾಚಕ್ಷತೇ ॥

॥ ಇತಿ ಶ್ರೀ ಛಾಂದೋಗ್ಯೋಪನಿಷದಿ ಸಪ್ತಮೋऽಧ್ಯಾಯಃ ॥

ಮುಕ್ತನು ಪರಮಾತ್ಮನ ಸೃಷ್ಟ್ಯಾದಿಕಾರ್ಯಗಳನ್ನು ಕಣ್ಣಾರೆ ಕಾಣುವನೆಂದು ಮುಂತಾದ ವಿಷಯದಲ್ಲಿ ಈ ಶ್ಲೋಕಗಳು ಗಮನಾರ್ಹವಾಗಿವೆ. ಪರಮಾತ್ಮಾಪರೋಕ್ಷಜ್ಞಾನಿಯಾದ ಮುಕ್ತನು ಮರಣ ರೋಗ ದುಃಖ ಇವೇ ಮೊದಲಾದ ಅನರ್ಥಗಳನ್ನು ನೋಡುವುದಿಲ್ಲ. ಪರಮಾತ್ಮನಿಂದ ಉಂಟಾಗುತ್ತಿರುವ ಪ್ರಾಣಾದಿ ದೇವತೆಗಳ ಸೃಷ್ಟಿಯೇ ಮೊದಲಾದ ಎಲ್ಲ ಕಾರ್ಯಗಳನ್ನು ಮಾತ್ರ ಸಾಕ್ಷಾತ್ಕರಿಸುತ್ತಾನೆ. ಸರ್ವನೆನಿಸಿರುವ ಆ ಪರಮಾತ್ಮನನ್ನೂ, ಸಕಲ ಅಭೀಷ್ಟಗಳನ್ನೂ ಅವನು ಹೊಂದುತ್ತಾನೆ.

ಒಂದು ಮೂರು ಐದು ಏಳು ಒಂಭತ್ತು ಹನ್ನೊಂದು ನೂರ ಹನ್ನೊಂದು ಸಾವಿರದ ಇಪ್ಪತ್ತು ಎಂದು ಮುಂತಾಗಿ ಇಚ್ಛಾನುಸಾರ ಅನೇಕ ರೂಪಗಳುಳ್ಳವನಾಗುತ್ತಾನೆ.

ಶಾಸ್ತ್ರಶ್ರವಣ ಶುದ್ಧಿ ಇದ್ದರೆ, ಮನನ ಶುದ್ಧಿ ಲಭಿಸುತ್ತದೆ. ಮನನಶುದ್ಧಿ ಇದ್ದರೆ, ಸ್ಥಿರವಾದ ಸ್ಮರಣೆಯು ಸಿದ್ಧಿಸುತ್ತದೆ. ಸ್ಥಿರಸ್ಮರಣೆಯಿಂದ ಅಪರೋಕ್ಷ ಉಂಟಾಗಿ, ಅಜ್ಞಾನ ಕಾಮಕರ್ಮಗಳೇ ಮೊದಲಾದ ಎಲ್ಲ ಬಂಧನಗಳಿಂದ ಮುಕ್ತಿ ದೊರೆಯುತ್ತದೆ.

ಹೀಗೆ ಅಜ್ಞಾನದುಃಖಾದಿರಹಿತವಾದ ದೇವರ್ಷಿನಾರದರಿಗೆ ಪೂಜ್ಯರಾದ ಸನತ್ಕುಮಾರರು ಅಜ್ಞಾನದ ಸಂಪರ್ಕವಿಲ್ಲದ ಪರಮಾತ್ಮ ಸ್ವರೂಪವನ್ನು ತೋರಿಸಿಕೊಟ್ಟರು. ಜ್ಞಾನಿಗಳು ಈ ಸನತ್ಕುಮಾರರನ್ನು ಸ್ಕಂದನ ಅವತಾರವೆಂದು ಹೇಳುತ್ತಿದ್ದಾರೆ. ಆದುದರಿಂದ ಅವರಿಗೆ, ನಾರದರಿಗೆ ಉಪದೇಶಿಸುವ ಸಾಮರ್ಥ್ಯವಿದೆ.

ಇಲ್ಲಿಗೆ ಛಾಂದೋಗ್ಯೋಪನಿಷತ್ತಿನ ಏಳನೆಯ ಅಧ್ಯಾಯ ಮುಗಿಯಿತು.

ವಿಷ್ಣುವೇ ಭೂಮಾ ಎನ್ನಲು ಅಸಾಧಾರಣವಾದ ಎರಡು ಹೇತುಗಳು

तत्वप्रदीपः – 'सम्प्रसादः' पूर्णसुखं, सम्यग्प्रसीदत्यनेन पुरुष इति । पूर्णमेवात्र सुखं विवक्षितम् । ''नाल्पे सुखमस्ति'' इत्युक्तत्वात् ।

'ಭೂಮಾ' ಎಂಬ ಶಬ್ದದಿಂದ ಪ್ರತಿಪಾದ್ಯನಾದವನು ಮಹಾವಿಷ್ಣುವೇ ಆಗಿದ್ದಾನೆ. ಏಕೆಂದರೆ 'ಸಂಪ್ರಸಾದ' ಹಾಗೂ 'ಅಧ್ಯುಪದೇಶಾತ್' ಈ ಎರಡು ಹೇತುಗಳು ವಿಷ್ಣುವಿನಲ್ಲಿ ಮಾತ್ರ ಇರುತ್ತವೆ. 'ಸಂಪ್ರಸಾದ' ಶಬ್ದಕ್ಕೆ 'ಸಮ್ಯಕ್ ಪ್ರಸೀದಯತಿ ಅನೇನ' 'ಯಾವುದರಿಂದ ಚೆನ್ನಾಗಿ ಪ್ರಸನ್ನನಾಗಿದ್ದಾನೋ' ಎಂಬ ನಿಷ್ಪತ್ತಿಯಂತೆ ಪೂರ್ಣವಾದ ಸುಖವುಳ್ಳವನು ಎಂದರ್ಥ. ಸಂಪ್ರಸಾದ ಶಬ್ದದಿಂದ ಪೂರ್ಣವಾದ ಸುಖವನ್ನೇ ವಿವಕ್ಷಿಸಬೇಕು. ಏಕೆಂದರೆ 'ನಾಲ್ಪೇ ಸುಖಮಸ್ತಿ' ಅಲ್ಪರಾದವರಲ್ಲಿ ಪೂರ್ಣಸುಖವು ಇರಲು ಸಾಧ್ಯವಿಲ್ಲ ಎಂದು ಅದೇ ಉಪನಿಷತ್ತು ಹೇಳುತ್ತಿದೆ.

ಮಹಾವಿಷ್ಣುವೇ ಪೂರ್ಣಸುಖಸ್ವರೂಪನು, ಪೂರ್ಣಗುಣಗಳುಳ್ಳ ಭೂಮನೂ ಅವನೇ

तत्वप्रदीपः – गुणगुण्यैक्यात् भूमा विष्णुरिति च युक्तमेव । विश्वतो दर्शनादिकमस्येति विश्वाक्षम् । विश्वशम्भुवं पूर्णसुखस्थानम् । विश्वं प्रविष्टत्वेन वर्तमानम् ।

ಗುಣ ಹಾಗೂ ಗುಣಿಗಳಿಗೆ ಐಕ್ಯವಿರುವುದರಿಂದ ಭೂಮಾ ಎಂದರೆ ಮಹಾವಿಷ್ಣುವೇ ಆಗುತ್ತಾನೆ. ವಿಷ್ಣುವನ್ನು ಭೂಮಾ = ಪೂರ್ಣಗುಣಸ್ವರೂಪನು ಎಂದು ಹೇಳಿದ್ದು ಕ್ಲಿಷ್ಟವೇ ಆಗಿದೆ. ಮಹಾನಾರಾಯಣೋಪನಿಷತ್ತೂ ಕೂಡ ವಿಷ್ಣುವನ್ನೇ ಪೂರ್ಣಸುಖವುಳ್ಳವನೆಂದು ಹೇಳುತ್ತಿದೆ. 'ವಿಶ್ವಾಕ್ಷಮ್' ಎಂದರೆ ಎಲ್ಲವನ್ನು ನೋಡುವವನಾದ್ದರಿಂದ ನೋಡಿ ತಿಳಿದಿದ್ದಾನೆಂದರ್ಥ. 'ವಿಶ್ವಶಂಭುವಂ' ಎಂದರೆ ಪೂರ್ಣವಾದ ಸುಖದ ತಾಣ ಎಂದರ್ಥ. 'ವಿಶ್ವಂ' ಎಂಬ ಪದಕ್ಕೆ ಸಮಸ್ತ ವಿಶ್ವವನ್ನು ಪ್ರವೇಶಿಸಿ ನೆಲೆಸಿದ್ದಾನೆಂದರ್ಥ.

ನಾರಾಯಣ ಶ್ರುತ್ಯರ್ಥ

तत्वप्रदीपः – नारायणं मुक्तसङ्व्यक्तं देवं प्रकाशरूपं, 'द्यु प्रकाशे' इति धातोः । विश्वतः परमं च तदञ्चेति विश्वतः परमाम् । 'विश्वं पूर्णं गुणैः ।।

'ನಾರಾಯಣಂ' ಎಂಬ ಪದಕ್ಕೆ ಮುಕ್ತಸಮುದಾಯಕ್ಕೆ ಆಶ್ರಯನಾದವನು ಎಂದರ್ಥ. 'ದೇವಂ' ಎಂಬ ಶಬ್ದಕ್ಕೆ ಪ್ರಕಾಶಸ್ವರೂಪನೆಂದರ್ಥ. 'ದ್ಯು ಪ್ರಕಾಶೇ' ಎಂಬ ಧಾತುವಿನಿಂದ ಇದು ನಿಷ್ಪನ್ನವಾಗಿದೆ. 'ವಿಶ್ವತಃ ಪರಮಾಮ್' ಎಂಬುದಕ್ಕೆ ಸಮಸ್ತ ವಿಶ್ವಕ್ಕಿಂತ ಅಧಿಕನಾಗಿದ್ದಾನೆ. ಹಾಗೂ ಶ್ರೇಷ್ಠನಾದ್ದರಿಂದ 'ಅ' ಎಂಬ ಅಕ್ಷರದಿಂದ ಪ್ರತಿಪಾದ್ಯನಾಗಿದ್ದಾನೆ ಎಂದರ್ಥ. 'ವಿಶ್ವಂ' ಎಂಬುದಕ್ಕೆ ಗುಣಗಳಿಂದ ಪೂರ್ಣನಾದವನು ಎಂದರ್ಥ.

ವಿವರಣೆ - ಭೂಮಾ ಎಂದರೆ ಮಹಾವಿಷ್ಣುವೇ ಆಗಿದ್ದಾನೆನ್ನಲು ಸೂತ್ರಕಾರರು 'ಸಂಪ್ರಸಾದಾತ್' ಹಾಗೂ 'ಅಧ್ಯುಪದೇಶಾತ್' ಎಂಬೆರಡು ಹೇತುಗಳನ್ನು ಹೇಳಿದ್ದಾರೆ. ಪೂರ್ಣಸುಖಸ್ವರೂಪನಾದವನು ಹಾಗೂ ಎಲ್ಲರಿಗಿಂತ ಅಧಿಕನಾದವನು ಮಾತ್ರ ಭೂಮಾ ಎಂದು ಕರೆಸಿಕೊಳ್ಳುತ್ತಾನೆಂದು ಅದೇ ಛಾಂದೋಗ್ಯೋಪನಿಷತ್ತು ಪ್ರತಿಪಾದನೆ ಮಾಡಿದೆ. ಮುಖ್ಯಪ್ರಾಣನು ಪೂರ್ಣಸುಖಸ್ವರೂಪನಲ್ಲ ಹಾಗೂ ಸಕಲ ಚೇತನಾಚೇತನಪ್ರಪಂಚಕ್ಕಿಂತ ಅಧಿಕನೂ ಕೂಡ ಆಗಿರುವುದಿಲ್ಲ. ಆದ್ದರಿಂದ ಮುಖ್ಯಪ್ರಾಣನನ್ನು ಭೂಮಾ ಎಂದು ಹೇಳಲು ಸಾಧ್ಯವೇ ಇಲ್ಲ. ಹೊರತಾಗಿ ಪೂರ್ಣಸುಖಸ್ವರೂಪನಾದ ಸರ್ವೋತ್ತಮನಾದ ಮಹಾವಿಷ್ಣುವನ್ನೇ 'ಭೂಮಾ' ಎಂದು ಕರೆಯಬೇಕು.

ಮಹಾವಿಷ್ಣುವೇ ಪೂರ್ಣಸುಖಸ್ವರೂಪನಾಗಿದ್ದಾನೆಂದು ನಿರ್ಣಯಿಸಲು ಏನು ಆಧಾರ ? ಎಂಬ ಪ್ರಶ್ನೆಗೆ ಭಾಷ್ಯಕಾರರು ಮಹಾನಾರಾಯಣೋಪನಿಷತ್ತನ್ನು ಆಧಾರವನ್ನಾಗಿ ನೀಡುತ್ತಿದ್ದಾರೆ. 'ಸಹಸ್ರಶೀರ್ಷಂ ದೇವಂ ವಿಶ್ವಾಕ್ಷಂ ವಿಶ್ವಶಂಭುವಂ ವಿಶ್ವಂ ನಾರಾಯಣಂ ದೇವಂ ಅಕ್ಷರಂ ಪರಮಂ ಪದಂ' ಎಂಬ ಶ್ರುತಿಯು ಮಹಾವಿಷ್ಣುವಿನ ಅನೇಕ ಅಸಾಧಾರಣಗುಣಗಳನ್ನು ಹೇಳಿ, 'ವಿಶ್ವಶಂಭುವಂ' ಎಂಬುದಾಗಿ ಪೂರ್ಣಸುಖಸ್ವರೂಪನಾದವನು ಮಹಾವಿಷ್ಣುವೇ ಆಗಿದ್ದಾನೆಂದು ಸ್ಪಷ್ಟಪಡಿಸುತ್ತಿದೆ.

ಸಹಸ್ರಶೀರ್ಷಂ = ಅನಂತ ಅವಯವಗಳುಳ್ಳ, ದೇವಂ = ಪ್ರಕಾಶಸ್ವರೂಪನಾದ, ವಿಶ್ವಾಕ್ಷಂ = ಸಮಸ್ತ ವಿಶ್ವದ ಸಂಪೂರ್ಣಪರಿಜ್ಞಾನವುಳ್ಳ, ವಿಶ್ವಶಂಭುವಂ = ಪರಿಪೂರ್ಣವಾದ ಸುಖಕ್ಕೆ ಆಶ್ರಯನಾದ, ವಿಶ್ವಂ = ಗುಣಪರಿಪೂರ್ಣನಾದ, ನಾರಾಯಣಂ = ಮುಖ್ಯವಾಗಿ ಆಶ್ರಯನಾದ, ದೇವಂ = ಪ್ರಕಾಶಸ್ವರೂಪನಾದ, ಅಕ್ಷರಂ = ಅಕ್ಷರಶಬ್ದ ಪ್ರತಿಪಾದ್ಯನಾದ, ಪರಮಂಪದಂ = ಶ್ರೇಷ್ಠಸ್ಥಾನನಾದ ಪರಮಾತ್ಮನನ್ನು ಎಂದು ಶ್ರುತ್ಯರ್ಥ.

ಹಾಗೂ ವಿಶ್ವತಃ ಪರಮಾಂ ನಿತ್ಯಂ = ಸಮಸ್ತ ಜಗತ್ತಿಗಿಂತ ಶ್ರೇಷ್ಠನಾಗಿದ್ದಾನೆ, ಅಕಾರ ಶಬ್ದಪ್ರತಿಪಾದ್ಯನಾಗಿದ್ದಾನೆ ಮತ್ತು ನಿತ್ಯನಾಗಿದ್ದಾನೆ ಎಂದು ಈ ಶ್ರುತಿಯು ಹೇಳುತ್ತಿದೆ.

ಶ್ರೀಮಜ್ಜಯತೀರ್ಥಭಿಕ್ಷುಗಳಿಂದ ವಿರಚಿತವಾದ

ತತ್ವಪ್ರಕಾಶಿಕಾ

ಛಾಂದೋಗ್ಯೋಪನಿಷತ್ತಿನ 'ಪ್ರಾಣೋ ವಾ' ಎಂಬುದು ವಿಷಯವಾಕ್ಯ

तत्वप्रकाशिका – ।। भूमा सम्प्रासादादध्युपदेशात् ।।

अत्र 'प्राणो वा आशाया भूयान्' इत्युपक्रमेण 'विष्णुर्वै देवेभ्यो भूयांस्तस्माद्भूयान्नाम' इति श्रुत्या च वायुविष्णुसाधारणभूमानाम्नो विष्णौ समन्वयप्रतिपादनादस्ति शास्त्रादिसङ्गतिः ।

ಈ ಅಧಿಕರಣದಲ್ಲಿ 'ಪ್ರಾಣೋ ವಾ' ಎಂಬ ಛಾಂದೋಗ್ಯೋಪನಿಷತ್ತಿನ ಪ್ರಾರಂಭದಿಂದ 'ವಿಷ್ಣುರ್ವೈ ದೇವೇಭ್ಯೋ ಭೂಯಾನ್ ತಸ್ಮಾದ್ ಭೂಯಾನ್ನಾಮ' ವಿಷ್ಣುವು ಸರ್ವದೇವತೆಗಳಿಗಿಂತಲೂ ಶ್ರೇಷ್ಠನಾದ್ದರಿಂದ ಭೂಮಾ ಎನಿಸಿದ್ದಾನೆ ಎಂಬ ಶ್ರುತಿಯಿಂದ ವಾಯು ಹಾಗೂ ವಿಷ್ಣು ಇಬ್ಬರಲ್ಲಿಯೂ ಸಾಧಾರಣವಾದ ಭೂಮಾ ಎಂಬ ನಾಮಾತ್ಮಕಶಬ್ದವನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡುತ್ತಿರುವುದರಿಂದ ಶಾಸ್ತ್ರಸಂಗತಿ, ಅಧ್ಯಾಯಸಂಗತಿ ಹಾಗೂ ಪಾದಸಂಗತಿಗಳಿರುತ್ತವೆಂದು ತಿಳಿಯಬೇಕು.

ಯುಕ್ತಿಬದ್ಧವಾದ ಪೂರ್ವಪಕ್ಷ

तत्वप्रकाशिका – श्रुत्यादिसङ्गतिं विषयादिकं च सूचयन् सयुक्तिकं पूर्वपक्षं दर्शयति ।। प्राण इति ।।

ಶ್ರುತಿಸಂಗತಿ ಹಾಗೂ ಅಧಿಕರಣಸಂಗತಿ, ವಿಷಯ ಮೊದಲಾದವನ್ನು ಸೂಚನೆ ಮಾಡಿ ಯುಕ್ತಿಬದ್ಧವಾದ ಪೂರ್ವಪಕ್ಷವನ್ನು ಭಾಷ್ಯಕಾರರು "ಪ್ರಾಣಃ" ಇತ್ಯಾದಿ ವಾಕ್ಯದಿಂದ ತೋರಿಸುತ್ತಿದ್ದಾರೆ.

ಆನಂದಮಯಾಧಿಕರಣದ ಪೂರ್ಣಾನಂದತ್ವವು ಭೂಮನಲ್ಲಿದೆ

तत्वप्रकाशिका – आनन्दमयाधिकरणे पूर्णानन्दत्वं विष्णोरुक्तं, तच्छन्दोगश्रुतौ भूम्नः प्रतीयते – 'यो भूमा तत्सुखं नाल्पे सुखमस्ति भूमैव सुखम्' इति ।

ಆನಂದಮಯಾಧಿಕರಣದಲ್ಲಿ ಪೂರ್ಣಾನಂದತ್ವವು ವಿಷ್ಣುವಿನ ಧರ್ಮವೆಂದು ಹೇಳಲಾಗಿದೆ. ಅದೇ ಪೂರ್ಣಾನಂದತ್ವವನ್ನು ಛಾಂದೋಗ್ಯಶ್ರುತಿಯು ಭೂಮನಲ್ಲಿ ಹೇಳುತ್ತಿದೆ. 'ಯೋ ವೈ ಭೂಮಾ ತತ್ಸುಖಂ ನಾಲ್ಪೇ ಸುಖಮಸ್ತಿ ಭೂಮೈವ ಸುಖಮ್' 'ಯಾರು ಭೂಮನೋ ಅವನೇ ಪೂರ್ಣಾನಂದಸ್ವರೂಪನು. ಅಲ್ಪರಲ್ಲಿ ಸುಖವು ಇರುವುದಿಲ್ಲ. ಆದ್ದರಿಂದ ಭೂಮನೇ ಪೂರ್ಣಾನಂದಸ್ವರೂಪನು' ಎಂಬುದಾಗಿ.

ಭೂಮಾ ಎಂದರೆ ವಿಷ್ಣುವೋ, ವಾಯುವೋ ?

तत्वप्रकाशिका – तस्य च भूम्नो विष्णोरितरत्वे प्रागुक्तानन्दमयत्वं चेतरस्यैव प्रसज्येतेत्यवश्यं निर्णेयत्वम् । स भूमाऽत्र विषयः । किं विष्णुरुत वायुरिति सन्देहः ।

ಒಂದು ವೇಳೆ ಆ ಭೂಮನು ವಿಷ್ಣುವಿಗಿಂತ ಭಿನ್ನನಾದರೆ ಹಿಂದೆ ಹೇಳಲ್ಪಟ್ಟ ಆನಂದಮಯನೂ ಸಹ ಬೇರೆಯವನೇ ಆಗುತ್ತಾನೆ. ಆದ್ದರಿಂದ ಭೂಮಾ ಎಂಬ ಶಬ್ದದಿಂದ ವಾಚ್ಯನಾದವನು ಯಾರೆಂದು ಅವಶ್ಯ ನಿರ್ಣಯ ಮಾಡಬೇಕು. ಅಂತಹ ಭೂಮನೇ ಈ ಅಧಿಕರಣಕ್ಕೆ ವಿಷಯನು. ಭೂಮಾ ಎಂಬ ಶಬ್ದದಿಂದ ಪ್ರತಿಪಾದ್ಯನಾದವನು ವಿಷ್ಣುವೋ ಅಥವಾ ವಾಯುವೋ ಎಂದು ಸಂದೇಹ.

ಸಂದೇಹ ಹಾಗೂ ಸಂದೇಹಬೀಜ

तत्वप्रकाशिका – पूर्वोक्तसाधारण्यं सन्देहबीजम् । मुख्यप्राणोऽयं भूमेति पूर्वः पक्षः ।

ಮುಖ್ಯಪ್ರಾಣ ಹಾಗೂ ವಿಷ್ಣು ಇಬ್ಬರಲ್ಲಿಯೂ ಸಾಧಾರಣವಾದ ಶ್ರುತಿಯಿರುವುದೇ ಸಂದೇಹಕ್ಕೆ ಕಾರಣವಾಗಿದೆ. ಹೀಗಿರುವಾಗ ಮುಖ್ಯಪ್ರಾಣನೇ ಭೂಮನಾಗುತ್ತಾನೆಂದು ಪೂರ್ವಪಕ್ಷ.

ಆಶಾಗಿಂತ ಶ್ರೇಷ್ಠನಾದವನು ಮುಖ್ಯಪ್ರಾಣ

तत्वप्रकाशिका – अत्र नामवागादितारतम्यमाशावसानमुक्त्वा 'प्राणो वा आशाया भूयान्' इति प्राणस्याशोत्तमत्वं चाभिधाय तदुत्तममनुक्त्वा भूम्न आम्नातत्वात् ।

ಏಕೆಂದರೆ ಛಾಂದೋಗ್ಯಶ್ರುತಿಯಲ್ಲಿ ನಾಮ, ವಾಕ್ ಮೊದಲಾದ ಅಭಿಮಾನಿದೇವತೆಗಳ ತಾರತಮ್ಯಕ್ಕೆ ಆಶಾ ಎಂಬ ಅಭಿಮಾನಿದೇವತೆಯಲ್ಲಿ ಕೊನೆಯನ್ನು ಹೇಳಿ; 'ಪ್ರಾಣೋ ವಾ ಆಶಾಯಾ ಭೂಯಾನ್' ಆಶಾದೇವತೆಗಿಂತ ಮುಖ್ಯಪ್ರಾಣನು ಉತ್ತಮನಾಗಿದ್ದಾನೆಂದು ಹೇಳಿ ಅಂತಹ ಮುಖ್ಯಪ್ರಾಣನಿಗಿಂತಲೂ ಮತ್ತೊಬ್ಬನು ಉತ್ತಮನಿದ್ದಾನೆಂದು ಹೇಳದೇ ಭೂಮನನ್ನು ಪಠಿಸಲಾಗಿದೆ. ಆದ್ದರಿಂದ ಮುಖ್ಯಪ್ರಾಣನೇ ಭೂಮನಾಗಬೇಕು.

ವಿಷ್ಣುವಿಷಯಕಸಮಾಖ್ಯಪ್ರಮಾಣವು ದುರ್ಬಲ

तत्वप्रकाशिका – नच विष्णोरपि भूमत्वस्य श्रुत्यन्तरे प्रसिद्धत्वादत्र वाच्यत्वमिति वाच्यम् । उपक्रमात् समाख्याया दुर्बलत्वात् ।

ಬೇರೆ ಶ್ರುತಿಯಲ್ಲಿ ವಿಷ್ಣುವಿಗೂ ಸಹ ಭೂಮತ್ವವನ್ನು ಹೇಳಿದ್ದು ಪ್ರಸಿದ್ಧವಾಗಿದೆ. ಆದ್ದರಿಂದ ಇಲ್ಲಿಯೂ ಸಹ ಅವನನ್ನೇ ತೆಗೆದುಕೊಳ್ಳಬೇಕಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ ಉಪಕ್ರಮವೆಂಬ ಶ್ರುತಿ ಪ್ರಮಾಣಕ್ಕಿಂತ ಸಮಾಖ್ಯಾಪ್ರಮಾಣವು ದುರ್ಬಲವಾಗಿದೆ.

ಪೂರ್ಣಪ್ರಾಣನೇ ಭೂಮಾ ಹಾಗೂ ಆನಂದಮಯ

तत्वप्रकाशिका – अतो वायोरेव भूमत्वात् तस्यैवानन्दमयत्वमिति भावः ।

ಆದ್ದರಿಂದ ವಾಯುದೇವತೆಯೇ ಭೂಮನೆನಿಸಿದ್ದಾನೆ. ಅವನೇ ಆನಂದಮಯನೂ ಸಹ ಆಗುತ್ತಾನೆಂದು ಪೂರ್ವಪಕ್ಷ.

ವಿಷ್ಣುವು ಭೂಮಾ ಎನಿಸಲಾರ

तत्वप्रकाशिका – ननु 'प्राणो वा आशाया भूयान्' इत्युक्तप्राणशब्दस्यत एव प्राणः' इत्युक्तरीत्या विष्णुपरत्वाद् विष्णोरेव भूमत्वमित्यत आह – उत्क्रान्तेति ।।

'ಪ್ರಾಣೋ ವಾ ಆಶಾಯಾ ಭೂಯಾನ್' ಇತ್ಯಾದಿ ಶ್ರುತಿಯಲ್ಲಿರುವ ಪ್ರಾಣಶಬ್ದವು 'ಅತ ಏವ ಪ್ರಾಣಃ' ಎಂಬ ಸೂತ್ರದಲ್ಲಿ ಹೇಳಿರುವಂತೆ ವಿಷ್ಣುವನ್ನೇ ಪ್ರತಿಪಾದಿಸುತ್ತದೆ. ಪ್ರಾಣಶಬ್ದವಾಚ್ಯನಾದ ವಿಷ್ಣುವಿನಲ್ಲಿಯೇ ಭೂಮತ್ವವು ಯುಕ್ತವಾಗುತ್ತದೆ. ಈ ಶಂಕೆಯ ಪರಿಹಾರಕ್ಕಾಗಿ ಉತ್ಕ್ರಾಂತ ಇತ್ಯಾದಿ ಭಾಷ್ಯವು ಹೊರಟಿದೆ.

ಮುಖ್ಯಪ್ರಾಣನಲ್ಲಿ ಅಸಾಧಾರಣಲಿಂಗ

तत्वप्रकाशिका – नायं प्राणशब्दो विष्णुवाची किन्तु वायुवाच्येव । तत्र 'उत्क्रान्तप्राणान् शूलेन समासं व्यातिषं दहेत्' इत्यादौ प्राणस्योत्क्रमणादि-श्रवणात् । तस्य वायावेव सम्भवात् । सर्वगते हरावसम्भवादित्यर्थः ।

ಶ್ರುತಿಯಲ್ಲಿರುವ ಪ್ರಾಣಶಬ್ದವು ವಿಷ್ಣುವನ್ನು ಪ್ರತಿಪಾದಿಸುವುದಿಲ್ಲ. ಹೊರತಾಗಿ ವಾಯುದೇವನನ್ನೇ ಪ್ರತಿಪಾದಿಸುತ್ತದೆ. ಏಕೆಂದರೆ, 'ಉತ್ಕ್ರಾಂತಪ್ರಾಣಾನ್ ಶೂಲೇನ ಸಮಾಸಂ ವ್ಯತಿಷಂ ದಹೇತ್' ಎಂಬಲ್ಲಿ 'ಪ್ರಾಣನು ದೇಹದಿಂದ ಹೊರಟಮೇಲೆ ತಂದೆ ಹಾಗೂ ತಾಯಿಗಳ ಶರೀರವನ್ನು ಶೂಲದಿಂದ ಚುಚ್ಚಿದರೂ ಬೆಂಕಿಯಿಂದ ಸುಟ್ಟರೂ ತಪ್ಪಿಲ್ಲ' ಇತ್ಯಾದಿ ವಾಕ್ಯಗಳಿಂದ ಮುಖ್ಯಪ್ರಾಣನ ನಿರ್ಗಮನವೆಂಬ ಲಿಂಗವು ಕೇಳಿಸುತ್ತಿದೆ. ಈ ಲಿಂಗವು ಮುಖ್ಯಪ್ರಾಣನಲ್ಲೇ ಉಪಪನ್ನವಾಗುತ್ತದೆ. ಎಲ್ಲೆಡೆ ವ್ಯಾಪ್ತನಾದ ಶ್ರೀಹರಿಯಲ್ಲಿ ನಿರ್ಗಮನವನ್ನು ಹೇಳಲು ಸಾಧ್ಯವಿಲ್ಲ. ಆದ್ದರಿಂದ ಮುಖ್ಯಪ್ರಾಣನನ್ನೇ ಭೂಮನೆನ್ನಬೇಕೆಂದು ಪೂರ್ವಪಕ್ಷ.

ವಿಷ್ಣುವೇ 'ಭೂಮಾ' ಎಂದು ಸಿದ್ಧಾಂತ

तत्वप्रकाशिका – सिद्धान्तयत्सूत्रमवतार्य व्याचष्टे – अत इति ।। विष्णुरेवायं भूमा । 'यो वै भूमा तत्सुखम्' इति भूम्नः पूर्णसुख-रूपत्वाभिधानात् । नामादीनां सर्वेषामुपरि तदुत्तमत्वेन व्यपदेशाच्चेत्यर्थः ।

ಸಿದ್ಧಾಂತ ಸ್ಥಾಪನೆಯನ್ನು ಮಾಡುವ ಸೂತ್ರವನ್ನು ಪಠಿಸಿ ವ್ಯಾಖ್ಯಾನಿಸುತ್ತಿದ್ದಾರೆ ''ಅತಃ'' ಇತ್ಯಾದಿ ಭಾಷ್ಯದಿಂದ. ಶ್ರುತಿಯಲ್ಲಿ ಪ್ರಸ್ತುತನಾದ ಭೂಮನು ವಿಷ್ಣುವೇ ಆಗಿದ್ದಾನೆ. ಏಕೆಂದರೆ, 'ಯೋ ವೈ ಭೂಮಾ ತತ್ಸುಖಮ್' ಎಂಬುದಾಗಿ ಯಾವ ವ್ಯಕ್ತಿಯು ಭೂಮನಾಗಿದ್ದಾನೋ ಅವನು ಪೂರ್ಣಸುಖಸ್ವರೂಪನೆಂದು ಹೇಳಿರುವುದರಿಂದ. ಮತ್ತು ನಾಮಾಭಿಮಾನಿ-ದೇವತೆಗಳೆಲ್ಲರಿಗಿಂತ ಅತ್ಯಂತ ಅಧಿಕನಾಗಿ ಉತ್ತಮನೆಂದು ಶ್ರುತಿಯು ಹೇಳಿರುವುದರಿಂದಲೂ ವಿಷ್ಣುವೇ ಭೂಮನಾಗಬೇಕು.

'ಭೂಮಾ' ಎಂದರೆ ಸುಖಸ್ವರೂಪ; ಪೂರ್ಣಸುಖವುಳ್ಳವನಲ್ಲ

तत्वप्रकाशिका – नच वाच्यमत्र भूम्नः सुखरुपत्वमेवोच्यते नतु पूर्णसुखत्वमिति । निरुपपदसुखशब्दमात्रस्यापि पूर्णसुखार्थत्वम् । पूर्णसुखत्वादिकं च कुतो विष्णुत्वनिश्चायकमित्यत आह – सहस्रेति ।।

ಶ್ರುತಿಯಲ್ಲಿ ಭೂಮನನ್ನು ಸುಖಸ್ವರೂಪನೆಂದು ಹೇಳಲಾಗಿದೆ ಹೊರತು, ಪೂರ್ಣವಾದ ಸುಖವುಳ್ಳವನೆಂದು ಹೇಳಿರುವುದಿಲ್ಲವೆಂದು ಪ್ರಶ್ನಿಸಬಾರದು. ಏಕೆಂದರೆ, ಉಪಪದವಿಲ್ಲದ ಸುಖಶಬ್ದವು ಪೂರ್ಣಸುಖವೆಂಬರ್ಥವನ್ನೇ ಹೇಳುತ್ತದೆ ಹೊರತು ಕೇವಲ ಸುಖವೆಂಬರ್ಥವನ್ನು ಹೇಳಲು ಸಾಧ್ಯವಿಲ್ಲ. ಪೂರ್ಣವಾದ ಸುಖವಿರುವ ಮಾತ್ರದಿಂದ ವಿಷ್ಣುವೇ ಭೂಮನಾಗಿ-ದ್ದಾನೆಂದು ಹೇಗೆ ನಿರ್ಣಯಿಸುತ್ತೀರಿ? ಎಂಬ ಪ್ರಶ್ನೆಗೆ ''ಸಹಸ್ರ'' ಇತ್ಯಾದಿ ಭಾಷ್ಯದಿಂದ ಉತ್ತರಿಸುತ್ತಿದ್ದಾರೆ.

'ವಿಶ್ವತಃ ಪರಮಾಂ ವಿಷ್ಣುಂ' ಎಂಬುದರ ಅರ್ಥ

तत्वप्रकाशिका – विश्वशम्भुवं पूर्णसुखाश्रयम् । विश्वतः परमां = सर्वतः परमम्, अकारवाच्यमित्यर्थः ।

'ವಿಶ್ವಶಂಭುವಮ್' ಎಂಬ ಶಬ್ದಕ್ಕೆ ಪೂರ್ಣವಾದ ಸುಖಕ್ಕೆ ಆಶ್ರಯನಾದವನು ಎಂದರ್ಥ. 'ವಿಶ್ವತಃ ಪರಮಾಂ' ಎಂದರೆ ಎಲ್ಲರಿಗಿಂತ ಶ್ರೇಷ್ಠನಾದವನು ಮತ್ತು ಅಕಾರಶಬ್ದವಾಚ್ಯನಾದವನು ಎಂದರ್ಥ.

ಇಬ್ಬರೂ ಸರ್ವೋತ್ತಮರಾಗಲು ಸಾಧ್ಯವಿಲ್ಲ

तत्वप्रकाशिका – नच सर्वोत्तमत्वं वायोरपि । विरोधादेव । नापि पूर्णानन्दत्वम् । 'अव्यक्तादितृणान्तास्तु विष्णुडान्दभागिनः' इत्युक्तत्वात् । उपक्रमे प्राणशब्दश्रवणात् कथं भूमा विष्णुः ? इति चेन्न । प्राणशब्देनापि विष्णोरेवोक्तत्वात् ।

ವಿಷ್ಣು ಹೇಗೆ ಸರ್ವೋತ್ತಮನಾಗಿದ್ದಾನೋ ಅದರಂತೆ ವಾಯುದೇವನೂ ಸಹ ಏಕೆ ಸರ್ವೋತ್ತಮನಾಗಿರಬಾರದು? ಎಂದು ಪ್ರಶ್ನಿಸಬಾರದು. ಇಬ್ಬರು ಸರ್ವೋತ್ತಮರಾಗುವುದಿಲ್ಲ. ಹಾಗಾದಲ್ಲಿ ಪರಸ್ಪರ ಅವರಿಬ್ಬರಿಗೆ ವಿರೋಧ ಬರುತ್ತದೆ. ಅದರಂತೆ ವಾಯುದೇವರು ಪೂರ್ಣಾನಂದ ಸ್ವರೂಪರೂ ಸಹ ಆಗಲು ಸಾಧ್ಯವಿಲ್ಲ. ಏಕೆಂದರೆ 'ಅವ್ಯಕ್ತಾದಿತೃಣಾಂತಾಸ್ತು ವಿಷ್ಣುಡಾನಂದಭಾಗಿನಃ' 'ರಮಾದೇವಿಯಿಂದ ಪ್ರಾರಂಭಿಸಿ ತೃಣಪರ್ಯಂತ ಸಕಲಜೀವರು ಪರಮಾತ್ಮನ ಆನಂದದ ಲೇಶವನ್ನಷ್ಟೇ ಹೊಂದಿರುತ್ತಾರೆ' ಎಂಬುದಾಗಿ ಪ್ರಮಾಣವಿರುತ್ತದೆ. ಉಪಕ್ರಮದಲ್ಲಿ ಪ್ರಾಣಶಬ್ದವು ಕೇಳಿಸುತ್ತಿರುವುದರಿಂದ ಭೂಮಾ ಎಂಬ ಶಬ್ದವು ವಿಷ್ಣು ಎಂಬರ್ಥವನ್ನು ಹೇಗೆ ನೀಡುತ್ತದೆ? ಎಂಬ ಪ್ರಶ್ನೆಯೂ ಸಹ ತಪ್ಪು. ಪ್ರಾಣಶಬ್ದದಿಂದಲೂ ಸಹ ವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆ.

ಉತ್ಕ್ರಮಣ ಎಂಬ ಮುಖ್ಯಪ್ರಾಣನ ಲಿಂಗ ವಿರೋಧವಿಲ್ಲ

तत्वप्रकाशिका – अनन्तरमन्यमनुक्त्वोक्तभूम्नोऽपि विष्णुत्वसम्भवात् । अत्र प्राणशब्देन विष्ण्वङ्गीकारे प्रागुक्तोत्क्रमणादिविरोधः? इति तत्राह – तमिति ।।

ನಾಮಾಭಿಮಾನಿ ದೇವತೆಯಿಂದ ಪ್ರಾರಂಭಿಸಿ ಮುಖ್ಯಪ್ರಾಣನ ತನಕ ಆಧಿಕ್ಯವನ್ನು ಶ್ರುತಿಯು ಹೇಳಿದೆ. ಅನಂತರ ಮುಖ್ಯಪ್ರಾಣನಿಗಿಂತ ಮತ್ತೊಬ್ಬ ಶ್ರೇಷ್ಠನಾದ ವ್ಯಕ್ತಿಯನ್ನು ಹೇಳಿರುವುದಿಲ್ಲ. ಆದ್ದರಿಂದ ಸರ್ವೋತ್ತಮನಾದ ವಿಷ್ಣುವೇ ಪ್ರಾಣಶಬ್ದವಾಚ್ಯನಾಗುತ್ತಾನೆಂಬುದು ಸಿದ್ಧವಾಗುತ್ತದೆ. ಶ್ರುತಿಯಲ್ಲಿ ಶ್ರುತವಾದ ಪ್ರಾಣಶಬ್ದದಿಂದ ವಿಷ್ಣು ಪ್ರತಿಪಾದ್ಯನಾದರೆ ಹಿಂದೆ ಹೇಳಲ್ಪಟ್ಟ ಉತ್ಕ್ರಮಣವೆಂಬ ಮುಖ್ಯಪ್ರಾಣನ ಲಿಂಗದಿಂದ ವಿರೋಧ ಬರುತ್ತದಲ್ಲವೇ? ಎಂಬ ಪ್ರಶ್ನೆಗೆ ''ತಮ್'' ಇತ್ಯಾದಿ ಭಾಷ್ಯದಿಂದ ಉತ್ತರಿಸಿದ್ದಾರೆ.

ದೇವರಲ್ಲಿಯೇ ಉತ್ಕ್ರಮಣಲಿಂಗ ಅಸಾಧಾರಣವಾಗಿದೆ

तत्वप्रकाशिका – सर्वगतस्यापि विष्णो रूपान्तरविवक्षयोत्क्रमणस्य श्रुतिसिद्धत्वात्, प्राणपदेन विष्ण्वङ्गीकारेऽपि न लिङ्गविरोध इति भावः ।

ವಿಷ್ಣು ಎಲ್ಲೆಡೆ ವ್ಯಾಪ್ತನಾಗಿದ್ದಾನೆ. ಆದರೂ ಸಹ ಅನೇಕರೂಪಗಳಿರುವುದರಿಂದ ಒಂದು ರೂಪದಿಂದಷ್ಟೇ ದೇಹದಿಂದ ಉತ್ಕ್ರಮಣ ಮಾಡುತ್ತಾನೆ. ಹೀಗೆ ಶ್ರುತಿಗಳೇ ಸಾಧಿಸುತ್ತಿವೆ. ಆದ್ದರಿಂದ ಪ್ರಾಣಪದದಿಂದ ವಿಷ್ಣು ಪ್ರತಿಪಾದ್ಯನಾಗುತ್ತಾನೆಂದು ಹೇಳಿದರೂ ಕೂಡ ಉತ್ಕ್ರಮಣಾದಿಲಿಂಗಗಳ ವಿರೋಧವು ಬರುವುದಿಲ್ಲವೆಂದು ತಿಳಿಯಬೇಕು.

ಮುಖ್ಯಪ್ರಾಣನು ಪ್ರಾಣನೆನಿಸಿದರೂ ಭೂಮಾ ಎನಿಸಲಾರ

तत्वप्रकाशिका – अस्तु वाऽयं प्राणो वायुरेव तथापि न तस्य भूमत्वप्राप्तिः । 'एष तु वा अतिवदति' इत्यादिना प्रश्नाद्यध्याहारेण प्राणात्विष्णोर्भूयस्त्वमुक्त्वा भूम्न आम्नानात् । न चैतदर्थद्वयं विरुद्धम् । अन्तर्यामिविवक्षया प्राणपदेन विष्णोरुक्तेः 'आत्मन आकाशः सम्भूतः' इत्यादिवत् ।। ८ ।।

ಅಥವಾ ಪೂರ್ವಪಕ್ಷಕಾರರು ಹೇಳಿದಂತೆ ಮುಖ್ಯಪ್ರಾಣದೇವರೇ ವಾಯುಶಬ್ದವಾಚ್ಯರಾಗಲಿ. ಆದರೆ ಭೂಮನಾಗಲು ಸಾಧ್ಯವಿಲ್ಲ. ಏಕೆಂದರೆ, 'ಏಷ ತು ವಾ ಅತಿವದತಿ' ಇತ್ಯಾದಿ ವಾಕ್ಯಗಳಿಂದ ಪ್ರಶ್ನೆ ಮೊದಲಾದವುಗಳನ್ನು ಅಧ್ಯಾಹಾರ ಮಾಡಿ, ಪ್ರಾಣನಿಗಿಂತ ವಿಷ್ಣುವಿಗೆ

ಉತ್ತಮತ್ವವನ್ನು ಹೇಳಿ ಭೂಮತ್ವವನ್ನು ಸಾಧಿಸಲಾಗಿದೆ. ಒಂದೇ ಪ್ರಾಣಶಬ್ದಕ್ಕೆ ಎರಡು ಅರ್ಥಗಳನ್ನು ಹೇಳುವುದು ವಿರುದ್ಧವಲ್ಲವೇ? ಎಂದೂ ಪ್ರಶ್ನಿಸಬಾರದು. ಮುಖ್ಯಪ್ರಾಣನ ಅಂತರ್ಯಾಮಿವಿವಕ್ಷೆಯಿಂದ ಪ್ರಾಣಪದಿಂದ ವಿಷ್ಣುವನ್ನು ಹೇಳಬಹುದು. 'ಆತ್ಮನಃ ಆಕಾಶಃ ಸಂಭೂತಃ' ಎಂಬಲ್ಲಿ ಆಕಾಶಶಬ್ದಕ್ಕೆ ಭೂತಾಕಾಶ ಹಾಗೂ ಅದರ ಅಂತರ್ಯಾಮಿಯಾದ ವಿಷ್ಣು ಎಂಬುದಾಗಿ ಎರಡು ಅರ್ಥಗಳನ್ನು ಹೇಳುವಂತೆ ಇಲ್ಲಿಯೂ ಸಹ ಎರಡು ಅರ್ಥಗಳನ್ನು ಒಪ್ಪಬಹುದು.

ಮಂತ್ರಾಲಯ ಪ್ರಭುಗಳಾದ ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ವಿರಚಿತವಾದ

ಭಾವದೀಪ

ಉಭಯತ್ರಪ್ರಸಿದ್ಧವಾದ 'ಭೂಮಾ' ಎಂಬ ನಾಮಾತ್ಮಕಶಬ್ದ ಸಮನ್ವಯ

भावदीपः – भूमा सम्प्रसादादध्युपदेशात् ।। न्यायविवरणोक्तरीत्या साधारण्यं व्यनक्ति – प्राणो वा इति ।। तस्माद् देवेभ्यो भूयस्त्वादित्यर्थः ।

ಭೂಮಾಧಿಕರಣವು ಪ್ರಾರಂಭವಾಗುತ್ತಿದೆ. ಈ ಅಧಿಕರಣದಲ್ಲಿ ಉಭಯತ್ರ ಪ್ರಸಿದ್ಧವಾದ ''ಭೂಮಾ'' ಎಂಬ ನಾಮಾತ್ಮಕಶಬ್ದವನ್ನು ಮಹಾವಿಷ್ಣುವಿನಲ್ಲಿ ಸಮನ್ವಯ ಮಾಡುತ್ತಿದ್ದಾರೆ. ನ್ಯಾಯವಿವರಣದಲ್ಲಿ ಈ ಶಬ್ದವನ್ನು ವಿಷ್ಣುವಿನಲ್ಲಿ ಹಾಗೂ ಮುಖ್ಯಪ್ರಾಣದೇವರಲ್ಲಿ ಸಾಧಾರಣವಾಗಿದೆ ಎಂದು ಹೇಳುವ ಮೂಲಕ ಉಭಯತ್ರಪ್ರಸಿದ್ಧವೆಂದು ಸಮರ್ಥಿಸಿದ್ದಾರೆ. ಅದನ್ನು ಟೀಕೆಯಲ್ಲಿ ''ಪ್ರಾಣೋ ವಾ'' ಇತ್ಯಾದಿ ಶ್ರುತಿಯ ಉಲ್ಲೇಖದ ಮುಖದಿಂದ ವ್ಯಾಖ್ಯಾನಿಸುತ್ತಿದ್ದಾರೆ. ''ತಸ್ಮಾದ್ ಭೂಯಾನ್ನಾಮ'' ಎಂಬಲ್ಲಿರುವ ''ತಸ್ಮಾತ್'' ಎಂಬ ಪದಕ್ಕೆ ದೇವತೆಗಳಿಂದ ಉತ್ತಮರಾದ ಕಾರಣ ಎಂದರ್ಥ.

ಭೂಮಾ ಶಬ್ದಕ್ಕೆ ಉಭಯತ್ರಪ್ರಸಿದ್ಧತ್ವ ಸಮರ್ಥನೆ

भावदीपः – समाख्यायाः प्रक्रमाद्दौर्बल्येऽपि साभ्यासत्वेन सोपपत्तिकत्वेन च प्राबल्यात् साधारण्यमविरुद्धम् । अत एव तस्माद् भूयान्नामेत्यन्तोक्तिः । भूमभूयश्शब्दयोरैकार्थ्यादिति भावः ।

''ಭೂಮಾ'' ಶಬ್ದವು ವಿಷ್ಣುವಿನಲ್ಲಿ ಉಪಕ್ರಮರೂಪವಾದ ಶ್ರುತಿಯ ಬಲದಿಂದ ಪ್ರಸಿದ್ಧವಾಗಿದೆ. ಸಮಾಖ್ಯಾಪ್ರಮಾಣದ ಬಲದಿಂದ ಮುಖ್ಯಪ್ರಾಣದೇವರಲ್ಲಿ ಪ್ರಸಿದ್ಧವಾಗಿದೆ. ಉಪಕ್ರಮವೆಂಬ ಶ್ರುತಿಪ್ರಮಾಣಕ್ಕಿಂತ ಸಮಾಖ್ಯಾಪ್ರಮಾಣವು ದುರ್ಬಲವಾದ್ದರಿಂದ ಈ ಎರಡು ಪ್ರಮಾಣಗಳ ಆಧಾರದಿಂದ 'ಭೂಮಾ' ಎಂಬ ಶಬ್ದವು ಉಭಯ ಸಾಧಾರಣವಾಗಿದೆ ಎಂದು ಹೇಳಲು ಹೇಗೆ ಸಾಧ್ಯ? ಎಂದು ಪ್ರಶ್ನಿಸಬಾರದು. ಸಮಾಖ್ಯಾಪ್ರಮಾಣವು ಶ್ರುತಿಪ್ರಮಾಣಕ್ಕಿಂತ ದುರ್ಬಲವಾಗಿರಬಹುದು. ಆದರೆ ಪ್ರಕೃತ ಮುಖ್ಯಪ್ರಾಣದೇವರ ವಿಷಯದಲ್ಲಿರುವ ಸಮಾಖ್ಯಾಪ್ರಮಾಣವು ಅಭ್ಯಾಸ ಪ್ರಮಾಣದಿಂದಲೂ ಯುಕ್ತಿಪ್ರಮಾಣದಿಂದಲೂ ಸಹಿತವಾಗಿದೆ. ಸ್ವಾಭಾವಿಕವಾಗಿ ದುರ್ಬಲವಾಗಿದ್ದರೂ ಈ ಎರಡು ಪ್ರಮಾಣದಿಂದ ಕೂಡಿರುವ ಕಾರಣ ಶ್ರುತಿಯು ಎಷ್ಟು ಪ್ರಬಲವಾಗಿದೆಯೋ ಅಷ್ಟೇ ಪ್ರಾಬಲ್ಯವನ್ನು ಸಮಾಖ್ಯಾಪ್ರಮಾಣವೂ ಸಹ ಹೊಂದಿರುತ್ತದೆ. ಹೀಗೆ ಪ್ರಮಾಣ ಬಲವನ್ನು ಹೊಂದಿರುವ ಶ್ರುತಿಪ್ರಮಾಣ ಹಾಗೂ ಸಮಾಖ್ಯಾಪ್ರಮಾಣಗಳ ಆಧಾರದಿಂದ 'ಭೂಮಾ' ಎಂಬ ಶಬ್ದವು ಉಭಯಸಾಧಾರಣವಾಗಿದೆ ಎಂದು ನ್ಯಾಯವಿವರಣದಲ್ಲಿ ಹೇಳಿದ್ದು ವಿರುದ್ಧವಲ್ಲ.

ಆದ್ದರಿಂದಲೇ ಟೀಕೆಯಲ್ಲಿ ''ವಿಷ್ಣುರ್ವೈ ದೇವೇಭ್ಯಃ ಭೂಯಾನ್'' ಎಂದಷ್ಟೇ ಶ್ರುತಿಯನ್ನು ಉಲ್ಲೇಖಿಸಿದ್ದರೆ ಸಾಕಾಗಿತ್ತು. ಆದರೂ ಸಹ ''ತಸ್ಮಾದ್ ಭೂಯಾನ್ನಾಮ'' ಎಂಬ ಮುಂದಿನ ವಾಕ್ಯವನ್ನು ಉಲ್ಲೇಖಿಸಿರುತ್ತಾರೆ. ಭೂಮಾ ಹಾಗೂ ಭೂಯಃ ಎಂಬೆರಡು ಶಬ್ದಗಳಿಗೆ ಒಂದೇ ಅರ್ಥ ಇರುವುದರಿಂದ ಅಭ್ಯಾಸ ಪ್ರಮಾಣವನ್ನು ಇದರಿಂದ ಹೇಳಿದಂತಾಗುತ್ತದೆ.

ಅಜ್ಞಾನಿಗಳಿಗೆ ಉಭಯಸಾಧಾರಣ ಎಂದರೇನು ?

भावदीपः – न्यायविवरणे भूमशब्दोऽज्ञानां साधारण इत्यज्ञपदप्रयोगेऽपि तस्य पूर्वोत्तरपक्षन्यायानुसन्धानहीनानाम् इत्यर्थत्वात् तस्य सर्वनय-साधारण्यादिहाज्ञानामिति नोक्तम् । भूमशब्दस्य 'अध्यात्मसम्बन्धभूमा' 'भूम्नः क्रतुवज्ज्यायस्त्वम्' इत्यादौ बाहुल्यरूपधर्मवाचित्वेन प्रयोगेऽपीह धर्मधर्मिणोरभेदविवक्षया पूर्णरूपधर्मिपरत्वमिति मत्वोक्तम् –

ಪ್ರಶ್ನೆ - ನ್ಯಾಯವಿವರಣದಲ್ಲಿ 'ಭೂಮಾ' ಎಂಬ ಶಬ್ದವು ಅಜ್ಞಾನಿಗಳ ವಿವಕ್ಷೆಯಿಂದಷ್ಟೇ ಉಭಯ ಸಾಧಾರಣವಾಗಿದೆ ಎಂದು ಹೇಳಿದ್ದಾರೆ. ಈಗಾಗಲೇ ಹೇಳಿದಂತೆ ಸಮಾಖ್ಯಾ ಪ್ರಮಾಣವು ಅಭ್ಯಾಸ

ಹಾಗೂ ಉಪಪತ್ತಿಗಳಿಂದ ಯುಕ್ತವಾದಾಗ ಪ್ರಬಲವಾದ ಪ್ರಯುಕ್ತ ಎಲ್ಲರ ದೃಷ್ಟಿಯಿಂದಲೂ ಉಭಯಸಾಧಾರಣವೆಂದೇ ಹೇಳಬಹುದಿತ್ತು. ಹೀಗಿರುವಾಗ ಅಜ್ಞಾನಿಗಳ ದೃಷ್ಟಿಯಿಂದಷ್ಟೇ ಉಭಯಸಾಧಾರಣವೆಂದು ಹೇಳಿದ್ದು ಹೇಗೆ ಸರಿ?

ಉತ್ತರ - ''ಅಜ್ಞಾನಾಂ ಸಾಧಾರಣಃ'' ಎಂದು ಅಜ್ಞ ಪದವನ್ನು ಪ್ರಯೋಗಿಸಲು ಬೇರೆ ಕಾರಣವಿದೆ. ಯಾವ ವ್ಯಕ್ತಿಗೆ ಪೂರ್ವಪಕ್ಷನ್ಯಾಯ ಹಾಗೂ ಸಿದ್ಧಾಂತನ್ಯಾಯಗಳ ಅನುಸಂಧಾನವಿರುವುದಿಲ್ಲವೋ ಅಂತಹ ವ್ಯಕ್ತಿಯ ದೃಷ್ಟಿಯಿಂದ ಈ ಶಬ್ದವು ಉಭಯಸಾಧಾರಣವಾಗಿದೆ ಎಂಬ ವಿವಕ್ಷೆಯಿಂದ 'ಅಜ್ಞ' ಪದವನ್ನು ಪ್ರಯೋಗಿಸಿದ್ದಲ್ಲ. ಹಾಗೆ ಪ್ರಯೋಗಿಸಿದ್ದಲ್ಲಿ ಎಲ್ಲಾ ಅಧಿಕರಣಗಳಲ್ಲಿಯೂ ಹೀಗೆ ಉಭಯಸಾಧಾರಣ್ಯವನ್ನು ಹೇಳಬಹುದಾದ್ದರಿಂದ ಎಲ್ಲವೂ ಉಭಯಸಾಧಾರಣಶಬ್ದಗಳೇ ಆಗುತ್ತಿದ್ದವು. ಆದ್ದರಿಂದ ಭೂಮಾ ಎಂಬ ಶಬ್ದವು ''ಅಧ್ಯಾತ್ಮಸಂಬಂಧಭೂಮಾ'' ಮತ್ತು ''ಭೂಮ್ನಃ ಕ್ರತುವಜ್ಜ್ಯಾಯಸ್ತ್ವಂ'' ಇತ್ಯಾದಿ ಸೂತ್ರಗಳಲ್ಲಿ ಬಾಹುಲ್ಯವೆಂಬ ಧರ್ಮಾರ್ಥದಲ್ಲಿ ಪ್ರಯೋಗಿಸಲ್ಪಟ್ಟಿದೆ. ಆದರೆ ಪ್ರಕೃತ ಈ ಅಧಿಕರಣದಲ್ಲಿ ಭೂಮಾವೆಂಬ ಶಬ್ದವನ್ನು ಧರ್ಮ ಹಾಗೂ ಧರ್ಮಿಗಳಿಗೆ ಅಭೇದದ ವಿವಕ್ಷೆಯಿಂದ 'ಧರ್ಮಿ' ಎಂಬ ಅರ್ಥದಲ್ಲಿ ಪ್ರಯೋಗಿಸಲ್ಪಟ್ಟಿದೆ. ಈ ವಿಷಯವನ್ನು ತಿಳಿಸುವುದಕ್ಕಾಗಿ ''ಅಜ್ಞಾನಾಂ'' ಎಂಬ ಪದವನ್ನು ಪ್ರಯೋಗಿಸಿದ್ದಾರೆ. ಇದರಿಂದ ಭೂಮಾವೆಂಬ ಶಬ್ದವು ಉಭಯತ್ರ ಪ್ರಸಿದ್ಧವಾಗಿರುವುದಷ್ಟೇ ಅಲ್ಲದೆ ನಾಮಾತ್ಮಕವೂ ಆಗಿದೆ ಎಂದು ತಿಳಿಸಿದಂತಾಗುತ್ತದೆ.

'ಯೋ ವೈ ಭೂಮಾ ತತ್ ಸುಖಮ್'

ಭಾವದೀಪಃ – ಭೂಮನಾಮ್ನೋ ವಿಷ್ಣಾವಿತಿ ।। ಅಧಿಕಂ ಚನ್ದ್ರಿಕಾಯಾಮ್ । ಇತ್ಯನ್ತಭಾಷ್ಯಂ ಸಙ್ಗತಿಪರತ್ವೇನ ತಾವದ್ ವ್ಯಾಕುರ್ವನ್ 'ಯೋ ವೈ ಭೂಮಾ ತತ್ಸುಖಮ್' ಇತ್ಯುಕ್ತೇರಿತ್ಯೇತಸ್ಯ ಭಾವಾರ್ಥಮಾಹ – ಆನನ್ದಮಯೇತಿ ।।

''ಭೂಮನಾಮ್ನೋ ವಿಷ್ಣೌ'' ಎಂದು ಟೀಕೆಯಲ್ಲಿ ಭೂಮಾವೆಂಬ ನಾಮಾತ್ಮಕಶಬ್ದವನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಇದು ಹೇಗೆ ನಾಮಾತ್ಮಕ ಶಬ್ದವಾಗುತ್ತದೆ? ಎಂಬ ವಿಷಯದಲ್ಲಿ ಹೆಚ್ಚಿನ ವಿಚಾರವನ್ನು ತಾತ್ಪರ್ಯಚಂದ್ರಿಕೆಯನ್ನು ಓದಿ ತಿಳಿದುಕೊಳ್ಳಬೇಕು. ''ಇತಿ'' ಎಂಬಲ್ಲಿಯ ತನಕದ ಭಾಷ್ಯವನ್ನು ಅಧಿಕರಣದ ಸಂಗತಿಯನ್ನು ತೋರಿಸುವುದಕ್ಕಾಗಿ ಹೇಳಿರುತ್ತಾರೆಂಬ ಉದ್ದೇಶದಿಂದ ವ್ಯಾಖ್ಯಾನಿಸುತ್ತಾ ''ಯೋ ವೈ ಭೂಮಾ ತತ್ಸುಖಂ ಇತ್ಯುಕ್ತೇಃ'' ಎಂಬ ಭಾಷ್ಯದ ಅಭಿಪ್ರಾಯವನ್ನು ''ಆನಂದಮಯಾಧಿಕರಣೇ'' ಇತ್ಯಾದಿ ವ್ಯಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ.

ವಿಶೇಷವಿಚಾರ - 'ಭೂಮಾ' ಎಂಬ ನಾಮಾತ್ಮಕಶಬ್ದವನ್ನು ಈ ಅಧಿಕರಣದಲ್ಲಿ ಸಮನ್ವಯ ಮಾಡುತ್ತಿದ್ದಾರೆ.

ಪ್ರಶ್ನೆ - 'ಭೂಮಾ' ಎಂಬ ಶಬ್ದವು 'ಬಹು' ಎಂಬ ಶಬ್ದದಿಂದ ನಿಷ್ಪನ್ನವಾಗಿದೆ. 'ಬಹೋರ್ಲೋಪೋ ಭೂ ಚ ಬಹೋಃ' ಎಂಬ ಸೂತ್ರದಿಂದ ಭಾವಾರ್ಥದಲ್ಲಿ 'ಬಹು' ಶಬ್ದಕ್ಕೆ 'ಭೂ' ಎಂಬ ಆದೇಶ ಬಂದು 'ಇಮನಿಚ್' ಪ್ರತ್ಯಯದ ಜೊತೆಗೆ ಸೇರಿ 'ಭೂಮಾ' ಎಂಬ ರೂಪವು ಸಿದ್ಧವಾಗಿದೆ. 'ಬಹು' ಶಬ್ದಕ್ಕೆ ಬಹುತ್ವಸಂಖ್ಯೆಯು ಅರ್ಥವಾಗಿರುವುದರಿಂದ 'ಭೂಮಾ' ಎಂಬ ಶಬ್ದಕ್ಕೂ ಸಹ ಬಹುತ್ವಸಂಖ್ಯೆಯೆಂದೇ ಅರ್ಥವಾಗುತ್ತದೆ. ಈ ಅರ್ಥವು 'ತೇನ', 'ವನ' ಮೊದಲಾದ ಸ್ಥಳಗಳಲ್ಲಿ ಲೋಕರೂಢಿಯಿಂದ ಅನ್ಯತ್ರಪ್ರಸಿದ್ಧವಾಗಿದೆ. ಆದ್ದರಿಂದ ಬಹುತ್ವಸಂಖ್ಯಾ ಎಂಬ ಅರ್ಥವುಳ್ಳ 'ಭೂಮಾ' ಎಂಬ ಶಬ್ದವು ಲೋಕತಃ ಅನ್ಯತ್ರಪ್ರಸಿದ್ಧವೆಂದಂತಾಯಿತು. ಹೀಗಿರುವಾಗ ಉಭಯತ್ರಪ್ರಸಿದ್ಧವಾದ ಈ ಪಾದದಲ್ಲಿ ಇದರ ಸಮನ್ವಯವು ಹೇಗೆ ಸಂಗತವಾಗುತ್ತದೆ?

ಉತ್ತರ - 'ಬಹುಷು ಬಹುವಚನಮ್' ಇತ್ಯಾದಿ ಸೂತ್ರಗಳಲ್ಲಿ 'ಬಹು' ಎಂಬ ಶಬ್ದವನ್ನು ಸಂಖ್ಯಾರ್ಥದಲ್ಲಿ ಪ್ರಯೋಗಿಸಲಾಗಿದೆ. ಇದರಂತೆ 'ಬಹ್ವನ್ನಮ್' ಇತ್ಯಾದಿ ಪ್ರಯೋಗಗಳಲ್ಲಿ ವಿಪುಲವಾದದ್ದು ಎಂಬರ್ಥದಲ್ಲಿಯೂ 'ಬಹು' ಶಬ್ದವನ್ನು ಪ್ರಯೋಗಿಸಲಾಗಿದೆ. ಆದ್ದರಿಂದ 'ಬಹು' ಶಬ್ದಕ್ಕೆ ಸಂಖ್ಯಾವೆಂದಷ್ಟೇ ಅರ್ಥವಲ್ಲ. ವೈಪುಲ್ಯವೆಂಬರ್ಥವನ್ನೂ ಸಹ ವಿವಕ್ಷಿಸಬಹುದು.

ಮತ್ತು ಇದೇ ಸೂತ್ರದಲ್ಲಿ 'ಯೋ ವೈ ಭೂಮಾ ತದಮೃತಂ ಯದಲ್ಪಂ ತನ್ಮರ್ತ್ಯಮ್' 'ಭೂಮನೆನಿಸಿದ ಪರಮಾತ್ಮನು ಅಮೃತನಾಗಿದ್ದಾನೆ. ಯಾರು ಅಲ್ಪರೋ ಅವರು ಮರ್ತ್ಯನೆನಿಸಿದ್ದಾರೆ' ಎಂದು ಶ್ರುತವಾಗಿದೆ. ಬಹುತ್ವಸಂಖ್ಯೆಯಿಂದ ಕೂಡಿರುವ ಅಲ್ಪರಾದ ಜೀವರನ್ನು ಭೂಮಕ್ಕೆ ಪ್ರತಿಯೋಗಿಯೆಂದು ಇಲ್ಲಿ ಹೇಳಲಾಗಿದೆ. ಭೂಮನಾಮಕನಾದ ಪರಮಾತ್ಮನಿಗೆ ಬಹುತ್ವಸಂಖ್ಯೆಯುಳ್ಳ ಜೀವರೂ ಪ್ರತಿಯೋಗಿಯಾಗಿರುವುದರಿಂದ ಭೂಮನು ಬಹುತ್ವಸಂಖ್ಯೆಯಿಂದ ಯುಕ್ತನಾಗಲು ಸಾಧ್ಯವಿಲ್ಲ.

ಮತ್ತು ನಾಮ ಮೊದಲಾದವುಗಳಿಗಿಂತ ಅಧಿಕವಾದ ಸಂಖ್ಯೆಯನ್ನು ಹೊಂದದ ವಾಕ್, ಆಕಾಶ ಮೊದಲಾದವುಗಳಲ್ಲಿಯೂ ಭೂಯಶ್ಶಬ್ದವನ್ನು ಪ್ರಯೋಗಿಸಲಾಗಿದೆ. 'ವಾಗ್ವಾವ ನಾಮ್ನೋ ಭೂಯಸೀ' ಎಂಬಲ್ಲಿ ನಾಮಕ್ಕಿಂತ 'ವಾಕ್' ಎಂಬುದು ಅಧಿಕಸಂಖ್ಯೆಯಿಂದ ಕೂಡಿದೆಯೆಂದು ಅರ್ಥೈಸಲಾಗದು; ಹೊರತಾಗಿ ವಿಪುಲವಾಗಿದೆಯೆಂದೇ ಅರ್ಥೈಸಬೇಕು.

ಇದರಂತೆ 'ಆಕಾಶೋ ವಾವ ತೇಜಸೋ ಭೂಯಾನ್' ಎಂಬಲ್ಲಿ ತೇಜಸ್ಸಿಗಿಂತ ಆಕಾಶವು ಭೂಯಾನ್ ಆಗಿದೆ ಎಂದರೆ ಬಹಳ ಆಕಾಶಗಳಿವೆ ಎಂದರ್ಥವಲ್ಲ. ಒಂದೇ ಆಕಾಶವು ವಿಪುಲವಾಗಿದೆಯೆಂದರ್ಥ. ಹೀಗೆ ಬಹು ಶಬ್ದದಿಂದ ನಿಷ್ಪನ್ನವಾದ 'ಭೂಯಃ' ಎಂಬ ಶಬ್ದವನ್ನು ವೈಪುಲ್ಯ ಎಂಬರ್ಥದಲ್ಲಿ ಪ್ರಯೋಗಿಸಲಾಗಿದೆ.

ವೈಪುಲ್ಯವೆಂಬರ್ಥವೂ ಪೂರ್ವಪಕ್ಷಿಗೂ ಸಮ್ಮತವಾಗಿದೆ. 'ಪ್ರಾಣೋ ಭೂಮಾ' ಪ್ರಾಣನೇ ಭೂಮನಾಗಿದ್ದಾನೆ ಎಂದು ಹೇಳುವ ಪೂರ್ವಪಕ್ಷಕಾರನು ಅನೇಕ ಪ್ರಾಣರಿದ್ದಾರೆಂದು ವಿವಕ್ಷಿಸುವುದಿಲ್ಲ; ಹೊರತಾಗಿ ಪ್ರಾಣದೇವನು ವಿಪುಲನಾಗಿದ್ದಾನೆ ಎಂದೇ ಹೇಳುತ್ತಾನೆ. ಹೀಗೆ ಪ್ರಕರಣದ ಹಿಂದಿನ ಹಾಗೂ ಮುಂದಿನ ಶ್ರುತಿಗಳನ್ನು ಪರ್ಯಾಲೋಚನೆ ಮಾಡಿದಾಗ ಮತ್ತು ಪೂರ್ವಪಕ್ಷಕಾರನ ಅಭಿಪ್ರಾಯವನ್ನು ಗಮನಿಸಿದಾಗ 'ಭೂಮಾ' ಎಂಬ ಶಬ್ದಕ್ಕೆ ವೈಪುಲ್ಯವೆಂಬರ್ಥವನ್ನೇ ಪ್ರಕೃತ ವಿವಕ್ಷಿಸಬೇಕೆಂದು ಸ್ಪಷ್ಟವಾಗುತ್ತದೆ.

ಬ್ರಹ್ಮನು ಗುಣಪರಿಪೂರ್ಣನಾದ್ದರಿಂದ ಗುಣಗಳಿಂದ ವಿಪುಲನಾಗಿದ್ದಾನೆ ಎಂದು ಹೇಳಬಹುದು. ಈ ವಿವಕ್ಷೆಯಿಂದ ಬ್ರಹ್ಮನನ್ನೂ ಭೂಮನೆಂದು ಕರೆಯಬಹುದು.

ಭೂಮಶಬ್ದವು ಧರ್ಮಿವಾಚಕವಾಗಿದೆಯೆಂಬುದು ಮತ್ತೊಂದು ವಿಚಾರ. ಏಕೆಂದರೆ 'ಭೂಮಾ' ಎಂಬ ಶಬ್ದವನ್ನು ಪ್ರಯೋಗಿಸುವಾಗ ಶ್ರುತಿಯು ಹೀಗೆ ಹೇಳಿದೆ- 'ಯೋ ವೈ ಭೂಮಾ ತದಮೃತಮ್ । ಯೋ ವೈ ಭೂಮಾ ತತ್ಸುಖಮ್ । ಸ ಏವಾಧಸ್ತಾತ್ ಸ ಉಪರಿಷ್ಟಾತ್' 'ಯಾರು ಭೂಮನೋ ಅವನ ಅಮೃತನಾಗಿದ್ದಾನೆ. ಯಾರು ಭೂಮನೋ ಅವನು ಸುಖಸ್ವರೂಪನಾಗಿದ್ದಾನೆ. ಯಾರು ಭೂಮನೋ ಅವನೇ ಮೇಲೆ, ಕೆಳಗೆ ಎಲ್ಲೆಡೆಯೂ ವ್ಯಾಪ್ತನಾಗಿದ್ದಾನೆ' ಹೀಗೆ ಹೇಳಿದೆ. ಒಂದು ವೇಳೆ ಧರ್ಮವನ್ನು ವಿವಕ್ಷಿಸಿದರೆ ಅಮೃತನೆಂದು, ಸುಖರೂಪನೆಂದು, ವ್ಯಾಪ್ತನೆಂದು ಹೇಳಲು ಸಾಧ್ಯವಿಲ್ಲ. ಆದ್ದರಿಂದ ಧರ್ಮಿಯಲ್ಲಿಯೇ ಭೂಮಶಬ್ದವನ್ನು ಶ್ರುತಿಯು ಪ್ರಯೋಗಿಸಿದೆಯೆಂದು ತಿಳಿಯಬೇಕು.

'ಪ್ರಾಣೋ ಭೂಮಾ' ಎಂಬುದಾಗಿ ಪ್ರಾಣನನ್ನೇ ಭೂಮನೆನ್ನುವ ಪೂರ್ವಪಕ್ಷಕಾರನೂ ಸಹ ಧರ್ಮಿವಾಚಕವೆಂದೇ ಭೂಮಶಬ್ದವನ್ನು ಒಪ್ಪಿರುತ್ತಾನೆ. ಮತ್ತು ಟೀಕೆ ಹಾಗೂ ಅನುವ್ಯಾಖ್ಯಾನಗಳಲ್ಲಿ ವಿಷಯಮಾಲಾನಿರೂಪಣೆಯ ಸಂದರ್ಭದಲ್ಲಿ 'ಭೂಮಾ' ಎಂಬ ಶಬ್ದವನ್ನು ನಾಮಾತ್ಮಕವೆಂದು ಹೇಳಿದ್ದರಿಂದ ಧರ್ಮಿಯಲ್ಲಿ ಇದು ರೂಢವಾಗಿದೆಯೆಂದು ಅಭಿಪ್ರೇತವಾಗಿದೆ. ಆದ್ದರಿಂದ 'ಬಹು' ಶಬ್ದದ ಮೇಲೆ 'ಭೂ' ಆದೇಶಬಂದು 'ಇಮನಿಚ್' ಪ್ರತ್ಯಯ ಬಂದಿರುವ ಕಾರಣ ಯೌಗಿಕವಾಯಿತು. ಆದ್ದರಿಂದ ಧರ್ಮವಾಚಕವಾಯಿತಲ್ಲವೇ? ಎಂಬ ಶಂಕೆಗೆ ಅವಕಾಶವಿಲ್ಲ.

ಹಾಗಾದರೆ ವ್ಯಾಕರಣದಲ್ಲಿ 'ಬಹು' ಶಬ್ದಕ್ಕೆ 'ಇಮನಿಚ್' ಪ್ರತ್ಯಯವನ್ನು ಹೇಳಿ 'ಭೂ' ಆದೇಶವನ್ನು ಹೇಳಿ 'ಭೂಮಾ' ಎಂಬ ರೂಪವನ್ನು ನಿಷ್ಪನ್ನ ಮಾಡಿದ್ದು ತಪ್ಪಾಯಿತಲ್ಲವೇ? ಮತ್ತು ನೀವು ಧರ್ಮಿಪರವೆಂದು ಹೇಳುವುದು ವ್ಯಾಕರಣಕ್ಕೆ ವಿರುದ್ಧವಲ್ಲವೇ? ಎಂದು ಪ್ರಶ್ನಿಸಬಾರದು. ವ್ಯಾಕರಣವು ಕೇವಲ ಶಬ್ದಸಾಧುತ್ವಕ್ಕೋಸ್ಕರ ಮಾತ್ರ ಹೊರಟಿದೆ. 'ಭೂಮಾ' ಎಂಬ ಶಬ್ದವು ಹೇಗೆ ನಿಷ್ಪನ್ನವಾಗಿದೆಯೆಂದು ತಿಳಿಸುವುದಷ್ಟೇ ವ್ಯಾಕರಣದ ಉದ್ದೇಶ ಹೊರತು, ಧರ್ಮವಾಚಕವಾಗಿದೆಯೆಂದು ತಿಳಿಸಲು ಅದು ಹೊರಟಿಲ್ಲ.

ಆದ್ದರಿಂದ 'ಭೂಮಾ' ಎಂಬ ಶಬ್ದವು ವಿಪುಲ ಎಂಬ ಧರ್ಮಿವಾಚಕವೇ ಆಗಿದೆಯೆಂದು ಸಿದ್ಧವಾಯಿತು. ಮತ್ತು ಅನೇಕತ್ವಸಂಖ್ಯಾವಾಚಕವೂ ಸಹ ಆಗಿಲ್ಲವೆಂದು ಸಿದ್ಧವಾಯಿತು. ಯಾವ ಕಾರಣದಿಂದ ಬಹುತ್ವ, ಅನೇಕತ್ವ, ವೈಪುಲ್ಯವೆಂಬ ಧರ್ಮವನ್ನು ಭೂಮಾ ಶಬ್ದವು ಹೇಳುವುದಿಲ್ಲವೋ ಆ ಕಾರಣದಿಂದಲೇ ಸ್ವತಃ ಅನ್ಯತ್ರಪ್ರಸಿದ್ಧವೂ ಸಹ ಆಗುವುದಿಲ್ಲ.

ಇನ್ನು ಅನ್ಯತ್ರಪ್ರಸಿದ್ಧವಾದ ಪ್ರಾಣಶ್ರುತಿಯ ಸಾಹಿತ್ಯದಿಂದ 'ಭೂಮಾ' ಎಂಬ ಶಬ್ದವು ಅನ್ಯತ್ರಪ್ರಸಿದ್ಧವಾಗಿದೆಯಲ್ಲವೇ? ಎಂದೂ ಸಹ ಪ್ರಶ್ನಿಸಬಾರದು. ಪ್ರಾಣಶಬ್ದವು 'ಅತ ಏವ ಪ್ರಾಣಃ' ಎಂಬ ಸೂತ್ರದಲ್ಲಿ ಹೇಳಲ್ಪಟ್ಟ ನ್ಯಾಯದಂತೆ ವಿಷ್ಣುಪರವಾಗಿದೆ. ಹೀಗೆ ಒಪ್ಪಿ ಕೇವಲ ಉತ್ಕ್ರಮಣಾದಿ ಲಿಂಗದಿಂದಲೇ 'ಭೂಮಾ' ಎಂಬ ಶಬ್ದವು ವಾಯುದೇವತಾಪರವಾಗಿದೆಯೆಂದು ಇಲ್ಲಿ ಪೂರ್ವಪಕ್ಷ ಮಾಡಲಾಗುತ್ತಿದೆ. ಆದ್ದರಿಂದ ಅನ್ಯತ್ರಪ್ರಸಿದ್ಧವಾದ ಪ್ರಾಣಶ್ರುತಿಯ ಸಾಹಿತ್ಯದಿಂದ ಅನ್ಯತ್ರಪ್ರಸಿದ್ಧವಾಗಿದೆಯೆಂದು ಶಂಕಿಸಬಾರದು.

ಹಾಗಾದರೆ ಉತ್ಕ್ರಮಣಾದಿ ಲಿಂಗವು ಅನ್ಯತ್ರಪ್ರಸಿದ್ಧವಾಗಿದೆ. ಇದರ ಸಾಹಿತ್ಯದಿಂದ 'ಭೂಮಾ' ಎಂಬ ಶಬ್ದವು ಅನ್ಯತ್ರಪ್ರಸಿದ್ಧವಾಗುತ್ತದಲ್ಲವೇ? ಎಂದೂ ಸಹ ಪ್ರಶ್ನಿಸಬಾರದು. ದ್ಯುಭ್ವಾದ್ಯಧಿಕರಣದಲ್ಲಿ ಹೇಳಲ್ಪಟ್ಟ ನ್ಯಾಯದಿಂದ ಅನ್ಯತ್ರಪ್ರಸಿದ್ಧದ ಲಕ್ಷಣವೂ ಇಲ್ಲಿ ಬಾರದ ಕಾರಣ 'ಭೂಮಾ' ಎಂಬ ಶಬ್ದವು ಅನ್ಯತ್ರಪ್ರಸಿದ್ಧವಾಗುವುದಿಲ್ಲವೆಂದು ತಿಳಿಯಬೇಕು.

'ಭೂಮಾ' ಎಂಬ ಶಬ್ದವು ಉಭಯತ್ರಪ್ರಸಿದ್ಧವೇ ಆಗಿದೆ. ಈ ವಿಷಯವನ್ನು 'ಪ್ರಾಣೋ ವಾ ಆಶಾಯಾ ಭೂಯಾನ್ ವಿಷ್ಣುರ್ವೈ ದೇವೇಭ್ಯೋ ಭೂಯಾಂಸ್ತಸ್ಮಾದ್ಭೂಯಾನ್ನಮ' ಇತ್ಯಾದೇರ್ಭೂಮಶಬ್ದೋSಜ್ಞಾನಾಂ ಸಾಧಾರಣಃ' ಇತ್ಯಾದಿ ನ್ಯಾಯವಿವರಣ ಗ್ರಂಥದ ವಾಕ್ಯಗಳಿಂದ ಅಜ್ಞಾನಿಗಳ ದೃಷ್ಟಿಯಿಂದಷ್ಟೇ ಪ್ರಾಣ ಹಾಗೂ ವಿಷ್ಣು ಇಬ್ಬರಲ್ಲಿಯೂ 'ಭೂಮಾ' ಎಂಬ ಶಬ್ದವು ಸಾಧಾರಣವಾಗಿದೆ, ಎಂದು ಹೇಳಿರುತ್ತಾರೆ.

'ಪ್ರಾಣೋ ವಾ' ಇತ್ಯಾದಿ ಉಪಕ್ರಮಕ್ಕಿಂತ 'ವಿಷ್ಣುರ್ವಾ' ಇತ್ಯಾದಿ ಸಮಾಖ್ಯೆಯು ದುರ್ಬಲವಾಗಿದೆ. ಹೀಗಿರುವಾಗ ಉಪಕ್ರಮ ಹಾಗೂ ಸಮಾಖ್ಯಾ ಪ್ರಮಾಣಗಳಿಂದ ಸಮಾನವಾಗಿ ಉಭಯಸಾಧಾರಣವಾಗಿದೆಯೆಂದು ಹೇಳಲು ಹೇಗೆ ಸಾಧ್ಯ ? ಎಂದು ಶಂಕಿಸಬಾರದು. ಉಪಕ್ರಮಕ್ಕಿಂತ ಕೇವಲ ಸಮಾಖ್ಯೆಯು ದುರ್ಬಲವಾಗಿರಬಹುದು. ಆದರೆ ಪ್ರಕೃತ ಅಭ್ಯಾಸ ಹಾಗೂ ಉಪಪತ್ತಿಗಳಿಂದ ಸಮಾಖ್ಯೆಯು ಯುಕ್ತವಾಗಿದೆ. ಆದ್ದರಿಂದ ಇದು ಉಪಕ್ರಮಕ್ಕಿಂತ ದುರ್ಬಲವಾಗುವುದಿಲ್ಲ.

ಆದ್ದರಿಂದಲೇ ನ್ಯಾಯವಿವರಣದಲ್ಲಿ ಸಮಾಖ್ಯಾಪ್ರಮಾಣವನ್ನು ಹೇಳುವಾಗ ಅಭ್ಯಾಸ ಹಾಗೂ ಉಪಪತ್ತಿಗಳನ್ನೂ ಸಹ ಹೇಳಿರುತ್ತಾರೆ.

ಅಥವಾ ಉಪಕ್ರಮ ಹಾಗೂ ಸಮಾಖ್ಯಾಪ್ರಮಾಣಗಳಿಗೆ ಪ್ರಾಬಲ್ಯ ಹಾಗೂ ದೌರ್ಬಲ್ಯಗಳ ವಿಚಾರವನ್ನು ಮಾಡದ ದೆಶೆಯಲ್ಲಿ ಉಭಯಸಾಧಾರಣವಾಗಿದೆಯೆಂದು ತಿಳಿಯಬೇಕು. ಆದ್ದರಿಂದಲೇ ನ್ಯಾಯವಿವರಣದಲ್ಲಿ 'ಅಜ್ಞಾನಾಮ್' ಎಂದು ಹೇಳಿದ್ದಾರೆ. ಅಂದರೆ ಅಜ್ಞಾನಿಗಳ ಪ್ರಕಾರವಷ್ಟೇ ಇದು ಉಭಯಸಾಧಾರಣವಾಗಿದೆಯೆಂದರ್ಥ.

ಛಾಂದೋಗ್ಯದ ಏಳನೇ ಅಧ್ಯಾಯದ ವಿಷಯವಾಕ್ಯ

ಭಾವದೀಪಃ – छन्दोगेति ।। सप्तमेऽध्याये 'यो वै भूमा तत्सुखम्' इति सुखपदेनोक्तं पूर्णं सुखमिति । जडे अप्रसक्त्या निषेधायोगात् । अल्पेऽपूर्णे चेतने सुखं नेति वक्तव्ये तत्र स्वरूपसुखनिषेधे बाधाद्धर्मान्तरेण वाक्यशेषादिति न्यायेनासङ्कुचितपूर्णसुखनिषेध एव वाच्य इति तदन्यथानुपपत्त्या तत्सुखमित्युक्तस्य पूर्णसुखत्वलाभ इत्युपेत्य टीकायां शेषोक्तिः ।

ಛಾಂದೋಗ್ಯೋಪನಿಷತ್ತಿನ ಏಳನೇ ಅಧ್ಯಾಯದಲ್ಲಿ ''ಯೋ ವೈ ಭೂಮಾ ತತ್ಸುಖಂ'' ಎಂಬ ಶ್ರುತಿಯು ಪ್ರಸಕ್ತವಾಗಿದೆ. ಈ ಶ್ರುತಿಯಲ್ಲಿ ''ತತ್ಸುಖಂ'' ಎಂಬಲ್ಲಿರುವ ಸುಖಪದದಿಂದ ಪರಿಪೂರ್ಣವಾದ ಸುಖವೇ ಅಭಿಪ್ರೇತವಾಗಿದೆ. ಜಡದಲ್ಲಿ ಸುಖದ ಪ್ರಸಕ್ತಿಯೇ ಇಲ್ಲದ ಕಾರಣ ಸುಖದ ನಿಷೇಧವನ್ನು ಮಾಡಲು ಸಾಧ್ಯವಿಲ್ಲ. ಹಾಗಾಗಿ ಚೇತನನಲ್ಲಿಯೇ ಸುಖದ ನಿಷೇಧವನ್ನು ಶ್ರುತಿಯು ಮಾಡುತ್ತಿದೆ ಎನ್ನಬೇಕು. ಅಂದರೆ ''ನಾಲ್ಪೇ ಸುಖಮಸ್ತಿ'' ಎಂದರೆ ಅಲ್ಪನಾದ = ಅಪೂರ್ಣನಾದ ಚೇತನನಲ್ಲಿ ಸುಖವು

ಇರುವುದಿಲ್ಲ ಎಂದು ಹೇಳಬೇಕು. ಆದರೆ ಸ್ವರೂಪತಃ ಸುಖದ ನಿಷೇಧವನ್ನು ಮಾಡಿದರೆ ಪ್ರತ್ಯಕ್ಷ ಬಾಧಾದಿಗಳು ಬರುತ್ತವೆ. ಹಾಗಾಗಿ ''ಧರ್ಮಾಂತರೇಣ ವಾಕ್ಯಶೇಷಾತ್'' ಎಂಬ ನ್ಯಾಯದಿಂದ ಅಸಂಕುಚಿತವಾದ ಪೂರ್ಣಸುಖದ ನಿಷೇಧವನ್ನೇ ಶ್ರುತಿಯು ಮಾಡುತ್ತಿದೆ ಎಂದು ತಿಳಿಯಬೇಕು. ಚೇತನನಾದ ಜೀವನಲ್ಲಿ ಪೂರ್ಣಸುಖವು ಇಲ್ಲವೆಂದದಾರೆ ಭೂಮನಲ್ಲಿ ಹೇಳಲ್ಪಟ್ಟ ಸುಖವು ಪೂರ್ಣಸುಖವೆಂದೇ ನಿರ್ಣಯವಾಗುತ್ತದೆ. ಇದನ್ನೇ ಅನ್ಯಥಾನುಪಪತ್ತಿ ಪ್ರಮಾಣದಿಂದ ತಿಳಿಯಬೇಕು. ಅದು ಹೀಗೆ - ಭೂಮನಲ್ಲಿ ಪರಿಪೂರ್ಣವಾದ ಸುಖವನ್ನು ಒಪ್ಪದೆ ಚೇತನನಾದ ಜೀವನಲ್ಲಿ ಪೂರ್ಣಸುಖದ ನಿಷೇಧವು ಕೂಡುವುದಿಲ್ಲ. ಅಲ್ಪಜೀವನಲ್ಲಿ ಅಪೂರ್ಣಸುಖನಿಷೇಧದ ಅನ್ಯಥಾನುಪತ್ತಿಯಿಂದ ಭೂಮನಲ್ಲಿ ಪೂರ್ಣಸುಖತ್ವವನ್ನು ಸಾಧಿಸಿದಂತಾಗುತ್ತದೆ. ಈ ಅಭಿಪ್ರಾಯದಿಂದ ಟೀಕೆಯಲ್ಲಿ ''ನಾಲ್ಪೇ ಸುಖಮಸ್ತಿ'' ಎಂಬ ಶ್ರುತಿಯ ಮುಂದಿನ ಭಾಗವನ್ನು ಉಲ್ಲೇಖಿಸಿದ್ದಾರೆ.

ಪ್ರಾಣಶಬ್ದವಾಚ್ಯರು ಯಾರು ?

भावदीपः – अवशिष्ट कृत्स्नभाष्यभावमाह – तस्य चेति ।। वक्ष्यमाणदिशोत्क्रमणलिङ्गेन निरवकाशप्राणश्रुतिसामानाधिकरण्याद् विष्णोरितरत्वे प्राणत्वे सतीत्यर्थः ।

ಉಳಿದ ಸಂಪೂರ್ಣಭಾಷ್ಯದ ಅಭಿಪ್ರಾಯವನ್ನು ''ತಸ್ಯ ಚ'' ಎಂಬ ಟೀಕೆಯಿಂದ ವ್ಯಾಖ್ಯಾನಿಸುತ್ತಿದ್ದಾರೆ. ಮುಂದೆ ಹೇಳುವ ಪ್ರಕಾರ ಉತ್ಕ್ರಮಣವೆಂಬ ಲಿಂಗದಿಂದ ನಿರವಕಾಶವಾದ ಪ್ರಾಣ ಶ್ರುತಿಯ ಸಾಮಾನಾಧಿಕರಣ್ಯದಿಂದ ವಿಷ್ಣುವಿಗಿಂತ ಭಿನ್ನರಾದ ಮುಖ್ಯಪ್ರಾಣದೇವರೇ ಪ್ರಾಣಶಬ್ದ ಪ್ರತಿಪಾದ್ಯರಾಗುತ್ತಾರೆಂದು ಸಿದ್ಧವಾಗುವ ಕಾರಣ ಎಂದು ಈ ವಾಕ್ಯದ ಅಭಿಪ್ರಾಯ.

ಪ್ರತಿಜ್ಞಾಭಾಗದ ವ್ಯಾಖ್ಯಾನ

भावदीपः – 'यो वै भूमा तत्सुखम्' इत्युक्तेरित्यस्य तात्पर्यम् – प्रागुक्तेत्यादि ।। इति सङ्गतिसम्भवादित्यर्थः । तदेव भाष्यं पूर्वपक्षतद्युक्ति-तत्फलोक्तिपरत्वेन व्याकुर्वन् तस्यैव भूमत्वप्राप्तिरिति प्रतिज्ञांशार्थमाह – मुख्येति ।।

''ಯೋ ವೈ ಭೂಮಾ ತತ್ಸುಖಂ ಇತ್ಯುಕ್ತೇಃ'' ಎಂಬ ಭಾಷ್ಯವಾಕ್ಯದ ತಾತ್ಪರ್ಯವನ್ನು ''ಪ್ರಾಗುಕ್ತೇಃ'' ಇತ್ಯಾದಿ ಟೀಕೆಯಿಂದ ವಿವರಿಸುತ್ತಿದ್ದಾರೆ. ''ಪ್ರಾಗುಕ್ತ ಆನಂದಮಯತ್ವಂ'' ಎಂಬ ವಾಕ್ಯದಿಂದ ಆನಂದಮಯಾಧಿಕರಣದಿಂದ ಸಂಗತಿಯನ್ನು ತೋರಿಸಿದ್ದಾರೆಂದು ತಿಳಿಯಬೇಕು. ಹೀಗೆ ಸಂಗತಿಪರವಾಗಿ ವ್ಯಾಖ್ಯಾನಿಸಿದ ಭಾಷ್ಯವನ್ನೇ ಪೂರ್ವಪಕ್ಷ ಹಾಗೂ ಪೂರ್ವಪಕ್ಷಯುಕ್ತಿ, ಪೂರ್ವಪಕ್ಷಫಲಪರವಾಗಿ ಹೇಳುವ ಮೂಲಕ ವಾಖ್ಯಾನಿಸುತ್ತಿದ್ದಾರೆ. ಮೊದಲು ಮುಖ್ಯಪ್ರಾಣದೇವರೇ ಭೂಮರಾಗುತ್ತಾರೆಂಬ ಪ್ರತಿಜ್ಞಾ ಭಾಗವನ್ನು ''ಮುಖ್ಯಪ್ರಾಣೋऽಯಂ'' ಎಂಬ ವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ.

'ಅಧ್ಯುಪದೇಶಾತ್' ಎಂಬುದರಿಂದ ವ್ಯಾವರ್ತ್ಯ ಪೂರ್ವಪಕ್ಷ

भावदीपः – प्राणपदस्य हरावपि भावात् मुख्येत्युक्तिः । कुत इत्यतः तत्र हेतुत्वेनाध्युपदेशादित्येतद् व्यावर्त्योक्तिपरमुक्त्वेत्यन्तभाष्यं व्याचष्टे – नामेति ।।

ಪ್ರಾಣವೆಂಬ ಪದವು ಶ್ರೀಹರಿಯಲ್ಲಿಯೂ ಯುಕ್ತವಾಗುವುದರಿಂದ ಮುಖ್ಯವೆಂಬ ವಿಶೇಷಣವನ್ನು ಹೇಳಿದ್ದಾರೆ. ಮುಖ್ಯಪ್ರಾಣದೇವರೆ ಏಕೆ ಭೂಮಾಶಬ್ದದಿಂದ ಪ್ರತಿಪಾದ್ಯರಾಗುತ್ತಾರೆ? ಎಂಬ ಪ್ರಶ್ನೆಗೆ ''ಅಧ್ಯುಪದೇಶಾತ್'' ಎಂಬ ಸೂತ್ರದ ಹೇತು ಭಾಗದಿಂದ ವ್ಯಾವರ್ತ್ಯವಾದ ಪೂರ್ವಪಕ್ಷವನ್ನು ತೋರಿಸಿ ''ಇತಿ'' ಎಂಬಲ್ಲಿಯ ತನಕದ ಭಾಷ್ಯವನ್ನು ಪೂರ್ವಪಕ್ಷದ ಪರವಾಗಿ ವ್ಯಾಖ್ಯಾನಿಸುತ್ತಿದ್ದಾರೆ ''ನಾಮವಾಗಾದಿ'' ಇತ್ಯಾದಿ ವಾಕ್ಯದಿಂದ.

ಸನತ್ಕುಮಾರರು ಉಪದೇಶಿಸಿದ ದೇವತಾ ತಾರತಮ್ಯ

भावदीपः – नामवाङ्मनस्सङ्कल्पचित्तध्यानविज्ञानबलान्नाप्तेज आकाशस्मराशा शब्दितान् उष । स्वाहापर्जन्यमित्राग्निवरुणविधुप्रवहानिरुद्ध प्राणेन्द्रोमारुद्भवाणीरूपदेवान् नारदसनत्कुमार प्रश्नोत्तराभ्याम् उत्तरोत्तराति शयितत्वेनोक्त्वेत्यर्थः ।

ಸನತ್ಕುಮಾರರನ್ನು ಕುರಿತು ನಾರದರು ಪ್ರಶ್ನಿಸುತ್ತಾರೆ. ಆ ಪ್ರಶ್ನೆಗಳಿಗೆ ಅನುಸಾರಿಯಾಗಿ ಸನತ್ಕುಮಾರರು ಉತ್ತರಿಸುತ್ತಾರೆ. ನಾಮ, ವಾಕ್, ಮನಸ್ಸು, ಸಂಕಲ್ಪ, ಚಿತ್ತ, ಧ್ಯಾನ, ವಿಜ್ಞಾನ, ಬಲ,ಅನ್ನ, ಅಪ್, ತೇಜಸ್ಸು,

ಆಕಾಶ, ಸ್ಮರ, ಆಶಾ ಈ ಶಬ್ದಗಳಿಂದ ಉಷಾ, ಸ್ವಾಹಾ, ಪರ್ಜನ್ಯ, ಮಿತ್ರ, ಅಗ್ನಿ, ವರುಣ, ಚಂದ್ರ, ಪ್ರವಹ, ಅನಿರುದ್ಧ, ಪ್ರಾಣ, ಇಂದ್ರ, ಉಮಾ, ರುದ್ರ, ವಾಣೀ ಮೊದಲಾದ ದೇವತೆಗಳನ್ನು ಕ್ರಮವಾಗಿ ಹಿಂದಿನ ದೇವತೆಗಳಿಗಿಂತ ಮುಂದಿನ ದೇವತೆಗಳು ಶ್ರೇಷ್ಠರಾಗಿದ್ದಾರೆಂದು ಉಪದೇಶಿಸಿದ್ದಾರೆ.

ಮುಖ್ಯಪ್ರಾಣನಿಗಿಂತ ಶ್ರೇಷ್ಠನಾದವನು ಯಾರು ?

भावदीपः – एतच्च तदुत्तममनुक्त्वेति वक्ष्यमाणानुक्तिऽउपयुक्ति-र्निरवकाशत्वायिक्तम् । तथा च विवरिष्यामः । इत्युक्त्वेत्यस्य कर्मकारकं निष्कृष्याह – प्राणस्येति ।। एतच्च प्राणस्य मुख्यप्राणत्वेनानुक्तिर्बाधिकेति वक्तुम् ।

ನಾಮಾದಿ ದೇವತೆಗಳಿಂದ ಪ್ರಾರಂಭಿಸಿ ಆಶಾಭಿಮಾನಿ ದೇವತೆಯ ತನಕ ತಾರತಮ್ಯವನ್ನು ಹೇಳಿ ಎಂಬ ಮಾತನ್ನು ಟೀಕೆಯಲ್ಲಿ ಏಕೆ ಉಲ್ಲೇಖಿಸಿದ್ದಾರೆ? ಎಂದರೆ ಮುಂದೆ ''ತದುತ್ತಮಮನುಕ್ತ್ವಾ'' ಎಂದು ''ಅನುಕ್ತಿ'' ಎಂಬ ಲಿಂಗವನ್ನು ಹೇಳುತ್ತಾರೆ. ಆ ಯುಕ್ತಿಗೆ ನಿರವಕಾಶವತ್ವವನ್ನು ಸಮರ್ಥಿಸುವುದಕ್ಕಾಗಿ ಮೊದಲು ನಾಮಾಭಿಮಾನಿದೇವತೆಗಳಲ್ಲಿ ಉತ್ತಮತ್ವವು ಹೇಳಲ್ಪಟ್ಟಿದೆ ಎಂಬ ಮಾತನ್ನು ಉಲ್ಲೇಖಿಸಿದ್ದಾರೆಂದು ತಿಳಿಯಬೇಕು. ಇದನ್ನು ಮುಂದೆ ವಿವರಿಸುತ್ತೇವೆ. ಭಾಷ್ಯದಲ್ಲಿ ''ಇತ್ಯುಕ್ತ್ವಾ'' ಎಂದಿದ್ದಾರೆ. ಇದಕ್ಕೆ ಕರ್ಮಕಾರಕವನ್ನು ಸ್ಪಷ್ಟವಾಗಿ ತೋರಿಸುವುದಕ್ಕಾಗಿ ''ಪ್ರಾಣಸ್ಯ'' ಎಂಬ ವಾಕ್ಯ ಹೊರಟಿದೆ. ಪ್ರಾಣದೇವರಿಗೆ ಉತ್ತಮತ್ವವನ್ನು ಏಕೆ ಹೇಳಿದ್ದಾರೆ ಎಂದರೆ ಪ್ರಾಣಶಬ್ದವು ಮುಖ್ಯಪ್ರಾಣನನ್ನೇ ಪ್ರತಿಪಾದಿಸುತ್ತದೆ ಎನ್ನಲು ಅನುಕ್ತಿಯು ಬಾಧಕವಲ್ಲವೆಂದು ತಿಳಿಸುವುದಕ್ಕಾಗಿ.

ಅನುಕ್ತಿಯು ಪೂರ್ವಪಕ್ಷಲಿಂಗ

भावदीपः – ननु मध्येऽन्योक्त्यापि भूम्न उक्तिसम्भवान्नेदं भूम्नः प्राणत्वसाधकमित्यतः 'प्राणो वा आशाया भूयान्' इत्युक्त्वा प्राणाद्भूयसोऽनुक्तिरिति न्यायविवरणोक्तं संयोजयति – तदुत्तममिति ।।

ಮಧ್ಯದಲ್ಲಿ ಬೇರೆಯವರನ್ನು ಹೇಳಿದರೂ ಕೂಡ ''ಭೂಮ್ನಃ'' ಎಂದು ಹೇಳಬಹುದಾದ್ದರಿಂದ ಭೂಮನು ಪ್ರಾಣನೇ ಆಗಿದ್ದಾನೆಂದು ಹೇಳಲು ಇದು ಸಾಧಕವಾಗುವುದಿಲ್ಲವಲ್ಲ? ಎಂಬ ಪ್ರಶ್ನೆಗೆ

''ಪ್ರಾಣೋ ವಾ ಆಶಾಯಾ ಭೂಯಾನ್'' ಎಂದು ಹೇಳಿ ಪ್ರಾಣನಿಗಿಂತ ಉತ್ತಮನಿದ್ದಾನೆಂದು ಹೇಳದ ಕಾರಣ ಅನುಕ್ತಿಯು ಪೂರ್ವಪಕ್ಷಲಿಂಗವಾಗುತ್ತದೆ ಎಂದು ನ್ಯಾಯವಿವರಣದಲ್ಲಿ ಹೇಳಿದ್ದಾರೆ. ಅದನ್ನೇ ''ತದುತ್ತಮಂ'' ಎಂಬ ವಾಕ್ಯದಿಂದ ಸಂಯೋಜನೆ ಮಾಡುತ್ತಿದ್ದಾರೆ.

ಭೂಮನೇ ಸರ್ವೋತ್ತಮ

ಭಾವದೀಪಃ – यदीह नामादिभ्यो वागादिवत् प्राणाद् भूमाऽन्यः स्यात्तदाऽस्ति भगवो नाम्नो भूयः इत्यादिप्रश्नवत् 'वाग् वाव भूयसि' इत्यादिप्रतिवचनवच्च अस्ति भगवः प्राणाद् भूय इति प्रश्नः भूमा वाव प्राणाद् भूयानिति प्रतिवचनं च स्यात् । भूम्नः सर्वोत्तमत्वार्थमेव नाम वागादितारतम्यस्य प्रक्रान्तत्वात् । नच यदर्थमन्यत् प्रक्रान्तं तदनुक्तिर्युक्तेति भावः ।

ನಾಮಾಭಿದೇವತೆಗಳಿಗಿಂತ ವಾಗಾದ್ಯಭಿಮಾನಿ ದೇವತೆಗಳು ಭಿನ್ನರಾಗಿದ್ದಾರೆ. ಅದರಂತೆ ಪ್ರಾಣನಿಗಿಂತ ಭೂಮನು ಒಂದು ವೇಳೆ ಭಿನ್ನನಾಗಿದ್ದರೆ ಆವಾಗ ''ಅಸ್ತಿ ಭಗವೋ ನಾಮ್ನೋ ಭೂಯಃ'' ನಾಮಾಭಿಮಾನಿ ದೇವತೆಗಳಿಗಿಂತ ಉತ್ತಮನಾದವನು ಇದ್ದಾನೆಯೇ? ಎಂಬ ಪ್ರಶ್ನೆಗೆ ''ವಾಗ್ವಾವ ಭೂಯಸಿ'' - ವಾಗಾದಿ ದೇವತೆಗಳೇ ನಾಮಾಭಿಮಾನಿದೇವತೆಗಳಿಗಿಂತ ಉತ್ತಮರಾಗಿದ್ದಾರೆ ಇದೇ ಮೊದಲಾದ ಉತ್ತರ ನೀಡುವ ವಾಕ್ಯಗಳಿರುವಂತೆ, ''ಅಸ್ತಿ ಭಗವಃ ಪ್ರಾಣಾದ್ ಭೂಯಃ'' ಪ್ರಾಣನಿಗಿಂತ ಉತ್ತಮನಾದವನು ಇದ್ದಾನೆ ಏನು? ಎಂಬ ಪ್ರಶ್ನೆಯು ಮತ್ತು ''ಭೂಮಾ ವಾವ ಪ್ರಾಣಾದ್ ಭೂಯಾನ್'' ಭೂಮನೇ ಪ್ರಾಣಗಿಂತ ಉತ್ತಮನಾಗಿದ್ದಾನೆ ಎಂದು ಉತ್ತರ ನೀಡುವ ವಾಕ್ಯಗಳು ಇರುತ್ತಿತ್ತು. ಏಕೆಂದರೆ ಭೂಮನು ಸರ್ವೋತ್ತಮನಾಗಿದ್ದಾನೆ ಎಂದು ಸಮರ್ಥನೆ ಮಾಡುವುದಕ್ಕಾಗಿಯೇ ನಾಮ, ವಾಕ್ ಅಭಿಮಾನಿಗಳ ತಾರತಮ್ಯವು ಪ್ರಾರಂಭದಿಂದ ಹೊರಟಿರುತ್ತದೆ. ಯಾವ ಪ್ರಮೇಯದ ಸಿದ್ಧಿಗಾಗಿ ಈ ಪ್ರಕರಣವು ಹೊರಟಿದೆಯೋ ಮುಖ್ಯಪ್ರಮೇಯವನ್ನೇ ಹೇಳದಿರುವುದು ಯುಕ್ತವಾಗುವುದಿಲ್ಲ.

ಪ್ರಾಣನನ್ನು ಭೂಮನೆನ್ನಬೇಕೆಂದು ಪೂರ್ವಪಕ್ಷ

ಭಾವದೀಪಃ – निरवकाशानुक्तिबलाद् भूमा प्राण एव । भूम्नः प्राणत्वे तु नानुक्तिर्बाधिका । 'प्राणो वा आशाया भूयान्' इत्युक्तत्वादिति भावः ।

ನಿರವಕಾಶವಾದ ಇಂತಹ 'ಅನುಕ್ತಿ' ಎಂಬ ಪ್ರಮಾಣದಿಂದ ಭೂಮನೇ ಪ್ರಾಣನಾಗಿದ್ದಾನೆ ಭೂಮನು ಪ್ರಾಣನಿಗಿಂತ ಭಿನ್ನನಲ್ಲವೆಂದು ತಿಳಿಯುತ್ತದೆ. ಹಾಗಾದರೆ ಭೂಮನೇ ಪ್ರಾಣನಾಗಿದ್ದಾನೆಂದು ಹೇಳಬೇಕಿತ್ತಲ್ಲವೆ? ಹೀಗೆ ಹೇಳದಿರುವುದೇ ಬಾಧಕವಾಗುತ್ತದಲ್ಲವೆ? ಎಂದು ಪ್ರಶ್ನಿಸಬಾರದು. ಏಕೆಂದರೆ ''ಪ್ರಾಣೋ ವಾ ಆಶಾಯಾ ಭೂಯಾನ್'' ಆಶಾ ಎನಿಸಿದ ಭಾರತೀದೇವಿಗಿಂತ ಪ್ರಾಣನು ಉತ್ತಮನೆಂದು ಹೇಳಿರುವುದರಿಂದ ಪ್ರಾಣನನ್ನು ಭೂಮನೆಂದು ಹೇಳಿದಂತಾಯಿತು.

ಭೂಮಾ ಹಾಗೂ ಪ್ರಾಣರ ನಡುವೆ ಯಾರಿದ್ದಾರೆ ?

भावदीपः – भूमप्राणयोर्मध्ये सत्यं त्वेव विजिज्ञासितव्यमित्यादिना सत्यविज्ञानमतिश्रद्धानिष्ठाकृतिसुखानां वस्तूनामुक्तत्वेऽपि तेषां 'सैव हि सत्यादयः' इत्यग्रे वक्ष्यमाणदिशा भूमाऽभिन्नत्वात्तदुक्तममनुक्तत्वेति युक्तम् ।

ಭೂಮಾ ಹಾಗೂ ಪ್ರಾಣರ ನಡುವಿನಲ್ಲಿ ''ಸತ್ಯಂ ತ್ವೇವ ವಿಜಿಜ್ಞಾಸಿತವ್ಯಂ'' ಇವೇ ಮೊದಲಾದ ವಾಕ್ಯಗಳಿಂದ ಸತ್ಯ, ವಿಜ್ಞಾನ, ಮತಿ, ಶ್ರದ್ಧಾ , ನಿಷ್ಠಾ, ಕೃತಿ, ಸುಖ ಮೊದಲಾದ ವಸ್ತುಗಳು ಹೇಳಲ್ಪಟ್ಟಿವೆ. ಆದರೆ ''ಸೈವ ಹಿ ಸತ್ಯಾದಯಃ'' ಎಂಬುದಾಗಿ ಮುಂದೆ ಹೇಳುವಂತೆ ಸತ್ಯ ಮೊದಲಾದವುಗಳೆಲ್ಲವೂ ಭೂಮನಿಗಿಂತ ಭಿನ್ನವಾಗಿವೆ. ಆದ್ದರಿಂದ ಪ್ರಾಣನಿಗಿಂತ ಮತ್ತೊಬ್ಬ ಶೇಷ್ಠನಾದ ವ್ಯಕ್ತಿಯನ್ನು ಹೇಳಿರುವುದಿಲ್ಲ ಎಂಬ ಮಾತು ಯುಕ್ತವೇ ಆಗಿದೆ.

ಅನುಕ್ತಿಸಹಿತ ಉಪಕ್ರಮವೇ ಬಲಿಷ್ಠ

भावदीपः – श्रुत्यन्तरे ''विष्णुर्वै देवेभ्य'' इत्यत्र ।। **उपक्रमादिति** ।। नच समाख्यापि साभ्यासत्वेन सोपपत्तिकत्वेन च प्रबलेति शङ्क्यम् । निरवकाशानुक्तिसचिवस्य बलवत्त्वादिति तात्पर्यार्थः ।

''ಶ್ರುತ್ಯಂತರೇ'' ಎಂದರೆ ''ವಿಷ್ಣುರ್ವೈ ದೇವೇಭ್ಯಃ'' ಎಂಬ ಮತ್ತೊಂದು ಶ್ರುತಿ ಎಂದರ್ಥ. ''ಉಪಕ್ರಮಾತ್'' ಎಂದು ಟೀಕೆಯಲ್ಲಿದೆ. ಅಂದರೆ ಉಪಕ್ರಮಕ್ಕಿಂತ ಸಮಾಖ್ಯಾಪ್ರಮಾಣವು ದುರ್ಬಲವಾಗಿದೆ. ಸಮಾಖ್ಯಾಪ್ರಮಾಣವೂ ಸಹ ಅಭ್ಯಾಸ ಹಾಗೂ ಉಪಪತ್ತಿಗಳಿಂದ ಸಹಿತವಾಗಿದೆ ಎನ್ನುವ ಕಾರಣದಿಂದ ಪ್ರಬಲವಾಗಿದೆ ಎಂದು ಶಂಕಿಸಬಾರದು. ನಿರವಕಾಶವಾದ ಅನುಕ್ತಿಸಹಿತವಾದ ಉಪಕ್ರಮವೇ ಬಲಿಷ್ಠವಾಗಿದೆ ಎಂದು ತಾತ್ಪರ್ಯಾರ್ಥ.

ಪ್ರಾಣನಿಗಿಂತ ಭೂಮನು ಭಿನ್ನ

ಭಾವದೀಪಃ – अत इति ।। निरवकाशाऽनुक्तिसहितोपमादित्यर्थः । यो वै भूमेति वाक्यतात्पर्यम् । तस्यैवेति ।। एवं प्राणाद्भूम्नोऽन्यत्वे तदुक्तमानुक्तिरूपं बाधकमुक्त्वा भूम्नः प्राणत्वमुक्तम् । इदानीमस्तु प्राणभूम्नोरेकप्रकरणत्वम्, अथापि भूमा विष्णुः स्यादित्याशङ्कापूर्वम् उत्क्रान्तेत्यादिभाष्यं व्याचष्टे – नन्विति ।

''अतः'' ಎಂಬ ಪದಕ್ಕೆ ನಿರವಕಾಶವಾದ ''ಅನುಕ್ತಿ'' ಎಂಬ ಲಿಂಗದಿಂದ ಸಹಿತವಾದ ಉಪಕ್ರಮದಿಂದ ಎಂದರ್ಥ. ''ಯೋ ವೈ ಭೂಮಾ'' ಎಂಬ ವಾಕ್ಯದ ತಾತ್ಪರ್ಯವನ್ನು ''ತಸ್ಯೈವ'' ಇತ್ಯಾದಿ ವಾಕ್ಯಗಳಿಂದ ಹೇಳುತ್ತಿದ್ದಾರೆ. ಹೀಗೆ ಪ್ರಾಣನಿಗಿಂತ ಭೂಮನು ಭಿನ್ನನಾಗಿದ್ದಾನೆಂದು ಸಮರ್ಥಿಸಿ ''ಅನುಕ್ತಿ'' ಎಂಬ ಬಾಧಕವನ್ನು ಹೇಳಿ ಭೂಮನಿಗೆ ಪ್ರಾಣತ್ವವನ್ನು ಸಮರ್ಥಿಸಿದರು. ಈಗ ಪ್ರಾಣ ಹಾಗೂ ಭೂಮ ಇಬ್ಬರು ಒಂದೇ ಪ್ರಕರಣದಿಂದ ಪ್ರತಿಪಾದ್ಯರಾಗಲಿ ಆದರೂ ಕೂಡ ಭೂಮನು ವಿಷ್ಣುವೇ ಆಗುತ್ತಾನೆ ಎಂದು ಆಶಂಕಾಪೂರ್ವಕವಾಗಿ ''ಉತ್ಕ್ರಾಂತಿ'' ಇತ್ಯಾದಿ ಭಾಷ್ಯವನ್ನು ವ್ಯಾಖ್ಯಾನಿಸುತ್ತಿದ್ದಾರೆ ''ನನು'' ಇತ್ಯಾದಿ ವಾಕ್ಯದಿಂದ.

ಪ್ರಾಣಪದವೂ ಕೂಡ ವಿಷ್ಣುಪರ

ಭಾವದೀಪಃ – इत्युक्तरीत्येति ।। यद्यपि तत्र निरवकाशलिङ्गबलेन प्राणश्रुतेर्वैष्णवत्वं निर्णीतम्, इह च तन्नास्ति । तथापि जीवनहेतुत्वादि प्राणपदप्रवृत्तिनिमित्तस्य हरौ पुष्कलत्वेन अन्यगतस्य तदधीनत्वाल्पत्वाभ्यां विष्णौ महायोगविद्वद्ब्रूढ्युक्त्या विष्णौ मुख्यत्वस्योक्तत्वात् तत्त्याजकस्येहाभावादत्रापि प्राणपदस्य वैष्णवत्वमिति शङ्काशयः।

ಪ್ರಶ್ನೆ - ನಿರವಕಾಶವಾದ ಲಿಂಗದ ಬಲದಿಂದ ಪ್ರಾಣಶ್ರುತಿಯು ವಿಷ್ಣುಪರವಾಗುತ್ತದೆ ಎಂದು ಸಾಧಿಸಿದಿರಿ. ಆದರೆ ಅಂತಹ ನಿರವಕಾಶವಾದ ಲಿಂಗವೇ ಇಲ್ಲವಲ್ಲ?

ಉತ್ತರ - ಜೀವನ ಹೇತುತ್ವವೇ ಮೊದಲಾದ ಪ್ರಾಣಪದ ಪ್ರವೃತ್ತಿನಿಮಿತ್ತವು ಶ್ರೀಹರಿಯಲ್ಲಿ ಪುಷ್ಕಳವಾಗಿವೆ. ಬೇರೆಡೆ ಇರುವ ಪ್ರವೃತ್ತಿನಿಮಿತ್ತಗಳು ಅಲ್ಪವಾಗಿರುತ್ತವೆ ಮತ್ತು ವಿಷ್ಣುವಿನ

ಅಧೀನವಾಗಿರುತ್ತವೆ. ಆದರೆ ವಿಷ್ಣುವಿನಲ್ಲಿ ಸ್ವತಂತ್ರವಾಗಿಯೂ ನಿರವಧಿಕವಾಗಿಯೂ ಇರುವ ಕಾರಣ ಮಹಾಯೋಗ ಹಾಗೂ ವಿದ್ವದ್ಧೂಢಿಗಳಿಂದ ಪ್ರಾಣಪದವು ವಿಷ್ಣುವನ್ನೇ ಮುಖ್ಯವಾಗಿ ಪ್ರತಿಪಾದಿಸುತ್ತದೆ. ಈ ಪರಮಮುಖ್ಯಾರ್ಥವನ್ನು ಬಿಡಲು ಯಾವುದೇ ಬಾಧಕ ಪ್ರಮಾಣಗಳು ಇರುವುದಿಲ್ಲ. ಆದ ಕಾರಣ ಪ್ರಾಣಪದವು ವಿಷ್ಣುಪರವಾಗಿದೆ ಎಂದು ತಿಳಿಯಬೇಕು.

ತಂದೆ-ತಾಯಿಯೆಂದರೆ ಪ್ರಾಣನೇ

भावदीपः – भाष्ये चोऽवधारणे । भिन्नक्रम इति मत्वा तदर्थं व्यनक्ति – नायमिति ।। उत्क्रान्तेति ।। उत्क्रान्तः प्राणो येषां तान् उत्क्रान्तप्राणान् मातापित्रादीन् । साकल्येनैकदेशेन शूलेन दहेत् । नैनं ब्रूयुः पितृहासीति न मातृहासीत्यादौ वाक्ये इत्यर्थः ।

ಭಾಷ್ಯದಲ್ಲಿರುವ ''ಚ'' ಶಬ್ದವು ಅವಧಾರಣಾರ್ಥದಲ್ಲಿದೆ ಎಂದು ತಿಳಿದು ಅದರ ಅರ್ಥವನ್ನು ''ನಾಯಂ'' ಇತ್ಯಾದಿ ಟೀಕೆಯಿಂದ ವ್ಯಾಖ್ಯಾನಿಸುತ್ತಿದ್ದಾರೆ. ''ಉತ್ಕ್ರಾಂತಃ ಪ್ರಾಣಾನ್'' ಎಂಬ ಪದಕ್ಕೆ ''ಉತ್ಕ್ರಾಂತಃ ಪ್ರಾಣಃ ಯೇಷಾಂ ತಾನ್ ಉತ್ಕ್ರಾಂತಪ್ರಾಣಾನ್'' ಎಂದು ವಿಗ್ರಹ. ಅಂದರೆ ಯಾವ ಮಾತಾಪಿತೃಗಳ ಶರೀರದಿಂದ ಪ್ರಾಣನು ಹೊರಟು ಹೋಗಿರುತ್ತಾನೆಯೋ ಅಂತಹ ಶರೀರವನ್ನು ಸಂಪೂರ್ಣವಾಗಿ ಅಥವಾ ಏಕದೇಶದಿಂದ ಸುಟ್ಟರೂ ಸಹ ಅಥವಾ ಶೂಲದಿಂದ ಘಾಸಿಗೊಳಿಸಿದರೂ ಸಹ ಪಾಪ ಬರುವುದಿಲ್ಲ. ಅಂದರೆ 'ತಂದೆಯನ್ನು ಕೊಂದವನು' ಅಥವಾ 'ತಾಯಿಯನ್ನು ಕೊಂದವನು' ಎಂದು ಯಾರೂ ಹೇಳುವುದಿಲ್ಲ. ಒಂದು ವೇಳೆ ಅದೇ ಶರೀರದಲ್ಲಿ ಪ್ರಾಣನು ಇದ್ದರೆ ತಂದೆಯನ್ನು ಕೊಂದವನು ಅಥವಾ ತಾಯಿಯನ್ನು ಕೊಂದವನು ಎಂದು ಹೇಳುತ್ತಾರೆ.

ತತ್ತು ಎಂಬುದು ಬೇಕು

भावदीपः – सर्वगत इति ।। अदृश्यत्वादिनये 'सर्वगतं सुसूक्ष्मम्' इति सर्वगतत्वगुणस्य समन्वितत्वादिति भावः । आकाङ्क्षाक्रमेण भाष्यं व्याचष्टे – विष्णुरेवेति ।। तत्त्वित्यनुवृत्तस्यार्थोऽयम् ।

ಅದೃಶ್ಯತ್ವಾಧಿಕರಣದಲ್ಲಿ ''ಸರ್ವಗತಂ ಸುಸೂಕ್ಷ್ಮಂ'' ಎಂಬಲ್ಲಿರುವ ಸರ್ವಗತತ್ವ ಗುಣವನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡಿದ್ದಾರೆಂದು ತಿಳಿಯಬೇಕು. ಆಕಾಂಕ್ಷೆಗೆ ಸರಿಯಾಗಿ ಭಾಷ್ಯವನ್ನು

ವ್ಯಾಖ್ಯಾನಿಸುತ್ತಿದ್ದಾರೆ ''ವಿಷ್ಣುರೇವ'' ಇತ್ಯಾದಿ ಟೀಕೆಯಿಂದ. ''ವಿಷ್ಣುರೇವ'' ಎಂಬುದು ''ತತ್ತು'' ಎಂಬ ಅನುವೃತ್ತವಾದ ಪದದ ಅರ್ಥವಾಗಿದೆ.

ಪುರುಷಶಬ್ದಕ್ಕೆ ತತ್ತ್ವಪ್ರದೀಪದಲ್ಲಿ ಮಾಡಿದ ನಿಷ್ಪತ್ತಿ

ಭಾವದೀಪಃ – सम्यक् प्रसीदत्यनेन पुरुष इति तत्त्वप्रदीपदर्शितव्युत्पत्तिं हृदि कृत्वा भाष्ये सम्प्रसादादित्येतत् पूर्णसुखरूपत्वादिति व्याख्यातम् । तत् श्रुतौ केन लब्धमित्यत आह – तत्सुखमितीति ।।

''ಸಮ್ಯಕ್ ಪ್ರಸೀದತ್ಯನೇನ ಪುರುಷಃ'' ಎಂಬುದಾಗಿ ತತ್ತ್ವಪ್ರದೀಪದಲ್ಲಿ ತೋರಿಸಲ್ಪಟ್ಟ ವ್ಯುತ್ಪತ್ತಿಯನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಭಾಷ್ಯದಲ್ಲಿ ''ಸಂಪ್ರಸಾದಾತ್'' ಎಂಬ ಸೂತ್ರದಲ್ಲಿರುವ ಪದಕ್ಕೆ ಪೂರ್ಣಸುಖಸ್ವರೂಪನಾದ್ದರಿಂದ ಎಂಬ ಅರ್ಥವನ್ನು ಹೇಳಿರುತ್ತಾರೆ. ಈ ಅರ್ಥವು ಶ್ರುತಿಯಲ್ಲಿ ಯಾವ ಪದದಿಂದ ತಿಳಿಯಲ್ಪಟ್ಟಿದೆ? ಎಂದರೆ ''ತತ್ಸುಖಂ'' ಇತ್ಯಾದಿ ವಾಕ್ಯದಿಂದ ಉತ್ತರಿಸಿದ್ದಾರೆ.

ಯೋ ವೈ ಭೂಮಾ ಎಂಬುದರ ಭಾವ

ಭಾವದೀಪಃ – तस्य भूमनिष्ठत्वद्योतनाय 'यो वै भूमा' इत्यंशोक्तिः । अर्थोक्तिपूर्वं भाष्यपदमनुवदति – नामादीनां सर्वेषामिति ।। उपरीत्यनूद्यार्थमाह – तदुत्तमत्वेनेति ।।

ಇಂತಹ ಪೂರ್ಣಸುಖವು ಭೂಮನಲ್ಲಿಯೇ ಇರುತ್ತದೆ ಎಂದು ತಿಳಿಸಲು ''ಯೋ ವೈ ಭೂಮಾ'' ಎಂಬ ಶ್ರುತಿಯ ಭಾವವನ್ನು ಉಲ್ಲೇಖಿಸಿದ್ದಾರೆ. ''ಉಪರಿ'' ಎಂಬುದನ್ನು ಅನುವಾದ ಮಾಡಿ ಅರ್ಥವನ್ನು ಹೇಳಿದ್ದಾರೆ ''ತದುತ್ತಮತ್ವೇನ'' ಇತ್ಯಾದಿ ವಾಕ್ಯದಿಂದ.

ಎಲ್ಲಾ ದೇವತೆಗಳಿಗಿಂತ ವಿಷ್ಣುವೇ ಸರ್ವೋತ್ತಮ

ಭಾವದೀಪಃ – प्राणभूम्नोर्द्वयोरपि विष्णुत्वमिति भाष्यपक्षे प्राणान्तर्यामित्वेनैव प्राणपदेन विष्णोर्गृहीतेर्नामादिप्राणान्तात् सर्वस्मादुत्तमत्वम् ।

ಪ್ರಾಣ ಹಾಗೂ ಭೂಮಾ ಎರಡೂ ಸಹ ವಿಷ್ಣುವೆ ಆಗಿದ್ದಾನೆಂದು ಭಾಷ್ಯದ ಅಭಿಪ್ರಾಯ. ಈ ಪಕ್ಷದಲ್ಲಿ ಪ್ರಾಣಪದವು ಪ್ರಾಣನ ಅಂತರ್ಯಾಮಿಯಾದ ವಿಷ್ಣುವನ್ನೇ ಪ್ರತಿಪಾದಿಸುತ್ತದೆ. ಆವಾಗ ನಾಮಾಭಿಮಾನಿ ದೇವತೆಯಿಂದ ಪ್ರಾರಂಭಿಸಿ ಪ್ರಾಣನ ತನಕ ಯಾವ ಅಭಿಮಾನಿ ದೇವತೆಗಳಿದ್ದಾರೋ ಅವರೆಲ್ಲರಿಗಿಂತಲೂ ಭೂಮ ಎನಿಸಿದ ವಿಷ್ಣುವೇ ಉತ್ತಮನೆಂದು ತಿಳಿಯುತ್ತದೆ.

'ಅಧ್ಯುಪದೇಶಾತ್' ಎಂಬ ಹೇತುವು ಅಸಿದ್ಧವಲ್ಲ

भावदीपः – यदा तु प्राणस्य वायुत्वं भूम्न एव तु विष्णुत्वमिति न्यायविवरणादिपक्षस्तदापि प्रश्नाद्यध्याहारेण सर्वस्मादुत्तमत्वं प्राप्तमिति नासिद्धो हेतुरिति भावः ।

ಒಂದು ವೇಳೆ ಪ್ರಾಣಶಬ್ದದಿಂದ ಮುಖ್ಯಪ್ರಾಣದೇವರೇ ಪ್ರತಿಪಾದ್ಯರು ಭೂಮಾ ಶಬ್ದದಿಂದ ಮಾತ್ರ ವಿಷ್ಣುವು ಪ್ರತಿಪಾದ್ಯನೆಂದು ನ್ಯಾಯವಿವರಣಾದಿಗಳ ಪಕ್ಷವನ್ನು ಸ್ವೀಕರಿಸಿದರೆ ಪ್ರಶ್ನೆಯನ್ನು ಅಧ್ಯಾಹಾರ ಮಾಡುವ ಮೂಲಕ ಭೂಮನೆನಿಸಿದ ವಿಷ್ಣುವಿಗೆ ಸರ್ವೋತ್ತಮತ್ವವೂ, ಉತ್ತಮತ್ವವೂ ಸಿದ್ಧವಾಗುತ್ತದೆ. ಹಾಗಾಗಿ ''ಅಧ್ಯುಪದೇಶಾತ್'' ಎಂಬ ಹೇತು ಅಸಿದ್ಧವಾಗಿಲ್ಲ ಎಂದು ತಿಳಿಯಬೇಕು.

ಮುಂದಿನ ಸೂತ್ರದ ಚಕಾರವು ಇಲ್ಲಿ ಆಕರ್ಷಣೀಯ

भावदीपः – उत्तरसूत्रस्थचकारोऽत्राप्याकर्षणीय इति भावेनाह – व्यपदेशाच्चेति ।। तथाच सम्प्रसादात् प्राणादधि उपरि उपदेशादिति पररीत्या एक एवायं सौत्रो हेतुरिति न भ्रमितव्यमिति भावः

''ಧರ್ಮೋಪಪತ್ತೇಶ್ಚ'' ಎಂಬ ಸೂತ್ರದಲ್ಲಿರುವ ''ಚ'' ಎಂಬ ಶಬ್ದವನ್ನು ಈ ಸೂತ್ರದಲ್ಲಿಯೂ ಅನ್ವಯ ಮಾಡಿಕೊಳ್ಳಬೇಕು. ಈ ಅಭಿಪ್ರಾಯದಿಂದ ಟೀಕೆಯಲ್ಲಿ ''ವ್ಯಪದೇಶಾಚ್ಚ'' ಎಂದು ಹೇಳಿರುತ್ತಾರೆ. ಆದ್ದರಿಂದ ಸಂಪ್ರಸಾದಾತ್ = ಪ್ರಾಣನಿಗಿಂತ, ಅಧಿ = ಉತ್ತಮನೆಂದು, ಉಪದೇಶಾತ್ = ಹೇಳಿರುವುದರಿಂದ ಎಂದು ಅದ್ವೈತಿಗಳ ವ್ಯಾಖ್ಯಾನವನ್ನು ನಾವು ಅನುಸರಿಸಬಾರದೆಂದು ತಿಳಿಯುತ್ತದೆ. ಅಂದರೆ ಸೂತ್ರದಲ್ಲಿ ''ಸಂಪ್ರಸಾದಾತ್'' ಎಂಬುದೇ ಬೇರೆ ಹೇತು, ಮುಂದಿನ ಸೂತ್ರದಲ್ಲಿರುವ ''ಚ'' ಶಬ್ದವನ್ನು ಆಕರ್ಶ ಮಾಡಿಕೊಂಡಾಗ ''ಅಧ್ಯುಪದೇಶಾತ್'' ಎಂಬುದೂ ಸಹ ಮತ್ತೊಂದು

ಹೇತುವಾಗುತ್ತದೆ ಎಂಬುದು ನಮ್ಮ ಸಿದ್ಧಾಂತ. ಆದರೆ ಅದ್ವೈತಿಗಳು ''ಸಂಪ್ರಸಾದಾತ್ ಅಧ್ಯುಪದೇಶಾತ್'' ಎಂಬುದನ್ನು ಒಂದೇ ಹೇತು ಎನ್ನುತ್ತಾರೆ. ಈ ಭ್ರಾಂತಿಗೆ ನಾವು ಒಳಗಾಗಬಾರದೆಂದು ಟೀಕಾರಾಯರು ''ವ್ಯಪದೇಶಾಚ್ಚ'' ಎಂಬಲ್ಲಿ ''ಚ'' ಶಬ್ದವನ್ನು ಪ್ರಯೋಗಿಸಿದ್ದಾರೆ.

'ಮುಖ್ಯಾಮುಖ್ಯಯೋರ್ಮುಖ್ಯೇ ಸಂಪ್ರತ್ಯಯಃ'

ಭಾವದೀಪಃ – ಪೂರ್ಣಸುಖಾರ್ಥತ್ವಾದಿತಿ ।। 'ಮುಖ್ಯಾಮುಖ್ಯಯೋರ್ಮುಖ್ಯೇ ಸಮ್ಪ್ರತ್ಯಯಃ' ಇತಿ ನ್ಯಾಯಾತ್ । 'ಮುಖ್ಯಸ್ಯ ನಿರ್ವಿಶೇಷೇಣ ಶಬ್ದಃ' ಇತಿ ಸ್ಮೃತೇರ್ನಾಲ್ಪೇ ಸುಖಮಸ್ತೀತಿ ವಾಕ್ಯಶೇಷಬಲಾಚ್ಚ ಸಙ್ಕೋಚಕಾಪವಾದಕಸ್ಯಾಭಾವೇ ಪೂರ್ಣಸುಖಲಾಭಾದಿತಿ ಭಾವಃ ।

''ತತ್ ಸುಖಂ'' ಎಂಬ ಶ್ರುತಿಯಲ್ಲಿರುವ ಸುಖ ಶಬ್ದವು ಪೂರ್ಣಸುಖವನ್ನೇ ಹೇಳುತ್ತದೆ. ಏಕೆಂದರೆ ''ಮುಖ್ಯಾಮುಖ್ಯಯೋರ್ಮುಖ್ಯೇ ಸಂಪ್ರತ್ಯಯಃ'' ಎಂಬ ನ್ಯಾಯದಂತೆ ಪರಿಪೂರ್ಣಸುಖ ಮತ್ತು ಅಪರಿಪೂರ್ಣಸುಖ ಎಂಬೆರಡು ಅರ್ಥಗಳಲ್ಲಿ ಪರಿಪೂರ್ಣಸುಖವನ್ನೇ ಸ್ವೀಕರಿಸಬೇಕೆಂದು ಈ ನ್ಯಾಯದಿಂದ ತಿಳಿಯುತ್ತದೆ. ಮತ್ತು ''ಮುಖ್ಯಸ್ಯ ನಿರ್ವಿಶೇಷೇಣ ಶಬ್ದಃ'' ಎಂಬ ಸ್ಮೃತಿಯ ಆಧಾರದಿಂದ ಮುಖ್ಯವಾದ ಅರ್ಥವನ್ನು ಪ್ರತಿಪಾದಿಸುವ ಶಬ್ದವು ವಿಶೇಷಣವಿಲ್ಲದೆ ಪ್ರಯುಕ್ತವಾಗಿರುತ್ತದೆ. ಆದ್ದರಿಂದ ವಿಶೇಷಣವಿಲ್ಲದ ಸುಖ ಶಬ್ದವು ಮುಖ್ಯವಾದ ಅರ್ಥವನ್ನೇ ಹೇಳುತ್ತದೆ. ಅಷ್ಟೇ ಅಲ್ಲದೆ ''ನಾಲ್ಪೇ ಸುಖಮಸ್ತಿ'' ಎಂಬ ವಾಕ್ಯಶೇಷದ ಬಲದಿಂದಲೂ ಸಂಕೋಚ ಮಾಡಲು ಬೇಕಾಗಿರುವ ಯಾವುದೇ ಬಾಧಕಪ್ರಮಾಣವಿಲ್ಲದ ಕಾರಣ ಪೂರ್ಣಸುಖವೆಂಬ ಅರ್ಥವನ್ನೇ ಹೇಳಬೇಕೆಂದು ತಿಳಿಯಬೇಕು.

'ಸಂಪ್ರಸಾದಾತ್' ಎಂಬುದರ ವ್ಯಾಖ್ಯಾನ

ಭಾವದೀಪಃ – ಪೂರ್ವಪಕ್ಷಿಣಾऽप्याक्षिप्तोऽप्ययं हेतुस्तत्प्रापकखण्डनेन स्थिरीभविष्यतीति भावः । यद्वा नामादिप्राणान्तेभ्यः सर्वेभ्योऽप्युत्तमत्वेनोपदेशादिति निरवकाशहेतुसाहित्यान्नैतदन्यशङ्कार्हमिति भावेन सम्प्रसादादित्युक्तिः । अत एव भाष्ये चशब्दः।

ಪೂರ್ವಪಕ್ಷಿಯು ಶ್ರುತಿಯಲ್ಲಿರುವ ಸುಖಶಬ್ದಕ್ಕೆ ಹೀಗೆ ಪೂರ್ಣವಾದ ಸುಖವೆಂಬ ಅರ್ಥವನ್ನು ಹೇಗೆ ಹೇಳುತ್ತಿರೆಂದು ಆಕ್ಷೇಪಿಸಿದ್ದರೂ ಸಹ ಪೂರ್ವಪಕ್ಷ ಪ್ರಾಪಕವಾದ ಹೇತುಗಳನ್ನು ಖಂಡನೆ

ಮಾಡುವುದರಿಂದಲೇ ಇದನ್ನು ಖಂಡಿಸಿದಂತಾಗುತ್ತದೆ ಎಂದು ತಿಳಿಯಬೇಕು. ಅಥವಾ ನಾಮಾಭಿಮಾನಿದೇವತೆಯಿಂದ ಪ್ರಾರಂಭಿಸಿ ಮುಖ್ಯಪ್ರಾಣದೇವರ ತನಕ ಎಷ್ಟು ಅಭಿಮಾನಿ ದೇವತೆಗಳಿದ್ದಾರೋ ಅವರೆಲ್ಲರಗಿಂತಲೂ ಭೂಮನನ್ನು ಉತ್ತಮನೆಂದು ಶ್ರುತಿಯು ಹೇಳುತ್ತಿದೆ. ಆದ್ದರಿಂದ ಹೀಗೆ ಅಧ್ಯುಪದೇಶವೆಂಬ ನಿರವಕಾಶಲಿಂಗದ ಸಾಹಿತ್ಯದಿಂದ ಮುಖ್ಯಪ್ರಾಣನನ್ನು ಭೂಮನೆಂದು ಆಂಶಕಿಸಬಾರದೆಂಬ ಅಭಿಪ್ರಾಯದಿಂದ ''ಸಂಪ್ರಸಾದಾತ್'' ಎಂದು ಹೇಳಿರುತ್ತಾರೆ. ಆದ್ದರಿಂದಲೇ ಭಾಷ್ಯದಲ್ಲಿ ''ಚ'' ಎಂಬ ಶಬ್ದವನ್ನು ಹೇಳಿರುತ್ತಾರೆ.

ಆಂಧ್ರಪಾಠವೇ ಸರಿ

भावदीपः – सर्वतः परममकारवाच्यमिति ।। परमश्चासावश्चेति विग्रह इति भावः । अनेन सर्वोत्तमत्वमुक्तम् । परममिति द्राविडपाठेऽपि आन्ध्रपाठानुरोधात् परमामित्युक्तिः ।

''ವಿಶ್ವತಃ ಪರಮಾಂ'' ಎಂಬ ಶ್ರುತಿಯಲ್ಲಿ ''ವಿಶ್ವತಃ'' ಎಂಬ ಶಬ್ದಕ್ಕೆ ''ಸರ್ವತಃ'' ಎಂದರ್ಥ. ''ಪರಮಾಂ'' ಎಂಬುದಕ್ಕೆ ಶ್ರೇಷ್ಠನಾಗಿದ್ದಾನೆ ಮತ್ತು ಅಕಾರ ವಾಚ್ಯನಾಗಿದ್ದಾನೆ ಎಂದರ್ಥ. ''ಪರಮಶ್ಚಾಸೌ ಅಶ್ಚ'' ಎಂಬ ವಿಗ್ರಹವನ್ನು ಇಲ್ಲಿ ತಿಳಿಯಬೇಕು. ಇದರಿಂದ ಸರ್ವೋತ್ತಮನಾಗಿದ್ದಾನೆಂದು ಹೇಳಿದಂತಾಗುತ್ತದೆ. ''ಪರಮಂ'' ಎಂಬುದು ತಮಿಳು ದೇಶದ ಪಾಠ. ''ಪರಮಾಂ'' ಎಂಬುದು ಆಂಧ್ರದೇಶದ ಪಾಠ. ''ಪರಮಂ'' ಎಂಬ ತಮಿಳುದೇಶದ ಪಾಠವನ್ನೂ ಸಹ ಆಂಧ್ರದೇಶದ ಪಾಠಾನುಸಾರಿಯಾಗಿ ''ಪರಮಾಂ'' ಎಂದು ಹೇಳಿರುತ್ತಾರೆ.

'ವಿಶ್ವಾಕ್ಷಮ್' ಇತ್ಯಾದಿ ಶ್ರುತಿಯ ಅರ್ಥ

भावदीपः – शिष्टश्रौतवदर्थस्तु विश्वतो दर्शनादिकमस्येति विश्वाक्षम् । विश्वं प्रविष्टत्वेन वर्तमानम् । नारायणं मुक्तसन्धाश्रयम् । देवं प्रकाशरूपम्। विश्वं गुणैः पूर्णमिति तत्वप्रदीपे व्यक्तः । द्वितीयान्तस्य 'तद् विश्वमुपजीवति' इति कर्तृक्रियाभ्यामग्रे श्रुताभ्यामन्वयः ।

ಶ್ರುತಿಯಲ್ಲಿರುವ ಉಳಿದ ಪದಗಳ ಅರ್ಥವನ್ನು ಹೀಗೆ ತಿಳಿಯಬೇಕು - ವಿಶ್ವಾಕ್ಷಂ = ಎಲ್ಲಾ ವಿಧವಾದ ಜ್ಞಾನವನ್ನು ಹೊಂದಿರುತ್ತಾನೆ. ಅಥವಾ ವಿಶ್ವವನ್ನು ಪ್ರವೇಶಿಸಿ ಇರುತ್ತಾನೆ. ನಾರಾಯಣಂ = ಮುಕ್ತರ

ಸಂಘಕ್ಕೆ ಆಶ್ರಯನು. ದೇವಂ = ಪ್ರಕಾಶಸ್ವರೂಪನು. ವಿಶ್ವಂ ಎಂಬ ಪದಕ್ಕೆ ಗುಣಗಳಿಂದ ಪೂರ್ಣನೆಂಬ ಅರ್ಥವನ್ನು ತತ್ವಪ್ರದೀಪದಲ್ಲಿ ಹೇಳಿರುತ್ತಾರೆ. ದ್ವಿತೀಯಾಂತವಾದ ಈ ಎಲ್ಲಾ ಪದಗಳಿಗೆ ''ತದ್ವಿಶ್ವಮುಪಜೀವತಿ'' ಎಂಬುದಾಗಿ ಕರ್ತೃ ಹಾಗೂ ಕ್ರಿಯೆಗಳನ್ನು ಹೇಳುವ ಪದಗಳಲ್ಲಿ ಅನ್ವಯ ಮಾಡಬೇಕು.

ಮುಖ್ಯಪ್ರಾಣದೇವರು ಸರ್ವೋತ್ತಮರಲ್ಲ

भावदीपः – ननु श्रुत्यन्तराद् विष्णोरिव निरवकाशलिङ्गोपेतप्राणोपक्रमात् प्राणस्याप्यस्तु सर्वोत्तमत्वं पूर्णानन्दत्वं चेत्याशङ्क्याऽह – नचेति ।

ಬೇರೆ ಶ್ರುತಿಯಿಂದ ವಿಷ್ಣುವಿಗೆ 'ಭೂಮಾ' ಎಂಬ ಶಬ್ದವಾಚ್ಯತ್ವವನ್ನು ಹೇಗೆ ಪ್ರತಿಪಾದಿಸುತ್ತೀರೋ ಅದರಂತೆ ನಿರವಕಾಶವಾದ ಲಿಂಗದಿಂದ ಸಹಿತವಾದ ಉಪಕ್ರಮ ಇರುವುದರಿಂದ ಮುಖ್ಯಪ್ರಾಣದೇವರೂ ಸಹ ಸರ್ವೋತ್ತಮರಾಗಲಿ, ಮತ್ತು ಪರಿಪೂರ್ಣವಾದ ಆನಂದವುಳ್ಳವರಾಗಲಿ? ಎಂಬ ಆಕ್ಷೇಪಕ್ಕೆ ''ನಚ'' ಇತ್ಯಾದಿ ಟೀಕೆಯಿಂದ ಉತ್ತರಿಸುತ್ತಿದ್ದಾರೆ.

ಇಬ್ಬರು ಸರ್ವೋತ್ತಮರಲ್ಲ

भावदीपः – विरोधादिति ।। अन्योन्यापेक्षयाऽन्योन्यस्य परावरत्वप्राप्तेरिति भावः ।। इत्युक्तत्वादिति ।। अन्तरनये सुखविशिष्टेति सूत्रभाष्य इत्यर्थः । अनुक्तिसहितस्यैवोक्रमस्य भूम्नः प्राणसाधकत्वादाह – अनन्तरमिति ।।

''ವಿರೋಧಾತ್'' ಎಂದರೆ ಪರಸ್ಪರ ಒಬ್ಬರನ್ನೊಬ್ಬರು ಅಪೇಕ್ಷಿಸಬೇಕಾದ್ದರಿಂದ ಇಬ್ಬರಿಗೂ ಸಹ ಪರತ್ವ ಹಾಗೂ ಅಪರತ್ವವನ್ನು ಒಪ್ಪಬೇಕಾಗುತ್ತದೆ ಎಂದರ್ಥ. ಆದ್ದರಿಂದ ಇಬ್ಬರನ್ನೂ ಸರ್ವೋತ್ತಮರೆಂದು ಹೇಳಲು ಸಾಧ್ಯವಿಲ್ಲ. ''ಇತ್ಯುಕ್ತತ್ವಾತ್'' ಎಂದರೆ ಆಂತರಾಧಿಕರಣದ ''ಸುಖವಿಶಿಷ್ಟಾಭಿಧಾನಾತ್'' ಎಂಬ ಸೂತ್ರದ ಭಾಷ್ಯದಲ್ಲಿ ಹೇಳಿದ್ದಾರೆಂದು ತಿಳಿಯಬೇಕು. ಅನುಕ್ತಿ ಲಿಂಗದಿಂದ ಸಹಿತವಾದ ಉಪಕ್ರಮದಲ್ಲಿರುವ ಭೂಮಾವೆಂಬ ಶಬ್ದವು ಮುಖ್ಯಪ್ರಾಣನಿಗೆ ಸಾಧಕವಾಗಿದೆ ಅಲ್ಲವೆ? ಎಂಬ ಪ್ರಶ್ನೆಗೆ ''ಅನಂತರಂ'' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ.

ಭಗವಂತನಲ್ಲಿ ಅಣುತ್ವ ಮಹತ್ವಗಳೆರಡೂ ಇವೆ

भावदीपः – रूपान्तरेति ।। सर्वरूपाणां सर्वगतत्वेऽप्युत्तरनये वक्ष्यमाणरीत्याऽणुत्वस्यापि सर्वरूपेषु सत्वेऽपि यस्मिन् देहस्थादिरूपे महत्त्वं शक्त्यात्मनाऽस्ति तादृशरूपे क्रियावत्त्वस्यापि सम्भवात् श्रुतिसिद्धत्वाच्चेत्यर्थः । स्पष्टमुपपादितमेच्चन्द्रिकायाम् ।

ಭಗವಂತನ ಸಕಲ ರೂಪಗಳು ಎಲ್ಲಡೆ ಇರುವುದಾದರೆ ಮುಂದಿನ ಅಧಿಕರಣದಲ್ಲಿ ಹೇಳುವ ರೀತಿಯಾಗಿ ಅಣುತ್ವವೂ ಸಹ ಅದೇ ರೂಪದಲ್ಲಿ ಇರುತ್ತದೆ. ಯಾವ ದೇಹದಲ್ಲಿ ಮಹತ್ವವು ಶಕ್ತಿರೂಪದಿಂದ ಇದೆಯೋ ಅಂತಹ ರೂಪದಲ್ಲಿ ಕ್ರಿಯೆಯನ್ನು ಹೇಳಬಹುದು. ಅಂದರೆ ಭಗವಂತನಿಗೆ ಅಣು ರೂಪವಿದ್ದರೆ ಕ್ರಿಯೆಯನ್ನು ಹೇಳಬಹುದೇ ಹೊರತು ಮಹತ್ವವಿದ್ದರೆ ಕ್ರಿಯೆಯನ್ನು ಹೇಳಲಾಗದು. ಭಗವಂತನಲ್ಲಿ ಅಣುತ್ವ ಮಹತ್ವವೆಂಬ ಎರಡು ವಿಧವಾದ ಧರ್ಮಗಳೂ ಸಹ ಇವೆ. ಯಾವಾಗ ಮಹತ್ವವೆಂಬ ಧರ್ಮವು ವ್ಯಕ್ತವಾಗಿರುತ್ತದೆಯೋ ಆವಾಗ ಅಣುತ್ವವು ಶಕ್ತಿ ರೂಪದಿಂದ ಇರುತ್ತದೆ. ಅಣುತ್ವವು ವ್ಯಕ್ತವಾದಾಗ ಮಹತ್ವವು ಶಕ್ತಿ ರೂಪದಿಂದ ಇರುತ್ತದೆ. ಪ್ರಕೃತ ನಮ್ಮ ದೇಹದಲ್ಲಿರುವ ಭಗವದ್ರೂಪದಲ್ಲಿ ಮಹತ್ವವು ಶಕ್ತಿರೂಪದಿಂದಲೂ ಅಣುತ್ವವು ವ್ಯಕ್ತಿರೂಪದಿಂದಲೂ ಇರುವ ಕಾರಣ ಕ್ರಿಯೆಯನ್ನು ಹೇಳಬಹುದೆಂದು ತಿಳಿಯಬೇಕು. ಈ ವಿಷಯದಲ್ಲಿ ಶ್ರುತಿಯೂ ಸಹ ಪ್ರಮಾಣವಾಗಿದೆ ಎಂಬುದನ್ನು ಗಮನಿಸಬೇಕು. ಹೆಚ್ಚಿನ ವಿಚಾರವನ್ನು ತಾತ್ಪರ್ಯಚಂದ್ರಿಕೆಯನ್ನು ಓದಿ ತಿಳಿಯಬೇಕು.

ವಿಶೇಷವಿಚಾರ - ಮುಂದಿನ ಅಕ್ಷರಾಧಿಕರಣದ 'ಅನ್ಯಭಾವವ್ಯಾವೃತ್ತೇಃ' ಎಂಬ ಗುಣಸೂತ್ರದಲ್ಲಿ ಬ್ರಹ್ಮನಿಗೆ ಮಹತ್ವವಿದ್ದರೂ ಸಹ ಅಣುತ್ವವು ಇರುತ್ತದೆಂದು ಸಮರ್ಥಿಸುತ್ತಾರೆ. ಅಣುರೂಪನಾದ ಬ್ರಹ್ಮನಿಗೆ ಉತ್ಕ್ರಮಣವೆಂಬ ಲಿಂಗವನ್ನು ಹೇಳಲು ಏನು ತೊಂದರೆ? ಏಕೆಂದರೆ ಕ್ರಿಯಾ ಇರಬೇಕೆಂದರೆ ಅಣುವಾಗಿದ್ದರೆ ಸಾಕು, ಪರಮಾತ್ಮನಲ್ಲಿ ಅಣುತ್ವವಿರುವ ಪ್ರಯುಕ್ತ ಕ್ರಿಯಾವನ್ನು ಹೇಳಬಹುದು. ಕ್ರಿಯಾವತ್ವಕ್ಕೆ ಅಣುತ್ವವೇ ಪ್ರಯೋಜಕ ಹೊರತು, ಮಹತ್ವಾಭಾವವಿಶಿಷ್ಟವಾದ ಅಣುತ್ವವಾಗಲೀ, ಅಥವಾ ಮಹತ್ವಾಭಾವವಾಗಲೀ ಪ್ರಯೋಜಕವಲ್ಲ. ಏಕೆಂದರೆ ಅಣುತ್ವಕ್ಕಿಂತ ಮಹತ್ವಾಭಾವವು ಗುರುಭೂತವಾಗಿದೆ. ಮಹತ್ವಾಭಾವಕ್ಕಿಂತಲೂ, ಮಹತ್ವಾಭಾವವಿಶಿಷ್ಟವಾದ ಅಣುತ್ವವು

ಇನ್ನೂ ಗುರುಭೂತವಾಗಿದೆ. ಆದ್ದರಿಂದ ಲಘುಭೂತವಾದ ಅಣುತ್ವವನ್ನೇ ಪ್ರಯೋಜಕವೆಂದು ಹೇಳುವುದು ಸಾಧುವಾಗಿದೆ. ಇಂತಹ ಅಣುತ್ವವು ಬ್ರಹ್ಮನಲ್ಲಿರುವುದರಿಂದ ಉತ್ಕ್ರಮಣವೆಂಬ ಕ್ರಿಯೆಯನ್ನು ಹೇಳಲು ಏನು ತೊಂದರೆ?

ಹೀಗೆ ಪ್ರಶ್ನಿಸಬಾರದು. ಏಕೆಂದರೆ ನೀವು ಹೇಳಿದ್ದಕ್ಕೆ ವಿಪರೀತವಾಗಿಯೂ ಹೇಳಲು ಬರುತ್ತದೆ. ಏಕೆಂದರೆ ಕ್ರಿಯಾಶೂನ್ಯತ್ವಕ್ಕೆ ಮಹತ್ತ್ವವೇ ಪ್ರಯೋಜಕವಾಗಿದೆ; ಹೊರತು ಅಣುತ್ವಾಭಾವವಿಶಿಷ್ಟವಾದ ಮಹತ್ವವಾಗಲೀ ಅಥವಾ ಅಣುತ್ವಾಭಾವವಾಗಲೀ ಪ್ರಯೋಜಕವಲ್ಲ. ಏಕೆಂದರೆ ಮಹತ್ವಕ್ಕಿಂತ ಅಣುತ್ವಾಭಾವವು ಗುರುಭೂತವಾಗಿದೆ. ಅಣುತ್ವಾಭಾವಕ್ಕಿಂತಲೂ ಅಣುತ್ವಾಭಾವವಿಶಿಷ್ಟವಾದ ಮಹತ್ವವು ಇನ್ನೂ ಗುರುಭೂತವಾಗಿದೆ. ಇವೆರಡಕ್ಕಿಂತ ಮಹತ್ವವು ಲಘುಭೂತವಾಗಿರುವ ಕಾರಣ ಕ್ರಿಯೆ ಇಲ್ಲದಿರಲು ಮಹತ್ವವನ್ನು ಪ್ರಯೋಜಕವೆಂದೂ ಹೇಳಬಹುದು ಎಂದರ್ಥ. ಬ್ರಹ್ಮನಲ್ಲಿ ಮಹತ್ವವಿರುವ ಪ್ರಯುಕ್ತ ಕ್ರಿಯಾಶೂನ್ಯತ್ವವನ್ನು ಒಪ್ಪಲೇಬೇಕು. ಅಂದರೆ ವ್ಯಾಪ್ತನಾದ ಬ್ರಹ್ಮನು ದೇಹದಿಂದ ಉತ್ಕ್ರಮಣನಾಗಲು ಸಾಧ್ಯವಿಲ್ಲ ಎಂದು ಹೇಳಿದಂತಾಗುತ್ತದೆ.

ಪರಸತ್ಯಾದಿಗಳಿಗಿಂತ ಉತ್ತಮತ್ವವನ್ನು ಮುಖ್ಯಪ್ರಾಣದೇವರಿಗೆ ಹೇಳಿಯೇ ಇಲ್ಲವಲ್ಲ?

भावदीपः – नन्वेवमत्र भाष्ये प्राणभूम्नोरेकत्वमुपेत्य उत्क्रमणं कथञ्चित् समाधाय द्वयोर्विष्णुतोक्तौ 'एष तु वा अतिवदति' इति तु शब्दयोगः आशाशब्दोक्तसरस्वतीतो मुख्यवायोरुत्तमत्वमनुक्त्वा विष्णोरेव तदुक्त्ययोगश्च ।

ಆಕ್ಷೇಪ - ಪ್ರಕೃತ ಭಾಷ್ಯದಲ್ಲಿ ಪ್ರಾಣ ಹಾಗೂ ಭೂಮಾ ಇಬ್ಬರಿಗೂ ಐಕ್ಯವನ್ನು ಅಂಗೀಕರಿಸಿ ''ಉತ್ಕ್ರಮಣ'' ಎಂಬ ಲಿಂಗವನ್ನು ಹೇಗಾದರೂ ಉಪಪಾದಿಸಿ ಇಬ್ಬರಿಗೂ ವಿಷ್ಣುತ್ವವನ್ನು ಸಮರ್ಥಿಸುವುದಾದರೆ, ''ಏಷ ತು ವಾ ಅತಿವದತಿ'' ಎಂಬಲ್ಲಿರುವ ''ತು'' ಎಂಬ ಶಬ್ದವು ಅಯುಕ್ತವಾಗುತ್ತದೆ. ಅಷ್ಟೇ ಅಲ್ಲದೆ ''ಆಶಾ'' ಎಂಬ ಶಬ್ದದಿಂದ ಪ್ರತಿಪಾದ್ಯಳಾದ ಸರಸ್ವತೀ ದೇವಿಯಗಿಂತಲೂ ಮುಖ್ಯಪ್ರಾಣ ದೇವರಿಗೆ ಉತ್ತಮತ್ವವನ್ನು ಹೇಳದೆ ನೇರವಾಗಿ ವಿಷ್ಣುವಿಗೆ ಉತ್ತಮತ್ವವನ್ನು ಹೇಳುವುದು ತಪ್ಪಾಗುತ್ತದೆ.

ನೇರವಾಗಿ ವಿಷ್ಣುವಿನ ಉತ್ತಮತ್ವ ಹೇಳಿದ್ದಕ್ಕೆ ವಿರೋಧವಿಲ್ಲ

भावदीपः – 'इयदामननाद्' इत्यादिनयैः 'आशा सरस्वती प्रोक्ता तत्प्रकृष्टसुखत्वतः । प्राण इत्युच्यते वायुः सर्वे त्वेते दशोत्तराः ।।' इत्यादिछान्दोग्यभाष्ये च विरोध इत्यतः 'एष तु वा अतिवदति' 'यः सत्येनातिवदति' इति प्राणाद्विष्णोर्भूयस्त्वोक्तिश्चेति न्यायविवरणानुरोधेन प्राणभूम्नोर्भेदमुपेत्याह – अस्तु वेति ।।

''ಇಯದಾಮನನಾದ್'' ಇತ್ಯಾದಿ ಅಧಿಕರಣಗಳಲ್ಲಿ ''ಆಶಾ ಸರಸ್ವತೀ ಪ್ರೋಕ್ತಾ ತತ್ಪ್ರಕೃಷ್ಟಸುಖತ್ವತಃ। ಪ್ರಾಣ ಇತ್ಯುಚ್ಯತೇ ವಾಯುಃ ಸರ್ವೇ ತ್ವೇತೇ ದಶೋತ್ತರಾಃ ॥'' ಇತ್ಯಾದಿ ಛಾಂದೋಗ್ಯಭಾಷ್ಯದಲ್ಲಿಯೂ ''ಆಶಾ'' ಎನಿಸಿದ ಸರಸ್ವತೀಗಿಂತಲೂ ಹೆಚ್ಚಿನ ಸುಖವನ್ನು ಹೊಂದಿರುವ ಕಾರಣ ವಾಯುದೇವರು ಉತ್ತಮರಾಗಿದ್ದಾರೆಂದು ಹೇಳಲಾಗಿದೆ. ಅದಕ್ಕೆ ಅನುಗುಣವಾಗಿ ವಾಯುದೇವರಿಗೆ ಉತ್ತಮತ್ವವನ್ನು ಸಮರ್ಥನೆ ಮಾಡದೆ ನೇರವಾಗಿ ವಿಷ್ಣುವಿಗೆ ಉತ್ತಮತ್ವವನ್ನು ಸಮರ್ಥನೆ ಮಾಡಿದರೆ ಅವುಗಳ ವಿರೋಧ ಬರುತ್ತದಲ್ಲವೇ?

ಸಮಾಧಾನ - ಈ ಆಕ್ಷೇಪಕ್ಕೆ ಉತ್ತರಿಸುವುದಕ್ಕಾಗಿ ಮತ್ತು ''ಏಷ ತು ವಾ ಅತಿವದತಿ ಯಃ ಸತ್ಯೇನಾತಿವದತಿ'' ಎಂಬ ಶ್ರುತಿಯಲ್ಲಿ ಮುಖ್ಯಪ್ರಾಣದೇವರಿಗಿಂತ ವಿಷ್ಣುವಿಗೇ ಉತ್ತಮತ್ವವು ಹೇಳಲ್ಪಟ್ಟಿದೆ ಎಂಬುದನ್ನು ಸಮರ್ಥನೆ ಮಾಡುವುದಕ್ಕಾಗಿಯೂ ಭಾಷ್ಯದ ಅಭಿಪ್ರಾಯವನ್ನು ಬಿಟ್ಟು ನ್ಯಾಯವಿವರಣಕ್ಕೆ ಅನುಸಾರಿಯಾದ ಅಭಿಪ್ರಾಯವನ್ನು ವಿವಕ್ಷಿಸಿ ಪ್ರಾಣ ಹಾಗೂ ಭೂಮಾ ಇಬ್ಬರಿಗೂ ಭೇದವೇ ಇದೆ ಎಂಬುದನ್ನು ''ಅಸ್ತು ವಾ'' ಎಂಬ ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ.

ವಿಶೇಷವಿಚಾರ - ಪೂರ್ವಪಕ್ಷದಲ್ಲಿ ಮುಖ್ಯಪ್ರಾಣದೇವರಿಗಿಂತ ಭೂಯಸ್ತ್ವವನ್ನು ಹೇಳದಿರುವಿಕೆಯೇ ಬಾಧಕವಾಗಿದೆಯೆಂದು ಆಕ್ಷೇಪಿಸಲಾಗಿತ್ತು. ಇದು ತಪ್ಪು.

ಪೂರ್ವಪಕ್ಷದಲ್ಲಿಯೂ ಸಹ ಪ್ರಾಣನಿಗೆ ವಿಷ್ಣುವಿಗಿಂತ ಭೂಯಸ್ತ್ವವನ್ನು ಹೇಳಿರುವುದಿಲ್ಲ.ಆದ್ದರಿಂದ ಪ್ರಾಣನಿಗಿಂತ ಉತ್ತಮತ್ವವನ್ನು ಹೇಳುವುದು ವಿಷ್ಣುಪಕ್ಷದಲ್ಲಿ ಹೇಗೆ ಬಾಧಕವಾಗುತ್ತದೆಂದು ಪೂರ್ವಪಕ್ಷಕಾರರು ಹೇಳುತ್ತಾರೋ, ಅದರಂತೆ ವಿಷ್ಣುವಿಗಿಂತ ಭೂಯಸ್ತ್ವವನ್ನು ಪ್ರಾಣನಲ್ಲಿ ಹೇಳದಿರುವಿಕೆಯೂ ಸಹ ಪೂರ್ವಪಕ್ಷಿಗಳಿಗೆ ಬಾಧಕವಾಗುತ್ತವೆ.

ವಿಷ್ಣುವು ಪ್ರಾಣನಿಗಿಂತ ಅಧಮನಾದರೆ ನಾಮ, ವಾಕ್, ಮೊದಲಾದ ಅಭಿಮಾನಿ ದೇವತೆಗಳಿಗಿಂತ ಮುಖ್ಯಪ್ರಾಣದೇವರು ಉತ್ತಮರಾಗಿದ್ದಾರೆಂದು ಹೇಗೆ ಹೇಳಲ್ಪಟ್ಟಿದೆಯೋ, ಅದರಂತೆ ವಿಷ್ಣುವಿಗಿಂತಲೂ ಮುಖ್ಯಪ್ರಾಣದೇವರು ಉತ್ತಮರಾಗಿದ್ದಾರೆಂದು ಪ್ರಶ್ನೆ ಹಾಗೂ ಉತ್ತರಗಳಿಂದ ಹೇಳಬೇಕಿತ್ತು.

ಇದನ್ನೇ ನ್ಯಾಯವಿವರಣದಲ್ಲಿ 'ಪ್ರಾಣಸ್ಯ ವಿಷ್ಣೋಃ ಸಕಾಶಾದ್ಭೂಯಸ್ತ್ವಾನುಕ್ತಿಃ'' ಮುಖ್ಯಪ್ರಾಣದೇವರಿಗೆ ವಿಷ್ಣುವಿನ ದೆಸೆಯಿಂದ ಭೂಯಸ್ತ್ವವನ್ನು ಹೇಳದಿರುವಿಕೆಯು ಪೂರ್ವಪಕ್ಷಕಾರರಿಗೆ ಬಾಧಕವಾಗಿದೆ ಎಂದು ಹೇಳಿರುತ್ತಾರೆ.

ಹಾಗಾದರೆ ಪೂರ್ವಪಕ್ಷ ಹಾಗೂ ಸಿದ್ಧಾಂತ ಪಕ್ಷಗಳಲ್ಲಿ 'ಅನುಕ್ತಿ' ಎಂಬ ಬಾಧಕವು ಸಮಾನವಾಯಿತಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ 'ಏವಂ ವಿಜಾನನ್ನತಿವಾದೀ' ಎಂಬುದಾಗಿ ಯಾರು ಪ್ರಾಣನನ್ನು ತಿಳಿದಿದ್ದಾರೋ, ಅವರು ಉತ್ತಮಜ್ಞಾನಿಗಳಾಗಿದ್ದಾರೆಂದು ಅತಿವಾದಿತ್ವವನ್ನು ಹೇಳಲಾಗಿದೆ. ಆದರೆ ಮುಂದೆ 'ಏಷ ತು ವಾ ಅತಿವದತಿ ಯಃ ಸತ್ಯೇನಾತಿವದತಿ' 'ಸತ್ಯನೆಂಬ ಭೂಮನನ್ನು ಯಾರು ತಿಳಿದಿದ್ದಾರೋ, ಅವರು ಮತ್ತಷ್ಟು ಉತ್ತಮ ಜ್ಞಾನಿಗಳಾಗಿದ್ದಾರೆ' ಎಂಬುದಾಗಿ 'ತು' ಎಂಬ ಶಬ್ದದಿಂದ ವಿಶೇಷವಾದ ಅತಿಶಯವನ್ನು ಶ್ರುತಿಯು ಹೇಳುತ್ತಿದೆ. ಈ 'ತು' ಶಬ್ದವು ಭೂಮನಿಗೆ ಪ್ರಾಣನಿಗಿಂತ ಅತಿಶಯವನ್ನು ಹೇಳುತ್ತಿದೆ ಎಂದರ್ಥ. ಆದ್ದರಿಂದ ಪ್ರಾಣನಿಗಿಂತ ಶ್ರೇಷ್ಠನಾದವನು ಮತ್ತೊಬ್ಬನಿದ್ದಾನೇನು? ಎಂಬ ಪ್ರಶ್ನೆಯನ್ನು ಮೂಲದಲ್ಲಿ ಹೇಳಿಲ್ಲದಿದ್ದರೂ ಅಧ್ಯಾಹಾರ ಮಾಡಿಕೊಳ್ಳಬೇಕು. ಆದ್ದರಿಂದ ಸಿದ್ಧಾಂತದಲ್ಲಿ ಇರುವ ಅನುಕ್ತಿಯೆಂಬುದು ಅನ್ಯಥಾ ಉಪಪನ್ನವಾಗುತ್ತದೆ.

ಪೂರ್ವಪಕ್ಷಕಾರರು ಸಿದ್ಧಾಂತಿಗಳನ್ನು ಕುರಿತು ಯಾವ ಅನುಕ್ತಿಯೆಂಬ ಬಾಧಕವನ್ನು ಹೇಳಿದರೋ, ಅದು ಪ್ರಶ್ನೆ ಹಾಗೂ ಉತ್ತರಗಳನ್ನು ಅಧ್ಯಾಹಾರ ಮಾಡಿಬಿಟ್ಟರೆ ಸಾವಕಾಶವಾಗುತ್ತದೆ. ಆದರೆ ಸಿದ್ಧಾಂತಿಗಳು ಪೂರ್ವಪಕ್ಷಕಾರರನ್ನು ಕುರಿತು ಯಾವ ಅನುಕ್ತಿಯೆಂಬ ಬಾಧಕವನ್ನು ಹೇಳುತ್ತಿದ್ದಾರೋ, ಅದು ನಿರವಕಾಶವಾಗಿದೆ. ಆದ್ದರಿಂದಲೇ ಅನುವ್ಯಾಖ್ಯಾನದಲ್ಲಿ 'ಗತ್ಯಂತರವಿವರ್ಜಿತಾಃ' ಎಂಬುದಾಗಿ ನಿರವಕಾಶತ್ವವನ್ನು ಹೇಳಿರುತ್ತಾರೆ.

ಈ ಬಗೆಯಲ್ಲಿ ಅಧ್ಯಾಹಾರ ಮಾಡಿಕೊಳ್ಳಬೇಕೆಂದು ಸೂತ್ರಕಾರರೇ 'ವ್ಯತಿಹಾರೋ ವಿಶಿಂಷಂತಿ' ಎಂಬ ಸೂತ್ರದಲ್ಲಿ ಹೇಳುತ್ತಾರೆ.

ಭೂಯಸ್ತ್ವದ ಅನುಕ್ತಿಯು ಪೂರ್ವಪಕ್ಷಕಾರರಿಗೆ ಬಾಧಕ

भावदीपः – अन्यथा प्राणपक्ष एव प्राणस्य विष्णोः सकाशाद् भूयस्त्वोक्तिर्न्यायविवरणोक्ता बाधिका । अध्याहारस्यापि कल्पकाभावेनानवकाशाच्चेति भावः ।। इत्यादिनेति ।। ज्ञापकेनेति शेषः ।

ಹೀಗೆ ಒಪ್ಪದಿದ್ದರೆ ಪ್ರಾಣಪಕ್ಷದಲ್ಲಿಯೇ ಪ್ರಾಣನಿಗೆ ವಿಷ್ಣುವಿಗಿಂತ ಉತ್ತಮತ್ವನ್ನು ಹೇಳಬೇಕಿತ್ತು. ಆದರೆ ಹಾಗೆ ಹೇಳದ ಕಾರಣ ಮುಖ್ಯಪ್ರಾಣನನ್ನು ಭೂಮನೆಂದು ವಿವಕ್ಷಿಸಲು ಸಾಧ್ಯವಿಲ್ಲ. ಹೀಗೆ ನ್ಯಾಯವಿವರಣದಲ್ಲಿ ಹೇಳಲ್ಪಟ್ಟ ಭೂಯಸ್ತ್ವದ ಅನುಕ್ತಿ ಎಂಬ ಲಿಂಗವು ಪೂರ್ವಪಕ್ಷಕಾರರಿಗೂ ಬಾಧಕವಾಗಿದೆ ಎಂದು ತಿಳಿಯಬೇಕು. ಅಧ್ಯಾಹಾರ ಮಾಡಿಕೊಳ್ಳಲು ಯಾವುದೇ ಕಲ್ಪಕಗಳೂ ಇರುವುದಿಲ್ಲ ವೆಂದು ಅಭಿಪ್ರಾಯ. ''ಇತ್ಯಾದಿನಾ'' ಎಂಬಲ್ಲಿ ''ಜ್ಞಾಪಕೇನ'' ಎಂಬುದನ್ನು ಶೇಷಪೂರಣ ಮಾಡಿಕೊಳ್ಳಬೇಕು.

'ಏಷ ತು ವಾ ಅತಿವದತಿ' ಎಂಬುದರ ವ್ಯಾಖ್ಯಾನ

भावदीपः – पूर्वत्र प्राणवादिनोऽतिशयितवस्तुवादित्वमुक्त्वा 'एष तु वा अतिवदति' 'यः सत्येनातिवदति' इति सत्याख्यवस्तुवादिनः प्राणवादिनोऽप्यतिशयितवस्तुवादित्वोक्त्या तु शब्देनाध्याहारो ज्ञाप्यते । सत्यभूम्नोरभेदश्च 'सैव हि' इत्यादावग्रे व्यक्त इति भावः ।

ಮೊದಲು ಯಾರು ಮುಖ್ಯಪ್ರಾಣನ ಬಗ್ಗೆ ತಿಳಿದಿದ್ದಾನೋ ಅವನನ್ನು 'ಅತಿವಾದಿ' ಎನ್ನಬೇಕೆಂದು ಪ್ರಶಂಸಿಸಲಾಗಿದೆ. ಆನಂತರ ''ಏಷ ತು ವಾ ಅತಿವದತಿ ಯಸ್ತ್ಯೇನಾತಿವದತಿ'' ಎಂಬುದಾಗಿ ಯಾರು ಸತ್ಯನನ್ನು ತಿಳಿದಿದ್ದಾನೊ ಅವನು ಮುಖ್ಯಪ್ರಾಣನನ್ನು ತಿಳಿದವನಿಗಿಂತಲೂ ಅತಿಶಯವಾಗಿ ಅತಿವಾದಿಯಾಗಿದ್ದಾನೆಂದು ಇನ್ನು ಹೆಚ್ಚು ಪ್ರಶಂಸಿಸಲಾಗಿದೆ. ಆದ್ದರಿಂದ ''ತು'' ಶಬ್ದದಿಂದ ಮುಖ್ಯಪ್ರಾಣನಿಗಿಂತಲೂ ಯಾರು ಶ್ರೇಷ್ಠರು ಎಂಬುದನ್ನು ಅಧ್ಯಾಹಾರ ಮಾಡಿಕೊಳ್ಳಬೇಕೆಂದು ತಿಳಿಯುತ್ತದೆ. ಸತ್ಯನಿಗೂ ಹಾಗೂ ಭೂಮನಿಗೂ ಅಭೇದವೇ ಇರುತ್ತದೆ ಎಂಬ ವಿಚಾರವನ್ನು ''ಸೈವ ಹಿ ಸತ್ಯಾದಯಃ'' ಎಂಬ ಸೂತ್ರದಲ್ಲಿ ಪ್ರತಿಪಾದಿಸಲಾಗಿದೆ.

ಈ ಅಧಿಕರಣವು ಪುನರುಕ್ತವಲ್ಲ

ಭಾವದೀಪಃ – ಪ್ರಶ್ನಾದೀತಿ ।। ವ್ಯಕ್ತಮೇತತ್ ತೃತೀಯೇ 'ವ್ಯತಿಹಾರೋ ವಿಶಿಂಷನ್ತಿ ಹೀತರವದ್' ಇತ್ಯತ್ರ । ತೇನಾಸ್ಯಾಪೌನರುಕ್ತ್ಯಮಪಿ ಚನ್ದ್ರಿಕಾಯಾಂ ವ್ಯಕ್ತಮ್ । ಭಾಷ್ಯೋಕ್ತೇರಭಿಪ್ರಾಯಂ ವಕ್ತುಮಾಹ – **ನಚೈತದಿತಿ ।।**

''ವ್ಯತಿಹಾರೋ ವಿಶಿಂಷಂತಿ ಹೀತರವದ್'' ಎಂಬ ಮೂರನೇ ಅಧ್ಯಾಯದಲ್ಲಿರುವ ಸೂತ್ರಗಳಲ್ಲಿ ಪ್ರಶ್ನೋತ್ತರಗಳನ್ನು ಹೇಗೆ ಅಧ್ಯಾಹಾರ ಮಾಡಿಕೊಳ್ಳಬೇಕೆಂಬುದನ್ನು ಸ್ಪಷ್ಟವಾಗಿ ಸಮರ್ಥಿಸಲಾಗಿದೆ. ಹಾಗಾದರೆ ವ್ಯತಿಹಾರಾಧಿಕರಣದಲ್ಲಿ ಹೇಳುತ್ತಿರುವ ಪ್ರಮೇಯವನ್ನೇ ಈ ಅಧಿಕರಣದಲ್ಲಿಯೂ ಹೇಳುತ್ತಿರುವುದರಿಂದ ಈ ಅಧಿಕರಣಕ್ಕೆ ಪುನರುಕ್ತಿ ಬರುತ್ತದಲ್ಲವೇ? ಎಂದು ಪ್ರಶ್ನಿಸಬಾರದೆಂದು ಚಂದ್ರಿಕೆಯಲ್ಲಿ ವಿವರವಾಗಿ ಉತ್ತರಿಸಿದ್ದಾರೆ. ಹಾಗಾದರೆ ಯಾವ ವಿವಕ್ಷೆಯಿಂದ ಪ್ರಾಣ ಹಾಗೂ ಭೂಮರಿಗೆ ಅಭೇದವನ್ನು ಅಂಗೀಕರಿಸಿದ್ದಾರೆ? ಎಂಬ ಪ್ರಶ್ನೆಗೆ ''ನ ಚೈತದ್'' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ.

ಅಂತರ್ಯಾಮಿಯಾದ ವಿಷ್ಣುವೇ ಪ್ರಾಣಶಬ್ದ ಪ್ರತಿಪಾದ್ಯ

ಭಾವದೀಪಃ – ಅನ್ತರ್ಯಾಮೀತಿ ।। ಪ್ರಾಣಶಬ್ದಸ್ಯ ವಾಯುಪರತ್ವೇऽಪಿ 'ಆತ್ಮನ ಆಕಾಶಃ ಸಮ್ಭೂತಃ' ಇತ್ಯಾಕಾಶಾದಿಶಬ್ದೈರಿವಾನ್ತರ್ಯಾಮಿವಿವಕ್ಷಯಾ ಭಾಷ್ಯೇ ಪ್ರಾಣಪದೇನ ವಿಷ್ಣೋರುಕ್ತೇರಿತ್ಯರ್ಥಃ । ವಕ್ಷ್ಯತೇ ಚ ಕಾರಣತ್ವೇನೇತ್ಯತ್ರಾಕಾಶಾದಿಶಬ್ದಾನಾಮನ್ಯ ಪರತ್ವೇऽಪಿ ವಿಷ್ಣುಪರತ್ವಮ್ ।। ೮ ।।

''ಅಂತರ್ಯಾಮಿ'' ಎಂದು ಟೀಕೆಯಲ್ಲಿ ಹೇಳಿದ್ದಾರೆ. ಇದರ ಅಭಿಪ್ರಾಯ ಹೀಗೆ - ಪ್ರಾಣಶಬ್ದವು ಮುಖ್ಯಪ್ರಾಣದೇವರನ್ನು ಪ್ರತಿಪಾದಿಸುತ್ತದೆ. ಆದರೂ ಸಹ ''ಆತ್ಮನಃ ಆಕಾಶಃ ಸಂಭೂತಃ'' ಇತ್ಯಾದಿ ವಾಕ್ಯಗಳಲ್ಲಿರುವ ಆಕಾಶಾದಿಶಬ್ದಗಳಿಂದ ಭೂತಾಕಾಶದ ಅಂತರ್ಯಾಮಿಯಾದ ವಿಷ್ಣುವು ಪ್ರತಿಪಾದ್ಯನಾಗಿದ್ದಾನೆಂದು ಹೇಗೆ ಹೇಳುತ್ತೇವೆಯೋ ಅದರಂತೆ ಇಲ್ಲಿಯೂ ಸಹ ಪ್ರಾಣ ಶಬ್ದದಿಂದ ಅಂತರ್ಯಾಮಿಯಾದ ವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆಂದು ತಿಳಿಯಬೇಕು. ಈ ಅಭಿಪ್ರಾಯದಿಂದ ಭಾಷ್ಯದಲ್ಲಿ ಪ್ರಾಣ ಪದದಿಂದ ವಿಷ್ಣುವು ಪ್ರತಿಪಾದ್ಯನಾಗಿದ್ದಾನೆಂದು ಹೇಳಲಾಗಿದೆ. ಈ ವಿಷಯದಲ್ಲಿ

ಹೆಚ್ಚಿನ ವಿಚಾರವನ್ನು "ಕಾರಣತ್ವೇನ ತು ಆಕಾಶಾದಿಷು" ಎಂಬ ಅಧಿಕರಣದಲ್ಲಿ ಆಕಾಶ ಶಬ್ದವು ಅನ್ಯಪರವಾಗಿದ್ದರೂ ವಿಷ್ಣುಪರವಾಗಿದೆ ಎಂದು ಸಮರ್ಥಿಸುತ್ತಾರೆ.

ಬ್ರಹ್ಮಸೂತ್ರ

'ಧರ್ಮೋಪಪತ್ತೇಶ್ಚ' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रभाष्यम् – ।। धर्मोपपत्तेश्च ।। ९ ।।

ಪ್ರಕರಣದಲ್ಲಿ ಸರ್ವಗತತ್ವ, ಸ್ವತಂತ್ರತ್ವ ಮೊದಲಾದ ಧರ್ಮಗಳನ್ನು ಹೇಳಿರುವುದರಿಂದ ವಿಷ್ಣುವೇ ಭೂಮನೆನಿಸುತ್ತಾನೆ.

'ಸ ಏವಾಧಸ್ತಾತ್' ಇತ್ಯಾದಿಯಾಗಿ ಛಾಂದೋಗ್ಯದಲ್ಲಿ ಭೂಮಾಶಬ್ದವಾಚ್ಯನಾದ ವ್ಯಕ್ತಿಯಲ್ಲಿ ಸರ್ವಗತತ್ವವೇ ಮೊದಲಾದ ಧರ್ಮಗಳು ಕೇಳಿಸುತ್ತಿವೆ. ಇವೆಲ್ಲವೂ ವಿಷ್ಣುವಿನಲ್ಲೇ ಉಪಪನ್ನವಾಗುವುದರಿಂದ ವಿಷ್ಣುವೇ ಭೂಮಾ ಎಂಬ ಶಬ್ದದಿಂದ ಪ್ರತಿಪಾದ್ಯನು.

॥ ಶ್ರೀವೇದವ್ಯಾಸದೇವರಿಂದ ರಚಿಸಲ್ಪಟ್ಟ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ
ಭೂಮಾಧಿಕರಣವು ಸಮಾಪ್ತವಾಯಿತು ॥

ಬ್ರಹ್ಮಸೂತ್ರಭಾಷ್ಯ

ಸರ್ವಗತತ್ವ - ಸ್ವಾತಂತ್ರ್ಯ ಮೊದಲಾದ ಲಿಂಗಗಳ ಆಧಾರ

ब्रह्मसूत्रभाष्यम् –।। धर्मोपपत्तेश्च ।। ९ ।।

सर्वगतत्वादिधर्मोपपत्तेश्च ।। ९ ।।

।। इति भूमाधिकरणम् ।। २ ।।

ಅನುವಾದ - ಪ್ರಕರಣದಲ್ಲಿ ಹೇಳಲ್ಪಟ್ಟ ಎಲ್ಲೆಡೆ ವ್ಯಾಪಿಸಿರುವಿಕೆ ಎಂಬ ಧರ್ಮವು ವಿಷ್ಣುವಿನಲ್ಲೇ ಉಪಪನ್ನವಾಗುತ್ತದೆ. ಆದ್ದರಿಂದ ಅವನೇ ಭೂಮಾ ಎಂಬ ಶಬ್ದದಿಂದ ಪ್ರತಿಪಾದ್ಯನು.

ಪ್ರತಿಪದಾರ್ಥ -- ಮತ್ತೊಂದು ಯುಕ್ತಿಯಿಂದ ವಿಷ್ಣುವೇ ಭೂಮಾ ಎಂಬ ಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆನ್ನಲು ಸೂತ್ರವನ್ನು ಪಠಿಸಿ ವ್ಯಾಖ್ಯಾನಿಸುತ್ತಿದ್ದಾರೆ ''ಧರ್ಮ'' ಇತ್ಯಾದಿಯಾಗಿ.

ಸರ್ವಗತತ್ವಾದಿ = ಎಲ್ಲೆಡೆ ವ್ಯಾಪಿಸಿರುವಿಕೆ ಮೊದಲಾದ, ಧರ್ಮ = ಧರ್ಮವು, ಉಪಪತ್ತೇಶ್ಚ = ಯುಕ್ತವಾಗುವುದರಿಂದಲೂ ವಿಷ್ಣುವೇ ಭೂಮನು.

॥ ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ವಿರಚಿತವಾದ ಬ್ರಹ್ಮಸೂತ್ರಭಾಷ್ಯದ ಕನ್ನಡಾನುವಾದದಲ್ಲಿ ಭೂಮಾಧಿಕರಣವು ಸಮಾಪ್ತವಾಯಿತು ॥

ತತ್ತ್ವಪ್ರದೀಪ

ಸರ್ವಗತತ್ವ ಸ್ವಾತಂತ್ರ್ಯಗಳುಳ್ಳವನೇ ಭೂಮಾ

तत्वप्रदीपः – धर्मोपपत्तेश्च ॥ ''स एवाधस्तात् स उपरिष्टात् स पश्चात् स पुरस्तात् स दक्षिणतः स उत्तरतः स एवेदं सर्वं यत्र नान्यत् पश्यति नान्यत् श्रुणोति नान्यद्विजानाति स भूमा'' इत्यादिसर्वगतत्वस्वातन्त्र्यादिधर्माणां तत्रैवोपपत्तेश्च ॥

॥ इति भूमाधिकरणम् ॥

'स एवाधस्तात् स उपरिष्टात् स पश्चात् स पुरस्तात् स दक्षिणतः स उत्तरतः स एवेदं सर्वं' ಆ ಭೂಮಾ ಎನಿಸಿದವನೇ ಕೆಳಗೆ, ಮೇಲೆ, ಹಿಂದೆ, ಮುಂದೆ, ಎಡಗಡೆ, ಬಲಗಡೆ ಎಲ್ಲೆಡೆಯೂ ವ್ಯಾಪಿಸಿರುವನು. ಎಲ್ಲವೂ ಇವನ ಅಧೀನ. ಅವನೇ ಸ್ವತಂತ್ರನು. ಹೀಗೆ ಗುಣಪೂರ್ಣನಾದ ನಾರಾಯಣನ ಲಕ್ಷಣವನ್ನು ಭೂಮಾ ಶಬ್ದವಾಚ್ಯನಾದವನಲ್ಲಿ ಶ್ರುತಿ ಹೇಳುತ್ತಿದೆ.

ಅಷ್ಟೇ ಅಲ್ಲದೇ 'ಯತ್ರ ನಾನ್ಯತ್ಪಶ್ಯತಿ ನಾನ್ಯತ್ ಶ್ರುಣೋತಿ ನಾನ್ಯದ್ವಿಜಾನಾತಿ ಸ ಭೂಮಾ' ಯಾರ ಅಧೀನವೂ ಅಲ್ಲದೇ ಸ್ವತಂತ್ರವಾಗಿ ದರ್ಶನ, ಶ್ರವಣ, ವಿಶೇಷಜ್ಞಾನಗಳಿಗೆ ಗೋಚರಿಸುವುದಿಲ್ಲವೋ, ಅವನೇ 'ಭೂಮಾ' ಎನಿಸಿದ್ದಾನೆಂದೂ ಕೂಡ ಶ್ರುತಿ ಹೇಳುತ್ತಿದೆ. ಇದು ಪರಮಾತ್ಮನ ಅಸಾಧಾರಣಧರ್ಮವೇ ಆಗಿದೆ. ಹೀಗೆ ಸರ್ವಗತತ್ವ, ಸ್ವಾತಂತ್ರ್ಯ ಮೊದಲಾದ ಭಗವಂತನ ಅಸಾಧಾರಣಧರ್ಮಗಳನ್ನು ಅದೇ ಪ್ರಕರಣವು ಹೇಳುತ್ತಿರುವುದರಿಂದ ಭೂಮಾ ಶಬ್ದದಿಂದ ಪ್ರತಿಪಾದ್ಯನಾದವನು ಮುಖ್ಯಪ್ರಾಣನಾಗಲು ಸಾಧ್ಯವಿಲ್ಲ.

ಛಾಂದೋಗ್ಯದ ಏಳನೆಯ ಅಧ್ಯಾಯ ಸಂಪೂರ್ಣ ವಿಷ್ಣುವನ್ನೇ ಹೇಳುತ್ತಿದೆಯೇ?

ವಿಶೇಷವಿಚಾರ- ಛಾಂದೋಗ್ಯೋಪನಿಷತ್ತಿನ ಏಳನೆಯ ಅಧ್ಯಾಯವು ಸನತ್ಕುಮಾರರು ನಾರದರಿಗೆ ಮಾಡಿದ ಉಪದೇಶಾತ್ಮಕವಾಗಿದೆ. ಈ ಸಂಪೂರ್ಣ ಅಧ್ಯಾಯವು ಭೂಮಾ ಎಂಬುವನಿಗೆ ಸರ್ವೋತ್ತಮತ್ವವನ್ನು ಹೇಳುವುದರಲ್ಲಿ ಪರ್ಯವಸಾನವನ್ನು ಹೊಂದುತ್ತದೆ. ಪ್ರಾರಂಭದಲ್ಲಿ ನಾರದರು ನಾನು ಎಲ್ಲವನ್ನೂ ತಿಳಿದಿದ್ದೇನೆ. ಆದರೂ 'ಇದಮಿತ್ಥಂ' ಎಂಬುದಾಗಿ ಶ್ರೇಷ್ಠವಾದ ತತ್ವ ಯಾವುದು ? ಎಂಬುದನ್ನು ತಾವು ತಿಳಿಸಿಕೊಡಿರಿ ಎಂದು ಪ್ರಾರ್ಥಿಸುತ್ತಾರೆ. ಆಗ ಸನತ್ಕುಮಾರರು ನಾರದರನ್ನು ಕುರಿತು ಉಪದೇಶ ಪ್ರಾರಂಭಿಸುತ್ತಾರೆ.

ಶಬ್ದಪ್ರಯೋಗಕ್ಕೆ ಕಾರಣವಾದ ವಾಕ್, ಸಂಕಲ್ಪ, ಮನನ, ಧ್ಯಾನ, ವಿಜ್ಞಾನ ಮೊದಲಾದ ಮನಸ್ಸಿನ ವಿವಿಧ ವ್ಯಾಪಾರಗಳು ಪಂಚಭೂತಗಳೇ ಮೊದಲಾದ ಸಕಲವಸ್ತುಗಳು ಅವುಗಳಿಂದ ನಮಗೆ ದೊರೆಯುತ್ತಿರುವ ಪ್ರಯೋಜನಗಳು. ಇಂಥ ವಿವಿಧ ಕಾರ್ಯಗಳನ್ನು ನಡೆಸಿ, ಲೋಕಾನುಗ್ರಹವನ್ನು ಮಾಡುತ್ತಿರುವ ನಾಮಾಭಿಮಾನಿಯಾದ ಉಷೆಯೇ ಶ್ರೇಷ್ಠ ಎಂದು ಪ್ರಾರಂಭದಲ್ಲಿ ಉಪದೇಶಿಸುತ್ತಾರೆ. ಅನಂತರ ಉಷಾ, ಸ್ವಾಹಾ, ಪರ್ಜನ್ಯ, ಮಿತ್ರ, ಅಗ್ನಿ, ವರುಣ, ಚಂದ್ರ, ಪ್ರವಹ, ಅನಿರುದ್ಧ, ಅಹಂಕಾರಿಕಪ್ರಾಣ, ಪುರಂದರ, ಉಮಾ, ರುದ್ರ, ಭಾರತೀ, ಪ್ರಾಣ. ಇವರುಗಳು ಕ್ರಮವಾಗಿ ಉತ್ತಮರಾಗಿದ್ದಾರೆಂಬ ತಾರತಮ್ಯವನ್ನು ಉಪದೇಶಿಸುತ್ತಾರೆ.

ಆ ಸಂದರ್ಭದಲ್ಲಿ ಮುಖ್ಯಪ್ರಾಣನಿಗಿಂತಲೂ ಕೂಡ ಶ್ರೀಹರಿಯೇ ಸರ್ವೋತ್ತಮನಾಗಿದ್ದಾನೆ ಎಂದು ಪ್ರಕರಣವನ್ನು ಪರ್ಯವಸಾನ ಮಾಡಿದ್ದಾರೆ. ಕೊನೆಯ ಪ್ರಕರಣದಲ್ಲಿ ಶ್ರೀಹರಿಯೆಂಬ ಶಬ್ದವನ್ನು ಸ್ಪಷ್ಟವಾಗಿ ಉಚ್ಚರಿಸದೇ ಭೂಮಾ ಎಂಬ ಶಬ್ದವನ್ನು ಪ್ರಯೋಗಿಸುವ ಮೂಲಕ ಭೂಮನಾದವನಿಗೆ ಸರ್ವೋತ್ತಮತ್ವವನ್ನು ಸನತ್ಕುಮಾರರು ತಿಳಿಸುತ್ತಾರೆ.

ಇಲ್ಲಿ ಬರುವ ಪ್ರಶ್ನೆ ಭೂಮಾ ಎಂದರೆ ಯಾರು ? ಮುಖ್ಯಪ್ರಾಣನೇಕೆ ಆಗಬಾರದು? ಎಂದು. ಆದರೆ ಪ್ರಕರಣವನ್ನು ಕೂಲಂಕಷವಾಗಿ ಆಲೋಚಿಸಿದಾಗ ಭೂಮಾ ಶಬ್ದವನ್ನು ಪ್ರಯೋಗಿಸಿದ ಸಂದರ್ಭದಲ್ಲಿ ವಿಷ್ಣುವಿನ ಅಸಾಧಾರಣ ಧರ್ಮಗಳನ್ನು ಉಪನಿಷತ್ತು ಹೇಳುತ್ತಿದೆ. ಸರ್ವತ್ರವ್ಯಾಪ್ತತ್ವ, ಸರ್ವತಂತ್ರಸ್ವತಂತ್ರತ್ವ, ಮುಕ್ತಾಶ್ರಯತ್ವ ಇತ್ಯಾದಿ ಧರ್ಮಗಳು ವಿಷ್ಣುವಿನಲ್ಲೇ ಇರುತ್ತವೆ ಹೊರತು ಮುಖ್ಯಪ್ರಾಣನಲ್ಲಿ ಇರುವುದಿಲ್ಲ ಆದಕಾರಣ ಭೂಮಾ ಶಬ್ದದಿಂದ ಪ್ರತಿಪಾದ್ಯನಾದವನು ಮುಖ್ಯಪ್ರಾಣನಾಗಲು ಸಾಧ್ಯವಿಲ್ಲ ಎಂಬ ಪ್ರಮೇಯವನ್ನು ಪ್ರತಿಪಾದಿಸುವುದಕ್ಕಾಗಿಯೇ ಈ ಭೂಮಾಧಿಕರಣವು ಹೊರಟಿದೆ. ಆದ್ದರಿಂದ ಏಳನೆಯ ಅಧ್ಯಾಯದ ಪ್ರಾರಂಭದ ಭಾಗವೆಲ್ಲವೂ ತಾರತಮ್ಯವನ್ನು ಹೇಳುತ್ತಿದೆ. ಕೊನೆಯಲ್ಲಿ ಮುಖ್ಯಪ್ರಾಣನು ಎಲ್ಲಾ ದೇವತೆಗಳಿಗಿಂತ ಉತ್ತಮನಾಗಿದ್ದಾನೆಂದೂ ಕೂಡ ಹೇಳುತ್ತಿದೆ. ಕೊನೆಯ ಪ್ರಕರಣ ಮಾತ್ರ ವಿಷ್ಣುವನ್ನು ಪ್ರತಿಪಾದನೆ ಮಾಡುವ ಮೂಲಕ ವಿಷ್ಣುಸರ್ವೋತ್ತಮತ್ವವನ್ನು ತಿಳಿಸುತ್ತಿದೆಯೆಂದು ತಿಳಿಯಬೇಕು. ಸಂಪೂರ್ಣ ಅಧ್ಯಾಯವು ವಿಷ್ಣುವನ್ನೇ ಹೇಳುತ್ತಿದೆ ಎಂಬುದು ಅಭಿಪ್ರಾಯವಲ್ಲ.

'ನಾರಾಯಣಂ' ಎಂಬ ಮಹಾನಾರಾಯಣೋಪನಿಷತ್ತಿನಲ್ಲಿರುವ ನಾರಾಯಣ ಶಬ್ದದಿಂದಲೂ ಭಗವಂತನು ಸುಖಪೂರ್ಣನಾಗಿದ್ದಾನೆಂದು ತಿಳಿಯುತ್ತಿದೆ - ಅದು ಹೀಗೆ - 'ನ ವಿದ್ಯಂತೇ ಅರಾಃ ಏಷಾಂ ತೇ ನಾರಾಃ, ನಾರಾಣಾಂ ಸಮುದಾಯಃ ನಾರಂ' ಎಂಬ ನಿಷ್ಪತ್ತಿಯಂತೆ ಸಂಸಾರದೋಷವಿಲ್ಲದ ಮುಕ್ತರ ಸಮುದಾಯವು ನಾರಾ ಎಂದು ಕರೆಸಿಕೊಳ್ಳುತ್ತದೆ. ಅಂಥ ಮುಕ್ತಸಂಘಕ್ಕೆ ಆಶ್ರಯನಾಗಿರುವುದರಿಂದ ಇವನು ನಾರಾಯಣನಾಗಿದ್ದಾನೆ. ಕೇವಲ ಸುಖವನ್ನೇ ಹೊಂದಿರುವ ಮುಕ್ತರಿಗೆ ಆಶ್ರಯನಾಗಿರುವ ಕಾರಣ ಇವನು ಸುಖಪೂರ್ಣ-ನಾಗಿದ್ದಾನೆಂದು ಈ ಶಬ್ದದಿಂದ ತಿಳಿಯುತ್ತದೆ. ಅಥವಾ 'ನರೀಯಂತೇ ಇತಿ ನಾರಾಃ' ನಾಶವನ್ನು ಹೊಂದದ ಮುಕ್ತರು 'ನಾರಾಃ' ಎಂದು ಕರೆಸಿಕೊಳ್ಳುತ್ತಾರೆ. ಇವರಿಗೆ ಆಶ್ರಯನಾದ ಕಾರಣ ನಾರಾಯಣನಾಗಿದ್ದಾನೆ. ಆದ್ದರಿಂದ ಮುಕ್ತರಿಗಿಂತಲೂ ಇವನು ಶ್ರೇಷ್ಠನಾಗಿದ್ದಾನೆಂದು ತಿಳಿಯುತ್ತದೆ. ಸೂತ್ರದಲ್ಲಿ 'ಸಂಪ್ರಸಾದಾತ್' ಎಂಬ ಪದಕ್ಕೆ ಮುಕ್ತರೆಂದು ಅರ್ಥೈಸಿ ಅವರಿಗಿಂತಲೂ ಅಧ್ಯುಪದೇಶನಾಗಿದ್ದಾನೆ ಎಂದರೆ ವಿಶಿಷ್ಟನಾಗಿದ್ದಾನೆ ಎಂದು ಹೇಳಿದ್ದಾರೆ. ಅದನ್ನೇ ಈ ನಾರಾಯಣ ಶಬ್ದವು ಹೇಳುತ್ತಿದೆ. ಹೀಗೆ ಭಗವಂತನು ಸುಖಪೂರ್ಣನಾದ್ದರಿಂದ 'ಭೂಮಾ' ಎಂಬ ಪದದಿಂದ ಪ್ರತಿಪಾದ್ಯನಾಗುತ್ತಾನೆ ಎಂದು ತಿಳಿಯಬೇಕು.

ಪಾಠಾಂತರದ ಬಗ್ಗೆ

'ಉತ್ಕ್ರಾಂತಪ್ರಾಣಾನ್ ಇತ್ಯಾದಿ ತಲ್ಲಿಂಗಾತ್ ಪ್ರಾಣಶಬ್ದಶ್ಚ' ಎಂಬುದು ಕೆಲವು ಪುಸ್ತಕಗಳಲ್ಲಿ ಪಾಠವಿದೆ. ಆದರೆ ವ್ಯಾಖ್ಯಾನಗಳ ಪ್ರಕಾರ 'ಉತ್ಕ್ರಾಂತಪ್ರಾಣಾನ್ ಇತ್ಯಾದಿ ಲಿಂಗಾತ್ ಪ್ರಾಣಶಬ್ದಶ್ಚ' ಎಂಬ ಪಾಠವನ್ನು ವಿವಕ್ಷಿಸಬೇಕು.

ಕೆಲವು ಪುಸ್ತಕಗಳಲ್ಲಿ 'ವಿಶ್ವತಃ ಪರಮಂ ನಿತ್ಯಂ' ಎಂಬ ಪಾಠವಿದೆ. ಆದರೆ ಪಂಡಿತಾಚಾರ್ಯರು ಪರಮಾಂ ನಿತ್ಯಂ' ಎಂಬ ಪಾಠವನ್ನು ಸ್ವೀಕರಿಸಿ ವ್ಯಾಖ್ಯಾನ ಮಾಡಿರುವುದರಿಂದ, ಈ ಪಾಠವನ್ನೇ ಪರಿಗಣಿಸಬೇಕು.

॥ ಇಲ್ಲಿಗೆ ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ ತತ್ವಪ್ರದೀಪದಲ್ಲಿ ಭೂಮಾಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ॥

ತತ್ವಪ್ರಕಾಶಿಕಾ

ವಿಷ್ಣುವೇ ಭೂಮನೆನ್ನಲು ಮತ್ತೊಂದು ಯುಕ್ತಿ

तत्वप्रकाशिका – युक्त्यन्तरेण विष्णोर्भूमत्वप्रतिपादकं सूत्रमुपन्यस्य व्याचष्टे – धर्मेति ॥

ಮತ್ತೊಂದು ಯುಕ್ತಿಯಿಂದ ವಿಷ್ಣುವೇ ಭೂಮನಾಗಿದ್ದಾನೆಂಬುದನ್ನು ಪ್ರತಿಪಾದಿಸುವುದಕ್ಕಾಗಿ ಸೂತ್ರವನ್ನು ಪಠಿಸಿ ವ್ಯಾಖ್ಯಾನಿಸುತ್ತಿದ್ದಾರೆ ''ಧರ್ಮ'' ಇತ್ಯಾದಿ ವಾಕ್ಯದಿಂದ.

ವಿಷಯವಾಕ್ಯದಲ್ಲಿರುವ ವಿಷ್ಣುವಿನ ಅಸಾಧಾರಣ ಧರ್ಮಗಳು

तत्वप्रकाशिका – 'स एवाधस्तात् स उपरिष्टात् स पश्चात् स पुरस्तात् स दक्षिणतः स उत्तरतः । स एवेदं सर्वम् । यत्र नान्यत् पश्यति नान्यत् शृणोति नान्यत् विजानाति स भूमा, स भगवः कस्मिन् प्रतिष्ठितः, स्वे महिम्नि' इत्यादिना भूम्नि सर्वगतत्वादिधर्मश्रवणाच्चासौ विष्णुरेव । तेषां विष्णावेवोपपत्तेरित्यर्थः । अतो विष्णुरेव भूमेति तस्यैवानन्दमयत्वमिति सिद्धम् ॥ ९ ॥

॥ इति श्रीमज्जयतीर्थभिक्षुविरचितायां तत्वप्रकाशिकायाम् भूमाधिकरणम् ॥

''ಸ ಏವಾಧಸ್ತಾತ್ ಸ ಉಪರಿಷ್ಟಾತ್ ಸ ಪಶ್ಚಾತ್ ಸ ಪುರಸ್ತಾತ್ ಸ ದಕ್ಷಿಣತಃ ಸ ಉತ್ತರತಃ । ಸ ಏವೇದಂ ಸರ್ವಮ್ । ಯತ್ರ ನಾನ್ಯತ್ ಪಶ್ಯತಿ ನಾನ್ಯತ್ ಶೃಣೋತಿ ನಾನ್ಯದ್ ವಿಜಾನಾತಿ ಸ ಭೂಮಾ ಸ ಭಗವಃ ಕಸ್ಮಿನ್ ಪ್ರತಿಷ್ಠಿತಃ ಸ್ವೇ ಮಹಿಮ್ನಿ''

''ಅವನು ಕೆಳಗೆ ಮೇಲೆ ಹಿಂದೆ ಮುಂದೆ ಎಡ ಬಲ ಹೀಗೆ ಎಲ್ಲೆಡೆಯಲ್ಲಿಯೂ ವ್ಯಾಪ್ತನಾಗಿದ್ದಾನೆ. ಸಕಲ ವಿಶ್ವವೂ ಅವನ ಅಧೀನವಾಗಿದೆ. ಅವನ ಅಧೀನವಿಲ್ಲದ ಯಾವುದೇ ವಸ್ತುವನ್ನು ನೋಡಲು ಸಾಧ್ಯವಿಲ್ಲ. ಕೇಳಲು ತಿಳಿಯಲೂ ಸಹ ಸಾಧ್ಯವಿಲ್ಲ. ಅವನೇ ಭೂಮನು. ಅಂತಹ ಭೂಮನು ಎಲ್ಲಿ ಇರುತ್ತಾನೆ'' ಎಂಬ ನಾರದರ ಪ್ರಶ್ನೆಗೆ ಸನತ್ಕುಮಾರರು ಉತ್ತರಿಸುತ್ತಾರೆ. ''ಅವನು ತನ್ನಲ್ಲಿಯೇ ಇರುತ್ತಾನೆ''. ಹೀಗೆ ಭೂಮನಲ್ಲಿ ಸರ್ವಗತತ್ವ, ಸ್ವೇ ಮಹಿಮ್ನಿಪ್ರತಿಷ್ಠಿತತ್ವ ಮೊದಲಾದ ಧರ್ಮಗಳು ಕೇಳಿಸುತ್ತಿವೆ. ಇವೆಲ್ಲವೂ ಸಹ ವಿಷ್ಣುವಿನ ಅಸಾಧಾರಣವಾದ ಧರ್ಮವಾಗಿರುವುದರಿಂದ ವಿಷ್ಣುವೇ ಭೂಮನಾಗುತ್ತಾನೆ. ಆದ್ದರಿಂದ ಅವನೇ ಆನಂದಮಯನೂ ಆಗುತ್ತಾನೆಂಬುದು ಸಿದ್ಧವಾಯಿತು.

॥ ಇಲ್ಲಿಗೆ ಶ್ರೀಮಜ್ಜಯತೀರ್ಥಮುನಿಗಳಿಂದ ವಿರಚಿತವಾದ ತತ್ತ್ವಪ್ರಕಾಶಿಕಾಟೀಕೆಯಲ್ಲಿ
ಭೂಮಾಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ॥

॥ ಶ್ರೀಕೃಷ್ಣಾರ್ಪಣಮಸ್ತು ॥

ಭಾವದೀಪ

ಸರ್ವಗಗತ್ವಾದಿ ಎಂಬಲ್ಲಿರುವ ಆದಿಪದ ವ್ಯಾಖ್ಯಾನ

ಭಾವದೀಪಃ – ಧರ್ಮೋಪಪತ್ತೇಶ್ಚ ।। ಭಾಷ್ಯಸ್ಥಾದಿಪದೋಕ್ತಲಿಙ್ಗದ್ಯೋತನಾಯ ಯತ್ರ ನಾನ್ಯದಿತ್ಯಾದಿಶೇಷೋಕ್ತಿಃ । ಯತ್ರ ಯಸ್ಮಿನ್ ದೃಷ್ಟೇ ಶ್ರುತೇ ವಿಜ್ಞಾತೇ ಸತೀತ್ಯರ್ಥಃ ।

ಭಾಷ್ಯದಲ್ಲಿರುವ ''ಸರ್ವಗತ್ವಾದಿ'' ಎಂಬಲ್ಲಿರುವ ''ಆದಿ'' ಪದದಿಂದ ಹೇಳಲ್ಪಟ್ಟ ಲಿಂಗವನ್ನು ''ಯತ್ರ ನಾನ್ಯತ್ಪಶ್ಯತಿ'' ಇತ್ಯಾದಿಯಾಗಿ ಉಲ್ಲೇಖಿಸುವ ಮೂಲಕ ವ್ಯಾಖ್ಯಾನಿಸಿದ್ದಾರೆ. ''ಯತ್ರ'' ಎಂದರೆ ಯಾರನ್ನು ನೋಡುವುದು, ಕೇಳುವುದು ಮತ್ತು ವಿಶೇಷಜ್ಞಾನ ಪಡೆಯುತ್ತಿರಲು ಎಂದರ್ಥ.

ಸೂತ್ರದಲ್ಲಿರುವ ಉಪಪತ್ತಿ ಪದದ ವ್ಯಾಖ್ಯಾನ

भावदीपः – उपपत्तिशब्दः सूत्रे लिङ्गानां निरवकाशत्वोक्तिपर इति भावेन धर्मश्रवणाच्च विष्णावेवोपपत्तेरिति विच्छिद्य व्याख्यातम् – अत इति ।। पूर्णसुखत्वादिहेतूनां भावात् ।

ಸೂತ್ರದಲ್ಲಿರುವ ''ಉಪಪತ್ತಿ'' ಶಬ್ದವು ಲಿಂಗಗಳ ನಿರವಕಾಶತ್ವವನ್ನು ನಿರೂಪಣೆ ಮಾಡುತ್ತದೆ. ಈ ಅಭಿಪ್ರಾಯದಿಂದಲೇ ಸರ್ವಗತತ್ವವೇ ಮೊದಲಾದ ಧರ್ಮಗಳು ವಿಷ್ಣುವಿನಲ್ಲಿಯೇ ಉಪಪನ್ನವಾಗುತ್ತದೆ ಎಂಬುದನ್ನು ''ಅತೋ ವಿಷ್ಣೋರೇವ'' ಇತ್ಯಾದಿಯಾಗಿ ವ್ಯಾಖ್ಯಾನ ಮಾಡಿದ್ದಾರೆ. ಪೂರ್ಣಸುಖವೇ ಮೊದಲಾದ ಹೇತುಗಳು ಇರುವುದರಿಂದ ಎಂದರ್ಥ.

ಸಕಲ ಸೂತ್ರಗಳ ಸಾರವೇನು ?

भावदीपः – भाष्यदिशा प्राणपदेनान्तर्याम्युक्त्या प्राणभूम्नोरेकत्वेन वा न्यायविवरणरीत्या प्राणभूम्नोर्भेदेन प्राणस्य वायुमात्रत्वेन वा भूमा विष्णुरेवेति सर्वसूत्रार्थः ।

'ಉತ್ಕ್ರಮಣ' ಎಂಬ ಲಿಂಗವು ಭಗವಂತನ ರೂಪವಿಶೇಷದಿಂದ ಉಪಪನ್ನವಾಗುತ್ತದೆ. ''ಅನುಕೃ'' ಎಂಬ ಲಿಂಗವೂ ಸಹ ಅಧ್ಯಾಹಾರದಿಂದ ಉಪಪನ್ನವಾಗುತ್ತದೆ. ಮತ್ತು ''ರೂಪವಿಶೇಷ'' ''ವಿವಕ್ಷಾದ್ಯಾಹಾರಗಳೆಂಬ ಉಪಪತ್ತಿಗಳಿಂದ ಮತ್ತು ಬಾಧಕಗಳು ಇಲ್ಲದಿರುವುದರಿಂದ ಭೂಮಾ ಶಬ್ದದಿಂದ ಪರಮಾತ್ಮನೇ ಪ್ರತಿಪಾದ್ಯನಾಗುತ್ತಾನೆ. ಮತ್ತು ಭಾಷ್ಯದ ಪ್ರಕಾರ ಪ್ರಾಣಪದದಿಂದ ಅಂತರ್ಯಾಮಿಯನ್ನು ವಿವಕ್ಷೆ ಮಾಡಿದರೆ 'ಪ್ರಾಣ' ಮತ್ತು 'ಭೂಮಾ' ಇಬ್ಬರು ಒಬ್ಬನೇ ಆಗುತ್ತಾನೆ. ಅಥವಾ ನ್ಯಾಯವಿವರಣ ಪ್ರಕಾರವಾಗಿ ಪ್ರಾಣ ಮತ್ತು ಭೂಮಾ ಇಬ್ಬರು ಭಿನ್ನರು ಎಂದು ಒಪ್ಪುವುದಾದರೆ ಪ್ರಾಣ ಶಬ್ದದಿಂದ ವಾಯುದೇವರೇ ಪ್ರತಿಪಾದ್ಯರಾಗಿ ಭೂಮಾ ಶಬ್ದದಿಂದ ಮುಖ್ಯವಾಗಿ ವಿಷ್ಣುವೇ ಪ್ರತಿಪಾದ್ಯನಾಗುತ್ತಾನೆ ಎಂದು ನಿರ್ಣಯವಾಗುತ್ತದೆ. ಈ ಪ್ರಮೇಯವೇ ಸಕಲ ಸೂತ್ರಗಳ ಸಾರ.

ಭೂಮನಾದ ಮಹಾವಿಷ್ಣುವೇ ಆನದಂದಮಯ

भावदीपः – तमेव हेतूकृत्य 'यो वै भूमा तत्सुखम्' इत्युक्तेरिति पूर्वाक्षेपकभाष्यार्थमुपसंहरति – इति तस्यैवानन्दमयत्वमिति ।। 'तत् सुखम्' इत्युक्तपूर्णसुखत्वद्वारेत्यर्थः ।। ९ ।।

।। इति राघवेन्द्रयतिकृते भावदीपे भूमाधिकरणम् ।।

ಹಿಂದೆ ಹೇಳಿದ ಹೇತುಗಳ ಆಧಾರದಿಂದ ''ಯೋ ವೈ ಭೂಮಾ ತತ್ಸುಖಂ'' ಎಂಬ ಶ್ರುತಿಯ ಅನುಸಾರವಾಗಿ ಹಿಂದೆ ಭಾಷ್ಯದಲ್ಲಿ ಹೇಳಿದ ಆಕ್ಷೇಪವನ್ನು ''ಇತಿ ತಸ್ಯೈವ ಆನಂದಮಯತ್ವಂ'' ಎಂಬ ಟೀಕಾ ವಾಕ್ಯಗಳಿಂದ ಉಪಸಂಹಾರ ಮಾಡಿದ್ದಾರೆ. ''ತತ್ಸುಖಂ'' ಎಂದರೆ ಪೂರ್ಣಸುಖ ಮುಖ್ಯಾಂತರ ಎಂದರ್ಥ.

ವಿಶೇಷವಿಚಾರ - 'ವ್ಯತಿಹಾರೋ ವಿಶಿಂಷಂತಿ' ಎಂಬ ಸೂತ್ರದಲ್ಲಿಯೂ ಮುಂದೆ ಇದೇ ವಿಷಯವನ್ನು ಪ್ರತಿಪಾದಿಸುವರಿದ್ದಾರೆ. ಆದ್ದರಿಂದ ಪ್ರಶ್ನಪ್ರತಿವಚನಗಳನ್ನು ಉಪನಿಷತ್ತಿನಲ್ಲಿ ಅನುಸಂಧಾನ ಮಾಡಿಕೊಂಡು ವಿಷ್ಣುವೇ ಭೂಮನಾಗಿದ್ದಾನೆಂದು ಸಮರ್ಥಿಸುವುದು ಯುಕ್ತವಲ್ಲವೆಂದು ಹೇಳಬಾರದು. ಹಾಗೂ 'ವ್ಯತಿಹಾರೋ ವಿಶಿಂಷಂತಿ' ಎಂಬ ಸೂತ್ರದಲ್ಲಿ ಅಧ್ಯಾಹಾರ ಮಾಡಿಕೊಳ್ಳಬೇಕೆಂಬುದನ್ನು ಹೇಳಿದ್ದು ಸತ್ಯ. ಆದರೆ ಅದನ್ನೇ ಇಲ್ಲಿ ಆಕ್ಷೇಪ ಮಾಡುತ್ತಿರುವುದರಿಂದ ಪುನುರುಕ್ತಿಗೆ ಅವಕಾಶವಿಲ್ಲವೆಂದು ತಿಳಿಯಬೇಕು.

ನ್ಯಾಯವಿವರಣಹಾಗೂ ಛಾಂದೋಗ್ಯ ಭಾಷ್ಯಗಳಲ್ಲಿ ಪ್ರಾಣಶಬ್ದಕ್ಕೆ ಮುಖ್ಯಪ್ರಾಣನೆಂದೇ ವ್ಯಾಖ್ಯಾನಿಸಿದ್ದಾರೆ. ಹಾಗಾದರೆ ಶ್ರುತಿಯಲ್ಲಿ ವಿಷ್ಣುವನ್ನು ಉಲ್ಲೇಖಿಸಿದಂತೆ ಆಗಲಿಲ್ಲವೆ? ಎಂದು ಪ್ರಶ್ನಿಸಬಾರದು. ಮುಖ್ಯಪ್ರಾಣದೇವರ ಅನಂತರ ಸತ್ಯವು ಪ್ರಸ್ತುತವಾಗಿದೆ. ಅಂತಹ ಸತ್ಯಶಬ್ದದಿಂದ ವಿಷ್ಣುವೇ ಪ್ರತಿಪಾದ್ಯನೆಂದು ತಿಳಿಯಬೇಕು. ಆದ್ದರಿಂದಲೇ 'ಏವಂ ವಿಜಾನನ್ ಅತಿವಾದಿ' ಎಂದು ಮುಖ್ಯಪ್ರಾಣದೇವರನ್ನು ಯಾರು ತಿಳಿಯುತ್ತಾರೋ, ಅವನನ್ನು 'ಅತಿವಾದಿ' ಅಂದರೆ ಅಧಿಕಜ್ಞಾನಿಯೆಂದು ಶ್ರುತಿಯು ಪ್ರಶಂಸಿಸಿದೆ. ಅನಂತರ 'ಏಷ ತು ವಾ ಅತಿವದತಿ ಯಃ ಸತ್ಯೇನಾತಿವದತಿ' ಎಂಬುದಾಗಿ ಯಾರು ಸತ್ಯಸ್ವರೂಪನಾದ ಬ್ರಹ್ಮನನ್ನು ತಿಳಿಯುತ್ತಾರೋ ಅವನು ಅತ್ಯಧಿಕವಾದ ಜ್ಞಾನಿ ಎಂಬುದಾಗಿ 'ತು' ಶಬ್ದವು ಅತಿಶಯವನ್ನು ತಿಳಿಸುತ್ತಿದೆ. ಆದ್ದರಿಂದ ಸತ್ಯಶಬ್ದದಿಂದ ಪರಬ್ರಹ್ಮನೇ ಪ್ರತಿಪಾದ್ಯನೆಂದು ಸಿದ್ಧವಾಗುತ್ತದೆ. ಆದ್ದರಿಂದ ಶ್ರುತಿಯಲ್ಲಿ ವಿಷ್ಣುವಿನ ಉಲ್ಲೇಖವಿದೆ ಎಂದು ಸಿದ್ಧವಾಗುತ್ತದೆ.

॥ ಇಲ್ಲಿಗೆ ಶ್ರೀಮದ್‌ರಾಘವೇಂದ್ರತೀರ್ಥರಿಂದ ವಿರಚಿತವಾದ ಭಾವದೀಪದಲ್ಲಿ
ಭೂಮಾಧಿಕರಣದ ಕನ್ನಡ ಅನುವಾದವು ಮುಗಿಯಿತು ॥

॥ ಶ್ರೀ ಮಧ್ವೇಶಾರ್ಪಣಮಸ್ತು ॥

ತಂತ್ರದೀಪಿಕೆಯಲ್ಲಿ ಭೂಮಾಧಿಕರಣದ ಸೂತ್ರಗಳು

।। श्रीजानकीवदनाम्भोजराजहंसाय रामचन्द्राय नमः ।।

।। श्री गुरुभ्यो नमः ।।

श्री राघवेन्द्रतीर्थविरचिता

तन्त्रदीपिका

भूमाधिकरणम् (१।३।२)

ಛಾಂದೋಗ್ಯದಲ್ಲಿ ಭೂಮಾ ಎಂದರೆ ಮಹಾವಿಷ್ಣು

।। भूमा सम्प्रसादादध्युपदेशात् ।। १-३-८ ।।

अत्र तादृश भूमनाम समन्वीयते । ''यो वृ भूमा तत्सुखम्'' इत्युक्तो भूमा ततु ब्रह्मैव । नतु प्राणः ।

ಈ ಅಧಿಕರಣದಲ್ಲಿ ಉಭಯತ್ರಪ್ರಸಿದ್ಧವಾದ 'ಭೂಮಾ' ಎಂಬ ನಾಮಾತ್ಮಕಶಬ್ದದ ಸಮನ್ವಯವನ್ನು ವಿಷ್ಣುವಿನಲ್ಲಿ ಮಾಡುತ್ತಿದ್ದಾರೆ. 'ಯೋ ವೈ ಭೂಮಾ ತತ್ಸುಖಮ್' ಎಂಬುದಾಗಿ ಛಾಂದೋಗ್ಯದಲ್ಲಿ ಹೇಳಲ್ಪಟ್ಟ ಭೂಮನು ವಿಷ್ಣುವೇ ಆಗಿದ್ದಾನೆ ಹೊರತು ಮುಖ್ಯಪ್ರಾಣನಲ್ಲ.

ಭೂಮಾ ಸಂಪ್ರಸಾದಾತ್ ಎಂಬ ಸೂತ್ರದ ಪ್ರತಿಪದಾರ್ಥ

कुतः? सम्प्रसादात् सम्यक् प्रसीदत्यनेनेति सम्प्रसादः पूर्णसुखम् । ''तत्सुखम्'' इति पूर्णसुखत्वाभिधानात् । अध्युपदेशात्, अधि आधिकत्वेन नामादीनां सर्वेषामुपरि तदुत्तमत्वेन व्यपदेशाच्चेत्यग्रेतन-श्चकारोऽत्रानुकृष्यते ।

ಸೂತ್ರಾರ್ಥ - ಏಕೆಂದರೆ 'ಸಂಪ್ರಸಾದಾತ್' 'ಚೆನ್ನಾಗಿ ಯಾವುದರಿಂದ ಪ್ರಸನ್ನನಾಗುತ್ತಾನೋ ಅದು 'ಸಂಪ್ರಸಾದ' ಎನಿಸುತ್ತದೆ. ಪೂರ್ಣಸುಖವೆಂದರ್ಥ. 'ತತ್ಸುಖಮ್' ಎಂಬಲ್ಲಿ ಪೂರ್ಣಸುಖವನ್ನು ಹೇಳಿರುವುದರಿಂದ. ಅಧ್ಯುಪದೇಶಾತ್ = ಅಧಿ ಅಧಿಕವೆಂದು, ನಾಮಾಭಿಮಾನಿ ಮೊದಲಾದವರಿಗಿಂತ ಉತ್ತಮನೆಂದು ಉಪದೇಶಿಸಿರುವುದರಿಂದಲೂ ಭೂಮಾ = ವಿಷ್ಣುವೇ ಭೂಮನಾಗಿದ್ದಾನೆ. ಮುಂದಿನ ಸೂತ್ರದಲ್ಲಿರುವ ಚಶಬ್ದವನ್ನು ಇಲ್ಲಿ ಅನ್ವಯ ಮಾಡಬೇಕು.

ಭೂಮಾ ಎಂಬುದು ಪುಲ್ಲಿಂಗ ಶಬ್ದ

अत्र भूमेति पुंनिर्देशः प्राग्वत् । सम्बन्धभूमेत्यस्य भावार्थत्वेऽपीह भावभवित्रोरभेदात्पूर्णरूपभवित्रर्थत्वं बोध्यम् ।

ಇಲ್ಲಿ 'ಭೂಮಾ' ಎಂಬುದು ಪುಲ್ಲಿಂಗಶಬ್ದವಾಗಿದೆ. ವಾಸ್ತವಿಕವಾಗಿ 'ಭೂಮಾ' ಎಂಬ ಶಬ್ದವು 'ಸಂಬಂಧಭೂಮಾ' ಎಂಬ ಸೂತ್ರದಲ್ಲಿ ಹೇಳಿದಂತೆ ಧರ್ಮಾರ್ಥಕವೇ ಆಗಿದೆ. ಆದರೂ ಸಹ ಧರ್ಮ, ಹಾಗೂ ಧರ್ಮಿಗಳಿಗೆ ಅಭೇದವಿರುವ ಪ್ರಯುಕ್ತ ಪ್ರಕೃತ ಪೂರ್ಣ ಎಂಬ ಧರ್ಮ್ಯರ್ಥವನ್ನೇ ವಿವಕ್ಷಿಸಬೇಕೆಂದು ತಿಳಿಯಬೇಕು.

ಪೂರ್ಣಸುಖತ್ವಾತ್ ಎಂದೇಕೆ ಸೂತ್ರದಲ್ಲಿ ಹೇಳಲಿಲ್ಲ ?

पूर्णसुखत्वादिति वाच्ये सम्प्रसादादिति यौगिकोक्तिरीशस्य सुखित्वे दुःखित्वं स्यादिति न शङ्क्यम् । पूर्णसुखकार्येण प्रसादेन दुःखाभावनिश्चयादिति सूचयितुम् ।

ಸೂತ್ರದಲ್ಲಿ 'ಸಂಪ್ರಸಾದಾತ್' ಎಂದು ಹೇಳುವ ಬದಲು 'ಪೂರ್ಣಸುಖತ್ವಾತ್' ಎಂದೇ ಹೇಳಬಹುದಿತ್ತು. ಆದರೆ 'ಸಂಪ್ರಸಾದಾತ್' ಎಂಬ ಯೌಗಿಕಶಬ್ದಪ್ರಯೋಗದಿಂದ ಪೂರ್ಣಸುಖದ ಕಾರ್ಯವೆನಿಸಿದ ಪ್ರಸನ್ನತೆಯನ್ನು ಇದರಿಂದ ತಿಳಿಸಿದ್ದಾರೆ. ಸುಖವುಳ್ಳವನಾದರೆ ದುಃಖವೂ ಸಹ ಬರಬೇಕಲ್ಲವೇ? ಎಂಬ ಶಂಕೆಯನ್ನು ಇದರಿಂದ ಪರಿಹರಿಸಿದಂತಾಯಿತು. ಪೂರ್ಣಸುಖದ ಕಾರ್ಯವೆನಿಸಿದ ಪ್ರಸಾದದಿಂದ ವಿಷ್ಣುವಿಗೆ ದುಃಖವೇ ಇರುವುದಿಲ್ಲವೆಂದು ನಿಶ್ಚಯವಾಗಿದೆ.

ಭೂಮಾಧಿಕರಣದ ಎರಡನೆಯ ಸೂತ್ರ

ಇತಶ್ಚೈವಮಿತ್ಯಾಹ -

।। धर्मोपपत्तेश्च ।।

ಮತ್ತೊಂದು ಕಾರಣದಿಂದಲೂ ಭೂಮನು ವಿಷ್ಣುವೇ ಆಗಿದ್ದಾನೆಂದು ಸಮರ್ಥಿಸುತ್ತಿದ್ದಾರೆ. ಧರ್ಮೋಪಪತ್ತೇಶ್ಚ.

'ಧರ್ಮೋಪಪತ್ತೇಶ್ಚ' ಎಂಬ ಸೂತ್ರದ ಪ್ರತಿಪದಾರ್ಥ

''स एवाधस्तत् स उपरिष्टात्'' इत्युक्तसर्वगतत्वादिधर्माणामुपपत्तेश्च भूमा ब्रह्मैवेत्यर्थः ।

ಸೂತ್ರಾರ್ಥ ಹೀಗಿದೆ - 'स एवाधस्तात् स एव उपरिष्टात्' ಎಂಬ ಛಾಂದೋಗ್ಯದಲ್ಲಿ ಹೇಳಲ್ಪಟ್ಟ ಸರ್ವಗತತ್ವವೇ ಮೊದಲಾದ ಧರ್ಮಗಳು, ಉಪಪತ್ತೇಶ್ಚ = ಉಪಪನ್ನವಾಗುವುದರಿಂದಲೂ ಭೂಮಾ = ಬ್ರಹ್ಮನೇ ಭೂಮನಾಗಿದ್ದಾನೆ.

ಸೂತ್ರದಲ್ಲೇಕೆ ಭೂಮಾ ಶಬ್ದವನ್ನು ಪ್ರಯೋಗಿಸಿದ್ದಾರೆ ?

श्रुतौ सत्यस्यादित्वेऽपि सत्यादेः प्रणाड्या भूमा यत्तत्वोक्तेः सर्वस्य ब्रह्मताप्तये भूम्न उक्तिरित्येके । सम्प्रसादादिहेतुयुतत्वाच्च । सैव हीत्यतो गतत्वं चान्यतोऽवसेयम् ।। २ ।।

ಶ್ರುತಿಯಲ್ಲಿ ಸತ್ಯನನ್ನೇ ಮೊದಲು ಹೇಳಿರುವುದರಿಂದ ಅವನಿಗೆ ಬ್ರಹ್ಮತ್ವವನ್ನು ಸಾಧಿಸಬೇಕಿತ್ತು. ಆದರೂ ಸಹ ಸತ್ಯ ಮೊದಲಾದವುಗಳಿಗೆ ಕ್ರಮವಾಗಿ ಭೂಮಾಧೀನತ್ವವು ಹೇಳಲ್ಪಟ್ಟಿದೆ. ಆದ್ದರಿಂದ ಸತ್ಯ ಮೊದಲಾದ ಎಲ್ಲ ಪದಾರ್ಥಗಳೂ ಬ್ರಹ್ಮವೇ ಆಗಿದೆ ಎಂದು ಸಾಧಿಸುವುದಕ್ಕಾಗಿ ಭೂಮಶಬ್ದವನ್ನೇ ಸೂತ್ರದಲ್ಲಿ ಗ್ರಹಣ ಮಾಡಿದ್ದಾರೆ. ಇದು ಕೆಲವರ ಉತ್ತರ. 'ಸಂಪ್ರಸಾದ' ಮೊದಲಾದ ಬ್ರಹ್ಮನ ಲಿಂಗಗಳು ಕೇಳಿಸುತ್ತಿರುವುದರಿಂದಲೂ ಬ್ರಹ್ಮನೇ ಭೂಮನಾಗಿದ್ದಾನೆ. 'सैव हि सत्यादयः' ಎಂಬ ಸೂತ್ರದಿಂದ ಈ ಅಧಿಕರಣಕ್ಕೆ ಗತಾರ್ಥತ್ವದೋಷವು ಬರುವುದಿಲ್ಲವೆಂದು ಬೇರೆ ಗ್ರಂಥದಿಂದ ತಿಳಿಯಬೇಕು.

।। ಇಲ್ಲಿಗೆ ತಂತ್ರದೀಪಿಕಾ ಕನ್ನಡಾನುವಾದದಲ್ಲಿ ಭೂಮಾಧಿಕರಣವು ಮುಗಿಯಿತು ।।

ಅದ್ವೈತ-ವಿಶಿಷ್ಟಾದ್ವೈತಮತದಲ್ಲಿ ಭೂಮಾಧಿಕರಣ
ಮತ್ತು
ವಿಮರ್ಶೆ

ಶಾಂಕರ ಭಾಷ್ಯದಲ್ಲಿ ಸೂತ್ರವನ್ನು ಹೀಗೆ ವ್ಯಾಖ್ಯಾನಿಸಿದ್ದಾರೆ - ಜಡರೂಪವಾದ ಪ್ರಾಣಾಪಾನಾದಿ ಪಂಚವೃತ್ತಿಯನ್ನೂ ತಾಳಿದ ವಾಯುವೇ ಭೂಮವೆನಿಸಿದೆ ಎಂದು ಪೂರ್ವಪಕ್ಷ. ನಿರ್ವಿಶೇಷಬ್ರಹ್ಮನೇ ಭೂಮನಾಗಿದ್ದಾನೆಂದು ಸಿದ್ಧಾಂತ.

ಇದು ತಪ್ಪು. ಜಡವಾದ ವಾಯು ಭೂಮವೆನಿಸಿದರೆ 'ತರತಿ ಶೋಕಮಾತ್ಮವಿತ್', ಹಾಗೂ ಆತ್ಮಶಬ್ದ ಎಂದು ಉಪಕ್ರಮದಲ್ಲಿ ಶ್ರುತವಾದ 'ಭೂಮ್ಯೈವ ಸುಖಮ್' ಎಂಬಲ್ಲಿ ಶ್ರುತವಾದ ಸುಖತ್ವವು ಜಡವಾದ್ದರಲ್ಲಿ ಕೂಡುವುದಿಲ್ಲವಾದ್ದರಿಂದ ತಪ್ಪಾಗುತ್ತದೆ. ಆದ್ದರಿಂದ ಪೂರ್ವಪಕ್ಷ ಹುಟ್ಟಲು ಸಾಧ್ಯವೇ ಇಲ್ಲ.

ಮತ್ತು ಪ್ರಾಣಶಬ್ದವು 'ತೇ ಹ ಪ್ರಾಣಾ ಅಹಂ ಶ್ರೇಯಸಿ ವ್ಯೂದಿರೇ। ಅಹಂ ಶ್ರೇಯಾನಸ್ಮ್ಯಂ ಶ್ರೇಯಾನಾಸ್ಮೀತಿ । ತಾನ್ವರಿಷ್ಠಃ ಪ್ರಾಣ ಉವಾಚ' ಇತ್ಯಾದಿ ಪ್ರಕರಣದಲ್ಲಿ ಪ್ರಸಕ್ತವಾದ ಪ್ರಾಣಶಬ್ದವು ಅಭಿಮಾನಿದೇವತೆಯಲ್ಲಿಯೇ ಪ್ರಸಿದ್ಧವಾಗಿದೆ.

ಸಿದ್ಧಾಂತವೂ ಸಹ ತಪ್ಪು. ಹಿಂದೆ ಹೇಳಿದ ಪ್ರಕಾರ ಉಪಕ್ರಮಕ್ಕೆ ಅನುಗುಣವಾಗಿರುವ ಗುಣಜ್ಯೇಷ್ಠತ್ವರೂಪವಾದ ಉತ್ತಮತ್ವವನ್ನು ಭೂಮಶಬ್ದವು ಪ್ರತಿಪಾದಿಸುತ್ತಿದೆ. ಇದು ನಿರ್ಗುಣನಲ್ಲಿ ಯುಕ್ತವಾಗುವುದಿಲ್ಲ.

ಕಲ್ಪಿತವಾದ ಉತ್ತಮತ್ವವನ್ನು ನಿರ್ಗುಣಬ್ರಹ್ಮನಲ್ಲಿ ಹೇಳಬೇಕು. ಆದರೆ 'ಭೂಮಾ ತ್ವೇವ ವಿಜಿಜ್ಞಾಸಿತವ್ಯಃ' । 'ಭೂಮಾನಂ ಭಗವೋ ವಿಜಿಜ್ಞಾಸೇ' 'ಭೂಮಾ ಎಂದೇ ಜಿಜ್ಞಾಸೆ ಮಾಡಬೇಕು', 'ಭೂಮನೇ ಭಗವಂತನಾಗಿದ್ದಾನೆಂದು ಜಿಜ್ಞಾಸೆ ಮಾಡಬೇಕು' ಎಂಬಲ್ಲಿ ಕೊನೆಯ ಸ್ಥಾನದಲ್ಲಿ ಭೂಮನು ಮುಮುಕ್ಷುಗಳಿಂದ ಜಿಜ್ಞಾಸ್ಯನಾಗಿದ್ದಾನೆ. ಕಲ್ಪಿತವಾದ ಉತ್ತಮತ್ವವುಳ್ಳವನಿಗೆ ಮುಮುಕ್ಷುಜಿಜ್ಞಾಸ್ಯತ್ವವು ಕೂಡುವುದಿಲ್ಲವಾದ್ದರಿಂದ ಇದೂ ತಪ್ಪಾಗಬೇಕಾಗುತ್ತದೆ.

ಮತ್ತು 'ಸರ್ವೇಷು ಲೋಕೇಷು ಕಾಮಚಾರೋ ಭವತಿ' ಎಂಬಲ್ಲಿ ಕಾಮಚಾರ ಮೊದಲಾದವು ಭೂಮಜ್ಞಾನದ ಫಲವೆಂದು ಶ್ರುತವಾಗಿದೆ. ಇದೂ ಸಹ ಅಯುಕ್ತವಾಗುತ್ತದೆ. ಏಕೆಂದರೆ ನಿರ್ವಿಶೇಷಬ್ರಹ್ಮನ ಜ್ಞಾನಕ್ಕೆ ಸಕಲ ಲೋಕಗಳ ಕಾಮನೆಯ ನಿವೃತ್ತಿಯೇ ಫಲವಾಗಿರುವಾಗ, ಕಾಮಚಾರವು ಫಲವಾಗಲು ಸಾಧ್ಯವಿಲ್ಲ.

ಸೂತ್ರಾರ್ಥವನ್ನು ಅದ್ವೈತಿಗಳು ಹೀಗೆ ಹೇಳುತ್ತಾರೆ - 'ಸಮ್ಯಕ್‌ಪ್ರಸೀದತಿ ಅಸ್ಮಿನ್' ಎಂಬ ವ್ಯುತ್ಪತ್ತಿಯಿಂದ ಸಂಪೂರ್ಣವಾಗಿ ಪ್ರಸನ್ನವಾಗಿರುವ ಅವಸ್ಥೆಯೆಂದರೆ 'ಸುಷುಪ್ತಿ'. ಆದ್ದರಿಂದ 'ಸಂಪ್ರಸಾದ ಶಬ್ದಕ್ಕೆ 'ಸುಷುಪ್ತಿ' ಎಂದು ಅರ್ಥವಿದ್ದರೂ ಲಕ್ಷಣಯಾ 'ಸುಷುಪ್ತಿ' ಅವಸ್ಥೆಯಲ್ಲಿ ಜಾಗ್ರತವಾಗಿರುವ ಪ್ರಾಣವಾಯುವನ್ನು ವಿವಕ್ಷಿಸಬೇಕು. ಇಂತಹ ಸಂಪ್ರಸಾದ ಎನಿಸಿದ ಜಾಗ್ರತ್ಪ್ರಾಣಗಳಿಗಿಂತ ಅಧಿ = ಉತ್ತಮವೆಂದು, ಉಪದೇಶಾತ್ = ಉಪದೇಶಿಸಿರುವುದರಿಂದ ಭೂಮನಾದವನು ಬ್ರಹ್ಮನೇ ಆಗುತ್ತಾನೆ.

ಅದು ಸರಿಯಲ್ಲ. ನಾವು ಹೇಳುವಂತೆ 'ಸಂಪ್ರಸಾದ' ಶಬ್ದಕ್ಕೆ 'ಸುಖ' ಎಂಬರ್ಥದಲ್ಲಿ ಯೋಗಾರ್ಥವನ್ನು ಮಾಡಲು ಬರುವಾಗ ಪ್ರಾಣವಾಯುವಿನಲ್ಲಿ ಯೋಗಾರ್ಥದ ಮೂಲಕ ಲಕ್ಷಣಾ ಮಾಡುವುದು ತಪ್ಪಾಗುತ್ತದೆ.

ಮತ್ತು 'ಸಂಪ್ರಸಾದಾತ್' ಎಂಬಲ್ಲಿ ಮುಂದಿನ 'ಧರ್ಮೋಪಪತ್ತೇಶ್ಚ' ಎಂಬ ಸೂತ್ರದಲ್ಲಿರುವ 'ಚ' ಶಬ್ದವನ್ನು ಅನುಷಂಗ ಮಾಡಿಕೊಂಡಾಗ ಪೂರ್ಣಸುಖತ್ವವೆಂಬ ಮತ್ತೊಂದು ಹೇತುವೂ ಇದೆ ಎಂದು ವ್ಯಾಖ್ಯಾನಿಸಲು ಬರುತ್ತದೆ. ಅಂದರೆ 'ಸಂಪ್ರಸಾದಾತ್' ಪೂರ್ಣಸುಖ-ಸ್ವರೂಪನಾದ್ದರಿಂದ, 'ಅಧ್ಯುಪದೇಶಾತ್' ನಿರವಧಿಕವಾಗಿ ಉತ್ತಮನಾದ್ದರಿಂದ ಹೀಗೆ ಎರಡು ಹೇತುಗಳನ್ನು ಸೂತ್ರಕಾರರು ಹೇಳಿದ್ದಾರೆಂದು ನಾವು ವ್ಯಾಖ್ಯಾನಿಸುವಂತೆ ಸೂತ್ರಕ್ಕೆ ಅರ್ಥೈಸಬೇಕು. ಇದೇ ಸಮಂಜಸ. ಇದನ್ನು ಬಿಟ್ಟು 'ಅಧ್ಯುಪದೇಶಾತ್' ಎಂಬುದು ನಿರವಧಿಕವಾದ ಉತ್ತಮತ್ವವನ್ನು ಹೇಳುತ್ತಿದೆ. ಅದಕ್ಕೆ ಅವಧಿ ಯಾವುದು ? ಎಂಬ ಪ್ರಶ್ನೆಗೆ 'ಸಂಪ್ರಸಾದಾತ್' ಎಂಬುದು ಪ್ರಾಣವಾಯುವೆಂಬ ಅವಧಿಯನ್ನು ಹೇಳುತ್ತಿದೆಯೆಂಬುದಾಗಿ ನಿರವಧಿಕ ಉತ್ತಮತ್ವಕ್ಕೆ ಸಂಕೋಚಕವಾಗಿ 'ಸಂಪ್ರಸಾದಾತ್' ಎಂಬುದನ್ನು ವ್ಯಾಖ್ಯಾನಿಸುವುದು ತಪ್ಪಾಗುತ್ತದೆ.

ಪ್ರಥಮ ಸೂತ್ರದಲ್ಲಿ ನೀವು ಅನುಮಾನ ಸ್ವರೂಪವನ್ನು ಹೇಗೆ ತೋರಿಸುತ್ತೀರಿ? 'ಅಯಂ ಭೂಮಾ', 'ಪ್ರಾಣಃ ಭವಿತುಂ ನಾರ್ಹತಿ' 'ಪ್ರಾಣಾದೂರ್ಧ್ವಂ ಉಪದೇಶಾತ್' ಎಂದೋ, ಅಥವಾ 'ಅಯಂ ಭೂಮಾ ಬ್ರಹ್ಮೈವ ಪ್ರಾಣಾದೂರ್ಧ್ವಂ ಉಪದೇಶಾತ್' ಎಂದೋ? ಇಲ್ಲಿ ಉಪದೇಶವು ಭೂಮನು ಪ್ರಾಣನಲ್ಲ ಎಂದು ಹೇಳಿ, ಇದು ಪರಪಕ್ಷನಿರಾಸಕವಾದ ಹೇತುವೆನ್ನುವುದು ತಪ್ಪಾಗುತ್ತದೆ. ಏಕೆಂದರೆ ಸೂತ್ರಗಳೆಲ್ಲವೂ ತತ್ವಜ್ಞಾನಕ್ಕೋಸ್ಕರ ವಾದಪ್ರಕ್ರಿಯೆಯಿಂದ ಪ್ರವೃತ್ತವಾಗಿವೆ. ಆದ್ದರಿಂದ ಸೂತ್ರದಲ್ಲಿ ಪ್ರಥಮಾಕಾಂಕ್ಷಿತವಾದದ್ದು ಯಾವುದು ಎಂದರೆ ಸ್ವಪಕ್ಷಸಾಧಕವಾದ ಹೇತುತ್ವ. ಅಂದರೆ 'ಸಂಪ್ರಸಾದಾತ್' ಎಂಬುದನ್ನು ಸ್ವಪಕ್ಷಸಾಧಕಹೇತುವೆಂದು ಹೇಳಿದಾಗ ಅಧ್ಯಾಹಾರವನ್ನು ಮಾಡಬೇಕಾಗಿಲ್ಲ. ಇದಕ್ಕೆ ವಿಪರೀತವಾಗಿ ಮಾಡಬಾರದು ಹಾಗೂ ಭೂಮನು ಪ್ರಾಣನಲ್ಲ ಎಂಬುದಾಗಿ ಪರಪಕ್ಷ ನಿರಾಸಮಾಡುವುದಕ್ಕಾಗಿ ಹೇತುವೆಂದು ಹೇಳಿದರೆ ಅಧ್ಯಾಹಾರ ಮಾಡಬೇಕಾದಂತೆ ಈಗ ಮಾಡಬೇಕಾಗಿಲ್ಲ.

ಸ್ವಪಕ್ಷಸಾಧನೆ ಮಾಡುವುದಾದಲ್ಲಿ ಅಧ್ಯಾಹಾರವನ್ನು ಏಕೆ ಮಾಡಬೇಕಾಗಿಲ್ಲ ಎಂದರೆ, ಸಮನ್ವಯ ಸೂತ್ರದಲ್ಲಿರುವ 'ತತ್' ಎಂಬ ಪದವು ಅಧ್ಯಾಯ ಮುಗಿಯುವ ತನಕ ಪ್ರತಿಯೊಂದು ಸೂತ್ರಗಳಲ್ಲಿಯೂ ಅನುಷಂಗವಾಗುತ್ತದೆ. ಆದ್ದರಿಂದ ಭೂಮಾ ತತ್ = ಬ್ರಹ್ಮ ಎಂದು ಅನ್ವಯವಾಗುತ್ತದೆ. ಆದ್ದರಿಂದಲೇ 'ಆನಂದಮಯ' ಮೊದಲಾದ ಸ್ವಪಕ್ಷಸಾಧಕ-ಸೂತ್ರಗಳಲ್ಲಿ ಸೂತ್ರಕಾರರು ಪಕ್ಷ ಹಾಗೂ ಹೇತುಗಳೆರಡನ್ನೇ ಹೇಳಿರುತ್ತಾರೆ. 'ನೇತರೋ೨ನುಪಪತ್ತೇಃ' ಇತ್ಯಾದಿಯಾದ ಕೆಲವು ಪರಪಕ್ಷನಿರಾಸಕ ಸೂತ್ರಗಳಲ್ಲಿ ಸಾಧ್ಯವನ್ನೂ ಹೇಳಿರುತ್ತಾರೆ. ಪ್ರಕೃತ ಪರಪಕ್ಷ ನಿರಾಸಕ್ಕೋಸ್ಕರ ಈ ಸೂತ್ರವೆನ್ನುವುದಾದರೆ 'ನ ಪ್ರಾಣಃ' ಎಂಬುದನ್ನು ಅಧ್ಯಾಹಾರ ಮಾಡಿಕೊಳ್ಳಬೇಕಾಗುತ್ತದೆ.

'ಸಂಪ್ರಸಾದಾತ್' ಎಂಬುದನ್ನು ಭೂಮನನ್ನು ಬ್ರಹ್ಮನೆನ್ನಲು ಹೇತು ಮಾಡಿದರೆ ವ್ಯಭಿಚಾರ ಬರುತ್ತದೆ. ಏಕೆಂದರೆ ಆನಂದಮಯ ಪ್ರಕರಣದಲ್ಲಿ ಮನೋಮಯಾದಿಗಳು ಪ್ರಾಣನಿಗಿಂತ ಉತ್ತಮವಾಗಿವೆಯೆಂದು ಹೇಳಲ್ಪಟ್ಟಿದೆ. ಆದ್ದರಿಂದ ಪ್ರಾಣನಿಗಿಂತ ಉತ್ತಮತ್ವವು ಮನೋಮಯಾದಿಗಳಲ್ಲಿ ಕೇಳಿಸುತ್ತಿದ್ದರೂ ಅವುಗಳನ್ನು ಬ್ರಹ್ಮವೆಂದು ಅದ್ವೈತಿಗಳು ಒಪ್ಪಿಲ್ಲ. ಮತ್ತು ಭೂಮಪ್ರಕರಣದಲ್ಲಿಯೂ ಪ್ರಾಣನಿಗಿಂತ 'ಸತ್ಯಂ ವಿಜಿಜ್ಞಾಸಿತವ್ಯಮ್' ಎಂಬಲ್ಲಿರುವ 'ಸತ್ಯ' ಶಬ್ದದ ಅರ್ಥನಾದ ಬ್ರಹ್ಮನನ್ನು ಉತ್ತಮನೆಂದು ಹೇಳಿದಂತೆ 'ವಿಜ್ಞಾನಂ ತ್ವೇವ

ವಿಜಿಜ್ಞಾಸಿತವ್ಯಂ, ಮತಿಸ್ತ್ವೇವ ವಿಜಿಜ್ಞಾಸಿತವ್ಯಾ, ಶ್ರದ್ಧಾ ತ್ವೇವ ವಿಜಿಜ್ಞಾಸಿತವ್ಯಾ' ಇತ್ಯಾದಿಯಾಗಿ ಹೇಳಿರುವುದರಿಂದ ವಿಜ್ಞಾನ, ಮತಿ, ಶ್ರದ್ಧಾ, ಕೃತಿ, ನಿಷ್ಠಾ ಇವುಗಳನ್ನೂ ಸಹ ಪ್ರಾಣನಿಗಿಂತ ಉತ್ತಮವೆಂದು ಹೇಳಲಾಗಿದೆ. ಈ ವಿಜ್ಞಾನಾದಿಗಳನ್ನು ಅದ್ವೈತಿಗಳು ಬ್ರಹ್ಮನೆಂದು ಒಪ್ಪಿರುವುದಿಲ್ಲ. ಆದ್ದರಿಂದ ಪ್ರಾಣನಿಗಿಂತ ಉತ್ತಮತ್ವವು ಇದ್ದರೂ ಸಹ ಬ್ರಹ್ಮತ್ವವಿಲ್ಲದ ಕಾರಣ ಹೇತವು ವ್ಯಭಿಚರಿತವಾಗಿದೆ.

'ಧರ್ಮೋಪಪತ್ತೇಶ್ಚ' ಎಂಬ ಎರಡನೆಯ ಸೂತ್ರವನ್ನು ಹೀಗೆ ವ್ಯಾಖ್ಯಾನಿಸುತ್ತಾರೆ - 'ಯತ್ರ ನಾನ್ಯತ್ಪಶ್ಯತಿ' ಇತ್ಯಾದಿ ಶ್ರುತಿಯಲ್ಲಿ ಚಾಕ್ಷುಷವ್ಯವಹಾರಾದಿಗಳನ್ನು ನಿಷೇಧ ಮಾಡಿದ್ದರಿಂದ ವ್ಯವಹಾರಾಭಾವವೆಂಬ ನಿರ್ವಿಶೇಷ ಬ್ರಹ್ಮನ ಧರ್ಮವು ಶ್ರುತವಾಗಿದೆ. ಆದ್ದರಿಂದ ನಿರ್ವಿಶೇಷ ಬ್ರಹ್ಮನೇ ಭೂಮನಾಗುತ್ತಾನೆಂದು ಎರಡನೆಯ ಸೂತ್ರಾರ್ಥ.

ಇದೂ ತಪ್ಪು. ವ್ಯವಹಾರವನ್ನು ಶ್ರುತಿಯು ನಿಷೇಧಿಸಿದೆ ಎಂಬುದೇ ಸರಿಯಲ್ಲ. 'ಏವಂ ಪಶ್ಯನ್ನೇವಂ ವಿಜಾನನ್ ಸರ್ವೇಷು ಲೋಕೇಷು ಕಾಮಚಾರೋ ಭವತಿ' ಎಂಬ ವಾಕ್ಯದಲ್ಲಿ ದರ್ಶನಾದಿ ವ್ಯವಹಾರಗಳನ್ನೂ ಶ್ರುತಿಯು ವಿಧಿಸುತ್ತಿದೆ.

'ನಾನ್ಯತ್ಪಶ್ಯತಿ' ಎಂಬಲ್ಲಿ ಭೂಮವಿಷಯಕವಾದ ದರ್ಶನವು ಬೇರೆಯವರಿಗಿಲ್ಲವೆಂದು ಹೇಳಲಾಗಿದೆ ಹೊರತು, ಭೂಮನಿಗೆ ದ್ರಷ್ಟೃತ್ವವನ್ನು ನಿಷೇಧಿಸಿಲ್ಲ. ಅವನಿಗೆ ದ್ರಷ್ಟೃತ್ವವು ಶ್ರುತಿಗೆ ಸಮ್ಮತವೇ ಆಗಿದೆ. ಅಥವಾ ಶ್ರುತಿಯು ಅನ್ಯದರ್ಶನವನ್ನು ನಿಷೇಧ ಮಾಡುತ್ತಿದೆ ಹೊರತು, ಅನ್ಯವನ್ನೇ ನಿಷೇಧಿಸುತ್ತಿಲ್ಲ. ಅನ್ಯಪದಾರ್ಥವನ್ನು ನಿಷೇಧ ಮಾಡಿದ್ದಲ್ಲಿ ಅದ್ವಿತೀಯತ್ವವು ನಿರ್ವಿಶೇಷನ ಬ್ರಹ್ಮನ ಧರ್ಮವಾಗುವ ಕಾರಣ ಅವನ ಲಕ್ಷಣವೆಂದು ಹೇಳಬಹುದಿತ್ತು. ಆದರೆ ಅನ್ಯಪದಾರ್ಥವನ್ನು ಶ್ರುತಿಯು ಅನುಮೋದಿಸುತ್ತಿದೆ.

ಪ್ರತಿಯೊಂದು ಅಧಿಕರಣಗಳಂತೆ ಇಲ್ಲಿಯೂ 'ಧರ್ಮೋಪಪತ್ತೇಃ' ಎಂದು ಹೇಳಿರುವುದರಿಂದ ಅದ್ವೈತಿಗಳ ನಿರ್ಧರ್ಮಕತ್ವ ಪ್ರತಿಪಾದನೆಗೆ ಸೂತ್ರವು ಪ್ರತಿಕೂಲವೇ ಆಗಿದೆ ಹೊರತು, ಅನುಕೂಲವಾಗಿಲ್ಲವೆಂಬ ವಿಚಾರವು ಅತ್ಯಂತ ಸ್ಪಷ್ಟ.

ರಾಮಾನುಜ ಭಾಷ್ಯದ ಅಧಿಕರಣ ವಿಮರ್ಶೆ - ರಾಮಾನುಜರು ಭೂಮಾಧಿಕರಣದ ಪೂರ್ವಪಕ್ಷವನ್ನು ಹೀಗೆ ಮಾಡಿರುತ್ತಾರೆ - ಭೂಮನು ಪ್ರಾಣನೇ ಆಗಿದ್ದಾನೆ. ಆದರೆ ಪ್ರಾಣ ಶಬ್ದವು ಪ್ರಾಣಶಬ್ದದಿಂದ ಸಹಚಾರಿತನಾದ ಜೀವನಲ್ಲಿ ಲಾಕ್ಷಣಿಕ ವಾಗಿದೆ. ಏಕೆಂದರೆ

'ಪ್ರಾಣೋಹ ಪಿತಾ' ಇತ್ಯಾದಿ ವಾಕ್ಯದಲ್ಲಿ ಪ್ರಾಣನನ್ನು ತಂದೆಯೆಂದು ಕರೆಯಲಾಗಿದೆ. ಆದ್ದರಿಂದ ಜಡವಾದ ಪ್ರಾಣವು ಪ್ರಾಣಶಬ್ದದಿಂದ ವಾಚ್ಯವಾಗುವುದಿಲ್ಲ.

'ಪಿತೃಹಾ ವೈ ತ್ವಮಸಿ' ಇತ್ಯಾದಿ ವಾಕ್ಯದಲ್ಲಿ ಪ್ರಾಣಸಹಿತವಾದ ಶರೀರವನ್ನು ಹಿಂಸೆಗೆ ಯೋಗ್ಯವಾಗಿದೆಯೆನ್ನಲಾಗಿದೆ. ಕೇವಲ ಜಡವಾದ ಪ್ರಾಣಕ್ಕೆ ಪಿತೃತ್ವವಾಗಲೀ ಅಥವಾ ಹಿಂಸ್ಯತ್ವವಾಗಲೀ ಯುಕ್ತವಾಗುವುದಿಲ್ಲ. ಆದ್ದರಿಂದ ಜೀವನೇ ಪ್ರಾಣಶಬ್ದವಾಚ್ಯನಾಗಿದ್ದಾನೆಂದು ಪೂರ್ವಪಕ್ಷ.

ರಾಮಾನುಜರ ಈ ಅಧಿಕರಣದ ಪೂರ್ವಪಕ್ಷವೇ ಸರಿಯಿಲ್ಲ. ಏಕೆಂದರೆ ಶ್ರುತಿಪ್ರಸಿದ್ಧಿಗೆ ಅನುಸಾರಿಯಾಗಿ ಪ್ರಾಣಶಬ್ದವು ಅಭಿಮಾನಿದೇವತೆಯನ್ನೇ ಪ್ರತಿಪಾದಿಸುತ್ತದೆ. ಹೀಗೆ ಹೇಳಿದಾಗಲೂ 'ಅಥ ಯದ್ಯಪ್ಯೇನಾನುತ್ಕ್ರಾಂತಪ್ರಾಣಾನ್' ಇತ್ಯಾದಿ ವಾಕ್ಯದಲ್ಲಿ ಹೇಳಲ್ಪಟ್ಟ ಪಿತೃತ್ವಾದಿಗಳೂ ಸಹ ಯುಕ್ತವಾಗುತ್ತದೆ. ಆದ್ದರಿಂದ ಜೀವನಲ್ಲಿ ಲಕ್ಷಣವನ್ನೇಕೆ ಮಾಡಬೇಕು.

'ಅಥ ಯದ್ಯಪ್ಯೇನಾನುತ್ಕ್ರಾಂತಪ್ರಾಣಾನ್' ಇತ್ಯಾದಿ ವಾಕ್ಯದಲ್ಲಿ ಆಚಾರ್ಯರೇ ಮೊದಲಾದ ಜೀವರುಗಳು ಪ್ರಕೃತರಾಗಿದ್ದಾರೆ. ಅಂತಹ ಜೀವರ ಪ್ರಾಣವು ಉತ್ಕ್ರಾಂತವಾಗುತ್ತದೆಂದು ಶ್ರುತಿಯು ಹೇಳುತ್ತಿದೆ. ಆದ್ದರಿಂದ ಪ್ರಾಣನು ಜೀವನಾಗಲು ಸಾಧ್ಯವಿಲ್ಲ. ಏಕೆಂದರೆ ಜೀವನನ್ನೇ ಪ್ರಾಣನೆಂದರೆ 'ಪ್ರಾಣನು ಪ್ರಾಣನಿಂದ ಉತ್ಕ್ರಾಂತನಾದನು' ಎಂದು ಹೇಳಿದಂತಾಗುತ್ತದೆ. ಆದರೆ ತಾನು ತನ್ನಿಂದ ಉತ್ಕ್ರಾಂತನಾಗಲು ಎಂದೂ ಸಹ ಸಾಧ್ಯವಿಲ್ಲ.

ಆದ್ದರಿಂದಲೇ 'ಏಷ ಸಂಪ್ರಸಾದೋ೨ಸ್ಮಾಚ್ಛರೀರಾತ್ಸಮುತ್ಥಾಯ'' ಎಂಬ ಶ್ರುತಿಯಲ್ಲಿರುವ 'ಸಂಪ್ರಸಾದ' ಶಬ್ದವು ಜೀವನನ್ನು ಪ್ರತಿಪಾದಿಸುತ್ತದೆ. ಅಂತಹ ಜೀವನ ದೆಸೆಯಿಂದ 'ಅಧ್ಯುಪದೇಶಾತ್' ಅಧಿಕನೆಂಬ ಉಪದೇಶವಿರುವ ಪ್ರಯುಕ್ತ ಬ್ರಹ್ಮನೇ ಭೂಮನಾಗುತ್ತಾನೆಂಬ ರಾಮಾನುಜರ ಸೂತ್ರವ್ಯಾಖ್ಯಾನವೂ ಸಹ ನಿರಾಸಿತವಾಯಿತು.

ಒಂದು ವೇಳೆ 'ಸಂಪ್ರಸಾದ' ಶಬ್ದಕ್ಕೆ ಜೀವನೆಂದು ಅರ್ಥೈಸುವುದಾದರೆ ಶ್ರುತಿಯಲ್ಲಿರುವ ಪ್ರಾಣಶಬ್ದಕ್ಕೆ ಜೀವನಲ್ಲಿ ಲಕ್ಷಣಾ ಮಾಡಬೇಕಾಗುತ್ತದೆ. ಮತ್ತು ಸಾಮಾನ್ಯನಾದ ಜೀವನಿಗಿಂತ ಉತ್ತಮತ್ವವನ್ನು ಹೇಳಿದ ಮಾತ್ರಕ್ಕೆ ಭೂಮನು ಬ್ರಹ್ಮನೇ ಆಗುತ್ತಾನೆಂದು ಸಿದ್ಧವಾಗುವುದಿಲ್ಲ. ಅಷ್ಟೇ ಅಲ್ಲದೇ, ನಿಮ್ಮ ಪ್ರಕಾರವೇ ಜೀವನಿಗಿಂತ ಉತ್ತಮತ್ವವೂ ಶ್ರದ್ಧಾ ಮೊದಲಾದವುಗಳಲ್ಲಿಯೂ ಹೇಳಲ್ಪಟ್ಟಿದೆ, ಆದರೆ ಅವುಗಳಲ್ಲಿ ಬ್ರಹ್ಮತ್ವವಿಲ್ಲದ ಕಾರಣ ವ್ಯಭಿಚಾರವು ಬರುತ್ತದೆ.

'ಸಂಪ್ರಸಾದೋಽಸ್ಮಾತ್' ಎಂಬ ಶ್ರುತಿಯಲ್ಲಿ ಶರೀರದಿಂದ ಹೊರಡುವಿಕೆಯೆಂಬ ಲಿಂಗದಿಂದ 'ಸಂಪ್ರಸಾದ' ಶಬ್ದಕ್ಕೆ ಅಲ್ಪಸುಖವುಳ್ಳ ಜೀವನಲ್ಲಿ ಯಾವುದೋ ಒಂದು ರೀತಿ ಯೌಗಿಕಾರ್ಥವನ್ನು ಮಾಡಿದರೂ ಸೂತ್ರದಲ್ಲಿರುವ 'ಸಂಪ್ರಸಾದ' ಶಬ್ದಕ್ಕೆ ಸ್ವಲ್ಪಸುಖವುಳ್ಳ ಜೀವನೆಂಬರ್ಥವನ್ನು ಹೇಳಲು ಯಾವುದೇ ಕಾರಣವಿಲ್ಲ.

ಮತ್ತು 'ನಾಮಾಭಿಮಾನಿನೀ ಚೋಷಾ ತಸ್ಯಾ ಬ್ರಹ್ಮ ಪರಂ ಸ್ಮರ' ಇತ್ಯಾದಿ ಸ್ಮೃತಿಯಿಂದ ನಾಮಾದಿಗಳೂ ಸಹ ಜೀವನಿಗಿಂತ ಉತ್ತಮವೆಂದು ಹೇಳಲ್ಪಟ್ಟವೆ. ಆದ್ದರಿಂದ ಜೀವಾಧಿಕ್ಯೇನ ಉಪದೇಶವು ನಾಮಾದಿಗಳಲ್ಲಿದ್ದರೂ ಬ್ರಹ್ಮತ್ವವು ಇಲ್ಲದ ಕಾರಣ ವ್ಯಭಿಚಾರ ಬರುತ್ತದೆ.

ಇಲ್ಲಿಗೆ ಭೂಮಾಧಿಕರಣದಲ್ಲಿ ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ವಪ್ರದೀಪ, ತತ್ವಪ್ರಕಾಶಿಕಾ, ಭಾವದೀಪ
ಇವುಗಳ ಅನುವಾದವು ಹಾಗೂ ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆಯು ಸಮಾಪ್ತವಾಯಿತು

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥

ಅಕ್ಷರಾಧಿಕರಣ

ಬ್ರಹ್ಮಸೂತ್ರ, ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ತ್ವಪ್ರದೀಪ, ತತ್ತ್ವಪ್ರಕಾಶಿಕಾ, ಭಾವದೀಪ

ವಿಶೇಷವಿಚಾರದೊಂದಿಗೆ ಕನ್ನಡಭಾಷೆಯಲ್ಲಿ ಅನುವಾದ

ಮತ್ತು

ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆ

॥ ಹರಿಃ ಓಂ ॥

॥ ಶ್ರೀವೇದವ್ಯಾಸಾಯ ನಮಃ ॥

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಗುರುಭ್ಯೋ ನಮಃ ॥

॥ ಶ್ರೀಮದ್ರಾಘವೇಂದ್ರತೀರ್ಥಗುರುಭ್ಯೋ ನಮಃ ॥

॥ ಶ್ರೀಗುರುಭ್ಯೋ ನಮಃ ॥

ಅಕ್ಷರಾಧಿಕರಣ

ಬ್ರಹ್ಮಸೂತ್ರ

॥ अथ अक्षराधिकरणम् ॥

'ಅಕ್ಷರಮಂಬರಾಂತಧೃತೇಃ' ಎಂಬ ಸೂತ್ರವ್ಯಾಖ್ಯಾನ

ब्रह्मसूत्रम् – ॥ अक्षरमम्बरान्तधृतेः ॥ १० ॥

ಸೂತ್ರಾರ್ಥ - 'ಏತದ್ವಾ ಅಕ್ಷರಸ್ಯ' ಎಂಬ ಛಾಂದೋಗ್ಯೋಪನಿಷತ್ತಿನಲ್ಲಿ ಕೇಳಿಸುತ್ತಿರುವ ಅಕ್ಷರನು ಬ್ರಹ್ಮನೇ ಆಗಿದ್ದಾನೆ. ಏಕೆಂದರೆ 'ಏತಸ್ಮಿನ್ ಖಲ್ವಕ್ಷರೇ' ಎಂಬ ಬೃಹದಾರಣ್ಯಕ ವಾಕ್ಯದಂತೆ ಪೃಥಿವಿಯಿಂದಾರಂಭಿಸಿ 'ಆಕಾಶ' ಪದವಾಚ್ಯಳಾದ ಲಕ್ಷ್ಮೀದೇವಿಯವರೆಗೆ ಸಕಲ ವಸ್ತುಗಳನ್ನು ಧಾರಣೆ ಮಾಡಿದ್ದರಿಂದ.

ಅರ್ಥ -- ಅಕ್ಷರಂ = 'ತದ್ವಾ ಏತತ್' ಎಂಬಲ್ಲಿ ಕೇಳಿಸುತ್ತಿರುವ 'ಅಕ್ಷರ' ಶಬ್ದವಾಚ್ಯನಾದವನು ಬ್ರಹ್ಮನೇ; ಹೊರತು ಚಿತ್ಪ್ರಕೃತಿಯಲ್ಲ. ಏಕೆಂದರೆ ಅಂಬರಾಂತಧೃತೇಃ = ಇಂತಹ ಅಕ್ಷರನಲ್ಲಿ 'ಏತಸ್ಮಿನ್ ಖಲ್ವಕ್ಷರೇ' ಎಂಬ ಬೃಹದಾರಣ್ಯಕದಲ್ಲಿ ಆಕಾಶದವರೆಗೆ (ಆಕಾಶಪದವಾಚ್ಯಳಾದ ಲಕ್ಷ್ಮೀದೇವಿಯವರೆಗೆ) ಸಕಲ ಪದಾರ್ಥಗಳನ್ನು ಧಾರಣೆ ಮಾಡಿದ್ದಾನೆಂದು ಹೇಳಿದ್ದರಿಂದ.

ಜಗದ್ಗುರು ಶ್ರೀಮಧ್ವಾಚಾರ್ಯರಿಂದ ವಿರಚಿತವಾದ

ಬ್ರಹ್ಮಸೂತ್ರಭಾಷ್ಯ

ಮಹಾಲಕ್ಷ್ಮೀ ಅಕ್ಷರಳೆಂದು ಪೂವಪಕ್ಷ

ब्रह्मसूत्रभाष्यम् — अदृश्यत्वादिगुणा (विष्णोरुक्ताः) । 'अदृष्टं द्रष्टृश्रुतं श्रोतृ' (बृ.५-८-११) इत्यादिना । 'अहं सोममाहनसं बिभर्मि' (ऋ.१०-१२५-२.) इत्यादेश्च तस्यापि सम्भवान्मध्यमाक्षरस्योक्ता इति ।

ಅನುವಾದ - ಹಿಂದೆ ಅದೃಶ್ಯತ್ವಾಧಿಕರಣದಲ್ಲಿ ಅದೃಶ್ಯತ್ವವೇ ಮೊದಲಾದ ಗುಣಗಳನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡಲಾಯಿತು. ಅದೇ ಗುಣಗಳು ಅಕ್ಷರತತ್ವದಲ್ಲಿದೆ ಎಂದು ಬೃಹದಾರಣ್ಯಕೋಪನಿಷತ್ತಿನಲ್ಲಿರುವ 'ಅದೃಷ್ಟಂ ದ್ರಷ್ಟೃ' ಇತ್ಯಾದಿ ವಾಕ್ಯಗಳು ಹೇಳುತ್ತವೆ . 'ಅಹಂ ಸೋಮಮಾಹನಸಂ ಬಿಭರ್ಮಿ' ಇತ್ಯಾದಿಶ್ರುತಿಯಲ್ಲಿ ಲಕ್ಷ್ಮೀದೇವಿಗೂ ಸಹ ಅದೇ ಗುಣಗಳನ್ನು ಹೇಳಲಾಗಿದೆ. ಆದ್ದರಿಂದ ಅದೃಶ್ಯತ್ವಾದಿ ಗುಣಗಳುಳ್ಳವಳು ಅಕ್ಷರಳೆನಿಸಿರುವ ಲಕ್ಷ್ಮೀದೇವಿಯೇ ಆಗಿರಬಹುದಲ್ಲವೆ ?

ಪ್ರತಿಪದಾರ್ಥ -- ಈ ಅಧಿಕರಣದಲ್ಲಿ 'ಅಕ್ಷರ' ಎಂಬ ನಾಮಾತ್ಮಕ ಶಬ್ದದ ಸಮನ್ವಯವನ್ನು ವಿಷ್ಣುವಿನಲ್ಲಿ ಸಾಧಿಸುತ್ತಿದ್ದಾರೆ. ಶ್ರುತ್ಯಾದಿ ಸಂಗತಿಯನ್ನು ಹಾಗೂ ವಿಷಯವಾಕ್ಯವನ್ನೂ ಸಹ ಉದಾಹರಿಸುತ್ತಾ ಯುಕ್ತಿಬದ್ಧವಾದ ಪೂರ್ವಪಕ್ಷವನ್ನು 'ಅದೃಶ್ಯತ್ವಾದಿ' ಇವೇ ಮೊದಲಾದ ಭಾಷ್ಯದ ವಾಕ್ಯಗಳಿಂದ ತೋರಿಸುತ್ತಿದ್ದಾರೆ

ಅದೃಶ್ಯತ್ವಾದಿಗುಣಾಃ - ಅದೃಶ್ಯತ್ವವೇ ಮೊದಲಾದ ಗುಣಗಳು (ವಿಷ್ಣೋಃ ಉಕ್ತಾಃ = ಅದೃಶ್ಯತ್ವಾಧಿಕರಣದಲ್ಲಿ ವಿಷ್ಣುವಿನಲ್ಲಿ ಸಮರ್ಥಿಸಲಾಯಿತು.) ಆದರೆ ಅದೇ ಅದೃಶ್ಯತ್ವಾದಿಗುಣಗಳು ಅಕ್ಷರನಲ್ಲಿ ಕೇಳಿಸುತ್ತಿವೆ. ಅಂತಹ ಅಕ್ಷರನು ಯಾರು ಎಂದರೆ ಅದೃಷ್ಟಂ = ಯಾರಿಂದಲೂ

ನೋಡಲು ಸಾಧ್ಯವಾಗದ, ದ್ರಷ್ಟ್ರ = ಸ್ವಯಂ ಎಲ್ಲವನ್ನೂ ನೋಡುವ, ಅಶ್ರುತಂ = ಯಾರಿಂದಲೂ ಕೇಳಿ ತಿಳಿಯಲು ಸಾಧ್ಯವಾಗದ ಶ್ರೋತೃ = ಎಲ್ಲವನ್ನೂ ಕೇಳುವ ವಸ್ತು ಯಾವುದಿದೆಯೋ ಅದೇ ಅಕ್ಷರವು, ಇತ್ಯಾದಿನಾ = ಇವೇ ಮೊದಲಾದ ವಾಕ್ಯಗಳಿಂದ ಅಕ್ಷರತತ್ವವನ್ನು ವರ್ಣಿಸಲಾಗಿದೆ. ಋಗ್ವೇದದಲ್ಲಿ ಅಹಂ = ನಾನೇ, ಆಹನಸಂ = ಚಂದ್ರನೇ ಅಭಿಮಾನಿಯಾಗಿರುವ ಲತೆಯ ಮೂಲಕ ಚೆನ್ನಾಗಿ ಹಿಂಡಲ್ಪಟ್ಟ, ಸೋಮಂ = ಸೋಮಲತೆಯ ಅಭಿಮಾನಿಯಾದ ಚಂದ್ರನನ್ನು, ಬಿಭರ್ಮಿ= ಧರಿಸಿದವಳಾಗಿದ್ದೇನೆ, ಇತ್ಯಾದೇಶ್ಚ = ಇದೇ ರೀತಿಯ ಪ್ರಮಾಣಗಳಿಂದಲೂ, ತಸ್ಯಾಪಿ = ಸೃಷ್ಟ್ಯಾದಿಕ್ರಿಯಾಗಳುಳ್ಳ ಲಕ್ಷ್ಮೀದೇವಿಗೂ ಸಹ, ಸಂಭವಾತ್ = ಅಕ್ಷರಶಬ್ದವಾಚ್ಯತ್ವವು ಉಕ್ತವಾಗುತ್ತದೆ. ಆದ್ದರಿಂದ ಮಧ್ಯಮಾಕ್ಷರಸ್ಯ = ಮಧ್ಯಮಾಕ್ಷರಳೆಂದು ಕರೆಸಿಕೊಳ್ಳುವ ಲಕ್ಷ್ಮೀದೇವಿಗೆ, ಉಕ್ತಾಃ = ಈ ಗುಣಗಳು ಹೇಳಲ್ಪಡುತ್ತವೆ.

ಅಕ್ಷರ ಎಂದರೆ ಮಹಾವಿಷ್ಣುವೇ ?

ब्रह्मसूत्रभाष्यम् — अतो ब्रूते

।। अक्षरमम्बरान्तधृतेः ।।

'एतस्मिन्नु खल्वक्षरे गार्ग्याकाश ओतश्च प्रोतश्च' (बृ. ५-८-११) इत्यम्बरान्तस्य सर्वस्य धृतेर्ब्रह्मैवाक्षरम् ।

ಅನುವಾದ - ಈ ಆಕ್ಷೇಪವನ್ನು ಪರಿಹರಿಸುವುದಕ್ಕಾಗಿ ಸೂತ್ರಕಾರರು 'ಅಕ್ಷರಮಂಬರಾಂತಧೃತೇಃ' ಎಂದು ಹೇಳಿರುತ್ತಾರೆ ಮತ್ತು 'ಏತಸ್ಮಿನ್ನು ಖಲ್ವಕ್ಷರೇ' ಇತ್ಯಾದಿ ವಾಕ್ಯದಿಂದ ಸಕಲಪದಾರ್ಥಗಳನ್ನೂ ಧರಿಸಿರುವಿಕೆ ಎಂಬ ಸಾಮರ್ಥ್ಯವನ್ನು ಹೇಳಿರುವುದರಿಂದ ಭಗವಂತನೇ ಅಕ್ಷರನೆನಿಸುತ್ತಾನೆ.

ಪ್ರತಿಪದಾರ್ಥ -- ಸಿದ್ಧಾಂತವನ್ನು ಸ್ಥಾಪನೆ ಮಾಡುವುದಕ್ಕಾಗಿ ಸೂತ್ರವನ್ನು ಪಠಿಸುತ್ತಿದ್ದಾರೆ.

ಬೃಹದಾರಣ್ಯಕೋಪನಿಷತ್ತಿನಲ್ಲಿ ಹೇ ಗಾರ್ಗಿ! = ಎಲೈ ಗಾರ್ಗಿಯೇ! ಏತಸ್ಮಿನ್ನು ಖಲ್ವಕ್ಷರೇ = ಈ ಅಕ್ಷರನಲ್ಲಿಯೇ, ಆಕಾಶಃ = ಆಕಾಶಾಂತವಾದ ಸಕಲಪದಾರ್ಥವು, ಓತಶ್ಚ ಪ್ರೋತಶ್ಚ = ಒಳಗೂ ಹೊರಗೂ ಆಶ್ರಯಿಸಿಕೊಂಡಿದೆ, ಇತಿ = ಹೀಗೆ, ಅಂಬರಾಂತಸ್ಯ = ಆಕಾಶದ ತನಕ ಇರುವ, ಸರ್ವಸ್ಯ = ಸಕಲ ಪದಾರ್ಥಗಳ, ಧೃತೇಃ = ಧರಿಸಿರುವಿಕೆ ಎಂಬ ಗುಣವನ್ನು ಹೇಳಿರುವುದರಿಂದ, ಅಕ್ಷರಮ್ = ಅಕ್ಷರ ಶಬ್ದವಾಚ್ಯನಾದವನು, ಬ್ರಹ್ಮೈವ = ಪರಬ್ರಹ್ಮನಾದ ವಿಷ್ಣುವೇ ಆಗುತ್ತಾನೆ.

ಸರ್ವಾಧಾರನೇ ಅಕ್ಷರ

ब्रह्मसूत्रभाष्यम् — 'य त त्रिधातु पृथिवीमुत द्यामेको दाधार भुवनानि विश्वा ।'

(ऋ. १-१५४-५)

ಅನುವಾದ - ಯಾವ ವ್ಯಕ್ತಿಯು ಪ್ರಕೃತಿ, ಪುರುಷ, ಕಾಲ ಇವುಗಳನ್ನು ಹಾಗೂ ಶ್ರೀ, ಭೂ, ದುರ್ಗಾರೂಪಗಳನ್ನು ಧರಿಸಿದ್ದಾನೋ, ಅವನೇ ಭೂಮಿಯನ್ನೂ, ಅಂತರಿಕ್ಷವನ್ನೂ, ಸಕಲಲೋಕಗಳನ್ನೂ ಸಹ ಧರಿಸಿದ್ದಾನೆ. ಅಂತಹವನು ವಿಷ್ಣುವೇ ಆಗಿದ್ದಾನೆ ಎಂದು ತಿಳಿಯಬೇಕು.

ಪ್ರತಿಪದಾರ್ಥ -- ಸರ್ವಾಧಾರತ್ವವು ಹೇಗೆ ವಿಷ್ಣುವಿಗೆ ನಿರ್ಣಾಯಕವಾಗುತ್ತದೆ ? ಎಂಬ ಪ್ರಶ್ನೆಗೆ ಸರ್ವಾಧಾರತ್ವವು ವಿಷ್ಣುಲಿಂಗವೆಂದು ಶ್ರುತಿಸಿದ್ಧವಾಗಿದೆ ಎಂಬ ವಿಚಾರವನ್ನು ತೋರಿಸುತ್ತಿದ್ದಾರೆ.

ಯ ಉ = ಯಾವ ವ್ಯಕ್ತಿಯು, ತ್ರಿಧಾತು = ಶ್ರೀ, ಭೂ, ದುರ್ಗಾರೂಪಗಳಿಗೆ, ಪ್ರಕೃತಿ, ಪುರುಷ, ಕಾಲ ಎಂಬ ಮೂರು ಧಾತುಗಳಿಗೆ ಆಧಾರನೋ, ಏಕಃ = ಅವನೊಬ್ಬನೇ, ಪೃಥಿವೀಮ್ = ಭೂಮಿಯನ್ನು, ಉತ = ಮತ್ತು, ದ್ಯಾಂ = ಅಂತರಿಕ್ಷವನ್ನು, ವಿಶ್ವಾ = ಎಲ್ಲ, ಭುವನಾನಿ = ಲೋಕಗಳನ್ನು ದಧಾರ = ಧರಿಸಿದ್ದಾನೋ ಅವನು ವಿಷ್ಣುವೇ ಆಗಿದ್ದಾನೆ.

ಸರ್ವಾಧಾರನಾದವನು ಮಹಾವಿಷ್ಣು

ಬ್ರಹ್ಮಸೂತ್ರಭಾಷ್ಯಮ್ – 'भर्ता सन् म्रियमाणो बिभर्ति एको देवो बहुधा निविष्टः । (यदा भारं तन्द्रयते स भर्तुम् । परास्य भारं पुनरस्तमेति ।।') (तै.आ. ३-१-४.)

ಅನುವಾದ - ಒಬ್ಬನೇ ವಿಷ್ಣು ಎಲ್ಲರ ಹೃದಯದಲ್ಲಿ ಧರಿಸಲ್ಪಟ್ಟವನಾಗಿದ್ದರೂ ತನ್ನನ್ನು ಹೊತ್ತುಕೊಂಡು ಎಲ್ಲವನ್ನೂ ಹೊತ್ತುನಿಂತಿದ್ದಾನೆ. ಇದು ವಿರುದ್ಧವಲ್ಲ. ಅನೇಕ ರೂಪವಿರುವುದರಿಂದ ಒಬ್ಬನಲ್ಲಿಯೇ ಈ ಧರ್ಮಗಳು ಉಪಪನ್ನವಾಗಬಹುದು. ಯಾವಾಗ ಈ ಭಾರವನ್ನು ಕೆಳಗಡೆ ಇಟ್ಟು ಪುನಃ ಹೊತ್ತುಕೊಳ್ಳಲು ಬಯಸುವುದಿಲ್ಲವೋ ಆವಾಗ ಈ ಜಗತ್ತು ನಾಶವನ್ನು ಹೊಂದುತ್ತದೆ.

ಪ್ರತಿಪದಾರ್ಥ -- ಜಗತ್ತಿಗೂ ಈಶನಿಗೂ ಏನು ವ್ಯತ್ಯಾಸ ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ. ದೇವಃ = ಕ್ರೀಡಾದಿಗುಣವಿಶಿಷ್ಟನಾದ ಭಗವಂತನು, ಏಕಃ = ಒಬ್ಬನೇ, ಭರ್ತಾ = ಸಕಲಜಗತ್ತನ್ನು ಧರಿಸಿದವನಾಗಿ, ಬಹುಧಾ = ಅನೇಕರೂಪಗಳಿಂದ, ನಿವಿಷ್ಟಃ = ವ್ಯಾಪ್ತನಾಗಿದ್ದಾನೆ, ಮ್ರಿಯಮಾಣಃ = ಸಕಲಜೀವರಿಂದ ಧರಿಸಲ್ಪಟ್ಟವನಾಗಿ, ಬಿಭರ್ತಿ = ಜಗತ್ತಿನ ಧಾರಣೆಯನ್ನು ಮಾಡಿರುತ್ತಾನೆ, ಸಃ = ಆ ಪರಮಾತ್ಮನು, (ಯದಾ = ಯಾವಾಗ, ಭಾರಂ = ಅತ್ಯಂತ ಭಾರವಾದ ಪ್ರಪಂಚವನ್ನು, ಪರಾಸ್ಯ = ಕೆಳಗಿಟ್ಟು, ಪುನಃ = ಮತ್ತೆ, ತಂ ಭಾರಂ = ಆ ಪ್ರಪಂಚದ ಭಾರವನ್ನು, ಭರ್ತುಂ = ಧರಿಸಲು, ತಂದ್ರಯತೇ = ಇಚ್ಛಿಸುವುದಿಲ್ಲವೋ, ತದಾ = ಆವಾಗ, ಅಸೌ = ಈ ಪ್ರಪಂಚದ ಭಾರವು, ಅಸ್ತಮೇತಿ = ನಾಶವನ್ನು ಹೊಂದುತ್ತದೆ.)

ಮಹಾವಿಷ್ಣುವೇ ಅಕ್ಷರನೆನ್ನಲು ಅನೇಕ ಶ್ರುತಿಗಳು

ಬ್ರಹ್ಮಸೂತ್ರಭಾಷ್ಯಮ್ – 'यस्मिन्निदं सं च वि चैधि सर्वं यस्मिन् देवा अधि विश्वे निषेदुः ।' (महाना. १३.) इत्यादिश्रुतेः।

ಅನುವಾದ - ಯಾವ ವಿಷ್ಣುವಿನಿಂದ ಈ ಜಗತ್ತು ಅನೇಕ ವಿಧದಲ್ಲಿ ಬೆಳೆಯುತ್ತದೋ, ಯಾವ ವಿಷ್ಣುವಿನಲ್ಲಿ ಸಕಲ ದೇವತೆಗಳು ಆಶ್ರಯವನ್ನು ಪಡೆದಿದ್ದಾರೋ ಅವನೇ ಈ ಜಗತ್ತಿಗೆ ಸಂಹಾರಕನು.

ಪ್ರತಿಪದಾರ್ಥ -- ಯಸ್ಮಿನ್ = ಯಾವ ಪರಮಾತ್ಮನಲ್ಲಿ, ಇದಂ ಸರ್ವಂ= ಈ ಸಮಸ್ತ ಪ್ರಪಂಚವು, ಸಂ = ಚನ್ನಾಗಿ, ಚ = ಮತ್ತು, ವಿ = ನಾನಾಪ್ರಕಾರಗಳಿಂದ, ಏಧಿ = ಬೆಳೆಯುತ್ತಲೇ ಇದೆಯೋ, ಯಸ್ಮಿಂಶ್ಚ = ಯಾವ ಪರಮಾತ್ಮನಲ್ಲಿಯಾದರೂ, ವಿಶ್ವೇ ದೇವಾಃ = ಬ್ರಹ್ಮಾದಿಸಕಲ ದೇವತೆಗಳು, ಅಧಿನಿಷೇದುಃ = ಆಶ್ರಯವನ್ನು ಪಡೆದಿದ್ದಾರೆಯೋ, ಇತ್ಯಾದಿ = ಇವೇ ಮೊದಲಾದ, ಶ್ರುತೇಃ = ವೇದಗಳಿರುವುದರಿಂದ ವಿಷ್ಣುವೇ ಅಕ್ಷರನು.

ಸರ್ವಾಧಾರತ್ವ ಇತರರಲ್ಲಿ ಸರ್ವಥಾ ಇರುವುದಿಲ್ಲ

ब्रह्मसूत्रभाष्यम् – 'पृथिव्यादि प्रकृत्यन्तं भूतं भव्यं भवच्च यत् ।

विष्णुरेको बिभर्तीदं नान्यस्तस्मात् क्षमो धृतौ ।।' - इति च स्कान्दे।

ಅನುವಾದ- ವಿಷ್ಣುವಿನಲ್ಲಿ ಈ ಜಗತ್ತು ಆಶ್ರಯವನ್ನು ಪಡೆದಿದೆ ಎಂದು ಸ್ಕಾಂದಪುರಾಣದಲ್ಲಿಯೂ ಹೇಳಲಾಗಿದೆ. ಭೂಮಿಯಿಂದ ಪ್ರಕೃತಿಯವರೆಗೆ ಹಿಂದಿನ, ಈಗಿನ ಮುಂದಿನ ಎಲ್ಲ ವಸ್ತುಗಳನ್ನು ವಿಷ್ಣುವೇ ಧಾರಣೆ ಮಾಡಿದ್ದಾನೆ. ಬೇರೆ ಯಾರೂ ಸಹ ಅದನ್ನು ಧಾರಣೆ ಮಾಡಲು ಸಮರ್ಥರಲ್ಲ.

ಪ್ರತಿಪದಾರ್ಥ -- ವಿಷ್ಣುವಿನಲ್ಲಿ ಸರ್ವಾಧಾರತ್ವವಿದ್ದಂತೆ ಬೇರೆಯವರಲ್ಲಿಯೂ ಸಹ ಸರ್ವಾಧಾರತ್ವ ಇರಬಹುದಲ್ಲವೆ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ. ಯತ್ = ಯಾವ, ಭೂತಂ = ಹಿಂದಿನ, ಭವ್ಯಂ = ಮುಂದಿನ, ಭವಚ್ಚ = ಈಗಿನ, ಪೃಥಿವ್ಯಾದಿ = ಪೃಥಿವಿಯಿಂದ ಆರಂಭಿಸಿ, ಪ್ರಕೃತ್ಯಂತಂ = ಮೂಲಪ್ರಕೃತಿಯ ಪರ್ಯಂತ ಇರುವ, ಇದಂ = ಈ ಜಗತ್ತನ್ನು, ವಿಷ್ಣುರೇವ = ವಿಷ್ಣು ಒಬ್ಬನೇ, ಬಿಭರ್ತಿ = ಧಾರಣೆ ಮಾಡಿದ್ದಾನೆ, ತಸ್ಮಾತ್ = ಆ ವಿಷ್ಣುವಿನ ದೆಸೆಯಿಂದ, ಅನ್ಯಃ = ಬೇರೆಯವನು, ಧೃತೌ = ಧಾರಣೆ ಮಾಡಲು, ನ ಕ್ಷಮಃ = ಸಮರ್ಥನಲ್ಲ, ಇತಿ = ಹೀಗೆ, ಸ್ಕಾಂದೇ = ಸ್ಕಾಂದ ಪುರಾಣದಲ್ಲಿ ಹೇಳಿದೆ.

ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ

ಸತ್ತರ್ಕದೀಪಾವಳಿ

ಲಕ್ಷ್ಮೀ ಅಕ್ಷರಳೆನ್ನಲು ಆಧಾರ

सत्तर्कदीपावलिः – ।। अक्षरमम्बरान्तधृतेः ।। १-३-१० ।।

तद्वा 'एतदक्षरं गार्गि अदृष्टं द्रष्टृश्रुतं श्रोत्रमतं मन्तृ' इत्यादि श्रूयते । अत्र परमेश्वरधर्मादृष्टत्वादिगुणत्वेनोच्यमानमक्षरं लक्ष्मीतत्वं भवेत् । 'एतस्य वा अक्षरस्य प्रशासने गार्गि सूर्याचन्द्रमसौ विधृतौ तिष्ठतः' इत्यादिना चन्द्राद्याधारत्वेन विष्णोरुक्तत्वात् चन्द्राद्याधारत्वस्य गुणत्वेन लक्ष्म्या उक्तत्वात् 'अहं सोममाहनसं बिभर्म्यहं त्वष्टारमुत पूषणं भगम्' इति ।

ಪೂರ್ವಪಕ್ಷ - 'ತದ್ವಾ ಏತದ್ಭೃತದಕ್ಷರಂ ಗಾರ್ಗಿ' ಅದೃಷ್ಟಂ ದ್ರಷ್ಟೃಶ್ರುತಂ ಶೋತ್ರಮತಂ ಮಂತೃ' ಇತ್ಯಾದಿಯಾಗಿ ಅಕ್ಷರನಲ್ಲಿ ಅನೇಕಗುಣಗಳು ಕೇಳಿಸುತ್ತಿವೆ, ಈ ಎಲ್ಲ ಗುಣಗಳು ಪರಮಾತ್ಮನಲ್ಲಿ ಒಪ್ಪಲು ಸಾಧ್ಯವಾಗದ ಕಾರಣ ಲಕ್ಷ್ಮೀದೇವಿಯೇ ಅಕ್ಷರ ಶಬ್ದದಿಂದ ಪ್ರತಿಪಾದ್ಯಳಾಗುತ್ತಾಳೆ. 'ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ ಸೂರ್ಯಾಚಂದ್ರಮಸೌ ವಿಧೃತೌ ತಿಷ್ಠತಃ' ಇತ್ಯಾದಿ ವಾಕ್ಯದಿಂದ ಹೇಳಲ್ಪಟ್ಟ ಚಂದ್ರಾದ್ಯಾಧಾರತ್ವ ಎಂಬ ಗುಣವು ಲಕ್ಷ್ಮಿಯಲ್ಲಿಯೇ ಯುಕ್ತವಾಗುತ್ತದೆ. ಏಕೆಂದರೆ 'ಅಹಂ ಸೋಮಮಾಹನಸಂ ಬಿಭರ್ಮ್ಯಹಂ ತ್ವಷ್ಟಾರಮುತ ಪೂಷಣಂ ಭಗಮ್' ಎಂಬುದಾಗಿ ಅಂಭ್ರಿಣೀ ಸೂಕ್ತದಲ್ಲಿ ಚಂದ್ರಾದ್ಯಾಧಾರತ್ವವು ಲಕ್ಷ್ಮಿಯ ಗುಣವೆಂದು ಹೇಳಲಾಗಿದೆ.

ಅಂಭ್ರಿಣೀಸೂಕ್ತದಲ್ಲಿ ರುದ್ರಾದ್ಯಾಧಾರತ್ವ

सत्तर्कदीपावलिः – अत्राहनसशब्देन आसमन्ताद् हन्तृत्वाद् रुद्र उच्यते । सोमशब्दस्त्वमया सहितः सोम इति रुद्रविशेषणमपि भवति । 'अक्षरमदृष्टं द्रष्टृ'

इत्यादिना यदक्षरं तदन्यैरदृष्टत्वादिकं चोच्यते तल्लक्ष्मीतत्वस्यापि सम्भवतीत्येवं पूर्वपक्षयति अदृश्यत्वेत्यादिना ।।

ಇಲ್ಲಿರುವ 'ಆಹನಸಂ' ಎಂಬ ಶಬ್ದದಿಂದ 'ಆಸಮಂತಾತ್ ಹಂತೃತ್ವಾತ್' ಎಂಬ ವ್ಯುತ್ಪತ್ತಿಯನ್ನು ವಿವಕ್ಷಿಸಿದಾಗ ಸಂಹಾರಕಾರಕನಾದ ರುದ್ರ ಎಂಬ ಅರ್ಥ ಬರುತ್ತದೆ. 'ಸೋಮಂ' ಎಂದರೆ ಉಮಾದೇವಿಯಿಂದ ಸಹಿತನಾದ ರುದ್ರನನ್ನು ಎಂದರ್ಥ. ಇನ್ನು 'ಅಕ್ಷರಂ ಅದೃಷ್ಟಂ ದ್ರಷ್ಟೃ' ಇತ್ಯಾದಿ ವಾಕ್ಯದಿಂದ ಅಕ್ಷರತತ್ವಕ್ಕೆ ಹೇಳಲ್ಪಟ್ಟ ಅದೃಶ್ಯತ್ವಾದಿಗುಣಗಳೂ ಸಹ ಲಕ್ಷ್ಮೀದೇವಿಯಲ್ಲಿಯೇ ಯುಕ್ತವಾಗುತ್ತವೆ. ಆದ್ದರಿಂದ ಅಕ್ಷರಶಬ್ದದಿಂದ ವಾಚ್ಯಳಾದವಳು ಲಕ್ಷ್ಮೀದೇವಿ ಎಂದು ಪೂರ್ವಪಕ್ಷ. ಇದನ್ನು 'ಅದೃಶ್ಯತ್ವಾದಿಗುಣಾಃ' ಇತ್ಯಾದಿ ವಾಕ್ಯಗಳಿಂದ ತೋರಿಸಿರುತ್ತಾರೆ.

ಸಿದ್ಧಾಂತ ಮಂಡನೆ

सत्तर्कदीपावलिः – सिद्धान्तयति अक्षरमित्यादिना ।। अत्राक्षरशब्देन विष्णुरुच्यते न लक्ष्मीः । 'यद् भूतं च भवच्च भविष्यच्चेत्याचक्षते । आकाश एव तदोतं च प्रोतं च । एतस्मिन् खल्वक्षरे गार्ग्याकाश ओतश्च प्रोतश्च' इति सर्वाधारतयोक्ताकाशशब्दगृहीतलक्ष्म्याधाराक्षराज्ञानिमित्तजगद्धारण-निमित्तश्रवणादप्यत्राक्षरशब्देन विष्णुरुच्यते । विष्ण्वाज्ञया जगद्धारणस्य सप्तेत्यादिवचनसिद्धत्वात् ।

ಸಿದ್ಧಾಂತ - ಈ ಪೂರ್ವಪಕ್ಷವನ್ನು ನಿರಾಕರಿಸುವುದಕ್ಕಾಗಿ 'ಅಕ್ಷರಂ ಅಂಬರಾಂತಧೃತೇಃ' ಎಂಬ ಸೂತ್ರವನ್ನು ರಚಿಸುತ್ತಿದ್ದಾರೆ ಅಕ್ಷರಶಬ್ದದಿಂದ ವಾಚ್ಯನಾದವನು ವಿಷ್ಣುವೇ ಹೊರತು, ಮಹಾಲಕ್ಷ್ಮಿಯಲ್ಲ. ಏಕೆಂದರೆ 'ಏತಸ್ಮಿನ್ ಖಲ್ವಕ್ಷರೇ ಗಾರ್ಗಿ ಆಕಾಶ ಓತಶ್ಚ ಪ್ರೋತಶ್ಚ' ಎಂಬ ಶ್ರುತಿಯಲ್ಲಿ ಆಕಾಶಶಬ್ದದಿಂದ ಲಕ್ಷ್ಮೀದೇವಿಯನ್ನು ವಿವಕ್ಷಿಸಿ ಲಕ್ಷ್ಮೀದೇವಿಯ ತನಕ ಸಮಸ್ತ ಚರಾಚರಾತ್ಮಕ ಪ್ರಪಂಚವನ್ನು ಧಾರಣೆ ಮಾಡಿರುವಿಕೆ ಎಂಬ ಗುಣವನ್ನು ಹೇಳಲಾಗಿದೆ. ಇಂತಹ ಸಮಸ್ತ ಜಗತ್ತನ್ನು ಗ್ರಹಿಸಿರುವಿಕೆಯು ವಿಷ್ಣುವಿನಲ್ಲಿ ಮಾತ್ರ ಉಪಪನ್ನವಾಗುವುದರಿಂದ ವಿಷ್ಣುವೇ ಅಕ್ಷರ ಶಬ್ದದಿಂದ ಪ್ರತಿಪಾದ್ಯನಾಗುತ್ತಾನೆ. ಏಕೆಂದರೆ ಸಮಸ್ತ ಜಗತ್ತಿನಲ್ಲಿರುವ

ಸಕಲಪದಾರ್ಥಗಳೂ ವಿಷ್ಣುವಿನ ಆಜ್ಞೆಯಿಂದಲೇ ತಮ್ಮ ತಮ್ಮ ಸ್ಥಾನದಲ್ಲಿ ನೆಲೆಸಿವೆ ಎಂಬುದಾಗಿ 'ಸಪ್ತಾರ್ಧಗರ್ಭಾ' ಇತ್ಯಾದಿ ಶ್ರುತಿಯು ಹೇಳುತ್ತಿದೆ.

'ಸಪ್ತಾರ್ಧಗರ್ಭಾ' ಎಂಬ ಶ್ರುತಿಯಲ್ಲಿರುವ ಕಠಿಣಪದಾರ್ಥ

सत्तर्कदीपावलिः – सप्त महदहङ्कारपञ्चभूताख्याः पदार्थाः आ समन्ताद् ऋद्धो गर्भो ब्रह्माण्डाख्यो येषां ते ऋद्धगर्भाः । वननीयो भजनीयश्चेति भुवनस्य विष्णोः रेतःस्थानीयाः ते तस्य प्रदिशा आदेशेन आज्ञया विधर्मणि विधारणे तिष्ठन्ति आज्ञयैव धृता इत्यर्थः ।।

'ತತ್ವ' ಎಂಬ ಪದಕ್ಕೆ ಮಹತ್ತತ್ವ, ಅಂಹಕಾರತತ್ವ, ಪಂಚಭೂತಗಳೆಂಬ ಏಳು ಪದಾರ್ಥಗಳು ಎಂದರ್ಥ. ಇವುಗಳೇ ಆವರಣವಾಗಿವುಳ್ಳ ಬ್ರಹ್ಮಾಂಡವು ಮತ್ತು ಅವುಗಳ ಅಭಿಮಾನಿಗಳಾದ ಬ್ರಹ್ಮಾದಿದೇವತೆಗಳು ಎಂಬ ಅರ್ಥವನ್ನು 'ಸಪ್ತಾರ್ಧಗರ್ಭಾ' ಎಂಬ ಮಾತಿಗೆ ತಿಳಿಯಬೇಕು. 'ಭುವನಸ್ಯ' ಎಂಬ ಪದಕ್ಕೆ 'ವನನೀಯಃ ಭಜನೀಯಃ' ಎಂಬ ವ್ಯುತ್ಪತ್ತಿಯಿಂದ ವಿಷ್ಣು ಎಂದರ್ಥ. ಇಂತಹ ವಿಷ್ಣುವಿನ ರೇತಸ್ಸಿನ ಸ್ಥಾನದಲ್ಲಿರುವ ಬ್ರಹ್ಮಾದಿದೇವತೆಗಳು ಅವನ ಆಜ್ಞೆಯಿಂದಲೇ ತಮ್ಮ ವಿವಿಧವಾದ ಧಾರಣಾದಿ ಕಾರ್ಯಗಳಲ್ಲಿ ತೊಡಗಿದ್ದಾರೆ ಎಂದರ್ಥ.

ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ

ತತ್ವಪ್ರದೀಪ

ಮಹಾಲಕ್ಷ್ಮಿಯು ಅಕ್ಷರಳೆಂದು ಪೂರ್ವಪಕ್ಷ

तत्वप्रदीपः – अदृश्यत्वादिगुणाः ''तद्वा एतदक्षरं गार्ग्यदृष्टं द्रष्टृश्रुतं श्रोतृ'' इत्यादिनाऽक्षरस्यैवोच्यन्ते । तच्च ''एतस्य वा अक्षरस्य प्रशासने गार्गि सूर्याचन्द्रमसौ विधृतौ तिष्ठतः'' इत्यादिना सूर्यादिविधारणान्मध्यमाक्षरं

इत्यादिना यदक्षरं तदन्यैरदृष्टत्वादिकं चोच्यते तल्लक्ष्मीतत्वस्यापि सम्भवतीत्येवं पूर्वपक्षयति अदृश्यत्वेत्यादिना ।।

ಇಲ್ಲಿರುವ 'ಆಹನಸಂ' ಎಂಬ ಶಬ್ದದಿಂದ 'ಆಸಮಂತಾತ್ ಹಂತೃತ್ವಾತ್' ಎಂಬ ವ್ಯುತ್ಪತ್ತಿಯನ್ನು ವಿವಕ್ಷಿಸಿದಾಗ ಸಂಹಾರಕಾರಕನಾದ ರುದ್ರ ಎಂಬ ಅರ್ಥ ಬರುತ್ತದೆ. 'ಸೋಮಂ' ಎಂದರೆ ಉಮಾದೇವಿಯಿಂದ ಸಹಿತನಾದ ರುದ್ರನನ್ನು ಎಂದರ್ಥ. ಇನ್ನು 'ಅಕ್ಷರಂ ಅದೃಷ್ಟಂ ದ್ರಷ್ಟೃ' ಇತ್ಯಾದಿ ವಾಕ್ಯದಿಂದ ಅಕ್ಷರತತ್ವಕ್ಕೆ ಹೇಳಲ್ಪಟ್ಟ ಅದೃಶ್ಯತ್ವಾದಿಗುಣಗಳೂ ಸಹ ಲಕ್ಷ್ಮೀದೇವಿಯಲ್ಲಿಯೇ ಯುಕ್ತವಾಗುತ್ತವೆ. ಆದ್ದರಿಂದ ಅಕ್ಷರಶಬ್ದದಿಂದ ವಾಚ್ಯಳಾದವಳು ಲಕ್ಷ್ಮೀದೇವಿ ಎಂದು ಪೂರ್ವಪಕ್ಷ. ಇದನ್ನು 'ಅದೃಶ್ಯತ್ವಾದಿಗುಣಾಃ' ಇತ್ಯಾದಿ ವಾಕ್ಯಗಳಿಂದ ತೋರಿಸಿರುತ್ತಾರೆ.

ಸಿದ್ಧಾಂತ ಮಂಡನೆ

सत्तर्कदीपावलिः – सिद्धान्तयति अक्षरमित्यादिना ।। अत्राक्षरशब्देन विष्णुरुच्यते न लक्ष्मीः । 'यद् भूतं च भवच्च भविष्यच्चेत्याचक्षते । आकाश एव तदोतं च प्रोतं च । एतस्मिन् खल्वक्षरे गार्ग्याकाश ओतश्च प्रोतश्च' इति सर्वाधारतयोक्ताकाशशब्दगृहीतलक्ष्म्याधाराक्षराज्ञानिमित्तजगद्धारण-निमित्तश्रवणादप्यत्राक्षरशब्देन विष्णुरुच्यते । विष्ण्वाज्ञया जगद्धारणस्य सप्तेत्यादिवचनसिद्धत्वात् ।

ಸಿದ್ಧಾಂತ - ಈ ಪೂರ್ವಪಕ್ಷವನ್ನು ನಿರಾಕರಿಸುವುದಕ್ಕಾಗಿ 'ಅಕ್ಷರಂ ಅಂಬರಾಂತಧೃತೇಃ' ಎಂಬ ಸೂತ್ರವನ್ನು ರಚಿಸುತ್ತಿದ್ದಾರೆ ಅಕ್ಷರಶಬ್ದದಿಂದ ವಾಚ್ಯನಾದವನು ವಿಷ್ಣುವೇ ಹೊರತು, ಮಹಾಲಕ್ಷ್ಮಿಯಲ್ಲ. ಏಕೆಂದರೆ 'ಏತಸ್ಮಿನ್ ಖಲ್ವಕ್ಷರೇ ಗಾರ್ಗಿ ಆಕಾಶ ಓತಶ್ಚ ಪ್ರೋತಶ್ಚ' ಎಂಬ ಶ್ರುತಿಯಲ್ಲಿ ಆಕಾಶಶಬ್ದದಿಂದ ಲಕ್ಷ್ಮೀದೇವಿಯನ್ನು ವಿವಕ್ಷಿಸಿ ಲಕ್ಷ್ಮೀದೇವಿಯ ತನಕ ಸಮಸ್ತ ಚರಾಚರಾತ್ಮಕ ಪ್ರಪಂಚವನ್ನು ಧಾರಣೆ ಮಾಡಿರುವಿಕೆ ಎಂಬ ಗುಣವನ್ನು ಹೇಳಲಾಗಿದೆ. ಇಂತಹ ಸಮಸ್ತ ಜಗತ್ತನ್ನು ಗ್ರಹಿಸಿರುವಿಕೆಯು ವಿಷ್ಣುವಿನಲ್ಲಿ ಮಾತ್ರ ಉಪಪನ್ನವಾಗುವುದರಿಂದ ವಿಷ್ಣುವೇ ಅಕ್ಷರ ಶಬ್ದದಿಂದ ಪ್ರತಿಪಾದ್ಯನಾಗುತ್ತಾನೆ. ಏಕೆಂದರೆ ಸಮಸ್ತ ಜಗತ್ತಿನಲ್ಲಿರುವ

ಸಕಲಪದಾರ್ಥಗಳೂ ವಿಷ್ಣುವಿನ ಆಜ್ಞೆಯಿಂದಲೇ ತಮ್ಮ ತಮ್ಮ ಸ್ಥಾನದಲ್ಲಿ ನೆಲೆಸಿವೆ ಎಂಬುದಾಗಿ 'ಸಪ್ತಾರ್ಧಗರ್ಭಾ' ಇತ್ಯಾದಿ ಶ್ರುತಿಯು ಹೇಳುತ್ತಿದೆ.

'ಸಪ್ತಾರ್ಧಗರ್ಭಾ' ಎಂಬ ಶ್ರುತಿಯಲ್ಲಿರುವ ಕಠಿಣಪದಾರ್ಥ

सत्तर्कदीपावलिः – सप्त महदहङ्कारपञ्चभूताख्याः पदार्थाः आ समन्ताद् ऋद्धो गर्भो ब्रह्माण्डाख्यो येषां ते ऋद्धगर्भाः । वननीयो भजनीयश्चेति भुवनस्य विष्णोः रेतःस्थानीयाः ते तस्य प्रदिशा आदेशेन आज्ञया विधर्मणि विधारणे तिष्ठन्ति आज्ञयैव धृता इत्यर्थः ।।

'ತತ್ವ' ಎಂಬ ಪದಕ್ಕೆ ಮಹತ್ತತ್ವ, ಅಂಹಕಾರತತ್ವ, ಪಂಚಭೂತಗಳೆಂಬ ಏಳು ಪದಾರ್ಥಗಳು ಎಂದರ್ಥ. ಇವುಗಳೇ ಆವರಣವಾಗಿವುಳ್ಳ ಬ್ರಹ್ಮಾಂಡವು ಮತ್ತು ಅವುಗಳ ಅಭಿಮಾನಿಗಳಾದ ಬ್ರಹ್ಮಾದಿದೇವತೆಗಳು ಎಂಬ ಅರ್ಥವನ್ನು 'ಸಪ್ತಾರ್ಧಗರ್ಭಾ' ಎಂಬ ಮಾತಿಗೆ ತಿಳಿಯಬೇಕು. 'ಭುವನಸ್ಯ' ಎಂಬ ಪದಕ್ಕೆ 'ವನನೀಯಃ ಭಜನೀಯಃ' ಎಂಬ ವ್ಯುತ್ಪತ್ತಿಯಿಂದ ವಿಷ್ಣು ಎಂದರ್ಥ. ಇಂತಹ ವಿಷ್ಣುವಿನ ರೇತಸ್ಸಿನ ಸ್ಥಾನದಲ್ಲಿರುವ ಬ್ರಹ್ಮಾದಿದೇವತೆಗಳು ಅವನ ಆಜ್ಞೆಯಿಂದಲೇ ತಮ್ಮ ವಿವಿಧವಾದ ಧಾರಣಾದಿ ಕಾರ್ಯಗಳಲ್ಲಿ ತೊಡಗಿದ್ದಾರೆ ಎಂದರ್ಥ.

ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ

ತತ್ವಪ್ರದೀಪ

ಮಹಾಲಕ್ಷ್ಮಿಯು ಅಕ್ಷರಳೆಂದು ಪೂರ್ವಪಕ್ಷ

तत्वप्रदीपः – अदृश्यत्वादिगुणाः ''तद्वा एतदक्षरं गार्ग्यदृष्टं द्रष्टृश्रुतं श्रोतृ'' इत्यादिनाऽक्षरस्यैवोच्यन्ते । तच्च ''एतस्य वा अक्षरस्य प्रशासने गार्गि सूर्याचन्द्रमसौ विधृतौ तिष्ठतः'' इत्यादिना सूर्यादिविधारणान्मध्यमाक्षरं

ಭವಿತುಮರ್ಹತಿ । ''ಅಹಂ ಸೋಮಮಾಹನಸಂ ಬಿಭರ್ಮ್ಯಹಂ ತ್ವಷ್ಟಾರಮುತ ಪೂಷಣಂ ಭಗಮ್'' ಇತಿ ಮಧ್ಯಮಾಕ್ಷರಸ್ಯ ಸೂರ್ಯಾದಿವಿಧಾರಕತ್ವಶ್ರುತೇಃ । ಆಹನಸಮ್ ಆ ಸಮನ್ತಾತ್ ಹನ್ತಾರಂ ಸಂಹರ್ತಾರಮಿತ್ಯರ್ಥಃ । ಯದ್ಯಪ್ಯದೃಶ್ಯತ್ವಾದಯೋ ವಿಷ್ಣೋಸ್ಸಮ್ಭವನ್ತಿ ತಥಾऽಪ್ಯಕ್ಷರಶಬ್ದಸ್ಯಾನ್ಯತ್ರಾಪಿ ಪ್ರಸಿದ್ಧೇರುಕ್ತಯುಕ್ತೇಶ್ಚ ಮಧ್ಯಮಾಕ್ಷರಸ್ಯಾಪಿ ಸಮ್ಭವಾದತ್ರ ತಸ್ಯೋಕ್ತಾ ಇತ್ಯತ ಆಹ – 'ಅಕ್ಷರಮಮ್ಬರಾನ್ತಧೃತೇಃ' ।।

ಅದೃಶ್ಯತ್ವಾದಿಗುಣಗಳು ಮಧ್ಯಮಾಕ್ಷರದಲ್ಲಿಯೂ ಕೂಡ ಶ್ರುತವಾಗಿವೆ. ಛಾಂದೋಗ್ಯೋಪನಿಷತ್ತಿನ ಅಕ್ಷರಬ್ರಾಹ್ಮಣದ ಕೊನೆಯ ಬ್ರಾಹ್ಮಣದಲ್ಲಿರುವ ಉಪನಿಷತ್ತಿನ ವಾಕ್ಯ ಹೀಗಿದೆ - ತದ್ವಾ ಏತದಕ್ಷರಂ ಗಾರ್ಗಿ ಅದೃಷ್ಟಂ ದೃಷ್ಟ್ರ, ಅಶ್ರುತಂ ಶ್ರೋತೃ' ಎಲೈ ಗಾರ್ಗಿಯೇ ಈ ಅಕ್ಷರಶಬ್ದವಾಚ್ಯವಾದದ್ದು ಬೇರೆಯವರಿಂದ ಪೂರ್ಣವಾಗಿ ತಿಳಿಯಲು ಸಾಧ್ಯವಿಲ್ಲ. ತಾನು ಮಾತ್ರ ಎಲ್ಲವನ್ನು ನೋಡುವ ಸಾಮರ್ಥ್ಯವನ್ನು ಹೊಂದಿದೆ. ಬೇರೆಯವರಿಗೆ ಸಂಪೂರ್ಣವಾಗಿ ಹೇಳಿ ತಿಳಿಸಲು ಸಾಧ್ಯವಿಲ್ಲ. ಇತ್ಯಾದಿಯಾಗಿ ಅಕ್ಷರ ಶಬ್ದವಾಚ್ಯವಾದ ವಸ್ತುವಿನಲ್ಲಿಯೇ ಅದೃಶ್ಯತ್ವವು ಶ್ರುತವಾಗಿದೆ. ಈ ಅಕ್ಷರಶಬ್ದವಾಚ್ಯವಾದ ವಸ್ತು ಯಾವುದು ? ಎಂಬ ಪ್ರಶ್ನೆಯು ಪ್ರಾಪ್ತವಾದಾಗ ಇದೇ ವಿಷಯವಾಕ್ಯದ ಹಿಂದೆ ಪ್ರಸಕ್ತವಾಗಿರುವ ವಾಕ್ಯಸಂದರ್ಭ ಹೀಗಿದೆ - 'ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ ಸೂರ್ಯಾಚಂದ್ರಮಸೌ ವಿಧೃತೌ ತಿಷ್ಠತಃ' ಅಕ್ಷರನಿಂದಲೇ ಸೂರ್ಯ, ಚಂದ್ರ ಮೊದಲಾದವರು ತಮ್ಮ ತಮ್ಮ ಸ್ಥಾನದಲ್ಲಿ ಪ್ರಸ್ತವಾಗಿದ್ದಾರೆ. ಇತ್ಯಾದಿಯಾಗಿ ಸೂರ್ಯಚಂದ್ರಾದ್ಯಾಧಾರತತ್ವವನ್ನು ಹೇಳಲಾಗಿದೆ. ಆದ್ದರಿಂದ ಮಧ್ಯಮಾಕ್ಷರವೆನಿಸಿದ ಮಹಾಲಕ್ಷ್ಮೀಯೇ ಅಕ್ಷರಳೆನಿಸುತ್ತಾಳೆ ಹೊರತು, ಉತ್ತಮಾಕ್ಷರವೆನಿಸಿದ ಭಗವಂತನು ಅಕ್ಷರ ಆಗಲು ಸಾಧ್ಯವಿಲ್ಲ.

ಮತ್ತು 'ಅಹಂ ಸೋಮಮಾಹನಸಂ ಬಿಭರ್ಮ್ಯಹಂ ತ್ವಷ್ಟಾರಮುತ ಪೂಷಣಂ ಭಗಮ್' ಎಂಬ ಅಂಭ್ರಿಣೀಸೂಕ್ತದಲ್ಲಿ ನಾನು ಸಂಹಾರಕನಾದ ಚಂದ್ರನನ್ನು ಧರಿಸಿದ್ದೇನೆ. ತ್ವಷ್ಟ್ರ, ಪೂಷ, ಸೂರ್ಯ ಮೊದಲಾದವರನ್ನೂ ಕೂಡ ಧರಿಸಿದ್ದೇನೆ ಎಂದು ಅಕ್ಷರಶಬ್ದವಾಚ್ಯಳಾದ ಲಕ್ಷ್ಮೀದೇವಿಯು ಹೇಳಿದ್ದಾಳೆ. ಆದ್ದರಿಂದ ಅಂಭ್ರಿಣೀಸೂಕ್ತದಲ್ಲಿ ಯಾವ ಸೂರ್ಯಚಂದ್ರಾದ್ಯಾ-ಧಾರಕತ್ವವು ಶ್ರುತವಾಗಿಯೋ, ಅದೇ ಧರ್ಮವು ಪ್ರಕೃತ ಬೃಹದಾರಣ್ಯಕದ ಅಕ್ಷರಬ್ರಾಹ್ಮಣ-

ದಲ್ಲಿಯೂ ಕೂಡ ಪ್ರಸಕ್ತವಾಗಿದೆ. ಹೀಗೆ ಶ್ರುತಿಸಂವಾದವಿರುವುದರಿಂದ ಮಧ್ಯಮಾಕ್ಷರಳೆನಿಸಿದ ಲಕ್ಷ್ಮ್ಯಯೇ ಅಕ್ಷರ ಎಂದು ಕರೆಸಿಕೊಳ್ಳಲು ಅರ್ಹಳಾಗಿದ್ದಾಳೆ.

'ಅಹಂ ಸೋಮಮಾಹನಸಮ್' ಎಂಬಲ್ಲಿರುವ 'ಆಹನಸಮ್' ಎಂಬ ಪದಕ್ಕೆ 'ಆಹಂತೀತಿ ಆಹನಸಮ್' ಎಂಬ ನಿಷ್ಪತ್ತಿಯಂತೆ ಎಲ್ಲವನ್ನೂ ಸಂಹಾರ ಮಾಡುವ ಎಂದರ್ಥ.

ವಾಸ್ತವಿಕವಾಗಿ ಅದೃಶ್ಯತ್ವಾದಿಗುಣಗಳನ್ನು ವಿಷ್ಣುವಿನಲ್ಲಿ ಈಗಾಗಲೇ ಸಮನ್ವಯ ಮಾಡಿದ್ದಾಗಿದೆ. ಆದರೂ ಕೂಡ ಅದೃಶ್ಯತ್ವಾದಿಗುಣಗಳನ್ನು ಅಕ್ಷರಶಬ್ದವಾಚ್ಯನಲ್ಲಿ ಹೇಳಿರುವುದರಿಂದ ಈಗಾಗಲೇ ಶ್ರುತಿಸಂವಾದಾದಿ ಆಧಾರಗಳನ್ನು ನೀಡಿರುವುದರಿಂದ ಮಧ್ಯಮಾಕ್ಷರದಲ್ಲಿಯೂ ಕೂಡ ಅದೃಶ್ಯತ್ವಾದಿಗುಣಗಳನ್ನು ಕೂಡಿಸಬಹುದು. ಆದ್ದರಿಂದ ಅಕ್ಷರಾಧಿಕರಣದಿಂದ ಅದೃಶ್ಯತ್ವಾದಿಗುಣಗಳನ್ನು ಮಹಾಲಕ್ಷ್ಮ್ಯಲ್ಲಿಯೇ ವಿವಕ್ಷಿಸಲಾಗಿದೆ. ಹಾಗಾಗಿ ಅಕ್ಷರಶಬ್ದದಿಂದ ಮಹಾವಿಷ್ಣುವು ಪ್ರತಿಪಾದ್ಯನಾಗುವುದಿಲ್ಲ. ಮಹಾಲಕ್ಷ್ಮ್ಯೇ ಪ್ರತಿಪಾದ್ಯಳಾಗುತ್ತಾಳೆ ಎಂದು ಪೂರ್ವಪಕ್ಷ.

ಈ ಪೂರ್ವಪಕ್ಷವನ್ನು ನಿರಾಕರಣೆ ಮಾಡುವುದಕ್ಕಾಗಿಯೇ 'ಅಕ್ಷರಮಂಬರಾಂತಧೃತೇಃ' ಎಂಬ ಸೂತ್ರವು ಹೊರಟಿದೆ.

ಬೃಹದಾರಣ್ಯಕೋಪನಿಷತ್ತಿನ ಅಕ್ಷರಬ್ರಾಹ್ಮಣದಲ್ಲಿ ಯಾರು ಪ್ರತಿಪಾದ್ಯರು ?

ವಿಶೇಷವಿಚಾರ - ಬೃಹದಾರಣ್ಯಕೋಪನಿಷತ್ತಿನ ಅಕ್ಷರಬ್ರಾಹ್ಮಣದ ಸಂಪೂರ್ಣ ಪ್ರಕರಣವನ್ನು ಈ ಅಧಿಕರಣದಲ್ಲಿ ಸಮನ್ವಯ ಮಾಡಲಾಗುತ್ತಿದೆ. ತನ್ಮೂಲಕವಾಗಿ ಅಕ್ಷರಶಬ್ದದಿಂದ ಪ್ರತಿಪಾದ್ಯನಾದವನು ಮಹಾವಿಷ್ಣುವೊಬ್ಬನೇ ಆಗಿದ್ದಾನೆಂಬ ಪ್ರಮೇಯವು ಸಿದ್ಧವಾಗುತ್ತದೆ. ಈ ಅಧಿಕರಣವನ್ನು ಅಧ್ಯಯನ ಮಾಡಲು ಬೃಹದಾರಣ್ಯಕೋಪನಿಷತ್ತಿನ ಅಕ್ಷರಬ್ರಾಹ್ಮಣವನ್ನು ಆಮೂಲಾಗ್ರವಾಗಿ ತಿಳಿಯಬೇಕು. ಅಕ್ಷರಬ್ರಾಹ್ಮಣದ ಸಂಪೂರ್ಣ ಪ್ರಕರಣ ಹೀಗಿದೆ -

> ಅಥ ಹ ವಾಚಕ್ನವ್ಯುವಾಚ । ಬ್ರಾಹ್ಮಣಾ ಭಗವಂತೋ ಹಂತಾಹಮಿಮಂ ದ್ವೌ ಪ್ರಶ್ನೌ ಪ್ರಕ್ಷ್ಯಾಮಿ । ತೌ ಚೇನ್ಮೇ ವಕ್ಷ್ಯತಿ, ನ ವೈ ಜಾತು ಯುಷ್ಮಾಕಮಿಮಂ ಕಶ್ಚಿದ್ ಬ್ರಹ್ಮೋದ್ಯಂ ಜೇತೇತಿ । ಪೃಚ್ಛ ಗಾರ್ಗಿ ಇತಿ।

ಅನಂತರ ವಾಚಕ್ನವಿನ ಮಗಳಾದ ಗಾರ್ಗಿಯು ಹೇಳಿದಳು. ಪೂಜ್ಯ ಬ್ರಾಹ್ಮಣರೇ, ನೀವು ಅನುಮತಿ ಕೊಟ್ಟರೆ ನಾನು ಈ ಯಾಜ್ಞವಲ್ಕ್ಯರನ್ನು ಕುರಿತು ಎರಡು ಪ್ರಶ್ನೆಗಳನ್ನು ಕೇಳುತ್ತೇನೆ. ಅವರು ನನಗೆ ಈ ಪ್ರಶ್ನೆಗಳಿಗೆ ಉತ್ತರ ಹೇಳಿದರೆ ನಿಮ್ಮಲ್ಲಿ ಯಾರೂ ಕೂಡ ಈ ಬ್ರಹ್ಮವಾದಿಯನ್ನು ಗೆಲ್ಲಲಾರಿರಿ ಬ್ರಾಹ್ಮಣರು ಗಾರ್ಗಿಯೇ, ಕೇಳು ಎಂದರು.

ಸಾ ಹೋವಾಚ । ಅಹಂ ವೈ ತ್ವಾ ಯಾಜ್ಞವಲ್ಕ್ಯ ಯಥಾಕಾಶ್ಯೋ ವಾ ವೈದೇಹೋ ವೋಗ್ರಪುತ್ರ ಉಜ್ಜ್ಯಂ ಧನುರಧಿಜ್ಯಂ ಕೃತ್ವಾದೌಬಾಣವಂತೌ ಸಪತ್ನಾತಿವ್ಯಾಧಿನೌ ಹಸ್ತೇ ಕೃತ್ವೋಪೋತ್ತಿಷ್ಠೇದ್ ಏವಮೇವಾಹಂ ದ್ವಾಭ್ಯಾಂ ಪ್ರಶ್ನಾಭ್ಯಾಮುಪೋದಸ್ಥಾಮ್ । ತೌ ಮೇ ಬ್ರೂಹೀತಿ । ಪೃಚ್ಛ ಗಾರ್ಗೀತಿ ।

ಗಾರ್ಗಿ ಹೇಳಿದಳು ಯಾಜ್ಞವಲ್ಕ್ಯರೇ, ನಾನು ನಿಮ್ಮಲ್ಲಿ ಎರಡು ಪ್ರಶ್ನೆಗಳನ್ನು ಕೇಳುತ್ತೇನೆ. ಕಾಶಿಯ ಅಥವಾ ವಿದೇಹದ ಪ್ರತಾಪಶಾಲಿ ರಾಜಕುಮಾರನು ಹೆದೆಯೇರಿಸದಿದ್ದ ಬಿಲ್ಲಿಗೆ ಹೆದೆಯೇರಿಸಿ, ಶತ್ರುಗಳಿಗೆ ಭಯಂಕರ ನೋವನ್ನುಂಟುಮಾಡುವ ಕಬ್ಬಿಣದ ಮೊನೆಯುಳ್ಳ ಎರಡು ಬಾಣಗಳನ್ನು ಕೈಯಲ್ಲಿ ಹಿಡಿದು ಹೇಗೆ ಶತ್ರುಗಳ ಮುಂದೆ ನಿಲ್ಲುವನೋ ಹಾಗೆಯೇ ನಾನು ಕೂಡ ಎರಡು ಪ್ರಶ್ನೆ ಸಿದ್ಧಪಡಿಸಿಕೊಂಡು ನಿಮ್ಮ ಬಳಿ ಬಂದಿರುವೆನು ನೀವು ನನ್ನ ಆ ಪ್ರಶ್ನೆಗೆ ಉತ್ತರ ಹೇಳಿರಿ. ಯಾಜ್ಞವಲ್ಕ್ಯರು ಹೇಳಿದರು. ಗಾರ್ಗಿ ಕೇಳು ಆ ಪ್ರಶ್ನೆಗಳನ್ನು.

ಸಾ ಹೋವಾಚ। ಯದೂರ್ಧ್ವಂ ಯಾಜ್ಞವಲ್ಕ್ಯ ದಿವೋ, ಯದರ್ವಾಕ್ ಪೃಥಿವ್ಯಾ, ಯದಂತರಾ ದ್ಯಾವಾಪೃಥಿವೀ ಇಮೇ ಯದ್ಭೂತಂ ಚ ಭವಚ್ಚ ಭವಿಷ್ಯಚ್ಚೇತ್ಯಾಚಕ್ಷತೇ ಕಸ್ಮಿಂಸ್ತದೋತಂ ಚ ಪ್ರೋತಂ ಚೇತಿ ।

ಗಾರ್ಗಿ ಕೇಳಿದಳು. ಸ್ವರ್ಗದಿಂದ ಮೇಲಿನ ಮಹರಾದಿ ಲೋಕಗಳು, ವೈಕುಂಠದಿಂದ ಮೇಲಿನ ಬ್ರಹ್ಮಾಂಡ ನವಾವರಣಗಳೂ, ಪೃಥಿವಿಯ ಕೆಳಗಿನ ಪಾತಾಳ ಲೋಕಗಳೂ, ಅವುಗಳಿಗಿಂತ ಕೆಳಗಿನ ಅಂಡೋದಕವೂ, ನಡುವೆ ಇರುವ ಸ್ವರ್ಗಾದಿ ಲೋಕಗಳು, ಪೃಥಿವ್ಯಾದಿ ಲೋಕಗಳೂ, ಭೂತ ವರ್ತಮಾನ ಭವಿಷ್ಯತ್ತುಗಳೆಂದು ಬಲ್ಲವರು ಹೇಳುವವೆಲ್ಲವೂ ಯಾವುದರಲ್ಲಿ ಓತಪ್ರೋತವಾಗಿ ಆಶ್ರಯಿಸಿಕೊಂಡಿವೆ ?

ಸ ಹೋವಾಚ । ಯದೂರ್ಧ್ವಂ ಗಾರ್ಗಿ ದಿವೋ, ಯದರ್ವಾಕ್ ಪೃಥಿವ್ಯಾ, ಯದಂತರಾ ದ್ಯಾವಾಪೃಥಿವೀ ಇಮೇ ಯದ್ಭೂತಂ ಚ ಭವಚ್ಚ ಭವಿಷ್ಯಚ್ಚ ಇತ್ಯಾಚಕ್ಷತೇ ಆಕಾಶೇ ತದೋತಂ ಚ ಪ್ರೋತಂ ಚೇತಿ ।

ಯಾಜ್ಞವಲ್ಕ್ಯರು ಹೇಳಿದರು. ಗಾರ್ಗಿ, ಸ್ವರ್ಗಕ್ಕಿಂತ ಮೇಲಿನ ಮಹರಾದಿ ಲೋಕಗಳೂ, ವೈಕುಂಠಕ್ಕಿಂತ ಮೇಲಿನ ಬ್ರಹ್ಮಾಂಡಾವರಣಗಳೂ, ಪೃಥಿವಿಗಿಂತ ಕೆಳಗಿನ ಪಾತಾಳಲೋಕಗಳಲ್ಲೂ, ಅವುಗಳಿಗಿಂತಲೂ ಕೆಳಗಿನ ಅಂಡೋದಕವೂ, ನಡುವೆ ಇರುವ ಸ್ವರ್ಗಾದಿ ಲೋಕಗಳೂ, ಪೃಥಿವ್ಯಾದಿ ಲೋಕಗಳೂ, ಭೂತ ವರ್ತಮಾನ ಭವಿಷತ್ತುಗಳೆಂದು ಬಲ್ಲವರು ಯಾವುದನ್ನು ಹೇಳುವರೋ ಅವೆಲ್ಲವೂ ಆಕಾಶನಾಮಕಳಾದ ಲಕ್ಷ್ಮೀದೇವಿಯಲ್ಲಿ ಓತಪ್ರೋತವಾಗಿ ಆಶ್ರಯಿಸಿಕೊಂಡಿವೆ.

ಸಾ ಹೋವಾಚ । ನಮಸ್ತೇऽಸ್ತು ಯಾಜ್ಞವಲ್ಕ್ಯ ಯೋ ಮ ಏತಂ ವ್ಯವೋಚಃ । ಅಥಾಪರಸ್ಮೈ ಧಾರಯಸ್ವೇತಿ । ಪೃಚ್ಛ ಗಾರ್ಗೀತಿ ।

ಗಾರ್ಗಿ ಹೇಳಿದಳು ಯಾಜ್ಞವಲ್ಕ್ಯರೇ, ನನ್ನ ಈ ಪ್ರಶ್ನೆಗೆ ಸರಿಯಾಗಿ ಉತ್ತರ ಹೇಳಿದಿರಿ. ನಿಮಗೆ ನಮಸ್ಕಾರ. ಇನ್ನೊಂದು ಪ್ರಶ್ನೆಗೆ ಸಿದ್ಧರಾಗಿರಿ. ಯಾಜ್ಞವಲ್ಕ್ಯರು ಹೇಳಿದರು 'ಗಾರ್ಗಿ' ಕೇಳು.

ಸಾ ಹೋವಾಚ । ಯದೂರ್ಧ್ವಂ ಯಾಜ್ಞವಲ್ಕ್ಯ ದಿವೋ, ಯದರ್ವಾಕ್ ಪೃಥಿವ್ಯಾ, ಯದಂತರಾ ದ್ಯಾವಾಪೃಥಿವೀ ಇಮೇ ಯದ್ಭೂತಂ ಚ ಭವಚ್ಚ ಭವಿಷ್ಯಚ್ಚೇತ್ಯಾಚಕ್ಷತೇ ಕಸ್ಮಿಂಸ್ತದೋತಂ ಚ ಪ್ರೋತಂ ಚೇತಿ ।

ಗಾರ್ಗಿ ಕೇಳಿದಳು. ಯಾಜ್ಞವಲ್ಕ್ಯರೇ, ಸ್ವರ್ಗಕ್ಕಿಂತ ಮೇಲಿರುವ ಮಹರಾದಿ ಲೋಕಗಳೂ, ವೈಕುಂಠಕ್ಕಿಂತ ಮೇಲಿನ ಬ್ರಹ್ಮಾಂಡಾವರಣಗಳೂ, ಪೃಥಿವಿಗಿಂತ ಕೆಳಗಿನ ಪಾತಾಳ ಲೋಕಗಳೂ, ಅವುಗಳಿಗಿಂತ ಕೆಳಗಿನ ಅಂಡೋದಕವೂ, ನಡುವೆ ಇರುವ ಸ್ವರ್ಗಾದಿ ಲೋಕಗಳೂ, ಪೃಥಿವ್ಯಾದಿ ಲೋಕಗಳೂ, ಭೂತ ವರ್ತಮಾನ ಭವಿಷತ್ತುಗಳೆಂದು ಬಲ್ಲವರು ಯಾವುದನ್ನು ಹೇಳುವರೋ ಅವೆಲ್ಲವೂ ಯಾವುದರಲ್ಲಿ ಓತಪ್ರೋತವಾಗಿ ಆಶ್ರಯಿಸಿಕೊಂಡಿವೆ?

ಸ ಹೋವಾಚ । ಯದೂರ್ಧ್ವಂ ಗಾರ್ಗಿ ದಿವೋ ಯದರ್ವಾಕ್ ಪೃಥಿವ್ಯಾ, ಯದಂತರಾ ದ್ಯಾವಾಪೃಥಿವೀ ಇಮೇ ಯದ್ಭೂತಂ ಚ ಭವಚ್ಚ ಭವಿಷ್ಯಚ್ಚ ಇತ್ಯಾಚಕ್ಷತ ಆಕಾಶ ಏವ ತದೋತಂ ಚ ಪ್ರೋತಂ ಚೇತಿ । ಕಸ್ಮಿನ್ ಖಲ್ವಾಕಾಶ ಓತಶ್ಚ ಪ್ರೋತಶ್ಚೇತಿ ।

ಯಾಜ್ಞವಲ್ಕ್ಯರು ಹೇಳಿದರು ಗಾರ್ಗಿ, ಸ್ವರ್ಗಕ್ಕಿಂತ ಮೇಲಿರುವ ಮಹರಾದಿ ಲೋಕಗಳು, ವೈಕುಂಠಕ್ಕಿಂತ ಮೇಲಿರುವ ಬ್ರಹ್ಮಾಂಡಾವರಣಗಳೂ, ಪೃಥಿವಿಗಿಂತ ಕೆಳಗಿನ ಪಾತಾಳ ಲೋಕಗಳೂ, ಅವುಗಳಿಗಿಂತ ಕೆಳಗಿನ ಅಂಡೋದಕವೂ, ನಡುವೆ

ಇರುವ ಸ್ವರ್ಗಾದಿ ಲೋಕಗಳೂ, ಪೃಥಿವ್ಯಾದಿ ಲೋಕಗಳೂ, ಭೂತ ವರ್ತಮಾನ ಭವಿಷ್ಯತ್ತುಗಳೆಂದು ಯಾವುದನ್ನು ಬಲ್ಲವರು ಹೇಳುವರೋ ಅವೆಲ್ಲವೂ, ಆಕಾಶನಾಮಕಳಾದ ಲಕ್ಷ್ಮೀದೇವಿಯಲ್ಲಿಯೇ ಓತಪ್ರೋತವಾಗಿ ಆಶ್ರಯಿಸಿಕೊಂಡಿವೆ. ಗಾರ್ಗಿ ಕೇಳಿದಳು ಲಕ್ಷ್ಮೀದೇವಿ ಯಾರನ್ನು ಓತಪ್ರೋತವಾಗಿ ಆಶ್ರಯಿಸಿಕೊಂಡಿರುವಳು ?

ಸ ಹೋವಾಚ । ಏತದ್ವೈ ತದಕ್ಷರಂ ಗಾರ್ಗಿ ಬ್ರಾಹ್ಮಣಾ ಅಭಿವದಂತಿ ಅಸ್ಥೂಲಂ ಅನಣು ಅಹ್ರಸ್ವಂ ಅದೀರ್ಘಂ ಅಲೋಹಿತಂ ಅಸ್ನೇಹಂ ಅಚ್ಛಾಯಂ ಅತಮಃ ಅವಾಯು ಅನಾಕಾಶಂ ಅಸಂಗಂ ಅರಸಂ ಅಗಂಧಂ ಅಚಕ್ಷುಷ್ಕಂ ಅಶ್ರೋತ್ರಂ ಅವಾಕ್ ಅಮನಃ ಅತೇಜಸ್ಕಂ ಅಪ್ರಾಣಂ ಅಮುಖ್ಯಂ ಅಮಾತ್ರಂ ಅನಂತರಂ ಅಬಾಹ್ಯಂ । ನ ತದಶ್ನಾತಿ ಕಿಂಚನ । ನ ತದಶ್ನಾತಿ ಕಶ್ಚನ ।

ಯಾಜ್ಞವಲ್ಕ್ಯರು ಹೇಳಿದರು - ಗಾರ್ಗಿ, ಲಕ್ಷ್ಮೀಗೆ ಅಕ್ಷರನಾಮಕ ನಾರಾಯಣನು ಆಧಾರ. ಆ ಅಕ್ಷರನ ಲಕ್ಷಣಗಳನ್ನು ಬ್ರಹ್ಮಜ್ಞಾನಿಗಳೂ ಹೀಗೆ ಹೇಳುತ್ತಾರೆ - ಅವನು ಸ್ಥೂಲ ಸೂಕ್ಷ್ಮ ಹ್ರಸ್ವ ಅಥವಾ ದೀರ್ಘವಾದ ಎಲ್ಲ ಪ್ರಾಕೃತ ವಸ್ತುಗಳಿಂದ ಭಿನ್ನ. ಪ್ರಾಕೃತರಕ್ತಾದಿ ರೂಪವಿಲ್ಲದವನು. ಪ್ರಾಕೃತಜಿಗಟುತನವಿಲ್ಲದವನು. ಅಜ್ಞಾನ ರಹಿತ. ಆವರಣ ರಹಿತ. ಶ್ವಾಸೋಚ್ಛ್ವಾಸ ರಹಿತ. ಆಕಾಶ ಮೊದಲಾದ ಪಂಚಭೂತಮಯ ಶರೀರ ರಹಿತ. ಎಲ್ಲ ಕಡೆ ಇದ್ದರೂ ತತ್ಪ್ರಯುಕ್ತ ದೋಷಲೇಪವಿಲ್ಲದವನು. ಪ್ರಾಕೃತ ಜ್ಞಾನೇಂದ್ರಿಯ ಕರ್ಮೇಂದ್ರಿಯರಹಿತ, ಪ್ರಾಕೃತಶರೀರರಹಿತ, ಪರಿಮಿತಿರಹಿತ, ಎಲ್ಲಕ್ಕೂ ಒಳಗಿರುವವ, ಎಲ್ಲಕ್ಕೂ ಹೊರಗೂ ಇರುವವ. ಆ ಅಕ್ಷರನು ತನ್ನ ಉಳಿವಿಗಾಗಿ ಯಾರನ್ನೂ ಆಶ್ರಯಿಸಿಲ್ಲ. ಅವನನ್ನು ಯಾರೂ ಅಳಿಸಲೂ ಶಕ್ತರಲ್ಲ.

ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ ಸೂರ್ಯಾಚಂದ್ರಮಸೌ ವಿಧೃತೌ ತಿಷ್ಠತಃ । ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ ದ್ಯಾವಾಪೃಥಿವ್ಯೌ ವಿಧೃತೇ ತಿಷ್ಠತಃ । ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ ನಿಮೇಷಾ ಮುಹೂರ್ತಾ ಅಹೋರಾತ್ರಾಣಿ ಅರ್ಧಮಾಸಾ ಮಾಸಾ ಋತವಃ ಸಂವತ್ಸರಾ ಇತಿ ವಿಧೃತಾಸ್ತಿಷ್ಠಂತಿ । ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ ಪ್ರಾಚ್ಯೋಽನ್ಯಾ ನದ್ಯಃ ಸ್ಯಂದಂತೇ ಶ್ವೇತೇಭ್ಯಃ ಪರ್ವತೇ ಭ್ಯಃ ಪ್ರತೀಚ್ಯೋಽನ್ಯಾ ಯಾಂ ಯಾಂ ಚ ದಿಶಮನು । ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ ದದತೋ ಮನುಷ್ಯಾಃ ಪ್ರಶಂಸಂತಿ, ಯಜಮಾನಂ ದೇವಾಃ, ದರ್ವೀಂ ಪಿತರೋಽನ್ವಾಯತ್ತಾಃ ।

ಈ ಅಕ್ಷರನಾಮಕ ಹರಿಯ ಇಚ್ಛಾಮಾತ್ರದಿಂದಲೇ ಬ್ರಹ್ಮ-ರುದ್ರರು ಸುಸ್ಥಿತಿಯಲ್ಲಿದ್ದಾರೆ. ಈ ಅಕ್ಷರನ ಇಚ್ಛೆಯಿಂದಲೇ ಶ್ರೀ ಭೂ ದೇವಿಯರು ಸುಸ್ಥಿತಿಯಲ್ಲಿದ್ದಾರೆ. ಗಾರ್ಗಿ, ಈ ಅಕ್ಷರದ ಇಚ್ಛೆಯಿಂದಲೇ ನಿಮಿಷಗಳು, ಮುಹೂರ್ತಗಳು, ಹಗಲು-ರಾತ್ರಿಗಳು, ಪಕ್ಷಗಳು, ತಿಂಗಳುಗಳು, ಋತುಗಳು, ವರ್ಷಗಳು ಇವುಗಳ ಅಭಿಮಾನಿದೇವತೆಗಳು ಸುಸ್ಥಿತಿಯಲ್ಲಿರುತ್ತರೆ. ಗಾರ್ಗಿ, ಆ ಅಕ್ಷರನ ಇಚ್ಛೆಯಿಂದಲೇ ಪೂರ್ವದಿಕ್ಕಿನಲ್ಲಿ ಹರಿಯುವ ಬೇರೆ ಬೇರೆ ನದಿಗಳೂ, ಪಶ್ಚಿಮದಿಕ್ಕಿನಲ್ಲಿ ಹರಿಯುವ ಬೇರೆ ಬೇರೆ ನದಿಗಳೂ, ಶ್ವೇತಪರ್ವತಗಳಿಂದ ಯಾವ ಯಾವ ದಿಕ್ಕುಗಳಿಗೆ ಹರಿಯಬೇಕೋ ಆ ದಿಕ್ಕುಗಳಿಗೇ ಹರಿಯುತ್ತವೆ. ಗಾರ್ಗಿ, ಈ ಅಕ್ಷರನ ಇಚ್ಛೆಯಿಂದಲೇ ದಾನ ಮಾಡುವವರನ್ನು ಮನುಷ್ಯರೂ, ಯಾಗ ಮಾಡುವವರನ್ನು ದೇವತೆಗಳೂ ಹೊಗಳುತ್ತಾರೆ. ಪಿತೃಗಳು ದರ್ವಿಹೋಮವನ್ನು ಆಶ್ರಯಿಸುತ್ತಾರೆ.

> ಯೋ ವಾ ಏತದಕ್ಷರಂ ಗಾರ್ಗಿ ಅವಿದಿತ್ವಾ ಅಸ್ಮಿನ್ ಲೋಕೇ ಜುಹೋತಿ ಯಜತೇ ತಪಸ್ತಪ್ಯತೇ ಬಹೂನಿ ವರ್ಷಸಹಸ್ರಾಣಿ, ಅಂತವದೇವಾಸ್ಯ ತದ್ ಭವತಿ । ಯೋ ವಾ ಏತದಕ್ಷರಂ ಗಾರ್ಗಿ ಅವಿದಿತ್ವಾ ಅಸ್ಮಾಲ್ಲೋಕಾತ್ ಪ್ರೈತಿ, ಸ ಕೃಪಣಃ. ಅಥ ಯ ಏತದಕ್ಷರಂ ಗಾರ್ಗಿ ವಿದಿತ್ವಾ ಅಸ್ಮಾಲ್ಲೋಕಾತ್ ಪ್ರೈತಿ, ಸ ಬ್ರಾಹ್ಮಣಃ।

ಗಾರ್ಗಿ, ಈ ಲೋಕದಲ್ಲಿ ಯಾರು ಈ ಅಕ್ಷರನನ್ನು ತಿಳಿಯದೆ ಹೋಮ ಮಾಡುತ್ತಾನೋ, ದಾನ ಮಾಡುತ್ತಾನೋ, ಬಹುಸಾವಿರ ವರ್ಷ ತಪಸ್ಸನ್ನು ಮಾಡುತ್ತಾನೋ ಅವನು ಸ್ವರ್ಗಾದಿ ಲೋಕಗಳಲ್ಲಿ ಬಹು ಸಾವಿರ ವರ್ಷ ವಾಸ ಮಾಡಬಹುದು. ಆದರೂ ಆ ಫಲವು ನಶ್ವರವೇ ಆಗಿರುತ್ತದೆ. ಗಾರ್ಗಿ, ಯಾರು ಈ ಅಕ್ಷರನನ್ನು ತಿಳಿಯದೆ ಮರಣ ಹೊಂದುತ್ತಾನೋ ಅವನು ಶೋಚನೀಯನಾಗಿರುತ್ತಾನೆ. ಸಂಸಾರ ಬಂಧನದಲ್ಲಿಯೇ ಇರುತ್ತಾನೆ. ಗಾರ್ಗಿ, ಯಾರು ಈ ಅಕ್ಷರನನ್ನು ತಿಳಿದು ಮರಣ ಹೊಂದುತ್ತಾನೋ ಅವನು ಮುಕ್ತನಾಗುತ್ತಾನೆ.

> ತದ್ ವಾ ಏತದಕ್ಷರಂ ಗಾರ್ಗಿ, ಅದೃಷ್ಟಂ ದ್ರಷ್ಟೃ । ಅಶ್ರುತಂ ಶ್ರೋತೃ । ಅಮತಂ ಮಂತೃ । ಅವಿಜ್ಞಾತಂ ವಿಜ್ಞಾತೃ । ನಾನ್ಯದತೋಽಸ್ತಿ ದ್ರಷ್ಟೃ । ನಾನ್ಯದತೋಽಸ್ತಿ ಶ್ರೋತೃ । ನಾನ್ಯದತೋಽಸ್ತಿಮಂತೃ । ನಾನ್ಯದತೋಽಸ್ತಿವಿಜ್ಞಾತೃ । ಏತಸ್ಮಿನ್ ಖಲು ಅಕ್ಷರೇ ಗಾರ್ಗಿ ಆಕಾಶ ಓತಶ್ಚ ಪ್ರೋತಶ್ಚೇತಿ।

ಗಾರ್ಗಿ, ಈ ಅಕ್ಷರನು ಅನ್ಯರಿಗೆ ಸಂಪೂರ್ಣವಾಗಿ ನೋಡಲಾಗದವನು. ತಾನು ಎಲ್ಲವನ್ನೂ ನೋಡುವವನು. ಅನ್ಯರಿಗೆ ಸಂಪೂರ್ಣವಾಗಿ ಹೇಳಿ ತಿಳಿಯಲಾಗದವನು. ತಾನು ಎಲ್ಲವನ್ನೂ ಕೇಳುವವನು. ಅನ್ಯರಿಗೆ ಸಂಪೂರ್ಣವಾಗಿ ಮನಸ್ಸಿನಿಂದ ಗ್ರಹಿಸಲಾಗದವನು.

ತಾನು ಎಲ್ಲವನ್ನೂ ಮನಸಾ ಗ್ರಹಿಸುವವನು. ಅನ್ಯರಿಗೆ ಸಂಪೂರ್ಣವಾಗಿ ತಿಳಿಯಲಾಗದವನು. ತಾನು ಎಲ್ಲವನ್ನೂ ತಿಳಿಯುವವನು. ಅಕ್ಷರನಿಂದ ಅನ್ಯರು ಯಾರೂ ಸ್ವತಂತ್ರವಾಗಿ ನೋಡುವವರಲ್ಲ. ಅವನಿಗಿಂತ ಅನ್ಯರು ಯಾರೂ ಸ್ವತಂತ್ರವಾಗಿ ಕೇಳುವವರಲ್ಲ. ಅವನಿಗಿಂತ ಅನ್ಯರು ಯಾರೂ ಸ್ವತಂತ್ರವಾಗಿ ಮನಸಾ ತಿಳಿಯುವವರಲ್ಲ. ಇವನಿಗಿಂತ ಬೇರೆ ಯಾರೂ ಸ್ವತಂತ್ರವಾಗಿ ತಿಳಿಯುವವನಿಲ್ಲ. ಗಾರ್ಗಿ ಇಂಥ ಅಕ್ಷರನಲ್ಲಿಯೇ ಲಕ್ಷ್ಮಿಯೂ ಓತಪ್ರೋತವಾಗಿ ಆಶ್ರಯ ಪಡೆದಿದ್ದಾಳೆ.

ಸಾ ಹೋವಾಚ । ಬ್ರಾಹ್ಮಣಾ ಭಗವಂತಃ ತದೇವ ಬಹು ಮನ್ಯಧ್ವಂ ಯದ್ ಅಸ್ಮಾದ್ ನಮಸ್ಕಾರೇಣ ಮುಚ್ಯಧ್ವಮ್ । ನ ವೈ ಜಾತು ಯುಷ್ಮಾಕಮಿಮಂ ಕಶ್ಚಿದ್ ಬ್ರಹ್ಮೋದ್ಯಂ ಜೇತಾ ಇತಿ । ತತೋ ಹ ವಾಚಕ್ನವೀ ಉಪರರಾಮ ।

॥ ಇತಿ ಅಕ್ಷರ ಬ್ರಾಹ್ಮಣಂ ॥

ಗಾರ್ಗಿ ಹೇಳಿದಳು, ಪೂಜ್ಯ ಬ್ರಾಹ್ಮಣರೇ ನಾನು ಹೇಳುವುದನ್ನು ಆದರದಿಂದ ಕೇಳಿರಿ. ನೀವು ಯಾಜ್ಞವಲ್ಕ್ಯರಿಗೆ ನಮಸ್ಕರಿಸಿ ಅವರಿಂದ ಬಿಡುಗಡೆಯನ್ನು ಪಡೆಯಿರಿ. ಏಕೆಂದರೆ ನಿಮ್ಮಲ್ಲಿ ಯಾರೂ ಈ ಬ್ರಹ್ಮವಾದಿಯನ್ನು ಗೆಲ್ಲಲಾರಿರಿ. ಹೀಗೆ ಹೇಳಿ ಗಾರ್ಗಿ ವಿರಮಿಸಿದಳು.

॥ ಇಲ್ಲಿಗೆ ಅಕ್ಷರ ಬ್ರಾಹ್ಮಣ ಮುಗಿಯಿತು ॥

ಎಲ್ಲವನ್ನೂ ಧರಿಸಿದ ಮಹಾವಿಷ್ಣುವೇ ಅಕ್ಷರನಾಗುತ್ತಾನೆ

तत्वप्रदीपः – ''यद्भूतं च भवच्च भविष्यच्चेत्याचक्षते, आकाश एव तदोतं च प्रोतं च'' इत्युक्त्वा 'एतस्मिन्नु खल्वक्षरे गार्ग्याकाश ओतश्च प्रोतश्च' इति वचनेन अम्बरान्तस्य सर्वस्य धृतेरुक्तत्वाद् ब्रह्मैवाक्षरम् । भर्ता सन् विष्णुर्जीवैर्हृदि म्रियमाणश्च विभर्ति च ।

'ಯದ್ಭೂತಂ ಚ ಭವಚ್ಚ ಭವಿಷ್ಯಚ್ಚೇತ್ಯಾಚಕ್ಷತೇ, ಆಕಾಶ ಏವ ತದೋತಂ ಚ ಪ್ರೋತಂ ಚ' ಭೂತ, ವರ್ತಮಾನ, ಭವಿಷ್ಯದ್ ವಸ್ತುಗಳೆಲ್ಲವೂ ಆಕಾಶದಲ್ಲಿಯೇ ಆಶ್ರಯವನ್ನು ಪಡೆದಿವೆ ಎಂಬುದಾಗಿ ಹೇಳಿ, 'ಏತಸ್ಮಿನ್ನು ಖಲ್ವಕ್ಷರೇ ಗಾರ್ಗ್ಯಾಕಾಶ ಓತಶ್ಚ ಪ್ರೋತಶ್ಚ' ಎಲೈ ಗಾರ್ಗಿಯೇ ಅಕ್ಷರತತ್ವದಲ್ಲಿಯೇ ಈ ಆಕಾಶವು ಆಶ್ರಯವನ್ನು ಪಡೆದಿದೆ ಎಂದು ಹೇಳಲಾಗಿದೆ. ಈ ಮಾತಿನಿಂದ ಅಕ್ಷರತತ್ವವು ಆಕಾಶದ ತನಕ ಎಲ್ಲವನ್ನೂ ಧರಿಸಿದೆ ಎಂದು ಹೇಳಿದಂತಾಯಿತು.

ಆದ್ದರಿಂದ ಅಕ್ಷರನಾಮಕನಾದ ಬ್ರಹ್ಮನು ಸಕಲಕ್ಕೂ ಆಶ್ರಯ ಎಂದು ತಿಳಿಯಬೇಕು. ಮಹಾವಿಷ್ಣುವನ್ನು ಸಕಲಜೀವರು ಹೃದಯದಲ್ಲಿ ಧರಿಸಿದ್ದಾರೆ. ಮಹಾವಿಷ್ಣು ಆ ಸಕಲರನ್ನೂ ಕೂಡ ತಾನೇ ಧರಿಸಿದ್ದಾನೆ.

ಸಕಲಧಾರಕತ್ವ ಇತರರಲ್ಲಿ ಇಲ್ಲ

ವಿಶೇಷವಿಚಾರ - ಪೃಥ್ವೀಲೋಕದಿಂದ ಆಕಾಶದ ತನಕ ಸಕಲವನ್ನೂ ಕೂಡ ಅಕ್ಷರತತ್ವವು ಧರಿಸಿದೆ ಎಂದು ಉಪನಿತಷತ್ತು ಹೇಳುತ್ತಿದೆ. ಇಂಥ ಅಕ್ಷರನು ಮಹಾವಿಷ್ಣುವೇ ಆಗಬೇಕು. ಏಕೆಂದರೆ ಸಕಲ ಶ್ರುತಿ-ಸ್ಮೃತಿಗಳು ಸಕಲಧಾರಕತ್ವವು ವಿಷ್ಣುವಿನ ಅಸಾಧಾರಣಸಾಮರ್ಥ್ಯವೆಂದು ಬಣ್ಣಿಸಿವೆ. ಇತರರಲ್ಲಿ ಈ ಸಾಮರ್ಥ್ಯವು ಸರ್ವಥಾ ಇರುವುದಿಲ್ಲ. ಆದ್ದರಿಂದ ಮಹಾವಿಷ್ಣುವೇ ಅಕ್ಷರಶಬ್ದದಿಂದ ಪ್ರತಿಪಾದ್ಯನಾಗುತ್ತಾನೆ.

'ಏತಸ್ಮಿನ್ನು' ಎನ್ನಲು ಕಾರಣವೇನು ?

ಭಾಷ್ಯದಲ್ಲಿ 'ಏತಿಸ್ಮಿನ್ನು ಖಲ್ವಕ್ಷರೇ ಎಂಬ ಪಾಠವನ್ನು ಉಲ್ಲೇಖಿಸಿದ್ದಾರೆ. ಆದರೆ ಉಪನಿಷತ್ತಿನಲ್ಲಿ 'ಏತಸ್ಮಿನ್ ಖಲ್ವಕ್ಷರೇ' ಎಂಬ ಪಾಠವಿದೆ. ಉಪನಿಷತ್ತಿನ ಪಾಠವನ್ನು ವ್ಯತ್ಯಾಸ ಮಾಡಿ, ಭಾಷ್ಯಕಾರರು 'ಏತಸ್ಮಿನ್ನು' ಎಂದು ಉಲ್ಲೇಖಿಸಲು ಬಹಳ ಔಚಿತ್ಯವಿದೆ. ವೇದದ ಬೇರೆ ಶಾಖೆಯಲ್ಲೂ ಸಹ ಇದೇ ಅಕ್ಷರನಲ್ಲಿ ಸಕಲವೂ ನೆಲೆಗೊಂಡಿದೆ ಎಂದು ಹೇಳುತ್ತಿದೆ. ಆದ್ದರಿಂದ ಬೃಹದಾರಣ್ಯಕದ ಮಾತಿಗೆ ಇತರ ಶಾಖೆಯಲ್ಲಿರುವ ಶ್ರುತಿವಾಕ್ಯದ ಸಂವಾದವನ್ನು ಇದರಿಂದ ತಿಳಿಸಿದ್ದಾರೆ ಎಂದು ತಿಳಿಯಬೇಕು.

ನಿಜವಾದ ಆಧಾರ ಮಹಾವಿಷ್ಣುವೇ

तत्वप्रदीपः – एतदुक्तं भवति । यद्यपि हरिर्जगता भ्रियत इत्युच्यते जगति व्याप्तत्वात् । जगद्बिभर्ति च । नैतावता तयोराधाराधेयभावस्तुल्य इति मन्तव्यम् । किन्तु मूलभर्ता सन् भ्रियमाणश्च बिभर्ति च । युज्यते च तस्यैकस्यैव बहुरूपतया निविष्टत्वादिति । यस्मिन्निदं सम्यक्च विविधं चैधि ।।

ಒಟ್ಟು ಅಭಿಪ್ರಾಯ - ಶ್ರೀಹರಿಯು ಜಗತ್ತಿನಲ್ಲಿ ವ್ಯಾಪ್ತನಾಗಿರುವ ಕಾರಣ ಸಮಸ್ತ ಜಗತ್ತು ಇವನನ್ನು ಧರಿಸಿದೆ ಎಂದು ಉಪನಿಷತ್ತು ಹೇಳಿದೆ. ಇಂಥ ಜಗತ್ತನ್ನು ತಾನೂ ಕೂಡ ಧರಿಸಿದ್ದಾನೆ. ಹೀಗೆ ಹೇಳಿದ್ದರಿಂದ ವಿಷ್ಣು ಹಾಗೂ ಜಗತ್ತು ಎರಡರಲ್ಲಿಯೂ ಆಧಾರಾಧೇಯಭಾವವು ಸಮಾನವಾಯಿತೆಂದು ತಿಳಿಯಬಾರದು. ಏಕೆಂದರೆ ಮೂಲಭರ್ತೃವೆನಿಸಿದ ಮಹಾವಿಷ್ಣು ತನ್ನನ್ನು ಧರಿಸಿದ ಜಗತ್ತನ್ನೂ ಕೂಡ ತಾನೇ ಧರಿಸಿದ್ದಾನೆ. ಅದನ್ನು ಒಬ್ಬನೇ ಆಗಿದ್ದರೂ ಬಹುರೂಪಗಳನ್ನು ಹೊಂದಿ ಪ್ರವೇಶಿಸಿರುವುದರಿಂದ ಇದು ಅಯುಕ್ತವಲ್ಲ.

'ಯಸ್ಮಿನ್ನಿದಂ ಸಂಚ ವಿಚೈಧಿ ಸರ್ವಂ' ಎಂಬ ಶ್ರುತಿಯಲ್ಲಿ ಸಂಚ, ವಿ, ಚ, ಏಧಿ ಎಂಬುದಾಗಿ ಪದಚ್ಛೇದವನ್ನು ತಿಳಿಯಬೇಕು. ಸಂ - ಚೆನ್ನಾಗಿ, ವಿ - ಅನೇಕ ರೂಪದಿಂದ, ಇದಂ - ಈ ಜಗತ್ತು, ಯಸ್ಮಿನ್ - ಯಾವ ವಿಷ್ಣುವಿನಲ್ಲಿ, ಏಧಿ = ಆಶ್ರಯವನ್ನು ಹೊಂದಿ ವೃದ್ಧಿ ಹೊಂದಿದೆಯೋ ಎಂಬುದಾಗಿ ಶ್ರುತ್ಯರ್ಥವನ್ನು ತಿಳಿಯಬೇಕು.

ಪಾಠಾಂತರದ ಬಗ್ಗೆ

ವಿಶೇಷ ವಿಚಾರ - ಭಾಷ್ಯದಲ್ಲಿ ಭರ್ತಾ ಸನ್ ಭ್ರಿಯಮಾಣೋ ಬಿಭರ್ತಿ । ಏಕೋ ದೇವೋ ಬಹುಧಾ ನಿವಿಷ್ಟಃ' ಎಂದಷ್ಟೇ ಶ್ರುತಿಯ ಉಲ್ಲೇಖವಿದೆ. ತತ್ವಪ್ರದೀಪದಲ್ಲಿ ಇಷ್ಟೇ ಶ್ರುತಿವಾಕ್ಯಕ್ಕೆ ವ್ಯಾಖ್ಯಾನವನ್ನು ಬರೆದಿದ್ದಾರೆ. ಆದರೆ ಇತ್ತೀಚಿನ ಭಾಷ್ಯದ ಪುಸ್ತಕಗಳಲ್ಲಿ 'ಯದಾ ಭಾರಂ ತಂದ್ರಯತೇ ಸ ಭರ್ತುಮ್ । ಪರಾಸ್ಯ ಭಾರಂ ಪುನರಸ್ತಮೇತಿ' ಎಂಬ ಶ್ರುತಿಯ ಮುಂದಿನ ವಾಕ್ಯವನ್ನೂ ಕೂಡ ಉಲ್ಲೇಖಿಸಿದ್ದಾರೆ. ತತ್ವಪ್ರಕಾಶಿಕೆಯಲ್ಲಿ ಪೂರ್ಣ ಶ್ರುತಿಯ ಅರ್ಥವನ್ನು ಬರೆದಿದ್ದರಿಂದ ಭಾಷ್ಯದಲ್ಲಿಯೂ ಇದನ್ನು ಸೇರಿಸಿರಬಹುದು. ಆದರೆ ಪ್ರಾಚೀನ ಪುಸ್ತಕಗಳಲ್ಲಿ ಈ ಉತ್ತರಾರ್ಧವು ಕಾಣಿಸುವುದಿಲ್ಲ.

'ಯಸ್ಮಿನ್ನಿದಂ ಸಂ ಚ ವಿ ಚೈಧಿ ಸರ್ವಂ ಯಸ್ಮಿನ್ ದೇವಾ ಅಧಿ ವಿಶ್ವೇ ನಿಷೇದುಃ' ಎಂಬ ಭಾಷ್ಯವಾಕ್ಯದಲ್ಲಿ 'ಸರ್ವಂ' ಎಂಬ ಪದಕ್ಕೆ ಯಾವುದೇ ಟೀಕಾರಾಯರು ವ್ಯಾಖ್ಯಾನವನ್ನು ಬರೆದಿರುವುದಿಲ್ಲ. ಮತ್ತು ಮಹಾನಾರಾಯಣೋಪನಿಷತ್ತಿನಲ್ಲಿ ಬರುವ ಈ ಶ್ರುತಿಯಲ್ಲಿ 'ಸರ್ವಂ' ಎಂಬ ಪದವು ಪ್ರಾಚೀನ ಕೋಶಗಳಲ್ಲಿ ಕಾಣಿಸುವುದಿಲ್ಲ. ಆದರೆ ಇತ್ತೀಚಿನ ಮುದ್ರಿತ ಪುಸ್ತಕಗಳಲ್ಲಿ ಉಪನಿಷತ್ತಿನಲ್ಲೂ ಕೂಡ 'ಸರ್ವಂ' ಎಂಬ ಪದವನ್ನು ಉಲ್ಲೇಖಿಸಿದ್ದಾರೆ. ಹಾಗೂ ಭಾಷ್ಯದ ಆಚಾರ್ಯರ ವಾಕ್ಯದಲ್ಲಿಯೂ 'ಸರ್ವಂ' ಎಂಬ ಪದವನ್ನು ಮುದ್ರಿತ ಪುಸ್ತಕಗಳಲ್ಲಿ ಉಲ್ಲೇಖಿಸಲಾಗಿದೆ.

ಶ್ರೀಮಜ್ಜಯತೀರ್ಥಭಿಕ್ಷುಗಳಿಂದ ವಿರಚಿತವಾದ

ತತ್ವಪ್ರಕಾಶಿಕಾ

ಉಭಯತ್ರಪ್ರಸಿದ್ಧವಾದ ಅಕ್ಷರ ಎಂಬ ನಾಮಸಮನ್ವಯ

तत्वप्रकाशिका – ।। अक्षरमम्बरान्तधृतेः ।।

अत्राविनाशित्वसाम्यात् चित्प्रकृतौ हरौ च साधारणस्याक्षरनाम्नो ब्रह्मणि समन्वयप्रतिपादनादस्ति शास्त्रादिसङ्गतिः ।

ಈ ಅಧಿಕರಣದಲ್ಲಿ ಲಕ್ಷ್ಮೀದೇವಿಯಲ್ಲಿ ಹಾಗೂ ಶ್ರೀಹರಿಯಲ್ಲಿ ಸಾಧಾರಣವಾದ 'ಅವಿನಾಶಿತ್ವ' ಎಂಬ ಧರ್ಮವಿರುವ ಪ್ರಯುಕ್ತ 'ಅಕ್ಷರ' ಎಂಬ ನಾಮಾತ್ಮಕ ಶಬ್ದವನ್ನು ಬ್ರಹ್ಮನಲ್ಲಿ ಸಮನ್ವಯ ಮಾಡಲಾಗುತ್ತದೆ. ಆದ್ದರಿಂದ ಶಾಸ್ತ್ರಸಂಗತಿ, ಅಧ್ಯಾಯಸಂಗತಿ ಹಾಗೂ ಪಾದಸಂಗತಿಗಳು ಇವೆ ಎಂದು ತಿಳಿಯಬೇಕು.

ಶ್ರುತ್ಯಾದಿಸಂಗತಿಗಳು

तत्वप्रकाशिका – श्रुत्यादिसङ्गतिं विषयवाक्यमुदाहृत्य विषयादिकं च सूचयन् सयुक्तिकं पूर्वपक्षं च दर्शयति – अदृश्यत्वादीति ।।

ಶ್ರುತಿಸಂಗತಿ ಹಾಗೂ ಅಧಿಕರಣ ಸಂಗತಿಗಳನ್ನು, ವಿಷಯವಾಕ್ಯವನ್ನು ಉದಾಹರಿಸುತ್ತಾ ವಿಷಯಾದಿಗಳನ್ನು ಸೂಚಿಸುವವರಾಗಿ ಯುಕ್ತಿಬದ್ಧವಾದ ಪೂರ್ವಪಕ್ಷವನ್ನೂ ಸಹ ತೋರಿಸುತ್ತಿದ್ದಾರೆ 'ಅದೃಶ್ಯತ್ವಾದಿ' ಇತ್ಯಾದಿ ಭಾಷ್ಯದಿಂದ.

ಅದೃಶ್ಯತ್ವಾದಿಗುಣಗಳುಳ್ಳವನು ಅಕ್ಷರ

तत्वप्रकाशिका – अदृश्यत्वादिगुणाः पूर्वं विष्णोरुक्तास्ते च वाचसनेयके अक्षरस्योक्ताः ।

ಅದೃಶ್ಯತ್ವಾದಿಗುಣಗಳನ್ನು ಅದೃಶ್ಯತ್ವಾಧಿಕರಣದಲ್ಲಿ ವಿಷ್ಣುವಿನಲ್ಲಿ ಸಮರ್ಥಿಸಲಾಯಿತು. ಅದೇ ಅದೃಶ್ಯತ್ವಾದಿಗುಣಗಳನ್ನು ಬೃಹದಾರಣ್ಯಕೋಪನಿಷತ್ತು ಅಕ್ಷರನಿಗೆ ಹೇಳುತ್ತಿದೆ. ಅದು ಹೀಗೆ -

ಬೃಹದಾರಣ್ಯಕದಲ್ಲಿ ಏನು ಹೇಳಿದೆ ?

तत्वप्रकाशिका – 'तद्वा एतदक्षरं गार्गि अदृष्टं द्रष्टृश्रुतं श्रोत्रमतं मन्त्रविज्ञातं विज्ञातृ नान्यदतोऽस्ति द्रष्टृ नान्यदतोऽस्ति श्रोतृ नान्यदतोऽस्ति मन्तृ नान्यदतोऽस्ति विज्ञात्रेतस्मिन्खल्वक्षरे गार्ग्याकाश ओतश्च प्रोतश्च' इति ।

'ಎಲೈ ! ಗಾರ್ಗಿಯೇ, ಅಕ್ಷರತತ್ವವು ಬೇರೆಯವರಿಂದ ಸಂಪೂರ್ಣವಾಗಿ ತಿಳಿಯಲು ಸಾಧ್ಯವಿಲ್ಲದ್ದು, ಕೇಳಲೂ ಸಹ ಸಾಧ್ಯವಿಲ್ಲ, ಮನನಕ್ಕೂ ಸಹ ವಿಷಯವಲ್ಲ, ಬೇರೆಯವರಿಂದ ನೋಡಲು ಸಾಧ್ಯವಿಲ್ಲದಿದ್ದರೂ, ಸ್ವತಃ ಎಲ್ಲವನ್ನೂ ಪೂರ್ಣವಾಗಿ ನೋಡುತ್ತದೆ, ಕೇಳುತ್ತದೆ, ಮನನ ಮಾಡುತ್ತದೆ, ತಿಳಿಯುತ್ತದೆ. ಅದನ್ನು ಬಿಟ್ಟು ಬೇರೆ ಯಾರೂ ಸಹ ನೋಡಿದವರೂ, ಕೇಳಿದವರೂ, ಮನನ ಮಾಡಿದವರೂ, ವಿಶೇಷವಾಗಿ ತಿಳಿದವರೂ ಇರುವುದಿಲ್ಲ. ಎಲೈ ! ಗಾರ್ಗಿಯೇ, ಇಂತಹ ಅಕ್ಷರತತ್ವದಲ್ಲಿ ಆಕಾಶವು ಸಂಪೂರ್ಣವಾಗಿ ಆಶ್ರಯ ಪಡೆದಿದೆ' ಎಂದು.

ಅಕ್ಷರ ಯಾರು ?

तत्वप्रकाशिका – तस्याक्षरस्य विष्णोरन्यत्वेऽदृश्यत्वादिकं चान्यस्यैव प्रसज्येत इत्यवश्यं निर्णेयत्वम् ।

ಈ ಬೃಹದಾರಣ್ಯಕೋಪನಿಷತ್ತಿನಲ್ಲಿ ಪ್ರತಿಪಾದ್ಯವಾದ ಅಕ್ಷರವು ವಿಷ್ಣುವಿಗಿಂತ ಬೇರೆಯಾದರೆ ಅದೃಶ್ಯತ್ವಾದಿ ಗುಣಗಳೂ ಸಹ ಬೇರೆಯವರಲ್ಲಿಯೇ ಬರುತ್ತದೆ. ಆದ್ದರಿಂದ ಅಕ್ಷರಶಬ್ದದಿಂದ ಯಾರು ವಾಚ್ಯರಾಗಿದ್ದಾರೆಂಬುದನ್ನು ಅವಶ್ಯವಾಗಿ ನಿರ್ಣಯ ಮಾಡಬೇಕು.

ಸಂಶಯ ಹಾಗೂ ಸಂಶಯಬೀಜ

तत्वप्रकाशिका – तदक्षरं विषयः । किं विष्णुरुत चेतनप्रकृतिरिति सन्देहः । उक्तसाधारण्यं च सन्देहबीजम् ।

ಈ ಅಧಿಕರಣದಲ್ಲಿ ಪೂರ್ವಪ್ರಕೃತವಾದ ಅಕ್ಷರವೇ ವಿಷಯವಾಗಿದೆ. ಇಂತಹ ಅಕ್ಷರವು ವಿಷ್ಣುವೋ ಅಥವಾ ಲಕ್ಷ್ಮೀದೇವಿಯೋ ? ಎಂದು ಸಂದೇಹ. ಎರಡೂ ಕಡೆ ಸಮಾನವಾಗಿರುವ ಅವಿನಾಶಿತ್ವವು ಸಂದೇಹಕ್ಕೆ ಕಾರಣ.

ಮಧ್ಯಮಾಕ್ಷರಳೆಂದು ಪೂರ್ವಪಕ್ಷ

तत्वप्रकाशिका – द्रष्टृत्वादिश्रवणात् जडप्रकृतेरोङ्कारस्य च न सन्देहनिविष्टत्वम् । उत्तराधिकरणे त्वीक्षणस्य प्रथमाप्रतीतेरस्त्यवकाशः । एतदक्षरं मध्यमं श्रीतत्वमेवेति पूर्वः पक्षः ।

ಈ ಶ್ರುತಿಯಲ್ಲಿ ಅಕ್ಷರತತ್ವಕ್ಕೆ ದ್ರಷ್ಟೃತ್ವವೇ ಮೊದಲಾದ ಧರ್ಮಗಳು ಹೇಳಲ್ಪಟ್ಟಿವೆ. ಆದ್ದರಿಂದ ಜಡಪ್ರಕೃತಿಯನ್ನಾಗಲೀ, ಓಂಕಾರವನ್ನಾಗಲೀ, ಸಂಶಯ ಕೋಟಿಯಲ್ಲಿ ಸೇರಿಸಲು ಬರುವುದಿಲ್ಲ. ಮುಂದಿನ ಅಧಿಕರಣದ ವಿಷಯವಾಕ್ಯವೆನಿಸಿದ 'ಸದೇವ ಸೌಮ್ಯ ಇದಮಗ್ರ ಆಸೀತ್'ಎಂಬ ವಾಕ್ಯದಲ್ಲಿ ಈಕ್ಷಣೀಯತ್ವಧರ್ಮವು ಮೊದಲು ಪ್ರತೀತವಾಗದ ಕಾರಣ ಅಲ್ಲಿ ಅಕ್ಷರಶಬ್ದದಿಂದ ಜಡಪ್ರಕೃತಿಯನ್ನೂ ಸಹ ತೆಗೆದುಕೊಳ್ಳಲು ಬರುತ್ತದೆ. ಆದರೆ ಈ ಅಧಿಕರಣದ ವಿಷಯವಾಕ್ಯದಲ್ಲಿ ಮೊದಲೇ ಈಕ್ಷಣಧರ್ಮವು ಕೇಳಿಸುತ್ತಿರುವುದರಿಂದ ಲಕ್ಷ್ಮೀದೇವಿಯನ್ನೇ ಸ್ವೀಕರಿಸಬೇಕು. ಆದ್ದರಿಂದ ಶ್ರೀತತ್ವವೆನಿಸಿದ ಲಕ್ಷ್ಮೀದೇವಿಯೇ ಮಧ್ಯಮಾಕ್ಷರಳೆನಿಸಿದ್ದಾಳೆಂದು ಪೂರ್ವಪಕ್ಷ.

'ಅಹಂ ಸೋಮಮಾಹನಸಂ ಬಿಭರ್ಮಿ'

तत्वप्रकाशिका – तत्राक्षरशब्दस्य प्रसिद्धेः । 'एतस्य वाऽक्षरस्य प्रशासने गार्गि सूर्याचन्द्रमसौ विधृतौ तिष्ठतः' इत्यादिनाऽक्षरस्य चन्द्रसूर्याद्याधारत्व प्रतीतेश्च । चन्द्राद्याधारत्वस्य च 'अहं सोमम्' इत्यादेस्तद्धर्मत्वात् ।

ಶ್ರೀಲಕ್ಷ್ಮೀದೇವಿಯಲ್ಲಿ ಅಕ್ಷರಶಬ್ದವು ಪ್ರಸಿದ್ಧವೇ ಆಗಿದೆ. ಏಕೆಂದರೆ 'ಏತಸ್ಯವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ ಸೂರ್ಯಾಚಂದ್ರಮಸೌ ವಿಧೃತೌ ತಿಷ್ಠತಃ', 'ಅಕ್ಷರತತ್ವದ ಆಜ್ಞೆಯಿಂದ ಸೂರ್ಯ, ಚಂದ್ರ ಎಲ್ಲರೂ ಸಹ ತಮ್ಮ ತಮ್ಮ ಸ್ಥಾನದಲ್ಲಿ ನೆಲೆಸಿದ್ದಾರೆ'. ಇತ್ಯಾದಿ ವಾಕ್ಯದಿಂದ ಅಕ್ಷರ ತತ್ವವು ಸೂರ್ಯ, ಚಂದ್ರ ಮೊದಲಾದವರಿಗೆ ಆಧಾರವಾಗಿದೆ ಎಂದು ಹೇಳಲಾಗಿದೆ. ಇಂತಹ ಸೂರ್ಯ ಚಂದ್ರ ಮೊದಲಾದವರಿಗೆ ಆಧಾರವಾಗಿರುವಿಕೆಯು ಲಕ್ಷ್ಮೀದೇವಿಯ ಗುಣವಾಗಿದೆ ಎಂದು 'ಅಹಂ ಸೋಮಮ್' ಇತ್ಯಾದಿ ಅಂಭ್ರಿಣೀ ಸೂಕ್ತದ ವಾಕ್ಯದಿಂದ ಸಿದ್ಧವಾಗಿದೆ.

ಅದೃಶ್ಯತ್ವಾದಿ ಧರ್ಮಗಳೂ ಸಹ ಮಧ್ಯಮಾಕ್ಷರದಲ್ಲಿಯೇ

तत्वप्रकाशिका – नच वाच्यमदृश्यत्वादिविष्णुधर्मश्रवणात् तस्याक्षरत्वमिति। अदृश्यत्वादिगुणानां मध्यमाक्षरेऽपि सम्भवात् ।

ಪ್ರಶ್ನೆ - ಅದೃಶ್ಯತ್ವಾದಿ ಧರ್ಮಗಳೂ ಸಹ ಅದೇ ವಾಕ್ಯದಲ್ಲಿ ಕೇಳಿಸುತ್ತಿರುವುದರಿಂದ ಅದೃಶ್ಯತ್ವಾಧಿಕರಣದ ನ್ಯಾಯದಂತೆ ವಿಷ್ಣುವಿನ ಅಸಾಧಾರಣ ಧರ್ಮವಾದ ಅದೃಶ್ಯತ್ವಗುಣದಿಂದ ವಿಷ್ಣುವೇ ಅಕ್ಷರಶಬ್ದ ವಾಚ್ಯನಾಗಬೇಕಲ್ಲವೆ?

ಉತ್ತರ - ಆಗಬೇಕಾಗಿಲ್ಲ. ಏಕೆಂದರೆ ಅದೃಶ್ಯತ್ವಾದಿ ಧರ್ಮವು ಮಧ್ಯಮಾಕ್ಷರಳೆನಿಸಿದ ಲಕ್ಷ್ಮೀದೇವಿಯಲ್ಲೂ ಉಪಪನ್ನವಾಗುತ್ತದೆ.

ಲಕ್ಷ್ಮ್ಯಯೇ ಅದೃಶ್ಯಳೆನ್ನಲು ಶ್ರುತಿಪ್ರಮಾಣ

तत्वप्रकाशिका – तथा च स्मृतिः –

'ये त्वक्षरमनिर्देश्यमव्यक्तं पर्युपासते ।
सर्वत्रगमचिन्त्यं च कूटस्थमचलं ध्रुवम्' ।
'आसीदिदं तमोभूतमप्रज्ञातमलक्षणम् ।
अप्रतर्क्यमनिर्देश्यं प्रसुप्तमिव सर्वतः' इत्यादि ।

ಈ ವಿಷಯದಲ್ಲಿ ಸ್ಮೃತಿ ಪ್ರಮಾಣವಿದೆ.

'ಯೇ ತ್ವಕ್ಷರಂ ಅನಿರ್ದೇಶ್ಯಮವ್ಯಕ್ತಂ ಪರ್ಯುಪಾಸತೇ ।
ಸರ್ವತ್ರಗಮಚಿಂತ್ಯಂ ಚ ಕೂಟಸ್ಥಮಚಲಂ ಧ್ರುವಮ್ ॥

ಅಕ್ಷರಳು ಅತ್ಯಂತ ಸೂಕ್ಷ್ಮಳಾದ್ದರಿಂದ ಅನಿರ್ದೇಶ್ಯಳೂ, ಅವ್ಯಕ್ತಳೂ, ಸರ್ವತ್ರವ್ಯಾಪ್ತಳೂ, ಅಚಿಂತ್ಯಳೂ, ಆಕಾಶದಂತೆ ಕೂಟಸ್ಥಳೂ, ಅಚಲಳೂ, ನಿರ್ವಿಕಾರಳೂ ಆಗಿದ್ದಾಳೆ. ಇಂತಹ ಅಕ್ಷರಳೆನಿಸಿದ ಲಕ್ಷ್ಮೀಯನ್ನು ಯಾರು ಉಪಾಸನೆ ಮಾಡುತ್ತಾರೋ, ಎಂಬುದಾಗಿ ಈ ಸ್ಮೃತಿಯು ಅದೃಶ್ಯತ್ವವನ್ನು ಲಕ್ಷ್ಮೀಯಲ್ಲಿ ಹೇಳುತ್ತಿದೆ ಮತ್ತು

ತತೋದಿದಂ ತಮೋಭೂತಂ ಅಪ್ರಜ್ಞಾತಮಲಕ್ಷಣಮ್ ॥
ಅಪ್ರತರ್ಕ್ಯಮನಿರ್ದೇಶ್ಯಂ ಪ್ರಸುಪ್ತಮಿವ ಸರ್ವತಃ ॥

'ಅಜ್ಞೇಯಸ್ವರೂಪಳೂ, ಶಬ್ದದಿಂದ ತಿಳಿಯಲು ಸಾಧ್ಯವಿಲ್ಲದವಳೂ, ಲೌಕಿಕ ಚಿಹ್ನೆ ಇಲ್ಲದವಳೂ, ಪ್ರತ್ಯಕ್ಷ ಹಾಗೂ ಅನುಮಾನಗಳಿಂದ ಅಗೋಚರಳೂ, ಪ್ರಳಯಕಾಲದಲ್ಲಿ ವ್ಯಾಪಾರವಿಲ್ಲದವಳೂ, ಜಡಪ್ರಕೃತಿಗೆ ಅಭಿಮಾನಿಯಾದವಳೂ ಸಹ, ಲಕ್ಷ್ಮೀದೇವಿಯೇ ಆಗಿದ್ದಾಳೆ'. ಈ ಸ್ಮೃತಿಯಲ್ಲೂ ಸಹ ಅದೃಶ್ಯತ್ವಾದಿಧರ್ಮವು ಲಕ್ಷ್ಮೀದೇವಿಯ ಲಕ್ಷಣವೆಂದು ವರ್ಣಿಸಲ್ಪಟ್ಟಿದೆ.

ಅದೃಶ್ಯತ್ವವು ಉಭಯತ್ರ ಸಮಾನವಲ್ಲವೇ ?

तत्वप्रकाशिका – अथापि स्यात् । अक्षरश्रुतेरदृश्यत्वादिलिङ्गानां च मध्यमोत्तमाक्षरयोः साम्येऽत्र मध्यमैवोच्यत इति निर्बन्धे को हेतुरिति ॥

ಪ್ರಶ್ನೆ - ಅಕ್ಷರಶ್ರುತಿ ಹಾಗೂ ಅದೃಶ್ಯತ್ವಾದಿಲಿಂಗಗಳೆಲ್ಲವೂ ಮಧ್ಯಮಾಕ್ಷರಳೆನಿಸಿದ ಲಕ್ಷ್ಮೀದೇವಿಯಲ್ಲಿ ಹಾಗೂ ಉತ್ತಮಾಕ್ಷರನೆನಿಸಿದ ವಿಷ್ಣುವಿನಲ್ಲಿ ಸಮಾನವಾಗಿರುತ್ತವೆ. ಹೀಗಿರುವಾಗ ಮಧ್ಯಮಾಕ್ಷರಳೆನಿಸಿದ ಲಕ್ಷ್ಮೀದೇವಿಯೇ ಅಕ್ಷರಳಾಗುತ್ತಾಳೆ ಎಂದು ಆಗ್ರಹಿಸಲು ಏನು ಕಾರಣ ?

ಲಕ್ಷ್ಮೀಯಲ್ಲಿ ಮಾತ್ರ ಅದೃಶ್ಯತ್ವ

तत्वप्रकाशिका – मैवम् । 'न तदश्नाति किञ्चन' इत्यक्षरस्यानशनोक्तेः। तच्च विष्णोर्विरुद्धम् । 'अत्ता चराचरग्रहणात्' इत्युक्तत्वात् । नच मध्यमाक्षरस्यानशनाङ्गीकारे विरोधोऽस्ति । अतो मध्यमाक्षरमेवैतदक्षरमिति तस्यैवादृश्यत्वादिगुणकत्वमिति भावः ।

ಇದು ತಪ್ಪು. 'ನ ತದಶ್ನಾತಿ ಕಿಂಚನ' ಎಂಬುದಾಗಿ ಯಾರು ಅಕ್ಷರನೆನಿಸಿದ್ದಾರೋ ಅವರು ಏನನ್ನೂ ತಿನ್ನುವುದಿಲ್ಲವೆಂದು ಶ್ರುತಿಯು ಹೇಳುತ್ತಿದೆ. ಇಂತಹ ಅನಶನತ್ವವನ್ನು ವಿಷ್ಣುವಿಗೆ ಹೇಳುವುದು ವಿರುದ್ಧವಾಗುತ್ತದೆ. ಏಕೆಂದರೆ 'ಅತ್ತಾ ಚರಾಚರಗ್ರಹಣಾತ್' ಎಂಬ ಸೂತ್ರದಲ್ಲಿ ಎಲ್ಲವನ್ನೂ ಭಕ್ಷಿಸುತ್ತಾನೆಂದು ಈಗಾಗಲೇ ಸಾಧಿಸಿದ್ದಾಗಿದೆ. ಮಧ್ಯಮಾಕ್ಷರಳೆನಿಸಿದ ಲಕ್ಷ್ಮೀದೇವಿಯು ಏನನ್ನೂ ಸಹ ತಿನ್ನುವುದಿಲ್ಲವೆಂದು ಅಂಗೀಕರಿಸಿದರೆ, ಇಂತಹ ವಿರೋಧಕ್ಕೆ ಅವಕಾಶವಿಲ್ಲ. ಆದ್ದರಿಂದ ಮಧ್ಯಮಾಕ್ಷರಳೆನಿಸಿದ ಲಕ್ಷ್ಮೀದೇವಿಯೇ ಅಕ್ಷರಶಬ್ದವಾಚ್ಯಳಾಗುತ್ತಾಳೆ, ಅವಳೇ ಅದೃಶ್ಯತ್ವಾದಿ ಧರ್ಮವುಳ್ಳವಳೂ ಸಹ ಆಗುತ್ತಾಳೆಂದು ತಿಳಿಯಬೇಕು.

'ಸೋಮ ಮಾಹನಸಂ' ಎಂಬುದರ ವ್ಯಾಖ್ಯಾನ

तत्वप्रकाशिका – आहनसं यज्ञेष्वभिषूयमाणम् । लताभिमानित्वेनेय - मुक्तिः। 'सोमं राजानं जुह्वति । तं देवा भक्षयन्ति' इत्यादिवत् ।

ಆಹನಸಂ = ಯಜ್ಞದಲ್ಲಿ ಕುಟ್ಟಿಸಿಕೊಳ್ಳುವಂತಹ ಸೋಮಲತೆಯು ಹಾಗೂ ಅದಕ್ಕೆ ಅಭಿಮಾನಿಯಾದ ಚಂದ್ರನು, 'ಸೋಮಂ ರಾಜಾನಂ ಜುಹ್ವತಿ ತಂ ದೇವಾ ಭಕ್ಷಯಂತಿ' ಎಂಬಲ್ಲಿ ಹೇಗೆ ಚಂದ್ರನ ಹವನ, ಭಕ್ಷಣಗಳನ್ನು ಸೋಮಲತಾಭಿಮಾನಿಯಾದ್ದರಿಂದ ಔಪಚಾರಿಕವಾಗಿ ಹೇಳುತ್ತಾರೋ ಆದರಂತೆ ಇಲ್ಲಿ ಆಹನಸತ್ವವನ್ನು ಔಪಚಾರಿಕವಾಗಿ ಹೇಳಿದ್ದಾರೆಂದು ತಿಳಿಯಬೇಕು.

ಲಕ್ಷ್ಮೀಗೂ ಆಧಾರನಾದವನೇ ಅಕ್ಷರ

तत्वप्रकाशिका – सिद्धान्तयत्सूत्रमवतार्य व्याचष्टे – अत इति ।। 'यद्भूतं च भवच्च भविष्यच्चेत्याचक्षते । आकाश एव तदोतं च प्रोतं च' इत्याकाशाख्यप्रकृतेः सर्वाधारत्वमुक्त्वा 'एतस्मिन् खल्वक्षरे गार्ग्याकाश ओतश्च प्रोतश्च' इत्यक्षरस्य तदाधारत्वश्रवणादित्यर्थः ।

ಸಿದ್ಧಾಂತವನ್ನು ಸ್ಥಾಪನೆ ಮಾಡುವ ಸೂತ್ರಕ್ಕೆ ಅವತಾರಿಕೆ ನೀಡಿ ವ್ಯಾಖ್ಯಾನಿಸುತ್ತಿದ್ದಾರೆ 'ಅತಃ' ಇತ್ಯಾದಿ ಭಾಷ್ಯದಿಂದ.

ಶ್ರುತಿಯಲ್ಲಿ ಕೇಳಿಸಲ್ಪಟ್ಟ ಅಕ್ಷರವು ಬ್ರಹ್ಮನೇ ಆಗಿದ್ದಾನೆ. ಏಕೆಂದರೆ ಅಂತಹ ಯಾವಾತನು ಸ್ವರ್ಗಲೋಕದ ಮೇಲೆ ಭೂಲೋಕದ ಕೆಳಗೆ ಮತ್ತು ಇವೆರಡರ ಮಧ್ಯದಲ್ಲಿ ತುಂಬಿದ್ದಾನೋ ಅಂತಹ ಆಕಾಶದಲ್ಲಿ ಹಿಂದಿನ, ಮುಂದಿನ ಮತ್ತು ಈಗಿನ ಸಕಲಪದಾರ್ಥಗಳೆಲ್ಲವೂ ಸಂಪೂರ್ಣವಾಗಿ ಆಶ್ರಯವನ್ನು ಪಡೆದಿರುತ್ತವೆ. ಹೀಗೆ ಆಕಾಶ ಎಂಬ ಪ್ರಕೃತಿಗೆ ಸರ್ವಾಧಾರತ್ವವನ್ನು ಹೇಳಿ 'ಏತಸ್ಮಿನ್ ಖಲು ಅಕ್ಷರೇ ಗಾರ್ಗಿ, ಆಕಾಶಃ ಓತಶ್ಚ ಪ್ರೋತಶ್ಚ' ಎಂಬುದಾಗಿ ಅಂತಹ ಚಿತ್‌ಪ್ರಕೃತಿಗೂ ಅಂದರೆ ಲಕ್ಷ್ಮೀದೇವಿಗೂ ಸಹ ಪರಮಾತ್ಮನೇ ಆಧಾರನಾಗಿದ್ದಾನೆಂದು ಹೇಳಲಾಗಿದೆ. ಇಂತಹ ಸರ್ವಾಧಾರತ್ವವೆಂಬ ವಿಷ್ಣುವಿನ ಧರ್ಮವನ್ನು ಹೇಳಿರುವ ಕಾರಣ ಅವನೇ ಅಕ್ಷರ ಶಬ್ದವಾಚ್ಯನಾಗುತ್ತಾನೆ.

ಸರ್ವಾಧಾರತ್ವ ವಿಷ್ಣುವಿನದ್ದೇ ಧರ್ಮ

तत्वप्रकाशिका – सर्वाधारत्वं कुतो विष्णुत्वनिश्चायकमित्यत आह – य इति ।। एको देवो भर्तृत्वेन बहुधा निविष्टो जगता भ्रियमाणस्तद्बिभर्ति । स च यदा तं भारं भर्तुं नेच्छति तदासौ नश्यतीत्यर्थः ।

ಈ ಸರ್ವಾಧಾರತ್ವವು ವಿಷ್ಣುವಿನ ಅಸಾಧಾರಣಧರ್ಮವೆಂದು ಹೇಗೆ ನಿಶ್ಚಯಿಸುತ್ತೀರಿ ? ಎಂಬ ಪ್ರಶ್ನೆಗೆ, 'ಯಥಾ' ಎಂಬುದಾಗಿ ಪ್ರಮಾಣ ನೀಡಿ ಉತ್ತರಿಸುತ್ತಿದ್ದಾರೆ. ಒಬ್ಬನೇ ಪರಮಾತ್ಮನು ಎಲ್ಲವನ್ನೂ ಧರಿಸಿದವನಾಗಿ ಅನೇಕ ರೂಪಗಳಿಂದ ಆಯಾ ಪದಾರ್ಥಗಳನ್ನು

ಪ್ರವೇಶಿಸಿ ಸಮಸ್ತ ಜಗತ್ತನ್ನೂ ಧಾರಣೆ ಮಾಡಿದ್ದಾನೆ. ಅಂತಹ ಪರಮಾತ್ಮನು ಯಾವಾಗ ವಿಶ್ವವನ್ನು ಹೊರಲು ಇಚ್ಛಿಸುವುದಿಲ್ಲವೋ ಆವಾಗ ಸಮಗ್ರ ವಿಶ್ವವು ನಾಶವಾಗುತ್ತದೆಂದು ಶ್ರುತಿಗೆ ಅರ್ಥ.

ಇತರರದ್ದಲ್ಲ

तत्वप्रकाशिका – एतच्च 'तद्वै त्वं प्राणः' इत्युक्तप्राणस्योच्यते । यस्मिन्निदं सम्यग्विविधं चैधि तदेव ब्रह्मेत्यर्थः । विष्णुवदन्यस्यापि सर्वाधारत्वं किं न स्यादित्यत आह – पृथिव्यादीति ।।

'ತದ್ವೈ ತ್ವಂ ಪ್ರಾಣಃ' ಎಂಬ ಶ್ರುತಿಯಿಂದ ಪ್ರಾಣಶಬ್ದವಾಚ್ಯನಾದ ವಿಷ್ಣುವಿನಲ್ಲೇ ಈ ಧರ್ಮವು ಯುಕ್ತವಾಗುತ್ತದೆ. ಯಾರಲ್ಲಿ ಈ ವಿಶ್ವವು ಸಂಪೂರ್ಣವಾಗಿ ಆಶ್ರಯವನ್ನು ಪಡೆದು ಪ್ರವರ್ತಮಾನವಾಗಿದೆಯೋ ಅಂತಹವನು ಬ್ರಹ್ಮನೇ ಆಗಿದ್ದಾನೆ. ವಿಷ್ಣುವಿನಂತೆ ಬೇರೆಯವರಿಗೂ ಸರ್ವಾಧಾರತ್ವವು ಏಕಿರಬಾರದು ? ಎಂದರೆ 'ಪೃಥಿವ್ಯಾದಿ' ಎಂಬ ಪ್ರಮಾಣದಿಂದ ಉತ್ತರಿಸಿದ್ದಾರೆ.

ಮಂತ್ರಾಲಯ ಪ್ರಭುಗಳಾದ ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ವಿರಚಿತವಾದ

ಭಾವದೀಪ

ಅವಿನಾಶಿತ್ವವು ಅಕ್ಷರಶಬ್ದದ ಪ್ರವೃತ್ತಿನಿಮಿತ್ತ

भावदीपः – अक्षरमम्बरान्तधृतेः ।।

विष्णोश्चेतनप्रकृतेश्चाविनाशित्वसाम्यादक्षरशब्दः साधारण इति न्यायविवरणोक्तं साधारण्यमाह – **अविनाशित्वेति ।।** अक्षरशब्दप्रवृत्ति-निमित्तेति योज्यम्

'ಅವಿನಾಶಿತ್ವ' ಎಂಬುದು ಅಕ್ಷರಶಬ್ದದ ಪ್ರವೃತ್ತಿನಿಮಿತ್ತವಾಗಿದೆ. ವಿಷ್ಣು ಹಾಗೂ ಮಹಾಲಕ್ಷ್ಮೀದೇವಿ ಇಬ್ಬರಲ್ಲಿಯೂ ಸಹ ಈ ಪ್ರವೃತ್ತಿನಿಮಿತ್ತವು ಸಾಧಾರಣವಾಗಿದೆ. ಈ ಬಗೆಯ ಸಾಧಾರಣ್ಯವನ್ನು ನ್ಯಾಯವಿವರಣದಲ್ಲಿ ಹೇಳಿರುತ್ತಾರೆ. ಅದನ್ನೇ ಪ್ರಕೃತ ಟೀಕೆಯಲ್ಲಿ 'ಅವಿನಾಶಿತ್ವ' ಇತ್ಯಾದಿಯಾಗಿ ಹೇಳಿರುತ್ತಾರೆ ಎಂದು ತಿಳಿಯಬೇಕು. ಇದು ಅಕ್ಷರಶಬ್ದದ ಪ್ರವೃತ್ತಿನಿಮಿತ್ತವಾಗಿದೆ ಎಂದು ಟೀಕೆಯಲ್ಲಿ ಕಂಠತಃ ಹೇಳದಿದ್ದರೂ ಯೋಜನೆ ಮಾಡಿಕೊಳ್ಳಬೇಕು.

ಲಕ್ಷ್ಮೀಯಲ್ಲಿ ಅಕ್ಷರಶಬ್ದದ ರೂಢಿಯೂ ಸಹ ಇದೆ

भावदीपः – उपलक्षणमेतत् । अक्षरशब्दस्य रूढ्या चेत्यपि ध्येयम् । अविनाशित्वयोगमात्रस्यातिप्रसङ्गात् । देहतोऽविनाशित्वसाम्यादिति वाऽर्थः । विशेषस्तु चन्द्रिकायाम् ।

ಲಕ್ಷ್ಮೀದೇವಿಯಲ್ಲಿ ಅಕ್ಷರಶಬ್ದದ ಪ್ರವೃತ್ತಿನಿಮಿತ್ತವಿದೆ ಎಂದಷ್ಟೇ ಅಲ್ಲ ರೂಢಿಯೂ ಸಹ ಇರುತ್ತದೆಂದು ತಿಳಿಯಬೇಕು. ಕೇವಲ ಪ್ರವೃತ್ತಿನಿಮಿತ್ತವನ್ನಷ್ಟೇ ವಿವಕ್ಷಿಸಿದರೆ ಅತಿಪ್ರಸಂಗ ಬರುತ್ತದೆ. ಅಥವಾ ಶರೀರದಿಂದ ವಿನಾಶವಿಲ್ಲದವರು ಮಹಾಲಕ್ಷ್ಮೀ ಹಾಗೂ ಮಹಾವಿಷ್ಣು ಮಾತ್ರವೆಂದು ತಿಳಿಯಬೇಕು. ಆದ್ದರಿಂದ 'ಅಕಾರಾದಿ ವರ್ಣಗಳೂ ಸಹ ಪೂರ್ವಪಕ್ಷಕ್ಕೆ ವಿಷಯವಾಗಲಿ' ಎಂದು ಆಶಂಕಿಸಬಾರದು. ಹೆಚ್ಚಿನ ವಿಷಯವನ್ನು ತಾತ್ಪರ್ಯಚಂದ್ರಿಕೆಯನ್ನು ಓದಿ ತಿಳಿಯಬಹುದು.

> ವಿಶೇಷವಿಚಾರ - 'ಯಯಾ ತದಕ್ಷರಮಧಿಗಮ್ಯತೇ' ಇತ್ಯಾದಿ ವಾಕ್ಯಗಳಿಂದ ಅಕ್ಷರಶಬ್ದದ ಪ್ರಯೋಗವನ್ನು ವಿಷ್ಣುವಿನಲ್ಲಿಯೂ ತೋರಿಸಬಹುದಲ್ಲವೇ? ಎಂದರೆ ಪೂರ್ವಪಕ್ಷಿಯು ಅಲ್ಲಿರುವ ಅಕ್ಷರಶಬ್ದಕ್ಕೂ ಸಹ ವಿಷ್ಣುಪರತ್ವವನ್ನು ಒಪ್ಪಲಾರನು. ಪೂರ್ವಪಕ್ಷಿಗೆ ಸಂಪ್ರತಿಪನ್ನವಾದ ಪ್ರಯೋಗವೇ ಇಲ್ಲದ ಕಾರಣ ಪ್ರಯೋಗಸಾಧಾರಣ್ಯದಿಂದ ಉಭಯತ್ರಪ್ರಸಿದ್ಧತ್ವವನ್ನು ತೋರಿಸಲು ಬರುವುದಿಲ್ಲ.
>
> ಮತ್ತು ಪ್ರಯೋಗವೆಂಬುದು ಕೇವಲ ಚಿತ್‌ಪ್ರಕೃತಿ ಹಾಗೂ ವಿಷ್ಣುವಿನಲ್ಲಿ ಮಾತ್ರ ಇರುವುದಿಲ್ಲ ಹೊರತಾಗಿ, ಲೋಕರೂಢಿಯಿಂದ ವರ್ಣಾದಿಗಳಲ್ಲಿಯೂ ಪ್ರಯೋಗವಿದೆ. ಸೃಷ್ಟಿಯಿಂದ ಜಡಪ್ರಕೃತಿಯಲ್ಲಿಯೂ ಪ್ರಯೋಗವಿದೆ. ಹೀಗೆ ವರ್ಣಾದಿಗಳಲ್ಲಿ ಸಾಧಾರಣವಾದ ಪ್ರಯೋಗದ ಬಲದಿಂದ ಅಕ್ಷರಶಬ್ದವು ಬ್ರಹ್ಮ ಹಾಗೂ ಲಕ್ಷ್ಮೀದೇವಿ ಇಬ್ಬರಲ್ಲಿ ಮಾತ್ರ ಇರುವಂತಹ ಅಸಾಧಾರಣ ಧರ್ಮವಾಗುವುದಿಲ್ಲ. ಆದ್ದರಿಂದ

ಪ್ರವೃತ್ತಿನಿಮಿತ್ತದ ಸಾಮ್ಯದಿಂದಲೇ ಉಭಯಸಾಧಾರಣ್ಯವನ್ನು ತೋರಿಸಬೇಕೇ ಹೊರತು, ಪ್ರಯೋಗಸಾಮ್ಯದಿಂದ ಉಭಯಸಾಧಾರಣ್ಯವನ್ನು ತೋರಿಸಬಾರದು.

ಮತ್ತು ಸಾಧಾರಣ್ಯವನ್ನು ತೋರಿಸುವಾಗ ಬೇರೆ ಪ್ರಕರಣದಲ್ಲಿರುವ ಪ್ರಯೋಗವನ್ನು ಅನುಸರಿಸಿ ಸಾಧಾರಣ್ಯವನ್ನು ಹೇಳಬೇಕು. ಬೇರೆ ಸ್ಥಳದಲ್ಲಿರುವ ಪ್ರಯೋಗವಾದರೂ ಸಹ ರೂಢಿಯಿಂದಲೇ ಉಪಪನ್ನವಾಗಬೇಕಾಗಿಲ್ಲ. ಯೋಗವೃತ್ತಿಯಿಂದಲೂ ಸಹ ಉಪಪನ್ನವಾಗಬಹುದು. ಇದಕ್ಕಿಂತ ಸಮನ್ವಯ ಮಾಡಬೇಕಾದ ಶಬ್ದದ ಪ್ರವೃತ್ತಿನಿಮಿತ್ತದಿಂದಲೇ ಉಭಯಸಾಧಾರಣ್ಯವನ್ನು ಹೇಳಿ ಉಭಯತ್ರಪ್ರಸಿದ್ಧತ್ವವನ್ನು ತೋರಿಸುವುದು ಹೆಚ್ಚು ಸ್ವರಸ. ಅಂದರೆ ಬೇರೆ ಸ್ಥಳದಲ್ಲಿ ಪ್ರಯೋಗವನ್ನು ಕೂಡಿಸುವುದಕ್ಕಾಗಿ ಕೊನೆಗೆ ಪ್ರವೃತ್ತಿನಿಮಿತ್ತವನ್ನು ಆಶ್ರಯಿಸಲೇಬೇಕು. ಆದ್ದರಿಂದ ಅದು ಸಾಪೇಕ್ಷ. ಅದಕ್ಕಿಂತಲೂ ಸಮನ್ವಯಮಾಡಬೇಕಾದ ಶಬ್ದದಿಂದಲೇ ತಿಳಿಯುವಂತಹ ನಿರಪೇಕ್ಷವಾದ ಪ್ರವೃತ್ತಿನಿಮಿತ್ತದ ಸಾಮ್ಯದಿಂದ ಉಭಯಸಾಧಾರಣ್ಯವನ್ನು ಹೇಳುವುದು ಲಘುವಾಗಿದೆ ಎಂದು ಅಭಿಪ್ರಾಯ.

ವಿಷಯವಾಕ್ಯದಲ್ಲಿರುವ ಅಕ್ಷರಶಬ್ದಕ್ಕೆ ಕೇವಲ ಯೋಗಾರ್ಥವನ್ನು ಸ್ವೀಕರಿಸಿದರೆ ವರ್ಣ, ಜಡಪ್ರಕೃತ್ಯಾದಿಗಳಲ್ಲಿಯೂ ಅವಿನಾಶಿತ್ವವು ಇರುವುದರಿಂದ ಅತಿಪ್ರಸಕ್ತಿ ಬರುತ್ತದೆ. ಆದ್ದರಿಂದ ಪಂಕಜಾದಿ ಶಬ್ದಗಳಲ್ಲಿ ಕೇವಲ ಯೋಗಾರ್ಥವನ್ನು ಸ್ವೀಕರಿಸದೇ ರೂಢ್ಯರ್ಥವನ್ನೂ ಹೇಗೆ ಸ್ವೀಕರಿಸುತ್ತಾರೋ ಅದರಂತೆ ಇಲ್ಲಿಯೂ ಸಹ ಯೋಗಾರ್ಥದ ಜೊತೆಗೆ ವಿಷ್ಣು ಹಾಗೂ ಲಕ್ಷ್ಮೀದೇವಿಯಲ್ಲಿ ರೂಢ್ಯರ್ಥವನ್ನೂ ಸಹ ಸ್ವೀಕರಿಸಬೇಕು.

ಹೀಗೆ ಯೋಗ ಹಾಗೂ ರೂಢ್ಯರ್ಥವನ್ನು ಹೊಂದಿರುವ ಯೋಗರೂಢವಾದ ಅಕ್ಷರಶಬ್ದದವಿಷಯದಲ್ಲಿರೂಢ್ಯಂಶದಿಂದಉಭಯಸಾಧಾರಣ್ಯವು'ಅಕ್ಷರತ್ರಯಮೀರಿತಮ್' ಎಂಬ ಅದೃಶ್ಯತ್ವಾಧಿಕರಣದ ಭಾಷ್ಯದಲ್ಲಿ ಉದಾಹರಿಸಿದ ಸ್ಮೃತಿಯಿಂದಲೇ ಸಿದ್ಧವಾಗಿದೆ. ಯೋಗಾಂಶದಿಂದ ಉಭಯಸಾಧಾರಣ್ಯವು ಹೇಗೆ ಎಂಬುದನ್ನು 'ಅವಿನಾಶಿತ್ವಸಾಮ್ಯಾತ್' ಎಂಬ ನ್ಯಾಯವಿವರಣದಲ್ಲಿ ಹೇಳಿದ್ದಾರೆ.

ಆದ್ದರಿಂದಲೇ ಟೀಕೆಯಲ್ಲಿ 'ದ್ರಷ್ಟ್ರತ್ವಾದಿಶ್ರವಣಾತ್ ಜಡಪ್ರಕೃತೇಃ ಓಂಕಾರಸ್ಯ ಚ ನ ಸಂದೇಹನಿವಿಷ್ಟತ್ವಮ್' ಎಂದರೆ 'ದ್ರಷ್ಟ್ರತ್ವಾದಿಗಳು ವಿಷಯವಾಕ್ಯದಲ್ಲಿಕೇಳಿಸುತ್ತಿರುವುದರಿಂದ ಜಡಪ್ರಕೃತಿಯಾಗಲೀ, ಓಂಕಾರವಾಗಲೀ ಸಂದೇಹ ಕೋಟಿಯಲ್ಲಿ ಸೇರಿರುವುದಿಲ್ಲ' ಎಂದು ಹೇಳಿರುತ್ತಾರೆ. ಅಂದರೆ ರೂಢಿವೃತ್ತಿಯನ್ನು ಸ್ವೀಕರಿಸಿದಾಗ ಓಂಕಾರ ಹಾಗೂ ಜಡಪ್ರಕೃತಿಯಲ್ಲಿ ರೂಢಿಯಿರುವುದರಿಂದ ಅವುಗಳನ್ನೂ ಸಹ ಸಂದೇಹ ಕೋಟಿಯಲ್ಲಿ ಸೇರಿಸಬೇಕಲ್ಲವೇ? ಎಂದು ಪ್ರಶ್ನಿಸಿ ದ್ರಷ್ಟ್ರತ್ವಾದಿಗಳಿಲ್ಲದ ಕಾರಣ ಅವೆರಡನ್ನು ಸಂದೇಹಕೋಟಿಯಲ್ಲಿ

ಸೇರಿಸಬಾರದೆಂದು ಹೇಳಿರುತ್ತಾರೆ. ಇದರಿಂದ ಯೋಗ, ರೂಢಿಗಳೆರಡನ್ನೂ ವಿವಕ್ಷಿಸಬೇಕೆಂಬ ವಿಚಾರವು ಸ್ಪಷ್ಟವಾಗುತ್ತದೆ.

ಹೀಗೆ ಅಭಿಪ್ರಾಯವಿಲ್ಲದಿದ್ದಲ್ಲಿ 'ನಿತ್ಯಮಾತ್ರಸ್ಯ ನ ಸಂದೇಹನಿವಿಷ್ಟತ್ವಮ್' ಸಕಲ ನಿತ್ಯಪದಾರ್ಥಗಳು ಸಂದೇಹಕೋಟಿಯಲ್ಲಿ ಸೇರುವುದಿಲ್ಲ ಎಂದೇ ಹೇಳುತ್ತಿದ್ದರು. ಆದರೆ ಓಂಕಾರ ಹಾಗೂ ಜಡಪ್ರಕೃತಿಗಳೆರಡನ್ನೇ ವಿವಕ್ಷಿಸಿದ್ದರಿಂದ ಯೋಗವನ್ನಷ್ಟೇ ಸ್ವೀಕರಿಸುವುದಲ್ಲದೇ ರೂಢಿಯನ್ನೂ ಸಹ ಸ್ವೀಕರಿಸಬೇಕೆಂದು ಸ್ಪಷ್ಟವಾಗುತ್ತದೆ.

ಅಕ್ಷರಶಬ್ದವು ಉಭಯತ್ರಪ್ರಸಿದ್ಧವೆಂದೇಕೆ ಆಶಂಕಿಸಿಲ್ಲ ಎಂದರೆ, ಜಡಪ್ರಕೃತ್ಯಾದಿಗಳಲ್ಲಿಯೂ ಸಾಧಾರಣವಾಗಿರುವುದರಿಂದ ಅಕ್ಷರಶಬ್ದವು ಉಭಯತ್ರಪ್ರಸಿದ್ಧವಾಗುವುದಿಲ್ಲವೆಂದು ಟೀಕೆಯಲ್ಲಿ ಆಶಂಕಿಸಿಲ್ಲ. ಏಕೆಂದರೆ ಸಂಶಯಕೋಟಿಯನ್ನು ಬಿಟ್ಟು ಬೇರೆ ಪದಾರ್ಥಗಳಲ್ಲಿ ಯೋಗ ಹಾಗೂ ರೂಢಿಗಳು ಸಾಧಾರಣವಾಗಿದ್ದರೂ ಸಂಶಯಕೋಟಿ ಸಾಧಾರಣ್ಯದಿಂದಷ್ಟೇ ಉಭಯತ್ರಪ್ರಸಿದ್ಧತ್ವವು ಸಿದ್ಧವಾಗುತ್ತದೆ.

ಬೃಹದಾರಣ್ಯಕದ ಐದನೆಯ ಅಧ್ಯಾಯದ ವಿಷಯ

भावदीपः – इत्यन्तभाष्यं सङ्गतिपरत्वेन तावद् व्याकुर्वन् अदृश्यत्वादिगुणा अक्षरस्योक्ता इत्येतावदंशं व्याचष्टे – अदृश्यत्वादिगुणा इति ।। अदृश्यत्वनये उक्ता इत्यर्थः । वाजसनेयके पञ्चमाध्याये 'अदृष्टं द्रष्टृश्रुतं श्रोतृ' इत्यादिनेत्यर्थः ।।

'ಇತಿ' ಎಂಬಲ್ಲಿಯ ತನಕದ ಭಾಷ್ಯವನ್ನು ಸಂಗತಿ ಪರವಾಗಿ ವ್ಯಾಖ್ಯಾನಿಸುತ್ತಾ 'ಅದೃಶ್ಯತ್ವಾದಿಗುಣಾಃ ಅಕ್ಷರಸ್ಯೋಕ್ತಾಃ' ಎಂಬ ಅಂಶವನ್ನು ವ್ಯಾಖ್ಯಾನಿಸುತ್ತಿದ್ದಾರೆ 'ಅದೃಶ್ಯತ್ವಾದಿಗುಣಾಃ' ಇತ್ಯಾದಿ ವಾಕ್ಯದಿಂದ. ಅದೃಶ್ಯಾತ್ವಾಧಿಕರಣವು ಅದೃಶ್ಯತ್ವಾದಿಗುಣಗಳನ್ನು ಮಹಾವಿಷ್ಣುವಿನಲ್ಲಿ ಸಮರ್ಥಿಸಿದೆ. ಬೃಹದಾರಣ್ಯಕದ ಐದನೆಯ ಅಧ್ಯಾಯದಲ್ಲಿ 'ಅದೃಷ್ಟಂ ದ್ರಷ್ಟೃಶ್ರುತಂ ಶ್ರೋತೃ' ಇತ್ಯಾದಿ ವಾಕ್ಯವಿರುತ್ತದೆ ಎಂದು ತಿಳಿಯಬೇಕು. ಈ ವಾಕ್ಯದಲ್ಲಿ ಕೇಳಿಸಲ್ಪಟ್ಟ ಅದೃಶ್ಯತ್ವಾದಿಗಳಿಂದ ಎಂದು ಟೀಕಾಮಾತಿನ ಅರ್ಥ.

ಟೀಕೆಯಲ್ಲಿ ಉಲ್ಲೇಖಿಸಿದ ವಿಷಯವಾಕ್ಯದ ಬಗ್ಗೆ

भावदीपः – तद्वा एतदिति ।। अम्बराधारत्वद्योतनायादिपदोपात्तपरशेषोक्तिः । अदृश्यत्वादेरक्षरस्थताद्योतनाय पूर्वशेषोक्तिः ।। इतीति ।। इत्युक्ता इत्यन्वयः । 'अहं सोमम्' इत्यादेर्भावमाह – तस्येति ।।

ಆಕಾಶಕ್ಕೆ ಅಕ್ಷರವು ಧಾರಕವಾಗಿದೆ ಎಂಬುದನ್ನು ಸ್ಪಷ್ಟಪಡಿಸುವುದಕ್ಕಾಗಿ ಭಾಷ್ಯದಲ್ಲಿರುವ ಆದಿಪದದಿಂದ ಸೂಚಿತವಾದ ವಿಷಯವಾಕ್ಯದ ಶೇಷಭಾಗವನ್ನು ಟೀಕೆಯಲ್ಲಿ 'ತದ್ಧಾ ಏತತ್' ಇತ್ಯಾದಿಯಾಗಿ ಉಲ್ಲೇಖಿಸಿದ್ದಾರೆ. ಅದೃಶ್ಯತ್ವಾದಿಗಳು ಅಕ್ಷರನಲ್ಲಿ ಕೇಳಿಸುತ್ತಿವೆ ಎಂದು ಸ್ಪಷ್ಟಪಡಿಸುವುದಕ್ಕಾಗಿ ವಿಷಯವಾಕ್ಯದ ಪೂರ್ವವಾಕ್ಯವನ್ನು ಉಲ್ಲೇಖಿಸಿದ್ದಾರೆ. 'ಇತಿ' ಎಂಬುದಕ್ಕೆ 'ಉಕ್ತಾಃ' ಎಂಬಲ್ಲಿ ಅನ್ವಯ. 'ಅಹಂ ಸೋಮಮ್' ಇತ್ಯಾದಿ ವಾಕ್ಯದ ಅಭಿಪ್ರಾಯವನ್ನು 'ತಸ್ಯ' ಇತ್ಯಾದಿ ವಾಕ್ಯದಿಂದ ಹೇಳಿದ್ದಾರೆ.

ನಿರ್ಧರಿಸಲೇ ಬೇಕಾದ ವಿಷಯ

भावदीपः – वक्ष्यमाणदिशा चन्द्राद्याधारत्वलिङ्गाच्चित्प्रकृतित्व इत्यर्थः । 'गुणाः' इत्येतस्य तात्पर्यम् – अदृश्यत्वादिकं चेति ।। इतीति ।। इति सङ्गतिसम्भवादवश्यनिर्णेयत्वमक्षरस्येत्यर्थः – उक्तेति ।। देहाक्षरणरूपा-विनाशित्वाख्यप्रवृत्तिनिमित्तसाधारण्यमित्यर्थः ।

ಮುಂದೆ ಹೇಳುವ ಪ್ರಕಾರ ಸೂರ್ಯಚಂದ್ರಾದ್ಯಾಧಾರತ್ವವೆಂಬ ಲಿಂಗದಿಂದ ಲಕ್ಷ್ಮೀದೇವಿಯನ್ನೇ ಅಕ್ಷರಶಬ್ದವಾಚ್ಯಳೆಂದು ವಿವಕ್ಷಿಸುವುದಾದರೆ ಎಂದು 'ತಸ್ಯ' ಇತ್ಯಾದಿ ವಾಕ್ಯದಲ್ಲಿ ವಿವಕ್ಷಿಸಬೇಕು. 'ಗುಣಾಃ' ಎಂಬುದರ ತಾತ್ಪರ್ಯವನ್ನೇ 'ಅದೃಶ್ಯತ್ವಾದಿಕಂ ಚ' ಎಂಬುದರಿಂದ ಹೇಳಿದ್ದಾರೆ. 'ಇತಿ' ಎಂದರೆ ಹೀಗೆ ಸಂಗತಿಯು ಕೂಡುವುದರಿಂದ ಅಕ್ಷರ ಶಬ್ದವಾಚ್ಯರು ಯಾರೆಂದು ಅವಶ್ಯವಾಗಿ ನಿರ್ಣಯಿಸಬೇಕೆಂದು ತಿಳಿಯಬೇಕು. 'ಉಕ್ತ' ಎಂದರೆ ದೇಹನಾಶವಿಲ್ಲದಿರುವಿಕೆ ಎಂಬ ಅವಿನಾಶಿತ್ವವೆಂಬ ಪ್ರವೃತ್ತಿನಿಮಿತ್ತ-ಸಾಧಾರಣ್ಯವನ್ನು ಇಬ್ಬರಲ್ಲೂ ಹೇಳಲಾಗಿದೆ ಎಂದು ಅರ್ಥ.

ಜಡಪ್ರಕೃತಿ ಹಾಗೂ ಓಂಕಾರಗಳನ್ನೇಕೆ ಪರಿಗಣಿಸಿಲ್ಲ

भावदीपः – ननु 'अक्षरत्रयमीरितम्' इत्यदृश्यत्वनयोक्तस्मृत्या जडप्रकृतौ तथा 'यः पुनरेतं त्रिमात्रेणोम् इति अनेनैवाक्षरेण परं पुरुषममभिध्यायीत' इत्योङ्कारेऽप्यक्ष पदप्रयोगदर्शनात् प्रवृत्तिनिमित्तस्यापि तत्साम्येनैव वाच्यत्वात्तयोः कुतो न संशयकोटित्वमित्यत आह – द्रष्टृत्वा दिश्रवणाज्जडप्रकृतेरोङ्कारस्य चेति ।।

ಪ್ರಶ್ನೆ - ಅದೃಶ್ಯತ್ವಾಧಿಕರಣದಲ್ಲಿ ಉದಾಹರಿಸಲ್ಪಟ್ಟ 'ಅಕ್ಷರತ್ರಯಮೀರಿತಮ್' ಎಂಬ ಶ್ರುತಿಯು ಜಡಪ್ರಕೃತಿಯಲ್ಲೂ ಸಹ ಅಕ್ಷರಶಬ್ದವನ್ನು ಪ್ರಯೋಗಿಸುತ್ತಿದೆ ಮತ್ತು 'ಯಃ ಪುನರೇತಂ ತ್ರಿಮಾತ್ರೇಣೋಮ್ ಇತಿ ಅನೇನೈವ ಅಕ್ಷರೇಣ ಪರಂ ಪುರುಷಮ್ ಅಭಿಧ್ಯಾಯೀತ' ಎಂಬಲ್ಲಿ ಓಂಕಾರದಲ್ಲಿಯೂ ಸಹ 'ಅಕ್ಷರ' ಪದದ ಪ್ರಯೋಗವಿದೆ. 'ಅಕ್ಷರ' ಪದಪ್ರಯೋಗದ ಸಾಮ್ಯವಿರುವುದರಿಂದ ಪ್ರವೃತ್ತಿನಿಮಿತ್ತವೂ ಸಹ ಅವೆರಡರಲ್ಲಿ ಇರುತ್ತವೆಂದು ತಿಳಿಯಬೇಕು. ಹೀಗಿರುವಾಗ ಜಡಪ್ರಕೃತಿಯನ್ನಾಗಲೀ, ಓಂಕಾರವನ್ನಾಗಲೀ ಏಕೆ ಪೂರ್ವಪಕ್ಷವಿಷಯವನ್ನಾಗಿ ಪರಿಗಣಿಸಿಲ್ಲ? ಎಂಬ ಪ್ರಶ್ನೆಗೆ 'ದ್ರಷ್ಟ್ರತ್ವಾದಿಶ್ರವಣಾತ್ ಜಡಪ್ರಕೃತೇರೋಂಕಾರಸ್ಯ ಚ' ಎಂಬುದರಿಂದ ಉತ್ತರಿಸಿದ್ದಾರೆ.

ವಿಶೇಷವಿಚಾರ - ಪೂರ್ವಪಕ್ಷ ಹೀಗಿದೆ - ಶ್ರುತಿಯಲ್ಲಿ ಕೇಳಿಸುತ್ತಿರುವ ಅಕ್ಷರವು ಲಕ್ಷ್ಮೀದೇವಿಯನ್ನೇ ಪ್ರತಿಪಾದಿಸುತ್ತದೆ ಹೊರತು, ವಿಷ್ಣುವನ್ನಲ್ಲ. ವಾಸ್ತವಿಕವಾಗಿ ಅಕ್ಷರಶಬ್ದದ ಪ್ರವೃತ್ತಿನಿಮಿತ್ತವೆನಿಸಿದ ಅವಿನಾಶಿತ್ವವು ವಿಷ್ಣು ಹಾಗೂ ಲಕ್ಷ್ಮೀ ಇಬ್ಬರಲ್ಲಿಯೂ ಸಮಾನವಾಗಿರಬಹುದು. ಆದರೆ ವೈದಿಕಪ್ರಯೋಗವು ಲಕ್ಷ್ಮೀದೇವಿಯಲ್ಲಷ್ಟೇ ಇರುವುದರಿಂದ ಲಕ್ಷ್ಮೀದೇವಿಯ ವಿಷಯದಲ್ಲಿರುವ ಅಕ್ಷರಶ್ರುತಿಯು ನಿರವಕಾಶವಾಗಿದೆ. ಅದು ಹೀಗೆ -

ಲಕ್ಷ್ಮೀದೇವಿಯಲ್ಲಿ 'ಅಕ್ಷರ' ಎಂಬ ಶಬ್ದದ ಲೌಕಿಕಪ್ರಯೋಗವೇನೋ ಇರುವುದಿಲ್ಲ. ಆದರೆ 'ಯೇ ತ್ವಕ್ಷರಮನಿರ್ದೇಶ್ಯಮ್' ಇತ್ಯಾದಿಯಾಗಿ ಅಕ್ಷರಶಬ್ದದ ವೈದಿಕ ಪ್ರಯೋಗವಿರುತ್ತದೆ. ಇಂತಹ ಶ್ರೌತಪ್ರಯೋಗವು ಕ್ಷರಾಕ್ಷರಪದಾರ್ಥಗಳಿಗಿಂತ ಅತೀತನೆಂದು ಪ್ರಸಿದ್ಧನಾದ ಮಹಾವಿಷ್ಣುವಿನಲ್ಲಿ ಇರುವುದಿಲ್ಲ.

'ಯಯಾ ತದಕ್ಷರಮಧಿಗಮ್ಯತೇ' ಮತ್ತು 'ಅಕ್ಷರಾತ್ ಸಂಭವತೀಹ ವಿಶ್ವಮ್' ಇತ್ಯಾದಿ ಶ್ರುತಿಗಳಲ್ಲಿರುವ ಅಕ್ಷರಶಬ್ದವು ವಿಷ್ಣುಪರವಾಗಿದೆಯಲ್ಲವೇ? ಎಂದು ಪ್ರಶ್ನಿಸಬಾರದು. ಅಲ್ಲಿರುವ ಅಕ್ಷರಶಬ್ದವೂ ಸಹ ಲಕ್ಷ್ಮೀದೇವಿಯನ್ನೇ ಪ್ರತಿಪಾದಿಸುತ್ತದೆಂದು ಪೂರ್ವಪಕ್ಷಿಯ ಅಭಿಪ್ರಾಯ.

ಆದ್ದರಿಂದಲೇ ಅದೃಶ್ಯತ್ವಾದಿಗುಣಗಳುಳ್ಳ ಅಕ್ಷರವು ವಿಷ್ಣುವಾಗದಿದ್ದರೆ, ಹಿಂದಿನ ಅದೃಶ್ಯತ್ವಾಧಿಕರಣದಲ್ಲಿ ಸಾಧಿಸಲ್ಪಟ್ಟ ಅದೃಶ್ಯತ್ವಾದಿಗುಣಗಳುಳ್ಳ ಅಕ್ಷರವೂ ಸಹ ವಿಷ್ಣು ಆಗುವುದಿಲ್ಲ ಬಿಟ್ಟು ಬೇರೆಯದೇ ಆಗುತ್ತದೆ. ಆದ್ದರಿಂದ ಈ ಅಧಿಕರಣಕ್ಕೆ ಅದೃಶ್ಯತ್ವಾಧಿಕರಣವನ್ನು ಆಕ್ಷೇಪಿಸಿಯೇ ಸಂಗತಿಗಳನ್ನು ಭಾಷ್ಯಾದಿಗಳಲ್ಲಿ ತೋರಿಸಿದ್ದಾರೆ.

ಇಲ್ಲದಿದ್ದರೆ 'ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ ದ್ಯಾವಾಪೃಥಿವ್ಯೌ ವಿಧೃತೇ ತಿಷ್ಠತಃ' ಇತ್ಯಾದಿಯಾಗಿ ದ್ಯಾವಾಪೃಥಿವ್ಯಾದಿಗಳಿಗೆ ಆಶ್ರಯನೆಂದು ಶ್ರುತನಾದ ಅಕ್ಷರನು

ಬೇರೆಯವನಾದರೆ ದ್ಯುಭ್ವಾದ್ಯಾಯತನೂ ಸಹ ಬೇರೆಯವನೇ ಆಗುತ್ತಾನೆ ಹೊರತು, ವಿಷ್ಣುವಾಗುವುದಿಲ್ಲವೆಂದು ಸನ್ನಿಹಿತವಾದ ದ್ಯುಭ್ವಾದ್ಯಧಿಕರಣವನ್ನು ಆಕ್ಷೇಪಿಸಬೇಕಿತ್ತು.

ಅಕ್ಷರ ಶಬ್ದವು ಉಭಯತ್ರಪ್ರಸಿದ್ಧವಾಗಬೇಕಾದರೆ ಬ್ರಹ್ಮನಲ್ಲಿಯೂ ಸಹ ಪ್ರಯೋಗವನ್ನು ತೋರಿಸಬೇಕಲ್ಲವೇ? ಎಂದು ಪ್ರಶ್ನಿಸಬಾರದು. ಅವಿನಾಶಿತ್ವವೆಂಬ ಪ್ರವೃತ್ತಿನಿಮಿತ್ತವು ಉಭಯಸಾಧಾರಣವಾಗಿದೆಯೆಂದು ತೋರಿಸುವುದರಿಂದಷ್ಟೇ ಅಕ್ಷರಶಬ್ದವನ್ನು ಉಭಯತ್ರ-ಪ್ರಸಿದ್ಧವೆನ್ನಬೇಕು ಎನ್ನುವ ಉಭಯತ್ರಪ್ರಸಿದ್ಧಿಗೆ ಪೂರ್ವಪಕ್ಷದೆಸೆಯಲ್ಲಿ ಬ್ರಹ್ಮನಲ್ಲಿ ಪ್ರಯೋಗವನ್ನು ತೋರಿಸುವ ಅವಶ್ಯಕತೆ ಇರುವುದಿಲ್ಲ.

ಆದ್ದರಿಂದಲೇ ಭಾಷ್ಯದಲ್ಲಿ ಪೂರ್ವಪಕ್ಷವನ್ನು ತೋರಿಸುವಾಗ 'ಶ್ರೀತತ್ವಸ್ಯ' ಎಂದು ಹೇಳುವ ಬದಲು 'ಮಧ್ಯಮಾಕ್ಷರಸ್ಯ' ಎಂದು ಹೇಳಿದ್ದಾರೆ. ಅಂದರೆ ಲಕ್ಷ್ಮೀದೇವಿಯ ವಿಷಯದಲ್ಲಿರುವ ಅಕ್ಷರಶಬ್ದವು ನಿರವಕಾಶವಾಗಿದೆಯೆಂದು ಪೂರ್ವಪಕ್ಷದಲ್ಲಿ ಹೇತುವನ್ನು ಇದರಿಂದ ಸೂಚಿಸಿದ್ದಾರೆ

ಅದ್ವೈತಿಗಳು ಓಂಕಾರವನ್ನು ವಿವಕ್ಷಿಸಿದ್ದಾರೆ

भावदीपः – एतेन 'ॐकारेण सर्वा वाक् सन्तृण्णा' इत्यादिश्रुत्या सर्ववर्णात्मकोङ्कारस्य सन्देहकोटित्वं वदन्तो निरस्ताः ।

ಹೀಗೆ ಹೇಳಿದ್ದರಿಂದ 'ಓಂಕಾರೇಣ ಸರ್ವಾ ವಾಕ್ ಸಂತೃಣ್ಣಾ' ಇತ್ಯಾದಿ ಶ್ರುತಿಯ ಬಲದಿಂದ ಸಕಲ ವರ್ಣಸ್ವರೂಪವಾದ ಓಂಕಾರವು ಸಂದೇಹಕೋಟಿನಿವಿಷ್ಟವಾಗಿದೆ ಎಂದು ಹೇಳುವ ಅದ್ವೈತಮತವನ್ನು ನಿರಾಕರಿಸಿದಂತಾಯಿತು.

'ಜಡಪ್ರಕೃತೇಃ ಆಕಾಶಸ್ಯ ಚ' ಎಂಬ ಪಾಠ ಅಸಾಧು

भावदीपः – कचित्तु जडप्रकृतेराकाशस्य चेति पाठः । स च न साधुरेव। तत्राक्षरशब्दाप्रवृत्तेः । अविनाशित्वरूपप्रवृत्तिनिमित्तस्य भूताकाशेऽभावात्। अव्याकृते भावेऽपि कालात्मादावपि भावेनाऽकाशस्य चेति विशिष्योक्त्ययोगादित्याहुः ।।

ಕೆಲವೆಡೆ 'ಜಡಪ್ರಕೃತೇಃ ಆಕಾಶಸ್ಯ ಚೇತಿ' ಎಂಬ ಪಾಠವಿದೆ. ಈ ಪಾಠವು ಅತ್ಯಂತ ಅಸಾಧುವಾಗಿದೆ. ಏಕೆಂದರೆ ಇವೆರಡರಲ್ಲಿ ಅಕ್ಷರಶಬ್ದದ ಪ್ರವೃತ್ತಿಯೇ ಇರುವುದಿಲ್ಲ. 'ಅವಿನಾಶಿತ್ವ' ಎಂಬ ಪ್ರವೃತ್ತಿನಿಮಿತ್ತವು ಭೂತಾಕಾಶದಲ್ಲಿ ಇರುವುದಿಲ್ಲ. ಅವ್ಯಾಕೃತಾಕಾಶದಲ್ಲಿ ಪ್ರವೃತ್ತಿನಿಮಿತ್ತವಿದ್ದರೂ ಕಾಲ ಹಾಗೂ ಆತ್ಮಾ ಇವುಗಳಲ್ಲಿಯೂ ಸಹ ಅದೇ ಪ್ರವೃತ್ತಿನಿಮಿತ್ತ ಇರುವುದರಿಂದ 'ಆಕಾಶಸ್ಯ ಚ' ಎಂಬ ಉಲ್ಲೇಖವನ್ನು ವಿಶೇಷವಾಗಿ ಮಾಡಲು ಕಾರಣವಿಲ್ಲವೆಂದು ಕೆಲವರು ಹೇಳುತ್ತಾರೆ.

ಮುಂದಿನ ಅಧಿಕರಣದಲ್ಲಿ ಜಡಪ್ರಕೃತಿಯು ಸೇರಿದೆ

ಭಾವದೀಪಃ – ತರ್ಹಿ ಉತ್ತರನಯೇऽಪಿ 'ತದೈಕ್ಷತ' ಇತಿ ಶ್ರವಣಾಜ್ಜಡಪ್ರಕೃತಿಸಂಶಯೋ ನ ಸ್ಯಾದಿತ್ಯತ ಆಹ – ಉತ್ತರೇತಿ ।। ಸದೇವೇತ್ಯತ್ರಾಪ್ರತೀತೇರಿತ್ಯರ್ಥಃ ।

ದ್ರಷ್ಟೃತ್ವಾದಿಗಳು ಇಲ್ಲದ ಕಾರಣ ಜಡವಾದ ಪ್ರಕೃತಿಯು ಪೂರ್ವಪಕ್ಷಕ್ಕೆ ವಿಷಯವಾಗುವುದಿಲ್ಲ-ವೆನ್ನುವುದಾದರೆ 'ತದೈಕ್ಷತ' ಎಂದು ಮುಂದಿನ ಅಧಿಕರಣದ ವಿಷಯವಾಕ್ಯದಲ್ಲೂ ಕೇಳಿಸುತ್ತಿರುವುದರಿಂದ ಅಲ್ಲಿಯೂ ಕೂಡ ಇಲ್ಲಿಯಂತೆ ಜಡಪ್ರಕೃತಿಯನ್ನು ಸಂಶಯಕೋಟಿಯಲ್ಲಿ ಸೇರಿಸಿದ್ದು ತಪ್ಪಾದೀತಲ್ಲವೆ? ಎಂಬ ಪ್ರಶ್ನೆಗೆ 'ಉತ್ತರಾಧಿಕರಣೇ' ಇತ್ಯಾದಿ ವಾಕ್ಯೈದಿಂದ ಉತ್ತರಿಸಿದ್ದಾರೆ. 'ಸದೇವ ಸೋಮ್ಯ ಇದಮಗ್ರ ಆಸೀತ್' ಎಂಬಲ್ಲಿ ಅಪ್ರತೀತವಾಗಿದೆ ಎಂದರ್ಥ.

ಅಂತರ್ಯಾಮ್ಯಧಿಕರಣದಲ್ಲಿಯೂ ಜಡಪ್ರಕೃತಿಯು ಸೇರಿದೆ

ಭಾವದೀಪಃ – ಏತೇನಾನ್ತರ್ಯಾಮಿನಯೇऽಪಿ ಪ್ರಕೃತೇಃ ಸಂಶಯಕೋಟಿತ್ವಂ ಸಮಾಹಿತಂ ಧ್ಯೇಯಮ್ ।

ಹೀಗೆ ಹೇಳಿದ್ದರಿಂದ ಅಂತರ್ಯಾಮ್ಯಧಿಕರಣದಲ್ಲಿಯೂ ಕೂಡ ಪ್ರಕೃತಿಯು ಹೇಗೆ ಸಂಶಯ ಕೋಟಿಯಲ್ಲಿ ನಿವಿಷ್ಟವಾಗಿದೆ ? ಎಂಬ ಪ್ರಶ್ನೆಗೆ ಸಮಾಧಾನವನ್ನು ನೀಡಿದಂತಾಯಿತು.

ಸಂಗತಿಪರಭಾಷ್ಯವೇ ಪೂರ್ವಪಕ್ಷಪರ

ಭಾವದೀಪಃ – ತದೇವ ಭಾಷ್ಯಂ ಪೂರ್ವಪಕ್ಷಾದಿಪರತ್ವೇನಾಪಿ ವ್ಯಾಕುರ್ವನ್ ಮಧ್ಯಮಾಕ್ಷರಸ್ಯೋಕ್ತಾ ಇತ್ಯೇತಾವದಂಶಂ ಪ್ರತಿಜ್ಞಾಪರತ್ವೇನ ವ್ಯಾಚಷ್ಟೇ – ಏತದಿತಿ ।। ಅದೃಶ್ಯತ್ವಾದಿಗುಣಕಮಿತ್ಯರ್ಥಃ ।

ಸಂಗತಿಪರವಾಗಿ ವ್ಯಾಖ್ಯಾನಿಸಿದ ಭಾಷ್ಯವನ್ನೇ ಪೂರ್ವಪಕ್ಷಪರವಾಗಿಯೂ ಕೂಡ ವ್ಯಾಖ್ಯಾನಿಸುತ್ತಿದ್ದಾರೆ. ಮೊದಲು 'ಮಧ್ಯಮಾಕ್ಷರಸ್ಯೋಕ್ತಾಃ' ಎಂಬ ಮಾತನ್ನು ಪ್ರತಿಜ್ಞಾಪರವಾಗಿ ವ್ಯಾಖ್ಯಾನಿಸುತ್ತಿದ್ದಾರೆ 'ಏತತ್' ಇತ್ಯಾದಿಯಾಗಿ. 'ಏತತ್' ಎಂದರೆ ಅದೃಶ್ಯತ್ವಾದಿಗುಣಗಳುಳ್ಳ ಎಂದರ್ಥ.

ಅಕ್ಷರಶಬ್ದವು ಶ್ರೀತತ್ವದಲ್ಲಿಯೇ ಪ್ರಸಿದ್ಧ

भावदीपः – श्रीतत्वस्येत्यनुक्त्वा मध्यमाक्षरस्येत्युक्तिलब्धां युक्तिमाह – तत्रेति।। 'ये त्वक्षरमनिर्देश्यम्' इति गीतादौ श्रीतत्त्वे प्रसिद्धेरित्यर्थः । 'अक्षरत्रयमीरितम्' इति स्मृत्या विष्णावपि प्रसिद्धिरस्ति ।

'ಶ್ರೀತತ್ವಸ್ಯ' ಎಂದೇ ಹೇಳಬಹುದಿತ್ತು. ಆದರೂ 'ಮಧ್ಯಮಾಕ್ಷರಸ್ಯ' ಎಂದು ಹೇಳಿದ್ದಕ್ಕೆ ಏನು ಪ್ರಯೋಜನ ? ಎಂಬುದನ್ನು 'ತತ್ರ' ಇತ್ಯಾದಿ ವಾಕ್ಯದಿಂದ ಯುಕ್ತಿಯನ್ನು ಹೇಳುವ ಮೂಲಕ ಉತ್ತರಿಸುತ್ತಿದ್ದಾರೆ 'ಯೇ ತ್ವಕ್ಷರಮನಿರ್ದೇಶ್ಯಮ್' ಇತ್ಯಾದಿಯಾಗಿ. ಗೀತೆ ಮೊದಲಾದೆಡೆ ಅಕ್ಷರಶಬ್ದವು ಶ್ರೀತತ್ವದಲ್ಲಿಯೇ ಪ್ರಸಿದ್ಧವಾಗಿದೆ ಎಂದರ್ಥ. 'ಅಕ್ಷರತ್ರಯಮೀರಿತಮ್ ಎಂಬ ಸ್ಮೃತಿಯ ಆಧಾರದಿಂದ ವಿಷ್ಣುವಿನಲ್ಲಿಯೂ 'ಅಕ್ಷರ' ಶಬ್ದದ ಪ್ರಸಿದ್ಧಿ ಇದೆ.

ಭಾಷ್ಯದಲ್ಲೇಕೆ ಮಧ್ಯಮಾಕ್ಷರ ಎಂದರು ?

भावदीपः – अत एव भाष्ये मध्यमपदम् । अन्यथाऽक्षरस्येत्येव ब्रूयादित्यतो भाष्ये इत्यादिनेत्यनेन न केवलं प्राक् टीकोक्तवाक्यशेषो ग्राह्यः । किन्तु 'एतस्य वा' इत्यादिलिङ्गोक्तिपरवाक्यं च ।

ಆದ್ದರಿಂದಲೇ ಭಾಷ್ಯದಲ್ಲಿ 'ಮಧ್ಯಮಾ' ಎಂಬ ಪದವನ್ನೇ ಪ್ರಯೋಗಿಸಿದ್ದಾರೆ. ಇಲ್ಲದಿದ್ದರೆ 'ಅಕ್ಷರಸ್ಯ' ಎಂದಷ್ಟೇ ಹೇಳಿದ್ದರೆ ಸಾಕಾಗುತ್ತಿತ್ತಲ್ಲವೇ ? ಎಂಬ ಪ್ರಶ್ನೆಗೆ ಭಾಷ್ಯದಲ್ಲಿ 'ಇತ್ಯಾದಿನಾ' ಎಂಬಲ್ಲಿ ಆದಿಪದದಿಂದ ಹಿಂದೆ ಹೇಳಿದಂತೆ ಕೇವಲ ಸಂಪೂರ್ಣ ವಿಷಯವಾಕ್ಯವನ್ನಷ್ಟೇ ವಿವಕ್ಷಿಸಬೇಕೆಂದಲ್ಲ. 'ಏತಸ್ಯ ವಾ' ಇತ್ಯಾದಿಯಾದ ಲಿಂಗವನ್ನು ಸಮರ್ಥಿಸುವ ಶ್ರುತಿವಾಕ್ಯವನ್ನೂ ಸಹ ಆದಿಪದದಿಂದಲೇ ವಿವಕ್ಷಿಸಬೇಕು.

ಚಂದ್ರಾದ್ಯಾಧಾರತ್ವವೆಂಬ ಗುಣವೂ ವಿವಕ್ಷಿತ

भावदीपः – गुणा इत्यनेन चन्द्राद्याधारत्वगुणोऽपि ग्राह्य इति भावेन तद्वाक्योक्तिपूर्वं लिङ्गमाह – एतस्येति ।।

'गुणाः' ಎಂಬುದರಿಂದ ಚಂದ್ರಾದ್ಯಾಧಾರತ್ವವೆಂಬ ಗುಣವನ್ನೂ ಸಹ ಸ್ವೀಕರಿಸಬೇಕು. ಆ ವಾಕ್ಯವನ್ನು ಹೇಳುವ ಮೂಲಕ ಲಿಂಗವನ್ನೂ ಕೂಡ ತೋರಿಸುತ್ತಿದ್ದಾರೆ 'ಏತಸ್ಯ' ಎಂಬ ಟೀಕೆಯಿಂದ.

'ಅಂಭ್ರಿಣೀ' ಸೂಕ್ತದ ಬಗ್ಗೆ

भावदीपः – लिङ्गस्य श्रीतत्त्वधर्मतोक्तिपरत्वेनाहमित्यादिभाष्यं योजयति – चन्द्रेति ।। अम्भ्रिणीपर्यायश्रीवाक्यत्वादहमित्यादेरिति भावः ।

ಲಕ್ಷ್ಮೀದೇವಿಯ ಧರ್ಮವನ್ನು ಹೇಳುವ ಲಿಂಗವಿರುವ ಕಾರಣ 'ಅಹಂ' ಇತ್ಯಾದಿ ಭಾಷ್ಯವನ್ನು 'ಚಂದ್ರ' ಇತ್ಯಾದಿ ಟೀಕೆಯಿಂದ ಯೋಜನೆ ಮಾಡುತ್ತಿದ್ದಾರೆ. 'ಅಂಭ್ರಿಣೀ' ಶಬ್ದಕ್ಕೆ 'ಶ್ರೀ' ಎಂಬ ಶಬ್ದವು ಪರ್ಯಾಯಪದವಾಗಿದೆ. ಆದ್ದರಿಂದ 'ಅಹಂ' ಎಂದರೆ 'ಲಕ್ಷ್ಮೀದೇವಿ' ಎಂದು ತಿಳಿಯಬೇಕು.

ವಾಕ್ಯಶೇಷದಂತೆ ಸ್ಮೃತಿಯೂ ಗ್ರಾಹ್ಯ

भावदीपः – द्युभ्वादिनयन्यायेन विष्णावपि सम्भवाद् भाष्यस्थादिपदानुरोधेन तद्धर्मत्वादित्येवोक्तम् – नतु तस्यैव धर्मत्वादिति ।। भाष्ये इत्यादेरित्यादिपदेन 'अहं त्वष्टारमुत पूषणं भगम्' इति वाक्यशेष इव 'ये त्वक्षरम्' इति गीतास्मृतिरपि गृह्यत इति भावेन तद्व्यावर्त्यशङ्कामाह – नच वाच्यमिति।।

ದ್ಯುಭ್ವಾದ್ಯಧಿಕರಣದ ನ್ಯಾಯದಿಂದ ಆಕಾಶಾಧಾರಕತ್ವವು ವಿಷ್ಣುವಿನಲ್ಲಿಯೂ ಸಹ ಉಪಪನ್ನವಾಗುತ್ತದೆ.ಆದ್ದರಿಂದ ಭಾಷ್ಯದಲ್ಲಿರುವ ಆದಿಪದಕ್ಕೆ ಅನುಸಾರಿಯಾಗಿ 'ತದ್ಧರ್ಮತ್ವಾತ್' ಎಂದೇ ಹೇಳಿದ್ದಾರೆ ಹೊರತು 'ತಸ್ಯೈವ ಧರ್ಮತ್ವಾತ್' ಎಂದು ಹೇಳಿಲ್ಲ. ಭಾಷ್ಯದಲ್ಲಿ 'ಇತ್ಯಾದೇಃ' ಎಂಬ ಆದಿ ಪದದಿಂದ 'ಅಹಂ ತ್ವಷ್ಟಾರಮುತ ಪೂಷಣಂ ಭಗಮ್' ಎಂಬ ವಾಕ್ಯಶೇಷವನ್ನು ಹೇಗೆ ಸ್ವೀಕರಿಸಬೇಕೋ, ಅದರಂತೆ 'ಯೇ ತ್ವಕ್ಷರಮ್' ಇತ್ಯಾದಿ ಗೀತಾಸ್ಮೃತಿಯನ್ನೂ ಸಹ ಸ್ವೀಕರಿಸಬೇಕು. ಇದರಿಂದ ಪರಿಹಾರವಾಗುವ ಶಂಕೆಯನ್ನು 'ನಚ ವಾಚ್ಯಮ್' ಇತ್ಯಾದಿ ವಾಕ್ಯದಿಂದ ತೋರಿಸುತ್ತಿದ್ದಾರೆ.

ಅದೃಶ್ಯತ್ವಾಧಿಕರಣದ ನ್ಯಾಯವಷ್ಟೇ ವಿವಕ್ಷಿತವಲ್ಲ

भावदीपः – आकाङ्क्षितपूर्त्या तस्यापि सम्भवादिति वाक्यार्थमा – **अदृश्यत्वादीति** ।। न केवलं अदृश्यत्वनयरीत्या विष्णावित्यपेरर्थः । इत्यादेरित्यादिपदोक्तां स्मृतिमाह – **तथाचेति** ।।

'ಲಕ್ಷ್ಮೀದೇವಿ' ಎಂಬ ಅರ್ಥವನ್ನು ಸ್ವೀಕರಿಸಿದಾಗಲೂ ಆಕಾಂಕ್ಷೆಯು ಪೂರ್ಣವಾಗುವ ಕಾರಣ ವಾಕ್ಯದ ಅರ್ಥವನ್ನು 'ಅದೃಶ್ಯತ್ವಾದಿ' ಇತ್ಯಾದಿಯಾಗಿ ಹೇಳುತ್ತಿದ್ದಾರೆ. ಕೇವಲ ಅದೃಶ್ಯತ್ವಾಧಿಕರಣದ ನ್ಯಾಯದಿಂದಷ್ಟೇ ಅಲ್ಲ; ಆದಿಪದದಿಂದ ಸೂಚಿತವಾದ ಸ್ಮೃತಿಯನ್ನೂ ಸಹ ಉಲ್ಲೇಖಿಸುತ್ತಿದ್ದಾರೆ 'ತಥಾಚ' ಇತ್ಯಾದಿಯಾಗಿ.

'ಯೇತ್ವಕ್ಷರಮನಿರ್ದೇಶ್ಯಮ್' ಎಂಬುದರ ವ್ಯಾಖ್ಯಾನ

भावदीपः – अक्षरमविनाशि सूक्ष्मत्वादनिर्देश्यम् । अप्रसिद्धत्वादव्यक्तम्। सर्वगं देशतो व्याप्तम् । गुणबाहुल्यादचिन्त्यम् । कूटे आकाशे अभिमानितया स्थितं कूटस्थम् । अचलं कदापि स्वपदादभ्रष्टम् । ध्रुवं निर्विकारमित्यर्थः ।

'ಯೇತ್ವಕ್ಷರಮನಿರ್ದೇಶ್ಯಮ್' ಇತ್ಯಾದಿ ವಾಕ್ಯಗಳಲ್ಲಿರುವ ಪದದ ಅರ್ಥ ಹೀಗಿದೆ - ಅಕ್ಷರಂ = ವಿನಾಶವಿಲ್ಲದ್ದು, ಅನಿರ್ದೇಶ್ಯಂ = ಸೂಕ್ಷ್ಮವಾದದ್ದು, ಅವ್ಯಕ್ತಂ = ಅಪ್ರಸಿದ್ಧವಾದದ್ದು, ಸರ್ವಗಂ = ದೇಶತಃ ವ್ಯಾಪ್ತವಾದದ್ದು, ಅಚಿಂತ್ಯಂ = ಅತ್ಯಂತ ಗುಣಭರಿತವಾದದ್ದು, ಕೂಟಸ್ಥಂ = ಆಕಾಶಕ್ಕೆ ಅಭಿಮಾನಿಯಾದದ್ದು, ಅಚಲಂ = ನಿರಂತರ ತನ್ನ ಸ್ಥಾನದಿಂದ ಭ್ರಷ್ಟವಾಗದ್ದು, ಧ್ರುವಂ = ವಿಕಾರವಿಲ್ಲದ್ದು, ಶ್ರೀತತ್ವವೇ ಆಗಿದೆ.

'ಇದಂ ತಮಃ' ಎಂಬುದರ ವ್ಯಾಖ್ಯಾನ

भावदीपः – इयं चित्प्रकृतिपरेति तात्पर्ये व्यक्तम् । आसीदिति द्वादशगीताभाष्योक्तस्मृतिः । इदं प्रसिद्धं तमः मायाख्यं प्रलये प्रसुप्तमिति निर्व्यापारमासीत् । अभूतमजातम् । अप्रज्ञातमित्यादिना

प्रत्यक्षाद्यवेद्यत्वमुच्यते। अत्तेत्युक्त्वा 'न तदश्नाति किञ्चनेति विरुद्धता' इति न्यायविवरणमत्र योजयितुं तद्व्यावर्त्यशङ्कामाह – अथापीति ।।

ಈ ವಾಕ್ಯವು ಚಿತ್‌ಪ್ರಕೃತಿಯನ್ನೇ ಪ್ರತಿಪಾದಿಸುತ್ತಿದೆ ಎಂದು ಗೀತಾತಾತ್ಪರ್ಯದ ವಾಕ್ಯದಿಂದ ಸ್ಪಷ್ಟವಾಗುತ್ತದೆ. 'ಆಸೀತ್' ಎಂಬ ಶ್ರುತಿಯು ಗೀತಾಭಾಷ್ಯದಲ್ಲಿ ಉಕ್ತವಾಗಿದೆ. ಇದಂ = ಪ್ರಸಿದ್ಧವಾದ, ತಮಃ = ಮಾಯೆಯು, ಪ್ರಲಯೇ = ಪ್ರಳಯಕಾಲದಲ್ಲಿ, ಪ್ರಸುಪ್ತಂ = ನಿರ್ವ್ಯಾಪಾರವುಳ್ಳದ್ದು, ಆಸೀತ್ = ಆಗಿತ್ತು, ಅಭೂತಂ = ಹುಟ್ಟಿಲ್ಲದ್ದು, ಅಪ್ರಜ್ಞಾತಂ = ಪ್ರತ್ಯಕ್ಷಾದಿಗಳಿಂದ ಅವೇದ್ಯವಾದದ್ದು,

'ಅತ್ತಾಚ 'ರಾಚರಗ್ರಹಣಾತ್' ಎಂಬ ಸೂತ್ರದಲ್ಲಿ ಪರಮಾತ್ಮನಿಗೆ ಅತ್ತೃತ್ವವನ್ನು ಹೇಳಿ ಪ್ರಕೃತ 'ನ ತದಶ್ನಾತಿ ಕಿಂಚನ' ಎಂಬುದಾಗಿ ಅತ್ತೃತ್ವಾಭಾವವನ್ನು ಹೇಳಿದರೆ ಪರಸ್ಪರ ವಿರೋಧ ಬರುತ್ತದೆ. ಹೀಗೆ ನ್ಯಾಯವಿವರಣದಲ್ಲಿ ಹೇಳಿದ್ದನ್ನು ಯೋಜನೆ ಮಾಡುವುದಕ್ಕಾಗಿ ವ್ಯಾವರ್ತ್ಯವಾದ ಪೂರ್ವಪಕ್ಷವನ್ನು 'ಅಥಾಪಿ' ಇತ್ಯಾದಿ ಗ್ರಂಥದಿಂದ ತೋರಿಸುತ್ತಾ ಇದ್ದಾರೆ.

'ನ ತದಶ್ನಾತಿ' ಎಂಬುದರ ವ್ಯಾಖ್ಯಾನ

भावदीपः – आदिपदेन सूर्याद्याधारत्वलिङ्गग्रहः । न्यायविवरणवाक्यस्य खण्डशोऽर्थमाह – न तदिति ।। अयमक्षरवाक्यशेष इत्यग्रे स्पष्टम् । अत्र 'न तदश्नाति' इत्येव पूर्वो 'किञ्चन' इत्युक्तिः सामान्याभावसूचनाय । तेन गुहानयोक्तरीत्याऽशुभानशनपरं तदिति प्रत्युक्तं ध्येयम् ।।

ಆದಿಪದದಿಂದ ಸೂರ್ಯಾದ್ಯಾಧಾರತ್ವ ಲಿಂಗವನ್ನು ವಿವಕ್ಷಿಸಬೇಕು. ನ್ಯಾಯವಿವರಣ ವಾಕ್ಯಕ್ಕೆ 'ಖಂಡಶಃ' ಅರ್ಥವನ್ನು ಹೇಳುತ್ತಿದ್ದಾರೆ, 'ನ ತದಿತಿ' ಇತ್ಯಾದಿಯಾಗಿ. 'ನ ತದಶ್ನಾತಿ ಕಿಂಚನ' ಎಂಬುದು ಅಕ್ಷರ ಪ್ರಕರಣದಲ್ಲಿಯೇ ಇರುತ್ತದೆ ಎಂದು ಮುಂದೆ ಸ್ಪಷ್ಟವಾಗುತ್ತದೆ. ವಸ್ತುತಃ 'ನ ತದಶ್ನಾತಿ' ಎಂದಷ್ಟೇ ಉಲ್ಲೇಖಿಸಿದ್ದರೆ ಸಾಕಾಗಿತ್ತು. 'ಕಿಂಚನ' ಎಂಬ ಪದವನ್ನು ಹೇಳಿದ್ದರಿಂದ ಯಾವುದನ್ನೂ ಸಹ ತಿನ್ನುವುದಿಲ್ಲ ಎಂದು ಸೂಚಿಸಿದಂತಾಯಿತು. ಹೀಗೆ ಹೇಳಿದ್ದರಿಂದ ಗುಹಾಧಿಕರಣದ ನ್ಯಾಯದಂತೆ ಅಶುಭ ಫಲವನ್ನಷ್ಟೇ ತಿನ್ನುವುದಿಲ್ಲ ಎಂಬ ಅಭಿಪ್ರಾಯದಿಂದ ಶ್ರುತಿಯು 'ನ ತದಶ್ನಾತಿ' ಎಂದು ಅತ್ತೃತ್ವಾಭಾವವನ್ನು ಹೇಳುತ್ತಿದೆ ಎಂಬ ಪರಿಹಾರವನ್ನು ವಿವಕ್ಷಿಸಲಾಗದೆಂದು ಹೇಳಿದಂತಾಯಿತು.

ಲಕ್ಷ್ಮೀದೇವಿಯಲ್ಲಿ ಸರ್ವಾತೃತ್ವವು ಇರುವುದಿಲ್ಲ

ಭಾವದೀಪಃ – नचेति ।। तस्य प्रागत्तृत्वस्य काप्यनुक्तेः अत्तृत्वेऽपि वा धर्मान्तरेण वाक्यशेषादिति न्यायेन 'नान्यत् किञ्चन मिषत्' इति श्रुताविव स्वतन्त्राशनाभाव-परतोपपत्तेरिति भावः ।।

ಲಕ್ಷ್ಮೀದೇವಿಯಲ್ಲಿ 'ನ ತದಶ್ನಾತಿ ಕಿಂಚನ' ಎಂಬ ಶ್ರುತಿಯಿಂದ ಾಚ್ಯತ್ವವನ್ನು ಒಪ್ಪಬಹುದು. ಏಕೆಂದರೆ ಲಕ್ಷ್ಮೀದೇವಿಯಲ್ಲಿ ಅತ್ತೃತ್ವವನ್ನು ಈ ಹಿಂದೆ ಯಾವ ಅಧಿಕರಣದಲ್ಲಿಯೂ ಸಮರ್ಥಿಸಿಲ್ಲ. ಆಥವಾ ಅತ್ತೃತ್ವವು ಅವಳಲ್ಲಿ ಇದ್ದರೂ 'ಧರ್ಮಾಂತರೇಣ ವಾಕ್ಯಶೇಷಾತ್' ಎಂಬ ನ್ಯಾಯದಂತೆ ಮತ್ತು 'ನಾನ್ಯತ್ ಕಿಂಚನ ಮಿಷತ್' ಎಂಬ ಶ್ರುತಿಯಂತೆ ಸ್ವತಂತ್ರವಾಗಿ ಏನನ್ನೂ ಸಹ ತಿನ್ನುವುದಿಲ್ಲವೆಂದು ವ್ಯಾಖ್ಯಾನಿಸಬಹುದು.

ವಿಷ್ಣುವಿನಲ್ಲಿ ವಿರೋಧವಿಲ್ಲ

ಭಾವದೀಪಃ – अत इति ।। श्रुतिलिङ्गरूपप्रापकभावाद् विष्णुत्वेऽनशनोक्ति विरोधाच्चेत्यर्थः ।

'ಅತಃ' ಎಂದರೆ ಶ್ರುತಿ ಲಿಂಗಗಳೆಂಬ ಪ್ರಾಪಕಗಳಿರುವುದರಿಂದ ಅಕ್ಷರಶಬ್ದದಿಂದ ವಿಷ್ಣು ಪ್ರತಿಪಾದ್ಯನಾದರೆ ಅನಶನಶ್ರುತಿ ವಿರೋಧವಿರುವುದರಿಂದಲೂ ಎಂದರ್ಥ.

'ಅಭಿಷೂಯಮಾಣಮ್' ಎಂಬುದರ ನಿಷ್ಪತ್ತಿ

ಭಾವದೀಪಃ – अक्षरमित्यनन्तरम् अत इत्यनुषङ्गः । इतीति पाठे तु नानुषङ्गः। अत्रोक्तं प्रागुक्तं चादृश्यत्वादिगुणकत्वमित्यर्थः । आङ्पूर्वस्य हन्तेः कर्मणि रूपं मत्वाऽह – अभिषूयमाणमिति ।। कथं चन्द्रस्याभिषूयमाणत्वमत आह – लतेति ।।

'ಅಕ್ಷರಂ' ಎಂಬ ಪದದ ಅನಂತರ 'ಅತಃ' ಎಂಬುದನ್ನು ಅನುಷಂಗ ಮಾಡಬೇಕು. ಕೆಲವು ಪುಸ್ತಕಗಳಲ್ಲಿ 'ಅಕ್ಷರಂ ಇತಿ' ಎಂಬ ಪಾಠವಿದೆ. ಈ ಪಕ್ಷದಲ್ಲಿ ಅನುಷಂಗ ಮಾಡಬೇಕಾದ್ದಿಲ್ಲ. ಆದ್ದರಿಂದ ಇಲ್ಲಿ ಪ್ರತಿಪಾದ್ಯವಾದ ಅಕ್ಷರನು ಮತ್ತು ಹಿಂದೆ ಪ್ರತಿಪಾದಿಸಲ್ಪಟ್ಟ ಅದೃಶ್ಯತ್ವಾದಿಗುಣಗಳುಳ್ಳದ್ದು ಎಂದರ್ಥ.

ಅಪ್‌ಪೂರ್ವಕವಾದ 'ಹನ'ಧಾತುವಿಗೆ ಕರ್ಮಾರ್ಥದಲ್ಲಿಯೂ ಸಹ ಪ್ರಯೋಗವಿರುತ್ತದೆ ಎಂಬ ಅಭಿಪ್ರಾಯದಿಂದ 'ಅಭಿಷೂಯಮಾಣಮ್' ಎಂದು ಹೇಳಿದ್ದಾರೆ. ಚಂದ್ರನನ್ನು ಮರ್ದಿಸಲು ಹೇಗೆ ಸಾಧ್ಯ? ಎಂಬ ಪ್ರಶ್ನೆಗೆ 'ಲತಾ' ಇತ್ಯಾದಿಯಾಗಿ ಉತ್ತರಿಸಿದ್ದಾರೆ.

'ಸೋಮಂ ರಾಜಾನಮ್' ಎಂದರೇನು ?

भावदीपः – सोममिति 'सोमं राजानम्' इत्यादौ हूयमानभक्ष्यमाणसोम-लताभिमानत्वाच्चन्द्रेऽभिषूयमाणत्वोक्तिरित्यर्थः । यत्र क्व चाक्षरस्य ब्रह्मत्वमुच्यते इति भ्रमनिरासाय भाष्यस्थप्रतिज्ञार्थमाह – इदमिति ।।

'ಸೋಮಂ ರಾಜಾನಮ್' ಇತ್ಯಾದಿ ಸ್ಥಳಗಳಲ್ಲಿ ಚಂದ್ರನಿಗೆ ಅಭಿಷವವನ್ನು ಹೇಳಿದಂತೆ ಕಾಣಿಸುತ್ತದೆ. ಆದರೆ ಹೋಮಿಸಲು ಯೋಗ್ಯವಾದ ಅಥವಾ ಭಕ್ಷಿಸಲು ಯೋಗ್ಯವಾದ ಯಾವ ಸೋಮಲತೆ ಇದೆಯೋ ಅದಕ್ಕೆ ಅಭಿಮಾನಿಯಾದ್ದರಿಂದಷ್ಟೇ ಚಂದ್ರನಲ್ಲಿ ಅಭಿಷವವನ್ನು ಹೇಳಲಾಗಿದೆ.

ಬೇರೆ ಎಲ್ಲಾದರೂ ಬ್ರಹ್ಮನಿಗೆ ಅಕ್ಷರತ್ವವನ್ನು ಹೇಳಿರಬಹುದಲ್ಲವೆ ? ಎಂಬ ಭ್ರಮೆಯನ್ನು ನಿರಾಸ ಮಾಡುವುದಕ್ಕಾಗಿ ಭಾಷ್ಯದಲ್ಲಿರುವ ಪ್ರತಿಜ್ಞಾಭಾವದ ಅರ್ಥವನ್ನು 'ಇದಂ' ಎಂಬ ವಾಕ್ಯದಿಂದ ಹೇಳಿದ್ದಾರೆ.

ನ್ಯಾಯವಿವರಣದ ಆಧಾರದಲ್ಲಿ ಅನುಷಂಗ

भावदीपः – भाष्योक्तवाक्यादम्बरधृतेरेव प्रतीत्या तदन्तर्सर्वधृतेरप्रतीतेः सर्वाधारप्रकृत्याधारत्वं विष्णोरन्यस्य विरुद्धमिति न्यायविवरणोक्तिमनुरुध्य वाक्यशेषं वदन् हेतूक्तिपरं भाष्यं व्यनक्ति – यदूर्ध्वमिति ।।

ಭಾಷ್ಯದಲ್ಲಿ ಉದಾಹರಿಸಿದ ವಾಕ್ಯದಿಂದ ಆಕಾಶದ ಧಾರಕತ್ವವಷ್ಟೇ ಪ್ರತೀತವಾಗುತ್ತದೆ. ಆಕಾಶದ ತನಕ ಇರುವ ಸಕಲ ಪದಾರ್ಥಗಳ ಧಾರಕತ್ವವು ಪ್ರತೀತವಾಗುವುದಿಲ್ಲ. ಸಕಲಕ್ಕೂ ಆಧಾರವಾದ ಪ್ರಕೃತಿಗೆ ಆಧಾರವಾಗಿರುವಿಕೆಯು ವಿಷ್ಣುವನ್ನು ಬಿಟ್ಟು ಬೇರಯವರಲ್ಲಿ ವಿರುದ್ಧವಾಗುತ್ತದೆ ಎಂಬ ನ್ಯಾಯವಿವರಣದ ಮಾತನ್ನು ಅನುಸರಿಸಿ ವಾಕ್ಯಶೇಷವನ್ನು ಅನುಷಂಗ ಮಾಡಿಕೊಳ್ಳಬೇಕೆಂದು ಹೇಳುತ್ತಾ ಹೇತುಪರವಾದ ಭಾಷ್ಯವನ್ನು ವ್ಯಾಖ್ಯಾನಿಸುತ್ತಿದ್ದಾರೆ 'ಯದೂರ್ಧ್ವಂ' ಇತ್ಯಾದಿಯಾಗಿ.

ಆಕಾಶವು ಅಕ್ಷರತತ್ವದಲ್ಲಿ ಆಶ್ರಿತ

भावदीपः – आकाशाख्यप्रकृतेरिति ।। चित्प्रकृतेरित्यर्थः । अत्र श्रुतावाकाशस्य सर्वाधारत्वमुक्त्वाऽस्यैकाक्षराश्रितत्वमुच्यते ।

'ಆಕಾಶಾಖ್ಯಪ್ರಕೃತೇಃ' ಎಂಬ ಪದಕ್ಕೆ ಚಿತ್‌ಪ್ರಕೃತಿಗೆ ಎಂದರ್ಥ. ಈ ಶ್ರುತಿಯಲ್ಲಿ ಆಕಾಶಕ್ಕೆ ಸರ್ವಾಧಾರತ್ವವನ್ನು ಹೇಳಿ, ಇಂತಹ ಆಕಾಶವು ಅಕ್ಷರತತ್ವದಲ್ಲಿ ಆಶ್ರಿತವಾಗಿದೆ ಎಂದು ಹೇಳಲಾಗಿದೆ.

'ಆಕಾಶ' ಎಂದರೆ ಲಕ್ಷ್ಮೀದೇವಿ

भावदीपः – तच्च 'अव्यक्तात् पुरुषः परः' 'अक्षरात्परतः परः' 'मम योनिरप्स्वान्तः समुद्रे' इत्यादिना श्रीतत्त्वलिङ्गमिति आकाशस्तल्लिङ्गादिति न्यायसाम्येन दीप्तेराकाशशब्दोक्ता श्रीर्हि सर्वाश्रया मता । 'तदाश्रयः परो विष्णुः सोऽस्थूलादिगुणो मतः' इति बृहद्भाष्योक्तस्मृत्या चाकाशश्चित्प्रकृतिरिति भावः । अधिकं चन्द्रिकायाम्।

ಇಂತಹ ಅಕ್ಷರತತ್ವವು ಮಹಾವಿಷ್ಣುವೇ ಆಗಬೇಕು. ಏಕೆಂದರೆ 'ಅವ್ಯಕ್ತಾತ್ ಪುರುಷಃ ಪರಃ', 'ಅಕ್ಷರಾತ್ಪರತಃ ಪರಃ', 'ಮಮ ಯೋನಿರಪ್ಸ್ವ ಅಂತಃ ಸಮುದ್ರೇ' ಇತ್ಯಾದಿ ವಾಕ್ಯಗಳಿಂದ ಅಕ್ಷರದಲ್ಲಿ ಲಕ್ಷ್ಮೀದೇವಿಯ ಲಿಂಗಗಳೇ ಕೇಳಿಸುತ್ತಿವೆ. ಮತ್ತು 'ಆಕಾಶಸ್ತಲ್ಲಿಂಗಾತ್' ಎಂಬ ನ್ಯಾಯವನ್ನು ವಿವಕ್ಷಿಸಿದಾಗ ಅತಿಶಯಪ್ರಕಾಶಮಾನಳಾದ ಲಕ್ಷ್ಮೀದೇವಿಯು ಆಕಾಶ ಶಬ್ದದಿಂದ ಪ್ರತಿಪಾದ್ಯಳಾಗುತ್ತಾಳೆ. ಇಂತಹ ಲಕ್ಷ್ಮೀದೇವಿಯು ಸಕಲ ಪದಾರ್ಥಗಳಿಗೆ ಆಶ್ರಯಳಾಗಿದ್ದಾಳೆ. ಆದ್ದರಿಂದ ಶ್ರುತಿಯಲ್ಲಿರುವ ಆಕಾಶ ಶಬ್ದದಿಂದ ಲಕ್ಷ್ಮೀದೇವಿಯೇ ಪ್ರತಿಪಾದ್ಯಳಾಗುತ್ತಾಳೆ. ಇಂತಹ ಸಕಲಕ್ಕೂ ಆಶ್ರಯಳಾದ ಲಕ್ಷ್ಮೀದೇವಿಗೆ ಆಶ್ರಯನಾದವನು 'ತದಾಶ್ರಯಃ ಪರೋ ವಿಷ್ಣುಃ' ಎಂಬ ಬೃಹದಾರಣ್ಯಕಭಾಷ್ಯದಲ್ಲಿ ಹೇಳಿದ ಸ್ಮೃತಿಯ ಅನುಸಾರ ವಿಷ್ಣುವೇ ಆಗುತ್ತಾನೆ. ಹೆಚ್ಚಿನ ವಿಚಾರವನ್ನು ಚಂದ್ರಿಕೆಯನ್ನು ನೋಡಿ ತಿಳಿದುಕೊಳ್ಳಬೇಕು.

ವಿಶೇಷವಿಚಾರ - ಸಿದ್ಧಾಂತ ಹೀಗಿದೆ - ಅಕ್ಷರಶಬ್ದದಿಂದ ಪ್ರತಿಪಾದ್ಯನಾದವನು ಮಹಾವಿಷ್ಣುವೇ ಆಗಿದ್ದಾನೆ. ನಾಲ್ಕು ಬಗೆಯ ನಾಶಕ್ಕೆ ಈಡಾಗದ ಮಹಾವಿಷ್ಣುವಿನಲ್ಲಿಯೇ ಅಕ್ಷರಶಬ್ದದ ಪ್ರವೃತ್ತಿನಿಮಿತ್ತವು ಪುಷ್ಕಳವಾಗಿ ಬರುತ್ತದೆ.

'ತಸ್ಮಾದಕ್ಷರಮಿತ್ಯಾಚಕ್ಷತ ಏತಮೇವ ಸಂತಮ್' 'ಅಕ್ಷರಂ ಬ್ರಹ್ಮ ಪರಮ್' ಇವೇ ಮೊದಲಾದ ಶ್ರುತಿ, ಸ್ಮೃತಿಗಳೂ ಸಹ ಮಹಾವಿಷ್ಣುವಿನಲ್ಲಿಯೇ ಅಕ್ಷರಶಬ್ದವನ್ನು ವ್ಯವಹರಿಸುತ್ತಿವೆ. ಅಕ್ಷರಶಬ್ದದಿಂದ ಪ್ರಧಾನವಾಗಿ ವಿಷ್ಣುವೇ ಹೀಗೆ ಪ್ರತಿಪಾದ್ಯನಾದ್ದರಿಂದ ಅವನು ಉತ್ತಮಾಕ್ಷರನೆಂದು ಪ್ರಸಿದ್ಧಿ ಪಡೆದಿದ್ದಾನೆ.

ಮತ್ತು ಆಕಾಶ ಶಬ್ದದಿಂದ ಲಕ್ಷ್ಮೀದೇವಿಯೇ ಪ್ರತಿಪಾದ್ಯಳಾಗಿದ್ದಾಳೆ. ಆದ್ದರಿಂದ ಆಕಾಶಾಂತಧಾರಕತ್ವವು ಮಹಾವಿಷ್ಣುವಿನಲ್ಲೇ ಯುಕ್ತವಾಗುತ್ತದೆ. 'ಯದ್ಭೂತಮ್' ಇತ್ಯಾದಿ ವಾಕ್ಯದಿಂದ ಪ್ರಾರಂಭಿಸಿ 'ಆಕಾಶ ಏವ ತದೋತಂ ಚ ಪ್ರೋತಂ ಚ' ಎಂಬಲ್ಲಿಯ ತನಕ ಆಕಾಶಕ್ಕೆ ಸರ್ವಚೇತನಪೋಷಕತ್ವವು ಹೇಳಲ್ಪಟ್ಟಿದೆ. ಮತ್ತು 'ಏತಸ್ಮಿನ್ ಖಲ್ವಕ್ಷರೇ ಗಾರ್ಗ್ಯಾಕಾಶ ಓತಶ್ಚ ಪ್ರೋತಶ್ಚ' ಎಂಬ ವಾಕ್ಯದಿಂದ ಇಂತಹ ಆಕಾಶವು ಅನ್ಯಾಶ್ರಿತವಾಗಿದೆಯೆಂದೂ ಸಹ ಹೇಳಲಾಗಿದೆ. ಸರ್ವಚೇತನಪೋಷಕತ್ವ ಹಾಗೂ ಅನ್ಯಾಶ್ರಿತತ್ವಗಳೆರಡನ್ನೂ ಸಹ ಕೂಡಿಸಬೇಕೆಂದರೆ ಆಕಾಶಶಬ್ದದಿಂದ ಲಕ್ಷ್ಮೀದೇವಿಯೇ ಪ್ರತಿಪಾದ್ಯಳೆಂದು ಹೇಳಬೇಕು. ಬೇರೆ ಯಾರಲ್ಲಿಯೂ ಸಹ ಈ ಎರಡೂ ವಿಧವಾದ ಧರ್ಮಗಳು ಕೂಡಲು ಸಾಧ್ಯವಿಲ್ಲ.

ಪ್ರಶ್ನೆ - 'ತದೋತಂ ಚ ಪ್ರೋತಂ ಚ' ಇತ್ಯಾದಿ ಶ್ರುತಿಯಲ್ಲಿ ಶ್ರುತವಾದ ಓತತ್ವ, ಪ್ರೋತತ್ವವೆಂದರೆ ಉಪಾದೇಯತ್ವ ಮತ್ತು ಆಧೇಯತ್ವ ಎಂದರ್ಥ ಹೊರತು, ಪೋಷ್ಯತ್ವ ಎಂದರ್ಥವಲ್ಲ. ಸಕಲ ಪದಾರ್ಥಗಳು ಉಪಾದೇಯ ಮತ್ತು ಆಧೇಯವಾದರೆ ಆಕಾಶ ಎಂಬ ಪದಾರ್ಥವು ಉಳಿದೆಲ್ಲಾ ಪದಾರ್ಥಗಳಿಗೆ ಉಪಾದಾನವೆಂದೂ ಮತ್ತು ಆಧಾರವೆಂದೂ ಸಿದ್ಧವಾಗುತ್ತದೆ. ಇಂತಹ ಉಪಾದಾನತ್ವ ಮತ್ತು ಆಧಾರತ್ವಗಳನ್ನು ಜಡಪ್ರಕೃತಿಯಲ್ಲಿಯೂ ಸಹ ಹೇಳಬಹುದು. ಹೀಗಿರುವಾಗ ಆಕಾಶಶಬ್ದಕ್ಕೆ ಲಕ್ಷ್ಮೀದೇವಿಯೆಂಬರ್ಥವನ್ನೇ ಹೇಳಬೇಕೆಂದು ಹೇಗೆ ಸಾಧಿಸುತ್ತೀರಿ?

ಉತ್ತರ - 'ಓತ' ಎಂಬ ಶಬ್ದಕ್ಕೆ ಉಪಾದೇಯ ಎಂಬರ್ಥವನ್ನು ಹೇಳಲು ಸಾಧ್ಯವಿಲ್ಲ. ಏಕೆಂದರೆ 'ಏತಸ್ಮಿನ್ ಖಲ್ವಕ್ಷರೇ ಗಾರ್ಗ್ಯಾಕಾಶ ಓತಶ್ಚ' ಇತ್ಯಾದಿ ವಾಕ್ಯದಲ್ಲಿ ಅಕ್ಷರನು ಆಕಾಶಕ್ಕೆ ಆಶ್ರಯನಾಗಿದ್ದಾನೆಂದು ಹೇಳಲಾಗಿದೆ. ಇಲ್ಲಿರುವ 'ಓತ' ಎಂಬ ಶಬ್ದಕ್ಕೆ ಉಪಾದೇಯವೆಂಬರ್ಥವನ್ನುಸ್ವೀಕರಿಸಿ, ಆಕಾಶಕ್ಕೆ ಅಕ್ಷರನು ಉಪಾದಾನನಾಗಿದ್ದಾನೆಂಬರ್ಥವನ್ನು ಹೇಳಲು ಸಾಧ್ಯವಿಲ್ಲ. ಏಕೆಂದರೆ ಈ ಅಕ್ಷರನು ದ್ರಷ್ಟೃತ್ವಾದಿಗುಣಗಳಳ್ಳುವ-ನಾದ್ದರಿಂದ ಚೇತನನಾಗಿದ್ದಾನೆ. ಇಂತಹ ಚೇತನನ್ನು ಆಕಾಶಕ್ಕೆ ಉಪಾದಾನವೆಂದು ಹೇಳುವುದು ಅಯುಕ್ತವಾಗುತ್ತದೆ. ಆದ್ದರಿಂದ 'ಪೋಷ್ಯತ್ವ' ಎಂಬರ್ಥವನ್ನೇ ಹೇಳಬೇಕು.

ಮತ್ತು 'ಕಸ್ಮಿನ್ನು ಖಲ್ವಿಂದ್ರಲೋಕಾ ಓತಾಶ್ಚ ಪ್ರೋತಾಶ್ಚೇತಿ ಪ್ರಜಾಪತಿಲೋಕೇಷು ಗಾರ್ಗಿ' ಇತ್ಯಾದಿ ವಾಕ್ಯದಲ್ಲಿ ಶ್ರುತವಾದ 'ಓತ' 'ಪ್ರೋತ' ಶಬ್ದಗಳಿಗೆ ಆಧೇಯತ್ವವೆಂಬರ್ಥವನ್ನೂ ಸಹ ವಿವಕ್ಷಿಸಲು ಸಾಧ್ಯವಿಲ್ಲ. ಏಕೆಂದರೆ ಇಂದ್ರಲೋಕವು ಕೆಳಗಿರುತ್ತದೆ. ಪ್ರಜಾಪತಿಲೋಕವು ಮೇಲಿರುತ್ತದೆ. ಮೇಲಿರುವಂತಹ ಪ್ರಜಾಪತಿಲೋಕವು ಕೆಳಗಿರುವ ಇಂದ್ರನ ಲೋಕಕ್ಕೆ ಆಧಾರವಾಗಲು ಸಾಧ್ಯವಿಲ್ಲ. ಆದ್ದರಿಂದ ಇಂದ್ರಲೋಕಕ್ಕೆ ಆಧೇಯತ್ವವನ್ನೂ ಸಹ ಹೇಳಲು ಸಾಧ್ಯವಿಲ್ಲ. ಹಾಗಾಗಿ 'ಓತ' 'ಪ್ರೋತ' ಶಬ್ದಗಳಿಗೆ ಪೋಷ್ಯ ಎಂಬರ್ಥವನ್ನು ಸ್ವೀಕರಿಬೇಕು. ಆಗ ಪ್ರಜಾಪತಿಲೋಕದಿಂದ ಇಂದ್ರನ ಲೋಕವು ಪೋಷ್ಯವಾಗಿದೆಯೆಂದು ಹೇಳಬಹುದು.

ಹೀಗೆ 'ಏತಸ್ಮಿನ್ ಖಲ್ವಕ್ಷರೇ' ಇತ್ಯಾದಿ ವಾಕ್ಯದಲ್ಲಾಗಲೀ, 'ಕಸ್ಮಿನ್ನು ಖಲು' ಇತ್ಯಾದಿ ವಾಕ್ಯದಲ್ಲಾಗಲೀ, ಶ್ರುತವಾದ 'ಓತ' 'ಪ್ರೋತ' ಶಬ್ದಗಳಿಗೆ ಪೋಷ್ಯವೆಂಬರ್ಥವನ್ನು ಒಪ್ಪುವುದು ಅನಿವಾರ್ಯವಾದ್ದರಿಂದ ಅದೇ ಪ್ರಕರಣದಲ್ಲಿರುವ 'ಆಕಾಶ ಏವ ತದೋತಂ ಚ ಪ್ರೋತಂ ಚ' ಎಂಬ ವಾಕ್ಯದಲ್ಲಿ ಶ್ರುತವಾದ 'ಓತ' 'ಪ್ರೋತ' ಶಬ್ದಗಳಿಗೂ ಸಹ ಪೋಷ್ಯವೆಂಬರ್ಥವನ್ನೇ ಒಪ್ಪಬೇಕು. ಒಂದೇ ಪ್ರಕರಣದಲ್ಲಿರುವ 'ಓತ' 'ಪ್ರೋತ' ಶಬ್ದಗಳಿಗೆ ಅನೇಕಾರ್ಥಗಳನ್ನು ಹೇಳುವುದು ತಪ್ಪಾಗುತ್ತದೆ.

ಆದ್ದರಿಂದ 'ರುದ್ರಂ ಸಮಾಶ್ರಿತಾ ದೇವಾಃ' ಇತ್ಯಾದಿ ವಾಕ್ಯದಲ್ಲಿ ರುದ್ರನನ್ನು ಸಕಲ ದೇವತೆಗಳು ಆಶ್ರಯಿಸಿದ್ದಾರೆಂಬುದಕ್ಕೆ ರುದ್ರದೇವರಿಂದ ಪೋಷ್ಯರಾದವರು. 'ಎಲ್ಲಾ ದೇವತೆಗಳನ್ನು ರುದ್ರದೇವರು ಪೋಷಣೆ ಮಾಡಿದರು' ಎಂಬರ್ಥವನ್ನೇ ಹೇಗೆ ಹೇಳುತ್ತೇವೋ, ಮತ್ತು 'ರಾಜ್ಞಿ ರಾಜ್ಯಂ ಸಮಾಹಿತಮ್' ಎಂಬಲ್ಲಿಯೂ ಸಹ 'ರಾಜನು ಸಕಲ ರಾಜ್ಯವನ್ನು ಪೋಷಣೆ ಮಾಡಿದನು' ಎಂಬರ್ಥವನ್ನು ಹೇಗೆ ಹೇಳುತ್ತೇವೋ, ಅದರಂತೆ ಇಲ್ಲಿಯೂ ಸಹ 'ಆಕಾಶದಲ್ಲಿ ಸಕಲ ಪದಾರ್ಥಗಳು ಆಶ್ರಿತವಾಗಿವೆ' ಎಂದರೆ 'ಆಕಾಶದಿಂದ ಪೋಷಿತವಾಗಿವೆ' ಎಂಬರ್ಥವನ್ನೇ ಹೇಳಬೇಕಾಗುತ್ತದೆ.

ಅಚೇತನಕ್ಕೆ ಪೋಷ್ಯತ್ವವು ಯುಕ್ತವಾಗದ ಕಾರಣದಿಂದಲೇ ಶ್ರುತಿಯಲ್ಲಿರುವ 'ಭೂತ', 'ಭವತ್' ಇತ್ಯಾದಿ ಪದಗಳಿಗೂ ಸಹ ಚೇತನಪರತ್ವವನ್ನೇ ಹೇಳಬೇಕು. ನಿತ್ಯರಾದ ಚೇತನರಿಗೆ ಭೂತಾದಿ ಕಾಲಗಳನ್ನು ಹೇಗೆ ಪ್ರಯೋಗಿಸುವುದು ? ಎಂದರೆ ದೇಹದ್ವಾರಾ ಉತ್ಪತ್ತಿಯಿರುವುದರಿಂದ ಹಿಂದಿನ ಮುಂದಿನ ಚೇತನರನ್ನು ಪೋಷಿಸುತ್ತಾನೆಂಬ ಅರ್ಥವನ್ನು ಹೇಳಬಹುದು. ಆದ್ದರಿಂದ ಶ್ರುತಿಯಲ್ಲಿ ಕೇಳಿಸುತ್ತಿರುವ ಆಕಾಶಶಬ್ದವೂ ಸಹ ಮಹಾಲಕ್ಷ್ಮೀದೇವಿಯನ್ನೇ ಪ್ರತಿಪಾದಿಸುತ್ತದೆ.

ಅಂತಹ ಆಕಾಶನಾಮಕಳಾದ ಲಕ್ಷ್ಮೀದೇವಿಗೆ ಆಶ್ರಯನಾದವನು ಅಕ್ಷರಶಬ್ದವಾಚ್ಯನಾದ ಮಹಾವಿಷ್ಣುವೇ ಆಗಿದ್ದಾನೆ. ಒಂದು ವೇಳೆ ಅಕ್ಷರಶಬ್ದಕ್ಕೆ ಲಕ್ಷ್ಮೀದೇವಿಯೆಂಬರ್ಥವನ್ನು ಒಪ್ಪಿದರೆ ತನಗೆ ತಾನೇ ಆಶ್ರಯಳಾಗಿದ್ದಾಳೆಂದು ಹೇಳಿದಂತಾಗುತ್ತದೆ. ಇದು ವಿರುದ್ಧವಾದ್ದರಿಂದ ಆಕಾಶಶಬ್ದದಿಂದ ಲಕ್ಷ್ಮೀದೇವಿಯು ಪ್ರತಿಪಾಚ್ಯಳು. ಅಕ್ಷರಶಬ್ದದಿಂದ ಮಹಾವಿಷ್ಣು ಪ್ರತಿಪಾದ್ಯನೆಂದು ಹೇಳುವುದು ಅತ್ಯಂತ ಸ್ವರಸವಾಗಿದೆ.

ಇದನ್ನೇ ನ್ಯಾಯವಿವರಣದಲ್ಲಿ - 'ಸರ್ವಾಧಾರಪ್ರಕೃತ್ಯಾಧಾರತ್ವಂ ವಿಷ್ಣೋರನ್ಯಸ್ಯ ವಿರುದ್ಧಮ್' 'ಸಕಲಕ್ಕೂ ಆಧಾರವಾದ ಪ್ರಕೃತಿಗೆ ಆಶ್ರಯನಾಗಿರುವಿಕೆಯು ವಿಷ್ಣುವಿನಲ್ಲಿ ಮಾತ್ರ ಉಪಪನ್ನವಾಗುತ್ತದೆ. ಬೇರೆಯವರಲ್ಲಿ ವಿರುದ್ಧವಾಗುತ್ತದೆ' ಎಂದು ಹೇಳಿರುತ್ತಾರೆ.

ಬೃಹದಾರಣ್ಯಕಭಾಷ್ಯದಲ್ಲಿಯೂ ಸಹ ಇದನ್ನೇ ಹೇಳಿದ್ದಾರೆ -

ದೀಪ್ತೇರಾಕಾಶಶಬ್ದೋಕ್ತಾ ಶ್ರೀರ್ಹಿ ಸರ್ವಾಶ್ರಯಾ ಮತಾ ।
ತದಾಶ್ರಯಃ ಪರೋ ವಿಷ್ಣುಃ ಸೋಽಸ್ಥೂಲಾದಿಗುಣೋ ಮತಃ ॥

ಅತ್ಯಂತ ಪ್ರಕಾಶಮಾನಳಾದ್ದರಿಂದ ಲಕ್ಷ್ಮೀದೇವಿಯೇ ಆಕಾಶಶಬ್ದಪ್ರತಿಪಾದ್ಯಳು. ಸಕಲ ಪದಾರ್ಥಗಳಿಗೂ ಇವಳೇ ಆಧಾರಸ್ವರೂಪಳು. ಇಂತಹ ಲಕ್ಷ್ಮೀದೇವಿಗೆ ಆಶ್ರಯನಾದವನು ಸರ್ವೋತ್ತಮನಾದ ವಿಷ್ಣುವೇ ಆಗಿದ್ದಾನೆ. ಇಂತಹ ವಿಷ್ಣುವು 'ಅಸ್ಥೂಲತ್ವಾದಿ ಗುಣಗಳುಳ್ಳವನೆಂದು ಅಭಿಮತನಾಗಿದ್ದಾನೆಂದು.

ಹೀಗೆ ಶ್ರುತಿಯನ್ನು ವ್ಯಾಖ್ಯಾನಿಸಿದ್ದರಿಂದ 'ಮಯಿ ಸರ್ವಮಿದಂ ಪ್ರೋತಮ್' ಇತ್ಯಾದಿ ಸ್ಮೃತಿಯಲ್ಲಿರುವ 'ಓತ' 'ಪ್ರೋತ' ಶಬ್ದಗಳಿಗೂ ಸಹ ವ್ಯಾಖ್ಯಾನ ಮಾಡಿದಂತಾಯಿತು. ಸಕಲ ಪದಾರ್ಥಗಳು ಲಕ್ಷ್ಮೀದೇವಿಯಿಂದ ಪೋಷಿತವಾಗಿವೆ. ಅಂತಹ ಲಕ್ಷ್ಮೀದೇವಿಯು ಪರಮಾತ್ಮನಿಂದ ಪೋಷಿತಳಾಗಿದ್ದಾಳೆಂಬರ್ಥವನ್ನು ಹೇಳಿದಂತಾಯಿತು.

ಪ್ರಶ್ನೆ - ಆಕಾಶಪದಕ್ಕೆ ಲೋಕಪ್ರಸಿದ್ಧಿಯನ್ನು ಅನುಸರಿಸಿದರೆ ಭೂತಾಕಾಶವೆಂದು ಅರ್ಥವಾಗುತ್ತದೆ. ಆಕಾಶಾಧಿಕರಣನ್ಯಾಯವನ್ನು ಅನುಸರಿಸಿದರೆ ವಿಷ್ಣುವೆಂದರ್ಥವಾಗುತ್ತದೆ. ಹೊರತು ಜಡಪ್ರಕೃತಿಯೆಂದಾಗಲೀ, ಚಿತ್‌ಪ್ರಕೃತಿಯೆಂದಾಗಲೀ ಅರ್ಥವನ್ನು ಹೇಳಲು ಸಾಧ್ಯವೇ ಇಲ್ಲ. ಆದ್ದರಿಂದ ಜಡಪ್ರಕೃತಿಯೆಂದು ಪೂರ್ವಪಕ್ಷವನ್ನು, ಹಾಗೂ ಚಿತ್ ಪ್ರಕೃತಿಯೆಂದು ಸಿದ್ಧಾಂತವನ್ನು ಹೇಗೆ ಅನುಸರಿಸಿದಿರಿ?

ಉತ್ತರ - ಆಕಾಶಾಧಿಕರಣನ್ಯಾಯವನ್ನೇ ಅನುಸರಿಸಿ ಲೋಕಪ್ರಸಿದ್ಧಿಯನ್ನು ಬಿಟ್ಟು, ಚಿತ್‌ಪ್ರಕೃತಿಯೆಂಬರ್ಥವನ್ನು ನಾವು ವಿವಕ್ಷಿಸಿದ್ದೇವೆ. ಏಕೆಂದರೆ ಆಕಾಶಾಧಿಕರಣದಲ್ಲಿ

ಬಲಿಷ್ಠವಾದ ಲಿಂಗಗಳಿಗೆ ಅನುಸಾರಿಯಾಗಿ ಲೋಕಪ್ರಸಿದ್ಧಿಯನ್ನು ಬಿಟ್ಟು ಅನ್ಯಾರ್ಥವನ್ನು ಮಾಡಬೇಕೆಂದು ನಿರ್ಣಯಿಸಲಾಗಿದೆ. ಅದೇ ನ್ಯಾಯವನ್ನು ಇಲ್ಲಿಯೂ ವಿವಕ್ಷಿಸಿದಾಗ, ಲಕ್ಷ್ಮೀದೇವಿಯ ವಿಷಯದಲ್ಲಿರುವ ಲಿಂಗಗಳ ಬಲದಿಂದ ಲೋಕಪ್ರಸಿದ್ಧಿಯಿರುವ ಜಡಪ್ರಕೃತಿಯೆಂಬರ್ಥವನ್ನು ಬಿಟ್ಟು ಲಕ್ಷ್ಮೀದೇವಿಯೆಂಬರ್ಥವನ್ನೇ ಮಾಡಬೇಕು. ಆದ್ದರಿಂದ ಆಕಾಶಾಧಿಕರಣನ್ಯಾಯದಿಂದಲೇ ಈ ವಿಷಯವು ಸಿದ್ಧವಾಗಿದೆ.

ಜನ್ಮಾಧಿಕರಣದಲ್ಲಿ 'ಯ ಏವ' ಎಂಬ ಶ್ರುತ್ಯರ್ಥ

भावदीपः – 'य एव एकप्रकृतिपुरुषकालाधारः पृथिवीं द्यां सर्वभुवनानि च दधार' इति जन्मादिनये 'य' इति श्रुतेर्व्याख्यानाद् भर्तेत्यादेरर्थमाह – एक इति ।।

'य ಏವ ಏಕಪ್ರಕೃತಿಪುರುಷಕಾಲಾಧಾರಃ ಪೃಥಿವೀಂ ದ್ಯಾಂ ಸರ್ವಭುವನಾನಿ ಚ ದಧಾರ' ಎಂಬುದಾಗಿ ಜನ್ಮಾಧಿಕರಣದಲ್ಲಿ 'ಯ ಏವ' ಎಂಬ ಶ್ರುತಿಯನ್ನು ವ್ಯಾಖ್ಯಾನ ಮಾಡಿದ್ದಾಗಿದೆ. ಆದ್ದರಿಂದ ಈಗ 'ಭರ್ತಾ' ಎಂಬ ಶ್ರುತಿಯ ಅರ್ಥವನ್ನು 'ಏಕಃ' ಇತ್ಯಾದಿಯಾಗಿ ಹೇಳುತ್ತಿದೆ.

'ಭರ್ತಾ ಸನ್' ಎಂಬುದರ ವ್ಯಾಖ್ಯಾನ

भावदीपः – 'भर्ता सन्' इत्यस्यार्थः – भर्तृत्वेनेति ।। 'भ्रियमाणो बिभर्ति' इत्युक्त्या प्राप्तं जगदीश्वरयोराधाराधेयभावसाम्यं निरसितुं 'यदा भारं तन्द्रयते स भर्तुम् । परास्य भारं पुनरस्तमेति' इति शेषार्थमाह – स चेति ।।

'ಭರ್ತಾ ಸನ್' ಎಂಬರ್ಥವನ್ನೇ 'ಭರ್ತೃತ್ವ' ಎಂಬುದರಿಂದ ಹೇಳಿದ್ದಾರೆ. 'ಭ್ರಿಯಮಾಣೋ ಬಿಭರ್ತಿ' ಎಂದು ಹೇಳಿದ್ದರಿಂದ ಜಗತ್ತು ಮತ್ತು ಈಶ್ವರರೆಂಬ ಆಧಾರಾಧೇಯಗಳಿಗೆ ಸಾಮ್ಯವು ಪ್ರಾಪ್ತವಾಗುತ್ತದೆ. ಅದರ ನಿರಾಸಕ್ಕಾಗಿ 'ಯದಾ ಭಾರಂ ತಂದ್ರಯತೇ ಸ ಭರ್ತೃಮ್ । ಪರಾಸ್ಯ ಭಾರಂ ಪುನರಸ್ತಮೇತಿ' ಎಂದು ಉಳಿದ ಶ್ರುತಿಯ ಅರ್ಥವನ್ನು 'ಸ ಚ' ಇತ್ಯಾದಿ ಭಾಷ್ಯದಿಂದ ಹೇಳುತ್ತಿದ್ದಾರೆ.

'ತತ್'ಶಬ್ದದಿಂದ ವಿಷ್ಣುವೇ ವಿವಕ್ಷಿತ

भावदीपः – अत्र विष्णुश्रुत्यादेरभावात् कथं विष्णौ समाख्येयं श्रुतिरित्यतस्तच्छब्दपरामृष्टमाह – एतच्चेति ।।

ಈ ಶ್ರುತಿಯಲ್ಲಿ ವಿಷ್ಣುಶಬ್ದವೇ ಕೇಳಿಸದ ಕಾರಣ, ವಿಷ್ಣುವಿಷಯದಲ್ಲಿ ಸಮಾಖ್ಯಾಪ್ರಮಾಣ-ವಾಗುತ್ತದೆನ್ನಲು ಹೇಗೆ ಹೇಳುತ್ತೀರಿ? ಎಂಬ ಪ್ರಶ್ನೆಗೆ 'ತತ್' ಶಬ್ದದಿಂದ ವಿಷ್ಣುವೇ ಪರಾಮೃಷ್ಟ-ನಾಗಿದ್ದಾನೆಂದು 'ಏತಚ್ಚ' ಇತ್ಯಾದಿ ಟೀಕೆಯಿಂದ ಹೇಳಿದ್ದಾರೆ.

ಲಕ್ಷ್ಮೀಪತಿತ್ವಲಿಂಗವು ನಿರ್ಣಾಯಕ

भावदीपः – स च प्राणो 'अत एव प्राणः' इत्यत्र लक्ष्मीपतित्वादिलिङ्गेन विष्णुरिति निर्णीत इति भावः ।

ಲಕ್ಷ್ಮೀಪತಿತ್ವವೇ ಮೊದಲಾದ ಲಿಂಗಗಳ ಬಲದಿಂದ ಪ್ರಾಣಶಬ್ದವಾಚ್ಯನಾದವನು ವಿಷ್ಣುವೇ ಆಗಿದ್ದಾನೆಂದು 'ಅತ ಏವ ಪ್ರಾಣಃ' ಎಂಬ ಸೂತ್ರದಲ್ಲಿ ಸಮರ್ಥಿಸಲಾಗಿದೆ.

'ಏಧಿ' ಎಂಬ ಪ್ರಯೋಗದ ಬಗ್ಗೆ

भावदीपः – एधि अस्तीत्यर्थः । 'अवसोरेधावभ्यासलोपश्च' इति अस्तेर्मध्यमपुरुषप्रयोगः छान्दस इत्येके । एधीत्यस्यावर्धतेति चन्द्रिकोक्तिः।

'ಏಧಿ' ಶಬ್ದಕ್ಕೆ 'ಅತ್ತಿ' ಎಂದರ್ಥ. 'ಅವಸೋರೇಧಾವಭ್ಯಾಸಲೋಪಶ್ಚ' ಎಂಬುದಾಗಿ ಅಸು ಧಾತುವಿನ ಮಧ್ಯಮಪುರುಷ ಪದಪ್ರಯೋಗವೇ 'ಏಧಿ' ಎಂಬ ಛಾಂದಸಪ್ರಯೋಗವೆಂದು ಕೆಲವರು ಹೇಳುತ್ತಾರೆ. 'ಏಧಿ' ಎಂಬುದಕ್ಕೆ 'ಅವರ್ಧತ' ಎಂಬುದಾಗಿ ಚಂದ್ರಿಕೆಯಲ್ಲಿ ಹೇಳಿದ್ದಾರೆ.

'ಯಸ್ಮಿನ್' ಇತ್ಯಾದಿ ಶ್ರುತಿಯೂ ವಿಷ್ಣುಪರ

भावदीपः – यस्मिन्निति श्रौतयच्छब्दस्य विष्ण्वर्थत्वद्योतनाय 'तदेव ब्रह्म परमं कवीनाम्' इत्युत्तरवाक्यस्थतत्पदेनान्वयमाह – तदेव ब्रह्मेत्यर्थ इति ।।

'ಯಸ್ಮಿನ್' ಎಂಬ ಶ್ರುತಿಯಲ್ಲಿರುವ 'ಯತ್' ಎಂಬ ಶಬ್ದವು ವಿಷ್ಣುವನ್ನು ಪ್ರತಿಪಾದಿಸುತ್ತಿದೆ. ಇದನ್ನು ತಿಳಿಸಲು 'ತದೇವ ಬ್ರಹ್ಮ ಪರಮಂ ಕವೀನಾಮ್' ಎಂಬ ಮುಂದಿನ ವಾಕ್ಯದಲ್ಲಿರುವ 'ತತ್' ಪದದ ಜೊತೆಗೆ ಅನ್ವಯವನ್ನು 'ತದೇವ' ಇತ್ಯಾದಿಯಾಗಿ ತೋರಿಸುತ್ತಿದ್ದಾರೆ.

'ಯ ಉ ತ್ರಿಧಾತು' ಎಂಬ ಶ್ರುತಿಯಂತೆ 'ಭರ್ತಾ' ಇತ್ಯಾದಿ ಶ್ರುತಿಯನ್ನು ವ್ಯಾಖ್ಯಾನಿಸಬೇಕು

ಭಾವದೀಪಃ – विष्णुवदन्यस्यापीति ।। य उ त्रिति ।। श्रुतेर्जन्मादिनयोक्तरीत्या भर्तेति श्रुतेश्च 'यदा भारम्' इति वाक्यशेषार्थोक्तरीत्याऽन्वयव्यतिरेकाभ्यां विष्ण्वेकपरत्वप्रतीतेस्तथैव श्रुतीनां व्याख्यातुं शक्यत्वेऽपि 'स्मृत्यवैयर्थ्याय श्रुतीः सर्वाधारप्रकृत्याधारत्वं विष्णोः' इति न्यायविवरणैकदेशविवरण-परतया व्याख्याय 'अन्यस्य विरुद्धम्' इत्येतदंशविवरणपरतया स्मृतिर्व्याख्यातेति ध्येयम् ।। १० ।।

'ಯ ಉ ತ್ರಿಧಾತು' ಎಂಬ ಶ್ರುತಿಯನ್ನು ಜನ್ಮಾದ್ಯಧಿಕರಣದಲ್ಲಿ ವ್ಯಾಖ್ಯಾನ ಮಾಡಿದಂತೆ 'ಭರ್ತಾ' ಎಂಬ ಶ್ರುತಿಯನ್ನೂ ಕೂಡ 'ಯದಾ ಭಾರಮ್' ಎಂಬ ವಾಕ್ಯಶೇಷದಂತೆ ಕೇವಲ ವಿಷ್ಣುಪರವೆಂದು ವ್ಯಾಖ್ಯಾನಿಸಬೇಕು. ಅನ್ವಯವ್ಯತಿರೇಕಗಳಿಂದ ಈ ಅರ್ಥವು ಸ್ಪಷ್ಟವಾಗುತ್ತದೆ. ಹೀಗೆ ಶ್ರುತಿಯನ್ನು ವ್ಯಾಖ್ಯಾನಿಸಲು ಸಾಧ್ಯವಿದ್ದರೂ ಕೂಡ 'स्मृत्यवैयर्थ्याय श्रुतीः सर्वाधारप्रकृत्याधारत्वं विष्णोः' ಎಂಬ ನ್ಯಾಯವಿವರಣದ ಏಕದೇಶವನ್ನು ವಿವರಣೆ ಮಾಡುವುದಕ್ಕಾಗಿ ವ್ಯಾಖ್ಯಾನ ಮಾಡಲಾಗಿದೆ. 'ಅನ್ಯಸ್ಯ ವಿರುದ್ಧಮ್' ಎಂಬಂಶವನ್ನು ವಿವರಣೆ ಮಾಡುವುದಕ್ಕಾಗಿ ಸ್ಮೃತಿಯನ್ನು ವ್ಯಾಖ್ಯಾನ ಮಾಡಿದ್ದಾರೆಂದು ತಿಳಿಯಬೇಕು.

ವಿಶೇಷವಿಚಾರ - ಅಥವಾ ಅನುವ್ಯಾಖ್ಯಾನ ಹಾಗೂ ನ್ಯಾಯಸುಧೆಯ ಪ್ರಕಾರ 'ಅಸ್ಥೂಲೋ ಅನಣುಃ' ಇತ್ಯಾದಿ ಶ್ರುತಿಗೆ ಮತ್ತೊಂದು ಬಗೆಯಲ್ಲಿಯೇ ವ್ಯಾಖ್ಯಾನಿಸಬಹುದು. ಶ್ರುತಿಯಲ್ಲಿರುವ 'ಅಸ್ಥೂಲಃ' ಎಂಬ ಪದವು ಸ್ಥೂಲತ್ವಕ್ಕೆ ವಿರುದ್ಧವಾದ ಅಣುತ್ವವನ್ನು ವಿಧಿಸುತ್ತಿದೆ. 'ಅನಣುಃ' ಎಂಬ ಪದವು ಅಣುತ್ವಕ್ಕೆ ವಿರುದ್ಧವಾದ ಸ್ಥೂಲತ್ವ ಧರ್ಮವನ್ನು ವಿಧಿಸುತ್ತಿದೆ. ಹೀಗೆ ಆಯಾ ಪದಗಳು ತದ್ವಿರುದ್ಧವಾದ ಧರ್ಮಗಳನ್ನು ವಿಧಿಸುತ್ತಿವೆ ಎಂದು ಹೇಳಬಹುದು. ಒಬ್ಬನೇ ಭಗವಂತನಲ್ಲಿ ವಿರುದ್ಧವಾದ ಸ್ಥೂಲತ್ವ-ಅಣುತ್ವ ಮೊದಲಾದ ಧರ್ಮಗಳಿಗೆ ವಿರೋಧ ಬರುತ್ತದಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ -

ಯಥೈಕಸ್ಯೈವ ದಧ್ಯಾದೇಃ ಕ್ರತ್ವರ್ಥಪುರುಷಾರ್ಥತೇ ।
ಅಣೀಯತ್ವಮಹೀಯಸ್ತ್ವೇ ತಥೈಕಸ್ಯೈವ ಹೀಶಿತುಃ ॥

ಒಂದೇ ದಧಿಯಲ್ಲಿ ಕೃತ್ವರ್ಥತ್ವ ಹಾಗೂ ಪುರುಷಾರ್ಥತ್ವಗಳೆರಡು ಇರುವುದು ಕಂಡಿದೆ. ಆದರಂತೆ ಐಶ್ವರ್ಯಾದಿ ಗುಣಶಾಲಿಯಾದ ಭಗವಂತನಲ್ಲಿ ಅಣುತ್ವ-ಮಹತ್ವಗಳು ಇರಬಹುದು.

ಶ್ಲೋಕದ ವಿವರಣೆ ಹೀಗಿದೆ - ದರ್ಶಪೂರ್ಣಮಾಸ ಯಾಗವು ಉಳಿದ ಯಾಗಗಳಿಗೆಲ್ಲಾ ಪ್ರಕೃತಿಯಾಗವಾಗಿದೆ, ಬೇರೆ ಮತ್ತೊಂದು ಯಾಗಕ್ಕೆ ಈ ದರ್ಶಪೂರ್ಣಮಾಸ ಯಾಗವು ವಿಕೃತಿಯಾಗಿರುವುದಿಲ್ಲ. ಇನ್ನು ಪಶುಗಣ ಮೊದಲಾದ ಯಾಗಗಳು ದರ್ಶಪೂರ್ಣಮಾಸಾದಿ ಯಾಗಗಳಿಗೆ ಕೇವಲ ವಿಕೃತಿಯಾಗಿದೆ, ಮತ್ತೊಂದು ಯಾಗಕ್ಕೆ ಪ್ರಕೃತಿಯಾಗಿರುವುದಿಲ್ಲ. ಆದರೆ ಅಗ್ನಿಷೋಮಿಯಪಶು ಮೊದಲಾದವುಗಳು ದರ್ಶಪೂರ್ಣಮಾಸ ಯಾಗದ ವಿಕೃತಿಯೂ ಆಗಿದೆ, ಸವನೀಯ ಪಶುಬಂಧಕ್ಕೆ ಪ್ರಕೃತಿಯೂ ಆಗಿದೆ. ಆದ್ದರಿಂದ ಪ್ರಕೃತಿತ್ವ ಹಾಗೂ ವಿಕೃತಿತ್ವಗಳು ಬೇರೆ ಬೇರೆ ಸ್ಥಳಗಳಲ್ಲಿ ಭಿನ್ನವಾಗಿ ಕಂಡಿದ್ದರೂ ಅಗ್ನಿಷೋಮಿಯಪಶುವಿನ ವಿಷಯದಲ್ಲಿ ಮಾತ್ರ ಪ್ರಕೃತಿತ್ವ, ವಿಕೃತಿತ್ವಗಳೆರಡೂ ಒಟ್ಟಿಗೆ ಇರುವುದು ಕಂಡಿರುತ್ತದೆ.

ಮತ್ತು ಅವಘಾತಕ್ಕೆ ಕೇವಲ ದೃಷ್ಟಪ್ರಯೋಜನವಿರುವುದು ಕಂಡಿದೆ. ಪ್ರೋಕ್ಷಣ್ಯಾದಿಗಳಿಗೆ ಕೇವಲ ಅದೃಷ್ಟಪ್ರಯೋಜನವಿರುವುದು ಕಂಡಿದೆ. ಆದರೆ 'ಸ್ವಿಷ್ಟಕೃತ್' ಮೊದಲಾದವುಗಳಲ್ಲಿ ದೃಷ್ಟಪ್ರಯೋಜನ ಹಾಗೂ ಅದೃಷ್ಟಪ್ರಯೋಜನಗಳೆರಡೂ ಸಹ ಒಟ್ಟಿಗೆ ಇರುವುದು ಕಂಡಿರುತ್ತದೆ.

ಇದರಂತೆ ಕಾಮಾಧಿಕಾರತ್ವ ಹಾಗೂ ನಿತ್ಯಾಧಿಕಾರತ್ವಗಳು ಬೇರೆಡೆ ಭಿನ್ನ-ಭಿನ್ನವಾಗಿ ಕಂಡಿದ್ದರೂ, ಜಾತೇಷ್ಟಿಯಲ್ಲಿ ಮಾತ್ರ ಒಟ್ಟಿಗೆ ಇರುವುದು ಕಂಡಿರುತ್ತದೆ. ಅಥವಾ ನಿತ್ಯಕರ್ಮ ಹಾಗೂ ನೈಮಿತ್ತಿಕಕರ್ಮಗಳು ಭಿನ್ನ-ಭಿನ್ನವಾಗಿದ್ದರೂ ಕೆಲವೆಡೆ ಒಟ್ಟಿಗೆ ಇರುವುದು ಕಂಡಿರುತ್ತದೆಂದು ತಿಳಿಯಬೇಕು.

ಇದರಂತೆ ವ್ರೀಹಿ ಮೊದಲಾದವುಗಳಲ್ಲಿ ಕೇವಲ ಕ್ರತುಪ್ರಯೋಜನತ್ವವಿರುತ್ತದೆ. ಗೋದೋಹನಾದಿಗಳಲ್ಲಿ ಕೇವಲ ಪುರುಷಾರ್ಥತ್ವವು ಇರುತ್ತದೆ. ಆದರೆ ದಧಿ ಮೊದಲಾದವುಗಳಲ್ಲಿ ಕೃತ್ವರ್ಥತ್ವ ಹಾಗೂ ಪುರುಷಾರ್ಥತ್ವಗಳೆರಡೂ ಒಟ್ಟಿಗೆ ಇರುವುದು ಪೂರ್ವಮೀಮಾಂಸೆಯಲ್ಲಿ ಸಿದ್ಧವಾಗಿದೆ. ಹೀಗೆ ಈ ನಾಲ್ಕು ದೃಷ್ಟಾಂತಗಳಿಂದ ಬೇರೆ ಬೇರೆ ಸ್ಥಳಗಳಲ್ಲಿ ಭಿನ್ನ-ಭಿನ್ನವಾಗಿರುವ ಧರ್ಮಗಳು ಕೆಲವೆಡೆ ಒಟ್ಟಿಗೆ ಇರಬಹುದೆಂಬ ನಿಯಮವು ಸಿದ್ಧವಾಗುತ್ತವೆ.

ಮೇಲೆ ಹೇಳಿದ ದೃಷ್ಟಾಂತಗಳಂತೆ ಅಣುತ್ವ ಹಾಗೂ ಮಹತ್ವಗಳೆರಡೂ ಪ್ರತ್ಯೇಕವಾಗಿ ಲೋಕದಲ್ಲೆಲ್ಲೆಡೆ ಇರುವುದು ಕಂಡಿದ್ದರೂ ಸಹ ಪರಮಾತ್ಮನಲ್ಲಿ ಒಟ್ಟಿಗೆ

ಇರಬಹುದು. ಏಕೆಂದರೆ ಸಣ್ಣದಾದ ಶ್ರೀಕೃಷ್ಣನ ಬಾಯಿಯಲ್ಲಿ ಸಮಗ್ರ ಬ್ರಹ್ಮಾಂಡವನ್ನೇ ಯಶೋದಾದೇವಿಯು ನೋಡಿದ್ದಾಳೆ. ಯಶೋದೆಯ ಪ್ರತ್ಯಕ್ಷ ಪ್ರಮಾಣದಿಂದ ಕೃಷ್ಣನ ಮುಖದಲ್ಲಿ ಅಣುತ್ವ-ಮಹತ್ತ್ವಗಳೆರಡೂ ಒಟ್ಟಿಗೆ ಇರುವುದು ಸಿದ್ಧವಾಗಿದೆ.

ಅಷ್ಟೇ ಅಲ್ಲದೆ, ಅಣುತ್ವಲಿಂಗಕ್ಕೆ ಅನುಮಾಪಕವಾದ ಒಂದೇ ಹಗ್ಗದಿಂದ ಕೃಷ್ಣನನ್ನು ಕಟ್ಟುವಿಕೆ ಹಾಗೂ ಮಹತ್ವಕ್ಕೆ ಅನುಮಾಪಕವಾದ ಅನೇಕ ಹಗ್ಗಗಳಿಂದ ಶ್ರೀಕೃಷ್ಣನನ್ನು ಕಟ್ಟಲಾಗದಿರುವಿಕೆ ಎಂಬ ಲಿಂಗವೂ ಸಹ ಈ ವಿಷಯದಲ್ಲಿ ಪ್ರಮಾಣವಾಗಿರುತ್ತದೆ. ಒಂದೇ ಹಗ್ಗದಿಂದ ಕೃಷ್ಣನನ್ನು ಕಟ್ಟಿರುವ ಕಾರಣ ಅಣುತ್ವವಿದೆಯೆಂದು ಊಹಿಸಬಹುದು. ಅನೇಕ ಹಗ್ಗಗಳಿಂದ ಕೃಷ್ಣನನ್ನು ಕಟ್ಟಲಾಗಲು ಸಾಧ್ಯವಾಗದ ಕಾರಣ ಮಹತ್ವವಿದೆಯೆಂದು ಊಹಿಸಬಹುದು.

'ಅಣೋರಣೀಯಾನ್ ಮಹತೋ ಮಹೀಯಾನ್' 'ಅಣುವಿಗಿಂತಲೂ ಅಣುವಾಗಿದ್ದಾನೆ. ಮಹತ್‌ಪದಾರ್ಥಕ್ಕಿಂತಲೂ ಮಹೀಯಾನ್' ಆಗಿದ್ದಾನೆ ಎಂಬ ಮಹಾನಾರಾಯಣ ಶ್ರುತಿಯೂ ಸಹ ಈ ವಿಷಯದಲ್ಲಿ ಪ್ರಮಾಣವಾಗಿದೆ.

ಹಾಗಾದರೆ ಅಣುತ್ವ-ಮಹತ್ತ್ವಧರ್ಮಗಳಿಗೆ ಎಲ್ಲಿಯೂ ಸಹ ವಿರೋಧವನ್ನೇ ಒಪ್ಪಬೇಕಾಗಿಲ್ಲವಲ್ಲ? ಎಂದು ಪ್ರಶ್ನಿಸಬಾರದು. ಪ್ರಾಕೃತತ್ವವು ಅಣುತ್ವ ಮಹತ್ವಗಳಿಗಿರುವ ವಿರೋಧಕ್ಕೆ ಉಪಾಧಿಯಾಗಿದೆ. ಅಂದರೆ ಎಲ್ಲಿ ಮಹತ್ವವಿರುವುದಿಲ್ಲವೋ, ಅಲ್ಲಿ ಪ್ರಾಕೃತತ್ವವಿದ್ದರೆ ಅಣುತ್ವ ಇದ್ದೇ ಇರುತ್ತದೆ. ಇದರಂತೆ ಎಲ್ಲಿ ಅಣುತ್ವವಿರುವುದಿಲ್ಲವೋ, ಅಲ್ಲಿ ಪ್ರಾಕೃತತ್ವವಿದ್ದರೆ ಮಹತ್ವವು ಇದ್ದೇ ಇರುತ್ತದೆ ಎಂಬುದಾಗಿ ತಿಳಿಯಬೇಕು. ಆದ್ದರಿಂದ ಘಟಪಟಾದಿಗಳಲ್ಲಿಯೂ ಸಹ ಅಣುತ್ವ-ಮಹತ್ವಗಳನ್ನು ಒಟ್ಟಿಗೆ ಒಪ್ಪೋಣ ಎಂಬ ಶಂಕೆಗೆ ಅವಕಾಶವಿಲ್ಲ. ಪರಮಾತ್ಮನಲ್ಲಿ ಪ್ರಾಕೃತತ್ವವು ಇಲ್ಲದ ಕಾರಣ ಅಣುತ್ವ-ಮಹತ್ವಗಳಿಗೆ ವಿರೋಧವಿಲ್ಲವೆಂದು ತಿಳಿಯಬೇಕು.

ಅಥವಾ ಅಣುತ್ವ-ಮಹತ್ವಗಳಿದ್ದಲ್ಲಿ ಭೇದವಿದ್ದರೆ ವಿರೋಧಕ್ಕೆ ಅವಕಾಶವಿಲ್ಲ. ಏಕೆಂದರೆ_ಪರಮಾತ್ಮನಲ್ಲಿ ಭೇದಪ್ರತಿನಿಧಿಯಾದ ವಿಶೇಷವಿರುವ ಕಾರಣ ವಿರೋಧಕ್ಕೆ ಅವಕಾಶವಿಲ್ಲವೆಂದು ತಿಳಿಯಬೇಕು.

ಅಥವಾ 'ತ್ವಯೀಶ್ವರೇ ಬ್ರಹ್ಮಣಿ ನೋ ವಿರುಧ್ಯತೇ' ಇತ್ಯಾದಿ ವಾಕ್ಯಗಳಲ್ಲಿ ಪರಮಾತ್ಮನಲ್ಲಿರುವ ಐಶ್ವರ್ಯಶಕ್ತಿಯಿಂದ ಯಾವುದೇ ಧರ್ಮಗಳ ವಿರೋಧಕ್ಕೂ ಅವಕಾಶವಿಲ್ಲವೆಂದು ಅಂಗೀಕರಿಸಲಾಗಿದೆ. ಅಚಿಂತ್ಯಾದ್ಭುತಶಕ್ತಿಯಿಂದ ಪರಮಾತ್ಮನಲ್ಲಿ ಒಟ್ಟಿಗೆ ಇರುವ ಅಣುತ್ವ-ಮಹತ್ತ್ವಗಳ ವಿರೋಧವನ್ನು ಪರಿಹರಿಸಬೇಕು.

ಇದನ್ನೇ ಅನುವ್ಯಾಖ್ಯಾನದಲ್ಲಿ ಹೀಗೆ ಹೇಳಿದ್ದಾರೆ -

ಅತೋ ವಿರುದ್ಧವದ್ಭಾತಮಪಿ ವ್ಯಾಖ್ಯಾಯ ತತ್ತ್ವತಃ।
ಯೋಜನೀಯಂ ಹರೌ ವಾಕ್ಯಂ ವಿರುದ್ಧೈರ್ಲಕ್ಷಣೈರ್ಯುತಮ್ ॥

ಪರಮಾತ್ಮನಲ್ಲಿರುವ ಧರ್ಮಗಳಿಗೆ ವಿರೋಧವಿರುವಂತೆ ಕಂಡರೂ ಸಹ ತಾತ್ವಿಕವಾಗಿ ಅದನ್ನು ವ್ಯಾಖ್ಯಾನ ಮಾಡಿ ಪರಮಾತ್ಮನಲ್ಲಿ ಯೋಜನೆ ಮಾಡಬೇಕು. ಏಕೆಂದರೆ ವಿರುದ್ಧಧರ್ಮವಿರುವಿಕೆಯೇ ಅವನ ಸ್ವಭಾವವಾಗಿದೆ ಎಂದು.

ಬ್ರಹ್ಮಸೂತ್ರ

'ಸಾ ಚ ಪ್ರಶಾಸನಾತ್' ಎಂಬ ಸೂತ್ರವ್ಯಾಖ್ಯಾನ

ब्रह्मसूत्रम् — ।। सा च प्रशासनात् ।। ११ ।।

ಸೂತ್ರಾರ್ಥ - ಆಕಾಶದ ಪರ್ಯಂತ ಸಕಲ ಪದಾರ್ಥಗಳನ್ನು ವಿಷ್ಣು ಸ್ವತಃ ಧಾರಣೆ ಮಾಡಿದ್ದಾನೆ. ಕೇವಲ ಆಜ್ಞಾಮೂಲಕವಾಗಿ ಸೂರ್ಯ, ಚಂದ್ರ ಮೊದಲಾದವರನ್ನೆಲ್ಲಾ ಆಯಾ ಸ್ಥಾನದಲ್ಲಿ ಇರುವಂತೆ ಮಾಡಿದ್ದಾನೆ, ಈ ಅದ್ಭುತ ಸಾಮರ್ಥ್ಯ ವಿಷ್ಣುವಿಗಲ್ಲದೇ ಬೇರೆಯವರಲ್ಲಿ ಕೂಡುವುದಿಲ್ಲ. ಆದ್ದರಿಂದ ವಿಷ್ಣುವೇ ಅಕ್ಷರಶಬ್ದವಾಚ್ಯನು.

ಅರ್ಥ -- ಚ = ಯಾವ ಕಾರಣದಿಂದ, ಸಾ = ಆಕಾಶದ ಪರ್ಯಂತ, ಇರುವ ಸೂರ್ಯ, ಚಂದ್ರ ಮೊದಲಾದ ಸಕಲಪದಾರ್ಥಗಳು, ಪ್ರಶಾಸನಾತ್ = ಕೇವಲ ವಿಷ್ಣುವಿನ ಆಜ್ಞೆಯಿಂದಲೇ ಉಂಟಾಗಿದೆ ಎಂದು 'ಏತಸ್ಯ ವಾ' ಎಂದು ಬೃಹದಾರಣ್ಯಕಶ್ರುತಿಯಲ್ಲಿ ಹೇಳಲಾಗಿದೆ. ಈ ಕಾರಣದಿಂದಲೂ ಬ್ರಹ್ಮನೇ ಅಕ್ಷರಶಬ್ದವಾಚ್ಯನು ಚೇತನಪ್ರಕೃತಿಯಲ್ಲ.

ಬ್ರಹ್ಮಸೂತ್ರಭಾಷ್ಯ

ಆಜ್ಞೆಯಿಂದಲೇ ಎಲ್ಲವನ್ನೂ ಧರಿಸಿದ್ದಾನೆ

ब्रह्मसूत्रभाष्यम् – ।। सा च प्रशासनात् ।। सा च धृतिः प्रशासनाद्उच्यते। 'एतस्य वा अक्षरस्य प्रशासने (गार्गि सूर्याचन्द्रमसौ विधृतौ तिष्ठतः') (बृ. ५-८-९) इत्यादिना । तच्च प्रशासनं विष्णोरेव ।

ಅನುವಾದ - ಸೂರ್ಯ, ಚಂದ್ರ ಮೊದಲಾದ ಆಕಾಶದ ಪರ್ಯಂತ ಸಕಲ ಪದಾರ್ಥಗಳು ಭಗವಂತನ ಆಜ್ಞೆಯಿಂದಷ್ಟೇ ನಿಂತಿವೆ ಎಂದು ಶ್ರುತಿಯು ಹೇಳಿದೆ. 'ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ ಸೂರ್ಯಾಚಂದ್ರಮಸೌ ವಿಧೃತೌ ತಿಷ್ಠತಃ' ಎಂಬ ಶ್ರುತಿಯು ಅಂತಹ ಆಜ್ಞೆ ನೀಡುವ ಸಾಮರ್ಥ್ಯ ವಿಷ್ಣುವಿನಲ್ಲಿ ಮಾತ್ರ ಇದೆ ಎಂದು ಹೇಳಿದೆ .

ಪ್ರತಿಪದಾರ್ಥ -- ಮತ್ತೊಂದು ಯುಕ್ತಿಯಿಂದ ವಿಷ್ಣುವೇ ಅಕ್ಷರನಾಗಿದ್ದಾನೆಂದು ಪ್ರತಿಪಾದಿಸುವ ಸೂತ್ರವನ್ನು ಉಪನ್ಯಾಸ ಮಾಡಿ ವ್ಯಾಖ್ಯಾನಿಸುತ್ತಿದ್ದಾರೆ 'ಸಾ ಚ ಧೃತಿಃ' ಇತ್ಯಾದಿ ವಾಕ್ಯದಿಂದ.

ಸಾ ಚ ಧೃತಿಃ = ಅಂತಹ ಸಕಲ ಪದಾರ್ಥಗಳನ್ನು ಧಾರಣೆ ಮಾಡುವಂತಹ ಸಾಮರ್ಥ್ಯವು, ಪ್ರಶಾಸನಾತ್ = ಕೇವಲ ವಿಷ್ಣುವಿನ ಆಜ್ಞೆಯಿಂದಷ್ಟೇ, ಉಚ್ಯತೇ = ಶ್ರುತಿಯಲ್ಲಿ ಹೇಳಲಾಗಿದೆ - ಗಾರ್ಗಿ = ಎಲೈ, ಗಾರ್ಗಿಯೇ, ಸೂರ್ಯಾಚಂದ್ರಮಸೌ = ಸೂರ್ಯ, ಚಂದ್ರ ಮೊದಲಾದವರು, ಏತಸ್ಯ ಅಕ್ಷರಸ್ಯ = ಈ ಅಕ್ಷರನ, ಪ್ರಶಾಸನೇ = ಆಜ್ಞೆಯಲ್ಲಿ, ವಿಧೃತೌ = ನೆಲೆಸಿದವರಾಗಿ, ತಿಷ್ಠತಃ = ಇರುತ್ತಾರೆ, ಇತ್ಯಾದಿನಾ = ಇವೇ ಮೊದಲಾದ ಶ್ರುತಿಗಳಿಂದ ಹೀಗೆ ಹೇಳಿದ್ದರಿಂದ ಬ್ರಹ್ಮನೇ ಅಕ್ಷರನು.

ಸಕಲಪದಾರ್ಥಗಳನ್ನೂ ಆಜ್ಞೆ ಮಾಡುವ ಮೂಲಕ ನಿರ್ಮಿಸಿದ ಮಾತ್ರಕ್ಕೆ ಅಕ್ಷರನು ವಿಷ್ಣುವೇ ಆಗಿದ್ದಾನೆಂದು ಹೇಗೆ ಹೇಳುತ್ತೀರಿ ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ.

ತಚ್ಚ = ಅಂತಹ, ಪ್ರಶಾಸನಂ = ಆಜ್ಞೆ ಮಾಡುವ ಸಾಮರ್ಥ್ಯವು, ವಿಷ್ಣೋರೇವ = ವಿಷ್ಣುವಿಗೆ ಮಾತ್ರ.

ಸಕಲರೂ ವಿಷ್ಣುವಿನ ಅಧೀನ

ब्रह्मसूत्रभाष्यम् – 'सप्तार्धगर्भा भुवनस्य रेतो विष्णोस्तिष्ठन्ति प्रदिशा विधर्मणि।'

(ऋ. १-१६४-३६.)

ಅನುವಾದ - ಮಹತ್ತತ್ವ, ಅಹಂಕಾರತತ್ವ ಮತ್ತು ಪಂಚಮಹಾಭೂತಗಳೆಂಬ ಏಳು ಆವರಣಗಳೂ ಹಾಗೂ ಅವುಗಳಿಗೆ ಅಭಿಮಾನಿಯಾದ ಬ್ರಹ್ಮ, ರುದ್ರಾದಿದೇವತೆಗಳೂ ಸುಖಪ್ರದನಾದ ವಿಷ್ಣುವಿನ ಆಜ್ಞೆಯಿಂದ ತಮ್ಮ ಕರ್ತವ್ಯಗಳಲ್ಲಿ ನಿರತರಾಗಿದ್ದಾರೆ. ಅಥವಾ ವಿಷ್ಣುವಿನ ರೇತಸ್ಸಿನ ಸ್ವರೂಪವಾಗಿರುವ ಮಹತ್ತತ್ವ, ಅಹಂಕಾರತತ್ವ ಮೊದಲಾದವುಗಳು ಮತ್ತು ಅವುಗಳಿಗೆ ಅಭಿಮಾನಿಗಳಾದ ಬ್ರಹ್ಮಾದಿಗಳು ವಿಷ್ಣುವಿನ ಆಜ್ಞೆಯಿಂದ ವಿವಿಧವಾದ ಕರ್ತವ್ಯಗಳಲ್ಲಿ ತೊಡಗಿದ್ದಾರೆ.

ಪ್ರತಿಪದಾರ್ಥ -- ವಿಷ್ಣುವಿನ ಆಜ್ಞೆಯಿಂದಲೇ ಇವೆಲ್ಲವೂ ನಡೆಯುತ್ತವೆ ಎಂದು ಹೇಗೆ ನಿರ್ಣಯಿಸುತ್ತೀರಿ ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ. ಅರ್ಧಗರ್ಭಾಃ = ಬ್ರಹ್ಮಾಂಡದ ಅತಿಸಮೃದ್ಧಿಪ್ರಸಿದ್ಧಿಗೆ ಕಾರಣೀಭೂತರೂ, ಆವರಣಭೂತರೂ ಆದ, ಭುವನಸ್ಯ = ಲೋಕಕ್ಕೆ, ರೇತಃ = ('ರೇತಸಃ' ಎಂದು ಬಹುವಚನಾರ್ಥದಲ್ಲಿ ಲಿಂಗವ್ಯತ್ಯಾಸ ಮಾಡಿಕೊಳ್ಳಬೇಕು.) ಸುಖಪ್ರದರೂ, ಸಾರಭೂತರೂ ಆದ, ಅಥವಾ ಭುವನಸ್ಯ = ಭೂಮನೂ, ಮನನೀಯನೂ ಆದ ವಿಷ್ಣುವಿನ, ರೇತಃ = ವೀರ್ಯವೆನಿಸಿದ, ಸಪ್ತ = ಮಹತ್ತತತ್ವ, ಅಹಂಕಾರತತ್ವ ಮತ್ತು ಪಂಚಮಹಾಭೂತಗಳೆಂಬ ಏಳು ಆವರಣಗಳು ಮತ್ತು ಅವುಗಳಿಗೆ ಅಭಿಮಾನಿಗಳಾಗಿ ತನ್ನಿಯಾಮಕರಾದ ಬ್ರಹ್ಮ, ರುದ್ರಾದಿದೇವತೆಗಳು, ವಿಷ್ಣೋಃ = ವಿಷ್ಣುವಿನ, ಪ್ರದಿಶಾ = ಆಜ್ಞೆಯಿಂದ, ವಿಧರ್ಮಣಿ = ತಮ್ಮ ತಮ್ಮ ಬಹುವಿಧವಾದ ವಿಶ್ವಧಾರಣಾದಿ ಕರ್ತವ್ಯಗಳಲ್ಲಿ, ತಿಷ್ಠಂತಿ = ತೊಡಗಿದ್ದಾರೆ.

ಬ್ರಹ್ಮರುದ್ರಾದಿಗಳನ್ನು ಚಕ್ರದಂತೆ ತಿರುಗಿಸುವನು

ಬ್ರಹ್ಮಸೂತ್ರಭಾಷ್ಯಮ್ – 'चतुर्भिः साकं नवतिं च नामभिश्चक्रं न वृत्तं व्यतीँरवीविपत् ।' (ಋ. ೧-೧೫೫-೬.) इत्यादिश्रुतेः

ಅನುವಾದ - ವಿಷ್ಣು, ವಾಸುದೇವ ಮೊದಲಾದ ನಾಲ್ಕು ರೂಪಗಳಿಂದ, ಬ್ರಹ್ಮ, ವಾಯು, ರುದ್ರ ಮೊದಲಾದ ತೊಂಭತ್ತು ಮಂದಿ ದೇವತೆಗಳನ್ನು ಚಕ್ರದಂತೆ ಏಕಕಾಲದಲ್ಲಿ ತಿರುಗಿಸುತ್ತಾನೆ.

ಪ್ರತಿಪದಾರ್ಥ -- ಸಃ = ಬೃಹಚ್ಛರೀರವುಳ್ಳಂತಹ ವಿಷ್ಣುವು, ಚತುರ್ಭಿಃ = ವಾಸುದೇವ ಸಂಕರ್ಷಣ ಮೊದಲಾದ ನಾಲ್ಕು, ನಾಮಭಃ = ಕೀರ್ತಿಯುಳ್ಳಂತಹ ರೂಪಗಳಿಂದ, ವ್ಯತೀನ್ = ವಿಶೇಷವಾಗಿ ಅಧಿಕರಾದ, (೧)ನವತಿಂ = ಪ್ರಧಾನವಾಯುವಿನೊಂದಿಗೆ ಐವತ್ತು ಮರುತ್‌ಗಳು, ಅಷ್ಟವಸುಗಳು, ಏಕಾದಶರುದ್ರರು, ವಿಷ್ಣ್ವತಿರಿಕ್ತ ಏಕಾದಶ ಆದಿತ್ಯರು, ಚತುರ್ಮುಖಬ್ರಹ್ಮನೊಂದಿಗೆ ಹತ್ತು ಪ್ರಜಾಪತಿಗಳು ಹೀಗೆ ತೊಂಭತ್ತು ಮಂದಿ ದೇವತೆಗಳನ್ನು, ವೃತ್ತಂ = ವರ್ತುಲಾಕಾರದ, ಚಕ್ರಂ ನ = ಚಕ್ರದಂತೆ, ಸಾಕಂ = ಒಟ್ಟಿಗೆ ಅವೀವಿಪತ್ = ತಿರುಗಿಸಿದನು, ಇತ್ಯಾದಿ = ಇವೇ ಮೊದಲಾದ, ಶ್ರುತೇಃ = ಆಗಮ ರೂಪ ಪ್ರಮಾಣದಿಂದ.

ವಿಷ್ಣುವೊಬ್ಬನೇ ಶಾಸಕ

ಬ್ರಹ್ಮಸೂತ್ರಭಾಷ್ಯಮ್ – 'एकः शास्ता न द्वितीयोऽस्ति शास्ता ।'

ಅನುವಾದ - ವಿಷ್ಣು ಒಬ್ಬನೇ ಶಾಸಕನಾಗಿ ಆಜ್ಞೆಯನ್ನು ಮಾಡುತ್ತಾನೆ ಹೊರತು, ಅವನಂತೆ ಬೇರೊಬ್ಬನು ಶಾಸಕನಿಲ್ಲ. ಅಂದರೆ ಆಜ್ಞೆಯನ್ನು ಮಾಡಲಾರ. ಯಾವ ವಿಷ್ಣು ನಮ್ಮೆಲ್ಲರ ಹೃದಯದಲ್ಲಿ ನೆಲಸಿದ್ದಾನೆಯೋ ಅವನ ಬಗ್ಗೆ ಈಗ ನಿನಗೆ

(೧) "ಆದಿತ್ಯಾ ವಸವೋ ರುದ್ರಾ ಮರುತಶ್ಚಾಶ್ವಿನಾವಪಿ । ಬೃಹಸ್ಪತಿಶ್ಚ ಕಾಮಶ್ಚ ಮನುರ್ದಕ್ಷೋ ವಿನಾಯಕಃ । ಭೃಗುಶ್ಚೈವಾನಿರುದ್ಧಶ್ಚ ಧರ್ಮೋ ನಿರ್ಋತಿರೇವ ಚ । ಕುಬೇರಸಹಿತಾ ದೇವಾ ನವತಿಃ ಸಂಪ್ರಕೀರ್ತಿತಾಃ । ಅನಂತೋ ಗರುಡೋ ವಾಯುಶ್ಚತ್ವಾರೋ ಬ್ರಹ್ಮಣಾ ಸಹ " - ತತ್ವಪ್ರದೀಪೇ.॥

ಹೇಳುತ್ತೇನೆ. ಇದು ಸಭಾಪರ್ವದ ವಚನ. (ಈ ಶಬ್ದಕ್ಕೆ ಮುಂದಿನ ಮೂಲದಲ್ಲಿರುವ 'ಇತ್ಯಾದೇಃ' ಎಂಬಲ್ಲಿ ಅನ್ವಯ)

ಪ್ರತಿಪದಾರ್ಥ -- ಆಜ್ಞೆಯಿಂದ ಸಕಲವನ್ನು ಧರಿಸಿರುವಿಕೆಯು ಬೇರೆಯವರಲ್ಲೂ ಕೂಡಬಹುದಲ್ಲವೆ ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ, ಚ = ಮತ್ತು ; ಏಕಃ = ಒಬ್ಬನೇ, ಶಾಸ್ತಾ = ಜಗತ್ತಿನ ಶಾಸಕನು, ದ್ವಿತೀಯಃ = ಇವನನ್ನು ಬಿಟ್ಟು ಬೇರೊಬ್ಬನು , ಶಾಸ್ತಾ = ಶಾಸಕನು, ನಾಸ್ತಿ = ಇರುವುದಿಲ್ಲ, ಯಃ = ಯಾವಾತನು, ಹೃಚ್ಛಯಃ = ಸರ್ವಜೀವರ ಹೃದಯದಲ್ಲಿ ನೆಲೆಸಿದ್ದಾನೋ, ತಮ್ = ಅವನನ್ನು, ಅಹಂ = ನಾನು, ಇಹ = ಇಲ್ಲಿ, ಬ್ರವೀಮಿ = ಹೇಳುತ್ತೇನೆ.

ಇತಿಹಾಸ ಪುರಾಣಗಳೇ ಇದಕ್ಕೆ ಆಧಾರ

ಬ್ರಹ್ಮಸೂತ್ರಭಾಷ್ಯಮ್ —'ನ ಕೇವಲಂ ಮೇ ಭವತಶ್ಚ ರಾಜನ್ ಸ ವೈ ಬಲಂ ಬಲಿನಾಂ ಚಾಪರೇಷಾಮ್ ।' (ಭಾಗ-ಸ್ಕಂ .೭,ಅ.೮,ಶ್ಲೋ.೮) ಇತ್ಯಾದೇಶ್ಚ ।। ೧೧ ।।

ಅನುವಾದ - ಎಲೈ ! ಹಿರಣ್ಯಕನೇ, ನನಗೇ ಅಷ್ಟೇ ಅಲ್ಲದೇ, ನಿನಗೂ ಸಹ ಮತ್ತು ಬೇರೆ ಬಲಶಾಲಿಗಳಿಗೂ ಸಹ ಅವನೇ ಬಲಪ್ರದನು. ಇವೇ ಮೊದಲಾದ ಇತಿಹಾಸ ಪುರಾಣಗಳ ವಾಕ್ಯಗಳಿಂದ ವಿಷ್ಣುವೇ ಶಾಸಕನು ಎಂದು ತಿಳಿದುಬರುತ್ತದೆ.

ಪ್ರತಿಪದಾರ್ಥ -- ಹಿರಣ್ಯಕಶಿಪುವನ್ನು ಕುರಿತು ಪ್ರಹ್ಲಾದರು ಹೇಳುವ ಮಾತು. ಹೇ! ರಾಜನ್ = ಎಲೈ! ರಾಜನೇ, ಕೇವಲಂ ಮೇ ನ = ನನಗೆ ಮಾತ್ರವಲ್ಲದೇ, ಭವತಃ = ನಿನಗೂ ಸಹ, ಚ = ಮತ್ತು, ಅಪರೇಷಾಂ = ಬೇರೆ, ಬಲಿನಾಂ ಚ = ಬಲಿಷ್ಠರಿಗೂ ಸಹ, ಬಲಂ = ಬಲದಾಯಕನು, ಸ ವೈ = ಆ ಶ್ರೀಹರಿಯೇ ಆಗಿದ್ದಾನೆ. ಹೀಗೆ ಶ್ರುತಿಸ್ಮೃತಿಗಳ ಆಧಾರಗಳಿಂದ ಸರ್ವಾಧಾರಕನು, ಸರ್ವನಿಯಾಮಕನು ಮತ್ತು ಸರ್ವ ಬಲಪ್ರದನು ವಿಷ್ಣುವೇ ಆಗಿದ್ದಾನೆಂದು ತಿಳಿಯುತ್ತದೆ. ಅಂತಹ ವಿಷ್ಣುವೇ ಅಕ್ಷರನಾಗಿದ್ದಾನೆಂದು ತಿಳಿಯಬೇಕು.

ತತ್ವಪ್ರದೀಪ

'ಸಪ್ತಾರ್ಧಗರ್ಭಾ' ಎಂಬ ಶ್ರುತ್ಯರ್ಥ

तत्वप्रदीपः – सा च प्रशासनात् ।। सप्तमहदादिदेवता ब्रह्मादयः 'आर्द्धा' आ समन्ताद्धृद्धा गर्भा गरणेन भ्रियन्त इति ।

ಮಹತ್ತತ್ವವೇ ಮೊದಲಾದ ಏಳು ತತ್ವಗಳಿಗೆ ಅಭಿಮಾನಿಯಾದ ಬ್ರಹ್ಮಾದಿ ಏಳು ದೇವತೆಗಳು 'ಆರ್ದ್ಧಾ' ಆ = ಚೆನ್ನಾಗಿ, ಋದ್ಧಾಃ = ಸಮೃದ್ಧವಾದ ಗರ್ಭವುಳ್ಳವರು. ಅಥವಾ ಆ = ಚೆನ್ನಾಗಿ ಋದ್ಧಸ್ಯ = ಪ್ರವರ್ಧಮಾನರಾದ ವಿಷ್ಣುವಿನ ಗರ್ಭರಾದವರು. ನಿಗರಣೆ ಮಾಡಿ ಧಾರಣೆ ಮಾಡಿದ್ದರಿಂದ 'ಗರ್ಭ' ಎಂದು ಕರೆಸಿಕೊಳ್ಳುತ್ತಾರೆ.

ವಿವರಣೆ - 'ಸಪ್ತಾರ್ಧಗರ್ಭಾ ಭುವನಸ್ಯ ರೇತೋ ವಿಷ್ಣೋಸ್ತಿಷ್ಠಂತಿ ಪ್ರದಿಶಾ ವಿಧರ್ಮಣಿ' ಎಂಬ ಸೂಕ್ತವು ಋಗ್ವೇದದಲ್ಲಿದೆ. ಇದರ ಅಭಿಪ್ರಾಯ ಹೀಗಿದೆ - 'ಸಪ್ತಾರ್ಧಗರ್ಭಾ' ಎಂಬಲ್ಲಿರುವ ಸಪ್ತ ಎಂಬ ಪದದಿಂದ ಏಳುಮಂದಿ ದೇವತೆಗಳನ್ನು ವಿವಕ್ಷಿಸಬೇಕು.

೧. ಮಹತ್ತತ್ವಕ್ಕೆ ಅಭಿಮಾನಿಯಾದ ಚತುರ್ಮುಖ.

೨. ಅಹಂಕಾರತತ್ವಕ್ಕೆ ಅಭಿಮಾನಿಯಾದ ರುದ್ರ.

೩. ಪೃಥಿವ್ಯಭಿಮಾನಿಯಾದ ಪೃಥಿವೀ.

೪. ಅಬಭಿಮಾನಿಯಾದ ವರುಣ.

೫. ತೇಜೋಭಿಮಾನಿಯಾದ ಅಗ್ನಿ.

೬. ವಾಯು ಅಭಿಮಾನಿಯಾದ ಪ್ರವಾಹವಾಯು.

೭. ಆಕಾಶಾಭಿಮಾನಿಯಾದ ಗಣಪತಿ.

ಹೀಗೆ ಏಳುಮಂದಿ ದೇವತೆಗಳು ಭಗವಂತನ ಗರ್ಭದಲ್ಲಿರುತ್ತಾರೆ. 'ಆ ಸಮಂತಾತ್ ಋದ್ಧಾಃ ಗರ್ಭಾಃ = ಗರಣೇನ ಭ್ರಿಯಂತೇ ಇತಿ' ಎಂಬ ನಿಷ್ಪತ್ತಿಯನ್ನು ಪಂಡಿತಾಚಾರ್ಯರು ಇಲ್ಲಿ ತೋರಿಸಿರುವುದು ಬಹಳ ಸ್ವರಸವಾದದ್ದು.

'ಭುವನಸ್ಯ ರೇತಃ' ಇತ್ಯಾದಿ ಶ್ರುತ್ಯರ್ಥ

तत्वप्रदीपः – भूमा वननीयश्चेति भुवनः, भुवनस्य विष्णोः, रेतोरूपाश्च ते तस्यैव प्रदिशा प्रदेशेनाऽदेशेनाऽज्ञया, विविधधर्मणि तिष्ठन्ति ।

'ಭುವನಸ್ಯ' ಎಂದರೆ 'ವಿಷ್ಣುವಿನ' ಎಂದರ್ಥ. ಪೂರ್ಣಗುಣನೆಂದು ಉಪಾಸನೆ ಮಾಡಲು ಅರ್ಹನಾಗಿರುವುದರಿಂದ ಅವನಿಗೆ 'ಭುವನ' ಎಂದು ಹೆಸರು. 'ಭೂಮಾ ಇತಿ ವನನೀಯಃ ಭುವನಃ' ಎಂಬ ನಿಷ್ಪತ್ತಿಯನ್ನು ಇಲ್ಲಿ ತಿಳಿಯಬೇಕು. ಇಂಥ ಮಹಾವಿಷ್ಣುವಿನ ರೇತೋ ರೂಪದಿಂದ ಸೃಷ್ಟರಾದವರು ಆ ಬ್ರಹ್ಮಾದಿಗಳು. 'ಭುವನ' ಎನಿಸಿದ ಮಹಾವಿಷ್ಣುವಿನ ಆದೇಶದಿಂದ ಬಗೆ ಬಗೆಯ ತಮ್ಮ ವ್ಯಾಪಾರಗಳಲ್ಲಿ ತೊಡಗಿದ್ದಾರೆ.

ವಿವರಣೆ - ಭುವನಸ್ಯ = ಭೂಮಾ ಎಂಬ ಗುಣದಿಂದ ಉಪಾಸನೆ ಮಾಡಲು ಅರ್ಹನಾದ ಮಹಾವಿಷ್ಣುವಿನ, ರೇತಃ = ರೇತಸ್ಸಿನಿಂದ ಸೃಷ್ಟರಾದವರಿಂದಲೇ ಆ ವಿಷ್ಣುವಿನ ಆಜ್ಞೆಯಿಂದಲೇ ಎಲ್ಲಾ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆಂಬುದು ಈ ಶ್ರುತಿಯ ಅಭಿಪ್ರಾಯ.

'ಏಕಃ ಶಾಸ್ತಾ' ಇತ್ಯಾದಿ ಶ್ರುತ್ಯರ್ಥ

तत्वप्रदीपः –

एकः शास्ता न द्वितीयोऽस्ति शास्ता
गर्भे शयानं पुरुषं शास्ति शास्ता'' इति भारते ।।

ಏಕಃ ಶಾಸ್ತಾ ನ ದ್ವಿತಿಯೋಽಸ್ತಿ ಶಾಸ್ತಾ ।
ಗರ್ಭೇ ಶಯಾನಂ ಪುರುಷಂ ಶಾಸ್ತಿ ಶಾಸ್ತಾ'' ಇತಿ ಭಾರತೇ

ಅವನೊಬ್ಬನೇ ಶಾಸನೆ ಮಾಡುವವನು. ಅವನನ್ನು ಹೊರತಾಗಿ ಮತ್ತೊಬ್ಬನು ಶಾಸಕನು ಇರುವುದಿಲ್ಲ. ಗರ್ಭದಲ್ಲಿ ಮಲಗಿರುವ ಪುರುಷನನ್ನೂ ಕೂಡ ಶಾಸನೆ ಮಾಡುತ್ತಾನೆ. ಹೀಗೆ ಮಹಾಭಾರತದಲ್ಲಿ ಹೇಳಲ್ಪಟ್ಟಿದೆ.

ಪಾಠಾಂತರದ ಬಗ್ಗೆ
ಪ್ರಾಮಾದಿಕ ಪಾಠ

'ಏಕಃ ಶಾಸ್ತಾ ನ ದ್ವಿತಿಯೋಽಸ್ತಿ ಶಾಸ್ತಾ' ಎಂಬುದಷ್ಟೇ ಆಚಾರ್ಯರು ಉಲ್ಲೇಖಿಸಿದ ಮಹಾಭಾರತಶ್ಲೋಕ. ಉತ್ತರಾರ್ಧವನ್ನು ಪಂಡಿತಾಚಾರ್ಯರು 'ಗರ್ಭೇ ಶಯಾನಂ ಪುರುಷಂ ಶಾಸ್ತಿ ಶಾಸ್ತಾ' ಇತಿ ಭಾರತೇ ಎಂದು ಉಲ್ಲೇಖಿಸಿದ್ದಾರೆ. ಭಾಷ್ಯದಲ್ಲಿ ಇದನ್ನು ಉಲ್ಲೇಖಿಸಿಲ್ಲ. ಮುದ್ರಿತ ಪುಸ್ತಕಗಳಲ್ಲಿ 'ಏಕಃ ಶಾಸ್ತಾ ನ ದ್ವಿತಿಯೋಽಸ್ತಿ ಶಾಸ್ತಾ । ಯೋ ಹೃಚ್ಛಯಃ ತಮಹಮಿಹ ಬ್ರವೀಮಿ (ಮಹಾಭಾರತ)' ಎಂಬ ಪಾಠ ಕಾಣಿಸುತ್ತಿದೆ. 'ಯೋಹೃಚ್ಛಯ ತಮಹಮಿಹ ಬ್ರವೀಮಿ' ಎಂಬುದು ಮಹಾಭಾರತದಲ್ಲಿರುವ ಉತ್ತರಾರ್ಧಶ್ಲೋಕ ಸರ್ವಥಾ ಅಲ್ಲ. ಪ್ರಮಾದವಶದಿಂದ ಹೀಗೆ ಮುದ್ರಿತವಾಗಿದೆ ಎಂದು ತಿಳಿಯಬೇಕು. ಮಹಾಭಾರತದ ಉತ್ತರಾರ್ಧ 'ಗರ್ಭೇ ಶಯಾನಂ ಪುರುಷಂ ಶಾಸ್ತಿ ಶಾಸ್ತಾ' ಎಂಬುದಾಗಿ ಪಂಡಿತಾಚಾರ್ಯರು ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ.

ತತ್ತ್ವಪ್ರಕಾಶಿಕಾ

ವಿಷ್ಣುವೇ ಅಕ್ಷರನೆನ್ನಲು ಮತ್ತೊಂದು ಯುಕ್ತಿ

तत्वप्रकाशिका – सा च प्रशासनात् ।। युक्त्यन्तरेण विष्णोरेवाक्षरत्वं प्रतिपादयत् सूत्रमुपन्यस्य व्याचष्टे – सा चेति ।।

ಮತ್ತೊಂದು ಯುಕ್ತಿಯಿಂದ ವಿಷ್ಣುವೇ ಅಕ್ಷರಶಬ್ದವಾಚ್ಯನೆಂದು ಪ್ರತಿಪಾದಿಸುವ ಸೂತ್ರವನ್ನು ಪಠಿಸಿ ವ್ಯಾಖ್ಯಾನಿಸುತ್ತಿದ್ದಾರೆ 'ಸಾ ಚ' ಇತ್ಯಾದಿಯಾಗಿ.

ಪ್ರಶಾಸನವೂ ವಿಷ್ಣುವಿನದ್ದೇ ಧರ್ಮ

तत्वप्रकाशिका – यदा सर्वाधारत्वमेवाक्षरस्य विष्णुत्वं निश्चाययति, तदा सुतरामाज्ञामात्रेण सर्वाधारत्वं विष्णुत्वनिश्चायकमित्याशयः । कुतोऽनेन विष्णुत्वनिश्चय इत्यत आह – तच्चेति ।।

ಸರ್ವಾಧಾರತ್ವದಿಂದಲೇ ಅಕ್ಷರಶಬ್ದದಿಂದ ವಿಷ್ಣುವೇ ವಾಚ್ಯನಾಗಿದ್ದಾನೆಂದು ಸಾಧಿಸಲು ಬರುವಾಗ ಕೇವಲ ವಿಷ್ಣುವಿನ ಆಜ್ಞೆಯಿಂದಲೇ ಎಲ್ಲರಿಗೂ ಸರ್ವಾಧಾರತ್ವವು ಸಿದ್ಧವಾಗಿದೆ ಎಂಬ ಯುಕ್ತಿಯು ಅಕ್ಷರನು ವಿಷ್ಣುವೇ ಆಗಿದ್ದಾನೆಂದು ಹೇಳಲು ಕಾರಣವಾಗಿದೆ ಎಂದು ಪುನಃ ಹೇಳಬೇಕೇನು ? ಹೀಗೆ ಕೈಮುತ್ಯನ್ಯಾಯವು ಭಾಷ್ಯದ ಅಭಿಪ್ರಾಯವಾಗಿದೆ. ಸರ್ವಾಧಾರಕ್ಕೆ ಕಾರಣವಾದ ಪ್ರಶಾಸನವು ವಿಷ್ಣುವಿನ ಧರ್ಮವೇ ಆಗಿದೆ ಎಂದು ಹೇಗೆ ನಿಶ್ಚಯಿಸುತ್ತೀರಿ ? ಎಂಬ ಪ್ರಶ್ನೆಗೆ 'ತಚ್ಚ' ಇತ್ಯಾದಿ ಭಾಷ್ಯದಿಂದ ಉತ್ತರಿಸುತ್ತಿದ್ದಾರೆ.

ಈ ವಿಷಯದಲ್ಲಿ ಪ್ರಮಾಣ

तत्वप्रकाशिका – सर्वधृतिकारणं प्रशासनं विष्णोरेव तत्कृत इति तत्राह – सप्तेति ।।

ಸರ್ವಾಧಾರಕ್ಕೆ ಕಾರಣವಾದ ಆಜ್ಞೆಯು ವಿಷ್ಣುವಿನ ಧರ್ಮವೇ ಆಗಿದೆ ಎಂಬುದು ಯಾವ ಪ್ರಮಾಣದಿಂದ ಸಿದ್ಧವಾಗುತ್ತದೆ ? ಎಂಬ ಪ್ರಶ್ನೆಗೆ 'ಸಪ್ತ' ಇತ್ಯಾದಿ ಪ್ರಮಾಣದಿಂದ ಎಂದು ಉತ್ತರಿಸುತ್ತಿದ್ದಾರೆ.

ಸಪ್ತಾರ್ಧಗರ್ಭ ಎಂಬ ಶ್ರುತ್ಯರ್ಥ

तत्वप्रकाशिका – महदहङ्कारपञ्चमहाभूताख्यसप्तदेवता ब्रह्माण्डाख्याति-समृद्धगर्भास्तदावरणभूता भुवनस्य रतिप्रदाः सारभूता वा भुवनरतिप्रदस्य विष्णोराज्ञया विविधविश्वधारणे तिष्ठन्तीत्यर्थः ।

ಮಹತ್ತತ್ವ, ಅಹಂಕಾರತತ್ವ ಹಾಗೂ ಪಂಚಮಹಾಭೂತಗಳು ಸೇರಿ ಸಪ್ತಪದಾರ್ಥಗಳೆನಿಸುತ್ತವೆ. ಇಂತಹ ಸಪ್ತಪದಾರ್ಥಗಳ ನಿಯಾಮಕರಾದ ಬ್ರಹ್ಮಾದಿ ಸಪ್ತದೇವತೆಗಳು. ಇವರು ಅತ್ಯಂತ ಸಮೃದ್ಧವಾದ ಗರ್ಭದಿಂದ ಕೂಡಿರುವ ಬ್ರಹ್ಮಾಂಡಕ್ಕೆ ಆವರಣರಾಗಿದ್ದಾರೆ. ಇಂತಹ ಲೋಕಕ್ಕೆ ರತಿಪ್ರದರಾದ ಅಥವಾ ಸಾರಭೂತರಾದ ದೇವತೆಗಳು ಲೋಕಕ್ಕೆ ರತಿಪ್ರದನಾದ ಮತ್ತು ಸಾರಭೂತನಾದ ವಿಷ್ಣುವಿನ ಆಜ್ಞೆಯಿಂದ ವಿವಿಧವಾದ ತಮ್ಮ ತಮ್ಮ ಕಾರ್ಯಗಳಲ್ಲಿ ತೊಡಗಿದ್ದಾರೆ ಎಂದು ಶ್ರುತಿಗೆ ಅರ್ಥ.

'ಏಕಃ ಶಾಸ್ತಾ' ಎಂಬ ಶ್ರುತಿಯ ಉಲ್ಲೇಖಕ್ಕೆ ಕಾರಣ

तत्वप्रकाशिका – सर्वधृतिहेतुप्रशासनं विष्णोरिवान्यस्यापि किं न स्यात्? इत्यत आह – एक इति ।। बलं बलप्रदो, धृतिहेतुः ।। ११ ।।

ಈ ಸರ್ವಧಾರಣಕ್ಕೆ ಕಾರಣವಾದ ಪ್ರಶಾಸನವು ವಿಷ್ಣುವಿನಂತೆ ಬೇರೆಯವರಲ್ಲಿಯೂ ಸಹ ಬರಬಹುದಲ್ಲವೇ? ಎಂಬ ಪ್ರಶ್ನೆಗೆ 'ಏಕಃ ಶಾಸ್ತಾ' ಎಂಬ ಪ್ರಮಾಣದಿಂದ ಉತ್ತರಿಸಿದ್ದಾರೆ. ಬಲ ಶಬ್ದಕ್ಕೆ ಬಲಪ್ರದನೆಂದರ್ಥ. ಧಾರಣಕ್ಕೆ ಕಾರಣವಾದ ಸಾಮರ್ಥ್ಯವುಳ್ಳವನೆಂದು ಇದರರ್ಥ.

ಭಾವದೀಪ

ಸೂತ್ರದ ಚ ಶಬ್ದ ವ್ಯಾಖ್ಯಾನ

भावदीपः – सा च प्रशासनात् ।। सूत्रे चशब्दादाह – युक्त्यन्तरेणेत्यादि।। धृतेरक्षराधीनत्वोक्तावप्यक्षरस्य कथं विष्णुत्वसिद्धिरित्यतोऽभिप्रायमाह – यदेति।।

ಸೂತ್ರದಲ್ಲಿ ಇರುವ 'ಚ' ಶಬ್ದವು ವಿಷ್ಣುವೇ ಅಕ್ಷರಶಬ್ದವಾಚ್ಯನೆನಿಸಲು ಯುಕ್ತ್ಯಂತರವನ್ನು ಹೇಳುತ್ತಿದೆ. ಆದ್ದರಿಂದ ಟೀಕೆಯಲ್ಲಿ 'ಯುಕ್ತ್ಯಂತರೇಣ' ಎಂಬ ಪದವನ್ನು ಪ್ರಯೋಗಿಸಿದ್ದಾರೆ. ಧಾರಣೆಯು ಅಕ್ಷರತತ್ವದ ಆಜ್ಞೆಯಿಂದಷ್ಟೇ ನಡೆಯುತ್ತಿದೆ ಎಂಬುದಾಗಿ ಶ್ರುತಿಯಿಂದ ತಿಳಿಯಿತು. ಇಷ್ಟುಮಾತ್ರದಿಂದ ವಿಷ್ಣುವೇ ಅಂತಹ ಅಕ್ಷರನಾಗಿದ್ದಾನೆಂದು ಹೇಗೆ ತಿಳಿಯುತ್ತದೆ ? ಎಂಬ ಪ್ರಶ್ನೆಗೆ 'ಯದಾ' ಎಂಬ ಇತ್ಯಾದಿ ವಾಕ್ಯದಿಂದ ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸುತ್ತಿದ್ದಾರೆ.

'ಸರ್ವಧೃತಿಕಾರಣಂ' ಎಂಬುದು 'ತತ್' ಶಬ್ದ ವ್ಯಾಖ್ಯಾನ

भावदीपः – आज्ञामात्रेण सर्वाधारत्वाच्चेत्यर्थ उक्तो भवति । तच्छब्दार्थं व्यनक्ति – **सर्वधृतीति ।।** अर्धपदार्थः – **अतिसमृद्धेति ।।** तदावरणेति फलितोक्तिः ।

ಹೀಗೆ ಹೇಳಿದ್ದರಿಂದ ಕೇವಲ ಆಜ್ಞೆಯಿಂದಷ್ಟೇ ಸಕಲವನ್ನೂ ಧರಿಸಿರುವುದರಿಂದ ಎಂದು ಹೇಳಿದಂತಾಯಿತು. 'ತತ್' ಶಬ್ದದ ಅರ್ಥವನ್ನು 'ಸರ್ವಧೃತಿಕಾರಣಂ' ಎಂದು ಹೇಳಿದ್ದಾರೆ. ಅರ್ಧ ಪದದ ಅರ್ಥವನ್ನು 'ಅತಿಸಮೃದ್ಧ' ಎಂದು ಹೇಳಿದ್ದಾರೆ. 'ತದಾವರಣ' ಎನ್ನುವುದು ಫಲತಃ ಸಿದ್ಧವಾದ ಅರ್ಥ.

ಶ್ರುತಿಯಲ್ಲಿರುವ 'ರೇತಃ' ಎಂಬುದರ ವ್ಯಾಖ್ಯಾನ

भावदीपः – रेतो रेतस इति व्यत्ययेन बहुवचनस्यैकवचनं मत्वाऽर्थद्वयमाह – रतीति ।। षाष्ठ्यर्थं मत्वाऽर्थमाह – भुवनेति ।।

ಶ್ರುತಿಯಲ್ಲಿರುವ 'ರೇತಃ' ಎಂಬುದನ್ನು ಬಹುವಚನಾಂತವಾಗಿ 'ರೇತಸಃ' ಎಂದು ವ್ಯತ್ಯಾಸ ಮಾಡಿಕೊಂಡು ಎರಡುಬಗೆಯ ಅರ್ಥವನ್ನು 'ರತಿ' ಇತ್ಯಾದಿಯಾಗಿ ಹೇಳುತ್ತಿದ್ದಾರೆ. ಷಷ್ಠೀವಿಭಕ್ತಿ ಅರ್ಥವನ್ನು ವಿವಕ್ಷಿಸಿ 'ಭುವನ' ಇತ್ಯಾದಿಯಾಗಿ ಹೇಳಿದ್ದಾರೆ.

'ಸ ವೈ ಬಲಮ್' ಎಂಬುದಕ್ಕೆ ಪ್ರಕೃತ ಉಪಯೋಗ

भावदीपः – चतुर्भिरिति श्रुतिर्जन्मादिनय एव व्याख्याता । 'स वै बलम्' इत्यस्य प्रकृतोपयोगायाऽर्थमाह – बलमिति ।।

'ಚತುರ್ಭಿಃ' ಎಂಬ ಶ್ರುತಿಯನ್ನು ಜನ್ಮಾದಿಕರಣದಲ್ಲಿ ವ್ಯಾಖ್ಯಾನಿಸಿದ್ದಾಗಿದೆ. 'ಸ ವೈ ಬಲಮ್' ಎಂಬುದಕ್ಕೆ ಪ್ರಕೃತ ಉಪಯೋಗವನ್ನು ತಿಳಿಸುವುದಕ್ಕಾಗಿ ಅರ್ಥವನ್ನು ಹೇಳುತ್ತಿದ್ದಾರೆ 'ಬಲಮ್' ಇತ್ಯಾದಿಯಾಗಿ.

ಬ್ರಹ್ಮಸೂತ್ರ

'ಅನ್ಯಭಾವವ್ಯಾವೃತ್ತೇಶ್ಚ' ಎಂಬ ಸೂತ್ರ ವ್ಯಾಖ್ಯಾನ

ಬ್ರಹ್ಮಸೂತ್ರಮ್ – ।। ಅನ್ಯಭಾವವ್ಯಾವೃತ್ತೇಶ್ಚ ।। ೧೨ ।।

ಸೂತ್ರಾರ್ಥ - ಲೌಕಿಕವಾದ ವಸ್ತುಗಳಲ್ಲಿ ಪ್ರಾಕೃತವಾದ ಗಾತ್ರ, ಪರಿಮಾಣ ಮೊದಲಾದವುಗಳು ಇರುತ್ತವೆ. ಅಂತಹ ಪ್ರಾಕೃತವಾದ ಯಾವುದೇ ಗುಣಗಳು ವಿಷ್ಣುವಿನಲ್ಲಿ ಇಲ್ಲ. ಅವನ ಧರ್ಮಗಳೆಲ್ಲಾ ಅಲೌಕಿಕವಾಗಿವೆ. ಹೀಗೆ ಅಲೌಕಿಕಧರ್ಮವತ್ವವೆಂಬ ವಿಷ್ಣುವಿನ ಅಸಾಧಾರಣಗುಣವನ್ನು ಹೇಳಿರುವುದರಿಂದ ಅಕ್ಷರನು ವಿಷ್ಣುವೇ ಆಗುತ್ತಾನೆ.

ಅರ್ಥ -- ಅನ್ಯಭಾವವ್ಯಾವೃತ್ತೇಶ್ಚ = ವಿಷ್ಣುವಿಗಿಂತ ಅನ್ಯವಸ್ತುಗಳ ಸ್ವಭಾವವೆನಿಸಿದ ಸ್ಥೂಲತ್ವಾದಿಗಳು 'ಅಸ್ಥೂಲಮನಣು' ಇತ್ಯಾದಿ ಶ್ರುತಿಗಳಲ್ಲಿ ಅಕ್ಷರನಲ್ಲಿ ಇಲ್ಲವೆಂದು ಹೇಳಲಾಗಿದೆ. ಆದ್ದರಿಂದಲೂ ಬ್ರಹ್ಮನೇ ಅಕ್ಷರನು.

॥ ಶ್ರೀವೇದವ್ಯಾಸದೇವರಿಂದ ರಚಿಸಲ್ಪಟ್ಟ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ
ಅಕ್ಷರಾಧಿಕರಣವು ಸಮಾಪ್ತವಾಯಿತು ॥

ಬ್ರಹ್ಮಸೂತ್ರಭಾಷ್ಯ

ಬೇರೆ ವಸ್ತುಗಳ ಸ್ವಭಾವ ಶ್ರೀಹರಿಗಿಲ್ಲ

ಬ್ರಹ್ಮಸೂತ್ರಭಾಷ್ಯಮ್ – ।। ಅನ್ಯಭಾವವ್ಯಾವೃತ್ತೇಶ್ಚ ।। ಅಸ್ಥೂಲಮನಣ್ವ್' (ಬೃ. ೪-೮-೮.) ಇತ್ಯಾದಿನಾ ಸ್ಥೂಲಾಣ್ವಾದೀನಾಮನ್ಯವಸ್ತುಸ್ವಭಾವಾನಾಂ ವ್ಯಾವೃತ್ತೇಶ್ಚ

ಅನುವಾದ - 'ಅಸ್ಥೂಲಂ ಅನಣು' ಇತ್ಯಾದಿ ಶ್ರುತಿಗಳಲ್ಲಿ ಪ್ರಾಕೃತ ವಸ್ತುಗಳಲ್ಲಿರುವ ಸ್ಥೂಲತ್ವ, ಅಣುತ್ವ ಮೊದಲಾದ ಗುಣಗಳು ಅಕ್ಷರನಲ್ಲಿ ಇಲ್ಲವೆಂದು ಹೇಳಲಾಗಿದೆ. ಆದ್ದರಿಂದಲೂ ಅಕ್ಷರನು ವಿಷ್ಣುವೇ ಆಗಿದ್ದಾನೆ.

ಪ್ರತಿಪದಾರ್ಥ -- ಮತ್ತೊಂದು ಹೇತುವಿನಿಂದ ವಿಷ್ಣುವೇ ಅಕ್ಷರ-ನಾಗಿದ್ದಾನೆಂದು ಪ್ರತಿಪಾದಿಸುವುದಕ್ಕಾಗಿ ಸೂತ್ರವನ್ನು ಪಠಿಸಿ ವ್ಯಾಖ್ಯಾನಿಸುತ್ತಿದ್ದಾರೆ -

ಅನ್ಯವಸ್ತುಸ್ವಭಾವಾನಾಂ = ಬೇರೆ ವಸ್ತುಗಳಲ್ಲಿರುವ ಸ್ಥೂಲತ್ವ, ಪರಿಮಾಣ ಮೊದಲಾದ ಧರ್ಮಗಳನ್ನು, ಅಸ್ಥೂಲಾಣ್ವಾದೀನಾಂ = 'ಅಸ್ಥೂಲಮನಣು' ಇತ್ಯಾದಿಯಾಗಿ ಪ್ರತಿಪಾದಿಸುವ ಶ್ರುತಿಗಳಿಂದ, 'ವ್ಯಾವೃತ್ತೇಶ್ಚ' = ವಿಷ್ಣುವಿನಲ್ಲಿ ನಿಷೇಧ ಮಾಡಿರುವುದರಿಂದಲೂ ವಿಷ್ಣುವೇ ಅಕ್ಷರನು.

ವಿಷ್ಣುವಿನ ಅಸಾಧಾರಣ ಧರ್ಮಗಳು

ब्रह्मसूत्रभाष्यम् — 'अस्थूलोऽनणुरमध्यमो मध्यमोऽव्यापको व्यापको योऽसौ हरिरादिरनादिरविश्वो विश्वः सगुणो निर्गुणः' इत्यादेर्विष्णोरेव ते धर्माः।

ಅನುವಾದ - ಶ್ರೀಹರಿಯು ಸ್ಥೂಲನಲ್ಲ, ಅಣುವಲ್ಲ, ಮಧ್ಯಮಪರಿಮಾಣನಲ್ಲ, ಹೃದಯದ ಮಧ್ಯದಲ್ಲಿ ನೆಲಸಿರುವವನು, ಅವನಂತೆ ವ್ಯಾಪಿಸಿರುವ ಮತ್ತೊಬ್ಬರಿಲ್ಲ. ಆದ್ದರಿಂದ ಅವನೇ ಎಲ್ಲೆಡೆ ವ್ಯಾಪಿಸಿದವನು. ಸಕಲ ದೇಶಕಾಲಗಳಿಂದ ವ್ಯಾಪ್ತನು. ಅವನಿಗಿಂತ ಪೂರ್ಣರಾದವರು ಮತ್ತೊಬ್ಬರಿಲ್ಲ. ಆದರೆ ಜಗತ್ತಿನಲ್ಲಿ ಅವನೇ ಪ್ರವೇಶಿಸಿರುವವನು, ಅಪ್ರಾಕೃತವಾದ ಜ್ಞಾನಾನಂದಾದಿ ಗುಣಗಳಿರುವುದರಿಂದ ಸಗುಣನೆಂದೂ, ಪ್ರಾಕೃತಗುಣಗಳು ಇಲ್ಲದ ಕಾರಣ ನಿರ್ಗುಣನೆಂದೂ ಕರೆಸಿಕೊಂಡಿದ್ದಾನೆ. ಇವೇ ಮೊದಲಾದ ಪ್ರಮಾಣಗಳಲ್ಲಿ ಲೌಕಿಕ ಸ್ವಭಾವವಿಲ್ಲದಿರುವುದೆಂಬ ಧರ್ಮಗಳನ್ನು ಹೇಳಲಾಗಿವೆ. ಇವೆಲ್ಲವೂ ವಿಷ್ಣುವಿನ ಅಸಾಧಾರಣ ಧರ್ಮಗಳು.

ಪ್ರತಿಪದಾರ್ಥ -- ಲೌಕಿಕವಾದ ಸ್ಥೂಲತ್ವಾದಿಧರ್ಮಗಳು ಇಲ್ಲದ ಕಾರಣ ವಿಷ್ಣುವೇ ಪ್ರತಿಪಾದ್ಯನೆಂದು ಹೇಗೆ ಹೇಳುತ್ತೀರಿ ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ. ಅಸ್ಥೂಲಃ = ಲೌಕಿಕಮಹತ್ವರಹಿತನು, ಅನಣುಃ = ಲೌಕಿಕಅಣುತ್ವರಹಿತನು, ಅಮಧ್ಯಮಃ = ಲೌಕಿಕ ಮಧ್ಯಮ-ಪರಿಮಾಣವಿಲ್ಲದವನು, ಮಧ್ಯಮಃ = ಹೃದಯ ಮಧ್ಯದಲ್ಲಿದ್ದು ಉಪಾಸನೆಗೆ ವಿಷಯನಾದವನೂ, ಅವ್ಯಾಪಕಃ = ಇವನಂತೆ ವ್ಯಾಪ್ತನಾದ

ಮತ್ತೊಬ್ಬನಿಲ್ಲದವನು, ವ್ಯಾಪಕಃ = ಆದ್ದರಿಂದ ಎಲ್ಲೆಡೆ ಯಾವಾಗಲೂ ವ್ಯಾಪಿಸಿರುವವನು, ಯೋಽಸೌ ಹರಿಃ = ಯಾರೋ ಅಂತಹ ಶ್ರೀಹರಿಯು, ಆದಿಃ = ಜಗತ್ತಿಗೆ ಕಾರಣನು, ಅನಾದಿಃ = ತನಗೆ ಕಾರಣನಿಲ್ಲದವನು, ಅಥವಾ ಉತ್ಪತ್ತಿರಹಿತನು, ಅವಿಶ್ವಃ = ವಿಶ್ವಕ್ಕಿಂತ ಭಿನ್ನನಾದವನು, ವಿಶ್ವಃ = ಎಲ್ಲೆಡೆ ವ್ಯಾಪಿಸಿದ ರೂಪವುಳ್ಳವನು, ಸಗುಣಃ = ಜ್ಞಾನಾನಂದಾದಿಗುಣಗಳಿರುವ ಪ್ರಯುಕ್ತ ಸಗುಣನು, ನಿರ್ಗುಣಃ = ಪ್ರಾಕೃತ ಸತ್ವಾದಿಗುಣವಿಲ್ಲದವನು , ಇತ್ಯಾದೇಃ = ಇವೇ ಮೊದಲಾದ ವಾಕ್ಯಗಳಿಂದ, ತೇ ಧರ್ಮಾಃ = ಆ ಎಲ್ಲಾ ಧರ್ಮಗಳು, ವಿಷ್ಣೋರೇವ = ವಿಷ್ಣುವಿನಲ್ಲಿ ಮಾತ್ರ ಯುಕ್ತವಾಗುತ್ತವೆ ಎಂದು ತಿಳಿಯುತ್ತದೆ.

ವಿರುದ್ಧಧರ್ಮಗಳುಳ್ಳವನು ವಿಷ್ಣು ಮಾತ್ರ

ಭಾಷ್ಯಮ್ – 'अस्थूलाऽनणुरूपोऽसौ सविश्वोऽविश्व एव च ।
विरुद्धधर्मरूपोऽसावैश्वर्यात् पुरुषोत्तमः ।।' इति च ब्राह्मे ।।

।। इति श्रीमदानन्दतीर्थभगवत्पादाचार्यविरचिते
ब्रह्मसूत्रभाष्ये अक्षराधिकरणम् ।। ३ ।।

ಅನುವಾದ - ಪರಮಾತ್ಮನು ಸ್ಥೂಲನೂ ಅಲ್ಲ ಅಣುವೂ ಅಲ್ಲ, ಲೋಕಬಹಿರ್ಭೂತನೂ ಆಗಿದ್ದಾನೆ, ಲೋಕಾಂತರ್ಗತನೂ ಆಗಿದ್ದಾನೆ, ಹೀಗೆ ಅದ್ಭುತವಾದ ಸಾಮರ್ಥ್ಯದಿಂದ ವಿರುದ್ಧವಾದ ಧರ್ಮಗಳುಳ್ಳವನಾಗಿದ್ದಾನೆಂದು ಬ್ರಾಹ್ಮಪುರಾಣದಲ್ಲಿ ಪ್ರತಿಪಾದಿತವಾಗಿದೆ.

ಪ್ರತಿಪದಾರ್ಥ -- ಲೌಕಿಕಪರಿಮಾಣಾದಿರಾಹಿತ್ಯವು ಹೇಗೆ ವಿಷ್ಣುತ್ವ-ಸಾಧಕವಾಗುತ್ತದೆ ? ಲೋಕದಲ್ಲಿ ಸಕಲ ಪದಾರ್ಥಗಳೂ ಪ್ರಾಕೃತಪರಿಮಾಣಗಳಿಂದ ಯುಕ್ತವಾಗಿವೆಯಲ್ಲವೇ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ .

ಅಸೌ = ಈ ವಿಷ್ಣುವು, ಅಸ್ಥೂಲೋಽನಣುರೂಪಃ = ಸ್ಥೂಲ-ನಾಗದಿರುವಿಕೆಯುಳ್ಳವನು, ಮತ್ತು ಅಣುಭಿನ್ನಸ್ವರೂಪನು, ಏವ =

ಅವನೇ, ಅವಿಶ್ವಃ =ವಿಶ್ವಕ್ಕಿಂತ ಅತ್ಯಂತ ವಿಲಕ್ಷಣನೂ, ವಿಶ್ವಃ = ವಿಶ್ವದಲ್ಲಿ ಅಂತರ್ಯಾಮಿಸ್ವರೂಪನೂ ಆಗಿದ್ದಾನೆ, ಅಸೌ = ಇಂತಹ; (ವಿರುದ್ಧಧರ್ಮರೂಪನಾದ). ಪುರುಷೋತ್ತಮಃ = ಕ್ಷರಾಕ್ಷರಪುರುಷ ಶ್ರೇಷ್ಠನಾದ ವಿಷ್ಣು, ಐಶ್ವರ್ಯಾತ್ = ಅಚಿಂತ್ಯ ಐಶ್ವರ್ಯ ಸಾಮರ್ಥ್ಯವಿರುವ ಪ್ರಯುಕ್ತ ವಿಶ್ವವಿಲಕ್ಷಣನಾಗಿದ್ದಾನೆ. ಈ ಕಾರಣದಿಂದಲೂ ಅಕ್ಷರಶಬ್ದವಾಚ್ಯನು ವಿಷ್ಣುವೇ ಆಗಿದ್ದಾನೆಂದು ನಿರ್ಣಯವಾಗುತ್ತದೆ.

॥ ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ವಿರಚಿತವಾದ ಬ್ರಹ್ಮಸೂತ್ರಭಾಷ್ಯದಲ ಕನ್ನಡಾನುವಾದದಲ್ಲಿ ಅಕ್ಷರಾಧಿಕರಣವು ಸಮಾಪ್ತವಾಯಿತು ॥

ಸತ್ತರ್ಕದೀಪಾವಳಿ

'ಅಸ್ಥೂಲಮನಣು' ಎಂಬ ಶ್ರುತಿಯ ಆಧಾರದಿಂದ ಅಕ್ಷರಶಬ್ದ ವಾಚ್ಯತ್ವದ ಸಮರ್ಥನೆ

सत्तर्कदीपावलिः – ।। अन्यभावव्यावृत्तेश्च ।। १-३-१२ ।।

'अस्थूलमनण्वह्रस्वमदीर्घमलोहितमस्नेहमच्छायमतमोऽवाय्वनाकाशम्' इत्यादिना प्रकृतेर्विलक्षणत्वेनोच्यमानत्वात् अत्राक्षरं विष्णुर्न प्रकृतिः । 'अस्थूलोऽनणुरूपः' इत्यादिवचनान्तरेण विष्णोरेवास्थूलत्वादिलक्षणत्वेनोक्तत्वादित्याह । अन्यभावेत्यादिना । न विद्यते अन्यो व्यापको यस्यासावव्यापक इत्यर्थः ।।१२।।

।। इति श्रीपद्मनाभतीर्थविरचितसत्तर्कदीपावळ्याम्ः
अक्षराधिकरणम् ।।

'ಅಸ್ಥೂಲಮನಣ್ವಹ್ರಸ್ವಮದೀರ್ಘಮಲೋಹಿತಮಸ್ನೇಹಮಚ್ಛಾಯಮತಮೋऽವಾಯ್ವನಾಕಾಶಮ್' ಇತ್ಯಾದಿವಾಕ್ಯಗಳಿಂದ ಪ್ರಕೃತಿಗಿಂತ ವಿಲಕ್ಷಣವಾದ ಧರ್ಮಗಳು ಅಕ್ಷರತತ್ವದಲ್ಲಿ

ಶ್ರುತವಾಗಿವೆ. ಈ ಕಾರಣದಿಂದಲೂ ಲಕ್ಷ್ಮೀದೇವಿಯು ಅಕ್ಷರಳೆನಿಸುವುದಿಲ್ಲ ಹೊರತು ವಿಷ್ಣುವೇ ಅಕ್ಷರನಾಗುತ್ತಾನೆ. 'ಅಸ್ಥೂಲೋ ಅನುಣುರೂಪಃ' ಇತ್ಯಾದಿ ಬೇರೆ ಶ್ರುತಿಗಳಿಂದಲೂ ವಿಷ್ಣುವೇ 'ಅಸ್ಥೂಲತ್ವ' ಮೊದಲಾದ ವಿರುದ್ಧಲಕ್ಷಣಗಳುಳ್ಳವನೆಂದು ಸಿದ್ಧನಾಗಿದ್ದಾನೆ. ಇದನ್ನು ಸಮರ್ಥಿಸುವುದಕ್ಕಾಗಿ 'ಅನ್ಯಭಾವವ್ಯಾವೃತ್ತೇಶ್ಚ' ಎಂಬ ಸೂತ್ರವು ಹೊರಟಿದೆ. 'ಅವ್ಯಾಪಕಃ' ಎಂಬ ಶಬ್ದಕ್ಕೆ 'ನವಿದ್ಯತೇ ಅನ್ಯಃ ವ್ಯಾಪಕಃ ಯಸ್ಮಾತ್ ಅವ್ಯಾಪಕಃ' ಎಂಬ ವಿಗ್ರಹವನ್ನು ಆಶ್ರಯಿಸಿದಾಗ ಇವನಿಗಿಂತ ವ್ಯಾಪಕವಾದ ಬೇರೊಂದು ಪದಾರ್ಥವು ಇರುವುದಿಲ್ಲವೆಂದು ತಿಳಿಯುತ್ತದೆ.

॥ ಇಲ್ಲಿಗೆ ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ ಸತ್ತರ್ಕದೀಪಾವಳಿಯಲ್ಲಿ
ಅಕ್ಷರಾಧಿಕರಣದ ಕನ್ನಡಾನುವಾದವು ಸಮಾಪ್ತವಾಯಿತು ॥

ತತ್ತ್ವಪ್ರದೀಪ

ಬೃಹದಾರಣ್ಯಕದಲ್ಲಿ ಅನ್ಯಭಾವವ್ಯಾವೃತ್ತಿ

तत्वप्रदीपः – अन्यभावव्यावृत्तेश्च ।। ''एतद्वै तदक्षरं गार्गि ब्राह्मणा अभिवदन्ति अस्थूलमनण्वह्रस्वमदीर्घमलोहितम्'' इत्यादिना स्थौल्याणुत्वादीनां व्यावृत्तिवचनाच्च ।

'ಏತದ್ವೈ ತದಕ್ಷರಂ ಗಾರ್ಗಿ ಬ್ರಾಹ್ಮಣಾ ಅಭಿವದಂತಿ ಅಸ್ಥೂಲಮನಣ್ವಹ್ರಸ್ವಮದೀರ್ಘ-ಮಲೋಹಿತಮ್' ಇತ್ಯಾದಿಯಾಗಿ ಸ್ಥೌಲ್ಯ ಅಣುತ್ವಾದಿಗಳು ಅಕ್ಷರನಲ್ಲಿ ಇರುವುದಿಲ್ಲವೆಂದು ಬೃಹದಾರಣ್ಯಕೋಪನಿಷತ್ತು ಹೇಳುತ್ತಿದೆ. ಈ ವ್ಯಾವೃತ್ತಿವಚನದಿಂದ ಶ್ರೀಹರಿಯು ಅಕ್ಷರನೆಂದು ತಿಳಿಯುತ್ತದೆ.

ವಿಶೇಷವಿಚಾರ - ಸ ಹೋವಾಚ। ಏತದ್ವೈ ತದಕ್ಷರಂ ಗಾರ್ಗಿ ಬ್ರಾಹ್ಮಣಾ ಅಭಿವದಂತಿ ಅಸ್ಥೂಲಂ ಅನಣು ಅಹ್ರಸ್ವಂ ಅದೀರ್ಘಂ ಅಲೋಹಿತಂ ಅಸ್ನೇಹಂ ಅಚ್ಛಾಯಂ ಅತಮಃ ಅವಾಯು ಅನಾಕಾಶಂ ಅಸಂಗಂ ಅರಸಂ ಅಗಂಧಂ ಅಚಕ್ಷುಷ್ಕಂ ಅಶ್ರೋತ್ರಂ ಅವಾಕ್

ಅಮನಃ ಅತೇಜಸ್ಕಂ ಅಪ್ರಾಣಂ ಅಮುಖಂ ಅಮಾತ್ರಂ ಅನಂತರಂ ಅಬಾಹ್ಯಮ್ । ನ ತದಶ್ನಾತಿ ಕಿಂಚನ । ನ ತದಶ್ನಾತಿ ಕಶ್ಚನ ।

ಯಾಜ್ಞವಲ್ಕ್ಯರು ಹೇಳಿದರು - 'ಗಾರ್ಗಿ, ಲಕ್ಷ್ಮಿಗೆ ಅಕ್ಷರನಾಮಕ ನಾರಾಯಣನು ಆಧಾರ. ಆ ಅಕ್ಷರನ ಲಕ್ಷಣಗಳನ್ನು ಬ್ರಹ್ಮಜ್ಞಾನಿಗಳು ಹೀಗೆ ಹೇಳುತ್ತಾರೆ - ಅವನು ಸ್ಥೂಲ ಸೂಕ್ಷ್ಮ ಹ್ರಸ್ವ ದೀರ್ಘವಾದ ಎಲ್ಲ ಪ್ರಾಕೃತ ವಸ್ತುಗಳಿಂದ ಭಿನ್ನ. ಪ್ರಾಕೃತರಕ್ತಾದಿ ರೂಪವಿಲ್ಲದವನು. ಪ್ರಾಕೃತಜಿಗಟುತನವಿಲ್ಲದವನು. ಅಜ್ಞಾನರಹಿತ. ಆವರಣರಹಿತ, ಶ್ವಾಸೋಚ್ಛ್ವಾಸರಹಿತ, ಆಕಾಶ ಮೊದಲಾದ ಪಂಚಭೂತಮಯ ಶರೀರರಹಿತ. ಎಲ್ಲ ಕಡೆ ಇದ್ದರೂ ತತ್ಕೃಯುಕ್ತ ದೋಷಲೇಪವಿಲ್ಲದವನು. ಪ್ರಾಕೃತರಸರಹಿತ, ಪ್ರಾಕೃತಗಂಧರಹಿತ, ಪ್ರಾಕೃತನೇತ್ರರಹಿತ, ಪ್ರಾಕೃತ ಶ್ರೋತ್ರರಹಿತ, ಪ್ರಾಕೃತ ವಾಗಿಂದ್ರಿಯರಹಿತ, ಪ್ರಾಕೃತ ಮನೋರಹಿತ, ಪ್ರಾಕೃತ ಕಾಂತಿರಹಿತ, ಪ್ರಾಕೃತ ಜ್ಞಾನೇಂದ್ರಿಯ ಕರ್ಮೇಂದ್ರಿಯರಹಿತ, ಪ್ರಾಕೃತ ಶರೀರರಹಿತ, ಪರಿಮಿತಿರಹಿತ, ಎಲ್ಲಕ್ಕೂ ಒಳಗಿರುವವ, ಎಲ್ಲಕ್ಕೂ ಹೊರಗೂ ಇರುವವ. ಆ ಅಕ್ಷರನು ತನ್ನ ಉಳಿವಿಗಾಗಿ ಯಾರನ್ನೂ ಆಶ್ರಯಿಸಿಲ್ಲ. ಅವನನ್ನು ಯಾರೂ ಅಳಿಸಲೂ ಶಕ್ತರಲ್ಲ.

ಪ್ರಸಿದ್ಧ ಸ್ಥೂಲಸೂಕ್ಷ್ಮಾದಿವೈಲಕ್ಷಣ್ಯಾದ್ ಜನಾರ್ದನಃ।
ಅಸ್ಥೂಲಾದಿರಿತಿ ಪ್ರೋಕ್ತೋ ನೈವ ಸ್ಥೌಲ್ಯಾದ್ಯಭಾವತಃ।
ಅನಾವೃತೇಸ್ತಮೋ ನಾಸ್ಯ ಸ್ವಾತಂತ್ರ್ಯಾನ್ನಾದ್ಯತೇ ಕ್ವಚಿತ್ ।

ಲೋಕದಲ್ಲಿ ಕಂಡುಬರುವ ಪ್ರಾಕೃತವಾದ ಸ್ಥೂಲ ಸೂಕ್ಷ್ಮ ಮೊದಲಾದ ವಸ್ತುಗಳಿಂದ ಹರಿಯು ವಿಲಕ್ಷಣನಾಗಿರುವುದರಿಂದ 'ಅಸ್ಥೂಲ' 'ಅನಣು' ಎಂದು ಮೊದಲಾಗಿ ಉಪನಿಷತ್ತಿನಲ್ಲಿ ಹೇಳಿದೆ. ಸ್ಥೌಲ್ಯ, ಅಣುತ್ವ ಮೊದಲಾದವುಗಳು ಇಲ್ಲವೇ ಇಲ್ಲ ಎಂದಲ್ಲ. ಆವರಣ ರಹಿತನಾದುದರಿಂದ ಅವನು 'ಅತಮ' ಎನಿಸಿದ್ದಾನೆ. ಸ್ವತಂತ್ರನಾದುದರಿಂದ ಯಾರಿಂದಲೂ ಸಂಹರಿಸಲ್ಪಡುವುದಿಲ್ಲ.

'ಅಸ್ಥೂಲೋ ಅನಣುಃ' ಇತ್ಯಾದಿ ಶ್ರುತ್ಯರ್ಥ

तत्वप्रदीपः – अस्थूलोऽनणुः 'अणोरणीयान्महतो महीयान्' इति श्रुतेः । अमध्यमः मध्यमपरिमाणनियतिवर्जितः । मध्ये मीयमानत्वान्मध्यमः । अस्य व्यापकोऽन्यो नास्तीत्ययमव्यापकः । प्रवेशनाद्विभुः ।

'ಅಸ್ಥೂಲೋಽನಣುಃ' 'ಸ್ಥೂಲಪರಿಮಾಣವುಳ್ಳವನಲ್ಲ, ಅಣುಪರಿಮಾಣವುಳ್ಳವನಲ್ಲ.' 'ಅಣೋರಣೀಯಾನ್ಮಹತೋ ಮಹೀಯಾನ್' 'ಅಣುವಿಗಿಂತ ಅಣುವಾಗಿದ್ದಾನೆ. ಮಹತ್ತಿಗಿಂತ

ಮಹಿಯಾನ್ ಆಗಿದ್ದಾನೆ'. ಇವೇ ಮೊದಲಾದ ಶ್ರುತಿಗಳಿರುವುದರಿಂದ ಅಸ್ಥೂಲತ್ವಾದಿಗಳೆಲ್ಲವೂ ವಿಷ್ಣುವಿನ ಅಸಾಧಾರಣಧರ್ಮಗಳೇ ಆಗಿವೆ.

ಭಾಷ್ಯದಲ್ಲಿ ಉದಾಹರಿಸಿದ 'ಅಸ್ಥೂಲಃ' ಇತ್ಯಾದಿ ಶ್ರುತಿಯಲ್ಲಿರುವ 'ಅಮಧ್ಯಮಃ' ಎಂಬ ಪದಕ್ಕೆ ಮಧ್ಯಮಪರಿಮಾಣದ ನಿಯಮ ಇಲ್ಲದವನು ಎಂದರ್ಥ. ಮಧ್ಯಮ ಎಂಬ ಶಬ್ದಕ್ಕೆ 'ಮಧ್ಯೇ ಮೀಯಮಾನ್ವಾತ್' ಎಂಬ ನಿಷ್ಪತ್ತಿಯಂತೆ ಮಧ್ಯಭಾಗದಲ್ಲಿ ತಿಳಿಯಲು ಯೋಗ್ಯನಾಗಿದ್ದಾನೆಂದರ್ಥ. 'ಅವ್ಯಾಪಕಃ' ಎಂಬ ಪದಕ್ಕೆ ಇವನನ್ನು ವ್ಯಾಪಿಸಿದ ಮತ್ತೊಬ್ಬ ವ್ಯಕ್ತಿ ಇರುವುದಿಲ್ಲ ಎಂದರ್ಥ. 'ವಿಶ್ವ' ಶಬ್ದಕ್ಕೆ ಎಲ್ಲೆಡೆ ಪ್ರವೇಶಿಸಿದ್ದಾನೆಂದರ್ಥ.

'ಸ ವಿಶ್ವಃ ಅವಿಶ್ವ ಏವ ಚ' ಎಂಬುದೇ ಸರಿಯಾದ ಪಾಠ

ಪಾಠಾಂತರದ ಬಗ್ಗೆ - ಮುದ್ರಿತ ಪುಸ್ತಕಗಳಲ್ಲಿ 'ಅವಿಶ್ವಃ ವಿಶ್ವ ಏವ ಚ' ಎಂಬ ಪಾಠವು ಕಾಣಿಸುತ್ತದೆ. ಪ್ರಾಚೀನಕೋಶಗಳಲ್ಲಿ 'ಸವಿಶ್ವಃ ಅವಿಶ್ವ ಏವ ಚ' ಎಂಬ ಪಾಠವು ಇರುತ್ತದೆ. ಹಾಗೂ ಬ್ರಾಹ್ಮಪುರಾಣದಲ್ಲಿಯೂ 'ಸ ವಿಶ್ವಃ ಅವಿಶ್ವ ಏವ ಚ' ಎಂದೇ ಪಾಠ ಇರುತ್ತದೆ.

ಶ್ರೀಹರಿಯಲ್ಲಿ ವಿರುದ್ಧಧರ್ಮಗಳ ಸಮಾವೇಶ

तत्वप्रदीपः – यद्यपि लोकेऽतिस्थूलत्वात्यणुत्वादयो धर्मा एकत्र विरुद्धाः, तथाऽपि विष्णोरैश्वर्यादुपपद्यन्ते । तदाह - विरुद्धधर्मरूपोऽसावैश्वर्यादिति ।।

ವಾಸ್ತವಿಕವಾಗಿ ಲೋಕದಲ್ಲಿ ಅತ್ಯಂತ ಸ್ಥೂಲತ್ವ ಹಾಗೂ ಅತ್ಯಂತ ಅಣುತ್ವವು ಒಂದೇ ವಸ್ತುವಿನಲ್ಲಿ ಇರುವುದು ಕಂಡಿಲ್ಲ. ಇಂಥ ಧರ್ಮಗಳು ಒಂದೇ ಕಡೆ ಇರುವುದು ವಿರುದ್ಧವಾಗಿದೆ. ಆದರೂ ಕೂಡ ವಿಷ್ಣುವಿನಲ್ಲಿ ಪರಮೈಶ್ವರ್ಯ ಇರುವ ಪ್ರಯುಕ್ತ ಇದು ಯುಕ್ತವಾಗುತ್ತದೆ. ಇದನ್ನೇ ಭಾಷ್ಯದಲ್ಲಿ 'ವಿರುದ್ಧಧರ್ಮರೂಪೋऽಸಾವೈಶ್ವರ್ಯಾತ್' ಎಂಬುದಾಗಿ ಉಲ್ಲೇಖಿಸಿದ್ದಾರೆ.

ಈಶ್ವರ ಪ್ರದೇಶದಿಂದ ಈಶ್ವರನಿಗೆ ಅಭೇದ

तत्वप्रदीपः – ननु कथमतिमहत ईश्वरस्यात्यणुत्वमिष्यते । परमाणोर्वा परममहत्तोच्यते ? रूपविशेषात् प्रदेशविशेषवत् । यथाहि परमाणुसम्बद्ध

ईश्वरप्रदेशः परमाणुपरिमाणतामणति । मेरुमन्दरादिगस्तत्तत्परिमाणतामुपैति । एवं गगनसम्बन्धी तादृशो भवति । न च तेषां प्रदेशानामीश्वरान्मिथो वा भेदं वादिनो वदन्ति । एकस्यैव तत्तत्प्रदेशात्मकत्वात् । एवमत्राप्यविरोधः ।।

।। इत्यक्षराधिकरणम् ।।

ಪ್ರಶ್ನೆ - ಅತ್ಯಂತ ಮಹತ್ತಾದ ಈಶ್ವರನಿಗೆ ಅಣುತ್ವವನ್ನು ಒಪ್ಪಲು ಹೇಗೆ ಸಾಧ್ಯ? ಪರಮಾಣುವಿಗೆ ಪರಮಮಹತ್ವವನ್ನು ಒಪ್ಪುವುದು ಹೇಗೆ ಸಾಧ್ಯ ?

ಉತ್ತರ - ಪರಮಾತ್ಮನಿಗೆ ಅನೇಕ ರೂಪಗಳಿರುವುದರಿಂದ ಪ್ರದೇಶವಿಶೇಷದಂತೆ ರೂಪವಿಶೇಷಗಳನ್ನು ವಿವಕ್ಷಿಸಿ, ಅತಿಮಹತ್ತಾದ ರೂಪಕ್ಕೆ ಅಣುತ್ವವನ್ನು ಪರಮಾಣುರೂಪಕ್ಕೆ ಪರಮಮಹತ್ವವನ್ನು ಒಪ್ಪಬಹುದು. ಅದು ಹೀಗೆ - ಪರಮಾಣುವಿನ ಜೊತೆ ಸಂಬಂಧವನ್ನು ಹೊಂದಿದ ಈಶ್ವರನ ಪ್ರದೇಶವು ಪರಮಾಣು ಪರಿಮಾಣವನ್ನು ಹೊಂದಿದೆ. ಅದರಂತೆ ಮೇರುಮಂದರದ ಜೊತೆ ಸಂಬಂಧವನ್ನು ಹೊಂದಿದ ಈಶ್ವರನ ಪ್ರದೇಶವು, ಮೇರುಮಂದರಾದಿಗಳ ಪರಿಮಾಣವನ್ನು ಹೊಂದಿದೆ. ಇದಕ್ಕಿಂತಲೂ ವಿಶಾಲವಾದ ಗಗನ ಸಂಬಂಧವನ್ನು ಹೊಂದಿದ ಈಶ್ವರನ ಪ್ರದೇಶವು ಗಗನಪರಿಮಾಣ ಪ್ರಮಾಣವನ್ನು ಹೊಂದಿದೆ. ಈ ಎಲ್ಲಾ ಪರಮಾಣು ಪ್ರದೇಶ, ಮೇರುಮಂದರಾದಿ ಪ್ರದೇಶ, ಗಗನ ಪ್ರದೇಶ ಇವುಗಳಿಗೆ ಈಶ್ವರನಿಂದ ಪರಸ್ಪರಭೇದವನ್ನು ವಾದಿಗಳಾದ ನಾವು ಒಪ್ಪಿರುವುದಿಲ್ಲ. ಏಕೆಂದರೆ ಒಬ್ಬನೇ ಈಶ್ವರನು ತತ್ತತ್‌ಪ್ರದೇಶಾತ್ಮಕನಾಗಿದ್ದಾನೆ. ಅದರಂತೆ ಪ್ರಕೃತ ಅತಿಮಹತ್ತಾದ ಈಶ್ವರನಲ್ಲಿ ಮಹತ್ವವನ್ನು ಪರಮಾಣು ರೂಪವುಳ್ಳ ಈಶ್ವರನಲ್ಲಿ ಪರಮಮಹತ್ವವನ್ನು ಒಪ್ಪಿದರೆ ವಿರೋಧವಿಲ್ಲ.

ವಿಶೇಷವಿಚಾರ - 'न च तेषां प्रदेशानामीश्वरान्मिथो वा भेदं वादिनो वदन्ति' ಎಂಬ ವಾಕ್ಯವನ್ನು ನೋಡಿದಾಗ ಪ್ರದೇಶಕ್ಕೂ ಈಶ್ವರನಿಗೂ ಭೇದವನ್ನು ವಾದಿಗಳು ಒಪ್ಪುವುದಿಲ್ಲ ಎಂಬರ್ಥವು ತಿಳಿಯುವುದರಿಂದ ಗೊಂದಲವಾಗುತ್ತದೆ. ಪ್ರದೇಶಕ್ಕೂ ಈಶ್ವರನಿಗೂ ಅಭೇದವೆಂದರೆ ಏನು ? ಎಂಬುದಾಗಿ. ಇದರ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೀಗೆ ತಿಳಿಯಬೇಕು - ಈಶ್ವರ ಪ್ರದೇಶವೆಂದರೆ ಈಶ್ವರನ ವ್ಯಾಪ್ತಿ ಎಂದರ್ಥ. ಅಥವಾ ಈಶ್ವರನ ಪರಿಮಾಣ ಎಂದರ್ಥ. ಯಾವರೀತಿಯಾಗಿ ಆಕಾಶದ ಪರಿಮಾಣಕ್ಕೂ ಆಕಾಶಕ್ಕೂ

ಭೇದವಿರುವುದಿಲ್ಲವೋ, ಅದರಂತೆ ಈಶ್ವರನಿಗೂ ಈಶ್ವರನ ವ್ಯಾಪ್ತಿಗೂ ಭೇದವನ್ನು ನಾವು ಒಪ್ಪಿರುವುದಿಲ್ಲ. ಸ್ವಾಭಾವಿಕವಾಗಿ ಅಭೇದವಿರುತ್ತದೆ. ಆದ್ದರಿಂದ ಪರಮಾಣು ಸಂಬಂಧವನ್ನು ಹೊಂದಿದ ಈಶ್ವರನ ಪ್ರದೇಶ ಎಂದರೆ ಈಶ್ವರನ ಆ ಪರಿಮಾಣವು ಪರಮಾಣು ಪರಿಮಾಣವುಳ್ಳದ್ದಾಗಿರುತ್ತದೆ. ಮೇರುಮಂದರದ ಜೊತೆ ಸಂಬಂಧವನ್ನು ಹೊಂದಿದ ಈಶ್ವರನ ಪರಿಮಾಣವು ಎಂದರೆ ಈಶ್ವರನ ವ್ಯಾಪ್ತಿಯು ಮೇರುಮಂದರಾದಿಗಳ ಪರಿಮಾಣವನ್ನು ಹೊಂದಿದೆ. ಈಶ್ವರ ಬೇರೆಯಲ್ಲ. ಈಶ್ವರನ ವ್ಯಾಪ್ತಿ ಅಥವಾ ಪರಿಮಾಣಗಳು ಬೇರೆಯಲ್ಲ. ಒಬ್ಬನೇ ಈಶ್ವರನು ಆಯಾ ಪ್ರದೇಶಾತ್ಮಕನಾಗಿರುತ್ತಾನೆ. ಆದ್ದರಿಂದ ವಿರೋಧಕ್ಕೆ ಅವಕಾಶವಿಲ್ಲ. ಅದರಂತೆ ಅತಿಮಹತ್ತಾದ ಈಶ್ವರನಿಗೆ ಅಣುತ್ವವು ಅಣುಪರಿಮಾಣವುಳ್ಳ ಈಶ್ವರನಿಗೆ ಅತಿಮಹತ್ವವು ಯುಕ್ತವಾಗುತ್ತದೆ ಎಂಬುದು ಪಂಡಿತಾಚಾರ್ಯರ ಅಭಿಪ್ರಾಯವಾಗಿದೆ.

॥ ಇಲ್ಲಿಗೆ ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ ತತ್ವಪ್ರದೀಪದಲ್ಲಿ
ಅಕ್ಷರಾಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ॥

ತತ್ವಪ್ರಕಾಶಿಕಾ

ವಿಷ್ಣುವೇ ಅಕ್ಷರನೆನ್ನಲು ಮೂರನೆಯ ಹೇತು

तत्वप्रकाशिका –।। अन्यभावव्यावृत्तेश्च ।।१-३-१२ ।।

युक्त्यन्तरेण विष्णोरेवाक्षरत्वं प्रतिपादयत् सूत्रं पठित्वा व्याचष्टे – अन्येति।।

ಮತ್ತೊಂದು ಹೇತುವಿನಿಂದ ವಿಷ್ಣುವೇ ಅಕ್ಷರನಾಗಿದ್ದಾನೆಂದು ಸಮರ್ಥಿಸುವುದಕ್ಕಾಗಿ ಸೂತ್ರವನ್ನು ಪಠಿಸಿ ವ್ಯಾಖ್ಯಾನಿಸುತ್ತಿದ್ದಾರೆ. 'ಅನ್ಯಭಾವವ್ಯಾವೃತ್ತೇಶ್ಚ' ಎಂದು.

'ಅಸ್ಥೂಲಮನಣು' ಇತ್ಯಾದಿ ಶ್ರುತಿಯ ಆಧಾರ

तत्वप्रकाशिका – 'एतद्वै तदक्षरं गार्गि ब्राह्मणा अभिवदन्त्य-स्थूलमनण्वह्रस्वम दीर्घमलोहितमस्नेहमच्छायमतमोऽवाय्वनाकाशमसङ्गमरसगन्धम चक्षुष्कमश्रोत्रमवागमनोऽतेजस्कमप्राणममुखममात्रमनन्तरबाह्यम्' । 'न

तदश्नाति किञ्चन' इति सकलवस्तुस्वभावानां स्थूलत्वादीनामक्षरे व्यावृत्तिकथनाच्च ब्रह्मैवाक्षरमित्यर्थः ।

'ಏತದ್ವೈ ತದಕ್ಷರಂ ಗಾರ್ಗಿ ಬ್ರಾಹ್ಮಣಾ ಅಭಿವದಂತ್ಯಸ್ಥೂಲಮನಣ್ವಹ್ರಸ್ವಮದೀರ್ಘ ಮಲೋಹಿತಮಸ್ನೇಹಮಚ್ಛಾಯಮತಮೋಽವಾಯ್ವನಾಕಾಶಮಸಂಗಮರಸಗಂಧಮ ಚಕ್ಷುಷ್ಕಮ ಶ್ರೋತ್ರಮವಾಗಮನೋಽತೇಜಸ್ಕಮಪ್ರಾಣಮಮುಖಮಮಾತ್ರಮನಂತರ-ಬಾಹ್ಯಂ' 'ನ ತದಶ್ನಾತಿ ಕಿಂಚನ'. ಎಲೈ ಗಾರ್ಗಿಯೇ! ಅಕ್ಷರತತ್ವದ ಲಕ್ಷಣವನ್ನು ಬ್ರಹ್ಮಜ್ಞಾನಿಗಳು ಹೀಗೆ ಹೇಳುತ್ತಾರೆ - 'ಪ್ರಾಕೃತವಾದ ಸ್ಥೂಲತ್ವ, ಅಣುತ್ವ, ಹ್ರಸ್ವತ್ವ, ದೀರ್ಘತ್ವ ಮೊದಲಾದ ಗುಣಗಳು ಇರುವುದಿಲ್ಲ. ಪ್ರಾಕೃತವರ್ಣವಾಗಲಿ, ಪ್ರಾಕೃತವಾದ ಸ್ನೇಹವಾಗಲಿ ಇರುವುದಿಲ್ಲ. ಅವಿದ್ಯೆ ಎಂಬ ಆವರಣದಿಂದ ರಹಿತವಾಗಿದೆ. ಪ್ರಾಕೃತವಾದ ವಾಯು, ಆಕಾಶ ಮೊದಲಾದವುಗಳಿಂದ ಸಹಿತವಾದ ಪ್ರಾಕೃತವಾದ ಶರೀರವಿಲ್ಲದ್ದು ಅಸಂಗವೂ, ಪ್ರಾಕೃತವಾದ ಗಂಧ, ರಸ ಮೊದಲಾದವೂ ಇಲ್ಲದ್ದು, ಪ್ರಾಕೃತವಾದ ಚಕ್ಷುಸ್ಸು, ಶ್ರೋತ್ರ, ವಾಣಿ, ಮನಸ್ಸು ಇವುಗಳಿಂದ ರಹಿತವಾದದ್ದು, ಪ್ರಾಕೃತವಾದ ತೇಜಸ್ಸು ಇಲ್ಲದ್ದು ಮತ್ತು ಪ್ರಾಕೃತವಾದ ಮುಖ, ದೇಹವಿಲ್ಲದ್ದು, ಪ್ರಾಕೃತವಾದ ಪರಿಮಾಣವಿಲ್ಲದ ಪದಾರ್ಥವೇ ಅಕ್ಷರತತ್ವವೆನಿಸಿದೆ' ಎಂದು ಹಾಗೂ 'ಇವನು ಅನ್ನ ಮೊದಲಾದ ಪ್ರಾಕೃತವಾದ ಪದಾರ್ಥಗಳನ್ನಾಗಲೀ, ಅಶುಭಕರ್ಮವನ್ನಾಗಲೀ, ಭೋಗ ಮಾಡುವುದಿಲ್ಲ'. ಹೀಗೆ ಸಕಲವಸ್ತುಗಳ ಸ್ವಭಾವವೆನಿಸಿದ ಸ್ಥೂಲತ್ವಾದಿಗಳನ್ನು ಅಕ್ಷರತತ್ವದಲ್ಲಿ ನಿಷೇಧ ಮಾಡಲಾಗಿದೆ. ಆದ್ದರಿಂದ ಬ್ರಹ್ಮನೇ ಅಕ್ಷರನಾಗಬೇಕೆಂದು ಅಭಿಪ್ರಾಯ.

ಅಸ್ಥೂಲಂ ಇತ್ಯಾದಿ ಪದಗಳ ವ್ಯಾಖ್ಯಾನ

तत्वप्रकाशिका – लौकिकस्थौल्यादिराहित्यं कथं विष्णुत्वनिश्चायकमित्यत आह – अस्थूल इति ।। लौकिकस्थौल्यादिराहित्येऽपि अलौकिकपरिमाणादि-सद्भावात् न विष्णोरस्वभावत्वमिति भावेनोपलक्षणतया मध्यम इत्याद्युक्तम्।

ಪ್ರಾಕೃತವಾದ ಧರ್ಮಗಳಿಲ್ಲದ ಕಾರಣದಿಂದ ವಿಷ್ಣುವೇ ಅಕ್ಷರನಾಗಿದ್ದಾನೆಂದು ಹೇಗೆ ನಿಶ್ಚಯಿಸುತ್ತೀರಿ? ಎಂಬ ಪ್ರಶ್ನೆಗೆ 'ಅಸ್ಥೂಲಃ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. ಪ್ರಾಕೃತವಾದ

ಶೂನ್ಯತ್ವ ಮೊದಲಾದ ಧರ್ಮಗಳಿಲ್ಲದಿದ್ದರೂ ಅಪ್ರಾಕೃತವಾದ ಪರಿಮಾಣಾದಿಗಳು ಇರುವ ಕಾರಣ ವಿಷ್ಣು ಅಸ್ವರೂಪನಲ್ಲವೆಂದು ತಿಳಿಯುತ್ತದೆ. ಎಂದರೆ ನಿರಾಕಾರನಲ್ಲ; ಸಾಕಾರ ಎಂದರ್ಥ. ಈ ಅಭಿಪ್ರಾಯದಿಂದ ಉಪಲಕ್ಷಣವೆಂದು ಶ್ರುತಿಯಲ್ಲಿ ಮಧ್ಯಮ ಪರಿಮಾಣವನ್ನು ವಿಷ್ಣುವಿನ ಧರ್ಮವಾಗಿ ಹೇಳಲಾಗಿದೆ.

'ಅತಮಃ', 'ಅದುಃಖಂ', 'ಅಸುಖಂ' ಇತ್ಯಾದಿ ಪದಗಳ ವ್ಯಾಖ್ಯಾನ

तत्वप्रकाशिका – तमो वाय्वादीनां सर्वात्मना निवृत्तिः अदुःखम-सुखमित्यादिवत् ।

ತಮಸ್ಸು, ವಾಯು ಮೊದಲಾದವುಗಳಿಗೆ ಅಕ್ಷರನಿಂದ ನಿವೃತ್ತಿಯನ್ನು ಹೇಳಿರುವಿಕೆಯನ್ನೇ 'ಸರ್ವಾತ್ಮನಾ ನಿವೃತ್ತಿ' ಎಂದು ತಿಳಿಯಬೇಕು. ಅಪ್ರಾಕೃತವಾದ ತಮೋ ವಾಯ್ವಾದಿಧರ್ಮಗಳು ಪರಮಾತ್ಮನಲ್ಲಿ ಇವೆ ಎಂದು ತಿಳಿಯಬಾರದು. ಹೇಗೆಂದರೆ 'ಅಸುಖಂ', 'ಅದುಃಖಂ' ಎಂಬಲ್ಲಿ 'ಅಸುಖಂ' ಎಂದರೆ ಪ್ರಾಕೃತವಾದ ಸುಖವಿಲ್ಲದವನು, ಅಪ್ರಾಕೃತವಾದ ಸುಖದಿಂದ ಪೂರ್ಣನಾದವನು ಎಂದರ್ಥ. ಆದರೆ 'ಅದುಃಖಂ' ಎಂಬಲ್ಲಿ ಪ್ರಾಕೃತವಾದ ದುಃಖ-ವಿಲ್ಲದವನೂ, ಮತ್ತು ಅಪ್ರಾಕೃತವಾದ ದುಃಖವುಳ್ಳವನು ಎಂದರ್ಥವಲ್ಲ ಹೊರತು ಸರ್ವಾತ್ಮನಾ ದುಃಖಶೂನ್ಯನೆಂಬ ಅರ್ಥವನ್ನು ಹೇಗೆ ಮಾಡುತ್ತೇವೋ; ಅದರಂತೆ 'ಅತಮಃ' ಎಂದರೆ ಸರ್ವಾತ್ಮನಾ ತಮಸ್ಸು ಇವನಲ್ಲಿ ಇಲ್ಲವೆಂದೇ ತಿಳಿಯಬೇಕು.

ವಿಷ್ಣುವಿನ ಪರಿಮಾಣವು ಅಪ್ರಾಕೃತವೇ ?

तत्वप्रकाशिका – लौकिकपरिमाणादिराहित्यं कथं विष्णोर्युक्तम् । सर्वपदार्थानां प्राकृतपरिमाणस्यैव दर्शनादित्यत आह – अस्थूलेति ।

ಪ್ರಾಕೃತವಾದ ಪರಿಮಾಣಾದಿರಾಹಿತ್ಯವಿದ್ದಮಾತ್ರದಿಂದ ವಿಷ್ಣುವೇ ಅಕ್ಷರನೆಂದು ಹೇಗೆ ನಿಶ್ಚಯಿಸುತ್ತೀರಿ? ಸಕಲಪದಾರ್ಥಗಳೂ ಪ್ರಾಕೃತವಾದ ಧರ್ಮಗಳಿಂದ ಯುಕ್ತವಾಗಿರುವಾಗ ವಿಷ್ಣುವಿನ ಪರಿಮಾಣಕ್ಕೆ ಅಪ್ರಾಕೃತತ್ವವನ್ನು ಹೇಳಲು ಹೇಗೆ ಸಾಧ್ಯ? ಎಂಬ ಪ್ರಶ್ನೆಗೆ 'ಅಸ್ಥೂಲ' ಇತ್ಯಾದಿ ಭಾಷ್ಯದಿಂದ ಉತ್ತರಿಸಿದ್ದಾರೆ.

ಲಕ್ಷ್ಮೀದೇವಿಯೂ ಕೂಡ ಅಪ್ರಾಕೃತಳಲ್ಲವೇ?

तत्वप्रकाशिका – मध्यमाक्षरस्याप्राकृतविग्रहत्वेऽपि भगवदपेक्षयैव । अनेनैव 'न तदश्नाति किञ्चन' इत्येतदपि जीवस्वभावभूतोपजीवनार्थाशन व्यावृत्त्यर्थमिति सूचितं भवति । अस्थूलत्वादिसमभिव्याहारात् ।

ಮಧ್ಯಮಾಕ್ಷರಳೆನಿಸಿದ ಲಕ್ಷ್ಮೀದೇವಿಯೂ ಸಹ ಅಪ್ರಾಕೃತವಾದ ಶರೀರವನ್ನೇ ಧರಿಸಿದ್ದಾಳೆ. ಆದರೂ ಸಹ ಭಗವಂತನ ಅನುಗ್ರಹದಿಂದ ಅಪ್ರಾಕೃತಳಾಗಿದ್ದಾಳೆ ಹೊರತು ಸ್ವತಂತ್ರವಾಗಿ ಅಪ್ರಾಕೃತಳಾಗಿಲ್ಲವೆಂದು ವಿವಕ್ಷಿಸಬೇಕು. ಹೀಗೆ ಹೇಳಿದ್ದರಿಂದ 'ನ ತದಶ್ನಾತಿ ಕಿಂಚನ' ಎಂಬ ವಾಕ್ಯವನ್ನೂ ಜೀವನ ಸ್ವಭಾವವೆನಿಸಿದ ಉಪಜೀವನಕ್ಕೋಸ್ಕರ ತಿನ್ನುವಿಕೆ ಎಂಬುದನ್ನು ವ್ಯಾವೃತ್ತಿ ಮಾಡಲಾಗಿದೆ ಎಂದು ಸೂಚಿಸಿದಂತಾಯಿತು. ಅಂದರೆ ಪ್ರಾಕೃತಸಂಪರ್ಕವಿಲ್ಲದ ವಿಷ್ಣು ಉಪಜೀವನಕ್ಕೋಸ್ಕರ ಏನನ್ನೂ ತಿನ್ನಲಾರನೆಂದು ಶ್ರುತಿಗೆ ವ್ಯಾಖ್ಯಾನಿಸಿದಂತಾಯಿತು. ಏಕೆಂದರೆ ಅಸ್ಥೂಲತ್ವಾದಿಗಳ ಜೊತೆಯಲ್ಲಿಯೇ ಈ ವಾಕ್ಯವು ಪಠಿತವಾಗಿರುವುದರಿಂದ.

ವಿಷ್ಣುವೇ ಅಕ್ಷರಶಬ್ದದಿಂದ ಮುಖ್ಯಪ್ರತಿಪಾದ್ಯ

तत्वप्रकाशिका – अक्षरश्रुत्यादीनां तु विष्णावेव मुख्यता तस्मादक्षरं विष्णुरेवेति तस्यैवादृश्यत्वादि इति स्थितम् ।। १२ ।।

।। इति श्रीमज्जयतीर्थभिक्षुविरचितायां तत्वप्रकाशिकायाम् अक्षराधिकरणम् ।।

ಆದ್ದರಿಂದ ಅಕ್ಷರಶ್ರುತಿಯು ವಿಷ್ಣುವನ್ನೇ ಮುಖ್ಯವಾಗಿ ಪ್ರತಿಪಾದಿಸುತ್ತಿದೆ. ಆದ್ದರಿಂದ ವಿಷ್ಣುವೇ ಅಕ್ಷರನಾಗುತ್ತಾನೆ ಹಾಗೂ ಅದೃಶ್ಯತ್ವಾದಿ ಧರ್ಮಗಳು ಅವನಲ್ಲೇ ಇವೆ ಎಂದು ಸಿದ್ಧವಾಗುತ್ತವೆ.

।। ಇಲ್ಲಿಗೆ ಶ್ರೀಮಜ್ಜಯತೀರ್ಥಮುನಿಗಳಿಂದ ವಿರಚಿತವಾದ ತತ್ವಪ್ರಕಾಶಿಕಾಟೀಕೆಯಲ್ಲಿ ಅಕ್ಷರಾಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ।।

ಭಾವದೀಪ

ಸೂತ್ರದಲ್ಲಿರುವ ಚ ಶಬ್ದ ವ್ಯಾಖ್ಯಾನ

भावदीपः – अन्यभावव्यावृत्तेश्च ।।

सौत्रचशब्दांशं प्रागुक्तहेतुसमुच्चायकं मत्वाऽह – हेत्वन्तरेणेति ।। सूत्रे 'अन्यभाव' इत्युक्तिलब्धोक्तिरन्यवस्तुस्वभावानामिति । तदर्थः – सकलेति।। प्राकृतानामित्यर्थः ।

ಸೂತ್ರದಲ್ಲಿರುವ 'ಚ' ಶಬ್ದವು ಹಿಂದೆ ಹೇಳಿದ ಹೇತುವನ್ನು ಸಮುಚ್ಚಯ ಮಾಡುತ್ತಿದೆ ಎಂದು 'ಹೇತ್ವಂತರೇಣ' ಇತ್ಯಾದಿಯಾಗಿ ಹೇಳಿದ್ದಾರೆ. ಸೂತ್ರದಲ್ಲಿರುವ 'ಅನ್ಯಭಾವ' ಎಂಬ ಪದದಿಂದ 'ಅನ್ಯವಸ್ತುಸ್ವಭಾವಾನಾಂ' ಎಂಬ ಅರ್ಥವು ದೊರೆಯುತ್ತದೆ. ಅದರ ಅರ್ಥವನ್ನೇ ಟೀಕೆಯಲ್ಲಿ 'ಸಕಲವಸ್ತುಸ್ವಭಾವಾನಾಂ' ಎಂದು ಹೇಳಿದ್ದಾರೆ. ಪ್ರಾಕೃತವಾದ ಸಕಲವಸ್ತುಗಳ ಸ್ವಭಾವ ಎಂದರ್ಥ.

'ಅಣು' ಮುಂತಾದ ಶಬ್ದಗಳು ಭಾವಪ್ರಧಾನ ನಿರ್ದಿಷ್ಟ

भावदीपः – भाष्ये भावप्रधानं मत्वोक्तम् – स्थूलत्वेति ।। भाष्योक्तश्रुतौ मध्यमव्यापकपदयोरुक्तेरुपयोगमाह – अलौकिकेति ।। उपलक्षणतया स्थौल्यादेरुपलक्षमतयेत्यर्थः ।

ಭಾಷ್ಯದಲ್ಲಿ ಹೇಳಲ್ಪಟ್ಟ 'ಅಣು' ಮೊದಲಾದ ಶಬ್ದಗಳು ಭಾವಪ್ರಧಾನದಿಂದ ನಿರ್ದಿಷ್ಟವಾಗಿವೆ ಎಂದು ತಿಳಿಸಲು 'ಸ್ಥೂಲತ್ವಾದೀನಮ್' ಎಂದು ಹೇಳಿದ್ದಾರೆ. ಭಾಷ್ಯದಲ್ಲಿ ಉದಾಹರಿಸಲ್ಪಟ್ಟ ಶ್ರುತಿಯಲ್ಲಿ ಮಧ್ಯಮ ಹಾಗೂ ವ್ಯಾಪಕಪದಗಳ ತನಕ ಶ್ರುತಿಯಲ್ಲಿ ಏಕೆ ಉಲ್ಲೇಖಿಸಿದ್ದಾರೆ ಎಂಬುದಕ್ಕೆ 'ಅಲೌಕಿಕ' ಇತ್ಯಾದಿ ಪ್ರಯೋಜನವನ್ನು ಹೇಳುತ್ತಿದ್ದಾರೆ. 'ಉಪಲಕ್ಷಣತಯಾ' ಎಂದರೆ ಸ್ಥೂಲ್ಯಾದಿಗಳನ್ನು ಉಪಲಕ್ಷಣವಾಗಿ ಸ್ವೀಕರಿಸಬೇಕಾದ್ದರಿಂದ ಎಂದು ಅರ್ಥ.

ವೈಶೇಷಿಕಾಧಿಕರಣದ ಅನುವ್ಯಾಖ್ಯಾನದಲ್ಲಿ ಅಸ್ಥೂಲಂ ಇತ್ಯಾದಿ ಶ್ರುತಿಯ ವ್ಯಾಖ್ಯಾನ

ಭಾವದೀಪಃ – विस्तृतमेतत् 'महतोऽल्पत्वमपि हि व्योमवत् प्राह वेदराट्' इत्यादिना वैशेषिकाधिकरणान्तव्याख्याने भगवतोऽणुत्वमहत्त्वादि-व्युत्पादनेन ।

ಈ ವಿಚಾರವನ್ನೇ 'ಮಹತೋऽಲ್ಪತ್ವಮಪಿ ಹಿ ವ್ಯೋಮವತ್ ಪ್ರಾಹ ವೇದರಾಟ್' ಇತ್ಯಾದಿಯಾದ ವೈಶೇಷಿಕಾಧಿಕರಣದ ಅನುವ್ಯಾಖ್ಯಾನದಲ್ಲಿ ಭಗವಂತನಿಗೆ ಅಣುತ್ವ ಹಾಗೂ ಮಹತ್ವಗಳನ್ನು ಆಕಾಶದ ದೃಷ್ಟಾಂತದಿಂದ ಸ್ಪಷ್ಟವಾಗಿ ಪ್ರತಿಪಾದನೆ ಮಾಡಿದ್ದಾರೆ.

ಪ್ರಾಕೃತಸ್ಥೌಲ್ಯಾದಿಗಳ ನಿರಾಕರಣೆಯ ಬಗ್ಗೆ

ಭಾವದೀಪಃ – ननु 'अस्थूलम्' इत्यादिना प्राकृतस्थौल्यादिनिरासे तत्प्रायपठितानामपि तथा स्यादित्यत आह – तम इति ।।

'ಅಸ್ಥೂಲಮ್' ಇತ್ಯಾದಿ ಶ್ರುತಿಯಿಂದ ಪ್ರಾಕೃತಸ್ಥೌಲ್ಯಾದಿಗಳನ್ನು ನಿರಾಕರಿಸುವುದಾದರೆ ಅದರ ಜೊತೆಗೇ ಪಠಿತವಾದ ಸಕಲವನ್ನೂ ಸಹ ಹೀಗೆಯೇ ನಿರಾಕರಿಸಬೇಕಲ್ಲವೆ? ಎಂಬ ಪ್ರಶ್ನೆಗೆ 'ತಮಃ' ಎಂಬುದರಿಂದ ಉತ್ತರಿಸಿದ್ದಾರೆ.

'ಅಸುಖಮ್' ಹಾಗೂ 'ಅದುಃಖಮ್' ಎಂಬೆರಡು ಪದಗಳ ಅರ್ಥದಲ್ಲಿ ವ್ಯತ್ಯಾಸ

ಭಾವದೀಪಃ – 'अदुःखमसुखम्' इति श्रुतावसुखमित्यनेन बाह्यसुख-निषेधेऽपि 'अतमोऽवायु' इत्यादौ सर्वात्मना तमःप्रभृतेरेव निरासः । 'आदित्यवर्णं तमसः परस्ताद्' इत्यादिवाक्यबलादित्यर्थः ।

'ಅದುಃಖಮಸುಖಮ್' ಎಂಬ ಶ್ರುತಿಯಲ್ಲಿ 'ಅಸುಖಮ್' ಎಂಬುದರಿಂದ ಬಾಹ್ಯಸುಖವನ್ನಷ್ಟೇ ನಿಷೇಧಮಾಡಲಾಗುತ್ತದೆ. ಆದರೆ 'ಅದುಃಖಮ್' ಎಂಬುದರಿಂದ ದುಃಖ ಸಾಮಾನ್ಯವನ್ನೇ ನಿಷೇಧ ಮಾಡಲಾಗುತ್ತದಯೇ ಹೊರತು ಪ್ರಕೃತವಾದ ದುಃಖವಿಲ್ಲವೆಂದು ನಿಷೇಧ ಮಾಡುವುದಿಲ್ಲ. ಆದರಂತೆ ಪ್ರಕೃತ 'ಅಸ್ಥೂಲಮ್' ಇತ್ಯಾದಿ ಶ್ರುತಿಯಲ್ಲಿಯೂ ಸಹ ಅಸ್ಥೂಲಾದಿ ಪದಗಳಿಂದ ಲೌಕಿಕವಾದ ಸ್ಥೌಲ್ಯಾದಿಗಳನ್ನು ನಿಷೇಧ ಮಾಡಿದರೂ 'ಅತಮೋऽವಾಯು' ಇತ್ಯಾದಿಪದಗಳಿಂದ ತಮಸ್ಸು

ಮೊದಲಾದ್ದನ್ನು ಸರ್ವಾತ್ಮನಾ ನಿಷೇಧ ಮಾಡಲಾಗಿದೆ ಎಂದು ತಿಳಿಯಬೇಕು. 'ಆದಿತ್ಯವರ್ಣಂ ತಮಸಃಪರಸ್ತಾತ್' ಇತ್ಯಾದಿ ಪ್ರಮಾಣವೇ ಈ ವಿಷಯದಲ್ಲಿ ಆಧಾರವಾಗಿದೆ.

ದಹರಾಧಿಕರಣದ ಭಾಷ್ಯದಲ್ಲಿ ಪರಿಹಾರ

ಭಾವದೀಪಃ – प्राकृतस्थौल्यादिराहित्यरूपहेतोर्व्यभिचारमाशङ्क्य च दहरनयभाष्ये वक्ष्यमाणपरिहारं स्वयमाह – मध्यमेति ।।

'ಪ್ರಾಕೃತಸ್ಥೌಲ್ಯಾದಿರಾಹಿತ್ಯ' ಎಂಬ ಹೇತುವಿಗೆ ವ್ಯಭಿಚಾರದೋಷವು ಬರುತ್ತದೆ ಎಂದು ಆಶಂಕಿಸಿ ದಹರಾಧಿಕರಣದ ಭಾಷ್ಯದಲ್ಲಿ ಮುಂದೆ ಹೇಳುವ ಪರಿಹಾರವನ್ನು ಪ್ರಕೃತ ಹೇಳುತ್ತಿದ್ದಾರೆ 'ಮಧ್ಯಮ' ಇತ್ಯಾದಿಯಾಗಿ.

ಸ್ಥೌಲ್ಯಾದಿರಾಹಿತ್ಯವು ಇತರರಲ್ಲಿ ಸಾಪೇಕ್ಷಿತ

ಭಾವದೀಪಃ – तथाच 'सापेक्षनिरपेक्षयोर्निरपेक्षं स्वीकर्तव्यम्' इत्यग्रे भाष्योक्तेरस्थूलमित्यादिश्रुतौ निरपेक्षस्थौल्यादिराहित्यस्यैव ग्राह्यत्वात्तस्यैव च सूत्रकृता विवक्षितत्वान्न व्यभिचार इत्यर्थः ।

ಆದ್ದರಿಂದ ಸಾಪೇಕ್ಷ ಹಾಗೂ ನಿರಪೇಕ್ಷಗಳಲ್ಲಿ ನಿರಪೇಕ್ಷವಾದದ್ದನ್ನು ಸ್ವೀಕರಿಸುವುದೇ ಶ್ರೇಷ್ಠವಾಗಿದೆ ಎಂದು ಮುಂದೆ ಭಾಷ್ಯದಲ್ಲಿ ಹೇಳುತ್ತಾರೆ. ಆದ್ದರಿಂದ 'ಅಸ್ಥೂಲಮ್' ಇತ್ಯಾದಿ ಶ್ರುತಿಯಲ್ಲಿ ನಿರಪೇಕ್ಷಿತವಾದ 'ಸ್ಥೌಲ್ಯಾದಿರಾಹಿತ್ಯ' ಎಂಬ ಅರ್ಥವನ್ನೇ ಸ್ವೀಕರಿಸಬೇಕು. ಇಂತಹ ಅರ್ಥವನ್ನೇ ಸೂತ್ರಕಾರರೂ ಸಹ ವಿವಕ್ಷಿಸಿರುತ್ತಾರೆ. ಬೇರೆಯವರಲ್ಲಿರುವ ಸ್ಥೌಲ್ಯಾದಿರಾಹಿತ್ಯವು ಸಾಪೇಕ್ಷಿತವಾದ್ದರಿಂದ ಆ ಅರ್ಥವು ಸೂತ್ರಕಾರರಿಗೆ ವಿವಕ್ಷಿತವಾಗಿಲ್ಲ. ಆದ್ದರಿಂದ ವ್ಯಭಿಚಾರದೋಷಕ್ಕೆ ಅವಕಾಶವಿಲ್ಲವೆಂದು ತಿಳಿಯಬೇಕು.

ಅನಶನಶ್ರುತಿಯು ಸಾವಕಾಶ

ಭಾವದೀಪಃ – प्रागुक्तानशनोक्तिविरोधं परिहर्तुम् अनशनोक्तिस्त्वनुपजीवनार्थत्वेनैव सावकाशेति न्यायविवरणं सूत्रारूढं दर्शयितुं सयुक्तिकं व्याख्याति – अनेनैवेति ।।

ಹಿಂದೆ ಪೂರ್ವಪಕ್ಷ ಮಾಡುವಾಗ ಹೇಳಲ್ಪಟ್ಟ ಅನಶನಶ್ರುತಿಯ ವಿರೋಧವನ್ನು ಪರಿಹರಿಸುತ್ತಿದ್ದಾರೆ. ಪರಮಾತ್ಮನು ಮತ್ತೊಂದು ಪದಾರ್ಥವನ್ನು ಉಪಜೀವಿಸಿಕೊಂಡು ಜೀವಿಸಲಾರ; ಆದರೆ ಸಕಲಜೀವರು ಆಹಾರಪದಾರ್ಥವನ್ನು ಉಪಜೀವಿಸಿಕೊಂಡೇ ಜೀವನವನ್ನು ನಡೆಸುತ್ತಾರೆ. ಇಂತಹ ಸ್ಥಿತಿ ಪರಮಾತ್ಮನಿಗಿರುವುದಿಲ್ಲ. ಆದ್ದರಿಂದ ಅನಶನ ಶ್ರುತಿಯು ಸಾವಕಾಶವಾಗಿದೆ ಎಂದು ನ್ಯಾಯವಿವರಣದಲ್ಲಿ ಹೇಳಿದ್ದಾರೆ. ಅದನ್ನು ಸೂತ್ರಾರೂಢ ಮಾಡಲು ಯುಕ್ತಿಬದ್ಧವಾಗಿ ವ್ಯಾಖ್ಯಾನಿಸುತ್ತಿದ್ದಾರೆ 'ಅನೇನೈವ' ಇತ್ಯಾದಿಯಾಗಿ.

ಏಕಾದಶಸ್ಕಂಧ ತಾತ್ಪರ್ಯದಲ್ಲಿ ಅನಶನಶ್ರುತಿಯ ವ್ಯಾಖ್ಯಾನ

भावदीपः – सूत्रे लौकिकस्थौल्यादिराहित्यस्य श्रुत्यर्थतया कथनेनैवेत्यर्थः। 'साशनानशनत्वेन नरदेवौ यथोदितौ । अत्तिं विनाऽप्यदौर्बल्यात्तदनत्ति हरेर्भुजः' इत्येकादशस्कन्धतात्पर्योक्तेरिति भावः।

'ಅನೇನೈವ' ಎಂದರೆ ಸೂತ್ರದಲ್ಲಿ ಲೌಕಿಕವಾದ ಸ್ಥೌಲ್ಯಾದಿರಾಹಿತ್ಯವನ್ನೇ ಶ್ರುತಿಯ ಅರ್ಥವೆಂದು ಹೇಳಿದ್ದರಿಂದಲೇ ಎಂದರ್ಥ. 'ಸಾಶನಾನಶನತ್ವೇನ ನರದೇವೌ ಯಥೋದಿತೌ । ಅತ್ತಿಂ ವಿನಾಪ್ಯದೌರ್ಬಲ್ಯಾತ್ತದನತ್ತಿ ಹರೇರ್ಭುಜಃ', ಜೀವನು ಆಹಾರವನ್ನು ಭೋಗಿಸುತ್ತಾನೆ. ಪರಮಾತ್ಮನು ಯಾವುದೇ ಆಹಾರವನ್ನು ಭೋಗಿಸುವುದಿಲ್ಲ. ಆದ್ದರಿಂದಲೇ ಶ್ರುತಿಯು ಏನನ್ನೂ ತಿನ್ನುವುದಿಲ್ಲವೆಂದು ಪರಮಾತ್ಮನ ಬಗ್ಗೆ ಹೇಳುತ್ತದೆ. ಏಕೆಂದರೆ ಏನನ್ನೂ ತಿನ್ನದಿದ್ದರೂ ಸಹ ಅವನಿಗೆ ದೌರ್ಬಲ್ಯ ಬರುವುದಿಲ್ಲ. ಹೀಗೆ ಏಕಾದಶ ಸ್ಕಂಧದ ತಾತ್ಪರ್ಯದ ವಚನವನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು.

'ಧರ್ಮಾಂತರೇಣ ವಾಕ್ಯಶೇಷಾತ್' ಎಂಬ ನ್ಯಾಯ

भावदीपः – कुत एवं सामान्योक्तेर्विशेषपरत्वम्? इत्यतो 'धर्मान्तरेण वाक्यशेषाद्' इति न्यायादिति भावेन न्यायविवरणोक्तसमाधौ युक्तिमाह – अस्थूलत्वादीति ।। लौकिकस्थौल्यादिराहित्यादिसमभिव्याहारादित्यर्थः ।।

'ನ ತದಶ್ನಾತಿ ಕಿಂಚನ' ಎಂಬ ಶ್ರುತಿಯಲ್ಲಿ, ಅತ್ಯತ್ವಸಾಮಾನ್ಯವನ್ನಷ್ಟೇ ನಿಷೇಧಿಸಲಾಗಿದೆ. ಹೀಗಿರುವಾಗ ನೀವು ಅತ್ಯತ್ವದ ವಿಶೇಷವನ್ನೇಕೆ ನಿಷೇಧ ಮಾಡುತ್ತಿದ್ದೀರಿ ? ಎಂಬ ಪ್ರಶ್ನೆಗೆ 'ಧರ್ಮಾಂತರೇಣ ವಾಕ್ಯಶೇಷಾತ್' ಎಂಬ ನ್ಯಾಯದ ಆಧಾರದಿಂದ ನ್ಯಾಯವಿವರಣದಲ್ಲಿ ಹೇಳಲ್ಪಟ್ಟ

ಎರಡು ಸಮಾಧಾನಗಳನ್ನು ಯುಕ್ತಿಬದ್ಧವಾಗಿ ಸಮರ್ಥಿಸುತ್ತಿದ್ದಾರೆ. 'ಅಸ್ಥೂಲತ್ವಾದಿ' ಇತ್ಯಾದಿಯಾಗಿ ಲೌಕಿಕ ಸ್ಥೌಲ್ಯಾದಿರಾಹಿತ್ಯವೇ ಮೊದಲಾದವುಗಳ ಸಮಭಿವ್ಯಾಹಾರ ಇರುವುದರಿಂದ ಎಂದರ್ಥ.

ನಾಕುಬಗೆಯ ನಾಶಗಳು

ಭಾವದೀಪಃ – अक्षरेति ।। अक्षरश्रुतितत्प्रवृत्तिनिमित्तसूर्यचन्द्राद्याधारत्व-लिङ्गरूपपूर्वपक्षप्रापकाणामित्यर्थः ।। मुख्यतेति ।। 'अनित्यत्वं देहहानिः दुःखप्राप्तिरपूर्णता । नाशश्चतुर्विधः प्रोक्तस्तदभावो हरेः सदा ।।' इति स्मृतेः । 'तस्मादक्षरमित्याचक्षत एतमेव सन्तम्' इत्यादिश्रुतेः । 'अक्षरं ब्रह्म परमम्' इत्यादिस्मृतेः ।

'ಅಕ್ಷರಶ್ರುತ್ಯಾದೀನಾಮ್' ಎಂದರೆ ಅಕ್ಷರಶ್ರುತಿ ಹಾಗೂ ಅದರ ಪ್ರವೃತ್ತಿನಿಮಿತ್ತ ಮತ್ತು ಸೂರ್ಯಚಂದ್ರಾದ್ಯಾಧಾರಲಿಂಗಗಳೆಂಬ ಪೂರ್ವಪಕ್ಷ ಪ್ರಾಪಕಗಳಿಗೆ ಎಂದರ್ಥ. 'ಮುಖ್ಯತಯಾ' ಎಂದರೆ 'ಅನಿತ್ಯತ್ವಂ ದೇಹಹಾನಿಃ ದುಃಖಪ್ರಾಪ್ತಿರಪೂರ್ಣತಾ । ನಾಶಶ್ಚತುರ್ವಿಧಃ ಪ್ರೋಕ್ತಃ ತದಭಾವೋ ಹರೇರ್ಸದಾ' 'ಅನಿತ್ಯವಾಗಿರುವಿಕೆ, ದೇಹಹಾನಿ, ದುಃಖಪ್ರಾಪ್ತಿ, ಅಪರಿಪೂರ್ಣತಾ' ಎಂಬುದಾಗಿ ನಾಶವು ನಾಕುವಿಧವಾಗಿದೆ. ನಾಕುಬಗೆಯ ನಾಶವೂ ಸಹ ಪರಮಾತ್ಮನಿಗೆ ಇಲ್ಲದ್ದರಿಂದ ಅವನು ಮುಖ್ಯವಾಗಿ ಅಕ್ಷರಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆ ಎಂದು ತಿಳಿಯಬೇಕು. 'ತಸ್ಮಾದ್-ಅಕ್ಷರಮಿತ್ಯಾಚಕ್ಷತೇ' ಎಂಬ ಶ್ರುತಿಯೂ ಸಹ, 'ಅಕ್ಷರಂ ಬ್ರಹ್ಮ ಪರಮ್' ಎಂಬ ಶ್ರುತಿಯೂ ಸಹ ಈ ವಿಷಯದಲ್ಲಿ ಆಧಾರವಾಗಿದೆ.

ಅಕ್ಷರಶಬ್ದ ವಾಚ್ಯತ್ವದ ಬಗ್ಗೆ ನಿರವಕಾಶಲಿಂಗಗಳು

ಭಾವದೀಪಃ – द्युभ्वादिनयोक्तदिशा अत्र भाष्योक्तश्रुत्यादिना च सूर्याद्याधारत्वादेर्हरावेव युक्तत्वादिति भावः ।। तस्मादिति ।। तस्मात् प्रकृतिद्वारा सर्वाधारत्वाज्ञामात्रेण सर्वाधारत्वनिरपेक्षलौकिकस्थौल्यादि राहित्यरूप निरवकाशप्रापकभावात् । अनशनोक्तिरूपबाधकाभावाच्चेति सर्वहेत्वंशार्थः ।

ದ್ಯುಭ್ವಾದ್ಯಧಿಕರಣದ ನ್ಯಾಯದಿಂದ ಪ್ರಕೃತ ಭಾಷ್ಯದಲ್ಲಿ ಉದಾಹರಿಸಲ್ಪಟ್ಟ ಶ್ರುತ್ಯಾದಿಗಳಿಂದಲೂ ಸೂರ್ಯಾಚಂದ್ರಾದಿ ಆಧಾರತ್ವವು ಪರಮಾತ್ಮನಲ್ಲಿ ಮಾತ್ರವೇ ಯುಕ್ತವಾಗುತ್ತದೆ ಎಂದು ತಿಳಿಯಬೇಕು. 'ತಸ್ಮಾತ್' ಎಂದರೆ ಲಕ್ಷ್ಮೀದೇವಿಯ ಮೂಲಕ ಸಕಲವನ್ನೂ ಕೇವಲ ಆಜ್ಞೆಯಿಂದಷ್ಟೇ ಧರಿಸಿದ್ದಾನೆ ಮತ್ತು ಇವನಲ್ಲಿರುವ ಸರ್ವಾಧಾರತ್ವವು ನಿರಪೇಕ್ಷಿತವಾಗಿದೆ. ಲೌಕಿಕವಾದ ಸ್ಥೌಲ್ಯಾದಿ ಧರ್ಮಗಳು ಇವನಲ್ಲಿ ಇರುವುದಿಲ್ಲ. ಹೀಗೆ ಅನೇಕ ನಿರವಕಾಶಪ್ರಮಾಣಗಳ ಬಲದಿಂದ ಅಕ್ಷರಶಬ್ದವಾಚ್ಯನು ವಿಷ್ಣುವೇ ಆಗಿದ್ದಾನೆಂದು ನಿರ್ಣಯಿಸಬಹುದು. 'ಅನಶನೋಕ್ತಿರೂಪಬಾಧಕಾಭಾವಾತ್' ಎಂಬುದು ಸಕಲ ಹೇತ್ವಂಶದ ಅರ್ಥವಾಗಿದೆ.

'ಅಕ್ಷರಂ ವಿಷ್ಣುರೇವ'

भावदीपः – अक्षरं तत्त्विति प्रतिज्ञार्थः – अक्षरं विष्णुरेवेति ।। इतीति ।। हेतोरित्यर्थः । शेषेण फलोक्त्या भाष्योपसंहारः ।

'ಅಕ್ಷರಂ ತತ್ತು' ಎಂಬ ಪ್ರತಿಜ್ಞೆಯ ಅರ್ಥವನ್ನೇ 'ಅಕ್ಷರಂ ವಿಷ್ಣುರೇವ' ಎಂದು ಹೇಳಿದ್ದಾರೆ. 'ಇತಿ' ಎಂದರೆ ಈ ಹೇತುವಿನಿಂದ ಎಂದರ್ಥ. ಉಳಿದ ಭಾಗದಿಂದ ಈ ಅಧಿಕರಣದ ಫಲವನ್ನು ಹೇಳಿ ಭಾಷ್ಯವನ್ನು ಉಪಸಂಹಾರ ಮಾಡಿದ್ದಾರೆ.

'ಅಂಬರಾಂತಧೃತೇಃ' ಎಂಬಲ್ಲಿರುವ ಅಂತಪದವು ವ್ಯರ್ಥವಲ್ಲ

भावदीपः – यत्तु कश्चिदाह – सूत्रे श्रुत्यनुसारायाकाशधृतेरित्येव वाच्यम् अन्तपदं व्यर्थमिति, तन्न । तवाप्यम्बरपदास्वारस्यात् । मम तु अं विष्णुं बिभर्तीत्यादिव्युत्पत्त्या श्रीतत्त्वमेव आकाशशब्दार्थ इति सूचनेन स्वारस्योपपत्तेश्च चन्द्रिकोक्तदिशा पृथिव्यादिप्रकृत्यन्तसर्वाधारत्वोक्त्यर्थ तयान्तपदस्यापि सार्थक्यात्।।१२।।

।। इति श्रीराघवेन्द्रयतिकृते भावदीपे अक्षराधिकरणम् ।।

ಕೆಲವರು ಹೀಗೆ ಹೇಳಿದ್ದಾರೆ. ಶ್ರುತಿಯ ಅನುಗುಣ್ಯಕ್ಕಾಗಿ ಸೂತ್ರದಲ್ಲಿ 'ಆಕಾಶಧೃತೇಃ' ಎಂದಷ್ಟೇ ಹೇಳಬೇಕಿತ್ತು. 'ಅಂತ' ಪದವನ್ನು ಹೇಳಿದ್ದು ವ್ಯರ್ಥವಾಗುತ್ತದೆಂಬ, ಇವರವಾದ ತಪ್ಪು. ಏಕೆಂದರೆ ಇವರಿಗೂ ಸಹ 'ಅಂಬರ' ಪದದ ಸಾರ್ಥಕ್ಯವನ್ನು ಹೇಳಲು ಸಾಧ್ಯವಿಲ್ಲ. ಆದರೆ ನಮ್ಮ ಮತದಲ್ಲಿ

'ಅಂಬರ' ಶಬ್ದಕ್ಕೆ 'ಅಂ ವಿಷ್ಣುಂ ಬಿಭರ್ತಿ' ಎಂಬ ವ್ಯುತ್ಪತ್ತಿಯನ್ನು ಆಶ್ರಯಿಸಿದಾಗ ಮತ್ತು ಶ್ರೀತತ್ವವೇ ಆಕಾಶ ಶಬ್ದದ ಅರ್ಥವೆಂದು ಸೂಚಿಸಿದ್ದರಿಂದ 'ಅಂಬರ' ಪದವು ಸ್ವರಸವಾಗುತ್ತದೆ. ಮತ್ತು ಚಂದ್ರಿಕೆಯಲ್ಲಿ ಹೇಳಿದಂತೆ ಪೃಥಿವಿಯಿಂದ ಹಿಡಿದು ಪ್ರಕೃತಿಯ ತನಕ ಸರ್ವಾಧಾರತ್ವವೆಂಬ ಲಿಂಗವನ್ನು ಹೇಳುವುದಕ್ಕಾಗಿ ಸೂತ್ರಕಾರರು 'ಅಂತ' ಪದವನ್ನು ಪ್ರಯೋಗಿಸಿದ್ದಾರೆಂಬ ಸಾರ್ಥಕ್ಯವಿರುತ್ತದೆ ಎಂದು ತಿಳಿಯಬೇಕು.

॥ ಇಲ್ಲಿಗೆ ಶ್ರೀಮದ್‌ರಾಘವೇಂದ್ರತೀರ್ಥರಿಂದ ವಿರಚಿತವಾದ ಭಾವದೀಪದ
ಅಕ್ಷರಾಧಿಕರಣದ ಕನ್ನಡ ಅನುವಾದವು ಮುಗಿಯಿತು ॥

॥ ಶ್ರೀ ಮಧ್ವೇಶಾರ್ಪಣಮಸ್ತು ॥

ತಂತ್ರದೀಪಿಕೆಯಲ್ಲಿ ಅಕ್ಷರಾಧಿಕರಣದ ಸೂತ್ರಗಳು

।। श्रीजानकीवदनाम्भोजराजहंसाय रामचन्द्राय नमः ।।

।। श्री गुरुभ्यो नमः ।।

श्री राघवेन्द्रतीर्थविरचिता

तन्त्रदीपिका

अक्षराधिकरणम् (१।३।३)

ಸೂತ್ರದ ಪ್ರತಿಪದಾರ್ಥ

।। अक्षरमम्बरान्तधृतेः ।। १-३-१० ।।

अत्राक्षरनाम समन्वीयते । ''एतद्वै तदक्षरं गार्गि'' इत्युक्तमक्षरं तत्तु ब्रह्मैव न श्रीतत्त्वम् । अम्बरान्तधृतेः । अम्बरमाकाशशब्दितं श्रीतत्त्वमन्ते

यस्य सर्वस्य तदम्बरान्तं तस्य धृतेर्धारणात् । श्रुतावाकाशाख्यचित्प्रकृतेः सर्वाधारत्वमुक्त्वा ''एतस्मिन् खल्वक्षरे गार्ग्याकाश ओतश्च प्रोतश्च'' इत्यक्षरस्य तदाधारत्वश्रवणादित्यर्थः ।

ಈ ಅಧಿಕರಣದಲ್ಲಿ 'ಏತದ್ವೈ ತದಕ್ಷರಂ ಗಾರ್ಗಿ' ಎಂಬ ಬೃಹದಾರಣ್ಯಕೋಪನಿಷತ್ತಿನಲ್ಲಿ ಕೇಳಿಸುತ್ತಿರುವ 'ಅಕ್ಷರ' ಎಂಬ ನಾಮಾತ್ಮಕ ಶಬ್ದವನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡುತ್ತಿದ್ದಾರೆ.

ಸೂತ್ರಾರ್ಥ ಹೀಗಿದೆ - ಅಕ್ಷರಂ = 'ಏತದ್ವೈ ತದಕ್ಷರಂ ಗಾರ್ಗಿ' ಎಂಬಲ್ಲಿ ಶ್ರುತನಾದ ಅಕ್ಷರನು ಬ್ರಹ್ಮನೇ ಆಗಿದ್ದಾನೆ ಹೊರತು ಶ್ರೀತತ್ವವಲ್ಲ. ಏಕೆಂದರೆ 'ಅಂಬರಾಂತಧೃತೇಃ' = 'ಅಂಬರ' ಎಂದರೆ 'ಆಕಾಶ' ಶಬ್ದದಿಂದ ಪ್ರತಿಪಾದ್ಯಳಾದ 'ಲಕ್ಷ್ಮೀದೇವಿ' ಎಂದರ್ಥ. ಲಕ್ಷ್ಮೀದೇವಿಯೇ ಕೊನೆಯಾಗಿವುಳ್ಳ ಸಕಲಪದಾರ್ಥವೂ, 'ಅಂಬರಾಂತ' ಎನಿಸುತ್ತದೆ. ಆ ಎಲ್ಲಾ ಸಕಲ ಪದಾರ್ಥಗಳನ್ನೂ ಧರಿಸಿರುವುದರಿಂದ, ಎಂದು 'ಅಂಬರಾಂತಧೃತೇಃ' ಎಂಬ ಶಬ್ದಕ್ಕೆ ಅರ್ಥ. ಶ್ರುತಿಯಲ್ಲಿ 'ಆಕಾಶ' ಎಂಬ ಚಿತ್‌ಪ್ರಕೃತಿಗೆ , ಅಂದರೆ ಲಕ್ಷ್ಮೀದೇವಿಗೆ ಸರ್ವಾಧಾರತ್ವವನ್ನು ಹೇಳಲಾಗಿದೆ. ಹಾಗೇ ಹೇಳಿ ಮುಂದೆ 'ಏತಸ್ಮಿನ್ ಖಲ್ವಕ್ಷರೇ ಗಾರ್ಗ್ಯಾಕಾಶ ಓತಶ್ಚ ಪ್ರೋತಶ್ಚ' ಎಂಬುದಾಗಿ ಮುಂದಿನ ಮಂತ್ರದಲ್ಲಿ ಚಿತ್ ಪ್ರಕೃತಿಗೂ ಸಹ ಆಧಾರನಾದವನು ಅಕ್ಷರನೆಂದು ಹೇಳಲಾಗಿದೆ.

'ಅಂಬರ ಧೃತೇಃ' ಎಂದಷ್ಟೇ ಏಕೆ ಹೇಳಿಲ್ಲ ?

अम्बरधृतेरित्येव पूर्तावन्तेत्युक्तिः पृथिव्यादिसर्वस्यापि प्रकृतिद्वारा ब्रह्मैवाश्रय इति सूचयितुम् । ''पृथिव्यादिप्रकृत्यन्तम्'' इति स्मृतेः । अम्बरस्य श्रीतत्त्वज्ञापनाय चेत्यप्याहुः । सर्वाश्रयत्वे सत्येकाश्रयत्वस्य तल्लिङ्गत्वादिति ।।

ಸೂತ್ರದಲ್ಲಿ 'ಅಂಬರಾಂತಧೃತೇಃ' ಎಂದು ಹೇಳುವ ಬದಲು 'ಅಂಬರಧೃತೇಃ' ಎಂದಷ್ಟೇ ಹೇಳಿದ್ದರೂ ಸಾಕಾಗುತ್ತಿತ್ತು, ಆದರೆ 'ಅಂತ' ಎಂದು ಹೇಳಿ, ಅದರಿಂದ 'ಪೃಥಿವಿಯಿಂದ ಪ್ರಾರಂಭಿಸಿ ಪ್ರಕೃತಿಯ ತನಕ ಸಕಲ ಪದಾರ್ಥಗಳಿಗೂ ಪ್ರಕೃತಿಯ ಮೂಲಕ ಮಹಾವಿಷ್ಣುವೇ ಆಶ್ರಯನಾಗಿದ್ದಾನೆಂದು ತಿಳಿಸಿದ್ದಾರೆ.

'ಪೃಥಿವ್ಯಾದಿಪ್ರಕೃತ್ಯಂತಂ ಭೂತಂ ಭವ್ಯಂ ಭವಚ್ಚ ಯತ್ ।
ಏಷ್ಣುರೇಕೋ ಭಭರ್ತೀದಮ್ ನಾನ್ಯತ್ ತಸ್ಮಾತ್ ಸಮೋ ಧೃತೌ'

ಎಂಬ ಸ್ಮೃತಿಯೇ ಈ ವಿಷಯದಲ್ಲಿ ಆಧಾರವಾಗಿದೆ. ಲಕ್ಷ್ಮೀದೇವಿಯು ಎಲ್ಲಾ ಪದಾರ್ಥಗಳನ್ನೂ ಧರಿಸಿದ್ದಾಳೆ. ಆದರೂ ಸಹ ಭಗವಂತನನ್ನು ಇವಳು ಆಶ್ರಯಿಸಿದ್ದಾಳೆ. ಅಂಬರವು ಶ್ರೀತತ್ವವೆಂದು ತಿಳಿಸುವುದಕ್ಕಾಗಿಯೂ 'ಅಂತ' ಪದವನ್ನು ಹೇಳಿದ್ದಾರೆಂದು ಕೆಲವರು ಹೇಳುತ್ತಾರೆ. ಏಕೆಂದರೆ ಸಕಲ ಪದಾರ್ಥಗಳನ್ನು ಆಶ್ರಯಿಸಿದ್ದರೂ ಮಹಾವಿಷ್ಣುವಿನ್ನೊಬ್ಬನನ್ನು ಆಶ್ರಯಿಸಿರುವುದು ಲಕ್ಷ್ಮೀದೇವಿಯ ಲಕ್ಷಣವಾಗಿರುವುದರಿಂದ.

'ಸಾ ಚ ಪ್ರಶಾಸನಾತ್' ಎಂಬ ಸೂತ್ರದ ಪ್ರತಿಪದಾರ್ಥ

इतश्चैवमित्याह -

।। सा च प्रशासनात् ।।

उच्यत इति शेषः । सा धृतिश्च प्रशासनादक्षरस्याज्ञामात्रादुच्यते ''एतस्य वा अक्षरस्य प्रशासने गार्गि सूर्याचन्द्रमसौ विधृतौ तिष्ठतः'' इत्यादौ । अतश्चाक्षरं ब्रह्मैवेत्यर्थः ।

ಮತ್ತೊಂದು ಕಾರಣದಿಂದಲೂ ಅಕ್ಷರನು ಬ್ರಹ್ಮನೇ ಆಗಿದ್ದಾನೆಂದು ಸಮರ್ಥಿಸುವುದಕ್ಕಾಗಿ ಮುಂದಿನ ಸೂತ್ರ ಹೊರಡುತ್ತಿದೆ. 'ಉಚ್ಯತೇ' ಎಂಬುದನ್ನು ಶೇಷಪೂರಣ ಮಾಡಿಕೊಳ್ಳಬೇಕು. ಸಾಚ = ಅಂತಹ ಧಾರಣವು 'ಪ್ರಶಾಸನಾತ್' = ಅಕ್ಷರನ ಆಜ್ಞೆಯಿಂದಷ್ಟೇ, ಉಚ್ಯತೇ = 'ಏತಸ್ಯ ಅಕ್ಷರಸ್ಯ ಪ್ರಸಾಶನೇ ಗಾರ್ಗಿ ಸೂರ್ಯಾಚಂದ್ರಮಸೌ ವಿಧೃತೌ ತಿಷ್ಠತಃ' ಇತ್ಯಾದಿಯಾಗಿ ಹೇಳಲ್ಪಟ್ಟಿದೆ. ಈ ಕಾರಣದಿಂದಲೂ ಬ್ರಹ್ಮನೇ ಅಕ್ಷರನಾಗುತ್ತಾನೆಂದು.

'ಪ್ರಶಾಸನಾತ್' ಎಂಬಲ್ಲಿರುವ 'ಪ್ರ' ಉಪಸರ್ಗದ ಬಗ್ಗೆ

नहि प्रेत्युक्तासङ्कुचितविषयत्वानन्यायत्तत्वरूपप्रकृष्टशासनमात्रेण सर्वधृतिरन्यस्य युज्यत इति भावः ।।

'ಪ್ರಶಾಸನಾತ್' ಎಂಬಲ್ಲಿ 'ಪ್ರ' ಎಂಬ ಉಪಸರ್ಗವು ಅಸಂಕುಚಿತವಾದ ವಿಷಯತ್ವವನ್ನು ಹಾಗೂ ಮತ್ತೊಬ್ಬರ ಅಧೀನವಲ್ಲವೆಂಬ ಮೊದಲಾದ ಪ್ರಕೃಷ್ಟತ್ವವನ್ನು ಸೂಚಿಸುತ್ತಿದೆ. ಅಂದರೆ ಸಂಪೂರ್ಣವಾದ ಸ್ವಾತಂತ್ರ್ಯದಿಂದ ಮಹಾವಿಷ್ಣು ಎಲ್ಲವನ್ನೂ ಆಜ್ಞೆ ಮಾಡುತ್ತಾನೆ. ಇಂತಹ ಸ್ವಾತಂತ್ರ್ಯದಿಂದ ಆಜ್ಞೆಮಾಡುವ ಮಾತ್ರದಿಂದ ಸಕಲವನ್ನೂ ಧರಿಸುವಿಕೆಯು ಮಹಾವಿಷ್ಣುವನ್ನು ಬಿಟ್ಟು ಇತರರಲ್ಲಿ ಯುಕ್ತವಾಗುವುದಿಲ್ಲವೆಂದು ತಿಳಿಯಬೇಕು.

'ಅನ್ಯಭಾವವ್ಯಾವೃತ್ತೇಶ್ಚ' ಎಂಬ ಸೂತ್ರದ ಪ್ರತಿಪದಾರ್ಥ

इतश्चैवमित्याह -

।। अन्यभावव्यावृत्तेश्च ।। १-३-१२ ।।

अन्येषां वस्तूनां भावानां स्थौल्यादिधर्माणां व्यावृत्तेः ''अस्थूलमनणु'' इत्यादिनाऽक्षरे व्यावृत्त्युक्तेश्चाक्षरं ब्रह्मैवेत्यर्थः ।

ಮತ್ತೊಂದು ಕಾರಣದಿಂದಲೂ ಮಹಾವಿಷ್ಣುವೇ ಅಕ್ಷರನಾಗಿದ್ದಾನೆಂದು ಮುಂದಿನ ಸೂತ್ರದಿಂದ ಸಮರ್ಥಿಸುತ್ತಿದ್ದಾರೆ.

ಸೂತ್ರಾರ್ಥ ಹೀಗಿದೆ - ಅನ್ಯೇಷಾಂ = ಬೇರೆ ವಸ್ತುಗಳ, ಭಾವಾನಾಂ = ಸೂರ್ಯ ಮೊದಲಾದ ಧರ್ಮಗಳಿಗೆ, ವ್ಯಾವೃತ್ತೇಃ = 'ಅಸ್ಥೂಲಮನಣು' ಇತ್ಯಾದಿ ಶ್ರುತಿಯಿಂದ ಅಕ್ಷರನಲ್ಲಿ ಇಲ್ಲದಿರುವಿಕೆಯನ್ನು ಹೇಳಿರುವುದರಿಂದಲೂ ಮಹಾವಿಷ್ಣುವೇ ಅಕ್ಷರನಾಗಿದ್ದಾನೆಂದು ಸೂತ್ರಾರ್ಥ.

ಸ್ಥೌಲ್ಯಾದಿರಹಿತನಾದರೆ ಶೂನ್ಯನಾಗಲಾರ

स्थौल्यादीति वाच्येऽन्यभावेत्युक्तिः स्थौल्यादिहीनमक्षरं ब्रह्म चेन्निःस्वभावं स्यादिति न शङ्क्यम्, अन्यवस्तुस्वाभावस्य प्राकृतस्यैव स्थौल्यादेर्व्यावृत्त्युक्तेरिति सूचयितुम् । नहि तादृशं निरपेक्षं स्थौल्यादिराहित्यमन्यस्य युज्यत इति भावः ।

ಸೂತ್ರದಲ್ಲಿ 'ಸೌಲ್ಯಾದೇರ್ವ್ಯಾವೃತ್ತೇಃ' ಎಂದೇ ಹೇಳಬಹುದಿತ್ತು. ಆದರೂ 'ಅನ್ಯಭಾವವ್ಯಾವೃತ್ತೇಃ' ಎಂದು ಹೇಳಿದ್ದರಿಂದ; ಬೇರೆ ವಸ್ತುಗಳ ಸ್ವಭಾವವಾದ ಪ್ರಾಕೃತವಾದ ಸೌಲ್ಯಾದಿಗಳು ಬ್ರಹ್ಮನಲ್ಲಿ ಇಲ್ಲವೆಂದು ಹೇಳಿದರೆ ಬ್ರಹ್ಮನು ಸೌಲ್ಯಾದಿರಹಿತನಾದ್ದರಿಂದ ಶೂನ್ಯಸ್ವಭಾವನಾಗಬೇಕಾದೀತು ಎಂಬ ಆಶಂಕೆಯನ್ನು ನಿರಾಕರಿಸಿದ್ದಾರೆ. ಇಂತಹ ನಿರಪೇಕ್ಷವಾದ ಪ್ರಾಕೃತಸೌಲ್ಯಾದಿರಾಹಿತ್ಯವು ಬ್ರಹ್ಮನನ್ನು ಬಿಟ್ಟು ಇತರರಲ್ಲಿ ಯುಕ್ತವಾಗುವುದಿಲ್ಲವೆಂದು ಅಭಿಪ್ರಾಯ.

ನ್ಯಾಯಸುಧೆಯ ಪ್ರಕಾರ ವ್ಯಾಖ್ಯಾನ

यद्वा सुधारीत्या ''अस्थूलमनण्'' इत्यादिना स्थौल्यादिविरुद्धाणुत्व-महत्त्वादिमत्त्वाच्चेति चशब्देन समुच्चीयते । बहुपदविषयं व्याख्यानं स्वशब्देन कृत्वा कतिपयपदविषयत्वादिदं व्याख्यानं चशब्देन समुच्चितम् । नच विरोधः । अन्यभावाव्यावृत्तेरन्यवस्तु वैलक्षण्याद् वस्तुस्वभावस्यैव तादृशत्वादिति यावदिति वृत्त्यन्तरं बोध्यम् ।।३।।

ಅಥವಾ ನ್ಯಾಯಸುಧೆಯ ಪ್ರಕಾರ ಮತ್ತೊಂದು ರೀತಿಯಲ್ಲಿಯೂ ಇದರ ಪ್ರಯೋಜನವನ್ನು ತಿಳಿಯಬಹುದು. 'ಅಸ್ಥೂಲಮನಣು' ಇತ್ಯಾದಿ ವಾಕ್ಯಗಳಿಂದ ಸೌಲ್ಯಾದಿ ಧರ್ಮಗಳಿಗೆ ವಿರುದ್ಧವಾದ ಅಣುತ್ವ-ಮಹತ್ವಾದಿ ಧರ್ಮಗಳಿರುವುದರಿಂದಲೂ ಎಂಬುದನ್ನು ಸಮುಚ್ಚಯ ಮಾಡುವುದಕ್ಕಾಗಿ, 'ಅನ್ಯಭಾವ' ಎಂಬ ಶಬ್ದವನ್ನು ಹೇಳಿರುತ್ತಾರೆ. 'ಅಸ್ಥೂಲಮನಣು' ಎಂಬ ಶ್ರುತಿಯ ಅನೇಕ ಪದಗಳಿಗೆ ಸಂಬಂಧಿಸಿದ ವ್ಯಾಖ್ಯಾನವನ್ನು ಸೂತ್ರದಿಂದ ಮಾಡಿ ಕೆಲವು ವಿಷಯಗಳಿಗೆ ಸಂಬಂಧಿಸಿದ ವ್ಯಾಖ್ಯಾನವನ್ನು 'ಚ' ಶಬ್ದದಿಂದ ಸಂಗ್ರಹಿಸಿದ್ದಾರೆ. ಅಣುತ್ವ, ಮಹತ್ವ ಮೊದಲಾದ ಧರ್ಮಗಳು ವಿರುದ್ಧವಾದ್ದರಿಂದ ಒಬ್ಬನಲ್ಲೇ ಒಪ್ಪಲು ಸಾಧ್ಯವಿಲ್ಲವೆಂದು ಶಂಕಿಸಬಾರದು. ಏಕೆಂದರೆ 'ಅನ್ಯಭಾವವ್ಯಾವೃತ್ತೇಃ' = ಇತರ ಸಕಲ ಪದಾರ್ಥಗಳಿಂದಲೂ ಬ್ರಹ್ಮನು ವಿಲಕ್ಷಣ ಸ್ವಭಾವವುಳ್ಳವನಾಗಿದ್ದಾನೆ. ಆದ್ದರಿಂದ ವಿರೋಧಕ್ಕೆ ಅವಕಾಶವಿಲ್ಲವೆಂದು ಮತ್ತೊಂದು ಅರ್ಥವನ್ನೂ ಸೂತ್ರದಲ್ಲಿ ತಿಳಿಯಬೇಕು.

॥ ಇಲ್ಲಿಗೆ ತಂತ್ರದೀಪಿಕೆಯ ಕನ್ನಡಾನುವಾದದಲ್ಲಿ ಅಕ್ಷರಾಧಿಕರಣವು ಮುಗಿಯಿತು ॥

ಅದ್ವೈತ-ವಿಶಿಷ್ಟಾದ್ವೈತಮತದಲ್ಲಿ ಅಕ್ಷರಾಧಿಕರಣ
ಮತ್ತು
ವಿಮರ್ಶೆ

ಅದ್ವೈತಿಗಳ ಅಧಿಕರಣ ಶರೀರ ಹೀಗಿದೆ - ಶ್ರುತಿಯಲ್ಲಿರುವ ಅಕ್ಷರಶಬ್ದವು ವರ್ಣಗಳನ್ನೇ ಪ್ರತಿಪಾದಿಸುತ್ತದೆ. ಏಕೆಂದರೆ ಲೋಕದಲ್ಲಿ ಅಕಾರಾದಿ ವರ್ಣಗಳಲ್ಲಿಯೇ ಅಕ್ಷರಶಬ್ದದ ಪ್ರಯೋಗವಿದೆ.

ಶ್ರುತಿಯು ಅಕ್ಷರದಲ್ಲಿ ಆಕಾಶವೇ ಮೊದಲಾದ ಸಕಲ ಪದಾರ್ಥಗಳು ಆಶ್ರಿತವಾಗಿವೆಯೆಂದು ಹೇಳುತ್ತಿದೆ. ಅಕಾರಾದಿ ವರ್ಣಗಳಲ್ಲಿ ಆಕಾಶಾದಿಗಳು ಆಶ್ರಿತವಾಗಲು ಹೇಗೆ ಸಾಧ್ಯ ? ಎಂದರೆ ಸಕಲ ರೂಪಧೇಯಗಳು 'ಗೌರಯಂ ವೃಕ್ಷೋऽಯಂ' ಇತ್ಯಾದಿಯಾಗಿ ನಾಮಧೇಯದಿಂದ ಅಭಿನ್ನವಾಗಿಯೇ ತೋರುತ್ತದೆ. ಆದ್ದರಿಂದ ಆಕಾಶಾದಿ ಪದಾರ್ಥಗಳು ಅಕಾರಾದಿ ವರ್ಣಗಳಲ್ಲಿ ಓತಪ್ರೋತವಾಗಿವೆಯೆಂದರೆ ಅಭಿನ್ನವಾಗಿವೆಯೆಂದರ್ಥ. ಹೀಗೆ ಸಕಲ ಪದಾರ್ಥಗಳಿಂದ ಅಕಾರಾದಿ ವರ್ಣಗಳು ಅಭಿನ್ನವಾಗಿವೆಯೆಂದು ಹೇಳುವುದೇ ಶ್ರುತಿಯ ಅಭಿಪ್ರಾಯ.

ಆದ್ದರಿಂದ ಅಕಾರಾದಿ ವರ್ಣಗಳೇ ಅಕ್ಷರಶಬ್ದ ಪ್ರತಿಪಾದ್ಯವೆಂದು ಪೂರ್ವಪಕ್ಷ.

ಶಾಂಕರ ಭಾಷ್ಯದಲ್ಲಿ ಅಕಾರಾದಿ ವರ್ಣಗಳನ್ನು ಅಕ್ಷರವೆಂದು ಪೂರ್ವಪಕ್ಷ ಮಾಡದೇ ಓಂಕಾರವೆಂಬುದನ್ನು ಅಕ್ಷರವೆಂದು ಪೂರ್ವಪಕ್ಷ ಮಾಡಲಾಗಿದೆ. ಕಾರಣವೇನೆಂದರೆ ಓಂಕಾರಕ್ಕೆ ಅಕಾರಾದಿ ಸರ್ವವರ್ಣಾತ್ಮಕತ್ವವು ಶ್ರುತಿಯಿಂದ ಸಿದ್ಧವಾಗಿದೆ.

ಸಿದ್ಧಾಂತ ಹೀಗಿದೆ - ಪೃಥಿವಿಯಿಂದ ಪ್ರಾರಂಭಿಸಿ ಆಕಾಶದ ತನಕ ಸಕಲ ಪದಾರ್ಥಗಳು ಬ್ರಹ್ಮನ ವಿಕಾರವಾಗಿವೆ. ಆದ್ದರಿಂದ ಬ್ರಹ್ಮನಲ್ಲಿಯೇ ಓತಪ್ರೋತವಾಗಿವೆಯೆಂದು ಹೇಳಬೇಕು ಹೊರತು, ಅಕಾರಾದಿ ವರ್ಣಗಳಲ್ಲಿ ಓತಪ್ರೋತವಾಗಿದೆಯೆಂದು ಹೇಳುವುದು ತಪ್ಪಾಗುತ್ತದೆ. ಮತ್ತು 'ನಕ್ಷರತಿ ಇತಿ ಅಕ್ಷರಮ್' ಎಂಬ ವ್ಯುತ್ಪತ್ತಿಯೂ ಸಹ ಬ್ರಹ್ಮನಲ್ಲೇ ಉಪಪನ್ನವಾಗುತ್ತದೆ. ಆದ್ದರಿಂದ ನಿರ್ವಿಶೇಷ ಬ್ರಹ್ಮನೇ ಅಕ್ಷರಶಬ್ದ ಪ್ರತಿಪಾದ್ಯನಾಗಿದ್ದಾನೆ.

ಇವರ ಅಧಿಕರಣಶರೀರವು ಅಸಾಧುವಾಗಿದೆ. 'ಗೌರಯಂ ವೃಕ್ಷೋऽಯಂ' ಇತ್ಯಾದಿ ಪ್ರತೀತಿಗಳಿಂದ ಗೋತ್ವಾದಿ ಜಾತಿ ವೈಶಿಷ್ಟ್ಯವು ತಿಳಿಯಬಹುದು. ಗೋಶಬ್ದವಾಚ್ಯತ್ವವೂ ಸಹ ತಿಳಿಯಬಹುದು. ಆದರೆ 'ಕಸ್ಮಿನ್ನು ಖಲ್ವಾಕಾಶ ಓತಶ್ಚ ಪ್ರೋತಶ್ಚ' ಇತ್ಯಾದಿ ಶ್ರುತಿಯಲ್ಲಿ ಹೇಳಲ್ಪಟ್ಟ ಆಕಾಶಾಶ್ರಯತ್ವವೂ ಮಾತ್ರ ಅಕಾರಾದಿ ವರ್ಣಗಳಲ್ಲಿ ತಿಳಿಯಲು ಸಾಧ್ಯವೇ ಇಲ್ಲ. ಮತ್ತು ಅಕ್ಷರನಲ್ಲಿ ಹೇಳಲ್ಪಟ್ಟ, ದ್ರಷ್ಟೃತ್ವ, ಶ್ರೋತೃತ್ವ ಮೊದಲಾದವುಗಳನ್ನಂತೂ ಅಕಾರಾದಿ ಅಕ್ಷರಗಳಲ್ಲಿ ಹೇಳಲು ಸಾಧ್ಯವೇ ಇಲ್ಲ. ಆದ್ದರಿಂದ ಅಕಾರಾದಿ ವರ್ಣಗಳೇ ಅಕ್ಷರಶಬ್ದವಾಚ್ಯವಾಗುತ್ತವೆಂಬ ಪೂರ್ವಪಕ್ಷವೇ ಹುಟ್ಟುವುದಿಲ್ಲ.

ದ್ರಷ್ಟೃತ್ವಾದಿಗಳು ಶ್ರುತಿಯಲ್ಲಿ ಕೇಳಿಸುತ್ತಿರುವುದರಿಂದ ಅಕಾರಾದಿ ವರ್ಣಗಳನ್ನು ಅಕ್ಷರವೆಂದು ಪೂರ್ವಪಕ್ಷ ಮಾಡಬಾರದೆಂದು ಅದ್ವೈತಿಗಳಿಗೆ ಹೇಳುತ್ತಿದ್ದೀರಿ. ಹಾಗಾದರೆ ಸಿದ್ಧಾಂತಿಗಳೇ ಮುಂದಿನ ಅಧಿಕರಣದಲ್ಲಿ ಶ್ರುತಿಯಲ್ಲಿ ಈಕ್ಷಿತೃತ್ವವು ಶ್ರುತವಾಗಿದ್ದರೂ ಸಹ ಜಡಪ್ರಕೃತಿಯನ್ನು ಪೂರ್ವಪಕ್ಷ ವಿಷಯವನ್ನಾಗಿ ಸ್ವೀಕರಿಸಿದ್ದೀರಲ್ಲವೇ? ಎಂಬ ಪ್ರಶ್ನೆಗೆ ಮುಂದಿನ ಅಧಿಕರಣದಲ್ಲಿಯೇ ಉತ್ತರವನ್ನು ನೀಡುತ್ತೇವೆ.

ಮತ್ತು ಹೀಗೆ ರೂಪಧೇಯವೆಲ್ಲವೂ ನಾಮಧೇಯದಿಂದ ಅನುವಿದ್ಧವಾಗಿ ತೋರುತ್ತವೆಂದು ಪೂರ್ವಪಕ್ಷ ಮಾಡುತ್ತಿದ್ದೀರಿ. ಹಾಗಾದರೆ ಪೃಥಿವ್ಯಾದಿಗಳೆಲ್ಲವೂ ನಾಮಾನುವಿದ್ಧವಾಗಿ ತೋರುತ್ತವೆಂದು ತಿಳಿಸಲು ಮಧ್ಯದಲ್ಲಿ ಆಕಾಶವನ್ನೇಕೆ ಹೇಳಬೇಕು. ನೇರವಾಗಿ ಪೃಥಿವ್ಯಾದಿಗಳೆಲ್ಲವೂ ನಾಮಾನುವಿದ್ಧವಾಗಿ ತೋರುತ್ತವೆಂದು ಹೇಳಿದ್ದರೆ ಸಾಕಾಗಿತ್ತಲ್ಲವೇ? ಈ ಪ್ರಶ್ನೆಗೆ ಅದ್ವೈತಿಗಳಿಂದ ಉತ್ತರಿಸಲಾಗದು.

ಅದ್ವೈತಿಗಳ ಸಿದ್ಧಾಂತವೂ ಸಹ ಅಯುಕ್ತವಾಗಿದೆ. ಏಕೆಂದರೆ 'ಆಕಾಶ ಏವ ತದೋತಂ ಚ' ಎಂಬ ಪೂರ್ವವಾಕ್ಯದಲ್ಲಿ ಮೂರು ಕಾಲದಲ್ಲಿರುವ ಸಕಲ ವಸ್ತುಗಳಿಗೆ ಆಶ್ರಯವನ್ನಾಗಿ ಹೇಳಲ್ಪಟ್ಟ ಆಕಾಶವನ್ನು ಅನಿತ್ಯವಾದ ಭೂತಾಕಾಶವೆಂದು ಹೇಳುವುದು ತಪ್ಪಾಗುತ್ತದೆ.

ಮತ್ತು ಅವಾಚ್ಯನಾದ ನಿರ್ವಿಶೇಷ ಬ್ರಹ್ಮನಲ್ಲಿ 'ನ ಕ್ಷರತಿ ಇತಿ ಅಕ್ಷರಮ್' ಎಂಬ ಅವಯವಶಕ್ತಿರೂಪವಾದ ಯೋಗಾರ್ಥವೂ ಸಹ ಅಯುಕ್ತವಾಗುತ್ತದೆ.

ಮತ್ತು 'ಏತದ್ವೈ ತದಕ್ಷರಂ ಗಾರ್ಗಿ ಬ್ರಾಹ್ಮಣಾ ಅಭಿವದಂತಿ' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ವಾಚ್ಯತ್ವ ಹಾಗೂ ದ್ರಷ್ಟೃತ್ವಾದಿಗಳೆಲ್ಲವೂ ಅಯುಕ್ತವಾಗುತ್ತವೆ.

ಪ್ರಥಮ ಸೂತ್ರದಲ್ಲಿರುವ ಧೃತಿಪದವೂ ಸಹ ಅಯುಕ್ತವಾಗುತ್ತದೆ. ಏಕೆಂದರೆ ಅದ್ವೈತಿಗಳ ಮತದಲ್ಲಿ ಭ್ರಮಾಧಿಷ್ಠಾನತ್ವವನ್ನು ಬಿಟ್ಟು ಮತ್ತೊಂದು ಬಗೆಯ ಧಾರಣವನ್ನು ಬ್ರಹ್ಮನಲ್ಲಿ ಹೇಳಲು ಸಾಧ್ಯವಾಗುವುದಿಲ್ಲ.

ಭ್ರಮಾಧಿಷ್ಠಾನರೂಪವಾದ ಆಶ್ರಯವನ್ನೇ ಹೇಳುತ್ತೇವೆಂದು ಉತ್ತರಿಸಲಾಗದು. ಏಕೆಂದರೆ ಉಪಕ್ರಮದಲ್ಲಿ 'ಆಕಾಶ ಏವ ತದೋತಂ ಚ' ಇತ್ಯಾದಿಯಾಗಿ ಆಕಾಶದಲ್ಲಿ ಸಕಲ ವಸ್ತುಗಳು ಆಶ್ರಿತವಾಗಿವೆಯೆಂದು ಹೇಳಲಾಗಿದೆ. ಮೂರು ಕಾಲಗಳಲ್ಲಿರುವ ಸಕಲ ವಸ್ತುಗಳು ಆಕಾಶದಲ್ಲಿ ಅಧ್ಯಸ್ತವಾಗಲು ಸಾಧ್ಯವಿಲ್ಲ. ಆದ್ದರಿಂದ ಭ್ರಮಾಧಿಷ್ಠಾನವೆಂಬ ಅರ್ಥವನ್ನು ಉಪಕ್ರಮ ವಾಕ್ಯದಲ್ಲಿ ಹೇಳಲು ಸಾಧ್ಯವಿಲ್ಲದ ಕಾರಣ ಮುಂದಿನ ವಾಕ್ಯದಲ್ಲಿಯೂ ಸಹ ಅದನ್ನು ಹೇಳಬಾರದು.

ಎರಡನೆಯ ಸೂತ್ರದಲ್ಲಿ ಹೇಳಲ್ಪಟ್ಟ ಪ್ರಶಾಸನವೂ ಸಹ ಅದ್ವೈತಿಗಳ ಸಿದ್ಧಾಂತದಲ್ಲಿ ಅಯುಕ್ತವಾಗುತ್ತದೆ. ಏಕೆಂದರೆ

ಅಧ್ಯಸ್ತಸ್ಯಾಂಬರಾಂತಸ್ಯ ಹ್ಯಧಿಷ್ಠಾನಾತ್ಮಿಕಾ ಚಿತಿಃ ।
ನ ಶಾಸ್ತ್ರೀ ನಹಿ ಶುಕ್ಯಾದಿ ಶಾಸ್ತಿ ರೂಪ್ಯಾದಿಕಂ ಕ್ವಚಿತ್ ॥೧॥

ಆಕಾಶದ ತನಕ ಸಕಲ ಪದಾರ್ಥಗಳು ಅಧ್ಯಸ್ತವಾಗಿವೆ. ಚಿತ್‌ಸ್ವರೂಪವು ಅಧಿಷ್ಠಾನರೂಪವಾಗಿದೆ. ಇಂತಹ ಅಧಿಷ್ಠಾನರೂಪವಾದ ಚಿತ್‌ಸ್ವರೂಪವು ಅಧ್ಯಸ್ತಪದಾರ್ಥಗಳನ್ನು ಶಾಸನ ಮಾಡಲು ಸಾಧ್ಯವಿಲ್ಲ. ಅಧಿಷ್ಠಾನವಾದ ಶುಕ್ತಿಯು ಅಧ್ಯಸ್ತವಾದ ರಜತಾದಿಗಳನ್ನು ಶಾಸನ ಮಾಡಲು ಎಂದೂ ಸಹ ಹೇಗೆ ಸಾಧ್ಯವಿಲ್ಲವೋ ಅದರಂತೆ.

ಸವಿಶೇಷ ಬ್ರಹ್ಮನು ಪ್ರತಿಪಾದ್ಯನೆಂದು ನೀವೇ ಒಪ್ಪಿಲ್ಲ ನಿರ್ವಿಶೇಷ ಬ್ರಹ್ಮನಲ್ಲಿ ವ್ಯಾವಹಾರಿಕವಾದ ಶಾಸ್ತೃತ್ವವೂ ಸಹ ಇರಲು ಸಾಧ್ಯವಿಲ್ಲ. ಪ್ರಾತಿಭಾಸಿಕವಾದ ಶಾಸ್ತೃತ್ವವನ್ನು ಹೇಳುವುದಾದರೆ ಪ್ರಧಾನದಲ್ಲಿಯೇ ಹೇಳಬಹುದು.

ಈ ವಿಷಯದಲ್ಲಿ ಕಲ್ಪತರುವಿನಲ್ಲಿ ಹೀಗೆ ಉತ್ತರಿಸಲು ಪ್ರಯತ್ನಿಸಲಾಗಿವೆ. ಶಾಸ್ತೃತ್ವವು ಚೇತನನ ಧರ್ಮವಾಗಿದೆ. ಇಂತಹ ಶಾಸ್ತೃತ್ವವನ್ನು ಚೇತನನೇ ಆಗಿರುವ ಬ್ರಹ್ಮನಲ್ಲಿ ಆರೋಪ ಮಾಡಬಹುದೇ ಹೊರತು, ಅಚೇತನವಾದ ಪ್ರಕೃತಿಯಲ್ಲಿ ಆರೋಪ ಮಾಡಲು ಬರುವುದಿಲ್ಲ. ಯಾವರೀತಿಯಾಗಿ ರಾಜನ ಪರಿವಾರದಿಂದ ಕೂಡಿರುವಂತಹ ಮಂತ್ರಿಯಲ್ಲಷ್ಟೇ ರಾಜತ್ವವನ್ನು ಆರೋಪ ಮಾಡಬಹುದೇ ಹೊರತು,

ಯಾವುದೇ ರೀತಿಯಲ್ಲಿ ಸಾದೃಶ್ಯವಿಲ್ಲದ ಗೋಡೆ ಮೊದಲಾದವುಗಳಲ್ಲಿ ರಾಜತ್ವವನ್ನು ಆರೋಪ ಮಾಡಲು ಬರುವುದಿಲ್ಲವೋ ಅದರಂತೆ.

ಈ ಉತ್ತರವೂ ಸಹ ಸರಿಯಲ್ಲ. ಅದ್ವೈತಿಗಳ ಮತದಲ್ಲಿ ಅಧಿಷ್ಠಾನ ಹಾಗೂ ಅಧ್ಯಸ್ತಗಳಿಗೆ ಸಾದೃಶ್ಯವಿರಬೇಕೆಂಬ ನಿಯಮವೇ ಇರುವುದಿಲ್ಲ. ಮತ್ತು ಮಂತ್ರಿಯಲ್ಲಿ ರಾಜನ ಸಾದೃಶ್ಯವಿರುವಂತೆ ನಿರ್ವಿಶೇಷ ಬ್ರಹ್ಮನಲ್ಲಿ ಜ್ಞಾತೃರೂಪನಾದ ಚೇತನನ ಸಾದೃಶ್ಯವೇ ಇರುವುದಿಲ್ಲ.

ವಿಚಾರ ಮಾಡಿದರೆ ಶಾಸ್ತೃತ್ವವನ್ನು ಪ್ರಧಾನದಲ್ಲಿ ಆರೋಪ ಮಾಡುವುದೇ ಅದ್ವೈತಿಗಳಿಗೆ ಸುಲಭ. ಏಕೆಂದರೆ ಶಾಸನಕರ್ತೃತ್ವವೆಂಬ ಶಾಸ್ತೃತ್ವವು ಜಡವಾದ ಅಂತಃಕರಣದ ಧರ್ಮವಾಗಿದೆ. ಜಡವೇ ಆಗಿರುವಂತಹ ಪ್ರಧಾನದಲ್ಲಿ ಇಂತಹ ಶಾಸ್ತೃತ್ವವನ್ನು ಆರೋಪ ಮಾಡುವುದು ಸುಲಭ. ಏಕೆಂದರೆ ಜಡತ್ವ ಧರ್ಮದಿಂದ ಎರಡಕ್ಕೂ ಸಾದೃಶ್ಯವಿದೆ.

ಅದ್ವೈತಿಗಳ ಮೂರನೆಯ ಸೂತ್ರವ್ಯಾಖ್ಯಾನ ಹೀಗಿದೆ - 'ಅನ್ಯಭಾವವ್ಯಾವೃತ್ತೇಶ್ಚ' ಎಂದರೆ 'ಬ್ರಹ್ಮನಿಗಿಂತ ಅನ್ಯವಾದ ಪ್ರಧಾನ, ಜೀವ ಮೊದಲಾದ ಯಾವುದೇ ಪದಾರ್ಥಗಳೂ ಸಹ ಅಕ್ಷರಶಬ್ದ ವಾಚ್ಯವಾಗುವುದಿಲ್ಲ' ಎಂಬುದಾಗಿ ಶ್ರುತಿಯು ಬ್ರಹ್ಮನಿಗಿಂತ ಭಿನ್ನವಾದದ್ದು ಅಕ್ಷರವಾಗಬಹುದಲ್ಲವೇ? ಎಂಬ ಆಶಂಕೆಯನ್ನು ವ್ಯಾವೃತ್ತಿ ಮಾಡುತ್ತಿದೆ. ಏಕೆಂದರೆ ದ್ರಷ್ಟೃತ್ವಾದಿಗುಣಗಳು ಪ್ರಧಾನಾದಿಗಳಲ್ಲಿ ಅಸಂಭಾವಿತವಾದ್ದರಿಂದ ಎಂದು.

ಇದೂ ಸಹ ತಪ್ಪು. ಹೀಗೆ ಮೂರನೆಯ ಸೂತ್ರವನ್ನು ವ್ಯಾಖ್ಯಾನಿಸುವುದಾದರೆ ಹಿಂದಿನೆರಡು ಸೂತ್ರಗಳೇ, ಅನಾವಶ್ಯಕ. ಈ ಸೂತ್ರವು ದ್ರಷ್ಟೃತ್ವಾದಿ ಧರ್ಮಗಳಿಂದ ಪ್ರಧಾನಾದಿಗಳನ್ನು ವ್ಯಾವೃತ್ತಿ ಮಾಡುವಂತೆ 'ಅಂಬರಾಂತಧೃತಿ' 'ಪ್ರಶಾಸನ'ಗಳೆಂಬ ಧರ್ಮಗಳಿಂದಲೂ ಸಹ ವರ್ಣಾದಿಗಳನ್ನು ವ್ಯಾವೃತ್ತಿ ಮಾಡುತ್ತದೆಂದು ಹೇಳಬಹುದು. ಸುಲಭವಾಗಿ ಹೀಗೆಯೇ ಹೇಳಲು ಬರುವಾಗ ಹಿಂದಿನೆರಡು ಸೂತ್ರಗಳು ವ್ಯರ್ಥವೇ ಆಗುತ್ತವೆ. ಆದ್ದರಿಂದ ಅದ್ವೈತಿಗಳ ಅಧಿಕರಣ ಶರೀರವಾಗಲೀ ಸೂತ್ರವ್ಯಾಖ್ಯಾನಗಳಾಗಲೀ ಅತ್ಯಂತ ಅಯುಕ್ತವಾಗಿವೆಯೆಂದು ಸಿದ್ಧವಾಯಿತು.

ಅಕ್ಷರ ಪ್ರಕರಣದಲ್ಲಿರುವ 'ನಾನ್ಯದತೋಽಸ್ತಿ ದ್ರಷ್ಟೃ' ಎಂಬ ವಾಕ್ಯವನ್ನು ನೋಡಿದಾಗ ಬ್ರಹ್ಮನನ್ನು ಬಿಟ್ಟು ಮತ್ತೊಬ್ಬ ದ್ರಷ್ಟೃಪುರುಷನಿಲ್ಲವೆಂದು ಹೇಳಿದರೆ, ಜೀವಬ್ರಹ್ಮರಿಗೆ ಐಕ್ಯವನ್ನು ಹೇಳಿದಂತೆ ತೋರುತ್ತದೆ. ಆದರೆ ಇದನ್ನು ನಿರಾಕರಿಸಿ ನ್ಯಾಯಮೃತಾದಿ ಗ್ರಂಥಗಳಲ್ಲಿ ಸ್ವತಂತ್ರವಾದ ದ್ರಷ್ಟೃತ್ವವಿಲ್ಲವೆಂಬ ಅಭಿಪ್ರಾಯದಿಂದಷ್ಟೇ ಶ್ರುತಿಯು ಹೀಗೆ ಹೇಳುತ್ತಿದೆಯೆಂದು ವ್ಯಾಖ್ಯಾನಿಸಿದ್ದೇವೆ.

ಪ್ರತಿಯೊಂದು ಅಧಿಕರಣಗಳಂತೆ ಈ ಅಧಿಕರಣದಲ್ಲಿಯೂ ಸಹ ಅದ್ವೈತಿಗಳಿಗೆ 'ಅನ್ಯಭಾವವ್ಯಾವೃತ್ತೇಃ' ಎಂಬ ಸೂತ್ರದಿಂದ ಬ್ರಹ್ಮನಲ್ಲಿ ಜೀವನ ದೆಸೆಯಿಂದ ಭೇದವನ್ನೇ ಒಪ್ಪಿದ್ದಾರೆ. ಆದ್ದರಿಂದ ಅವರಿಗೆ ಇಷ್ಟವಾದ ಅಭೇದವು ಈ ಅಧಿಕರಣದಿಂದಲೂ ಸಿದ್ಧವಾಗಲಿಲ್ಲ.

ಅದ್ವೈತಮತ ನಿರಾಕರಣೆಯಿಂದಲೇ ರಾಮಾನುಜಮತವನ್ನೂ ಸಹ ನಿರಾಕರಿಸಿದಂತಾಯಿತು. ಜಡವಾದ ಪ್ರಧಾನವೇ ಅಕ್ಷರಶಬ್ದವಾಚ್ಯವಾಗಿದೆಯೆಂದು ಇವರ ಪೂರ್ವಪಕ್ಷ. ಆದರೆ ಜಡವಾದ ಪ್ರಧಾನಕ್ಕೆ ಶಾಸ್ತೃತ್ವವಾಗಲೀ, ದ್ರಷ್ಟೃತ್ವಾದಿಗಳಾಗಲೀ ಅಯುಕ್ತವಾಗುವ ಕಾರಣ ಅದ್ವೈತಿಗಳಂತೆ ಇವರ ಪೂರ್ವಪಕ್ಷವೂ ಸಹ ಉದಯವಾಗಲು ಸಾಧ್ಯವಿಲ್ಲ.

ಮತ್ತು ಶ್ರುತಿಯಲ್ಲಿರುವ ಆಕಾಶಶಬ್ದಕ್ಕೆ ಪ್ರಧಾನ ಪರತ್ವವನ್ನು ಅಂಗೀಕರಿಸಿ ಸೂತ್ರದಲ್ಲಿರುವ ಅಂಬರಶಬ್ದಕ್ಕೆ ಭೂತಾಕಾಶಪರತ್ವವನ್ನು ಸಮರ್ಥಿಸುತ್ತಾರೆ. ಆದ್ದರಿಂದ 'ಅಂಬರಾಂತಧೃತೇಃ' ಎಂದರೆ ಅಂಬರ = ಭೂತಾಕಾಶಕ್ಕೆ, ಅಂತಃ = ಕಾರಣವಾದ ಪ್ರಕೃತಿಯೆಂಬರ್ಥವನ್ನು ಒಪ್ಪಿ, ಅಂತಹ ಪ್ರಕೃತಿಗೂ ಸಹ ಧಾರಕನಾಗಿರುವುದರಿಂದ ಎಂಬರ್ಥವನ್ನು ಹೇಳುತ್ತಾರೆ.

ಇದೂ ಸಹ ತಪ್ಪು. ಶ್ರುತಿಗೆ ಅನುಸಾರಿಯಾದ ಅರ್ಥವನ್ನೇ ಸೂತ್ರಕ್ಕೆ ಹೇಳುವುದು ನ್ಯಾಯಸಮ್ಮತವಾಗಿದೆ. ಶ್ರುತಿಯಲ್ಲಿ ಪ್ರಧಾನಪರತ್ವವನ್ನು ಒಪ್ಪಿ, ಸೂತ್ರದಲ್ಲಿ ಭೂತಾಕಾಶಪರತ್ವವನ್ನು ಒಪ್ಪುವುದು ಸರಿಯಾಗುವುದಿಲ್ಲ.

'ಆಕಾಶ' ಪದಕ್ಕೆ ಚಿತ್‌ಪ್ರಕೃತಿಯೆಂಬರ್ಥವನ್ನು ಒಪ್ಪಿದಾಗಲೂ ಈ ದೋಷವು ಸಮಾನವಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ 'ಅಂಬರಮ್ ಅಂತಃ ಯಸ್ಯ' ಎಂಬ ವ್ಯುತ್ಪತ್ತಿಯಿಂದ ಪೃಥಿವ್ಯಾದಿ ಸಕಲ ಪದಾರ್ಥಗಳಿಗೆ ಅಂಬರಾಂತ ಪದವು ವಾಚಕವಾಗಿದೆ. ಅಂದರೆ ಪೃಥಿವ್ಯಾದಿಗಳೆಲ್ಲವೂ ಪ್ರಕೃತಿಯು ಆಶ್ರಯವಾಗಿದೆ. ಅಂತಹ ಪ್ರಕೃತಿಗೆ ಬ್ರಹ್ಮನು ಆಶ್ರಯನಾಗಿದ್ದಾನೆಂದು ತಿಳಿಸುವುದಕ್ಕಾಗಿ 'ಅಂತ' ಎಂಬ ಪದವು ಸಾರ್ಥಕವಾಗಿದೆ. ರಾಮಾನುಜರಿಗೆ ಈ ಬಗೆಯಲ್ಲಿ ವ್ಯಾಖ್ಯಾನಿಸಲು ಸಾಧ್ಯವಿಲ್ಲದ ಕಾರಣ, ಅವರ ಪ್ರಕಾರ 'ಅಂತ' ಪದವು ವ್ಯರ್ಥವಾಗುತ್ತದೆ. ನಮ್ಮಂತೆ ವ್ಯಾಖ್ಯಾನಿಸಿದಾಗ 'ಪೃಥಿವ್ಯಾದಿ ಪ್ರಕೃತ್ಯಂತಂ' ಎಂಬ ಸ್ಮೃತಿಯೂ ಸಹ ಸೂತ್ರಕ್ಕೆ ಅನುಸಾರಿಯಾಗಿದೆಯೆಂದು ತಿಳಿಸಿದಂತಾಗುತ್ತದೆ.

ಇಲ್ಲಿಗೆ ಅಕ್ಷರಾಧಿಕರಣದಲ್ಲಿ ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ವಪ್ರದೀಪ, ತತ್ವಪ್ರಕಾಶಿಕಾ, ಭಾವದೀಪ ಇವುಗಳ ಅನುವಾದವು ಹಾಗೂ ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆಯು ಸಮಾಪ್ತವಾಯಿತು

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥

ಸದಧಿಕರಣ

ಬ್ರಹ್ಮಸೂತ್ರ, ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ತ್ವಪ್ರದೀಪ, ತತ್ತ್ವಪ್ರಕಾಶಿಕಾ, ಭಾವದೀಪ

ವಿಶೇಷವಿಚಾರದೊಂದಿಗೆ ಕನ್ನಡಭಾಷೆಯಲ್ಲಿ ಅನುವಾದ

ಮತ್ತು

ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆ

॥ ಹರಿಃ ಓಂ ॥

॥ ಶ್ರೀವೇದವ್ಯಾಸಾಯ ನಮಃ ॥

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಗುರುಭ್ಯೋ ನಮಃ ॥

॥ ಶ್ರೀಮದ್ರಾಘವೇಂದ್ರತೀರ್ಥಗುರುಭ್ಯೋ ನಮಃ ॥

॥ ಶ್ರೀಗುರುಭ್ಯೋ ನಮಃ ॥

ಸದಧಿಕರಣ

ಬ್ರಹ್ಮಸೂತ್ರ

।। अथ सदधिकरणम् ।।

'ಈಕ್ಷತಿಕರ್ಮವ್ಯಪದೇಶಾತ್ಸಃ' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – ।। ईक्षतिकर्मव्यपदेशात्सः ।। १३ ।।

ಸೂತ್ರಾರ್ಥ - 'ಸದೇವ ಸೋಮ್ಯೇದಮಗ್ರ ಆಸೀತ್' ಇತ್ಯಾದಿ ಶ್ರುತಿಯಲ್ಲಿರುವ 'ಸತ್' ಎಂಬ ಶಬ್ದದಿಂದ ಪ್ರತಿಪಾದ್ಯನಾದವನು ಭಗವಂತನೇ ಆಗಿದ್ದಾನೆ ಹೊರತು ಪ್ರಧಾನವಲ್ಲ. ಏಕೆಂದರೆ 'ತದೈಕ್ಷತ' ಎಂಬುದಾಗಿ ಜ್ಞಾನಸಹಿತವಾದ ಸೃಷ್ಟಿಯನ್ನುಂಟುಮಾಡುವಿಕೆಯನ್ನು ಶ್ರುತಿಯು ಹೇಳುತ್ತಿರುವುದರಿಂದ.

ಅರ್ಥ - ಸದೇವ' ಇತ್ಯಾದಿಯಾದ ಛಾಂದೋಗ್ಯದ ಪ್ರಕರಣದಲ್ಲಿರುವ 'ಸತ್' ಮೊದಲಾದ ಶಬ್ದಗಳಿಂದ ಪ್ರತಿಪಾದ್ಯನಾದವನು, ಸಃ = ವಿಷ್ಣುವೇ ಹೊರತು ಪ್ರಧಾನವಲ್ಲ. ಏಕೆಂದರೆ ಈಕ್ಷತಿಕರ್ಮವ್ಯಪದೇಶಾತ್ = 'ತದೈಕ್ಷತ' ಎಂಬುದಾಗಿ ಅದೇ ಛಾಂದೋಗ್ಯವು ಚೇತನನಲ್ಲಿಮಾತ್ರ ಇರುವ 'ಐಕ್ಷತ' ಶಬ್ದದಿಂದ ಉಪಲಕ್ಷಿತವಾದ ದರ್ಶನಕ್ರಿಯೆಯನ್ನು ಹೇಳುತ್ತಿರುವುದರಿಂದ.

॥ ಶ್ರೀವೇದವ್ಯಾಸದೇವರಿಂದ ರಚಿಸಲ್ಪಟ್ಟ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ
ಸದಧಿಕರಣವು ಸಮಾಪ್ತವಾಯಿತು ॥

ಜಗದ್ಗುರು ಶ್ರೀಮಧ್ವಾಚಾರ್ಯರಿಂದ ವಿರಚಿತವಾದ

ಬ್ರಹ್ಮಸೂತ್ರಭಾಷ್ಯ

ಜ್ಞಾನಪೂರ್ವಕ ಸೃಷ್ಟಿಕ್ರಿಯೆಯುಳ್ಳ ಶ್ರೀಹರಿಯಲ್ಲಿ ಸ್ಥಾನ ಸಮನ್ವಯ

ಬ್ರಹ್ಮಸೂತ್ರಭಾಷ್ಯಮ್ – 'सदेव सोम्येदमग्र आसीत्' (छा. ६-२-१.) इत्यादिना सतः स्रष्टृत्वमुच्यते ।।

ಅನುವಾದ - 'ಸದೇವ ಸೋಮ್ಯ ಇದಮಗ್ರ ಆಸೀತ್' ಇತ್ಯಾದಿಯಾದ ಛಾಂದೋಗ್ಯ ಉಪನಿಷತ್ತಿನಲ್ಲಿ 'ಸತ್' ಎಂಬ ತತ್ವವು ಜಗತ್ತನ್ನು ಸೃಷ್ಟಿ ಮಾಡುತ್ತದೆ ಎಂದು ಹೇಳಲಾಗಿದೆ.

ಪ್ರತಿಪದಾರ್ಥ -- ಈ ಅಧಿಕರಣದಲ್ಲಿ ಅನೇಕ ಪ್ರಕರಣ ಸ್ವರೂಪವಾದ 'ಸದೇವ' ಇವೇ ಮೊದಲಾದ ಸ್ಥಾನದ ಸಮನ್ವಯವನ್ನು ಮಾಡಲಾಗಿದೆ. ಪ್ರಕೃತ ಶ್ರುತ್ಯಾದಿಸಂಗತಿ ಹಾಗೂ ವಿಷಯವಾಕ್ಯಗಳನ್ನು ತೋರಿಸುತ್ತಾ ವಿಷಯಾದಿಗಳನ್ನೂ ಸೂಚಿಸುತ್ತಿದ್ದಾರೆ -

ಹೇ ಸೋಮ್ಯ = ಎಲೈ ಸೋಮಪಾನಕ್ಕೆ ಅರ್ಹನಾದವನೇ, ಇದಂ = ಪ್ರಸಿದ್ಧವಾದ, ಸದೇವ = 'ಸತ್' ಎಂಬ ತತ್ವವೇ, ಅಗ್ರೇ = ಸೃಷ್ಟಿಯ ಮೊದಲು, ಆಸೀತ್ = ಇದ್ದಿತು, ಇತ್ಯಾದಿನಾ = ಇವೇ ಮೊದಲಾದ ಛಾಂದೋಗ್ಯದ ವಾಕ್ಯಗಳಿಂದ, ಸತಃ = 'ಸತ್' ಎಂಬ ತತ್ವಕ್ಕೆ, ಸ್ರಷ್ಟೃತ್ವಂ = ಮತ್ತೊಬ್ಬರ ಅಧೀನವಾಗದೇ ಸೃಷ್ಟಿ ಮಾಡುವಿಕೆಯು, ಉಚ್ಯತೇ = ಹೇಳಲ್ಪಟ್ಟಿದೆ.

'ಸತ್' ಎಂದರೆ ವಿಷ್ಣುವಲ್ಲವೆಂದು ಪೂರ್ವಪಕ್ಷ

ಬ್ರಹ್ಮಸೂತ್ರಭಾಷ್ಯಮ್ – तच्च सत् 'बहु स्यां प्रजायेय' (छा. ६-२-३) इति परिणाम प्रतीतेर्न विष्णुः ।

ಅನುವಾದ - ಅಂತಹ 'ಸತ್' ಪದಾರ್ಥವು ವಿಷ್ಣುವಾಗಲು ಸಾಧ್ಯವಿಲ್ಲ. ಏಕೆಂದರೆ ಇಲ್ಲಿ 'ಬಹು ಸ್ಯಾಂ ಪ್ರಜಾಯೇಯ' ಎಂಬುದಾಗಿ 'ನಾನೇ ಬಹುರೂಪವಾಗಿ ಹುಟ್ಟುತ್ತೇನೆ' ಎಂದು ವಿಕಾರವನ್ನು ಹೊಂದುವಿಕೆಯು ಶ್ರುತವಾಗುತ್ತಿದೆ. ವಿಷ್ಣುವು ವಿಕಾರವನ್ನು ಹೊಂದದ ಕಾರಣ ಅವನನ್ನು 'ಸತ್' ಎಂದು ಹೇಳಲು ಸಾಧ್ಯವಿಲ್ಲ.

ಪ್ರತಿಪದಾರ್ಥ -- ಯುಕ್ತಿಬದ್ಧವಾಗಿ ಪೂರ್ವಪಕ್ಷವನ್ನು ಮಾಡುತ್ತಿದ್ದಾರೆ-

ತಚ್ಚ ಸತ್ = ಅಂತಹ ಸತ್‌ಪದಾರ್ಥವು, ನ ವಿಷ್ಣುಃ = ವಿಷ್ಣುವಾಗಲು ಸಾಧ್ಯವಿಲ್ಲ, ಬಹು ಸ್ಯಾಂ ಪ್ರಜಾಯೇಯ = ಬಹುರೂಪವನ್ನು ತಾಳುತ್ತೇನೆ ಎಂದು, ಪರಿಣಾಮಪ್ರತೀತೇಃ = ವಿಕಾರವೆಂಬ ಅರ್ಥವು ತೋರುತ್ತಿರುವುದರಿಂದ.

ಯಾವುದೇ ವಿಕಾರವಿಲ್ಲದ್ದರಿಂದ ಸತ್ ಎನಿಸಲಾರ

ब्रह्मसूत्रभाष्यम् – स हि 'अविकारः सदा शुद्धो नित्य आत्मा सदा हरिः' इत्यादिनाऽविकारः प्रसिद्ध इति ।

ಅನುವಾದ - ವಿಷ್ಣುವಿಗೆ ವಿಕಾರವಿಲ್ಲ . ಏಕೆಂದರೆ, ವಿಷ್ಣುವು 'ಅವಿಕಾರಃ ಸದಾ ಶುದ್ಧೋ ನಿತ್ಯ ಆತ್ಮಾ ಸದಾ ಹರಿಃ' ಎಂಬ ಪ್ರಮಾಣದಂತೆ ಯಾವುದೇ ವಿಕಾರವಿಲ್ಲದವನೆಂದು ಪ್ರಸಿದ್ಧನಾಗಿದ್ದಾನೆ.

ಪ್ರತಿಪದಾರ್ಥ -- ಶ್ರುತಿಯಲ್ಲಿ ವಿಕಾರಿತ್ವವು ಶ್ರುತವಾಗಿದ್ದರೂ ವಿಷ್ಣುವೇ 'ಸತ್' ಪದಾರ್ಥನೆಂದು ಏಕೆ ಹೇಳಬಾರದು? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ. ಹಿ = ಯಾವ ಕಾರಣದಿಂದ, ಸಃ = ಆ ವಿಷ್ಣುವು, ಅವಿಕಾರಃ = ವಿಕಾರರಹಿತನು, ಸದಾ = ಯಾವಾಗಲೂ, ಶುದ್ಧಃ = ಪ್ರಕೃತಿ ಸಂಬಂಧವಿಲ್ಲದವನು, ನಿತ್ಯಃ = ನಾಶರಹಿತನು, ಸದಾ = ಯಾವಾಗಲೂ, ಆತ್ಮಾ = ಸರ್ವಾಂತರ್ಯಾಮಿಯು, ಹರಿಃ = ಪಾಪಪರಿಹಾರಕನು, ಇತ್ಯಾದಿನಾ = ಇವೇ ಮೊದಲಾದ ಪ್ರಮಾಣ-ಗಳಿಂದ, ಅವಿಕಾರಃ = ವಿಕಾರವಿಲ್ಲದವನೆಂದು, ಪ್ರಸಿದ್ಧಃ = ಪ್ರಸಿದ್ಧ-ನಾಗಿದ್ದಾನೆ, ಆದ್ದರಿಂದಲೇ ವಿಷ್ಣು ಸತ್‌ಶಬ್ದದಿಂದ ವಾಚ್ಯನಾಗುವುದಿಲ್ಲ. ಇತಿ = ಇಷ್ಟು ಪೂರ್ವಪಕ್ಷ.

'ಸತ್' ಶಬ್ದದಿಂದ ಪ್ರತಿಪಾದ್ಯನಾದವನು ಮಹಾವಿಷ್ಣುವೆಂದು ಸಿದ್ಧಾಂತ

ब्रह्मसूत्रभाष्यम् – अतो ब्रवीति -

।। ईक्षतिकर्मव्यपदेशात् सः ।। १३।।

'तदैक्षत' इतीक्षतिकर्मव्यपदेशात् स एव विष्णुरत्रोच्यते ।

ಅನುವಾದ - ಈ ಪೂರ್ವಪಕ್ಷವನ್ನು ನಿರಾಕರಿಸುವುದಕ್ಕಾಗಿ, ಸೂತ್ರಕಾರರು 'ಈಕ್ಷತಿಕರ್ಮವ್ಯಪದೇಶಾತ್ ಸಃ' ಎಂಬ ಸೂತ್ರವನ್ನು ರಚನೆ ಮಾಡಿದ್ದಾರೆ.

'ತದೈಕ್ಷತ' ಎಂಬುದಾಗಿ ಶ್ರುತಿಯಲ್ಲಿ ನೋಡುವಿಕೆ ಎಂಬ ಕ್ರಿಯೆಯನ್ನು ಹೇಳಿರುವುದರಿಂದ 'ಸತ್' ಎಂಬ ಶಬ್ದದಿಂದ ಪ್ರತಿಪಾದ್ಯನಾದವನು ವಿಷ್ಣುವೇ ಎಂದು ನಿರ್ಣಯವಾಗುತ್ತದೆ.

ಪ್ರತಿಪದಾರ್ಥ -- ಸಿದ್ಧಾಂತವನ್ನು ಸ್ಥಾಪನೆ ಮಾಡುವುದಕ್ಕಾಗಿ ಸೂತ್ರವನ್ನು ಪಠಿಸುತ್ತಾ ವ್ಯಾಖ್ಯಾನಿಸುತ್ತಿದ್ದಾರೆ. ಅತಃ = ಈ ಪೂರ್ವಪಕ್ಷವನ್ನು ನಿರಾಕರಿಸುವುದಕ್ಕಾಗಿ, ಬ್ರವೀತಿ = ಸೂತ್ರಕಾರರು ಹೇಳುತ್ತಿದ್ದಾರೆ. ಸಃ = 'ಸತ್' ಶಬ್ದದಿಂದ ವಾಚ್ಯನಾದವನು ವಿಷ್ಣುವೇ ಆಗಿದ್ದಾನೆ. ಏಕೆಂದರೆ ಈಕ್ಷತಿಕರ್ಮವ್ಯಪದೇಶಾತ್ = ಚೇತನನಲ್ಲಿರುವ ದರ್ಶನ ಎಂಬ ಕ್ರಿಯೆಯನ್ನು ಹೇಳುತ್ತಿರುವುದರಿಂದ.

ತತ್ = 'ತತ್' ಶಬ್ದದಿಂದ ಪ್ರತಿಪಾದ್ಯವಾದ ಪದಾರ್ಥವು, ಐಕ್ಷತ = ನೋಡಿತು, ಇತಿ = ಹೀಗೆ, ಈಕ್ಷತಿಕರ್ಮವ್ಯಪದೇಶಾತ್ = ನೋಡುವಿಕೆ ಎಂಬ ಕ್ರಿಯೆಯನ್ನು ಹೇಳಿದ್ದರಿಂದ, ಸಃ = 'ಸತ್' ಎಂಬ ಶಬ್ದದಿಂದ ಪ್ರತಿಪಾದ್ಯನಾದವನು, ವಿಷ್ಣುರೇವ = ವಿಷ್ಣುವೇ ಎಂದು, ಅತ್ರ = ಛಾಂದೋಗ್ಯ ಉಪನಿಷತ್ತಿನಲ್ಲಿ, ಉಚ್ಯತೇ = ಹೇಳಲಾಗಿದೆ.

ಸ್ವತಂತ್ರದ್ರಷ್ಟೃತ್ವವು ವಿಷ್ಣುವಿನ ಅಸಾಧಾರಣ ಲಕ್ಷಣ

ब्रह्मसूत्रभाष्यम् – 'नान्योऽतोऽस्ति द्रष्टा' (बृ. ५-७-२३) 'नान्यदतोऽस्ति द्रष्टृ' (बृ. ५-८-११) इत्यादिना तस्यैव हि तल्लक्षणम् ।

ಅನುವಾದ - ವಿಷ್ಣುವನ್ನು ಬಿಟ್ಟು ಮತ್ತೊಂದು ಪದಾರ್ಥವು ಸ್ವತಂತ್ರವಾಗಿ ಏನನ್ನೂ ಸಹ ಸೃಷ್ಟಿ ಮಾಡುವುದಕ್ಕಾಗಿ ನೋಡಲು ಸಾಧ್ಯವಿಲ್ಲ. ಇವನಿಗಿಂತ ಭಿನ್ನವಾದ ಮತ್ತೊಂದು ವಸ್ತುವು, ಸ್ವತಂತ್ರವಾದ ದ್ರಷ್ಟೃವಾಗಿ ಇರುವುದಿಲ್ಲ ಎಂಬುದಾಗಿ ಬೃಹದಾರಣ್ಯಕೋಪನಿಷತ್ತಿನಲ್ಲಿ ಅನೇಕಬಾರಿ ಹೇಳಿದ್ದರಿಂದ ಸ್ವತಂತ್ರದ್ರಷ್ಟೃತ್ವವು ವಿಷ್ಣುವಿನ ಅಸಾಧಾರಣಲಕ್ಷಣವೆಂದು ತಿಳಿಯುತ್ತದೆ.

ಪ್ರತಿಪದಾರ್ಥ -- ನಿಯಮನ (ಈಶನ) ಕರ್ತೃತ್ವವು ವಿಷ್ಣುವಿನಲ್ಲಿ ಹೇಗೆ ಇದೆಯೋ ಅದರಂತೆ ಪ್ರಧಾನಾದಿಗಳಲ್ಲಿಯೂ ಸಹ ಏಕಿರಬಾರದು ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ. ಅತಃ = ವಿಷ್ಣುವಿನ ದೆಸೆಯಿಂದ, ಅನ್ಯಃ = ಭಿನ್ನವಾದ ಮತ್ತೊಂದು ಪದಾರ್ಥವು, ದ್ರಷ್ಟಾ= ಸೃಷ್ಟಿಗೋಸ್ಕರ ಸ್ವತಂತ್ರವಾಗಿ ನೋಡುವಂತಹುದು, ನ = ಇರುವುದಿಲ್ಲ, ಮತ್ತು ನಾನ್ಯದತಃ ಅಸ್ತಿ ದ್ರಷ್ಟೃ= ಇವನಿಗಿಂತ ನೋಡಲು ಅರ್ಹವಾದ ವಸ್ತುವು ಮತ್ತೊಂದು ಇರುವುದಿಲ್ಲ, ಇತ್ಯಾದಿನಾ = ಇವೇ ಮೊದಲಾದ ವಾಕ್ಯಗಳಿಂದ, ತಸ್ಯೈವ = ಆ ವಿಷ್ಣುವಿಗೇ, ತತ್ = ಆ ಸ್ವತಂತ್ರದ್ರಷ್ಟೃತ್ವವು, ಲಕ್ಷಣಂ = ಲಿಂಗವೆಂದು, ಹಿ = ಪ್ರಸಿದ್ಧವಾಗಿದೆ.

ವಿಕಾರವಿಲ್ಲದಿದ್ದರೂ ಬಹುಭವನವುಳ್ಳವನು

ब्रह्मसूत्रभाष्यम् – बहुत्वं चाविकारेणैवोक्तम् 'अजायमानो बहुधा विजायते' (तै. आ. ३-१३-१) इति ।।

।। इति सदधिकरणम् ।। ४ ।।

ಅನುವಾದ - ಬಹುತ್ವವಾದರೂ ಸಹ ವಿಕಾರವಿಲ್ಲದೇ ವಿಷ್ಣುವಿನಲ್ಲೂ ಉಪಪನ್ನವಾಗುತ್ತದೆ. 'ಅಜಾಯಮಾನೋ ಬಹುಧಾ ವಿಜಾಯತೇ' ಎಂಬ ತೈತ್ತಿರೀಯವು ವಿಕಾರವಿಲ್ಲದೇ ಭಗವಂತನು ಅನೇಕರೂಪಗಳನ್ನು ತಾಳುತ್ತಾನೆಂದು ಹೇಳುತ್ತಿದೆ.

ಪ್ರತಿಪದಾರ್ಥ -- ವಿಷ್ಣುವಿಗೆ ವಿಕಾರವಿಲ್ಲದ ಕಾರಣ ಬಹುಭವನವೆಂಬ ವಿಕಾರವನ್ನು ಹೇಳಲು ಹೇಗೆ ಸಾಧ್ಯ ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ-

ಬಹುತ್ವಂ ಚ = ಬಹುರೂಪತ್ವವಾದರೂ ಸಹ, ಅವಿಕಾರೇಣೈವ = ಭಗವಂತನಲ್ಲಿ ವಿಕಾರವಿಲ್ಲದೆಯೇ, ಉಕ್ತಮ್ = ಹೇಳಲ್ಪಟ್ಟಿದೆ,

ಅಜಾಯಮಾನಃ = ಯಾವುದೇ ಬಗೆಯ ಹುಟ್ಟಿಲ್ಲದವನಾದರೂ, ಬಹುಧಾ = ಅನೇಕ ರೂಪಗಳಿಂದ, ವಿಜಾಯತೇ = ಅಭಿವ್ಯಕ್ತನಾಗುತ್ತಾನೆ, ಇತಿ = ಹೀಗೆ ಹೇಳಿರುವುದರಿಂದ, 'ಸತ್' ಎಂಬ ಪದದಿಂದ ಪ್ರತಿಪಾದ್ಯನಾದವನು ವಿಷ್ಣುವೇ ಎಂದು ನಿರ್ಣಯವಾಗುತ್ತದೆ.

॥ ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ವಿರಚಿತವಾದ ಬ್ರಹ್ಮಸೂತ್ರಭಾಷ್ಯದ ಕನ್ನಡಾನುವಾದದಲ್ಲಿ ಸದಧಿಕರಣವು ಸಮಾಪ್ತವಾಯಿತು ॥

ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ

ಸತ್ತರ್ಕದೀಪಾವಳಿ

'ಸದೇವ ಸೋಮ್ಯೇದಮಗ್ರ ಆಸೀತ್' ಎಂಬ ವಾಕ್ಯವು ಯಾರನ್ನು ಪ್ರತಿಪಾದಿಸುತ್ತಿದೆ ?

ಸತ್ತರ್ಕದೀಪಾವಳಿಃ – ।। ಈಕ್ಷತಿಕರ್ಮವ್ಯಪದೇಶಾತ್ಸಃ ।।

ಸದೇವಸೋಮ್ಯೇತ್ಯಾದೇರಯಮರ್ಥಃ । 'ಸದೇವಸೋಮ್ಯೇದಮಗ್ರ ಆಸೀತ್' 'ಏಕಮೇವಾದ್ವಿತೀಯಂ' 'ತದೈಕ್ಷತ ಬಹುಸ್ಯಾಂ ಪ್ರಜಾಯೇಯೇತಿ' 'ತತ್ತೇಜೋऽಸೃಜತ' ಇತ್ಯಾದಿಶ್ರುತ್ಯಾ ಯತ್ ಜಗತ್ಸ್ರಷ್ಟೃ ಶ್ರೂಯತೇ ತತ್ಪ್ರಧಾನಂ ಭವೇತ್ । ಬಹುಧಾ ಜಾಯಮಾನತ್ವೇನೋಚ್ಯಮಾನತ್ವಾತ್ । ಬಹುಧಾ ಪರಿಣಾಮಸ್ತು ಜಡರೂಪಪ್ರಧಾನಧರ್ಮೋ ನ ವಿಷ್ಣುಧರ್ಮಃ । 'ಅವಿಕಾರಃ ಶುದ್ಧಃ' ಇತ್ಯಾದಿವಚನೈಃ ವಿಷ್ಣೋರವಿಕಾರತ್ವೇನೋಕ್ತತ್ವಾದಿತಿ ಚೇನ್ಮೈವಮ್। ವಿಷ್ಣುರೇವಾತ್ರ ಸಚ್ಛಬ್ದೇನೋಚ್ಯತೇ ನ ಪ್ರಧಾನಮ್ ಈಕ್ಷಿತೃತ್ವೇನೋಚ್ಯಮಾನತ್ವಾತ್ । ಈಕ್ಷಿತೃತ್ವಂ ಮುಖ್ಯಂ ನ ವಿಷ್ಣ್ವನ್ಯಸ್ಯ ಸಮ್ಭವತಿ 'ನಾನ್ಯೋऽತೋऽಸ್ತಿ ದ್ರಷ್ಟಾ' ಇತ್ಯಾದಿ ಶ್ರುತಿವಿರೋಧಾತ್ । 'ಅಜಾಯಮಾನೋ ಬಹುಧಾ ವಿಜಾಯತೇ' ಇತಿ ಅಪರಿಣಾಮಸ್ಯೈವ ಬಹ್ವವತಾರಶ್ರವಣಾತ್ ವಿಷ್ಣೋರ್ನ ಬಹುಭವನಶ್ರುತಿರ್ವಿರುಧ್ಯತೇ ।।೧೩।।

।। ಇತಿ ಶ್ರೀಪದ್ಮನಾಭತೀರ್ಥವಿರಚಿತಸತ್ತರ್ಕದೀಪಾವಳ್ಯಾಮ್: ಸದಧಿಕರಣಮ್ ।।

'ಸದೇವ ಸೋಮ್ಯ' ಇತ್ಯಾದಿ ಶ್ರುತಿಯ ಅರ್ಥ ಹೀಗಿದೆ -

'ಸದೇವ ಸೋಮ್ಯೇದಮಗ್ರ ಆಸೀತ್' 'ಏಕಮೇವಾದ್ವಿತೀಯಂ'
'ತದೈಕ್ಷತ ಬಹು ಸ್ಯಾಂ ಪ್ರಜಾಯೇಯೇತಿ' 'ತತ್ತೇಜೋಽಸೃಜತ।'

ಇತ್ಯಾದಿ ಶ್ರುತಿಯಿಂದ ಯಾವ ಜಗತ್ಕಷ್ಟೃತ್ವವು ಶ್ರುತವಾಗಿದೆಯೋ ಅಂತಹ ಜಗತ್ಕಷ್ಟೃವಾದದ್ದು ಪ್ರಧಾನವೇ ಆಗಬೇಕು. ಏಕೆಂದರೆ ಅನೇಕ ರೂಪಗಳಿಂದ ಹುಟ್ಟುವಿಕೆಯು ಶ್ರುತವಾದ್ದರಿಂದ. ಅನೇಕ ಬಗೆಯಲ್ಲಿ ಪರಿಣಾಮವಾಗುವಿಕೆಯು ಜಡರೂಪವಾದ ಪ್ರಧಾನದ ಧರ್ಮವಾಗುತ್ತದೆಯೇ ಹೊರತು, ವಿಷ್ಣುವಿನ ಧರ್ಮವಾಗಲು ಸಾಧ್ಯವಿಲ್ಲ. ಏಕೆಂದರೆ 'ಅವಿಕಾರಃ ಸದಾ ಶುದ್ಧಃ' ಇವೇ ಮೊದಲಾದ ಪ್ರಮಾಣಗಳಿಂದ, ವಿಷ್ಣು ನಿರ್ವಿಕಾರನೆಂದು ಪ್ರತೀತನಾಗಿದ್ದಾನೆ. ಇಷ್ಟು ಪೂರ್ವಪಕ್ಷ.

ವಿಷ್ಣುವೇ ಈ ಸ್ಥಿತಿಯಲ್ಲಿರುವ 'ಸತ್' ಎಂಬ ಶಬ್ದದಿಂದ ಪ್ರತಿಪಾದ್ಯನಾಗುತ್ತಾನೆ ಹೊರತು ಪ್ರಧಾನವಲ್ಲ. ಏಕೆಂದರೆ ಯಾರು ಜಗತ್ಕಷ್ಟೃವಾಗಿದ್ದಾನೋ ಅವನಲ್ಲಿ 'ಈಕ್ಷಿತೃತ್ವ' ಎಂಬ ಧರ್ಮವು ಕೇಳಿಸುತ್ತಿದೆ. ಈಕ್ಷಿತೃತ್ವವು ವಿಷ್ಣುವನ್ನು ಬಿಟ್ಟು ಬೇರೆಲ್ಲಿಯೂ ಕೂಡ ಮುಖ್ಯವಾಗಿ ಕೂಡುವುದಿಲ್ಲ. ಈ ವಿಷಯದಲ್ಲಿ 'ನಾನ್ಯೋಽತೋಽಸ್ತಿ ದ್ರಷ್ಟಾ' ವಿಷ್ಣುವನ್ನು ಬಿಟ್ಟು ಮತ್ತೊಂದು ದ್ರಷ್ಟೃಪದಾರ್ಥವಿಲ್ಲ ಎಂಬ ಶ್ರುತಿಯೇ ಆಧಾರವಾಗಿದೆ. 'ಅಜಾಯಮಾನೋ ಬಹುಧಾ ವಿಜಾಯತೇ' ಎಂಬ ಶ್ರುತಿಯ ಆಧಾರದಿಂದ ಭಗವಂತನಿಗೆ ಪರಿಣಾಮವಿಲ್ಲದಿದ್ದರೂ ಅನೇಕ ರೂಪಗಳಿಂದ ಅವತಾರವು ಶ್ರುತವಾಗಿದೆ. ಆದ್ದರಿಂದ ಬಹುಭವನಶ್ರುತಿಯ ವಿರೋಧಕ್ಕೂ ಆಸ್ಪದವಿಲ್ಲ.

॥ ಇಲ್ಲಿಗೆ ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ ಸತ್ತರ್ಕದೀಪಾವಳಿಯಲ್ಲಿ
ಸದಧಿಕರಣದ ಕನ್ನಡಾನುವಾದವು ಸಮಾಪ್ತವಾಯಿತು ॥

ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ

ತತ್ತ್ವಪ್ರದೀಪ

ಸತ್ ಎಂದರೆ ಜಡಪ್ರಕೃತಿ ಹಾಗೂ ಚೇತನಪ್ರಕೃತಿ ಎಂದು ಪೂರ್ವಪಕ್ಷ

तत्वप्रदीपः – 'सदेव सोम्येदमग्र आसीत्' इत्युपक्रम्य ''तदैक्षत बहु स्यां प्रजायेयेति तत्तेजोऽसृजत'' इति सतः स्रष्टृत्वमुच्यते । तच्च सत्परिणामप्रतीतेः प्रकृतिरिति प्राप्ते प्रत्याह – 'ईक्षतिकर्मव्यपदेशात्सः' ।

'ಸದೇವ ಸೋಮ್ಯೇದಮಗ್ರ ಆಸೀತ್' ಎಂಬುದಾಗಿ ಪ್ರಾರಂಭ ಮಾಡಿ, 'ತದೈಕ್ಷತ ಬಹು ಸ್ಯಾಂ ಪ್ರಜಾಯೇಯೇತಿ ತತ್ತೇಜೋऽಸೃಜತ' ಎಂಬಲ್ಲಿಯ ತನಕ ಸತ್ ಪದಾರ್ಥಕ್ಕೆ ಸ್ರಷ್ಟೃತ್ವವನ್ನು ಹೇಳಲಾಗಿದೆ. ಈ ಸತ್ ಪದಾರ್ಥವು ಪರಿಣಾಮವನ್ನು ಹೊಂದುತ್ತದೆಂದೂ ಕೂಡ ಅಲ್ಲಿ ಹೇಳಲಾಗಿದೆ. ಆದ್ದರಿಂದ ಪ್ರಕೃತಿಯೇ ಸತ್ ಪದದಿಂದ ಪ್ರತಿಪಾದ್ಯವೆಂದು ಪೂರ್ವಪಕ್ಷ.

ಇದರ ನಿರಾಕರಣೆಗಾಗಿ 'ಈಕ್ಷತಿಕರ್ಮವ್ಯಪದೇಶಾತ್ಸಃ' ಎಂಬ ಸೂತ್ರವು ಹೊರಟಿದೆ.

ವಿಶೇಷವಿಚಾರ - ಈ ಅಧಿಕರಣದಲ್ಲಿ ಸತ್‌ಪದವನ್ನು ಮಹಾವಿಷ್ಣುವಿನಲ್ಲಿ ಸಮನ್ವಯ ಮಾಡುತ್ತಿದ್ದಾರೆ. ಕೇವಲ ಸತ್‌ಪದದ ಸಮನ್ವಯ ಮಾಡುವುದು ಈ ಅಧಿಕರಣದ ಉದ್ದೇಶವಲ್ಲ. ಸ್ಥಾನಸಮನ್ವಯವೇ ಮುಖ್ಯಉದ್ದೇಶವಾಗಿದೆ. ಸ್ಥಾನ ಎಂದರೆ ಅನೇಕ ಪ್ರಕರಣಗಳ ಸಮುದಾಯ ಎಂದರ್ಥ. ಅನೇಕ ವಾಕ್ಯಗಳ ಸಮುದಾಯವು ಪ್ರಕರಣವಾಗಿವೆ. ಇಂಥ ಅನೇಕ ಪ್ರಕರಣಗಳ ಸಮುದಾಯವೇ ಸ್ಥಾನವೆಂದು ಕರೆಸಿಕೊಳ್ಳುತ್ತದೆ. ಛಾಂದೋಗ್ಯೋಪನಿಷತ್ತಿನಲ್ಲಿ ಬರುವ 'ಸದೇವ ಸೋಮ್ಯ' ಎಂಬ ಒಂಬತ್ತು ಪ್ರಕರಣಗಳು ಸೇರಿ ಒಂದು ಸ್ಥಾನ ಆಗಿದೆ. ಈ ಎಲ್ಲಾ ಪ್ರಕರಣಗಳಲ್ಲಿರುವ 'ಸತ್' ಎಂಬ ಪದದ ಸಮನ್ವಯವನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡುವ ಮೂಲಕ ಆ ಒಂಬತ್ತು ಪ್ರಕರಣಗಳ ಮುಖ್ಯ ತಾತ್ಪರ್ಯ ಮಹಾವಿಷ್ಣುವೇ ಆಗಿದ್ದಾನೆ ಎಂಬುದು ಇದರಿಂದ ಸಮರ್ಥನೆ ಮಾಡಿದಂತಾಗುತ್ತದೆ. ಆದ್ದರಿಂದ ಸೂತ್ರಕಾರರು 'ಸತ್' ಎಂಬ ನಾಮಾತ್ಮಕಶಬ್ದದ ಸಮನ್ವಯವನ್ನು ಈ ಅಧಿಕರಣದಲ್ಲಿ ಮಾಡಿದ್ದಾರೆ.

ಸತ್ ಎಂಬ ಪದದಿಂದ ಪ್ರತಿಪಾದ್ಯವಾದದ್ದು ಜಡಪ್ರಕೃತಿಯೇ ಆಗಬೇಕು. 'ಬಹು ಸ್ಯಾಂ ಪ್ರಜಾಯೇಯ' ಎಂಬುದಾಗಿ ಅನೇಕ ಜಡ ಪದಾರ್ಥಗಳ ಪರಿಣಾಮವನ್ನು ಹೇಳಿದ್ದರಿಂದ ವಿಷ್ಣುವು 'ಸತ್' ಎಂದು ಕರೆಸಿಕೊಳ್ಳಲಾರ. ಏಕೆಂದರೆ 'ಅವಿಕಾರಃ ಸದಾ ಶುದ್ಧಃ' ಎಂಬ ಶ್ರುತಿಯು ಮಹಾವಿಷ್ಣುವಿಗೆ ಯಾವುದೇ ವಿಕಾರವಿಲ್ಲವೆಂದು ಹೇಳುತ್ತಿದೆ. ಪ್ರಕೃತ ಸತ್‌ಪದಾರ್ಥಕ್ಕೂ ಅನೇಕ ಬಗೆಯ ವಿಕಾರವನ್ನು ಹೇಳಿದ್ದರಿಂದ ಜಡಪ್ರಕೃತಿ 'ಸತ್' ಎಂದು ಕರೆಸಿಕೊಳ್ಳುತ್ತದೆ. ಬಹು ಸ್ಯಾಂ ಪ್ರಜಾಯೇಯ' ಎಂಬಲ್ಲಿ ಹೇಳಲ್ಪಟ್ಟ ಇಚ್ಛಾಕರ್ತೃತ್ವವನ್ನು ಚೇತನ ಪ್ರಕೃತಿಯಲ್ಲಿ ಕೂಡಿಸಬಹುದು. ಆದ್ದರಿಂದ ಚೇತನ ಪ್ರಕೃತಿಯು ಇಚ್ಛೆಯನ್ನು ಮಾಡಿತು, ಜಡಪ್ರಕೃತಿಯನ್ನು ಪರಿಣಾಮವನ್ನು ಹೊಂದಿತು ಎಂದು ಸುಲಭವಾಗಿಯೇ ಶ್ರುತಿಯನ್ನು ಕೂಡಿಸಲು ಬರುವಾಗ ಮಹಾವಿಷ್ಣುವು 'ಸತ್' ಪದದಿಂದ ಪ್ರತಿಪಾದ್ಯನೆಂದು ಹೇಳಿದರೆ ಅನೇಕ ಶ್ರುತಿಗಳ ವಿರೋಧವು ಪ್ರಾಪ್ತವಾಗುತ್ತದೆ.

ಛಾಂದೋಗ್ಯೋಪನಿಷತ್ತಿನಲ್ಲಿ ಬರುವ ಪ್ರಕರಣ ಹೀಗಿದೆ -

ಸದೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಮ್ । ತದ್ಧೈಕ ಆಹುಃ 'ಅಸದೇವೇದಮಗ್ರ ಆಸೀದೇಕಮೇವಾದ್ವಿತೀಯಮ್ । ತಸ್ಮಾದಸತಃ ಸಜ್ಜಾಯತೇ' ಇತಿ।

'ಕುತಸ್ತು ಖಲು ಸೋಮ್ಯೈವಂ ಸ್ಯಾತ್?' ಇತಿ ಹೋವಾಚ 'ಕಥಂ ಅಸತಃ ಸಜ್ಜಾಯೇತ್ ? ಇತಿ । ಸತ್ ತ್ವೇವ ಸ್ಯೋದ್ಯೇದಮಗ್ರ ಆಸೀದೇಕಮೇವಾದ್ವಿತೀಯಮ್'।

ಸೃಷ್ಟಿಯ ಮೊದಲು ಪ್ರಳಯಕಾಲದಲ್ಲಿ ಸರ್ವೋತ್ತಮನಾದುದರಿಂದ 'ಸತ್' ಎಂಬ ಹೆಸರುಳ್ಳ ಪರಮಾತ್ಮನು ಮಾತ್ರ ಇದ್ದನು. ಈ ಪರಮಾತ್ಮನು ತನ್ನ ಅವಯವ ಗುಣಕ್ರಿಯೆ ಇವುಗಳಿಂದ ಅತ್ಯಂತ ಅಭಿನ್ನನಾಗಿರುವನು. ಅವನಿಗೆ ಸಮಾನರು ಯಾರೂ ಇಲ್ಲ. ಅಧಿಕರು ಇನ್ನೆಲ್ಲಿ ?

ಜಗತ್ತಿನ ಸೃಷ್ಟಿ ಕಾರಣದ ವಿಷಯದಲ್ಲಿ ಶೂನ್ಯವಾದಿಗಳಾದ ಬೌದ್ಧರು 'ಜಗತ್ತಿನ ಸೃಷ್ಟಿಗಿಂತ ಮೊದಲು ಪ್ರಳಯಕಾಲದಲ್ಲಿ ಶೂನ್ಯ ಒಂದೇ ಇತ್ತು. ಕಾರ್ಯಪ್ರಪಂಚವೂ ಇರಲಿಲ್ಲ. ಸಹಕಾರಿ ಕಾರಣವಾಗಬಲ್ಲ ಇನ್ನೊಂದು ವಸ್ತವೂ ಇರಲಿಲ್ಲ. ಆ ಶೂನ್ಯದಿಂದ ಪ್ರಪಂಚ ಹುಟ್ಟಿತು' ಎಂದು ಅನ್ನುತ್ತಾರೆ.

ಪ್ರಳಯಕಾಲದಲ್ಲಿ ಅಸತ್ ಆಗಿರುವ ಶೂನ್ಯವಿತ್ತು ಎಂಬುದು ಹೇಗೆ ತಾನೆ ಯುಕ್ತವಾದೀತು ? ಅಸತ್ತು ಇರುವುದೆಂದರೆ ಸ್ವವ್ಯಾಹತ ಮತ್ತು ಅಪ್ರಾಮಾಣಿಕ. ಅಸತ್

ಆದ ಶೂನ್ಯದಿಂದ ಜಗತ್ತು ಹುಟ್ಟುವುದು ಹೇಗೆ ತಾನೇ ಸಾಧ್ಯ ? ಅಸತ್ತು ಕಾರಣವಾಗುವುದು ಎಲ್ಲಿಯೂ ದೃಷ್ಟವಾಗಿಲ್ಲ. ಆದುದರಿಂದ, ಪ್ರಳಯಕಾಲದಲ್ಲಿ ತನ್ನ ಅವಯವಾದಿಗಳಿಗಿಂತ ಅತ್ಯಂತ ಅಭಿನ್ನನೂ, ತನಗೆ ಸಮಾನವಾದ ಹಾಗೂ ತನಗಿಂತ ಅಧಿಕವಾದ ಬೇರೆ ವಸ್ತು ಇಲ್ಲದವನೂ ಆದ ಸದ್ರೂಪನಾದ ಪರಮಾತ್ಮನೇ ಇದ್ದನು ಎಂಬುದು ಸಿದ್ಧವಾಗುತ್ತದೆ.

> ತದೈಕ್ಷತ 'ಬಹು ಸ್ಯಾಂ ಪ್ರಜಾಯೇಯ' ಇತಿ। ತತ್ ತೇಜೋऽಸೃಜತ। ತತ್ ತೇಜ ಐಕ್ಷತ 'ಬಹು ಸ್ಯಾಂ ಪ್ರಜಾಯೇಯ' ಇತಿ। ತದಪೋऽಸೃಜತ। ತಸ್ಮಾತ್ ಯತ್ರ ಕ್ವಚ ಶೋಚತಿ ಸ್ವೇದತೇ ವಾ ಪುರುಷಃ ತೇಜಸ ಏವ ತದ್ಧ್ಯಾಪೋ ಜಾಯಂತೇ ॥

ಅಸತ್‌ಶಬ್ದವಾಚ್ಯನಾದ ಪರಮಾತ್ಮನು ತಾನು ನಿಯಾಮಕ ನಾನಾ ರೂಪಗಳುಳ್ಳವನಾಗಬೇಕೆಂದೂ, ಅದಕ್ಕೋಸ್ಕರ ನಿಯಮ್ಯವಾದ ನಾನಾವಸ್ತುಗಳನ್ನು ಸೃಷ್ಟಿಸಬೇಕೆಂದೂ ಆಲೋಚಿಸಿದನು. ಬಳಿಕ ಆ ಪರಮಾತ್ಮನು ತೇಜ ಎಂಬ ಹೆಸರುಳ್ಳ ಶ್ರೀದೇವಿಯನ್ನೂ, ಅವಳಿಂದ ಅಭಿಮನ್ಯಮಾನವಾದ ತೇಜಸ್ಸು ಎಂಬ ಭೂತದ್ರವ್ಯವನ್ನೂ ಸೃಷ್ಟಿಸಿದನು. ಆ ಶ್ರೀದೇವಿಯು ತಾನು ನಿಯಾಮಕವಾದ ನಾನಾರೂಪಗಳನ್ನು ಹೊಂದಬೇಕೆಂದೂ, ಅದಕ್ಕೋಸ್ಕರ ನಿಯಮ್ಯವಾದ ನಾನಾ ವಸ್ತುಗಳನ್ನು ಸೃಷ್ಟಿಸಬೇಕೆಂದೂ ಯೋಚಿಸಿದಳು. ಬಳಿಕ ನೀರಿಗೆ ಅಭಿಮಾನಿಯಾದ ಅಪ್ ಎಂದು ಹೆಸರುಳ್ಳ ಪ್ರಾಣದೇವರನ್ನು ಸೃಷ್ಟಿಸಿ, ಅವರಿಂದ ಅಭಿಮನ್ಯಮಾನವಾದ ನೀರನ್ನು, ತನ್ನಿಂದ ಅಭಿಮನ್ಯಮಾನವಾದ ತೇಜಸ್ಸಿನಿಂದ ಸೃಷ್ಟಿಸಿದಳು. ನೀರು ತೇಜಸ್ಸಿನ ಸೃಷ್ಟಿಯಾದುದರಿಂದಲೇ, ಮನುಷ್ಯನು ತಾಪದಿಂದ ದುಃಖಿಸುವಾಗ ಬೆವರುವಾಗ ಸಂತಾಪಕ್ಕೆ ಕಾರಣವಾದ ತೇಜಸ್ಸಿನಿಂದ ಕಣ್ಣೀರು ಬೆವರುಗಳ ರೂಪದಿಂದ ನೀರು ಕಾಣಿಸಿಕೊಳ್ಳುತ್ತದೆ.

> ಸರ್ವೋತ್ತಮತ್ವಾತ್ ಸನ್ನಾಮಾ ಹರಿರ್ನಾರಾಯಣಃ ಪ್ರಭುಃ।
> ಸೋऽಸೃಜತ್ ಪ್ರಥಮಂ ದೇವೀಂ ತೇಜ ಆಖ್ಯಾಂ ಶ್ರಿಯಂ ಸತೀಂ।
> ತತೇ ಸ್ಥಿತೇನ ರೂಪೇಣ ಸಾऽಜೈವ ಹಿ ಯತಃ ಸದಾ।
> ತೇಜ ಇತ್ಯುಚ್ಯತೇ ತಸ್ಮಾತ್ ಜನೇರ್ವಾ ತತ ಏವ ತು।
> ಯದಸ್ಯಾಃ ಸೃಷ್ಟಿಕೃದ್ ರೂಪಂ ವಿದ್ಯಾಖ್ಯಂ ಜಾಯತೇ ಹರೇಃ।

ಸರ್ವಸಮರ್ಥನಾದ ಸಕಲಗುಣಪೂರ್ಣನಾದ ಶ್ರೀಹರಿಯು ಸರ್ವೋತ್ತಮನಾದ ಕಾರಣ 'ಸದೇವ ಸೋಮ್ಯ ಇದಮಗ್ರ ಆಸೀತ್' ಎಂಬ ವಾಕ್ಯದಲ್ಲಿರುವ ಸತ್ ಎಂಬ ಹೆಸರುಳ್ಳವನಾಗಿರುವನು. ಆ ಶ್ರೀಹರಿಯೇ ಸೃಷ್ಟಿಯ ಆದಿಯಲ್ಲಿ ಪ್ರಳಯದಲ್ಲೂ ತನ್ನೊಡನೆ

ಇದ್ದ ತೇಜ ಎಂಬ ಹೆಸರುಳ್ಳ ಶ್ರೀದೇವಿಯನ್ನು ರೂಪಾಂತರದಿಂದ ಸೃಷ್ಟಿಸಿದನು. ವ್ಯಾಪ್ತನಾದ ಪರಮಾತ್ಮನಲ್ಲಿಯೂ, ವ್ಯಾಪ್ತನಾದ ಪ್ರಕೃತಿಯಲ್ಲಿಯೂ ಸದಾ ಇರುವ ತನ್ನ ರೂಪದಿಂದ ಉತ್ಪತ್ತಿ ಇಲ್ಲದವಳಾದ್ದರಿಂದ, ಶ್ರೀದೇವಿಯು ತೇಜ ಎಂದು ಕರೆಯಲ್ಪಡುತ್ತಾಳೆ. ಆ ಶ್ರೀದೇವಿಯ ಜಗತ್ಸೃಷ್ಟಿಗೆ ಕಾರಣವಾದ ವಿದ್ಯಾ ಎಂಬ ಹೆಸರುಳ್ಳ ರೂಪವು, ಆ ವ್ಯಾಪ್ತನಾದ ಪರಮಾತ್ಮನಿಂದ ಹುಟ್ಟುತ್ತದೆ. ಆ ಕಾರಣವನ್ನಿಟ್ಟುಕೊಂಡಾಗಲೂ ಅವಳಿಗೆ ತೇಜ ಎಂದು ಹೆಸರು ಅನ್ವರ್ಥವೆನಿಸುತ್ತದೆ.

> ತಾ ಆಪ ಐಕ್ಷಂತ 'ಬಹ್ವ್ಯಃ ಸ್ಯಾಮ ಪ್ರಜಾಯೇಮಹಿ' ಇತಿ। ತಾ ಅನ್ನಮಸೃಜಂತ। ತಸ್ಮಾತ್ ಯತ್ರ ಕ್ವ ಚ ವರ್ಷತಿ ತದೇವ ಭೂಯಿಷ್ಠಮನ್ನಂ ಭವತಿ। ಅದ್ಭ್ಯ ಏವ ತದನ್ನಾದ್ಯಂ ಜಾಯತೇ।

ನೀರಿಗೆ ಅಭಿಮಾನಿಯಾದ ಆ ಪ್ರಾಣದೇವರು ತಾನು ನಿಯಾಮಕ ಬಹುರೂಪ ಉಳ್ಳವರಾಗಬೇಕೆಂದೂ, ಅದಕ್ಕೋಸ್ಕರ ತನ್ನಿಂದ ಅಭಿಮನ್ಯಮಾನವಾಗುವ ಅನೇಕ ವಸ್ತುಗಳನ್ನು ಸೃಷ್ಟಿಸಬೇಕೆಂದೂ, ಅದಕ್ಕೋಸ್ಕರ ತನ್ನಿಂದ ಅಭಿಮನ್ಯಮಾನವಾಗುವ ಅನೇಕ ವಸ್ತುಗಳನ್ನು ಸೃಷ್ಟಿಸಬೇಕೆಂದೂ ಯೋಚಿಸಿದರು. ಹೀಗೆ ಯೋಚಿಸಿದ ಅವರು ಪೃಥಿವಿಗೆ ಅಭಿಮಾನಿಯಾದ ರುದ್ರದೇವರನ್ನೂ, ಆ ರುದ್ರದೇವರಿಂದ ಅಭಿಮನ್ಯಮಾನವಾದ ಪೃಥಿವೀ ಎಂಬ ಭೂತದ್ರವ್ಯವನ್ನೂ ಸೃಷ್ಟಿಸಿದರು. ಪೃಥಿವಿಯು ನೀರಿನಿಂದ ಹುಟ್ಟಿದ ಕಾರಣದಿಂದಲೇ, ಯಾವ ಪ್ರದೇಶದಲ್ಲಿ ಚೆನ್ನಾಗಿ ಮಳೆ ಸುರಿಯುತ್ತದೋ ಅಲ್ಲಿಯೇ ಸಮೃದ್ಧವಾಗಿ ಪಾರ್ಥಿವವಸ್ತುಗಳು ಬೆಳೆಯುತ್ತವೆ.

ಈಕ್ಷತಿ ಮತ್ತು ಕರ್ಮಗಳು ಜಡಪ್ರಕೃತಿಯಲ್ಲಿ ಸರ್ವಥಾ ಕೂಡುವುದಿಲ್ಲ

तत्वप्रदीपः – तत्सदैक्षत बहुभवेयं प्रजनयेयमितीक्षतिकर्मव्यपदेशात् । ''तत्तेजोऽसृजत'' इति तत्पूर्वकर्म व्यपदेशान्नामरूपे व्याकरवाणीत्यादिना चेक्षतिपूर्वकव्याकरणादिकर्मव्यपदेशात् । स एवेश्वरस्सन् सर्वशब्दोक्तः । न तत्प्रधानमीक्षतिशक्त्या कर्तृकर्मशक्त्या च विहीनत्वात् ।।

।। इति सदधिकरणम् ।।

ಆ ಸತ್‌ಪದಾರ್ಥವು ನೋಡಿತು, ಬಹುಭಾವವನ್ನು ಹೊಂದಬೇಕೆಂದು ಇಚ್ಛೆ ಪಟ್ಟಿತು, ಅನೇಕ ನಾಮರೂಪಗಳನ್ನು ಸೃಷ್ಟಿ ಮಾಡಬೇಕೆಂದು ಇಚ್ಛಿಸಿತು. ಹೀಗೆ ಈಕ್ಷತಿಕರ್ಮವ್ಯಪದೇಶವು

ಆ ಸತ್ ಪದಾರ್ಥದಲ್ಲಿ ಕೇಳಿಸುತ್ತಿದೆ. 'ತತ್ತೇಜೋ೭ಸೃಜತ' ಎಂಬುದಾಗಿ ಕರ್ಮವ್ಯಪದೇಶ-ವಿರುವುದರಿಂದ 'ನಾಮರೂಪೇ ವ್ಯಾಕರವಾಣಿ' ಇತ್ಯಾದಿಯಾಗಿ ಈಕ್ಷತಿಪೂರ್ವಕವಾದ ವ್ಯಾಕರಣಾದಿಕರ್ಮವ್ಯಪದೇಶವಿರುವುದರಿಂದ ಮಹಾವಿಷ್ಣುವೇ ಸತ್ ಎಂದು ಕರೆಸಿಕೊಳ್ಳುತ್ತಾನೆ. ಹೊರತು, ಪ್ರಕೃತಿಯು ಪ್ರತಿಪಾದ್ಯವಾಗುವುದಿಲ್ಲ. ಏಕೆಂದರೆ ಜ್ಞಾನಶಕ್ತಿ, ಕರ್ತೃಶಕ್ತಿ, ಕರ್ಮಶಕ್ತಿಗಳು ಆ ಜಡಪ್ರಕೃತಿಯಲ್ಲಿ ಸರ್ವಥಾ ಇರುವುದಿಲ್ಲ.

ವಿಶೇಷವಿಚಾರ - 'ಈಕ್ಷತಿಶ್ಚ ಕರ್ಮಚ, ತಯೋಃ ವ್ಯಪದೇಶಃ' ಎಂಬ ನಿಷ್ಪತ್ತಿಯಂತೆ ಜ್ಞಾನ ಮತ್ತು ಕ್ರಿಯೆಗಳೆರಡೂ ಜಡಪ್ರಕೃತಿಯಲ್ಲಿ ಯುಕ್ತವಾಗುವುದಿಲ್ಲ ಎಂಬರ್ಥವನ್ನು ಪಂಡಿತಾಚಾರ್ಯರು ಸೂತ್ರಕ್ಕೆ ಹೇಳಿದ್ದಾರೆ.

'ಈಕ್ಷತಿಕರ್ಮವ್ಯಪದೇಶಾತ್ಸಃ' ಎಂಬ ಸೂತ್ರದಲ್ಲಿ ಸಃ ಎಂಬ ಪದವನ್ನು ಪ್ರಯೋಗ ಮಾಡಿದ್ದರಿಂದ ಪುರುಷನಾದ ಮಹಾವಿಷ್ಣುವೇ ಸತ್ ಎಂದು ಕರೆಸಿಕೊಳ್ಳುತ್ತಾನೆಂದು ತಿಳಿಸಿದ್ದಾರೆ. ಹೀಗೆ ಪುಲ್ಲಿಂಗಶಬ್ದವನ್ನು ಪ್ರಯೋಗಿಸಿದ್ದರಿಂದ ಪುಲ್ಲಿಂಗಶಬ್ದವಾಚ್ಯವಾದ ಪ್ರಕೃತಿಯು ಈ ಅಧಿಕರಣದ ಪೂರ್ವಪಕ್ಷಕ್ಕೆ ವಿಷಯವೆಂದು ಸೂಚಿತವಾಗುತ್ತದೆ.

'ಕರ್ಮವ್ಯಪದೇಶಾತ್', 'ಈಕ್ಷತಿಕರ್ಮವ್ಯಪದೇಶಾತ್' ಎಂಬುದಾಗಿ ಸೂತ್ರಕ್ಕೆ ಮೂರು ಬಗೆಯಲ್ಲಿ ಅನ್ವಯಕ್ರಮವನ್ನು ತಿಳಿಯಬೇಕು. ಪ್ರಕೃತಿಯಲ್ಲಿ ಈಕ್ಷಿತೃತ್ವದ ವ್ಯಪದೇಶವು ಯುಕ್ತವಾಗುವುದಿಲ್ಲ. ಕರ್ತೃತ್ವ ವ್ಯಪದೇಶವೂ ಕೂಡ ಯುಕ್ತವಾಗುವುದಿಲ್ಲ. ಈಕ್ಷತಿಪೂರ್ವಕವಾದ ವ್ಯಪದೇಶವೂ ಕೂಡ ಯುಕ್ತವಾಗುವುದಿಲ್ಲ.

ಪರಮಾತ್ಮನು ಜಗತ್ತನ್ನು ಸೃಷ್ಟಿಮಾಡಿ, ತಾನು ಅನೇಕ ರೂಪಗಳನ್ನು ತಾಳಿ, ಅದರೊಳಗೆ ಪ್ರವೇಶ ಮಾಡುತ್ತಾನೆಂದು ಶ್ರುತಿಗೆ ಅರ್ಥವನ್ನು ಹೇಳಿದಾಗ ಎಲ್ಲಿಯೂ ಕೂಡ ಅಮುಖ್ಯಾರ್ಥವನ್ನು ಸ್ವೀಕಾರ ಮಾಡಿದಂತಾಗುವುದಿಲ್ಲ. ಒಂದುವೇಳೆ ಪ್ರಕೃತಿಯನ್ನೇ ಸತ್ ಪದದಿಂದ ಪ್ರತಿಪಾದ್ಯವೆಂದು ಒಪ್ಪಿದರೆ ಆಗ ಜ್ಞಾನೇಚ್ಛೆಯು ಅದರಲ್ಲಿ ಕೂಡುವುದಿಲ್ಲ. ತದನಂತರ ಜ್ಞಾನಕ್ರಿಯೆಯೂ ಕೂಡ ಅದರಲ್ಲಿ ಅನ್ವಯವನ್ನು ಹೊಂದುವುದಿಲ್ಲ. ಆದ್ದರಿಂದ ಸತ್‌ಪದದಿಂದ ಪ್ರಕೃತಿಯನ್ನು ಪ್ರತಿಪಾದ್ಯವೆಂದು ಒಪ್ಪಬಾರದು.

ಶ್ರೀಮಜ್ಜಯತೀರ್ಥಭಿಕ್ಷುಗಳಿಂದ ವಿರಚಿತವಾದ

ತತ್ವಪ್ರಕಾಶಿಕಾ

'ಸತ್' ಎಂಬ ಶಬ್ದವು ಬ್ರಹ್ಮಪ್ರತಿಪಾದಕವೋ, ಪ್ರಕೃತಿಪ್ರತಿಪಾದಕವೋ ?

तत्वप्रकाशिका – ।। ईक्षतिकर्मव्यपदेशात्सः।।

अत्र 'सदेव सोम्य' इत्यादिसृष्टिप्रतिपादकस्थानगतसन्नाम्नो ब्रह्मप्रधानयोः कारणत्वसाम्येन साधारणस्य भगवति समन्वयप्रतिपादनादस्ति शास्त्रादिसङ्गतिः।

ಈ ಅಧಿಕರಣದಲ್ಲಿ 'ಸದೇವ ಸೋಮ್ಯ' ಮೊದಲಾದ ಸೃಷ್ಟಿಪ್ರತಿಪಾದಕವಾದ ಸ್ಥಾನದಲ್ಲಿರುವ 'ಸತ್' ಎಂಬ ನಾಮಾತ್ಮಕಶಬ್ದವನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡಲಾಗಿದೆ. ಈ 'ಸತ್' ಎಂಬ ನಾಮಾತ್ಮಕಶಬ್ದವು ವಿಷ್ಣು ಹಾಗೂ ಪ್ರಕೃತಿ ಇಬ್ಬರಲ್ಲಿಯೂ ಕಾರಣತ್ವಧರ್ಮವು ಸಮಾನವಾಗಿರುವುದರಿಂದ ಉಭಯಸಾಧಾರಣವಾಗಿದೆ. ಹೀಗೆ ಉಭಯತ್ರಪ್ರಸಿದ್ಧವಾದ 'ಸತ್' ಎಂಬ ನಾಮಾತ್ಮಕಶಬ್ದದ ಸಮನ್ವಯವನ್ನು ಮಾಡುತ್ತಿರುವುದರಿಂದ ಶಾಸ್ತ್ರಸಂಗತಿ, ಅಧ್ಯಾಯಸಂಗತಿ ಹಾಗೂ ಪಾದಸಂಗತಿಗಳಿರುತ್ತವೆಂದು ತಿಳಿಯಬೇಕು.

ಅಧಿಕರಣದ ವಿಷಯವಾಕ್ಯ

तत्वप्रकाशिका – श्रुत्यादिसङ्गतिं विषयवाक्यमुदाहृत्य विषयादिकं च सूचयति – सदिति ।।

ಶ್ರುತಿಸಂಗತಿ, ಅಧಿಕರಣಸಂಗತಿ ಮೊದಲಾದುವುಗಳನ್ನು ತೋರಿಸುವವರಾಗಿ ವಿಷಯವಾಕ್ಯವನ್ನು ಉದಾಹರಿಸುತ್ತಾ ವಿಷಯಾದಿಗಳನ್ನೂ ಕೂಡ ಸೂಚನೆ ಮಾಡುತ್ತಿದ್ದಾರೆ. 'ಸದೇವ ಸೋಮ್ಯ' ಇತ್ಯಾದಿ ಭಾಷ್ಯದಿಂದ.

ಜಗತ್ಸ್ರಷ್ಟೃತ್ವವು 'ಸತ್' ಪದಾರ್ಥದಲ್ಲಿ ಪ್ರತೀತವಾಗುತ್ತಿದೆ

तत्वप्रकाशिका – 'जन्माद्यस्य यतः' इति जगत्स्रष्टृत्वं विष्णोरुक्तम् तच्छान्दोगश्रुतौ सतः प्रतीयते 'तत्तेजो असृजत' इत्यादिना ।

'ಜನ್ಮಾದ್ಯಸ್ಯ ಯತಃ' ಎಂಬ ಸೂತ್ರದಲ್ಲಿ ಜಗತ್ಸ್ರಷ್ಟೃತ್ವವು ವಿಷ್ಣುವಿನ ಧರ್ಮವೆಂದು ಸಮರ್ಥಿಸಲಾಯಿತು. ಇದೇ ಜಗತ್ಸ್ರಷ್ಟೃತ್ವಧರ್ಮವು ಛಾಂದೋಗ್ಯೋಪನಿಷತ್ತಿನಲ್ಲಿ 'ಸತ್' ಎಂಬ ತತ್ವದಲ್ಲಿ ಪ್ರತೀತವಾಗುತ್ತಿದೆ 'ತತ್ತೇಜೋ ಅಸೃಜತ' ಇತ್ಯಾದಿ ವಾಕ್ಯಗಳಿಂದ

'ಸತ್' ಪದಾರ್ಥವನ್ನು ನಿರ್ಣಯ ಮಾಡಲೇಬೇಕು

तत्वप्रकाशिका – तस्य च विष्णोरन्यत्वे अन्यस्यैव स्रष्टृत्वप्रसङ्गादवश्यं निर्णेयत्वम् ।

ಅಂತಹ 'ಸತ್' ಎಂಬ ಶಬ್ದದಿಂದ ಪ್ರತಿಪಾದ್ಯವಾದದ್ದು ವಿಷ್ಣುವಿಗಿಂತ ಭಿನ್ನವಾದಲ್ಲಿ, ಆ ಪದಾರ್ಥವೇ ಜಗತ್ಸ್ರಷ್ಟವಾಗುವ ಪ್ರಸಂಗ ಬರುತ್ತದೆ. ಹಾಗಾಗಿ 'ಸತ್' ಎಂಬ ಶಬ್ದವು ಯಾರನ್ನು ಪ್ರತಿಪಾದಿಸುತ್ತಿದೆ ಎಂಬುದನ್ನು ಅವಶ್ಯವಾಗಿ ನಿರ್ಣಯ ಮಾಡಬೇಕು.

'ಸತ್' ಪದಾರ್ಥದಲ್ಲಿ ಪ್ರತೀತವಾಗುತ್ತಿದೆ

तत्वप्रकाशिका – त सदत्र विषयः । किं ब्रह्म उत प्रधानमिति सन्देहः । कारणत्वसाम्यं सन्देहबीजमिति भावः ।

'ಸತ್' ಶಬ್ದವು ಈ ಅಧಿಕರಣದ ವಿಷಯ. 'ಸತ್' ಶಬ್ದದಿಂದ ಪ್ರತಿಪಾದ್ಯವಾದದ್ದು ಬ್ರಹ್ಮನೋ ಅಥವಾ ಪ್ರಕೃತಿಯೋ ಎಂದು ಸಂದೇಹ. ಇಬ್ಬರಲ್ಲಿಯೂ ಕಾರಣತ್ವಧರ್ಮವು ಸಮಾನವಾಗಿರುವುದೇ ಸಂದೇಹಬೀಜ.

ಯುಕ್ತಿಬದ್ಧವಾದ ಪೂರ್ವಪಕ್ಷ

तत्वप्रकाशिका – सयुक्तिकं पूर्वपक्षयति – तच्चेति ।। एतत्सत् प्रधानमेव भवेन्नतु विष्णुः ।

ಯುಕ್ತಿಬದ್ಧವಾದ ಪೂರ್ವಪಕ್ಷವನ್ನು 'ತಚ್ಚ ಸತ್' ಇತ್ಯಾದಿ ಭಾಷ್ಯದಿಂದ ತೋರಿಸುತ್ತಿದ್ದಾರೆ. ಇಂತಹ 'ಸತ್' ಪದಾರ್ಥವು ಪ್ರಕೃತಿಯೇ ಆಗಬೇಕು ಹೊರತು ವಿಷ್ಣುವಲ್ಲ.

ಅನೇಕ ಪದಾರ್ಥಗಳ ಪರಿಣಾಮವುಳ್ಳದ್ದು ಸತ್ ಪದಾರ್ಥ

तत्वप्रकाशिका –'बहु स्यां प्रजायेय' इति सतो बहुभावाख्यविकारित्व-श्रवणादित्यर्थः । विकारित्वप्रतीतावपि कुतोऽयं न विष्णुरित्यत आह – स हीति ।।

ಏಕೆಂದರೆ 'ಬಹು ಸ್ಯಾಂ ಪ್ರಜಾಯೇಯ' ಎಂಬುದಾಗಿ 'ಸತ್' ಪದಾರ್ಥಕ್ಕೆ ಅನೇಕ ಪದಾರ್ಥಗಳ ಸ್ವರೂಪದಿಂದ ಪರಿಣಾಮವಾಗುವಿಕೆಯನ್ನು ಶ್ರುತಿಯು ಹೇಳುತ್ತದೆ. ಪರಿಣಾಮವನ್ನು ಹೊಂದಿದ ಮಾತ್ರಕ್ಕೆ ವಿಷ್ಣುವೇಕೆ 'ಸತ್' ಎನಿಸಬಾರದು? ಎಂಬ ಪ್ರಶ್ನೆಗೆ 'ಸ ಹಿ' ಇತ್ಯಾದಿ ಭಾಷ್ಯದಿಂದ ಉತ್ತರಿಸಿದ್ದಾರೆ.

ಪ್ರಧಾನವೇ ಸತ್ ಪದಾರ್ಥವೆಂದು ಪೂರ್ವಪಕ್ಷ

तत्वप्रकाशिका – विष्णोः प्रमाणैरविकारित्वप्रसिद्धेस्तस्मिन् स्तदसम्भवात् प्रधाने च तत्सम्भवात् तदेव सदिति तस्यैव जगत्कारणत्वमिति भावः ।

ಅನೇಕ ಪ್ರಮಾಣಗಳಿಂದ ವಿಷ್ಣುವಿಗೆ ಯಾವುದೇ ವಿಕಾರಗಳಿಲ್ಲವೆಂದು ಪ್ರಸಿದ್ಧವಾಗಿದೆ. ಅಂತಹ ನಿರ್ವಿಕಾರನಾದ ವಿಷ್ಣುವಿನಲ್ಲಿ ಪರಿಣಾಮವು ಕೂಡುವುದಿಲ್ಲ. ಆದರೆ ಪ್ರಧಾನದಲ್ಲಿ ಇಂತಹ ವಿಕಾರವನ್ನು ಹೇಳಲು ಬರುತ್ತದೆ. ಆದ್ದರಿಂದ ಪ್ರಧಾನವೇ 'ಸತ್' ಶಬ್ದದಿಂದ ಪ್ರತಿಪಾದ್ಯವಾಗುತ್ತದೆ. ಆದ್ದರಿಂದಲೇ ಜಗತ್‌ಕಾರಣವೂ ಕೂಡ ಪ್ರಧಾನವೇ ಆಗುತ್ತದೆ ಎಂದು ತಿಳಿಯಬೇಕು.

ಈ ಅಧಿಕರಣವು ವ್ಯರ್ಥವಲ್ಲ

तत्वप्रकाशिका – नन्वेतत्स्थाने प्रधानस्य प्रतिपाद्यत्वेऽपि तस्योपादन-कारणताभ्युपगमेनानिष्टाभावाद्व्यर्थमेवेदमधिकरणं प्रतीयत इति ।

ಪ್ರಶ್ನೆ - ಪ್ರಕೃತ ಜಗತ್‌ಕಾರಣತ್ವವನ್ನು ಹೇಳುವ ಸ್ಥಾನದಲ್ಲಿ ಪ್ರಧಾನವು ಪ್ರತಿಪಾದ್ಯವಾದರೆ ಸಿದ್ಧಾಂತಿಗಳಿಗೇನೂ ತೊಂದರೆ ಇಲ್ಲ. ಏಕೆಂದರೆ ಜಗತ್ತಿಗೆ ಪ್ರಕೃತಿ ಉಪಾದಾನಕಾರಣವಾಗಿದೆ

ಎಂದು ಸಿದ್ಧಾಂತಿಗಳೂ ಒಪ್ಪುತ್ತಾರೆ. ಯಾವ ಅನಿಷ್ಟವೂ ಅವರಿಗೆ ಇಲ್ಲವಾದ್ದರಿಂದ ಈ ಅಧಿಕರಣ ಹೊರಟಿದ್ದು ವ್ಯರ್ಥವಲ್ಲವೆ?

ಪ್ರಧಾನವು ಪ್ರತಿಪಾದ್ಯವಲ್ಲ

तत्वप्रकाशिका – मैवम् । भवेदेतद्यद्येतत्प्रकरणे विकारिकारणमेवोच्येत। नैतदस्ति ।

ಉತ್ತರ - ಈ ಪ್ರಕರಣದಲ್ಲಿ ಪ್ರಧಾನಕ್ಕೆ ವಿಕಾರಿಕಾರಣತ್ವವನ್ನು ಹೇಳುತ್ತಿರುವುದಾಗಿ ನಿಶ್ಚಿತವಾದಲ್ಲಿ ನೀವು ಮಾಡಿದ ಆಕ್ಷೇಪ ಸಾಧುವಾಗುತ್ತಿತ್ತು, ಆದರೆ ಹಾಗಿಲ್ಲ.

ಬ್ರಹ್ಮನ ಅನೇಕ ಅಸಾಧಾರಣ ಧರ್ಮಗಳು

तत्वप्रकाशिका – 'एकमेवाद्वितीयम्', 'तत्तेजोऽसृजत', 'सन्मूलाः सोम्येमाः सर्वाः प्रजाः सदायतनाः सत्प्रतिष्ठाः', 'सता सोम्य तदा सम्पन्नो भवति' इत्यादिब्रह्मलक्षणानां श्रवणात् ।

ಏಕೆಂದರೆ 'ಏಕಮೇವಾದ್ವಿತೀಯಮ್', 'ತತ್ತೇಜೋऽಸೃಜತ', 'ಸನ್ಮೂಲಾಃ ಸೋಮ್ಯೇಮಾಃ ಸರ್ವಾಃ ಪ್ರಜಾಃ ಸದಾಯತನಾಃ ಸತ್ಪ್ರತಿಷ್ಠಾಃ', 'ಸತಾ ಸೋಮ್ಯ ತದಾ ಸಂಪನ್ನೋ ಭವತಿ' ಇತ್ಯಾದಿ ಶ್ರುತಿಗಳಲ್ಲಿ ಅದ್ವಿತೀಯತ್ವವೇ ಮೊದಲಾದ ಅನೇಕ ಬ್ರಹ್ಮನ ಲಕ್ಷಣಗಳು ಶ್ರುತವಾಗಿವೆ. ಆದ್ದರಿಂದ 'ಸತ್' ಶಬ್ದದಿಂದ ಪ್ರಧಾನವನ್ನು ವಿವಕ್ಷಿಸಲು ಬರುವುದಿಲ್ಲ.

ಸಿದ್ಧಾಂತ ಮಂಡನೆ

तत्वप्रकाशिका – सिद्धान्तयत् सूत्रमवतार्य व्याचष्टे – अत इति ।। सदेवेत्यादिस्थाने सच्छब्देन विष्णुरेवोच्यते ।

ಈ ಪೂರ್ವಪಕ್ಷವನ್ನು ನಿರಾಕರಿಸುತ್ತಾ ಸಿದ್ಧಾಂತಸ್ಥಾಪಕವಾದ ಸೂತ್ರಕ್ಕೆ ಅವತಾರಿಕೆ ನೀಡಿ ಸೂತ್ರವನ್ನು ವ್ಯಾಖ್ಯಾನಿಸುತ್ತಿದ್ದಾರೆ - 'ಅತಃ' ಇತ್ಯಾದಿ ಗ್ರಂಥದಿಂದ. 'ಸದೇವ' ಇವೇ ಮೊದಲಾದ ಸ್ಥಾನದಲ್ಲಿ ಶ್ರುತವಾದ 'ಸತ್' ಎಂಬ ಶಬ್ದದಿಂದ ಪ್ರತಿಪಾದ್ಯನಾದವನು ವಿಷ್ಣುವೇ ಆಗಿದ್ದಾನೆ.

ಜಡಪ್ರಕೃತಿಗೆ ಈಕ್ಷಣವೇ ಕೂಡದು

तत्वप्रकाशिका – सतस्तदैक्षतेतीक्षत्यास्व्यव्यापारश्रवणात् । जडप्रधानस्येक्षणा-सम्भवादित्यर्थः ।

ಏಕೆಂದರೆ 'ಸತ್' ಪದಾರ್ಥಕ್ಕೆ 'ತದೈಕ್ಷತ' ಎಂಬುದಾಗಿ ಈಕ್ಷಣವೆಂಬ ವ್ಯಾಪಾರವು ಶ್ರುತವಾಗಿದೆ. ಜಡಭೂತವಾದ ಪ್ರಕೃತಿಗೆ ಈಕ್ಷಣವೆಂಬ ವ್ಯಾಪಾರವು ಉಪಪನ್ನವಾಗುವುದಿಲ್ಲ.

ಜಡಪ್ರಕೃತಿಯಲ್ಲಿ ಈಕ್ಷಣವು ಉಪಪನ್ನವಾಗುವುದಿಲ್ಲ

तत्वप्रकाशिका – अपिच विष्ण्वन्यस्य कस्यापीक्षतिर्मुख्यतो न विद्यते किमु जडस्येत्याशयेनाऽऽह – नेति ।।

ಮತ್ತು ವಿಷ್ಣುವನ್ನು ಬಿಟ್ಟು ಬೇರೆ ಯಾರಲ್ಲಿಯೂ ಕೂಡ ಈಕ್ಷಣವನ್ನು ಮುಖ್ಯವಾಗಿ ಹೇಳಲಾಗದು. ಬೇರೆ ಚೇತನಪದಾರ್ಥಗಳಲ್ಲಿಯೇ ಈಕ್ಷಣವು ಮುಖ್ಯವಾಗಿ ಉಪಪನ್ನ-ವಾಗುವುದಿಲ್ಲ ಎಂದ ಮೇಲೆ ಜಡಭೂತವಾದ ಪ್ರಕೃತಿಯಲ್ಲಿ ಈಕ್ಷಣವು ಉಪಪನ್ನ-ವಾಗುವುದಿಲ್ಲವೆಂದು ಪ್ರತ್ಯೇಕವಾಗಿ ಹೇಳಬೇಕೇನು? ಎಂಬ ಅಭಿಪ್ರಾಯದಿಂದ 'ನ' ಇತ್ಯಾದಿ ಭಾಷ್ಯವು ಹೊರಟಿದೆ.

ಪ್ರಧಾನಶಬ್ದಕ್ಕೆ ಲಕ್ಷ್ಮೀದೇವಿಯೆಂದರ್ಥ

तत्वप्रकाशिका – एतेन 'सोमो वै राजा गन्धर्वेष्वासीत्' इत्यादिवत् अभिमानिविवक्षयेक्षत्युक्तिरिति परास्तम् ।

ಹೀಗೆ ಹೇಳಿದ್ದರಿಂದ 'ಸೋಮೋ ವೈ ರಾಜಾ ಗಂಧರ್ವೇಷ್ವಾಸೀತ್' ಎಂಬ ವಾಕ್ಯದಲ್ಲಿ 'ಗಂಧರ್ವೇಷು' ಎಂಬ ಶಬ್ದದಿಂದ ಸೋಮಲತಾಭಿಮಾನಿಯಾದ ಚಂದ್ರನನ್ನು ಹೇಗೆ ವಿವಕ್ಷಿಸ-ಲಾಗುತ್ತದೋ ಅದರಂತೆ ಇಲ್ಲಿಯೂ ಸಹ ಪ್ರಧಾನಶಬ್ದದಿಂದ ಪ್ರಧಾನಕ್ಕೆ ಅಭಿಮಾನಿ-ದೇವತೆಯಾದ ಲಕ್ಷ್ಮೀದೇವಿಯನ್ನು ವಿವಕ್ಷಿಸಬೇಕು. ಈ ದೃಷ್ಟಿಯಿಂದ ಶ್ರುತಿಯು ಈಕ್ಷಣವೆಂಬ ವ್ಯಾಪಾರವನ್ನು ಹೇಳಿದೆ. ಈ ಆಶಂಕೆಯನ್ನು ಈಗ ನಿರಾಕರಿಸಿದಂತಾಯಿತು.

ನಿರವಕಾಶವಾದ ಲಿಂಗ

तत्वप्रकाशिका – ननु निरवकाशविकारित्वलिङ्गेनेक्षतिव्यपदेशो गौणः किं न स्यात् । 'सत्वात् सञ्जायते ज्ञानम्' इत्यादेः प्रधानस्य ज्ञानोपादानत्वादित्यत आह – बहुत्वं चेति ।।

ನಿರವಕಾಶವಾದ ಲಿಂಗದ ಬಲದಿಂದ ಈಕ್ಷಿತೃತ್ವದ ವ್ಯಪದೇಶವನ್ನು ಏಕೆ ಗೌಣವಾಗಿ ವ್ಯಾಖ್ಯಾನಿಸಬಾರದು? ಏಕೆಂದರೆ 'ಸತ್ವಾತ್ ಸಂಜಾಯತೇ ಜ್ಞಾನಮ್' ಎಂಬ ವಾಕ್ಯದಿಂದ ಜ್ಞಾನವು ಸತ್ವಗುಣದಿಂದ ಹುಟ್ಟುತ್ತದೆಂದು ಶ್ರೀಕೃಷ್ಣನು ಹೇಳಿದ್ದಾನೆ. ಅಂತಹ ಸತ್ವಗುಣವು ಪ್ರಧಾನದಲ್ಲಿರುವುದರಿಂದ ಪ್ರಧಾನವು ಜ್ಞಾನಕ್ಕೆ ಉಪಾದಾನಕಾರಣವಾಯಿತೆಂದಾಗುತ್ತದಲ್ಲವೇ? ಈ ಪ್ರಶ್ನೆಗೆ 'ಬಹುತ್ವಂ ಚ' ಇತ್ಯಾದಿ ಭಾಷ್ಯದಿಂದ ಉತ್ತರಿಸಿದ್ದಾರೆ.

ಬಹುಭವನವೆಂಬ ಲಿಂಗವು ಸಾವಕಾಶ

तत्वप्रकाशिका – बहुभावस्य विकारित्वं विनैव स्वरूपबहुत्वेन सावकाशत्वान्न तद्बलेनेक्षतेर्गौणत्वं कल्प्यमिति भावः ।।

'ಸತ್' ಪದಾರ್ಥಕ್ಕೆ ಹೇಳಲ್ಪಟ್ಟ ಬಹುಭವನವೆಂಬ ವಿಕಾರಿತ್ವದ ವಿರೋಧವು ಬರುವುದಿಲ್ಲ. ಏಕೆಂದರೆ ಪರಮಾತ್ಮನು ತನ್ನ ಸ್ವರೂಪದಿಂದ ಅನೇಕ ಅವತಾರಗಳನ್ನು ಸ್ವೀಕರಿಸುತ್ತಾನೆ. ಈ ದೃಷ್ಟಿಯಿಂದ ಶ್ರುತಿಯು ಬಹುಭವನವನ್ನು ಹೇಳಿದೆ ಎಂದು ಸಾವಕಾಶ ಮಾಡಬಹುದು. ಆದ್ದರಿಂದ ಬಹುಭವನವೆಂಬ ಲಿಂಗದ ಬಲದಿಂದ ಈ ಈಕ್ಷತಿಶ್ರುತಿಗೆ ಗೌಣತ್ವವನ್ನು ಕಲ್ಪಿಸಲು ಸಾಧ್ಯವಿಲ್ಲ.

ಸತ್‌ಪದಾರ್ಥವಾದ ಮಹಾವಿಷ್ಣುವೇ ಜಗತ್‌ಕಾರಣನು

तत्वप्रकाशिका – अजायमानोऽविकुर्वाणः । अतः परं ब्रह्मैवैतत्स्थान-प्रतिपाद्यं सदिति तस्यैवैतत्स्रष्टृत्वमि इति सिद्धम् ।।

।। इति श्रीमज्जयतीर्थभिक्षुविरचितायां तत्वप्रकाशिकायाम्
सदधिकरणम् ।।

'ಅಜಾಯಮಾನಃ' ಎಂದರೆ ವಿಕಾರವನ್ನು ಹೊಂದದೇ ಇರುವ ಎಂದರ್ಥ. ಆದ್ದರಿಂದ ಮಹಾವಿಷ್ಣುವೇ ಈ ಸೃಷ್ಟಿಸ್ಥಾನದಿಂದ ಪ್ರತಿಪಾದ್ಯನಾಗಿದ್ದಾನೆ, ಅವನೇ 'ಸತ್' ಶಬ್ದದಿಂದ ವಾಚ್ಯನಾದ್ದರಿಂದ ಜನ್ಮಾಧಿಕರಣದಲ್ಲಿ ಪ್ರತಿಪಾದಿಸಲ್ಪಟ್ಟ ಜಗತ್‌ಸೃಷ್ಟಿಕರ್ತೃತ್ವವು ಮಹಾವಿಷ್ಣುವಿನಲ್ಲಿ ಮಾತ್ರ ಉಪಪನ್ನವಾಗುತ್ತದೆ ಎಂದು ಸಿದ್ಧವಾಯಿತು.

॥ ಇಲ್ಲಿಗೆ ಶ್ರೀಮಜ್ಜಯತೀರ್ಥಮುನಿಗಳಿಂದ ವಿರಚಿತವಾದ ತತ್ವಪ್ರಕಾಶಿಕಾಟೀಕೆಯಲ್ಲಿ ಸದಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ॥

॥ ಶ್ರೀಕೃಷ್ಣಾರ್ಪಣಮಸ್ತು ॥

ಮಂತ್ರಾಲಯ ಪ್ರಭುಗಳಾದ ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ವಿರಚಿತವಾದ
ಭಾವದೀಪ

ಸೃಷ್ಟಿ ಸ್ಥಾನ ಸಮನ್ವಯವೇ ಅಧಿಕರಣದ ಉದ್ದೇಶ

ಭಾವದೀಪಃ – ಈಕ್ಷತಿಕರ್ಮವ್ಯಪದೇಶಾತ್ ಸಃ ॥ ಅತ್ರ ನ್ಯಾಯವಿವರಣೇ ಕಾರಣತ್ವಸಾಮ್ಯಾದ್ ವಿಷ್ಣೋರಚೇತನಪ್ರಕೃತೇಶ್ಚ 'ಸದೇವ ಸೋಮ್ಯ' ಇತ್ಯಾದಿಸೃಷ್ಟಿಸ್ಥಾನಂ ಸಾಧಾರಣಮಿತಿ ಅನೇಕಪ್ರಕರಣಜಾತರೂಪಸ್ಥಾನಂ ಸಮನ್ವೇತವ್ಯಮುಕ್ತಮ್ ।

ಈ ಅಧಿಕರಣದ ನ್ಯಾಯವಿವರಣದಲ್ಲಿ ಸ್ಥಾನದ ಸಮನ್ವಯವನ್ನು ಮಾಡಲಾಗಿದೆಯೆಂದು ಸಮರ್ಥಿಸಿದ್ದಾರೆ. ಶ್ರುತಿಯಲ್ಲಿ ಹೇಳಲ್ಪಟ್ಟ ಕಾರಣತ್ವಧರ್ಮವು ಮಹಾವಿಷ್ಣು ಹಾಗೂ ಜಡಪ್ರಕೃತಿ ಎರಡರಲ್ಲಿಯೂ ಸಾಧಾರಣವಾಗಿದೆ. ಆದ್ದರಿಂದ 'ಸದೇವ ಸೌಮ್ಯ' ಇತ್ಯಾದಿಯಾದ ಸೃಷ್ಟಿಯನ್ನು ಹೇಳುವ ಸ್ಥಾನವು ಉಭಯಸಾಧಾರಣವಾಯಿತು. ಅನೇಕ ಪ್ರಕರಣಗಳ ಸಮೂಹವೇ 'ಸ್ಥಾನ' ಎನಿಸುತ್ತದೆ. ಜಗತ್‌ಕಾರಣತ್ವವನ್ನು ಹೇಳುವ ಶ್ರುತಿಗಳು ಅನೇಕವಿರುವುದರಿಂದ ಆ ಎಲ್ಲಾ ಶ್ರುತಿಗಳ ಸಮನ್ವಯವು ಈ ಅಧಿಕರಣದಲ್ಲಿ ವಿವಕ್ಷಿತವಾದ್ದರಿಂದ ಸ್ಥಾನದ ಸಮನ್ವಯವನ್ನೇ ಈ ಅಧಿಕರಣದ ಉದ್ದೇಶವನ್ನೇ ನ್ಯಾಯವಿವರಣದಲ್ಲಿ ಹೇಳಿರುತ್ತಾರೆ.

ವಿಶೇಷವಿಚಾರ - ಈ ಅಧಿಕರಣದಲ್ಲಿ 'ಸತ್' ಎಂಬ ನಾಮಾತ್ಮಕ ಶಬ್ದವನ್ನು ಸಮನ್ವಯ ಮಾಡಲಾಗಿದೆ. ಇದು ಉಭಯತ್ರಪ್ರಸಿದ್ಧವಾದ್ದರಿಂದ ಈ ಪಾದದಲ್ಲಿಯೇ ಸಮನ್ವಯ ಮಾಡಲು ಅರ್ಹವಾಗಿದೆ. ಈ ವಿಚಾರವನ್ನು 'ಕಾರಣತ್ವಸಾಮ್ಯಾತ್ ವಿಷ್ಣೋರಚೇತನಪ್ರಕೃತೇಶ್ಚ 'ಸದೇವ' ಇತ್ಯಾದಿಸೃಷ್ಟಿಸ್ಥಾನಂ ಸಾಧಾರಣಮ್' ವಿಷ್ಣು ಹಾಗೂ ಜಡಪ್ರಕೃತಿ ಇಬ್ಬರಲ್ಲಿಯೂ ಕಾರಣತ್ವವು ಸಮಾನವಾಗಿರುವುದರಿಂದ 'ಸದೇವ' ಇತ್ಯಾದಿಯಾದ ಕಾರಣತ್ವವನ್ನೇ ಪ್ರತಿಪಾದಿಸುವ ಅನೇಕ ವಾಕ್ಯಗಳಿರುವ ಸೃಷ್ಟಿಸ್ಥಾನವು ಉಭಯಸಾಧಾರಣವಾಗಿದೆ ಎಂದು ನ್ಯಾಯವಿವರಣದಲ್ಲಿ ಹೇಳಿದ್ದಾರೆ.

ಪ್ರಶ್ನೆ - ಜಗತ್‌ಸೃಷ್ಟಿಯ ಬಗ್ಗೆ ಹೇಳುವ ಶ್ರುತಿಗಳಲ್ಲಿ ಕೇವಲ ಕಾರಣತ್ವವನ್ನಷ್ಟೇ ನಿರೂಪಿಸಿರುವುದಿಲ್ಲ. ಕೇವಲ ಕಾರಣತ್ವಸಾಮಾನ್ಯವನ್ನಷ್ಟೇ ಹೇಳಿದ್ದಲ್ಲಿ, ಜಡಪ್ರಕೃತಿ ಹಾಗೂ ಬ್ರಹ್ಮ ಇಬ್ಬರಲ್ಲಿಯೂ ಸಾಧಾರಣವಾದ ಕಾರಣತ್ವವನ್ನು ಹೇಳಿದಂತಾಗುತ್ತಿತ್ತು. ಮತ್ತೇನೆಂದರೆ 'ತದೈಕ್ಷತ ತತ್ತೇಜೋऽಸೃಜತ' ಎಂಬ ವಾಕ್ಯದಲ್ಲಿ ಚೇತನನಾದ ಬ್ರಹ್ಮನಲ್ಲಷ್ಟೇ ಇರುವ ಅಸಾಧಾರಣವಾದ ಸ್ರಷ್ಟೃತ್ವವೆಂಬ ವಿಶೇಷ ರೂಪವಾದ ಕಾರಣತ್ವವು ಹೇಳಲ್ಪಟ್ಟಿದೆ. ಹಾಗೂ 'ಬಹು ಸ್ಯಾಂ ಪ್ರಜಾಯೇಯ' ಇತ್ಯಾದಿ ವಾಕ್ಯದಲ್ಲಿ ಜಡವಾದ ಪ್ರಕೃತಿಯಲ್ಲಷ್ಟೇ ಇರುವ ಅಸಾಧಾರಣವಾದ ಉಪಾದಾನಸ್ವರೂಪವಾದ ಕಾರಣತ್ವವು ನಿರೂಪಿತವಾಗಿದೆ. ಸ್ರಷ್ಟೃತ್ವವು ಪ್ರಕೃತಿಯಲ್ಲಿರುವುದಿಲ್ಲ. ಉಪಾದಾನತ್ವವು ಬ್ರಹ್ಮನಲ್ಲಿರುವುದಿಲ್ಲ. ಹೀಗಿರುವಾಗ ನ್ಯಾಯವಿವರಣದಲ್ಲಿ ಕಾರಣತ್ವವು ಉಭಯಸಾಧಾರಣವಾಗಿದೆಯೆಂದು ಹೇಗೆ ಹೇಳಿದರು ?

ಉತ್ತರ - ಕಾರಣತ್ವವೇ ಉಭಯಸಾಧಾರಣವಾಗಿದೆ. ಏಕೆಂದರೆ ಯಾವಾಗ ಸ್ರಷ್ಟೃತ್ವ ಹಾಗೂ ಉಪಾದಾನತ್ವಗಳಿಗೆ ಪರಸ್ಪರ ವಿರೋಧ ಬರುತ್ತದೋ, ಆವಾಗ ಅದನ್ನು ಪರಿಹರಿಸುವುದಕ್ಕಾಗಿ ಅವೆರಡರಲ್ಲಿ ಒಂದಕ್ಕೆ ಮಹತ್ವವನ್ನು ಕೊಟ್ಟು ಮತ್ತೊಂದನ್ನು ಅದಕ್ಕನುಸಾರಿಯಾಗಿ ವ್ಯಾಖ್ಯಾನಿಸಬೇಕೆಂದು ನಿಶ್ಚಯಿಸಬೇಕು. ಹೀಗೆ ಹೇಳಬೇಕೇ ಹೊರತು, ಇದನ್ನು ಬಿಟ್ಟು ಇಂತಹ ವಾಕ್ಯವನ್ನೇ ಅನುಸರಿಸಿ, ಇಂತಹ ವಾಕ್ಯಕ್ಕೇನೇ ಗೌಣಾರ್ಥ ಮಾಡಬೇಕೆಂಬ ವಿಶೇಷ ನಿಶ್ಚಯವು ತಪ್ಪಾಗುತ್ತದೆ. ಆದ್ದರಿಂದ ಈಕ್ಷಿತೃತ್ವವನ್ನು ಹೇಳುವ ವಾಕ್ಯವನ್ನಾಗಲೀ, ಬಹುಭವನವನ್ನು ಹೇಳುವ ವಾಕ್ಯವನ್ನಾಗಲೀ ವಿವಕ್ಷಿಸಿ ಕಾರಣತ್ವವನ್ನು ನಿರೂಪಣೆ ಮಾಡಲು ಸಾಧ್ಯವಿಲ್ಲ.

ಹೀಗಿರುವಾಗ 'ಸದೇವ ಸೋಮ್ಯ ಇದಮಗ್ರ ಆಸೀತ್' ಎಂಬ ವಾಕ್ಯದಿಂದ ನಿಯಮೇನ ಪೂರ್ವವೃತ್ತಿತ್ವರೂಪವಾದ ಕಾರಣತ್ವದ ಜ್ಞಾನವು ಬರುತ್ತದೆ. 'ಸದೇವ ಸೌಮ್ಯ'

ಇತ್ಯಾದಿ ವಾಕ್ಯದಿಂದ ಜಗತ್ತಿಗೆ ಕಾರಣವಾದದ್ದು ಯಾವುದೋ ಒಂದು ಪದಾರ್ಥವಿದೆ ಎಂದಷ್ಟೇ ತಿಳಿದಾಗ, ವಿಶೇಷ ನಿಶ್ಚಯ ಇಲ್ಲದಿರುವಾಗ ಕಾರಣತ್ವವು ಬ್ರಹ್ಮ ಹಾಗೂ ಪ್ರಕೃತಿ ಎರಡರಲ್ಲಿಯೂ ಸಾಧಾರಣವಾಗಿದೆಯೆಂದು ಹೇಳಿದಂತಾಗುತ್ತದೆ.

ಹೀಗೆ ಹೇಳಿದಾಗ ಭೂಮಾಧಿಕರಣದ ನ್ಯಾಯವಿವರಣದಲ್ಲಿರುವ 'ಅಜ್ಞ' ಎಂಬ ಪದವನ್ನು ಇಲ್ಲಿರುವ ನ್ಯಾಯವಿವರಣದಲ್ಲಿಯೂ ಸಹ ಅನುಷಂಗ ಮಾಡಿಕೊಳ್ಳಬೇಕು ಎಂದು ತಿಳಿಯುತ್ತದೆ. ಅಂದರೆ ಅಜ್ಞಾನಿಯಾದವನಿಗೆ ಕಾರಣತ್ವದ ಜ್ಞಾನವಷ್ಟೇ ಬರುತ್ತದೆ ಹೊರತು, ಕಾರಣತ್ವದ ವಿಶೇಷದ ಜ್ಞಾನವು ಬರುವುದಿಲ್ಲ. ಅವನ ದೃಷ್ಟಿಯಿಂದ ಕಾರಣತ್ವಧರ್ಮವನ್ನು ಉಭಯಸಾಧಾರಣವೆಂದು ಹೇಳಲಾಗಿದೆ. ಆದ್ದರಿಂದಲೇ ನ್ಯಾಯವಿವರಣದಲ್ಲಿ ಮತ್ತು ಟೀಕೆಯಲ್ಲಿಯೂ ಸಹ 'ಸದೇವ ಸೌಮ್ಯ' ಇತ್ಯಾದಿ ಎಂಬ ವಾಕ್ಯವನ್ನಷ್ಟೇ ಸ್ವೀಕರಿಸಿದ್ದಾರೆ ಹೊರತು, 'ತದೈಕ್ಷತ' ಎಂಬ ವಾಕ್ಯವನ್ನಾಗಲೀ, 'ಬಹು ಸ್ಯಾಂ ಪ್ರಜಾಯೇಯ' ಎಂಬ ವಾಕ್ಯವನ್ನಾಗಲೀ ವಿಷಯವಾಕ್ಯವೆಂದು ಉಲ್ಲೇಖಿಸಿಲ್ಲ.

'ಸತ್' ಎಂಬ ನಾಮಾತ್ಮಕ ಶಬ್ದದ ಮೂಲಕ ಸ್ಥಾನ ಸಮನ್ವಯ

भावदीपः – तच्च न साक्षात् । किन्तु तत्स्थसन्नामसमन्वये तद्युक्तानेकप्रकरणसमन्वयो भवतीति सच्छब्दसमन्वद्वारेत्यभिप्रेत्य भाष्ये तच्च सदिति सन्नाम समन्वेतव्यं प्रदर्शितमिति भावेनान्यत्रोक्तमेव साधारण्यं व्यनक्ति – अत्र सदेवेति ।।

ನ್ಯಾಯವಿವರಣದಲ್ಲಿ ಹೇಳಲ್ಪಟ್ಟ 'ಸ್ಥಾನ' ಸಮನ್ವಯವು ಸಾಕ್ಷಾತ್ತಾಗಿ ಎಂದು ತಿಳಿಯಬಾರದು. ಹೊರತಾಗಿ, ಸೃಷ್ಟಿಕಾರಣತ್ವವನ್ನು ಹೇಳುವಂತಹ ಶ್ರುತಿಯಲ್ಲಿರುವ 'ಸತ್' ಎಂಬ ನಾಮಾತ್ಮಕಶಬ್ದದ ಸಮನ್ವಯವನ್ನು ಈ ಅಧಿಕರಣದಲ್ಲಿ ಮಾಡುತ್ತಾರೆ. ಅಂತಹ 'ಸತ್' ಎಂಬ ಶಬ್ದದಿಂದ ಕೂಡಿರುವಂತಹ ಅನೇಕ ಪ್ರಕರಣಗಳ ಸಮನ್ವಯವೂ ಸಹ ಅರ್ಥಾತ್ ಸಿದ್ಧವಾಗುತ್ತದೆ. ಆದ್ದರಿಂದ 'ಸತ್' ಎಂಬ ನಾಮಾತ್ಮಕ ಶಬ್ದದ ಸಮನ್ವಯ ಮೂಲಕವಾಗಿ ಸ್ಥಾನಸಮನ್ವಯವು ವಿವಕ್ಷಿತವಾಗಿದೆಯೆಂದು ನ್ಯಾಯವಿವರಣದ ಅಭಿಪ್ರಾಯ. ಆದ್ದರಿಂದಲೇ ಭಾಷ್ಯದಲ್ಲಿ 'ತಚ್ಚ ಸತ್' ಎಂಬುದಾಗಿ 'ಸತ್' ಎಂಬ ನಾಮಾತ್ಮಕಶಬ್ದದ ಸಮನ್ವಯವನ್ನೇ ಹೇಳಿರುತ್ತಾರೆ. ಹೀಗೆ ಬೇರೆಡೆ ಹೇಳಲ್ಪಟ್ಟ ಸಾಧಾರಣ್ಯವನ್ನೇ ಟೀಕೆಯಲ್ಲಿ 'ಅತ್ರ ಸದೇವ' ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ.

ಸ್ಥಿತಿ ಹಾಗೂ ಸಂಹಾರ ಸ್ಥಾನಗಳ ಸಮನ್ವಯವು ವಿವಕ್ಷಿತ

भावदीपः – सृष्टीत्युपलक्षणम् । 'सदेव सोम्य । सन्मूलाः सोम्येमाः सर्वाः प्रजाः सदायतनाः सत्प्रतिष्ठाः । सता सोम्य तदा सम्पन्नो भवति सति सम्पद्य न विदुः । सत आगत्य न विदुः' इत्यादिसृष्टिसुप्ति-सर्वाश्रयत्वादिप्रतिपादकानेकप्रकरणजातरूपस्थानगतस्येत्यर्थः ।।

ಸೃಷ್ಟಿಪ್ರತಿಪಾದಕವಾದ ಎಂಬುದಾಗಿ ಟೀಕೆಯಲ್ಲಿ ಹೇಳಿದ್ದು ಕೇವಲ ಉಪಲಕ್ಷಣ. ಇದರ ಜೊತೆಗೆ ಸ್ಥಿತಿಪ್ರತಿಪಾದಕ, ಸಂಹಾರಪ್ರತಿಪಾದಕಗಳನ್ನೂ ಸಹ ವಿವಕ್ಷಿಸಬೇಕು. ಆದ್ದರಿಂದ 'ಸದೇವಸೌಮ್ಯ । ಸನ್ಮೂಲಾಃ ಸೋಮ್ಯೇಮಾಃ ಸರ್ವಾಃ ಪ್ರಜಾಃ ಸದಾಯತನಾಃ ಸತ್‌ಪ್ರತಿಷ್ಠಾ । ಸತಾ ಸೋಮ್ಯ ತದಾ ಸಂಪನ್ನೋ ಭವತಿ ಸತಿ ಸಂಪದ್ಯ ನ ವಿದುಃ । ಸತ ಆಗತ್ಯ ನ ವಿದುಃ' ಇವೇ ಮೊದಲಾದ ಸೃಷ್ಟಿ-ಪ್ರತಿಪಾದಕವಾದ ಸುಪ್ತಿಪ್ರತಿಪಾದಕವಾದ, ಸರ್ವಾಶ್ರಯಪ್ರತಿಪಾದಕವಾದ ಅನೇಕ ಪ್ರಕರಣಗಳ ಸಮೂಹರೂಪವಾದ ಸ್ಥಾನದ ಸಮನ್ವಯವನ್ನು ಈ ಅಧಿಕರಣದಲ್ಲಿ ಮಾಡುತ್ತಿದ್ದಾರೆಂದು ಹೇಳಿದಂತಾಗುತ್ತದೆ.

ವಿಶೇಷವಿಚಾರ - ಪ್ರಶ್ನೆ - ಕಾರಣತ್ವದ ಮೂಲಕವಾಗಿ 'ಸತ್' ಎಂಬ ಶಬ್ದವು ಉಭಯತ್ರಪ್ರಸಿದ್ಧವಾಗಿದೆಯೆಂದು ಹೇಳುತ್ತಿದ್ದೀರಿ. ಆದರೆ 'ಸತ್' ಶಬ್ದಕ್ಕೆ 'ಅಬಾಧ್ಯತ್ವ' ಮೊದಲಾದ ಅರ್ಥಗಳಿವೆ. ಈ ಅಬಾಧ್ಯತ್ವವೇ ಮೊದಲಾದ ಧರ್ಮ-ಗಳಿಂದಲೇ ಉಭಯತ್ರಪ್ರಸಿದ್ಧವೆಂದು ಹೇಳಬಹುದು. ಕಾರಣತ್ವದ ಮೂಲಕವಾಗಿ ಉಭಯತ್ರಪ್ರಸಿದ್ಧತ್ವವನ್ನು ಹೇಳುವುದಕ್ಕಿಂತ ತನ್ನ ಅರ್ಥವೇ ಆಗಿರುವ ಅಬಾಧ್ಯತ್ವಾದಿಗಳ ಮೂಲಕ ಉಭಯತ್ರಪ್ರಸಿದ್ಧತ್ವವನ್ನು ಹೇಳಿದಾಗ ಸ್ವಾಭಾವಿಕವಾಗಿಯೇ ಆಕಾಶಾದಿಶಬ್ದಗಳಂತೆ ಇದೂ ಸಹ ಉಭಯತ್ರಪ್ರಸಿದ್ಧವಾಗುತ್ತದೆ.

ಇನ್ನು ನಿರ್ದೋಷತ್ವ, ಸ್ವಾತಂತ್ರ್ಯ ಮೊದಲಾದ ಧರ್ಮಗಳಿಂದಲೇ ಉಭಯತ್ರಪ್ರಸಿದ್ಧತ್ವವನ್ನು ಹೇಳಬಹುದಲ್ಲವೇ? ಎಂದು ಪ್ರಶ್ನಿಸಬಾರದು. ನಿರ್ದೋಷತ್ವಾದಿ-ಗಳನ್ನು ವಿವಕ್ಷಿಸಿದರೆ ಕಾರಣತ್ವ ಧರ್ಮದಿಂದಲೂ ಸಹ ಉಭಯತ್ರಪ್ರಸಿದ್ಧತ್ವವನ್ನು ಹೇಳಲು ಸಾಧ್ಯವಿಲ್ಲ. ಏಕೆಂದರೆ 'ಸತ್' ಶಬ್ದದ ಅರ್ಥವಾದ ನಿರ್ದೋಷತ್ವವಾಗಲೀ, ಸ್ವಾತಂತ್ರ್ಯವಾಗಲೀ, ಜಡಪ್ರಕೃತಿಯಲ್ಲಿ ಇರುವುದಿಲ್ಲ. ಹೀಗಿರುವಾಗ ಕಾರಣತ್ವಧರ್ಮದ ಮೂಲಕವಾಗಿ ಜಡಪ್ರಕೃತಿಯಲ್ಲಿ 'ಸತ್' ಶಬ್ದವು ಪ್ರಸಿದ್ಧವಾಗಿದೆಯೆಂದು ಹೇಳಲು ಹೇಗೆ ಸಾಧ್ಯ ? ಆದ್ದರಿಂದ

ಅಬಾಧ್ಯತ್ವಾದಿಧರ್ಮಗಳಿಂದಲೇ ಸ್ವಾಭಾವಿಕವಾಗಿ ಉಭಯತ್ರಪ್ರಸಿದ್ಧತ್ವವನ್ನು ಹೇಳಬಹುದು. ಹಾಗೇ ಹೇಳಿದಾಗ 'ಸತ್' ಶಬ್ದದ ಪ್ರವೃತ್ತಿನಿಮಿತ್ತವೆನಿಸಿದ ಅಬಾಧ್ಯತ್ವಾದಿಗಳು ಬ್ರಹ್ಮ ಹಾಗೂ ಪ್ರಕೃತಿ ಇಬ್ಬರಲ್ಲಿರುವಂತೆ ಇತರ ಘಟಪಟಾದಿಗಳಲ್ಲಿಯೂ ಸಹ ಇರುತ್ತದೆ. ಇದರಂತೆ ನೀವು ಹೇಳುತ್ತಿರುವ ಕಾರಣತ್ವವೂ ಸಹ ಬ್ರಹ್ಮ ಹೂಗೂ ಪ್ರಕೃತಿಯಲ್ಲಷ್ಟೇ ಸಾಧಾರಣವಾಗದೇ, ಅದೃಷ್ಟಾದಿಗಳಲ್ಲಿಯೂ ಸಹ ಇರುವುದು ಕಾಣಿಸುತ್ತಿದೆ. ಆದ್ದರಿಂದ ಕಾರಣತ್ವವನ್ನು ಉಭಯತ್ರಪ್ರಸಿದ್ಧತ್ವಕ್ಕೆ ಪ್ರಯೋಜಕವೆಂದು ಹೇಗೆ ಹೇಳುತ್ತೀರಿ?

ಉತ್ತರ - 'ಸದೇವ ಸೌಮ್ಯ' ಇತ್ಯಾದಿ ಶ್ರುತಿಯಲ್ಲಿ ಕೇಳಿಸುತ್ತಿರುವ ಸರ್ವಕಾರಣತ್ವವು ಏಕವ್ಯಕ್ತಿಕವಾಗಿದೆ. ನೀವು ಆಕ್ಷೇಪಿಸುತ್ತಿರುವ ಅದೃಷ್ಟಾದಿವ್ಯಕ್ತಿಗಳಲ್ಲಿರುವ ಕಾರಣತ್ವವು ಅನೇಕ ವ್ಯಕ್ತಿಕವಾಗಿದೆ. ಆದ್ದರಿಂದ ಅದೃಷ್ಟಾದಿಗಳಲ್ಲಿರುವ ಕಾರಣತ್ವವೇ ಬೇರೆ, ಬ್ರಹ್ಮ ಹಾಗೂ ಪ್ರಕೃತಿಗಳಲ್ಲಿರುವ ಕಾರಣತ್ವವೇ ಬೇರೆ. ಏಕವ್ಯಕ್ತಿಕವಾದ ಸಕಲಕಾರಣತ್ವವು ಬ್ರಹ್ಮ ಹಾಗೂ ಪ್ರಕೃತಿ ಎರಡರಲ್ಲಿ ಮಾತ್ರ ಸಾಧಾರಣವಾಗಿರುವುದರಿಂದ ನಾವು ಹೇಳಿದ ಕಾರಣತ್ವವು ಉಭಯತ್ರಪ್ರಸಿದ್ಧತ್ವಕ್ಕೆ ಪ್ರಯೋಜಕವಾಗಿದೆ. ಅಥವಾ ಉಪಾದಾನತ್ವ , ಕರ್ತೃತ್ವ ಇವೆರಡರಲ್ಲಿ ಒಂದರಿಂದ ಮಾತ್ರ ವಿಶಿಷ್ಟವಾದ ಕಾರಣತ್ವವನ್ನು ನಾವು ವಿವಕ್ಷಿಸುತ್ತಿದ್ದೇವೆ. ಏಕೆಂದರೆ ಪ್ರಕೃತಿಯಲ್ಲಿರುವ ಕಾರಣತ್ವದಲ್ಲಿ ಉಪಾದಾನತ್ವವಿದೆ. ಬ್ರಹ್ಮನಲ್ಲಿರುವ ಕಾರಣತ್ವದಲ್ಲಿ ಕರ್ತೃತ್ವವಿದೆ. ಅದೃಷ್ಟಾದಿಗಳಲ್ಲಿರುವ ಕಾರಣತ್ವದಲ್ಲಿ ಉಪಾದಾನತ್ವವೂ ಇಲ್ಲ. ಕರ್ತೃತ್ವವೂ ಇಲ್ಲ. ಆದ್ದರಿಂದ 'ಉಪಾದಾನತ್ವಕರ್ತೃತ್ವಯೋಃ ಅನ್ಯತರತ್ವ' ರೂಪವಾದ ಕಾರಣತ್ವವು ಬ್ರಹ್ಮ ಹಾಗೂ ಪ್ರಕೃತಿ ಇಬ್ಬರಲ್ಲಿ ಮಾತ್ರ ಸಾಧಾರಣವಾಗಿದೆ. ಹಾಗೂ ಅಬಾಧ್ಯತ್ವ ಮೊದಲಾದ 'ಸತ್' ಶಬ್ದದ ಪ್ರವೃತ್ತಿನಿಮಿತ್ತಗಳಿಂದ ಉಭಯಸಾಧಾರಣ್ಯವನ್ನು ಹೇಳಲು ಸಾಧ್ಯವಿಲ್ಲ. ಏಕೆಂದರೆ ಅಬಾಧ್ಯತ್ವಾದಿಗಳೆಲ್ಲವೂ ಸರ್ವಸಾಧಾರಣವಾಗಿದೆ. ಈ ದೃಷ್ಟಿಯಿಂದ ಕಾರಣತ್ವಮುಖದಿಂದಲೇ ಉಭಯತ್ರಪ್ರಸಿದ್ಧಿಯನ್ನು ಹೇಳಲಾಗಿದೆ.

ಜಗತ್ಕಾರಣತ್ವವು ವಿಷ್ಣು ಹಾಗೂ ಪ್ರಕೃತಿ ಉಭಯಸಾಧಾರಣ

भावदीपः – कारणत्वेति ।। 'सदेव' इति वाक्ये विश्वस्मात् पूर्वं सत्वोक्त्या प्रतीतकारणत्वसाम्येनेति वा 'तत्तेजोऽसृजत' इति वाक्यप्रतीत कारणत्वसाम्येनेति वाऽर्थः । अधिकं चन्द्रिकायाम् ।

ವಿಷ್ಣು ಹಾಗೂ ಪ್ರಕೃತಿ ಕಾರಣತ್ವವು ಇಬ್ಬರಲ್ಲಿಯೂ ಸಮಾನವಾಗಿದೆಯೆಂದು ಟೀಕೆಯಲ್ಲಿ ಹೇಳಿದ್ದಾರೆ - ಇದರ ಅಭಿಪ್ರಾಯ ಹೀಗಿದೆ - 'ಸದೇವ ಸೌಮ್ಯ' ಎಂಬ ವಾಕ್ಯದಲ್ಲಿ ಜಗತ್ತಿಗಿಂತ ಮೊದಲು

ವಿಷ್ಣುವಿನ ಅಸ್ತಿತ್ವವನ್ನು ಹೇಳಿದ್ದರಿಂದ ಜಗತ್‌ಕಾರಣತ್ವವವನ್ನು ಹೇಳಿದಂತಾಗುತ್ತದೆ. 'ತತ್ತೇಜೋ೭ಸೃಜತ' ಎಂಬ ಶ್ರುತಿಯಲ್ಲಿ ಪ್ರಕೃತಿಗೆ ಜಗತ್‌ಕಾರಣತ್ವವನ್ನು ಹೇಳಲಾಗಿದೆ. ಹೀಗೆ ವಿಷ್ಣು ಹಾಗೂ ಪ್ರಕೃತಿ ಎರಡರಲ್ಲಿಯೂ ಕಾರಣತ್ವಧರ್ಮವು ಸಮಾನವಾಗಿದೆಯೆಂದು. ಹೆಚ್ಚಿನ ವಿಚಾರವನ್ನು ಚಂದ್ರಿಕೆಯಲ್ಲಿ ತಿಳಿಯಬೇಕು.

ವಿಶೇಷವಿಚಾರ- ಪ್ರಶ್ನೆ - ಕಾರಣತ್ವದ ಮೂಲಕವಾಗಿ 'ಸತ್' ಎಂಬ ಶಬ್ದವು ಉಭಯತ್ರಪ್ರಸಿದ್ಧವಾಗುವ ಕಾರಣ ಈ ಅಧಿಕರಣದಲ್ಲಿ 'ಸತ್' ಶಬ್ದವನ್ನು ಸಮನ್ವಯ ಮಾಡಲಾಗಿದೆಯೆಂದು ಹೇಳುವುದಾದರೆ ಆಕಾಶಶಬ್ದದ ಸಮನ್ವಯವನ್ನೂ ಸಹ ಮಾಡಬೇಕಾದೀತು. ಏಕೆಂದರೆ 'ಸರ್ವಾಣಿ ಹ ವಾ ಇಮಾನಿ ಭೂತಾನಿ ಆಕಾಶಾದೇವ ಸಮುತ್ಪದ್ಯಂತೇ' ಎಂಬ ವಾಕ್ಯದಲ್ಲಿ ಕೇವಲ ಕಾರಣತ್ವವು ಪ್ರತೀತವಾಗುತ್ತಿದೆ ಹೊರತು, ಉಪಾದಾನಕಾರಣವೆಂದಾಗಲೀ, ನಿಮಿತ್ತಕಾರಣವೆಂದಾಗಲೀ ಪ್ರತೀತವಾಗುತ್ತಿಲ್ಲ. ಆದ್ದರಿಂದ ಇಂತಹ ಕಾರಣತ್ವವೂ ಸಹ ಪ್ರಕೃತಿ ಹಾಗೂ ವಿಷ್ಣು ಇಬ್ಬರಲ್ಲಿಯೂ ಸಾಧಾರಣವಾಯಿತು. ಇಂತಹ ಕಾರಣತ್ವದಿಂದ ಸಹಿತವಾಗಿರುವ ಆಕಾಶಶಬ್ದವೂ ಕೂಡ ಉಭಯತ್ರಪ್ರಸಿದ್ಧವೆಂದಾಗಿ 'ಸತ್' ಶಬ್ದದಂತೆ ಇದರ ಸಮನ್ವಯವನ್ನೂ ಸಹ ಮಾಡಬೇಕಲ್ಲವೇ?

ಉತ್ತರ - 'ಸತ್' ಎಂಬ ಶಬ್ದಕ್ಕೂ ಆಕಾಶಶಬ್ದಕ್ಕೂ ವ್ಯತ್ಯಾಸವಿದೆ - 'ಸತ್' ಎಂಬ ಶಬ್ದಕ್ಕೆ ಸತ್ಯವೆಂದರ್ಥ. ಸಕಲ ವಸ್ತುಗಳೂ ಸಹ ಸತ್ಯವೇ ಆಗಿರುವುದರಿಂದ ವ್ಯಕ್ತಿವಿಶೇಷಕ್ಕೆ ಇದು ವಾಚಕವಾಗಿಲ್ಲ. ಆದ್ದರಿಂದಲೇ ಈ 'ಸತ್' ಶಬ್ದಕ್ಕೆ ಸ್ವತಃ ಉಭಯತ್ರಪ್ರಸಿದ್ಧತ್ವವು ಇರುವುದಿಲ್ಲ. ಆದರೆ ಕಾರಣತ್ವವು ಉಭಯತ್ರಪ್ರಸಿದ್ಧವಾದ್ದರಿಂದ ತನ್ಮೂಲಕವಾಗಷ್ಟೇ ಇದು ಉಭಯತ್ರಪ್ರಸಿದ್ಧವೆನಿಸುತ್ತದೆ. ಆದರೆ ಆಕಾಶಶಬ್ದವು ಅರ್ಥವಿಶೇಷದಲ್ಲಿ ಪ್ರಸಿದ್ಧವಾಗಿದೆ. ಆದ್ದರಿಂದ ಇದಕ್ಕೆ ಕಾರಣತ್ವದ ಆಧೀನ್ಯವಿರುವುದಿಲ್ಲ. ಹೊರತಾಗಿ ಕಾರಣತ್ವವೇ ಆಕಾಶಶಬ್ದದ ಅಧೀನವಾಗಿದೆ. ಅಂದರೆ ಆಕಾಶಶಬ್ದವು ಭೂತಾಕಾಶದಲ್ಲಿ ಪ್ರಸಿದ್ಧವಾದ್ದರಿಂದ ಕಾರಣತ್ವವೂ ಸಹ ಭೂತಾಕಾಶದಲ್ಲಿಯೇ ಬರಬೇಕೆಂದು ಹೇಳಬಹುದು ಹೊರತು, ಆಕಾಶಶಬ್ದವು ಕಾರಣತ್ವದ ಅಧೀನವಾಗಿದೆಯೆಂದು ಹೇಳಲು ಬರುವುದಿಲ್ಲ. ಆದ್ದರಿಂದಲೇ 'ಸತ್' ಶಬ್ದದಂತೆ ಆಕಾಶಶಬ್ದಕ್ಕೆ ಉಭಯತ್ರಪ್ರಸಿದ್ಧತ್ವವನ್ನು ಆಪಾದಿಸಲು ಬರುವುದಿಲ್ಲ.

ಪ್ರಶ್ನೆ - ಕಾರಣತ್ವವು ಉಭಯಸಾಧಾರಣವಾದ್ದರಿಂದ 'ಸತ್' ಶಬ್ದವೂ ಸಹ ಉಭಯಸಾಧಾರಣವಾಗಿದೆಯೆಂದು ಸಮರ್ಥಿಸುತ್ತಿದ್ದೀರಿ. ಹಾಗಾದರೆ ಕಾರಣತ್ವವೆಂಬ ಲಿಂಗವನ್ನೇ ಈ ಅಧಿಕರಣದಲ್ಲಿ ಸಮನ್ವಯ ಮಾಡಬಹುದು. ಇದನ್ನು ಸಮನ್ವಯ

ಮಾಡುವುದರಿಂದ 'ಸತ್' ಎಂಬ ನಾಮಾತ್ಮಕ ಶಬ್ದದ ಸಮನ್ವಯವೂ ಕೂಡ ಅರ್ಥಾತ್ ಸಿದ್ಧವಾಗುತ್ತದಲ್ಲವೇ?

ಉತ್ತರ - 'ಸದೇವ ಸೌಮ್ಯ' ಎಂಬ ಶ್ರುತಿಯಲ್ಲಿ 'ಸತ್' ಎಂಬ ಶಬ್ದವು ಮೊದಲು ಕೇಳಿಸುತ್ತಿದೆ. ಹೀಗೆ ಪ್ರಥಮಶ್ರುತವಾದ 'ಸತ್' ಶಬ್ದದ ಸಮನ್ವಯವನ್ನು ಬಿಟ್ಟು ಅನಂತರ ಶ್ರುತವಾದ ಕಾರಣತ್ವದ ಸಮನ್ವಯವನ್ನು ಮಾಡಬಾರದು. ಮತ್ತು ಹಿಂದಿನ ಅಧಿಕರಣದಲ್ಲಿ 'ಅಕ್ಷರ' ಎಂಬ ನಾಮಾತ್ಮಕ ಶಬ್ದದ ಸಮನ್ವಯವನ್ನು ಮಾಡಿದ್ದರಿಂದ ಈ ಅಧಿಕರಣದಲ್ಲಿಯೂ ನಾಮಾತ್ಮಕ ಶಬ್ದದ ಸಮನ್ವಯವೇ ಬುದ್ಧಿಸ್ಥವಾಗುತ್ತದೆ. ಆದ್ದರಿಂದ 'ಸತ್' ಎಂಬ ನಾಮಾತ್ಮಕ ಶಬ್ದದ ಸಮನ್ವಯವನ್ನೇ ಮಾಡುವುದು ಸೂಕ್ತ ಹೊರತು, ಲಿಂಗಾತ್ಮಕಶಬ್ದಸಮನ್ವಯವು ಸೂಕ್ತವಲ್ಲ.

ಶ್ರುತಿ ಹಾಗೂ ಲಿಂಗಗಳ ನಡುವೆ ಶ್ರುತಿಯೇ ಪ್ರಬಲವಾಗಿದೆ. ಇಂತಹ ಶ್ರುತಿಯೆಂಬ ಪ್ರಬಲವಾದ ನಾಮಾತ್ಮಕಶಬ್ದದ ಸಮನ್ವಯವನ್ನು ನೇರವಾಗಿ ಮಾಡಿ ಲಿಂಗಾತ್ಮಕಶಬ್ದದ ಸಮನ್ವಯವನ್ನು ಅರ್ಥಾತ್ ಮಾಡುವುದು ತಪ್ಪಲ್ಲ. ಆದರೆ ದುರ್ಬಲವಾದ ಲಿಂಗಸಮನ್ವಯವನ್ನು ನೇರವಾಗಿ ಮಾಡಿ, ಪ್ರಬಲವಾದ ನಾಮಸಮನ್ವಯವನ್ನು ಅರ್ಥಾತ್ ಮಾಡುವಂಥಾದ್ದು ಅನ್ಯಾಯವಾಗುತ್ತದೆ.

ಮತ್ತು 'ಸತ್' ಎಂಬ ನಾಮಾತ್ಮಕಶಬ್ದದ ಸಮನ್ವಯವನ್ನು ಮಾಡುವುದರಿಂದ ಅನೇಕ ಪ್ರಯೋಜನವಿದೆ. 'ಸರ್ವಾಃ ಪ್ರಜಾಃ ಸದಾಯತನಾಃ ಸತ್‌ಪ್ರತಿಷ್ಠಾಃ ಸತಾ ಸೋಮ್ಯ ತದಾ ಸಂಪನ್ನೋ ಭವತಿ ಸತಿ ಸಂಪದ್ಯ ನ ವಿದುಃ ಸತ ಆಗತ್ಯ ನ ವಿದುಃ' ಇತ್ಯಾದಿಯಾಗಿ 'ಸತ್' ಶಬ್ದದ ಜೊತೆಗೆ ಸರ್ವಾಧಾರತ್ವ, ಸುಷುಪ್ತಿಗಮ್ಯತ್ವ ಮೊದಲಾದ ಗುಣಪ್ರತಿಪಾದಕವಾದ ಅನೇಕ ಪ್ರಕರಣಗಳ ಸಮನ್ವಯವೂ ಸಹ ಬ್ರಹ್ಮನಲ್ಲಿ ಅರ್ಥಾತ್ ಸಿದ್ಧವಾಗುತ್ತದೆ. ಹೀಗೆ 'ಸತ್' ನಾಮಾತ್ಮಕ ಶಬ್ದದ ಸಮನ್ವಯದಲ್ಲಿ ಫಲಾಧಿಕ್ಯವು ಇರುವ ಕಾರಣ ಕಾರಣತ್ವದ ಲಿಂಗದ ಸಮನ್ವಯವನ್ನು ಇಲ್ಲಿ ಮಾಡಿರುವುದಿಲ್ಲ.

ಹೀಗೆ 'ಸತ್' ಶಬ್ದದ ಸಮನ್ವಯದ ಮೂಲಕ ಅನೇಕ ಗುಣಗಳ ಸಮನ್ವಯವು ಸಿದ್ಧವಾಗುತ್ತದೆಂಬ ದೃಷ್ಟಿಯಿಂದಲೇ ಅನುವ್ಯಾಖ್ಯಾನದಲ್ಲಿ 'ಸ್ಥಾನಂ ಲಿಂಗಮನುಗ್ರಹಃ' ಎಂಬುದಾಗಿ, ಹಾಗೂ ನ್ಯಾಯವಿವರಣದಲ್ಲಿ 'ಸದೇವ ಸೋಮ್ಯೇತ್ಯಾದಿಸೃಷ್ಟಿಸ್ಥಾನಮ್' ಎಂಬಲ್ಲಿಯೂ ಅನೇಕ ಪ್ರಕರಣಕ್ಕೆ ವಾಚಕವಾದ ಸ್ಥಾನ ಎಂಬ ಪದವನ್ನೇ ಪ್ರಯೋಗಿಸಿದ್ದಾರೆ.

ಆದರೆ ಭಾಷ್ಯದಲ್ಲಿ 'ತಚ್ಚ ಸತ್' ಎಂಬುದಾಗಿ 'ಸತ್' ಶಬ್ದ ಪ್ರಯೋಗವನ್ನೇಕೆ ಮಾಡಿದ್ದಾರೆಂದರೆ 'ಸತ್' ಶಬ್ದವನ್ನು ನೇರವಾಗಿ ಸಮನ್ವಯಮಾಡುತ್ತಿದ್ದಾರೆಂಬ ಅಭಿಪ್ರಾಯದಿಂದ ಮಾತ್ರ.

ಹಾಗಾಗಿ ಶ್ರೀಮದಾಚಾರ್ಯರು ಅನುವ್ಯಾಖ್ಯಾನ ಹಾಗೂ ನ್ಯಾಯವಿವರಣಗಳಲ್ಲಿ ಸ್ಥಾನದ ಸಮನ್ವಯವೆಂದಿದ್ದಾರೆ. ಬ್ರಹ್ಮಸೂತ್ರಭಾಷ್ಯ ಹಾಗೂ ಅಣುಭಾಷ್ಯ ಗ್ರಂಥಗಳಲ್ಲಿ 'ಸತ್' ಶಬ್ದದ ಸಮನ್ವಯವೆಂದಿದ್ದಾರೆಂಬುದನ್ನು ಗಮನಿಸಬೇಕು.

ಪ್ರಶ್ನೆ - ಹಾಗಾದರೆ ಅನುವ್ಯಾಖ್ಯಾನದಲ್ಲಿ ಆಯಾ ಪಾದಗಳ ಪ್ರತಿಪಾದ್ಯವಿಷಯವನ್ನು ಹೇಳುವ ಸಂದರ್ಭದಲ್ಲಿ 'ಲಿಂಗನಾಮ್ನಾಮ್' 'ಲಿಂಗ ಹಾಗೂ ನಾಮಾತ್ಮಕ ಶಬ್ದಗಳ ಸಮನ್ವಯವನ್ನಷ್ಟೇ ಮೂರನೆಯ ಪಾದದಲ್ಲಿ ಮಾಡಲಾಗುತ್ತದೆ' ಎಂದು ಹೇಳಿದ್ದಾರಲ್ಲವೇ?

ಉತ್ತರ - ಹೀಗೆ ಪ್ರಶ್ನಿಸಬಾರದು - 'ಲಿಂಗನಾಮ್ನಾಮ್' ಎಂದೇಕೆ ಹೇಳಿದ್ದಾರೆಂದರೆ ಹಿಂದಿನ ಎರಡು ಪಾದಗಳಲ್ಲಿ ಲಿಂಗ ಅಥವಾ ನಾಮ ಇವೆರಡರ ಮಧ್ಯದಲ್ಲಿ ಒಂದೊಂದರ ಸಮನ್ವಯವಷ್ಟೇ ಸೀಮಿತವಾಗಿದೆ. ಆದರೆ ಈ ಪಾದದಲ್ಲಿ ಹಾಗೆ ನಿಯಮವಿಲ್ಲ ಎಂಬುದಾಗಿ ಪೂರ್ವಪಾದಗಳ ನಿಯಮವನ್ನು ವ್ಯವಚ್ಛೇದ ಮಾಡುವ ಉದ್ದೇಶದಿಂದಷ್ಟೇ 'ಲಿಂಗನಾಮ್ನಾಮ್' ಎಂದಿದ್ದಾರೆ. ಹೊರತು, ಸ್ಥಾನ ಸಮನ್ವಯವನ್ನು ವ್ಯಾವೃತ್ತಿ ಮಾಡುವುದಕ್ಕಾಗಿ ಹಾಗೆ ಹೇಳಿಲ್ಲ. ಅಥವಾ ಸ್ಥಾನ ಸಮನ್ವಯವನ್ನು ನೇರವಾಗಿ ಮಾಡುತ್ತಿಲ್ಲ ಎಂಬ ಉದ್ದೇಶದಿಂದ ಹಾಗೇ ಹೇಳಿರಬಹುದು.

ಆದ್ದರಿಂದ ಬೇರೆ ಅಧಿಕರಣಗಳಲ್ಲಿಯೂ ಸಹ ಆಯಾ ಅಧಿಕರಣಗಳಿಂದ ಸಮನ್ವಯ ಮಾಡಲು ಯೋಗ್ಯವಾದ ನಾಮಾತ್ಮಕ ಅಥವಾ ಲಿಂಗಾತ್ಮಕಶಬ್ದಗಳಿಂದ ಕೂಡಿರುವ ಸ್ಥಾನದ ಸಮನ್ವಯವೂ ಸಹ ಅರ್ಥಾತ್ ಸಿದ್ಧವಾಗುತ್ತದೆಂದು ತಿಳಿಯಬೇಕು. ಈ ದೃಷ್ಟಿಯಿಂದಲೂ ಸ್ಥಾನದ ಸಮನ್ವಯವನ್ನು ಹೇಳಿದ್ದಾರೆಂದು ತಿಳಿಯಬೇಕು.

ಸ್ರಷ್ಟೃಪದದಿಂದ ಸೂಚಿತವಾದ ಆಕ್ಷೇಪ

भावदीपः – सङ्गतिपरत्वेन तावद् भाष्यं व्याकुर्वन् सतः स्रष्टृत्वमुच्यत इति स्रष्टृपदसूचितमाक्षेप्यं दर्शयति – जन्मादीति ।।

ಶ್ರೀಮದಾಚಾರ್ಯರ ಭಾಷ್ಯವನ್ನು ಸಂಗತಿಪ್ರದರ್ಶನ ಮೂಲಕವಾಗಿ ವ್ಯಾಖ್ಯಾನ ಮಾಡುತ್ತಾ, 'ಸತ್' ಪದಾರ್ಥಕ್ಕೆ ಸ್ರಷ್ಟೃತ್ವವನ್ನು ಹೇಳುವ ಮೂಲಕ ಸ್ರಷ್ಟೃಪದದಿಂದ ಸೂಚಿತವಾದ ಆಕ್ಷೇಪವನ್ನು ತೋರಿಸುತ್ತಿದ್ದಾರೆ 'ಜನ್ಮಾದಿ' ಇತ್ಯಾದಿ ವಾಕ್ಯದಿಂದ.

ಕಾರಣತ್ವದ ಜೊತೆ ಇತರ ಗುಣಗಳೂ ವಿವಕ್ಷಿತ

भावदीपः – अत्र भाष्यटीकयोः स्रष्टृत्वशब्दः कारणत्वमात्रपरः, स च गुणान्तरोपलक्षक इत्यग्रे व्यक्तीभविष्यति । उच्यत इत्यस्यार्थः – प्रतीयत इति ।।

ಈ ಅಧಿಕರಣದ ಭಾಷ್ಯ ಹಾಗೂ ಟೀಕೆಯಲ್ಲಿರುವ ಸ್ರಷ್ಟೃತ್ವ ಪದವು ಕಾರಣತ್ವವನ್ನಷ್ಟೇ ಹೇಳುತ್ತದೆ. ಆದ್ದರಿಂದ ಬೇರೆ ಗುಣಗಳಿಗೂ ಸಹ ಉಪಲಕ್ಷಕವಾಗಿದೆಯೆಂಬ ವಿಚಾರವು ಮುಂದೆ ಸ್ಪಷ್ಟವಾಗುತ್ತದೆ. 'ಉಚ್ಯತೇ' ಎಂಬರ್ಥವನ್ನೇ 'ಪ್ರತೀಯತೇ' ಎಂಬುದರಿಂದ ಹೇಳಿರುತ್ತಾರೆ.

ಸದೇವ ಎಂಬ ವಿಷಯವಾಕ್ಯವು ಛಾಂದೋಗ್ಯದ ಆರನೆಯ ಅಧ್ಯಾಯದಲ್ಲಿದೆ

भावदीपः – 'सदेव' इत्यादि तु वाक्यप्रतीकं सन्नामप्रदर्शनार्थमिति दर्शयन् व्याचष्टे – छन्दोगश्रुतौ सत इति ।। षष्ठेऽध्याय इत्यर्थः ।

ಭಾಷ್ಯದಲ್ಲಿ ಹೇಳಲ್ಪಟ್ಟ 'ಸದೇವ' ಎಂಬುದು ಪ್ರತೀಕಗ್ರಹಣವಾಗಿದೆಯೆಂಬ ಅಭಿಪ್ರಾಯದಿಂದ 'ಸತ್' ಎಂಬ ನಾಮಾತ್ಮಕ ಶಬ್ದದ ಸಮನ್ವಯವು ವಿವಕ್ಷಿತವಾಗಿದೆ ಎಂದು ತೋರಿಸುತ್ತಿದ್ದಾರೆ. 'ಛಂದೋಗಶ್ರುತೌ ಸತಃ' ಎಂಬುದಾಗಿ. ಆರನೆಯ ಅಧ್ಯಾಯದ ಛಾಂದೋಗ್ಯದಲ್ಲಿ ಈ ವಾಕ್ಯವು ಇರುತ್ತದೆಂದು ತಿಳಿಯಬೇಕು.

ಜನ್ಮಾಧಿಕರಣದಿಂದ ಸಂಗತಿ

भावदीपः – 'इत्यादिना' इत्यनेनोपात्तं वाक्यमाह – तत्तेज इति ।। एतेन जन्मादिनयोक्तं स्रष्टृत्वमित्यादिना सत उच्यत इति भाष्ययोजना दर्शिता ।

'ಇತ್ಯಾದಿನಾ' ಎಂಬಲ್ಲಿರುವ ಆದಿಪದದಿಂದ ವಿವಕ್ಷಿತವಾದ ಶ್ರುತಿಯನ್ನು 'ತತ್ತೇಜಃ' ಎಂಬುದರಿಂದ ತೋರಿಸಿದ್ದಾರೆ. ಹೀಗೆ ಹೇಳಿದ್ದರಿಂದ 'ಜನ್ಮಾದಿನಯೋಕ್ತಂ ಸ್ರಷ್ಟೃತ್ವಮಿತ್ಯಾದಿನಾ ಸತ ಉಚ್ಯತೇ' ಜನ್ಮಾಧಿಕರಣದಲ್ಲಿ ಹೇಳಲ್ಪಟ್ಟ ಸ್ರಷ್ಟೃತ್ವವನ್ನು 'ಸತ್'ಪದಾರ್ಥಕ್ಕೆ ಹೇಳಲಾಗಿದೆಯೆಂದು ಭಾಷ್ಯದ ಮಾತುಗಳ ಯೋಜನೆಯನ್ನು ತೋರಿಸಿದಂತಾಯಿತು.

ವಿಷ್ಣುವಿನಲ್ಲಿ ಕೂಡಿಸಲಾಗದ ಜಗತ್ಕಾರಣತ್ವ

भावदीपः – तच्च सदित्यादिभाष्यतात्पर्यमाह – तस्य चेति ।। विष्णाव-युक्तविकाररूपपरिणामोक्तेर्विष्णोरन्यत्व इत्यर्थः । स्रष्टृत्वमित्युक्ततात्पर्यमाह – अन्यस्यैवेति ।।

'तच्च सत्' ಎಂಬ ಭಾಷ್ಯದ ಅಭಿಪ್ರಾಯವನ್ನು 'तस्य च' ಎಂಬ ಟೀಕೆಯಿಂದ ತೋರಿಸುತ್ತಿದ್ದಾರೆ. ವಿಷ್ಣುವಿನಲ್ಲಿ ಅಯುಕ್ತವಾದ ವಿಕಾರರೂಪವಾದ ಪರಿಣಾಮವನ್ನು 'तत्तेजः' ಎಂಬ ಶ್ರುತಿಯಲ್ಲಿ ಹೇಳಿರುವುದರಿಂದ, ವಿಷ್ಣುವಿಗಿಂತ ಬೇರೆ ಪದಾರ್ಥವೇ ಜಗತ್ಕಾರಣವಾಗಬೇಕೆಂದು ಪೂರ್ವಪಕ್ಷದ ಅಭಿಪ್ರಾಯ. 'स्रष्टृत्वम्' ಎಂಬ ಪದದ ತಾತ್ಪರ್ಯವನ್ನು 'अन्यस्यैव' ಎಂಬುದರಿಂದ ಹೇಳಿದ್ದಾರೆ.

ಪ್ರಧಾನವನ್ನು ಸಂದೇಹಕೋಟಿಯಲ್ಲಿ ವಿವಕ್ಷಿಸಲು ಆತಂಕವಿಲ್ಲ

भावदीपः – इति सङ्गतिसम्भवान्निर्णेयत्वम् । सत इत्यनुषङ्गः । भाष्ये न विष्णुरित्युक्तावपि न्यायविवरणोक्तिमनुरुद्ध्य उत प्रधानमित्युक्तम् । 'तदैक्षत' इतीक्षणश्रवणेऽप्यदृष्टं द्रष्टृत्यक्षरवाक्य इव प्रथमत एवाप्रतीतेरस्ति सन्देहनिविष्टत्वं प्रधानस्येति पूर्वमेवोक्तमिति भावः ।

ಹೀಗೆ ಸಂಗತಿಯನ್ನು ಹೇಳಬಹುದಾದ್ದರಿಂದ 'सत्' ಶಬ್ದ ಪ್ರತಿಪಾದ್ಯವಾದದ್ದನ್ನು ಅವಶ್ಯವಾಗಿ ನಿರ್ಣಯಿಸಬೇಕು. सतः' ಎಂಬುದನ್ನು ಅನುಷಂಗ ಮಾಡಿಕೊಳ್ಳಬೇಕು.

ಭಾಷ್ಯದಲ್ಲಿ 'न विष्णुः' ವಿಷ್ಣುವು ಸತ್‌ಶಬ್ದದಿಂದ ಪ್ರತಿಪಾದ್ಯನಲ್ಲ ಎಂದಷ್ಟೇ ಹೇಳಿದ್ದರೂ ನ್ಯಾಯವಿವರಣದ ಮಾತನ್ನು ಅನುಸರಿಸಿ 'उत प्रधानम्' ಎಂಬುದಾಗಿ ಪ್ರಧಾನ ಪಕ್ಷವನ್ನು ಸ್ವೀಕರಿಸಿದ್ದಾರೆ. ವಾಸ್ತವಿಕವಾಗಿ ಪ್ರಧಾನಕ್ಕೆ ಜಗತ್ಕಾರಣತ್ವವನ್ನು ಹೇಳುವ ಶ್ರುತಿಯಲ್ಲಿ 'तदैक्षत' ಎಂಬುದಾಗಿ ಈಕ್ಷಣವನ್ನು ಹೇಳಿದ್ದರೂ 'अदृष्टं द्रष्ट्र' ಎಂಬ ಅಕ್ಷರವಾಕ್ಯದಂತೆ ಇಲ್ಲಿಯೂ ಸಹ ಈಕ್ಷಣವು ಪ್ರಥಮ ಪ್ರತೀತವಾಗುವುದಿಲ್ಲ. ಆದ್ದರಿಂದ ಸಂದೇಹಕೋಟಿಯಲ್ಲಿ ಪ್ರಧಾನವನ್ನು ನಿವೇಶಿಸ-ಬಹುದು. ಈ ಉತ್ತರವನ್ನು ಹಿಂದೆಯೇ ಹೇಳಿದ್ದಾಗಿದೆ.

ಸಂಗತಿಪರ ಭಾಷ್ಯವು ಪೂರ್ವಪಕ್ಷ ಪರ

भावदीपः – पूर्वपक्षादिपरत्वेनापि व्याख्यातुमवतारयति – सयुक्तिकमिति ।। तच्च सन्न विष्णुरिति प्रतिज्ञाबाध्यं फलितार्थपरं मत्वा व्याख्याति – प्रधानमेवेति ।।

ಸಂಗತಿಪರವಾದ ಭಾಷ್ಯವನ್ನು ಪೂರ್ವಪಕ್ಷಪರವಾಗಿಯೂ ಸಹ ವ್ಯಾಖ್ಯಾನ ಮಾಡುವುದಕ್ಕಾಗಿ ಅವತಾರಿಕೆ ನೀಡುತ್ತಿದ್ದಾರೆ 'ಸಯುಕ್ತಿಕಮ್' ಎಂಬ ಟೀಕೆಯಿಂದ. 'ತಚ್ಚ ಸತ್ ನ ವಿಷ್ಣುಃ' ಅಂತಹ ಸತ್‌ಪದಾರ್ಥವು ವಿಷ್ಣುವಾಗಲು ಸಾಧ್ಯವಿಲ್ಲ ಎಂಬ ಪ್ರತಿಜ್ಞಾಪರವಾದ ಭಾಷ್ಯವನ್ನು ಫಲಿತಾರ್ಥಪರವಾಗಿ ವ್ಯಾಖ್ಯಾನ ಮಾಡಿದ್ದಾರೆ 'ಪ್ರಧಾನಮೇವ' ಎಂಬುದಾಗಿ.

ಬಹುಭಾವ ಎಂದರೇನು ?

भावदीपः – हेत्वंशार्थमाह – बहु स्यामिति ।। बहुभावेति ।। तेजःप्रभृत्यात्मना । नतु स्वरूपबहुभावेनेत्यर्थः । इत्यादिनेत्यस्यार्थः – प्रमाणैरिति ।। भाष्ये हिर्हेताविति भावः ।

ಹೇತ್ವಂಶದ ಅರ್ಥವನ್ನು 'ಬಹು ಸ್ಯಾಮ್' ಎಂಬುದರಿಂದ ಹೇಳಿದ್ದಾರೆ. 'ಬಹುಭಾವ' ಎಂದರೆ ತೇಜಸ್ಸು ಮೊದಲಾದವುಗಳ ಸ್ವರೂಪವನ್ನು ತಾಳುವಿಕೆ ಎಂದಷ್ಟೇ ಅರ್ಥ ಹೊರತು, ಸ್ವರೂಪತಃ ಬಹು ಭಾವವನ್ನು ಹೊಂದಿದೆ ಎಂದರ್ಥವಲ್ಲ. 'ಇತ್ಯಾದಿನಾ' ಎಂಬಲ್ಲಿರುವ ಆದಿಪದದ ಅರ್ಥವನ್ನು 'ಪ್ರಮಾಣೈಃ' ಎಂಬುದರಿಂದ ಹೇಳಿದ್ದಾರೆ. ಭಾಷ್ಯದಲ್ಲಿರುವ 'ಹಿ' ಪದವು ಹೇತ್ವರ್ಥದಲ್ಲಿದೆ.

'ಬಹು ಸ್ಯಾಮ್ ಪ್ರಜಾಯೇಯ' ಎಂಬುದಕ್ಕೆ ನ್ಯಾಯವಿವರಣದಲ್ಲಿ ವ್ಯಾಖ್ಯಾನ

भावदीपः – अस्त्वविकारित्वं विष्णोः परिणामोऽप्यस्त्वित्यतः 'बहु स्यां प्रजायेय' इत्यन्यस्यान्यभावादृष्टिरिति न्यायविवरणोक्तं हृदि कृत्वाऽह – तस्मिन्निति ।।

ವಿಷ್ಣುವಿಗೆ ವಿಕಾರವಿಲ್ಲದಿರಬಹುದು. ಆದರೂ ಸಹ ಪರಿಣಾಮವನ್ನು ಒಪ್ಪಿದರೆ ಏನು ತೊಂದರೆ? ಎಂಬ ಪ್ರಶ್ನೆಗೆ 'ಬಹು ಸ್ಯಾಮ್ ಪ್ರಜಾಯೇಯ' ಎಂಬುದಾಗಿ ಒಂದು ಪದಾರ್ಥಕ್ಕೆ ಮತ್ತೊಂದು

ಪದಾರ್ಥದ ಸ್ವರೂಪವು ಬರುವುದು ಎಲ್ಲಿಯೂ ಕಂಡಿಲ್ಲ ಎಂಬುದಾಗಿ 'ಬಹುಸ್ಯಾಂ ಪ್ರಜಾಯೇಯ ಇತಿ ಅನ್ಯಸ್ಯ ಅನ್ಯಭಾವಾದೃಷ್ಟಿಃ' ಎಂಬುದಾಗಿ ನ್ಯಾಯವಿವರಣದಲ್ಲಿ ಹೇಳಿದ್ದನ್ನೇ ಮನಸ್ಸಿನಲ್ಲಿಟ್ಟುಕೊಂಡು 'ತಸ್ಮಿನ್' ಇತ್ಯಾದಿ ಟೀಕೆಯು ಹೊರಟಿದೆ.

ಶ್ರೀಹರಿಗೆ ಬಹುಭವನವೆಂಬ ವಿಕಾರವಿಲ್ಲ

ಭಾವದೀಪಃ – निर्विकारे हरौ । तस्य तेजःप्रभृत्यात्मना बहुभवनरूपविकारस्य काप्येवमदृष्टाऽसम्भवादित्यर्थः ।। प्रधाने चेति ।। तस्य विकारित्वादिति भावः ।।

ನಿರ್ವಿಕಾರೇ = ವಿಕಾರವಿಲ್ಲದ ಶ್ರೀಹರಿಯಲ್ಲಿ, ಅಂತಹ ಶ್ರೀಹರಿಗೆ ತೇಜಸ್ಸು ಮೊದಲಾದವುಗಳ ರೂಪದಿಂದ ಬಹುಭವನರೂಪವಾದ ವಿಕಾರವು ಎಲ್ಲಿಯೂ ಕಂಡಿರುವುದಿಲ್ಲ ಎಂದರ್ಥ. 'ಪ್ರಧಾನೇಚ' ಎಂದರೆ ಪ್ರಕೃತಿಯಲ್ಲಿ ಅಂತಹ ವಿಕಾರವಿರುವುದು ಕಂಡಿದೆ ಎಂದರ್ಥ.

ಸ್ರಷ್ಟೃತ್ವಪದಕ್ಕೆ ಏನರ್ಥ ?

ಭಾವದೀಪಃ – जगत्कारणत्वमिति ।। एतेन भाष्ये स्रष्टृत्वपदम् अनन्याधीनकारणत्वमात्र परमिति दर्शितम् । ईक्षणं त्वभिमानिद्वारा वा ज्ञानहेतुत्वाद्वा युक्तमिति भावः ।।

'ಜಗತ್ಕಾರಣತ್ವಮ್' ಎಂದು ಹೇಳಿದ್ದರಿಂದ ಭಾಷ್ಯದಲ್ಲಿ ಸ್ರಷ್ಟೃತ್ವಪದವು ಅನನ್ಯಾಧೀನವಾದ ಕಾರಣತ್ವವನ್ನಷ್ಟೇ ಹೇಳುತ್ತಿದೆಯೆಂದು ವ್ಯಾಖ್ಯಾನಿಸಿದಂತಾಯಿತು. ಜಡಪ್ರಕೃತಿಯಲ್ಲಿ ಹೇಳಲ್ಪಟ್ಟ ಈಕ್ಷಣವನ್ನು ಅಭಿಮಾನಿದೇವತೆಯ ಮೂಲಕವಾಗಿ ಜ್ಞಾನಕ್ಕೆ ಕಾರಣವಾಗಿದೆಯೆಂಬ ದೃಷ್ಟಿಯಿಂದ ಕೂಡಿಸಬೇಕು.

ಅನನ್ಯಾಧೀನಕಾರಣತ್ವವನ್ನು ಪ್ರಕೃತಿಯಲ್ಲಿ ಹೇಗೆ ಕೂಡಿಸುವುದು ?

ಭಾವದೀಪಃ – नन्विति ।। उक्तदिशाऽनन्याधीनकारणत्वरूपब्रह्म-लक्षणाक्षेपासम्भवेऽपि गुणान्तराक्षेपप्रदर्शनायेयमाशङ्केति ज्ञेयम् । प्रधानस्य

सत्पदवाच्यत्वेऽपीत्येतावति वाच्ये स्थान इत्युक्तिर्वक्ष्यमाणानेकप्रकरण-गतबहुगुणाक्षेपोक्तिसौकर्याय उच्येत प्रतीयेत ।

'ನನು' ಎಂಬ ಆಕ್ಷೇಪಪರವಾದ ಟೀಕೆಯ ಅಭಿಪ್ರಾಯ ಹೀಗಿದೆ - ಹಿಂದೆ ಹೇಳಿದಂತೆ ಅನನ್ಯಾಧೀನಕಾರಣತ್ವರೂಪವಾದ ಬ್ರಹ್ಮನ ಲಕ್ಷಣವನ್ನು ಪ್ರಕೃತಿಯಲ್ಲಿ ಆಕ್ಷೇಪ ಮಾಡಲು ಬಾರದಿದ್ದರೂ ಉಳಿದ ಗುಣಗಳನ್ನು ಆಕ್ಷೇಪ ಮಾಡಬಹುದೆಂದು ಹೇಳಲು ಹೀಗೆ ಆಶಂಕಿಸಿದ್ದಾರೆಂದು ತಿಳಿಯಬೇಕು. ಪ್ರಕೃತಿಯು 'ಸತ್' ಎಂಬ ನಾಮಾತ್ಮಕಪದದಿಂದ ಪ್ರತಿಪಾದ್ಯವಾಗಿದ್ದರೂ 'ಸ್ಥಾನೇ' ಎಂದು ಹೇಳಿದ್ದು ಮುಂದೆ ಹೇಳುವಂತೆ ಅನೇಕ ಪ್ರಕರಣಗಳಲ್ಲಿರುವ ಅನೇಕ ಗುಣಗಳ ಆಕ್ಷೇಪವನ್ನು ಮಾಡುವುದರ ಸೌಕರ್ಯಕ್ಕಾಗಿ ಎಂದು ತಿಳಿಯಬೇಕು. 'ಉಚ್ಯೇತ' ಎಂದರೆ 'ತೋರಬೇಕಾದೀತು' ಎಂದರ್ಥ.

ವಿಶೇಷವಿಚಾರ - ಅಧಿಕರಣದ ಪೂರ್ವಪಕ್ಷ ಹೀಗಿದೆ - ಶ್ರುತಿಯಲ್ಲಿರುವ 'ಸತ್' ಎಂಬ ಪದವು ಪ್ರಧಾನವನ್ನೇ ಪ್ರತಿಪಾದಿಸುತ್ತಿದೆ ಹೊರತು, ಬ್ರಹ್ಮನನ್ನಲ್ಲ. ಏಕೆಂದರೆ 'ಬಹು ಸ್ಯಾಂ ಪ್ರಜಾಯೇಯ' ಎಂಬ ಶ್ರುತಿಯು ಯಾವುದು 'ಸತ್' ಪದ ಪ್ರತಿಪಾದ್ಯವೋ, ಅದು ವಿಕಾರವುಳ್ಳದ್ದೆಂದು ಹೇಳುತ್ತಿದೆ. ಬ್ರಹ್ಮನಿಗೆ ಯಾವುದೇ ವಿಕಾರವಿಲ್ಲದ ಕಾರಣ 'ಸತ್' ಪದದಿಂದ ಪ್ರತಿಪಾದ್ಯನಾಗಲಾರನು.

ವಿಕಾರ ಹಾಗೂ ವಿಕಾರಾಭಾವಗಳಿಗೆ ಬರುತ್ತಿರುವ ವಿರೋಧವನ್ನು ಪರಿಹರಿಸಲು ನಿಮ್ಮಿಂದ ಸಾಧ್ಯವೇ ಇಲ್ಲ. ಹಿಂದಿನ ಅಧಿಕರಣಗಳಲ್ಲಿ ಪ್ರಾಪ್ತವಾದಂತಹ ವಿರೋಧವನ್ನು ಕಥಂಚಿತ್ ಪರಿಹರಿಸಿದಿರಿ. ಉದಾ:- ಒಬ್ಬನೇ ಭೂಮನಲ್ಲಿ ಉತ್ಕ್ರಮಣ ಹಾಗೂ ಸರ್ವಗತತ್ವಗಳು ಶ್ರುತವಾಗಿವೆ. ಆದರೆ ಇವೆರಡಕ್ಕೆ ಪ್ರತಿಯೋಗಿಭಾವ-ಅನುಯೋಗಿಭಾವ ಇರುವುದಿಲ್ಲ. ಅಂದರೆ ಉತ್ಕ್ರಮಣಾಭಾವವನ್ನೇ ಸರ್ವಗತತ್ವವೆಂದಾಗಲೀ, ಸರ್ವಗತತ್ವದ ಅಭಾವವನ್ನೇ ಉತ್ಕ್ರಮಣವೆಂದಾಗಲೀ ಹೇಳಲು ಸಾಧ್ಯವಿಲ್ಲ. ಹೀಗೆ ಪ್ರತಿಯೋಗಿ-ಅನುಯೋಗಿಭಾವವಿಲ್ಲದ ಕಾರಣ ವಿರೋಧವನ್ನು ನೀವು ಪರಿಹರಿಸಿದ್ದು ಯುಕ್ತವಾಗುತ್ತದೆ.

ಅಕ್ಷರಾಧಿಕರಣದಲ್ಲಿ ಮಹತ್ತ್ವ ಹಾಗೂ ಅಣುತ್ವಗಳಿಗೆ ವಿರೋಧವನ್ನು ಪರಿಹರಿಸಿದ್ದೂ ಸಹ ತಪ್ಪಲ್ಲ. ಏಕೆಂದರೆ ಅಣುತ್ವ ಹಾಗೂ ಮಹತ್ತ್ವಗಳಿಗೆ ಪ್ರತಿಯೋಗಿ-ಅನುಯೋಗಿ ಭಾವಗಳಿದ್ದರೂ ಎರಡೂ ಭಾವರೂಪವೇ ಆಗಿರುವುದರಿಂದ ಭಾವಾಭಾವರೂಪತ್ವವು ಇರುವುದಿಲ್ಲ. ಒಂದು ವೇಳೆ ಭಾವಾಭಾವರೂಪಗಳಾಗಿದ್ದು ಪ್ರತಿಯೋಗಿ-ಅನುಯೋಗಿ ಭಾವವೂ ಸಹ ಇದ್ದಲ್ಲಿ ವಿರೋಧವನ್ನು ಹೇಳಬಹುದಿತ್ತು.

ಮತ್ತು ಪರಮಾತ್ಮನ ಧರ್ಮವೇ ಆಗಿರುವ ಸ್ಥೂಲತ್ವಾಭಾವ-ಅಣುತ್ವಾಭಾವಗಳ ಅವಿರೋಧವೂ ಸಹ ತಪ್ಪಲ್ಲ. ಏಕೆಂದರೆ ಎರಡೂ ಸಹ ಅಭಾವರೂಪಧರ್ಮಗಳೇ ಆಗಿರುವುದರಿಂದ ಭಾವಾಭಾವರೂಪತ್ವವು ಇರುವುದಿಲ್ಲ. ಇವುಗಳಿಗೂ ಸಹ ವಿರೋಧವು ಬರುವುದಿಲ್ಲ.

ಮತ್ತು ಅತ್ಯತ್ವಾಧಿಕರಣದಲ್ಲಿ ಪರಮಾತ್ಮನ ಧರ್ಮವೇ ಆಗಿರುವ ಅತ್ಯತ್ವ ಹಾಗೂ ಅನಶನಗಳ ವಿರೋಧಕ್ಕೂ ಅವಕಾಶವಿಲ್ಲವೆನ್ನಬಹುದು. ಏಕೆಂದರೆ ಅತ್ಯತ್ವ ಹಾಗೂ ಅನಶನಗಳಿಗೆ ಭಾವಾಭಾವರೂಪತ್ವವಿದ್ದರೂ ಸಹ ಅನಶನವು ಅತ್ಯತ್ವವಿಶೇಷಾಭಾವರೂಪವೇ ಆಗಿದೆ ಹೊರತು, ಅತ್ಯತ್ವಸಾಮಾನ್ಯಾಭಾವರೂಪವಾಗಿಲ್ಲ. ಅತ್ಯತ್ವಸಾಮಾನ್ಯಾಭಾವರೂಪವೇ ಅನಶನವಾಗಿದ್ದಲ್ಲಿ, ಅತ್ಯತ್ವಸಾಮಾನ್ಯದಿಂದ ವಿರೋಧವು ಬರುತ್ತಿತ್ತು. ಏಕೆಂದರೆ ವಿಶೇಷಾಭಾವಕ್ಕೂ ಸಾಮಾನ್ಯಕ್ಕೂ ವಿರೋಧವಿರುವುದಿಲ್ಲ. (ಭೂತಲದಲ್ಲಿ ಪೀತಘಟವು ಇದ್ದಾಗ, ನೀಲಘಟಾಭಾವವನ್ನು ಹೇಳಬಹುದು.)

ಪ್ರಕೃತ 'ಬಹು ಸ್ಯಾಮ್' ಇತ್ಯಾದಿ ಶ್ರುತಿಯಿಂದ ವಿಕಾರವು ಕೇಳಿಸುತ್ತಿದೆ. 'ನಿರ್ವಿಕಾರಃ ಸದಾ ಶುದ್ಧಃ' ಇತ್ಯಾದಿ ವಾಕ್ಯದಿಂದ ವಿಕಾರಾಭಾವವೂ ಸಹ ಕೇಳಿಸುತ್ತಿದೆ. ಈ ವಿಕಾರ ಹಾಗೂ ವಿಕಾರಾಭಾವಗಳಿಗೆ ಬರುವಂತಹ ವಿರೋಧವನ್ನು ಪರಿಹರಿಸಲು ಸಾಧ್ಯವೇ ಇಲ್ಲ. ಏಕೆಂದರೆ 'ನಿರ್ವಿಕಾರಃ' ಎಂಬ ಶ್ರುತಿಯಲ್ಲಿ ಹೇಳುತ್ತಿರುವ ವಿಕಾರಾಭಾವವು ವಿಕಾರಸಾಮಾನ್ಯದ ಅಭಾವರೂಪವೇ ಆಗಿದೆ. ವಿಕಾರಸಾಮಾನ್ಯಕ್ಕೂ, ವಿಕಾರಸಾಮಾನ್ಯಾಭಾವಕ್ಕೂ ವಿರೋಧವನ್ನು ಒಪ್ಪಲೇಬೇಕು. ಏಕೆಂದರೆ ಸಾಮಾನ್ಯಾಭಾವಕ್ಕೂ, ವಿಶೇಷಕ್ಕೂ ಪರಸ್ಪರ ವಿರೋಧವಿರುತ್ತದೆ.

ಅನಶನಶ್ರುತಿಯಲ್ಲಿ ಹೇಳಿದಂತೆ ನಿರ್ವಿಕಾರಶ್ರುತಿಗೂ ಸಹ ವಿಶೇಷನಿಷೇಧಪರತ್ವವನ್ನು ಒಪ್ಪುವುದು ಸಿದ್ಧಾಂತಿಗೆ ಇಷ್ಟವಿಲ್ಲ. ಮತ್ತು ಅದು ಯುಕ್ತವೂ ಸಹ ಆಗಿರುವುದಿಲ್ಲ. ಏಕೆಂದರೆ ಚೇತನನಲ್ಲಿ ವಿಕಾರವಾಗುವಿಕೆಯು (ವಿಕಾರಸಾಮಾನ್ಯವು) ಎಲ್ಲಿಯೂ ಕಂಡಿರುವುದಿಲ್ಲ.

ಆದ್ದರಿಂದಲೇ ನ್ಯಾಯವಿವರಣದಲ್ಲಿ 'ಅನ್ಯಸ್ಯ ಅನ್ಯಭಾವಾದೃಷ್ಟಿಃ' ಒಬ್ಬನಿಗೆ ಮತ್ತೊಬ್ಬನಾಗಿರುವಿಕೆಯು ಕಂಡಿಲ್ಲ (ಒಬ್ಬನು ಮತ್ತೊಬ್ಬನಾಗಲಾರ) ಎಂಬುದಾಗಿ ಹೇಳಿರುತ್ತಾರೆ. ಇನ್ನು ನಾನಾವಿಧವಾದ ಹೇಯವಾದ ಆತ್ಮನ ವಿಕಾರವನ್ನು ಗುಣವೆಂದೂ ಸಹ ಹೇಳಲಾಗದು.

ಒಂದು ವೇಳೆ ಅಂತಹ ವಿಕಾರವಾಗುವಿಕೆಯು ಗುಣವಾಗಿದ್ದಲ್ಲಿ 'ಗುಣಾಃ ಶ್ರುತಾಃ ಸುವಿರುದ್ಧಾಶ್ಚ ದೇವೇ ಸಂತಿ' ಇತ್ಯಾದಿ ಶ್ರುತಿಯಿಂದ ವಿರುದ್ಧವಾದ ಗುಣವೂ ಸಹ ಇದೆ ಎಂದು ಒಪ್ಪಬಹುದಿತ್ತು. ಪ್ರತ್ಯುತ ಅನರ್ಥರೂಪವೇ ಆಗಿರುವುದರಿಂದ ದೋಷವೇ ಆಗಿದೆ. ಹಾಗಾಗಿ 'ಸತ್' ಪದದಿಂದ ಪರಮಾತ್ಮನು ಪ್ರತಿಪಾದ್ಯನಾಗಿದ್ದಾನೆಂದು ಹೇಳಲು ಸಾಧ್ಯವಿಲ್ಲ.

ಉಪಾದಾನಕಾರಣತ್ವವನ್ನು ವಿವಕ್ಷಿಸಬಹುದು

भावदीपः – यद्वा तेजःप्रभृतेरग्रे त्रिवृत्करणोक्त्योपादानभूतत्वमप्यस्तीत्येव-मुक्तिः ।।

ಅಥವಾ ತೇಜಸ್ಸು ಮೊದಲಾದವುಗಳಿಗೆ ಮುಂದೆ ತ್ರಿವೃತ್ಕರಣವನ್ನು ಹೇಳಿದ್ದರಿಂದ ಉಪಾದಾನ ಕಾರಣತ್ವವೂ ಕೂಡ ಇರುತ್ತದೆಂದು ಹೀಗೆ ಹೇಳಿರುತ್ತಾರೆ.

'ಸದೇವ' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಕಾರಣತ್ವವು ವಿಷ್ಣುಮಾತ್ರ ನಿಷ್ಠ

भावदीपः – एकमेवेति ।। तेन समाभ्यधिकराहित्योक्त्या 'सदेव' इत्युक्त-कारणत्वस्यानन्याधीनतोक्तेः कारणत्वं ब्रह्मलक्षणमिति वा समाभ्यधिक-राहित्यादिकं पृथगेकं लक्षणमिति वा एतदुक्तिः ।

'ಏಕಮೇವಾದ್ವಿತೀಯಂ' ಎಂಬ ಶ್ರುತಿಯಿಂದ ವಿಷ್ಣುವಿಗೆ ಸಮಾನವಾದ ಮತ್ತು ಅಧಿಕವಾದ ಮತ್ತೊಂದು ಪದಾರ್ಥವಿಲ್ಲವೆಂದು ಹೇಳಿದಂತಾಯಿತು. ಇದರಿಂದ 'ಸದೇವ' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಕಾರಣತ್ವವು ಅನನ್ಯಾಧೀನವಾಗಿದೆಯೆಂದು ಹೇಳಿದಂತಾಗುತ್ತದೆ. ಇಂತಹ ಕಾರಣತ್ವವು ವಿಷ್ಣುವಿನ ಲಕ್ಷಣವೇ ಆಗಿದೆ. ಅಥವಾ ಸಮಾಭ್ಯಧಿಕರಾಹಿತ್ಯವು ವಿಷ್ಣುವಿನ ಪ್ರತ್ಯೇಕಲಕ್ಷಣವೆಂದೂ ಸಹ ವಿವಕ್ಷಿಸಬಹುದೆಂದು ತಿಳಿಸಲು 'ಏಕಮೇವಾದ್ವಿತೀಯಂ' ಎಂಬ ಶ್ರುತಿಯನ್ನು ಉಲ್ಲೇಖ ಮಾಡಿದ್ದಾರೆ.

ವಿಷ್ಣುವಿನ ಸರ್ವೋತ್ತಮತ್ವಕ್ಕಾಗಿ ಜಗತ್ಕಾರಣತ್ವ

भावदीपः – एतच्च जन्मादिसूत्रेऽर्थात् सिद्धम् । 'सृष्टिः स्थितिश्च संहारो नियतिर्ज्ञानमावृतिः । बन्धमोक्षौ च कथ्यन्ते तस्योत्कर्षप्रसिद्धये।।' इत्युक्तेः ।।

ಇಂತಹ ಜಗತ್ಕಾರಣತ್ವವು ಜನ್ಮಾದಿಸೂತ್ರದಲ್ಲಿ ಅರ್ಥಾತ್ ಸಿದ್ಧವಾಗಿದೆ. ಏಕೆಂದರೆ 'ಸೃಷ್ಟಿಃ ಸ್ಥಿತಿಶ್ಚ ಸಂಹಾರೋ ನಿಯತಿರ್ಜ್ಞಾನಮಾವೃತಿಃ । ಬಂಧಮೋಕ್ಷೌ ಚ ಕಥ್ಯಂತೇ ತಸ್ಯೋತ್ಕರ್ಷಪ್ರಸಿದ್ಧಯೇ' ಸೃಷ್ಟಿ, ಸ್ಥಿತಿ, ಸಂಹಾರ, ನಿಯಮನ, ಜ್ಞಾನ, ಅಜ್ಞಾನ, ಬಂಧ, ಮೋಕ್ಷ ಇವುಗಳನ್ನು ವಿಷ್ಣುವಿನ ಸರ್ವೋತ್ತಮತ್ವಕ್ಕಾಗಿ ಶ್ರುತಿಯು ಪ್ರತಿಪಾದನೆ ಮಾಡುತ್ತಿದೆಯೆಂದು ಹೇಳಲಾಗಿದೆ.

ಸುಪ್ತಗಮ್ಯತ್ವಾದಿ ಧರ್ಮಗಳು ವಿವಕ್ಷಿತ

भावदीपः – सन्मूला इति ।। प्रजाः प्रतिनिमित्तत्वस्थितिहेतुत्व-सुप्तगम्यत्वादीनां श्रवणात्तेषामतिव्याप्तिः स्यादिति भावः ।

'ಸನ್ಮೂಲಾ ಸೋಮ್ಯೇಮಾ ಪ್ರಜಾಃ' ಎಂಬ ಶ್ರುತಿಯಲ್ಲಿ' ಪ್ರಜೆಗಳಿಗೆಲ್ಲಾ ವಿಷ್ಣು ನಿಮಿತ್ತಕಾರಣ-ನಾಗಿದ್ದಾನೆಂದು ಮತ್ತು ಸ್ಥಿತಿಹೇತುತ್ವ, ಸುಪ್ತಗಮ್ಯತ್ವ ಮೊದಲಾದ ಧರ್ಮಗಳುಳ್ಳವನೆಂದು ಶ್ರುತವಾಗಿದೆ. ಇವುಗಳಿಗೆಲ್ಲಾ ಅತಿವ್ಯಾಪ್ತಿದೋಷ ಬರಬೇಕಾದೀತು ಎಂದಭಿಪ್ರಾಯ.

ಲಯಕರ್ತೃತ್ವವು ಸಿದ್ಧವಾಯಿತು

भावदीपः – प्रतिष्ठापकत्वं च मुक्तिदत्वम् । 'तत्प्रतिष्ठाश्च मोक्षगाः' इति तद्भाष्योक्तेः ।। सता सोम्येति ।। लयकर्तृत्वं च लब्धम् । 'प्रजास्तद्वत् प्रजालयः' इति तद्भाष्योक्तेरेवेति ध्येयम् ।

'ಪ್ರತಿಷ್ಠಾಪಕತ್ವ' ಎಂದರೆ ಮೋಕ್ಷವನ್ನು ನೀಡುತ್ತಾನೆಂದರ್ಥ. ಏಕೆಂದರೆ 'ತತ್‌ಪ್ರತಿಷ್ಠಾಶ್ಚ ಮೋಕ್ಷ ಗಾಃ' ಎಂಬ ಭಾಷ್ಯವು ಆಧಾರವಾಗಿರುವುದರಿಂದ. 'ಸತಾ ಸೋಮ್ಯ' ಎಂಬುದರಿಂದ ಲಯಕರ್ತೃತ್ವವು ಸಿದ್ಧವಾಯಿತು. ಏಕೆಂದರೆ 'ಪ್ರಜಾಸ್ತದ್ವತ್ ಪ್ರಜಾಲಯೇ' ಎಂಬುದಾಗಿ ಉಪನಿಷದ್ಭಾಷ್ಯದಲ್ಲಿ ವ್ಯಾಖ್ಯಾನ ಮಾಡಿದ್ದಾರೆ.

ಭಾಷ್ಯದಲ್ಲಿ ಕೆಲವು ಪದಗಳ ಅಧ್ಯಾಹಾರ

भावदीपः – किञ्चित् शेषोक्त्या प्रतिज्ञाहेतूक्तिपरं भाष्यं व्याचष्टे – सदेवेति ।। अत्रेत्यस्यार्थः – स्थान इति ।।

ಕೆಲವು ಪದಗಳನ್ನು ಶೇಷಪೂರಣ ಮಾಡಿಕೊಳ್ಳುವ ಮೂಲಕ ಪ್ರತಿಜ್ಞೆ ಹಾಗೂ ಹೇತುಗಳನ್ನು ಹೇಳುವಂತಹ ಭಾಷ್ಯವನ್ನು ವ್ಯಾಖ್ಯಾನಿಸುತ್ತಿದ್ದಾರೆ 'ಸದೇವ' ಇತ್ಯಾದಿ ಟೀಕೆಯಿಂದ. 'ಅತ್ರ' ಎಂಬುದರ ಅರ್ಥವನ್ನೇ 'ಸ್ಥಾನೇ' ಎಂದು ಹೇಳಿದ್ದಾರೆ.

ವಿಶೇಷವಿಚಾರ – ಸಿದ್ಧಾಂತವು ಹೀಗಿದೆ – ಮೊದಲನೆಯ ಪೂರ್ವಪಕ್ಷವು ಅಯುಕ್ತ-

ಏಕೆಂದರೆ

ಈಕ್ಷತಿರ್ಬಹುಭಾವಶ್ಚ ಮುಖ್ಯೌ ಬ್ರಹ್ಮಪರಿಗ್ರಹೇ ।
ಪ್ರಧಾನಪಕ್ಷೇ ತು ತಯೋರಮುಖ್ಯತ್ವಂ ಪ್ರಸಜ್ಯತೇ ॥೧॥

ಈಕ್ಷಣ ಹಾಗೂ ಬಹುಭವನಗಳು ಬ್ರಹ್ಮಪಕ್ಷದಲ್ಲಿ ಮುಖ್ಯವಾಗಿಯೇ ಉಪಪನ್ನ-ವಾಗುತ್ತದೆ. ಆದರೆ ಪ್ರಧಾನ ಪಕ್ಷದಲ್ಲಿ ಎರಡಕ್ಕೂ ಅಮುಖ್ಯಾರ್ಥವನ್ನು ಸ್ವೀಕರಿಸಬೇಕಾಗುತ್ತದೆ.

ಮೊದಲನೆಯ ಪೂರ್ವಪಕ್ಷದಲ್ಲಿ ಈಕ್ಷಣವನ್ನು ಪ್ರಧಾನದಲ್ಲಿ ಗೌಣವಾಗಿಯೇ ಪೂರ್ವಪಕ್ಷಕಾರರು ಉಪಪಾದಿಸಿದರು. ಈಕ್ಷಣವಷ್ಟೇ ಗೌಣವಲ್ಲ. ಬಹುಭಾವವೂ ಕೂಡ ಗೌಣವೆಂದೇ ಅವರು ಹೇಳಬೇಕು. ಏಕೆಂದರೆ 'ತತ್ತೇಜೋ೭ಸೃಜತ' ಇತ್ಯಾದಿಯಾಗಿ ತೇಜಸ್ಸು ಮೊದಲಾದವುಗಳು ಹುಟ್ಟುತ್ತವೆಂದು ಹೇಳಿದರೆ, ತೇಜಸ್ಸು ಮೊದಲಾದವುಗಳ ಸ್ವರೂಪದಿಂದ ಬಹುಭವನವನ್ನು ಪ್ರಕೃತಿಗೆ ಹೇಳಬೇಕು ಎಂದಂತಾಯಿತು.

ಆದರೆ 'ತೇಜಸ್ಸು' ಮತ್ತು 'ಅಪ್' ಮೊದಲಾದವುಗಳು ಜಡಪದಾರ್ಥವಲ್ಲ ಹೊರತು, ಚೇತನಪದಾರ್ಥಗಳು 'ತತ್ತೇಜ ಐಕ್ಷತ ತದಪೋ೭ಸೃಜತ, ತಾ ಆಪ ಐಕ್ಷಂತ, ತಾ ಅನ್ನಮಸೃಜಂತ, ತಿಸ್ರೋ ದೇವತಾಃ' ಎಂಬುದಾಗಿ 'ಐಕ್ಷತ' ಎಂಬ ಪದದಿಂದ ತೇಜಸ್ಸು ಮೊದಲಾದವುಗಳಲ್ಲಿ ಈಕ್ಷಿತೃತ್ವವನ್ನು, 'ಅಸೃಜತ' ಎಂಬುದರಿಂದ ಸ್ರಷ್ಟೃತ್ವವನ್ನು ಮತ್ತು 'ದೇವತಾಃ' ಎಂಬ ಪದದಿಂದ ದೇವತಾತ್ವವನ್ನು ಶ್ರುತಿಯು ಹೇಳುತ್ತಿದೆ. ಈ ಮೂರು ಕಾರಣಗಳಿಂದ 'ತೇಜಸ್' ಮೊದಲಾದ ಶಬ್ದಗಳಿಂದ ಚೇತನರೇ ಪ್ರತಿಪಾದ್ಯರೆಂದು ತಿಳಿಯುತ್ತದೆ.

'ತೇಜಸ್' 'ಅಪ್' ಮೊದಲಾದ ಶಬ್ದಗಳಿಂದ ದೇವತೆಗಳೇ ಪ್ರತಿಪಾದ್ಯರಾದಲ್ಲಿ ಶ್ರುತಿಯಲ್ಲಿ ಹೇಳಲ್ಪಟ್ಟ ತ್ರಿವೃತ್‌ಕರಣದ ವಿರೋಧವು ಬರುತ್ತದಲ್ಲವೇ? ಏಕೆಂದರೆ ಮೂರು ಪದಾರ್ಥಗಳ ಸಮ್ಮಿಲನವನ್ನು ಶ್ರುತಿಯು ಹೇಳುತ್ತಿದೆ. ಇಂತಹ ಸಮ್ಮಿಲನವನ್ನು ದೇವತೆಗಳಲ್ಲಿ ಹೇಳುವುದು ಹೇಗೆ? ಎಂಬ ಪ್ರಶ್ನೆಗೆ ಛಾಂದೋಗ್ಯ ಭಾಷ್ಯದಲ್ಲಿಯೇ ಪರಿಹಾರವನ್ನು ಹೇಳಲಾಗಿದೆ.

ಆದ್ದರಿಂದ ಜಡವಾದ ಪ್ರಕೃತಿಗೆ ಚೇತನಸ್ವರೂಪದಿಂದ ಬಹುಭವನವನ್ನು ಮುಖ್ಯವಾಗಿ ಹೇಳಲು ಸಾಧ್ಯವಿಲ್ಲವೆಂದು ತಿಳಿಯುತ್ತದೆ. ಹೀಗೆ ಈಕ್ಷಣವನ್ನು ಗೌಣವನ್ನಾಗಿ ಹೇಳುವುದರ ಜೊತೆಗೆ ಬಹುಭವನವನ್ನೂ ಕೂಡ ಗೌಣವಾಗಿಯೇ ಹೇಳಬೇಕು. ಆದ್ದರಿಂದಲೇ ಹಿಂದೆ ಪೂರ್ವಪಕ್ಷ ಮಾಡುವಾಗ ಪ್ರಾಯಪಾಠದ ಬಲದಿಂದ ಈಕ್ಷಣವು ಗೌಣವೆಂದು ತಿಳಿಯುತ್ತದೆಂಬ ಪೂರ್ವಪಕ್ಷವನ್ನು ನಿರಾಕರಿಸಿದಂತಾಯಿತು.

ಆದರೆ ಬ್ರಹ್ಮನೇ 'ಸತ್' ಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆಂಬ ಪಕ್ಷದಲ್ಲಿ ಈಕ್ಷಣವಷ್ಟೇ ಮುಖ್ಯವಲ್ಲ. ಬಹುಭವನವೂ ಕೂಡ ಮುಖ್ಯವಾಗುತ್ತದೆ.

ಒಬ್ಬನೇ ಬ್ರಹ್ಮನಲ್ಲಿ ಬಹುಭವನವು ಹೇಗೆ ಯುಕ್ತವಾಗುತ್ತದೆ? ಎಂಬ ಪ್ರಶ್ನೆಗೆ 'ಗುಹಾಂ ಪ್ರವಿಷ್ಟೌ' ಎಂಬ ಸೂತ್ರದಲ್ಲಿ ಉತ್ತರಿಸಲಾಗಿದೆ ಎಂದರೆ ಒಬ್ಬನೇ ಬ್ರಹ್ಮನಲ್ಲಿ ಅನೇಕ ರೂಪಗಳ ಪ್ರಾದುರ್ಭಾವವಿರುವ ಪ್ರಯುಕ್ತ ಬಹುಭವನವು ಉಪಪನ್ನವಾಗುತ್ತದೆಂದು ಸಮರ್ಥಿಸಲಾಗಿದೆ. ದ್ಯುಭ್ವಾದ್ಯಧಿಕರಣದಲ್ಲಿ ಬ್ರಹ್ಮನಿಗೆ ಹುಟ್ಟಿಲ್ಲದಿದ್ದರೂ ಪ್ರಾದುರ್ಭಾವ ಪ್ರಯುಕ್ತವಾಗಿ ಹುಟ್ಟನ್ನು ಕೂಡಿಸಬೇಕೆಂದು ಸಮರ್ಥಿಸಲಾಗಿದೆ.

ಹಾಗಾದರೆ ಗುಹಾಧಿಕರಣ ಹಾಗೂ ದ್ಯುಭ್ವಾದ್ಯಧಿಕರಣದಿಂದಲೇ ಈ ಅಧಿಕರಣದ ಪ್ರಮೇಯವು ಗತಾರ್ಥವಾದ್ದರಿಂದ, ವೈಯ್ಯರ್ಥದೋಷ ಬರುತ್ತದಲ್ಲವೇ? ಎಂದು ಶಂಕಿಸಬಾರದು.

ವೈಯ್ಯರ್ಥ್ಯದೋಷವು ಬರುವುದಿಲ್ಲ. ಏಕೆಂದರೆ 'ಬಹು ಸ್ಯಾಮ್' ಎಂಬ ಶ್ರುತಿಯಲ್ಲಿ 'ತೇಜಸ್' ಮೊದಲಾದವುಗಳ ಸ್ವರೂಪದಿಂದ ಬಹುಭವನವನ್ನು ಪಡೆಯುತ್ತೇನೆಂದು ಬ್ರಹ್ಮನು ಸಂಕಲ್ಪ ಮಾಡಿ, ತನ್ನ ಸ್ವರೂಪದಿಂದ ಬಹುಭವನವನ್ನು ಪಡೆದಿಲ್ಲ. ಏಕೆಂದರೆ ಮುಂದೆ 'ತತ್ತೇಜೋऽಸೃಜತ' ಇತ್ಯಾದಿ ಶ್ರುತಿಗಳಿರುವುದರಿಂದ 'ತೇಜಸ್' ಮೊದಲಾದವುಗಳನ್ನು ಸೃಷ್ಟಿ ಮಾಡಿದನೆಂದು ವಾಕ್ಯಶೇಷದ ಬಲದಿಂದ ತಿಳಿಯುತ್ತಿದೆ. ಸ್ವರೂಪತಃ ಅನೇಕ ಪದಾರ್ಥಗಳ ಭಾವ(ರೂಪ)ವನ್ನು ಹೊಂದುತ್ತೇನೆಂದು ಸಂಕಲ್ಪ ಮಾಡಿ, 'ತೇಜಸ್' ಮೊದಲಾದವುಗಳನ್ನು ಸೃಷ್ಟಿ ಮಾಡುವುದು ಯುಕ್ತವಾಗುವುದಿಲ್ಲ. ಮತ್ತು 'ತೇಜಸ್' ಮೊದಲಾದವುಗಳ ಸ್ವರೂಪವನ್ನು ಪಡೆಯುವಿಕೆಯು ಬ್ರಹ್ಮನಿಗೆ ಯುಕ್ತವೂ ಆಗುವುದಿಲ್ಲ. ಈ ಹೊಸದಾದ ಆಶಂಕೆಯನ್ನು ತೋರಿಸಿ, ಇದರ ಸಮಾಧಾನಕ್ಕೋಸ್ಕರ ಈ ಅಧಿಕರಣ ಹೊರಡುವುದು ಅನಿವಾರ್ಯವಾಗಿದೆ.

ಸೂತ್ರದಲ್ಲಿರುವ ಕರ್ಮಪದದ ವ್ಯಾಖ್ಯಾನ

भावदीपः – कर्मशब्दार्थः – व्यापारेति ।। तत्कृत्यं चन्द्रिकायां व्यक्तम्। तत्त्वप्रदीपे तु 'न कर्तृत्वं न कर्माणि' इति गीतावाक्य इव कर्मेति सृष्टिरुच्यते । ईक्षतिसृष्ट्योरुपदेशादित्यर्थ इत्युक्तम् ।

ಸೂತ್ರದಲ್ಲಿರುವ ಕರ್ಮಶಬ್ದದ ಅರ್ಥವನ್ನು 'ವ್ಯಾಪಾರ' ಎಂದು ಹೇಳಿದ್ದಾರೆ. ಇದರ ಸಾರ್ಥಕ್ಯವನ್ನು ತಾತ್ಪರ್ಯಚಂದ್ರಿಕೆಯಲ್ಲಿ ಸ್ಪಷ್ಟಪಡಿಸಲಾಗಿದೆ. ತತ್ತ್ವಪ್ರದೀಪದಲ್ಲಾದರೂ 'ನ ಕರ್ತೃತ್ವಂ ನ ಕರ್ಮಾಣಿ' ಎಂಬ ಗೀತಾವಾಕ್ಯದಲ್ಲಿ ಕರ್ಮಶಬ್ದವನ್ನು 'ಸೃಷ್ಟಿ' ಎಂಬರ್ಥದಲ್ಲಿ ಪ್ರಯೋಗಿಸಿದಂತೆ ಇಲ್ಲಿಯೂ ಕೂಡ 'ಸೃಷ್ಟಿ' ಎಂಬರ್ಥವನ್ನೇ ಹೇಳಬೇಕು. 'ಈಕ್ಷತಿಕರ್ಮವ್ಯಪದೇಶಾತ್' ಎಂಬ ಸೂತ್ರಕ್ಕೆ ಈಕ್ಷಣ ಮತ್ತು ಸೃಷ್ಟಿಗಳನ್ನು ಉಪದೇಶಿಸಿದ್ದರಿಂದ ಎಂಬರ್ಥದಲ್ಲಿ ವ್ಯಾಖ್ಯಾನ ಮಾಡಿದ್ದಾರೆ.

ವಿಶೇಷವಿಚಾರ - 'ಈಕ್ಷತಿಕರ್ಮವ್ಯಪದೇಶಾಚ್ಚ' ಎಂಬ ಸೂತ್ರದಲ್ಲಿರುವ ಕರ್ಮಪದ ಸಾರ್ಥಕ್ಯವನ್ನು ಟೀಕೆಯಲ್ಲಿ ಒಂದು ಬಗೆಯಲ್ಲಿ ಸಮರ್ಥಿಸಿದ್ದಾರೆ. ತತ್ವಪ್ರದೀಪದಲ್ಲಿ ಮತ್ತೊಂದು ಬಗೆಯಲ್ಲಿ ಸಮರ್ಥಿಸಿದ್ದಾರೆ. ಟೀಕೆಯ ಪ್ರಕಾರ ಕರ್ಮಶಬ್ದಕ್ಕೆ ವ್ಯಾಪಾರ ಎಂದರ್ಥ. 'ಈಕ್ಷತಿ' ಎಂಬ ಕ್ರಿಯೆಯು ಕೇಳಿಸುತ್ತಿದೆ ಎಂದರ್ಥವನ್ನು ಹೇಳಿದಂತಾಗುತ್ತದೆ. ಆವಾಗ 'ಈಕ್ಷತ್ಯಪದೇಶಾತ್' ಎಂದಷ್ಟೇ ಹೇಳಿದರೆ ಸಾಕು. 'ಈಕ್ಷತಿ' ಎಂಬ ವ್ಯಾಪಾರವನ್ನು ಹೇಳಿದ್ದರಿಂದ ಎಂದೇಕೆ ಹೇಳಬೇಕು? ಎಂಬ ಪ್ರಶ್ನೆಯು ಪ್ರಾಪ್ತವಾಗುತ್ತದೆ. ಆದರೆ ಇಲ್ಲಿ ಬರುವ ಶಂಕೆಯೊಂದನ್ನು ಪರಿಹರಿಸುವುದಕ್ಕಾಗಿ ಕರ್ಮಶಬ್ದವನ್ನು ಸೂತ್ರಕಾರರು ಹೇಳಿರುತ್ತಾರೆ.

ಶಂಕೆ ಹೀಗಿದೆ - ಪ್ರಧಾನದಲ್ಲಿ ಈಕ್ಷಣವು ಕೂಡುವುದಿಲ್ಲವೆಂದು ಹೇಳುತ್ತಿದ್ದೀರಿ. ಆದರೆ ಬ್ರಹ್ಮನಲ್ಲಿಯೂ ಕೂಡ ಈಕ್ಷಣವು ಕೂಡುವುದಿಲ್ಲ. ಏಕೆಂದರೆ 'ಐಕ್ಷತ' ಎಂಬಲ್ಲಿರುವ ಆಖ್ಯಾತ ಪ್ರತ್ಯಯವು ಕರ್ತೃತ್ವವನ್ನು ಹೇಳುತ್ತಿದೆ. ಈ ಈಕ್ಷಣಕರ್ತೃತ್ವವು ಬ್ರಹ್ಮನಲ್ಲಿ ಹೇಗೆ ಕೂಡುತ್ತದೆ? ಏಕೆಂದರೆ 'ಸತ್ಯಂ ಜ್ಞಾನಮ್ ಅನಂತಂ ಬ್ರಹ್ಮ' ಎಂಬಲ್ಲಿ ಹೇಳಿದಂತೆ ಈಶ್ವರನು ಜ್ಞಾನರೂಪನಾಗಿದ್ದಾನೆ. ಇಂತಹ ಜ್ಞಾನರೂಪನಾದ ಬ್ರಹ್ಮನಲ್ಲಿ ಜ್ಞಾನಕರ್ತೃತ್ವವು ಕೂಡುವುದಿಲ್ಲ. ಕ್ರಿಯಾಕರ್ತೃಭಾವವು ಭೇದಸಾಪೇಕ್ಷಿತವಾಗಿದೆ. 'ದೇವದತ್ತಃ ದಾರು ಛಿನತ್ತಿ' ಎಂದು ಹೇಳಿದಾಗ ಛೇದನ ಎಂಬ ಕ್ರಿಯೆಗೂ ಛೇದನಕರ್ತೃವಾದ ದೇವದತ್ತನಿಗೂ ಹೇಗೆ ಭೇದವಿದೆಯೋ, ಆದರಂತೆ ಇಲ್ಲಿಯೂ ಸಹ 'ಜ್ಞಾನ' ಎಂಬ ಕ್ರಿಯೆಗೂ ಜ್ಞಾನಕರ್ತೃವಾದ ಬ್ರಹ್ಮನಿಗೂ ಭೇದವೇ ಇರಬೇಕು. ಆದ್ದರಿಂದ ಜ್ಞಾನಕರ್ತೃತ್ವವೇ ಬ್ರಹ್ಮನಿಗೆ ಕೂಡುವುದಿಲ್ಲ.

ಈ ಶಂಕೆಯನ್ನು ಪರಿಹರಿಸುವುದಕ್ಕಾಗಿ ಕರ್ಮಪದವನ್ನು ಸೂತ್ರಕಾರರು ಹೇಳಿದ್ದಾರೆ. ಕ್ರಿಯೆಯನ್ನು ಹೇಳುವ ಕರ್ಮಪದವನ್ನು ಪ್ರಯೋಗಿಸಿದ್ದರಿಂದ, ಲೋಕದಲ್ಲಿ ಕ್ರಿಯಾ ಮತ್ತು ಕರ್ತೃಗಳಿಗೆ ಭೇದವಿದ್ದರೂ, ಪರಮಾತ್ಮನ ವಿಷಯದಲ್ಲಿ ಭೇದವಿರುವುದಿಲ್ಲವೆಂದು ತಿಳಿಸಿದ್ದಾರೆ. ವಿಶೇಷದ ಬಲದಿಂದ ಜ್ಞಾನರೂಪನೇ ಆಗಿರುವಂತಹ ಪರಮಾತ್ಮನಲ್ಲಿ ಜ್ಞಾನಕರ್ತೃತ್ವವೂ ಕೂಡ ಉಪಪನ್ನವಾಗುತ್ತದೆಂದು ತಿಳಿಸಿದ್ದಾರೆ. ಈ ಅಭಿಪ್ರಾಯದಿಂದಲೇ ಟೀಕೆಯಲ್ಲಿ 'ಈಕ್ಷ್ಯಾಖ್ಯವ್ಯಾಪಾರಃ' ಈಕ್ಷಣವೆಂಬ ವ್ಯಾಪಾರ ಎಂದು ಪ್ರಯೋಗಿಸಿದ್ದಾರೆ.

ತತ್ವಪ್ರದೀಪದ ಪ್ರಕಾರ ಹೀಗೆ ಸಮಾಧಾನವನ್ನು ತಿಳಿಯಬೇಕು. ಸೂತ್ರದಲ್ಲಿರುವ ಕರ್ಮಶಬ್ದವು ಸೃಷ್ಟ್ಯಾದಿಕ್ರಿಯೆಯನ್ನು ಹೇಳುತ್ತಿದೆ. ಯಾವರೀತಿಯಾಗಿ 'ನ ಕರ್ತೃತ್ವಂ ನ ಕರ್ಮಾಣಿ' ಎಂಬ ಗೀತೆಯ ಶ್ಲೋಕಕ್ಕೆ ಶ್ರೀಮದಾಚಾರ್ಯರು ವ್ಯಾಖ್ಯಾನ ಮಾಡುತ್ತಾ ಕರ್ಮಶಬ್ದಕ್ಕೆ ಅದೃಷ್ಟೋತ್ಪಾದನವೆಂಬ ಕ್ರಿಯಾವಿಶೇಷಾರ್ಥದಲ್ಲಿ ವ್ಯಾಖ್ಯಾನ ಮಾಡಿದ್ದಾರೋ, ಅದರಂತೆ ಇಲ್ಲಿಯೂ ಸಹ ಕರ್ಮಶಬ್ದಕ್ಕೆ 'ಸೃಷ್ಟ್ಯಾದಿಕ್ರಿಯಾವಿಶೇಷ' ಎಂಬರ್ಥವನ್ನು ವಿವಕ್ಷಿಸಬೇಕು. ಹೀಗೆ ಹೇಳಿದಾಗ ಪ್ರಧಾನ ಪಕ್ಷದಲ್ಲಿ ಕೇವಲ ಈಕ್ಷಿತೃತ್ವವು ಅಯುಕ್ತವಾಗುತ್ತದೆಂದಷ್ಟೇ ಅಲ್ಲ, ಸ್ರಷ್ಟೃತ್ವಾದಿಗಳೂ ಕೂಡ ಅಯುಕ್ತವಾಗುತ್ತದೆಂದು ತಿಳಿಸಿದಂತಾಗುತ್ತದೆ. ಅದಕ್ಕೋಸ್ಕರ ಸೂತ್ರದಲ್ಲಿರುವ ಕರ್ಮಪದವು ಸಾರ್ಥಕವೆಂದು ತಿಳಿಯಬೇಕು.

ವಸ್ತುತಃ ಬೇರೆ ಸೂತ್ರಗಳಲ್ಲಿ ಸಮನ್ವಯ ಸೂತ್ರದಿಂದ 'ತತ್' ಎಂಬುದನ್ನು ಅನುವೃತ್ತಿ ಮಾಡಿಕೊಳ್ಳುವಂತೆ, ಈ ಸೂತ್ರದಲ್ಲಿಯೂ ಬ್ರಹ್ಮಪರವಾದ 'ತತ್' ಎಂಬುದನ್ನು ಅನುವೃತ್ತಿಮಾಡಿಕೊಳ್ಳಬಹುದು.

ಆದರೂ ಸಹ 'ತತ್' ಎಂಬುದನ್ನು ಅನುವೃತ್ತಿ ಮಾಡಿಕೊಳ್ಳದೇ 'ಸಃ' ಎಂದೇಕೆ ನಿರ್ದೇಶ ಮಾಡಿದ್ದಾರೆಂದರೆ, ಸಮಾಖ್ಯಾಪ್ರಮಾಣವನ್ನು ಸೂಚನೆ ಮಾಡುವುದಕ್ಕಾಗಿ. 'ಏಕೋ ನಾರಾಯಣ ಆಸೀತ್ । ಸ ಮುನಿರ್ಭೂತ್ವಾ ಸಮಚಿಂತಯತ್' ಇತ್ಯಾದಿ ಶ್ರುತಿಗಳಲ್ಲಿ ಕಾರಣತ್ವೇನ ನಿರ್ಣೀತನಾದ ಯಾವ ವ್ಯಕ್ತಿಯು ಇದ್ದಾನೋ, ಅವನು ಇಲ್ಲಿಯೂ ಕೂಡ ಪ್ರತಿಪಾದ್ಯನಾಗಿದ್ದಾನೆ ಎಂಬ ಸಮಾಖ್ಯಾನವನ್ನು ಪ್ರಮಾಣವನ್ನಾಗಿ ತೋರಿಸಲು ಸೂತ್ರದಲ್ಲಿ 'ಸಃ' ಎಂದು ಹೇಳಿದ್ದಾರೆ.

ಆದ್ದರಿಂದ ಸೂತ್ರದಲ್ಲಿರುವ 'ಕರ್ಮ' ಎಂಬ ಪದ, 'ಸಃ' ಎಂಬ ಪದ ಎರಡೂ ಕೂಡ ಅತ್ಯಂತ ಸಾರ್ಥಕವೆಂದು ತಿಳಿಯಬೇಕು.

ಈಕ್ಷಣವೆಂಬ ಲಿಂಗವು ನಿರವಕಾಶ

भावदीपः – विष्णुरेवेत्युक्त्या न प्रधानमिति दर्शितम् । तत्र हेत्वाकाङ्क्षायामचेतनस्येक्षणादृष्टिरित्यन्यत्रोक्तमीक्षणस्य निरवकाशत्वमाह – जडेति ।।

'ವಿಷ್ಣುರೇವ ಉಚ್ಯತೇ' ವಿಷ್ಣುವೊಬ್ಬನೇ ಪ್ರತಿಪಾದ್ಯನಾಗುತ್ತಾನೆಂದು ಅವಧಾರಣಪುರಸ್ಸರವಾಗಿ ಹೇಳಿದ್ದರಿಂದ ಪ್ರಧಾನವು ಪ್ರತಿಪಾದ್ಯವಾಗುವುದಿಲ್ಲವೆಂದು ಪ್ರತ್ಯೇಕವಾಗಿ ಹೇಳಿಲ್ಲ. ಈ ವಿಷಯದಲ್ಲಿ ಹೇತುವಿನ ಆಕಾಂಕ್ಷೆಯು ಪ್ರಾಪ್ತವಾದರೆ, ಅಚೇತನಕ್ಕೆ ಜ್ಞಾನವಿರುವಿಕೆಯು ಬೇರೆ ಎಲ್ಲಿಯೂ ಕಂಡಿಲ್ಲ ಎಂಬುದಾಗಿ ಸೂತ್ರದಲ್ಲಿ ಹೇಳಲ್ಪಟ್ಟ 'ಈಕ್ಷಣ' ಎಂಬ ಲಿಂಗಕ್ಕೆ ನಿರವಕಾಶತ್ವವನ್ನು ಸಮರ್ಥಿಸುತ್ತಿದ್ದಾರೆ 'ಜಡ' ಎಂಬ ಪದದಿಂದ.

'ತತ್ತೇಜ ಐಕ್ಷತ' ಎಂಬುದರ ಅರ್ಥವೇನು ?

भावदीपः – 'तत्तेज ऐक्षत' इत्युक्तं तेजःप्रभृत्यपि चेतनमेवेत्यभिमानिनये वक्ष्यत इति भावः । श्रुत्यर्थं वदन्नेवावतारयति – अपिच विष्विति ।।

'ತತ್ತೇಜ ಐಕ್ಷತ' ಎಂಬಲ್ಲಿ ಜಡವಾದ ತೇಜಸ್ಸಿಗೆ ಈಕ್ಷಣವನ್ನು ಹೇಳಿಯೇ ಇಲ್ಲ. ಹೊರತಾಗಿ, 'ತೇಜಃ' ಮೊದಲಾದ ಶಬ್ದಗಳು ಚೇತನರನ್ನೇ ಪ್ರತಿಪಾದಿಸುತ್ತಿವೆ ಎಂಬುದಾಗಿ ಅಭಿಮಾನ್ಯಧಿಕರಣದಲ್ಲಿ ಮುಂದೆ ಸಮರ್ಥಿಸುತ್ತೇವೆ. ಶ್ರುತಿಯ ಅರ್ಥವನ್ನು ಹೇಳುವವರಾಗಿ ಅವತಾರಿಕೆ ನೀಡುತ್ತಿದ್ದಾರೆ 'ಅಪಿಚ' ಇತ್ಯಾದಿ ವಾಕ್ಯದಿಂದ.

ಸೋಮಶಬ್ದದಂತೆ ವ್ಯಾಖ್ಯಾನಿಸಬೇಕು

भावदीपः – एतेनेति ।। श्रुतौ विष्वन्यस्य मुख्येक्षणनिषेधेनेत्यर्थः । यथा 'सोमो वै राजा गन्धर्वेष्वासीत्तं देवा ऋषयश्चाभिध्यायन्' इत्यादौ सोमलताभिमानिचेतनविवक्षया गन्धर्वेष्वासीदित्युक्तिस्तथेत्यर्थः ।

'ಏತೇನ' ಎಂದರೆ ಶ್ರುತಿಯಲ್ಲಿ ಮುಖ್ಯವಾದ ಈಕ್ಷಣವು ವಿಷ್ಣುವನ್ನು ಬಿಟ್ಟು ಬೇರೆ ಯಾರಲ್ಲಿಯೂ ಬರುವುದಿಲ್ಲವೆಂದು ನಿಷೇಧ ಮಾಡಿದ್ದರಿಂದ ಎಂದರ್ಥ. 'ಯಥಾ ಸೋಮೋ ವೈ ರಾಜಾ ಗಂಧರ್ವೇಷು ಆಸೀತ್ತಂ ದೇವಾ ಋಷಯಶ್ಚಾಭಿಧ್ಯಾಯನ್' ಎಂಬ ವಾಕ್ಯದಲ್ಲಿ 'ಸೋಮ' ಶಬ್ದಕ್ಕೆ ಸೋಮಲತೆಗೆ ಅಭಿಮಾನಿಯಾದ ಚೇತನನನ್ನೇ ವಿವಕ್ಷಿಸಿ, ಅಂತಹ ಚಂದ್ರನು ರಾಜನಂತೆ ಗಂಧರ್ವರ ಮಧ್ಯದಲ್ಲಿದ್ದನು ಎಂದು ಹೇಗೆ ವ್ಯಾಖ್ಯಾನ ಮಾಡಲಾಗುತ್ತದೋ, ಅದರಂತೆ ಇಲ್ಲಿಯೂ ಅಭಿಮಾನಿಚೇತನರೇ ಪ್ರತಿಪಾದ್ಯರಾಗುತ್ತಾರೆ.

ಭಾಷ್ಯದ ಸಂಪೂರ್ಣ ಅಭಿಪ್ರಾಯ

ಭಾವದೀಪಃ – ಭಾಷ್ಯೇ ಬಹುತ್ವಂ ಚಾವಿಕಾರೇಣೋಕ್ತಂ ಶ್ರುತಾವಿತ್ಯುಕ್ತಮ್ । ತಾವತಾ ಕಥಮುಕ್ತಶಙ್ಕಾವ್ಯುದಾಸ ಇತ್ಯತೋ ಬಹುಭಾವಶ್ರುತಿಸ್ತ್ವನ್ಯಭಾವಂ ವಿನಾ ತತ್ತನ್ನಿಯಾಮಕತಯಾ ಸ್ವರೂಪ-ಬಹುತ್ವಾರ್ಥತಯೈವ ಯುಜ್ಯತ ಇತ್ಯನ್ಯತ್ರೋಕ್ತಮತ್ರ ಸಂಯೋಜ್ಯ ಭಾಷ್ಯಭಾವಮಾಹ – ಬಹುಭಾವಸ್ಯೇತಿ ।।

ಭಾಷ್ಯದಲ್ಲಿ 'ಬಹುತ್ವಂ ಚಾವಿಕಾರೇಣ ಉಕ್ತಂ ಶ್ರುತೌ' ಎಂದು ಹೇಳಿದ್ದಾರೆ. ಇಷ್ಟು ಹೇಳುವುದರಿಂದ ಬಹುಭವನವೆಂಬ ಪೂರ್ವಪಕ್ಷದಲ್ಲಿ ಹೇಳಿದ ಶಂಕೆಯ ಪರಿಹಾರವನ್ನು ಹೇಗೆ ಮಾಡಿದಂತಾಗುತ್ತದೆ? ಎಂಬ ಪ್ರಶ್ನೆಗೆ ಬಹುಭಾವಶ್ರುತಿಯು ಬಹುಭವನವನ್ನು ಹೇಳುತ್ತಲೇ ಇಲ್ಲ. ಹೊರತಾಗಿ ಬೇರೆ ಸ್ವರೂಪವನ್ನು ಹೊಂದದೇ, ಆಯಾ ಪದಾರ್ಥಗಳ ನಿಯಾಮಕನಾಗಿ ತನ್ನ ಸ್ವರೂಪದಿಂದ ಅನೇಕ ರೂಪಗಳನ್ನು ತಾಳುತ್ತಾನೆಂಬ ಅರ್ಥವನ್ನೂ ಕೂಡ ಶ್ರುತಿಗೆ ಹೇಳಬಹುದೆಂದು ಬೇರೆಡೆ ಸಮರ್ಥಿಸಲಾಗಿದೆ. ಅದನ್ನು ಇಲ್ಲಿ ಸಂಯೋಜನೆ ಮಾಡಿ ಭಾಷ್ಯದ ಸಂಪೂರ್ಣ ಅಭಿಪ್ರಾಯವನ್ನು ಸ್ಪಷ್ಟಪಡಿಸುತ್ತಿದ್ದಾರೆ 'ಬಹು ಭಾವಸ್ಯ' ಇತ್ಯಾದಿ ಟೀಕೆಯಿಂದ

ತೈತ್ತಿರೀಯಭಾಷ್ಯದಲ್ಲಿ 'ಬಹು ಸ್ಯಾಮ್' ಎಂಬ ಶ್ರುತಿಯ ವ್ಯಾಖ್ಯಾನ

ಭಾವದೀಪಃ – ಸ್ವರೂಪೇತಿ ।। ಅತ್ರ ಶ್ರುತೌ ಸ್ವರೂಪಬಹುಭವನಮೇವೋಚ್ಯತೇ ನತು ತೇಜಃಪ್ರಭೃತ್ಯಾತ್ಮನಾ ಬಹುಭವನಮ್ । 'ಬಹು ಸ್ಯಾಮ್' ಇತ್ಯುಕ್ತ್ವಾ 'ತತ್ತೇಜೋऽಸೃಜತ' ಇತ್ಯುಕ್ತಿಸ್ತು

'ಸೃಷ್ಟ್ವಾ ಜಗದಿದಂ ಸರ್ವಂ ನಿಯಾಮಕತಯಾऽಸ್ಯ ತು ।
ಬಹುರೂಪೋ ಭವಾನೀತಿ ಸ್ಯಾಜ್ಜಗಚ್ಚೇತ್ಯಚಿನ್ತಯದ್ ।।'

ಇತಿ ತೈತ್ತಿರೀಯಭಾಷ್ಯೋಕ್ತದಿಶಾ ತತ್ತನ್ನಿಯಾಮಕತಯಾ ಸ್ವರೂಪಬಹುಭಾವ-ಸಙ್ಕಲ್ಪಾನನ್ತರಂ ನಿಯಮ್ಯಂ ತೇಜಃಪ್ರಭೃತಿಸ್ಪಷ್ಟವಾನಿತ್ಯುಪಪನ್ನೇತಿ ।

ಟೀಕೆಯಲ್ಲಿ 'ಸ್ವರೂಪಬಹುತ್ವೇನ' ಎಂದಿದೆ. ಪ್ರಕೃತ ಶ್ರುತಿಯಲ್ಲಿ ಸ್ವರೂಪತಃ ಅನೇಕ ರೂಪಗಳನ್ನು ತಾಳುತ್ತಾನೆಂದೇ ಹೇಳಲಾಗಿದೆ ಹೊರತು, ತೇಜಸ್ಸು, ಪೃಥಿವೀ ಮೊದಲಾದ ಪದಾರ್ಥಗಳ

ಸ್ವರೂಪದಿಂದ, ವಿಕಾರವನ್ನು ಹೊಂದುತ್ತಾನೆಂದು ಹೇಳಿಲ್ಲ. ಏಕೆಂದರೆ 'ಬಹು ಸ್ಯಾಮ್' ಅನೇಕ ರೂಪಗಳನ್ನು ತಾಳುತ್ತೇನೆಂದು ಇಚ್ಛಿಸಿ, ಅನಂತರ 'ತತ್ತೇಜೋऽಸೃಜತ' ಎಂಬ ಮಾತು ಶ್ರುತವಾಗಿದೆ. ಈ ಮಾತಿಗೆ ತೈತ್ತಿರೀಯಭಾಷ್ಯದಲ್ಲಿ ಸ್ಪಷ್ಟವಾಗಿ ವ್ಯಾಖ್ಯಾನ ಮಾಡಿದ್ದಾರೆ -

ಸೃಷ್ಟ್ವಾ ಜಗದಿದಂ ಸರ್ವಂ ನಿಯಾಮಕತಯಾऽಸ್ಯ ತು।
ಬಹುರೂಪೋ ಭವಾನೀತಿ ಸ್ಯಾಜ್ಜಗಚ್ಚೇತ್ಯಚಿಂತಯತ್ ॥

ಸಕಲ ಜಗತ್ತನ್ನು ಸೃಷ್ಟಿಮಾಡಿ, ನಿಯಾಮಕನಾಗಿ ಅನೇಕ ರೂಪಗಳನ್ನು ತಾಳುತ್ತೇನೆಂದು ಆಲೋಚಿಸಿದನು.

ಹೀಗೆ ತೈತ್ತಿರೀಯ ಭಾಷ್ಯದಲ್ಲಿ ಹೇಳಿದಂತೆ ಭಗವಂತನು ಆಯಾಪದಾರ್ಥಗಳ ನಿಯಾಮಕ ರೂಪದಿಂದ ಸ್ವರೂಪತಃ ಬಹುಭವನದ ಸಂಕಲ್ಪವನ್ನು ಮಾಡಿ, ಅದಕ್ಕೋಸ್ಕರ ನಿಯಮ್ಯವಾದ ತೇಜಸ್ಸು ಪೃಥಿವೀ ಮೊದಲಾದ ಜಗತ್ತನ್ನು ಸೃಷ್ಟಿ ಮಾಡಿದನೆಂದು ಪ್ರಕೃತ ಶ್ರುತ್ಯರ್ಥವನ್ನು ತಿಳಿಯಬೇಕು.

ಪ್ರಥಮಾಧ್ಯಾಯದ ನಾಕನೆಯ ಪಾದದ ಅನುವ್ಯಾಖ್ಯಾನದಲ್ಲಿಯೂ ವ್ಯಾಖ್ಯಾನ

भावदीपः – तदुक्तं चतुर्थपादीयानुव्याख्याने

'बहु स्यामिति तस्यैव ह्युक्तमार्गेण युज्यते ।
तत्तद्गतेन रूपेण तदर्थं ह्यसृजज्जगद् ।।

इति । न्यायविवरणे चोक्तं बहुभावश्रुतिस्त्वित्यादि ।

ಈ ವಿಷಯವನ್ನೇ ನಾಲ್ಕನೆಯ ಪಾದದ ಅನುವ್ಯಾಖ್ಯಾನದಲ್ಲಿಯೂ ಸ್ಪಷ್ಟವಾಗಿ ಹೇಳಿದ್ದಾರೆ -

'ಬಹು ಸ್ಯಾಮಿತಿ ತಸ್ಯೈವ ಹ್ಯುಕ್ತಮಾರ್ಗೇಣ ಯುಜ್ಯತೇ।
ತತ್ತದ್ಗತೇನ ರೂಪೇಣ ತದರ್ಥಂ ಹ್ಯಸೃಜಜ್ಜಗದ್ ॥

ಹಿಂದೆ ಹೇಳಿದಂತೆ ಅನೇಕರೂಪಗಳನ್ನು ತಾಳುತ್ತೇನೆಂದು ಇಚ್ಛೆ ಮಾಡಿ, ಆ ರೂಪಗಳನ್ನು ತಾಳುವುದಕ್ಕಾಗಿ ನಿಯಮ್ಯವಾದ ಜಗತ್ತನ್ನು ಸೃಷ್ಟಿ ಮಾಡಿದನು ಎಂದು.

ನ್ಯಾಯವಿವರಣದಲ್ಲೂ ಕೂಡ 'ಬಹುಭಾವಶ್ರುತಿಸ್ತು' ಇತ್ಯಾದಿಯಾಗಿ ಹೇಳಿದ್ದಾರೆ.

ತಾತ್ಪರ್ಯಚಂದ್ರಿಕೆಯಲ್ಲಿ ಇದೇ ವಿಷಯದ ವಿವರಣೆ

भावदीपः – विवृतमेतच्चन्द्रिकायाम् ।

‘बहु स्यामिति सङ्कल्प्य तेजःप्रभृतिसर्जनम् ।
गुरुः स्यामिति सङ्कल्प्य शिष्यसम्पादनादिवद् ।। इति ।

ತಾತ್ಪರ್ಯಚಂದ್ರಿಕೆಯಲ್ಲಿ ಈ ವಿಷಯವನ್ನು ಹೀಗೆ ವಿವರಿಸಿದ್ದಾರೆ -

‘ಬಹು ಸ್ಯಾಮಿತಿ ಸಂಕಲ್ಪ್ಯ ತೇಜಃ ಪ್ರಭೃತಿಸರ್ಜನಮ್ ।
ಗುರುಃ ಸ್ಯಾಮಿತಿ ಸಂಕಲ್ಪ್ಯ ಶಿಷ್ಯಸಂಪಾದನಾದಿವತ್ ।

ಅನೇಕ ರೂಪಗಳನ್ನು ತಾಳುತ್ತೇನೆಂದು ಸಂಕಲ್ಪ ಮಾಡಿ, ತೇಜಸ್ಸು ಮೊದಲಾದ ಪದಾರ್ಥಗಳನ್ನು ಸೃಷ್ಟಿ ಮಾಡಿದನೆಂಬುದು ವ್ಯಧಿಕರಣವಾಗುವುದಿಲ್ಲ. ‘ನಾನು ಗುರು ಆಗಬೇಕು’ ಎಂದು ಸಂಕಲ್ಪ ಮಾಡಿ ಶಿಷ್ಯರ ಸಂಪಾದನೆಯಲ್ಲಿ ತೊಡಗಿದರೆ ಹೇಗೆ ವ್ಯಧಿಕರಣವಾಗುವುದಿಲ್ಲವೋ ಅದರಂತೆ ಎಂದು.

ವಿಶೇಷವಿಚಾರ - ಈ ಅಧಿಕರಣವು ವ್ಯರ್ಥವಲ್ಲವೆನ್ನಲು ಅಧಿಕಾಶಂಕೆಯನ್ನು ಈ ಹಿಂದೆ ತೋರಿಸಲಾಯಿತು. ಅದಕ್ಕೆ ಏನು ಸಮಾಧಾನ ? ಎಂದರೆ. ಈಗ ಉತ್ತರಿಸುತ್ತಿದ್ದಾರೆ.

ಬಹು ಸ್ಯಾಮಿತಿ ಸಂಕಲ್ಪ್ಯ ತೇಜಃಪ್ರಭೃತಿಸರ್ಜನಮ್ ।
ಗುರುಃ ಸ್ಯಾಮಿತಿ ಸಂಕಲ್ಪ್ಯ ಶಿಷ್ಯಸಂಪಾದನಾದಿವತ್ ॥೧॥

ಶ್ರೀಹರಿಯು ಬಹುಭವನವನ್ನು ತಾಳುತ್ತೇನೆಂದು ಸಂಕಲ್ಪ ಮಾಡಿ, ‘ತೇಜಸ್’ ಮೊದಲಾದ ಪದಾರ್ಥಗಳಿಂದ ಸೃಷ್ಟಿಮಾಡಿದ್ದು ತಪ್ಪಲ್ಲ. ಏಕೆಂದರೆ ‘ನಾನು ಗುರುವಾಗಬೇಕು’ ಎಂದು ಸಂಕಲ್ಪ ಮಾಡಿ ಶಿಷ್ಯರನ್ನು ಸಂಪಾದನೆ ಮಾಡಲು ಪ್ರವೃತ್ತಿ ಮಾಡಿದರೆ ಹೇಗೆ ತಪ್ಪಾಗುವುದಿಲ್ಲವೋ, ಅದರಂತೆ.

ಆಯಾ ಪದಾರ್ಥಗಳ ನಿಯಾಮಕರೂಪದಿಂದ ಬಹುರೂಪಗಳನ್ನು ತಾಳಬೇಕೆಂದು ಸಂಕಲ್ಪ ಮಾಡಿ, ಅನಂತರ ನಿಯಮ್ಯಪದಾರ್ಥಗಳ ಸೃಷ್ಟಿಯನ್ನು ಹೇಳಿದರೆ ತಪ್ಪಾಗುವುದಿಲ್ಲ. ಯಾವರೀತಿಯಾಗಿ ಗುರುತ್ವವು ಶಿಷ್ಯಸಾಪೇಕ್ಷವೋ, ರಾಜತ್ವವು ಭೃತ್ಯಸಾಪೇಕ್ಷಿತವೋ, ಅದರಂತೆ ನಿಯಾಮಕತ್ವವು ನಿಯಮ್ಯಸಾಪೇಕ್ಷವಾಗಿದೆ.

ಆದ್ದರಿಂದಲೇ ತೈತ್ತಿರೀಯದ ಬ್ರಹ್ಮವಲ್ಲಿಯಲ್ಲಿ ‘ಸೋऽಕಾಮಯತ ಬಹು ಸ್ಯಾಂ ಪ್ರಜಾಯೇಯ’ ಪರಮಾತ್ಮನು ಅನೇಕ ಪದಾರ್ಥಗಳನ್ನು ಸೃಷ್ಟಿ ಮಾಡಬೇಕೆಂದು ಸಂಕಲ್ಪ

ಮಾಡಿದನು ಎಂದು ಪ್ರಾರಂಭವಾಗಿ, 'ಸ ಇದಂ ಸರ್ವಮಸೃಜತ। ಯದಿದಂ ಕಿಂಚ। ತತ್ ಸೃಷ್ಟ್ವಾ ತದೇವಾನುಪ್ರಾವಿಶತ್' ಆ ಪದಾರ್ಥಗಳನ್ನೆಲ್ಲಾ ಸೃಷ್ಟಿ ಮಾಡಿದನು. ಅನಂತರ ಅವುಗಳಲ್ಲಿ ಪ್ರವೇಶ ಮಾಡಿದನೆಂದು ಹೇಳಲಾಗಿದೆ. ಅಂದರೆ ಸಂಕಲ್ಪ ಮಾಡಿ, ತನ್ನಿಂದ ನಿಯಮ್ಯವಾದ ಪದಾರ್ಥಗಳನ್ನು ಸೃಷ್ಟಿಸಿ ಅವುಗಳಲ್ಲಿ ಪ್ರವೇಶ ಮಾಡಿದನೆಂದು ಹೇಳಿದ್ದರಿಂದ ಅವನ ಸಂಕಲ್ಪವು ಸತ್ಯವಾಗಿದೆಯೆಂದು ತಿಳಿಯುತ್ತದೆ. ಅಷ್ಟೇ ಅಲ್ಲದೇ ಪ್ರಕೃತ ಛಾಂದೋಗ್ಯಶ್ರುತಿಯಲ್ಲಿಯೂ ಸಹ 'ಅನೇನ ಜೀವೇನಾತ್ಮನಾऽನುಪ್ರವಿಶ್ಯ' ಎಂಬುದಾಗಿ ತಾನು ಸೃಷ್ಟಿ ಮಾಡಿದ ವಸ್ತುಗಳಲ್ಲಿ ಪ್ರವೇಶ ಮಾಡಿದನೆಂದು ಹೇಳಲಾಗಿದೆ. ತನ್ನಿಂದ ಸೃಷ್ಟವಾದ ಪದಾರ್ಥಗಳನ್ನು ನಿಯಂತ್ರಣ ಮಾಡುವುದಕ್ಕಾಗಿ ಅವುಗಳ ಒಳಗಡೆ ಪ್ರವಿಷ್ಟನಾಗಿದ್ದಾನೆಂದು ಶ್ರುತಿಯು ಹೇಳುತ್ತಿದೆ. ಅವುಗಳಲ್ಲಿ ಪ್ರವೇಶ ಮಾಡಬೇಕೆಂದರೆ ಮೊದಲು ಅವುಗಳ ಸೃಷ್ಟಿಯನ್ನು ಮಾಡಲೇ ಬೇಕು.

ಈ ಎಲ್ಲಾ ಅಭಿಪ್ರಾಯದಿಂದಲೇ ನ್ಯಾಯವಿವರಣದಲ್ಲಿ ಶ್ರೀಮದಾಚಾರ್ಯರು 'ಅಚೇತನಸ್ಯೇಕ್ಷಣಾದೃಷ್ಟಿಃ । ಬಹುಭಾವಶ್ರುತಿಸ್ತ್ವನ್ಯಭಾವಂ ವಿನಾ ತತ್ತನ್ನಿಯಾಮಕತಯಾ ಸ್ವರೂಪಬಹುತ್ವಾರ್ಥತ್ವೇನೈವ ಯುಜ್ಯತೇ' 'ಅಚೇತನವಾದ ಪ್ರಧಾನಕ್ಕೆ ಈಕ್ಷಣವು ಉಪಪನ್ನವಾಗುವುದಿಲ್ಲ. ಪರಮಾತ್ಮನಲ್ಲಿ ಇದು ಯುಕ್ತವಾಗುತ್ತದೆ. ಮತ್ತು ಬಹುಭಾವ ಶ್ರುತಿಯೂ ಕೂಡ ಅನ್ಯಪದಾರ್ಥಗಳ ಸೃಷ್ಟಿಯನ್ನು ಮಾಡದಿದ್ದರೆ, ಅವುಗಳ ಒಳಗಡೆ ನಿಯಾಮಕರೂಪದಿಂದ ಪ್ರವೇಶ ಮಾಡುವುದು ಕೂಡುವುದಿಲ್ಲ' ಎಂದು ಹೇಳಿರುತ್ತಾರೆ.

ಆದ್ದರಿಂದ ಶ್ರೀಹರಿಯೇ 'ಸತ್' ಶಬ್ದವಾಚ್ಯನೆಂದು ಹೇಳಿದಾಗ ಅವನಲ್ಲಿ 'ಈಕ್ಷಣ' ಮತ್ತು 'ಬಹುಭಾವ' ಎರಡೂ ಕೂಡ ಮುಖ್ಯವಾಗಿಯೇ ಉಪಪನ್ನವಾಗುತ್ತವೆ.

ಈಕ್ಷಣವು ಚೇತನರಲ್ಲಿ ಮಾತ್ರ ಬರಲು ಸಾಧ್ಯ. ಬಹುಭವನವು ಅಚೇತನ ಪದಾರ್ಥದಲ್ಲಿ ಮಾತ್ರ ಬರಲು ಸಾಧ್ಯ. ಈ ಎರಡು ವಿರುದ್ಧಧರ್ಮಗಳಿಗೆ ಒಂದೇ ಪದಾರ್ಥದಲ್ಲಿ ಸಾಮಾನಾಧಿಕರಣ್ಯವನ್ನು ಹೇಳುವುದು ತಪ್ಪಾಗುತ್ತದೆ. ಆದ್ದರಿಂದ ಎರಡರಲ್ಲಿ ಒಂದಕ್ಕೆ ಗೌಣಾರ್ಥವನ್ನು ಮಾಡಲೇಬೇಕೆಂದು ಹೇಳಿದರೆ, ಬಹುಭವನವನ್ನೇ ಗೌಣವನ್ನಾಗಿ ಮಾಡಬೇಕು ಹೊರತು, ಈಕ್ಷಣವನ್ನು ಗೌಣವನ್ನಾಗಿ ಮಾಡಬಾರದು. ಏಕೆಂದರೆ ಎಲ್ಲಿ ಬಹುಭವನವು ಶ್ರುತವಾಗಿದೆಯೋ, ಅದರ ಹಿಂದೆ ಈಕ್ಷಿತೃತ್ವವು ಮುಂದೆ ಸ್ರಷ್ಟೃತ್ವವು ಶ್ರುತವಾಗಿದೆ. ಈಕ್ಷಿತೃತ್ವ-ಸ್ರಷ್ಟೃತ್ವಗಳೆರಡನ್ನು ಮುಖ್ಯವಾಗಿ ಸ್ವೀಕರಿಸಿದಾಗ ಇವೆರಡರ ಮಧ್ಯದಲ್ಲಿರುವುದರಿಂದ ಇವೆರಡರಿಂದ ಸಂದಷ್ಟವಾದ ಬಹುಭವನವನ್ನೇ ಗೌಣವನ್ನಾಗಿ ಒಪ್ಪಬೇಕಾಗುತ್ತದೆ.

ಪ್ರಶ್ನೆ - ಬಹುಭವನವನ್ನು ಮುಖ್ಯವನ್ನಾಗಿಟ್ಟುಕೊಂಡು ಈಕ್ಷಣವನ್ನೇ ಗೌಣವಾಗಿ ಹೇಳಬೇಕು. ಏಕೆಂದರೆ, ಸಂಕಲ್ಪವು ಸೃಷ್ಟಿಗೋಸ್ಕರವಿರುವ ಕಾರಣ, 'ಗುಣೇ ತ್ವನ್ಯಾಯಕಲ್ಪನಾ' ಎಂಬ ನ್ಯಾಯದಂತೆ ಸಂಕಲ್ಪರೂಪವಾದ ಈಕ್ಷಣವನ್ನೇ ಗೌಣವನ್ನಾಗಿ ಮಾಡಬೇಕು. ಸೃಷ್ಟಿಗೋಸ್ಕರ ಸಂಕಲ್ಪವಿರುವುದರಿಂದ ಸೃಷ್ಟಿಯು ಮುಖ್ಯವಾಗುತ್ತದೆ. ಸಂಕಲ್ಪವು ಗೌಣವಾಗುತ್ತದೆ. 'ಸೃಷ್ಟಿ' ಶಬ್ದಕ್ಕೆ ಬಹುಭವನವೆಂಬರ್ಥವನ್ನು ವಿವಕ್ಷಿಸಬೇಕು.

ಉತ್ತರ - ಸಂಕಲ್ಪದಲ್ಲಿ ಅಂತರ್ಗತವಾದದ್ದು ಬಹುಭವನವೇ ಹೊರತು, ಈಕ್ಷಣವಲ್ಲ. ಏಕೆಂದರೆ 'ಬಹು ಸ್ಯಾಮ್ ಪ್ರಜಾಯೇಯ' ಎಂಬುದಾಗಿ ಶ್ರುತಿಯು ಸಂಕಲ್ಪದ ಸ್ವರೂಪವನ್ನು ತೋರಿಸುತ್ತಿದೆ. ಆದ್ದರಿಂದ ನೀನೇ ಹೇಳಿದ ನ್ಯಾಯದಂತೆ ಬಹುಭವನವನ್ನೇ ಗೌಣವನ್ನಾಗಿ ಸ್ವೀಕರಿಸಬೇಕು ಎಂದಂತಾಗುತ್ತದೆ. 'ಅಸೃಜತ' ಎಂಬಲ್ಲಿ ಹೇಳಲ್ಪಟ್ಟ ಸೃಷ್ಟಿಯು ಬಹುಭವನರೂಪವಲ್ಲ. ಪ್ರಧಾನವೇ ಆಗಿದೆ. ಇಂತಹ ಪ್ರಧಾನವಾದ ಸ್ರಷ್ಟೃತ್ವಕ್ಕೆ ಅನುಸಾರಿಯಾಗಿ ಬಹುಭವನವನ್ನು ಗೌಣವನ್ನಾಗಿ ವ್ಯಾಖ್ಯಾನಿಸಬೇಕು.

ಮತ್ತು ಗೌಣವಾದ ಸಂಕಲ್ಪದಿಂದ ಸೃಷ್ಟಿ ಮಾಡುವುದು ಜಗತ್ತಿನಲ್ಲಿ ಎಲ್ಲೂ ಕೂಡ ಕಂಡಿಲ್ಲ. ಆದ್ದರಿಂದ ಸಂಕಲ್ಪವನ್ನು ಗೌಣ ಮಾಡಿದರೆ ಸೃಷ್ಟಿರೂಪ ಪ್ರಯೋಜನವೇ ಸಂಕಲ್ಪಕ್ಕೆ ಸಿದ್ಧವಾಗುವುದಿಲ್ಲ.

ಸೂತ್ರದಲ್ಲಿ 'ಸತ್' ಎಂಬ ಪದವನ್ನು ವಿವಕ್ಷಿಸಬೇಕು

भावदीपः – सूत्रार्थं विवृण्वन्नेव फलोक्त्योपसंहरति – अत इति ।। निरवकाशनिर्बाधमुख्येक्षणरूपसाधकभावादित्यर्थः । सदिति सूत्रे शेषोक्तिः ।

ಸೂತ್ರದ ಅರ್ಥವನ್ನು ವಿವರಿಸುತ್ತಲೇ ಸಿದ್ಧಾಂತದ ಫಲವನ್ನು ಹೇಳುವ ಮೂಲಕ ಉಪಸಂಹಾರ ಮಾಡಿದ್ದಾರೆ 'ಅತಃ' ಇತ್ಯಾದಿ ವಾಕ್ಯದಿಂದ. 'ಅತಃ' ಎಂದರೆ ನಿರವಕಾಶವಾದ ಬಾಧವಿಲ್ಲದ ಮುಖ್ಯವಾದ 'ಈಕ್ಷಣ' ಎಂಬ ಸಾಧಕಪ್ರಮಾಣವಿರುವುದರಿಂದ ಎಂದರ್ಥ. ಸೂತ್ರದಲ್ಲಿ 'ಸತ್' ಎಂಬುದನ್ನು ಶೇಷಪೂರಣ ಮಾಡಿಕೊಳ್ಳಬೇಕು.

ನಪುಂಸಕಲಿಂಗದಲ್ಲಿರುವ ಸತ್‌ಪದಕ್ಕೆ ಅನುಸಾರಿಯಾಗಿ ಬ್ರಹ್ಮ ಎಂದಿದ್ದಾರೆ

भावदीपः – सदिति नपुंसकानुरोधाद् ब्रह्मेत्युक्तिः । 'मम योनिर्महद् ब्रह्म' इति प्रधानेऽपि ब्रह्मशब्दोऽस्तीति परं ब्रह्मेवेत्युक्तम् । अयं च तत्त्वित्यनुवृत्ततुशब्दस्य स इत्यनेनान्वयेन लब्धोऽर्थः ।

'ಸತ್' ಎಂಬ ಪದವು ನಪುಂಸಕಲಿಂಗದಲ್ಲಿರುವುದರಿಂದ ಅದಕ್ಕನುಸಾರಿಯಾಗಿ ನಪುಂಸಕಲಿಂಗದಲ್ಲೇ ಇರುವ 'ಬ್ರಹ್ಮ' ಎಂಬ ಪದವನ್ನು ಪ್ರಯೋಗಿಸಿದ್ದಾರೆ. 'ಮಮ ಯೋನಿರ್ಮಹದ್ ಬ್ರಹ್ಮ' ಎಂಬುದಾಗಿ ಪ್ರಕೃತಿಯಲ್ಲಿಯೂ ಬ್ರಹ್ಮಶಬ್ದದ ಪ್ರಯೋಗವಿದೆ. ಅದಕ್ಕೋಸ್ಕರ 'ಪರಂ ಬ್ರಹ್ಮ' ಎಂದು ಹೇಳಿದ್ದಾರೆ. ಈ ವಿಷಯವು 'ತತ್ತು ಸಮನ್ವಯಾತ್' ಎಂಬ ಸೂತ್ರದ 'ತತ್ತು' ಎಂಬ ಪದಕ್ಕೆ 'ಸಃ' ಎಂಬುದರ ಜೊತೆಗೆ ಅನ್ವಯ ಮಾಡಿದಾಗ ದೊರೆತ ಅರ್ಥ.

ಇತಿಶಬ್ದವು ಹೇತ್ವರ್ಥದಲ್ಲಿದೆ

भावदीपः – इतिशब्दो हेत्वर्थः । तस्यैवेति पूर्वाक्षेपकभाष्यस्य विपर्ययेणोपसंहारः।। स्रष्टृत्वमिति ।। अनन्याधीनकारणत्वादिकम् अत्र श्रुतं प्रागुक्तं चेत्यर्थः ।

'ಇತಿ' ಎಂಬ ಶಬ್ದವು ಹೇತ್ವರ್ಥದಲ್ಲಿದೆ. ಹಿಂದಿನ ಆಕ್ಷೇಪವನ್ನು ಮಾಡುವ 'ತಸ್ಯೈವ' ಎಂಬ ಭಾಷ್ಯಕ್ಕೆ ವಿಪರ್ಯಯದಿಂದ ಉಪಸಂಹಾರ ಮಾಡಿದ್ದಾರೆ 'ಸ್ರಷ್ಟೃತ್ವಮ್' ಇತ್ಯಾದಿಯಾಗಿ. ಇಲ್ಲಿ ಕೇಳಿಸುತ್ತಿರುವ ಮತ್ತು ಹಿಂದೆ ಹೇಳಲ್ಪಟ್ಟ ಮತ್ತೊಬ್ಬರ ಅಧೀನವಾಗದ, ಕಾರಣತ್ವಾದಿಗಳು ಎಂದರ್ಥ.

'ತತ್ತೇಜೋऽಸೃಜತ' ಇತ್ಯಾದಿ ವಾಕ್ಯಗಳೆಲ್ಲವೂ ಸೃಷ್ಟಿಪರ

भावदीपः – यद्वा ईक्षणेन सच्छब्दितस्य चेतनत्वे निश्चिते 'तत्तेजोऽसृजत' इत्यादेः सृष्टिपरत्वस्यैव सम्भवेन कारणत्वमात्रपरत्वस्याकल्प्यत्वात् स्रष्टृत्वमित्युक्तम्।

ಅಥವಾ 'ಈಕ್ಷಣ' ಎಂಬ ಹೇತುವಿನಿಂದ 'ತತ್' ಶಬ್ದವು ಚೇತನಪರವೆಂದು ನಿಶ್ಚಯವಾದ ಮೇಲೆ 'ತತ್ತೇಜೋऽಸೃಜತ' ಇತ್ಯಾದಿ ವಾಕ್ಯಗಳೂ ಕೂಡ ಸೃಷ್ಟಿಪರವೇ ಆಗುತ್ತವೆಂದು ಹೇಳಬೇಕು ಹೊರತು,

ಕಾರಣತ್ವವನ್ನಷ್ಟೇ ಪ್ರತಿಪಾದಿಸುತ್ತಿದೆ ಎಂದು ಹೇಳಬಾರದು. ಆದ್ದರಿಂದ 'ಸ್ರಷ್ಟೃತ್ವಮ್' ಎಂದು ಟೀಕೆಯಲ್ಲಿ ಹೇಳಿದ್ದಾರೆ.

ಕೆಲವರ ವ್ಯಾಖ್ಯಾನ

ಭಾವದೀಪಃ – यत्तु कश्चिदाह – व्यापारपरस्य कर्मपदस्य धातुनिर्देशरूपेक्षतिपदेन सामानाधिकरण्यायोगः कर्मपदवैय्यर्थ्यम् । स इत्यस्य साध्यनिर्देशरूपत्वे पक्षनिर्देशाभावेन पूर्वोत्तराधिकरणवैरूप्यं चेत्यादि।

ಕೆಲವರು ಹೀಗೆ ಹೇಳುತ್ತಾರೆ - 'ವ್ಯಾಪಾರ' ಎಂಬರ್ಥದಲ್ಲಿರುವ ಕರ್ಮಪದಕ್ಕೆ ಧಾತುನಿರ್ದೇಶ-ರೂಪವಾದ ಈಕ್ಷತಿ ಪದದ ಜೊತೆಗೆ ಸಾಮಾನಾಧಿಕರಣ್ಯವು ಕೂಡುವುದಿಲ್ಲ. ಆದ್ದರಿಂದ ಕರ್ಮಪದಕ್ಕೆ ವೈಯ್ಯರ್ಥ್ಯ ಬರುತ್ತದೆ. ಸೂತ್ರದಲ್ಲಿರುವ 'ಸಃ' ಎಂಬ ಪದಕ್ಕೆ ಸಾಧ್ಯಪರತ್ವವನ್ನು ಒಪ್ಪಿದರೆ, ಪಕ್ಷನಿರ್ದೇಶವೇ ಇಲ್ಲದ ಕಾರಣ, ಹಿಂದಿನ ಮುಂದಿನ ಅಧಿಕರಣಗಳಿಂದ, ವೈಲಕ್ಷಣ್ಯವನ್ನು ಹೇಳಿದಂತಾಗುತ್ತದೆ ಎಂದು.

ನಿರಾಕರಣೆ

ಭಾವದೀಪಃ – तन्न । धातुनिर्देशेन तदर्थस्येक्षणस्यात्र लक्ष्यत्वात् । अत एव टीकायां प्रधानस्येक्षणासम्भवादित्युक्तम् ।

ಇದು ತಪ್ಪು. ಧಾತುನಿರ್ದೇಶದಿಂದ ಅದರ ಅರ್ಥವಾದ ಈಕ್ಷಣವೇ ಇಲ್ಲಿ ಲಕ್ಷ್ಯವಾಗಿದೆ. ಆದ್ದರಿಂದಲೇ ಟೀಕೆಯಲ್ಲಿ 'ಪ್ರಧಾನಸ್ಯ ಈಕ್ಷಣ ಅಸಂಭವಾತ್' ಎಂದು ಹೇಳಿದ್ದಾರೆ.

ಈಕ್ಷಣವೆಂಬ ವ್ಯಾಪಾರವನ್ನು ಹೇಳಿದ್ದು ಸಮಂಜಸವಾಗಿದೆ

ಭಾವದೀಪಃ – न्यायविवरणे चाचेतनस्येक्षणादृष्टिरिति । तथाचेक्षणाख्य-व्यापारेत्यर्थोपपत्तेः । कर्मपदसार्थक्यस्य पक्षविशेषानुक्तिकृत्यस्य च चन्द्रिकायां व्यक्तत्वात् ।। १३ ।।

।। इति श्रीराघवेन्द्रयतिकृते भावदीपे सदधिकरणम् ।।

ನ್ಯಾಯವಿವರಣದಲ್ಲಿಯೂ 'ಅಚೇತನಸ್ಯ ಈಕ್ಷಣಾದೃಷ್ಟಿಃ' ಎಂದು ಹೇಳಿದ್ದಾರೆ. ಇದರಿಂದ 'ಈಕ್ಷಣವೆಂಬ ವ್ಯಾಪಾರ' ಎಂಬರ್ಥವನ್ನು ಹೇಳಿದ್ದು ಸಮಂಜಸವಾಗುತ್ತದೆ. ಕರ್ಮಪದಸಾರ್ಥಕ್ಯವು ಮತ್ತು ಪಕ್ಷವಿಶೇಷವನ್ನು ಸೂತ್ರದಲ್ಲಿ ಹೇಳದಿರುವಿಕೆಯು ಏಕೆಂದು ತಾತ್ಪರ್ಯಚಂದ್ರಿಕೆಯಲ್ಲಿ ಸ್ಪಷ್ಟವಾಗಿ ನಿರೂಪಣೆ ಮಾಡಿದ್ದಾರೆ.

॥ ಇಲ್ಲಿಗೆ ಶ್ರೀಮದ್‌ರಾಘವೇಂದ್ರತೀರ್ಥರಿಂದ ವಿರಚಿತವಾದ ಭಾವದೀಪದ ಸದಧಿಕರಣದ ಕನ್ನಡ ಅನುವಾದವು ಮುಗಿಯಿತು ॥

ತಂತ್ರದೀಪಿಕೆಯಲ್ಲಿ ಸದಧಿಕರಣದ ಸೂತ್ರಗಳು

।। श्रीजानकीवदनाम्भोजराजहंसाय रामचन्द्राय नमः ।।

।। श्री गुरुभ्यो नमः ।।

श्री राघवेन्द्रतीर्थविरचिता

तन्त्रदीपिका

सदधिकरणम् (१।३।४)

ಸೂತ್ರದಲ್ಲಿರುವ 'सः' ಎಂಬ ಪದಕ್ಕೆ ಅನ್ವಯಕ್ರಮ

।। ईक्षतिकर्मव्यपदेशात्सः ।। १-३-१३ ।।

अत्र ''सदेव सोम्य'' इत्यादिसृष्टिस्थानस्थसन्नाम समन्वीयते । योग्यतया सदित्यन्वेति । स इत्यनेन तत्त्विति तुरन्वेति ।

ಈ ಅಧಿಕರಣದಲ್ಲಿ ''ಸದೇವ ಸೋಮ್ಯ'' ಮೊದಲಾದ ಅನೇಕ ಪ್ರಕರಣರೂಪವಾದ ಸ್ಥಾನದಲ್ಲಿರುವ 'ಸತ್' ಎಂಬ ಶಬ್ದದ ಸಮನ್ವಯವನ್ನು ಮಾಡುತ್ತಿದ್ದಾರೆ. 'ಸತ್' ಎಂಬ

ಪದವು ಯೋಗ್ಯತಾದಿಗಳಿರುವುದರಿಂದ ಅನ್ವಯವನ್ನು ಹೊಂದುತ್ತದೆ. ಸೂತ್ರದಲ್ಲಿರುವ 'ಸಃ' ಎಂಬುದರ ಜೊತೆಗೆ 'ತು' ಶಬ್ದಕ್ಕೆ ಅನ್ವಯ ಮಾಡಬೇಕು.

'ಈಕ್ಷತಿಕರ್ಮವ್ಯಪದೇಶಾತ್ಸಃ' ಎಂಬ ಸೂತ್ರದ ಪ್ರತಿಪದಾರ್ಥ

''सदेव'' इत्यादौ श्रुतं सत् स एव विष्णुरेव । न प्रधानम् । ईक्षतिरूपं च तत्कर्म च तस्य व्यपदेशात् ''तदैक्षत'' इतीक्षणाख्यव्यापारोक्तेर्जडे तदयोगादित्यर्थः।

ಸೂತ್ರಾರ್ಥ - 'ಸದೇವ' ಇತ್ಯಾದಿ ಶ್ರುತಿಯಲ್ಲಿ ಕೇಳಿಸುತ್ತಿರುವ ಸತ್ = 'ಸತ್' ಶಬ್ದದಿಂದ ಪ್ರತಿಪಾದ್ಯನಾದವನು 'ಸಃ ತು' = ವಿಷ್ಣುವೇ ಆಗಿದ್ದಾನೆ ಹೊರತು, ಪ್ರಕೃತಿಯಲ್ಲ. ಏಕೆಂದರೆ ಈಕ್ಷತೀಕರ್ಮವ್ಯಪದೇಶಾತ್ = ಈಕ್ಷತಿರೂಪವಾದ ಕರ್ಮವನ್ನು ಹೇಳಿರುವುದರಿಂದ. 'ತದೈಕ್ಷತ' ಎಂಬ ಶ್ರುತಿಯಲ್ಲಿ 'ಈಕ್ಷಣ' ಎಂಬ ವ್ಯಾಪಾರವನ್ನು ಹೇಳಿದ್ದರಿಂದ ಜಡವಾದ ಪ್ರಕೃತಿಯಲ್ಲಿ ವ್ಯಾಪಾರವು ಕೂಡುವುದಿಲ್ಲವೆಂದು ಅರ್ಥ.

ಸೂತ್ರದಲ್ಲೇಕೆ ಕರ್ಮಪದವನ್ನು ವಿವಕ್ಷಿಸಿದರು

ईक्षतीत्येव वाच्ये कर्मेत्युक्तिः स्वरूपान्येक्षणाभावात् कथं तदैक्षतेति कर्तृत्वश्रुतिरिति न शङ्क्यम् । विशेषात् क्रियाकर्तृभाव इति सूचयितुम् ।

ಸೂತ್ರದಲ್ಲಿ 'ಈಕ್ಷತಿ' ಎಂದಷ್ಟೇ ಹೇಳಿದ್ದರೆ ಸಾಕಾಗಿತ್ತು. ಆದರೂ ಸಹ 'ಕರ್ಮ' ಎಂದು ಹೇಳಿದ್ದರಿಂದ ಈಕ್ಷಣವು ಬ್ರಹ್ಮನ ಸ್ವರೂಪವೇ ಆಗಿರುವಾಗ, ಈಕ್ಷಣಕ್ಕೆ ಬ್ರಹ್ಮನು ಆಶ್ರಯನೆಂದು ಹೇಳುವುದು ಕೂಡುವುದಿಲ್ಲ. ಆದರೆ ವಿಶೇಷದ ಬಲದಿಂದ ಅಭೇದವಿದ್ದರೂ ಈಕ್ಷಣಕ್ರಿಯೆಗೆ ಬ್ರಹ್ಮನು ಆಶ್ರಯನಾಗಿದ್ದಾನೆಂಬ ವ್ಯವಹಾರವನ್ನು ಮಾಡಿ ಕ್ರಿಯಾಕರ್ತೃಭಾವಸಂಬಂಧವನ್ನು ಹೇಳಬಹುದೆಂದು ಸೂಚನೆ ಮಾಡಿದ್ದಾರೆ.

ತತ್ತ್ವಪ್ರದೀಪ ಹಾಗೂ ತಾತ್ಪರ್ಯಚಂದ್ರಿಕೆಗಳಲ್ಲಿ ಕರ್ಮಪದದ ಸಾರ್ಥಕ್ಯ

तत्त्वप्रदीपचन्द्रिकयोस्तु कर्मेति ''न कर्तृत्वं न कर्माणि'' इत्यत्रैव सृष्टिरुच्यते । ईक्षतिश्च कर्म च तयोरीक्षणसृष्टिक्रिययोरुक्तेरित्यर्थः ।

तत्त्वित्यनुवृत्तावपि स इत्युक्तिः ''एको नारायण आसीत्'', ''स मुनिर्भूत्वा समचिन्तयत्'' इत्यादिसमाख्यां सूचयितुमित्युक्तम् ।।४।।

ತತ್ವಪ್ರದೀಪ ಹಾಗೂ ಚಂದ್ರಿಕಾಗ್ರಂಥಗಳಲ್ಲಿ ಕರ್ಮಪದದ ಸಾರ್ಥಕ್ಯವನ್ನು ಹೀಗೆ ಹೇಳಲಾಗಿದೆ. 'ನ ಕರ್ತೃತ್ವಂ ನ ಕರ್ಮಾಣಿ' ಎಂಬಲ್ಲಿ ಸೃಷ್ಟಿಯನ್ನು ಹೇಳಲಾಗಿದೆ. 'ಈಕ್ಷತಿಶ್ಚ ಕರ್ಮ ಚ ತಯೋಃ' ಎಂಬುದಾಗಿ ಈಕ್ಷಣ ಕ್ರಿಯೆ ಹಾಗೂ ಸೃಷ್ಟಿಕ್ರಿಯೆಗಳ ವಚನವು ಇರುವುದರಿಂದ ಎಂದರ್ಥ. 'ತತ್' 'ತು' ಎಂಬ ಪದಗಳು ಅನವೃತ್ತವಾಗುತ್ತವೆ. ಆದರೂ ಸಹ 'ಸಃ' ಎಂದು ಏಕೆ ಹೇಳಿದ್ದಾರೆ ಎಂದರೆ 'ಏಕೋ ನಾರಾಯಣ ಆಸೀತ್' 'ಸ ಮುನಿರ್ಭೂತ್ವಾ ಸಮಚಿಂತಯತ್' ಇತ್ಯಾದಿ ಶ್ರುತಿಗಳ ಸಮಾಖ್ಯಾನವನ್ನು ಸೂಚನೆ ಮಾಡುವುದಕ್ಕಾಗಿ ಎಂದು ವ್ಯಾಖ್ಯಾನ ಮಾಡಿದ್ದಾರೆ.

॥ ಇಲ್ಲಿಗೆ ತಂತ್ರದೀಪಿಕಾ ಕನ್ನಡಾನುವಾದದಲ್ಲಿ ಸದಧಿಕರಣವು ಮುಗಿಯಿತು ॥

ಅದ್ವೈತ-ವಿಶಿಷ್ಟಾದ್ವೈತಮತದಲ್ಲಿ ಸದಧಿಕರಣ
ಮತ್ತು
ವಿಮರ್ಶೆ

ಅದ್ವೈತಿಗಳ ಅಧಿಕರಣ ಶರೀರ ಹೀಗಿದೆ -

ಪೂರ್ವಪಕ್ಷ - 'ಯಃ ಪುನರೇತಂ ತ್ರಿಮಾತ್ರೇಣೋಮಿತ್ಯನೇನೈವಾಕ್ಷರೇಣ ಪರಂ ಪುರುಷಮಭಿಧ್ಯಾಯೀತ' ಎಂಬ ವಾಕ್ಯದಲ್ಲಿ ಧ್ಯಾನಕ್ಕೆ ವಿಷಯವಾದ ವಸ್ತು, ಹಿರಣ್ಯಗರ್ಭನೆಂಬ ಅಪರಬ್ರಹ್ಮನೇ ಆಗಿದ್ದಾನೆ. ಏಕೆಂದರೆ 'ಸ ಸಾಮಭಿರುನ್ನೀಯತೇ ಬ್ರಹ್ಮಲೋಕಮ್' ಎಂಬುದಾಗಿ ಯಾರು ಅಂತಹ ವ್ಯಕ್ತಿಯನ್ನು ತಿಳಿಯುತ್ತಾನೋ, ಅವನಿಗೆ ಬ್ರಹ್ಮಲೋಕವು ಪ್ರಾಪ್ತವಾಗುತ್ತದೆಂದು ಪರಿಚ್ಛಿನ್ನವಾದ ದೇಶಪ್ರಾಪ್ತಿಯೆಂಬ ಫಲವನ್ನು ಹೇಳಲಾಗಿದೆ. ಪರಬ್ರಹ್ಮನನ್ನು ತಿಳಿಯುವಂತಹ ವ್ಯಕ್ತಿಗೆ ದೊರೆಯುವ ಫಲವು ದೇಶಪರಿಚ್ಛಿನ್ನವಾಗಲು ಸಾಧ್ಯವಿಲ್ಲ. ಆದ್ದರಿಂದ ಅಪರಬ್ರಹ್ಮನೇ ಪ್ರತಿಪಾದ್ಯನೆಂದು ಪೂರ್ವಪಕ್ಷ.

ಸಿದ್ಧಾಂತ - ಧ್ಯಾನಕ್ಕೆ ವಿಷಯವಾದ ಈ ವಸ್ತು ಪರಬ್ರಹ್ಮನೇ ಆಗಿದ್ದಾನೆ. ಏಕೆಂದರೆ 'ಪರಾತ್ಪರಂ ಪುರಿಶಯಂ ಪುರುಷಮೀಕ್ಷತೇ' ಎಂಬುದಾಗಿ ಮುಂದಿನ ವಾಕ್ಯದಲ್ಲಿ ಇಂತಹ ಧ್ಯಾತನಾದ ವ್ಯಕ್ತಿಯೇ ಈಕ್ಷಣಕ್ಕೆ ಕರ್ಮನಾಗಿದ್ದಾನೆಂದು ಹೇಳಲಾಗಿದೆ. ಈಕ್ಷಣವಾದರೂ ಸಹ ಪಾರಮಾರ್ಥಿಕವಾದ ಸದ್ವಿಷಯಕವೇ ಆಗಿರುತ್ತದೆ.

ಬ್ರಹ್ಮನನ್ನು ಬಿಟ್ಟು ಇತರ ಯಾವುದೇ ಪದಾರ್ಥವೂ ಸಹ ಪಾರಮಾರ್ಥಿಕವಲ್ಲ. ಮತ್ತೆ, ಈಕ್ಷಣೀಯನಾದವನು ಪರಬ್ರಹ್ಮನೇ ಆಗಲಿ, ಆದರೆ ಅಭಿಧ್ಯಾನಕ್ಕೆ ವಿಷಯನಾದವನು ಮಾತ್ರ ಅಪರಬ್ರಹ್ಮನಾಗಲಿ ಎಂದೂ ಕೂಡ ಹೇಳಬಾರದು. ಏಕೆಂದರೆ ಜ್ಞಾನಕ್ಕೆ ವಿಷಯನಾದವನೇ ಧ್ಯಾನಕ್ಕೂ ಕೂಡ ವಿಷಯನಾಗುತ್ತಾನೆ.

ಇದನ್ನೇ ಭಾಮತಿಯಲ್ಲಿ ಹೀಗೆ ಹೇಳಿದೆ -

ಈಕ್ಷಣಧ್ಯಾನಯೋರೇಕಃ ಕಾರ್ಯಕಾರಣಭೂತಯೋಃ ।
ಅರ್ಥ ಔತ್ಸರ್ಗಿಕಂ ತತ್ವವಿಷಯತ್ವಂ ತಥೇಕ್ಷತೇಃ ॥

ಧ್ಯಾನವು ಜ್ಞಾನಕ್ಕೆ ಕಾರಣವಾದ್ದರಿಂದ ಧ್ಯಾನವು ಕಾರಣವಾದರೆ, ಈಕ್ಷಣವು ಕಾರ್ಯವಾಗಿದೆ. ಹೀಗೆ ಕಾರ್ಯಕಾರಣಗಳಾದ ಈಕ್ಷಣ ಹಾಗೂ ಧ್ಯಾನಗಳಿಗೆ ಒಂದೇ ವಿಷಯವಿರಬೇಕು. ಸಾಮಾನ್ಯವಾಗಿ ಈಕ್ಷಣಕ್ಕೆ ವಿಷಯವಾದದ್ದು ತಾತ್ವಿಕವೇ ಆಗಿರುತ್ತದೆಂಬುದು ಔತ್ಸರ್ಗಿಕನಿಯಮ.

ನಿರುಪಾಧಿಕವಾದ ಬ್ರಹ್ಮಜ್ಞಾನವೇ ಅಪರಿಚ್ಛಿನ್ನಫಲವುಳ್ಳದ್ದಾಗಿರುತ್ತದೆ. ಆದರೆ ಪ್ರಕೃತ ಮೂರು ಮಾತ್ರಾಕಾಲಗಳಲ್ಲಿ ಉಚ್ಚರಿಸುವಂತಹ ಓಂಕಾರವೆಂಬ ಉಪಾಧಿಯು ಇರುವುದರಿಂದ. ಇದರ ಫಲವು ಪರಿಚ್ಛಿನ್ನವಾಗಿದೆಯೆಂಬುದು ಯುಕ್ತವಾಗುತ್ತದೆಂಬುದು ಸಿದ್ಧಾಂತ. ಹೀಗೆ ಆದ್ವೈತಿಗಳು ಈ ಅಧಿಕರಣವನ್ನು ರಚಿಸಿದ್ದಾರೆ.

ಆದ್ವೈತಿಗಳ ಈ ಅಧಿಕರಣ ಶರೀರ ಅಸಾಧುವಾಗಿದೆ. ಏಕೆಂದರೆ ಆದ್ವೈತಿಗಳ ಪ್ರಕಾರ ಕರ್ಮಶಬ್ದಕ್ಕೆ ಭಾವಪ್ರಧಾನ ನಿರ್ದೇಶ ಮಾಡಬೇಕು. ಹೀಗೆ ಮಾಡಿದರೆ ಕಲ್ಪನಾಗೌರವ-ರೂಪದೋಷವು ಬರುತ್ತದೆ.

ಮತ್ತು ನಿರವಕಾಶವಾದ ಪ್ರಥಮಶ್ರುತವಾದ ಪರಾತ್ಪರತ್ವವೆಂಬ ಬ್ರಹ್ಮನ ಲಿಂಗವು ಇರುವಾಗ ಇದನ್ನು ಬಿಟ್ಟು ಚರಮಶ್ರುತವಾದ ಸಾವಕಾಶವಾದ ಈಕ್ಷತಿಕರ್ಮತ್ವವೆಂಬ ಲಿಂಗವನ್ನು ಸೂತ್ರದಲ್ಲಿ ಹೇಳುವುದು ಅಯುಕ್ತವಾಗುತ್ತದೆ.

ಮತ್ತು ಅದ್ವೈತಮತದಲ್ಲಿ ಜ್ಞಾನಕ್ಕೆ ವಿಷಯವಾದದ್ದು ಮಿಥ್ಯಾಭೂತವೇ ಆಗಿರುತ್ತದೆಂಬ ನಿಯಮವಿರುವುದರಿಂದ ಈಕ್ಷಣಕರ್ಮತ್ವವು ಪಾರಮಾರ್ಥಿಕಸತ್ತಾದ ಬ್ರಹ್ಮನೇ ಆಗಿದ್ದಾನೆನ್ನಲು ಹೇತುವಾಗುವುದಿಲ್ಲ.

ಮತ್ತು ಧ್ಯಾನವು ಪರಮಾರ್ಥಸದ್ವಿಷಯಕವಾದ ಈಕ್ಷಣದ ಜೊತೆಗೆ ಏಕವಿಷಯತ್ವವನ್ನು ಹೊಂದಿದೆಯೆಂದು ಹೇಳುವುದಕ್ಕೋಸ್ಕರ ಅದು ನಿರುಪಾಧಿಕಬ್ರಹ್ಮವಿಷಯಕವಾಗಿದೆಯೆಂದು ಹೇಳಿದಿರಿ. ಇದು ವ್ಯಾಹತವಾಗಿದೆ. ಮತ್ತು ಪರಿಚ್ಛಿನ್ನಫಲಕ್ಕೋಸ್ಕರ ಧ್ಯಾನಕ್ಕೆ ಓಂಕಾರೌಪಾಧಿಕ-ವಿಷಯತ್ವವನ್ನು ಹೇಳಿದಿರಿ. ಇದೂ ಕೂಡ ವ್ಯಾಹತವಾಗಿದೆ. ಅಂದರೆ ಮೊದಲು ನಿರುಪಾಧಿಕ-ಬ್ರಹ್ಮವಿಷಯವೆಂದು ಒಪ್ಪಿ, ಅನಂತರ ಪರಿಚ್ಛಿನ್ನಫಲಕ್ಕೋಸ್ಕರ ಸೋಪಾಧಿಕಬ್ರಹ್ಮವಿಷಯತ್ವವನ್ನು ಒಪ್ಪುವುದು ವಿರುದ್ಧವಾಗಿದೆಯೆಂದು ಅಭಿಪ್ರಾಯ.

ಮತ್ತು ಓಂಕಾರೋಪಾಧಿಕವಾದ ಧ್ಯಾನಕ್ಕೆ ಪರಿಚ್ಛಿನ್ನಫಲವನ್ನು ಹೇಳಿದ್ದು ಅಯುಕ್ತವಾಗುತ್ತದೆ. ಏಕೆಂದರೆ 'ಓಂಕಾರೇಣೈವಾಯನೇನಾನ್ವೇತಿ ವಿದ್ವಾನ್ ಯತ್ತಚ್ಛಾಂತಮಜರಮಮೃತಮಭಯಂ ಪರಂ ಚ' ಎಂಬ ವಾಕ್ಯಶೇಷದಲ್ಲಿ ಓಂಕಾರಧ್ಯಾನಕ್ಕೆ ಅಪರಿಚ್ಛಿನ್ನಫಲವನ್ನು ಹೇಳಲಾಗಿದೆ.

ಮತ್ತು

'ಈಕ್ಷಣಸ್ಯಾನುಸಾರೇಣ ಧ್ಯಾನಂ ಸದ್ವಿಷಯಂ ಯದಿ।
ತರ್ಹಿ ಧ್ಯಾನಾನುಸಾರೇಣಾಸ್ತ್ವೀಕ್ಷಣಂ ಕಲ್ಪಿತಾರ್ಥಕಮ್ ॥೧॥'

ಈಕ್ಷಣಕ್ಕೆ ಅನುಸಾರಿಯಾಗಿ ಧ್ಯಾನವು ಸತ್ಪದಾರ್ಥವಿಷಯಕವೆಂದು ಹೇಳುತ್ತಿದ್ದೀರಿ. ಹಾಗಾದರೆ ಧ್ಯಾನಕ್ಕೆ ಅನುಸಾರಿಯಾಗಿ ಈಕ್ಷಣವೇ ಕಲ್ಪಿತಾರ್ಥವಿಷಯಕವೆಂದು ಏಕೆ ಹೇಳಬಾರದು?

ನಿಮ್ಮ ಮತದಲ್ಲಿ 'ಯೋಷಿತಮಗ್ನಿಂ ಧ್ಯಾಯೀತ' ಇತ್ಯಾದಿ ಸ್ಥಳದಲ್ಲಿ ಧ್ಯಾನಕ್ಕೆ ಆರೋಪಿತ ವಿಷಯತ್ವವನ್ನೇ ಸ್ಪಷ್ಟವಾಗಿ ಸಮರ್ಥಿಸಲಾಗಿದೆ. ಹೀಗಿರುವಾಗ ಪ್ರಕೃತ ಸದ್ವಿಷಯಕತ್ವವನ್ನು ಒಪ್ಪುವುದು ತಪ್ಪಾಗುತ್ತದೆ. ಮತ್ತು 'ಯ ಏಷೋಽಂತರಾದಿತ್ಯೇ ಹಿರಣ್ಮಯಃ ಪುರುಷೋ ದೃಶ್ಯತೇ' 'ಯದಾ ಪಶ್ಯಃ ಪಶ್ಯತೇ ರುಗ್ಮವರ್ಣಮ್' ಇತ್ಯಾದಿ ಸ್ಥಳಗಳಲ್ಲಿ ಈಕ್ಷಣವೂ ಕೂಡ ಮಿಥ್ಯಾವಿಷಯಕವೇ ಆಗಿದೆಯೆಂದು ನೀವು ಒಪ್ಪಲೇ ಬೇಕು. ಆದ್ದರಿಂದ ಆರೋಪಿತ-ವಿಷಯಕವಾದ ಧ್ಯಾನಕ್ಕೆ ಅನುಸಾರಿಯಾಗಿ ಈಕ್ಷಣವನ್ನು ಕಲ್ಪಿತಾರ್ಥವಿಷಯಕವೆಂದು ಹೇಳುವುದೇ ಸಮಂಜಸ.

'ಯ ಏಷೋಽಂತರಾದಿತ್ಯೇ' ಇತ್ಯಾದಿ ಸ್ಥಳಗಳಲ್ಲಿ ವ್ಯಾವಹಾರಿಕ ವಿಷಯತ್ವವನ್ನು ಒಪ್ಪುತ್ತೇವೆಂದು ಹೇಳಿದರೆ, ಹಿರಣ್ಯಗರ್ಭವಿಷಯಕವೆಂದೂ ಸಹ ಹೇಳಬಹುದು. ಆದ್ದರಿಂದ ಹಿರಣ್ಯಗರ್ಭನು 'ಪರಾತ್ಪರಮ್' ಎಂಬ ವಾಕ್ಯದಿಂದ ಪ್ರತಿಪಾದ್ಯನಲ್ಲ. ಪರಬ್ರಹ್ಮನೇ ಪ್ರತಿಪಾದ್ಯನಾಗಿದ್ದಾನೆಂದು ನಿಮ್ಮಿಂದ ಸಮರ್ಥಿಸಲು ಸಾಧ್ಯವಿಲ್ಲ.

ಪ್ರತಿಯೊಂದು ಅಧಿಕರಣಗಳಂತೆ ಈ ಅಧಿಕರಣದಲ್ಲಿಯೂ ಅದ್ವೈತಿಗಳು 'ಈಕ್ಷತಿಕರ್ಮ' ಎಂಬ ಸೂತ್ರದಿಂದ ಜೀವ ಹಾಗೂ ಬ್ರಹ್ಮರಿಗೆ ಕರ್ತೃ-ಕರ್ಮಭಾವವನ್ನು ಒಪ್ಪಿರುತ್ತಾರೆ. ಇದರಿಂದ ಜೀವಬ್ರಹ್ಮರಿಗೆ ಭೇದವನ್ನೇ ಒಪ್ಪಿದಂತಾಯಿತು. ಮತ್ತು ಬ್ರಹ್ಮನಿಗೆ ದೃಶ್ಯತ್ವವನ್ನು ಹೇಳಿದ್ದರಿಂದ ಅದ್ವೈತಿಗಳಿಗೆ ಈ ಅಧಿಕರಣವೂ ಕೂಡ ಮುಳ್ಳಾಗಿದೆ.

ರಾಮಾನುಜರ ಅಧಿಕರಣಶರೀರ ಹೀಗಿದೆ - 'ಈಕ್ಷತಿಕರ್ಮ' 'ಪರಾತ್ಪರಂ' 'ಪುರಿಶಯಂ ಪುರುಷಮೀಕ್ಷತೇ' ಎಂಬ ಶ್ರುತಿಯಲ್ಲಿ ಜ್ಞಾನಕ್ಕೆ ವಿಷಯನಾದವನೂ ಸಹ ಪರಮಾತ್ಮನೇ ಆಗಿದ್ದಾನೆ. ಏಕೆಂದರೆ 'ವ್ಯಪದೇಶಾತ್' ಪರಮಾತ್ಮತ್ವೇನ ವ್ಯಪದೇಶ ಮಾಡಿದ್ದರಿಂದ ಎಂದು ಸೂತ್ರಾರ್ಥ.

ಪ್ರಶ್ನೆ - ಈ ಅಧಿಕರಣದಲ್ಲಿ ಪೂರ್ವಪಕ್ಷವೇ ಹುಟ್ಟುವುದಿಲ್ಲ. ಏಕೆಂದರೆ 'ಪುರುಷಮೀಕ್ಷತೇ' ಎಂಬ ವಾಕ್ಯದಲ್ಲಿ ಪರಾತ್ಪರತ್ವಾದಿಲಿಂಗಗಳು ಕೇಳಿಸುತ್ತಿವೆ. 'ಯಥಾ ಪಾದೋದರಸ್ತ್ವಚಾ ವಿನಿರ್ಮುಚ್ಯತೇ ಏವಂ ಹೈವ ಸ ಪಾಪ್ಮನಾ ವಿನಿರ್ಮುಕ್ತಃ' 'ಯಾವರೀತಿಯಾಗಿ ಸರ್ಪವು ತನ್ನ ಚರ್ಮವನ್ನು ಕಳಚಿಕೊಳ್ಳುತ್ತದೋ, ಅದರಂತೆ ಪರಾತ್ಪರನಾದವನನ್ನು ತಿಳಿದಂತಹ ಪುರುಷನು ಪಾಪಗಳನ್ನು ಕಳಚಿಕೊಳ್ಳುತ್ತಾನೆ' ಎಂಬುದಾಗಿ ಹಿಂದಿನ ವಾಕ್ಯದಲ್ಲಿ ಪರಾತ್ಪರನನ್ನು ತಿಳಿದವನು ಪಾಪಲೇಪವಿಲ್ಲದವನಾಗುತ್ತಾನೆಂದು ಹೇಳಲಾಗಿದೆ. ಮುಂದಿನ ವಾಕ್ಯದಲ್ಲಿಯೂ ಸಹ ಅಮೃತತ್ವ-ಅಭಯತ್ವ ಮೊದಲಾದ ಬ್ರಹ್ಮನ ಧರ್ಮಗಳೇ ಸ್ಪಷ್ಟವಾಗಿ ಗೋಚರವಾಗುತ್ತಿವೆ. ಹೀಗೆ ಎಲ್ಲವೂ ಪರಬ್ರಹ್ಮವಿಷಯಕವೇ ಆಗಿರುವುದರಿಂದ ಪೂರ್ವಪಕ್ಷವು ಹುಟ್ಟಲು ಹೇಗೆ ಸಾಧ್ಯ ?

ಉತ್ತರ - ಚತುರ್ಮುಖನೇ ಈ ವಾಕ್ಯಕ್ಕೆ ವಿಷಯನಾಗಿದ್ದಾನೆಂದು ಪೂರ್ವಪಕ್ಷವು ಹುಟ್ಟುತ್ತದೆ. ಏಕೆಂದರೆ ಹಿಂದಿನ ವಾಕ್ಯದಲ್ಲಿ 'ಸೋಽಂತರಿಕ್ಷಂ ಯಜುರ್ಭಿಃ' ಇತ್ಯಾದಿಯಾಗಿ ಪ್ರಣವದ ಒಂದು ಅಕ್ಷರದ ಧ್ಯಾನದಿಂದ ಮನುಷ್ಯಲೋಕವು ಪ್ರಾಪ್ತವಾಗುತ್ತದೆ. ಎರಡು ಅಕ್ಷರಗಳ ಧ್ಯಾನದಿಂದ ಅಂತರಿಕ್ಷಲೋಕದ ಪ್ರಾಪ್ತಿಯಾಗುತ್ತದೆಂದು ಹೇಳಲಾಗಿದೆ. ಪ್ರಾಕೃತವಾದ

ಅಂತರಿಕ್ಷಲೋಕದ ಸನ್ನಿಧಾನದಿಂದ ಮುಂದಿರುವ 'ಸ ಸಾಮಭಿರುನ್ನೀಯತೇ ಬ್ರಹ್ಮಲೋಕಮ್' ಮೂರು ಅಕ್ಷರಗಳ ಧ್ಯಾನದಿಂದ ಬ್ರಹ್ಮಲೋಕವು ಪ್ರಾಪ್ತವಾಗುತ್ತದೆಂದು ಹೇಳಿದ್ದರಿಂದ ಬ್ರಹ್ಮಲೋಕವು ಪ್ರಾಕೃತವಾದ ಚತುರ್ಮುಖಬ್ರಹ್ಮಲೋಕವೇ ಆಗಬೇಕು. ಆದ್ದರಿಂದ ಚತುರ್ಮುಖಬ್ರಹ್ಮನೇ ಧ್ಯಾನಕ್ಕೆ ವಿಷಯನಾಗಿ ಪ್ರತಿಪಾದ್ಯನಾಗಿದ್ದಾನೆಂದು ಪೂರ್ವಪಕ್ಷವು ಉದಯವಾಗುತ್ತದೆ. ಹೀಗೆ ರಾಮಾನುಜರು ಪೂರ್ವಪಕ್ಷದ ಉದಯವನ್ನು ಸಮರ್ಥಿಸುತ್ತಾರೆ.

ಈ ವ್ಯಾಖ್ಯಾನವು ಸರಿಯಲ್ಲ. ಏಕೆಂದರೆ 'ಅಂತಸ್ತದ್ಧರ್ಮೋಪದೇಶಾತ್' ಎಂಬ ಸೂತ್ರದಲ್ಲಿ, 'ಭೇದವ್ಯಪದೇಶಾಚ್ಚಾನ್ಯಃ' ಎಂಬ ಸೂತ್ರದಲ್ಲಿ ಕೇವಲ 'ವ್ಯಪದೇಶಾತ್' ಎಂದಷ್ಟೇ ಹೇಳದೇ, ಆ ವ್ಯಪದೇಶಕ್ಕೆ ವಿಷಯವಾದದ್ದು ಯಾವುದು ಎಂದು ಹೇಳಿದ್ದಾರೆ. ಅದರಂತೆ ಪ್ರಕೃತ ಈ ಸೂತ್ರದಲ್ಲಿಯೂ 'ಈಕ್ಷತಿಕರ್ಮವ್ಯಪದೇಶಾತ್' ಎಂಬುದಾಗಿ ವ್ಯಪದೇಶಕ್ಕೆ ವಿಷಯ-ವಾದದ್ದನ್ನೇ 'ಈಕ್ಷತಿಕರ್ಮ' ಎಂದು ಸ್ಪಷ್ಟಪಡಿಸಿದ್ದಾರೆ. ಹೀಗೆ ಸೂತ್ರವನ್ನು ವ್ಯಾಖ್ಯಾನಿಸಲು ಬರುವಾಗ 'ವ್ಯಪದೇಶಾತ್' ಎಂಬುದನ್ನು ಮಾತ್ರ ಹೇತುವೆಂದು ಪರಿಗಣಿಸುವುದು ಸರಿಯಲ್ಲ. ಅಂದರೆ ಅರ್ಥವಿಶೇಷಘಟಿತವಾದ ಹೇತುವೇ ಸಿದ್ಧಾಂತಸಾಧಕವಾಗುತ್ತದೆ. ಆದ್ದರಿಂದ ಅಂತಹ ಅರ್ಥವಿಶೇಷಘಟಿತವಾದ ವ್ಯಪದೇಶವನ್ನೇ ಹೇತುವನ್ನಾಗಿ ಹೇಳಬೇಕು. 'ತದ್ಧರ್ಮ' 'ಭೇದ' ಇತ್ಯಾದಿಯಾಗಿ ವ್ಯಪದೇಶದ ಜೊತೆಗೆ ಸಿದ್ಧಾಂತಸಾಧಕವಾದ ಅಥವಾ ವಿಶೇಷವಾಚಕ ಶಬ್ದಗಳು ಸೇರಿರುವಂತೆ ಇಲ್ಲಿಯೂ ಸಹ ಎಂದರ್ಥ.

ಮತ್ತು ಸನ್ನಿಧಾನದ ಬಲದಿಂದ ಲಿಂಗಾದಿಗಳಿಗೆ ಅರ್ಥಾಂತರವನ್ನು ಮಾಡುವ ಮೂಲಕ ಪೂರ್ವಪಕ್ಷವು ಹುಟ್ಟುತ್ತದೆಂದು ನೀವು ಸಮರ್ಥಿಸಿದ್ದೂ ಕೂಡ ಸರಿಯಲ್ಲ. ಏಕೆಂದರೆ ನಿಮ್ಮ ಪ್ರಕಾರ ಬ್ರಹ್ಮಮೀಮಾಂಸಶಾಸ್ತ್ರದ ಪೂರ್ವಭಾಗವೆಂದೇ ಪರಿಗಣಿತವಾದ ಪೂರ್ವಮೀಮಾಂಸಾ-ಗ್ರಂಥದಲ್ಲಿ 'ಆನಂತರ್ಯಮಚೋದನಾ' ಎಂಬ ಸೂತ್ರವಿದೆ. ಇದರಲ್ಲಿ ಲಿಂಗಾದಿಗಳಿಗಿಂತಲೂ ಕೂಡ ಸನ್ನಿಧಾನವೇ ದುರ್ಬಲವಾಗಿದೆಯೆಂದು ಸಮರ್ಥಿಸಿದ್ದಾರೆ. ಹೀಗಿರುವಾಗ ಅದಕ್ಕೆ ವಿಪರೀತವಾಗಿ ಸನ್ನಿಧಾನದಿಂದ ಲಿಂಗಾದಿಗಳಿಗೆ ನೀವು ಹೇಳುತ್ತಿರುವ ದೌರ್ಬಲ್ಯವು ತಪ್ಪಾಗುತ್ತದೆ. ಆದ್ದರಿಂದ ಸನ್ನಿಧಾನಕ್ಕೆ ಪ್ರಾಬಲ್ಯವನ್ನು ಒಪ್ಪಿ ಪೂರ್ವಪಕ್ಷವನ್ನು ಸಮರ್ಥಿಸಲು ನಿಮ್ಮಿಂದ ಸಾಧ್ಯವಾಗುವುದಿಲ್ಲ.

ಇಲ್ಲಿಗೆ ಪದಧಿಕರಣದಲ್ಲಿ ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ವಪ್ರದೀಪ, ತತ್ವಪ್ರಕಾಶಿಕಾ, ಭಾವದೀಪ ಇವುಗಳ ಅನುವಾದವು ಹಾಗೂ ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆಯು ಸಮಾಪ್ತವಾಯಿತು

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥

ದಹರಾಧಿಕರಣ

ಬ್ರಹ್ಮಸೂತ್ರ, ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ವಪ್ರದೀಪ, ತತ್ವಪ್ರಕಾಶಿಕಾ, ಭಾವದೀಪ

ವಿಶೇಷವಿಚಾರದೊಂದಿಗೆ ಕನ್ನಡಭಾಷೆಯಲ್ಲಿ ಅನುವಾದ

ಮತ್ತು

ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆ

॥ ಹರಿಃ ಓಂ ॥

॥ ಶ್ರೀವೇದವ್ಯಾಸಾಯ ನಮಃ ॥

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಗುರುಭ್ಯೋ ನಮಃ ॥

॥ ಶ್ರೀಮದ್ರಾಘವೇಂದ್ರತೀರ್ಥಗುರುಭ್ಯೋ ನಮಃ ॥

॥ ಶ್ರೀಗುರುಭ್ಯೋ ನಮಃ ॥

ದಹರಾಧಿಕರಣ

।। अथ दहराधिकरणम् ।।

ಬ್ರಹ್ಮಸೂತ್ರ

'ದಹರ ಉತ್ತರೇಭ್ಯಃ' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – ।। दहर उत्तरेभ्यः ।। २४ ।।

ಸೂತ್ರಾರ್ಥ - ಸಣ್ಣದಾದ ಹೃದಯ ಪದ್ಮದಲ್ಲಿರುವ ಆಕಾಶದಲ್ಲಿ ನೆಲೆಸಿರುವವನು ವಿಷ್ಣುವೇ ಹೊರತು ಜೀವಾದಿಗಳಲ್ಲ. ಏಕೆಂದರೆ ಮುಂದಿನ ವಾಕ್ಯಗಳಲ್ಲಿ ಅಪಹತಪಾಪ್ಮತ್ವಾದಿ ಧರ್ಮಗಳನ್ನು ಹೇಳಿರುವುದರಿಂದ.

ಅರ್ಥ -- ದಹರೇ = 'ದಹರಂ ಪುಂಡರೀಕಂ ವೇಶ್ಮ' ಎಂಬ ವಾಕ್ಯದಲ್ಲಿ ಹೇಳಲ್ಪಟ್ಟ ಹೃತ್ಪದ್ಮದಲ್ಲಿರುವ ಸಣ್ಣದಾದ ಆಕಾಶದಲ್ಲಿ ನೆಲೆಸಿರುವವನು ವಿಷ್ಣುವೇ ಆಗಿದ್ದಾನೆ ಹೊರತು ಜೀವಾದಿಗಳಲ್ಲ. ಏಕೆಂದರೆ ಉತ್ತರೇಭ್ಯಃ = 'ಯ ಆತ್ಮಾಽಪಹತಪಾಪ್ಮಾ' ಮುಂತಾದ ಮುಂದಿನ ವಾಕ್ಯಗಳಲ್ಲಿ ಹೇಳಲ್ಪಟ್ಟ ಅಪಹತಪಾಪ್ಮತ್ವಾದಿ ಧರ್ಮಗಳು ವಿಷ್ಣುವಿನಲ್ಲಿ ಮಾತ್ರ ಕೂಡುವುದರಿಂದ.

ಜಗದ್ಗುರು ಶ್ರೀಮಧ್ವಾಚಾರ್ಯರಿಂದ ವಿರಚಿತವಾದ

ಬ್ರಹ್ಮಸೂತ್ರಭಾಷ್ಯ

ಸಕಲಕ್ಕೂ ಆಧಾರವಾದದ್ದು ಆಕಾಶವೆಂದು ಪೂರ್ವಪಕ್ಷ

ब्रह्मसूत्रभाष्यम् – चन्द्रादित्याद्याधारत्वं विष्णोरुक्तम् । तच्च 'एतस्मिन् ब्रह्मपुरे दहरं पुण्डरीकं वेश्म दहरोऽस्मिन्नन्तर आकाशः किं तदत्र विद्यते' (छां. ८-१-२.) 'उभे अस्मिन् द्यावापृथिवी अन्तरेव समाहिते उभावग्निश्च वायुश्च सूर्याचन्द्रमसावुभौ । विद्युन्नक्षत्राणि' (छां ८-१-३) इत्यादिनाऽऽकाशस्य प्रतीयते ।

ಅನುವಾದ - ಚಂದ್ರ, ಸೂರ್ಯ, ಸ್ವರ್ಗ, ಭೂಮಿ ಇವುಗಳಿಗೆ ಆಧಾರನಾದವನು ವಿಷ್ಣುವೆಂದು ಹಿಂದಿನ ಅಕ್ಷರಾಧಿಕರಣದಲ್ಲಿ ನಿರ್ಣಯಿಸಲಾಯಿತು. ಆದರೆ ಛಾಂದೋಗ್ಯ ಶ್ರುತಿಯಲ್ಲಿ ಆಕಾಶವೇ ಸೂರ್ಯ, ಚಂದ್ರಾದಿಗಳಿಗೆ ಆಧಾರವೆಂದು ಹೇಳಲಾಗಿದೆ -

'ಹೃದಯ ಗುಹೆಯಲ್ಲಿ ಸಣ್ಣದಾದ ಕಮಲದಲ್ಲಿ ಸೂಕ್ಷ್ಮಾಕಾಶವಿದೆ' ಎಂದು ಗುರುಗಳು ಉಪದೇಶಿಸಿದಾಗ ಶಿಷ್ಯನು ಪ್ರಶ್ನಿಸುತ್ತಾನೆ. 'ಆ ಸೂಕ್ಷ್ಮಾಕಾಶದಲ್ಲಿ ಏನಿದೆ?' ಗುರುಗಳು ಹೀಗೆ ಉತ್ತರಿಸುತ್ತಾರೆ - 'ಸೂಕ್ಷ್ಮಾಕಾಶದಲ್ಲಿ ಸ್ವರ್ಗ, ಭೂಮಿ ಎಲ್ಲವೂ ಸಹ ಒಳಗೆ ಆಶ್ರಿತವಾಗಿವೆ ಮತ್ತು ಮಿಂಚು ನಕ್ಷತ್ರ ಇವುಗಳೆಲ್ಲವೂ ಅಂತಹ ಹೃದಯಾಕಾಶದಲ್ಲೇ ಆಶ್ರಿತವಾಗಿವೆ' ಎಂದು.

ಈ ಛಾಂದೋಗ್ಯದ ಪ್ರಕರಣವನ್ನು ನೋಡಿದಾಗ ಸೂರ್ಯ, ಚಂದ್ರಾದಿಗಳಿಗೆಲ್ಲಾ ಆಧಾರವಾದದ್ದು ಆಕಾಶವೆಂದು ತಿಳಿಯುತ್ತದೆ.

ಪ್ರತಿಪದಾರ್ಥ -- ಈ ಅಧಿಕರಣದಲ್ಲಿ ಜೀವ, ಆಕಾಶ ಇವುಗಳಲ್ಲಿ ಆಪಾತತಃ ತೋರುವ ಹೃದಯಾಕಾಶದಲ್ಲಿರುವಿಕೆ ಎಂಬ ಅರ್ಥದ 'ದಹರ' ಎಂಬ ಧರ್ಮದ ಸಮನ್ವಯವನ್ನು ಮಾಡುತ್ತಿದ್ದಾರೆ. ಇದರಿಂದ 'ಹೃತ್ಪದ್ಮಸ್ಥತ್ವ'ವೆಂಬ ಲಿಂಗದ ಸಮನ್ವಯವನ್ನು ನೇರವಾಗಿ ಅಥವಾ ಪರಂಪರೆಯಿಂದ ಸಾಧಿಸಿದಂತಾಗುತ್ತದೆ. ಈ ಲಿಂಗದ

ಸಮನ್ವಯದಿಂದ ವಿಷ್ಣುವಿನಲ್ಲಿ ಅಸಾಧಾರಣವಾದ ಅನೇಕ ಧರ್ಮಗಳ ಸಮನ್ವಯವನ್ನು ಮಾಡಿದಂತಾಗುತ್ತದೆ. ಮೊದಲು ವಿಷಯ ಮತ್ತು ಪೂರ್ವಪಕ್ಷಗಳನ್ನು ತೋರಿಸುತ್ತಿದ್ದಾರೆ -

ಚಂದ್ರಾದಿತ್ಯಾದ್ಯಾಧಾರತ್ವಂ = ಚಂದ್ರ, ಸೂರ್ಯ, ಸ್ವರ್ಗ ಮೊದಲಾದವು-ಗಳಿಗೆ ಆಧಾರವಾಗಿರುವಿಕೆಯು, ವಿಷ್ಣೋಃ = ವಿಷ್ಣುವಿನ, ಉಕ್ತಮ್ = ಧರ್ಮವೆಂದು ಹಿಂದಿನ ಅಕ್ಷರಾಧಿಕರಣದಲ್ಲಿ ಹೇಳಲಾಯಿತು, ತಚ್ಚ = ಅಂತಹ, ಸೂರ್ಯಚಂದ್ರಾದಿ ಆಧಾರತ್ವವು ಮತ್ತು ಹೃತ್ಪದ್ಮಸ್ಥತ್ವವು ಭೂತಾಕಾಶದಲ್ಲಿ ತೋರುತ್ತಿದೆ. ಈ ಶ್ರುತಿವಾಕ್ಯವು ಹೀಗಿದೆ -

ಏತಸ್ಮಿನ್ ಬ್ರಹ್ಮಪುರೇ = ಇಂತಹ ಹೃದಯವೆಂಬ ಗುಹೆಯಲ್ಲಿ, ದಹರಂ = ಸಣ್ಣದಾದ, ಪುಂಡರೀಕಂ ವೇಶ್ಮ = ಕಮಲವೆಂಬ ಮನೆಯು ಇದೆಯೋ, ತಸ್ಮಿನ್ = ಅದರಲ್ಲಿ, ದಹರಃ ಆಕಾಶಃ = ಅತ್ಯಂತ ಸೂಕ್ಷ್ಮವಾದ ಆಕಾಶವು ಇರುತ್ತದೆ, ಹೀಗೆ ಗುರುಗಳು ಶಿಷ್ಯನಿಗೆ ಉಪದೇಶಿಸಿದರು.

ಶಿಷ್ಯನು ಪ್ರಶ್ನಿಸುತ್ತಾನೆ. ತದತ್ರ = ಆ ಸೂಕ್ಷ್ಮಾಕಾಶದಲ್ಲಿ, ಕಿಂ ವಿದ್ಯತೇ = ಏನಿದೆ?

ಗುರುಗಳು ಉತ್ತರಿಸುತ್ತಾರೆ, ಅಸ್ಮಿನ್ = ಈ ಸೂಕ್ಷ್ಮಾಕಾಶದಲ್ಲಿ, ದ್ಯಾವಾಪೃಥಿವೀ = ಸ್ವರ್ಗ, ಭೂಮಿ ಮೊದಲಾದವು, ಅಂತರೇವ = ಒಳಗೇ, ಸಮಾಹಿತೇ = ಆಶ್ರಿತವಾಗಿವೆ, ಮತ್ತು ಉಭೇ = ಮುಕ್ತ ಮತ್ತು ಅಮುಕ್ತರಿಬ್ಬರೂ, ಅಗ್ನಿಶ್ಚ ವಾಯುಶ್ಚ ಉಭೌ = ಅಗ್ನಿ, ವಾಯುಗಳಿಬ್ಬರೂ, ಸೂರ್ಯಾಚಂದ್ರಮಸೌ ಉಭೌ = ಸೂರ್ಯ ಚಂದ್ರರಿಬ್ಬರೂ, ವಿದ್ಯುನ್ನಕ್ಷತ್ರಾಣಿ = ಮಿಂಚು ಹಾಗೂ ನಕ್ಷತ್ರಗಳು, (ನೆಲೆಸಿವೆ), ಇತ್ಯಾದಿನಾ = ಇವೇ ಮೊದಲಾದ, ಶ್ರುತಿ ವಾಕ್ಯದಿಂದ, ಆಕಾಶಸ್ಯ = ಆಕಾಶಕ್ಕೆ, ಪ್ರತೀಯತೇ = ಸೂರ್ಯಚಂದ್ರಾದಿ ಆಧಾರತ್ವವು ಮತ್ತು ಹೃತ್ಪದ್ಮಸ್ಥತ್ವವು ತೋರುತ್ತದೆ.

ಆಕಾಶವೆಂದರೆ ವಿಷ್ಣುವಲ್ಲ

ब्रह्मसूत्रभाष्यम् — स चाऽकाशो न विष्णुः । 'तस्यान्ते सुषिरꣳ सूक्ष्मं (तस्मिन् सर्वं प्रतिष्ठितम्') (महाना.१-१.) इति श्रुतेरिति । अत आह —

ಅನುವಾದ - ಈ ಆಕಾಶವಾದರೂ, ವಿಷ್ಣುವಾಗಲು ಸಾಧ್ಯವಿಲ್ಲ, ಏಕೆಂದರೆ ಮಹಾನಾರಾಯಣೋಪನಿಷತ್ತಿನಲ್ಲಿ, 'ತಸ್ಯಾಂತೇ ಸುಷಿರಂ' ಇತ್ಯಾದಿಯಾಗಿ, ಹೃದಯದಲ್ಲಿರುವ ಪ್ರಸಿದ್ಧವಾದ ಜಡಾಕಾಶವನ್ನೇ ಸರ್ವಾಧಾರವೆಂದು ಹೇಳಲಾಗಿದೆ.

ಈ ಪೂರ್ವಪಕ್ಷವನ್ನು ನಿರಾಕರಿಸುವುದಕ್ಕಾಗಿ ಸೂತ್ರಕಾರರು, ಸೂತ್ರವನ್ನು ರಚಿಸುತ್ತಿದ್ದಾರೆ. 'ದಹರ ಉತ್ತರೇಭ್ಯಃ' ಎಂದು.

ಪ್ರತಿಪದಾರ್ಥ -- ಆಕಾಶವು ಸಕಲಕ್ಕೂ ಆಧಾರವಾಗಿದೆ. ಮತ್ತು ಹೃದಯಪದ್ಮದಲ್ಲಿದೆ ಎಂದು ಹೇಳೋಣ. 'ಆಕಾಶಸ್ತಲ್ಲಿಂಗಾತ್' ಎಂಬ ಸೂತ್ರದಂತೆ, ಆಕಾಶಶಬ್ದವು ವಿಷ್ಣು ಪರವಾಗಿರುವುದರಿಂದ, ವಿಷ್ಣುವಿನಲ್ಲಿಯೇ ಹೃತ್‌ಪದ್ಮಸ್ಥತ್ವವು ಸಿದ್ಧವಾಗುತ್ತದೆ ಅಲ್ಲವೇ? ಎಂಬ ಪ್ರಶ್ನೆಗೆ ಸೂತ್ರಕಾರರು ಉತ್ತರಿಸುತ್ತಿದ್ದಾರೆ -

ಸ ಚ = ಅಂತಹ, ಆಕಾಶಃ = ಆಕಾಶವು, ವಿಷ್ಣುಃ = ವಿಷ್ಣುವೆಂದು, ನ = ಹೇಳಲಾಗದು, ಏಕೆಂದರೆ ನಾರಾಯಣೋಪನಿಷತ್ತಿನಲ್ಲಿ, ತಸ್ಯಾಂತೇ = ಹೃದಯದ ಅಂತ್ಯದಲ್ಲಿ, ಸುಷಿರꣳ = ಛಿದ್ರ ಸ್ವರೂಪವಾದ, ಸೂಕ್ಷ್ಮಂ = ಸೂಕ್ಷ್ಮವಾದ ತತ್ವವಿದೆ, ತಸ್ಮಿನ್ = ಭೂತಾಕಾಶದಲ್ಲಿ, ಸರ್ವಂ = ಸಕಲ ಪದಾರ್ಥವೂ, ಪ್ರತಿಷ್ಠಿತಂ = ಆಶ್ರಿತವಾಗಿದೆ, ಇತಿ ಶ್ರುತೇಃ = ಹೀಗೆ ಶ್ರುತಿಗಳಿರುವುದರಿಂದ, ಭೂತಾಕಾಶವೇ ಸೂರ್ಯಚಂದ್ರಾದಿಗಳಿಗೆ ಆಧಾರವಾಗಿದೆ ಎಂದು ಪೂರ್ವಪಕ್ಷ.

ಹೃತ್ಪದ್ಮದಲ್ಲಿರುವ ಸಣ್ಣ ಆಕಾಶದಲ್ಲಿರುವವನು ನಾರಾಯಣನೇ

ब्रह्मसूत्रभाष्यम् – ।। दहर उत्तरेभ्यः ।।

'य आत्माऽपहतपाप्मा विजरो विमृत्युः, विशोकोऽविजिघत्सोऽ-पिपासः सत्यकामः सत्यसङ्कल्पः सोऽन्वेष्टव्यः स विजिज्ञासितव्यः' (छां.८-७-३) इत्यादिभ्य उत्तरेभ्यो गुणेभ्यो दहरे विष्णुरेव ।

ಅನುವಾದ - ಯಾವಾತನು ಸರ್ವನಿಯಾಮಕನೂ, ಪಾಪಲೇಪರಹಿತನೂ, ವೃದ್ಧಾಪ್ಯ ಮೊದಲಾದ ದೋಷಗಳಿಲ್ಲದವನೂ, ಮೃತ್ಯುವನ್ನು ಗೆದ್ದವನೂ, ದುಃಖರಹಿತನೂ, ನ್ಯೂನತೆ ಇಲ್ಲದವನೂ, ಹಸಿವು, ನೀರಡಿಕೆ ಮೊದಲಾದ ದೋಷಗಳಿಲ್ಲದವನೂ, ಸತ್ಯವಾದ ಕಾಮನೆ ಉಳ್ಳವನೂ, ಸತ್ಯಸಂಕಲ್ಪನೂ ಆಗಿದ್ದಾನೋ ಅಂತಹವನೇ ಹುಡುಕಲು (ಅನ್ವೇಷಣೆಗೆ) ಯೋಗ್ಯನಾಗಿದ್ದಾನೆ. ಅವನನ್ನೇ ವಿಚಾರ ಮಾಡಬೇಕು. ಇತ್ಯಾದಿಯಾಗಿ ಛಾಂದೋಗ್ಯವು ಹೃತ್ಪದ್ಮದಲ್ಲಿರುವ ವ್ಯಕ್ತಿಯನ್ನು ಹೊಗಳುತ್ತಿದೆ. ಈ ಎಲ್ಲ ಗುಣಗಳು ವಿಷ್ಣುವಿನಲ್ಲಿ ಅಸಾಧಾರಣವಾಗಿರುವುದರಿಂದ ವಿಷ್ಣುವೇ ಹೃತ್ಪದ್ಮದಲ್ಲಿದ್ದಾನೆಂದು, ಹಾಗೂ ಸರ್ವಾಧಾರನೆಂದು ನಿರ್ಣಯವಾಗುತ್ತದೆ.

ಪ್ರತಿಪದಾರ್ಥ -- ಸಿದ್ಧಾಂತವನ್ನು ಮಾಡುವುದಕ್ಕಾಗಿ ಸೂತ್ರಕ್ಕೆ ಅವತಾರಿಕೆ ನೀಡುತ್ತಾ ವ್ಯಾಖ್ಯಾನಿಸುತ್ತಿದ್ದಾರೆ -

ದಹರಃ = ಹೃತ್ಪದಲ್ಲಿರುವ ಆಕಾಶವೆಂದರೆ ವಿಷ್ಣುವೇ ಆಗಿದ್ದಾನೆ, ಏಕೆಂದರೆ , ಉತ್ತರೇಭ್ಯಃ = ಮುಂದಿನ ವಾಕ್ಯದಲ್ಲಿ ಹೇಳಿರುವ ಗುಣಗಳು ವಿಷ್ಣುವಿನಲ್ಲೇ ಯುಕ್ತವಾಗುವುದರಿಂದ.

ಛಾಂದೋಗ್ಯದ ಮುಂದಿನ ವಾಕ್ಯಗಳು ಹೀಗಿವೆ - ಯಃ = ಯಾವಾತನು, ಆತ್ಮಾ = ಸಕಲನಿಯಾಮಕನೋ, ಅಪಹತಪಾಪ್ಮಾ = ಪಾಪಲೇಪಗಳಿಂದ ರಹಿತನೋ, ವಿಜರಃ = ವೃದ್ಧಾಪ್ಯವೇ ಮೊದಲಾದ ದೋಷಗಳಿಲ್ಲದವನೋ, ವಿಮೃತ್ಯುಃ = ಮೃತ್ಯುವನ್ನು ಗೆದ್ದವನೋ, ವಿಶೋಕಃ = ದುಃಖರಹಿತನೋ, ಅವಿಜಿಘತ್ಸಃ = ಹಸಿವು ಇಲ್ಲದವನೋ,

ಅಪಿಪಾಸಃ = ಬಾಯಾರಿಕೆ ಇಲ್ಲದವನೋ, ಸತ್ಯಕಾಮಃ = ಸತ್ಯವಾದ ಕಾಮನೆಯುಳ್ಳವನೋ, ಸತ್ಯಸಂಕಲ್ಪಃ = ಯಾವುದೇ ಕಾರಣದಿಂದಲೂ ವ್ಯರ್ಥವಾಗದಂತಹ ಸಂಕಲ್ಪ ಉಳ್ಳವನೋ, ಸಃ = ಅಂತಹ ವ್ಯಕ್ತಿಯೇ, ಅನ್ವೇಷ್ಟವ್ಯಃ = ಹುಡುಕಲು ಯೋಗ್ಯನಾಗಿದ್ದಾನೆ, ಸಃ = ಅವನೇ, ವಿಜಿಜ್ಞಾಸಿತವ್ಯಃ = ವಿಚಾರ ಮಾಡಲು ಯೋಗ್ಯನು, ಇತ್ಯಾದಿಭ್ಯಃ = ಇವೇ ಮೊದಲಾದ, ಉತ್ತರೇಭ್ಯಃ = ಮುಂದಿನ ವಾಕ್ಯಗಳಲ್ಲಿರುವ, ಗುಣೇಭ್ಯಃ = ಗುಣಗಳಿಂದ, ದಹರೇ = ಹೃದಯಾಕಾಶದಲ್ಲಿ ಇರುವವನು, ವಿಷ್ಣುರೇವ = ವಿಷ್ಣುವೇ ಆಗಿದ್ದಾನೆಂದು ನಿರ್ಣಯವಾಗುತ್ತದೆ.

ಅಪಹತಪಾಪ್ಮತ್ವಾದಿಗುಣಗಳೆಲ್ಲವೂ ವಿಷ್ಣುವಿನದ್ದೇ ಆಗಿದೆ

ब्रह्मसूत्रभाष्यम् — 'योऽशानायापिपासे शोकं मोहं जरां मृत्युमत्येति' (बृ.४-४) 'स एष सर्वेभ्यः पाप्मभ्य उदितः' (छां.१-६-७) इत्यादिना विष्णोरेव हि ते गुणाः ।

ಅನುವಾದ - 'ಯಾವಾತನು ಹಸಿವು, ನೀರಡಿಕೆ, ದುಃಖ, ಭ್ರಾಂತಿ, ಮುಪ್ಪು, ಮರಣ ಇವುಗಳೆಲ್ಲವನ್ನೂ ದಾಟಿದ್ದಾನೋ, ಅಂತಹ ವ್ಯಕ್ತಿಯೇ, ಸಕಲ ಪಾಪಗಳಿಂದ ರಹಿತನಾಗಿರುತ್ತಾನೆ'. ಇವೇ ಮೊದಲಾದ ಪ್ರಮಾಣಗಳಿಂದ ಪಾಪರಾಹಿತ್ಯಾದಿ ಗುಣಗಳು, ವಿಷ್ಣುವಿನಲ್ಲಿ ಮಾತ್ರ ಇರುತ್ತವೆಂದು ತಿಳಿಯುತ್ತದೆ.

ಪ್ರತಿಪದಾರ್ಥ -- 'ಯಃ = ಯಾವಾತನು, ಅಶನಾಯಾ = ಹಸಿವು, ಪಿಪಾಸೇ = ನೀರಡಿಕೆಗಳನ್ನು, ಶೋಕಂ = ದುಃಖವನ್ನು, ಮೋಹಂ = ಮೂರ್ಛೆಯನ್ನು, ಜರಾಂ = ಮುಪ್ಪನ್ನು, ಮೃತ್ಯುಂ = ಮರಣವನ್ನು, ಅತ್ಯೇತಿ = ದಾಟಿದ್ದಾನೋ, ಸ ಏಷಃ = ಅಂತಹ ಇವನೇ, ಸರ್ವೇಭ್ಯಃ ಪಾಪ್ಮಭ್ಯಃ = ಸಕಲ ಪಾಪಗಳಿಂದ, ಉದಿತಃ = ರಹಿತನಾಗಿ ಪ್ರಕಾಶಿಸುತ್ತಾನೆ', ಇತ್ಯಾದಿನಾ = ಇವೇ ಮೊದಲಾದ ಪ್ರಮಾಣಗಳಿಂದ, ತೇ ಗುಣಾಃ = ಹಿಂದಿನ ಅಪಹತಪಾಪ್ಮತ್ವಾದಿ ಸಮಸ್ತ ಗುಣಗಳು, ವಿಷ್ಣೋರೇವ ಹಿ = ಭಗವಂತನದ್ದೇ ಆಗಿವೆ.

ಹಸಿವು ನೀರಡಿಕೆಗಳನ್ನು ಗೆದ್ದವನು ಶ್ರೀಹರಿ ಮಾತ್ರ

ब्रह्मसूत्रभाष्यम् – 'नित्यतीर्णाशनायादिरेक एव हरिः स्वतः ।
अशनायादिकानन्ये तत्प्रसादात् तरन्ति हि ।।'

इति पाद्मे ।।

ಅನುವಾದ - ನಿರಂತರವಾಗಿ ಹಸಿವು ನೀರಡಿಕೆಗಳನ್ನು ಗೆದ್ದವನು ಶ್ರೀಹರಿ ಮಾತ್ರ. ಅವನ ಅನುಗ್ರಹದಿಂದ ಬೇರೆಯವರೂ ಸಹ ಹಸಿವು, ನೀರಡಿಕೆಗಳನ್ನು ಗೆಲ್ಲಬಹುದು. ಹೀಗೆ ಪದ್ಮಪುರಾಣವು ಹೇಳಿದೆ.

ಪ್ರತಿಪದಾರ್ಥ -- ಆದರೂ ಸಹ ಇವುಗಳು ವಿಷ್ಣುವಿನ ಗುಣಗಳಲ್ಲ. ಲಕ್ಷ್ಮೀದೇವಿ ಮೊದಲಾದವರಲ್ಲಿಯೂ ಸಹ ಇಂತಹ ಗುಣಗಳು ಇರಬಹುದಲ್ಲವೆ? ಈ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ -

ಸ್ವತಃ = ಮತ್ತೊಬ್ಬರ ಅಪೇಕ್ಷೆ ಇಲ್ಲದೇ, ನಿತ್ಯತೀರ್ಣಾಶನಾಯಾದಿಃ = ಅನಾದ್ಯನಂತಕಾಲದಲ್ಲಿಯೂ, ಹಸಿವು ನೀರಡಿಕೆಗಳನ್ನು ದಾಟಿದವನು, ಏಕ ಏವ = ಒಬ್ಬನೇ ಆದ, ಹರಿಃ = ಶ್ರೀಹರಿಯು, ತತ್‌ಪ್ರಸಾದಾತ್ = ಇಂತಹ ಶ್ರೀಹರಿಯ ಅನುಗ್ರಹದಿಂದಲೇ, ಅನ್ಯೇ = ರಮಾಬ್ರಹ್ಮಾದಿಗಳೂ ಸಹ, ಅಶನಾಯಾದಿಕಾನ್ = ಹಸಿವು, ನೀರಡಿಕೆ ಮೊದಲಾದವುಗಳನ್ನು, ತರಂತಿ = ದಾಟುತ್ತಾರೆ, ಇತಿ = ಹೀಗೆ, ಪಾದ್ಮೇ = ಪದ್ಮ ಪುರಾಣದಲ್ಲಿ ಹೇಳಲಾಗಿದೆ.

ಸಾಪೇಕ್ಷನಿರಪೇಕ್ಷಗಳಲ್ಲಿ ನಿರಪೇಕ್ಷವು ಸ್ವೀಕಾರಾರ್ಹ

ब्रह्मसूत्रभाष्यम् – सापेक्षनिरपेक्षयोश्च निरपेक्षं स्वीकर्तव्यम् ।

ಅನುವಾದ - ಶ್ರೀಹರಿಯಲ್ಲಿ ಮಾತ್ರ ಅಪಹತಪಾಪ್ಮತ್ವಾದಿಗುಣಗಳು ಸಹಜವಾಗಿ ಇವೆ. ಬೇರೆಯವರಲ್ಲಿ ಈ ಗುಣಗಳು ಶ್ರೀಹರಿಯ ಅಧೀನವಾಗಿವೆ. ಸಾಪೇಕ್ಷನಿರಪೇಕ್ಷಗಳಲ್ಲಿ ನಿರಪೇಕ್ಷವಾದದ್ದನ್ನೇ ಸ್ವೀಕರಿಸಬೇಕು. ಆದ್ದರಿಂದ ಹಸಿವು ನೀರಡಿಕೆ ಮೊದಲಾದವುಗಳನ್ನು ಮೀರಿರುವಿಕೆ ಎಂಬಲ್ಲಿ ಗುಣವೆಂದರೆ, ನಿರಪೇಕ್ಷವಾದ ಗುಣಗಳನ್ನೇ ಸ್ವೀಕರಿಸಬೇಕು. ಆದ್ದರಿಂದ ದಹರಾಕಾಶದಲ್ಲಿರುವವನು ವಿಷ್ಣುವೇ ಆಗಿದ್ದಾನೆ.

ಪ್ರತಿಪದಾರ್ಥ -- ಲಕ್ಷ್ಮೀ ಮೊದಲಾದವರಲ್ಲಿ ಅಪಹತಪಾಪ್ಮತ್ವಾದಿಗಳು ಸ್ವತಂತ್ರವಾಗಿರದಿದ್ದರೂ, ಅಸ್ವತಂತ್ರವಾಗಿ ಇರುತ್ತವೆಂದು ಹೇಳಬಹುದಲ್ಲವೆ ? ಆದ್ದರಿಂದ 'ಅಪಹತಪಾಪ್ಮತ್ವ' ಎಂಬ ಗುಣದಿಂದ ವಿಷ್ಣುವೇ ದಹರಸ್ಥನೆಂದು ಹೇಗೆ ನಿರ್ಣಯಿಸುತ್ತೀರಿ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ -

ಸಾಪೇಕ್ಷ-ನಿರಪೇಕ್ಷಯೋಶ್ಚ = ಪಾರತಂತ್ರ್ಯ ಸ್ವಾತಂತ್ರ್ಯಗಳಲ್ಲಿ, ನಿರಪೇಕ್ಷಂ = ಸ್ವತಂತ್ರವಾದದ್ದೇ, ಸ್ವೀಕರ್ತವ್ಯಂ = ಸ್ವೀಕರಿಸಲ್ಪಡಬೇಕು.

ಸತ್ಯಸಂಕಲ್ಪವೆಂದರೆ ಮಹಾವಿಷ್ಣು ಮಾತ್ರ

ಬ್ರಹ್ಮಸೂತ್ರಭಾಷ್ಯಮ್ – 'सत्यकामोऽपरो नास्ति तमृते विष्णुमव्ययम् ।
सत्यकामत्वमन्येषां भवेत् तत्काम्यकामिता ।।'
इति च स्कान्दे ।।

ಅನುವಾದ - ನಾಶರಹಿತನಾದ ವಿಷ್ಣುವನ್ನು ಬಿಟ್ಟು, ಲಕ್ಷ್ಮೀ ಮೊದಲಾದವರೂ ಸಹ ಸತ್ಯ ಸಂಕಲ್ಪರಲ್ಲ. ಲಕ್ಷ್ಮೀದೇವಿ ಮೊದಲಾದವರಲ್ಲಿರುವ ಸತ್ಯಸಂಕಲ್ಪಗಳು ವಿಷ್ಣುವಿನ ಅಧೀನವೇ ಆಗಿವೆ. ಆದ್ದರಿಂದ ದಹರಸ್ಥನಲ್ಲಿ ಹೇಳಲ್ಪಟ್ಟ ಸತ್ಯಸಂಕಲ್ಪತ್ವವು ವಿಷ್ಣುವಿನ ಅಸಾಧಾರಣಧರ್ಮವೆಂದು ನಿರ್ಣಯವಾಗುತ್ತದೆ. ಈ ಕಾರಣದಿಂದಲೂ ವಿಷ್ಣುವೇ ಹೃತ್ಪದ್ಮಸ್ಥನೆಂದು ನಿರ್ಣಯವಾಗುತ್ತದೆ.

ಪ್ರತಿಪದಾರ್ಥ -- ಸಾಪೇಕ್ಷತ್ವ, ನಿರಪೇಕ್ಷತ್ವಗಳಿಂದ ವಿಶಿಷ್ಟವಾದ ಅಪಹತಪಾಪ್ಮತ್ವಾದಿಗಳು ಅಭಾವರೂಪವಾದ ಕಾರಣ ಆಕಾಶಾದಿಗಳಲ್ಲಿ ನೇರವಾಗಿ ಅಥವಾ ಅಭಿಮಾನಿದೇವತೆಯ ಮೂಲಕವಾಗಿ ಕೂಡಬಹುದು. ಆದರೆ ಸತ್ಯಕಾಮತ್ವಾದಿಭಾವರೂಪವಾದ ಗುಣಗಳು ಬೇರೆಯವರಲ್ಲಿ ಯಾವುದೇ ಕಾರಣದಿಂದಲೂ ಸಹ ಯುಕ್ತವಾಗುವುದಿಲ್ಲ. ಇಂತಹ ಸತ್ಯಕಾಮತ್ವಾದಿಗುಣಗಳ ಆಧಾರದಿಂದ ವಿಷ್ಣುವೇ ಹೃತ್ಪದ್ಮಸ್ಥನೆಂದು ನಿರ್ಣಯಿಸಬಹುದು.

ಸತ್ಯಕಾಮಃ = ಅಪ್ರತಿಹತವಾದ ಸಂಕಲ್ಪವುಳ್ಳವನು, ತಂ ವಿಷ್ಣುಂ ಋತೇ = ಆ ವಿಷ್ಣುವನ್ನು ಬಿಟ್ಟು, ಅಪರಃ = ಮತ್ತೊಬ್ಬ ದೇವತೆಯು, ನಾಸ್ತಿ =

ಇರುವುದಿಲ್ಲ, ಅನ್ಯೇಷಾಂ = ಲಕ್ಷ್ಮೀ ಬ್ರಹ್ಮಾದಿಗಳಲ್ಲಿರುವ, ಸತ್ಯಕಾಮತ್ವಂ = ಸತ್ಯಸಂಕಲ್ಪಗುಣವು, ತತ್ ಕಾಮ್ಯಕಾಮಿತಾ = ಪರಮಾತ್ಮನ ಇಚ್ಛೆಗೆ ಅನುಗುಣವಾಗಿಯೇ ಕಾಮನಾ ಮಾಡತಕ್ಕದ್ದು, ಭವೇತ್ = ಆಗಿರುತ್ತದೆ, ಇತಿ ಚ = ಎಂಬುದಾಗಿಯೂ ಸ್ಕಾಂದಪುರಾಣದಲ್ಲಿ ಹೇಳಲಾಗಿದೆ. ಆದ್ದರಿಂದ ವಿಷ್ಣುವೇ ದಹರನೆಂದು, ಹೃತ್ಪದ್ಮಸ್ಥನೆಂದು ನಿರ್ಣಯವಾಯಿತು.

ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ
ಸತ್ತರ್ಕದೀಪಾವಳಿ

ಆಕಾಶಶಬ್ದದಿಂದ ವಾಚ್ಯವಾದ ಭೂತಾಕಾಶವು ವಿಷ್ಣುವಲ್ಲ

सत्तर्कदीपावलिः – ।। दहर उत्तरेभ्यः ।। १४ ।।

चन्द्रेत्यादेरयमर्थः । अथ 'यदिदमस्मिन् ब्रह्मपुरे' इत्याम्नायते । तत्राकाशस्य चन्द्राद्याद्याधारत्वमुच्यते । स चाकाशशब्दाभिधेयो भूताकाशो न विष्णुः ।

ಭಾಷ್ಯದಲ್ಲಿ 'ಚಂದ್ರಾದಿತ್ಯದ್ಯಾಧಾರತ್ವಂ' ಎಂದು ಹೇಳಿದ್ದಾರೆ. ಇಲ್ಲಿರುವ 'ಆದಿ' ಪದಕ್ಕೆ ಹೀಗೆ ಅರ್ಥ - 'ಅಥ ಯದಿದಮಸ್ಮಿನ್ ಬ್ರಹ್ಮಪುರೇ' ಎಂದು ಶ್ರುತವಾಗಿದೆ. ಇಲ್ಲಿ ಆಕಾಶಕ್ಕೆ ಚಂದ್ರಾದಿತ್ಯಾದ್ಯಾಧಾರತ್ವವನ್ನು ಹೇಳಲಾಗಿದೆ. 'ಆಕಾಶ' ಶಬ್ದಕ್ಕೆ ಭೂತಾಕಾಶವೆಂದೇ ಅರ್ಥ ಹೊರತು ವಿಷ್ಣುವೆಂದಲ್ಲ.

ಆಕಾಶಶಬ್ದವು ಭೂತಾಕಾಶವೆನ್ನಲು ಸಂವಾದ ಪ್ರಮಾಣ

सत्तर्कदीपावलिः – 'हृदयं तद्विजानीयात्' 'तस्यान्ते सुषिरं सूक्ष्मं तस्मिन् सर्वं प्रतिष्ठितम्' इति श्रुत्यन्तरसंवादात्

'ಹೃದಯಂ ತದ್ವಿಜಾನೀಯಾತ್' 'ತಸ್ಯಾಂತೇ ಸುಷಿರಂ ಸೂಕ್ಷ್ಮಂ ತಸ್ಮಿನ್ ಸರ್ವಂ ಪ್ರತಿಷ್ಠಿತಮ್' ಎಂಬ ಸಮಾಖ್ಯಾಶ್ರುತ್ಯಂತರದ ಸಂವಾದ ಇರುವುದರಿಂದ.

ಪೂರ್ವಪಕ್ಷದ ಸಮಾಪ್ತಿ

सत्तर्कदीपावलिः – 'एतस्य वा अक्षरस्य' इत्यादिना विष्णोरेवेति, तन्न । सिद्ध्यतीत्येवं प्राप्तेऽभिधीयते ।

ಆದ್ದರಿಂದ ಚಂದ್ರಾದಿತ್ಯಾದ್ಯಾಧಾರತ್ವವನ್ನು, 'ಏತಸ್ಯ ವಾ ಅಕ್ಷರಸ್ಯ' ಇತ್ಯಾದಿ ವಾಕ್ಯಗಳಿಂದ ವಿಷ್ಣುವಿನಲ್ಲಿ ಮಾತ್ರ ಏನು ಸಮರ್ಥಿಸಲಾಯಿತೋ ಅದು ಸಿದ್ಧವಾಗುವುದಿಲ್ಲವೆಂದು ಪೂರ್ವಪಕ್ಷ.

ಚಂದ್ರಾದಿತ್ಯಾದ್ಯಾಧಾರನಾದವನು ಮಹಾವಿಷ್ಣುವೆಂದು ಸಿದ್ಧಾಂತ

सत्तर्कदीपावलिः – चन्द्राद्याधारो विष्णुरेवात्र निर्दिश्यते, नाकाशम् ।

ಸಿದ್ಧಾಂತ - ಚಂದ್ರಾದಿತ್ಯಾದ್ಯಾಧಾರನಾದವನು ವಿಷ್ಣುವೇ ಆಗಿದ್ದಾನೆಂದು ಶ್ರುತಿಯು ಹೇಳುತ್ತದೆ ಹೊರತು ಆಕಾಶವಲ್ಲ.

ಸತ್ಯಸಂಕಲ್ಪತ್ವಾದಿಗಳು ವಿಷ್ಣುವಿನದ್ದೇ ಧರ್ಮ

सत्तर्कदीपावलिः – 'य आत्माऽपहतपाप्मा विजरो विमृत्युर्विशोकोऽविजिघित्सोऽपिपासः सत्यकामः सत्यसङ्कल्पः' इत्युत्तरवाक्यविरोधात् ।

'ಯ ಆತ್ಮಾಽಪಹತಪಾಪ್ಮಾ ವಿಜರೋ ವಿಮೃತ್ಯುರ್ವಿಶೋಕೋಽವಿಜಿಘಿತ್ಸೋಽಪಿಪಾಸಃ ಸತ್ಯಕಾಮಃ ಸತ್ಯಸಂಕಲ್ಪಃ' ಎಂಬ ಮುಂದಿನ ವಾಕ್ಯದಲ್ಲಿ ವಿಷ್ಣುವಿನ ಸತ್ಯಸಂಕಲ್ಪತ್ವಾದಿ ಅಸಾಧಾರಣಗುಣಗಳೇ ಶ್ರುತವಾಗಿವೆ. ವಿಷ್ಣುವು ಆಕಾಶಶಬ್ದಪ್ರತಿಪಾದ್ಯನಲ್ಲವೆಂದರೆ, ಈ ಮುಂದಿನ ವಾಕ್ಯದ ವಿರೋಧ ಬರುತ್ತದೆ.

ದಹರಾಕಾಶದಲ್ಲಿರುವವನು ಮಹಾವಿಷ್ಣುವೇ

सत्तर्कदीपावलिः – 'अथ यदिदमस्मिन् ब्रह्मपुरे दहरं पुण्डरीकं वेश्म दहरोऽस्मिन्नन्तराऽकाशस्तस्मिन् यदन्तस्तदन्वेष्टव्यम्, तद्वाव विजिज्ञासितव्यम्' इत्यन्वेष्टव्यतया यो निर्दिष्टो विष्णुः दहराकाशस्थः तद्धृदयाकाशसन्निहितं सर्वमुच्यते ।

'ಅಥ ಯದಿದಮಸ್ಮಿನ್ ಬ್ರಹ್ಮಪುರೇ ದಹರಂ ಪುಂಡರೀಕಂ ವೇಶ್ಮ ದಹರೋಽಸ್ಮಿನ್ನಂತರಾऽಕಾಶಸ್ತಸ್ಮಿನ್ ಯದಂತಸ್ತದನ್ವೇಷ್ಟವ್ಯಮ್, ತದ್ವಾವ ವಿಜಿಜ್ಞಾಸಿತವ್ಯಮ್' ಎಂಬುದಾಗಿ ಜಿಜ್ಞಾಸೆಗೆ ವಿಷಯನಾದ ಯಾವ ವಿಷ್ಣುವಿದ್ದಾನೋ ಇವನು ದಹರಾಕಾಶ-ದಲ್ಲಿರುತ್ತಾನೆ. ಅಂತಹ ವಿಷ್ಣುವಿನ ಹೃದಯಾಕಾಶದಲ್ಲಿ ಎಲ್ಲವೂ ಸನ್ನಿಹಿತವಾಗಿದೆಯೆಂದು ಹೇಳಲಾಗಿದೆ. ಇವನಲ್ಲಿ ಎಲ್ಲವೂ ಆಶ್ರಿತವಾಗಿದೆ.

ಆದರೂ ಸರ್ವಗತನಾಗಿರುವನು

सत्तर्कदीपावलिः – 'यावान् वाऽयमाकाशस्तावानषोऽन्तर्हृदय आकाश उभे अस्मिन् द्यावापृथिवी' इत्यादिना ।

'ಯಾವಾನ್ ವಾऽಯಮಾಕಾಶಸ್ತಾವಾನೇಷೋऽಂತರ್ಹೃದಯ ಆಕಾಶ ಉಭೇ ಅಸ್ಮಿನ್ ದ್ಯಾವಾಪೃಥಿವೀ' ಎಂಬ ಶ್ರುತಿಯು ವಿಷ್ಣುವಿನ ಹೃದಯದಲ್ಲಿರುವ ಆಕಾಶಕ್ಕೆ ವ್ಯಾಪ್ತತ್ವವನ್ನು ಹೇಳುತ್ತಿದೆ. ಇದರಿಂದ ಸಕಲಕ್ಕೂ ಆಧಾರನಾದವನು ವಿಷ್ಣುವೇ ಆಗಿದ್ದಾನೆ ಮತ್ತು ಸರ್ವಗತನಾಗಿದ್ದಾನೆಂದು ಹೇಳಿದಂತಾಯಿತು.

ವ್ಯಾಪ್ತನಾದವನು ಮಹಾವಿಷ್ಣುವೇ ಹೊರತು ಬಾಹ್ಯಾಕಾಶವಲ್ಲ

सत्तर्कदीपावलिः – अथवा विष्णुमेव न बाह्याकाशं व्यापकं हृत्कुहरस्थाकाशशब्देन निर्दिश्य तत्स्थं सर्वमुच्यते ।

ಅಥವಾ ವಿಷ್ಣುವೇ ವ್ಯಾಪ್ತನಾಗಿದ್ದಾನೆ ಹೊರತು ಬಾಹ್ಯಾಕಾಶವಲ್ಲ; ಹೃದಯಗುಹೆಯಲ್ಲಿರುವ ಆಕಾಶದಲ್ಲಿ ವಿಷ್ಣುವಿದ್ದಾನೆಂದು ನಿರ್ದೇಶ ಮಾಡಿ ಅವನಲ್ಲಿ ಎಲ್ಲವೂ ಇದೆ ಎಂದು 'ಆಕಾಶ' ಶಬ್ದದಿಂದ ಶ್ರುತಿ ಹೇಳುತ್ತಿದೆ.

ಹಸಿವು ನೀರಡಿಕೆಗಳನ್ನು ದಾಟಿದ್ದು ಭೂತಾಕಾಶವಲ್ಲ

सत्तर्कदीपावलिः – उभे इत्यादिना अपहतपाप्मत्वादिगुणकश्च विष्णुरेवैतच्छ्रुत्यन्तरसंवादेन दृढीकरोति – योऽशनायेत्यादिना ।। अशनाया विजिघित्सा क्षुदित्यर्थः ।

'ಉಭೇ ಅಸ್ಮಿನ್' ಇತ್ಯಾದಿ ವಾಕ್ಯದಿಂದ ಅಪಹತಪಾಪ್ಮತ್ವಾದಿಗುಣಗಳು ವಿಷ್ಣುವಿನಲ್ಲೇ ಬರುತ್ತದೆ ಎಂದು ಶ್ರುತ್ಯಂತರಸಂವಾದದಿಂದ ದೃಢಪಡಿಸುತ್ತಿದ್ದಾರೆ. 'ಯೋಽಶನಾಯಾ' ಇತ್ಯಾದಿಯಾಗಿ. ಹಸಿವೆ ನೀರಡಿಕೆಗಳನ್ನು ದಾಟಿದ್ದಾನೆಂದರ್ಥ.

ಮುಕ್ತರಲ್ಲಿಯೂ ಕೂಡ ನಿತ್ಯತೀರ್ಣಾತ್ವಾದಿಗಳು ಇರುವುದಿಲ್ಲ

सत्तर्कदीपावलिः – नन्वशनायादिपिपासाद्यतिक्रमणं न विष्णोरेव, मुक्तानामपि सम्भवादित्याशङ्कित आह – नित्येति ।।

ಹಸಿವೆ, ನೀರಡಿಕೆಗಳನ್ನು ದಾಟಿರುವುದು ವಿಷ್ಣುವಿನದ್ದೇ ಲಕ್ಷಣವಾಗುವುದಿಲ್ಲ. ಏಕೆಂದರೆ ಮುಕ್ತರಲ್ಲಿಯೂ ಕೂಡ ಈ ಗುಣಗಳಿರುತ್ತವಲ್ಲವೆ ? ಎಂಬ ಪ್ರಶ್ನೆಗೆ 'ನಿತ್ಯತೀರ್ಣಾ' ಇತ್ಯಾದಿ ಪ್ರಮಾಣದ ಬಲದಿಂದ ವಿಷ್ಣುವಿನ ಅಸಾಧಾರಣ ಧರ್ಮವೆಂದು ನಿಶ್ಚಯ ಮಾಡುತ್ತಿದ್ದಾರೆ.

ದಹರಾಕಾಶದಲ್ಲಿ ಅಪಹತಪಾಪ್ಮತ್ವಾದಿಗಳು ಕೂಡುವುದಿಲ್ಲ

सत्तर्कदीपावलिः – नच दहराकाशस्याप्यपहतपाप्मत्वादिकं किञ्चिदाशङ्कनीयम्, अप्रसक्तप्रतिषेध प्रसङ्गात् । भगवदनुकूलेच्छावत्त्वमेव मुक्तानां सत्यकामत्वमित्यर्थः ।।

ದಹರಾಕಾಶಕ್ಕೂ ಕೂಡ ಅಪಹತಪಾಪ್ಮತ್ವಾದಿಗುಣಗಳನ್ನು ಹೇಳಬಹುದಲ್ಲವೆ ? ಎಂದು ಶಂಕಿಸಬಾರದು. ಜಡವಾದ ಆಕಾಶದಲ್ಲಿ ಪಾಪಕ್ಕೆ ಪ್ರಸಕ್ತಿಯೇ ಇಲ್ಲ. ಹೀಗಿರುವಾಗ ಅದನ್ನು ನಿಷೇಧ ಮಾಡುವುದು ತಪ್ಪಾಗುತ್ತದೆ. ಮುಕ್ತರಲ್ಲಿ ಸತ್ಯಕಾಮತ್ವಾದಿಗಳು ಇದ್ದರೂ ಅವು ಭಗವಂತನ ಮನಸ್ಸಿಗೆ ಅನುಕೂಲವಾದ ಇಚ್ಛೆಯೇ ಆಗಿರುತ್ತವೆಂದು ತಿಳಿಯಬೇಕು.

ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ

ತತ್ತ್ವಪ್ರದೀಪ

ದಹರಾಕಾಶದಲ್ಲಿ ಏನಿದೆ ?

तत्वप्रदीपः – चन्द्रादित्याद्याधारत्वं विष्णोरुक्तं ''सूर्याचन्द्रमसौ विधृतौ'' इत्यादिना । तच्च ''एतस्मिन् ब्रह्मपुरे दहरं पुण्डरीकं वेश्म दहारोऽस्मिन् अन्तराकाशः किं तदत्र विद्यते यदन्वेष्टव्यं यद्वाव विजिज्ञासितव्यमिति, स ब्रूयात् यावान्वाऽयमाकाशस्तावानेषोऽऽन्तर्हृदय आकाशः । उभे अस्मिन् द्यावापृथिवी अन्तरेव समाहिते । उभावग्निश्च वायुश्च सूर्याचन्द्रमसावुभौ' इत्यादावाकाशस्य प्रतीयते ।

ಸೂರ್ಯಚಂದ್ರಾದಿಗಳಿಗೆ ಆಧಾರನಾದವನು ಮಹಾವಿಷ್ಣುವೇ ಆಗಿದ್ದಾನೆಂದು ''ಸೂರ್ಯಾಚಂದ್ರಮಸೌ ವಿಧೃತೌ ತಿಷ್ಠತಃ'' ಇತ್ಯಾದಿ ವಾಕ್ಯಗಳಿಂದ ಈ ಹಿಂದೆ ಸಮರ್ಥಿಸಿದ್ದಾಯಿತು. ಆದರೆ ಇದೇ ಸೂರ್ಯಚಂದ್ರಾದ್ಯಾಧಾರತ್ವವು ದಹರಾಕಾಶದಲ್ಲಿ ಶ್ರುತವಾಗುತ್ತಿದೆ = 'ಏತಸ್ಮಿನ್ ಬ್ರಹ್ಮಪುರೇ ದಹರಂ ಪುಂಡರೀಕಂ ವೇಶ್ಮ ದಹರೋಽಸ್ಮಿನ್ ಅಂತರಾಕಾಶಃ ಕಿಂ ತದತ್ರ ವಿದ್ಯತೇ ಯದನ್ವೇಷ್ಟವ್ಯಂ ಯದ್ವಾವ ವಿಜಿಜ್ಞಾಸಿತವ್ಯಮ್ ಇತಿ, ಸ ಬ್ರೂಯಾತ್ ಯಾವಾನ್ವಾऽಯಮಾಕಾಶಸ್ತಾವಾನೇಷೋऽಂತರ್ಹೃದಯ ಆಕಾಶಃ । ಉಭೇ ಅಸ್ಮಿನ್ ದ್ಯಾವಾಪೃಥಿವೀ ಅಂತರೇವ ಸಮಾಹಿತೇ । ಉಭಾವಗ್ನಿಶ್ಚ ವಾಯುಶ್ಚ ಸೂರ್ಯಾಚಂದ್ರಮಸಾವುಭೌ' ''ಕಣ್ಣಿಗೆ ಕಾಣಿಸುತ್ತಿರುವ ಈ ದೇಹವೆಂಬ ಪಟ್ಟಣದಲ್ಲಿ ಹೃದಯ

ಕಮಲವೆಂಬ ಒಂದು ಮನೆಯಿದೆ. ಅದರಲ್ಲಿ ಒಂದು ಸೂಕ್ಷ್ಮವಾದ ಪ್ರದೇಶವಿದೆ. ಆ ಪ್ರದೇಶದಲ್ಲಿ ಏನಿದೆ ? ಇದರ ಬಗ್ಗೆ ಅನ್ವೇಷಣೆ ಮಾಡಬೇಕು ಹಾಗೂ ಜಿಜ್ಞಾಸೆ ಮಾಡಬೇಕು. ಬಾಹ್ಯದಲ್ಲಿ ಯಾವ ಆಕಾಶವಿದೆಯೋ, ಅದೆಲ್ಲವೂ ಈ ಜಾಗದಲ್ಲಿದೆ. ಮತ್ತು ಭೂಮ್ಯಾಕಾಶಗಳೆಲ್ಲವೂ ಇದರಲ್ಲೇ ಅಡಗಿದೆ. ಅಷ್ಟೇ ಅಲ್ಲದೇ ಅಗ್ನಿ, ವಾಯು, ಸೂರ್ಯ, ಚಂದ್ರ ಇವರೆಲ್ಲರೂ ಇದನ್ನೇ ಆಶ್ರಯಿಸಿದ್ದಾರೆ'' ಇತ್ಯಾದಿ ವಾಕ್ಯದಿಂದ ಸೂರ್ಯ-ಚಂದ್ರಾದ್ಯಾಧಾರತ್ವವು ಪ್ರತೀತವಾಗುತ್ತಿದೆ.

ದಹರಾಕಾಶವೇ ಸಕಲಕ್ಕೂ ಆಶ್ರಯ, ಅಲ್ಲಿ ನೆಲೆಸಿರುವವನು ಜೀವನೆಂಬುದು ಅಧಿಕರಣದ ಪೂರ್ವಪಕ್ಷ

तत्वप्रदीपः – स चाऽदित्याद्याधारः किं दहराकाशस्स्यादाहोस्वित् तत्स्थः कश्चिदितीदानीं चिन्त्यते । किं तावात् प्राप्तम् ? दहराकाश इति ''तस्यान्ते सुषिरं सूक्ष्मं तस्मिन् सर्वं प्रतिष्ठितम्'' इत्यादिश्रुत्यन्तरे दहरसुषिरस्य सर्वाधारत्वप्रतीतेः । तत्स्थः कश्चिदित्यपरः पक्षः । सोऽपि जीव इति प्राप्तम् । हृदयगतदहराकाशान्तस्थत्वात् । उपरि च तत्परामर्शदर्शनादिति ।

ಆದಿತ್ಯಾದಿಗಳಿಗೆ ಆಧಾರವಾದದ್ದು ದಹರಾಕಾಶವೇ ಆಗಿದೆ. ಅಥವಾ ಆ ದಹರಾಕಾಶದಲ್ಲಿರುವ ವ್ಯಕ್ತಿಯು ಸಕಲಕ್ಕೂ ಆಶ್ರಯನೆಂಬುದು ಈ ಅಧಿಕರಣದ ಪೂರ್ವಪಕ್ಷ. 'ತಸ್ಯಾಂತೇ ಸುಷಿರಂ ಸೂಕ್ಷ್ಮಂ ತಸ್ಮಿನ್ ಸರ್ವಂ ಪ್ರತಿಷ್ಠಿತಮ್' ಎಂಬುದಾಗಿ ನಾರಾಯಣೋಪನಿಷತ್ತು ಸೂಕ್ಷ್ಮವಾದ ಆ ಸುಷಿರಪ್ರದೇಶವೇ ಸಕಲಕ್ಕೂ ಆಧಾರವಾಗಿದೆ ಎಂದು ಹೇಳುತ್ತಿದೆ. ಆ ಸೂಕ್ಷ್ಮಪ್ರದೇಶದಲ್ಲಿ ಇರುವ ವ್ಯಕ್ತಿಯೂ ಸಕಲಕ್ಕೆ ಆಧಾರ ಎಂಬುದು ಮತ್ತೊಂದು ಪಕ್ಷ. ಅವನು ಜೀವನೇ ಆಗುತ್ತಾನೆ. ಏಕೆಂದರೆ ಜೀವನು ಹೃದಯದ ದಹರಾಕಾಶದಲ್ಲಿ ನೆಲೆಸಿದ್ದಾನೆಂಬುದು ಪ್ರಸಿದ್ಧವಾಗಿದೆ. ಮುಂದೆಯೂ ಸಹ ಆ ಜೀವನನ್ನೇ ಪರಾಮರ್ಶ ಮಾಡಿದ್ದಾರೆ.

ದಹರಾಕಾಶದ ಜಿಜ್ಞಾಸೆ ಅಸಂಗತ

तत्वप्रदीपः – अत्रोत्तरं – 'दहर उत्तरेभ्यः' ।। न तावत् दहराकाशोऽत्र प्रतिपाद्यते । ''तस्मिन् यदन्तस्तदन्वेष्टव्यं तद्वाव विजिज्ञासितव्यम्'' इति

तदन्तस्थस्यैवान्वेष्टव्यत्वप्रतिज्ञानात् । किन्तु तत्स्थः कश्चिदेव । स च दहराकाशे स्थितो विष्णुरेव ।

ಉತ್ತರವನ್ನು ಸೂತ್ರಕಾರರು 'ದಹರೇ ಉತ್ತರೇಭ್ಯಃ' ಎಂಬುದಾಗಿ ಹೇಳುತ್ತಿದ್ದಾರೆ. ಈ ಛಾಂದೋಗ್ಯದ ಪ್ರಕರಣದಿಂದ ದಹರಾಕಾಶವು ಪ್ರತಿಪಾದ್ಯವೇ ಅಲ್ಲ. ಏಕೆಂದರೆ 'ತಸ್ಮಿನ್ಯದಂತಸ್ತದನ್ವೇಷ್ಟವ್ಯಂ ತದ್ವಾವ ವಿಜಿಜ್ಞಾಸಿತವ್ಯಮ್' ಅಲ್ಲಿ ನೆಲೆಸಿದ್ದನ್ನೇ ಅನ್ವೇಷಣೆ ಮಾಡಬೇಕು. ಹಾಗೂ ಜಿಜ್ಞಾಸೆ ಮಾಡಬೇಕು ಎಂಬುದಾಗಿ, ದಹರಾಕಾಶದಲ್ಲಿ ಇರುವ ಪದಾರ್ಥದ ಬಗ್ಗೆ ಅನ್ವೇಷ್ಟವ್ಯತ್ವ ವಿಜಿಜ್ಞಾಸ್ಯತ್ವಗಳ ಪ್ರತಿಜ್ಞೆಯನ್ನು ಉಪನಿಷತ್ತು ಮಾಡುತ್ತಿದೆ. ಆದ್ದರಿಂದ ದಹರಾಕಾಶವನ್ನೇ ಸಕಲಕ್ಕೂ ಆಧಾರವೆಂದು ವಿವಕ್ಷಿಸಬಾರದು. ಹೊರತಾಗಿ, ಆ ದಹರಾಕಾಶದಲ್ಲಿ ನೆಲೆಸಿರುವ ಒಬ್ಬ ವ್ಯಕ್ತಿಯನ್ನೇ ಅನ್ವೇಷಣೆ ಮಾಡಬೇಕು. ಆ ವ್ಯಕ್ತಿಯಾದರೂ ಜೀವನಾಗಲು ಸಾಧ್ಯವಿಲ್ಲ. ಮಹಾವಿಷ್ಣುವೇ ಆಗುತ್ತಾನೆ.

> ವಿವರಣೆ - (ಸಂಗ್ರಹ) 'ಅಥ ಯದಿದಮಸ್ಮಿನ್ ಬ್ರಹ್ಮಪುರೇ ದಹರಂ ಪುಂಡರೀಕಂ ವೇಶ್ಮ। ದಹರೋऽಸ್ಮಿನ್ನಂತರಾಕಾಶಃ। ತಸ್ಮಿನ್ ಯದಂತಃ ತದನ್ವೇಷ್ಟವ್ಯಮ್। ತದ್ವಾವ ವಿಜಿಜ್ಞಾಸಿತವ್ಯಂ' ಇತಿ।
>
> ಈ ಶರೀರದಲ್ಲಿ ವ್ಯಾಪಿಸಿರುವ ಪೂರ್ಣಗುಣನೂ, ಪೂರ್ಣಕಾಮನೂ ಆಗಿರುವ ಪರಮಾತ್ಮನಲ್ಲಿ ಹೃದಯಕಮಲರೂಪವಾದ ಸಣ್ಣಮನೆಯು ಆಶ್ರಿತವಾಗಿದೆ. ಈ ಮನೆಯಲ್ಲಿ ಸಣ್ಣ ಆಕಾಶವಿದೆ. ಅದರ ಒಳಗೆ ಏನು ಇದೆಯೋ ಅದನ್ನೇ ಹುಡುಕಬೇಕು ಅಂದರೆ ಮನನ ಮಾಡಬೇಕು ಎಂದು.
>
> ತಂ ಚೇದ್ ಬ್ರೂಯುಃ 'ಯದಿದಮಸ್ಮಿನ್ ಬ್ರಹ್ಮಪುರೇ ದಹರಂ ಪುಂಡರೀಕಂ ವೇಶ್ಮ, ದಹರೋऽಸ್ಮಿನ್ನಂತರಾಕಾಶಃ, ಕಿಂ ತದತ್ರ ವಿದ್ಯತೇ ಯದನ್ವೇಷ್ಟವ್ಯಂ, ಯದ್ವಾವ ವಿಜಿಜ್ಞಾಸಿತವ್ಯಂ' ಇತಿ।
>
> ಸ ಬ್ರೂಯಾತ್ ಯಾವಾನ್ವಾ ಅಯಮಾಕಾಶಃ ತಾವಾನೇಷೋऽಂತರ್ಹೃದಯ ಆಕಾಶಃ। ಉಭೇ ಅಸ್ಮಿನ್ ದ್ಯಾವಾಪೃಥಿವೀ ಅಂತರೇವ ಸಮಾಹಿತೇ। ಉಭಾವಗ್ನಿಶ್ಚ ವಾಯುಶ್ಚ ಸೂರ್ಯಾಚಂದ್ರಮಸಾವುಭೌ ವಿದ್ಯುನ್ನಕ್ಷತ್ರಾಣಿ ಯಚ್ಚಾಸ್ಯೇಹಾಸ್ತಿ ಯಚ್ಚ ನಾಸ್ತಿ ಸರ್ವಂ ತದಸ್ಮಿನ್ ಸಮಾಹಿತಂ ಇತಿ ॥

ಆಗ ಗುರುಗಳನ್ನು ಶಿಷ್ಯರು ಹೀಗೆ ಕೇಳಬಹುದು - 'ಪರಮಾತ್ಮನ ಆವಾಸ ಸ್ಥಾನವಾದ ಈ ಶರೀರದಲ್ಲಿ ಚಿಕ್ಕ ಹೃದಯ ಕಮಲವಿದೆ ಮತ್ತು ಅದರೊಳಗೆ ಅಲ್ಪವಾದ ಆಕಾಶವಿದೆ ಎಂದಿರಿ. ಅದರಲ್ಲಿ ಹುಡುಕಬೇಕಾದುದು, ಮನನ ಮಾಡಬೇಕಾದುದು ಏನಿದೆ ? ಬ್ರಹ್ಮನಂತೂ ಅಲ್ಲ. ಅವನು ವ್ಯಾಪ್ತ. ಚಿಕ್ಕ ಹೃದಯಕಮಲದಲ್ಲಿ ಅವನು ಇರಲಾರ' ಎಂದು.

ಆಗ ಗುರುಗಳು ಹೇಳಬೇಕು - 'ಶರೀರದಲ್ಲಿ ಹೃತ್ಕಮಲದೊಳಗಿನ ಆಕಾಶದೊಳಗೆ ಆಕಾಶನಾಮಕ ಪರಬ್ರಹ್ಮನಿದ್ದಾನೆ. ಹೃದಯದ ಹೊರಗೆ ವ್ಯಾಪ್ತನಾಗಿರುವ ಆಕಾಶನಾಮಕನಾದ ಪರಬ್ರಹ್ಮನು ದೇಶಕಾಲಗುಣಗಳಿಂದ ಹೇಗೆ ಅನಂತನಾಗಿರುವನೋ ಹಾಗೆಯೇ ಹೃತ್ಕಮಲದೊಳಗಿನ ಆಕಾಶದಲ್ಲಿರುವ ಈ ಆಕಾಶನಾಮಕ ಪರಬ್ರಹ್ಮನೂ ಅನಂತನಾಗಿರುವನು. ಹೀಗೆ ಅವನು ಅಣುವೂ ಮಹತ್ತೂ ಆಗಿರುವುದರಿಂದ ಹೃದಯಕಮಲದಲ್ಲಿ ಅಣುವಾಗಿ ನೆಲೆಸುವುದು ಅಸಂಭಾವಿತವಲ್ಲ. ಅವನನ್ನೇ ಮನನ ಮಾಡಬೇಕು. ಏಕೆಂದರೆ, ಅವನಲ್ಲೇ ಮುಕ್ತರು, ಅಮುಕ್ತರು ಎಂದು ಎರಡು ವಿಧರಾದ ಸ್ವರ್ಗ ಹಾಗೂ ಭೂಮಿಗಳ ಅಭಿಮಾನಿದೇವತೆಗಳೂ, ಅಗ್ನಿ ಹಾಗೂ ವಾಯುಗಳ ಅಭಿಮಾನಿಗಳು, ಸೂರ್ಯ-ಚಂದ್ರರೂ, ವಿದ್ಯುತ್ ಹಾಗೂ ನಕ್ಷತ್ರಗಳ ಅಭಿಮಾನಿದೇವತೆಗಳೂ ಹೀಗೆ ಎಲ್ಲರೂ ಆಶ್ರಿತರಾಗಿರುವರು'.

> ತಂ ಚೇತ್ ಬ್ರೂಯುಃ 'ಅಸ್ಮಿನ್ ಚೇದಿದಂ ಬ್ರಹ್ಮಪುರೇ ಸರ್ವಂ ಸಮಾಹಿತಂ ಸರ್ವಾಣಿ ಚ ಭೂತಾನಿ ಸರ್ವೇ ಚ ಕಾಮಾಃ ಯದೈನತ್ ಜರಾsವಾಪ್ನೋತಿ ಪ್ರಧ್ವಂಸತೇ ವಾ ಕಿಂ ತತೋsತಿಶಿಷ್ಯತೇ' ಇತಿ। ಸ ಬ್ರೂಯಾತ್ 'ನಾಸ್ಯ ಜರಯೈತತ್ ಜೀರ್ಯತಿ । ನ ವಧೇನಾಸ್ಯ ಹನ್ಯತೇ । ಏತತ್ ಸತ್ಯಂ ಬ್ರಹ್ಮಪುರಮ್ । ಅಸ್ಮಿನ್ ಕಾಮಾಃ ಸಮಾಹಿತಾಃ । ಏಷ ಆತ್ಮಾsಪಹತಪಾಪ್ಮಾ ವಿಜರೋ ವಿಮೃತ್ಯುರ್ವಿ-ಶೋಕೋsವಿಜಿಘತ್ಸೋsಪಿಪಾಸಃ ಸತ್ಯಕಾಮಃ ಸತ್ಯಸಂಕಲ್ಪೋ ಯಥಾ ಹ್ಯೇವೇಹ ಪ್ರಜಾಃ ಅನ್ವಾವಿಶಂತಿ ಯಥಾನುಶಾಸನಂ ಯಂ ಯಮಂತಮಭಿಕಾಮಾ ಭವಂತಿ ಯಂ ಜನಪದಂ ಯಂ ಕ್ಷೇತ್ರಭಾಗಂ ತಂ ತಮೇವೋಪಜೀವಂತಿ ॥

ಆ ಗುರುಗಳನ್ನು ಶಿಷ್ಯರು 'ಬ್ರಹ್ಮನ ಪುರವೆನಿಸಿರುವ ಶರೀರದಲ್ಲಿರುವ ಪರಬ್ರಹ್ಮನಲ್ಲಿ ಎಲ್ಲವೂ ಇದೆ. ಎಲ್ಲ ಪ್ರಾಣಿಘಲೂ ಇವೆ ಮತ್ತು ಅವನಲ್ಲಿ ಎಲ್ಲ ಕಾಮನೆಗಳು ಪೂರೈಸಿವೆ ಎಂದಾದರೆ, ಈ ಶರೀರವನ್ನು ಮುದಿತನವು ಆವರಿಸಿದಾಗ ಅಥವಾ ಶರೀರ ನಾಶವಾದಾಗ ಆ ಶರೀರದೊಳಗೆ ಯಾವುದು ತಾನೇ ಉಳಿದೀತು?' ಎಂದು ಕೇಳಿದರೆ ಗುರುಗಳು ಹೇಳಬೇಕು 'ಈ ಶರೀರದ ಮುದಿತನದಿಂದ ಬ್ರಹ್ಮನಿಗೆ ಮುದಿತನವೂ ಉಂಟಾಗದು, ಶರೀರದ ನಾಶದಿಂದ ನಾಶವೂ ಸಂಭವಿಸದು. ಈ ಪರಬ್ರಹ್ಮನು ಪಾಪಲೇಪರಹಿತನೂ, ಮುದಿತನವಿಲ್ಲದವನೂ,

ಮರಣದೂರನೂ, ಶೋಕವಿಲ್ಲದವನೂ ಹಸಿವೆತೃಷೆ ಪೀಡೆ ಇಲ್ಲದವನೂ, ಅಮೋಘ ಇಚ್ಛೆ ಉಳ್ಳವನೂ ಅಮೋಘ ಸಂಕಲ್ಪ ಉಳ್ಳವನೂ ಆಗಿರುವನು. ಸಾಯುಜ್ಯಮುಕ್ತರು ತಮ್ಮ ತಮ್ಮ ಯೋಗ್ಯತೆಗೆ ಅನುಸಾರ ಅಂದರೆ ತಾರತಮ್ಯ- ಯುಕ್ತರಾಗಿಯೇ, ಪರಮಾತ್ಮನ ಆಜ್ಞಾನುಸಾರ ಪರಮಾತ್ಮನನ್ನು ಪ್ರವೇಶಿಸುತ್ತಾರೆ. ಯಾವ ಯಾವ ದೇಶವನ್ನು ಯಾವ ಯಾವ ರಾಷ್ಟ್ರವನ್ನು, ಯಾವ ಯಾವ ಪ್ರದೇಶವನ್ನು ಮುಕ್ತರು ಹೊಂದಲು ಇಚ್ಛಿಸುವರೋ ಅವನ್ನೆಲ್ಲಾ ಹೊಂದುತ್ತಾರೆ. ಇದು ಪರಮಾತ್ಮನ ಅನುಗ್ರಹದಿಂದ ಹೊರತು ಸ್ವತಂತ್ರವಾಗಿ ಅಲ್ಲ.

ತತ್ ಯಥೇಹ ಕರ್ಮಜಿತೋ ಲೋಕಃ ಕ್ಷೀಯತೇ ಏವಮೇವಾಮುತ್ರ ಪುಣ್ಯಜಿತೋ ಲೋಕಃ ಕ್ಷೀಯತೇ ತದ್ಯ ಇಹಾತ್ಮಾನಮನನುವಿದ್ಯ ವ್ರಜಂತ್ಯೇತಾನ್ ಚ ಸತ್ಯಾನ್ ಕಾಮಾನ್ । ತೇಷಾಂ ಸರ್ವೇಷು ಲೋಕೇಷ್ವಕಾಮಚಾರೋ ಭವತಿ । ಅಥ ಯ ಇಹಾತ್ಮಾನಮನುವಿದ್ಯ ವ್ರಜಂತ್ಯೇತಾನ್ ಚ ಸತ್ಯಾನ್ ಕಾಮಾನ್ ತೇಷಾಂ ಸರ್ವೇಷು ಲೋಕೇಷು ಕಾಮಚಾರೋ ಭವತಿ ॥

ಹೇಗೆ ಈ ಲೋಕದಲ್ಲಿ ಕರ್ಮದಿಂದ ಸಂಪಾದಿಸಿದ ದೇಹ, ಮನೆ ಮೊದಲಾದ ಐಶ್ವರ್ಯಗಳು ನಾಶವಾಗುತ್ತವೋ ಹಾಗೆಯೇ, ಯಾರು ಪರಮಾತ್ಮನನ್ನೂ ಅವನ ಸತ್ಯಕಾಮತ್ವಾದಿ ಮಹಿಮೆಗಳನ್ನೂ ತಿಳಿಯದೆ ಕರ್ಮಾಚರಣೆ ಮಾಡುವರೋ ಅವನು ಹೊಂದುವ ಸ್ವರ್ಗಾದಿ ಫಲಗಳೂ ಪುಣ್ಯಕ್ಷಯವಾದಾಗ ನಾಶಹೊಂದುತ್ತವೆ. ಅವರಿಗೆ ಎಲ್ಲಾ ಲೋಕಗಳಲ್ಲೂ ಇಚ್ಛಾನುಸಾರವಾಗಿ ಸಂಚರಿಸುವ ಭಾಗ್ಯವು ಕೈಗೂಡದು. ಆದರೆ ಯಾರು ಈ ಲೋಕದಲ್ಲಿ ಪರಮಾತ್ಮನನ್ನೂ, ಅವನ ಸತ್ಯಕಾಮತ್ವಾದಿ ಮಹಿಮೆಗಳನ್ನೂ ಅರಿತು ಪುಣ್ಯವನ್ನು ಸಂಪಾದಿಸುತ್ತಾರೋ ಅವರ ಆ ಪುಣ್ಯದಿಂದ ಲಭ್ಯವಾದ ಮೋಕ್ಷರೂಪ ಫಲವು ಎಂದೂ ಸಂಪಾದಿಸುತ್ತಾರೋ ಅವರ ಆ ಪುಣ್ಯದಿಂದ ಲಭ್ಯವಾದ ಮೋಕ್ಷರೂಪ ಫಲವು ಎಂದೂ ನಾಶವಾಗುವುದಿಲ್ಲ. ಇಷ್ಟೇ ಅಲ್ಲದೆ ಅವರಿಗೆ ಇಚ್ಛಾನುಸಾರವಾಗಿ ಎಲ್ಲಾ ಲೋಕಗಳಲ್ಲೂ ಸಂಚಿಸುವ ಭಾಗ್ಯ ದೊರಕುತ್ತದೆ ಎಂದು ಉತ್ತರಿಸಿದ್ದಾರೆ.

ಸ ಯದಿ ಪಿತೃಲೋಕಕಾಮೋ ಭವತಿ ಸಂಕಲ್ಪಾದೇವಾಸ್ಯ ಪಿತರಃ ಸಮುತ್ತಿಷ್ಠಂತಿ। ತೇನ ಪಿತೃಲೋಕೇನ ಸಂಪನ್ನೋ ಮಹೀಯತೇ। ಅಥ ಯದಿ ಮಾತೃಲೋಕಕಾಮೋ ಭವತಿ ಸಂಕಲ್ಪಾದೇವಾಸ್ಯ ಮಾತರಃ ಸಮುತ್ತಿಷ್ಠಂತಿ । ತೇನ ಮಾತೃ ಲೋಕೇನ ಸಂಪನ್ನೋ ಮಹೀಯತೇ । ಅಥ ಯದಿ ಭ್ರಾತೃಲೋಕಕಾಮೋ ಭವತಿ ಸಂಕಲ್ಪಾದೇವಾಸ್ಯ ಭ್ರಾತರಃ ಸಮುತ್ತಿಷ್ಠಂತಿ ತೇನ ಭ್ರಾತೃಲೋಕೇನ ಸಂಪನ್ನೋ ಮಹೀಯತೇ । ಅಥ ಯದಿ ಸ್ವಸೃಲೋಕಕಾಮೋ ಭವತಿ ಸಂಕಲ್ಪಾದೇವಾಸ್ಯ ಸ್ವಸಾರಃ ಸಮುತ್ತಿಷ್ಠಂತಿ। ತೇನ

ಸ್ವಪೃಲೋಕೇನ ಸಂಪನ್ನೋ ಮಹೀಯತೇ । ಅಥ ಯದಿ ಸಖಿಲೋಕಾಮೋ ಭವತಿ ಸಂಕಲ್ಪಾದೇವಸ್ಯ ಸಖಾಯಃ ಸಮುತ್ತಿಷ್ಠಂತಿ । ತೇನ ಸಖಿಲೋಕೇನ ಸಂಪನ್ನೋ ಮಹೀಯತೇ ।

ಆ ಮುಕ್ತನು ತನ್ನ ಚರಮಜನ್ಮವಿತ್ತ ತಂದೆ ವಿಷ್ಣುಲೋಕ ಹೊಂದಲಿ. ಅವನ ಆ ಲೋಕವೇ ನನ್ನದೂ ಆಗಿರಲೆಂದು ಬಯಸಿದರೆ ಆಗ ಅವನ ಇಚ್ಛಾಮಾತ್ರದಿಂದಲೇ ಅವನ ತಂದೆ ಮುಕ್ತನಾಗಿ ಅವನ ಎದುರಿನಲ್ಲಿ ಇರುತ್ತಾನೆ. ತಂದೆಯ ದರ್ಶನದಿಂದ ಯುಕ್ತನಾದ ಆ ಮುಕ್ತನು ಇತರ ಮುಕ್ತರಿಂದ ಗೌರವಿಸಲ್ಪಡುತ್ತಾನೆ. ಆ ಮುಕ್ತನು ತನ್ನ ಚರಮಜನ್ಮದ ಮಾತೆಯನ್ನು ತನ್ನ ಲೋಕದಲ್ಲಿ ನೋಡಲು ಬಯಸಿದನೆಂದರೆ ಆಗ ಅವನ ಇಚ್ಛಾಮಾತ್ರದಿಂದಲೇ ಅವನ ಮಾತೆಯರು ಮುಕ್ತರಾಗಿ ತನ್ನ ಮುಂದೆ ಸನ್ನಿಹಿತರಾಗಿರುವರು. ತನ್ನ ಮಾತೆಯರ ದರ್ಶನದಿಂದ ಯುಕ್ತನಾದ ಆ ಮುಕ್ತನು ಇತರ ಮುಕ್ತರಿಂದಪ ಆದರಿಸಲ್ಪಡುವನು. ಅವನ ತನ್ನ ಚರಮಜನ್ಮದ ಸಹೋದರರನ್ನು ತನ್ನ ಲೋಕದಲ್ಲಿ ನೋಡಲು ಇಚ್ಛಿಸಿದರೆ ಆಗ ಅವನ ಇಚ್ಛಾಮಾತ್ರದಿಂದ ಆ ಸಹೋದರರು ಮುಕ್ತರಾಗಿ ಬಂದು ಮುಂದೆ ಸನ್ನಿಹಿತರಾಗರುತ್ತಾರೆ. ಸಹೋದರರ ದರ್ಶನದಿಂದ ಸಂತುಷ್ಟನಾದ ಅವನನ್ನು ಇತರ ಮುಕ್ತರು ಸನ್ಮಾನಿಸುತ್ತಾರೆ. ಅವನು ತನ್ನ ಚರಮಜನ್ಮದ ಸಹೋದರಿಯರನ್ನು ತನ್ನ ಲೋಕದಲ್ಲಿ ನೋಡಲು ಬಯಸಿದರೆ ಅವನ ಇಚ್ಛಾಮಾತ್ರದಿಂದ ಸಹೋದರಿಯರು ಮುಕ್ತರಾಗಿ ಬಂದು ಮುಂದೆ ಸನ್ನಿಹಿತರಾಗುವರು. ಸಹೋದರಿಯರ ದರ್ಶನದಿಂದ ಕೃತಕೃತ್ಯನಾದ ಅವನನ್ನು ಇತರ ಮುಕ್ತರು ಆದರಿಸುತ್ತಾರೆ. ಆ ಮುಕ್ತನು ತನ್ನ ಚರಮಜನ್ಮದ ಸ್ನೇಹಿತರನ್ನು ತನ್ನ ಲೋಕದಲ್ಲಿ ನೋಡಲು ಬಯಸಿದನೆಂದರೆ ಅವನ ಇಚ್ಛಾಮಾತ್ರದಿಂದಲೇ ಅವನ ಸ್ನೇಹಿತರು ಮುಕ್ತರಾಗಿ ಬಂದು ಮುಂದೆ ಪ್ರತ್ಯಕ್ಷರಾಗುವರು. ಸ್ನೇಹಿತರ ದರ್ಶನದಿಂದ ತೃಪ್ತನಾದ ಆ ಮುಕ್ತನನ್ನು ಇತರ ಮುಕ್ತರು ಆದರಿಸುತ್ತಾರೆ.

ಅಥ ಯದಿ ಗಂಧಮಾಲ್ಯಲೋಕಕಾಮೋ ಭವತಿ ಸಂಕಲ್ಪಾದೇವಸ್ಯ ಗಂಧಮಾಲ್ಯೇ ಸಮುತ್ತಿಷ್ಠತಃ । ತೇನ ಗಂಧಮಾಲ್ಯಲೋಕೇನ ಸಂಪನ್ನೋ ಮಹೀಯತೇ । ಅಥ ಯದ್ಯನ್ನಪಾನಲೋಕಕಾಮೋ ಭವತಿ ಸಂಕಲ್ಪಾದೇವಾಸ್ಯನ್ನಪಾನೇ ಸಮುತ್ತಿಷ್ಠತಃ। ತೇನಾನ್ನಪಾನಲೋಕೇನ ಸಂಪನ್ನೋ ಮಹೀಯತೇ । ಅಥ ಯದಿ ಗೀತವಾದಿತ್ರ ಲೋಕಕಾಮೋ ಭವತಿ ಸಂಕಲ್ಪಾದೇವಾಸ್ಯ ಗೀತವಾದಿತ್ರೇ ಸಮುತ್ತಿಷ್ಠಂತಃ । ತೇನ ಗೀತವಾದಿತ್ರ ಲೋಕೇನ ಸಂಪನ್ನೋ ಮಹೀಯತೇ। ಅಥ ಯದಿ ಸ್ತ್ರೀಲೋಕಕಾಮೋ

ಭವತಿ ಸಂಕಲ್ಪಾದೇವಾಸ್ಯಸ್ತ್ರೀಯಃ ಸಮುತ್ತಿಷ್ಠಂತಿ। ತೇನ ಸ್ತ್ರೀಲೋಕೇನ ಸಂಪನ್ನೋ ಮಹೀಯತೇ। ಯಂ ಯಮಂತಭಿಕಾಮೋ ಭವತಿ ಯಂ ಕಾಮಂ ಕಾಮಯತೇ ಸೋಽಸ್ಯ ಸಂಕಲ್ಪಾದೇವ ಸಮುತ್ತಿಷ್ಠಂತಿ। ತೇನ ಸಂಪನೋನ ಮಹೀಯತೇ॥

ಅವನು ಗಂಧಮಾಲ್ಯಾದಿ ಭೋಗ್ಯವಸ್ತುಗಳನ್ನು ಭೋಗಿಸಲು ಇಚ್ಛಿಸಿದನೆಂದರೆ ಅವನ ಇಚ್ಛಾಮಾತ್ರದಿಂದ ಅವೆಲ್ಲವೂ ಎದುರಿಗೆ ಸನ್ನಿಹಿತವಾಗುವುವು. ಗಂಧಮಾಲ್ಯಾದಿಗಳ ಭೋಗದಿಂದ ತೃಪ್ತನಾದ ಅವನು ಇತರ ಮುಕ್ತರಿಂದ ಸನ್ಮಾನಿಸಲ್ಪಡುತ್ತಾನೆ. ಅವನ ಅನ್ನಪಾನಾದಿಗಳನ್ನು ಉಪಭೋಗಿಸಲು ಇಚ್ಛಿಸಿದನೆಂದರೆ ಅವನ ಇಚ್ಛಾಮಾತ್ರದಿಂದ ಅನ್ನಪಾನಗಳು ಎದುರಿಗೆ ಸನ್ನಿಹಿತವಾಗುತ್ತವೆ. ಅನ್ನಪಾನಗಳ ಉಪಭೋಗದಿಂದ ತೃಪ್ತನಾದ ಅವನು ಇತರ ಮುಕ್ತರಿಂದ ಸತ್ಕರಿಸಲ್ಪಡುತ್ತಾನೆ. ಅವನು ಸಂಗೀತ ವಾದ್ಯಗಳನ್ನು ಆಲಿಸಲು ಇಚ್ಛಿಸಿದನೆಂದರೆ ಅವನ ಆ ಇಚ್ಛಾಮಾತ್ರದಿಂದಲೇ ಸಂಗೀತ ವಾದ್ಯಗಳು ಒದಗಿ ಬರುತ್ತವೆ. ಸಂಗೀತವಾದ್ಯಗಳ ಶ್ರವಣದಿಂದ ತೃಪ್ತನಾದ ಆ ಮುಕ್ತನನ್ನು ಇತರ ಮುಕ್ತರು ಸನ್ಮಾನಿಸುತ್ತಾರೆ. ಅವನು ಚರಮ ಜನ್ಮದಲ್ಲಿ ಸೇವಿಸಿದ ಸ್ತ್ರೀಯರನ್ನು ತನ್ನ ಲೋಕದಲ್ಲಿ ಕಾಣಲು ಇಚ್ಛಿಸಿದನೆಂದರೆ ಆಗ ಅವನ ಇಚ್ಛಾಮಾತ್ರದಿಂದಲೇ ಆ ಸ್ತ್ರೀಯರು ಮುಕ್ತರಾಗಿ ಮುಂದೆ ಬಂದು ಸನ್ನಿಹಿತರಾಗರುವರು. ಸ್ತ್ರೀಯರ ದರ್ಶನದಿಂದ ತೃಪ್ತನಾದ ಅವನು ಇತರ ಮುಕ್ತರಿಂದ ಪೂಜಿಸಲ್ಪಡುತ್ತಾನೆ. ಆ ಮುಕ್ತನು ಯಾವ ಯಾವ ಪ್ರದೇಶದಲ್ಲಿ ಸಂಚರಿಸಲು ಬಯಸುತ್ತಾನೋ ಪ್ರದೇಶಗಳೂ, ಎಲ್ಲ ಅಭೀಷ್ಟವಸ್ತುಗಳೂ ಇಚ್ಛಾಮಾತ್ರದಿಂದಲೇ ಅವನಿಗೆ ಒದಗಿ ಬರುತ್ತವೆ. ತನ್ನ ಆ ಇಚ್ಛಾವಿಷಯಗಳನ್ನು ಅನುಭವಿಸಿ ತೃಪ್ತನಾದ ಆ ಮುಕ್ತನು ಇತರ ಮುಕ್ತರಿಂದ ಸನ್ಮಾನಿಸಲ್ಪಡುತ್ತಾನೆ.

ತ ಇಮೇ ಸತ್ಯಾಃ ಕಾಮಾಃ ಅನೃತಾಪಿಧಾನಾಃ । ತೇಷಾಂ ಸತ್ಯಾನ್ಯಾಂ ಸತಾಮನೃತಮಪಿಧಾನಮ್। ಯೋ ಯೋ ಹ್ಯಸ್ಯೇತಃ ಪ್ರೈತಿ ನ ತಮಿಹ ದರ್ಶನಾಯ ಲಭತೇ।

ಮುಕ್ತಿಯಲ್ಲಿ ಕಂಡು ಬರುವ ಈ ಸತ್ಯಕಾಮತ್ವಾದಿರೂಪಮಹಿಮೆಯು ಜೀವರಿಗೆ ಸಂಸಾರಾವಸ್ಥೆಯಲ್ಲೂ ಇದ್ದೇ ಇದೆ. ಆದರೆ ಅನಾದ್ಯಜ್ಞಾನದಿಂದ ಆವೃತವಾಗಿದೆ. ಅಂದರೆ ಅದರ ಅಭಿವ್ಯಕ್ತಿಗೆ ಅಜ್ಞಾನವು ಪ್ರತಿಬಂಧಕವಾಗಿದೆ. ಆದ್ದರಿಂದ ಮುಕ್ತಿಯೋಗ್ಯ ಸಂಸಾರಿ ಜೀವನ ಯಾವ ಯಾವ ತಂದೆ ತಾಯಿ ಮೊದಲಾದ ಬಂಧುಗಳು ಪರಲೋಕಕ್ಕೆ ಹೋಗುತ್ತಾರೋ, ಅವರನ್ನು ಈ ಜೀವನು ಪುನಃ ನೋಡಲಿಚ್ಛಿಸಿದರೂ ನೋಡಲು ಸಿಗುವುದಿಲ್ಲ.

ಅಥ ಯೇ ಚಾಸ್ಯೇಹ ಜೀವಾ ಯೇ ಚ ಪ್ರೇತಾ ಯಚ್ಚಾನ್ಯದಿಚ್ಛನ್ ನ ಲಭತೇ ಸರ್ವಂ ತದತ್ರ ಗತ್ವಾವಿಂದತೇ। ಅತ್ರ ಹ್ಯಸ್ಯೈತೇ ಸತ್ಯಾಃ ಕಾಮಾಃ। ತದ್ಯಥಾऽಪಿ ಹಿರಣ್ಯನಿಧಿಂ ನಿಹಿತಮಕ್ಷೇತಜ್ಞಾ ಉಪರ್ಯುಪರಿ ಸಂಚರಂತೋ ನ ವಿಂದೇಯುರೇವಮೇವೇಮಾಃ ಸರ್ವಾಃ ಪ್ರಜಾ ಅಹರಹರ್ಗಚ್ಛಂತ್ಯ ಏತಂ ಬ್ರಹ್ಮಲೋಕಂ ನ ವಿಂದಂತಿ। ಅನೃತೇನ ಹಿ ಪ್ರತ್ಯೂಢಾಃ।

ಈ ಅಮುಕ್ತ ಜೀವನು ಬದುಕಿರುವ ಅಥವಾ ಮರಣ ಹೊಂದಿರುವ ತನ್ನ ಬಂಧುಗಳನ್ನಾಗಲೀ, ಬೇರೆ ವಿಷಯ ಪದಾರ್ಥಗಳನ್ನಾಗಲೀ ಬಯಸಿದಾಗಲೆಲ್ಲಾ ಹೊಂದಲಾರ, ಆದರೆ ಅವೆಲ್ಲವನ್ನೂ ವಿಷ್ಣುಲೋಕದಲ್ಲಿ ಹೊಂದುತ್ತಾನೆ. ಏಕೆಂದರೆ ಅಲ್ಲಿ ಅವನ ಸ್ವರೂಪ ಭೂತವಾದ ಸತ್ಯಕಾಮತ್ವಾದಿಗಳು ಅಭಿವ್ಯಕ್ತವಾಗುತ್ತದೆ. ಸಂಸಾರದಲ್ಲಿ ಅವು ಅಜ್ಞಾನಾವೃತವಾಗಿರುತ್ತವೆ. ನಿಧಿಯಿರುವ ಸ್ಥಳವೆಂದು ಅರಿಯದೇ ಇರುವವರು ಆ ಸ್ಥಳದಲ್ಲಿಯೇ ಇರುವ ಬಂಗಾರದ ನಿಧಿಯ ಮೇಲೆ ಸಂಚರಿಸುತ್ತಿದ್ದರೂ ಆ ನಿಧಿಯನ್ನು ಮಾತ್ರ ಹೇಗೆ ನೋಡುವುದಿಲ್ಲವೋ ಹಾಗೆಯೇ ಈ ಜೀವರೆಲ್ಲರೂ ಪ್ರತಿದಿನ ಗಾಢನಿದ್ರಾವಸ್ಥೆಯಲ್ಲಿ ಹೃದಯದಲ್ಲಿರುವ ಸರ್ವಾಶ್ರಯನಾದ ಪರಬ್ರಹ್ಮನನ್ನು ಹೊಂದಿದರೂ ಅಜ್ಞಾನದಿಂದ ಆವೃತವಾಗಿರುವುದರಿಂದ ಅವನನ್ನು ಸಾಕ್ಷಾತ್ಕರಿಸುತ್ತಿಲ್ಲ. ಅಷ್ಟರಿಂದಲೇ ಅವನು ಅಲ್ಲಿ ಇಲ್ಲವೇ ಇಲ್ಲ ಎಂದು ನಿರ್ಣಯಿಸುವುದು ಸರಿಯಲ್ಲ.

ಸ ವಾ ಏಷ ಆತ್ಮಾ ಹೃದಿ। ತಸ್ಯೈತದೇತದೇವ ನಿರುಕ್ತಂ 'ಹೃದ್ಯಯಂ' ಇತಿ। ತಸ್ಮಾತ್ ಹೃದಯಮ್। ಅಹರಹರ್ವಾ ಏವಂ ವಿತ್ ಸ್ವರ್ಗಂ ಲೋಕಮೇತಿ।

ಅಂತಹ ಈ ಪರಮಾತ್ಮನು ಹೃದಯದಲ್ಲಿ ಇದ್ದೇ ಇರುವನು. ಹೃದಯ ಕಮಲದಲ್ಲಿರುವ ಈ ಪರಮಾತ್ಮನ 'ಹೃದಯ' ಎಂಬ ನಾಮದ ಅರ್ಥ ವಿವರಣೆ ಹೃದಯದಲ್ಲಿರುವವನು, ಹೃದಿ ಅಯತೇ ಎಂದು. ಆದುದರಿಂದ ವನು ಹೃದಯನಾಮಕನು. ನಿತ್ಯವೂ, ಹೀಗೆ ಹೃದಯನಾಮಕ ವಿಷ್ಣುವನ್ನರಿತು ಉಪಾಸಿಸುವವನು ವಿಷ್ಣುಲೋಕವನ್ನು ಹೊಂದುವನು.

ಅಥ ಯ ಏಷ ಸಂಪ್ರಸಾದೋऽಸ್ಮಾತ್ ಶರೀರಾತ್ ಸಮುತ್ಥಾಯ ಪರಂಜ್ಯೋತಿರುಪಸಂಪದ್ಯ ಸ್ವೇನ ರೂಪೇಣಾಭಿನಿಷ್ಪದ್ಯತೇ । ಏಷ ಆತ್ಮೇತಿ ಹೋವಾಚ । ಏತದಮೃತಮಭಯಂ ಏತತ್ ಬ್ರಹ್ಮೇತಿ । ತಸ್ಯ ಹ ವಾ ಏತಸ್ಯ ಬ್ರಹ್ಮಣೋ ನಾಮ ಸತ್ಯಮಿತಿ ॥

ಪರಮಾತ್ಮನ ಪರಮಪ್ರಸಾದಕ್ಕೆ ಪಾತ್ರನೆನಿಸಿದ ಈ ಪರಮಾತ್ಮಜ್ಞಾನಿಯು ತನ್ನ ಚರಮಶರೀರದಿಂದ ಹೊರಗೆ ಬಂದು ಪರಂಜ್ಯೋತಿಸ್ವರೂಪನಾದ ಪರಮಾತ್ಮನನ್ನು ಹೊಂದಿ, ಜ್ಞಾನಾನಂದಮಯವಾದ ತನ್ನ ಸ್ವರೂಪದಿಂದ ಪ್ರಕಟನಾಗುತ್ತಾನೆ. ಈ ಪರಂಜ್ಯೋತಿ ಜೀವನಲ್ಲ, ಪರಮಾತ್ಮನು. ಈ ಪರಮಾತ್ಮನು ನಿತ್ಯಮುಕ್ತನೂ, ಭಯರಹಿತನೂ, ಗುಣಪರಿಪೂರ್ಣನೂ ಆಗಿರುವನು ಎಂದು ಈ ಉಪನಿಷತ್ತಿನ ದ್ರಷ್ಟಾರಳಾದ ಲಕ್ಷ್ಮೀದೇವಿ ಹೇಳಿದ್ದಾಳೆ. ಈ ಪರಮಾತ್ಮನಿಗೆ ಸತ್ಯ ಎಂಬುದು ನಾಮಾಂತರ.

ತಾನಿ ಹ ವಾ ಏತಾನಿ ತ್ರೀಣ್ಯಕ್ಷರಾಣಿ ಸತ್ ತಿ ಯಮಿತಿ । ತತ್ ಯತ್ ಸತ್ ತದಮೃತಮ್ । ಅಥ ಯತ್ ತಿ ತನ್ಮರ್ತ್ಯಮ್ । ಅಥ ಯತ್ ಯಂ ತೇನೋಭೇ ಯಚ್ಛತಿ । ಯದನೇನೋಭೇ ಯಚ್ಛತಿ ತಸ್ಮಾದ್ಯಮಹರಹರ್ವಾ ಏವಂವಿತ್ ಸ್ವರ್ಗಂ ಲೋಕಮೇತಿ ॥

'ಸತ್ಯಂ' ಎಂಬ ಪದದಲ್ಲಿ 'ಸತ್', 'ತಿ', 'ಯಂ' ಎಂದು ಮೂರು ಅಕ್ಷರಗಳಿವೆ. ಅವುಗಳಲ್ಲಿ 'ಸತ್' ಎಂಬ ಅಕ್ಷರ ಮುಕ್ತರ ಸಮೂಹವನ್ನು ಹೇಳುತ್ತಿದೆ. 'ತಿ' ಎಂಬ ಅಕ್ಷರವು ಮರ್ತ್ಯರೆನಿಸಿರುವ ಸಂಸಾರಿಜೀವರನ್ನು ಹೇಳುತ್ತಿದೆ. 'ಯಂ' ಎಂಬ ಅಕ್ಷರವು ಪರಮಾತ್ಮನು ಮುಕ್ತ, ಸಂಸಾರಿಗಳಿಬ್ಬರನ್ನೂ ನಿಯಮಿಸುತ್ತಾನೆ ಎಂಬ ಪ್ರಮೇಯವನ್ನು ಹೇಳುತ್ತಿದೆ. 'ಯಂ' ಎಂಬುದರಿಂದ ಮುಕ್ತರು ಹಾಗೂ ಸಂಸಾರಿಗಳೆಂಬ ಎರಡು ರೀತಿಯ ಜೀವ ವರ್ಗಗಳನ್ನು ನಿಯಮಿಸುತ್ತಾನೆ ಎಂಬ ಅರ್ಥವು ಲಭಿಸುವುದರಿಂದ ಪರಮಾತ್ಮನಿಗೆ 'ಯಂ' ಎಂದು ಹೆಸರು. ಹೀಗೆ ಸತ್ಯಶಬ್ದವಾಚ್ಯನಾಗಿರುವನೆಂದು ಪರಮಾತ್ಮನನ್ನು ಯಾರು ನಿತ್ಯ ಉಪಾಸನೆ ಮಾಡುವರೋ ಅಂತಹ ಜ್ಞಾನಿಗಳು ವಿಷ್ಣುಲೋಕವನ್ನು ಪಡೆಯುತ್ತಾರೆ.

ಅಥ ಯ ಆತ್ಮಾ ಸ ಸೇತುರ್ವಿಧೃತಿರೇಷಾಂ ಲೋಕಾನಾಮ ಸಂಭೇದಾಯ । ನೈತಂ ಸೇತುಮಹೋರಾತ್ರೇ ತರತಃ । ನ ಜರಾ । ನ ಮೃತ್ಯುಃ । ನ ಶೋಕಃ । ನ ಸುಕೃತಮ್ । ನ ದುಷ್ಕೃತಮ್ । ಸರ್ವೇ ಪಾಪ್ಮಾನೋऽತೋ ನಿವರ್ತಂತೇ । ಅಪಹತ ಪಾಪ್ಮಾಹ್ಯೇಷ ಬ್ರಹ್ಮಲೋಕಃ ।

ಹೃದಯಾಕಾಶಸ್ಥನಾದ ಈ ಪರಮಾತ್ಮನು ಈ ಲೋಕಗಳೆಲ್ಲಾ ಒಂದರೊಳಗೊಂದು ಸೇರಿಕೊಳ್ಳದಂತೆ ಅಥವಾ ನಾಶವಾಗದಂತೆ ಅವುಗಳಿಗೆ ಆಶ್ರಯನೂ ಆಧಾರನೂ ಆಗಿರುವನು. ಈ ಪರಮಾತ್ಮನೇ ಹಗಲು ರಾತ್ರಿಗಳನ್ನು ಮೀರಿ ನಿಂತಿರುವನು ವಿನಹ ಹಗಲು ರಾತ್ರಿಗಳ ಪರಿಣಾಮವಾದ ಯಾವ ವಿಕಾರವೂ ಅವನಲ್ಲಿ ಉಂಟಾಗುವುದಿಲ್ಲ. ಆದ್ದರಿಂದ ಮುಪ್ಪು, ಸಾವು, ದುಃಖ, ಪಾಪ, ಪುಣ್ಯ ಇವ್ಯೆಲವೂ ಅವನನ್ನು ಎಂದೂ ಸ್ಪರ್ಶಿಸಲಾರವು. ಎಲ್ಲಾ

ಪಾಪಗಳೂ ಅವನಿಂದ ನಿತ್ಯವೂ ದೂರವಾಗಿವೆ. ಆದ್ದರಿಂದಲೇ ಅವನು ಪಾಪರಹಿತನೆಂದು ಪ್ರಸಿದ್ಧನಾಗಿದ್ದಾನೆ.

ತಸ್ಮಾದ್ವಾ ಏತಂ ಸೇತುಂ ತೀರ್ತ್ವಾಂಧಃ ಸನ್ನನಂಧೋ ಭವತಿ । ವಿದ್ಧಃ ಸನ್ನವಿದ್ಧೋ ಭವತಿ । ಉಪತಾಪೀ ಸನ್ನನುಪತಾಪೀ ಭವತಿ । ತಸ್ಮಾದ್ವಾ ಏತಂ ಸೇತುಂ ತೀರ್ತ್ವಾಪಿ ನಕ್ತಮಹರೇವಾಭಿನಿಷ್ಪದ್ಯತೇ । ಅಸಕೃತ್ ವಿಭಾತೋ ಹ್ಯೇವೈಷ ಬ್ರಹ್ಮಲೋಕಃ ॥

ಅವನಪ್ರಸಾದದಿಂದ ಸರ್ವಾಶ್ರಯನಾದ ಅವನನ್ನು ಹೊಂದುವುದಕ್ಕಾಗಿ ಸಂಸಾರವನ್ನು ದಾಟಿ,ಮೊದಲು ಸಂಸಾರಾವಸ್ಥೆಯಲ್ಲಿ ಅಜ್ಞಾನಿಯಾಗಿರುವ ಜೀವನು, ಬಳಿಕ ಜ್ಞಾನಿಯಾಗಿಯೂ, ಮದಲು ಇತರರ ಕೆಟ್ಟಮಾತಿನಿಂದ ಘಾಸಿಹೊಂದಿದವನು ಬಳಿಕ ಅಂಥ ಆಘಾತ ಇಲ್ಲದವನೂ, ಮೊದಲು ರೋಗಿಯಾಗಿದ್ದವನು ಬಳಿಕ ರೋಗರಹಿತನೂ ಆಗಿ ಪಾಪರಹಿತನಾದ ಪರಮಾತ್ಮನ ಪ್ರಸಾದದಿಂದ, ತಾನೂ ಪಾಪರಹಿತನೆನಿಸುತ್ತಾನೆ. ಅವನನ್ನು ಹೊಂದುವುದಕ್ಕಾಗಿ ಸಂಸಾರವನ್ನು ದಾಟಿ ಮುಕ್ತರೆನಿಸಿರುವ ಜೀವರಿಗೆ ರಾತ್ರಿಯೂ ಹಗಲೆನಿಸುತ್ತದೆ. ಬ್ರಹ್ಮನೆಂಬ ಈ ಸರ್ವಾಶ್ರಯನು ಸದಾ ಪ್ರಕಾಶಮಾನನಾಗಿಯೇ ಇರುವುದರಿಂದ ಅವನನ್ನು ಹೊಂದಿದ ಜೀವನಿಗೆ ರಾತ್ರಿಯೂ ಹಗಲೆನಿಸುವುದು ಯುಕ್ತವೇ ಆಗಿದೆ.

ತದ ಏವೈತಂ ಬ್ರಹ್ಮಲೋಕಂ ಬ್ರಹ್ಮಚರ್ಯೇಣಾನುವಿಂದಂತಿ ತೇಷಾಮೇವೈಷ ಬ್ರಹ್ಮಲೋಕಃ । ತೇಷಾಂ ಸರ್ವೇಷು ಲೋಕೇಷು ಕಾಮಚಾರೋ ಭವತಿ ॥

ಉಪಾಸಕರ ನಡುವೆ ಯಾರು ತ್ರಿಕರಣ ಪೂರ್ವಕವಾಗಿ ಅನುಷ್ಠಾನಗೈದು, ಗುಣಪರಿಪೂರ್ಣನೂ ಸರ್ವಾಶ್ರಯನೂ ಆದ ಪರಮಾತ್ಮನನ್ನು ತಿಳಿದುಕೊಳ್ಳುವರೋ ಅವರಿಗೆ ಮಾತ್ರ ಪರಮಾತ್ಮನ ಕೃಪಾಕಟಾಕ್ಷವು ಲಭಿಸುತ್ತದೆ. ಮತ್ತು ಬ್ರಹ್ಮದರ್ಶನವಾಗುತ್ತದೆ. ಅದರ ಫಲವಾಗಿ ಅವರಿಗೆ ಎಲ್ಲಾ ಲೋಕಗಳಲ್ಲಿ ಇಚ್ಛಾನುಸಾರವಾಗಿ ಸಂಚರಿಸುವ ಸೌಭಾಗ್ಯ ಲಭಿಸುತ್ತದೆ.

ಅಥ ಯದ್ಯಜ್ಞ ಇತ್ಯಾಚಕ್ಷತೇ ಬ್ರಹ್ಮಚರ್ಯಮೇವ ತತ್ ।
ಬ್ರಹ್ಮಚರ್ಯೇಣ ಹ್ಯೇವ ಯೋ ಜ್ಞಾತಾ ತಂ ವಿಂದತೇ ।
ಅಥ ಯದಿಷ್ಟಮಿತ್ಯಾಚಕ್ಷತೇ ಬ್ರಹ್ಮಚರ್ಯಮೇವ ತತ್ ।
ಬ್ರಹ್ಮಚರ್ಯೇಣ ಹ್ಯೇವೇಷ್ಟ್ವಾತ್ಮಾನಮನುವಿಂದತೇ ॥

ಜ್ಞಾನವೊಂದೇ ಮೋಕ್ಷಸಾಧನವಾಗಿರುವುದರಿಂದ ಜ್ಞಾನಿಗಳು ಯಾವ ಯಜ್ಞವನ್ನು ಮೋಕ್ಷಸಾಧನವೆನ್ನುವರೋ ಆ ಯಜ್ಞವು ಬ್ರಹ್ಮನ ಪ್ರಾಪ್ತಿಗೆ ಸಾಧನವಾದ ಜ್ಞಾನವಾಗಿದ್ದು

ಮಾನಸ ಬ್ರಹ್ಮಚರ್ಯವೇ ಆಗಿದೆ. ಕಾಯಿಕ ಹಾಗೂ ವಾಚಿಕ ಬ್ರಹ್ಮಚರ್ಯದ ಸಹಾಯದಿಂದ ಜ್ಞಾನವನ್ನು ಸಂಪಾದಿಸಿದವನು 'ಜ್ಞ' ಎನಿಸಿರುವ ಆ ಪರಮಾತ್ಮನನ್ನು ಹೊಂದುತ್ತಾನೆಂಬುದು ಪ್ರಸಿದ್ಧ. ಜ್ಞಾನಿಗಳು ಯಾವ ಇಷ್ಟವನ್ನು ಮೋಕ್ಷಸಾಧನವೆಂದು ಅನ್ನುವರೋ ಅದೂ ಕೂಡ ಬ್ರಹ್ಮಚರ್ಯವೇ ಆಗಿದೆ. ಮಾನಸಿಕ ಬ್ರಹ್ಮಚರ್ಯವೆನಿಸಿರುವ ಪರಬ್ರಹ್ಮಜ್ಞಾನದಿಂದ ಪರಬ್ರಹ್ಮನ ಪೂಜಾರೂಪವಾಗಿ ಯಾಗ ಮಾಡಿ ಉಪಾಸಕನು ಪರಬ್ರಹ್ಮನನ್ನು ಹೊಂದುತ್ತಾನೆಂಬುದು ಪ್ರಸಿದ್ಧವೇ ಆಗಿದೆ.

> ಅಥ ಯತ್ ಸತ್ರಾಯಮಿತ್ಯಾಚಕ್ಷತೇ ಬ್ರಹ್ಮಚರ್ಯಮೇವ ತತ್ । ಬ್ರಹ್ಮಚರ್ಯೇಣ ಹ್ಯೇವ ಸತಃ ಆತ್ಮನಃ ತ್ರಾಣಂ ವಿಂದತೇ । ಅಥ ಯನ್ಮೌನಮಿತ್ಯಾಚಕ್ಷತೇ ಬ್ರಹ್ಮಚರ್ಯಮೇವ ತತ್ । ಬ್ರಹ್ಮಚರ್ಯೇಣ ಹ್ಯೇವಾತ್ಮನಮನುವಿದ್ಯ ಮನುತೇ । ಅಥ ಯದನಾಶಕಾಯನಮಿತ್ಯಾಚಕ್ಷತೇ ಬ್ರಹ್ಮಚರ್ಯಮೇವ ತತ್ । ವಿಷ ಹ್ಯಾತ್ಮಾ ನ ಪಶ್ಯತಿ ಯಂ ಬ್ರಹ್ಮಚರ್ಯೇಣಾನುವಿಂದತೇ ।

ಜ್ಞಾನಿಗಳು ಯಾವ ಸತ್ರಾಯಣವನ್ನು ಮೋಕ್ಷಸಾಧನವೆನ್ನುವರೋ ಅದು ಬ್ರಹ್ಮಚರ್ಯವೇ ಆಗಿದೆ. ಮೋಕ್ಷಸಾಧನವಾದ ಬ್ರಹ್ಮವಿಷಯಕ ಜ್ಞಾನವೆಂಬ ಮಾನಸಿಕ ಬ್ರಹ್ಮಚರ್ಯದ ಸಹಾಯದಿಂದಲೇ ಸತ್ ಎಂಬ ಹೆಸರುಳ್ಳ ಪರಮಾತ್ಮನಿಂದ ರಕ್ಷಣೆಯನ್ನು ಜ್ಞಾನಿಯು ಪಡೆಯುತ್ತಾನೆ ಎಂಬ ವಿಷಯವು ಪ್ರಸಿದ್ಧವೇ ಆಗಿದೆ. ಜ್ಞಾನಿಗಳು ಯಾವ ಮೌನವನ್ನು ಮೋಕ್ಷಸಾಧನೆಯೆನ್ನುವರೋ ಅದೂ ಬ್ರಹ್ಮಚರ್ಯವೇ ಆಗಿದೆ. ಕಾಯಿ ವಾಚಿಕ ಬ್ರಹ್ಮಚರ್ಯದ ಸಹಾಯದಿಂದಲೇ ಶ್ರವಣಾದಿಗಳಿಂದ ಪರಮಾತ್ಮನನ್ನು ಪರೋಕ್ಷವಾಗಿ ಅರಿತು, ಅಪರೋಕ್ಷದಿಂದ ತಿಳಿಯುತ್ತಾನೆ. ಅಪರೋಕ್ಷದಿಂದ ತಿಳಿದು ಮೋಕ್ಷದಲ್ಲಿ ಧ್ಯಾನಿಸುತ್ತಾನೆ ಎಂಬುದೂ ಪ್ರಸಿದ್ಧವೇ ಆಗಿದೆ. ಯಾವ ಅನಾಶಕಾಯನವನ್ನು ಜ್ಞಾನಿಗಳು ಮೋಕ್ಷಸಾಧನವೆನ್ನುವರೋ ಅದೂ ಬ್ರಹ್ಮಚರ್ಯವೇ ಆಗಿದೆ. ಬ್ರಹ್ಮಚರ್ಯದ ಸಹಾಯದಿಂದ ಜ್ಞಾನಿಯು ಯಾವ ಪರಮಾತ್ಮನನ್ನು ಅರಿಯುವನೋ ಅಂತಹ ಪರಮಾತ್ಮನು ಆ ಜ್ಞಾನಿಯ ವಿಷಯದಲ್ಲಿ ನಾಶವಾಗುವುದಿಲ್ಲ. ಅಂದರೆ ಪರಮಾತ್ಮನು ಅವನನ್ನು ಕೈ ಬಿಡುವುದಿಲ್ಲ. ಇದು 'ತಸ್ಯಾಹಂ ನ ಪ್ರಣಶ್ಯಾಮಿ' ಎಂದು ಮುಂತಾದ ವಚನಗಳಿಂದ ಪ್ರಸಿದ್ಧವೇ ಆಗಿದೆ.

> ಅಥ ಯದರಣ್ಯಾಯನಮಿತ್ಯಾಚಕ್ಷತೇ ಬ್ರಹ್ಮಚರ್ಯಮೇವ ತತ್ । ಅರಶ್ಚ ಹ ವೈ ಣ್ಯಶ್ಚಾರ್ಣವೌ ಬ್ರಹ್ಮಲೋಕೇ ತೃತೀಯಸ್ಯಾಮಿತೋ ದಿವಿ । ತದ್ಧೈರಂ ಮದೀಯಂ ಸರಃ । ತದಶ್ವತ್ಥಃ ಸೋಮಸವನಃ । ತದಪರಾಜಿತಾ ಪೂಃ । ಬ್ರಹ್ಮಣಃ ಪ್ರಭುವಿಮಿತಂ

ಹಿರಣ್ಮಯಮ್ । ತದ್ಯ ಏವೈತಾವರಂ ಚ ವೈ ಣ್ಯಂ ಚಾರ್ಣವೌ ಬ್ರಹ್ಮಲೋಕೇ ಬ್ರಹ್ಮಚರ್ಯೇಣಾನುವಿಂದತೇ, ತೇಷಾಮೇವೈಷ ಬ್ರಹ್ಮಲೋಕಃ ತೇಷಾಂ ಸರ್ವೇಷು ಲೋಕೇಷು ಕಾಮಚಾರೋ ಭವತಿ ॥

ಜ್ಞಾನಿಗಳು ಯಾವ ಅರಣ್ಯಾಯನವನ್ನು ಮೋಕ್ಷಸಾಧನವೆನ್ನುವರೋ ಅದೂ ಬ್ರಹ್ಮಚರ್ಯವೇ ಆಗಿದೆ. ಮೂರನೆಯ ದ್ಯುಲೋಕವಾದ ಶ್ವೇತದ್ವಿಪದಲೀಲ ಅರ ಹಾಗೂ ಣ್ಯ ಎಂಬ ಹೆಸರುಳ್ಳ ಸಮುದ್ರಗಳಂತಹ ಎರಡು ಸರೋವರಗಳಿವೆ. ಲಕ್ಷ್ಯಾತ್ಮಕವಾದ ಸುಖಕರವಾದ ಇನ್ನೊಂದು ಸರೋವರೂ ಆ ಬ್ರಹ್ಮಲೋಕದಲ್ಲಿದೆ. ಅಮೃತರಸವನ್ನು ಸುರಿಸುತ್ತಿರುವ ಅಶ್ವತ್ಥವೃಕ್ಷ ಸಮೂಹವೂ ಇದ. ಅಪರಾಜಿತಾ ಎಂಬ ಹೆಸರುಳ್ಳ ಪರಬ್ರಹ್ಮನ ಪುರವೂ ಇದೆ. ಇಲ್ಲಿ ಪರಮಾತ್ಮನಿಗೆ ತಕ್ಕ ಪರಿಮಾಣವುಳ್ಳ ಲಕ್ಷ್ಯಾತ್ಮಕವಾದ ಸುವರ್ಣಮಯ ಪರ್ಯಂಕ ಒಂದಿದೆ.

ಪರಮಾತ್ಮ ಜ್ಞಾನವೆಂಬ ಬ್ರಹ್ಮಚರ್ಯದ ಸಹಾಯದಿಂದ ಯಾರು ಈ ಅರ ಹಾಗೂ ಣ್ಯಗಳೆಂಬ ಸರೋವರಗಳನ್ನು ಹೊಂದುತ್ತಾರೋ ಅಂತಹ ಜ್ಞಾನಿಗಳಿಗೇ ಈ ಬ್ರಹ್ಮಲೋಕವು ಲಭಿಸುತ್ತದೆ. ಅವರಿಗೇ ತಮಗೆ ಯೋಗ್ಯವಾದ ಎಲ್ಲಾ ಲೋಕಗಳನ್ನೂ ಇಚ್ಛಾನುಸಾರವಾಗಿ ಸಂಚರಿಸುವ ಭಾಗ್ಯವೂ ಕೈಗೂಡುತ್ತದೆ.

ಅಥ ಯಾ ಏತ ಹೃದಯಸ್ಯ ನಾಡ್ಯಃ ತಾಃ ಪಿಂಗಲಸ್ಯಾಣಿಮ್ನಃ ತಿಷ್ಠಂತಿ ಶುಕ್ಲಸ್ಯ ನೀಲಸ್ಯ ಪೀತಸ್ಯ ಲೋಹಿತಸ್ಯೇತಿ । ಅಸೌ ವಾ ಆದಿತ್ಯಃ ಪಿಂಗಲಃ । ಏಷ ಶುಕ್ಲಃ । ಏಷ ನೀಲಃ । ಏಷ ಪೀತಃ । ಏಷ ಲೋಹಿತಃ।

ಸುಷುಮ್ನಾ, ನಾಂದಿನೀ, ಪಿಂಗಲಾ, ವಜ್ರಿಕಾ ಹಾಗೂ ಇಡಾ ಎಂಬ ಹೆಸರುಳ್ಳ ಯಾವ ಐದು ಹೃದಯದ ನಾಡಿಗಳಿವೆಯೋ ಅವು ಕ್ರಮವಾಗಿ ಕೆಂಪುಮಿಶ್ರಿತ ಕಪ್ಪುಬಣ್ಣವುಳ್ಳ ಅತಿಸೂಕ್ಷ್ಮವಾದ ಸಂಕರ್ಷನಿಗೂ, ಶುಕ್ಲವರ್ಣನಾದ ಅಣುಪರಿಮಾಣವುಳ್ಳ ವಾಸುದೇವನಿಗೂ, ನೀಲವರ್ಣನಾಗಿದ್ದು, ಅಣುಪರಿಮಿತಿಯುಳ್ಳ ಅನಿರುದ್ಧನಿಗೂ, ಬಂಗಾರಬಣ್ಣವಿದ್ದು ಅಣುರೂಪವಾದ ಪ್ರದ್ಯುಮ್ನನಿಗೂ, ರಕ್ತವರ್ಣನಾಗಿದ್ದು ಅಣುಸ್ವರೂಪನಾದ ನಾರಾಯಣನಿಗೂ ಆಧಾರವಾಗಿವೆ ಎಂದು ಉಪಾಸನೆಗೈಯಬೇಕು. ಜಗತ್ತಿಗೆ ಆದಿಯಾಗಿರುವುದರಿಂದ 'ಆದಿತ್ಯ' ಎಂಬ ಹೆಸರುಳ್ಳ ಈ ಪರಮಾತ್ಮನು ಆದಿತ್ಯನಲ್ಲಿರುವನೆಂದೂ, ಈ ಸೂರ್ಯಮಂಡಲದಲ್ಲಿ ಆದಿತ್ಯ ಎಂಬ ಹೆಸರುಳ್ಳ ಕೆಂಪುಮಿಶ್ರಿತಕಪ್ಪುವರ್ಣವುಳ್ಳ ಸಂಕರ್ಷಣ, ಶುಕ್ಲವರ್ಣ ವಾಸುದೇವ, ನೀಲವರ್ಣ ಅನಿರುದ್ಧ,

ಬಂಗಾರದ ವರ್ಣವುಳ್ಳ ಪ್ರದ್ಯುಮ್ನ, ಕೆಂಪುವರ್ಣವುಳ್ಳ ನಾರಾಯಣ ಹೀಗೆ ಪರಮಾತ್ಮನ ಐದುರೂಪಗಳೂ ಇವೆ ಎಂದೂ ಉಪಾಸಿಸಬೇಕು.

> ತದ್ಯಥಾ ಮಹಾಪಥ ಆತತ ಉಭೌ ಗ್ರಾಮೌ ಗಚ್ಛತೀಮಂ ಚಾಮುಂ ಚೈವಮೇವೈತಾ ಆದಿತ್ಯಸ್ಯ ರಶ್ಮಯ ಉಭೌ ಲೋಕೌ ಗಚ್ಛಂತೀಮಂ ಚಾಮುಂಚ। ಅಭ್ಯೋ ನಾಡೀಭ್ಯಃ ಪ್ರತಾಯಂತೇ ತೇऽಮುಷ್ಮಿನ್ನಾದ್ಯೇತ ಸೃಪ್ತಾಃ।

ಯಾವ ರೀತಿಯಲ್ಲಿ ದೊಡ್ಡದಾದ ರಸ್ತೆಯು ಹತ್ತಿರದಲ್ಲಿರುವ ಈ ಗ್ರಾಮ ಹಾಗೂ ದೂರದಲ್ಲಿರುವ ಆ ಗ್ರಾಮ ಹೀಗೆ ಎರಡು ಗ್ರಾಮಗಳನ್ನು ವ್ಯಾಪಿಸಿಕೊಂಡಿರುತ್ತದೋ ಹಾಗೆಯೇ, ಆದಿತ್ಯನಲ್ಲಿರುವ ಆದಿತ್ಯನಾಮಕ ಪರಮಾತಮ್ನ ಕಿರಣಗಳು ಸೂರ್ಯಕಿರಣಗಳಲ್ಲಿ ವ್ಯಾಪ್ತವಾಗಿದ್ದು ಈ ಜೀವನನ್ನು ಆ ಸೂರ್ಯನನ್ನು ಹೀಗೆ ಎರಡು ಲೋಕಗಳನ್ನು ವ್ಯಾಪಿಸಿಕೊಂಡಿವೆ. ಆ ಸೂರ್ಯನಿಂದ ಹೊರಟು ಸೂರ್ಯನಲ್ಲಿರುವವುಗಳಾಗಿ ಯಾವ ಕಿರಣಗಳು ಕಾಣಿಸುತ್ತಿವೆಯೋ ಅವು ಜೀವನ ಹೃದಯದಲ್ಲಿರುವ ನಾಡಿಗಳಲ್ಲಿ ವ್ಯಾಪ್ತವಾಗಿವೆ. ಈ ನಾಡಿಗಳಿಂದ ಹೊರಟು ನಾಡಿಗಳಲ್ಲಿರುವಂತೆ ಯಾವ ಕಿರಣಗಳು ಕಾಣಿಸುತ್ತಿವೆಯೋ ಅವು ಸೂರ್ಯನಲ್ಲಿ ವ್ಯಾಪಿಸಿವೆ.

> ತದ್ಯತ್ರೈತತ್ ಸುಪ್ತಃ ಸಮಸ್ತಃ ಸಂಪ್ರಸನ್ನಃ ಸ್ವಪ್ನಂ ನ ವಿಜಾನಾತ್ಯಾಸು ತದಾ ನಾಡೀಷು ಸೃಪ್ತೋ ಭವತಿ। ತಂ ನ ಕಶ್ಚನ ಪಾಪ್ಮಾ ಸ್ಪೃಶತಿ। ತೇಜಸಾ ಹಿ ತದಾ ಸಂಪನ್ನೋನ ಭವತಿ।

ಸುಪ್ತಜೀವನು ಎಲ್ಲ ಇಂದ್ರಿಯ ವ್ಯಾಪಾರಗಳನ್ನು ತೊರೆದು ಸ್ವರೂಪ ಸುಖವನ್ನನುಭವಿಸುತ್ತಾ, ಯಾವಾಗ ಸ್ವಪ್ನವನ್ನು ಕಾಣುವುದಿಲ್ಲವೋ ಆಗ ಸುಷುಮ್ನಾನಾಡಿ-ಯಲ್ಲಿರುವ ಪರಮಾತ್ಮನನ್ನು ಹೊಂದಿರುತ್ತಾನೆ. ಆಗ ಜೀವನು ತೇಜೋರೂಪನಾದ ಪರಮಾತ್ಮನಿಂದ ಕೂಡಿಕೊಂಡಿರುವ ಕಾರಣ ಯಾವ ಪಾಪವೂ ಅವನನ್ನು ಸ್ಪರ್ಶಿಸುವುದಿಲ್ಲ.

> ಅಥ ಯತ್ರೈತದಬಲಿಮಾನಂ ನೀತೋ ಭವತಿ ತಮಭಿತ ಆಸೀನಾ ಆಹುಃ 'ಜಾನಿಸಿ ಮಾಂ ? ಜಾನಾಸಿ ಮಾಂ?' ಇತಿ। ಸ ಯಾವದಸ್ಮಾತ್ ಶರೀರಾದನ್ಮುಂತೋ ಭವತಿ ತಾವತ್ ಜಾನಾತಿ।

ಯಾವಾಗ ಹೃದಯಕಮಲದಲ್ಲಿರುವ ಪರಮಾತ್ಮನನ್ನು ಉಪಾಸಿಸುವ ಜ್ಞಾನಿಯು ಜರಾದಿಗಳಿಂದ ಶರೀರದೌರ್ಬಲ್ಯವನ್ನು ಹೊಂದುವನೋ ಆಗ ಅವನ ಸುತ್ತಲೂ ಕುಳಿತಿರುವ

ಬಂಧುಗಳು ನನ್ನ ಪರಿಚಯವಾಗುತ್ತಿದೆಯೋ ? ನನ್ನ ಪರಿಚಯವಾಗುತ್ತಿದೆಯೋ ? ಎಂದು ಪ್ರಶ್ನಿಸುತ್ತಾರೆ. ಆ ಜ್ಞಾನಿಯು ಎಷ್ಟರತನಕ ತನ್ನ ಶರೀರದಿಂದ ಉತ್ಕ್ರಮಣ ಹೊಂದುವುದಿಲ್ಲವೋ ಅಲ್ಲಿಯ ತನಕ ಅವರನ್ನು ಗುರುತಿಸಿಕೊಳ್ಳುತ್ತಾನೆ.

ಅಥ ಯತ್ರೈತಸ್ಮಾತ್ ಶರೀರಾದುತ್ಕ್ರಮತ್ಯಥೈತೈರೇವ ರಶ್ಮಿಭಿರೂರ್ಧ್ವ ಆಕ್ರಮತೇ। ಸ ಓಮಿತಿವಾಹೋದ್ವಾಮೀಯತೇ। ಸ ಯಾವತ್ ಕ್ಷಿಪ್ಯೇತ್ ಮನಃ ತಾವದಾದಿತ್ಯಂ ಗಚ್ಛತಿ। ಏತದ್ವೈ ಖಲು ಲೋಕದ್ವಾರಂ ವಿದುಷಾಂ ಪ್ರಪದನಮ್। ನಿರೋಧೋ೬-ವಿದುಷಾಮ್।

ಯಾವಾಗ ಆ ಜ್ಞಾನಿಯು ಈ ಶರೀರದಿಂದ ಉತ್ಕ್ರಮಣ ಹೊಂದುತ್ತಾನೋ ಆಗ ನಾಡಿಯಲ್ಲಿ ವ್ಯಾಪ್ತವಾಗಿರುವ ಸೂರ್ಯರಶ್ಮಿಗಳಿಂದ ನಾಡೀದ್ವಾರವನ್ನು ಕಂಡು, ಊರ್ಧ್ವಲೋಕಕ್ಕೆ ಹೊರಡುತ್ತಾನೆ. ಓಂಕಾರವನ್ನು ಪಠಿಸುತ್ತಾ ಸಂಚರಿಸುವ ವಾಯುದೇವರಿಂದ ದಿವ್ಯವಾದ ಚಿದ್ರೂಪ ಮಂಗಳಸ್ವರೂಪವನ್ನು ಹೊಂದುತ್ತಾನೆ. ಅವನನ್ನು ವಾಯುದೇವರು ಯಾವಾಗ ಕರೆದುಕೊಂಡು ಹೋಗಲು ಮನಸ್ಸು ಮಾಡುವರೋ ಆಗ ಅವನು ಆದಿತ್ಯಾಂತರ್ಗತ ಪರಮಾತ್ಮನನ್ನು ಸೇರುತ್ತಾನೆ. ಆ ಪರಮಾತ್ಮನು ಜ್ಞಾನಿಗಳಿಗೆ ಬ್ರಹ್ಮಲೋಕಕ್ಕೆ ಹೋಗಲು ದ್ವಾರವಾಗಿದ್ದು ಅವರಿಂದ ಹೊಂದಲು ಯೋಗ್ಯ ಸ್ಥಾನವಾಗಿರುವನು. ಅಜ್ಞಾನಿಗಳಿಗೆ ಬ್ರಹ್ಮಲೋಕಕ್ಕೆ ಹೋಗದಂತೆ ಪ್ರತಿಬಂಧಕನೂ ಆಗಿರುವನು.

ತದೇಷ ಶ್ಲೋಕಃ -

ಶತಂ ಚೈಕಾ ಚ ಹೃದಯಸ್ಯ ನಾಡ್ಯಃ
ತಾಸಾಂ ಮೂರ್ಧಾನಮಭಿನಿಃಸೃತೈಕಾ।
ತಯೋರ್ಧ್ವಮಾಯನ್ನಮೃತತ್ವಮೇತಿ
ವಿಷ್ವಙ್ ಅನ್ಯಾ ಉತ್ಕ್ರಮಣೇ ಭವಂತಿ॥
ಉತಕ್ರಮಣೇ ಭವಂತಿ॥

ಶರೀರದಲ್ಲಿ ಮೋಕ್ಷಮಾರ್ಗವಾದ ಒಂದು ನಾಡಿ ಇದೆ ಎಂಬ ವಿಷಯದಲ್ಲಿ ಈ ಶ್ಲೋಕದ ಸಂವಾದವಿದೆ - ಹೃದಯಕಮಲದಲ್ಲಿರುವ ಪರಮಾತ್ಮನು ವಾಸಿಸುವ ನಾಡಿಗಳು ಹೃದಯಲ್ಲಿ ನೂರಾ ಒಂದು ಇವೆ. ಅವುಗಳಲ್ಲಿ ಒಂದಾದ ಸುಷುಮ್ನಾನಾಡಿಯು ಶಿರಸ್ಸಿನ ಕಡೆಗೆ ವ್ಯಾಪಿಸಿಕೊಂಡಿದೆ. ಆ ನಾಡಿಯ ಮೂಲಕ ಊರ್ಧ್ವಲೋಕಕ್ಕೆ ಹೋಗವು ಜ್ಞಾನಿಯು

ಮೋಕ್ಷವನ್ನು ಪಡೆಯುತ್ತಾನೆ. ಇತರ ನಾಡಿಗಳು ಬೇರೆ ಲೋಕಗಳನ್ನು ಹೊಂದಲು ಮಾರ್ಗಗಳಾಗಿವೆ.

'ಯ ಆತ್ಮಾऽಪಹತಪಾಪ್ಮಾ ವಿಜರೋ ವಿಮೃತ್ಯುರ್ವಿಶೋಕೋऽ-ವಿಜಿಘತ್ಸೋ'ಪಿಪಾಸಃ ಸತ್ಯಕಾಮಃ ಸತ್ಯಸಂಕಲ್ಪಃ ಸೋऽನ್ವೇಷ್ಟವ್ಯಃ । ಸ ವಿಜಿಜ್ಞಾಸಿತವ್ಯಃ । ಸ ಸರ್ವಾಂಶ್ಚ ಲೋಕಾನಾಪ್ನೋತಿ ಸರ್ವಾಂಶ್ಚ ಕಾಮಾನ್ ಯಃ ತಮಾತ್ಮಾನಮನುವಿದ್ಯ ವಿಜಾನಾತಿ' ಇತಿ ಹ ಪ್ರಜಾಪತಿರುವಾಚ।

ಯಾವ ಪರಮಾತ್ಮನು ಪಾಪಲೇಪ ರಹಿತನೂ ಅಜರಾಮರನೂ, ಶೋಕರಹಿತನೂ, ಹಸಿವೆ ತೃಷೆಗಳೆಂಬ ಪೀಡೆಗಳಿಗೆ ಒಳಗಾಗದವನೂ, ನಿಯಮೇನ ಫಲಿಸತಕ್ಕ ಇಚ್ಛೆ ಹಾಗೂ ಸಂಕಲ್ಪವುಳ್ಳವನೂ ಆಗಿರುವನೋ ಅಂತಹ ಪರಮಾತ್ಮನನ್ನು ಶ್ರವಣ ಮನನ ಧ್ಯಾನಗಳ ಮೂಲಕ ಕಂಡುಕೊಳ್ಳಬೇಕು. ಯಾರು ಹೀಗೆ ಪರಮಾತ್ಮನನ್ನು ಪರೋಕ್ಷವಾಗಿ ತಿಳಿದುಕೊಳ್ಳುವ ಮೂಲಕ ಸಾಕ್ಷಾತ್ಕರಿಸುತ್ತಾನೋ ಅವನು ಎಲ್ಲ ಲೋಕಗಳನ್ನೂ, ಎಲ್ಲ ಅಭೀಷ್ಟಪದಾರ್ಥಗಳನ್ನೂ ಹೊಂದುತ್ತಾನೆ. ಹೀಗೆ ಚತುರ್ಮುಖಬ್ರಹ್ಮದೇವರು ದೇವತೆಗಳ ಹಾಗೂ ಅಸುರರ ಸಮ್ಮುಖದಲ್ಲಿ ಹೇಳಿದರು.

ತದ್ಧೋಭಯೋ ದೇವಾಸುರಾ ಅನುಬುಬುಧಿರೇ । ತೇ ಹೋಚುಃ 'ಹಂತ ತಮಾತ್ಮಾನಮನ್ವಿಚ್ಛಾಮೋ ಯಮಾತ್ಮಾನಮನ್ವಿಷ್ಯ ಸರ್ವಾಂಶ್ಚ ಲೋಕಾನಾಪ್ನೋತಿ ಸರ್ವಾಂಶ್ಚ ಕಾಮಾನ್ ಇತಿ' ಇಂದ್ರೋ ಹ ವೈ ದೇವಾನಾಮಭಿಪ್ರವವ್ರಾಜ । ವಿರೋಚನೋऽಸುರಾಣಾಮ್ । ತೌ ಹಾಸಂವಿದಾನಾವೇವ ಸಮಿತ್ಪಾಣೀ ಪ್ರಜಾಪತಿಸಕಾಶಮಾಜಗ್ಮತುಃ।

ಹೀಗೆ ಬ್ರಹ್ಮದೇವರು ಹೇಳಿದುದನ್ನು ದೇವತೆಗಳು ಹಾಗೂ ಅಸುರರು ಕೇಳಿ ತಿಳಿದರು. 'ಯಾವ ಪರಮಾತ್ಮನನ್ನು ಅರಿತುಕೊಂಡರೆ ಎಲ್ಲಾ ಲೋಕಗಳನ್ನು ಪಡೆದು ಎಲ್ಲಾ ಕಾಮನೆಗಳನ್ನು ಕೈಗೂಡಿಸಿಕೊಳ್ಳಬಹುದೋ ಅಂತಹ ಪರಮಾತ್ಮನನ್ನು ಪರೋಕ್ಷವಾಗಿ ತಿಳಿದು ಸಾಕ್ಷಾತ್ಕರಿಸಿಕೊಳ್ಳೋಣ' ಎಂದು ಉತ್ಸುಕತೆಯಿಂದ ದೇವತೆಗಳು, ಇಂದ್ರನಿಗೂ, ಅಸುರರು ವಿರೋಚನನಿಗೂ ಹೇಳಿದರು. ದೇವತೆಗಳಿಗಾಗಿ ದೇವೇಂದ್ರನೂ, ಅಸುರರಾಗಿ ವಿರೋಚನನೂ ಬ್ರಹ್ಮದೇವರಲ್ಲಿ ಉಪದೇಶ ಪಡೆಯಲು ಬಂದರು. ಸಮಿತ್‌ಪಾಣಿಗಳಾಗಿದ್ದ ಅವರಿಬ್ಬರೂ ಒಂದೇ ಕಾರ್ಯಕ್ಕಾಗಿ ಹೊರಟಿದ್ದರೂ ಪರಸ್ಪರ ಪ್ರೀತಿ ಹಾಗೂ ಮಾತುಕತೆ ಇಲ್ಲದವರಾಗಿಯೇ ಬ್ರಹ್ಮದೇವರನ್ನು ಸಮೀಪಿಸಿದರು.

ತೌ ಹ ದ್ವಾತ್ರಿಂಶತಂ ವರ್ಷಾಣಿ ಬ್ರಹ್ಮಚರ್ಯಮೂಷತುಃ। ತೌ ಹ ಪ್ರಜಾಪತಿರುವಾಚ 'ಕಿಮಿಚ್ಛಂತಾವವಾಸ್ತಂ' ಇತಿ। ತೌ ಹೋಚತುಃ 'ಯ ಆತ್ಮಾऽಪಹತಪಾಪ್ಮಾ ವಿಜರೋ ವಿಮೃತ್ಯುರ್ವಿಶೋಕೋऽವಿಜಿಘತ್ಸೋऽಪಿಪಾಸಃ ಸತ್ಯಕಾಮಃ ಸತ್ಯಸಂಕಲ್ಪಃ ಸೋऽನ್ವೇಷ್ಟವ್ಯಃ। ಸ ವಿಜಿಜ್ಞಾಸಿತವ್ಯಃ। ಸ ಸರ್ವಾಂಶ್ಚ ಲೋಕಾನಾಪ್ನೋತಿ ಸರ್ವಾಂಶ್ಚ ಕಾಮಾನ್ । ಯಃ ತಮಾತ್ಮಾನಮನುವಿದ್ಯ ವಿಜಾನಾತೀತಿ ಹ ಭಗವತೋ ವಚೋ ಹರಂತೋ ವೇದಯಂತೇ। ತಮಿಚ್ಛಂತಾವವಾಸ್ತಂ' ಇತಿ ॥

ಆ ಇಂದ್ರ ವಿರೋಚನರಿಬ್ಬರೂ ಮೂವತ್ತೆರಡೂ ವರ್ಷಗಳ ಕಾಲ ಬ್ರಹ್ಮಚರ್ಯ ನಡೆಸುತ್ತ ಬ್ರಹ್ಮದೇವರ ಬಳಿ ವಾಸ ಮಾಡಿದರು. ಬ್ರಹ್ಮದೇವರು ಅವರನ್ನು 'ಯಾವುದರ ಅಪೇಕ್ಷೆಯಿಂದ ನೀವು ನ್ನ ಹತ್ತಿರ ವಾಸವಾಗಿರುವಿರಿ' ಎಂದು ಕೇಳಿದರು. ಅದಕ್ಕುತ್ತರವಾಗಿ ಅವರಿಬ್ಬರೂ 'ಯಾವ ಪರಮಾತ್ಮನು ಪಾಪ, ವೃದ್ಧಾಪ್ಯ, ಮರಣ, ಶೋಕ ಇವುಗಳಿಂದ ದೂರನೂ, ಹಸಿವೆ ಬಾಯಾರಿಕೆಗಳಿಂದ ಬಳಲಿದವನೂ, ನಿಯಮೇನ ಫಲಿಸುವ ಇಚ್ಛೆ ಹಾಗೂ ಸಂಕಲ್ಪಗಳುಳ್ಳವನೂ ಆಗಿರುನೋ, ಅವನ ಶ್ರವಣ ಮನನ ಧ್ಯಾನಗಳ ಮೂಲಕ ಸಾಕ್ಷಾತ್ಕಾರವೆಂಬ ಅನ್ವೇಷಣೆಯನ್ನು ಮಾಡಬೇಕು. ಯಾರು ಹೀಗೆ ಅವನನ್ನು ಸಾಕ್ಷಾತ್ಕರಿಸುವನೋ ಅವನು ಎಲ್ಲಾ ಲೋಕಗಳನ್ನು ಪಡೆದು ತನ್ನ ಎಲ್ಲಾ ಕಾಮನೆಗಳನ್ನು ಕೈಗೂಡಿಸಿಕೊಳ್ಳುವನು, ಎಂಬ ಪೂಜ್ಯರಾದ ತಮ್ಮ ಮಾತನ್ನು ಕೇಳಿ ದೇವತೆಗಳೂ ಅಸುರರೂ ಅಂತಹ ಪರಮಾತ್ಮನನ್ನು ಅರಿತುಕೊಳ್ಳಲು ಅಪೇಕ್ಷಿಸುತ್ತಿರುವರು. ಅವರಿಗೆ ಉಪದೇಶಿಸುವುದಕ್ಕಾಗಿ ತಮ್ಮಿಂದ ತಿಳಿಯಲು ನಾವು ತಮ್ಮ ಹತ್ತಿರ ವಾಸಮಾಡಿಕೊಂಡಿರುವೆವು ಎಂದು ಹೇಳಿದರು.

ತೌ ಹ ಪ್ರಜಾಪತಿರುವಾಚ 'ಯ ಏಷೋಂತರಕ್ಷಿಣಿ ಪುರುಷೋ ದೃಶ್ಯತೇ ಏಷ ಆತ್ಮೇತಿ ಹೋವಾಚ। ಏತದಮೃತಭಯಮೇತತ್ ಬ್ರಹ್ಮ' ಇತಿ। 'ಅಥ ಯೋऽಯಂ ಭಗವೋऽಪ್ಸು ಪರಿಖ್ಯಾಯತೇ ಯಶ್ಚಾಯಮಾದರ್ಶೇ ಕತಮ ಏಷ' ಇತಿ । 'ಏಷ ಉ ಏವೈಷು ಸರ್ವೇಷ್ವಂತೇಷು ಪರಿಖ್ಯಾಯತ' ಇತಿ ಹೋವಾಚ ॥

ಅವರಿಗೆ ಬ್ರಹ್ಮದೇವರು ಸಮ್ಮುಗ್ಧವಾಗಿ ಉಪದೇಶಿಸಿದರು - 'ಕಣ್ಣಿನೊಳಗೆ ಯಾವ ಪುರುಷನು ಕಾಣಿಸುತ್ತಿರುವನೋ ಅವನೇ ಪಾಪಾದಿರಹಿತನಾದ ಈ ಪರಮಾತ್ಮನು. ಅವನು ನಾಶರಹಿತನೂ, ಭಯರಹಿತನೂ, ಆದ ಪರಬ್ರಹ್ಮನಾಗಿರುವನು' ಎಂದು. ಆಗ ಇಂದ್ರ, ವಿರೋಚನರಿಬ್ಬರೂ 'ಪೂಜ್ಯರೇ ! ನೀರಿನಲ್ಲಿ ಹಾಗೂ ಕನ್ನಡಿಯಲ್ಲಿ ಯಾವ ಪುರುಷನು ಗೋಚರಿಸುತ್ತಿರುವನೋ ಅವನ ಯಾರು ?' ಎಂದು ಪ್ರಶ್ನಿಸಲು 'ಕಣ್ಣಿನೊಳಗಿರುವ ಈ

ಪುರುಷನೇ ನೀರು ಕನ್ನಡಿ ಮೊದಲಾದ ಸ್ಥಾನಗಳಲ್ಲೂ ಎಲ್ಲೆಡೆ ಕಾಣಿಸುತ್ತಿರುವನು' ಎಂದು ಬ್ರಹ್ಮದೇವರು ಉತ್ತರಿಸಿದರು.

ಬೃಹದಾರಣ್ಯಕ ಹಾಗೂ ಛಾಂದೋಗ್ಯಗಳ ಅಭಿಪ್ರಾಯ ಮಹಾವಿಷ್ಣುವೇ

तत्वप्रदीपः – ''य आत्माऽपहतपाप्मा विजरो विमृत्युर्विशोकोऽविजिघत्सोऽपिपाससस्सत्यकामस्सत्यसङ्कल्पः'' इत्यादिभ्यः। न चाऽकाशजीवयोरेते गुणास्सम्भवन्तीत्याह – 'योऽशनायापिपासे' इत्यादिना बृहदारण्यकवाक्येन 'स एषः' इत्यादिना छन्दोगवाक्येन च ।

'य आत्माऽपहतपाप्मा विजरो विमृत्युर्विशोकोऽविजिघत्सोऽपिपासः सत्यकामः सत्यसंकल्पः' 'ಅಲ್ಲಿ ನೆಲೆಸಿರುವ ಆತ್ಮನಾದರೂ ಸಕಲ ಪಾಪಗಳಿಂದ ರಹಿತನಾಗಿದ್ದಾನೆ. ಮುಪ್ಪು, ಮರಣ, ಶೋಕ, ಹಸಿವು, ನೀರಡಿಕೆ ಮೊದಲಾದವುಗಳಿಂದ ರಹಿತನಾಗಿದ್ದಾನೆ. ಸತ್ಯಕಾಮನು ಸತ್ಯಸಂಕಲ್ಪನೂ ಆಗಿದ್ದಾನೆ' ಇತ್ಯಾದಿ ಶ್ರುತಿಯು ಮಹಾವಿಷ್ಣುವಿನ ಅಸಾಧಾರಣಗುಣಗಳನ್ನೇ ಪ್ರತಿಪಾದನೆ ಮಾಡುತ್ತಿದೆ. ದಹರಾಕಾಶಕ್ಕಾಗಲೀ, ಜೀವನಿಗಾಗಲೀ ಈ ಗುಣಗಳಲ್ಲಿ ಯಾವುದೇ ಒಂದು ಇರಲು ಸಾಧ್ಯವೇ ಇಲ್ಲ. ಈ ಅಭಿಪ್ರಾಯದಿಂದ 'ಯೋऽಶನಾಯಾಪಿಪಾಸೇ' ಇತ್ಯಾದಿಯಾಗಿ ಬೃಹದಾರಣ್ಯಕವಾಕ್ಯವನ್ನು ಉದಾಹರಣೆ ನೀಡುತ್ತಿದ್ದಾರೆ. ಮತ್ತು 'ಸ ಏಷಃ ಸರ್ವೇಭ್ಯಃ' ಇತ್ಯಾದಿಯಾಗಿ ಛಾಂದೋಗ್ಯವಾಕ್ಯವನ್ನೂ ಕೂಡ ಉಲ್ಲೇಖಿಸಿದ್ದಾರೆ.

ವಿವರಣೆ - 'ಯ ಆತ್ಮಾ' ಇತ್ಯಾದಿಯಾದ ಛಾಂದೋಗ್ಯ ವಾಕ್ಯದಲ್ಲಿ, ಹಾಗೂ 'ಯೋऽಶನಾಯ' ಇತ್ಯಾದಿ ಬೃಹದಾರಣ್ಯಕ ವಾಕ್ಯದಲ್ಲಿ ಷಡೂರ್ಮಿಗಳನ್ನು ದಾಟದವನು ಜೀವ. ಷಡೂರ್ಮಿಗಳನ್ನು ದಾಟಿದವನು ಪರಮಾತ್ಮ ಎಂದು ಹೇಳಲಾಗಿದೆ ಎಂಬ ಅರ್ಥವನ್ನು ಹೇಳಲಾಯಿತು. ಆದರೆ ಷಡೂರ್ಮಿಗಳನ್ನು ದಾಟಿದವನು ಶ್ರೀಹರಿಯೇ ಆಗಿದ್ದಾನೆ ಎಂದು ಸ್ಪಷ್ಟವಾಗಿ ಎರಡೂ ವಾಕ್ಯಗಳಲ್ಲಿ ಕಾಣಿಸುತ್ತಿಲ್ಲ. ಆದ್ದರಿಂದ ಜೀವನೇಕೆ ಈ ಎರಡು ಶ್ರುತಿಗಳಿಂದ ಪ್ರತಿಪಾದ್ಯವಾಗಬಾರದೆಂಬ ಪ್ರಶ್ನೆ ಬರುತ್ತದೆ. ಸಂಸಾರ ಬಂಧನದಲ್ಲಿ ಹಸಿವು, ನೀರಡಿಕೆ ಮೊದಲಾದ ದೋಷಗಳಿದ್ದರೂ ಕೂಡ ಮುಕ್ತಿಯಲ್ಲಿ ಷಡೂರ್ಮಿಗಳನ್ನು ದಾಟಿದವನೇ ಆಗಿದ್ದಾನೆ. ಮತ್ತು ಬೃಹದಾರಣ್ಯಕದ ವಾಕ್ಯದಲ್ಲಿ 'ಅಸ್ಯೇತಿ' ಎಂಬ ಪದವು

ಶ್ರುತವಾಗಿದೆ. ಷಡೂರ್ಮಿಗಳನ್ನು ದಾಟಿದ್ದಾನೆಂಬುದು ಇದರ ಅಭಿಪ್ರಾಯ. ದಾಟಬೇಕಾದರೆ ಮೊದಲು ಆ ದೋಷಗಳನ್ನು ಹೊಂದಿದ್ದಾನೆಂದು ಹೇಳಬೇಕು. ಆದ್ದರಿಂದ ಜೀವನನ್ನೇ ಇಲ್ಲಿ ವಾಕ್ಯಗಳು ಪ್ರತಿಪಾದನೆ ಮಾಡುತ್ತಿವೆ ಎಂಬ ಆಶಂಕೆಯು ಪ್ರಾಪ್ತವಾಗುತ್ತದೆ.

ಇದರ ಪರಿಹಾರಕ್ಕಾಗಿ ಭಾಷ್ಯಕಾರರು -' ನಿತ್ಯತೀರ್ಣಾಶನಾಯಾದಿಃ' ಇತ್ಯಾದಿಯಾಗಿ ಪಾದ್ಮಪುರಾಣದ ವಾಕ್ಯವನ್ನು ಪ್ರಮಾಣವನ್ನಾಗಿ ನೀಡುತ್ತಿದ್ದಾರೆ. ನಿತ್ಯವಾಗಿಯೂ ಹಸಿವು, ನೀರಡಿಕೆ ಮೊದಲಾದವುಗಳನ್ನು ದಾಟಿದವನು ಜೀವನಾಗಲು ಸಾಧ್ಯವಿಲ್ಲ. ಏಕೆಂದರೆ ಸಂಸಾರ ಬಂಧನದಲ್ಲಿ ಎಲ್ಲಾ ಬಗೆಯ ದೋಷಗಳಿಂದ ಕೂಡಿದ್ದರಿಂದ ಶ್ರೀಹರಿಯೊಬ್ಬನೇ 'ಅಪಹತಪಾಪ್ಮಾ' ಇತ್ಯಾದಿ ವಾಕ್ಯಗಳಿಂದ ಪ್ರತಿಪಾದ್ಯನಾಗಲು ಸಾಧ್ಯ. ಆದ್ದರಿಂದಲೇ ಪದ್ಮಪುರಾಣದ ಈ ವಾಕ್ಯದಲ್ಲಿ 'ಏಕ ಏವ ಹರಿಃ' ಎಂಬುದಾಗಿ ಹೇಳಿದ್ದಾರೆ. ಮತ್ತು ಜೀವನಲ್ಲಿರುವ ಹಸಿವು ನೀರಡಿಕೆ ಮೊದಲಾದ ಷಡೂರ್ಮಿಗಳನ್ನು ಗೆಲ್ಲುವಿಕೆಯು ಶ್ರೀಹರಿಯ ಅಧೀನವಾಗಿದೆ ಹೊರತು, ಸ್ವಾಭಾವಿಕವಾಗಿ ಇರುವುದಿಲ್ಲ. ಸ್ವಾಭಾವಿಕವಾಗಿ ಇರುವುದು ಶ್ರೀಹರಿಯಲ್ಲಿ ಮಾತ್ರ.

'ಯ ಆತ್ಮಾ ಅಪಹತಪಾಪ್ಮಾ' ಇತ್ಯಾದಿ ಶ್ರುತಿಯಲ್ಲಿ 'ಅವಿಜಿಘತ್ಸಃ' ಎಂಬ ಪದಕ್ಕೆ ಹಸಿವು ಇಲ್ಲದವನು ಎಂದರ್ಥ. 'ವಿಶೇಷೇಣ ಜಗ್ಧುಂ ಭಕ್ಷಿತುಂ ಇಚ್ಛಾ ಇತಿ ವಿಜಿಘತ್ಸಾ' ಎಂಬ ನಿಷ್ಪತ್ತಿಯಂತೆ ತಿನ್ನುವ ಬಯಕೆಯು 'ವಿಜಿಘತ್ಸಾ' ಎಂದು ಕರೆಸಿಕೊಳ್ಳುತ್ತದೆ. ಆಪ್ತಕಾಮನಾದ ಶ್ರೀಹರಿಗೆ ವಿಜಿಘತ್ಸ ಎಂಬುದು ಇರುವುದಿಲ್ಲ. ಆದ್ದರಿಂದ 'ಅವಿಜಿಘತ್ಸಃ' ಎಂಬುದಾಗಿ ಕರೆಸಿಕೊಳ್ಳುತ್ತಾನೆ.

ಅಪಹತಪಾಪತ್ವ ಮೊದಲಾದ ಗುಣಗಳು ಮುಕ್ತಜೀವರಲ್ಲಿ ಇರಬಹುದು. ಆದರೆ ಈ ಗುಣಗಳೆಲ್ಲವೂ ಭಗವಂತನ ಅನುಗ್ರಹದಿಂದಲೇ ಬಂದಿವೆ. ಸ್ವತಂತ್ರವಾಗಿ ಇರುವುದಿಲ್ಲ. ಪರಮಾತ್ಮನಲ್ಲಿರುವ ಅಪಹತಪಾಪತ್ವಾದಿ ಗುಣಗಳು ಯಾರ ಅನುಗ್ರಹದಿಂದಲೂ ಬಂದಿರುವುದಿಲ್ಲ. ಆದ್ದರಿಂದ ಸ್ವತಂತ್ರವಾಗಿವೆ. ನಿರವಧಿಕವಾಗಿವೆ. ಆದರೆ ಮುಕ್ತಜೀವರಲ್ಲಿರುವ ಅಪಹತಪಾಪತ್ವಾದಿ ಗುಣಗಳು ಭಗವಂತನ ಅನುಗ್ರಹದಿಂದ ಬಂದಿವೆ. ಆದ್ದರಿಂದ ಜೀವನ ಗುಣಗಳು ಸಾಪೇಕ್ಷವಾದವು. ಪರಮಾತ್ಮನ ಗುಣಗಳು ನಿರಪೇಕ್ಷವಾದವು. ಸಾಪೇಕ್ಷ ಹಾಗೂ ನಿರಪೇಕ್ಷಗಳಲ್ಲಿ, ನಿರಪೇಕ್ಷವೇ ಪ್ರಧಾನವಾಗುತ್ತದೆ. ಅಂಥ ಗುಣಗಳುಳ್ಳ ಪರಮಾತ್ಮನನ್ನೇ ಇಲ್ಲಿ ವಿವಕ್ಷಿಸಬೇಕು.

ಉಪನಿಷತ್ತಿನಲ್ಲಿ ಶ್ರೀಮದಾಚಾರ್ಯರ ವ್ಯಾಖ್ಯಾನ ನೈಪುಣ್ಯ

तत्वप्रदीपः – अत्र ब्रह्मपुरं शरीरं दहरो भूताकाश इत्यादि छन्दोगोपनिषद्भाष्ये त्वभाणि निपुणतमं श्रीमच्चरणैः । तस्मादस्माकं न प्रयत्नोऽत्र ।

'ಬ್ರಹ್ಮಪುರಂ ಶರೀರಂ ದಹರಃ ಭೂತಾಕಾಶಃ' ಇತ್ಯಾದಿಯಾಗಿ ಛಾಂದೋಗ್ಯೋಪನಿಷತ್ತಿನ ಭಾಷ್ಯದಲ್ಲಿ ಶ್ರೀಮದಾಚಾರ್ಯರು ಬಹಳ ನೈಪುಣ್ಯದಿಂದ ವ್ಯಾಖ್ಯಾನ ಮಾಡಿದ್ದಾರೆ. ಆದ್ದರಿಂದ ನಾವು ಈ ಶ್ರುತಿಯ ವ್ಯಾಖ್ಯಾನಕ್ಕೆ ಪ್ರಯತ್ನವನ್ನು ಪಟ್ಟಿಲ್ಲ.

ಆಕಾಶನು ವಿಷ್ಣುವೆನ್ನಲು ನಾಕು ಬಗೆಯ ನಿಷ್ಪತ್ತಿಗಳು

तत्वप्रदीपः – ''दहरोऽस्मिन् अन्तराकाशः किं तदत्र विद्यते'' इत्यत्राऽकाशशब्देन भूताकाशो विवक्षितः । किं तदत्र विद्यते इत्यस्यायं परिहारः – अस्मिन् भूताकाशे परब्रह्माख्य आकाशो विद्यते । आ समन्तात् काशनादाकाशः, आ समन्तात् कमश्नातीति वा । ''अस्मिन् कामास्समाहिताः'' इति वाक्यशेषादासमन्तात् कामानश्नातीति वा ।

'ದಹರೋಽಸ್ಮಿನ್ನಂತರಾಕಾಶಃ ಕಂ ತದತ್ರ ವಿದ್ಯತೇ' ಎಂಬ ವಾಕ್ಯದಲ್ಲಿ ಆಕಾಶ ಶಬ್ದದಿಂದ ಭೂತಾಕಾಶವು ವಿವಕ್ಷಿತವಾಗಿದೆ. ಅದರಲ್ಲಿ ಯಾರು ನೆಲೆಸಿದ್ದಾರೆ ? ಎಂಬ ಪ್ರಶ್ನೆಗೆ ಪರಿಹಾರವನ್ನು ಹೀಗೆ ತಿಳಿಯಬೇಕು - ಈ ಭೂತಾಕಾಶದಲ್ಲಿ ಪರಬ್ರಹ್ಮವೆಂಬ ಆಕಾಶವಿದೆ. ಇವನನ್ನೇಕೆ ಆಕಾಶ ಎನ್ನುತ್ತಾರೆ ? ಎಂದರೆ -

೧. 'ಆಸಮಂತಾತ್ ಕಾಶನಾದಾಕಾಶಃ' ಎಲ್ಲವನ್ನೂ ಪ್ರಕಾಶಿಸುತ್ತಾನಾದ್ದರಿಂದ ಆಕಾಶನೆನಿಸುತ್ತಾನೆ.

೨. 'ಆಸಮಂತಾತ್ಕಮಶ್ನಾತೀತಿ ವಾ' ಪರಿಪೂರ್ಣವಾದ ಸುಖವನ್ನು ಉಪಭೋಗಿಸುತ್ತಾನೆ.

೩. 'ಅಸ್ಮಿನ್ಕಾಮಾಃ ಸಮಾಹಿತಾಃ' ಇವನಲ್ಲಿ ಎಲ್ಲಾ ಕಾಮನೆಗಳು ಒಗ್ಗೂಡಿವೆ.

೪. 'ಆಸಮಂತಾತ್ಕಾಮಾನಶ್ನಾತಿ ವಾ' ಎಲ್ಲಾ ಬಗೆಯ ಕಾಮನೆಗಳನ್ನು ಉಪಭೋಗಿಸುತ್ತಾನೆ.

ಹೀಗೆ ಅನೇಕ ಬಗೆಯ ನಿಷ್ಪತ್ತಿಗಳಿಂದ ಪರಮಾತ್ಮನೊಬ್ಬನೇ ಆಕಾಶನೆಂದು ಕರೆಸಿಕೊಳ್ಳಲು ಯೋಗ್ಯನಾಗಿದ್ದಾನೆ.

ಆಕಾಶರೂಪಿಯಾದ ಭಗವಂತನು ಗುಣತಃ ವ್ಯಾಪ್ತಿಯುಳ್ಳವನು

तत्वप्रदीपः – स च यावान् परमात्मा व्याप्तोऽस्ति तावानेव विद्यते गुणतः । पूर्णगुणात्मकत्वात् । अल्पपरिमाणस्य महत्परिमाणत्वं च युज्यते । अचिन्त्यशक्तित्वात् ।

ಇಂಥ ಆಕಾಶವಾದರೂ ಪರಮಾತ್ಮನು ಎಷ್ಟು ವ್ಯಾಪ್ತನೋ, ಅಷ್ಟೇ ವ್ಯಾಪ್ತಿಯನ್ನು ಹೊಂದಿದೆ. ಪೂರ್ಣಗುಣಾತ್ಮಕನಾದ್ದರಿಂದ ಗುಣತಃ ವ್ಯಾಪ್ತಿಯನ್ನು ವಿವಕ್ಷಿಸಬೇಕು. ಅಲ್ಪಪರಿಮಾಣವುಳ್ಳ ಪರಮಾತ್ಮನಿಗೆ ಮಹತ್‌ಪರಿಮಾಣತ್ವವು ಯುಕ್ತವಾಗುತ್ತದೆ. ಅಚಿಂತ್ಯಶಕ್ತಿಯಿರುವುದರಿಂದ ಅವನಲ್ಲಿ ವಿರೋಧಕ್ಕೆ ಅವಕಾಶವಿಲ್ಲ.

'ಯಸ್ಮಿನ್ ವಿರುದ್ಧಗತಯಃ' ಎಂಬ ಭಾಗವತದ ವ್ಯಾಖ್ಯಾನ

तत्वप्रदीपः – ''यस्मिन् विरुद्धगतयोऽप्यनिशं पतन्ति विद्यादयो विविधशक्तय आनुपूर्व्या'' इति वचनात् । आनुपूर्व्येति श्रुतिप्रमाणादित्यर्थः। ''आनुपूर्वी श्रुतिर्वेद आम्नायश्चेति कथ्यते'' इत्यभिधानात् । अन्यथाऽनिशमित्युक्तिविरोधात् ।

'ಯಸ್ಮಿನ್ ವಿರುದ್ಧಗತಯೋಽಪ್ಯನಿಶಂ ಪತಂತಿ ವಿದ್ಯಾದಯೋ ವಿವಿಧಶಕ್ತಯ ಆನುಪೂರ್ವ್ಯಾ' 'ಪಂಚರಾತ್ರಾದಿ ವಿದ್ಯೆಗಳು, ಅಣುತ್ವ-ಮಹತ್ತ್ವಾದಿ ಶಕ್ತಿಗಳು ವಿರುದ್ಧವಾದ ಧರ್ಮವನ್ನು ಲೋಕದಲ್ಲಿ ಹೊಂದಿದ್ದರೂ ಶ್ರುತಿಪ್ರಮಾಣವಿರುವುದರಿಂದ ಪರಮಾತ್ಮನಲ್ಲಿ ಯಾವಾಗಲೂ ಒಟ್ಟಿಗೆ ಇರುತ್ತವೆ' ಎಂಬ ಭಾಗವತದ ಚತುರ್ಥಸ್ಕಂಧದ ಮಾತಿನಂತೆ ವಿರುದ್ಧ ಧರ್ಮಗಳನ್ನು ಪರಮಾತ್ಮನಲ್ಲಿ ಒಪ್ಪಬಹುದು. ಈ ಶ್ರುತಿವಾಕ್ಯದಲ್ಲಿರುವ 'ಆನುಪೂರ್ವ್ಯಾ' ಎಂಬ ಪದಕ್ಕೆ ಶ್ರುತಿಪ್ರಮಾಣ ಇರುವುದರಿಂದ ಎಂದರ್ಥ. 'ಆನುಪೂರ್ವೀ ಶ್ರುತಿರ್ವೇದ

ಆಮ್ನಾಯಶ್ಚೇತಿ ಕಥ್ಯತೇ' ಆನುಪೂರ್ವಿ, ಶ್ರುತಿ, ವೇದ, ಆಮ್ನಾಯ ಇವುಗಳೆಲ್ಲವೂ ಪರ್ಯಾಯ ಪದಗಳೆಂದು ಕೋಶವು ಹೇಳುತ್ತಿದೆ. ಇಲ್ಲದಿದ್ದರೆ 'ಅನಿಶಮ್' ಎಂಬ ಮಾತಿನಿಂದ ಆನುಪೂರ್ವ್ಯ ಎಂಬ ಮಾತಿಗೆ ವಿರೋಧ ಬರುತ್ತಿತ್ತು.

ವಿವರಣೆ -

ಯಸ್ಮಿನ್ ವಿರುದ್ಧಗತಯೋ೨ಪ್ಯನಿಶಂ ಪತಂತಿ
ವಿದ್ಯಾದಯೋ ವಿವಿಧಶಕ್ತಯ ಆನುಪೂರ್ವ್ಯಾ।
ತದ್ ಬ್ರಹ್ಮವಿಶ್ವಭವಮೇಕಮವಿಶ್ವಮಾದ್ಯಮ್
ಆನಂದ ಮಾತ್ರಮವಿಕಾರಮಹಂ ಪ್ರಪದ್ಯೇ ॥

ಯೋಗ, ರೂಢಿ ಮುಂತಾದ ನಾನಾ ಪದಶಕ್ತಿಗಳೂ ಲೋಕದಲ್ಲಿ ಪರಸ್ಪರ ವಿರುದ್ಧವಾದಂತಿರುವ ವೇದ ಪಂಚರಾತ್ರಾದಿ ಸಮಸ್ತಶಬ್ದಗಳೂ ವಿಚಿತ್ರ ಅಚಿಂತ್ಯಶಕ್ತಿಗಳುಳ್ಳ ವಿರುದ್ಧವಾದ ಅಣುತ್ವ ಮಹತ್ವಾದಿ ಸಕಲಗುಣಗಳೂ ನಿನ್ನಲ್ಲಿ ದೇಶಕಾಲಾದಿವ್ಯವಸ್ಥೆಗಳನ್ನು ಅವಲಂಬಿಸದೇ ಸದಾ ಕೂಡುತ್ತವೆ. ಅದರಿಂದ ನೀನು ಗುಣಪೂರ್ಣ, ಪ್ರಪಂಚಕ್ಕೆ ಆದಿಕಾರಣ, ಸರ್ವೋತ್ತಮ, ಸರ್ವವಿಲಕ್ಷಣ, ಆನಂದಸ್ವರೂಪ ಮತ್ತು ವಿಕಾರರಹಿತನೆಂದು ವೇದಗಳು ಕೊಂಡಾಡುತ್ತವೆ. ಇಂಥ ನಿನ್ನನ್ನು ನಾನು ಮೊರೆ ಹೋಗುತ್ತೇನೆ.

ಇಲ್ಲಿ 'ವಿದ್ಯಾದಯೋ ವಿವಿಧಶಕ್ತಯ ಆನುಪೂರ್ವ್ಯಾ' ಎಂಬಲ್ಲಿ ಆನುಪೂರ್ವ್ಯತ್' ಎಂದು ಪಾಠವಿಟ್ಟುಕೊಂಡು 'ಕ್ರಮವಾಗಿ' ಎಂದು ಬೇರೆ ವ್ಯಾಖ್ಯಾನಕಾರರು ಅರ್ಥ ಹೇಳುತ್ತಾರೆ.

ಪರಮಾತ್ಮನಲ್ಲಿ ವಿರುದ್ಧ ಗುಣಗಳು ನಿತ್ಯವಾಗಿದ್ದರೂ ಉಪಾಸಕರ ತಾರತಮ್ಯದಿಂದ ಅವು ಕ್ರಮವಾಗಿ ಆವಿರ್ಭೂತವಾಗುತ್ತವೆ ಎಂದು ಪರಕೀಯರ ವ್ಯಾಖ್ಯಾನ ಹೇಳುತ್ತದೆ. ಮಾಘಕಾವ್ಯದಲ್ಲಿ ನಾರದರು ಶ್ರೀಕೃಷ್ಣನ ಬಳಿಗೆ ಆಕಾಶದಿಂದ ಕೆಳಗಿಳಿದು ಬರುವಾಗ ಮೊದಲಿಗೆ ದೂರದಲ್ಲಿ ಕೇವಲ ಬೆಳಕಿನ ಗೋಲಕದಂತೆ, ಬಳಿಕ ಕೇವಲ ಏನೋ ಒಂದು ಶರೀರದಂತೆ, ಬಳಿಕ ಹತ್ತಿರದಲ್ಲಿ ಸ್ಪಷ್ಟ ಅವಯವಯುಕ್ತರಾಗಿ ಪುರುಷರಾಗಿರುವಂತೆ ಕೃಷ್ಣನಿಗೆ ಕಂಡು ಬಂದರು ಎಂದು ಕವಿ ವರ್ಣಿಸುವುದನ್ನು ಉದಾಹರಿಸಿ ಅದರಂತೆ ಜ್ಞಾನಿಗೆ ಪರಮಾತ್ಮ ಕೇವಲ ಆನಂದ ಮಾತ್ರನಾಗಿ, ಭಕ್ತನಿಗೆ ಕಾಣುತ್ತಾನೆ. ಭಕ್ತಿ ಹೆಚ್ಚಿದಂತೆಲ್ಲ ಹೆಚ್ಚು ಹೆಚ್ಚು ಗುಣಗಳುಳ್ಳವನಾಗಿ ಕಾಣುತ್ತಾನೆ. ವಿದ್ಯೆ-ಅವಿದ್ಯೆ, ಸೃಷ್ಟಿ-ಸಂಹಾರ, ಜನ್ಯ-ಅಜನ್ಯ, ನಿಷ್ಕ್ರಿಯತ್ವ-ಲೀಲಾಕಾರಿತ್ವ,

ಆತ್ಮಾರಾಮತ್ವ-ಭಕ್ತವಾತ್ಸಲ್ಯಗಳು ಪರಸ್ಪರ ವಿರುದ್ಧವಾಗಿದ್ದರೂ ಅವು ನಿತ್ಯ ಜೊತೆಗಿರುತ್ತವೆ ಎಂದು ವಿವರಣೆ ನೀಡುತ್ತದೆ. ಇಲ್ಲಿ ದೃಷ್ಟಾಂತವೆ ಸರಿ ಇಲ್ಲ. ನಾರದರಲ್ಲಿ ಕೃಷ್ಣನಿಗೆ ಬೆಳಕಿನ, ಶರೀರಾಕೃತಿಯ ಮತ್ತು ಅವಯವಗಳ ದರ್ಶನಗಳು ಕ್ರಮವಾಗಿ ಆದರೂ ಆ ಬೆಳಕು ಮುಂತಾದವುಗಳಿಗೆ ವಿರೋಧವಿಲ್ಲ. ಸಗುಣತ್ವನಿರ್ಗುಣತ್ವಗಳಿಗೆ ವಿರೋಧವಿದೆ. 'ನಿರ್ಗುಣತ್ವ ಸತ್ಯವಾದರೂ ಸಗುಣತ್ವ ಕಾಲ್ಪನಿಕ. ಎರಡೂ ನಿತ್ಯವಾಗಿ ಪರಮಾತ್ಮನಲ್ಲಿ ಇದೆ ಕ್ರಮವಾಗಿ ಆವಿರ್ಭೂತವಾಗುತ್ತದೆ' ಎನ್ನುವುದು ಪ್ರಮಿತವಾಗಿಲ್ಲ. ಮತ್ತು 'ವಿದ್ಯಾದಿ'ಗಳು ಎಂಬ ಶಬ್ದದಿಂದ ಹೇಳಿದ ವಿರುದ್ಧಗುಣಗಳಲ್ಲಿ ಒಂದು ವ್ಯಾವಹಾರಿಕ, ಇನ್ನೊಂದು ಪಾರಮಾರ್ಥಿಕವೆನ್ನುವ ಪಕ್ಷದಲ್ಲಿ ಅವುಗಳಿಗೆ ವಿರೋಧವಿಲ್ಲ. ಎರಡೂ ವ್ಯಾವಹಾರಿಕವೆನ್ನುವ ಪಕ್ಷದಲ್ಲಿ 'ವಿದ್ಯೆಯೊಂದಿಗೆ ಅವಿದ್ಯೆ (ಮೋಹ) ಈಶ್ವರನಿಗೆ ಇದೆ ಎರಡೂ ಕ್ರಮವಾಗಿ ಅಭಿವ್ಯಕ್ತವಾಗುತ್ತದೆ' ಎನ್ನುವಂತಿಲ್ಲ. ಅವನ ಮಾಯೆ ಪರವ್ಯಾಮೋಹಕರಿ ಹೊರತು ಸ್ವವ್ಯಾಮೋಹಕರಿಯಲ್ಲ ತಾನೇ ?

ಆದರಿಂದ 'ಆನುಪೂರ್ವ್ಯ'ವೆಂದರೆ ಕ್ರಮವೆಂದು ವ್ಯಾಖ್ಯಾನಿಸಬಾರದು. 'ಆನುಪೂರ್ವೀ' ಎಂದರೆ ವೇದ. ಆನುಪೂರ್ವಿಗಳ ಸಮೂಹವೇ 'ಆನುಪೂರ್ವ್ಯ' ಅವುಗಳು ಭಗವಂತನಲ್ಲಿ ವಿರುದ್ಧವಾದ ಅಣುತ್ವಮಹತ್ವಾದಿಗುಣಗಳನ್ನು ಮಾತ್ರ ಹೇಳುತ್ತವೆ. ದೋಷಗಳನ್ನಲ್ಲ ಎನ್ನಬೇಕು. ಹೀಗಾಗಿ ಅಚಿಂತ್ಯಶಕ್ತಿಯಿಂದ ಅವುಗಳನ್ನು ಕೂಡಿಸಬೇಕೆಂದು ಭಾಗವತದ ತಾತ್ಪರ್ಯವನ್ನು ಶ್ರೀಮದಾಚಾರ್ಯರು ತಿಳಿಸುತ್ತಾ 'ಆನುಪೂರ್ವೀ' ಎಂದರೆ ವೇದ ಎನ್ನುವಲ್ಲಿ ಪ್ರಮಾಣವನ್ನು ತೋರಿಸುತ್ತಾರೆ.

ಆನುಪೂರ್ವೀ ಶ್ರುತಿಶ್ಚೈವ ತ್ರಯೀ ಚಾಮ್ನಾಯ ಉಚ್ಯತೇ ॥ ಇತ್ಯಭಿಧಾನಮ್ ।

ಆನುಪೂರ್ವಿ, ಶ್ರುತಿ, ತ್ರಯೀ ಎಂದು ವೇದಕ್ಕೆ ಬೇರೆ ಬೇರೆ ಹೆಸರುಗಳೆಂದು ಅಭಿಧಾನಗ್ರಂಥದಲ್ಲಿ ಹೇಳಿದೆ.

ಆದರಿಂದ 'ಆನುಪೂರ್ವ್ಯ' ಎಂದರೆ ವಿರುದ್ಧವಾದ 'ಅಸ್ಥೂಲಮನಣು' ಇತ್ಯಾದಿ ವೇದವಚನದಿಂದ ಸಹಿತವಾದ 'ವಿದ್ಯಾದಿ'ಗಳು. ಅಂದರೆ ವಿರುದ್ಧವಾದ ಪಂಚರಾತ್ರಾದಿ ಪೌರುಷೇಯಗ್ರಂಥವಚನಗಳು ಮತ್ತು ವಿರುದ್ಧವಾದ ಅಣುತ್ವ ಮಹತ್ವಾದಿ ವಿರುದ್ಧಗುಣಗಳು ಎಂದರ್ಥ.

ಬ್ರಹ್ಮಾಕಾಶವೇ ವಿವಕ್ಷಿತ

तत्वप्रदीपः – 'एष म आत्माऽन्तर्हृदयेऽणीयान् व्रीहेर्वा एष म आत्माऽन्तर्हृदये ज्यायान् पृथिव्याः'' इति हृदयस्थस्यैवाणुत्वमहत्त्वोक्तेश्चेत्यादि, 'दहरोऽस्मिन् अन्तराकाशः' इति च पूर्वोक्ताकाशस्य दहरत्वमुक्तम् । उत्तरस्य 'यावान्वाऽयमाकाशः' इत्यनन्तपरिमाणत्वम् । अतो ब्रह्माकाश एवोत्तरः ।

'ಏಷ ಮ ಆತ್ಮಾಽಂತರ್ಹೃದಯೇಽಣೀಯಾನ್ ವ್ರೀಹೇರ್ವಾ ಏಷ ಮ ಆತ್ಮಾಽಂತರ್ಹೃದಯೇ ಜ್ಯಾಯಾನ್ ಪೃಥಿವ್ಯಾಃ' ನನ್ನ ಹೃದಯದಲ್ಲಿ ಆತ್ಮನು ವ್ರೀಹಿಗಿಂತಲೂ ಅಣುವಾಗಿದ್ದಾನೆ. ನನ್ನ ಹೃದಯದಲ್ಲಿ ಆತ್ಮನು ಪೃಥಿವಿಗಿಂತ ಮಹತ್ತಾಗಿದ್ದಾನೆ ಎಂಬುದಾಗಿ ಹೃದಯದಲ್ಲಿರುವ ಆತ್ಮನಿಗೆ ಅಣುತ್ವ-ಮಹತ್ವವನ್ನು ಶ್ರುತಿಯು ಹೇಳುತ್ತಿದೆ. ಮತ್ತು 'ದಹರೇಽಸ್ಮಿನ್ನಂತರಾಕಾಶೇ' ಈ ಹೃದಯದಲ್ಲಿ ಸೂಕ್ಷ್ಮವಾದ ಆಕಾಶವಿದೆ ಎಂಬುದಾಗಿ ಪೂರ್ವೋಕ್ತ ಆಕಾಶದಲ್ಲಿ ದಹರತ್ವವನ್ನು ಶ್ರುತಿಯು ಹೇಳುತ್ತಿದೆ. ಮುಂದಿನ ವಾಕ್ಯದಲ್ಲಿ 'ಯಾವಾನ್ವಾಽಯಮಾಕಾಶಃ' ಎಂಬುದಾಗಿ ಅನಂತ ಪರಿಮಾಣತ್ವವನ್ನು ಆಕಾಶದಲ್ಲಿ ಶ್ರುತಿಯು ಹೇಳುತ್ತಿದೆ. ಆದ್ದರಿಂದ ಇಲ್ಲಿ ಆಕಾಶವೆಂದರೆ ಬ್ರಹ್ಮಾಕಾಶವೆಂದು ವಿವಕ್ಷಿಸಬೇಕು. ಈ ಬ್ರಹ್ಮಾಕಾಶವೇ ಮುಂದಿನ ವಾಕ್ಯದಿಂದ ಹೇಳಲ್ಪಟ್ಟಿದೆ.

ದಹರಾಕಾಶ ಎಂದರೆ ಬ್ರಹ್ಮ

तत्वप्रदीपः – पूर्वोक्तस्याभूताकाशत्वे ''तस्मिन् यदन्तस्तदन्वेष्टव्यं तद्वाव विजिज्ञासितव्यम्'' ''तत्रापि दहं गगनं विशोकस्तस्मिन् यदन्तस्तदुपासितव्यम्'' ''सहस्रशीर्षं देवम्'' इत्यादि कथं युज्येत । नहि भगवदन्तःस्थितमेवान्यत् किञ्चिद्विजिज्ञास्यम् । तद्वावेत्यवधारणाच्चेत्यादि च सुविस्तृतम् ।।

ಹಿಂದಿನ ವಾಕ್ಯದಲ್ಲಿ ಪ್ರತಿಪಾದ್ಯವಾದ ದಹರಾಕಾಶವೂ ಕೂಡ ಬ್ರಹ್ಮನೇ ಆಗಿದ್ದಾನೆ. ಒಂದು ವೇಳೆ ಹಿಂದಿನ ವಾಕ್ಯದಲ್ಲಿ ಭೂತಾಕಾಶವು ಪ್ರತಿಪಾದ್ಯವಾಗುವುದಾದರೆ 'ತಸ್ಮಿನ್ ಯದಂತಃ ತದನ್ವೇಷ್ಟವ್ಯಂ ತದ್ವಾವ ವಿಜಿಜ್ಞಾಸಿತವ್ಯಮ್' 'ಒಳಗಿರುವುದನ್ನು ಅನ್ವೇಷಣೆ ಮಾಡಬೇಕು.

ಅದನ್ನೇ ಜಿಜ್ಞಾಸೆ ಮಾಡಬೇಕು' 'ತತ್ರಾಪಿ ದಹ್ರಂ ಗಗನಂ ವಿಶೋಕಃ ತಸ್ಮಿನ್ ಯದಂತಃ ತದುಪಾಸಿತವ್ಯಮ್' 'ಅಲ್ಲೊಂದು ಪುಟ್ಟ ಆಕಾಶವಿದೆ. ಅದರಲ್ಲಿ ಯಾರು ನೆಲೆಸಿದ್ದಾನೋ, ಅವನನ್ನು ಉಪಾಸನೆ ಮಾಡಬೇಕು. 'ಸಹಸ್ರಶೀರ್ಷಂ ದೇವಮ್' 'ಅವನು ಸಾವಿರಾರು ಅವಯವಗಳುಳ್ಳವನು' ಇತ್ಯಾದಿಯಾಗಿ ಮುಂದಿನ ವಾಕ್ಯದಲ್ಲಿ ಹೇಳಿದ ವಿಚಾರಗಳೆಲ್ಲವೂ ಹೇಗೆ ಕೂಡುತ್ತವೆ ? ಹೃದಯದಲ್ಲಿರುವ ಭಗವಂತನ ಒಳಗಡೆ ಇರುವ ಬೇರೆ ಯಾವುದನ್ನು ಜಿಜ್ಞಾಸೆ ಮಾಡಬೇಕೆಂಬುದು ಯುಕ್ತವಲ್ಲವಷ್ಟೇ ? ಏಕೆಂದರೆ 'ತದ್ಭಾವ' ಎಂಬುದಾಗಿ ಆ ಭಗವಂತನನ್ನೇ ಜಿಜ್ಞಾಸೆ ಮಾಡಬೇಕೆಂದು ಶ್ರುತಿಯು ಅವಧಾರಣಪುರಸ್ಸರವಾಗಿ ಹೇಳುತ್ತಿದೆ. ಇತ್ಯಾದಿಯಾದ ವಿವರಣೆಯನ್ನು ತಿಳಿಯಬೇಕು.

ವಿವರಣೆ - ಅಧಿಕರಣದ ಪೂರ್ವಪಕ್ಷವನ್ನು ಹೀಗೆ ಮಾಡಲಾಗಿತ್ತು - 'ಯಾವಾನ್ವಾऽಯಮಾಕಾಶಃ ತಾವಾನೇವ ಏಷಃ ಅಂತರ್ಹೃದಯೇ ಆಕಾಶಃ' ಹೊರಗೆ ಆಕಾಶವು ಎಷ್ಟು ವ್ಯಾಪ್ತವಾಗಿದೆಯೋ, ಅದೇ ಆಕಾಶವು ಹೃದಯದಲ್ಲೂ ಇದೆ ಎಂಬುದಾಗಿ ಉಪನಿಷತ್ತು ಹೇಳುತ್ತಿದೆ. ಇಲ್ಲಿರುವ ಆಕಾಶ ಎಂದರೇನು? ಎಂಬುದೇ ಬರುವ ಪ್ರಶ್ನೆ.

ಆಕಾಶ ಶಬ್ದಕ್ಕೆ ವಿಷ್ಣು ಎಂದು ಉತ್ತರಿಸಲಾಗದು. ಏಕೆಂದರೆ 'ಕಿಂ ತದತ್ರ ವಿದ್ಯತೇ ?' ಎಂಬುದಾಗಿ ಶಿಷ್ಯನು ಹೃದಯ ಕಮಲದಲ್ಲಿರುವ ಪುಟ್ಟ ಆಕಾಶದಲ್ಲಿ ಏನಿದೆ ? ಎಂಬುದಾಗಿ ಪ್ರಶ್ನಿಸುತ್ತಿದ್ದಾನೆ. ಆಕಾಶ ಶಬ್ದಕ್ಕೆ ಒಂದು ವೇಳೆ ವಿಷ್ಣುವೆಂದು ವಿವಕ್ಷಿಸುವುದಾದರೆ, ಬ್ರಹ್ಮ ವಿದ್ಯತೇ, ಅಥವಾ ವಿಷ್ಣು ವಿದ್ಯತೇ ಎಂಬುದಾಗಿ ಉತ್ತರವನ್ನು ಹೇಳಬೇಕಾಗಿತ್ತು. ಆದರೆ ಹಾಗೇ ಉತ್ತರಿಸುತ್ತಿಲ್ಲ. ಒಳಗಿನ ಆಕಾಶವು ಹೊರಗಿನ ಆಕಾಶದಷ್ಟೇ ವಿಶಾಲವಾಗಿದೆ ಎಂಬುದಾಗಿ ಉಪನಿಷತ್ತು ಉತ್ತರಿಸುತ್ತಿದೆ. ಆದ್ದರಿಂದ ಭೂತಾಕಾಶವೆಂದೇ ಆಕಾಶಶಬ್ದದ ಅರ್ಥವನ್ನು ವಿವಕ್ಷಿಸಬೇಕು. ಆಗ ಈ ಗೊಂದಲಕ್ಕೆ ಅವಕಾಶವಿಲ್ಲ. ಏಕೆಂದರೆ ಆಕಾಶದಲ್ಲಿ ಸ್ವರ್ಗಾದಿ ಲೋಕಗಳು, ಸೂರ್ಯ-ಚಂದ್ರಾದಿಗಳು ನೆಲೆಸಿದ್ದಾರೆಂದು ಮುಂದಿನ ವಾಕ್ಯದಲ್ಲಿ ಹೇಳಿದೆ. ಹೃದಯದಲ್ಲಿರುವ ಪುಟ್ಟ ಆಕಾಶದಲ್ಲಿ ಇರುವುದು ಹೇಗೆ ಸಾಧ್ಯ ? ಎಂಬ ಪ್ರಶ್ನೆ ಹುಟ್ಟಿದರೆ, 'ಯಾವಾನ್ವಾऽಯಮಾಕಾಶಃ' ಎಂಬುದಾಗಿ ಆಕಾಶದ ಮಹಿಮೆಯನ್ನು ಉಪನಿಷತ್ತು ಬಣ್ಣಿಸುತ್ತಿದೆ. ಆದ್ದರಿಂದ ಹೃದಯ ಕಮಲದಲ್ಲಿ ನೆಲೆಸಿದ್ದು ಭೂತಾಕಾಶವೇ ಹೊರತು, ವಿಷ್ಣುವಲ್ಲ. ಇಂಥ ಭೂತಾಕಾಶವನ್ನು ಜಿಜ್ಞಾಸೆ ಮಾಡಬೇಕು, ಬ್ರಹ್ಮಜಿಜ್ಞಾಸೆ ಮಾಡಬಾರದು ಎಂದು ಈ ಅಧಿಕರಣದಲ್ಲಿ ಪೂರ್ವಪಕ್ಷ ಮಾಡಲಾಗಿದೆ.

ಪೂರ್ವಪಕ್ಷದ ಪರಿಹಾರವನ್ನು ಹೀಗೆ ತಿಳಿಯಬೇಕು - ಹೃದಯಕಮಲದಲ್ಲಿ ಭೂತಾಕಾಶವಿದೆ. ಅದರಲ್ಲಿ ವಿಷ್ಣು ನೆಲೆಸಿದ್ದಾನೆಂದು ತಿಳಿಯಬೇಕು. ಮತ್ತು 'ತಸ್ಮಿನ್ ಯದಂತಃ ತದುಪಾಸಿತವ್ಯಮ್' ಎಂಬುದಾಗಿ ಆಕಾಶತತ್ವದ ಉಪಾಸನೆಯನ್ನು ಶ್ರುತಿಯು ಹೇಳುತ್ತಲೇ ಇಲ್ಲ. ಏಕೆಂದರೆ ಹೃದಯಕಮಲದಲ್ಲಿರುವ ದಹರಾಕಾಶದಲ್ಲಿ ನೆಲೆಸಿರುವ ಆತ್ಮನನ್ನು ಉಪನಿಷತ್ತು ಹೀಗೆ ವರ್ಣನೆ ಮಾಡಿದೆ- 'ಯ ಆತ್ಮಾಽಪಹತಪಾಪ್ಮಾ ವಿಜರಃ ವಿಮೃತ್ಯುಃ' ಇತ್ಯಾದಿಯಾಗಿ ಅಪಹತಪಾಪತ್ವಾದಿಗುಣಗಳು ವಿಷ್ಣುವಿನದ್ದೇ ಆಗಿರುವುದರಿಂದ ಹೃದಯಾಕಾಶದಲ್ಲಿ ನೆಲೆಸಿರುವವನು ವಿಷ್ಣುವೇ ಆಗುತ್ತಾನೆ.

'ಕಿಂ ತದತ್ರ ವಿದ್ಯತೇ?' ಎಂಬ ಪ್ರಶ್ನೆಗೆ ಹೃದಯಕಮಲದಲ್ಲಿ ನೆಲೆಸಿರುವ ಬ್ರಹ್ಮನು ಯಾವ ಗುಣಗಳುಳ್ಳವನು ಎಂದೇ ಅಭಿಪ್ರಾಯ. ಹೊರತು, ಆಕಾಶದಲ್ಲಿ ಏನಿದೆ ? ಎಂದು ಅಭಿಪ್ರಾಯವಲ್ಲ. ಹೃದಯಕಮಲವನ್ನು ಬ್ರಹ್ಮಪುರ ಎಂದು ಹೇಳಿದ್ದರಿಂದಲೇ ಆ ಕಮಲದಲ್ಲಿ ಬ್ರಹ್ಮನಿದ್ದಾನೆಂಬುದನ್ನು ಶಿಷ್ಯನಾದವನು ತಿಳಿದು ಬಿಡುತ್ತಾನೆ. ಆದ್ದರಿಂದ 'ಅಲ್ಲಿ ನೆಲೆಸಿರುವ ವಿಷ್ಣು ಎಂಥವನು ?' ಎಂದು ಪ್ರಶ್ನಿಸಿದಾಗ 'ಯಾವಾನ್ವಾಽಯಮಾಕಾಶಃ' ಇತ್ಯಾದಿ ವಾಕ್ಯವು ಉತ್ತರವನ್ನು ನೀಡುತ್ತಿದೆ. ವಿಸ್ತಾರವಾದ ಈ ಆಕಾಶವೆಲ್ಲವೂ ಹೃದಯಕಮಲದಲ್ಲಿರುವ ವಿಷ್ಣುವಿನಲ್ಲಿ ನೆಲೆಸಿದೆ. ಸ್ವರ್ಗಲೋಕ, ಪೃಥಿವೀಲೋಕಗಳೂ ಕೂಡ ಅವನಲ್ಲೇ ನೆಲೆಸಿದೆ. ಇದೇ ಅವನ ಮಹಾಮಹಿಮೆ ಎಂಬುದು ಶ್ರುತಿಯ ಅಭಿಪ್ರಾಯ. ಹೀಗೆ ಉತ್ತರವನ್ನು ವಿವಕ್ಷಿಸಿದಾಗ 'ಕಿಂ' ಎಂಬ ಪ್ರಥಮಾಂತ ವಿಭಕ್ತಿಗೆ 'ಅಸ್ಮಿನ್' ಎಂಬುದಾಗಿ ಸಪ್ತಮ್ಯಂತವಾಗಿ ಉತ್ತರವನ್ನು ವಿವಕ್ಷಿಸಬೇಕು. ಅಥವಾ 'ಕಿಂ ತದತ್ರ ವಿದ್ಯತೇ ?' 'ಹೃದಯಾಕಾಶದಲ್ಲಿ ಏನಿದೆ ?' ಎಂಬುದಾಗಿ 'ಕಿಂ' ಶಬ್ದವನ್ನು ಪ್ರಥಮಾಂತವಾಗಿಯೂ ವಿವಕ್ಷಿಸಬಹುದು. ಆಗ 'ಅಯಮಾಕಾಶಃ' ಎಂಬುದಾಗಿ ಪ್ರಥಮಾಂತವಾಗಿ ಉತ್ತರವಾಕ್ಯವು ಯುಕ್ತವಾಗುತ್ತದೆ. ಹೃದಯದ ಹೊರಗೆ ಮಹಾವಿಷ್ಣು ಎಷ್ಟು ವ್ಯಾಪ್ತನಾಗಿದ್ದಾನೋ, ಒಳಗೂ ಕೂಡ ಹಾಗೆಯೇ ವ್ಯಾಪಿಸಿದ್ದಾನೆ. ಅಥವಾ ಹೃದಯದ ಹೊರಗೆ ಹೇಗೆ ಗುಣತಃ ವ್ಯಾಪ್ತನಾಗಿದ್ದಾನೋ, ಹೃದಯದ ಒಳಗೂ ಹಾಗೇ ವ್ಯಾಪ್ತನಾಗಿದ್ದಾನೆಂಬ ಅರ್ಥವನ್ನು ವಿವಕ್ಷಿಸಬೇಕು. ಅಷ್ಟೇ ಅಲ್ಲದೇ ದ್ಯಾವಾಪೃಥಿವ್ಯಾದಿಗಳೂ ಕೂಡ ಆಶ್ರಯವನ್ನು ಹೊಂದಿವೆ. ಆದ್ದರಿಂದ ಪ್ರಶ್ನೆಗೆ ಉತ್ತರವು ಯುಕ್ತವಾಗುವುದರಿಂದ ಭೂತಾಕಾಶವನ್ನು ಸರ್ವಥಾ ವಿವಕ್ಷಿಸಬಾರದು. ಮಹಾವಿಷ್ಣುವನ್ನೇ ದಹರಾಕಾಶದಲ್ಲಿ ನೆಲೆಸಿರುವವನೆಂದು ವಿವಕ್ಷಿಸಬೇಕು.

ವಿಶೇಷವಿಚಾರ - (ಸಂಗ್ರಹ) ಪಂಡಿತಾಚಾರ್ಯರು ಛಾಂದೋಗ್ಯಭಾಷ್ಯದಲ್ಲಿ ಶ್ರೀಮದಾಚಾರ್ಯರು ಹೇಳಿದ ವಾಕ್ಯಗಳನ್ನು ಇಲ್ಲಿಯ ತನಕ ಅನುವಾದ ಮಾಡಿದರು. ಇತ್ಯಾದಿ ಚ ಸುವಿಸ್ಮೃತಮ್' ಇತ್ಯಾದಿಯಾಗಿ ಛಾಂದೋಗ್ಯಭಾಷ್ಯದಲ್ಲಿ ಶ್ರೀಮದಾಚಾರ್ಯರು

ವಿಸ್ತಾರವಾಗಿ ಹೇಳಿರುತ್ತಾರೆಂದು ತಿಳಿಸಿರುವರು. ಆದ್ದರಿಂದ ಈ ಪ್ರಕರಣದಲ್ಲಿರುವ ಛಾಂದೋಗ್ಯಭಾಷ್ಯದ ಪ್ರಕರಣ ಹೀಗಿದೆ -

ಉಪನಿಷತ್ತು - 'ಅಥ ಯದಿದಮಸ್ಮಿನ್ ಬ್ರಹ್ಮಪುರೇ ದಹರಂ ಪುಂಡರೀಕಂ ವೇಶ್ಮ । ದಹರೋऽಸ್ಮಿನ್ನಂತರಾಕಾಶಃ । ತಸ್ಮಿನ್ ಯದಂತಃ ತದನ್ವೇಷ್ಟವ್ಯಮ್ । ತದ್ವಾವ ವಿಜಿಜ್ಞಾಸಿತವ್ಯಂ' ಇತಿ।

ಗುರುವು ಶಿಷ್ಯರಿಗೆ ಹೀಗೆ ಹೇಳಬೇಕು - ಈ ಶರೀರದಲ್ಲಿ ವ್ಯಾಪಿಸಿರುವ ಪೂರ್ಣಗುಣನೂ, ಪೂರ್ಣಕಾಮನೂ ಆಗಿರುವ ಪರಮಾತ್ಮನಲ್ಲಿ ಹೃದಯಕಮಲರೂಪವಾದ ಸಣ್ಣ ಮನೆಯು ಆಶ್ರಿತವಾಗಿದೆ. ಈ ಮನೆಯಲ್ಲಿ ಸಣ್ಣ ಆಕಾಶವಿದೆ. ಅದರ ಒಳಗೆ ಏನು ಇದೆಯೋ ಅದನ್ನೇ ಹಡುಕಬೇಕು ಅಂದರೆ ಮನನ ಮಾಡಬೇಕು ಎಂದು.

ಭಾಷ್ಯ - 'ಯದಿದಮಸ್ಮಿನ್ ಬ್ರಹ್ಮಪುರ' ಇತಿ ಬ್ರಹ್ಮಪುರಶಬ್ದೇನ ಬ್ರಹ್ಮಾಖ್ಯಂ ಪುರಂ, ಪೂರ್ಣತ್ವಾತ್ ಪುರಮಿತಿ ಪರಂ ಬ್ರಹ್ಮ, ಬ್ರಹ್ಮಣಃ ಪುರಮಿತಿ ಶರೀರಂ ಚೋಭಯಂ ವಿವಕ್ಷಿತಮ್ ।

'ಪ್ರಾಪ್ತೋऽವಧ್ಯಂ ಬ್ರಹ್ಮಪುರಂ ರಾಜೇವ ನಿವಸಾಮ್ಯಹಮ್ ।'
'ಅಸ್ಮಿಂಶ್ಚೇದ್ಯದಿದಂ ಬ್ರಹ್ಮಪುರೇ ಸರ್ವಂ ಸಮಾಹಿತಮ್ ॥'

'ಯದೈನಂ ಜರಾऽವಾಪ್ನೋತಿ ಪ್ರಧ್ವಂಸತೇ ವಾ ಕಿಂ ತತೋऽತಿ ಶಿಷ್ಯತೇ ಇತಿ । ಸ ಬ್ರೂಯಾತ್ ನಾಸ್ಯ ಜರಯೈತತ್ ಜೀರ್ಯತಿ ನ ವಧೇನಾಸ್ಯ ಹನ್ಯತೇ । ಏತತ್ ಸತ್ಯಂ ಬ್ರಹ್ಮಪುರಮ್ । ಅಸ್ಮಿನ್ ಕಾಮಾಃ ಸಮಾಹಿತಾಃ । ಏಷ ಆತ್ಮಾऽಪಹತಾಪಾಪ್ಮಾ ವಿಜರೋ ವಿಮೃತ್ಯುಃ' ಇತಿ ವಾಕ್ಯಶೇಷಾತ್ ಭಗವದ್ವಚನನಾಚ್ಚ ಬ್ರಹ್ಮಪುರ ಶಬ್ದೇನ ಪರಂ ಬ್ರಹ್ಮೋಚ್ಯತೇ ಇತ್ಯವಸೀಯತೇ । 'ಯತ್ ಪುಂಡರೀಕಂ ಪುರಮಧ್ಯಸಂಸ್ಥಂ' 'ಯದಿದಂ ಶರೀರಂ ತದೇತದಾದ್ಯಂ ಬ್ರಹ್ಮ ಸದನಂ' ಇತ್ಯಾದೇಃ ಶರೀರಂ ಚ ॥

ಯದಿದಮಸ್ಮಿನ್ ಬ್ರಹ್ಮಪುರೇ ಎಂಬ ಮಂತ್ರದಲ್ಲಿರುವ ಬ್ರಹ್ಮಪುರ ಶಬ್ದದಿಂದ ಬ್ರಹ್ಮ ಎಂಬ ಪುರ ಅಂದರೆ ಪೂರ್ಣವಾದ ವಸ್ತು ಮತ್ತು ಪರಬ್ರಹ್ಮನು ವಾಸಮಾಡುವ ಈ ಶರೀರ ಎಂಬ ಎರಡು ಅರ್ಥಗಳೂ ಅಭಿಪ್ರೇತವಾಗಿವೆ.

'ಸಂಹರಿಸಲು ಅಶಕ್ಯವಾದ ಬ್ರಹ್ಮಪುರವನ್ನು ಹೊಂದಿ ನಾನು ರಾಜನಂತೆ ವಾಸಿಸುತ್ತಿರುವೆನು. ಈ ಬ್ರಹ್ಮಪುರದಲ್ಲಿ ಎಲ್ಲವೂ ಆಶ್ರಯಹೊಂದಿದೆ' ಎಂದು ಮುಂತಾದ

ಪರಮಾತ್ಮನ ವಚನಗಳಿಂದಲೂ, 'ಶರೀರವನ್ನು ಯಾವಾಗ ಮುದಿತನವು ವ್ಯಾಪಿಸಿ ನಾಶಗೊಳಿಸುವುದೋ ಆಗ ಏನು ತಾನೇ ಉಳಿಯುತ್ತದೆ? ಏನೂ ಉಳಿಯದು, ಎಂದು ಶಿಷ್ಯನು ಕೇಳಿದರೆ, ಗುರುಗಳು 'ಈ ಶರೀರದ ಮುಪ್ಪಿನಿಂದ ಮುದಿತನವನ್ನು ಹೊಂದದವನು. ಈ ಶರೀರದ ನಾಶದಿಂದ ನಶಿಸದವನು ಬ್ರಹ್ಮಪುರ ಎನಿಸಿರುವ ಪರಮಾತ್ಮ. ಅವನು ನಿತ್ಯನಾಗಿರುವನು. ಇವನಲ್ಲಿ ಎಲ್ಲಾ ಕಾಮನೆಗಳು ಪೂರೈಸಿವೆ. ಸರ್ವವ್ಯಾಪ್ತನಾದ ಈ ಪರಮಾತ್ಮನು ಪಾಪರಹಿತನೂ, ಮುಪ್ಪಿಲ್ಲದವನೂ, ನಾಶರಹಿತನೂ ಆಗಿರುವನು ಎಂದು ಉತ್ತರಿಸುತ್ತಾರೆ' ಎಂದು ಮುಂತಾದ ವಾಕ್ಯಶೇಷದಿಂದಲೂ ಬ್ರಹ್ಮಪುರಶಬ್ದದಿಂದ ನಾಶರಹಿತನಾದ ಸರ್ವಾಶ್ರಯನಾದ ಪರಬ್ರಹ್ಮನು ಹೇಳಲ್ಪಡುತ್ತಿದ್ದಾನೆ ಎಂದು ಸಿದ್ಧಿಸುತ್ತದೆ. 'ಬ್ರಹ್ಮಪುರದ ಮಧ್ಯದಲ್ಲಿ ಯಾವ ಕಮಲವಿದೆಯೋ' ಎಂಬ ತೈತ್ತಿರೀಯ ವಾಕ್ಯದ ಸಂವಾದದಿಂದಲೂ, 'ಯಾವ ಈ ಶರೀರವಿದೆಯೋ ಅದು ಬ್ರಹ್ಮಪರ ಎನಿಸಿದೆ' ಎಂಬ ಶ್ರುತಿವಾಕ್ಯದ ಸಂವಾದದಿಂದಲೂ ಬ್ರಹ್ಮಪುರಶಬ್ದದಿಂದ ಶರೀರವೂ ಹೇಳಲ್ಪಡುತ್ತದೆಂದು ಸಿದ್ಧಿಸುತ್ತದೆ.

'ಯದ್ವೈತತ್ ಬ್ರಹ್ಮೇತೀದಂ ವಾವ ತದ್ ಯೋಽಯಂ ಬಹಿರ್ಧಾ ಪುರುಷಾದಾಕಾಶಃ।'
'ಯಸ್ತು ಸರ್ವಾಣಿ ಭೂತಾನ್ಯಾತ್ಮನ್ಯೇವಾನುಪಶ್ಯತಿ।' ಇತ್ಯಾದಿನಾ ಪರಬ್ರಹ್ಮಣ್ಯೇವ ಚ ಹೃದಯಂ ಸ್ಥಿತಮ್।

ಜೀವನಿಗಿಂತ ಹೊರಗೆ ದೇಹದಲ್ಲಿ ವ್ಯಾಪಿಸಿಕೊಂಡಿದ್ದು ಚೆನ್ನಾಗಿ ಪ್ರಕಾಶಿಸುತ್ತಿರುವುದರಿಂದ ಆಕಾಶನೆನಿಸಿರುವುದು ಸರ್ವತ್ರವ್ಯಾಪ್ತನಾದ ಬ್ರಹ್ಮನೆ. 'ಯಾರು ಎಲ್ಲಾ ಜಂತುಗಳನ್ನು ಪರಮಾತ್ಮನಲ್ಲಿ ಆಶ್ರಯಿಸಿಕೊಂಡು ಇರುವವೆಂದು ಅರಿತುಕೊಳ್ಳುವನೋ' ಎಂದು ಮುಂತಾದ ವಾಕ್ಯಗಳಿಂದ ಪರಮಾತ್ಮನಲ್ಲೇ ಹೃದಯವು ಆಶ್ರಿತವಾಗಿದೆ ಎಂದು ಸಿದ್ಧಿಸುತ್ತದೆ.

ಬ್ರಹ್ಮಪುರ ಶಬ್ದಕ್ಕೆ ಪೂರ್ಣಕಾಮನಾದ ಪರಬ್ರಹ್ಮನೆಂದು ಅರ್ಥೈಸಿದಾಗ 'ಬ್ರಹ್ಮಪುರೇ ದಹರಂ ಪುಂಡರೀಕಂ' ಪರಬ್ರಹ್ಮನಲ್ಲಿ ಅಲ್ಪವಾದ ಹೃದಯ ಕಮಲವು ಆಶ್ರಿತವಾಗಿದೆ' ಎನ್ನುವುದು ಯುಕ್ತವಾಗಲಾರದು. ಹೃದಯವಿರುವುದು ಶರೀರದಲ್ಲಿ. ಶರೀರವು ಅದಕ್ಕೆ ಆಶ್ರಯವಾದೀತೇ ಹೊರತು ಪರಬ್ರಹ್ಮನಲ್ಲ. ಇಷ್ಟೇ ಅಲ್ಲದೆ ಬ್ರಹ್ಮನಿಗೇನೇ ಹೃದಯವು ಆಶ್ರಯ. ಹೃದಯಕ್ಕೆ ಬ್ರಹ್ಮನು ಹೇಗೆ ಆಶ್ರಯನೆನಿಸಲು ಸಾಧ್ಯ ಎಂಬ ಆಕ್ಷೇಪಕ್ಕೆ ಆಚಾರ್ಯರು ಇಲ್ಲಿ ಉತ್ತರಿಸುತ್ತಿದ್ದಾರೆ - 'ಯದ್ವೈತತ್' ಎಂಬ ಪ್ರಮಾಣವಾಕ್ಯವು ಹೃದಯದ ಒಳಗಿರುವ ಪರಮಾತ್ಮನ ರೂಪಕ್ಕಿಂತ ಬೇರೆಯಾದ ಇನ್ನೊಂದು ರೂಪವು ಹೊರಗೆ ದೇಹಕ್ಕೆ ಧಾರಕವಾಗಿದೆ ಎಂದು ಸಾರುತ್ತಿರುವುದರಿಂದ, ದೇಹಾಂತರ್ಗತವಾದ ಹೃದಯಕ್ಕೆ ಅದು ಧಾರಕವಾಗಬಹುದು.

'ಯಸ್ತು ಸರ್ವಾಣಿ ಭೂತಾನಿ' ಎಂಬ ಪ್ರಮಾಣ ವಾಕ್ಯವು ಎಲ್ಲ ವಸ್ತುಗಳಿಗೂ ಪರಬ್ರಹ್ಮನೇ ಆಶ್ರಯ ಎಂದು ಸಾರುತ್ತಿರುವುದರಿಂದ ಹೃದಯಕ್ಕೂ ಅವನೇ ಆಶ್ರಯ.

'ದಹರೋऽಸ್ಮಿನ್ನಂತರಾಕಾಶಃ ತಸ್ಮಿನ್ ಯದಂತಃ ತದನ್ವೇಷ್ಟವ್ಯಂ' 'ದಹರೋऽಸ್ಮಿನ್ನಂತರಾಕಾಶಃ ಕಿಂ ತದತ್ರ ವಿದ್ಯತೇ' ಇತ್ಯಾಕಾಶ ಶಬ್ದೇನ ಭೂತಾಕಾಶೋ ವಿವಕ್ಷಿತಃ । ಕಿಂ ತದ್ರತ ವಿದ್ಯೇತೇ ಇತ್ಯಸ್ಯಾಯಂ ಪರಿಹಾರಃ - ಅಸ್ಮಿನ್ ಭೂತಾಕಾಶೇ ಪರಬ್ರಹ್ಮಾಖ್ಯ ಆಕಾಶೋ ವಿದ್ಯತೇ । ಆ ಸಮಂತಾತ್ ಕಾಶನಾತ್ ಆಕಾಶಃ । ಆ ಸಮಂತಾತ್ ಕಂ ಅಶ್ನಾತೀತಿ ವಾ । 'ಅಸ್ಮಿನ್ ಕಾಮಾಃ ಸಮಾಹಿತಾಃ' ಇತಿ ವಾಕ್ಯಶೇಷಾತ್ ಆ ಸಮಂತಾತ್ ಕಾಮಾನ್ ಅಶ್ನಾತೀತಿ ವಾ । ಸ ಚ ಯಾವಾನ್ ಬಹಿಃ ಪರಮಾತ್ಮಾ ವ್ಯಾಪ್ತೋऽಸ್ತಿ ತಾವಾನೇವ ವಿದ್ಯತೇ ಗುಣತಃ। ಪೂರ್ಣಗುಣತ್ವಾತ್ । ಅಲ್ಪಪರಿಮಾಣಸ್ಯಾಪಿ ಮಹತ್ ಪರಿಮಾಣತ್ವಂ ಚ ಯುಜ್ಯತೇ। ಅಚಿಂತ್ಯಶಕ್ತಿತ್ವಾತ್ ।

'ಯಸ್ಮಿನ್ ವಿರುದ್ಧಗತಯೋऽಪ್ಯನಿಶಂ ಪತಂತಿ
ವಿದ್ಯಾದಯೋ ವಿವಿಧ ಶಕ್ತಯ ಆನುಪೂರ್ವ್ಯಾ' ಇತಿ ವಚನಾತ್ ।
ಆನುಪೂರ್ವ್ಯೇತಿ ಶ್ರುತಿಪ್ರಮಾಣಾದಿತ್ಯರ್ಥಃ।
'ಆನುಪೂರ್ವೀ ಶ್ರುತಿರ್ವೇದ ಆಮ್ನಾಯಶ್ಚೇತಿ ಕಥ್ಯತೇ' ।
ಇತ್ಯಭಿಧಾನಾತ್ । ಅನ್ಯಥಾऽನಿಶಮಿತ್ಯುಕ್ತಿವಿರೋಧಾತ್ ।

'ಈ ಮನೆಯಲ್ಲಿ ಸಣ್ಣ ಆಕಾಶವಿದೆ. ಅದರಲ್ಲಿ ಏನಿದೆಯೋ ಅದನ್ನು ಹುಡುಕಬೇಕು.' 'ಈ ಮನೆಯಲ್ಲಿ ಸಣ್ಣ ಆಕಾಶವಿದೆ ಎಂದಿರಿ. ಅದರಲ್ಲಿ ಹುಡುಕಬೇಕಾದುದು ಏನಿದೆ?' ಎಂಬಲ್ಲಿ ಆಕಾಶಶಬ್ದವು ಭೂತಾಕಾಶಪರ. 'ಅದರಲ್ಲಿ ಏನಿದೆ?' ಎಂಬ ಪ್ರಶ್ನೆಗೆ 'ಈ ಭೂತಾಕಾಶದಲ್ಲಿ ಪರಬ್ರಹ್ಮನೆಂಬ ಆಕಾಶವಿದೆ' ಎಂದು ಸಮಾಧಾನ. 'ಪರಬ್ರಹ್ಮನು ಚೆನ್ನಾಗಿ ಪ್ರಕಾಶಿಸುವುದರಿಂದ ಆಕಾಶನೆನಿಸುತ್ತಾನೆ.' ಅಥವಾ 'ಪೂರ್ಣಸುಖವನ್ನು ಅನುಭವಿಸುವುದರಿಂದ ಆಕಾಶನೆನಿಸುತ್ತಾನೆ' ಅಥವಾ 'ಈ ಪರಬ್ರಹ್ಮನಲ್ಲಿ ಎಲ್ಲ ಬಯಕೆಗಳೂ ಪೂರೈಸಿರುತ್ತವೆ' ಎಂದು ಮುಂದೆ ಹೇಳಿರುವುದರಿಂದ ಎಲ್ಲ ಬಯಿಸಿದ ಪದಾರ್ಥಗಳನ್ನೂ ಭೋಗಿಸುತ್ತಾನೆ ಎಂಬ ಅರ್ಥದಲ್ಲಿ ಆಕಾಶನೆನಿಸುತ್ತಾನೆ. ಹೃದಯದ ಹೊರಗಡೆ ಇರುವ ಆಕಾಶನಾಮಕನಾದ ಆ ಪರಬ್ರಹ್ಮನು ಹಾಗೆಯೇ ಹೃದಯಾಕಾಶದೊಳಗಿರುವ ಪರಬ್ರಹ್ಮನೂ ಗುಣದಿಂದ ವ್ಯಾಪಿಸಿಕೊಂಡಿರುವನು. ಈ ಎರಡೂ ರೂಪಗಳೂ ಅನಂತಗುಣಪೂರ್ಣವೇ

ಆಗಿವೆ. ಆದುದರಿಂದ ಈ ಎರಡೂ ರೂಪಗಳೂ ಪರಸ್ಪರ ಅಭಿನ್ನ. ಹೃದಯದ ಹೊರಗಡೆ ಹಾಗೂ ಒಳಗಡೆ ಇರುವ ಅವನ ರೂಪಗಳು ಅತ್ಯಂತ ಅಭಿನ್ನವಾಗಿದ್ದು ಒಂದೇ ಆಗಿದ್ದರೂ ಅಘಟಿತಘಟನಾತ್ಮಕವಾದ ಅಚಿಂತ್ಯಶಕ್ತಿಯು ಆ ಪರಬ್ರಹ್ಮನಿಗೆ ಇರುವುದರಿಂದ ಪರಸ್ಪರ ವಿರುದ್ಧವಾದ ಅಲ್ಪಪರಿಮಾಣ ಹಾಗೂ ಮಹತ್ ಪರಿಮಾಣಗಳು ಆ ಒಬ್ಬನೇ ಪರಬ್ರಹ್ಮನಲ್ಲಿ ಸರಿಹೊಂದುತ್ತವೆ.

'ವಿದ್ಯೆಯೇ ಮೊದಲಾದ ನಾನಾವಿಧ ಶಕ್ತಿಗಳು ಈ ಪರಬ್ರಹ್ಮನಲ್ಲಿವೆ. ಲೋಕದಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ಬೇರೆ ಬೇರೆ ವಸ್ತುಗಳನ್ನು ಆಶ್ರಯಿಸಿಕೊಂಡಿರುವುದರಿಂದ ಪರಸ್ಪರ ವಿರುದ್ಧವೆನಿಸಿಕೊಂಡಿರುವ ಅಣುತ್ವ ಮಹತ್ತ್ವಾದಿ ಧರ್ಮಗಳೂ ತಮ್ಮ ತಮ್ಮ ವಿರೋಧವನ್ನು ಪರಿಹರಿಸಿಕೊಂಡ, ಈ ಶ್ರೀಹರಿಯಲ್ಲಿ ಯಾವತ್ತೂ ಒಟ್ಟಿಗೇನೇ ಇರುತ್ತವೆ. ಈ ವಿಷಯವು ವೇದರೂಪಪ್ರಮಾಣದಿಂದ ಸಿದ್ಧವಾಗಿದೆ' ಎಂದು ಪ್ರಮಾಣವಚನವಿದೆ. ಆದುದರಿಂದ ಅಚಿಂತ್ಯಶಕ್ತಿವಶಾತ್ ಒಬ್ಬನೇ ಪರಬ್ರಹ್ಮನಲ್ಲಿ ಅಣುತ್ವ ಹಾಗೂ ಮಹತ್ವಗಳು ಲೋಕದಲ್ಲಿ ವಿರುದ್ಧವಾಗಿದ್ದರೂ ಪರಸ್ಪರ ಹೊಂದಿಕೊಂಡಿವೆ ಎಂದು ಹೇಳಿದ್ದು ಯುಕ್ತವೆನಿಸುತ್ತದೆ.

'ಆನುಪೂರ್ವೀ, ಶ್ರುತಿ, ವೇದ, ಆಮ್ನಾಯ ಎಂಬೀ ಶಬ್ದಗಳೆಲ್ಲ ಸಮಾನಾರ್ಥಕವಾಗಿವೆ' ಎಂದು ಶಬ್ದಾನುಶಾಸನವಿರುವುದರಿಂದ 'ಯಸ್ಮಿನ್ ವಿರುದ್ಧಗತಯೋ' ಎಂಬ ಈ ಪ್ರಮಾಣವಾಕ್ಯದಲ್ಲಿರುವ 'ಆನುಪೂರ್ವ್ಯಾ' ಎಂಬ ಪದಕ್ಕೆ ವೇದರೂಪ ಪ್ರಮಾಣದಿಂದ ಎಂದು ವ್ಯಾಖ್ಯಾನಿಸಬೇಕು. ಇದಕ್ಕೆ ಹೊರತಾಗಿ ಅನುಕ್ರಮವಾಗಿ, ಭಿನ್ನ ಭಿನ್ನ ಕಾಲಗಳಲ್ಲಿ ಎಂದು ವ್ಯಾಖ್ಯಾನಿಸಿದರೆ, ಅಣುತ್ವ ಮಹತ್ವಾದಿ ವಿರುದ್ಧ ಧರ್ಮಗಳು ಬೇರೆ ಬೇರೆ ಕಾಲಗಳಲ್ಲಿ ಪರಬ್ರಹ್ಮನಲ್ಲಿ ಸೇರಿಕೊಳ್ಳುತ್ತವೆ. ಒಂದೇ ಕಾಲದಲ್ಲಿ ಅವು ಒಟ್ಟು ಸೇರುವುದಿಲ್ಲ ಎಂಬ ಅಭಿಪ್ರಾಯ ಉಂಟಾಗುವುದು. ಒಂದೇ ಕಾಲದಲ್ಲಿ ಅವು ಒಟ್ಟು ಸೇರುತ್ತವೆ' ಎಂಬ ಅಭಿಪ್ರಾಯದಲ್ಲಿರುವ ಅನಿಶಂ (ಯಾವತ್ತೂ) ಎಂಬ ಶಬ್ದದ ವಿರೋಧವಿರುವುದರಿಂದ ಆ ಅಭಿಪ್ರಾಯವನ್ನು ಇಟ್ಟುಕೊಳ್ಳುವಂತಿಲ್ಲ. ಆದುದರಿಂದ 'ಆನುಪೂರ್ವ್ಯಾ' ಎಂಬ ಪದಕ್ಕೆ 'ವೇದರೂಪ ಪ್ರಮಾಣದಿಂದ' ಎಂದೇ ಅರ್ಥ ಹೊರತು 'ಅನುಕ್ರಮವಾಗಿ' ಎಂದಲ್ಲ.

'ಏಷ ಮ ಆತ್ಮಾऽತರ್ಹೃದಯೇऽಣೀಯಾನ್ ವ್ರೀಹೇರ್ವಾ' ಏಷ ಮ
ಆತ್ಮಾಂತರ್ಹೃದಯೇ ಜ್ಯಾಯಾನ್ ಪೃಥಿವ್ಯಾಃ' ಇತಿ
ಹೃದಯಸ್ಥಸ್ಯೈವಾಣುತ್ವಮಹತ್ತ್ವೋಕ್ತೇಶ್ಚ।
ಗುಣಾಃ ಶ್ರುತಾಃ ಸುವಿರುದ್ಧಾಶ್ಚ ದೇವೇ
ಸಂತ್ಯಶ್ರುತಾ ಅಪಿ ನೈವಾತ್ರ ಶಂಕಾ।

ಚಿಂತ್ಯಾ ಅಚಿಂತ್ಯಾಶ್ಚ ತಥೈವ ದೋಷಾಃ
ಶ್ರುತಾಶ್ಚನಾಜ್ಞೈರ್ಹಿ ತಥಾ ಪ್ರತೀತಾಃ ॥ ಇತಿ ಚ ಶ್ರುತಿಃ ॥
ಸುವಿರುದ್ಧಾ ಅಶ್ರುತಾಶ್ಚ ಗುಣಾಃ ಸಂತ್ಯೇವ ಸರ್ವಶಃ ।
ದೋಷಾಃ ಕೇऽಪಿ ನ ಸಂತ್ಯೇವ ಶ್ರುತಾ ಅಪಿ ತು ಸರ್ವಶಃ ॥

ಇತಿ ಗಾರುಡೇ ॥

ನನ್ನ ಹೃದಯದ ಒಳಗಿರುವ ಈ ಪರಮಾತ್ಮನು ವ್ರೀಹಿ ಎಂಬ ಧಾನ್ಯಕ್ಕಿಂತಲೂ ಅಣುವಾಗಿರುವನು. 'ನನ್ನ ಹೃದಯದೊಳಗಿರುವ ಈ ಪರಮಾತ್ಮನು ಭೂಮಿಗಿಂತಲೂ ಮಹತ್‌ಪರಿಮಾಣವುಳ್ಳವನಾಗಿರುವನು' ಎಂದು ಶ್ರುತಿಯೇ ಹೃದಯದಲ್ಲಿರುವ ಪರಮಾತ್ಮನ ಸ್ವರೂಪಕ್ಕೇನೇ ಅಣುತ್ವ ಹಾಗೂ ಮಹತ್ವಗಳಿವೆ ಎಂದು ಸ್ಪಷ್ಟವಾಗಿ ಹೇಳಿರುವುದರಿಂದಲೂ, ಪರಮಾತ್ಮನ ಒಂದೇ ರೂಪದಲ್ಲಿ ಅಣುತ್ವ ಮಹತ್ವಗಳು ಅಚಿಂತ್ಯಶಕ್ತಿ ಮಹಿಮೆಯಿಂದಾಗಿ ವಿರೋಧವನ್ನು ಪರಿಹರಿಸಿಕೊಂಡು ಇವೆ ಎಂದು ಸಿದ್ಧಿಸುತ್ತದೆ.

'ಲೋಕದಲ್ಲಿ ಪರಸ್ಪರ ವಿರುದ್ಧವೆನಿಸಿರುವ ಗುಣಗಳೂ ಪರಮಾತ್ಮನಲ್ಲಿ ಶ್ರುತಿಸಿದ್ಧವಾದವುಗಳಾಗಿ, ವಿರೋಧವನ್ನು ಪರಿಹರಿಸಿಕೊಂಡು ಆಶ್ರಿತವಾಗಿವೆ. ಕೆಲವು ಗುಣಗಳು 'ಪರಮಾತ್ಮನಲ್ಲಿವೆ' ಎಂದು ವೇದಾದಿ ಪ್ರಮಾಣ ಗ್ರಂಥಗಳಲ್ಲಿ ನಿರೂಪಿತವಾಗದಿದ್ದರೂ ಅವನಲ್ಲಿ ಇದ್ದೇ ಇವೆ. ವೇದಾದಿಗಳಲ್ಲಿ ಹೇಳಿಲ್ಲವೆಂದು ಅಂತಹ ಗುಣಗಳನ್ನು ಅವನಲ್ಲಿ ಅಂಗೀಕರಿಸದೇ ಇರುವುದು ಸರಿಯಲ್ಲ. ಈ ವಿಷಯದಲ್ಲಿ ಸಂಶಯವೇ ಬೇಡ. ಪರಮಾತ್ಮನಲ್ಲಿರುವ ಗುಣಗಳಲ್ಲಿ ಕೆಲವು ಲಕ್ಷ್ಮ್ಯಾದಿಗಳ ಚಿಂತನೆಗೆ ಗೋಚರವಾದರೆ, ಕೆಲವು ಅಗೋಚರವಾಗಿವೆ. ಪರಮಾತ್ಮನಲ್ಲಿ ಕೆಲವು ದೋಷಗಳಿವೆ ಎಂದು ವೇದದಲ್ಲಿ ನಿರೂಪಿತವಾದಂತೆ ಕಂಡರೂ ವಾಸ್ತವಿಕವಾಗಿ ಅವು ಅವನಲ್ಲಿ ಇಲ್ಲವೇ ಇಲ್ಲ. ಅಂತಹ ವೇದವಾಕ್ಯಗಳ ತಾತ್ಪರ್ಯವನ್ನು ಅರಿಯದೆ ಇರುವ ಅಜ್ಞಾನಿಗಳಿಗೆ ಮಾತ್ರ ಆ ದೋಷಗಳು ಪರಮಾತ್ಮನಲ್ಲಿವೆ ಎಂದು ತೋರುತ್ತಿರಬಹುದು. ತಾತ್ಪರ್ಯಜ್ಞಾನಿಗಳಿಗೆ ಅವು ಇಲ್ಲವೆಂದು ಖಚಿತವಾಗಿವೆ' ಎಂದು ಕೂಡ ಶ್ರುತಿಯು ಸಾರುತ್ತಿದೆ.

''ಲೋಕದಲ್ಲಿ ಸ್ಪಷ್ಟವಾಗಿ ಪರಸ್ಪರ ವಿರುದ್ಧವಾಗಿರುವ ಗುಣಗಳೂ ವಿರೋಧವನ್ನು ಪರಿಹರಿಸಿಕೊಂಡು ಪರಮಾತ್ಮನಲ್ಲಿ ಜೊತೆ ಸೇರಿಕೊಂಡಿವೆ. 'ಪರಮ್ಮಾನಲ್ಲಿ ಇವೆ' ಎಂದು ವೇದದಲ್ಲಿ ಶ್ರುತವಾಗಿರದ ಗುಣಗಳೂ ಅವನಲ್ಲಿವೆ. ವೇದದಲ್ಲಿ 'ಪರಮಾತ್ಮನಲ್ಲಿ ಇವೆ' ಎಂದು ಹೇಳಿದಂತೆ ಆಪಾತತಃ ತೋರುತ್ತಿದ್ದರೂ ವಾಸ್ತವಿಕವಾಗಿ ಅವನಲ್ಲಿ ಯಾವ ದೋಷಗಳೂ ಇಲ್ಲ'' ಎಂದು ಗಾರುಡಪುರಾಣದಲ್ಲಿ ನಿರೂಪಿತವಾಗಿದೆ. ಆದುದರಿಂದ ವೇದವು ಸಾರುತ್ತಿದೆ

ಎಂದಿಷ್ಟರಿಂದಲೇನೇ ಪರಸ್ಪರ ವಿರುದ್ಧವಾದ ಗುಣಗಳನ್ನು ಕಣ್ಮುಮುಚ್ಚಿಕೊಂಡು ಪರಮಾತ್ಮನಲ್ಲಿ ಒಪ್ಪುವುದಾದರೆ 'ಜನಿತೋತ ವಿಷ್ಣೋಃ' ಎಂಬಿತ್ಯಾದಿ ವೇದವಾಕ್ಯಗಳು ಪರಮಾತ್ಮನಲ್ಲಿ ಉತ್ಪತ್ತಿ ಮೊದಲಾದ ದೋಷಗಳನ್ನು ಹೇಳುತ್ತಿರುವುದರಿಂದ ಅವನ್ನೂ ಒಪ್ಪೋಣ ಎಂಬ ಆಕ್ಷೇಪಕ್ಕೆ ಅವಕಾಶವಿಲ್ಲ.

'ಕಿಂ ತದತ್ರ ವಿದ್ಯತೇ' ಇತಿ ಪೃಷ್ಟತ್ವಾತ್ ಹೃದ್ಗತ ಆಕಾಶೋ ಹೃದಯ ಶಬ್ದೇನೋಚ್ಯತೇ। ಹೃದ್ಯಯನಾತ್ । ತಸ್ಮಿನ್ ಹೃದಯಾಖ್ಯ ಆಕಾಶೇ ಬ್ರಹ್ಮಾಖ್ಯ ಆಕಾಶೋ ವಿದ್ಯತೇ ಇತ್ಯಥಃ ॥ ಅನ್ಯಥಾ ಕಥಂ ಭೂತಾಕಾಶಸ್ಯ ದಹರಸ್ಯ ದಹರಾಕಾಶಸ್ಥಮತ್ವಂ ? 'ದಹರೋಽಸ್ಮಿನ್ನಂತರಾಕಾಶಃ' ಇತಿ ಚ ಪೂರ್ವೋಕ್ತಾಕಾಶಸ್ಯ ದಹರತ್ವಮುಕ್ತಮ್ । ಉತ್ತರಸ್ಯ ತು 'ಯಾವಾನ್ವಾ ಅಯಮಾಕಾಶ' ಇತ್ಯಂತ ಪರಿಮಾಣತ್ವಮ್ । ಅತೋ ಬ್ರಹ್ಮಾಕಾಶ ಏವೋತ್ತರಃ।

'ಬ್ರಹ್ಮನ ಪುರವೆನಿಸಿರುವ ಈ ಶರೀರದಲ್ಲಿ ಯಾವ ಕಮಲಾಕಾರದ ಹೃದಯವೆಂಬ ಮನೆಯಿದೆಯೋ, ಆ ಮನೆಯೊಳಗೆ ಯಾವ ಭೂತಾಕಾಶವಿದೆಯೋ, ಆ ಭೂತಾಕಾಶ-ದಲ್ಲಿರುವ, ಶ್ರವಣ ಮನನ ಧ್ಯಾನಗಳ ಮೂಲಕ ತಿಳಿದುಕೊಳ್ಳಲೇಬೇಕಾದ ವಸ್ತು ಯಾವುದು?' ಎಂದು ಶಿಷ್ಯರು ಕೇಳಿರುವ ಪ್ರಶ್ನೆಗೆ ಉತ್ತರವಾಗಿ ಹೊರಟಿರುವ ವಾಕ್ಯದಲ್ಲಿ, ಅಂಥ ಭೂತಾಕಾಶದಲ್ಲಿರುವ ವಸ್ತುವನ್ನೇ ಹೇಳಬೇಕು ವಿನಹ ಹೃದಯದಲ್ಲಿರುವ ವಸ್ತುವನ್ನಲ್ಲ. ಹಾಗಿದ್ದಲ್ಲಿ ಪ್ರಶ್ನೆ ಹಾಗೂ ಉತ್ತರಗಳು ಪರಸ್ಪರ ಅಸಂಗತವೆನಿಸಿಯಾವು. ಆದುದರಿಂದ 'ಅಂತರ್ಹೃದಯ ಆಕಾಶಃ' ಎಂಬ ಉತ್ತರವಾಕ್ಯದಲ್ಲಿರುವ ಹೃದಯಶಬ್ದದಿಂದ ಅಂತಃಕರಣದಲ್ಲಿರುವ ಭೂತಾಕಾಶವು ಹೇಳಲ್ಪಡುತ್ತಿದೆ ಹೊರತು ಅಂತಃಕರಣವಷ್ಟೇ ಅಲ್ಲ. 'ಹೃದಿ ಅಯನಾತ್ ಹೃದಯಂ' ಅಂತಃಕರಣದಲ್ಲಿ ಇರುವುದರಿಂದ ಹೃದಯವೆನಿಸಿದೆ ಎಂಬ ವ್ಯುತ್ಪತ್ತಿಯನ್ನು ಇಟ್ಟುಕೊಂಡಾಗ ಹೃದಯಶಬ್ದವು ಅಂತಃಕರಣದ ಒಳಗಿರುವ ಭೂತಾಕಾಶಕ್ಕೆ ವಾಚಕವೂ ಆಗುವುದರಿಂದ ಆ ಹೃದಯಶಬ್ದದಿಂದ ಭೂತಾಕಾಶವನ್ನಿಟ್ಟುಕೊಳ್ಳಲು ಯಾವ ಬಾಧಕವೂ ಇಲ್ಲ. ಹೀಗೆ ಅಂತರ್ಹೃದಯ ಆಕಾಶಃ ಎಂಬ ಉತ್ತರವಾಕ್ಯಕ್ಕೆ 'ಅಂತಃ ಕರಣದ ಒಳಗಿರುವ ಭೂತಾಕಾಶದೊಳಗೆ ಬ್ರಹ್ಮನೆಂಬ ಆಕಾಶವಿದೆ' ಎಂದೇ ಅಭಿಪ್ರಾಯ ಹೊರತು ಹೃದಯ (ಅಂತಃಕರಣ)ದೊಳಗೆ ಭೂತಾಕಾಶವಿದೆ' ಎಂದಲ್ಲ. ಇದಕ್ಕೆ ಹೊರತಾಗಿ ಹೃದಯದ ಒಳಗೆ ಭೂತಾಕಾಶವಿದೆ ಎಂದೇ ಅದರ ಅಭಿಪ್ರಾಯವೆಂದು ಹೇಳುವುದಾದರೆ ಹೃದಯದೊಳಗಿದೆ ಎಂದು ಮೊದಲೇ ಹೇಳಲ್ಪಟ್ಟಿರುವ ಆ ಭೂತಾಕಾಶವು

'ದಹರೋऽಸ್ಮಿನ್ನಂತರಾಕಾಶಃ' ಎಂದು ಹೇಳಿರುವಂತೆ ಅಣುಪರಿಮಾಣವುಳ್ಳದ್ದಾದುದರಿಂದ ಅದಕ್ಕೆ ಮಹತ್ ಪರಿಮಾಣವುಳ್ಳ ಬಾಹ್ಯಾಕಾಶದ ಸಮಾನತೆಯನ್ನು ಹೇಳಿದ್ದು ಹೇಗೆ ತಾನೇ ಸರಿಹೊಂದೀತು ? 'ಅಂತರ್ಹೃದಯ ಆಕಾಶಃ' ಎಂಬ ಉತ್ತರ ವಾಕ್ಯದಲ್ಲಿ ಹೇಳಲ್ಪಟ್ಟಿರುವ ಆಕಾಶವು ಭೂತಾಕಾಶವಾಗಿರದೆ ಬ್ರಹ್ಮನೇ ಆಗಿರುವನು ಎಂದು ಅಂಗೀಕರಿಸದೆ ಬೇರೆ ಗತಿಯೇ ಇಲ್ಲ.

> ಪೂರ್ವೋಕ್ತಾಕಾಶಸ್ಯಾಭೂತಕಾಶತ್ವೇ 'ತಸ್ಮಿನ್ ಯದಂತಃ ತದನ್ವೇಷ್ಟವ್ಯಂ ತದ್ವಾವ ವಿಜಿಜ್ಞಾಸಿತವ್ಯಂ' 'ತತ್ರಾಪಿ ದಹ್ರಂ ಗಗನಂ ವಿಶೋಕಃ ತಸ್ಮಿನ್ ಯದಂತಃ ತದುಪಾಸಿತವ್ಯಂ' 'ಸಹಸ್ರಶೀರ್ಷಂ ದೇವಂ' ಇತ್ಯಾದಿ ಕಥಂ ಯುಜ್ಯತೇ । ನಹಿ ಭಗವದಂತಸ್ಥಿತ್ಯೇವಾನ್ಯತ್ ಕಿಂಚಿತ್ ವಿಜಿಜ್ಞಾಸಿತವ್ಯಮ್ । 'ತದ್ವಾವ' ಇತ್ಯವಧಾರಣಾಚ್ಚ।

'ಒಂದೇ ಪ್ರಕರಣದಲ್ಲಿ ಬರುವ ಎರಡು ಆಕಾಶ ಶಬ್ದಗಳಿಗೆ ಬೇರೆ ಬೇರೆ ಅರ್ಥ ಸರಿಯಲ್ಲ. ಆದ್ದರಿಂದ ಮೊದಲು ಹೇಳಿದ ದಹರಾಕಾಶವೂ ಭೂತಾಕಾಶವಲ್ಲ. ಪರಬ್ರಹ್ಮನೆ, ಅಚಿಂತ್ಯಶಕ್ತಿಯಿಂದ ಮಹತ್ತಾದ ಬ್ರಹ್ಮನೂ ಸಣ್ಣ ಆಕಾಶವೆನಿಸಬಹುದು. ಹೀಗೆ ಎರಡೂ ಆಕಾಶಗಳೂ ಪರಬ್ರಹ್ಮ' ಎಂದು ಹೇಳಿದರೆ, 'ಆ ಆಕಾಶದೊಳಗೆ ಯಾವುದಿದೆಯೋ ಅದರ ಅನ್ವೇಷಣೆಯನ್ನು ಮಾಡಬೇಕು', 'ಹೃದಯಕಮಲದಲ್ಲಿ ಸಣ್ಣ ಆಕಾಶವಿದೆ. ಅದರೊಳಗಿರುವ ಶೋಕರಹಿತವಾದ ವಸ್ತು ಏನಿದೆಯೋ ಅದನ್ನು ಆರಾಧಿಸಬೇಕು' 'ಆ ದೇವನು ಸಾವಿರ ತಲೆಗಳುಳ್ಳವನು' ಎಂದು ಮುಂತಾಗಿ, ಆಕಾಶದ ಒಳಗಿರುವ ವಸ್ತುವೇ ಜ್ಞೇಯ, ಆರಾಧ್ಯ ಎನ್ನುವುದು ಹೇಗೆ ಯುಕ್ತವಾದೀತು ? ಆಕಾಶವನ್ನು ಪರಬ್ರಹ್ಮನೆಂದಿಟ್ಟುಕೊಂಡಲ್ಲಿ ಪರಬ್ರಹ್ಮನೊಳಗೆ ಇರುವ ಬೇರೆ ಯಾವುದೋ ಒಂದು ಆರಾಧ್ಯವೆನಿಸಲಾರದಷ್ಟೇ ? 'ತದ್ವಾವ ವಿಜಿಜ್ಞಾಸಿತವ್ಯಂ', ಆಕಾಶದೊಳಗಿರುವ ವಸ್ತುವೇ ಜ್ಞೇಯ. ಬೇರೆ ವಸ್ತುವು ಜ್ಞೇಯವಲ್ಲ ಎಂದೂ ಇಲ್ಲಿ ಹೇಳಿದೆ. ಭಗವಂತನು ಜ್ಞೇಯನೆಂಬುದು ಸರ್ವಸಮ್ಮತವಾಗಿರುವಾಗ ಭಗವಂತನೊಳಗಿರುವ ಬೇರೆ ಯಾವುದನ್ನೋ ಆರಾಧಿಸಬೇಕು. ಭಗವಂತನನ್ನಲ್ಲ ಎನ್ನುವುದು ಸಮಂಜಸವಾಗದು. ಆದ್ದರಿಂದ ದಹರಾಕಾಶವನ್ನು ಭೂತಾಕಾಶವೆಂದಿಟ್ಟುಕೊಳ್ಳಬೇಕು. ಆಗ ಅದರೊಳಗಿರುವ ಪರಬ್ರಹ್ಮನನ್ನೇ ಆರಾಧಿಸಬೇಕೆನ್ನುವುದು ಯುಕ್ತವಾಗುತ್ತದೆ.

> ಉತ್ತರಸ್ಯಾಪರಬ್ರಹ್ಮತ್ವೇ ಚ ಸರ್ವಾಧಾರತ್ವಂ 'ನಾಸ್ಯ ಜರಯೈತತ್ ಜೀರ್ಯತಿ, ನ ವಧೇನಾಸ್ಯ ಹನ್ಯತೇ, ಏತತ್ ಸತ್ಯಂ ಬ್ರಹ್ಮಪುರಂ, ಅಸ್ಮಿನ್ ಕಾಮಾಃ ಸಮಾಹಿತಾಃ, ಏಷ ಆತ್ಮಾऽಪಹತಪಾಪ್ಮಾ' ಇತ್ಯಾದಿ ನ ಯುಜ್ಯತೇ।

'ದಹರೋಽಸ್ಮಿನ್ನಂತರಾಕಾಶಃ' ಎಂದು ಮೊದಲು ಹೇಳಿರುವ ಆಕಾಶ ಶಬ್ದವು ಭೂತಾಕಾಶವೆನ್ನುವುದಾದರೆ 'ಏಷೋಽಂತರ್ಹೃದಯ ಆಕಾಶಃ' ಎಂದು ಮುಂದೆ ಹೇಳುವ ಆಕಾಶವೂ ಭೂತಾಕಾಶವೇ ಆಗಲಿ, ಪರಬ್ರಹ್ಮನಲ್ಲ ಎಂದು ಆಕ್ಷೇಪಿಸುವುದೂ ಸರಿಯಲ್ಲ. ಈ ಆಕಾಶವೂ ಭೂತಾಕಾಶವಾದರೆ 'ಉಭೇ ಅಸ್ಮಿನ್ ದ್ಯಾವಾಪೃಥಿವೀ ಉಭಾವಗ್ನಿಶ್ಚ ವಾಯುಶ್ಚ ಸೂರ್ಯಾಚಂದ್ರಮಸಾವುಭೌ ವಿದ್ಯುನ್ನಕ್ಷತ್ರಾಣಿ' ಎಂದು ಹೇಳಿರುವ ಸರ್ವಾಧಾರತ್ವವೂ, 'ನಾಸ್ಯ ಜರಯೈತತ್ ಜೀರ್ಯತಿ' ಎಂದಿರುವ ಅಜರತ್ವವೂ, 'ನ ವಧೇನಾಸ್ಯ ಹನ್ಯತೇ' ಎಂದಿರುವ ನಾಶರಾಹಿತ್ಯವೂ, 'ಏತತ್ ಸತ್ಯಂ ಬ್ರಹ್ಮಪುರಂ, ಅಸ್ಮಿನ್ ಕಾಮಾಃ ಸಮಾಹಿತಾಃ' ಎಂದು ಹೇಳಲ್ಪಟ್ಟಿರುವ ನಿತ್ಯತ್ವ ಪೂರ್ಣಕಾಮತ್ವಗಳೂ, 'ಏಷ ಆತ್ಮಾಽಪಹತಪಾಪ್ಮಾ' ಎಂದು ನಿರೂಪಿತವಾದ ಪಾಪರಾಹಿತ್ಯವೂ ಸರಿಹೊಂದಲಾರದು. ಇವೆಲ್ಲವೂ ಪರಬ್ರಹ್ಮನ ಅಸಾಧಾರಣ ಮಹಿಮೆಗಳು.

'ಒಂದೇ ಪ್ರಕರಣದಲ್ಲಿ ಬರುವ ಎರಡು ಆಕಾಶಶಬ್ದಗಳೂ ಪರಬ್ರಹ್ಮ-ವಾಚಕವೆಂದಿಟ್ಟುಕೊಳ್ಳೋಣ. 'ಅಸ್ಮಿನ್ ದ್ಯಾವಾಪೃಥಿವೀ' ಎಂದು ಆಕಾಶನಾಮಕ ಬ್ರಹ್ಮನಲ್ಲಿ ದ್ಯಾವಾಪೃಥಿವ್ಯಾದಿ ವಸ್ತುಗಳೇ ಜಿಜ್ಞಾಸ್ಯವಾಗಿ ನಿರೂಪಿತವಾಗಿವೆ. ಮಹತ್ತಾದ ಜಿಜ್ಞಾಸ್ಯವಸ್ತುಗಳು, ಅಲ್ಪನಾದ ಆಕಾಶನಾಮಕ ಪರಬ್ರಹ್ಮನ ಒಳಗಿರಲು ಹೇಗೆ ಶಕ್ಯ ? ಎಂಬ ಆಕ್ಷೇಪವು ಉಂಟಾಗದಿರಲೆಂದು ಪ್ರಾಸಂಗಿಕವಾಗಿ ಈ ಆಕಾಶನಲ್ಲಿ 'ಯಾವಾನ್ವಾ ಅಯಮಾಕಾಶಃ ತಾವಾನೇಷಃ' ಎಂದು ಬಾಹ್ಯಾಕಾಶದ ಸಮಾನತೆಯನ್ನು ಹೇಳಲಾಗಿದೆ ಹೊರತು ಸ್ವತಂತ್ರವಾಗಿ ಆಕಾಶದ ಮಹಿಮೆಯನ್ನು ಹೇಳುವ ಉದ್ದೇಶದಿಂದಲ್ಲ. ಹೀಗೆ ''ದ್ಯಾವಾಪೃಥಿವ್ಯಾದಿಗಳೇ ಜಿಜ್ಞಾಸ್ಯವಾದರೆ, 'ಯಾವಾನ್ವಾ ಅಯಮಾಕಾಶಃ ತಾವಾನೇಷಃ' ಎಂಬ ರೀತಿಯಲ್ಲಿ ಆಕಾಶದ ಮಹಿಮೆಯನ್ನು ಹೇಳಿರುವುದು ವ್ಯರ್ಥ'' ಎಂಬ ಆಕ್ಷೇಪಕ್ಕೂ ಅವಕಾಶವಿಲ್ಲ ಎಂಬ ಶಂಕೆಗೆ ಇಲ್ಲಿ ಸಮಾಧಾನ ನೀಡಲಾಗಿದೆ.

> 'ಕಂ ತದತ್ರ ವಿದ್ಯತೇ ಯದನ್ವೇಷ್ಟವ್ಯಂ ಯದ್ವಾವ ವಿಜಿಜ್ಞಾಸಿತವ್ಯಂ' ಇತ್ಯಸ್ಯ 'ಯ ಏಷೋಽಂತರ್ಹೃದಯ ಆಕಾಶಃ' ಇತ್ಯೇವ ಪರಿಹಾರಃ । ನ ತು 'ಉಭೇ ಅಸ್ಮಿನ್ ದ್ಯಾವಾಪೃಥಿವೀ' ಇತ್ಯಾದಿ । ತತ್ತು ವಿಜಿಜ್ಞಾಸಿತವ್ಯತ್ವೇ ಹೇತುತ್ವೇನ ಸಾಮರ್ಥ್ಯಕಥನಮೇವ । ನಹಿ ದ್ಯಾವಾಪೃಥಿವ್ಯಾದೇರೇವ ವಿಜಿಜ್ಞಾಸ್ಯತ್ವಮ್ । 'ತಮೇವೈಕಂ ಜಾನಥ ಆತ್ಮಾನಮನ್ಯಾ ವಾಚೋ ವಿಮುಂಚಥ' ಇತಿ ಹಿ ಶ್ರುತಿಃ।

ಹೃದಯದೊಳಗಿರುವ ಈ ಅಲ್ಪಾಕಾಶದಲ್ಲಿ ಶ್ರವಣ ಮನನ ಧ್ಯಾನಗಳ ಮೂಲಕ ಹುಡುಕಬೇಕಾದ ವಸ್ತು ಏನಿದೆ ? ಎಂಬ ಪ್ರಶ್ನೆಗೆ 'ಹೃತ್ಕಮಲದೊಳಗಿನ ಆಕಾಶದೊಳಗಿರುವ

ಈ ಆಕಾಶನಾಮಕ ಪರಬ್ರಹ್ಮನು' ಎಂಬುದೇ ಉತ್ತರ ಹೊರತು 'ಇಲ್ಲಿ ಎರಡುವಿಧ ಸ್ವರ್ಗ ಭೂಮಿಗಳ ಅಭಿಮಾನಿಗಳು' ಎಂದು ಮುಂತಾಗಿ ಅಲ್ಲ. ಅದು ಆಕಾಶನಾಮಕ ಬ್ರಹ್ಮನನ್ನು ಯಾಕೆ ಅರಿತುಕೊಳ್ಳಲೇ ಬೇಕು, ಅವನಲ್ಲಿ ಅಂತಹ ಮಹತ್ವವೇನು ? ಎಂಬ ಪ್ರಶ್ನೆಗೆ ಉತ್ತರವಾಗಿ, ಸ್ವರ್ಗ ಭೂಮಿ ಮುಂತಾದವುಗಳಿಗೆ ಆಶ್ರಯ ನೀಡುವ ಸಾಮರ್ಥ್ಯ ನಿರೂಪಣೆ ಮಾತ್ರವೇ ಆಗಿದೆ. ಏಕೆಂದರೆ ಸ್ವರ್ಗ ಭೂಮಿ ಮುಂತಾದವುಗಳೇ ಶ್ರವಣ ಮನನಾದಿ ಯೋಗ್ಯವೆನ್ನಲಾಗದು. 'ನೀವು ಆ ಪರಮಾತ್ಮನೊಬ್ಬನನ್ನೇ ಅರಿತುಕೊಳ್ಳಿ ಇತರ ಪ್ರಪಂಚದ ಜಿಜ್ಞಾಸೆ ಬಿಟ್ಟು ಬಿಡಿ' ಎನ್ನುತ್ತಿದೆ, ಶ್ರುತಿ.

'ಉಭೇ ಅಸ್ಮಿನ್ ದ್ಯಾವಾಪೃಥಿವೀ' ಇತ್ಯಾದ್ಯುಭಯಶಬ್ದೋ ಮುಕ್ತಾಮುಕ್ತ-ರಾಶಿವ್ಯಪೇಕ್ಷಯಾ । 'ಯಚ್ಚಾಸ್ಯೇಹಾಸ್ತಿ ಯಚ್ಚ ನಾಸ್ತಿ' ಇತಿ ವಾಕ್ಯಶೇಷಾತ್ । 'ಅಸ್ಯ' ಇತಿ ಸಂಸಾರಿಣಃ । ನ ಹಿ ಸಂಸಾರಿಣೋ ಮುಕ್ತಾ ಉಪಕಾರಕಾಃ । ಯದಸ್ಯ ನೋಪಕಾರಕಂ ತತ್ ತಸ್ಯ ನಾಸ್ತೀತ್ಯುಚ್ಯತೇ೨ನ್ಯಸ್ಯ ಸತ್ವೇ೨ಪಿ । ಯಥಾ ವಿತ್ತಾದಿ ।

'ಎರಡು ಬಗೆಯ ಸ್ವರ್ಗ ಭೂಮಿಗಳು ಈ ಪರಬ್ರಹ್ಮನಲ್ಲಿವೆ' ಎಂಬಲ್ಲಿ ಎರಡು ಬಗೆ ಎಂದು ಹೇಳಿದುದು ಮುಕ್ತ ಅಮುಕ್ತ ಎಂದು ಎರಡು ಬಗೆಯ ಅಭಿಮಾನಿದೇವತೆಗಳೆಂಬ ಅಭಿಪ್ರಾಯದಿಂದ. ಏಕೆಂದರೆ ಈ ವಾಕ್ಯದ ಕೊನೆಯಲ್ಲಿ 'ಯಾವುದು ಇವನ ಪಾಲಿಗೆ ಇಲ್ಲಿ ಇದೆಯೋ ಯಾವುದು ಇಲ್ಲವೋ' ಎಂದಿದೆ. ಇಲ್ಲಿ 'ಅಸ್ಯ' ಎಂದರೆ 'ಸಂಸಾರಿ ಜೀವನ ಪಾಲಿಗೆ' ಎಂದರ್ಥ, ಸಂಸಾರಿ ಜೀವನಿಗೆ ಮುಕ್ತರು ಉಪಕಾರಕರಲ್ಲ. ಯಾವುದು ಅವನಿಗೆ ಉಪಕಾರಕವಾಗುವುದಿಲ್ಲವೋ ಅದು ಅವನ ಪಾಲಿಗೆ ಇಲ್ಲವೆಂದೇ ಹೇಳುವುದುಂಟು. ಇದ್ದೂ ಉಪಯೋಗಕ್ಕೆ ಬಾರದಿರುವ ಹಣ ಮುಂತಾದವುಗಳಂತೆ. (ಸಂಗ್ರಹ)

ಶ್ರೀಮಜ್ಜಯತೀರ್ಥಭಿಕ್ಷುಗಳಿಂದ ವಿರಚಿತವಾದ

ತತ್ವಪ್ರಕಾಶಿಕಾ

ಹೃತ್ಪದ್ಮಸ್ಥಿತತತ್ವವು ವಿಷ್ಣು, ಆಕಾಶ, ಜೀವ ಮೂವರಲ್ಲೂ ಸಮಾನ

तत्वप्रकाशिका – ।। दहर उत्तरेभ्यः ।। १४ ।।

अत्र 'यो वेद निहितं गुहायाम्' । 'तस्यान्ते सुषिरं सूक्ष्मम्' । 'हृदि ह्येष आत्मा' इत्यादिश्रुतिभिः ब्रह्माकाशजीवेषु साधारणस्य हृत्पद्मस्थत्वलिङ्गस्य भगवति समन्वयप्रतिपादनादस्ति शास्त्रादिसङ्गतिः ।

ಸಂಗತಿ ವಿಚಾರ - 'ಯೋ ವೇದ ನಿಹಿತಂ ಗುಹಾಯಾಮ್', 'ಯಾರು ಹೃದಯದಲ್ಲಿರುವವನನ್ನು ತಿಳಿದಿದ್ದಾನೋ', 'ತಸ್ಯಾಂತೇ ಸುಷಿರಂ ಸೂಕ್ಷ್ಮಮ್', 'ಹೃತ್ಪದ್ಮದಲ್ಲಿ ಅತಿಸೂಕ್ಷ್ಮವಾದ ಆಕಾಶ ಇದೆ', 'ಹೃದಿ ಹ್ಯೇಷ' 'ಹೃದಯದಲ್ಲಿ ಆತ್ಮ ಇದ್ದಾನೆ'.

ಇವೇ ಮೊದಲಾದ ಶ್ರುತಿಗಳ ಬಲದಿಂದ 'ಹೃತ್ಪದ್ಮಸ್ಥತ್ವ' ಎಂಬ ಲಿಂಗವು, ವಿಷ್ಣು, ಆಕಾಶ, ಜೀವ ಮೂವರಲ್ಲೂ ಸಾಧಾರಣವಾಗಿದೆ. ಹೀಗೆ ಉಭಯತ್ರ ಸಾಧಾರಣವಾದ ಹೃತ್ಪದ್ಮಸ್ಥತ್ವ ಲಿಂಗದ ಸಮನ್ವಯವನ್ನು ಭಗವಂತನಲ್ಲಿ ಪ್ರತಿಪಾದನೆ ಮಾಡುತ್ತಿರುವುದರಿಂದ, ಶಾಸ್ತ್ರಸಂಗತಿ, ಅಧ್ಯಾಯಸಂಗತಿ, ಹಾಗೂ ಪಾದಸಂಗತಿಗಳು ಇರುತ್ತವೆಂದು ತಿಳಿಯಬೇಕು.

ಯುಕ್ತಿಬದ್ಧವಾದ ಪೂರ್ವಪಕ್ಷ

तत्वप्रकाशिका – श्रुत्यादिसङ्गतिं विषयवाक्यमुदाहृत्य विषयादिकं च सूचयन् सयुक्तिकं पूर्वपक्षं सूचयति – चन्द्रेति ।।

ಶ್ರುತಿಸಂಗತಿ, ಅಧಿಕರಣಸಂಗತಿ ಹಾಗೂ ವಿಷಯವಾಕ್ಯವನ್ನು ಉದಾಹರಿಸುತ್ತಾ ವಿಷಯಾದಿಗಳನ್ನು ಸೂಚಿಸುತ್ತಾ ಯುಕ್ತಿಬದ್ಧವಾದ ಪೂರ್ವಪಕ್ಷವನ್ನು ಸೂಚನೆ ಮಾಡುತ್ತಿದ್ದಾರೆ 'ಚಂದ್ರ' ಇತ್ಯಾದಿ ವಾಕ್ಯದಿಂದ.

ಹೃತ್ಪದ್ಮಸ್ಥನಲ್ಲಿ ಚಂದ್ರಾದ್ಯಾಧಾರತ್ವ

तत्वप्रकाशिका – 'एतस्य वाऽक्षरस्य' इत्यादिना विष्णोश्चन्द्रादित्याधारत्वमुक्तं तच्छन्दोगश्रुतौ हृत्पद्मस्थस्योच्यते ।

'ಏತಸ್ಯ ವಾ ಅಕ್ಷರಸ್ಯ' ಇತ್ಯಾದಿ ಶ್ರುತಿಯಿಂದ ವಿಷ್ಣುವೇ ಚಂದ್ರ, ಆದಿತ್ಯ ಮೊದಲಾದವರಿಗೆ ಆಧಾರನಾಗಿದ್ದಾನೆಂದು ಅಕ್ಷರಾಧಿಕರಣದಲ್ಲಿ ಸಮರ್ಥಿಸಲಾಯಿತು, ಆದರೆ ಅದೇ ಚಂದ್ರಾದ್ಯಾಧಾರತ್ವವು ಛಾಂದೋಗ್ಯಶ್ರುತಿಯಲ್ಲಿ ಹೃತ್ಪದ್ಮಸ್ಥನಿಗೆ ಶ್ರುತವಾಗಿದೆ.

ಅಧಿಕರಣದ ಸಂಪೂರ್ಣ ವಿಷಯವಾಕ್ಯ

तत्वप्रकाशिका –'एतस्मिन्ब्रह्मपुरे दहरं पुण्डरीकं वेश्म दहरोऽस्मिन्नन्तर आकाशस्तस्मिन् यदन्तस्तदन्वेष्टव्यं तद्वाव विजिज्ञासितव्यमिति । तं चेद् ब्रूयुः किं तदत्र विद्यते यदन्वेष्टव्यं यद्वाव विजिज्ञासितव्यमिति । स ब्रूयाद्यावान् वा अयमाकाशस्तावानेषोऽन्तर्हृदय आकाश उभे अस्मिन् द्यावापृथिवी' इत्यादिना ।

ಅದು ಹೀಗೆ - 'ಏತಸ್ಮಿನ್ ಬ್ರಹ್ಮಪುರೇ ದಹರಂ ಪುಂಡರೀಕಂ ವೇಶ್ಮ ದಹರೇऽಸ್ಮಿನ್ನಂತರಃ ಆಕಾಶಸ್ತಸ್ಮಿನ್ ಯದಂತಸ್ತದನ್ವೇಷ್ಟವ್ಯಂ ತದ್ವಾವ ವಿಜಿಜ್ಞಾಸಿತವ್ಯಮಿತಿ । ತಂ ಚೇದ್ ಬ್ರೂಯುಃ ಕಿಂ ತದತ್ರ ವಿದ್ಯತೇ ಯದನ್ವೇಷ್ಟವ್ಯಂ ಯದ್ವಾವ ವಿಜಿಜ್ಞಾಸಿತವ್ಯಮಿತಿ । ಸ ಬ್ರೂಯಾದ್ಯಾವಾನ್ ವಾ ಅಯಮಾಕಾಶಸ್ತಾವಾನೇಷೋऽಂತರ್ಹೃದಯ ಆಕಾಶ ಉಭೇ ಅಸ್ಮಿನ್ ದ್ಯಾವಾಪೃಥಿವೀ',

'ಬ್ರಹ್ಮನ ಆವಾಸಸ್ಥಾನವಾದ ಈ ಶರೀರದಲ್ಲಿ ಚಿಕ್ಕ ಹೃದಯಕಮಲವಿದೆ. ಅದರಲ್ಲಿ ಅತ್ಯಂತ ಅಲ್ಪವಾದ ಆಕಾಶವಿದೆ, ಅದರಲ್ಲಿ ಏನು ಇದೆಯೋ ಅದನ್ನು ಹುಡುಕಬೇಕು, ಅಂದರೆ ಜಿಜ್ಞಾಸೆ ಮಾಡಬೇಕು. ಅದರಲ್ಲಿ ಏನನ್ನು ಹುಡುಕಬೇಕು ? ಏನನ್ನು ಜಿಜ್ಞಾಸೆ ಮಾಡಬೇಕು? ಈ ಪ್ರಶ್ನೆಗಳಿಗೆ ಗುರುಗಳು ಉತ್ತರಿಸುತ್ತಾರೆ. ಶರೀರದಲ್ಲಿ ಹೃತ್‌ಕಮಲವಿದೆ, ಅದರಲ್ಲಿ ಆಕಾಶವಿದೆ, ಆಕಾಶದಲ್ಲಿ ಬ್ರಹ್ಮನಿದ್ದಾನೆ, ಹೊರಗೆ ಎಷ್ಟು ವಿಶಾಲವಾದ ಆಕಾಶವಿದೆಯೋ, ಅವನ ಹೃದಯದಲ್ಲಿ ಅಷ್ಟುವಿಶಾಲವಾದ ಆಕಾಶವಿದೆ. ಇವನು ಸಮಗ್ರ ದ್ಯುಲೋಕ,

ಭೂಲೋಕಗಳಿಗೆಲ್ಲಾ ಆಧಾರನಾಗಿದ್ದಾನೆ' ಇತ್ಯಾದಿಯಾಗಿ ಛಾಂದೋಗ್ಯದ ಎಂಟನೇ ಅಧ್ಯಾಯವು ಪ್ರಾರಂಭವಾಗುತ್ತದೆ.

ಹೃತ್ಪದ್ಮಸ್ಥನಾದವನು ಯಾರು ?

तत्वप्रकाशिका – तस्य च विष्णोरन्यत्वेऽक्षरस्य विष्णुत्वसाधकसर्वाधारत्वं चान्यस्य प्रसज्येतेत्यवश्यं निर्णेयता ।

ಇಲ್ಲಿರುವ ಹೃತ್ಪದ್ಮಸ್ಥನಾದವನು ವಿಷ್ಣುವಿಗಿಂತ ಭಿನ್ನನಾದರೆ ಅಕ್ಷರನಿಗೆ ವಿಷ್ಣುತ್ವಸಾಧಕವಾದ ಸರ್ವಾಧಾರತ್ವವು ಬೇರೆಯವರಲ್ಲಿ ಬರುತ್ತದೆಂದು ಹೇಳಿದಂತಾಯಿತು. ಆದ್ದರಿಂದ ಹೃತ್ಪದ್ಮಸ್ಥ-ನಾದವನನ್ನು ಯಾರೆಂದು ಅವಶ್ಯವಾಗಿ ನಿರ್ಣಯ ಮಾಡಬೇಕು.

ಅಧಿಕರಣದ ಸಂದೇಹ, ಸಂದೇಹಬೀಜಗಳು

तत्वप्रकाशिका – तद्धृदयपद्मस्थत्वं विषयः । किं विष्णोरथाकाशस्योत जीवस्येति संशयः । उक्तसाधारण्यं सन्देहबीजम् ।

ಅಂತಹ ಹೃದಯಪದ್ಮಸ್ಥತ್ವವೇ ವಿಷಯ. ಹೃತ್ಪದ್ಮಸ್ಥನಾದವನು, ವಿಷ್ಣುವೋ, ಆಕಾಶವೋ, ಅಥವಾ ಜೀವನೋ? ಎಂದು ಸಂಶಯ. ಶ್ರುತಿಗಳು ಮೂವರಲ್ಲೂ ಸಾಧಾರಣವಾಗಿರುವುದೇ ಸಂದೇಹಬೀಜ.

ಹೃತ್ಪದ್ಮಸ್ಥವಾದದ್ದು ಭೂತಾಕಾಶವೆಂದು ಪೂರ್ವಪಕ್ಷ

तत्वप्रकाशिका – सर्वाधारतया हृत्पद्मस्थत्वमाकाशस्येति तावत् पूर्वःपक्षः । 'दहरेऽस्मिन्नन्तर आकाशः' इति हृत्पद्मे दहराकाशस्थितिश्रवणात् तस्यैव 'उभे अस्मिन्' इति सर्वाधारत्वोक्तेरित्यर्थः ।

ಹೃತ್ಪದ್ಮಸ್ಥವಾದದ್ದು ಭೂತಾಕಾಶವೇ ಆಗಿದೆ. ಸಕಲಕ್ಕೂ ಆಧಾರವಾಗಿದೆ ಎಂದು ಪೂರ್ವಪಕ್ಷ. 'ದಹರೋऽಸ್ಮಿನ್ನಂತರ ಆಕಾಶಃ' ಎಂಬುದಾಗಿ ಹೃತ್ಪದ್ಮದಲ್ಲಿ ಸಣ್ಣದಾದ ಆಕಾಶದ ಸ್ಥಿತಿಯೂ ಶ್ರುತವಾಗಿದೆ. ಅಂತಹ ಆಕಾಶವೇ 'ಉಭೇ ಅಸ್ಮಿನ್' ಇತ್ಯಾದಿ ಶ್ರುತಿಬಲದಿಂದ ಸಕಲಕ್ಕೂ ಆಧಾರವಾಗಿದೆ ಎಂದೂ ಕೂಡ ತಿಳಿಯುತ್ತಿದೆ.

ಆಕಾಶಸ್ತಲ್ಲಿಂಗಾತ್ ಎಂಬ ಸೂತ್ರದಲ್ಲಿ ನಿರ್ಣಯವಾಗಿದೆ ಅಲ್ಲವೇ?

तत्वप्रकाशिका – नन्वस्त्वाकाशस्य सर्वाधारतया हृदयपद्मस्थत्वम् । तस्य चाऽऽकाशस्तल्लिङ्गादिति न्यायेन विष्णुत्वे तस्यैव हृत्पद्मस्थत्वसिद्धिरित्यत आह – स चेति ।।

ಆಕಾಶವು ಸಕಲಕ್ಕೂ ಆಧಾರವಾದ್ದರಿಂದ ಹೃತ್ಪದ್ಮಸ್ಥವಾಗಿದೆ ಎಂದು ಒಪ್ಪೋಣ, ಆದರೆ 'ಆಕಾಶಸ್ತಲ್ಲಿಂಗಾತ್' ಎಂಬ ಪ್ರಥಮಪಾದದ ಸೂತ್ರದಂತೆ ವಿಷ್ಣುವೇ ಆಕಾಶ ಶಬ್ದಪ್ರತಿಪಾದ್ಯನಾಗಿದ್ದಾನೆ, ಅಂತಹ ವಿಷ್ಣುವಿಗೇ ಹೃತ್ಪದ್ಮಸ್ಥತ್ವವೂ ಕೂಡ ಸಿದ್ಧವಾಗುತ್ತದಲ್ಲವೆ? ಈ ಪ್ರಶ್ನೆಗೆ 'ಸಚ ಆಕಾಶಃ ನ ವಿಷ್ಣುಃ' ಎಂಬ ಭಾಷ್ಯದಿಂದ ಉತ್ತರಿಸಿದ್ದಾರೆ.

ನಾರಾಯಣೋಪನಿಷತ್ತಿನ ಸಮಾಖ್ಯಾನ

तत्वप्रकाशिका – नात्रोक्ताऽऽकाशो विष्णुः । 'तस्यान्ते सुषिरम्' इति प्रसिद्धाकाशस्यैव सर्वाधारतया हृत्पद्मस्थत्वोक्तेः तत्समाख्यानादित्यर्थः ।

ಛಾಂದೋಗ್ಯದ ಈ ಪ್ರಕರಣದಲ್ಲಿ ವಿಷ್ಣುವನ್ನು ಪ್ರತಿಪಾದನೆ ಮಾಡುವುದಿಲ್ಲ. 'ತಸ್ಯಾಂತೇ ಸುಷಿರಮ್' ಎಂಬ ಶ್ರುತಿಯಿಂದ ಪ್ರಸಿದ್ಧವಾದ ಭೂತಾಕಾಶವೇ ಸಕಲಕ್ಕೂ ಆಧಾರವಾಗಿದೆ ಎಂದು ಸ್ಪಷ್ಟವಾಗಿ ತಿಳಿಯುತ್ತದೆ. ಇಂತಹ ಆಕಾಶವೇ ಹೃತ್ಪದ್ಮಸ್ಥವಾಗಿದೆ ಎಂದು ತಿಳಿಯುತ್ತದೆ. ಹೀಗೆ ನಾರಾಯಣೋಪನಿಷತ್ತಿನ ಸಮಾಖ್ಯಾನವಿರುವುದರಿಂದಲೂ, ಭೂತಾಕಾಶವೇ ಹೃತ್ಪದ್ಮಸ್ಥ-ವಾಗುತ್ತದೆ.

ಸುಷಿರವು ಆಕಾಶಶಬ್ದವಾಚ್ಯವೆಂದು ಹೇಳಲು ಸಾಧ್ಯವಿಲ್ಲ

तत्वप्रकाशिका – नच वाच्यम् अस्तु आकाशशब्देन सुषिरमेव । 'तस्मिन् यदन्तः' इति हृत्पद्मस्थाकाशगतो विष्णुः सर्वाधारतयोच्यते इति । तथा सति वाक्यान्वयानुपपत्तेः ।

'ಆಕಾಶ' ಶಬ್ದದಿಂದ 'ಸುಷಿರವೇ' ಪ್ರತಿಪಾದ್ಯವಾಗಲಿ. ಆದರೆ 'ತಸ್ಮಿನ್' ಎಂಬ ವಾಕ್ಯದಿಂದ ಹೃತ್ಪದ್ಮಸ್ಥವಾದ ಆಕಾಶದಲ್ಲಿರುವ ವಿಷ್ಣು ಸಕಲಕ್ಕೂ ಆಧಾರನೆಂದು ಹೇಳಲಾಗಿದೆ. ಹೀಗೇಕೆ

ವ್ಯಾಖ್ಯಾನಿಸಬಾರದು? ಎಂದು ಪ್ರಶ್ನಿಸಬಾರದು. ಹಾಗಾದಲ್ಲಿ ಹಿಂದಿನ ಮುಂದಿನ ವಾಕ್ಯಗಳಿಗೆ ಅನ್ವಯವೇ ಕೂಡುವುದಿಲ್ಲ.

ಹೃತ್ಪದ್ಮಸ್ಥವಾದ ಆಕಾಶದಲ್ಲಿ ವಿಷ್ಣುವಿದ್ದಾನೆಯೇ ?

तत्वप्रकाशिका – तथा हि । तस्मिन्नित्यत्र विष्णुत्वाभिप्राये किं तदत्र विद्यते इति प्रश्नस्य ब्रह्म विद्यत इति परिहारं विना 'यावान्वा' इत्यादेरभिप्राय्रासङ्गतिः ।

ಹೇಗೆಂದರೆ 'ತಸ್ಮಿನ್' ಎಂಬಲ್ಲಿ ಹೃತ್ಪದ್ಮಸ್ಥಿತವಾದ ಆಕಾಶದಲ್ಲಿ ವಿಷ್ಣುವಿದ್ದಾನೆಂದು ಅರ್ಥೈಸಿದರೆ ಮುಂದೆ 'ಕಿಂ ತದತ್ರ ವಿದ್ಯತೇ' ಹೃದಯಾಕಾಶದಲ್ಲಿ ಏನಿದೆ ಎಂದು ಪ್ರಶ್ನಿಸಲಾಗಿದೆ. ಅದಕ್ಕೆ ನಿಮ್ಮ ಪ್ರಕಾರ ಬ್ರಹ್ಮನಿದ್ದಾನೆಂದು ಉತ್ತರಿಸಬೇಕು. ಅದನ್ನು ಬಿಟ್ಟು ಹೊರಗಡೆ ಎಷ್ಟು ವಿಶಾಲವಾದ ಆಕಾಶವಿದೆಯೋ ಅಷ್ಟು ಆಕಾಶವಿದೆ ಎಂಬ 'ಯಾವಾನ್ವಾऽಯಮಾಕಾಶಃ' ಇತ್ಯಾದಿ ಉತ್ತರವು ಅಸಂಗತವಾಗುತ್ತದೆ.

ಭೂತಾಕಾಶವನ್ನು ವಿವಕ್ಷಿಸಿದಾಗ ಬಾಧಕವಿಲ್ಲ

तत्वप्रकाशिका – आकाशपक्षे त्वस्त्यन्वयः । हृदयाकाशस्थमुपास्यमित्युक्ते किं तत्र स्थितमिति प्रश्ने यावान्वा अयमाकाश इति प्रागुक्ताकाशमेव विशिष्योभे अस्मिन्नित्यादिपरिहारसंश्लेषात् ।

ಆದರೆ ಭೂತಾಕಾಶವೇ ಹೃತ್ಪದ್ಮಸ್ಥಿತವೆಂದು ಒಪ್ಪಿದಾಗ, ಹಿಂದಿನ ಮುಂದಿನ ವಾಕ್ಯಗಳಿಗೆ ಅನ್ವಯವು ಸ್ಪಷ್ಟವಾಗಿ ತಿಳಿಯುತ್ತದೆ -

ಹೇಗೆಂದರೆ ಹೃದಯಾಕಾಶದಲ್ಲಿರುವುದನ್ನು ಉಪಾಸನೆ ಮಾಡಬೇಕು ಎಂದು ಹೇಳಿದಾಗ ಅಲ್ಲಿ ಏನಿದೆ ? ಎಂಬ ಪ್ರಶ್ನೆ ಹುಟ್ಟುತ್ತದೆ. ಆವಾಗ 'ಯಾವಾನ್ವಾ ಅಯಮಾಕಾಶಃ' ಇತ್ಯಾದಿ ವಾಕ್ಯಗಳಿಂದ ಹಿಂದೆ ಹೇಳಲ್ಪಟ್ಟ ಆಕಾಶವನ್ನೇ ಉಲ್ಲೇಖ ಮಾಡಿ 'ಉಭೇ ಅಸ್ಮಿನ್' ಇತ್ಯಾದಿ ವಾಕ್ಯದಿಂದ, ಆ ಆಕಾಶವು ಸಕಲಕ್ಕೂ ಆಧಾರವಾಗಿದೆ ಎಂದು ಉತ್ತರಿಸಲಾಗಿದೆ. ಈ ಪ್ರಶ್ನೋತ್ತರಗಳು ಅತ್ಯಂತ ಸಂಗತವಾಗಿವೆ.

ಯಾರು ಸರ್ವಾಧಾರ ?

तत्वप्रकाशिका – नच यावानित्यादिनाऽऽकाशाख्यो विष्णुः सर्वाधारतया परिहारे कथ्यत इत्यन्वयोपपत्तिः ।

'ಯಾವಾನ್' ಇತ್ಯಾದಿ ಶ್ರುತಿಯು ವಿಷ್ಣುವೇ ಸರ್ವಾಧಾರನಾಗಿದ್ದಾನೆಂಬ ಪರಿಹಾರವನ್ನು ಹೇಳುತ್ತಿಲ್ಲವೆಂದು ಅನ್ವಯ.

ಸುಷಿರವೇ ಸಕಲಕ್ಕೂ ಆಧಾರ

तत्वप्रकाशिका – तस्मिन् सर्वं प्रतिष्ठितमिति साक्षात्सुषिरस्यैव सर्वाधारत्वोक्तिविरोधात् । तस्मादाकाशस्यैव सर्वाधारतया हृत्पद्मस्थत्वम् ।

'ತಸ್ಮಿನ್ ಸರ್ವಂ ಪ್ರತಿಷ್ಠಿತಮ್' ಎಂಬುದಾಗಿ ಹೃದಯದಲ್ಲಿರುವ ಸುಷಿರವೇ ಸಕಲಕ್ಕೂ ಆಧಾರವಾಗಿದೆ ಎಂದು ಕೇಳಿಬರುತ್ತಿದೆ. ಬ್ರಹ್ಮನನ್ನು ಸಕಲಾಧಾರನೆಂದು ಹೇಳಿದರೆ, ಈ ಶ್ರುತಿಯ ವಿರೋಧವೂ ಕೂಡ ಬರುತ್ತದೆ. ಆದ್ದರಿಂದ ಆಕಾಶವೇ ಸಕಲಕ್ಕೂ ಆಧಾರವಾಗಿದೆ. ಹಾಗೂ ಅದೇ ಹೃತ್ಪದ್ಮಸ್ಥವಾಗಿದೆ ಎಂದು ಹೇಳಿದಂತಾಯಿತು.

ಹೃತ್ಪದ್ಮಸ್ಥನಾದವನು ಜೀವನೆಂದು ಎರಡನೆಯ ಪೂರ್ವಪಕ್ಷ

तत्वप्रकाशिका – जीवस्य वैतद्भवेत् । उत्तरत्र 'परंज्योतिरुपसम्पद्य स्वेन रूपेणाभिनिष्पद्यत एष आत्मेति होवाच' इति जीवस्य 'य आत्माऽपहतपाप्मा' इत्युक्तहृत्पद्मस्थात्मतया परामर्शात् दहरस्थत्वलिङ्गाच्च ।

ಅಥವಾ ಜೀವನೇ ಹೃತ್ಪದ್ಮಸ್ಥನಾಗುತ್ತಾನೆ, ಏಕೆಂದರೆ ಇದೇ ಛಾಂದೋಗ್ಯ ಉಪನಿಷತ್ತಿನ ಮುಂದಿನ ಖಂಡದಲ್ಲಿ 'ಪರಂಜ್ಯೋತಿರುಪಸಂಪದ್ಯ ಸ್ವೇನ ರೂಪೇಣಾಭಿನಿಷ್ಪದ್ಯತ ಏಷ ಆತ್ಮೇತಿ ಹೋವಾಚ', 'ಯೋಗ್ಯನಾದ ಜೀವನು ಪ್ರಕಾಶ ಸ್ವರೂಪನಾಗಿ ಪರಮಾತ್ಮನ ಸಾನ್ನಿಧ್ಯವನ್ನು ಹೊಂದಿ ಸ್ವರೂಪಾವಿರ್ಭಾವವನ್ನು ಹೊಂದುತ್ತಾನೆ ಇವನೇ ಆತ್ಮನು'. ಈ ವಾಕ್ಯದಲ್ಲಿ 'ಯ ಆತ್ಮಾ ಅಪಹತಪಾಪ್ಮಾ', ಎಂದು ಯಾವ ಹೃತ್ಪದ್ಮಸ್ಥನಾದ ಆತ್ಮನನ್ನು ಪರಾಮರ್ಶೆ

ಮಾಡಲಾಗಿದೆಯೋ ಅವನೇ ಜೀವನು. ಹಾಗೂ 'ಅಲ್ಪಸ್ಥಾನಸ್ಥಿತತ್ವ' ಎಂಬ ಲಿಂಗವೂ ಕೂಡ ಜೀವನಲ್ಲೇ ಯುಕ್ತವಾಗುತ್ತದೆ.

ವ್ಯಾಪ್ತನಾದ ಪರಮಾತ್ಮನು ಅಣುರೂಪನಾಗಲಾರ

तत्वप्रकाशिका – तद्धि अणोर्जीवस्यैव युक्तं न सर्वगतस्य हरेः ।

ಹೃದಯಪುಂಡರೀಕದಲ್ಲಿರುವ ಆಕಾಶವು ಅತ್ಯಂತ ಅಣುರೂಪವಾಗಿದೆ. ಇಂತಹ ಅಣುಪ್ರದೇಶದಲ್ಲಿ, ಅಣುಸ್ವರೂಪನಾದ ಜೀವನೇ ಇರಲು ಅರ್ಹ; ಹೊರತು ವ್ಯಾಪ್ತನಾದ ಪರಮಾತ್ಮನಲ್ಲ.

ಇಬ್ಬರಲ್ಲಿ ಸಮಾನವಾದ ದೋಷ ದೋಷವೇ ಅಲ್ಲ

तत्वप्रकाशिका – न चान्वयाभावदोषः । विष्णुपक्षेऽपि साम्यात् । अतो भगवदितरदेव चन्द्रादित्याद्याधाराक्षरमिति ।

ಹಿಂದೆ ಹೇಳಿದ ಅನ್ವಯಾಭಾವದೋಷವು ಜೀವಪಕ್ಷದಲ್ಲಿ ಬರುವುದಿಲ್ಲ. ಏಕೆಂದರೆ ಹೃತ್ಪದ್ಮಸ್ಥನಾಗಿದ್ದವನು ವಿಷ್ಣುವೆಂದು ಹೇಳಿದರೂ ಈ ದೋಷವು ಸಮಾನವಾಗಿದೆ. ಯಾವ ದೋಷವು ಇಬ್ಬರಿಗೂ ಸಮಾನವಾಗಿರುತ್ತದೋ ಅದು ದೋಷವೇ ಅಲ್ಲ. ಆದ್ದರಿಂದ ಭೂತಾಕಾಶ ಅಥವಾ ಜೀವರುಗಳೇ, ಹೃತ್ಪದ್ಮಸ್ಥರಾಗುತ್ತಾರೆ, ಚಂದ್ರಾದಿತ್ಯ ಮೊದಲಾದವರಿಗೂ ಆಶ್ರಯರಾಗುತ್ತಾರೆ. ಅಕ್ಷರಶಬ್ದದಿಂದ ಪ್ರತಿಪಾದ್ಯರೂ ಆಗುತ್ತಾರೆ ಹೊರತು, ಅಕ್ಷರನೂ, ಹೃತ್ಪದ್ಮಸ್ಥನೂ ವಿಷ್ಣುವಲ್ಲ ಎಂದು ಪೂರ್ವಪಕ್ಷ.

ದಹರಾಕಾಶದಲ್ಲಿರುವವನು ಮಹಾವಿಷ್ಣುವೇ ಆಗಿದ್ದಾನೆಂದು ಸಿದ್ಧಾಂತ

तत्वप्रकाशिका – सिद्धान्तयत्सूत्रमवतार्य व्याचष्टे – अत इति ।। दहरपद्मस्थो विष्णुरेव भवेत् । य आत्माऽपहतपाप्मेत्यादिनोत्तरवाक्ये हृत्पद्मस्थस्यापहत- पाप्मत्वादिगुणश्रवणादिति भावः ।

ಈ ಪೂರ್ವಪಕ್ಷವನ್ನು ನಿರಾಕರಣೆ ಮಾಡುತ್ತಾ ಸಿದ್ಧಾಂತಸ್ಥಾಪನೆಗಾಗಿ ಸೂತ್ರವನ್ನು ಉಲ್ಲೇಖಿಸುತ್ತಾ ವ್ಯಾಖ್ಯಾನ ಮಾಡುತ್ತಿದ್ದಾರೆ 'ಅತಃ' ಇತ್ಯಾದಿಯಾಗಿ. ಸೂಕ್ಷ್ಮವಾದ ಹೃದಯಪದ್ಮದಲ್ಲಿರುವವನು ವಿಷ್ಣುವೇ ಆಗಿದ್ದಾನೆ. 'ಯ ಆತ್ಮಾ ಅಪಹತಪಾಪ್ಮಾ' ಮೊದಲಾದ ಮುಂದಿನ ವಾಕ್ಯದಿಂದ ಹೃತ್ಪದ್ಮಸ್ಥನಲ್ಲಿ ಅಪಹತಪಾಪ್ಮತ್ವ ಮೊದಲಾದ ಗುಣಗಳು ಶ್ರುತವಾಗಿರುವುದರಿಂದ.

ಅಪಹತಪಾಪ್ಮತ್ವವು ವಿಷ್ಣುತ್ವ ನಿಶ್ಚಾಯಕ

तत्वप्रकाशिका – अपहतपाप्मत्वादिकं कथं विष्णुत्वनिश्चायकमित्यत आह – य इति ।।

'ಅಪಹತಪಾಪ್ಮತ್ವ' ಮುಂತಾದವು ವಿಷ್ಣುತ್ವಕ್ಕೆ ನಿಶ್ಚಾಯಕವೆಂದು ಹೇಗೆ ಹೇಳುತ್ತೀರಿ? ಎಂಬ ಪ್ರಶ್ನೆಗೆ 'ಯಃ' ಇತ್ಯಾದಿ ಶ್ರುತಿಯಿಂದ ಉತ್ತರಿಸಿದ್ದಾರೆ.

ಶ್ರುತಿಯಲ್ಲಿರುವ 'ಅತ್ಯೇತಿ' ಎಂಬುದರ ವ್ಯಾಖ್ಯಾನ

तत्वप्रकाशिका – अत्येति अतिक्रम्य वर्तते । न चाकाशस्यापि पापाद्यभावेनैते गुणा युक्ता इति वाच्यम् । तस्याचेतनस्य तत्प्राप्त्यभावेन निषेधायोगात् ।

ಶ್ರುತಿಯಲ್ಲಿರುವ 'ಅತ್ಯೇತಿ' ಎಂಬ ಶಬ್ದಕ್ಕೆ ಅತಿಕ್ರಮಣ ಮಾಡಿ ಇರುತ್ತಾನೆಂದರ್ಥ. ಭೂತಾಕಾಶವು ಜಡವಾದ್ದರಿಂದ ಪಾಪಗಳು ಅದರಲ್ಲಿಯೂ ಇಲ್ಲವಲ್ಲವೇ? ಆದ್ದರಿಂದ ಭೂತಾಕಾಶದ ಗುಣವನ್ನೇ ಶ್ರುತಿಯು ವರ್ಣಿಸುತ್ತದೆ ಎಂದು ಏಕೆ ಹೇಳಬಾರದು? ಎಂದು ಪ್ರಶ್ನಿಸಬಾರದು. ಅಚೇತನವಾದ ಆಕಾಶದಲ್ಲಿ ಪಾಪವಿರಲು ಪ್ರಸಕ್ತಿಯೇ ಇಲ್ಲ. ಹೀಗಿರುವಾಗ ಅದನ್ನು ನಿಷೇಧ ಮಾಡುವುದು, ಅಪ್ರಸ್ತುತವೆನಿಸುತ್ತದೆ.

ಸತ್ಯಕಾಮತ್ವಾದಿಗಳು ಭೂತಾಕಾಶದಲ್ಲಿ ಅತ್ಯಂತ ಅಸಂಭಾವಿತ

तत्वप्रकाशिका – विष्णोश्चेतनत्वादस्ति प्राप्तिः । सत्यकामत्वाद्ययोगाच्च।

ವಿಷ್ಣುವಾದರೂ ಸಹ ಚೇತನನಾದುದರಿಂದ ಪಾಪ ಇರಲು ಪ್ರಸಕ್ತಿ ಇದೆ. ಅದರ ನಿಷೇಧವು ಯುಕ್ತವಾಗುತ್ತದೆ. ಮತ್ತು ಭೂತಾಕಾಶದಲ್ಲಿ ಸತ್ಯಕಾಮತ್ವಾದಿ ಗುಣಗಳು ಅತ್ಯಂತ ಅಸಂಭಾವಿತವಾಗಿದೆ.

ಸತ್ಯಕಾಮ ಇತ್ಯಾದಿ ಭಾಷ್ಯದ ವ್ಯಾಖ್ಯಾನ

तत्वप्रकाशिका – तथापि नैते गुणा विष्णोरेव रमादिष्वपि सम्भवादित्यत आह – नित्येति ।। ननु यथाकथञ्चिदपि तेऽन्यत्र गुणाः सन्त्येव अतः कथं तैर्विष्णुत्वनिश्चय इत्यत आह – सापेक्षेति ।। अपहतपाप्मत्वादीनां कथञ्चिदन्यत्र वृत्तावपि न कथञ्चिदन्यत्र सत्यकामत्वादि इत्याशयेनाऽऽह – सत्यकाम इति ।।

ಆದರೂ ಸಹ ಸತ್ಯಕಾಮತ್ವಾದಿ ಗುಣಗಳು, ವಿಷ್ಣುವಿನಲ್ಲಿರುವಂತೆ, ಲಕ್ಷ್ಮೀ ಮೊದಲಾದವರಲ್ಲಿಯೂ ಇರುತ್ತವೆ. ಹೀಗಿರುವಾಗ ವಿಷ್ಣುವಿನ ಅಸಾಧಾರಣಧರ್ಮವೆಂದು ಹೇಗೆ ನಿಶ್ಚಯಿಸುತ್ತೀರಿ? ಎಂಬ ಪ್ರಶ್ನೆಗೆ 'ನಿತ್ಯ' ಇತ್ಯಾದಿ ಪ್ರಮಾಣದಿಂದ ಉತ್ತರಿಸಿದ್ದಾರೆ. ವಿಷ್ಣುವಿನ ಅನುಗ್ರಹದಿಂದ ಅಸ್ವತಂತ್ರವಾಗಿ ರಮಾದಿಗಳಲ್ಲಿ, ಸತ್ಯಕಾಮತ್ವಾದಿ ಗುಣಗಳು ಇದ್ದೇ ಇರುತ್ತವೆ. ಹೇಗಾದರೂ ಇರಲಿ ವಿಷ್ಣುವಿನಂತೆ ಬೇರೆಯವರಲ್ಲೂ ಇರುವಾಗ ಅಸಾಧಾರಣಧರ್ಮವೆಂದು ಹೇಗೆ ಪರಿಗಣಿಸುತ್ತೀರಿ? ಇವುಗಳು ಹೇಗೆ ವಿಷ್ಣುತ್ವನಿಶ್ಚಾಯಕ-ವಾಗುತ್ತವೆ? ಎಂಬ ಪ್ರಶ್ನೆಗೆ 'ಸಾಪೇಕ್ಷ' ಎಂಬುದರಿಂದ ಉತ್ತರಿಸಿದ್ದಾರೆ. ಅಪಹತಪಾಪ್ಮತ್ವಾದಿ-ಗುಣಗಳು ಲಕ್ಷ್ಮೀದೇವಿ ಮೊದಲಾದವರಲ್ಲಿ, ಹೇಗಾದರೂ ಬರಬಹುದು. ಆದರೆ ಸತ್ಯಕಾಮತ್ವಾದಿಗುಣಗಳಂತೂ ಕಥಂಚಿದಪಿ ಬರುವುದಿಲ್ಲವೆಂದು ತಿಳಿಸುವುದಕ್ಕಾಗಿ 'ಸತ್ಯಕಾಮಃ' ಇತ್ಯಾದಿ ಭಾಷ್ಯವು ಹೊರಟಿದೆ.

ಭೂತಾಕಾಶದಲ್ಲಿ ಅಪಹತಪಾಪ್ಮತ್ವಾದಿಗಳು ಸರ್ವಥಾ ಇಲ್ಲ

तत्वप्रकाशिका – अनेनाऽऽकाशाभिमानिविषयतयाऽपहतपाप्मत्वाद्युप-पत्तिरिति परास्तम् ।। १४ ।।

ಹೀಗೆ ಹೇಳಿದ್ದರಿಂದ ಭೂತಾಕಾಶಕ್ಕೆ ಅಭಿಮಾನಿದೇವತೆಯಾದ್ದರಿಂದ ಲಕ್ಷ್ಮೀದೇವಿಯಲ್ಲಿ ಅಪಹತಪಾಪ್ಮತ್ವಾದಿಗುಣಗಳು ಬರುವಂತೆ ಭೂತಾಕಾಶದಲ್ಲಿಯೂ ಬರುತ್ತದೆಂಬ ಶಂಕೆಯನ್ನು ನಿರಾಕರಿಸಿದಂತಾಯಿತು. ಹೇಗೆಂದರೆ ಲಕ್ಷ್ಮೀದೇವಿಯಲ್ಲಿರುವಂತಹ ಅಪಹತಪಾಪ್ಮತ್ವಾದಿ-ಗುಣಗಳು ಅಸ್ವತಂತ್ರವಾಗಿವೆ, ಸತ್ಯಕಾಮತ್ವಾದಿಗುಣಗಳಂತೂ ಕಥಂಚಿದಪಿ ಬರುವುದಿಲ್ಲವೆಂದು.

ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ವಿರಚಿತವಾದ

ಭಾವದೀಪ

ವಿಷಯವಾಕ್ಯವನ್ನೇಕೆ ನ್ಯಾಯವಿವರಣದಲ್ಲಿ ಉದಾಹರಿಸಿಲ್ಲ

भावदीपः – दहर उत्तरेभ्यः ।।

अत्र न्यायविवरणे स्पष्टत्वात् श्रुतीरनुदाहृत्य हृत्पद्मस्थितत्वं साधारणमित्युक्तम्। तदुदाहरणपूर्वकं साधारण्यं व्यञ्जयन्नस्य पादान्तर्भावमाह – अत्र यो वेदेति ।।

ಈ ಅಧಿಕರಣದ ನ್ಯಾಯವಿವರಣದಲ್ಲಿ ಸ್ಪಷ್ಟವಾದ್ದರಿಂದ ಶ್ರುತಿಗಳನ್ನು ಉದಾಹರಿಸದೆ ಹೃತ್ಪದ್ಮಸ್ಥಿತ್ವವು ಉಭಯಸಾಧಾರಣವೆಂದು ಹೇಳಿದ್ದಾರೆ. ಪ್ರಕೃತ ಟೀಕೆಯಲ್ಲಿ ಆ ಶ್ರುತಿಗಳನ್ನು ಉದಾಹರಿಸುತ್ತಾ ಉಭಯಸಾಧಾರಣ್ಯವನ್ನು ಸ್ಪಷ್ಟವಾಗಿ ತೋರಿಸುತ್ತಾ ಪಾದಾಂತರ್ಭಾವಸಂಗತಿಯನ್ನು ಸಮರ್ಥಿಸುತ್ತಿದ್ದಾರೆ ''ಅತ್ರ ಯೋ ವೇದ'' ಇತ್ಯಾದಿ ವಾಕ್ಯದಿಂದ.

ವಿಶೇಷವಿಚಾರ - ಪೂರ್ವಪಕ್ಷ ಹೀಗಿದೆ - ಹೃತ್ಪದ್ಮಸ್ಥತ್ವವನ್ನು ಭೂತಾಕಾಶದಲ್ಲೇ ಹೇಳಬೇಕು ಹೊರತು, ಬ್ರಹ್ಮನಲ್ಲಲ್ಲ. ಬ್ರಹ್ಮನಲ್ಲಿ ಹೇಳುವುದಾದರೆ ಹೃತ್ಪದ್ಮಸ್ಥವಾದ ದಹರಾಕಾಶವನ್ನೇ ಬ್ರಹ್ಮನೆಂದು ಹೇಳುತ್ತಿರೋ, ಅಥವಾ ದಹರಾಕಾಶಾದಲ್ಲಿ ಅನ್ವೇಷಣೀಯ-ನಾದವನು ಬ್ರಹ್ಮನೆಂದು ಹೇಳುತ್ತಿರೋ? ಈ ಪ್ರಶ್ನೆಗೆ ಉತ್ತರಿಸಬೇಕು.

ಪ್ರಥಮಪಕ್ಷವನ್ನು 'ಆಕಾಶಸ್ಯ ಪ್ರತೀಯತೇ' ಇತ್ಯಾದಿ ಭಾಷ್ಯದ ಮಾತಿನಿಂದ ಮತ್ತು ಭಾಷ್ಯದ ಈ ಮಾತನ್ನು ವ್ಯಾಖ್ಯಾನ ಮಾಡುವ 'ದಹರೋऽಸ್ಮಿನ್ನಂತರಾಕಾಶಃ' ಇತ್ಯಾದಿ ಟೀಕಾವಾಕ್ಯಗಳಿಂದಲೂ ದೂಷಣೆ ಮಾಡಿದ್ದಾಗಿದೆ.

ಇಷ್ಟು ಅಭಿಪ್ರಾಯ. 'ದಹರೋಽಸ್ಮಿನ್ನಂತರಾಕಾಶಃ' ಇತ್ಯಾದಿ ಹೃತ್ಪದ್ಮಸ್ಥವಾಕ್ಯದಲ್ಲಿ ಮತ್ತು ಮುಂದಿರುವ 'ತಾವಾನೇಷೋಽಂತರ್ಹೃದಯ ಆಕಾಶ ಉಭೇ ಅಸ್ಮಿನ್ ದ್ಯಾವಾಪೃಥಿವೀ' ಇತ್ಯಾದಿಯಾದ ಸರ್ವಾಧಾರವಾಕ್ಯದಲ್ಲಿಯೂ ಕೂಡ ಗಗನದಲ್ಲಿ ಪ್ರಸಿದ್ಧವಾದ ಆಕಾಶಶಬ್ದವೇ ಶ್ರುತವಾಗುತ್ತಿದೆ.ಆದ್ದರಿಂದ ಬ್ರಹ್ಮನನ್ನು ದಹರಾಕಾಶನೆಂದು ಹೇಳಲು ಸಾಧ್ಯವಿಲ್ಲ.

'ಆಕಾಶಾಸ್ತಲ್ಲಿಂಗಾತ್' ಎಂಬ ಪ್ರಥಮ ಪಾದದ ಸೂತ್ರದಂತೆ ಅಪಹತಪಾಪತ್ವವೇ ಮೊದಲಾದ ಬ್ರಹ್ಮನ ಲಿಂಗಗಳು ಇಲ್ಲಿ ಶ್ರುತವಾದ್ದರಿಂದ ಬ್ರಹ್ಮನನ್ನು ಆಕಾಶಶಬ್ದ ಪ್ರತಿಪಾದ್ಯನೆಂದು ಹೇಳಬಹುದಲ್ಲವೇ? ಎಂದು ಪ್ರಶ್ನಿಸಬಾರದು.

'ಪದ್ಮಕೋಶಪ್ರತೀಕಾಶಂ ಹೃದಯಮ್' ಇತ್ಯಾದಿ ವಾಕ್ಯದಿಂದ ಪ್ರಕೃತವಾದ ಹೃತ್ಪದ್ಮವನ್ನು ಪರಾಮರ್ಶ ಮಾಡಿ, 'ತಸ್ಯಾಂತೇ ಸುಷಿರಂ ಸೂಕ್ಷ್ಮಂ ತಸ್ಮಿನ್ಸರ್ವಂ ಪ್ರತಿಷ್ಠಿತಮ್' ಎಂಬುದಾಗಿ ನಾರಾಯಣ ಶ್ರುತಿಯಲ್ಲಿ ಸುಷಿರಕ್ಕೆ ಹೃತ್ಪದ್ಮಸ್ಥತ್ವವನ್ನು ಮತ್ತು ಸಕಲ ಪದಾರ್ಥಗಳಿಗೆ ಆಶ್ರಯವಾಗಿರುವಿಕೆಯನ್ನು ಹೇಳಲಾಗಿದೆ.

ನಾರಾಯಣೋಪನಿಷತ್ತಿನಲ್ಲಿರುವ ಸುಷಿರ ಶಬ್ದವು ಬ್ರಹ್ಮಪರವೆಂದು ಹೇಳುತ್ತೇವೆ. ಆವಾಗ ಹೃತ್ಪದ್ಮಸ್ಥತ್ವ ಮತ್ತು ಸರ್ವಾಧಾರತ್ವ ಎರಡನ್ನೂ ಕೂಡ ಬ್ರಹ್ಮನಲ್ಲೇ ಹೇಳಿದಂತಾಗುತ್ತದಲ್ಲವೇ? ಎಂದು ಪ್ರಶ್ನಿಸಬಾರದು.

''ತಸ್ಯ ಮಧ್ಯೇ ವಹ್ನಿಶಿಖಾ ಅಣಿಯೋರ್ಧ್ವಾ ವ್ಯವಸ್ಥಿತಾ।
ತಸ್ಯಾಃ ಶಿಖಾಯಾ ಮಧ್ಯೇ ಪರಮಾತ್ಮಾ ವ್ಯವಸ್ಥಿತಃ'

ಎಂಬುದಾಗಿ ಹೃದಯಪದ್ಮದಲ್ಲಿ ಸುಷಿರವಿದೆ. ಆ ಸುಷಿರದಲ್ಲಿ ಸಣ್ಣದಾದ ತೇಜಸ್ಸಿದೆ, ಅದರ ಮಧ್ಯದಲ್ಲಿ ಪರಮಾತ್ಮನಿದ್ದಾನೆಂದು ಶ್ರುತಿಯು ಹೇಳುತ್ತಿದೆ. ಸುಷಿರದಲ್ಲಿರುವ ತೇಜಸ್ಸಿನ ಮಧ್ಯದಲ್ಲಿ ಪರಮಾತ್ಮನಿದ್ದಾನೆಂದು ಶ್ರುತಿಯು ಹೇಳುತ್ತಿರುವಾಗ ಸುಷಿರವನ್ನೇ ಪರಮಾತ್ಮನೆಂದು ಹೇಳುವುದು ತಪ್ಪಾಗುತ್ತದೆ.

ಮತ್ತು ದಹರಾಕಾಶವನ್ನೇ ಬ್ರಹ್ಮನೆಂದು ಹೇಳಿದರೆ, 'ತಸ್ಮಿನ್ ಯದಂತಸ್ತದನ್ವೇಷ್ಟವ್ಯಮ್' ಎಂಬುದಾಗಿ ದಹರಾಕಾಶದ ಒಳಗೆ ಇರುವವನನ್ನು ಅನ್ವೇಷಣೆ ಮಾಡಬೇಕೆಂದು ಶ್ರುತಿಯು ಹೇಳುತ್ತಿದೆ. ಈ ಅನ್ವೇಷಣೆಗೆ ವಿಷಯನಾದವನು ಬ್ರಹ್ಮನಾಗದೇ ಇರಬೇಕಾದೀತು. ಆದ್ದರಿಂದ ಜಿಜ್ಞಾಸೆಗೆ ವಿಷಯನಾದವನೇ ಬೇರೆ ಎಂದಾಗಿ ದಹರಾಕಾಶನು ಮಾತ್ರ ಪರಮಾತ್ಮನೆಂದಾಗಬೇಕಾದೀತು. ಆವಾಗ ಬ್ರಹ್ಮಜಿಜ್ಞಾಸೆ ಮಾಡಬೇಕೆಂದು ಹೇಳಿದ್ದೇ ತಪ್ಪಾಗುತ್ತದೆ.

ದಹರಾಕಾಶನು ಬ್ರಹ್ಮನಲ್ಲ. ದಹರಾಕಾಶದಲ್ಲಿ ಅನ್ವೇಷಣೆಗೆ ವಿಷಯನಾದವನನ್ನು ಬ್ರಹ್ಮನೆಂದು ಎರಡನೆಯ ಪಕ್ಷವನ್ನೂ ಕೂಡ ಒಪ್ಪಲು ಸಾಧ್ಯವಿಲ್ಲ. ಏಕೆಂದರೆ 'ದಹರೋऽಸ್ಮಿನ್ನಂತರಾಕಾಶಸ್ತಸ್ಮಿನ್ಯ-ದಂತಸ್ತದನ್ವೇಷ್ಟವ್ಯಮ್' ಇತ್ಯನೇನ 'ಯಾವಾನ್ವಾ ಅಯಮಾಕಾಶಸ್ತಾವಾನೇಷೋऽಂತರ್ಹೃದಯ ಆಕಾಶಃ' ಇತ್ಯಸ್ಯಾನ್ವಯಾಭಾವಾತ್' ಎಂಬ ನ್ಯಾಯವಿವರಣ ವಾಕ್ಯದಲ್ಲಿ ಮತ್ತು ಈ ವಾಕ್ಯವನ್ನು ವ್ಯಾಖ್ಯಾನ ಮಾಡುವ 'ವಾಕ್ಯಾನ್ವಯಾನುಪಪತ್ತೇಃ' ಇತ್ಯಾದಿಯಾದ ನ್ಯಾಯವಿವರಣದ ಟೀಕಾವಾಕ್ಯದಲ್ಲಿ ಈ ಪಕ್ಷವನ್ನು ನಿರಾಕರಣೆ ಮಾಡಿದ್ದಾರೆ.

ಈ ಟೀಕಾಭಿಪ್ರಾಯವನ್ನು ಹೀಗೆ ತಿಳಿಯಬೇಕು - 'ಯಾವಾನ್ವಾ ಅಯಮಾಕಾಶಃ' ಎಂಬ ವಾಕ್ಯದಲ್ಲಿರುವ ಆಕಾಶಶಬ್ದವು ಪ್ರಸಿದ್ಧವಾದ ಭೂತಾಕಾಶವನ್ನು ಹೇಳುತ್ತಿದೆಯೋ? ಅಥವಾ ಬ್ರಹ್ಮನನ್ನು ಹೇಳುತ್ತಿದೆಯೋ? ಎಂಬ ಪ್ರಶ್ನೆಗೆ ನೀವು ಉತ್ತರಿಸಬೇಕು.

ಮೊದಲನೆಯ ಪಕ್ಷ ತಪ್ಪು. ಏಕೆಂದರೆ 'ತಸ್ಮಿನ್ ಯದಂತಃ' ಎಂಬಲ್ಲಿ ಅನ್ವೇಷಣೆಗೆ ವಿಷಯನಾದವನೆಂದು ಹೇಳಲ್ಪಟ್ಟ ಹೃತ್ಪದ್ಮದಲ್ಲಿರುವ ದಹರಾಕಾಶಸ್ಥನಾದವನನ್ನು ಬ್ರಹ್ಮನೆಂದು ಹೇಳಿದರೆ 'ಕಿಂ ತದತ್ರ ವಿದ್ಯತೇ' 'ಅಲ್ಲಿ ಏನಿದೆ?' ಎಂಬ ಪ್ರಶ್ನೆಗೆ ಬ್ರಹ್ಮನಿದ್ದಾನೆಂದು ಉತ್ತರಿಸಬೇಕು. ಅದನ್ನು ಬಿಟ್ಟು 'ಯಾವಾನ್ವಾ ಅಯಮಾಕಾಶಃ' ಇತ್ಯಾದಿಯಾಗಿ ಪ್ರಸಿದ್ಧವಾದ ಆಕಾಶಕ್ಕೆ ಅನ್ವೇಷಣಾವಿಷಯತ್ವವನ್ನು ಹೇಳಿದರೆ ಅಸಂಗತವಾಗುತ್ತದೆ. ಹೀಗೆ ಅನನ್ವಯವೆಂಬ ಬಾಧಕವಿರುವ ಪ್ರಯುಕ್ತ 'ಯಾವಾನ್ವಾ ಅಯಮಾಕಾಶಃ' ಎಂಬಲ್ಲಿರುವ ಆಕಾಶಶಬ್ದವು ಪ್ರಸಿದ್ಧಾಕಾಶಪರವೆಂಬುದು ತಪ್ಪಾಗುತ್ತದೆ.

ಆಕಾಶದ ಬಗ್ಗೆ ಉತ್ತರಿಸುವುದು ಅಸಂಗತವಾಗುವುದಿಲ್ಲ. ಏಕೆಂದರೆ ಅನ್ವೇಷಣಕ್ಕೆ ವಿಷಯನಾದವನು ಬ್ರಹ್ಮನೇ ಆಗಿದ್ದಾನೆ. ಅಂತಹ ಬ್ರಹ್ಮನಿಗೆ ಆಕಾಶವು ಆಧಾರವಾಗಿದೆಯೆಂಬ ದೃಷ್ಟಿಯಿಂದ 'ಯಾವಾನ್ವಾ ಅಯಮಾಕಾಶಃ' ಇತ್ಯಾದಿ ವಾಕ್ಯವು ಹೊರಟಿರುತ್ತದೆ. ಹೀಗೆ ಹೇಳಿದಾಗ ಅಸಂಗತವಾಗಲು ಹೇಗೆ ಸಾಧ್ಯ ?

ಏಕೆಂದರೆ 'ತಸ್ಮಿನ್ ಯದಂತಃ' ಇತ್ಯಾದಿಯಾಗಿ ಈ ಹಿಂದೆಯೇ ಆಧಾರದ ಬಗ್ಗೆ ಹೇಳಿದ್ದಾಗಿದೆ. ಈಗ 'ಕಿಂ ತದತ್ರ ವಿದ್ಯತೇ' ಎಂಬುದಾಗಿ ಆಧೇಯದ ಬಗ್ಗೆ ಪ್ರಶ್ನೆಯನ್ನು ಮಾಡಿದ್ದರಿಂದ, ಅದಕ್ಕನುಸಾರಿಯಾಗಿ ಆಧೇಯದ ವಿವರಣೆಯನ್ನು ಮಾಡಬೇಕು ಹೊರತು, ಪುನಃ ಆಧಾರದ ಬಗ್ಗೆ ಉತ್ತರಿಸಿದರೆ ಆಕಾಂಕ್ಷಾವಿಲ್ಲದ ಪ್ರಯುಕ್ತ ಅನನ್ವಯ ದೋಷವು ಬಂದೇ ಬರುತ್ತದೆ. ಮತ್ತು ಆಧೇಯವಾದದ್ದು ದ್ಯಾವ್ಯಾಪೃಥಿವೀಗಳೆಂದು ಹೇಳಿದ್ದರಿಂದ,

ದ್ಯಾವ್ಯಾಪೃಥಿವ್ಯಾದಿಗಳೇ ಅನ್ವೇಷಣಕ್ಕೆ ವಿಷಯವಾಗಬೇಕಾದ ಪ್ರಸಂಗವೂ ಬರುತ್ತದೆ. ಆದ್ದರಿಂದ ಶ್ರುತಿಯಲ್ಲಿ ಹೇಳಲ್ಪಟ್ಟ ಆಧಾರತ್ವ ವಚನವು ಅನನ್ವಿತವಾಗಿದೆ ಎಂಬುದನ್ನು ನಿಮಗೆ ಪರಿಹರಿಸಲಾಗದು.

ಹೃತ್ಪದ್ಮಸ್ಥವಾದದ್ದು ಭೂತಾಕಾಶವೆಂದು ಹೇಳಿದಾಗ ಈ ಯಾವ ಅನನ್ವಯ ದೋಷಕ್ಕೂ ಅವಕಾಶವಿಲ್ಲ. ಹಾಗೂ ಅನ್ವಯವೇ ಇರುತ್ತದೆ. ಏಕೆಂದರೆ ದಹರ ವಾಕ್ಯದಲ್ಲಿ ಆಕಾಶಕ್ಕೆ ಹೃತ್ಪದ್ಮಸ್ಥತ್ವವನ್ನು ಹೇಳಿದ ಮೇಲೆ ಅನ್ವೇಷ್ಟವ್ಯ ವಾಕ್ಯದಲ್ಲಿ ದಹರಾಕಾಶದಲ್ಲಿರುವ ವಸ್ತುವನ್ನು ಅನ್ವೇಷಣ ಮಾಡಬೇಕೆಂದು ಹೇಳಲಾಗಿದೆ. ಆವಾಗ 'ಕಿಂ ತದತ್ರ ವಿದ್ಯತೇ' ಎಂದು ಅನ್ವೇಷ್ಟವ್ಯವಾದ ಆಧೇಯದ ಬಗ್ಗೆ ಪ್ರಶ್ನೆಯು ಸಂಗತವಾಗುತ್ತದೆ. ಆದಕ್ಕೆ 'ಯಾವಾನ್ವಾ' ಇತ್ಯಾದಿ ವಾಕ್ಯದಿಂದ ಹಿಂದೆ ಆಧಾರವಾಗಿ ಹೇಳಲ್ಪಟ್ಟ ಆಕಾಶವನ್ನು ಅನುವಾದ ಮಾಡಿ, ಅದರಲ್ಲಿ ದ್ಯಾವಾಪೃಥಿವ್ಯಾದಿಗಳೆಲ್ಲವೂ ಇರುತ್ತವೆಂದು ಉತ್ತರಿಸಲಾಗಿದೆ. ಸಣ್ಣದಾದ ಹೃದಯಾಕಾಶದಲ್ಲಿ ಬೃಹತ್ತಾದ ದ್ಯಾವಾಪೃಥಿವ್ಯಾದಿಗಳು ಇರಲು ಹೇಗೆ ಸಾಧ್ಯ ? ಎಂಬ ಪ್ರಶ್ನೆಗೆ ಬಾಹ್ಯಾಕಾಶವು ಹೇಗೆ ದ್ಯಾವಾಪೃಥಿವ್ಯಾದಿಗಳಿಗೆ ಆಶ್ರಯವಾಗಿದೆಯೋ, ಅದರಂತೆ ದಹರಾಕಾಶವೂ ಕೂಡ ಸಮಾನಯೋಗಕ್ಷೇಮದಿಂದ ಸಕಲಕ್ಕೂ ಆಧಾರವಾಗಿದೆ ಎಂಬುದಾಗಿ 'ಉಭೇ ಅಸ್ಮಿನ್' ಇತ್ಯಾದಿ ವಾಕ್ಯದಿಂದ ಉತ್ತರಿಸಲಾಗಿದೆ. ಹೀಗೆ ದ್ಯಾವಾಪೃಥಿವ್ಯಾದಿಗಳನ್ನು ಅನ್ವೇಷಣೆ ಮಾಡಬೇಕೆಂದು ಹೇಳಿರುವುದು ಅತ್ಯಂತ ಸಂಗತವಾಗುತ್ತದೆ.

ಆದ್ದರಿಂದ ದ್ಯಾವಾಪೃಥಿವಿಗಳ ಬಗ್ಗೆ ಜಿಜ್ಞಾಸ್ಯತ್ವವನ್ನು ಹೇಳಿದಂತಾಯಿತು. ಹೀಗಿರುವಾಗ ಪ್ರಥಮಸೂತ್ರದಲ್ಲಿ ಬ್ರಹ್ಮನ ಜಿಜ್ಞಾಸೆ ಮಾಡಬೇಕೆಂದು ಹೇಳಿದ್ದು ಹೇಗೆ ಯುಕ್ತವಾಗುತ್ತದೆ. ಹೀಗೆ ಜಿಜ್ಞಾಸಾಸೂತ್ರವನ್ನೂ ಆಕ್ಷೇಪ ಮಾಡಿದಂತಾಗುತ್ತದೆ. ಆದ್ದರಿಂದಲೇ 'ಮುಖ್ಯತಃ ಪೃಥಿವ್ಯಾದೀನಾಮನುಪಾಸ್ಯತ್ವಾತ್' ಎಂಬ ಸಿದ್ಧಾಂತದ ಟೀಕೆಯಲ್ಲಿ ಪೃಥಿವ್ಯಾದಿಗಳ ಜಿಜ್ಞಾಸ್ಯತ್ವವನ್ನು ಪ್ರತಿಷೇಧ ಮಾಡಿದ್ದಾರೆ. ಇದರಿಂದ ಪೂರ್ವಪಕ್ಷ ಸಂದರ್ಭದಲ್ಲಿ ಪೃಥಿವ್ಯಾದಿಗಳ ಜಿಜ್ಞಾಸೆಯೇ ಪೂರ್ವಪಕ್ಷಿಗೆ ಅಭಿಮತವಾಗಿದೆಯೆಂದು ತಿಳಿಯುತ್ತದೆ.

'ಯೋ ವೇದ' ಎಂಬ ಶ್ರುತ್ಯರ್ಥವು ಆನಂದಮಯಾಧಿಕರಣದಲ್ಲಿ

भावदीपः – एतच्चानन्दमयनये ब्रह्मपरत्वेन निर्णीतम् ।

''ಯೋ ವೇದ ನಿಹಿತಾಂ ಗುಹಾಯಾಂ'' ಎಂಬ ಶ್ರುತಿಯು ಬ್ರಹ್ಮಪರವಾಗಿದೆ ಎಂಬ ವಿಚಾರವನ್ನು ಆನಂದಮಯಾಧಿಕರಣದಲ್ಲಿ ಸಮರ್ಥಿಸಿದ್ದಾಗಿದೆ.

ಮಂದಿರೇ ಮಣಿಮಾಲಾನ್ಯಾಯದಿಂದ ಗುಹಾಸ್ಥತ್ವವನ್ನು ಹೇಳಿರುತ್ತಾರೆ

ಭಾವದೀಪಃ – यद्यपि 'परमे व्योमन्' इति हृदयगुहास्थाकाशस्थत्वमेव तत्रोक्तम्, मन्दिरे मणिमालेतिवत् सामान्येन गुहास्थत्वमविरुद्धम् । अत एव गुहायामित्याधारसप्तमीति भावः ।। तस्येति ।।

ವಸ್ತುತಃ "ಪರಮೇ ವ್ಯೋಮನ್" ಎಂಬುದಾಗಿ ಹೃದಯಗುಹೆಯಲ್ಲಿರುವ ಆಕಾಶದಲ್ಲಿರುವಿಕೆಯನ್ನು ಶ್ರುತಿಯು ಹೇಳಿದೆ. ಆದರೆ ಟೀಕೆಯಲ್ಲಿ "ಮಂದಿರೇ ಮಣಿಮಾಲಾ" ನ್ಯಾಯದಿಂದ ಸಾಮಾನ್ಯವಾಗಿ ಹೃದಯಗುಹಾಸ್ಥತ್ವವನ್ನು ಹೇಳಿದ್ದಾರೆ; ಇದು ವಿರುದ್ಧವಲ್ಲ. ಮನೆಯಲ್ಲಿ 'ಮಣಿಮಾಲೆ ಇದೆ' ಎಂದರೆ 'ಮನೆಯಲ್ಲಿರುವ ಆಭರಣದ ಪೆಟ್ಟಿಗೆಯಲ್ಲಿ ಮಣಿಮಾಲೆ ಇದೆ' ಎಂದರ್ಥ. ಅದರಂತೆ ಹೃದಯಗುಹೆಯಲ್ಲಿ ಪರಮಾತ್ಮನು ಇದ್ದಾನೆಂದರೆ ಹೃದಯಗುಹೆಯಲ್ಲಿರುವ ಆಕಾಶದಲ್ಲಿ ಪರಮಾತ್ಮನು ಇದ್ದಾನೆಂದರ್ಥ. ಆದ್ದರಿಂದ ವಿರೋಧವಿಲ್ಲ. ಆದ್ದರಿಂದಲೇ ಶ್ರುತಿಯಲ್ಲಿ "ಗುಹಾಯಾಂ" ಎಂಬುದಾಗಿ ಆಧಾರಾರ್ಥಕವಾದ ಸಪ್ತಮೀವಿಭಕ್ತಿಯ ಪ್ರಯೋಗವಿರುತ್ತದೆ.

ತೈತ್ತಿರೀಯದಲ್ಲಿ ಹೃದಯಗುಹಾಸ್ಥತ್ವ ವಿಚಾರ

ಭಾವದೀಪಃ – 'तैत्तिरीये पद्मकोशप्रतीकाशं हृदयं चाप्यधोमुखम् । अधोनिष्ट्या वितस्त्यान्ते नाभ्यामुपरि तिष्ठति । ज्वालमालाकुलं भाति विश्वस्यायतनं महत् । सन्ततꣳशिलाभिस्तुलम्बत्याकोशसन्निभम् । तस्यान्ते' इति प्रकृतहृत्पद्मं तस्येति परामृश्य तदन्तस्थत्वमाकाशस्योच्यते – हृदीति ।।

ತೈತ್ತಿರೀಯೋಪನಿಷತ್ತಿನಲ್ಲಿ ಆಕಾಶವೇ ಹೃದಯಗುಹೆಯಲ್ಲಿದೆ ಎಂದು ಹೇಳಿದಂತೆ ಇದೆ. ತೈತ್ತಿರೀಯಪ್ರಕರಣ ಹೀಗಿದೆ - 'ಪದ್ಮಕೋಶಪ್ರತೀಕಾಶಂ ಹೃದಯಂ ಚಾಪ್ಯಧೋಮುಖಮ್ । ಅಧೋನಿಷ್ಟ್ಯಾ ವಿತಸ್ತ್ಯಾಂತೇ ನಾಭ್ಯಾಮುಪರಿ ತಿಷ್ಠತಿ । ಜ್ವಾಲಮಾಲಾಕುಲಂ ಭಾತಿ ವಿಶ್ವಸಾಯತನಂ ಮಹತ್ । ಸಂತತಂಶಿಲಾಭಿಸ್ತುಲಂಬತ್ಯಾಕೋಶಸನ್ನಿಭಮ್ । ತಸ್ಯಾಂತೇ' ಎಂದು. ಹಿಂದೆ ಪ್ರಕೃತವಾದ ಹೃತ್ಪದ್ಮವನ್ನೇ 'ತಸ್ಯ' ಎಂಬ 'ತತ್' ಪದದಿಂದ ಪರಾಮರ್ಶ ಮಾಡಿ ಹೃದಯಪದ್ಮದಲ್ಲಿ ಆಕಾಶವಿದೆಯೆಂದು ಈ ಶ್ರುತಿಯು ಹೇಳಿದೆ.

ಷಟ್‌ಪ್ರಶ್ನದಲ್ಲಿ ಹೃದಯಗುಹಾಸ್ಥತ್ವ ವಿಚಾರ

ಭಾವದೀಪಃ – ಷಟ್ಪ್ರಶ್ನೇ 'मध्ये तु समानः एष ह्येतद्धुतमन्नं समं नयति । तस्मादेताः सप्तार्चिषो भवन्ति' इति पूर्वत्र तस्मात्समानेनान्नस्य समीकरणात् 'एताः सप्तार्चिषो भवन्ति' इत्युक्तौ आत्मैव विषयसंसर्गेण ताननुभविष्यति किमिन्द्रियवृत्तिभिरिति शङ्कायाम् अणुत्वात्तस्य नैवं युक्तमिति भावेन हृदि ह्येष आत्मा जीवः स्वरूपेण वर्तत इत्युक्तेः ।

ಷಟ್‌ಪ್ರಶ್ನೋಪನಿಷತ್ತಿನಲ್ಲಿರುವ ವಾಕ್ಯವನ್ನು ನೋಡಿದಾಗ ಜೀವನು ಹೃದಯದಲ್ಲಿ ಇದ್ದಾನೆಂದು ಕಾಣಿಸುತ್ತಿದೆ. ಷಟ್‌ಪ್ರಶ್ನೋಪತ್ತಿನ ಪ್ರಕರಣ ಹೀಗಿದೆ - 'मध्ये तु समानः एष ह्येतद्धुतमन्नं समं नयति तस्मादेताः सप्तार्चिषो भवन्ति'' ಎಂದು. ಅಂದರೆ ಸಮಾನ ನಾಮಕನಾದ ವಾಯು ಅನ್ನವನ್ನು ಎಲ್ಲಾ ಇಂದ್ರಿಯಗಳಿಗೆ ಸಮಾನವಾಗಿ ಕೊಂಡೊಯ್ಯುವುದರಿಂದ ಕಣ್ಣು, ಕಿವಿ ಮೊದಲಾದ ಇಂದ್ರಿಯಗಳು ತಮ್ಮ ಕಾರ್ಯಗಳನ್ನು ನಿರ್ವಹಿಸಲು ಸಮರ್ಥಗಳಾಗಿವೆ. ಹೀಗೆ ಹೇಳಿದಾಗ ಆತ್ಮನೇ ನೇರವಾಗಿ ವಿಷಯಸಂಪರ್ಕಗಳನ್ನು ಪಡೆಲು ಸಮರ್ಥನಾಗಿದ್ದಾನೆ, ಇಂದ್ರಿಯಗಳ ಸಹಕಾರಗಳೇಕೆ ? ಎಂಬ ಆಶಂಕೆಯು ಪ್ರಾಪ್ತವಾದರೆ ಆತ್ಮನು ಅಣುರೂಪನಾಗಿ ಹೃದಯ ಪ್ರದೇಶದಲ್ಲಿರುತ್ತಾನೆ. ಆದ್ದರಿಂದ ಅವನಿಗೆ ನೇರವಾಗಿ ವಿಷಯಗಳನ್ನು ಅನುಭವಿಸಲು ಸಾಧ್ಯವಿಲ್ಲ ಎಂಬ ಅಭಿಪ್ರಾಯದಿಂದ 'ಹೃದಿ ಹ್ಯೇಷ ಆತ್ಮಾ' ಎಂಬ ಮಾತು ಹೊರಟಿದೆ. ಇದರಿಂದ ಜೀವನೇ ಹೃದಯದಲ್ಲಿದ್ದಾನೆಂದು ಸ್ಪಷ್ಟವಾಗುತ್ತದೆ.

'ಅವಸ್ಥಿತಿವೈಶೇಷ್ಯಾತ್' ಎಂಬ ಸೂತ್ರದಲ್ಲಿ ಹೃದಯಗುಹಾಸ್ಥತ್ವ ವಿಚಾರ

ಭಾವದೀಪಃ – 'अवस्थितिवैशेष्यादिति चेन्नाभ्युपगमाद्धृदि हि' इति सूत्रकृता जीवपरत्वेन वक्ष्यमाणत्वाच्चेति भावः ।।

'ಅವಸ್ಥಿತಿವೈಶೇಷ್ಯಾದಿತಿ ಚೇನ್ನಾಭ್ಯುಪಗಮಾದ್ಧೃದಿ ಹಿ' ಎಂಬ ಸೂತ್ರದಲ್ಲಿ ಜೀವನು ಹೃದಯದಲ್ಲಿದ್ದಾನೆ ಎಂದು ಸಮರ್ಥಿಸುವವರಿದ್ದಾರೆ.

ಹೃದಯಪದ್ಮಸ್ಥತ್ವ ಎಂದರೇನು ?

भावदीपः – हृत्पद्मस्थत्वेति ।। साक्षात्परम्परासाधारणहृत्पद्मगतत्वलिङ्गस्येत्यर्थः। आकाशस्येति भाष्यं तु पूर्वपक्षहेत्वभिप्रायम्, नतु समन्वेतव्यनामाशयमिति भावः ।

ಟೀಕೆಯಲ್ಲಿ 'ಹೃತ್ಪದ್ಮಸ್ಥತ್ವ' ಎಂದು ಇದೆ. ಅಂದರೆ ಹೃದಯಪದ್ಮದಲ್ಲಿ ಸಾಕ್ಷಾತ್ತಾಗಿ ಇರುತ್ತಾನೆಂದು ಅಥವಾ ಹೃತ್ಪದ್ಮದಲ್ಲಿರುವ ಆಕಾಶದಲ್ಲಿರುತ್ತಾನೆಂದು ತಿಳಿಯಬಹುದು. ಹೀಗೆ ಸಾಕ್ಷಾತ್ಪರಂಪರಾ-ಸಾಧಾರಣವಾದ 'ಹೃತ್ಪದ್ಮಗತತ್ವ' ಎಂಬ ಲಿಂಗವನ್ನು ಎಂದು ಇದರ ಅರ್ಥ. 'ಆಕಾಶಸ್ಯ' ಎಂಬ ಭಾಷ್ಯವಾಕ್ಯವು ಪೂರ್ವಪಕ್ಷದ ಹೇತುಪರವಾಗಿದೆ; ಹೊರತು ಆಕಾಶವೆಂಬ ನಾಮಾತ್ಮಕಶಬ್ದದ ಸಮನ್ವಯಗೋಸ್ಕರ ಹೇಳಿದ್ದಲ್ಲವೆಂದು ತಿಳಿಯಬೇಕು. ಏಕೆಂದರೆ ಈ ಅಧಿಕರಣದಲ್ಲಿ ಹೃತ್ಪದ್ಮಸ್ಥಿತತ್ವವೆಂಬ ಲಿಂಗದ ಸಮನ್ವಯವೇ ವಿವಕ್ಷಿತ ಹೊರತು, ಅದ್ವೈತಿಗಳು ಹೇಳುವಂತೆ ಆಕಾಶಶಬ್ದದ ಸಮನ್ವಯವು ವಿವಕ್ಷಿತವಲ್ಲ.

ಸಂಗತಿಪರ ಭಾಷ್ಯದ ವ್ಯಾಖ್ಯಾನ

भावदीपः – इत्यन्तभाष्यं सङ्गतिसूचकत्वेन व्याकुर्वन्नुक्तमित्यन्तं व्याचष्टे – एतस्य वा इति ।। उक्तमक्षरनय इत्यर्थः ।

'ಇತಿ' ಎಂಬಲ್ಲಿಯ ತನಕ ಇರುವ ಭಾಷ್ಯವನ್ನು ಸಂಗತಿಪರವಾಗಿ ವ್ಯಾಖ್ಯಾನ ಮಾಡುತ್ತಾ, 'ಉಕ್ತಂ' ಎಂಬಲ್ಲಿಯ ತನಕದ ಭಾಷ್ಯವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ 'ಏತಸ್ಯ ವಾ' ಇತ್ಯಾದಿ ಟೀಕೆಯಿಂದ. ಅಕ್ಷರಾಧಿಕರಣದಲ್ಲಿ ಅಕ್ಷರನಿಗೆ ಸೂರ್ಯಚಂದ್ರಾದ್ಯಾಧಾರತ್ವವನ್ನು ಹೇಳಲಾಗಿದೆಯೆಂದರ್ಥ.

ಛಾಂದೋಗ್ಯಶ್ರುತಿಯ ಎಂಟನೆಯ ಅಧ್ಯಾಯದಲ್ಲಿ ಹೇಳಿದ ವಿಚಾರ

भावदीपः – आकाशस्य प्रतीयत इत्यत्र हृत्पद्मस्थस्येत्याकाशविशेषणमुपेत्य तात्पर्यमाह – तच्छान्दोगश्रुताविति ।। उच्यते अष्टम इत्यर्थः ।

'ಆಕಾಶಸ್ಯ ಪ್ರತೀಯತೇ' ಎಂಬಲ್ಲಿ ಹೃತ್ಪದ್ಮದಲ್ಲಿರುವ ಆಕಾಶದಲ್ಲಿರುವಿಕೆಯು ಕಾಣಿಸುತ್ತಿದೆ ಎಂಬರ್ಥವನ್ನು ಒಪ್ಪಿ ತಾತ್ಪರ್ಯವನ್ನು ಹೇಳುತ್ತಿದ್ದಾರೆ 'ತಚ್ಛಾಂದೋಗಶ್ರುತೌ' ಇತ್ಯಾದಿಯಾಗಿ. 'ಉಚ್ಯತೇ' ಎಂದರೆ ಛಾಂದೋಗ್ಯಶ್ರುತಿಯ ಎಂಟನೇ ಅಧ್ಯಾಯದಲ್ಲಿ ಹೇಳಲಾಗಿದೆ ಎಂದರ್ಥ.

ಪ್ರಕರಣದ ಸಂಪೂರ್ಣ ವಾಕ್ಯ

भावदीपः – केनेत्यत एतस्मिन्नित्यादिभाष्यमिति भावेन भाष्ये पूर्वपक्षयुक्तिद्योतनाय समग्रानुक्तावपि वक्ष्यमाणानन्वययुक्तिसौकर्याय तद्वाक्यं समग्रं पठति – एतस्मिन्निति ।।

ಯಾರಿಂದ ಹೇಳಲ್ಪಟ್ಟಿದೆ ? ಎಂಬ ಪ್ರಶ್ನೆಗೆ 'ಏತಸ್ಮಿನ್' ಇತ್ಯಾದಿ ಭಾಷ್ಯವು ಹೊರಟಿದೆ ಎಂಬ ಅಭಿಪ್ರಾಯದಿಂದ ಭಾಷ್ಯದಲ್ಲಿ ಪೂರ್ವಪಕ್ಷದ ಯುಕ್ತಿಯನ್ನು ತಿಳಿಸಲು ಸಮಗ್ರವಾಕ್ಯವನ್ನು ಪಠಿಸದಿದ್ದರೂ ಟೀಕಾರಾಯರು ಆಕಾಶಪಕ್ಷದಲ್ಲಿ ಹಿಂದಿನ ಮುಂದಿನ ವಾಕ್ಯಗಳಿಗೆ ಅನ್ವಯವು ಕೂಡುವುದಿಲ್ಲ ಎಂಬುದನ್ನು ಮುಂದೆ ತೋರಿಸುವುದಕ್ಕಾಗಿ ಪ್ರಕರಣದ ಸಂಪೂರ್ಣ ವಾಕ್ಯವನ್ನು ಪಠಿಸುತ್ತಿದ್ದಾರೆ 'ಏತಸ್ಮಿನ್' ಇತ್ಯಾದಿಯಾಗಿ.

ಹೃದಯಕಮಲದ ಆಕಾಶದಲ್ಲಿ ಏನಿದೆ ?

भावदीपः – ब्रह्मपुरे देहे । दहरं दभ्रमल्पमित्यर्थः । अस्मिन् पुण्डरीके। तस्मिन्नाकाशे । कथं तस्यान्वेषणमित्यत उक्तम् – विजिज्ञासितव्यमिति ।। तमेवमुक्तवन्तं गुरुं शिष्याश्चेद् ब्रूयुः । किं तदाह – किं तदत्रेति ।।

'ಬ್ರಹ್ಮಪುರೇ' ಎಂದರೆ ದೇಹದಲ್ಲಿ ಎಂದರ್ಥ. 'ದಹರಂ' ಎಂಬ ಪದಕ್ಕೆ ಅಣುರೂಪವಾದದ್ದು ಎಂದರ್ಥ. 'ಅಸ್ಮಿನ್' ಹೃದಯಕಮಲದಲ್ಲಿ, 'ತಸ್ಮಿನ್' ಆಕಾಶದಲ್ಲಿ, ಹುಡುಕುವುದು ಹೇಗೆ ? ಎಂಬ ಪ್ರಶ್ನೆಗೆ 'ವಿಜಿಜ್ಞಾಸಿತವ್ಯಂ' ಜಿಜ್ಞಾಸೆ ಮಾಡಬೇಕೆಂದು ಹೇಳಲಾಗಿದೆ. ಹೀಗೆ ಹೇಳಲ್ಪಟ್ಟ ಗುರುವನ್ನು ಶಿಷ್ಯರು ಪುನಃ ಪ್ರಶ್ನಿಸುತ್ತಾರೆ - 'ಹೃದಯಕಮಲದ ಆಕಾಶದಲ್ಲಿ ಏನಿದೆ?' ಎಂದು. ಇದನ್ನೇ 'ಕಿಂ ತದತ್ರ' ಇತ್ಯಾದಿ ವಾಕ್ಯಗಳಿಂದ ಹೇಳಿರುತ್ತಾರೆ.

ಯಾವ ಕಾರಣಕ್ಕಾಗಿ ಹೀಗೆ ಜಿಜ್ಞಾಸೆ ಮಾಡಬೇಕು ?

भावदीपः – यदन्वेष्टव्यादिनोक्तं तदत्र किं विद्यते? कुतश्च तदन्वेष्टव्यम्? कीदृशं च तद् विद्यते? इति प्रश्नार्थः । स गुरुः शिष्यान् प्रति ब्रूयात् । किं तदाह – यावानिति ।।

ಜಿಜ್ಞಾಸೆ ಮಾಡಬೇಕೆಂದು ಹೇಳಲಾಯಿತು. ಆದರೆ ಹೃದಯಾಕಾಶದಲ್ಲಿ ಏನಿದೆ? ಯಾವ ಕಾರಣಕ್ಕಾಗಿ ಅದನ್ನು ಜಿಜ್ಞಾಸೆ ಮಾಡಬೇಕು? ಇರುವ ವಸ್ತುವು ಎಂತಹ ಧರ್ಮಗಳಿಂದ ಉಪಪನ್ನವಾಗಿದೆ ? ಎಂಬುದು ಪ್ರಶ್ನೆಯ ಅಭಿಪ್ರಾಯ. ಆವಾಗ ಗುರುಗಳು ಶಿಷ್ಯರನ್ನು ಕುರಿತು ಉತ್ತರಿಸುತ್ತಾರೆ. ಅದೇನೆಂಬುದನ್ನು 'ಯಾವಾನ್' ಎಂಬ ಶ್ರುತಿಯು ಹೇಳುತ್ತಿದೆ.

ಹೃದಯಶಬ್ದದ ನಿಷ್ಪತ್ತಿ

भावदीपः – हृद्यत इति हृदये हृत्स्थदहराकाशे । आकाशः आकाशनाम ब्रह्म विद्यते । अयं बाह्याकाशः आकाशनामा विष्णुर्यावान् व्याप्त्या, तावानिति किमत्यस्य । अस्मिन् द्यावाभूम्यादि सर्वं समाहितं यतोऽतो द्यावापृथिव्याद्याधारत्वाज्जिज्ञास्यमिति कुतश्चेति प्रश्नस्योत्तरम् ।

'ಹೃದಯೇ' ಎಂದರೆ 'ಹೃದಿ ಅಯತೇ ಇತಿ' ಎಂಬ ನಿಷ್ಪತ್ತಿಯನ್ನು ವಿವಕ್ಷಿಸಿದಾಗ ಹೃದಯದಲ್ಲಿರುವ ದಹರಾಕಾಶದಲ್ಲಿ ಎಂಬ ಅರ್ಥವು ಪ್ರಾಪ್ತವಾಗುತ್ತದೆ. ಅದರಲ್ಲಿ ಆಕಾಶನಾಮಕಬ್ರಹ್ಮನು ಇರುತ್ತಾನೆ. 'ಅಯಂ' ಎಂದರೆ ಬಾಹ್ಯಾಕಾಶ ಎಂದರ್ಥ. ಆಕಾಶನಾಮಕನಾದ ವಿಷ್ಣು ಎಷ್ಟು ವ್ಯಾಪ್ತನಾಗಿದ್ದಾನೆಯೋ ಅಷ್ಟೇ ವ್ಯಾಪ್ತಿಯು ಹೃದಯಾಕಾಶದಲ್ಲಿರುವ ವಿಷ್ಣುವಿನಲ್ಲಿಯೂ ಇರುತ್ತದೆ. ಇದು 'ಕಿಂ ತದತ್ರ ವಿದ್ಯತೇ' ಎಂಬ ಪ್ರಶ್ನೆಗೆ ಉತ್ತರವೆಂದು ತಿಳಿಯಬೇಕು.

ಈ ದ್ಯಾವಾಪೃಥಿವ್ಯಾದಿಗಳೆಲ್ಲವೂ ಹೃದಯಾಕಾಶದಲ್ಲಿರುವ ಪರಮಾತ್ಮನಲ್ಲಿಯೇ ಆಶ್ರಿತವಾಗಿವೆ. ಆದ್ದರಿಂದ ದ್ಯಾವಾಪೃಥಿವ್ಯಾದಿಗಳಿಗೆ ಆಶ್ರಿತನಾಗಿರುವುದರಿಂದ ಜಿಜ್ಞಾಸೆ ಮಾಡಬೇಕೆಂದು ಉತ್ತರಿಸಲಾಗಿದೆ. ಇದು 'ಕುತಶ್ಚ' ಎಂಬ ಪ್ರಶ್ನೆಗೆ ಉತ್ತರವಾಗಿದೆ.

ಹೃತ್ಪದ್ಮಸ್ಥನು ಯಾವ ಧರ್ಮ ವಿಶಿಷ್ಟನಾಗಿದ್ದಾನೆ ?

भावदीपः – कीदृशमित्यस्यापि तद् ब्रह्म कीदृशमस्तीति पृष्टम् । तस्य हृदये यावान् बाह्याकाशः तावान् द्यावाभूम्यादिकं च सर्वं विद्यते सर्वाधारभूतं तदिति इदमेवोत्तरमिति सिद्धान्तीयोऽर्थः ।

'ಕೀದೃಶಂ' ಯಾವ ಧರ್ಮಗಳಿಂದ ಉಪಪನ್ನನಾಗಿದ್ದಾನೆ? ಎಂಬ ಪ್ರಶ್ನೆಗೂ ಕೂಡ 'ಯಾವಾನ್ವಾ' ಎಂಬುದೇ ಉತ್ತರವಾಗಿದೆ. ಅಂದರೆ ಹೃದಯದಲ್ಲಿ ಎಷ್ಟು ಬಾಹ್ಯಾಕಾಶವಿದೆಯೋ ಅಷ್ಟು ವ್ಯಾಪ್ತಿಯು ವಿಷ್ಣುವಿನಲ್ಲಿ ಇರುತ್ತದೆ. ಮತ್ತು ದ್ಯಾವಾಪೃಥಿವ್ಯಾದಿಗಳೆಲ್ಲವೂ ಇರುತ್ತವೆ. ಹೀಗೆ ಹೃದಯಾಕಾಶದಲ್ಲಿರುವ ವಿಷ್ಣುವಿನಲ್ಲಿ ದ್ಯಾವಾಪೃಥಿವ್ಯಾದ್ಯಾಶ್ರಯತ್ವಧರ್ಮವು ಇರುತ್ತದೆ ಎಂದು ತಿಳಿಯಬೇಕು. ಉಪನಿಷತ್ತಿಗೆ ಇಲ್ಲಿಯತನಕ ವ್ಯಾಖ್ಯಾನ ಮಾಡಿದ್ದು ಸಿದ್ಧಾಂತಿಗಳ ಪ್ರಕಾರ.

ಪೂರ್ವಪಕ್ಷಿಗಳ ಅಭಿಪ್ರಾಯ

भावदीपः – पूर्वपक्षीयस्तु हृदये आकाश इति प्रागुक्तदहराकाशमनूद्य यावानिति बाह्याकाशतुल्यतया तं विशेष्यान्वेष्टव्यतया तत्र द्यावाभूम्यादिकमुच्यत इत्यर्थः ।

ಆದರೆ ಪೂರ್ವಪಕ್ಷಿಗಳು 'ಹೃದಯೇ' ಎಂಬುದಕ್ಕೆ ಹಿಂದೆ ಹೇಳಲ್ಪಟ್ಟ ಹೃದಯಾಕಾಶವನ್ನು ಅನುವಾದ ಮಾಡಿ 'ಯಾವಾನ್' ಇತ್ಯಾದಿ ವಾಕ್ಯದಿಂದ ಬಾಹ್ಯಾಕಾಶದ ಸಾಮ್ಯವನ್ನು ಹೇಳುವ ಮೂಲಕ ಅದರಲ್ಲಿ ದ್ಯಾವಾಪೃಥಿವ್ಯಾದಿಗಳನ್ನು ಹೇಳುತ್ತಾರೆ.

ಆಕಾಶಶ್ರುತಿಯು ಭೂತಾಕಾಶಪರವೆಂದು ಪೂರ್ವಪಕ್ಷ

भावदीपः – आकाशस्येत्यादेर्भावः – तस्य चेति ।। चन्द्राद्याधार-हृत्पद्मस्थस्येत्यर्थः।। अन्यत्व इति ।। सुषिरश्रुतिसमाख्यासहिताकाशश्रुत्या आकाशत्वे वक्ष्यमाणदिशा जीवत्वे वेत्यर्थः ।

'ಆಕಾಶಸ್ಯ' ಇತ್ಯಾದಿ ವಾಕ್ಯದ ಅಭಿಪ್ರಾಯವನ್ನು 'ತಸ್ಯಚ' ಎಂಬುದರಿಂದ ಹೇಳಿದ್ದಾರೆ. ಅಂದರೆ ಚಂದ್ರಾದಿಗಳಿಗೆ ಆಧಾರವಾದ ಹೃತ್ಪದ್ಮದಲ್ಲಿರುವ ಎಂದರ್ಥ. 'ಅನ್ಯತ್ವ' ಎಂದರೆ ಸುಷಿರಶ್ರುತಿಸಮಾಖ್ಯಾ-ಪ್ರಮಾಣದಿಂದ ಕೂಡಿರುವ ಆಕಾಶಶ್ರುತಿಯು ಭೂತಾಕಾಶಪರವಾದರೆ ಅಥವಾ ಮುಂದೆ ಹೇಳುವ ಜೀವಪರವಾದರೆ ಎಂದರ್ಥ.

ಟೀಕಾವಾಕ್ಯಗಳ ವ್ಯಾಖ್ಯಾನ

भावदीपः – उक्तमित्यन्तस्य तात्पर्यम् – अक्षरस्येति ।। इतीति ।। इति सङ्गतिसम्भवादित्यर्थः ।। तदिति ।। यस्मिन् हृत्पद्मस्थे सर्वाधारत्वं श्रुतम्, तद्गतः साक्षात् परम्परासाधारण्येन पूर्वोत्तरवाक्यस्थहृत्पद्मस्थत्वसामान्यरूपो धर्म इत्यर्थः ।

ಭಾಷ್ಯದಲ್ಲಿರುವ 'ಉಕ್ತಂ' ಎಂಬಲ್ಲಿಯ ತನಕದ ತಾತ್ಪರ್ಯವನ್ನು 'ಅಕ್ಷರಸ್ಯ' ಎಂಬುದರಿಂದ ಹೇಳಿದ್ದಾರೆ. 'ಇತಿ' ಎಂದರೆ ಹೀಗೆ ಸಂಗತಿಯು ಉಪಪನ್ನವಾಗುವುದರಿಂದ ಎಂದರ್ಥ. 'ತತ್' ಇತ್ಯಾದಿ ಟೀಕಾವಾಕ್ಯಗಳಿಗೆ ಹೀಗರ್ಥ - ಯಾವ ಹೃದಯಪದ್ಮದಲ್ಲಿರುವ ವಸ್ತುವಿನಲ್ಲಿ ಸರ್ವಾಧಾರತ್ವವು ಶ್ರುತವಾಗಿದೆಯೋ ಅಂತಹ ವಸ್ತುವಿನಲ್ಲಿರುವ ಸಾಕ್ಷಾತ್ ಪರಂಪರಾಸಾಧಾರಣವಾದ ಹಿಂದಿನ ಮುಂದಿನ ವಾಕ್ಯಗಳಲ್ಲಿ ಹೇಳಲ್ಪಟ್ಟ 'ಹೃತ್ಪದ್ಮಸ್ಥತ್ವ' ಎಂಬ ಸಾಮಾನ್ಯಧರ್ಮವು ಈ ಅಧಿಕರಣದ ವಿಷಯವಾಗಿದೆ ಎಂದರ್ಥ. ಅಂದರೆ 'ಹೃತ್ಪದ್ಮಸ್ಥತ್ವ' ಎಂಬ ಲಿಂಗವನ್ನು ಇಲ್ಲಿ ಸಮನ್ವಯ ಮಾಡುತ್ತಿದ್ದಾರೆಂದು ಅರ್ಥ.

ಸಾಕ್ಷಾತ್ತಾಗಿ ಅಥವಾ ಪರಂಪರಾದಿಂದಲೂ ಲಿಂಗಸಮನ್ವಯವು ವಿವಕ್ಷಿತ

भावदीपः – तेन साक्षाच्चेद्दहरे विष्णुरेवेति विष्णोर्दहराकाशस्थत्वोक्तिः सिद्धान्ते न युक्ता । परम्परा चेदाकाशस्थेति पूर्वपक्षायोग इति शङ्कानवकाशः। अस्मिन् पक्षे पूर्वोत्तरपक्षसामञ्जस्यमग्रे विवरिष्यते ।

ಹೀಗೆ ಹೇಳಿದ್ದರಿಂದ ಮತ್ತೊಂದು ಆಕ್ಷೇಪವನ್ನು ನಿರಾಕರಿಸಿದಂತಾಯಿತು. ಸಾಕ್ಷಾತ್ ಹೃತ್ಪದ್ಮಸ್ಥತ್ವ-ಲಿಂಗವನ್ನು ಸಮನ್ವಯ ಮಾಡುವುದಾದರೆ ವಿಷ್ಣುವಿನಲ್ಲಿಯೇ ಬರುವುದಿಲ್ಲ. ಏಕೆಂದರೆ ವಿಷ್ಣು ಹೃದಯಪದ್ಮದಲ್ಲಿರುವ ದಹರಾಕಾಶದಲ್ಲಿ ಇರುತ್ತಾನೆಂದು ಸಿದ್ಧಾಂತ ಮಾಡುತ್ತೀರಿ. ಇನ್ನು ಪರಂಪರಯಾ ಹೃತ್ಪದ್ಮಸ್ಥತ್ವಲಿಂಗವನ್ನು ಸಮನ್ವಯ ಮಾಡುತ್ತೇವೆಂದು ಹೇಳಿದರೆ ಭೂತಾಕಾಶದಲ್ಲಿ ಹೃತ್ಪದ್ಮಸ್ಥತ್ವವನ್ನು ಹೇಳಬಹುದೇ ಹೊರತು ಹೃದಯಪದ್ಮದಲ್ಲಿರುವ ದಹರಾಕಾಶಸ್ಥಿತತ್ವವನ್ನು ಹೇಳಲು ಬರುವುದಿಲ್ಲ. ಆದ್ದರಿಂದ ಪೂರ್ವಪಕ್ಷವೇ ಕೂಡುವುದಿಲ್ಲ. ಈ ಆಶಂಕೆಯನ್ನು ಈಗ ಪರಿಹರಿಸಿದಂತಾಯಿತು. ಏಕೆಂದರೆ ಸಾಕ್ಷಾತ್, ಪರಂಪರಾಸಾಧಾರಣವಾದ ಹಿಂದಿನ ಮುಂದಿನ ವಾಕ್ಯಗಳಲ್ಲಿ ಹೇಳಲ್ಪಟ್ಟ ಹೃತ್ಪದ್ಮಸ್ಥಿತತ್ವವನ್ನು

ಇಲ್ಲಿ ಸಮನ್ವಯ ಮಾಡಲಾಗಿದೆ. ಇದು ಪೂರ್ವಪಕ್ಷ ಹಾಗೂ ಸಿದ್ಧಾಂತಪಕ್ಷಗಳಲ್ಲಿ ಯುಕ್ತವಾಗುತ್ತ-ವೆಂಬುದನ್ನು ಮುಂದೆ ವಿವರಿಸುತ್ತೇವೆ.

ಜೀವಪರಾಮರ್ಶಾತ್ ಎಂಬ ಮುಂದಿನ ಭಾಷ್ಯಕ್ಕೆ ಅನುಗುಣವಾದ ವ್ಯಾಖ್ಯಾನ

भावदीपः – जीवपरामर्शादित्युत्तरभाष्यानुरोधादाह – उत जीवस्येति ।। पूर्वपक्षादिपरत्वेनापि व्याकुर्वन् हृत्पद्मस्थत्वं साक्षाद् व्यवधानेन वा द्वेधा सम्भवति ।

'ಜೀವಪರಾಮರ್ಶಾತ್' ಎಂಬ ಮುಂದಿನ ಭಾಷ್ಯಕ್ಕೆ ಅನುಸಾರಿಯಾಗಿ 'ಉತ ಜೀವಸ್ಯ' ಎಂಬ ಟೀಕೆಯು ಹೊರಟಿದೆ. ಹೃತ್ಪದ್ಮಸ್ಥಿತತ್ವವನ್ನು ಪೂರ್ವಪಕ್ಷಪರವಾಗಿಯೂ ವ್ಯಾಖ್ಯಾನ ಮಾಡುತ್ತಾ ಸಾಕ್ಷಾತ್ತಾಗಿ ಮತ್ತು ವ್ಯವಹಿತವಾಗಿಯೂ ಹೃತ್ಪದ್ಮಸ್ಥತ್ವವನ್ನು ಹೇಳಬಹುದು.

ಸಾಕ್ಷಾತ್ತಾದ ಲಿಂಗವನ್ನು ವಿವಕ್ಷಿಸಿದಾಗ

भावदीपः – तत्राद्ये तच्चाकाशस्य प्रतीयत इति प्रतिज्ञाभाष्यं विवृणोति – सर्वेति ।। दहरोऽस्मिन्नन्तरिति पूर्ववाक्ये 'य एषोऽन्तर्हृदय' इत्युत्तरस्मिन् सर्वाधारवाक्ये च श्रुतहृत्पद्मस्थत्वमित्यर्थः ।।

ಸಾಕ್ಷಾತ್ತಾಗಿ ಹೃತ್ಪದ್ಮಸ್ಥತ್ವವನ್ನು ವಿವಕ್ಷಿಸಿದಾಗ ಆಕಾಶದಲ್ಲಿಯೇ ಈ ಧರ್ಮವು ಪ್ರಾಪ್ತವಾಗುತ್ತದೆಂಬ ಪ್ರತಿಜ್ಞಾಭಾಷ್ಯವನ್ನು ವಿವರಿಸುತ್ತಿದ್ದಾರೆ 'ಸರ್ವ' ಇತ್ಯಾದಿ ಟೀಕೆಯಿಂದ. 'ದಹರೋऽಸ್ಮಿನ್ನಂತಃ' ಎಂಬ ಹಿಂದಿನ ವಾಕ್ಯದಲ್ಲಿ ಮತ್ತು 'ಯ ಏಷೋऽಂತರ್ಹೃದಯೇ' ಎಂಬ ಮುಂದಿನ ವಾಕ್ಯದಲ್ಲಿ ಮತ್ತು ಸರ್ವಾಧಾರವನ್ನು ಹೇಳುವ ವಾಕ್ಯದಲ್ಲಿ ಶ್ರುತವಾದ ಹೃತ್ಪದ್ಮಸ್ಥತ್ವಲಿಂಗವು ಎಂದರ್ಥ.

ಸುಷಿರ ಶ್ರುತಿಯಲ್ಲಿ ಹೇಳಲ್ಪಟ್ಟ ಸರ್ವಾಧಾರತ್ವ

भावदीपः – तावदिति ।। जीवस्येति पश्चाद्वक्ष्याम इत्यर्थः । पूर्वाक्षेप-रूपफलोक्तिसौकर्याय वा सुषिरश्रुत्यैकार्थ्याय वा तदुक्त्यै शङ्कोत्थानाय वा सिद्धान्तिन इष्टापत्तिनिरासाय वा सर्वाधारतयेति विशेषणम् ।

'ತಾವತ್' ಎಂಬ ಪದದಿಂದ ಜೀವಪರವಾದ ಪೂರ್ವಪಕ್ಷವನ್ನು ಮುಂದೆ ಹೇಳುತ್ತೇವೆ ಎಂದು ತಿಳಿಸಿದ್ದಾರೆ. ಟೀಕೆಯಲ್ಲಿ ಆಕಾಶವೇ ಹೃತ್ಪದ್ಮಸ್ಥಿತವೆಂದು ಪೂರ್ವಪಕ್ಷ ಮಾಡಬೇಕಾದಾಗ 'ಸರ್ವಾಧಾರತಯಾ' ಎಂಬ ವಿಶೇಷಣವನ್ನು ನೀಡಿದ್ದಾರೆ. ಈ ವಿಶೇಷಣವನ್ನು ನೀಡಲು ಹಲವು ಕಾರಣಗಳಿವೆ. ಹಿಂದಿನ ಅಕ್ಷರಾಧಿಕರಣದಲ್ಲಿ ಅಕ್ಷರನಿಗೆ ಸರ್ವಾಧಾರತ್ವವನ್ನು ಹೇಳಲಾಗಿತ್ತು. ಅದನ್ನು ಆಕ್ಷೇಪ ಮಾಡುವ ಪ್ರಯೋಜನವನ್ನು ತಿಳಿಸುವುದಕ್ಕಾಗಿ ಅಥವಾ ಸುಷಿರಶ್ರುತಿಯಲ್ಲಿ ಹೇಳಲ್ಪಟ್ಟ ಸರ್ವಾಧಾರತ್ವಕ್ಕೆ ಸಮಾನಾರ್ಥಕತ್ವವನ್ನು ತಿಳಿಸುವುದಕ್ಕಾಗಿ, ಅಥವಾ ಸರ್ವಾಧಾರತ್ವವನ್ನು ಹೇಳಿದಾಗ ಶಂಕೆಯು ಪ್ರಾಪ್ತವಾಗುತ್ತದೆಂದು ತಿಳಿಸುವುದಕ್ಕಾಗಿ, ಅಥವಾ ಆಕಾಶವು ಹೃದಯಪದ್ಮದಲ್ಲಿದೆ ಎಂಬುದು ನಮಗೆ ಇಷ್ಟವೇ ಆಗಿದೆ ಎಂದು ಸಿದ್ಧಾಂತಿಯು ಇಷ್ಟಾಪತ್ತಿಯನ್ನು ಹೇಳಿದರೆ ಅದನ್ನು ನಿರಾಕರಿಸಲು 'ಸರ್ವಾಧಾರತಯಾ' ಎಂದು ಹೇಳಿದ್ದಾರೆ.

ಶ್ರುತಿಗಳ ನಿಜಾಭಿಪ್ರಾಯ

भावदीपः – तेन तच्चेत्येतर्थो विवृतः । कुतः? इत्यतो दहरोऽस्मिन्नन्तर आकाश इत्यन्तवाक्योक्तेर्भावमाह – दहर इति ।।

ಇದರಿಂದ ಭಾಷ್ಯದಲ್ಲಿರುವ 'ತಚ್ಚ' ಎಂಬ ಪದವನ್ನು ವಿವರಿಸಿದಂತಾಯಿತು. ಭೂತಾಕಾಶವು ಹೃದಯಪದ್ಮದಲ್ಲಿದೆ ಎಂದು ಏಕೆ ಒಪ್ಪಬೇಕು? ಎಂದರೆ 'ದಹರೋऽಸ್ಮಿನ್ನಂತರ ಆಕಾಶಃ' ಇತ್ಯಾದಿ ಶ್ರುತಿಗಳ ಅಭಿಪ್ರಾಯವನ್ನು ಸ್ಪಷ್ಟಪಡಿಸುತ್ತಿದ್ದಾರೆ 'ದಹರೇ' ಇತ್ಯಾದಿಯಾಗಿ.

'य एषोऽन्तर्हृदये आकाशः' ಎಂಬ ವಾಕ್ಯವು ವಿವಕ್ಷಿತ

भावदीपः – इदमुपलक्षणम् । 'य एषोऽन्तर्हृदय आकाश' इति चेत्यपि बोध्यम् ।। स्थितीति ।। हृत्पद्मस्थे आकाशशब्दश्रवणादित्यर्थः । किं तदत्रेत्याद्युक्तेर्भावमाह – तस्यैवेति ।।

ಉಪಲಕ್ಷಣಯಾ 'य एषोऽन्तर्हृदय आकाशः' ಎಂಬ ವಾಕ್ಯವನ್ನೂ ಕೂಡ ವಿವಕ್ಷಿಸಬೇಕು. ಟೀಕೆಯಲ್ಲಿ 'ಹೃತ್ಪದ್ಮೇ ದಹರಾಕಾಶಸ್ಥಿತಿಶ್ರವಣಾತ್' 'ಹೃದಯಪದ್ಮದಲ್ಲಿ ದಹರಾಕಾಶದ ಇರುವಿಕೆಯು ಶ್ರುತವಾದ್ದರಿಂದ' ಎಂದು ಹೇಳಲಾಗಿದೆ. ಏಕೆಂದರೆ ಹೃತ್ಪದ್ಮದಲ್ಲಿರುವ ವಸ್ತುವಿನಲ್ಲಿ ಆಕಾಶ ಶಬ್ದವು ಶ್ರುತವಾದ್ದರಿಂದ ಎಂದು ತಿಳಿಯಬೇಕು.

'ತಸ್ಯಾಂತೇ' ಎಂಬುದರ ಅಭಿಪ್ರಾಯ

ಭಾವದೀಪಃ – अन्यथा किं तदत्रेति प्रश्नानानुगुण्यमिति भावः ।। तस्यान्त इति ।। विवृतमेतत्पूर्वम् ।

ಇಲ್ಲದಿದ್ದರೆ 'ಕಂ ತದತ್ರ' ಎಂಬ ಪ್ರಶ್ನೆಯೇ ಅನನುಗುಣವಾಗುತ್ತದೆಂಬುದು ಇದರ ಅಭಿಪ್ರಾಯ. 'ತಸ್ಯಾಂತೇ' ಇದರ ಅಭಿಪ್ರಾಯವನ್ನು ಹಿಂದೆ ವಿವರಿಸಿದ್ದಾಗಿದೆ.

'ತಸ್ಮಿನ್' ಇತ್ಯಾದಿ ವಾಕ್ಯಗಳ ಅಭಿಪ್ರಾಯ

ಭಾವದೀಪಃ – 'तस्मिन् सर्वं प्रतिष्ठितम्' इति वाक्यशेषार्थमाह – सर्वेति ।। तत्रापि सुषिरस्य विष्णुत्वं तु न युक्तम् ।

'ತಸ್ಮಿನ್ ಸರ್ವಂ ಪ್ರತಿಷ್ಠಿತಂ' ಇತ್ಯಾದಿ ಉಳಿದ ವಾಕ್ಯಗಳ ಅಭಿಪ್ರಾಯವನ್ನು 'ಸರ್ವ' ಇತ್ಯಾದಿ ಟೀಕೆಯಿಂದ ಹೇಳಿರುತ್ತಾರೆ. ಇಲ್ಲಿಯೂ ಸಹ ಸುಷಿರಕ್ಕೆ ವಿಷ್ಣುತ್ವವನ್ನು ಹೇಳಲು ಸಾಧ್ಯವಿಲ್ಲ.

ವಿಷ್ಣುವು ಶಿಖಾಮಧ್ಯಸ್ಥನಾಗಿರುವನು

ಭಾವದೀಪಃ – 'तस्य मध्ये वह्निशिखा अणीयोर्ध्वा व्यवस्थितः ।' इति विष्णोः शिखामध्यस्थत्वोक्तेरिति भावेनोक्तम् – आकाशस्यैवेति ।।

'ತಸ್ಯ ಮಧ್ಯೇ ವಹ್ನಿಶಿಖಾ ಅಣೀಯೋರ್ಧ್ವಾ ವ್ಯವಸ್ಥಿತಃ' ಎಂಬ ಶ್ರುತಿಯಲ್ಲಿ ಹೃದಯಸುಷಿರದ ಮಧ್ಯದಲ್ಲಿ ಅಗ್ನಿಶಿಖೆಯು ಇರುತ್ತದೆ ಎಂದು ಹೇಳಿ 'ತಸ್ಯಾಃ ಶಿಖಾಯಾಃ ಮಧ್ಯೇ ಪರಮಾತ್ಮಾ ವ್ಯವಸ್ಥಿತಃ' ಎಂದು ಆ ಅಗ್ನಿಶಿಖೆಯ ಮಧ್ಯದಲ್ಲಿ ವಿಷ್ಣು ಇದ್ದಾನೆಂದು ಹೇಳಲಾಗಿದೆ. ಈ ಅಭಿಪ್ರಾಯದಿಂದ 'ಆಕಾಶಸ್ಯೈವ' ಎಂದು ಹೇಳಿದ್ದಾರೆ. ಅಂದರೆ ವಿಷ್ಣುವಿಗೆ ಹೃತ್ಪದ್ಮಸ್ಥತ್ವವನ್ನು ಹೇಳಬಾರದು, ಆಕಾಶಕ್ಕೆ ಮಾತ್ರ ಹೇಳಬೇಕೆಂದು 'ಏವ' ಕಾರದ ಅಭಿಪ್ರಾಯ.

ಹೃತ್ಪದಸ್ಥತ್ವವನ್ನು ಪರಂಪರೆಯಿಂದ ವಿವಕ್ಷಿಸಿದಾಗ

ಭಾವದೀಪಃ – एवं साक्षाद् हृत्पद्मस्थत्वपक्षे भाष्यं योजयित्वा व्यवधानेन हृत्पद्मस्थत्वपक्षं शङ्कते – नच वाच्यमिति ।।

ಹೀಗೆ ಸಾಕ್ಷಾತ್ ಮತ್ತು ಪರಂಪರೆಯಿಂದ ಹೃತ್ಪದ್ಮಸ್ಥತ್ವಧರ್ಮವನ್ನು ಆಕಾಶದಲ್ಲಿ ಹೇಳುತ್ತಾ ಭಾಷ್ಯವನ್ನು ಯೋಜನೆ ಮಾಡಿದ್ದಾಯಿತು. ಈಗ ಪರಂಪರೆಯಿಂದ ಹೃತ್ಪದ್ಮಸ್ಥತ್ವವನ್ನು ಲಿಂಗವೆಂದು ವಿವಕ್ಷಿಸಿದಾಗ ಭಾಷ್ಯದ ಮಾತುಗಳನ್ನು ಯೋಜನೆ ಮಾಡಲು ಶಂಕಿಸುತ್ತಿದ್ದಾರೆ 'ನಚ ವಾಚ್ಯಮ್' ಇತ್ಯಾದಿಯಾಗಿ.

ನ್ಯಾಯವಿವರಣದಲ್ಲಿ ಹೇಳಲ್ಪಟ್ಟ ವಿಚಾರ

ಭಾವದೀಪಃ – अस्मिन् पक्षे न्यायविवरणोक्तं दहरोऽस्मिन्नन्तर आकाशस्तस्मिन् यदन्तस्तदन्वेष्टमित्यनेन यावान् वा आयमाकाशस्तावानेषोऽन्तर्हृदय इत्यस्यान्वयाभाव इति दोषं व्यञ्जयन् द्यावाभूम्यादेरेवान्वेष्टव्यत्वं न विष्णोरित्याह – तथा सतीति ।।

ಈ ಪಕ್ಷದಲ್ಲಿ ನ್ಯಾಯವಿವರಣದಲ್ಲಿ ಹೇಳಲ್ಪಟ್ಟ 'ದಹರೋಽಸ್ಮಿನ್ನಂತರ ಆಕಾಶಸ್ತಸ್ಮಿನ್ ಯದಂತಸ್ತದನ್ವೇಷ್ಟವ್ಯಂ' ಎಂಬುದರಿಂದ 'ಯಾವಾನ್ವಾ ಅಯಮಾಕಾಶಸ್ತಾವಾನೇಷೋಽಂತರ್ಹೃದಯೇ' ಎಂಬ ವಾಕ್ಯಕ್ಕೆ ಅನ್ವಯವೇ ಕೂಡುವುದಿಲ್ಲ ಎಂಬ ದೋಷವನ್ನು ತಿಳಿಯಬೇಕು. ಅದನ್ನೇ ಟೀಕೆಯಲ್ಲಿ ಸ್ಪಷ್ಟಪಡಿಸುತ್ತಾ ದ್ಯಾವಾಪೃಥಿವ್ಯಾದಿಗಳ ಜಿಜ್ಞಾಸೆಯಷ್ಟೇ ಉಪಪನ್ನವಾಗುತ್ತದೆ ಹೊರತು ವಿಷ್ಣುವಿನ ಜಿಜ್ಞಾಸೆ ಅಲ್ಲವೆಂದು 'ತಥಾ ಸತಿ' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ.

ಆಕಾಶಶಬ್ದವು ಆಕಾಶಪರವೋ, ಬ್ರಹ್ಮಪರವೋ ?

ಭಾವದೀಪಃ – एतेन भाष्ये आकाशो न विष्णुः, सुषिरश्रुतेरित्युपलक्षणम्। आकाशो न विष्णुः वाक्यान्वयानुपपत्तेरित्यपि बोध्यमिति दर्शितम् । यावान् वा अयमाकाश इति वाक्यस्याकाशः किं प्रसिद्ध एवोत ब्रह्मेति विकल्पौ हृदि कृत्वा आद्ये अन्वयाभावदोषमाह – तस्मिन्नित्यत्रेति ।। अन्वेष्टव्यवाक्ये अन्वेष्टव्यतयोक्तस्य दहराकाशस्थस्येत्यर्थः ।

ಹೀಗೆ ಹೇಳಿದ್ದರಿಂದ ಭಾಷ್ಯದಲ್ಲಿ ವಿಷ್ಣು ಆಕಾಶನಾಗುವುದಿಲ್ಲ ಎಂದು ಹೇಳಿದಂತಾಯಿತು. 'ಸುಷಿರ-ಶ್ರುತೇಃ' ಎಂಬುದು ಉಪಲಕ್ಷಣವಾಗಿದೆ. ಆಕಾಶವು ವಿಷ್ಣುವಲ್ಲ ಎಂದು ಹೇಳಿದಾಗ ವಾಕ್ಯಾನ್ವಯವು

ಅನುಪಪನ್ನವಾಗುತ್ತದೆ ಎಂಬುದನ್ನೂ ಕೂಡ ತಿಳಿಯಬೇಕು. 'ಯಾವಾನ್ವಾ ಅಯಮಾಕಾಶಃ' ಎಂಬ ವಾಕ್ಯದಲ್ಲಿರುವ ಆಕಾಶವು ಪ್ರಸಿದ್ಧವಾದ ಆಕಾಶಪರವೋ? ಅಥವಾ ಬ್ರಹ್ಮಪರವೋ? ಎಂದು ವಿಕಲ್ಪವನ್ನು ಮನಸ್ಸಿನಲ್ಲಿ ಇಟ್ಟುಕೊಂಡು, ಪ್ರಥಮಪಕ್ಷದಲ್ಲಿ ಅನ್ವಯವೇ ಕೂಡುವುದಿಲ್ಲವೆಂಬ ದೋಷವನ್ನು 'ತಸ್ಮಿನ್' ಇತ್ಯಾದಿ ಟೀಕಾವಾಕ್ಯಗಳಿಂದ ಹೇಳುತ್ತಿದ್ದಾರೆ.

ಅನ್ವೇಷ್ಟವ್ಯ ವಾಕ್ಯದಲ್ಲಿ ಅನ್ವೇಷಣೇ ಮಾಡಬೇಕೆಂದು ಹೇಳಲ್ಪಟ್ಟ ದಹರಾಕಾಶದಲ್ಲಿರುವ ಪದಾರ್ಥಕ್ಕೆ ಎಂದು 'ತಸ್ಮಿನ್ನಿತ್ಯತ್ರ' ಎಂಬುದರ ಅರ್ಥ.

ಪೂರ್ವಪಕ್ಷಕಾರರಿಗೆ ಅನ್ಯಾಭಾವದೋಷವಿಲ್ಲ

भावदीपः – अयं च दोषो न पूर्वपक्ष इत्याह – आकाशेति ।। आकाशान्तर्ब्रह्मास्तीत्यनुपेत्य साक्षाद् हृत्पद्मस्थमाकाशं व्यवहितं तु द्यावाभूम्यादिकमिति पक्षे त्वित्यर्थः ।

ಈ ಅನ್ವಯಾಭಾವದೋಷವು ಪೂರ್ವಪಕ್ಷಕಾರರಿಗೆ ಬರುವುದಿಲ್ಲವೆಂಬುದನ್ನು 'ಆಕಾಶ' ಇತ್ಯಾದಿ ಟೀಕೆಯಿಂದ ಹೇಳಿದ್ದಾರೆ. 'ಆಕಾಶಪಕ್ಷೇ' ಎಂದರೆ ಆಕಾಶದ ಒಳಗಡೆ ಬ್ರಹ್ಮನಿದ್ದಾನೆ ಎಂದು ಒಪ್ಪದೇ ನೇರವಾಗಿ ಹೃತ್ಪದ್ಮದಲ್ಲಿ ಆಕಾಶವಿದೆ. ಇಂತಹ ಆಕಾಶವು ದ್ಯಾವಾಪೃಥಿವ್ಯಾದಿಗಳಿಗೆ ಆಶ್ರಯವಾಗಿದೆ ಎಂಬ ಪಕ್ಷದಲ್ಲಿ ಎಂದರ್ಥ.

'ಏತಸ್ಮಿನ್ ಬ್ರಹ್ಮಪುರೇ' ಇತ್ಯಾದಿ ಭಾಷ್ಯದ ಯೋಜನೆ

भावदीपः – अस्त्यन्वय इत्युक्तं तदुपपादकत्वेनापि एतस्मिन् ब्रह्मपुर इत्यादिभाष्यं योजयति – हृदयेति ।। इत्युक्त इति ।। 'तस्मिन् यदन्तः' इति वाक्य इत्यर्थः ।

'ಅಸ್ತ್ಯನ್ವಯಃ' ಎಂದು ಹೇಳಿದ್ದನ್ನೇ ಉಪಪಾದನೆ ಮಾಡುವುದಕ್ಕಾಗಿ 'ಏತಸ್ಮಿನ್ ಬ್ರಹ್ಮಪುರೇ' ಇತ್ಯಾದಿ ಭಾಷ್ಯವನ್ನು ಯೋಜನೆ ಮಾಡುತ್ತಿದ್ದಾರೆ 'ಹೃದಯ' ಇತ್ಯಾದಿ ಟೀಕೆಯಿಂದ. 'ಇತ್ಯುಕ್ತಃ' ಎಂದರೆ 'ತಸ್ಮಿನ್ಯದಂತಃ' ಎಂಬ ವಾಕ್ಯದಲ್ಲಿ ಹೇಳಲಾಗಿದೆ ಎಂದರ್ಥ.

'ಕಿಂ ತದತ್ರ' ಇತ್ಯಾದಿ ಭಾಷ್ಯದ ಅಭಿಪ್ರಾಯ

भावदीपः – किं तदत्रेत्यादि प्रतीयत इत्यन्तभाष्यभावमाह – किमिति ।। आधेयप्रश्न इत्यर्थः । विशिष्य द्यावाभूम्याद्याधारत्वयोग्यत्वाय बाह्याकाशतुल्यतया विशिष्येत्यर्थः ।

'ಕಿಂ ತದತ್ರ' ಎಂಬಲ್ಲಿಂದ ಪ್ರಾರಂಭಿಸಿ 'ಪ್ರತೀಯತೇ' ಎಂಬಲ್ಲಿಯ ತನಕ ಇರುವ ಭಾಷ್ಯದ ಅಭಿಪ್ರಾಯವನ್ನು ಟೀಕೆಯಲ್ಲಿ 'ಕಿಂ ಅತ್ರ' ಇತ್ಯಾದಿ ವಾಕ್ಯಗಳಿಂದ ಸ್ಪಷ್ಟಪಡಿಸುತ್ತಿದ್ದಾರೆ. 'ಕಿಂ' ಎಂಬುದು ಆಧೇಯದ ಬಗ್ಗೆ ಪ್ರಶ್ನಿಸುವ ಪದವಾಗಿದೆ. ದ್ಯಾವಾಭೂಮಿಗಳ ಆಧಾರಕ್ಕೆ ಯೋಗ್ಯವಾದ ಬಾಹ್ಯಾಕಾಶಕ್ಕೆ ಸಮಾನವಾದ ಧರ್ಮವಿರುವುದರಿಂದ 'ವಿಶಿಷ್ಯ' ಎಂದು ಹೇಳಿದ್ದಾರೆ.

ಆಕಾಶಶಬ್ದವು ಬ್ರಹ್ಮಪರ

भावदीपः – यावान् वा इति वाक्यस्थाकाशो ब्रह्मेति द्वितीयपक्षशङ्कोत्तरत्वेन स चाकाश इत्यादिभाष्यं व्याचष्टे – नचेति ।।

'ಯಾವಾನ್ವಾ' ಎಂಬ ವಾಕ್ಯದಲ್ಲಿರುವ ಆಕಾಶಶಬ್ದವು ಬ್ರಹ್ಮಪರವಾಗಿದೆ ಎಂಬ ಎರಡನೇ ಪಕ್ಷದ ಶಂಕೆಗೆ ಉತ್ತರ ನೀಡುವುದಕ್ಕಾಗಿ 'ಸ ಚಾಕಾಶಃ' ಇತ್ಯಾದಿ ಭಾಷ್ಯವಾಕ್ಯವು ಹೊರಟಿದೆ. ಅದನ್ನು 'ನಚ' ಇತ್ಯಾದಿ ಟೀಕೆಯಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ.

ಆಕಾಶಶಬ್ದವಾಚ್ಯನು ವಿಷ್ಣುವೇ ಆಗಿದ್ದಾನೆ

भावदीपः – परिहारे परिहारवाक्ये । एतेन 'स यावान्' इति वाक्योक्ताकाशो विष्णुरिति नच वाच्यमिति भाष्यार्थो दर्शितः । वाक्यशेषोक्तिपूर्वं तस्यान्त इत्युक्तसमाख्याविरोधं व्यनक्ति – तस्मिन्निति।।

'ಪರಿಹಾರೇ' ಎಂದರೆ 'ಪರಿಹಾರನೀಡುವ ವಾಕ್ಯದಲ್ಲಿ' ಎಂದು ವಿವಕ್ಷಿಸಬೇಕು. ಹೀಗೆ ಹೇಳಿದ್ದರಿಂದ 'ಯಾವಾನ್ವಾ' ವಾಕ್ಯದಲ್ಲಿ ಹೇಳಲ್ಪಟ್ಟ ಆಕಾಶಶಬ್ದವಾಚ್ಯನು ವಿಷ್ಣುವೆಂದು ಹೇಳಬಾರದು. ಹೀಗೆ ಭಾಷ್ಯದ ಅರ್ಥವನ್ನು ತಿಳಿಯಬೇಕು. ಉಳಿದ ವಾಕ್ಯಶೇಷವನ್ನು ಹೇಳುವ ಮುಖಾಂತರ 'ತಸ್ಯಾಂತೇ' ಎಂಬ ಸಮಾಖ್ಯಾವಿರೋಧವನ್ನು ವ್ಯಾಖ್ಯಾನಿಸುತ್ತಿದ್ದಾರೆ 'ತಸ್ಮಿನ್' ಇತ್ಯಾದಿ ಟೀಕೆಯಿಂದ.

'ತಸ್ಮಾತ್' ಎಂಬುದರ ವ್ಯಾಖ್ಯಾನ

भावदीपः – तस्मादिति ।। सुषिरश्रुतिसमाख्यावाक्यान्वयसामञ्जस्याभ्यां सहितस्याकाशशब्दस्य साधकस्य भावात् ।

'ತಸ್ಮಾತ್' ಎಂದರೆ ಸುಷಿರಶ್ರುತಿ ಮತ್ತು ಸಮಾಖ್ಯಾವಾಕ್ಯದ ಅನ್ವಯಸಾಮಂಜಸ್ಯದ ಜೊತೆಗೆ ಆಕಾಶಶ್ರುತಿಯೆಂಬ ಸಾಧಕಪ್ರಮಾಣವಿರುವುದರಿಂದ ಎಂದರ್ಥ.

ವಿಷ್ಣುವು ಆಕಾಶಶಬ್ದ ಪ್ರತಿಪಾದ್ಯನಾದಾಗ

भावदीपः – विष्णुत्वपक्षे वाक्यान्वयाभावसुषिरश्रुतिविरोधरूपबाधक-भावाच्चेत्यर्थः । अपहतपाप्मत्वादिकं तु जडे आकाशे पापास्पृष्ट्या वा अभिमानिद्वारा वा युक्तमिति भावः । बाधवारणाय सर्वाधारतयेत्युक्तम् ।

ವಿಷ್ಣುವೇ ಆಕಾಶಶಬ್ದಪ್ರತಿಪಾದ್ಯನಾದಲ್ಲಿ ವಾಕ್ಯಗಳಿಗೆ ಅನ್ವಯ ಕೂಡುವುದಿಲ್ಲ, ಸುಷಿರಶ್ರುತಿಯ ವಿರೋಧವೆಂಬ ಬಾಧಕವೂ ಇರುತ್ತದೆ ಎಂದು ತಿಳಿಯಬೇಕು. ಅಪಹತಪಾಪ್ಮತ್ವಾದಿಗಳು ಜಡವಾದ ಆಕಾಶದಲ್ಲಿ ಬರುವುದಿಲ್ಲವೆಂದು ಶಂಕಿಸಬಾರದು. ಪಾಪದ ಸಂಪರ್ಕವೇ ಜಡಗಳಿಗೆ ಇಲ್ಲದ ಕಾರಣ ಅಥವಾ ಅಭಿಮಾನಿಚೇತನರಲ್ಲಿ ಅಪಹತಪಾಪ್ಮತ್ವಾದಿಗಳು ಇರುವುದರಿಂದ ಯುಕ್ತವಾಗುತ್ತದೆ. ಬಾಧದೋಷವನ್ನು ಪರಿಹರಿಸುವುದಕ್ಕಾಗಿ 'ಸರ್ವಾಧಾರತಯಾ' ಎಂದು ಹೇಳಿದ್ದಾರೆ.

'ಇತರಪರಾಮರ್ಶಾತ್ ಸಃ' ಇತ್ಯಾದಿ ಸೂತ್ರಭಾಷ್ಯದಲ್ಲಿ ಹೇಳಿದ್ದರ ವ್ಯಾಖ್ಯಾನ

भावदीपः – 'इतरपरामर्शात् स इति चेद्' इति सूत्रतद्भाष्याभ्यामुक्तं व्यनक्ति – जीवस्य चेति ।। परामर्शादिति ।।

ಜಡವಾದ ಆಕಾಶವೇ ಹೃತ್ಪದ್ಮಸ್ಥವೆಂಬ ಪೂರ್ವಪಕ್ಷವನ್ನು ತೋರಿಸಿದ್ದಾಯಿತು. ಈಗ ಜೀವನೇ ಹೃತ್ಪದ್ಮಸ್ಥನಾಗಿದ್ದಾನೆ ಎಂಬುದನ್ನು ತೋರಿಸಲು ಹೊರಟಿದ್ದಾರೆ. 'ಇತರಪರಾಮರ್ಶಾತ್ ಸ ಇತಿ ಚೇತ್' ಎಂಬ ಸೂತ್ರ ಹಾಗೂ ಭಾಷ್ಯದಲ್ಲಿ ಹೇಳಿದ್ದನ್ನೇ ವ್ಯಾಖ್ಯಾನಿಸುತ್ತಿದ್ದಾರೆ 'ಜೀವಸ್ಯ ವಾ' ಇತ್ಯಾದಿ ಟೀಕೆಯಿಂದ.

ಹೃತ್ಪದ್ಮಸ್ಥನಲ್ಲಿ ಅಪಹತಪಾಪ್ಮತ್ವಾದಿ ಗುಣಗಳು

भावदीपः – प्रकृतं जीवं एष इति परामृश्य आत्मेत्यात्मपदेन 'य आत्मा अपहतपाप्मा' इत्यादिवाक्येऽपहतपाप्मत्वादिनोक्तहृत्पद्मस्थात्मत्वस्य विधानादित्यर्थः ।

ಪ್ರಕೃತನಾದ ಜೀವನನ್ನು 'ಏಷಃ' ಎಂದು ಪರಾಮರ್ಶ ಮಾಡಿ ಆತ್ಮಪದದಿಂದ 'ಯ ಆತ್ಮಾ ಅಪಹತಪಾಪ್ಮಾ' ಇತ್ಯಾದಿ ವಾಕ್ಯದಲ್ಲಿ ಅಪಹತಪಾಪ್ಮತ್ವಾದಿಗುಣಗಳನ್ನು ಹೇಳುವ ಮುಖಾಂತರ ಹೃತ್ಪದ್ಮಸ್ಥನಲ್ಲಿ ಆತ್ಮತ್ವವನ್ನು ವಿಧಾನ ಮಾಡಲಾಗಿದೆ. ಆದ್ದರಿಂದ ಜೀವನು ಹೃತ್ಪದ್ಮಸ್ಥನಾಗುತ್ತಾನೆಂದು ತಿಳಿಯಬೇಕು.

ವಿಶೇಷವಿಚಾರ - ಹೃತ್ಪದ್ಮಸ್ಥನಾದವನು ಜೀವನೇ ಆಗಿದ್ದಾನೆಂದು ಹೇಳಬಹುದು. ಏಕೆಂದರೆ 'ಏಷ ಸಂಪ್ರಸಾದೋಽಸ್ಮಾಚ್ಛರೀರಾತ್ಸಮುತ್ಥಾಯ ಪರಂ ಜ್ಯೋತಿರುಪಸಂಪದ್ಯ ಸ್ವೇನ ರೂಪೇಣಾಭಿನಿಷ್ಪದ್ಯತ ಏಷ ಆತ್ಮಾ' ಎಂಬುದಾಗಿ ಮುಂದಿನ ಶ್ರುತಿವಾಕ್ಯದಲ್ಲಿರುವ 'ಏತತ್' ಶಬ್ದದಿಂದ ಪ್ರಕೃತನಾದ ಜೀವನನ್ನೇ ಅನುವಾದ ಮಾಡಲಾಗಿದೆ. ಅಂತಹ ಜೀವನಿಗೆ ಆತ್ಮಶಬ್ದದಿಂದ 'ಯ ಆತ್ಮಾಽಪಹತಪಾಪ್ಮಾ ವಿಜರೋ ವಿಮೃತ್ಯುಃ' ಇತ್ಯಾದಿಯಾಗಿ ಹೃತ್ಪದ್ಮಸ್ಥವಾದ ಆತ್ಮತ್ವವನ್ನು ವಿಧಾನ ಮಾಡಲಾಗಿದೆ.

ಜೀವನನ್ನು ಪರಾಮರ್ಶ ಮಾಡುವುದಾದರೆ, 'ಏಷಃ' ಎಂಬುದಾಗಿ ಪುಲ್ಲಿಂಗ ಪ್ರಯೋಗ ಇರಬೇಕಿತ್ತಲ್ಲವೇ? 'ಏತತ್' ಎಂಬುದಾಗಿ ನಪುಂಸಕಲಿಂಗ ಪ್ರಯೋಗವು ಹೇಗೆ ಯುಕ್ತವಾಗುತ್ತದೆ ಎಂದು ಪ್ರಶ್ನಿಸಬಾರದು. ಇಲ್ಲಿರುವ 'ಏತತ್' ಶಬ್ದವು ಪರಜ್ಯೋತಿಯನ್ನು ಹೇಳುವುದರಿಂದ ನಪುಂಸಕಲಿಂಗವು ಯುಕ್ತವಾಗುತ್ತದೆಂದು ತಿಳಿಯಬೇಕು.

ಜೀವನನ್ನೇ ಹೃತ್ಪದ್ಮಸ್ಥನೆನ್ನುವುದಾದರೆ ಅಪಹತಪಾಪ್ಮತ್ವಾದಿಗಳನ್ನು ಹೇಗೆ ಕೂಡಿಸಬೇಕು? ಎಂದರೆ, ಇದೇ ಜೀವನು ಮೋಕ್ಷವನ್ನು ಹೊಂದಿದ ಮೇಲೆ ಪಾಪವಿದೂರನಾಗುತ್ತಾನೆ. ಮುಂದೆ ಹೊಂದುವಂತಹ ಅಪಹತಪಾಪ್ಮತ್ವಾದಿಗಳನ್ನು ಸಂಸಾರದೆಶೆಯಲ್ಲಿ ಪ್ರಯೋಗಿಸುವುದು ತಪ್ಪಾಗುವುದಿಲ್ಲ. ಏಕೆಂದರೆ 'ಅಸ್ಯ ಸೂತ್ರಸ್ಯ ಶಾಟಕಂ ವಯ' ಎಂಬ ಪ್ರಯೋಗವಿದೆ. ಅಂದರೆ 'ನೂಲುಗಳಿಂದ ಬಟ್ಟೆಯನ್ನು ಹೆಣೆಯಬೇಕು' ಎಂಬ ಪ್ರಯೋಗದಲ್ಲಿ ಶಾಟಕಶಬ್ದವಿದೆ. ಬಟ್ಟೆಯನ್ನು ಇನ್ನೂ ಹೆಣೆಯದೇ ಇರುವಾಗಲೂ ಕೂಡ ಮುಂದೆ ಹುಟ್ಟುವಂತಹ ಬಟ್ಟೆಯನ್ನು ವಿವಕ್ಷಿಸಿ ಮೊದಲೇ ಶಾಟಕಶಬ್ದವನ್ನು ಪ್ರಯೋಗಿಸುವುದು

ಕಂಡಿದೆ. ಇದರಂತೆ 'ಯೂಪಂ ತಕ್ಷತಿ' ಎಂಬ ಪ್ರಯೋಗವು ಪೂರ್ವಮೀಮಾಂಸೆಯಲ್ಲಿ ಕಂಡಿದೆ. ತಕ್ಷಣವೆಲ್ಲಾ ಆದಮೇಲೆ ಯೂಪವು ಹುಟ್ಟುತ್ತದೆ. ಆದರೆ ಮೊದಲೇ ಯೂಪಶಬ್ದದ ಪ್ರಯೋಗವನ್ನು ನಾವು ಕಾಣುತ್ತೇವೆ. ಅದರಂತೆ ಮುಂದೆ ಮೋಕ್ಷಾವಸ್ಥೆಯಲ್ಲಿ ಹೊಂದುವಂತಹ ಅಪಹತಪಾಪ್ಮತ್ವಾದಿಗಳನ್ನು ವಿವಕ್ಷಿಸಿ, ಮೊದಲೇ ಆ ಧರ್ಮಗಳನ್ನು ಜೀವನಲ್ಲಿ ಹೇಳಿದ್ದಾರೆಂದು ತಿಳಿಯಬೇಕು.

ಆದ್ದರಿಂದಲೇ ಇದೇ ಪ್ರಕರಣದಲ್ಲಿ ಮುಂದೆ 'ಸ ಯದಿ ಪಿತೃಲೋಕಕಾಮೋ ಭವತಿ ಸಂಕಲ್ಪಾದೇವ ಅಸ್ಯ ಪಿತರಃ ಸಮುತ್ತಿಷ್ಠಂತೇ । ಅತ್ರ ಹ್ಯೇತೇ ಸತ್ಯಾಃ ಕಾಮಾಃ' ಇತ್ಯಾದಿ ವಾಕ್ಯದಿಂದ ಮುಕ್ತರಲ್ಲಿರುವ ಸತ್ಯಕಾಮತ್ವಾದಿಗಳನ್ನು ವರ್ಣಿಸಲಾಗಿದೆ.

ಜೀವಪಕ್ಷದಲ್ಲಿ 'ಯಾವಾನ್ವಾ ಅಯಮಾಕಾಶಃ' ಎಂಬಲ್ಲಿರುವ ಆಕಾಶ ಶಬ್ದದಿಂದ ಅನನ್ವಯ ದೋಷ ಬರುತ್ತದಲ್ಲವೇ? ಎಂದರೆ ಈ ದೋಷ ಬ್ರಹ್ಮಪಕ್ಷದಲ್ಲೂ ಕೂಡ ಸಮಾನವಾದ್ದರಿಂದ ದೋಷವೆನಿಸುವುದಿಲ್ಲ. ಯಾವ ದೋಷವು ಎರಡು ಪಕ್ಷದಲ್ಲಿಯೂ ಸಮಾನವಾಗಿರುತ್ತದೋ, ಅದನ್ನು ದೋಷವೆಂದು ಪರಿಗಣಿಸಲು ಸಾಧ್ಯವಾಗುವುದಿಲ್ಲ.

'ಅರ್ಭಕೌಕಸ್ತ್ವಾತ್' ಎಂಬ ಸೂತ್ರದಲ್ಲಿ ಹೇಳಿದ ವಿಚಾರ

भावदीपः – 'अल्पश्रुतेरिति चेद्' इति सूत्रतद्भाष्याभ्यामुक्तमाह – दहरस्थत्वेति ।। 'अर्भकौकस्त्वाद्' इति सूत्रे व्योमवद् विष्णावपि युक्तमित्यतोऽस्य निरवकाशत्वमाह – तद्धृष्णोरिति ।। 'उत्क्रान्तिगत्यागतीनाम्' इति वक्ष्यमाणन्यायेनाणोरित्यर्थः ।।

'ಅಲ್ಪಶ್ರುತೇರಿತಿ ಚೇತ್' ಎಂಬ ಸೂತ್ರ ಹಾಗೂ ಭಾಷ್ಯಗಳ ಅಭಿಪ್ರಾಯವನ್ನು 'ದಹರಸ್ಥತ್ವ' ಇತ್ಯಾದಿ ಟೀಕೆಯಿಂದ ವ್ಯಾಖ್ಯಾನಿಸುತ್ತಿದ್ದಾರೆ. 'ಅರ್ಭಕೌಕಸ್ತ್ವಾತ್' ಎಂಬ ಸೂತ್ರದಲ್ಲಿ ಆಕಾಶದಂತೆ ವಿಷ್ಣುವೂ ಕೂಡ ವ್ಯಾಪ್ತನಾಗಿದ್ದರೂ ಅಲ್ಪಸ್ಥಾನದಲ್ಲಿಯೂ ಇರುತ್ತಾನಲ್ಲವೇ? ಎಂಬ ಪ್ರಶ್ನೆಗೆ ಜೀವನಲ್ಲಿರುವ ಅಲ್ಪಸ್ಥಾನಸ್ಥಿತತ್ವವು ನಿರವಕಾಶವಾಗಿದೆಯೆಂದು 'ತದ್ಧೃಣೋಃ' ಎಂಬ ವಾಕ್ಯದಿಂದ ಪ್ರತಿಪಾದಿಸುತ್ತಿದ್ದಾರೆ. 'ಉತ್ಕ್ರಾಂತಿಗತ್ಯಾಗತೀನಾಂ' ಎಂಬ ಮುಂದೆ ಬರುವ ಸೂತ್ರದ ನ್ಯಾಯದಿಂದ ಅಣುವಾದ ಜೀವನಿಗೆ ಅಲ್ಪಸ್ಥಾನಸ್ಥಿತತ್ವವು ಯುಕ್ತವಾಗುತ್ತದೆಂದು ತಿಳಿಯಬೇಕು.

ಅಲ್ಪಸ್ಥಾನಸ್ಥಿತತ್ವವು ಜೀವದ ಧರ್ಮ

भावदीपः – सर्वगतस्येति ।। अंशतोऽपीति योज्यम् । व्योम्नोऽशेनैकत्राल्पदेशेऽवस्थितिसम्भवेऽपि हरेरंशस्याप्यपरिच्छिन्नत्वेनाल्पौकस्त्वस्य निरवकाशत्वादिति भावः ।

'ಸರ್ವಗತಸ್ಯ' ಎಂಬಲ್ಲಿ 'ಅಂಶತೋಽಪಿ' ಎಂಬುದನ್ನು ಯೋಜನೆ ಮಾಡಿಕೊಳ್ಳಬೇಕು. ಅಂದರೆ ಆಕಾಶಕ್ಕೆ ಅಂಶದಿಂದ ಅಲ್ಪದೇಶಸ್ಥಿತತ್ವವು ಉಪಪನ್ನವಾದರೂ ಕೂಡ ಭಗವಂತನ ಅಂಶವೂ ಸಹ ಅಪರಿಚ್ಛಿನ್ನವಾದ್ದರಿಂದ ಅಲ್ಪಸ್ಥಾನಸ್ಥಿತತ್ವವನ್ನು ಹೇಳಲಾಗದು. ಆದ್ದರಿಂದ ಈ ಧರ್ಮವು ಜೀವನಲ್ಲಿ ಮಾತ್ರ ನಿರವಕಾಶವಾಗಿದೆಯೆಂದು ತಿಳಿಯಬೇಕು.

ಶ್ರುತಿಯ ಅಭಿಪ್ರಾಯ

भावदीपः – विवरिष्यते चैतदग्रे । अपहतपाप्मत्वादिकं तु जीवे मुक्तौ भावाद् भाव्यपेक्षया युक्तमिति भावः ।

ಇದೇ ವಿಷಯವನ್ನು ಮುಂದೆ ವಿವರಿಸಲಾಗುತ್ತದೆ. ಅಪಹತಪಾಪ್ಮತ್ವಾದಿಗುಣಗಳು ಜೀವನಲ್ಲಿ ಇಲ್ಲದ ಕಾರಣ ಜೀವನನ್ನು ಹೃತ್ಪದ್ಮಸ್ಥಿತನೆಂದು ಹೇಗೆ ಹೇಳುವುದು? ಎಂದು ಪ್ರಶ್ನಿಸಬಾರದು. ಸಂಸಾರ ದೆಶೆಯಲ್ಲಿರುವ ಜೀವನಲ್ಲಿ ಅಪಹತಪಾಪ್ಮತ್ವಾದಿಗುಣಗಳು ಇಲ್ಲದಿದ್ದರೂ ಮುಕ್ತನಾದ ಮೇಲೆ ಅದೇ ಧರ್ಮಗಳು ಇರುವುದರಿಂದ ಭಾವಿಧರ್ಮದ ವಿವಕ್ಷೆಯಿಂದ ಮೊದಲೇ ಆ ಧರ್ಮಗಳನ್ನು ಶ್ರುತಿಯು ಹೇಳಿದೆ.

'ಯಾವಾನ್ ವಾ' ಎಂಬ ಶ್ರುತಿಯಲ್ಲಿ ಹೇಗೆ ಅನ್ವಯ ?

भावदीपः – ननु हृत्पद्मस्थाकाशस्थो जीवश्चेद् यावान्वा इति वाक्यानन्वय इत्यत आह – नचेति ।।

ಹೃತ್ಪದ್ಮದ ಆಕಾಶದಲ್ಲಿರುವವನು ಜೀವನೆಂದು ಹೇಳಿದರೆ 'ಯಾವಾನ್ವಾ' ಎಂಬ ಶ್ರುತಿಗೆ ಅನ್ವಯವೇ ಕೂಡುವುದಿಲ್ಲವಲ್ಲ? ಎಂಬ ಪ್ರಶ್ನೆಗೆ 'ನಚ' ಇತ್ಯಾದಿ ಟೀಕೆಯಿಂದ ಉತ್ತರಿಸಿದ್ದಾರೆ.

ಪೂರ್ವಪಕ್ಷವು ಸಂದೇಹ ಸ್ವರೂಪವೇ ?

ಭಾವದೀಪಃ – ಹೃತ್ಪದ್ಮಸ್ಥ ಆಕಾಶ ಏವೇತಿ ವಾ ಜೀವ ಏವೇತಿ ವಾ ನಿರ್ಣಯಾಭಾವಾತ್ ಪೂರ್ವಪಕ್ಷಸ್ಯ ಸನ್ದೇಹಾದವಿಶೇಷಃ ಸ್ಯಾದಿತ್ಯತೋ ವಿಷ್ಣ್ವಿತರತ್ವೇನ ನಿಶ್ಚಯಃ ಸ್ಯಾದಿತಿ ಭಾವೇನ ದ್ವಿವಿಧಪೂರ್ವಪಕ್ಷಫಲತ್ವೇನೋಕ್ತಮಿತ್ಯನ್ತಭಾಷ್ಯತಾತ್ಪರ್ಯಮಾಹ – ಅತ ಇತಿ ।।

ಹೃತ್ಪದ್ಮಸ್ಥವಾದ ವಸ್ತುವು ಜಡಾಕಾಶವೆಂದೋ, ಜೀವನೆಂದೋ ನಿರ್ಣಯಿಸಲು ಬಾರದಿದ್ದಾಗ ಪೂರ್ವಪಕ್ಷವು ಸಂದೇಹಸ್ವರೂಪವನ್ನೇ ಹೊಂದಿತಲ್ಲವೇ? ಎಂಬ ಪ್ರಶ್ನೆಗೆ ವಿಷ್ಣು ಇತರತ್ವೇನ ನಿಶ್ಚಯ ಮಾಡಬೇಕೆಂದು ತಿಳಿಯಬೇಕು. ಎರಡೂ ಬಗೆಯ ಪೂರ್ವಪಕ್ಷಗಳಲ್ಲಿ ವಿಷ್ಣು ಹೃತ್ಪದ್ಮಸ್ಥನಾಗುವುದಿಲ್ಲವೆಂದು ನಿಶ್ಚಯವಿರುವುದರಿಂದ ಎರಡು ಬಗೆಯ ಪೂರ್ವಪಕ್ಷವನ್ನು ಹೇಳಿದ್ದಾರೆ. 'ಉಕ್ತಂ' ಎಂಬಲ್ಲಿಯ ತನಕದ ಭಾಷ್ಯದ ತಾತ್ಪರ್ಯವನ್ನು 'ಅತ' ಎಂಬ ಟೀಕಾವಾಕ್ಯದಿಂದ ಸ್ಪಷ್ಟಪಡಿಸುತ್ತಿದ್ದಾರೆ.

ಸಾಕ್ಷಾತ್ತಾಗಿ ಅಥವಾ ಪರಂಪರೆಯಿಂದಲೇ ವಿಷ್ಣುವಿಗೆ ಹೃತ್ಪದ್ಮಸ್ಥತ್ವವಿಲ್ಲ

ಭಾವದೀಪಃ – ಸಾಕ್ಷಾದ್ ವ್ಯವಧಾನಾಭ್ಯಾಂ ಕ್ರಮಾದಾಕಾಶಜೀವಯೋರೇವ ಸರ್ವಾಧಾರತಯಾ ಹೃತ್ಪದ್ಮಸ್ಥತ್ವಾದ್ ವಿಷ್ಣೋಶ್ಚೈಕೇನಾಪಿ ರೂಪೇಣ ಸರ್ವಾಧಾರತಯಾ ಹೃತ್ಪದ್ಮಸ್ಥತ್ವಾಭಾವಾಚ್ಚೇತ್ಯರ್ಥಃ ।

ಸಾಕ್ಷಾತ್ ಹೃತ್ಪದ್ಮಸ್ಥಿತತ್ವವು ಅಥವಾ ಪರಂಪರಯಾ ಸರ್ವಾಧಾರತಯಾ ಹೃತ್ಪದ್ಮಸ್ಥಿತತ್ವವು ಆಕಾಶ ಮತ್ತು ಜೀವರುಗಳಿಗೆ ಹೇಳಿದಂತಾಯಿತು. ಆದರೆ ವಿಷ್ಣುವಿಗೆ ಸಾಕ್ಷಾತ್ತಾಗಿ ಅಥವಾ ಪರಂಪರಯಾ ಹೃತ್ಪದ್ಮಸ್ಥಿತತ್ವವನ್ನು ಹೇಳಲು ಸಾಧ್ಯವಿಲ್ಲವೆಂದು ತಿಳಿಯಬೇಕು.

ಹಾಗಾದರೆ ದಹರಾಕಾಶತ್ವವನ್ನು ಹೇಳಬಹುದಲ್ಲವೇ ?

ಭಾವದೀಪಃ – ವಿಷ್ಣೋಃ ಸಾಕ್ಷಾದ್ ಹೃತ್ಪದ್ಮಸ್ಥತ್ವಾಭಾವೇऽಪಿ ಹೃತ್ಪದ್ಮಸ್ಥ ದಹರಾಕಾಶಸ್ಥತಯಾ ವ್ಯವಧಾನೇನ ಹೃತ್ಪದ್ಮಸ್ಥತ್ವಂ ಸ್ಯಾದೇವೇತಿ ಭಾವೇನाऽकाङ್ಕ್ಷಾಕ್ರಮೇಣ ಭಾಷ್ಯಂ ವ್ಯಾಚಷ್ಟೇ – ದಹರೇತಿ ।।

ವಿಷ್ಣುವಿಗೆ ಸಾಕ್ಷಾತ್ತಾಗಿ ಹೃತ್ಪದ್ಮಸ್ಥಿತತ್ವವನ್ನು ಹೇಳಲು ಸಾಧ್ಯವಿಲ್ಲದಿದ್ದರೂ ಹೃತ್ಪದ್ಮದಲ್ಲಿರುವ ದಹರಾಕಾಶಸ್ಥಿತತ್ವವನ್ನು ಹೇಳಬಹುದು. ಹೀಗೆ ಪರಂಪರಯಾ ಹೃತ್ಪದ್ಮಸ್ಥಿತತ್ವವು ವಿಷ್ಣುವಿನಲ್ಲಿ ಬಂದೇ

ಬರುತ್ತದಲ್ಲವೇ? ಈ ಅಭಿಪ್ರಾಯದಿಂದ ಆಕಾಂಕ್ಷೆಗೆ ಅನುಸಾರಿಯಾಗಿ ವ್ಯಾಖ್ಯಾನ ಮಾಡುತ್ತಿದ್ದಾರೆ 'ದಹರ' ಇತ್ಯಾದಿಯಾಗಿ.

ಪರಂಪರೆಯಿಂದಲೂ ಹೃತ್ಪದ್ಮಸ್ಥತ್ವವು ಲಿಂಗವಾಗುತ್ತದೆ

भावदीपः – परम्परया दहरहृत्पद्मस्थ इत्यर्थः । अत्येति अतिशयेन प्राप्नोतीति भ्रान्तिं निराह – अतिक्रम्येति ।। सर्वदा शोकादिहीन एवास्त इत्यर्थः।। विष्णोरिति ।। सजातीये जीवे दर्शनेनात्रापि तत्प्राप्तिभ्रान्तौ निषेध-सम्भवादित्यर्थः ।

ಪರಂಪರೆಯಿಂದ ದಹರವಾದ ಹೃತ್ಪದ್ಮಸ್ಥಿತನೆಂದು ತಿಳಿಯಬೇಕು. ಶ್ರುತಿಯಲ್ಲಿರುವ 'ಅತ್ಯೇತಿ' ಎಂಬ ಪದಕ್ಕೆ ಅತಿಶಯವಾಗಿ ಹೊಂದುತ್ತಾನೆ ಎಂಬ ಭ್ರಾಂತಿಯನ್ನು ನಿರಾಕರಿಸಲು 'ಅತಿಕ್ರಮ್ಯ' ಎಂದು ಹೇಳಿದ್ದಾರೆ. ಅಂದರೆ 'ನಿರಂತರವಾಗಿ ದುಃಖಾದಿಗಳಿಂದ ರಹಿತನಾಗಿದ್ದಾನೆ' ಎಂದರ್ಥ.

ವಿಶೇಷವಿಚಾರ - ಸಿದ್ಧಾಂತ ಹೀಗಿದೆ - ಹೃತ್ಪದ್ಮಸ್ಥನಾದವನು ಮಹಾವಿಷ್ಣುವೇ ಆಗಿದ್ದಾನೆ. ಮುಂದಿನ ಶ್ರುತಿವಾಕ್ಯದಲ್ಲಿ ಅಪಹತಪಾಪ್ಮತ್ವ ಮೊದಲಾದ ಲಿಂಗಗಳು ಶ್ರುತವಾದ್ದರಿಂದ. (ದಹರೇ = ಹೃದಯಪದ್ಮದಲ್ಲಿರುವ ದಹರಾಕಾಶದಲ್ಲಿ ಇರುವವನು ಮಹಾವಿಷ್ಣುವೇ ಆಗಿದ್ದಾನೆ. ಉತ್ತರೇಭ್ಯಃ = ಮುಂದಿನ ಶ್ರುತಿವಾಕ್ಯದಲ್ಲಿರುವ ಅಪಹತಪಾಪ್ಮತ್ವಾದಿ ಲಿಂಗಗಳಿರುವುದರಿಂದ.)

ಹಿಂದೆ ಎರಡು ಬಗೆಯಲ್ಲಿ ವಿಕಲ್ಪ ಮಾಡಿದ್ದರೂ, ಅವುಗಳಲ್ಲಿ ಹೃದಯಪದ್ಮದಲ್ಲಿರುವ ದಹರಾಕಾಶವನ್ನೇ ವಿಷ್ಣುವೆಂಬ ಮೊದಲನೆಯ ಪಕ್ಷವನ್ನು ಒಪ್ಪುವುದಿಲ್ಲ. ಹಾಗೇ ಒಪ್ಪಿದಲ್ಲಿ ಪ್ರಥಮ ಪಕ್ಷದಲ್ಲಿ ಹೇಳಲ್ಪಟ್ಟ ದೋಷಗಳಿಗೆ ಅವಕಾಶವಿರುತ್ತಿತ್ತು; ಹೊರತಾಗಿ ಹೃದಯಪದ್ಮದಲ್ಲಿರುವ ದಹರಾಕಾಶದಲ್ಲಿರುವವನು ಮಹಾವಿಷ್ಣುವೆಂದು ಹೇಳುತ್ತೇವೆ. ಆದ್ದರಿಂದ ಎರಡನೆಯ ವಿಕಲ್ಪವನ್ನು ಸ್ವೀಕರಿಸಿದಂತಾಯಿತು.

ಜಡವಾದ ಆಕಾಶದಲ್ಲಿಯೂ ಅಪಹತಪಾಪ್ಮತ್ವಾದಿಗಳನ್ನು ಹೇಳಬಹುದಲ್ಲವೇ? ಎಂದು ಪ್ರಶ್ನಿಸಬಾರದು. ಪಾಪ ಮೊದಲಾದವುಗಳಿಗೆ ಜಡವಾದ ಆಕಾಶದಲ್ಲಿ ಪ್ರಸಕ್ತಿಯೇ

ಇರುವುದಿಲ್ಲ. ಹಾಗಾದರೆ ಈಶ್ವರನಲ್ಲಿಯೂ ಕೂಡ ಪಾಪಗಳಿಗೆ ಪ್ರಸಕ್ತಿಯನ್ನು ಹೇಳಲು ಹೇಗೆ ಸಾಧ್ಯ ? ಎಂದರೆ ಪ್ರಸಕ್ತಿಯೆಂದರೇನು? ಎಂಬುದನ್ನು ಮೊದಲು ತಿಳಿಯಬೇಕು.

ಸಜಾತೀಯೇ ದರ್ಶನಂ ಹಿ ಪ್ರತಿಷೇಧೇ ಪ್ರಯೋಜಕಮ್ ।
ಚೇತನೇ ಚೈವ ಪಾಪ್ಮಾದಿಮತ್ತಾ ದೃಷ್ಟಾ ಜಡೇ ತು ನ ॥ ೧ ॥

ಪ್ರತಿಷೇಧ ಮಾಡುವುದಕ್ಕೆ ಯಾವುದು ಪ್ರಯೋಜಕವಾಗಿದೆಯೋ, ಅದು ಪ್ರಸಕ್ತಿ ಎನಿಸುತ್ತಿದೆ. ಇಂತಹ ಪ್ರಸಕ್ತಿಯು ಸಜಾತಿಯವಾದ ಪದಾರ್ಥಗಳಲ್ಲಿ ಕಂಡಿದೆ. ವಿಜಾತೀಯವಾದದ್ದರಲ್ಲಿ ಕಂಡಿಲ್ಲ. ಅಂದರೆ ಚೇತನತ್ವೇನ ಸಜಾತೀಯರಾದ ಜೀವಾದಿಗಳಲ್ಲಿ ಪಾಪಾದಿಗಳಿರುವುದು ಕಂಡಿದೆ. ಅಂತಹ ಪಾಪಾದಿಗಳಿಗೆ ಚೇತನನೇ ಆದ ಈಶ್ವರನಲ್ಲಿ ಪ್ರಸಕ್ತಿಯಿದ್ದಾಗ, ಅದನ್ನು ನಿಷೇಧ ಮಾಡಲಾಗುತ್ತದೆ. ಆದರೆ ಜಡವಾದ ಭೂತಾಕಾಶದಲ್ಲಿ ಸಾಂಗತ್ಯವಿಲ್ಲದ ಕಾರಣ ಪಾಪಾದಿಗಳಿಗೆ ಪ್ರಸಕ್ತಿಯಿರಲು ಸಾಧ್ಯವಿಲ್ಲ.

ಜೀವನನ್ನು ಹೃತ್ಪದ್ಮಸ್ಥನೆಂದು ವಿವಕ್ಷಿಸಿದರೆ ಸಂಸಾರದಶೆಯಲ್ಲಿ ಅಪಹತಪಾಪ್ಮತ್ವಾದಿಗಳನ್ನು ಕೂಡಿಸಲು ಬರುವುದಿಲ್ಲ. ಮುಕ್ತನಾದ ಜೀವನನ್ನು ವಿವಕ್ಷಿಸಿದರೆ ಮೋಕ್ಷದಶೆಯಲ್ಲಿ ದೇಹವೇ ಇಲ್ಲದ ಕಾರಣ ಹೃತ್ಪದ್ಮಸ್ಥತ್ವವನ್ನು ಹೇಳಲು ಸಾಧ್ಯವಿಲ್ಲ. ಆದ್ದರಿಂದ 'ಏಕಂ ಸಂದಿಹಾನಃ ಅಪರಮ್ ಪ್ರಚ್ಯವತೇ' ಎಂಬ ನ್ಯಾಯದಂತೆ ಅಪಹತಪಾಪ್ಮತ್ವ ಮತ್ತು ಹೃತ್ಪದ್ಮಸ್ಥತ್ವ ಎರಡನ್ನೂ ಒಟ್ಟಿಗೆ ಕೂಡಿಸಲು ಜೀವಪಕ್ಷದಲ್ಲಿ ಸಾಧ್ಯವಿಲ್ಲ.

ಮತ್ತು ಭಾಷ್ಯದಲ್ಲಿ ಉದಾಹರಿಸಲ್ಪಟ್ಟ ಅನೇಕ ಶ್ರುತಿಗಳ ಆಧಾರದಿಂದ ಅಪಹತಪಾಪ್ಮತ್ವಾದಿಗಳು ಈಶ್ವರನಲ್ಲಿ ನಿರಪೇಕ್ಷವಾದ್ದರಿಂದ ಸ್ವತಂತ್ರವಾಗಿವೆ. ಜೀವನಲ್ಲಿ ಈಶನ ಅಧೀನವಾದ್ದರಿಂದ ಅಸ್ವತಂತ್ರವಾಗಿವೆಯೆಂದು ತಿಳಿಯುತ್ತದೆ. ಸಾಪೇಕ್ಷ ಹಾಗೂ ನಿರಪೇಕ್ಷಗಳ ನಡುವೆ ನಿರಪೇಕ್ಷವಾದದ್ದನ್ನೇ ಸ್ವೀಕರಿಸಬೇಕು.

ನಿರಪೇಕ್ಷವಾದದ್ದನ್ನೇ ಸ್ವೀಕರಿಸಲು ಬರುವಾಗ ಸಾಪೇಕ್ಷವಾದದ್ದನ್ನು ಸ್ವೀಕರಿಸಬಾರದು. ಹೀಗೆ ಹೇಳಿದ್ದರಿಂದ ಸತ್ಯಕಾಮತ್ವಾದಿಗಳೂ ಕೂಡ ಬ್ರಹ್ಮಲಿಂಗಗಳೇ ಆಗಿವೆಯೆಂದು ಸಿದ್ಧವಾಯಿತು.

ಹೀಗೆ ಹೇಳಿದ್ದರಿಂದಲೇ ಆಕಾಶವನ್ನು ಹೃತ್ಪದ್ಮಸ್ಥವೆಂದು ಹೇಳಿ ಆಕಾಶಕ್ಕೆ ಅಭಿಮಾನಿಯಾದ ದೇವತೆಗಳಲ್ಲಿ ಸತ್ಯಕಾಮತ್ವಾದಿಗಳನ್ನು ಕೂಡಿಸಬೇಕೆಂಬ ಪಕ್ಷವನ್ನು ನಿರಾಕರಿಸಿದಂತಾಯಿತು.

ಅಭಿಮಾನಿ ಚೇತನರಲ್ಲಿಯೂ ಕೂಡ ಸ್ವತಂತ್ರವಾದ ಸತ್ಯಕಾಮತ್ವಾದಿ ಧರ್ಮಗಳು ಇರುವುದಿಲ್ಲ.

ಆಕಾಶಾದಿಗಳಲ್ಲಿ ಅಪಹತಪಾಪ್ಮತ್ವಾದಿಗಳು ಬರುತ್ತದಲ್ಲವೇ ?

भावदीपः – अभिमानिद्वाराऽकाशेऽप्यस्त्वपहतपाप्मत्वमित्यत आह – सत्यकामत्वेति ।। तत्तु निरवकाशमित्यग्रे व्यक्तमिति भावः । कथञ्चिद् अभिमान्यादिद्वारेत्यर्थः ।। अनेनेति ।। कापि निरपेक्षधर्माभाव-कथनेनेत्यर्थः ।

ಚೇತನತ್ವೇನ ಸಜಾತಿಯನಾದ ಜೀವನಲ್ಲಿ ದುಃಖಾದಿಗಳು ಇರುವುದರಿಂದ ವಿಷ್ಣುವಿನಲ್ಲಿಯೂ ದುಃಖಾದಿಗಳು ಬರಬಹುದಲ್ಲವೇ? ಎಂಬ ಭ್ರಾಂತಿ ಬಂದರೆ ಅದನ್ನು ನಿಷೇಧ ಮಾಡುವುದಕ್ಕಾಗಿ ಎಂದರ್ಥ. ಅಭಿಮಾನಿಜೀವನ ಮುಖಾಂತರ ಆಕಾಶಾದಿಗಳಲ್ಲಿ ಅಪಹತಪಾಪ್ಮತ್ವಾದಿ ಗುಣಗಳನ್ನು ಹೇಳಬಹುದಲ್ಲವೇ? ಎಂಬ ಪ್ರಶ್ನೆಗೆ 'ಸತ್ಯಕಾಮತ್ವ' ಇತ್ಯಾದಿ ಟೀಕೆಯಿಂದ ಉತ್ತರಿಸಿದ್ದಾರೆ. ಈ ಸತ್ಯಕಾಮತ್ವಾದಿ ಗುಣಗಳು ವಿಷ್ಣುವಿನಲ್ಲಿ ಮಾತ್ರ ನಿರವಕಾಶವಾಗಿದೆಯೆಂದು ಮುಂದೆ ಸಮರ್ಥಿಸುತ್ತಾರೆ. ''ಕಥಂಚಿತ್' ಎಂದರೆ ಅಭಿಮಾನಿ ದೇವತೆಗಳ ಮುಖಾಂತರ ಎಂದರ್ಥ. 'ಅನೇನ' ಎಂದರೆ 'ನಿರಪೇಕ್ಷವಾದ ಧರ್ಮಗಳು ಇರುವುದಿಲ್ಲವೆಂದು ಹೇಳಿದ್ದರಿಂದ' ಎಂದರ್ಥ.

ತರ್ಕತಾಂಡವದಲ್ಲಿ ಹೇಳಿದಂತೆ ಸಾಪೇಕ್ಷಧರ್ಮವೂ ಕೂಡ ಮುಖ್ಯವಲ್ಲವೇ ?

भावदीपः – ननु तर्कताण्डवे पाकसापेक्षस्यापि पृथिवीशौक्ल्यस्य तन्निरपेक्षाबादिशौक्ल्यस्येव शुक्लशब्दमुख्यार्थत्वेन तुल्यतया प्रतीतेः व्याप्ति सङ्गतिज्ञानादिसापेक्षयोरप्यनुमानशब्दयोस्तन्निरपेक्षप्रत्यक्षवत् प्रमाणशब्द-मुख्यार्थत्वेन तुल्यतया प्रतीतेश्चेत्यादिनोपक्रमप्राबल्यभङ्गे सापेक्षस्यापि शब्दमुख्यार्थत्वोक्तेः 'सत्यकामः सत्यसङ्कल्पः' इति श्रुतौ सापेक्षधर्मस्यापि धीरस्तीति चेन्न । प्रतीतस्यापि तस्य त्यागोपपत्तेरिति भावः ।। १४ ।।

ಶಂಕೆ - ತರ್ಕತಾಂಡವದಲ್ಲಿ ಸಾಪೇಕ್ಷವಾದ ಧರ್ಮವನ್ನೂ ಸಹ ಶಬ್ದದ ಮುಖ್ಯಾರ್ಥವೆಂದೇ ಸ್ವೀಕರಿಸಿದ್ದಾರೆ. ಪೃಥಿವಿಯಲ್ಲಿರುವ ಶೌಕ್ಲ್ಯವು ಸಾಪೇಕ್ಷಿತವಾಗಿದೆ. ನೀರಿನಲ್ಲಿರುವ ಶೌಕ್ಲ್ಯವು ನಿರಪೇಕ್ಷಿತವಾಗಿದೆ. 'ಶುಕ್ಲ' ಶಬ್ದಕ್ಕೆ ನೀರಿನ ಶೌಕ್ಲ್ಯವು ಹೇಗೆ ಮುಖ್ಯಾರ್ಥವೋ ಅದರಂತೆ ಪೃಥಿವಿಯಲ್ಲಿರುವ ಶೌಕ್ಲ್ಯವೂ ಸಹ ಮುಖ್ಯಾರ್ಥವೇ ಆಗಿದೆ. ಅದರಂತೆ ವ್ಯಾಪ್ತಿಜ್ಞಾನ ಸಂಬಂಧಜ್ಞಾನಗಳನ್ನು ಅಪೇಕ್ಷೆಪಡದ ಪ್ರತ್ಯಕ್ಷದಲ್ಲಿ ಪ್ರಮಾಣಶಬ್ದದ ಮುಖ್ಯವಾದ ವ್ಯವಹಾರ ಹೇಗೆ ಇದೆಯೋ ಅದರಂತೆ ವ್ಯಾಪ್ತಿಜ್ಞಾನ ಸಂಬಂಧಜ್ಞಾನಗಳನ್ನು ಅಪೇಕ್ಷಿಸುವ ಅನುಮಾನ ಶಬ್ದಗಳಲ್ಲಿಯೂ ಪ್ರಮಾಣ ಶಬ್ದದ ವ್ಯವಹಾರವಿದೆ. ಹೀಗೆ ಸಾಪೇಕ್ಷಿತವಾದದ್ದೂ ಸಹ ಶಬ್ದದ ಮುಖ್ಯಾರ್ಥವೇ ಆಗುತ್ತದೆಂದು ತರ್ಕತಾಂಡವದ ಉಪಕ್ರಮ-ಪ್ರಾಬಲ್ಯಭಂಗ ಪ್ರಕರಣದಲ್ಲಿ ಸಮರ್ಥಿಸಿದ್ದಾರೆ. ಹಾಗಾಗಿ ಪ್ರಕೃತ 'ಸತ್ಯಕಾಮಃ ಸತ್ಯಸಂಕಲ್ಪಃ' ಎಂಬ ಶ್ರುತಿಯಿಂದ ಸಾಪೇಕ್ಷವಾದ ಧರ್ಮವನ್ನೂ ಸಹ ಮುಖ್ಯವಾಗಿ ವಿವಕ್ಷಿಸಬಹುದಲ್ಲವೇ ?

ಸಮಾಧಾನ - ಹೌದು. ಸಾಪೇಕ್ಷಧರ್ಮದ ಪ್ರತೀತಿ ಬಂದೇ ಬರುತ್ತದೆ. ಆದರೂ ಸಹ ಸಾಪೇಕ್ಷ ನಿರಪೇಕ್ಷಗಳಲ್ಲಿ ನಿರಪೇಕ್ಷವಾದದ್ದು ಪ್ರಬಲವಾದ್ದರಿಂದ ಅದನ್ನೇ ಇಟ್ಟುಕೊಳ್ಳಬೇಕೆಂದು ಭಾಷ್ಯದ ಅಭಿಪ್ರಾಯ.

ಬ್ರಹ್ಮಸೂತ್ರ

'ಗತಿಶಬ್ದಾಭ್ಯಾಂ ತಥಾಹಿ' ಇತ್ಯಾದಿ ಸೂತ್ರದ ವ್ಯಾಖ್ಯಾನ

ब्रह्मसूत्रम् – गतिशब्दाभ्यां तथाहि दृष्टं लिङ्गञ्च ।। १५ ।।

ಸೂತ್ರಾರ್ಥ - ಸುಷುಪ್ತಿ ಅವಸ್ಥೆಯನ್ನು ಹೊಂದಿದ ಜೀವನಿಂದ ಪರಮಾತ್ಮನು ಪ್ರಾಪ್ತನಾಗಿದ್ದಾನೆ. ಮತ್ತು 'ಬ್ರಹ್ಮಲೋಕಮ್' ಎಂಬಲ್ಲಿ ಬ್ರಹ್ಮ ಶಬ್ದವೂ ಸಹ ಶ್ರುತವಾಗಿದೆ. ಯಾವ ರೀತಿಯಾಗಿ ಹೀಗೆ ಗತಿ ಹಾಗೂ ಶಬ್ದಗಳು ಹೃತ್ಪದ್ಮಸ್ಥಿತನಲ್ಲಿ ಮಾತ್ರ ಬರುತ್ತವೋ ಅದರಂತರ 'ಅರ' ಮತ್ತು 'ಣ್ಯ' ಎಂಬ ಸುಧಾಸಮುದ್ರಕ್ಕೆ ಆಶ್ರಯವಾದ ಲಿಂಗವೂ ಸಹ ಬ್ರಹ್ಮನಲ್ಲಿಯೇ ಬರುತ್ತದೆ. ಆದ್ದರಿಂದಲೂ ಹೃದಯ ಪದ್ಮದಲ್ಲಿರುವವನು ವಿಷ್ಣುವೇ ಆಗಿದ್ದಾನೆಂದು ನಿರ್ಣಯಿಸಬಹುದು.

ಅರ್ಥ -- ॥ ಗತಿ ಶಬ್ದಾಭ್ಯಾಂ ತಥಾ ಹಿ ದೃಷ್ಟಂ ಲಿಂಗಂ ಚ ॥, = 'ಅಹರಹಃ ಗಚ್ಛಂತ್ಯ ಏತಂ ಬ್ರಹ್ಮಲೋಕಂ' ಎಂಬ ಛಾಂದೋಗ್ಯದ ವಾಕ್ಯದಲ್ಲಿ ಶ್ರುತವಾದ ಸುಪ್ತರಿಂದ ಪ್ರಾಪ್ತವಾದ 'ಬ್ರಹ್ಮಲೋಕಂ' ಎಂದು ಬ್ರಹ್ಮಶಬ್ದ. ಈ ಎರಡುಕಾರಣಗಳಿಂದ ಹೃದಯಾಕಾಶದ ಪದ್ಮದಲ್ಲಿರುವವನು ಬ್ರಹ್ಮನೇ ಆಗಿದ್ದಾನೆ. ಮತ್ತು ಯತಃ = ಯಾವಕಾರಣದಿಂದ, ಗತಿ ಹಾಗೂ ಶಬ್ದಗಳು ಹೃತ್‌ಪದ್ಮಸ್ಥಿತನಲ್ಲಿವೆಯೋ, ತಥಾ = ಅದರಂತೆ, ಲಿಂಗಂಚ = ಅರಶ್ಚ ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ 'ಅರ' ಮತ್ತು 'ಣ್ಯ' ಎಂಬ ಸುಧಾಸಮುದ್ರ ಲೋಕವತ್ವವೆಂಬ ಲಿಂಗವೂಸಹ ವಿಷ್ಣುವಿನಲ್ಲೇ ಪ್ರಸಿದ್ಧವಾಗಿದೆ. ಆ ಕಾರಣದಿಂದಲೂ ಹೃದಯಾಕಾಶದ ಪದ್ಮದಲ್ಲಿರುವ ವ್ಯಕ್ತಿಯು ವಿಷ್ಣುವೇ ಆಗಿದ್ದಾನೆಂದು ನಿರ್ಣಯವಾಗುತ್ತದೆ.

ಬ್ರಹ್ಮಸೂತ್ರಭಾಷ್ಯ

ದಹರಶಬ್ದವು ವಿಷ್ಣುವೆನ್ನಲು ಬ್ರಹ್ಮಶಬ್ದವು ಕಾರಣ

ब्रह्मसूत्रभाष्यम् — ॥ गतिशब्दाभ्यां तथाहि दृष्टं लिङ्गं च ॥

'अहरहर्गच्छन्त्य एतं ब्रह्मलोकं न विन्दन्ति' (छां. ८-३-२.)

इति सुप्तस्य तद्गतिर्ब्रह्मशब्दश्चोच्यते ।

ಅನುವಾದ - 'ಪ್ರತಿನಿತ್ಯ ಹಗಲು ರಾತ್ರಿ ಜೀವರುಗಳು ಬ್ರಹ್ಮಲೋಕಕ್ಕೆ ಹೋಗುತ್ತಲೇ ಇದ್ದಾರೆ. ಆದರೂ ಸಹ ಅವನನ್ನು ತಿಳಿಯಲು ಸಾಧ್ಯವಾಗಿಲ್ಲ' ಎಂಬುದಾಗಿ ಛಾಂದೋಗ್ಯದಲ್ಲಿಯೇ ಮುಂದೆ ಸುಷುಪ್ತಿ ಅವಸ್ಥೆಯನ್ನು ಹೊಂದಿದವರಿಗೆ ಪ್ರಾಪ್ತಿಯು ಮತ್ತು ಬ್ರಹ್ಮ ಶಬ್ದವೂ ಹೇಳಲಾಗಿದೆ.

ಪ್ರತಿಪದಾರ್ಥ -- ಮತ್ತೊಂದು ಯುಕ್ತಿಯಿಂದ ಹೃತ್ಪದ್ಮಸ್ಥನಾದವನು ವಿಷ್ಣುವೇ ಆಗಿದ್ದಾನೆಂದು ಸಮರ್ಥಿಸುವುದಕ್ಕಾಗಿ, ಸೂತ್ರವನ್ನು ಪಠಿಸುತ್ತಾ, ಶಂಕಾಪರಿಹಾರಕ್ಕಾಗಿ ಶ್ರುತಿಯನ್ನು ಉದಾಹರಿಸುತ್ತಾ ವ್ಯಾಖ್ಯಾನಿಸುತ್ತಿದ್ದಾರೆ -

ಅಹರಹಃ = ಹಗಲೂ ರಾತ್ರಿ, ಜೀವರುಗಳು, ಬ್ರಹ್ಮಲೋಕವನ್ನು ಕುರಿತು, ಗಚ್ಛಂತಿ = ಹೋಗುತ್ತಾರೆ, ಆದರೂ ಸಹ ಈ ಬ್ರಹ್ಮನನ್ನು, ನ ಎಂದಂತಿ = ತಿಳಿಯಲಾರರು, ಸುಪ್ತಸ್ಯ = ಸುಪ್ತನಾದ ಜೀವನಿಗೆ, ತದ್ಗತಿಃ = ಪರಮಾತ್ಮನ ಪ್ರಾಪ್ತಿಯು ಹೇಳಲ್ಪಟ್ಟಿದೆ, ಬ್ರಹ್ಮಶಬ್ದಶ್ಚ = ಬ್ರಹ್ಮಪದದ ಪ್ರಯೋಗವೂ ಸಹ, ಉಚ್ಯತೇ = ಹೇಳಲ್ಪಟ್ಟಿದೆ.

ಸುಪ್ತಪ್ರಾಪ್ಯತ್ವವು ಎರಡನೆಯ ಕಾರಣ

ब्रह्मसूत्रभाष्यम् — 'सता सोम्य तदा सम्पन्नो भवति' (छां. ६-७-१.) इति श्रुतेस्तं हि सुप्तो गच्छति ।

ಅನುವಾದ - ''ಸತ್' ಎಂಬ ಶಬ್ದದಿಂದ ವಾಚ್ಯನಾದ ಪರಮಾತ್ಮನನ್ನು ಕುರಿತು, ಜೀವನು ಹೋಗುತ್ತಾನೆ' ಎಂಬ ಶ್ರುತಿ ಇರುವುದರಿಂದ ಸುಪ್ತನಾದ ಜೀವನು, ತಾನೇ ಅವನೆಡೆಗೆ ತೆರಳುತ್ತಾನೆ.

ಪ್ರತಿಪದಾರ್ಥ -- ಸುಪ್ತಪ್ರಾಪ್ಯತ್ವವು ವಿಷ್ಣುತ್ವನಿಶ್ಚಾಯಕ ಲಿಂಗವೆಂದು ಹೇಗೆ ಹೇಳುತ್ತೀರಿ ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ, ಹೇ ಸೋಮ್ಯ ! = ಭಕ್ತಿ, ಜ್ಞಾನಗಳಿಗೆ ಅರ್ಹನಾದ ಹೇ ಶ್ವೇತಕೇತುವೇ ! ತದಾ = ಸುಷುಪ್ತಿ ಕಾಲದಲ್ಲಿ ಜೀವನು, ಸತಾ = 'ಸತ್' ಎಂಬ ಶಬ್ದದಿಂದ ವಾಚ್ಯನಾದ, ಬ್ರಹ್ಮನ ಜೊತೆಗೆ, ಸಂಪನ್ನಃ = ಹೊಂದಿದವನು, ಭವತಿ = ಆಗುತ್ತಾನೆ, ಇತಿ = ಹೀಗೆ, ಶ್ರುತೇಃ = ಶ್ರುತಿ ಇರುವ ಕಾರಣ, ತಂ = ವಿಷ್ಣುವನ್ನು ಕುರಿತು, ಸುಪ್ತಃ = ಸುಷುಪ್ತಿಯನ್ನು ಹೊಂದಿದ ಜೀವನು, ಗಚ್ಛತಿ = ಸ್ವತಃ ತಾನೇ ತೆರಳುತ್ತಾನೆ, ಹಿ = ಇದು ಪ್ರಸಿದ್ಧವಷ್ಟೆ.

ಅರಣ್ಯಾಶ್ರಯತ್ವವು ಮೂರನೆಯ ಕಾರಣ

ब्रह्मसूत्रभाष्यम् — 'अरश्च ह वै ण्यश्चार्णवौ ब्रह्मलोके' (छां ८-५-३.) इति लिङ्गं च तथा दृष्टम् ।

ಅನುವಾದ - ಬ್ರಹ್ಮಲೋಕದಲ್ಲಿ 'ಅರ' ಮತ್ತು 'ಣ್ಯ' ಎಂಬ ಎರಡು ಸಮುದ್ರಗಳಿವೆ, ಹೀಗೆ ಹೇಳಿದ್ದರಿಂದ ಬ್ರಹ್ಮಲೋಕವೆಂಬ ಅಸಾಧಾರಣಧರ್ಮವೂ ಸಹ ಸುಪ್ತ ಪ್ರಾಪ್ಯತ್ವದಂತೆ ವಿಷ್ಣುತ್ವ ನಿಶ್ಚಾಯಕವಾಗಿದೆ.

ಪ್ರತಿಪದಾರ್ಥ -- 'ಲಿಂಗಂ ಚ ತಥಾಹಿ ದೃಷ್ಟಮ್' ಎಂಬ ಸೂತ್ರ ಶೇಷವನ್ನು ಮತ್ತೊಂದು ಹೇತುವಿನಿಂದ ವ್ಯಾಖ್ಯಾನಿಸುತ್ತಿದ್ದಾರೆ -

ಅರಃ =ಅರವೆಂದು, ಚ ವೈ = ಮತ್ತೊಂದು ಪ್ರಸಿದ್ಧವಾದ, ಣ್ಯಃ = ಣ್ಯ ಎಂದು, ಅರ್ಣವೌ = ಎರಡು ಅಮೃತಸಮುದ್ರಗಳು, ಬ್ರಹ್ಮಲೋಕೇ = ಬ್ರಹ್ಮಲೋಕದಲ್ಲಿ, ಹ = ಇರುವುದು ಪ್ರಸಿದ್ಧವಾಗಿದೆಯಷ್ಟೇ, ಇತಿ =

ಹೀಗೆ, ಲಿಂಗಂ = ವಿಷ್ಣುವಿನ ವಿಷಯದಲ್ಲಿ, 'ಅರ' 'ಣ್ಯ' ವೆಂಬ ಸಮುದ್ರಾಶ್ರಯಲೋಕವತ್ವವೆಂಬ ಲಿಂಗವೂ ಸಹ, ದೃಷ್ಟಮ್ = ಶ್ರುತವಾಗಿದೆ.

ಎಲ್ಲಾ ಲಿಂಗಗಳು ವಿಷ್ಣುತ್ವ ನಿಶ್ಚಾಯಕಗಳು

ब्रह्मसूत्रभाष्यम् — 'अरश्च वै ण्यश्च सुधासमुद्रौ तत्रैव सर्वाभिमतप्रदौ द्वौ ।' इत्यादिना तस्यैव तल्लक्षणत्वेनोच्यते ।। १५ ।।

ಅನುವಾದ - 'ಅರ' ಮತ್ತು 'ಣ್ಯ' ಎಂಬ ಎರಡು ಅಮೃತಸಮುದ್ರಗಳು ವಿಷ್ಣುಲೋಕದಲ್ಲೇ ಇರುತ್ತವೆ. ಇವೆರಡೂ ಸಕಲ ಅಭೀಷ್ಟಪ್ರದಗಳಾಗಿವೆ. ಇವೇ ಮೊದಲಾದ ಪ್ರಮಾಣಗಳಿಂದ, ಸುಧಾಸಮುದ್ರವುಳ್ಳ ಲೋಕವು ವಿಷ್ಣುವಿನ ಲಕ್ಷಣವೇ ಆಗಿದೆ ಎಂದು ಸ್ಪಷ್ಟವಾಗುತ್ತದೆ.

ಪ್ರತಿಪದಾರ್ಥ -- ಹೃತ್‌ಪದ್ಮಸ್ಥನಲ್ಲಿ 'ಅರ' 'ಣ್ಯ' ಎಂಬ ಸಮುದ್ರಕ್ಕೆ ಆಶ್ರಯವಾಗಿರುವ ಲೋಕವತ್ವ ಎಂಬುದು ಲಿಂಗವಾಗಿರಬಹುದು. ಇದರಿಂದ ವಿಷ್ಣುವೇ ಹೃತ್‌ಪದ್ಮಸ್ಥನೆಂದು ನಿರ್ಣಯಿಸಲು ಹೇಗೆ ಸಾಧ್ಯ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ -

ಅರಃ = ಅರವೆಂದು, ಚ ವೈ = ಮತ್ತೊಂದು ಪ್ರಸಿದ್ಧವಾದ, ಣ್ಯಶ್ಚ =ಣ್ಯ ಎಂದೂ, ಸುಧಾಸಮುದ್ರೌ = ಎರಡು ಸುಧಾಸಮುದ್ರಗಳೂ, ತತ್ರೈವ = ಆ ವಿಷ್ಣುವಿನ ಲೋಕದಲ್ಲೇ ಇವೆ, ದ್ವೌ = ಆ ಎರಡು ಸಮುದ್ರಗಳೂ ಸಹ, ಸರ್ವಾಭಿಮತಪ್ರದೌ = ಸಕಲ ಅಭೀಷ್ಟಗಳನ್ನು ನೀಡುವವುಗಳಾಗಿ ಇರುತ್ತವೆ, ಇತ್ಯಾದಿನಾ = ಇವೇ ಮೊದಲಾದ ಪ್ರಮಾಣಗಳಿಂದ, ತಸ್ಯೈವ = ಆ ವಿಷ್ಣುವಿಗೇ, ತತ್ = ಆ ಅರಣ್ಯಾಶ್ರಯಲೋಕವತ್ವವು, ಲಕ್ಷಣತ್ವೇನ = ಲಿಂಗವೆಂಬುದಾಗಿ, ಉಚ್ಯತೇ = ಹೇಳಲ್ಪಡುತ್ತದೆ.

ಸತ್ತರ್ಕದೀಪಾವಳಿ

'ಇಮಾಃ ಸರ್ವಾಃ' ಎಂಬ ಶ್ರುತಿಯಿಂದ ವಿಷ್ಣುವೇ ಪ್ರತಿಪಾದ್ಯನು

सत्तर्कदीपावलिः – ।। गतिशब्दाभ्यां तथाहि दृष्टं लिङ्गञ्च ।।

गतीत्यादेरयमर्थः । द्यावापृथिव्याधारं प्रकृत्य 'इमाः सर्वाः प्रजाः अहरहर्गच्छन्त्य एतं ब्रह्मलोकं न विन्दन्ति' इति श्रूयमाणत्वादप्यसौ विष्णुरेव, नहि दहर आकाशः ।

ಗತಿಸೂತ್ರದ ಅರ್ಥ ಹೀಗಿದೆ -

ದ್ಯಾವಾಪೃಥಿವಿಗಳಿಗೆ ಆಧಾರವಾದದ್ದರ ಬಗ್ಗೆ ಪ್ರಕೃತವಾದಾಗ 'ಇಮಾಃ ಸರ್ವಾಃ ಪ್ರಜಾಃ ಅಹರಹರ್ಗಚ್ಛಂತ್ಯಃ ಏತಂ ಬ್ರಹ್ಮಲೋಕಂ ನ ವಿಂದಂತಿ' ಎಂದು ಶ್ರುತವಾಗಿದೆ. ಪ್ರತಿನಿತ್ಯ ಸುಪ್ತರಾದ ಪ್ರಜೆಗಳು ಯಾವ ಬ್ರಹ್ಮಲೋಕವನ್ನು ಕುರಿತು ತೆರಳುತ್ತಾರೋ ಅದನ್ನು ತಿಳಿಯಲು ಸಾಧ್ಯವಿಲ್ಲ ಎಂದು ಹೇಳಿರುವ ಈ ಶ್ರುತಿಯಲ್ಲಿ ವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆ ಹೊರತು ದಹರಾಕಾಶವಲ್ಲ.

ಸುಪ್ತಪ್ರಾಪ್ಯತ್ವವು ವಿಷ್ಣುವಿನದ್ದೇ ಅಸಾಧಾರಣಲಿಂಗ

सत्तर्कदीपावलिः – विष्णुरेव हि सुसगम्यः प्रसिद्धो 'यत्र तत्पुरुषः स्वपिति नाम सता सोम्य तदा सम्पन्नो भवति' इत्यादिश्रुतौ ब्रह्मलोकशब्दोऽत्र दहराकाशविषयत्वे 'अरञ्च ह वै प्यञ्चार्णवौ ब्रह्मलोके' इति लिङ्गदर्शनं विरुद्ध्यते ।

ಏಕೆಂದರೆ ಸುಪ್ತರಾದ ಪ್ರಜೆಗಳಿಂದ ಗಮ್ಯನಾದವನು ವಿಷ್ಣುವೇ ಆಗಿದ್ದಾನೆ ಎಂಬುದು ಪ್ರಸಿದ್ಧವಾಗಿದೆ - 'ಯತ್ರ ತತ್ಪುರುಷಃ ಸ್ವಪಿತಿ ಸತಾ ಸೋಮ್ಯ ತದಾ ಸಂಪನ್ನೋ ಭವತಿ' ಇತ್ಯಾದಿಯಾಗಿ ಸುಪ್ತನಾದ ಪ್ರಜೆಯು ಬ್ರಹ್ಮನನ್ನು ಕುರಿತು ತೆರಳುತ್ತಾನೆಂದು ಶ್ರುತವಾಗಿದೆ.

'ಬ್ರಹ್ಮಲೋಕಂ ನ ವಿಂದಂತಿ' ಎಂಬಲ್ಲಿರುವ ಬ್ರಹ್ಮಲೋಕಶಬ್ದವು ದಹರಾಕಾಶವನ್ನು ಪ್ರತಿಪಾದನೆ ಮಾಡುವುದಾದರೆ, 'ಅರಶ್ಚ ಹ ವೈ ಣ್ಯಶ್ಚಾರ್ಣವೌ ಬ್ರಹ್ಮಲೋಕೇ' ಎಂಬ 'ಅರ' ಮತ್ತು 'ಣ್ಯ' ಎಂಬ ಸುಧಾ ಸಮುದ್ರಾಶ್ರಯತ್ವವು ವಿರುದ್ಧವಾಗುತ್ತದೆ.

ಅರಣ್ಯಾಶ್ರಯತ್ವವು ವಿಷ್ಣುವಿನದ್ದೇ ಲಿಂಗವೆಂದು ಪುರುಷೋತ್ತಮ ತಂತ್ರ

सत्तर्कदीपावलिः – अरण्यशब्दाभिधेयसुधासमुद्रयोर्विष्णुलोकस्थत्वेन प्रसिद्धत्वादागमेषु । तथाहि उक्तं पुरुषोत्तमतन्त्रे – 'अरश्च वै ण्यश्च सुधासमुद्रौ तत्रैव सर्वाभिमतप्रदौ द्वौ' इति ।।

ಏಕೆಂದರೆ 'ಅರ' ಮತ್ತು 'ಣ್ಯ' ಶಬ್ದಗಳಿಂದ ಪ್ರತಿಪಾದ್ಯವಾದ ಸುಧಾಸಮುದ್ರಗಳು ವಿಷ್ಣುಲೋಕದಲ್ಲಿ ಇವೆ ಎಂದು ಆಗಮಗಳಲ್ಲಿ ಪ್ರಸಿದ್ಧವಾಗಿವೆ. ಇದನ್ನೇ ಪುರುಷೋತ್ತಮತಂತ್ರದಲ್ಲಿ ಹೀಗೆ ಹೇಳಲಾಗಿದೆ. 'ಅರಶ್ಚ ವೈ ಣ್ಯಶ್ಚ ಸುಧಾಸಮುದ್ರೌ ತತ್ರೈವ ಸರ್ವಾಭಿಮತಪ್ರದೌ ದ್ವೌ' ಎಂದು.

ತತ್ತ್ವಪ್ರದೀಪ

ಸುಪ್ತಪ್ರಾಪ್ಯತ್ವವು ವಿಷ್ಣುವಿನ ಅಸಾಧಾರಣಲಿಂಗ

तत्वप्रदीपः – गतिशब्दाभ्यां तथा हि दृष्टं लिङ्गं च ।। ''इमाः सर्वाः प्रजा अहरहर्गच्छन्त्य एतं ब्रह्मलोकं न विन्दन्ति'' न विजानन्तीत्यर्थः ।

अज्ञत्वादेव सुप्तौ तु नित्यं यान्तोऽपि माधवम् ।
नैव पश्यन्त्यसौ विष्णुर्हृदयं नाम हृद्गतेः ।। इति पर्यङ्कोपासनायाम् ।

''ಇಮಾಃ ಸರ್ವಾಃ ಪ್ರಜಾ ಅಹರಹರ್ಗಚ್ಛಂತ್ಯ ಏತಂ ಬ್ರಹ್ಮಲೋಕಂ ನ ವಿಂದಂತಿ'' ಎಂಬುದಾಗಿ ಛಾಂದೋಗ್ಯೋಪನಿಷತ್ತಿನ ಪೂರ್ಣವಾದ ವಾಕ್ಯ. ''ಈ ಜೀವರು ಪ್ರತಿನಿತ್ಯವು ಬ್ರಹ್ಮಲೋಕಕ್ಕೆ ತೆರಳುತ್ತಾರೆ. ಆದರೂ ಕೂಡ ಅವನನ್ನು ತಿಳಿಯುವುದಿಲ್ಲ'' ಎಂದು ಶ್ರುತಿಯು

ಹೇಳುತ್ತಿದೆ. ವಾಸ್ತವಿಕವಾಗಿ 'ನ ವಿಂದಂತಿ' ಎಂಬ ಪದಕ್ಕೆ 'ಹೊಂದುವುದಿಲ್ಲ' ಎಂದರ್ಥ. ಆದರೆ 'ನ ವಿಜಾನಂತಿ' = 'ತಿಳಿಯುವುದಿಲ್ಲ' ಎಂಬರ್ಥವನ್ನು ಪ್ರಕೃತ ವಿವಕ್ಷಿಸಬೇಕು.

ಅಜ್ಞತ್ವಾದೇವ ಸುಪ್ತೌ ತು ನಿತ್ಯಂ ಯಾಂತೋऽಪಿ ಮಾಧವಮ್ ।
ನೈವ ಪಶ್ಯಂತ್ಯಸೌ ವಿಷ್ಣುರ್ಹೃದಯಂ ನಾಮ ಹೃದ್ಗತೇಃ ॥

ಸುಷುಪ್ತಾವಸ್ಥೆಯಲ್ಲಿ ಜೀವರು ಮಾಧವನನ್ನು ತಲುಪುತ್ತಾರೆ. ಆದರೂ ಕೂಡ ಅವನನ್ನು ತಿಳಿಯುವುದಿಲ್ಲ. ಹೃದಯದಲ್ಲಿ ನೆಲೆಸಿರುವ ಕಾರಣ ವಿಷ್ಣು ಹೃದಯ ಎಂಬುದಾಗಿ ಕರೆಸಿಕೊಳ್ಳುತ್ತಾನೆ.

ಹೀಗೆ ಪರ್ಯಂಕೋಪಾಸನೆಯಲ್ಲಿ ಹೇಳಿದೆ.

ವಿವರಣೆ - ಪ್ರಕೃತ ಸೂತ್ರದಲ್ಲಿ ಹೃದಯಾಕಾಶದಲ್ಲಿ ನೆಲೆಸಿರುವವನು ಪರಮಾತ್ಮನೇ ಆಗಿದ್ದಾನೆಂಬುದುಅನೇಕಕಾರಣಗಳಿಂದಹೇಳುತ್ತಿದ್ದಾರೆ.ಸುಪ್ತಪ್ರಾಪ್ಯತ್ವವುಪರಮಾತ್ಮನಲ್ಲಿರುವ ಅಸಾಧಾರಣಧರ್ಮವಾಗಿದೆ. ಸುಷುಪ್ತವಸ್ಥೆಯಲ್ಲಿ ಪ್ರತಿಯೊಬ್ಬರೂ ಕೂಡ ಪರಮಾತ್ಮನ ಬಳಿ ತೆರಳುತ್ತಾರೆ. ಅವನಿಗೆ ಪ್ರಾಜ್ಞ ಎಂದು ಹೆಸರು. ಅವನು ಹೃದಯಕಮಲದಲ್ಲಿ ನೆಲೆಸಿದ್ದಾನೆ. ಆದ್ದರಿಂದಲೇ ಹೃದಯಕ್ಕೆ ಬ್ರಹ್ಮಪುರ ಎಂಬ ಹೆಸರು ಬಂದಿದೆ. ಆದ್ದರಿಂದ ಸುಷುಪ್ತವಸ್ಥೆಯಲ್ಲಿ ಹೃದಯಾಕಾಶದಲ್ಲಿರುವ ಬ್ರಹ್ಮನನ್ನು ಕುರಿತು ತೆರಳಿದರೂ, ಹೀಗೆ ಸುಪ್ತಪ್ರಾಪ್ಯತ್ವವು ಹೇಳಿರುವುದರಿಂದ ಹೃದಯಲ್ಲಿರುವವನು ಮಹಾವಿಷ್ಣುವೇ ಆಗುತ್ತಾನೆ.

ಅರಣ್ಯಾಶ್ರಯತ್ವವು ವಿಷ್ಣುವಿನ ಅಸಾಧಾರಣಲಿಂಗ

तत्वप्रदीपः – तद्गतिर्दहरस्थं प्रति गतिः । सुप्तगम्यत्वलिङ्गाद् ब्रह्मशब्दाच्च दहरस्थो विष्णुरेव । अरण्यनामार्णवद्वयाधिकरणलोकवत्त्वं लिङ्गं च तथा दृष्टं हि, ब्रह्मशब्देन सहैव दृष्टमित्यर्थः ।

''परस्य ब्रह्मणो लोके श्वेतद्वीपाभिधे परे ।
अरो ण्यश्चार्णवौ दिव्यौ चिदानन्दरसात्मकौ''

इति च पर्यङ्कोपासनायाम् ॥

'ತದ್ಗತಿ' ಎಂಬ ಪದಕ್ಕೆ ದಹರಾಕಾಶದಲ್ಲಿ ನೆಲೆಸಿರುವವನ್ನು ಕುರಿತು ಹೋಗುವಿಕೆ ಎಂದರ್ಥ. ಸುಪ್ತಗಮ್ಯತ್ವಲಿಂಗವಿರುವುದಿಂದ ಹಾಗೂ ಬ್ರಹ್ಮಶಬ್ದವಿರುವುದರಿಂದ ದಹರಾಕಾಶದಲ್ಲಿರುವನು ಮಹಾವಿಷ್ಣುವೇ ಆಗುತ್ತಾನೆ.

'ಅರ' 'ಣ್ಯ' ಎಂಬ ಎರಡು ಸುಧಾಸಮುದ್ರಗಳಿಗೆ ಅಧಿಕರಣವಾದ ಲೋಕವುಳ್ಳ ಲಿಂಗವೂ ಕೂಡ ಬ್ರಹ್ಮಶಬ್ದದ ಜೊತೆ ಹೇಳಲ್ಪಟ್ಟಿದೆ. ಇದೂ ಕೂಡ ವಿಷ್ಣುವಿನ ಅಸಾಧಾರಣಲಿಂಗವಾಗಿದೆ.

'ಪರಸ್ಯ ಬ್ರಹ್ಮಣೋ ಲೋಕೇ ಶ್ವೇತದ್ವೀಪಾಭಧೇ ಪರೇ ।
ಅರೋ ಣ್ಯಶ್ಚಾರ್ಣವೌ ದಿವ್ಯೌ ಚಿದಾನಂದರಸಾತ್ಮಕೌ''

'ಉತ್ತಮವಾದ ಶ್ವೇತದ್ವೀಪವೆಂಬ ಬ್ರಹ್ಮನ ಲೋಕದಲ್ಲಿ ಜ್ಞಾನಾನಂದಾತ್ಮಕವಾದ 'ಅರ' ಮತ್ತು 'ಣ್ಯ' ಎಂಬರೆಡು ಸುಧಾಸಮುದ್ರಗಳಿವೆ ಎಂಬುದಾಗಿ ಪರ್ಯಂಕೋಪಾಸನೆಯಲ್ಲಿ ಹೇಳಿದೆ.

ವಿವರಣೆ - ಬ್ರಹ್ಮಪದವಿರುವುದು ಮತ್ತೊಂದು ಲಿಂಗ. ಹೃದಯಕಮಲದಲ್ಲಿರುವವನೇ ಬ್ರಹ್ಮಪದದಿಂದ ವಾಚ್ಯನಾಗಿದ್ದಾನೆಂದು ಶ್ರುತಿ ಹೇಳಿದೆ. ಬ್ರಹ್ಮನೇ ಸರ್ವಾಶ್ರಯನಾದ್ದರಿಂದ ಲೋಕ ಎಂದು ಕರೆಸಿಕೊಳ್ಳುತ್ತಾನೆ. ಆದ್ದರಿಂದ ಬ್ರಹ್ಮಲೋಕವೆಂಬ ಪದವು ಹೃದಯಕಮಲದಲ್ಲಿರುವವನಿಗೆ ಅನ್ವಯವನ್ನು ಹೊಂದಿದೆ.

ಅರಣ್ಯಾಶ್ರಯತ್ವವು ಮತ್ತೊಂದು ಲಿಂಗ. 'ಅರ' ಮತ್ತು 'ಣ್ಯ' ಎಂಬೆರಡು ಅಮೃತಸಮುದ್ರಗಳು. ಶ್ವೇತದ್ವೀಪವೆಂಬ ಬ್ರಹ್ಮಲೋಕದಲ್ಲಿ ನೆಲೆಸಿವೆ. ಆ ಲೋಕದಲ್ಲಿ ಯಾರು ನೆಲೆಸಿದ್ದಾನೋ, ಅವನೇ ಹೃದಯಕಮಲದಲ್ಲಿ ನೆಲೆಸಿದ್ದಾನೆಂದು ಶ್ರುತಿಯು ಹೇಳುತ್ತಿದೆ.

ಸೂತ್ರದಲ್ಲಿ 'ತತ್' ಎಂಬ ಶಬ್ದದ ಅಭಿಪ್ರಾಯ ಹೀಗಿದೆ - ಗತಿ ಹಾಗೂ ಬ್ರಹ್ಮಶಬ್ದಗಳು ಹೇಗೆ ವಿಷ್ಣುತ್ವನಿಶ್ಚಾಯಕವೋ, ಅದರಂತೆ ಅರಣ್ಯಾಶ್ರಯತ್ವವೆಂಬ ಲಿಂಗವೂ ಕೂಡ ವಿಷ್ಣುತ್ವನಿಶ್ಚಾಯಕವಾಗಿದೆ ಎಂದು. ಸೂತ್ರದಲ್ಲಿರುವ 'ಹಿ' ಎಂಬ ಶಬ್ದವು ಈ ಲೋಕವು ವಿಷ್ಣುವಿನದ್ದೇ ಎಂದು ಪ್ರಸಿದ್ಧವಾಗಿದೆ ಎಂಬಭಿಪ್ರಾಯದಲ್ಲಿ ಉಕ್ತವಾಗಿದೆ.

ತತ್ತ್ವಪ್ರಕಾಶಿಕಾ

ದಹರಸ್ಥನು ವಿಷ್ಣುವೆನ್ನಲು ಮತ್ತೊಂದು ಯುಕ್ತಿ

तत्वप्रकाशिका – ।। गतिशब्दाभ्यां तथाहि दृष्टं लिङ्गञ्च ।।

युक्त्यन्तरेण हृत्पद्मस्थत्वं विष्णोः प्रतिपादयत्सूत्रमुपन्यस्य व्याचष्टे – गतीति ।।

ಮತ್ತೊಂದು ಯುಕ್ತಿಯಿಂದ ಹೃತ್ಪದ್ಮಸ್ಥನಾದವನು ವಿಷ್ಣುವೇ ಆಗಿದ್ದಾನೆ ಎಂಬುದನ್ನು ಸಮರ್ಥಿಸುವ ಸೂತ್ರವನ್ನು ಉಪನ್ಯಾಸ ಮಾಡಿ ವ್ಯಾಖ್ಯಾನ ಮಾಡುತ್ತಿದ್ದಾರೆ 'ಗತಿ' ಇತ್ಯಾದಿಯಾಗಿ.

ಶ್ರುತಿಯಲ್ಲಿ ಹೇಳಲ್ಪಟ್ಟ ಅಸಾಧಾರಣಲಿಂಗಗಳು

तत्वप्रकाशिका – अत्र हृत्पद्मस्थस्याहरहर्गच्छन्त्य एतमिति सुप्तप्रजाप्राप्यत्व-व्यपदेशात्, हृत्पद्मस्य ब्रह्मलोकत्वोक्त्या तदन्तर्गते ब्रह्मशब्दश्रवणाच्च विष्णुरेवायमित्यर्थः ।

ಈ ಶ್ರುತಿಯಲ್ಲಿ ಹೃತ್ಪದ್ಮದಲ್ಲಿ ಇರುವವನಿಗೆ, ಪ್ರತಿನಿತ್ಯವೂ ಸುಪ್ತರಾದ ಪ್ರಜೆಗಳಿಂದ ಪ್ರಾಪ್ಯತ್ವವನ್ನು ಹೇಳಲಾಗಿದೆ. ಹೀಗೆ 'ಸುಪ್ತಪ್ರಜಾಪ್ರಾಪ್ಯತ್ವ' ಎಂಬ ಲಿಂಗದ ಬಲದಿಂದ ಮತ್ತು ಹೃತ್ಪದ್ಮವನ್ನು ಬ್ರಹ್ಮಲೋಕವೆಂದು ಕರೆದದ್ದರಿಂದ ಬ್ರಹ್ಮಲೋಕದಲ್ಲಿರುವವನು, ವಿಷ್ಣುವಾದ್ದರಿಂದ ಹೃತ್ಪದ್ಮದಲ್ಲಿರುವವನೂ ಕೂಡ ವಿಷ್ಣುವೇ ಆಗುತ್ತಾನೆ. ಇಲ್ಲಿ ಬ್ರಹ್ಮಶಬ್ದವೂ ಸಹ ಶ್ರುತವಾಗಿದೆ.

ಲೋಕಪದದಿಂದ ವಿಷ್ಣುವೇ ಪ್ರತಿಪಾದ್ಯ

तत्वप्रकाशिका – ब्रह्मैव सर्वाश्रयत्वादिना लोकपदोक्तं वा ।

ಅಥವಾ 'ಲೋಕ' ಶಬ್ದಕ್ಕೆ ಆಶ್ರಯ ಎಂದರ್ಥ, ಬ್ರಹ್ಮನು ಸರ್ವಕ್ಕೂ ಆಶ್ರಯನಾದ್ದರಿಂದ, ಲೋಕಪದದಿಂದ ಅವನೇ ಪ್ರತಿಪಾದ್ಯನಾಗುತ್ತಾನೆ.

ಸುಪ್ತಪ್ರಾಪ್ಯತ್ವವು ಹೇಗೆ ವಿಷ್ಣುತ್ವ ನಿಶ್ಚಾಯಕ ?

तत्वप्रकाशिका – सुप्तप्राप्यत्वं कुतो विष्णुत्वनिश्चायकम् ? इत्यत आह – सतेति ।।

ಸುಪ್ತಪ್ರಜಾಪ್ರಾಪ್ಯತ್ವವು ಇದ್ದ ಮಾತ್ರದಿಂದ ವಿಷ್ಣುವೇ ಹೃತ್‌ಪದ್ಮಸ್ಥನಾಗಿದ್ದಾನೆಂದು ಹೇಗೆ ನಿಶ್ಚಯಿಸುತ್ತೀರಿ? ಎಂಬ ಪ್ರಶ್ನೆಗೆ 'ಸತಾ' ಎಂಬುದರಿಂದ ಉತ್ತರಿಸಿದ್ದಾರೆ.

ಬ್ರಹ್ಮಶಬ್ದವು ವಿಷ್ಣ್ವೇಕಪರ

तत्वप्रकाशिका – सम्पन्नः सङ्गतः । ब्रह्मशब्दस्तु विष्ण्वेकपर इति प्रागेवोक्तम्।

'ಸಂಪನ್ನಃ' ಎಂದರೆ ಸಂಗತನೆಂದರ್ಥ, ಬ್ರಹ್ಮಶಬ್ದವು ಕೇವಲ ವಿಷ್ಣುವನ್ನೇ ಪ್ರತಿಪಾದಿಸುತ್ತದೆ ಎಂದು ಹಿಂದೆಯೇ ಸಮರ್ಥಿಸಿದ್ದಾಗಿದೆ.

'ಅರ' ಮತ್ತು 'ಣ್ಯ' ಎಂಬೆರಡು ಸುಧಾಸಮುದ್ರಗಳು

तत्वप्रकाशिका – किञ्च हृत्पद्मस्थस्य अरण्याख्यसुधासमुद्राश्रयलोकवत्त्व-लिङ्गश्रवणाच्च तदन्तर्गतो विष्णुरिति सूत्रशेषं व्याचष्टे – अरश्चेति ।।

ಮತ್ತು ಹೃತ್ಪದ್ಮಸ್ಥನಿಗೆ 'ಅರ' ಮತ್ತು 'ಣ್ಯ' ಎಂಬೆರಡು ಸುಧಾಸಮುದ್ರಗಳಿಗೆ ಆಶ್ರಯವಾದ ಲೋಕವತ್ವವೆಂಬ ಲಿಂಗವನ್ನು ಹೇಳಿದ್ದರಿಂದ ಹೃತ್ಪದ್ಮಾಂತರ್ಗತನಾದವನು ವಿಷ್ಣುವೇ ಆಗುತ್ತಾನೆ. ಎಂದರೆ 'ಅರ' ಮತ್ತು 'ಣ್ಯ' ಎಂಬೆರಡು ಸುಧಾಸಮುದ್ರಗಳು ವಿಷ್ಣು ಲೋಕದಲ್ಲಿ ಮಾತ್ರವಿರುವುದರಿಂದ ಅಂತಹ ಲಿಂಗವನ್ನು ಹೃತ್ಪದ್ಮದಲ್ಲಿ ಹೇಳಿರುವುದರಿಂದ ವಿಷ್ಣುವೇ ಹೃತ್ಪದ್ಮದಲ್ಲಿರಬೇಕೆಂದು ನಿಶ್ಚಯವಾಗುತ್ತದೆ. ಈ ಅರ್ಥವನ್ನು ಪ್ರತಿಪಾದನೆ ಮಾಡುವಂತಹ ಸೂತ್ರಶೇಷವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ 'ಅರಶ್ಚ' ಇತ್ಯಾದಿಯಾಗಿ.

ಅರಣ್ಯಾಶ್ರಯಲೋಕವತ್ವವು ಹೇಗೆ ವಿಷ್ಣುತ್ವ ನಿಶ್ಚಾಯಕ ?

तत्वप्रकाशिका – हृत्पद्मस्थस्य अरण्याश्रयलोकवत्त्वलिङ्गश्रवणेऽपि कुतोऽयं विष्णुः? इति चेत् ।

ಶ್ರುತಿಯಲ್ಲಿ ಹೃತ್ಪದ್ಮಸ್ಥನಿಗೆ 'ಅರಣ್ಯಾಶ್ರಯಲೋಕವತ್ವ' ಎಂಬ ಲಿಂಗವು ಶ್ರುತವಾಗಿದ್ದರೂ ವಿಷ್ಣುವೇ ಹೃತ್ಪದ್ಮಸ್ಥನಾಗಿದ್ದಾನೆಂದು ನಿಶ್ಚಯಿಸಲು ಹೇಗೆ ಸಾಧ್ಯ? ಎಂದರೆ,

'ಹಿ' ಶಬ್ದದ ವ್ಯಾಖ್ಯಾನ

तत्वप्रकाशिका – तस्य च विष्णुलोकैकलिङ्गत्वादिति हिशब्दाभिप्रायमाह – अरश्चेति ।।

ಈ ಅರಣ್ಯಾಶ್ರಯಲೋಕವತ್ವವು ಕೇವಲ ವಿಷ್ಣುಲೋಕದ ಲಿಂಗವೇ ಆಗಿದೆ ಎಂಬುದು 'ಹಿ' ಶಬ್ದದ ಅಭಿಪ್ರಾಯವೆಂದು ತೋರಿಸುತ್ತಿದ್ದಾರೆ 'ಅರಶ್ಚ' ಎಂಬುದರಿಂದ.

ಅರಣ್ಯಾಶ್ರಯತ್ವವು ಸತ್ಯಲೋಕದ ಲಿಂಗವಲ್ಲ

तत्वप्रकाशिका – अनेन अरण्याश्रयत्वं सत्यलोकलिङ्गमित्यप्यपास्तम् । क्षीराब्धिमध्ये इति तत्प्रसङ्गात् ।

ಹೀಗೆ ಹೇಳಿದ್ದರಿಂದ; ಕೆಲವರು ಅರಣ್ಯಾಶ್ರಯತ್ವವು ಸತ್ಯಲೋಕದ ಲಿಂಗವೆಂದು ಏನು ವಾದಿಸುತ್ತಾರೋ, ಅದನ್ನು ನಿರಾಕರಿಸಿದಂತಾಯಿತು. ಏಕೆಂದರೆ 'ಕ್ಷೀರಾಬ್ಧಿಮಧ್ಯೇ' 'ಕ್ಷೀರಸಮುದ್ರ ಮಧ್ಯದಲ್ಲಿ' ಎಂದು ವಿಷ್ಣುಲೋಕದ ಲಿಂಗದಿಂದಲೇ ಇದು ಪ್ರಸಕ್ತವಾಗಿದೆ.

'ಅಹರಹರ್ಗಚ್ಛಂತ್ಯಃ' ಎಂಬ ವಾಕ್ಯವು ಹೃತ್ಪದ್ಮಸ್ಥ ವಿಷಯಕ

तत्वप्रकाशिका – अरण्याश्रयलोकवत्त्वं हृत्पद्मस्थस्य नोच्यते ? इति शङ्कापनोदाय 'तथा' इत्युक्तम् । 'यथाऽहरहर्गच्छन्त्य एतं ब्रह्मलोकं न विन्दन्ति' इत्येतत् हृत्पद्मस्थविषयं तथैदपि लिङ्गं तन्निष्ठम् । ब्रह्मलोक-शब्दश्रवणादेवेति भावः ।

ಅರಣ್ಯಾಶ್ರಯಲೋಕವತ್ತ್ವವು ಹೃತ್ಪದ್ಮಸ್ಥನಲ್ಲಿ ಹೇಳಲ್ಪಟ್ಟಿಲ್ಲವೆಂಬ ಆಶಂಕೆಯನ್ನು ಪರಿಹರಿಸುವುದಕ್ಕಾಗಿ 'ತಥಾ' ಎಂದು ಹೇಳಿದ್ದಾರೆ. ಯಾವ ರೀತಿಯಾಗಿ 'ಅಹರಹರ್ಗಚ್ಛಂತ್ಯಃ

ಏತಂ ಬ್ರಹ್ಮಲೋಕಂ ನ ವಿಂದಂತಿ' ಎಂಬ ವಾಕ್ಯವು ಹೃತ್ಪದ್ಮಸ್ಥವಿಷಯಕವಾಗಿದೆಯೋ ಅದರಂತೆ ಅರಣ್ಯಾಶ್ರಯತ್ವವೆಂಬ ಲಿಂಗವೂ ಕೂಡ ಹೃತ್ಪದ್ಮಸ್ಥವಿಷಯಕವೇ ಆಗಿದೆ. ಎರಡೂ ಶ್ರುತಿಗಳಲ್ಲಿ ಬ್ರಹ್ಮಲೋಕಶಬ್ದವು ಶ್ರುತವಾಗಿರುವುದೇ ಇದಕ್ಕೆ ಕಾರಣವೆಂದು ತಿಳಿಯಬೇಕು.

ಬ್ರಹ್ಮಲೋಕಪದವು ವಿಷ್ಣುಲೋಕ ಪರ

तत्वप्रकाशिका – अथवा 'ब्रह्मलोकम्' इति हृत्पद्मस्य विष्णु-लोकत्वोक्तेस्तदन्तर्गतो विष्णुरित्युक्तम् । ब्रह्मलोकपदं कुतो विष्णुलोकवाचि? इत्यत आह – अरश्चेति ।। ब्रह्मलोकपदस्य विष्णुलोके अरश्चेति प्रयोगादत्रापि तत्परत्वमेव ।

ಅಥವಾ 'ಬ್ರಹ್ಮಲೋಕಮ್' ಎಂಬುದಾಗಿ ಹೃತ್ಪದ್ಮವನ್ನು ವಿಷ್ಣುಲೋಕವೆಂದು ಹೇಳಿದ್ದರಿಂದ ಬ್ರಹ್ಮಲೋಕದಲ್ಲಿರುವವನು ವಿಷ್ಣುವಾದ್ದರಿಂದ ಹೃತ್ಪದ್ಮದಲ್ಲಿರುವವನೂ ವಿಷ್ಣುವೇ ಆಗುತ್ತಾನೆಂದು ಹೇಳಿದಂತಾಯಿತು. ಬ್ರಹ್ಮಲೋಕಪದವು ವಿಷ್ಣುಲೋಕಕ್ಕೆ ವಾಚಕವಾಗುತ್ತದೆ ಎಂದು ಹೇಗೆ ನಿಶ್ಚಯಿಸುವುದು? ಎಂಬ ಪ್ರಶ್ನೆಗೆ 'ಅರಶ್ಚ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. ಬ್ರಹ್ಮಲೋಕಪದವನ್ನು ವಿಷ್ಣುಲೋಕ ಎಂಬ ಅರ್ಥದಲ್ಲಿ ಪ್ರಯೋಗ ಮಾಡಿರುವುದರಿಂದ ಪ್ರಕೃತ 'ಅಹರಹಃ' ಎಂಬ ಶ್ರುತಿಯಲ್ಲಿಯೂ ಬ್ರಹ್ಮಲೋಕಶಬ್ದಕ್ಕೆ 'ವಿಷ್ಣುಲೋಕ' ಎಂಬ ಅರ್ಥದಲ್ಲಿಯೇ ಪ್ರಯೋಗ ಮಾಡಲ್ಪಟ್ಟಿದೆ ಎಂದು ತಿಳಿಯಬೇಕು.

ಅರಣ್ಯಾಶ್ರಯತ್ವಲಿಂಗವು ಭಗವಲ್ಲೋಕಲಿಂಗವಾಗಿದೆ

तत्वप्रकाशिका – तत्रापि तत्कृतः ? अरण्याश्रयत्वलिङ्गादित्यर्थः । तस्य भगवल्लोकलिङ्गत्वं कुत इत्यत आह – अरश्चेति ।।

'ಅರಶ್ಚ' ಎಂಬ ವಾಕ್ಯದಲ್ಲಿ ಬ್ರಹ್ಮಲೋಕಪದವನ್ನು 'ವಿಷ್ಣುಲೋಕ' ಎಂಬ ಅರ್ಥದಲ್ಲಿ ಪ್ರಯೋಗಿಸಿದ್ದಾರೆ ಎಂಬುದನ್ನಾದರೂ ಹೇಗೆ ನಿಶ್ಚಯಿಸುವುದು? ಎಂದರೆ ಬ್ರಹ್ಮಲೋಕಕ್ಕೆ ಅರಣ್ಯಾಶ್ರಯಹೇತುಲಿಂಗವನ್ನು ಹೇಳಿದ್ದರಿಂದ ಎಂದರ್ಥ. ಅರಣ್ಯ ಹೇತುಲಿಂಗವಾದರೂ ವಿಷ್ಣುಲೋಕಕ್ಕೆ ಲಿಂಗವೆಂದು ಹೇಗೆ ನಿಶ್ಚಯಿಸುವುದು? ಎಂಬ ಪ್ರಶ್ನೆಗೆ 'ಅರಶ್ಚ ವೈ' ಎಂಬುದರಿಂದ ಉತ್ತರಿಸಿದ್ದಾರೆ.

ಭಾವದೀಪ

'ಯುಕ್ತ್ಯಂತರೇಣ' ಎಂಬಲ್ಲಿರುವ ಏಕವಚನವು ಸಮುದಾಯಾಭಿಪ್ರಾಯದಲ್ಲಿ

भावदीपः – गतिशब्दाभ्यां तथा हि दृष्टं लिङ्गं च ।।

युक्त्यन्तरेणेति ।। जातावेकवचनम् । भाष्यं व्याकुर्वन् सूत्रार्थमाह – अत्रेति ।।

ಮತ್ತೊಂದು ಯುಕ್ತಿಯಿಂದ ಹೃತ್ಪದ್ಮಸ್ಥನು ಭಗವಂತನೇ ಆಗಿದ್ದಾನೆ ಎಂಬುದನ್ನು ಸಮರ್ಥಿಸುವುದಕ್ಕಾಗಿ ಈ ಸೂತ್ರವು ಹೊರಟಿದೆ. ''ಯುಕ್ತ್ಯಂತರೇಣ'' ಎಂಬಲ್ಲಿರುವ ಏಕವಚನವು ಸಮುದಾಯ ಏಕವಚನದಲ್ಲಿದೆ. ಅಂದರೆ ಅನೇಕ ಯುಕ್ತಿಗಳಿಂದ ಸಾಧಿಸಲಾಗಿದೆ ಎಂದು ತಿಳಿಯಬೇಕು. ಭಾಷ್ಯವನ್ನು ವ್ಯಾಖ್ಯಾನ ಮಾಡುತ್ತಾ ಸೂತ್ರಾರ್ಥವನ್ನು ಹೇಳುತ್ತಿದ್ದಾರೆ 'ಅತ್ರ' ಇತ್ಯಾದಿ ಟೀಕೆಯಿಂದ.

'ಗಚ್ಛಂತ್ಯಃ' ಎಂಬ ಸ್ತ್ರೀಲಿಂಗಪ್ರಯೋಗಕ್ಕೆ ಕಾರಣ

भावदीपः – ''इमाः प्रजा अहरहर्गच्छन्त्य'' इति पूर्वोक्तप्रजापेक्षया ''गच्छन्त्यः'' इति स्त्रीलिङ्गमित्युपेत्योक्तम् ।। सुप्तप्रजेति ।।

'ಇಮಾಃ ಪ್ರಜಾ ಅಹರಹರ್ಗಚ್ಛಂತ್ಯಃ' ಎಂದು 'ಇಮಾಃ ಪ್ರಜಾಃ' ಎಂಬಲ್ಲಿ ಸ್ತ್ರೀಲಿಂಗ ಪ್ರಯೋಗವಿದೆ. ಇದಕ್ಕೆ ಅನುಸಾರಿಯಾಗಿ 'ಗಚ್ಛಂತ್ಯಃ' ಎಂಬುದಾಗಿ ಸ್ತ್ರೀಲಿಂಗವನ್ನೇ ಪ್ರಯೋಗಿಸಲಾಗಿದೆ.

ಬ್ರಹ್ಮಲೋಕಪದದಿಂದ ಯಾರು ಪ್ರತಿಪಾದ್ಯರು ?

भावदीपः – परं ब्रह्मैव लोकनात् । ब्रह्मलोक इति प्रोक्तस्तस्य लोकोऽपि कथ्यत इति तद्भाष्योक्तेः षष्ठ्यर्थत्वमुपेत्यार्थमाह – हृत्पद्मस्येति।। अयं सर्वाधारतया हृत्पद्मस्थ इत्यर्थः ।

ಪರಬ್ರಹ್ಮನೇ 'ಬ್ರಹ್ಮಲೋಕ' ಎನಿಸುತ್ತಾನೆ. ಏಕೆಂದರೆ 'ಬ್ರಹ್ಮಲೋಕ ಇತಿ ಪ್ರೋಕ್ತಸ್ತಸ್ಯ ಲೋಕೋಽಪಿ ಕಥ್ಯತೇ' 'ಬ್ರಹ್ಮಲೋಕ ಶಬ್ದದಿಂದ ಬ್ರಹ್ಮ ಹಾಗೂ ಬ್ರಹ್ಮಲೋಕ ಇಬ್ಬರೂ ಕೂಡ ಪ್ರತಿಪಾದ್ಯ-

ರಾಗುತ್ತಾರೆಂದು ಛಾಂದೋಗ್ಯೋಪನಿಷತ್ತಿನ ಭಾಷ್ಯದಲ್ಲಿ ಹೇಳಲಾಗಿದೆ. 'ಬ್ರಹ್ಮಣಃ ಲೋಕಃ' ಎಂಬ ಷಷ್ಠ್ಯರ್ಥವನ್ನು ಅಂಗೀಕರಿಸಿ ಅರ್ಥವನ್ನು ಹೇಳುತ್ತಿದ್ದಾರೆ 'ಹೃತ್ಪದ್ಮಸ್ಯ' ಎಂಬುದಾಗಿ. ಹೃತ್ಪದ್ಮದಲ್ಲಿರುವವನು ಸಕಲಕ್ಕೂ ಆಧಾರನಾಗಿದ್ದಾನೆ ಎಂದರ್ಥ.

ಬ್ರಹ್ಮಲೋಕ ಶಬ್ದಕ್ಕೆ ಮತ್ತೊಂದು ವ್ಯುತ್ಪತ್ತಿ

भावदीपः – अर्थान्तरं चाऽह – ब्रह्म चासौ लोकश्चेति ।। व्युत्पत्त्येति भावः । अस्मिन् पक्षे साक्षादेव हृत्पद्मस्थस्य गतिशब्दौ । पूर्वव्याख्याने त्वार्थिकौ । तद्व्याख्यानं तूत्तरलिङ्गोक्तिसौकर्यायेति भावः ।

ಮತ್ತೊಂದು ಅರ್ಥವನ್ನು ಹೇಳುತ್ತಿದ್ದಾರೆ 'ಬ್ರಹ್ಮ ಚಾಸೌ ಲೋಕಶ್ಚ' ಎಂಬ ವ್ಯುತ್ಪತ್ತಿಯಿಂದ ಎಂದು ತಿಳಿಯಬೇಕು. ಮೊದಲನೆಯ ವ್ಯುತ್ಪತ್ತಿಯಂತೆ ಹೃತ್ಪದ್ಮವು ಬ್ರಹ್ಮನ ಲೋಕವೆನಿಸುತ್ತದೆ ಎಂದು ತಿಳಿಯಬೇಕು. ಎರಡನೆಯ ವ್ಯುತ್ಪತ್ತಿಯಲ್ಲಿ ಬ್ರಹ್ಮನೇ ಲೋಕಸ್ವರೂಪನಾಗಿದ್ದಾನೆಂದು ತಿಳಿಯಬೇಕು.

'ಬ್ರಹ್ಮ ಚಾಸೌ ಲೋಕಶ್ಚ' ಎಂಬ ವ್ಯುತ್ಪತ್ತಿಯನ್ನು ಆಶ್ರಯಿಸಿದಾಗ ನೇರವಾಗಿಯೇ ಹೃತ್ಪದ್ಮಸ್ಥನಲ್ಲಿ ಗತಿ ಮತ್ತು ಶಬ್ದಗಳನ್ನು ಲಿಂಗವನ್ನಾಗಿ ಹೇಳಿದಂತಾಗುತ್ತದೆ. 'ಬ್ರಹ್ಮಣಃ ಲೋಕಃ' ಎಂದು ವ್ಯುತ್ಪತ್ತಿಯನ್ನು ಅನುಸರಿಸಿದಾಗ ಆರ್ಥಿಕವಾದ ಲಿಂಗವನ್ನು ಹೇಳಿದಂತಾಗುತ್ತದೆ. ಇದರ ವ್ಯಾಖ್ಯಾನವು ಮುಂದೆ ಹೇಳುವ ಲಿಂಗಕ್ಕೆ ಸೌಕರ್ಯವಾಗುವುದಕ್ಕಾಗಿ ತಿಳಿಯಬೇಕು.

ಮುಕ್ತನಾದ ಜೀವನು ಐಕ್ಯಹೊಂದಲಾರ

भावदीपः – तादात्म्यं प्राप्त इति भ्रान्तिं निराह – सङ्गत इति ।। ''लिङ्गं च'' इति ''च'' अर्थं वदन् भाष्यं भावार्थोक्तिपूर्वं अवतारयति – किञ्चेति ।।

ಮುಕ್ತನಾದ ಜೀವನು ಬ್ರಹ್ಮನೊಂದಿಗೆ ತಾದಾತ್ಮ್ಯವನ್ನು ಹೊಂದುತ್ತಾನೆ ಎಂಬ ಭ್ರಾಂತಿಯನ್ನು ನಿರಾಕರಣೆ ಮಾಡುವುದಕ್ಕಾಗಿ 'ಸಂಗತಃ' ಎಂದು ಹೇಳಿದ್ದಾರೆ. 'ಲಿಂಗಂಚ' ಎಂಬುದರ ಅರ್ಥವನ್ನು ಹೇಳುತ್ತಾ ಭಾಷ್ಯದ ಅಭಿಪ್ರಾಯವನ್ನು ಹೇಳುವ ಮೂಲಕ ಅವತಾರಿಕೆಯನ್ನು ನೀಡುತ್ತಿದ್ದಾರೆ 'ಕಿಂಚ' ಇತ್ಯಾದಿಯಾಗಿ.

ಅರಣ್ಯಲೋಕದಲ್ಲಿ ಪ್ರಯೋಗಿಸಿದ ಶಬ್ದವನ್ನೇ ಹೃತ್ಪದ್ಮದಲ್ಲಿಯೂ ಪ್ರಯೋಗಿಸಲಾಗಿದೆ

ಭಾವದೀಪಃ – ಲೋಕವತ್ತ್ವಲಿಙ್ಗೇತಿ ।। 'अरश्च ह वै ण्यश्चार्णवौ ब्रह्मलोके तृतीयस्यामितो दिवि' इत्युत्तरवाक्ये अरण्याख्यसुधासमुद्राश्रयलोके प्रयुक्त-ब्रह्मलोकपदस्य हृत्पद्मे प्रयोगाद् हृत्पद्मस्स्य तादृशलोकवत्त्वं लभ्यत इति भावः ।।

'ಅರಶ್ಚ ಹ ವೈ ಣ್ಯಶ್ಚಾರ್ಣವೋ ಬ್ರಹ್ಮಲೋಕೇ ತೃತೀಯಸ್ಯಾಮಿತೋ ದಿವಿ' ಎಂಬ ಮುಂದಿನ ವಾಕ್ಯದಲ್ಲಿ 'ಅರ' ಮತ್ತು 'ಣ್ಯ' ಎಂಬೆರಡು ಸುಧಾಸಮುದ್ರಗಳಿಗೆ ಆಶ್ರಯವಾದ ಲೋಕದಲ್ಲಿ ಯಾವ ಬ್ರಹ್ಮಲೋಕಪದವನ್ನು ಪ್ರಯೋಗಿಸಲಾಗಿದೆಯೋ ಅದೇ ಪದವನ್ನು ಹೃತ್ಪದ್ಮದಲ್ಲಿಯೂ ಪ್ರಯೋಗ ಮಾಡಲಾಗಿದೆ. ಆದ್ದರಿಂದ ಹೃತ್ಪದ್ಮಸ್ಥನಿಗೆ ಅಂತಹ ಲೋಕವತ್ವವನ್ನು ಹೇಳಿದಂತಾಗುತ್ತದೆ.

'ತತ್‌ಪ್ರಸಂಗಾತ್' ಎಂಬುದರ ವ್ಯಾಖ್ಯಾನ

ಭಾವದೀಪಃ – ಹಿಶಬ್ದೇತಿ ।। ಪೂರ್ವೆ ಭಾಷ್ಯೇ 'लिङ्गं च तथाहि दृष्टम्' ಇತಿ 'ಹಿ' ಶಬ್ದಃ ಕೇವಲಮನೂದಿತ ಏವೇತಿ ಭಾವಃ ।। ಅನೇನೇತಿ ।। 'ಹಿ' ಶಬ್ದಸೂಚಿತ ಸ್ಮೃತಿಕಥನೇನೇತ್ಯರ್ಥಃ ।। ತತ್ಪ್ರಸಙ್ಗಾದಿತಿ ।। ವಿಷ್ಣುಲೋಕಪ್ರಸಙ್ಗಾದಿತ್ಯರ್ಥಃ ।

ಹಿಂದೆ ಭಾಷ್ಯದಲ್ಲಿ 'ಲಿಂಗಂ ಚ ತಥಾಹಿ ದೃಷ್ಟಂ' ಎಂಬಲ್ಲಿರುವ 'ಹಿ' ಶಬ್ದವನ್ನು ಅನುವಾದ ಮಾಡಲಾಗಿತ್ತು ಎಂದು ತಿಳಿಯಬೇಕು. 'ಅನೇನ' ಎಂದರೆ 'ಹಿ' ಶಬ್ದದಿಂದ ಸೂಚಿತವಾದ ಸ್ಮೃತಿಯನ್ನು ಹೇಳಿದ್ದರಿಂದ ಎಂದರ್ಥ. 'ತತ್ಪ್ರಸಂಗಾತ್' ಎಂದರೆ ವಿಷ್ಣುಲೋಕವನ್ನು ಹೊಂದಬೇಕಾದ ಪ್ರಸಂಗ ಬರುವುದರಿಂದ ಎಂದರ್ಥ.

'ಅರಶ್ಚ ವೈ ಣ್ಯಶ್ಚ' ಎಂಬ ಭಾಷ್ಯವಾಕ್ಯದ ವ್ಯಾಖ್ಯಾನ

ಭಾವದೀಪಃ – 'अरश्च वै ण्यश्च' ಇತಿ ಭಾಷ್ಯೋಕ್ತವಾಕ್ಯೇ ಪೂರ್ವತ್ರ 'क्षीराब्धिमध्ये' ಇತಿ ಉಪಕ್ರಮ್ಯ ಉಕ್ತವಿಷ್ಣುಲೋಕಪ್ರಸ್ತಾವೇ 'अरश्च' ಇತಿ ಪಾಠಾದಿತ್ಯರ್ಥಃ ।

'ಅರಶ್ಚ ವೈ ಣ್ಯಶ್ಚ' ಎಂಬ ಭಾಷ್ಯದ ವಾಕ್ಯದಲ್ಲಿ ಹಿಂದೆ 'ಕ್ಷೀರಾಬ್ಧಿಮಧ್ಯೇ' ಎಂದು ಪ್ರಾರಂಭವಾಗಿ ವಿಷ್ಣುಲೋಕದ ಪ್ರಸ್ತಾಪವಿರುವಾಗ 'ಅರಶ್ಚ' ಎಂಬ ವಾಕ್ಯವು ಹೊರಟಿದೆ ಎಂದು ತಿಳಿಯಬೇಕು.

ವರಾಹಾದಿಪುರಾಣಗಳಲ್ಲಿ ಹೇಳಲ್ಪಟ್ಟ ಲಿಂಗ

ಭಾವದೀಪಃ – यद्वा वराहादिपुराणान्तरे चतुर्दशाध्यायादौ पूर्वत्र क्षीराब्धिं उक्त्वा ''तन्मध्ये मम लोकस्तु परितो वलयाकृतिः'' इत्युक्त्वा ''अरण्याख्यसुधाम्भोधिः'' इत्याद्युक्तेरिति भावः ।

ಅಥವಾ ವರಾಹ ಮೊದಲಾದ ಬೇರೆ ಪುರಾಣಗಳಲ್ಲಿ ಹದಿನಾಲ್ಕನೇ ಅಧ್ಯಾಯದಲ್ಲಿ ಕ್ಷೀರಸಮುದ್ರವನ್ನು ಹೇಳಿ ಅದರ ಮಧ್ಯದಲ್ಲಿ ದುಂಡಾದ ನನ್ನ ಲೋಕವಿದೆ ಎಂದು ಹೇಳಿ 'ಅರ' ಮತ್ತು 'ಣ್ಯ' ಎಂಬ ಸುಧಾ ಸಮುದ್ರಗಳು ಅಲ್ಲಿವೆ ಎಂದು ಹೇಳಿರುವುದರಿಂದ ಎಂದು ಅಭಿಪ್ರಾಯ.

ಸೂತ್ರದಲ್ಲಿ 'ತಥಾ' ಪದದ ವ್ಯಾಖ್ಯಾನ

ಭಾವದೀಪಃ – भाष्ये हि शब्दार्थमात्रविवरणात् सौत्रतथाशब्दकृत्यं स्वयमाह – अरण्येति ।। ब्रह्मलोकेति ।। सुधासमुद्राश्रयलोके प्रयुक्तब्रह्मलोक-पदस्य हृत्पद्मे श्रवणादित्यर्थः ।

ಭಾಷ್ಯದಲ್ಲಿ 'ಹಿ' ಶಬ್ದದ ಅರ್ಥವನ್ನಷ್ಟೇ ವಿವರಿಸಿದ್ದರಿಂದ ಸೂತ್ರದಲ್ಲಿರುವ 'ತಥಾ' ಶಬ್ದಕ್ಕೆ ಸಾರ್ಥಕ್ಯವನ್ನು ಸ್ವತಃ ತಾವೇ ಹೇಳುತ್ತಿದ್ದಾರೆ 'ಅರಣ್ಯೇ' ಇತ್ಯಾದಿಯಾಗಿ. 'ಬ್ರಹ್ಮಲೋಕ' ಎಂದರೆ ಸುಧಾಸಮುದ್ರದಲ್ಲಿ ಪ್ರಯೋಗಿಸಲ್ಪಟ್ಟ ಬ್ರಹ್ಮಲೋಕ ಪದವು ಹೃತ್ಪದ್ಮದಲ್ಲಿ ಶ್ರುತವಾದ್ದರಿಂದ ಎಂದರ್ಥ.

'ಗತಿಶಬ್ದಲಿಂಗೇಭ್ಯಃ' ಎಂದೇಕೆ ಒಟ್ಟಿಗೆ ಹೇಳಿಲ್ಲ ?

ಭಾವದೀಪಃ – एतेनास्य लिङ्गस्य विष्णुनिष्ठतायाः अस्पष्टत्वेनोप-पादनसापेक्षत्वात् गतिशब्दलिङ्गेभ्य इत्यनुक्त्वा पृथगुक्तिरिति दर्शितम् ।

ಹೀಗೆ ಹೇಳಿದ್ದರಿಂದ ಲಿಂಗಕ್ಕೆ ವಿಷ್ಣುನಿಷ್ಠತ್ವವು ಸ್ಪಷ್ಟವಾಗಿ ತಿಳಿಯದ ಕಾರಣ ಅದರ ವಿವರಣೆಯು ಆವಶ್ಯಕವಾಗಿದೆ. ಆದ್ದರಿಂದ 'ಗತಿಶಬ್ದಲಿಂಗೇಭ್ಯಃ' ಎಂದು ಒಟ್ಟಿಗೆ ಹೇಳದೆ 'ತಥಾಹಿ ದೃಷ್ಟಂ ಚ' ಎಂದು ಪ್ರತ್ಯೇಕವಾಗಿ ಸೂತ್ರಕಾರರು ಹೇಳಿರುತ್ತಾರೆ.

ಸೂತ್ರದಲ್ಲಿರುವ ಲಿಂಗಪದದ ವ್ಯಾಖ್ಯಾನ

भावदीपः – पूर्वं हृत्पद्मस्थस्य ब्रह्मत्वे हेत्वन्तरोक्त्यर्थं सौत्रं लिङ्गपदमित्येवं परतया अरश्चेत्यादि भाष्यं व्याख्यातम् । अधुना ब्रह्मलोकशब्दस्य प्रसिद्धसत्यलोकपरत्वशङ्कानिरासार्थं तदित्येवंपरतया अरश्चेत्यादिभाष्यांशं व्याचष्टे – अथवेति ।।

ಹೃತ್ಪದ್ಮಸ್ಥನು ಬ್ರಹ್ಮನಾಗಿದ್ದಾನೆನ್ನಲು ಮತ್ತೊಂದು ಹೇತುವನ್ನು ಹೇಳುವುದಕ್ಕಾಗಿ ಸೂತ್ರದಲ್ಲಿರುವ ಲಿಂಗಪದವು ಪ್ರಯುಕ್ತವಾಗಿದೆ ಎಂದು ಹೇಳಿ 'ಅರಶ್ಚ' ಮುಂತಾದ ಭಾಷ್ಯವನ್ನು ಹಿಂದೆ ವ್ಯಾಖ್ಯಾನ ಮಾಡಿದ್ದಾಯಿತು. ಈಗ ಬ್ರಹ್ಮಲೋಕಶಬ್ದಕ್ಕೆ ಪ್ರಸಿದ್ಧವಾದ ಸತ್ಯಲೋಕ ಎಂಬ ಅರ್ಥವು ಇರುವಾಗ ವಿಷ್ಣುವೇ ಬ್ರಹ್ಮಲೋಕವೆಂದು ಹೇಗೆ ಹೇಳುತ್ತೀರಿ? ಎಂಬ ಆಶಂಕೆಯನ್ನು ನಿರಾಸ ಮಾಡುವುದಕ್ಕಾಗಿ 'ಅರಶ್ಚ' ಇತ್ಯಾದಿ ವಾಕ್ಯಗಳು ಹೊರಟಿವೆ ಎಂದು ಭಾಷ್ಯದ ಅಭಿಪ್ರಾಯವನ್ನು 'ಅಥವಾ' ಇತ್ಯಾದಿ ಟೀಕೆಯಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ.

ಭಾಷ್ಯಕಾರರ ಅಭಿಪ್ರಾಯ

भावदीपः – भाष्ये ''इति'' शब्दानन्तरं हेतुसाध्ये अध्याहृत्य वा (यथा) विष्णुलोके ब्रह्मलोकपदप्रयोगः तथा 'ब्रह्मलोकं' इत्यत्रापि विष्णुलोकत्वे लिङ्गमनुमापकं दृष्टमित्यर्थमुपेत्य वा ''अरश्च'' इत्यादिवाक्यं व्याचष्टे – ब्रह्मलोकेति ।।

ಭಾಷ್ಯದಲ್ಲಿ 'ಇತಿ' ಶಬ್ದದ ಅನಂತರ ಹೇತು ಮತ್ತು ಸಾಧ್ಯಗಳನ್ನು ಅಧ್ಯಾಹಾರ ಮಾಡಿಕೊಂಡು ವಿಷ್ಣುಲೋಕದಲ್ಲಿ ಬ್ರಹ್ಮಲೋಕಪದಪ್ರಯೋಗವು, ಅದೇ ರೀತಿಯಾಗಿ 'ಬ್ರಹ್ಮಲೋಕಂ' ಎಂಬಲ್ಲಿಯೂ ವಿಷ್ಣುಲೋಕವಾಗಿದೆ ಎಂಬ ವಿಷಯದಲ್ಲಿ ಅನುಮಾಪಕವಾದ ಲಿಂಗವು ಕಂಡಿದೆ ಎಂದು ಒಪ್ಪಿ 'ಅರಶ್ಚ' ಇತ್ಯಾದಿ ಶ್ರುತಿಯನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ 'ಬ್ರಹ್ಮಲೋಕ' ಇತ್ಯಾದಿಯಾಗಿ.

'ಅರಶ್ಚ ವೈ ಣ್ಯಶ್ಚ' ಎಂಬ ಭಾಷ್ಯದ ವಾಕ್ಯದಲ್ಲಿ ಹಿಂದೆ 'ಕ್ಷೀರಾಬ್ಧಿಮಧ್ಯೇ' ಎಂದು ಪ್ರಾರಂಭವಾಗಿ ವಿಷ್ಣುಲೋಕದ ಪ್ರಸ್ತಾಪವಿರುವಾಗ 'ಅರಶ್ಚ' ಎಂಬ ವಾಕ್ಯವು ಹೊರಟಿದೆ ಎಂದು ತಿಳಿಯಬೇಕು.

ವರಾಹಾದಿಪುರಾಣಗಳಲ್ಲಿ ಹೇಳಲ್ಪಟ್ಟ ಲಿಂಗ

ಭಾವದೀಪಃ – यद्वा वराहादिपुराणान्तरे चतुर्दशाध्यायादौ पूर्वत्र क्षीराब्धिं उक्त्वा ''तन्मध्ये मम लोकस्तु परितो वलयाकृतिः'' इत्युक्त्वा ''अरण्याख्यसुधाम्भोधिः'' इत्याद्युक्तेरिति भावः ।

ಅಥವಾ ವರಾಹ ಮೊದಲಾದ ಬೇರೆ ಪುರಾಣಗಳಲ್ಲಿ ಹದಿನಾಲ್ಕನೇ ಅಧ್ಯಾಯದಲ್ಲಿ ಕ್ಷೀರಸಮುದ್ರವನ್ನು ಹೇಳಿ ಅದರ ಮಧ್ಯದಲ್ಲಿ ದುಂಡಾದ ನನ್ನ ಲೋಕವಿದೆ ಎಂದು ಹೇಳಿ 'ಅರ' ಮತ್ತು 'ಣ್ಯ' ಎಂಬ ಸುಧಾ ಸಮುದ್ರಗಳು ಅಲ್ಲಿವೆ ಎಂದು ಹೇಳಿರುವುದರಿಂದ ಎಂದು ಅಭಿಪ್ರಾಯ.

ಸೂತ್ರದಲ್ಲಿ 'ತಥಾ' ಪದದ ವ್ಯಾಖ್ಯಾನ

ಭಾವದೀಪಃ – भाष्ये हि शब्दार्थमात्रविवरणात् सौत्रतथाशब्दकृत्यं स्वयमाह – अरण्येति ।। ब्रह्मलोकेति ।। सुधासमुद्राश्रयलोके प्रयुक्तब्रह्मलोक-पदस्य हृत्पद्मे श्रवणादित्यर्थः ।

ಭಾಷ್ಯದಲ್ಲಿ 'ಹಿ' ಶಬ್ದದ ಅರ್ಥವನ್ನಷ್ಟೇ ವಿವರಿಸಿದ್ದರಿಂದ ಸೂತ್ರದಲ್ಲಿರುವ 'ತಥಾ' ಶಬ್ದಕ್ಕೆ ಸಾರ್ಥಕ್ಯವನ್ನು ಸ್ವತಃ ತಾವೇ ಹೇಳುತ್ತಿದ್ದಾರೆ 'ಅರಣ್ಯೇ' ಇತ್ಯಾದಿಯಾಗಿ. 'ಬ್ರಹ್ಮಲೋಕ' ಎಂದರೆ ಸುಧಾಸಮುದ್ರದಲ್ಲಿ ಪ್ರಯೋಗಿಸಲ್ಪಟ್ಟ ಬ್ರಹ್ಮಲೋಕ ಪದವು ಹೃತ್ಪದ್ಮದಲ್ಲಿ ಶ್ರುತವಾದ್ದರಿಂದ ಎಂದರ್ಥ.

'ಗತಿಶಬ್ದಲಿಂಗೇಭ್ಯಃ' ಎಂದೇಕೆ ಒಟ್ಟಿಗೆ ಹೇಳಿಲ್ಲ ?

ಭಾವದೀಪಃ – एतेनास्य लिङ्गस्य विष्णुनिष्ठताया अस्पष्टत्वेनोप-पादनसापेक्षत्वात् गतिशब्दलिङ्गेभ्य इत्यनुक्त्वा पृथगुक्तिरिति दर्शितम् ।

ಹೀಗೆ ಹೇಳಿದ್ದರಿಂದ ಲಿಂಗಕ್ಕೆ ವಿಷ್ಣುನಿಷ್ಠತ್ವವು ಸ್ಪಷ್ಟವಾಗಿ ತಿಳಿಯದ ಕಾರಣ ಅದರ ವಿವರಣೆಯು ಆವಶ್ಯಕವಾಗಿದೆ. ಆದ್ದರಿಂದ 'ಗತಿಶಬ್ದಲಿಂಗೇಭ್ಯಃ' ಎಂದು ಒಟ್ಟಿಗೆ ಹೇಳದೆ 'ತಥಾಹಿ ದೃಷ್ಟಂ ಚ' ಎಂದು ಪ್ರತ್ಯೇಕವಾಗಿ ಸೂತ್ರಕಾರರು ಹೇಳಿರುತ್ತಾರೆ.

ಸೂತ್ರದಲ್ಲಿರುವ ಲಿಂಗಪದದ ವ್ಯಾಖ್ಯಾನ

भावदीपः – पूर्वं हृत्पद्मस्थस्य ब्रह्मत्वे हेत्वन्तरोक्त्यर्थं सौत्रं लिङ्गपदमित्येवं परतया अरश्चेत्यादि भाष्यं व्याख्यातम् । अधुना ब्रह्मलोकशब्दस्य प्रसिद्धसत्यलोकपरत्वशङ्कानिरासार्थं तदित्येवंपरतया अरश्चेत्यादिभाष्यांशं व्याचष्टे – अथवेति ।।

ಹೃತ್ಪದ್ಮಸ್ಥನು ಬ್ರಹ್ಮನಾಗಿದ್ದಾನೆನ್ನಲು ಮತ್ತೊಂದು ಹೇತುವನ್ನು ಹೇಳುವುದಕ್ಕಾಗಿ ಸೂತ್ರದಲ್ಲಿರುವ ಲಿಂಗಪದವು ಪ್ರಯುಕ್ತವಾಗಿದೆ ಎಂದು ಹೇಳಿ 'ಅರಶ್ಚ' ಮುಂತಾದ ಭಾಷ್ಯವನ್ನು ಹಿಂದೆ ವ್ಯಾಖ್ಯಾನ ಮಾಡಿದ್ದಾಯಿತು. ಈಗ ಬ್ರಹ್ಮಲೋಕಶಬ್ದಕ್ಕೆ ಪ್ರಸಿದ್ಧವಾದ ಸತ್ಯಲೋಕ ಎಂಬ ಅರ್ಥವು ಇರುವಾಗ ವಿಷ್ಣುವೇ ಬ್ರಹ್ಮಲೋಕವೆಂದು ಹೇಗೆ ಹೇಳುತ್ತೀರಿ? ಎಂಬ ಆಶಂಕೆಯನ್ನು ನಿರಾಸ ಮಾಡುವುದಕ್ಕಾಗಿ 'ಅರಶ್ಚ' ಇತ್ಯಾದಿ ವಾಕ್ಯಗಳು ಹೊರಟಿವೆ ಎಂದು ಭಾಷ್ಯದ ಅಭಿಪ್ರಾಯವನ್ನು 'ಅಥವಾ' ಇತ್ಯಾದಿ ಟೀಕೆಯಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ.

ಭಾಷ್ಯಕಾರರ ಅಭಿಪ್ರಾಯ

भावदीपः – भाष्ये ''इति'' शब्दानन्तरं हेतुसाध्ये अध्याहृत्य वा (यथा) विष्णुलोके ब्रह्मलोकपदप्रयोगः तथा 'ब्रह्मलोकं' इत्यत्रापि विष्णुलोकत्वे लिङ्गमनुमापकं दृष्टमित्यर्थमुपेत्य वा ''अरश्च'' इत्यादिवाक्यं व्याचष्टे – ब्रह्मलोकेति ।।

ಭಾಷ್ಯದಲ್ಲಿ 'ಇತಿ' ಶಬ್ದದ ಅನಂತರ ಹೇತು ಮತ್ತು ಸಾಧ್ಯಗಳನ್ನು ಅಧ್ಯಾಹಾರ ಮಾಡಿಕೊಂಡು ವಿಷ್ಣುಲೋಕದಲ್ಲಿ ಬ್ರಹ್ಮಲೋಕಪದಪ್ರಯೋಗವು, ಅದೇ ರೀತಿಯಾಗಿ 'ಬ್ರಹ್ಮಲೋಕಂ' ಎಂಬಲ್ಲಿಯೂ ವಿಷ್ಣುಲೋಕವಾಗಿದೆ ಎಂಬ ವಿಷಯದಲ್ಲಿ ಅನುಮಾಪಕವಾದ ಲಿಂಗವು ಕಂಡಿದೆ ಎಂದು ಒಪ್ಪಿ 'ಅರಶ್ಚ' ಇತ್ಯಾದಿ ಶ್ರುತಿಯನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ 'ಬ್ರಹ್ಮಲೋಕ' ಇತ್ಯಾದಿಯಾಗಿ.

ಅರಶ್ಚ ಇತ್ಯಾದಿ ಭಾಷ್ಯದ ವ್ಯಾಖ್ಯಾನ

ಭಾವದೀಪಃ – अरश्चेति ।। वाक्ये इत्यर्थः । अत्रापि 'ब्रह्मलोकं न विन्दन्ति' इत्यत्रापि विष्णुलोकपरत्वमेवेत्यर्थः ।

'ಅರಶ್ಚ' ಎಂಬ ವಾಕ್ಯದಲ್ಲಿ ಎಂದು ತಿಳಿಯಬೇಕು. 'ಅತ್ರಾಪಿ' ಎಂದರೆ ಬ್ರಹ್ಮಲೋಕಂ ನ ವಿಂದಂತಿ' ಎಂಬಲ್ಲಿಯೂ ಕೂಡ ವಿಷ್ಣುಪರತ್ವವನ್ನೇ ಒಪ್ಪಬೇಕೆಂದರ್ಥ.

'ಲಿಂಗಂ ಚ' ಇತ್ಯಾದಿ ಭಾಷ್ಯಕ್ಕೆ ಟೀಕೆಯ ವ್ಯಾಖ್ಯಾನ

ಭಾವದೀಪಃ – तथा अरश्चेत्यादिवाक्येऽपि ब्रह्मलोकशब्दस्य विष्णुलोकवाचित्वेऽपि लिङ्गं सुधासमुद्राश्रयत्वादिरूपविष्णुलोकलिङ्गं दृष्टमित्यर्थमुपेत्य लिङ्गं चेत्यादिभाष्यमवतार्य व्याचष्टे – तत्रापीति ।।

ಅದರಂತೆ 'ಅರಶ್ಚ' ಇತ್ಯಾದಿ ವಾಕ್ಯದಲ್ಲಿಯೂ ಬ್ರಹ್ಮಲೋಕಶಬ್ದಕ್ಕೆ ವಿಷ್ಣುಲೋಕವೆಂಬ ಅರ್ಥವನ್ನು ಒಪ್ಪಿದರೂ 'ಲಿಂಗಂ' ಎಂದರೆ ಸುಧಾಸಮುದ್ರಾಶ್ರಯತ್ವಾದಿರೂಪವಾದ ವಿಷ್ಣುಲೋಕಲಿಂಗವು ಕಂಡಿರುತ್ತದೆ. ಹೀಗೆ ಅರ್ಥವನ್ನು ಒಪ್ಪಿ 'ಲಿಂಗಂ ಚ' ಇತ್ಯಾದಿ ಭಾಷ್ಯಕ್ಕೆ ಅವತಾರಿಕೆಯನ್ನು ನೀಡಿ ವ್ಯಾಖ್ಯಾನ ಮಾಡುತ್ತಿದ್ದಾರೆ 'ತತ್ರಾಪಿ' ಇತ್ಯಾದಿ ಟೀಕೆಯಿಂದ.

ಟೀಕೆಯಲ್ಲಿರುವ ಕೆಲವು ಕಠಿಣಪದಗಳ ಅರ್ಥ

ಭಾವದೀಪಃ – अरश्चेत्यादिवाक्येऽपीत्यर्थः ।। तस्येति ।। समुद्राश्रयत्वस्येत्यर्थः। भाष्ये तस्यैव विष्णुलोकस्यैव तत् समुद्राश्रयत्वमित्यर्थः ।। १५ ।।

'ತತ್ರಾಪಿ' ಎಂದರೆ 'ಅರಶ್ಚ' ಇತ್ಯಾದಿ ವಾಕ್ಯಗಳಲ್ಲಿಯೂ ಎಂದರ್ಥ. 'ತಸ್ಯ' ಎಂದರೆ 'ಸಮುದ್ರಾಶ್ರಯಕ್ಕೆ' ಎಂದರ್ಥ. ಭಾಷ್ಯದಲ್ಲಿ 'ತಸ್ಯೈವ' ಎಂದರೆ 'ವಿಷ್ಣುಲೋಕಕ್ಕೆ ಮಾತ್ರ' 'ತತ್' ಎಂದರೆ ಸುಧಾಸಮುದ್ರಾಶ್ರಯತ್ವವನ್ನು ಹೇಳಲಾಗಿದೆ ಎಂದು ತಿಳಿಯಬೇಕು.

ವಿಶೇಷವಿಚಾರ - 'ದಹರ ಉತ್ತೇರಭ್ಯಃ' ಎಂಬುದು ಪ್ರಥಮ ಸೂತ್ರ. ಇದರಲ್ಲಿ ಸ್ವಪಕ್ಷ ಸಾಧಕ ಪ್ರಮಾಣಗಳನ್ನು ಹೇಳುತ್ತಿದ್ದಾರೆ. ಮತ್ತು ವಿಷಯ ವಾಕ್ಯದಿಂದ ಹತ್ತಿರದಲ್ಲೇ

ಶ್ರುತವಾದ ಆತ್ಮಶ್ರುತಿ ಹಾಗೂ ಅಪಹತಪಾಪ್ಮತ್ವ ಮೊದಲಾದ ಲಿಂಗಗಳು ಬ್ರಹ್ಮನೇ ಹೃತ್ಪದ್ಮಸ್ಥನಾಗಿದ್ದಾನೆನ್ನಲು ಸಾಧಕಪ್ರಮಾಣಗಳಾಗಿವೆ. ಸೂತ್ರದಲ್ಲಿರುವ 'ದಹರೇ' ಎಂಬುದಾಗಿ ಸಪ್ತಮೀವಿಭಕ್ತ್ಯಂತವಾಗಿದೆ ಹೊರತು, ಪರಮತದಲ್ಲಿ ಹೇಳುವಂತೆ 'ದಹರಃ' ಎಂಬುದಾಗಿ ಪ್ರಥಮಾನಿಭಕ್ತ್ಯಂತವಾಗಿಲ್ಲ.

'ಗತಿಶಬ್ದಾಭ್ಯಾಂ ತಥಾಹಿ ದೃಷ್ಟಂ ಚ' ಎಂಬುದು ಎರಡನೆಯ ಸೂತ್ರ. ಈ ಇದರಲ್ಲಿ ವಿಷಯವಾಕ್ಯದಿಂದ ಸ್ವಲ್ಪದೂರದಲ್ಲಿರುವ ಬ್ರಹ್ಮಶ್ರುತಿ ಹಾಗೂ ಸುಪ್ತಗಮ್ಯತ್ವ ಮೊದಲಾದ ಲಿಂಗಗಳನ್ನು ಬ್ರಹ್ಮನೇ ಹೃತ್ಪದ್ಮಸ್ಥನಾಗಿದ್ದನೆನ್ನಲು ಪ್ರಮಾಣವನ್ನಾಗಿ ಹೇಳಿರುತ್ತಾರೆ. ಪ್ರಥಮಸೂತ್ರದಲ್ಲಿ ಸನ್ನಿಹಿತವಾದ ಶ್ರುತಿಲಿಂಗಗಳನ್ನು ಹೇಳಿದರೆ, ಇದರಲ್ಲಿ ವ್ಯವಹಿತವಾದ ಶ್ರುತಿಲಿಂಗಗಳನ್ನು ಹೇಳುತ್ತಿರುವ ಕಾರಣ ಇದಕ್ಕೆ ದ್ವಿತೀಯ ಸ್ಥಾನವು ಯುಕ್ತವಾಗಿದೆ.

ಪ್ರಕೃತ ವಿಷಯವಾಕ್ಯದಲ್ಲಿ ಶ್ರುತವಾದ ಬ್ರಹ್ಮಲೋಕಶಬ್ದವು ವಿಷ್ಣುಲೋಕ ಎಂಬರ್ಥವನ್ನೇ ಹೇಳುತ್ತಿದೆ. ಕಾರಣವೇನೆಂದರೆ 'ಅರ' ಮತ್ತು 'ಣ್ಯ' ಎಂಬೆರಡು ಸುಧಾಸಮುದ್ರಗಳಿಗೆ ವಿಷ್ಣುಲೋಕವು ಆಧಾರವಾಗಿದೆಯೆಂದು ವರ್ಣಿಸುವಾಗ ಬ್ರಹ್ಮಲೋಕಶಬ್ದವನ್ನು ಪ್ರಯೋಗಿಸಲಾಗಿದೆ. ಅದೇ ಬ್ರಹ್ಮಲೋಕಶಬ್ದವು ಪ್ರಕೃತ ಹೃತ್ಪದ್ಮಸ್ಥನನ್ನು ವರ್ಣಿಸುವಾಗಲೂ ಕೂಡ ಪ್ರಯೋಗಿಸಿರುವುದರಿಂದ ಇದು ವಿಷ್ಣುಲೋಕವನ್ನೇ ಹೇಳುತ್ತದೆಂದು ತಿಳಿಯುತ್ತದೆ. ಸೂತ್ರದಲ್ಲಿರುವ ಲಿಂಗಶಬ್ದದಿಂದ ಬ್ರಹ್ಮಲೋಕಶಬ್ದವು ವಿಷ್ಣುಲೋಕಪರವಾಗಿದೆಯೆಂಬುದನ್ನು ಸಾಧಿಸಲಾಗಿದೆ. ಈ ಪಕ್ಷವನ್ನು ಇಟ್ಟುಕೊಂಡಾಗ ಲಿಂಗಶಬ್ದವು ಹೇತುಸಾಧಕ ಹೇತುವಾಗುತ್ತದೆ ಹೊರತು, ಸುಪ್ತಗಮ್ಯತ್ವ ಮತ್ತು ಬ್ರಹ್ಮಶ್ರುತಿಗಳಂತೆ ನೇರವಾಗಿ ಹೃತ್ಪದ್ಮಸ್ಥನು ಬ್ರಹ್ಮನೇ ಆಗಿದ್ದಾನೆನ್ನಲು ಸಾಧಕವಾಗುವುದಿಲ್ಲ. ಆದ್ದರಿಂದಲೇ ಸೂತ್ರದಲ್ಲಿ 'ತಥಾಹಿ ದೃಷ್ಟಂ ಲಿಂಗಂ ಚ' ಎಂಬುದಾಗಿ ಇದನ್ನು ಪ್ರತ್ಯೇಕವಾಗಿ ಉಲ್ಲೇಖಿಸಿದ್ದಾರೆ. ಇಲ್ಲದಿದ್ದರೆ 'ಗತಿಶಬ್ದಾಭ್ಯಾಂ' ಎಂಬುದರಿಂದಲೇ ಈ ಲಿಂಗವನ್ನೂ ಕೂಡ ಸಂಗ್ರಹಿಸಬಹುದಿತ್ತು. ಈ ಸ್ವಾರಸ್ಯವನ್ನು ಗಮನಿಸಬೇಕು.

ಒಂದು ವೇಳೆ ಲಿಂಗಶಬ್ದದಿಂದ ಪ್ರಧಾನವಾದ ಸಾಧ್ಯದಲ್ಲಿಯೇ ಅರಣ್ಯಾಶ್ರಯಲೋಕವತ್ವವೆಂಬ ಲಿಂಗವನ್ನೂ ಕೂಡ ವಿವಕ್ಷಿಸಿದರೆ ಆವಾಗ 'ಅಹರಹರ್ಗಚ್ಛಂತ್ಯ ಏತಂ ಬ್ರಹ್ಮಲೋಕಮ್' ಎಂಬುದರ ಅನಂತರವೇ 'ಸ ಏಷ ಆತ್ಮಾ ಹೃದಿ' ಎಂಬ ವಾಕ್ಯವಿರುವುದರಿಂದ ಸುಪ್ತಗಮ್ಯತ್ವಕ್ಕೂ ಆತ್ಮಶಬ್ದಕ್ಕೂ ಹೃತ್ಪದ್ಮಸ್ಥನಿಷ್ಠತ್ವವು ಸಿದ್ಧವಾಗುತ್ತದೆ.

ಹೀಗೆ ಸಿದ್ಧವಾದ ಕಾರಣ ದ್ವಂದ್ವಸಮಾಸದಿಂದ, ಸುಪ್ತಗಮ್ಯತ್ವ ಹಾಗೂ ಆತ್ಮಶಬ್ದಗಳನ್ನು ಹೇತುವನ್ನಾಗಿ ಬಳಸಿದ್ದಾರೆ. ಈ ಎರಡು ಹೇತುಗಳಂತೆ 'ಅರಣ್ಯಾಶ್ರಯಲೋಕವತ್' ಎಂಬ ಲಿಂಗವು ಸಿದ್ಧವಾಗಿಲ್ಲ. ಆದ್ದರಿಂದ ಅದನ್ನು ದ್ವಂದ್ವಸಮಾಸದಲ್ಲಿ ಸೇರಿಸಿರುವುದಿಲ್ಲ.

'ಅರಶ್ಚ ಹ ವೈ ಣ್ಯಶ್ಚಾರ್ಣವೌ ಬ್ರಹ್ಮಲೋಕೇ' ಎಂಬ ವಾಕ್ಯದ ಹತ್ತಿರ ಹೃತ್ಪದ್ಮಸ್ಥತ್ವವನ್ನು ಹೇಳಿರುವುದಿಲ್ಲ. ಆದ್ದರಿಂದ ಹೃತ್ಪದ್ಮಸ್ಥನಿಷ್ಠವಾಗಿ ಸುಧಾಸಮುದಾಶ್ರಯತ್ವವೆಂಬ ಲಿಂಗವು ಸಿದ್ಧವಾಗುವುದಿಲ್ಲ. ಹೊರತಾಗಿ ಅದನ್ನು ಹೃತ್ಪದ್ಮಸ್ಥನಿಷ್ಠವೆಂದು ಸಾಧನೆ ಮಾಡಬೇಕು. ಅದಕ್ಕೋಸ್ಕರವೇ ಸೂತ್ರಕಾರರು 'ತಥಾಹಿ ದೃಷ್ಟಂ ಲಿಂಗಂಚ' ಎಂಬಲ್ಲಿರುವ ಲಿಂಗಶಬ್ದದಿಂದ ಈ ಹೇತುವನ್ನು ಪ್ರತ್ಯೇಕವಾಗಿ ಉಲ್ಲೇಖಿಸಿದ್ದಾರೆ.

'ತಥಾ ದೃಷ್ಟಮ್' ಎಂಬುದರ ಅಭಿಪ್ರಾಯ ಹೀಗಿದೆ - ಯಾವರೀತಿಯಾಗಿ ಸುಪ್ತಗಮ್ಯತ್ವವು ಹೃತ್ಪದ್ಮಸ್ಥನಿಷ್ಠವಾಗಿರುವುದು ಕಂಡಿದೆಯೋ, ಅದೇ ರೀತಿಯಾಗಿ ಲಿಂಗವೂ ಕೂಡ ಹೃತ್ಪದ್ಮಸ್ಥನಿಷ್ಠವಾಗಿ ಕಂಡಿದೆ. ಏಕೆಂದರೆ ಹೃತ್ಪದ್ಮವು ಪರಮಾತ್ಮನ ಆವಾಸಸ್ಥಾನವಾದ್ದರಿಂದ ಅವನ ಲೋಕದಲ್ಲಿ ಅಂದರೆ ಹೃತ್ಪದ್ಮದಲ್ಲಿ 'ಏತಂ ಬ್ರಹ್ಮಲೋಕಮ್' ಎಂಬುದಾಗಿ ಬ್ರಹ್ಮಲೋಕ ಶಬ್ದವು ಪ್ರಯೋಗಿಸಲ್ಪಟ್ಟಿದೆ. 'ಅರಣ್ಯ' ಎಂಬ ಸುಧಾಸಮುದ್ರಕ್ಕೆ ಆಶ್ರಯವಾದ ಲೋಕದಲ್ಲಿಯೂ ಕೂಡ ಈ 'ಬ್ರಹ್ಮಲೋಕ' ಶಬ್ದವನ್ನು ಪ್ರಯೋಗಿಸಬಹುದು. ಆದ್ದರಿಂದ ಅರಣ್ಯಾಶ್ರಯತ್ವವು ಹೃತ್ಪದ್ಮಸ್ಥನಿಷ್ಠವೆಂದು ಸಿದ್ಧವಾಗುತ್ತದೆ. ಹೀಗೆ ಸುಪ್ತಗಮ್ಯತ್ವ ಎಂಬ ಲಿಂಗದ ಉದಾಹರಣೆಯಿಂದ ಅರಣ್ಯಾಶ್ರಯಲೋಕವತ್ವವನ್ನೂ ಕೂಡ ಹೃತ್ಪದ್ಮಸ್ಥನಲ್ಲಿ ಸಾಧಿಸಬೇಕು.

ಹೀಗೆ ಅರಣ್ಯಾಶ್ರಯಲೋಕವತ್ತ್ವವು ಹೃತ್ಪದ್ಮಸ್ಥನಿಷ್ಠವೆಂದು ತಿಳಿದ ಮೇಲೆ ಈ ಹೇತುವಿಗೆ ಪಕ್ಷಧರ್ಮತ್ವವನ್ನು ಸಾಧಿಸಬೇಕು. ಅಂದರೆ ಹೃತ್ಪದಸ್ಥಃ, ವಿಷ್ಣುರೇವ, ಅರಣ್ಯಾಶ್ರಯಲೋಕವತ್ವಾತ್ ಎಂದು ಅನುಮಾನವನ್ನು ಪ್ರಯೋಗಿಸಿದಾಗ 'ಅರಣ್ಯಾಶ್ರಯ-ಲೋಕತ್ವಾತ್' ಎಂಬ ಹೇತುವಿಗೆ ಪಕ್ಷನಿಷ್ಠತ್ವವನ್ನು ಸಾಧಿಸಬೇಕು. ಇಲ್ಲಿ ಸಾಧ್ಯ ವಿಷ್ಣು ಈ ಸಾಧ್ಯಕ್ಕೂ ಹೇತುವಿಗೂ ವ್ಯಾಪ್ತಿಯನ್ನು ಹೇಳಬೇಕು. ಈ ವ್ಯಾಪ್ತಿಯ ವಿಷಯದಲ್ಲಿ ಭಾಷ್ಯದಲ್ಲಿ ಉದಾಹರಿಸಲ್ಪಟ್ಟ ಸ್ಮೃತಿಯೇ ಆಧಾರವಾಗಿದೆ. ಅಂದರೆ ಅರಣ್ಯಾಶ್ರಯಲೋಕವತ್ವವು ವಿಷ್ಣುವಿನ ಲಿಂಗವಾಗಿರುವುದು ಪ್ರಸಿದ್ಧವಾಗಿದೆ. ಇದನ್ನು ತಿಳಿಸುವುದಕ್ಕಾಗಿ, ಸೂತ್ರದಲ್ಲಿ 'ಹಿ' ಎಂಬ ಪದವನ್ನು ಪ್ರಯೋಗಿಸಿದ್ದಾರೆ.

ಬ್ರಹ್ಮಸೂತ್ರ

'ಧೃತೇಶ್ಚ ಮಹಿಮ್ನೋऽಸ್ಯಾಸ್ಮಿನ್ನುಪಲಬ್ಧೇಃ' ಇತ್ಯಾದಿ ಸೂತ್ರದ ವ್ಯಾಖ್ಯಾನ

ब्रह्मसूत्रम् – धृतेश्च महिम्नोऽस्यास्मिन्नुपलब्धेः ।। १५ ।।

ಸೂತ್ರಾರ್ಥ - ಹೃತ್‌ಪದ್ಮಸ್ಥಿತನಲ್ಲಿ ಸರ್ವಾಧಾರತ್ವವು ಕೇಳಿಸುತ್ತಿರುವುದರಿಂದ ವಿಷ್ಣುವೇ ಹೃತ್‌ಪದ್ಮಸ್ಥನಾಗಿದ್ದಾನೆ; ಮತ್ತು ಸರ್ವೇಶ್ವರತ್ವ ಮೊದಲಾದ ಧರ್ಮಗಳು ವಿಷ್ಣುವಿನಲ್ಲಿ ಕೇಳಿಸುತ್ತಿರುವುದರಿಂದ ಸಮಾಖ್ಯಾಪ್ರಮಾಣದಿಂದಲೂ ವಿಷ್ಣುವೇ ಹೃತ್‌ಪದ್ಮಸ್ಥನೆಂದು ನಿರ್ಣಯವಾಗುತ್ತದೆ.

ಅರ್ಥ -- ಧೃತೇಶ್ಚ = 'स एषः सेतुर्विधृतिः' ಎಂಬ ವಾಕ್ಯದಲ್ಲಿ, ಸರ್ವಾಧಾರಕತ್ವ ಧರ್ಮವು ಹೇಳಲ್ಪಟ್ಟಿರುವುದರಿಂದಲೂ ಹೃದಯ ಪದ್ಮದಲ್ಲಿ ಇರುವವನು ವಿಷ್ಣುವೇ ಆಗಿದ್ದಾನೆ. ಮತ್ತು ಛಾಂದೋಗ್ಯದಲ್ಲಿ ಹೃದಯಪದ್ಮದಲ್ಲಿ ಶ್ರುತವಾದ ಸರ್ವೇಶ್ವರತ್ವವೇ ಮೊದಲಾದ ಮಹಿಮೆಗಳು, ಅಸ್ಮಿನ್ = 'एषः सर्वेश्वरः' ಎಂಬ ಬೃಹದಾರಣ್ಯಕವಾಕ್ಯದಲ್ಲಿ ಶ್ರುತವಾಗಿದೆ. ಬೃಹದಾರಣ್ಯಕವಾಕ್ಯದ ಸಮಾಖ್ಯಾನವಿರುವುದರಿಂದಲೂ ಛಾಂದೋಗ್ಯದಲ್ಲಿ ಹೇಳಲ್ಪಟ್ಟ ಹೃದಯಪದ್ಮಸ್ಥನು ವಿಷ್ಣುವೇ ಆಗುತ್ತಾನೆ. ಬೃಹದಾರಣ್ಯಕವಾಕ್ಯದಿಂದ ಬ್ರಹ್ಮನೇ ಪ್ರತಿಪಾದ್ಯನಾಗಿದ್ದಾನೆನ್ನಲು ಏನು ಆಧಾರ ? ಎಂದರೆ, ಅಸ್ಮಿನ್ = ಬೃಹದಾರಣ್ಯಕ ವಾಕ್ಯದಲ್ಲಿ, ಅಸ್ಯ ಮಹಿಮ್ನಃ = ಸಕಲವನ್ನೂ ನಿಯಂತ್ರಿಸುತ್ತಾನೆ ಎಂಬ ಮಹಿಮೆಯ, ಉಪಲಬ್ಧೇಃ = ಉಪಲಬ್ಧಿ ಇರುವುದರಿಂದ, 'एष सेतुर्विधारणे' ಎಂಬಲ್ಲಿ ಸರ್ವೇಶ್ವರತ್ವಧರ್ಮವು ಉಲ್ಲೇಖಿತವಾಗಿರುವುದರಿಂದ ಈ ವಾಕ್ಯವು ಹೇಗೆ ಬ್ರಹ್ಮಪರವಾಗುತ್ತದೋ ಅದರಂತೆ, ಇಲ್ಲಿರುವ ವಾಕ್ಯವೂ ಬ್ರಹ್ಮಪರವೇ ಆಗುತ್ತದೆ.

ಬ್ರಹ್ಮಸೂತ್ರಭಾಷ್ಯ

ಮಹಾವಿಷ್ಣುವೇ ಸಕಲಕ್ಕೂ ಧಾರಕ

ब्रह्मसूत्रभाष्यम् — ।। धृतेश्च महिम्नोऽस्यास्मिन्नुपलब्धेः ।।

'एष सेतुर्विधृतिः' (छां. ८-४-१.) इति धृतेः,

ಅನುವಾದ - ಹೃತ್ಪದ್ಮದಲ್ಲಿರುವ ವ್ಯಕ್ತಿಯು ಸಕಲವನ್ನೂ ಧರಿಸುವ ಸಾಮರ್ಥ್ಯವನ್ನು ಹೊಂದಿರುವ ಕಾರಣ, 'ಸೇತು' ಎನಿಸಿದ್ದಾನೆ ಎಂದು ಧಾರಕತ್ವಗುಣವನ್ನು ಹೇಳಲಾಗಿದೆ.

ಪ್ರತಿಪದಾರ್ಥ -- ಮತ್ತೊಂದು ಹೇತುವಿನಿಂದ ವಿಷ್ಣುವಿನಲ್ಲಿ ಹೃತ್ ಪದ್ಮಸ್ಥತ್ವವನ್ನು ಪ್ರತಿಪಾದಿಸುವುದಕ್ಕಾಗಿ, ಸೂತ್ರವನ್ನು ಪಠಿಸಿ ವ್ಯಾಖ್ಯಾನಿಸುತ್ತಿದ್ದಾರೆ -

ಏಷ ಸೇತುಃ = ಇವನೇ ಸಕಲಕ್ಕೂ ಆಶ್ರಯನು, ವಿಧೃತಿಃ = ಎಲ್ಲವನ್ನೂ ಧರಿಸಿದವನು, ಇತಿ = ಹೀಗೆ, ಧೃತೇಃ = ವಿಷ್ಣುವಿನ ಧಾರಕತ್ವಗುಣವನ್ನು ಹೇಳಿರುವುದರಿಂದ.

ಶ್ರೀಹರಿಯ ಮಹಿಮೆ ಛಾಂದೋಗ್ಯದಂತೆ ಬೃಹದಾರಣ್ಯಕದಲ್ಲೂ ಇದೆ

ब्रह्मसूत्रभाष्यम् — 'एष भूताधिपतिरेष भूतपालः' (बृ. ६-४-२१.) इत्याद्यस्य महिम्नोऽस्मिन्नुपलब्धेः ।

ಅನುವಾದ - 'ಏಷ ಭೂತಾಧಿಪತಿರೇಷ ಭೂತಪಾಲಃ' ಇತ್ಯಾದಿಯಾಗಿ 'ಹೃತ್' ಪದ್ಮಸ್ಥನಲ್ಲಿರುವವನಿಗೆ, ಸಕಲ ಚೇತನರನ್ನು ನಿಯಮನ ಮಾಡುವಿಕೆ ಎಂಬ ಗುಣಗಳನ್ನು ಹೇಳಲಾಗಿದೆ. ಇವೆಲ್ಲವೂ ವಿಷ್ಣುವಿನ ಮಹಿಮೆಯೇ ಆಗಿವೆ. ಆದ್ದರಿಂದ ಸಮಾಖ್ಯಾಪ್ರಮಾಣದಿಂದಲೂ, ಛಾಂದೋಗ್ಯದಲ್ಲಿ ಪ್ರತಿಪಾದ್ಯನಾದ ಹೃತ್‌ಪದ್ಮಸ್ಥನು ವಿಷ್ಣುವೇ ಆಗಿದ್ದಾನೆಂದು ಸ್ಪಷ್ಟವಾಗುತ್ತದೆ.

ಪ್ರತಿಪದಾರ್ಥ -- ಏಷಃ =ಇವನೇ, ಭೂತಾಧಿಪತಿಃ = ಸಕಲ ಜೀವರಿಗೆ ನಿಯಾಮಕನು, ಏಷಃ = ಇವನೇ, ಭೂತಪಾಲಃ = ಸಕಲ ಜೀವರುಗಳಿಗೆ ರಕ್ಷಕನು, ಇತ್ಯಾದ್ಯಸ್ಯ = ಇವೇ ಮೊದಲಾದ, ಮಹಿಮ್ನಃ =

ಮಹಿಮೆಯು, ಅಸ್ಮಿನ್ = ಹೃತ್ಪದ್ಮದಲ್ಲಿರುವನಲ್ಲಿ, ಉಪಲಬ್ಧೇಃ = ಶ್ರುತವಾಗಿವೆ.

ಸರ್ವಾಧಾರತ್ವವು ವಿಷ್ಣುತ್ವ ನಿಶ್ಚಾಯಕ

ಬ್ರಹ್ಮಸೂತ್ರಭಾಷ್ಯಮ್–'एतस्मिन् खल्वक्षरे गार्ग्याकाश ओतश्च प्रोतश्च' (बृ.५-८-११), 'एतस्य वा अक्षरस्य प्रशासने गार्गि' (बृ.५-८-९)

ಅನುವಾದ - 'ಎಲೈ ! ಗಾರ್ಗಿಯೇ, ಅಕ್ಷರಶಬ್ದವಾಚ್ಯನಾದ ಪರಮಾತ್ಮನ ಅನುಜ್ಞೆಯಿಂದಲೇ ಆಕಾಶವು ಅಕ್ಷರನಲ್ಲಿಯೇ ಆಶ್ರಯವನ್ನು ಪಡೆದಿದೆ'. 'ಎಲೈ ! ಗಾರ್ಗಿಯೇ, ಅಕ್ಷರತತ್ವದ ಆಜ್ಞೆಯಿಂದಲೇ ಸೂರ್ಯ, ಚಂದ್ರಾದಿಗಳು ತಮ್ಮ ತಮ್ಮ ಸ್ಥಾನದಲ್ಲಿ ನಿಂತಿದ್ದಾರೆ'.

ಪ್ರತಿಪದಾರ್ಥ -- ಸರ್ವಾಧಾರತ್ವ ಲಿಂಗವು ಕೇಳಿಸುತ್ತಿರುವುದರಿಂದ ಹೃತ್ಪದ್ಮಸ್ಥನಾದವನು ವಿಷ್ಣುವೇ ಆಗಿದ್ದಾನೆ ಎಂದು ನಿಶ್ಚಯಿಸಿದಿರಿ. ಆದರೆ ಸರ್ವಾಧಾರತ್ವವು ವಿಷ್ಣುತ್ವನಿಶ್ಚಾಯಕವೆಂದು ಹೇಗೆ ನಿರ್ಣಯಿಸುತ್ತೀರಿ ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ -

ಹೇ ! ಗಾರ್ಗಿ = ಎಲೈ ಗಾರ್ಗಿಯೇ !, ಏತಸ್ಯ ವಾ ಅಕ್ಷರಸ್ಯ = ಈ ಪ್ರಸಿದ್ಧವಾದ ಅಕ್ಷರನೆನಿಸಿದ ಪರಮಾತ್ಮನ, ಪ್ರಶಾಸನೇ = ಆಜ್ಞೆಯಿಂದಲೇ, ಆಕಾಶಃ = ಆಕಾಶವು, ಏತಸ್ಮಿನ್ ಅಕ್ಷರೇ = ಈ ಅಕ್ಷರತತ್ವದಲಿ, ಓತಶ್ಚ ಪ್ರೋತಶ್ಚ = ಹಾಸುಹೊಕ್ಕಾಗಿ ಸರ್ವತ್ರ ವ್ಯಾಪಿಸಿಕೊಂಡಿದೆ.

ಸರ್ವೇಶ್ವರತ್ವಾದಿ ಮಹಿಮೆಗಳು ವಿಷ್ಣುತ್ವ ನಿಶ್ಚಾಯಕ

ಬ್ರಹ್ಮಸೂತ್ರಭಾಷ್ಯಮ್ –'स हि सर्वाधिपतिः स हि सर्वपालः स ईशः स विष्णुः', 'पतिं विश्वस्याऽत्मेश्वरम्' (महाना.११) इत्यादिश्रुतिभ्यस्तस्य ह्येष महिमा ।

ಅನುವಾದ - ಅಂತಹ ವಿಷ್ಣುವೇ ಸಕಲ ಸಲ್ಲೋಕ ಪಾಲಕನು, ಎಲ್ಲರಿಗೂ ಒಡೆಯನು, ಅವನೇ ಸ್ವಾಮಿಯು, ಅವನೇ ವ್ಯಾಪ್ತನು ಅಚೇತನವರ್ಗಕ್ಕೆ ಒಡೆಯನಾದ, ಚೇತನರಿಗೂ ಒಡೆಯನಾದ

ಇಂತಹ ನಾರಾಯಣನನ್ನು, ಜಗತ್ತು ಆಶ್ರಯಿಸಿದೆ. ಇವೇ ಮೊದಲಾದ ಸ್ಥಿತಿಗಳಿಂದ ಲೋಕಾಧಾರತ್ವಾದಿಗುಣಗಳು, ವಿಷ್ಣುವಿನದ್ದೇ ಆಗಿವೆಯೆಂದು ನಿರ್ಣಯವಾಗುತ್ತದೆ.

ಪ್ರತಿಪದಾರ್ಥ -- ಸಮಾಖ್ಯಾಶ್ರುತಿಯಿಂದ ತಿಳಿಯಲ್ಪಟ್ಟ ಸರ್ವೇಶ್ವರತ್ವಾದಿ ಮಹಿಮೆಗಳು, ವಿಷ್ಣುತ್ವನಿಶ್ಚಾಯಕವೆಂದು ಹೇಗೆ ನಿರ್ಣಯಿಸುತ್ತೀರಿ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ,

ಸ ಹಿ = ಅಂತಹ ಅಕ್ಷರನೇ, ಸರ್ವಾಧಿಪತಿಃ = ಎಲ್ಲರಿಗೂ ಒಡೆಯನು, ಸ ಹಿ ಸರ್ವಪಾಲಃ = ಅವನೇ ಸಕಲರಿಗೂ ರಕ್ಷಕನು, ಸ ಈಶಃ = ಅವನೇ ಸಕಲ ನಿಯಾಮಕನು, ಸಃ = ಅಂತಹವನು, ವಿಷ್ಣುಃ = ವ್ಯಾಪ್ತನು, ವಿಶ್ವಸ್ಯ = ಜಗತ್ತಿಗೆ, ಪತಿಂ = ಒಡೆಯನನ್ನಾಗಿ, ಆತ್ಮೇಶ್ವರಂ = ಸ್ವಾಮಿಯನ್ನಾಗಿ ಹಾಗೂ ಮಂಗಳಕರನನ್ನಾಗಿ, ಇತ್ಯಾದಿ = ಇವೇ ಮೊದಲಾದ, ಶ್ರುತಿಭ್ಯಃ = ವೇದಗಳ ದೆಸೆಯಿಂದ, ಏಷ ಮಹಿಮಾ = ಈ ಸರ್ವೇಶ್ವರತ್ವ ಮಹಿಮೆಯು, ತಸ್ಯಹಿ = ಆ ವಿಷ್ಣುವಿನದ್ದೇ ಎಂದು ಸುಪ್ರಸಿದ್ಧ.

ಸರ್ವೇಶ್ವರತ್ವಾದಿಗಳು ಇತರರಲ್ಲಿ ಸರ್ವಥಾ ಇರುವುದಿಲ್ಲ

ಬ್ರಹ್ಮಸೂತ್ರಭಾಷ್ಯಮ್ – 'सर्वेशो विष्णुरेवैको नान्योऽस्ति जगतः पतिः ।' इति च स्कान्दे ।।

ಅನುವಾದ - ಸರ್ವೇಶ್ವರನಾದವನು ವಿಷ್ಣು ಒಬ್ಬನೇ ಆಗಿದ್ದಾನೆ. ಅವನನ್ನು ಬಿಟ್ಟು ಇನ್ಯಾರೂ ಬೇರೆ ಯಾರೂ ಸಹ ಈ ಜಗತ್ತಿಗೆ ಒಡೆಯರಾಗಲು ಸಾಧ್ಯವಿಲ್ಲ ಎಂದು ಸ್ಕಾಂದಪುರಾಣವು ಹೇಳುತ್ತಿದೆ.

ಪ್ರತಿಪದಾರ್ಥ -- ಸರ್ವೇಶ್ವರತ್ವಾದಿಗಳು ವಿಷ್ಣುವಿನಂತೆ ಬೇರೆಯವರಲ್ಲೂ ಇರಬಹುದಲ್ಲವೆ ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ-

ಸರ್ವೇಶೋ = ಎಲ್ಲರಿಗೂ ಒಡೆಯನಾದವನು, ವಿಷ್ಣುರೇವೈಕಃ = ವಿಷ್ಣು ಒಬ್ಬನೇ ಆಗಿದ್ದಾನೆ, ಅನ್ಯಃ = ಮತ್ತೊಬ್ಬನು, ಜಗತಃ = ಜಗತ್ತಿಗೆ, ಪತಿಃ = ಒಡೆಯನು, ನಾಸ್ತಿ = ಇರುವುದಿಲ್ಲ , ಇತಿ ಚ = ಹೀಗೂ ಸಹ, ಸ್ಕಾಂದೇ = ಸ್ಕಾಂದ ಪುರಾಣದಲ್ಲಿ ಹೇಳಲ್ಪಟ್ಟಿದೆ.

ಸತ್ತರ್ಕದೀಪಾವಳಿ

ಹೃತ್ಪದ್ಮಸ್ಥನು ವಿಷ್ಣುವೇ ಹೊರತು, ದಹರಾಕಾಶವಲ್ಲ

सत्तर्कदीपावलिः – धृतेश्च महिम्नोऽस्यास्मिन्नुपलब्धेः ।। १-२-२४ ।।

धृतेरित्यादेरयमर्थः । द्यावापृथिव्याधारं प्रकृत्य 'स सेतुर्विधृतिरेषां लोकानाम्' इति श्रूयमाणत्वादप्यसौ विष्णुरेव न दहर आकाशः ।

'ಧೃತೇಶ್ಚ' ಇತ್ಯಾದಿ ಸೂತ್ರದ ಅರ್ಥ ಹೀಗಿದೆ - ದ್ಯಾವಾಪೃಥಿವ್ಯಾದಿಗಳಿಗೆ ಆಧಾರನಾದವನ ಬಗ್ಗೆ ಪ್ರಸ್ತುತವಾದಾಗ, 'ಸ ಸೇತುರ್ವಿಧೃತಿರೇಷಾಂ ಲೋಕಾನಾಮ್' ಎಂಬ ವಾಕ್ಯವು ಶ್ರುತವಾಗಿದೆ. ಆದ್ದರಿಂದ ವಿಷ್ಣುವೇ ಹೃತ್ಪದ್ಮಸ್ಥನು ಹೊರತು ದಹಾರಾಕಾಶವಲ್ಲ.

ದಹರಾಕಾಶದಲ್ಲಿರುವವನು ಸಮಸ್ತ ಜಗದ್ಧಾರಕ

सत्तर्कदीपावलिः – तत् स्थितपुरुष एव हि जगद्धारणादिमहिमा श्रुत्यन्तरोपलब्धः ।

ದಹಾರಾಕಾಶದಲ್ಲಿರುವ ಪುರುಷನೇ ಸಮಸ್ತ ಜಗತ್ತನ್ನು ಧಾರಣೆ ಮಾಡಿದ್ದಾನೆಂಬ ಮಹಿಮೆಯು ಬೇರೆ ಶ್ರುತಿಯಲ್ಲಿಯೂ ಹೇಳಲ್ಪಟ್ಟಿದೆ.

ಸಕಲ ಜಗದ್ಧಾರಕತ್ವವು ವಿಷ್ಣುವಿನ ಅಸಾಧಾರಣ ಗುಣ

सत्तर्कदीपावलिः – 'स एषोऽन्तर्हृदय आकाशस्तस्मिंश्छेते । एष भूताधिपतिरेष भूतपालः एष सेतुर्विधारण एष लोकानामसम्भेदाय' इति विष्णोरेवायं महिमेत्येतच्छ्रुत्यन्तरैः साधयति – एतस्मिन्नित्यादिना ।।

'ಸ ಏಷೋऽಂತರ್ಹೃದಯ ಆಕಾಶಸ್ತಸ್ಮಿನ್ ಶೇತೇ । ಏಷ ಭೂತಾಧಿಪತಿರೇಷ ಭೂತಪಾಲಃ ಏಷ ಸೇತುರ್ವಿಧಾರಣ ಏಷ ಲೋಕಾನಾಮಸಂಭೇದಾಯ' ಇತ್ಯಾದಿಯಾಗಿ ವಿಷ್ಣುವೇ ಸಕಲ

ಧಾರಕನಾಗಿದ್ದಾನೆಂದು ವಿಷ್ಣುವಿನ ಮಹಿಮೆಯನ್ನು ಬೇರೆ ಶ್ರುತಿಗಳಿಂದ ಸಾಧನೆ ಮಾಡುತ್ತಿದ್ದಾರೆ, 'ಏತಸ್ಮಿನ್' ಇತ್ಯಾದಿ ವಾಕ್ಯಗಳಿಂದ.

ತತ್ತ್ವಪ್ರದೀಪ

ಸಮಸ್ತಧಾರಕತ್ವಗುಣ ಮಹಾವಿಷ್ಣುವಿನಲ್ಲಿ ಮಾತ್ರ

तत्त्वप्रदीपः – धृतेश्च महिम्नोऽस्यास्मिन्नुपलब्धेः ।। अस्मिन् विषयवाक्ये ''एष सेतुर्विधृतिः' इति जगद्धृतेरुक्तत्वाच्च दहरस्थो विष्णुरेव । ''स सेतुः'' इति वक्तव्ये छन्दोगवाक्ये ''एष सेतुः'' इति वदता भगवता समानरूपे श्रुत्यन्तरमपि विषयवाक्यमादीयत इत्यावेदितम् ।

ಈ ವಿಷಯವಾಕ್ಯದಲ್ಲಿ 'ಏಷ ಸೇತುರ್ವಿಧೃತಿಃ' ಎಂಬುದಾಗಿ ಸಮಸ್ತ ಜಗತ್ತಿನ ಧಾರಕತ್ವ ಗುಣವನ್ನು ಹೇಳಿರುವುದರಿಂದ ದಹರಾಕಾಶದಲ್ಲಿ ನೆಲೆಸಿರುವವನು ಮಹಾವಿಷ್ಣುವೇ ಆಗಿದ್ದಾನೆ. ಛಾಂದೋಗ್ಯೋಪನಿಷತ್ತಿನಲ್ಲಿ ಇರುವಂತೆ ಭಾಷ್ಯದಲ್ಲಿಯೂ ಕೂಡ 'ಸ ಸೇತುಃ' ಎಂದು ಹೇಳ ಬೇಕಿತ್ತು. ಆದರೂ 'ಏಷ ಸೇತುಃ' ಎಂದು ಹೇಳುವ ಮೂಲಕ ಭಗವಾನ್ ಭಾಷ್ಯಕಾರರು ಇದರಂತೆ ಮತ್ತೊಂದು ಶ್ರುತಿಯೂ ಕೂಡ ಈ ಅಧಿಕರಣದ ವಿಷಯವಾಕ್ಯವಾಗಿದೆ ಎಂದು ತಿಳಿಸಿರುತ್ತಾರೆ.

ವಿವರಣೆ - ಈ ಸೂತ್ರದಲ್ಲಿ 'ಸ ಸೇತುರ್ವಿಧೃತಿಃ' ಎಂಬ ಛಾಂದೋಗ್ಯೋಪನಿಷತ್ತಿನ ಮಾತಿನ ಆಧಾರದಿಂದ ಜಗದ್ಧಾರಕತ್ವ ಎಂಬ ಗುಣವು ಮಹಾವಿಷ್ಣುವಿನಲ್ಲಿ ಮಾತ್ರ ಇರುತ್ತದೆ. ಆದ್ದರಿಂದ ಅವನೇ ದಹರಾಕಾಶದಲ್ಲಿ ನೆಲೆಸಿದ್ದಾನೆಂದು ಸಮರ್ಥಿಸುತ್ತಿದ್ದಾರೆ. ಛಾಂದೋಗ್ಯೋಪನಿಷತ್ತಿನಲ್ಲಿ ಬರುವ ವಾಕ್ಯ ಹೀಗಿದೆ -

ಅಥ ಯ ಆತ್ಮಾ ಸ ಸೇತುರ್ವಿಧೃತಿರೇಷಾಂ ಲೋಕಾನಾಮಸಂಭೇದಾಯ। ನೈತಂ ಸೇತುಮಹೋರಾತ್ರೇ ತರತಃ। ನ ಜರಾ। ನ ಮೃತ್ಯುಃ। ನ ಶೋಕಃ। ನ ಸುಕೃತಮ್। ನ ದುಷ್ಕೃತಮ್। ಸರ್ವೇ ಪಾಪ್ಮಾನೋऽತೋ ನಿವರ್ತಂತೇ। ಅಪಹತಪಾಪ್ಮಾ ಹ್ಯೇಷ ಬ್ರಹ್ಮಲೋಕಃ।

ಹೃದಯಾಕಾಶಸ್ಥನಾದ ಈ ಪರಮಾತ್ಮನು ಈ ಲೋಕಗಳೆಲ್ಲಾ ಒಂದರೊಳಗೊಂದು ಸೇರಿಕೊಳ್ಳದಂತೆ ಅಥವಾ ನಾಶವಾಗದಂತೆ ಅವುಗಳಿಗೆ ಆಶ್ರಯನೂ ಆಧಾರನೂ ಆಗಿರುವನು. ಈ ಪರಮಾತ್ಮನೇ ಹಗಲು ರಾತ್ರಿಗಳನ್ನು ಮೀರಿ ನಿಂತಿರುವನು. ಹಗಲು ರಾತ್ರಿಗಳ ಪರಿಣಾಮವಾದ ಯಾವ ವಿಕಾರವೂ ಅವನಲ್ಲಿ ಉಂಟಾಗುವುದಿಲ್ಲ. ಆದ್ದರಿಂದ ಮುಪ್ಪು, ಸಾವು, ದುಃಖ, ಪಾಪ, ಪುಣ್ಯ ಇವೆಲ್ಲವೂ ಅವನನ್ನು ಎಂದೂ ಸ್ಪರ್ಶಿಸಲಾರವು. ಎಲ್ಲಾ ಪಾಪಗಳೂ ಅವನಿಂದ ನಿತ್ಯವೂ ದೂರವಾಗಿವೆ. ಆದ್ದರಿಂದಲೇ ಅವನು ಪಾಪರಹಿತನೆಂದು ಪ್ರಸಿದ್ಧನಾಗಿದ್ದಾನೆ.

ಉಪನಿಷತ್ತಿನಲ್ಲಿ 'ಸ ಸೇತುಃ' ಎಂದಿದ್ದರೂ ಕೂಡ ಭಾಷ್ಯದಲ್ಲಿ 'ಏಷ ಸೇತುಃ' ಎಂದು ಉಲ್ಲೇಖಿಸಿರುವುದರಿಂದ ಇದರಂತೆ ಮತ್ತೊಂದು ಶ್ರುತಿಯೂ ಕೂಡ ಅಧಿಕರಣದ ವಿಷಯವಾಕ್ಯವಾಗಿದೆ ಎಂದು ತಿಳಿಸಿದ್ದಾರೆ.

ಭಾಷ್ಯಕಾರರು ಶ್ರುತಿಯ ವಾಕ್ಯವನ್ನೇಕೆ ವ್ಯತ್ಯಾಸ ಮಾಡುವರು ?

तत्वप्रदीपः – सर्वत्र च सर्वेषां समानजातीयानां श्रुत्यन्तरणां सहोपलक्षणार्थमेतदुपक्रमे च ''अस्मिन् ब्रह्मपुरे'' इत्युदाहर्तव्येपि''एतस्मिन् ब्रह्मपुरे'' इत्युदाहृतम् । ''गायति त्रायति च'' इति श्रुत्यन्तरमेव सदृशमधस्ताच्च सूचयाम्बभूवे । उपरिष्टाच्च कचित्कचिदेवम्भूतेषु वचनभेदेष्वयमेवाऽशयो बोद्धव्यः ।

ಈ ಸೂತ್ರದಲ್ಲಿ ಮಾತ್ರ ಹೀಗಲ್ಲ. ಎಲ್ಲೆಡೆಯೂ ಕೂಡ ಭಾಷ್ಯಕಾರರು ಹೀಗೆ ಶ್ರುತಿಯ ಪದಗಳನ್ನು ವ್ಯತ್ಯಾಸ ಮಾಡಿ ಉಲ್ಲೇಖಿಸಿದಾಗ ತತ್ಸಮಾನಜಾತೀಯವಾದ ಬೇರೆ ಶ್ರುತಿಗಳನ್ನೂ ಕೂಡ ಅಧಿಕರಣವಿಷಯವಾಕ್ಯವನ್ನಾಗಿ ಪರಿಗಣಿಸಬೇಕೆಂದು ತಿಳಿಯಬೇಕು. ಆ ಬೇರೆ ಶ್ರುತಿಗಳನ್ನು ಉಲ್ಲೇಖಿಸುವುದು ಕೇವಲ ಉಪಲಕ್ಷಣಕ್ಕೋಸ್ಕರ ಎಂಬುದು ಭಾಷ್ಯಕಾರರ ಅಭಿಪ್ರಾಯವಾಗಿರುತ್ತದೆ. ಈ ಅಧಿಕರಣದ ಪ್ರಾರಂಭದಲ್ಲಿಯೂ ಕೂಡ 'ಅಸ್ಮಿನ್ ಬ್ರಹ್ಮಪುರೇ' ಎಂದೇ ಛಾಂದೋಗ್ಯದ ಮಾತನ್ನು ಉಲ್ಲೇಖಿಸಬೇಕಿತ್ತು. ಅದನ್ನು ಬಿಟ್ಟು 'ಏತಸ್ಮಿನ್ ಬ್ರಹ್ಮಪುರೇ' ಎಂದು ಉಲ್ಲೇಖಿಸಲೂ ಕೂಡ ಇದೇ ಕಾರಣವಾಗಿದೆ. ಮುಂದೆಯೂ ಸಹ 'ಗಾಯತಿ ತ್ರಾಯತಿ ಚ' ಎಂಬುದಾಗಿ ಶ್ರುತ್ಯಂತರವನ್ನು ಉಲ್ಲೇಖಿಸುತ್ತಾರೆ. ಅಲ್ಲಲ್ಲಿ ಹೀಗೆ ವಚನಭೇದವನ್ನು ವ್ಯತ್ಯಾಸ ಮಾಡಿದಾಗ ಇದೇ ಅಭಿಪ್ರಾಯವನ್ನು ಜಿಜ್ಞಾಸುಗಳು ತಿಳಿಯಬೇಕು.

ದಹರಾಕಾಶಸ್ಯ ವಿಷ್ಣುವೆಂದು ಬೃಹದಾರಣ್ಯಕ

तत्वप्रदीपः – ''एष सर्वेश्वर एष भूताधिपतिरेष भूतपाल एष सेतुर्विधरण एषां लोकानाम्'' इत्यादेरस्य विष्णोर्महिम्नोऽस्मिन् हृदयाकाशस्थे बृहदारण्यकवाक्यादुपलब्धेश्च दहरे विष्णुरेव ।

'ಏಷ ಸರ್ವೇಶ್ವರ ಏಷ ಭೂತಾಧಿಪತಿರೇಷ ಭೂತಪಾಲ ಏಷ ಸೇತುರ್ವಿಧರಣ ಏಷಾಂ ಲೋಕಾನಾಮ್' ಇವನು ಸಕಲಕ್ಕೂ ಒಡೆಯನು. ಸಕಲಭೂತಗಳಿಗೆ ಇವನೊಬ್ಬನೇ ಒಡೆಯನು. ಸಮಸ್ತ ಲೋಕಗಳನ್ನು ಇವನೇ ಧರಿಸಿದವನು ಇತ್ಯಾದಿಯಾಗಿ ವಿಷ್ಣುವಿನ ಅಸಾಧಾರಣ ಮಹಿಮೆಯನ್ನು ಬೃಹದಾರಣ್ಯಕವು ಹೇಳುತ್ತಿದೆ. ಹೃದಯಾಕಾಶದಲ್ಲಿರುವ ಪುರುಷನಲ್ಲೇ ಬೃಹದಾರಣ್ಯಕವಾಕ್ಯವು ಇಂಥ ಮಹಿಮೆಯನ್ನು ಹೇಳುತ್ತಿರುವುರಿಂದ ದಹರಾಕಾಶದಲ್ಲಿ ನೆಲೆಸಿರುವವನು ವಿಷ್ಣುವೇ ಆಗಿದ್ದಾನೆ ಎಂದು ನಿರ್ಣಯಿಸಬಹುದು.

ಲಕ್ಷ್ಮೀಧಾರಕನೂ ಕೂಡ ಮಹಾವಿಷ್ಣುವೇ

तत्वप्रदीपः – तत्र ''य एषोऽन्तर्हृदय आकाशस्तस्मिन् शेते'' ''सर्वस्य वशी'' इति हृदयाकाशस्थं प्रस्तुत्य हि महिमाऽयमभिहितः । ''एतस्मिन्नु खल्वक्षरे गार्गि'' इत्यादि श्रुतिभ्यस्तस्यास्य विष्णोरेव ह्येष धृत्यादिको महिमा ।।

'ಯ ಏಷೋಂತರ್ಹೃದಯೇ ಆಕಾಶಸ್ತಸ್ಮಿನ್ ಶೇತೇ' ಎಲ್ಲೆಡೆ ವ್ಯಾಪ್ತನಾದ ಆಕಾಶನಾಮಕನಾದ ಪರಮಾತ್ಮನು ಹೃದಯದ ದಹರಾಕಾಶದಲ್ಲಿ ನೆಲೆಸಿರುವನು. 'ಸರ್ವಸ್ಯ ವಶೀ' ಎಲ್ಲವೂ ಇವನ ಅಧೀನವಾಗಿದೆ ಇತ್ಯಾದಿಯಾಗಿ ಹೃದಯಾಕಾಶದಲ್ಲಿರುವವನ ಬಗ್ಗೆ ಪ್ರಸ್ತಾಪ ಮಾಡಿ ಮಹಿಮೆಯನ್ನು ಅದೇ ಬೃಹದಾರಣ್ಯಕದ ಪ್ರಕರಣದಲ್ಲಿ ಹೇಳಲ್ಪಟ್ಟಿದೆ.

'ಏತಸ್ಮಿನ್ನು ಖಲ್ವಕ್ಷರೇ ಗಾರ್ಗಿ' 'ಓ ಗಾರ್ಗಿಯೇ ! ಇಂಥ ಅಕ್ಷರನಲ್ಲಿಯೇ ಲಕ್ಷ್ಮಿಯೂ ಕೂಡ ಓತಪ್ರೋತವಾಗಿ ಆಶ್ರಯವನ್ನು ಪಡೆದಿದ್ದಾಳೆ' ಇತ್ಯಾದಿಯಾಗಿ ವಿಷ್ಣುವಿನಲ್ಲಿಯೇ ಸಕಲ ಧಾರಕತ್ವಧರ್ಮವನ್ನು ಶ್ರುತಿಯು ಹೇಳುತ್ತಿದೆ. ಆದ್ದರಿಂದ ದಹರಾಕಾಶದಲ್ಲಿ ನೆಲೆಸಿರುವವನು ಮಹಾವಿಷ್ಣುವೆಂದು ನಿರ್ಣಯವಾಗುತ್ತದೆ.

ವಿಶೇಷವಿಚಾರ - ಬೃಹದಾರಣ್ಯಕದಲ್ಲಿ 'ಏತಸ್ಮಿನ್ ಖಲ್ವಕ್ಷರೇ ಗಾರ್ಗಿ ಎಂಬ ವಾಕ್ಯದ ಪ್ರಕರಣ ಹೀಗಿದೆ -

> ತದ್ ವಾ ಏತದಕ್ಷರಂ ಗಾರ್ಗಿ, ಅದೃಷ್ಟಂ ದ್ರಷ್ಟೃ । ಅಶ್ರುತಂ ಶ್ರೋತೃ । ಅಮತಂ ಮಂತೃ । ಅವಿಜ್ಞಾತಂ ವಿಜ್ಞಾತೃ । ನಾನ್ಯದತೋಽಸ್ತಿ ದ್ರಷ್ಟೃ । ನಾನ್ಯದತೋಽಸ್ತಿ ಶ್ರೋತೃ । ನಾನ್ಯದತೋಽಸ್ತಿಮಂತೃ । ನಾನ್ಯದತೋಽಸ್ತಿವಿಜ್ಞಾತೃ । ಏತಸ್ಮಿನ್ ಖಲು ಅಕ್ಷರೇ ಗಾರ್ಗಿ ಆಕಾಶ ಓತಶ್ಚ ಪ್ರೋತಶ್ಚೇತಿ ।

ಗಾರ್ಗಿ, ಈ ಅಕ್ಷರನು ಅನ್ಯರಿಗೆ ಸಂಪೂರ್ಣವಾಗಿ ನೋಡಲಾಗದವನು. ತಾನು ಎಲ್ಲವನ್ನೂ ನೋಡುವವನು. ಅನ್ಯರಿಗೆ ಸಂಪೂರ್ಣವಾಗಿ ಹೇಳಿ ತಿಳಿಯಲಾಗದವನು. ತಾನು ಎಲ್ಲವನ್ನೂ ಕೇಳುವವನು. ಅನ್ಯರಿಗೆ ಸಂಪೂರ್ಣವಾಗಿ ಮನಸ್ಸಿನಿಂದ ಗ್ರಹಿಸಲಾಗದವನು. ತಾನು ಎಲ್ಲವನ್ನೂ ಮನಸಾ ಗ್ರಹಿಸುವವನು. ಅನ್ಯರಿಗೆ ಸಂಪೂರ್ಣವಾಗಿ ತಿಳಿಯಲಾಗದವನು. ತಾನು ಎಲ್ಲವನ್ನೂ ತಿಳಿಯುವವನು. ಅಕ್ಷರನಿಂದ ಅನ್ಯರು ಯಾರೂ ಸ್ವತಂತ್ರವಾಗಿ ನೋಡುವವರಲ್ಲ. ಅವನಿಗಿಂತ ಅನ್ಯರು ಯಾರೂ ಸ್ವತಂತ್ರವಾಗಿ ಕೇಳುವವರಲ್ಲ. ಅವನಿಗಿಂತ ಅನ್ಯರು ಯಾರೂ ಸ್ವತಂತ್ರವಾಗಿ ಮನಸಾ ತಿಳಿಯುವವರಲ್ಲ. ಇವನಿಗಿಂತ ಬೇರೆ ಯಾರೂ ಸ್ವತಂತ್ರವಾಗಿ ತಿಳಿಯುವವನಿಲ್ಲ. ಗಾರ್ಗಿ ಇಂಥ ಅಕ್ಷರನಲ್ಲಿಯೇ ಲಕ್ಷ್ಯವೂ ಓತಪ್ರೋತವಾಗಿ ಆಶ್ರಯ ಪಡೆದಿದ್ದಾಳೆ.

ತತ್ತ್ವಪ್ರಕಾಶಿಕಾ

ಹೃತ್ಪದ್ಮಸ್ಥನು ವಿಷ್ಣುವೆನ್ನಲು ಮತ್ತೊಂದು ಹೇತು

तत्वप्रकाशिका – धृतेश्च महिम्नोऽस्यास्मिन्नुपलब्धेः ।। १-२-२४ ।। हेत्वन्तरेण विष्णोः हृत्पद्मस्थत्वं प्रतिपादयत् सूत्रमुपन्यस्य व्याचष्टे – धृतेश्चेति ।।

ಮತ್ತೊಂದು ಹೇತುವಿನಿಂದ ವಿಷ್ಣುವೇ ಹೃತ್ಪದ್ಮಸ್ಥನಾಗಿದ್ದಾನೆಂಬುದನ್ನು ಪ್ರತಿಪಾದನೆ ಮಾಡುವಂತಹ ಸೂತ್ರವನ್ನು ಪಠಿಸಿ, ವ್ಯಾಖ್ಯಾನ ಮಾಡುತ್ತಿದ್ದಾರೆ 'ಧೃತೇಶ್ಚ' ಇತ್ಯಾದಿಯಾಗಿ.

ಭೂಲೋಕಾದಿಗಳನ್ನು ಧರಿಸಿದವನು ಹೃತ್ಪದ್ಮಸ್ಥನು

तत्वप्रकाशिका – 'अथ य आत्मा स सेतुर्विधृतिरेषां लोकानामसम्भेदाय' इति हृत्पद्मस्थस्य सर्वाधारत्वश्रवणाच्च विष्णुरेवासावित्यर्थः ।

'ಅಥ ಯ ಆತ್ಮಾ ಸ ಸೇತುರ್ವಿಧೃತಿರೇಷಾಂ ಲೋಕಾನಾಮಸಂಭೇದಾಯ' 'ಹೃತ್ಪದ್ಮಸ್ಥನಾದ ಪರಮಾತ್ಮನು ನಾಶವಾಗಬಾರದೆಂಬ ಕಾರಣದಿಂದ, ಭೂಲೋಕಾದಿಗಳನ್ನು ಧಾರಣೆ ಮಾಡಿ, ಪೋಷಣೆ ಮಾಡುತ್ತಿದ್ದಾನೆ. ಆದ್ದರಿಂದಲೇ ಸರ್ವಾಶ್ರಯನಾಗಿದ್ದಾನೆ'. ಹೀಗೆ ಹೃತ್ಪದ್ಮಸ್ಥನಲ್ಲಿ ಸರ್ವಾಧಾರತ್ವಧರ್ಮವು ಹೇಳಲ್ಪಟ್ಟಿದ್ದರಿಂದ ವಿಷ್ಣುವೇ ಹೃತ್ಪದ್ಮಸ್ಥನಾಗಿದ್ದಾನೆಂದು ತಿಳಿಯುತ್ತದೆ.

ಸಂಪ್ರದಾಯಜ್ಞಾನಿಗಳ ಅಭಿಪ್ರಾಯ

तत्वप्रकाशिका – अत्र स सेतुरिति वक्तव्ये एष सेतुरित्युक्तिः शाखान्तराणामप्यत्रोपसङ्ग्रहार्थम् । एवमन्यत्रापीति सम्प्रदायविदः ।।

ಇಲ್ಲಿ 'ಸೇತುಃ' ಎಂಬ ಶ್ರುತಿಯನ್ನು ಹೇಳುವ ಬದಲು, 'ಏಷ ಸೇತುಃ' ಎಂದು ಏಕೆ ಹೇಳಿದ್ದಾರೆಂದರೆ? ಬೇರೆ ಶಾಖಾದಲ್ಲಿ ಇದಕ್ಕೆ ಸಮಾಖ್ಯಾಪ್ರಮಾಣವಿದೆ, ಅವುಗಳನ್ನೂ ಸಂಗ್ರಹಿಸಬೇಕೆಂಬ ಉದ್ದೇಶದಿಂದ. ಹೀಗೆ ಬೇರೆಕಡೆಯೂ ತಿಳಿಯಬೇಕೆಂದು ಸಂಪ್ರದಾಯ-ಜ್ಞಾನಿಗಳು ಹೇಳಿದ್ದಾರೆ.

'ಏಷ ಸೇತುಃ ವಿಧೃತಿಃ' ಎಂಬ ಸೂತ್ರದ ವ್ಯಾಖ್ಯಾನ

तत्वप्रकाशिका – विधृतिः सेतुरिति धारणसमर्थ आश्रयः । नच वाच्यमयं न हृत्पद्मस्थ इति । 'य आत्मा' इति प्रागुक्तात्मपरामर्शात् 'सर्वे पाप्मानोऽतो निवर्तन्ते' इति तल्लक्षणत्वोक्तेश्च ।

ಪ್ರತಿಪದಾರ್ಥ -- ವಿಧೃತಿಃ = ಸಕಲವನ್ನು ಧರಿಸಲು ಸಮರ್ಥನು, ಸೇತುಃ = ಆಶ್ರಯನು, 'ಏಷ ಸೇತುಃ' ಎಂಬಲ್ಲಿ ಪ್ರತಿಪಾದ್ಯನಾದವನು, ಹೃತ್ಪದ್ಮಸ್ಥನು ಅಲ್ಲವೆಂದು ಶಂಕಿಸಬಾರದು ಏಕೆಂದರೆ, 'ಯ ಆತ್ಮಾ' ಎಂದು ಹಿಂದೆ ಹೇಳಲ್ಪಟ್ಟ ಆತ್ಮನ ಪರಾಮರ್ಶವನ್ನು ಮಾಡಿ 'ಸರ್ವೇ

ಪಾಪ್ಮನೋऽತೋ ನಿವರ್ತಂತೇ', 'ಇವನಿಂದ ಸಕಲ ಪಾಪಗಳು ಹಿಂತಿರುಗುತ್ತವೆ' ಎಂಬುದಾಗಿ ವಿಷ್ಣುವಿನ ಲಕ್ಷಣವನ್ನು ಹೇಳಲಾಗಿದೆ.

ಸಮಾಖ್ಯಾಶ್ರುತಿಯ ಆಧಾರ

तत्वप्रकाशिका – समाख्ययाऽप्येतमर्थं साधयति – एष इति ।।

'ಸಮಾಖ್ಯಾ' ರೂಪವಾದ ಶ್ರುತಿಪ್ರಮಾಣದಿಂದಲೂ ಹೃತ್ಪದ್ಮಸ್ಥನಾದವನು ವಿಷ್ಣುವೇ ಆಗಿದ್ದಾನೆಂದು ಸಮರ್ಥನೆ ಮಾಡುತ್ತಿದ್ದಾರೆ 'ಏಷಃ' ಇತ್ಯಾದಿಯಾಗಿ.

ಬೃಹದಾರಣ್ಯಕೋಪನಿಷತ್ತಿನಲ್ಲಿ ಹೇಳಲ್ಪಟ್ಟ ಸರ್ವಾಶ್ರಯತ್ವ

तत्वप्रकाशिका – वाजसनेयके 'य एषोऽन्तर्हृदय आकाशस्तस्मिन् शेते सर्वस्य वशी' इत्याद्युक्त्वा 'एष सर्वेश्वर एष भूताधिपतिरेष भूतपाल एष सेतुर्विधारणः' 'एषां लोकानामसम्भेदाय' इत्यादिना हृदये विष्णोरुक्तत्वेन तत्समाख्यानादत्राप्युक्तो विष्णुरेव ।

ಬೃಹದಾರಣ್ಯಕೋಪನಿಷತ್ತಿನಲ್ಲಿ, 'ಯ ಏಷೋऽಂತರ್ಹೃದಯ ಆಕಾಶಸ್ತಸ್ಮಿನ್ ಶೇತೇ ಸರ್ವಸ್ಯ ವಶೀ' - 'ಪರಮಾತ್ಮನು ಬೇರೆ ಆಕಾಶದಲ್ಲಿರುತ್ತಾನೆ, ಎಲ್ಲವೂ ಅವನ ವಶವಾಗಿದೆ' ಎಂದು ಹೇಳಿ ಮುಂದೆ 'ಏಷ ಸರ್ವೇಶ್ವರ ಏಷ ಭೂತಾಧಿಪತಿರೇಷ ಭೂತಪಾಲ ಏಷ ಸೇತುರ್ವಿಧಾರಣಃ', 'ಏಷಾಂ ಲೋಕಾನಾಮಸಂಭೇದಾಯ', 'ಇವನೇ ಭೂತಾಧಿಪತಿಯು ಭೂತಪಾಲನು, ಭೂಲೋಕಾದಿಗಳ ರಕ್ಷಣೆಗಾಗಿ, ಅವುಗಳನ್ನು ಧಾರಣೆ ಮಾಡಿದವನು' ಇತ್ಯಾದಿಯಾಗಿ ಹೃದಯದಲ್ಲಿ ವಿಷ್ಣುವೇ ಇದ್ದಾನೆಂದು ಹೇಳಲಾಗಿದೆ. ಈ ಸಮಾಖ್ಯಾಪ್ರಮಾಣದ ಬಲದಿಂದ ಛಾಂದೋಗ್ಯದಲ್ಲಿ 'ಅಥ ಯ ಆತ್ಮಾ ಸ ಸೇತುರ್ವಿಧೃತಿಃ' ಎಂಬಲ್ಲಿಯೂ ಪ್ರತಿಪಾದ್ಯನಾಗುವನು ವಿಷ್ಣುವೇ ಆಗಿದ್ದಾನೆಂದು ನಿಶ್ಚಯವಾಗುತ್ತದೆ.

ಸಮಾಖ್ಯಾಶ್ರುತಿಯಷ್ಟೇ ಕಾರಣವಲ್ಲ

तत्वप्रकाशिका – नच वाच्यं समाख्याश्रुत्युक्तोऽपि कुतो विष्णुरिति । अस्मिन् सर्वेश्वरत्वादिविष्णुमहिम्नः श्रवणादेवेति भावः ।

ಸಮಾಖ್ಯಾಶ್ರುತಿ ಪ್ರತಿಪಾದ್ಯನಾದರೂ ವಿಷ್ಣುವೇ ಆಗಿದ್ದಾನೆಂದು ನಿಶ್ಚಯಿಸಲು ಹೇಗೆ ಸಾಧ್ಯ? ಎಂದು ಪ್ರಶ್ನಿಸಬಾರದು. ಏಕೆಂದರೆ ವಿಷ್ಣುವಿನ ಅಸಾಧಾರಣಧರ್ಮವೆನಿಸಿದ ಸರ್ವೇಶ್ವರತ್ವವೇ ಮೊದಲಾದ ಮಹಿಮೆಗಳು ಶ್ರುತವಾದ್ದರಿಂದ ಎಂದು ತಿಳಿಯಬೇಕು.

ಸರ್ವಾಧಾರತ್ವವು ವಿಷ್ಣುವಿನ ಅಸಾಧಾರಣಧರ್ಮ

तत्वप्रकाशिका – यदुक्तं हृत्पद्मस्थस्य सर्वाधारत्वश्रवणात् विष्णुरसाविति । तत्र सर्वाधारत्वं कुतो विष्णुत्वनिश्चायकमित्यत आह – एतस्मिन्निति ।।

ಹೃತ್ಪದ್ಮಸ್ಥನಲ್ಲಿ ಸರ್ವಾಧಾರತ್ವ ಧರ್ಮವು ಶ್ರುತವಾದ್ದರಿಂದ ವಿಷ್ಣುವೇ ಹೃತ್ಪದ್ಮಸ್ಥನೆಂದು ಹೇಳಿದಿರಿ, ಆದರೆ ಸರ್ವಾಧಾರತ್ವವು ವಿಷ್ಣುವಿನ ಅಸಾಧಾರಣಧರ್ಮವೆಂದು ಹೇಗೆ ನಿಶ್ಚಯಿಸುತ್ತೀರಿ? ಎಂಬ ಪ್ರಶ್ನೆಗೆ 'ಏತಸ್ಮಿನ್' ಎಂಬ ಶ್ರುತಿವಾಕ್ಯದಿಂದ ಉತ್ತರಿಸಿದ್ದಾರೆ.

ಅನೇಕ ಶ್ರುತಿವಾಕ್ಯಗಳು ವಿವಕ್ಷಿತ

तत्वप्रकाशिका – एतस्येति प्रतीकग्रहणेन बह्ववाक्यानि सूचयति ।

ಭಾಷ್ಯಕಾರರು 'ಏತಸ್ಯ ಅಕ್ಷರಸ್ಯ' ಎಂಬ ಶ್ರುತಿಯಲ್ಲಿರುವ 'ಏತಸ್ಯ' ಎಂಬ ಪದದ ಪ್ರತೀಕವನ್ನು ಸ್ವೀಕರಿಸಿದ್ದರಿಂದ ಅನೇಕ ಶ್ರುತಿವಾಕ್ಯಗಳನ್ನು ಸಂಗ್ರಹಿಸಿದ್ದಾರೆ.

ಸರ್ವೇಶ್ವರತ್ವಾದಿ ಮಹಿಮೆಗಳೆಲ್ಲವೂ ಹೇಗೆ ವಿಷ್ಣುತ್ವ ನಿಶ್ಚಾಯಕ ?

तत्वप्रकाशिका – ननु समाख्याश्रुत्युक्तः सर्वेश्वरत्वादिमहिमा कुतो विष्णुरित्यत आह – स हीति ।।

ಸಮಾಖ್ಯಾಶ್ರುತಿಯಲ್ಲಿ ಹೇಳಲ್ಪಟ್ಟ ಸರ್ವೇಶ್ವರತ್ವಾದಿ ಧರ್ಮಗಳೆಲ್ಲವೂ ವಿಷ್ಣುವಿನ ಮಹಿಮೆಯಾಗಿದೆ ಎಂದು ಹೇಗೆ ನಿಶ್ಚಯಿಸುತ್ತೀರಿ? ಎಂಬ ಪ್ರಶ್ನೆಗೆ 'ಸಹಿ' ಇತ್ಯಾದಿ ಭಾಷ್ಯದ ಮಾತಿನಿಂದ ಉತ್ತರಿಸಿದ್ದಾರೆ.

ಇತರರಲ್ಲಿ ಇಂಥ ಮಹಿಮೆ ಸರ್ವಥಾ ಇರುವುದಿಲ್ಲ

तत्वप्रकाशिका – विश्वमचेतनम् । विष्णोरिव अन्यस्यापि महिमा किं न स्यादित्यत आह – सर्वेश इति ।।

ವಿಶ್ವಂ ಎಂದರೆ ಅಚೇತನಪದಾರ್ಥ ಎಂದರ್ಥ. ಸರ್ವೇಶ್ವರತ್ವವೇ ಮೊದಲಾದ ಧರ್ಮಗಳು ವಿಷ್ಣುವಿನಲ್ಲಿರುವಂತೆ ಬೇರೆಯವರಲ್ಲಿ ಏಕಿರಬಾರದು? ಎಂಬ ಪ್ರಶ್ನೆಗೆ 'ಸರ್ವೇಶ' ಇತ್ಯಾದಿ ಭಾಷ್ಯದಿಂದ ಉತ್ತರಿಸಿದ್ದಾರೆ.

ಭಾವದೀಪ

'ಧೃತೇಶ್ಚ' ಎಂಬ ಸೂತ್ರದ ಭಾಗದ ವ್ಯಾಖ್ಯಾನ

भावदीपः – धृतेश्च महिम्नोऽस्यास्मिन्नुपलब्धेः ।।

हेत्वन्तरेणेति ।। सूत्रे ''च'' शब्दादिति भावः । भाष्ये वाजसनेयवाक्य-प्रतीकपूर्वम् अत्रत्यवाक्यस्योक्तेर्भावमग्रे विवृण्वानः स्वयमेतत्प्रकरणस्थ-छान्दोग्यवाक्यमुदाहृत्य ''धृतेः'' इत्यन्तभाष्यं व्याकुर्वन् 'धृतेश्च' इति सूत्रांशार्थमाह – अथ य इति ।।

ಟೀಕೆಯಲ್ಲಿ ಮತ್ತೊಂದು ಹೇತುವಿನಿಂದ ಹೃತ್ಪದ್ಮಸ್ಥಿತತ್ವ ಲಿಂಗವನ್ನು ವಿಷ್ಣುವಿನಲ್ಲಿ ಸಮರ್ಥಿಸಲಾಗಿದೆ ಎಂದು ಹೇಳಿದ್ದಾರೆ. ಸೂತ್ರದಲ್ಲಿರುವ ''ಚ'' ಶಬ್ದದ ಅರ್ಥವನ್ನೇ ಟೀಕೆಯಲ್ಲಿ ''ಹೇತ್ವಂತರೇಣ'' ಎಂಬ ಪದದಿಂದ ವ್ಯಾಖ್ಯಾನ ಮಾಡಿದ್ದಾರೆ.

ಭಾಷ್ಯದಲ್ಲಿ ಬೃಹದಾರಣ್ಯಕೋಪನಿಷತ್ತಿನ ವಾಕ್ಯದ ಪ್ರತೀಕಗ್ರಹಣ ಮಾಡುವ ಮೂಲಕ ಪ್ರಕೃತ ಛಾಂದೋಗ್ಯದ ವಾಕ್ಯವನ್ನು ಹೇಳಿದ್ದಾರೆ. ಇದಕ್ಕೆ ಕಾರಣವನ್ನು ಟೀಕಾಕಾರರು ಮುಂದೆ ವಿವರಿಸುತ್ತಾರೆ. ಈಗ ಛಾಂದೋಗ್ಯಪ್ರಕರಣದಲ್ಲಿರುವ ವಾಕ್ಯವನ್ನು ಸ್ವತಃ ತಾವೇ ಉದಾಹರಿಸಿ ''ಧೃತೇಃ'' ಎಂಬಲ್ಲಿಯ ತನಕ ಇರುವ ಭಾಷ್ಯವನ್ನು ವ್ಯಾಖ್ಯಾನ ಮಾಡುತ್ತಾ, 'ಧೃತೇಶ್ಚ' ಎಂಬ ಸೂತ್ರದ ಭಾಗವನ್ನೂ ಕೂಡ ವ್ಯಾಖ್ಯಾನ ಮಾಡುತ್ತಿದ್ದಾರೆ 'ಅಥ ಯಃ' ಇತ್ಯಾದಿ ಮಾತುಗಳಿಂದ.

'ಅಸ್ಮಿನ್‌ಬ್ರಹ್ಮಪುರೇ' ಎಂದು ಹೇಳದೇ 'ಏತಸ್ಮಿನ್' ಎಂದೇಕೆ ಹೇಳಿದರು ?

ಭಾವದೀಪಃ – ಭಾಷ್ಯಭಾವಮಾಹ – ಅತ್ರೇತಿ ।। ಉಪಸಙ್ಗ್ರಹಾರ್ಥಮಿತಿ ।। ವಿವರಿಷ್ಯತೇ ಚೈತದಗ್ರೇ ।। ಏವಮನ್ಯತ್ರಾಪೀತಿ ।। 'ಅತ ಏವ ಪ್ರಾಣಃ' ಇತ್ಯತ್ರ 'ಹ್ರೀಶ್ಚ ತೇ' ಇತಿ ವಕ್ತವ್ಯೇ .'ಶ್ರೀಶ್ಚ ತೇ' ಇತ್ಯುಕ್ತಿಃ । ತಥಾ 'ಪತ್ಯಾದಿಶಬ್ದೇಭ್ಯಃ' ಇತ್ಯತ್ರ 'ಸರ್ವಸ್ಯ ವಶೀ ಸರ್ವಸ್ಯೇಶಾನಃ' ಇತ್ಯೇವ ವಕ್ತವ್ಯೇ ''ಸರ್ವಸ್ಯಾಧಿಪತಿಃ'' ಇತ್ಯುಕ್ತಿಃ । ಅತ್ರೈವ ''ಅಸ್ಮಿನ್ ಬ್ರಹ್ಮಪುರೇ'' ಇತಿ ವಾಚ್ಯೇऽಪ್ಯೇತಸ್ಮಿನ್ನಿತಿ ವಾಕ್ಯೋಕ್ತಿಃ ।

ಭಾಷ್ಯದ ಅಭಿಪ್ರಾಯವನ್ನು 'ಅತ್ರ' ಇತ್ಯಾದಿ ಮಾತುಗಳಿಂದ ಸ್ಪಷ್ಟಪಡಿಸುತ್ತಿದ್ದಾರೆ. ''ಉಪಸಂಗ್ರಹಾರ್ಥ೦'' ಎಂಬ ವಾಕ್ಯದ ಅರ್ಥವನ್ನು ಮುಂದೆ ಸ್ಪಷ್ಟಪಡಿಸಲಾಗುತ್ತದೆ. ''ಏವಮನ್ಯತ್ರಾಪಿ'' ಎಂದರೆ 'ಅತ ಏವ ಪ್ರಾಣಃ' ಎಂಬ ಸೂತ್ರದಲ್ಲಿ 'ಹ್ರೀಶ್ಚ ತೇ'' ಎಂದು ಹೇಳುವ ಬದಲು 'ಶ್ರೀಶ್ಚ ತೇ' ಎಂದು ಹೇಳಿದ್ದಾರೋ ಅದರಂತೆ 'ಪತ್ಯಾದಿಶಬ್ದೇಭ್ಯಃ' ಎಂಬಲ್ಲಿ 'ಸರ್ವಸ್ಯ ವಶೀ ಸರ್ವಸ್ಯೇಶಾನಃ' ಎಂದು ಹೇಳುವ ಬದಲು 'ಸರ್ವಸ್ಯಾಧಿಪತಿಃ' ಎಂದು ಹೇಗೆ ಹೇಳಿದ್ದಾರೋ ಅದರಂತೆ ಇಲ್ಲಿ 'ಅಸ್ಮಿನ್ ಬ್ರಹ್ಮಪುರೇ' ಎಂದು ಹೇಳುವ ಬದಲು 'ಏತಸ್ಮಿನ್' ಎಂಬ ವಾಕ್ಯವನ್ನು ಹೇಳಿದ್ದಾರೆ.

ಟೀಕಾಕೃತ್ಪಾದರು ತತ್ತ್ವಪ್ರದೀಪವನ್ನು ಉಲ್ಲೇಖಿಸಿದ್ದಕ್ಕೆ ದಾಖಲೆ

ಭಾವದೀಪಃ – ಸಮಾನಜಾತೀಯಾನಾಂ ಶ್ರುತ್ಯನ್ತರಾಣಾಂ ಸಙ್ಗ್ರಹೋಪಲಕ್ಷಣಾರ್ಥಮೇತದಿತ್ಯಾದಿ ತತ್ತ್ವಪ್ರದೀಪೋಕ್ತೇಃ ''ಸಮ್ಪ್ರದಾಯವಿದಃ'' ಇತ್ಯುಕ್ತಮ್ । ಅಪೌನರುಕ್ತ್ಯಾಯಾऽಹ – ಧಾರಣಸಮರ್ಥ ಇತಿ ।।

ಒಂದೇ ತರಹ ಇರುವ ಬೇರೆ ಶ್ರುತಿಗಳನ್ನು ಉಪಲಕ್ಷಣಯಾ ಸಂಗ್ರಹ ಮಾಡಬೇಕೆಂದು ಹೀಗೆ ಹೇಳಿದ್ದಾರೆಂದು ತತ್ತ್ವಪ್ರದೀಪದಲ್ಲಿ ಸಮರ್ಥಿಸಿದ್ದಾರೆ. ತತ್ತ್ವಪ್ರದೀಪಕಾರರ ಈ ವ್ಯಾಖ್ಯಾನವನ್ನು ಮನಸ್ಸಿನಲ್ಲಿಟ್ಟುಕೊಂಡು ಟೀಕೆಯಲ್ಲಿ 'ಸಂಪ್ರದಾಯವಿದಃ' ಎಂದು ಹೇಳಿದ್ದಾರೆ. ಪುನರುಕ್ತಿದೋಷವನ್ನು ಪರಿಹರಿಸಲು ''ಧಾರಣಸಮರ್ಥ'' ಎಂಬ ಪದವು ಪ್ರಯುಕ್ತವಾಗಿದೆ.

ಛಾಂದೋಗ್ಯೋಪನಿಷತ್ತಿನ ವಾಕ್ಯಶೇಷವು ಗ್ರಾಹ್ಯ

ಭಾವದೀಪಃ – ಸೂತ್ರಖಣ್ಡಮವತಾರ್ಯ ವ್ಯಾಚಷ್ಟೇ – ನಚೇತಿ ।। ಅಸ್ಯ ಹೃತ್ಪದ್ಮಸ್ಥಸ್ಯ ಅಸ್ಮಿನ್ ''ಸ ಸೇತುಃ'' ಇತಿ ವಾಕ್ಯೇ ಅಪಹತಪಾಪ್ಮತ್ವರೂಪಮಹಿಮ್ನ ಉಪಲಬ್ಧೇಃ ಇತ್ಯರ್ಥಮ್ ಉಪೇತ್ಯ ಆಽಹ – ಯ ಆತ್ಮೇತಿ ।। ಭಾಷ್ಯೇ ''ಏಷ ಭೂತ'' ಇತ್ಯಾದಿ ವಾಜಸನೇಯವಾಕ್ಯಶೇಷೋಕ್ತಿಃ ''ಸರ್ವೇ ಪಾಪ್ಮಾನಃ'' ಇತಿ ಛಾನ್ದೋಗ್ಯ-ವಾಕ್ಯಶೇಷಸ್ಯಾಪ್ಯುಪಲಕ್ಷಣಮಿತಿ ಭಾವಃ ।

ಸೂತ್ರಖಂಡವನ್ನು ಅನುವಾದ ಮಾಡಿ ವ್ಯಾಖ್ಯಾನ ಮಾಡುತ್ತಿದ್ದಾರೆ 'ನಚ' ಇತ್ಯಾದಿ ವಾಕ್ಯದಿಂದ. 'ಅಸ್ಯ' ಎಂಬ ಪದಕ್ಕೆ ಹೃತ್ಪದ್ಮನಿಗೆ ಎಂದರ್ಥ. ಇವನಲ್ಲಿ 'ಸ ಸೇತುಃ' ಎಂಬ ವಾಕ್ಯದಲ್ಲಿ ಅಪಹತಪಾಪ್ಮತ್ವಾದಿ ಮಹಿಮೆಗಳನ್ನು ಹೇಳಿರುವುದರಿಂದ ಎಂಬುದನ್ನು ಅಂಗೀಕರಿಸಿ 'ಯ ಆತ್ಮಾ' ಇತ್ಯಾದಿ ವಾಕ್ಯಗಳು ಹೊರಟಿವೆ. ಭಾಷ್ಯದಲ್ಲಿ 'ಏಷ ಭೂತ' ಇತ್ಯಾದಿ ಬೃಹದಾರಣ್ಯಕದ ವಾಕ್ಯಶೇಷವನ್ನು ಹೇಳಿದ್ದರಿಂದ 'ಸರ್ವೇ ಪಾಪ್ಮಾನಃ' ಎಂಬ ಛಾಂದೋಗ್ಯೋಪನಿಷತ್ತಿನ ವಾಕ್ಯಶೇಷವನ್ನೂ ಕೂಡ ಉಪಲಕ್ಷಣಯಾ ಸ್ವೀಕರಿಸಬೇಕು.

ಟೀಕೆಯಲ್ಲಿ ಸಮಗ್ರ ವಿಷಯವಾಕ್ಯ

ಭಾವದೀಪಃ – ಇದಾನೀಂ ಸೂತ್ರಸ್ಯಾರ್ಥಾನ್ತರೋಕ್ತಿಪರತಯಾ ಭಾಷ್ಯಮವತಾರ್ಯ ಧೃತೇರಿತ್ಯನ್ತಂ ತಾತ್ಪರ್ಯತೋ ವ್ಯಾಚಷ್ಟೇ – ಸಮಾಖ್ಯಯೇತಿ ।। ವಾಜಸನೇಯಕ ಇತಿ ।। ಷಷ್ಠೇಽಧ್ಯಾಯೇ । ಭಾಷ್ಯೇ 'ಏಷ ಸೇತುಃ' ಇತಿ ಪ್ರತೀಕಮಾತ್ರೋಕ್ತೇಃ ಸ್ವಯಂ ಸಮಗ್ರಂ ಪಠತಿ – ಯ ಏಷ ಇತಿ।।

ಈಗ ಸೂತ್ರಕ್ಕೆ ಮತ್ತೊಂದು ಅರ್ಥವನ್ನು ಹೇಳುವ ಮೂಲಕ ಭಾಷ್ಯಕ್ಕೆ ಅವತಾರಿಕೆ ನೀಡಿ 'ಧೃತೇಃ' ಎಂಬಲ್ಲಿಯ ತನಕ ಇರುವ ತಾತ್ಪರ್ಯವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ 'ಸಮಾಖ್ಯಯಾ' ಇತ್ಯಾದಿ ವಾಕ್ಯಗಳಿಂದ. 'ವಾಜಸನೇಯಕೇ' ಎಂದು ಬೃಹದಾರಣ್ಯಕದ ಆರನೆಯ ಅಧ್ಯಾಯದಲ್ಲಿ ಎಂದರ್ಥ. ಭಾಷ್ಯದಲ್ಲಿ 'ಏಷ ಸೇತುಃ' ಎಂದಷ್ಟೇ ಪ್ರತೀಕಗ್ರಹಣ ಮಾಡಿದ್ದರಿಂದ ಟೀಕಾಕಾರರು ಸಮಗ್ರವಾಕ್ಯವನ್ನು ಪಠಿಸುತ್ತಿದ್ದಾರೆ 'ಯ ಏಷಃ' ಇತ್ಯಾದಿಯಾಗಿ.

'ಇತ್ಯಾದಿ' ಎಂಬುದು ವಿಭಕ್ತಿಯಿಲ್ಲದ ಪದ

भावदीपः – हृत्पद्मस्थत्वस्य तत्स्थाकाशस्थत्वेनैव इह अभिमतत्वाद् हृदये विष्णोरुक्तत्वेनेत्युक्तम् । ''एष भूत'' इत्यादि भाष्यशेषमवतार्य व्याचष्टे – नच वाच्यमिति ।। भाष्ये ''इत्यादि'' इति क्रियाविशेषणम् । सान्तमहत इत्यादाविवाविभक्तिकनिर्देशो वेति भावः ।।

'ಹೃತ್ಪದ್ಮಸ್ಥತ್ವ' ಎಂದರೆ ಹೃದಯಪದ್ಮದಲ್ಲಿರುವ ಆಕಾಶದಲ್ಲಿರುವಿಕೆ ಎಂಬ ಅರ್ಥವು ಇಲ್ಲಿ ವಿವಕ್ಷಿತ-ವಾಗಿರುವುದರಿಂದ 'ಹೃದಯೇ ವಿಷ್ಣೋರುಕ್ತತ್ವೇನ' ಎಂದು ಹೇಳಿದ್ದಾರೆ. 'ಏಷ ಭೂತಃ' ಇತ್ಯಾದಿ ಭಾಷ್ಯದ ಶೇಷವನ್ನು ಅವತಾರಿಕೆ ನೀಡಿ ವ್ಯಾಖ್ಯಾನ ಮಾಡುತ್ತಿದ್ದಾರೆ 'ನಚ ವಾಚ್ಯಂ' ಇತ್ಯಾದಿ ವಾಕ್ಯಗಳಿಂದ. ಭಾಷ್ಯದಲ್ಲಿ 'ಇತ್ಯಾದಿ' ಎಂಬುದು ಕ್ರಿಯಾವಿಶೇಷಣವಾಗಿದೆ. ಅಥವಾ 'ಸಾಂತಮಹತಃ' ಇತ್ಯಾದಿ ಸ್ಥಳಗಳಲ್ಲಿ ಹೇಗೋ ಹಾಗೆ ವಿಭಕ್ತಿ ಇಲ್ಲದ ಪದವಾಗಿದೆ ಎಂದು ತಿಳಿಯಬೇಕು.

ಆಕಾಶಪದಕ್ಕೆ ಚಿತ್‌ಪ್ರಕೃತಿ ಎಂದರ್ಥ

भावदीपः – यदुक्तमिति ।। 'स सेतुर्विधृतिः' इति वाक्यग्राहिणा धृतेश्चेति सूत्रखण्डेनेत्यर्थः ।। एतस्मिन्निति ।।

भाष्ये आकाश इति सर्वाधारतयोक्तचित्प्रकृतिरित्यर्थः ।। प्रतीकेति ।। 'एतस्य वा अक्षरस्य प्रशासने गार्गि सूर्याचन्द्रमसौ' 'एतस्य वा अक्षरस्य प्रशासने गार्गि द्यावापृथिव्यौ' इत्यादीनि बहुवाक्यानि सूचयतीत्यर्थः ।

'ಯದುಕ್ತಂ' ಎಂದರೆ 'ಸ ಸೇತುರ್ವಿಧೃತಿಃ' ಎಂಬ ವಾಕ್ಯವನ್ನು ವಿವಕ್ಷಿಸುವ 'ಧೃತೇಶ್ಚ' ಎಂಬ ಸೂತ್ರದ ಭಾಗದಿಂದ ಎಂದರ್ಥ. 'ಏತಸ್ಮಿನ್' ಎಂದರೆ ಭಾಷ್ಯದಲ್ಲಿ ಆಕಾಶ ಪದದಿಂದ ಸರ್ವಾಧಾರವಾದ ಚಿತ್‌ಪ್ರ ಕೃತಿ ಎಂದರ್ಥ.

ಭಾಷ್ಯದಲ್ಲಿ 'ಏತಸ್ಯ' ಎಂಬ ಪ್ರತೀಕದಿಂದ 'ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ ಸೂರ್ಯ-ಚಂದ್ರಮಸೌ' ಎಂಬ ವಾಕ್ಯವನ್ನು ಮತ್ತು 'ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ ದ್ಯಾವಾಪೃಥಿವ್ಯೌ' ಇವೇ ಮೊದಲಾದ ಅನೇಕ ವಾಕ್ಯಗಳು ವಿವಕ್ಷಿತವಾಗಿದೆ ಎಂದು ಸೂಚನೆ ಮಾಡಿದ್ದಾರೆ.

ಆತ್ಮ ಹಾಗೂ ಈಶ್ವರ ಎಂಬೆರಡು ಪದಗಳಿಗೆ ವೈಯರ್ಥ್ಯವಿಲ್ಲ

भावदीपः – 'आत्मेश्वरम्' इत्यस्यावैय्यर्थ्यायाऽह – विश्वमचेतनमिति।। 'आत्मा चेतन' इति भावः । 'नारायणं महाज्ञेयम्' इत्यग्रे नारायणपद सामानाधिकरण्याद् वैष्णवत्वमस्य सिद्धमिति भावः ।। १६ ।।

'ಆತ್ಮ' 'ಈಶ್ವರಂ' ಎಂಬೆರಡು ಪದಗಳಿಗೆ ವೈಯ್ಯರ್ಥ ಬರಬಾರದೆಂದು 'ವಿಶ್ವಮಚೇತನಂ' ಎಂದು ವ್ಯಾಖ್ಯಾನ ಮಾಡಿದ್ದಾರೆ. ಆತ್ಮಶಬ್ದದಿಂದ ಚೇತನರನ್ನು ವಿವಕ್ಷಿಸಬೇಕು. 'ನಾರಾಯಣಂ ಮಹಾಜ್ಞೇಯಂ ಎಂದು ಮುಂದೆ ನಾರಾಯಣಪದದಿಂದ ಸಾಮಾನಾಧಿಕರಣ್ಯವಿರುವುದರಿಂದ ವಿಷ್ಣುಪರವಾಗಿದೆಯೆಂದು ಪ್ರಸಿದ್ಧವಾಗಿದೆ ಎಂದು ತಿಳಿಯಬೇಕು.

ವಿಶೇಷವಿಚಾರ - 'ಧೃತೇಶ್ಚ ಮಹಿಮ್ನೋಸ್ಯಾಸ್ಮಿನ್ ಉಪಲಬ್ಧೇಃ' ಎಂಬುದು ಮೂರನೆಯ ಸೂತ್ರ. ಸೂತ್ರದಲ್ಲಿರುವ 'ಧೃತೇಃ' ಎಂಬ ಪದಕ್ಕೆ ಎರಡು ಅರ್ಥಗಳನ್ನು ತಿಳಿಯಬೇಕು. ಈ ಪ್ರಕರಣದಲ್ಲೇ ಶ್ರುತವಾದ ಧೃತಿರೂಪಲಿಂಗದಿಂದ ಎಂಬುದು ಮೊದಲನೆಯ ಅರ್ಥ. ಧೃತಿ ಪದ ಘಟಿತವಾದ ಸಮಾಖ್ಯಾಪ್ರಮಾಣವು ಬೇರೆ ಕಡೆ ಶ್ರುತವಾಗಿರುವುದರಿಂದ ಎಂಬುದು ಮತ್ತೊಂದು ಅರ್ಥ. ಛಾಂದೋಗ್ಯೋಪನಿಷತ್ತಿನಲ್ಲಿಯೇ ಹೃತ್ಪದ್ಮಸ್ಥನನ್ನು ಹೇಳುವಾಗ 'ಸ ಸೇತುರ್ವಿಧೃತಿಃ' ಎಂಬುದಾಗಿ ಸರ್ವಧಾರಣೆ ಎಂಬ ಲಿಂಗವು ಶ್ರುತವಾಗಿದೆ. ಮತ್ತು 'ಏಷ ಸೇತುರ್ವಿಧರಣೇ' ಎಂಬುದಾಗಿ ಧೃತಿಪದದಿಂದ ಕೂಡಿರುವಂತಹ 'ಯ ಏಷೋಽಂತಹೃದಯೇ ಆಕಾಶಸ್ತಸ್ಮಿನ್' ಎಂಬ ಬೃಹದಾರಣ್ಯಕಶ್ರುತಿಯ ಸಮಾಖ್ಯಾಪ್ರಮಾಣವನ್ನು ವಿವಕ್ಷಿಸಬೇಕು. ಆರಂಭದಲ್ಲಿ ಧೃತಿಯನ್ನು ಹೇಳಿ, ಅನಂತರ ಹೃದಯಪದಸ್ಥವಾದ ಆಕಾಶದಲ್ಲಿ ಪರಮಾತ್ಮನಿದ್ದಾನೆಂದು ಬೃಹದಾರಣ್ಯಕೋಪನಿಷತ್ತು ಹೇಳುತ್ತಿದೆ. ಹೀಗೆ ಒಂದೇ ಧೃತಿಪದದಿಂದ 'ಧೃತಿ' ಎಂಬ ಲಿಂಗ ಹಾಗೂ ಧೃತಿಪದಘಟಿತವಾದ ಸಮಾಖ್ಯಾಪ್ರಮಾಣ ಇದರೆಡರ ಬಲದಿಂದ ಹೃತ್ಪದ್ಮಸ್ಥನಾದವನು ಪರಮಾತ್ಮನೆಂದು ತಿಳಿಯಬೇಕು.

'ನಿರ್ಣೀತಸಮಾನೋಕ್ತಿಃ' ಎಂಬುದು ಸಮಾಖ್ಯಾಪ್ರಮಾಣದ ಲಕ್ಷಣ. ಬೃಹದಾರಣ್ಯಕೋಪನಿಷತ್ತು ವಿಷ್ಣುವಿಷಯಕವೆಂದು ನಿರ್ಣಯವಾಗಿದ್ದರೆ ಮಾತ್ರ ಅದನ್ನು ಸಮಾಖ್ಯಾಪ್ರಮಾಣವೆಂದು ಪರಿಗಣಿಸಬಹುದು. ಆದರೆ ಅದು ವಿಷ್ಣುವಿಷಯಕವೆಂದೇ ಹೇಗೆ ಹೇಳುವುದು ? ಎಂಬ ಪ್ರಶ್ನೆಗೆ 'ಅಸ್ಯ ಮಹಿಮ್ನಃ ಅಸ್ಮಿನ್ ಉಪಲಬ್ಧೇಃ' ಎಂಬ ಸೂತ್ರದ ಮುಂದಿನ ಭಾಗವು ಉತ್ತರಿಸುತ್ತಿದೆ. ಸಮಾಖ್ಯಾಪ್ರಮಾಣಕ್ಕೆ ವಿಷ್ಣುವಿಷಯಕತ್ವವನ್ನು

ಉಪಪಾದನೆ ಮಾಡುವುದಕ್ಕಾಗಿ 'ಮಹಿಮಾ' ಎಂಬ ವಿಷ್ಣುಲಿಂಗವು ಹೇಳಲ್ಪಟ್ಟಿದೆ. ಬೃಹದಾರಣ್ಯಕೋಪನಿಷತ್ತಿನಲ್ಲಿ ಅಸ್ಯ = ಭೂತಾಧಿಪತಿತ್ವಾದಿ ವಿಷ್ಣುವಿನ ಮಹಿಮೆಯನ್ನು, ಅಸ್ಮಿನ್ = ದಹರಾಕಾಶಸ್ಥವಾದ ವಸ್ತುವಿನಲ್ಲಿ, ಉಪಲಬ್ಧೇಶ್ಚ = ವಾಜಸನೇಯ ಶಾಖಾದಲ್ಲಿ ಉಪಲಬ್ಧವಾಗಿರುವುದೂ ಕೂಡ ಮತ್ತೊಂದು ಕಾರಣ. ಹೀಗೆ 'ಧೃತೇಶ್ಚ' ಎಂಬಲ್ಲಿರುವ 'ಚ' ಶಬ್ದವನ್ನು ಭಿನ್ನಕ್ರಮದಲ್ಲಿ ಯೋಜನೆ ಮಾಡಿ ಅನ್ವಯವನ್ನು ತಿಳಿಯಬೇಕು.

ಬ್ರಹ್ಮಸೂತ್ರ

'ಪ್ರಸಿದ್ಧೇಶ್ಚ' ಎಂಬ ಸೂತ್ರವ್ಯಾಖ್ಯಾನ

ब्रह्मसूत्रम् – प्रसिद्धेश्च ।। १७ ।।

ಸೂತ್ರಾರ್ಥ - ಮಹಾನಾರಾಯಣೋಪನಿಷತ್ತಿನಲ್ಲಿ 'ದಹ್ರಂ ವಿಪಾಪಂ' ಎಂಬುದಾಗಿ ವಿಷ್ಣುವೇ ಹೃದಯಪದ್ಮದಲ್ಲಿದ್ದಾನೆಂದು ಪ್ರಸಿದ್ಧವಾಗಿದೆ, ಆದ್ದರಿಂದಲೂ ಛಾಂದೋಗ್ಯದಲ್ಲಿ ಹೇಳಲ್ಪಟ್ಟ ಹೃದಯಪದ್ಮಸ್ಥನೂ ಸಹ ಮಹಾವಿಷ್ಣುವೇ ಆಗುತ್ತಾನೆ.

ಅರ್ಥ -- ।। ಪ್ರಸಿದ್ಧೇಶ್ಚ ।। , ಪ್ರಸಿದ್ಧೇಶ್ಚ = 'ದಹ್ರಂ ವಿಪಾಪ್ಮಂ' ಎಂಬ ಮಹಾನಾರಾಯಣೋಪನಿಷತ್ತಿನಲ್ಲಿ, ವಿಷ್ಣುವಿಗೆ ಹೃತ್ಪದ್ಮಸ್ಥತತ್ವವು ಪ್ರಸಿದ್ಧವಾಗಿರುವುದರಿಂದಲೂ ಸಹ ವಿಷ್ಣುವೇ ಹೃತ್ಪದ್ಮಸ್ಥನೆಂದು ನಿರ್ಣಯವಾಗುತ್ತದೆ.

ಬ್ರಹ್ಮಸೂತ್ರಭಾಷ್ಯ

'ದಹರಾಕಾಶಸ್ಥ' ವಿಷ್ಣುವೆಂಬುದು ಸುಪ್ರಸಿದ್ಧ

ब्रह्मसूत्रभाष्यम् – ।। प्रसिद्धेश्च ।।

'तत्रापि दहं गगनं विशोकस्तस्मिन् यदन्तस्तदुपासितव्यम्' (महाना. १०-७.) इति प्रसिद्धेश्च ।।

ಅನುವಾದ - ವಿಷ್ಣುವೇ ಹೃತ್ಪದ್ಮಸ್ಥನಾಗಿದ್ದಾನೆನ್ನಲು, ಇನ್ನೂ ಅನೇಕ ಶ್ರುತಿಗಳು ಪ್ರಸಿದ್ಧವಾಗಿವೆ - 'ತತ್ರಾಪಿ ದಹ್ರಂ' ಇತ್ಯಾದಿ ಶ್ರುತಿಯಲ್ಲಿ ವಿಷ್ಣುವೇ ಹೃದಯಾಕಾಶದಲ್ಲಿದ್ದಾನೆಂದು ಪ್ರಸಿದ್ಧವಾಗಿದೆ.

ಪ್ರತಿಪದಾರ್ಥ -- ಸಮಾಖ್ಯಾರೂಪವಾದ ಮತ್ತೊಂದು ಶ್ರುತಿಯಿಂದ, ವಿಷ್ಣುವೇ ಹೃತ್ಪದ್ಮಸ್ಥನಾಗಿದ್ದಾನೆಂದು ಸಮರ್ಥಿಸಲು ಸೂತ್ರವನ್ನು ಪಠಿಸಿ, ವ್ಯಾಖ್ಯಾನಿಸುತ್ತಿದ್ದಾರೆ.

ತತ್ರಾಪಿ = ಹೃದಯ ಕಮಲದಲ್ಲಿ, ದಹ್ರಂ ಗಗನಂ = ಸೂಕ್ಷ್ಮವಾದ ಆಕಾಶವು, ತಸ್ಮಿನ್ = ಆ ಸೂಕ್ಷ್ಮಾಕಾಶದ ಒಳಗಡೆ , ವಿಶೋಕಃ = ಶೋಕವಿಲ್ಲದ ವಸ್ತು, ಯತ್ = ಯಾವುದಿದೆಯೋ, ತತ್ = ಆ ವಸ್ತುವು, ಉಪಾಸಿತವ್ಯಮ್ = ಬ್ರಹ್ಮನೆಂದು ಉಪಾಸಿಸಲ್ಪಡಬೇಕು, ಇತಿ = ಹೀಗೆ, ಪ್ರಸಿದ್ಧೇಶ್ಚ = ಪ್ರಸಿದ್ಧಿ ಇರುವುದರಿಂದಲೂ ಸಹ.

ಸುಷಿರಶ್ರುತಿ ವಿರೋಧವಿಲ್ಲ

ब्रह्मसूत्रभाष्यम् – तदन्तस्स्थत्वापेक्षत्वान्न सुषिरश्रुतिविरोधः ।।

ಅನುವಾದ - ಸುಷಿರಾಂತರ್ಗತ ವಿಷ್ಣುವನ್ನು ವಿವಕ್ಷಿಸಿದ್ದರಿಂದ ಸುಷಿರಶ್ರುತಿವಿರೋಧವೂ ಸಹ ಬರುವುದಿಲ್ಲ.

ಪ್ರತಿಪದಾರ್ಥ -- ಹೃತ್ಪದ್ಮದಲ್ಲಿರುವವನು ವಿಷ್ಣುವೆಂದು ಅಂಗೀಕರಿಸಿದರೆ, ಸುಷಿರಶ್ರುತಿಯ ವಿರೋಧ ಬರುತ್ತದಲ್ಲವೆ ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ. ತದಂತಃಸ್ಥತ್ವಾಪೇಕ್ಷತ್ವಾತ್ = ಒಳಗಿನ ಭಗವದ್ ರೂಪದ ಉದ್ದೇಶವಿರುವುದರಿಂದ, ನ ಸುಷಿರಶ್ರುತಿವಿರೋಧಃ = ಛಿದ್ರಬೋಧಕವಾದ ಸುಷಿರಶ್ರುತಿಯ ವಿರೋಧವೂ ಸಹ ಬರುವುದಿಲ್ಲ.

ಸತ್ತರ್ಕದೀಪಾವಳಿ

ದಹರಾಕಾಶದಲ್ಲಿರುವ ವಿಷ್ಣುವನ್ನೇ ಉಪಾಸನೆ ಮಾಡಬೇಕು

सत्तर्कदीपावलिः – प्रसिद्धेश्च ।। १-२-१७ ।।

'तस्मिन्यदन्तस्तदन्वेष्टव्यं तद्वाव विजिज्ञासितव्यम्' इति दहराकाश-स्थितस्योपास्यत्वेन श्रवणादत्र विष्णुरेव प्रतिपाद्यते ।

'ತಸ್ಮಿನ್ ಯದಂತಸ್ತದನ್ವೇಷ್ಟವ್ಯಂ ತದ್ವಾವ ವಿಜಿಜ್ಞಾಸಿತವ್ಯಮ್' ಎಂಬ ಶ್ರುತಿಯಲ್ಲಿ ದಹರಾಕಾಶದಲ್ಲಿರುವವನನ್ನು ಉಪಾಸನೆ ಮಾಡಬೇಕೆಂದು ಶ್ರುತವಾಗಿದೆ. ಆದ್ದರಿಂದಲೂ ಇಲ್ಲಿ ಪ್ರತಿಪಾದ್ಯನಾದವನು ವಿಷ್ಣುವೇ ಆಗಿದ್ದಾನೆ.

'ದಹರಂ ವಿಪಾಪ್ಮಂ' ಎಂಬ ಶ್ರುತಿ

सत्तर्कदीपावलिः – तथाहि श्रुत्यन्तरम् ।

'दहरं विपाप्मं परवेश्मभूतं, यत्पुण्डरीकं पुरमध्यसंस्थम् ।
तत्रापि दहं गगनं विशोकः तस्मिन्यदन्तस्तदुपासितव्यम् ।
सहस्रशीर्षं देवम् इति ।

तदाह प्रसिद्धेरित्यादिना ।

ಇದೇ ವಿಷಯದಲ್ಲಿ ಶ್ರುತ್ಯಂತರವೂ ಪ್ರಮಾಣವಾಗಿದೆ -

'ದಹರಂ ವಿಪಾಪ್ಮಂ ಪರವೇಶ್ಮಭೂತಂ ಯತ್ಪುಂಡರೀಕಂ ಪುರಮಧ್ಯಸಂಸ್ಥಮ್ ।
ತತ್ರಾಪಿ ದಹ್ರಂ ಗಗನಂ ವಿಶೋಕಃ ತಸ್ಮಿನ್ ಯದಂತಸ್ತದುಪಾಸಿತವ್ಯಮ್ ।
ಸಹಸ್ರಶೀರ್ಷಂ ದೇವಮ್'

ಇತ್ಯಾದಿ ಶ್ರುತಿಯಲ್ಲಿ ಹೃದಯಪುಂಡರೀಕದಲ್ಲಿರುವವನು ವಿಷ್ಣುವೇ ಆಗಿದ್ದಾನೆಂದು ಪ್ರಸಿದ್ಧವಾಗಿದೆ. ಇದನ್ನು 'ಪ್ರಸಿದ್ಧೇಃ' ಎಂದು ಹೇಳಿದ್ದಾರೆ.

ಸರ್ವಾಧಾರತ್ವ ಹೇಳುವ ಸುಷಿರಶ್ರುತಿಗೆ ವಿರೋಧವಿಲ್ಲ

सत्तर्कदीपावलिः – यदुक्तं तस्यान्ते सुषिरमिति तत्राह तदन्तरिति । यथा भाण्डान्तःस्थमपि गृहस्थमित्युच्यते एवं सुषिरस्थितविष्णावेव सर्वं प्रतिष्ठितमिति ज्ञातव्यम् । सुषिरस्य सर्वाधारत्वविरोधादित्यर्थः ।

'तस्यान्ते सुषिरं' ಎಂಬ ಶ್ರುತಿಯಲ್ಲಿಯೂ ವಿಷ್ಣುವೇ ಪ್ರತಿಪಾದ್ಯನೆಂದು 'ತದಂತಃ' ಎಂಬುದರಿಂದ ಹೇಳಿದ್ದಾರೆ. ಯಾವರೀತಿಯಾಗಿ ಪಾತ್ರೆಯ ಒಳಗೆ ಇರುವ ವಸ್ತುವನ್ನು ಮನೆಯಲ್ಲಿದೆ ಎಂದೂ ಹೇಳುತ್ತಾರೋ ಅದರಂತೆ ಸುಷಿರದಲ್ಲಿರುವ ವಿಷ್ಣುವಿನಲ್ಲೇ ಎಲ್ಲವೂ ಇರುತ್ತದೆ ಎಂದು ತಿಳಿಯಬೇಕು. ಆದ್ದರಿಂದ ಸುಷಿರಕ್ಕೆ ಸರ್ವಾಧಾರತ್ವವನ್ನು ಹೇಳುವ ಶ್ರುತಿಯ ವಿರೋಧವೂ ಕೂಡ ಬರುವುದಿಲ್ಲ.

ತತ್ವಪ್ರದೀಪ

ಮಹಾನಾರಾಯಣೋಪನಿಷತ್ತಿನಲ್ಲಿ ಸ್ಪಷ್ಟವಾದ ವಚನ

तत्वप्रदीपः –

''दहं विपाप्मं परवेश्मभूतं यत्पुण्डरीकं पुरमध्यसंस्थम् ।
तत्रापि दहं गगनं विशोकस्तस्मिन् यदन्तस्तदुपासितव्यं''

''सहस्रशीर्षं देवम्'' इति श्रुत्यन्तरे दहरगगनान्तर्गतस्य नारायणत्वप्रसिद्धेश्च । तस्मिन् गगने यद्विशोकस्तदुपासितव्यमित्यन्वयः । लिङ्गव्यत्यासस्तस्य पुरुषत्वज्ञापनार्थः ।

'ದಹ್ರಂ ವಿಪಾಪ್ಮಂ ಪರವೇಶ್ಮಭೂತಂ ಯತ್ಪುಂಡರೀಕಂ ಪುರಮಧ್ಯಸಂಸ್ಥಮ್ ।
ತತ್ರಾಪಿ ದಹ್ರಂ ಗಗನಂ ವಿಶೋಕಸ್ತಸ್ಮಿನ್ಯದಂತಸ್ತದುಪಾಸಿತವ್ಯಂ ॥

'ದೇಹವೆಂಬ ಪಟ್ಟಣದಲ್ಲಿ ಹೃದಯವೆಂಬ ಅರಮನೆಯಿದೆ. ಅದರಲ್ಲೊಂದು ಕಮಲವಿದೆ. ಅದರಲ್ಲಿ ಪುಟ್ಟ ಆಕಾಶವಿದೆ. ಅಲ್ಲಿ ಪಾಪರಹಿತನಾದ ಪುರುಷನು ನೆಲೆಸಿದ್ದಾನೆ. ಅವನನ್ನೇ ಉಪಾಸನೆ ಮಾಡಬೇಕು'

ಇತ್ಯಾದಿಯಾಗಿ ಮಹಾನಾರಾಯಣೋಪನಿಷತ್ತು ದಹರಾಕಾಶದಲ್ಲಿ ನೆಲೆಸಿರುವನು ವಿಷ್ಣುವೆಂದು ಹೇಳುತ್ತಿದೆ. ಮತ್ತು 'ಸಹಸ್ರಶೀರ್ಷಂ ದೇವಂ' ಎಂಬ ಇನ್ನೊಂದು ಶ್ರುತಿಯಲ್ಲಿ ದಹರಗಗನದಲ್ಲಿ ಅಂತರ್ಯಾಮಿಯಾಗಿರುವನು ನಾರಾಯಣನಾಗಿದ್ದಾನೆಂಬ ಪ್ರಸಿದ್ಧಿಯಿದೆ. ಮಹಾನಾರಾಯಣೋಪನಿಷತ್ತಿನಲ್ಲಿರುವ ವಾಕ್ಯಕ್ಕೆ ತಸ್ಮಿನ್ = ಗಗನದಲ್ಲಿ, ಯದ್ವಿಶೋಕಃ = ಯಾರು ಶೋಕ ರಹಿತನಾಗಿದ್ದಾನೋ, ತದುಪಾಸಿತವ್ಯಂ = ಅವನನ್ನೇ ಉಪಾಸನೆ ಮಾಡಬೇಕು ಎಂಬುದಾಗಿ ಅನ್ವಯಕ್ರಮವನ್ನು ತಿಳಿಯಬೇಕು.

'ವಿಶೋಕಃ' ಎಂಬಲ್ಲಿ ಲಿಂಗವ್ಯತ್ಯಾಸವನ್ನು ಮಾಡಿರುವುದಕ್ಕೆ 'ಅಲ್ಲಿ ನೆಲೆಸಿರುವವನು ಪುರುಷನೇ ಆಗಿದ್ದಾನೆ' ಎಂದು ತಿಳಿಸುವುದೇ ಆಗಿದೆ.

ಲಿಂಗವ್ಯತ್ಯಾಸಕ್ಕೆ ಎರಡು ಕಾರಣ

तत्वप्रदीपः – ''एष म आत्माऽपहतपाप्मा विजरो विमृत्युर्विशोकः'' इत्यादावुदितगुणानामधिकरणैक्यबलेन सन्निधीयमानानामनुकर्षणार्थः ।

'ಏಷ ಮ ಆತ್ಮಾಽಪಹತಪಾಪ್ಮಾ ವಿಜರೋ ಮಿಮೃತ್ಯುರ್ವಿಶೋಕಃ' 'ಈ ಆತ್ಮನು ಪಾಪರಹಿತನಾಗಿದ್ದಾನೆ. ಜರಾಮರಣಾದಿರಹಿತನಾಗಿ ದುಃಖದೂರನಾಗಿದ್ದಾನೆ' ಇತ್ಯಾದಿಯಾಗಿ ಹೇಳಲ್ಪಟ್ಟ ಗುಣಗಳಿಗೆ ಅಧಿಕರಣನಾದ ಪುರುಷನಿಂದ ಐಕ್ಯವಿರುತ್ತದೆ. ಆದ್ದರಿಂದ ಸನ್ನಿಹಿತವಾದ ಈ ಗುಣಗಳನ್ನೂ ಕೂಡ ಅನುಕರ್ಷಣೆ ಮಾಡುವುದು ಲಿಂಗವ್ಯತ್ಯಾಸದ ಮತ್ತೊಂದು ಪ್ರಯೋಜನ.

ಪಾಠಾಂತರದ ಬಗ್ಗೆ - ಮುದ್ರಿತ ಪುಸ್ತಕಗಳಲ್ಲಿ 'ಸನ್ನಿಧೀಯಮಾನಾನಾಮನುಕರ್ಷಣೀಯಾರ್ಥಃ ಚಕಾರಃ' ಎಂದು ತತ್ವಪ್ರದೀಪದಲ್ಲಿ ಪಾಠವಿದೆ. ಆದರೆ ಚಕಾರಃ ಎಂಬ ಪಾಠವು ಅಪ್ರಾಮಾಣಿಕವಾದದ್ದು. ಭಾಷ್ಯದೀಪಿಕಾದಲ್ಲಿಯೂ ಸಹ ತತ್ವಪ್ರದೀಪದ ಈ ವಾಕ್ಯವನ್ನು

ಉಲ್ಲೇಖ ಮಾಡುವಾಗ 'ಸನ್ನಿಧೀಯಮಾನಾನಾಮನುಕರ್ಷಣೀಯಾರ್ಥಃ' ಎಂದಷ್ಟೇ ಹೇಳಿರುತ್ತಾರೆ. ಆದ್ದರಿಂದ ಸೂತ್ರದಲ್ಲಿರುವ ಚಕಾರದ ಬಗ್ಗೆ ಸಾರ್ಥಕ್ಯವನ್ನು ಹೇಳಲು ಈ ವಾಕ್ಯವು ಹೊರಟಿಲ್ಲ. ಹೊರತಾಗಿ, ಲಿಂಗವ್ಯತ್ಯಾಸ ಮಾಡಲು ಮತ್ತೊಂದು ಪ್ರಯೋಜನವನ್ನು ಹೇಳಲು ಈ ವಾಕ್ಯ ಹೊರಟಿದೆ. ಆದ್ದರಿಂದ 'ವಿಶೋಕಃ' ಎಂಬುದಾಗಿ ಲಿಂಗವ್ಯತ್ಯಾಸಕ್ಕೆ ಒಟ್ಟು ಎರಡು ಕಾರಣ.

೧. ಪುರುಷತ್ವಜ್ಞಾಪನೆ ಮಾಡುವುದು.

೨. ಪ್ರಸಕ್ತವಾದ ಗುಣಗಳನ್ನು ಅನುಕರ್ಷಣೆ ಮಾಡುವುದು.

ಮಂದಿರೇ ಮಣಿಮಾಲಾನ್ಯಾಯದಿಂದ ವ್ಯಾಖ್ಯಾನಿಸಬೇಕು

तत्वप्रदीपः – यत्तूक्तं हृत्पद्मसूक्ष्मसुषिरे सर्वप्रतिष्ठाश्रुतेस्तस्यैव सर्वाधारत्वमिति, तत्रोच्यते - तदन्तस्थापेक्षत्वादिति । सुषिरान्तस्थ-परमात्मापेक्षत्वात् सुषिरे सर्वप्रतिष्ठाश्रुतेर्न विरोधः । यथा मन्दिरस्थ-मञ्जूषान्तर्गतमपि मन्दिरस्थमिति सङ्गीर्यते, एवमिहापि ।।

ಹೃತ್ಪದ್ಮದಲ್ಲಿರುವ ಸೂಕ್ಷ್ಮವಾದ ಸುಷಿರದಲ್ಲಿ ಎಲ್ಲವೂ ಆಶ್ರಿತವಾಗಿವೆ ಎಂಬುದಾಗಿ ಶ್ರುತಿ ಹೇಳುತ್ತಿರುವುದರಿಂದ ಮಹಾವಿಷ್ಣುವೇ ಸರ್ವಕ್ಕೂ ಆಧಾರನಾಗಿದ್ದಾನೆಂದು ಹೇಗೆ ಹೇಳುವಿರಿ? ಎಂಬ ಪ್ರಶ್ನೆಗೆ 'ತದಂತಸ್ಥಾಪೇಕ್ಷತ್ವಾತ್' ಎಂಬುದಾಗಿ ಉತ್ತರವನ್ನು ನೀಡುತ್ತಿದ್ದಾರೆ. ಸುಷಿರವು ಸಕಲಕ್ಕೂ ಆಧಾರವಾಗಲು ಸುಷಿರದ ಅಂತರ್ಯಾಮಿಯಾದ ಪರಮಾತ್ಮನನ್ನೇ ಅಪೇಕ್ಷಿಸುತ್ತದೆ. ಆದ್ದರಿಂದ ಪರಮಾತ್ಮನನ್ನು ಅಪೇಕ್ಷಿಸಿ, ಸುಷಿರವು ಸಕಲಕ್ಕೂ ಆಧಾರವಾಗಿದೆ ಎಂದು ವ್ಯಾಖ್ಯಾನ ಮಾಡಿದಾಗ ಯಾವುದೇ ವಿರೋಧಕ್ಕೆ ಅವಕಾಶವಿಲ್ಲ. ಮನೆಯಲ್ಲಿರುವ ಪೆಟ್ಟಿಗೆಯಲ್ಲಿ ಮಣಿಮಾಲೆಯಿದ್ದಾಗ ಮನೆಯಲ್ಲಿ ಮಣಿಮಾಲೆ ಇದೆ' ಎಂದು ವ್ಯವಹರಿಸುವಂತೆ ಇಲ್ಲಿಯೂ ಕೂಡ ವ್ಯಾಖ್ಯಾನ ಮಾಡಬೇಕು.

ವಿವರಣೆ - 'ತಸ್ಯಾಂತೇ ಸುಷಿರಂ' ಎಂಬ ಶ್ರುತಿಯು 'ಹೃದಯಪದ್ಮದಲ್ಲಿ ಆಕಾಶವಿದೆ' ಎಂದು ಹೇಳುತ್ತಿದೆ. ಆದ್ದರಿಂದ ಹೃದಯಪದ್ಮದಲ್ಲಿ ಪರಮಾತ್ಮನಿದ್ದಾನೆಂಬ ಸಮರ್ಥನೆಗೆ

ಈ ಶ್ರುತಿಯ ವಿರೋಧ ಅನಿವಾರ್ಯ. ಮತ್ತು ಹೃದಯಪದ್ಮದಲ್ಲಿ ಸುಷಿರವಿದೆ ಎಂದು ಹೇಳುತ್ತಿರುವುದರಿಂದ ವಿಷ್ಣುವು ಇದ್ದಾನೆಂದು ಹೇಳುವುದು ತಪ್ಪಾಗುತ್ತದೆ. ಒಂದು ವೇಳೆ ಆಕಾಶಶಬ್ದಕ್ಕೆ ವಿಷ್ಣುವೆಂದು ವ್ಯಾಖ್ಯಾನ ಮಾಡಿದರೂ ಕೂಡ 'ತಸ್ಯಾಂತೇ ಸುಷಿರಂ ಸೂಕ್ಷ್ಮಂ ತಸ್ಮಿನ್ ಸರ್ವಂ ಪ್ರತಿಷ್ಠಿತಂ' ಎಂಬುದಾಗಿ ಆ ಸುಷಿರವೇ ಸಕಲಕ್ಕೂ ಆಧಾರವಾಗಿದೆ ಎಂದು ಹೇಳುವ ಶ್ರುತಿಗೆ ವಿರೋಧ ಬರುತ್ತದೆ. ಆದ್ದರಿಂದ ಸುಷಿರದಲ್ಲಿರುವ ವಿಷ್ಣುವೇ ಸರ್ವಾಧಾರನೆಂದು ಹೇಳುವುದು ಅಯುಕ್ತವಾಗಿದೆ. ಈ ಪ್ರಶ್ನೆಗೆ ಪ್ರಕೃತ ಉತ್ತರಿಸುತ್ತಿದ್ದಾರೆ.

ದೇಹವು ಪಟ್ಟಣ, ಹೃದಯವು ಅರಮನೆ, ಅದರಲ್ಲೊಂದು ಕಮಲ, ಅದರಲ್ಲಿ ಆಕಾಶ, ಅದರಲ್ಲಿ ವಿಷ್ಣು, ಅವನಲ್ಲಿ ಸಕಲ ಲೋಕಗಳು, ಸೂರ್ಯ-ಚಂದ್ರರು, ಭೂಮಿ-ಆಕಾಶಗಳು ನೆಲೆಸಿವೆ ಎಂದು ಹೇಳುವುದೇ ಉಪನಿಷತ್ತಿನ ಪ್ರಧಾನ ಉದ್ದೇಶ. ಹಾಗಾದರೆ ಸುಷಿರದಲ್ಲಿ ಎಲ್ಲವೂ ಇದೆ ಎಂದೇಕೆ ಶ್ರುತಿಯು ಹೇಳುತ್ತಿದೆ ? ಎಂದು ಪ್ರಶ್ನಿಸಬಹುದು. ಶ್ರುತಿಯ ಅಭಿಪ್ರಾಯವಿಷ್ಟೇ - ''ನಮ್ಮ ಮನೆಯಲ್ಲಿ ಮಣಿಮಾಲೆಯಿದೆ'' ಎಂಬ ವಾಕ್ಯಪ್ರಯೋಗವನ್ನು ನಾವು ಕೇಳಿದ್ದೇವೆ. ಇದರ ಅಭಿಪ್ರಾಯ - ಮನೆಯ ಒಳಗಿರುವ ಪೆಟ್ಟಿಗೆಯಲ್ಲಿ ಮಣಿಮಾಲೆಯಿದೆ ಎಂದು. ಅದರಂತೆ ಹೃದಯಾಕಾಶದಲ್ಲಿ ಎಲ್ಲವೂ ಇದೆ ಎಂಬ ಮಾತಿಗೆ ಹೃದಯಾಕಾಶದಲ್ಲಿರುವ ಮಹಾವಿಷ್ಣುವಿನಲ್ಲಿ ಎಲ್ಲವೂ ಇದೆ ಎಂದೇ ಆಗಿರುತ್ತದೆ. ಆದ್ದರಿಂದ ಸುಷಿರಶ್ರುತಿಗೆ ವಿರೋಧ ಬರುವುದಿಲ್ಲ ಎಂಬುದಾಗಿ ಪಂಡಿತಾಚಾರ್ಯರು ದೃಷ್ಟಾಂತಪುರಸ್ಸರವಾಗಿ ಸಮರ್ಥನೆ ಮಾಡಿದ್ದಾರೆ.

'ತದಂತಸ್ಥಾಪೇಕ್ಷತ್ವಾತ್' ಎಂಬ ಭಾಷ್ಯವಾಕ್ಯದಿಂದ ಮೇಲೆ ಹೇಳಿದ ಸಮಾಧಾನವನ್ನು ಭಾಷ್ಯಕಾರರು ನೀಡಿರುತ್ತಾರೆ. ಸುಷಿರವು ಸಕಲಕ್ಕೂ ಆಧಾರವಾಗಿದೆ ಎಂಬ ಶ್ರುತಿಯು ಸುಷಿರದ ಅಂತಸ್ಥನಾದ ಪರಮಾತ್ಮನು ಸಕಲಕ್ಕೂ ಆಧಾರನಾಗಿದ್ದಾನೆ ಎಂದು ಅಭಿಪ್ರಾಯವನ್ನು ವಿವಕ್ಷಿಸಬೇಕು. ಆಗ ಸುಷಿರಶ್ರುತಿಗೆ ವಿರೋಧ ಬರುವುದಿಲ್ಲ ಎಂದು.

ತತ್ವಪ್ರಕಾಶಿಕಾ

ಹೃತ್ಪದ್ಮಸ್ಥನಾದವನು ವಿಷ್ಣುವೆನ್ನಲು ಮತ್ತೊಂದು ಯುಕ್ತಿ

तत्वप्रकाशिका – प्रसिद्धेश्च ।। १-२-१७ ।।

युक्त्यन्तरेण विष्णोः हृत्पद्मस्थत्वसाधकं सूत्रं पठित्वा व्याचष्टे – प्रसिद्धेश्चेति ।।

ಮತ್ತೊಂದು ಯುಕ್ತಿಯಿಂದ ವಿಷ್ಣುವೇ ಹೃತ್ಪದ್ಮಸ್ಥನಾಗಿದ್ದಾನೆಂಬುದನ್ನು ಸಾಧಿಸುವ ಸೂತ್ರವನ್ನು ಪಠಿಸುತ್ತಾ ವ್ಯಾಖ್ಯಾನ ಮಾಡುತ್ತಿದ್ದಾರೆ 'ಪ್ರಸಿದ್ಧೇಶ್ಚ' ಇತ್ಯಾದಿಯಾಗಿ.

ವಿಷ್ಣುವು ಹೃತ್ಪದ್ಮಸ್ಥನಾಗಿದ್ದಾನೆಂಬುದು ಪ್ರಸಿದ್ಧವಾಗಿದೆ

तत्वप्रकाशिका – 'दहरं विपापं परवेश्मभूतं यत्पुण्डरीकं पुरमध्यसंस्थम्। तत्रापि दहम् इति विष्णोः हृत्पद्मस्थत्वप्रसिद्धेश्च स एव हृत्पद्मस्थ इत्यर्थः ।

'ದಹರಂ ವಿಪಾಪಂ ಪರವೇಶ್ಮಭೂತಂ ಯತ್ಪುಂಡರೀಕಂ ಪುರಮಧ್ಯಸಂಸ್ಥಮ್ । ತತ್ರಾಪಿ ದಹ್ರಮ್' ಎಂಬುದಾಗಿ ವಿಷ್ಣುವಿನಲ್ಲಿ ಹೃತ್ಪದ್ಮಸ್ಥವು ಪ್ರಸಿದ್ಧವಾಗಿರುವುದರಿಂದಲೂ ಸಹ ವಿಷ್ಣುವೇ ಹೃತ್ಪದ್ಮಸ್ಥನಾಗಿದ್ದಾನೆ ಎಂದು ಸೂತ್ರದ ಅರ್ಥ.

ಸುಷಿರಶ್ರುತಿ ವಿರೋಧವು ಇರುವುದಿಲ್ಲ

तत्वप्रकाशिका – 'दहरोऽस्मिन्नन्तर आकाशः' इति हृत्पद्मस्थाकाशो विष्णुरित्यभ्युपगमे सुषिरश्रुतिविरोध इत्येतदनेनैव निरस्तं भवति ।

'ದಹರೋಽಸ್ಮಿನ್ನಂತರ ಆಕಾಶಃ' ಎಂಬ ಹೃತ್ಪದ್ಮದಲ್ಲಿರುವ ಆಕಾಶವನ್ನು ವಿಷ್ಣುವೆಂದು ಅಂಗೀಕಾರ ಮಾಡಿದರೆ, ಸುಷಿರಶ್ರುತಿಯ ವಿರೋಧ ಬರುತ್ತದೆ ಅಲ್ಲವೆ? ಎಂಬ ಶಂಕೆಯನ್ನು ಇದರಿಂದಲೇ ನಿರಾಸ ಮಾಡಿದಂತಾಯಿತು.

ಶ್ರುತ್ಯರ್ಥ

तत्वप्रकाशिका – 'पुण्डरीके दहरं गगनं तस्मिन् विशोकं ब्रह्मम्' इत्यभ्युपगमात्।

ಹೃದಯಪುಂಡರೀಕದಲ್ಲಿ ಸಣ್ಣದಾದ ಆಕಾಶ = ಪ್ರದೇಶವಿದೆ. ಅದರಲ್ಲಿ ಶೋಕರಹಿತನಾದ ಬ್ರಹ್ಮನಿದ್ದಾನೆಂದು ಅಂಗೀಕರಿಸಿರುವುದರಿಂದ.

'ದಿವ್ಯೇ ಬ್ರಹ್ಮಪುರೇ' ಎಂಬ ಶ್ರುತಿಯು ಇದನ್ನು ಹೇಳಿದೆ

तत्वप्रकाशिका – 'दिव्ये ब्रह्मपुरे ह्येष व्योम्न्यात्मा सम्प्रतिष्ठितः' ।'य एषोऽन्तर्हृदय आकाशस्तस्मिन्नयं पुरुषः' इत्यादेश्च ।

'ದಿವ್ಯವಾದ ಪರಮಾತ್ಮನ ಸ್ಥಾನವೆನಿಸಿದ, ಬ್ರಹ್ಮಪುರವೆನಿಸಿದ ಹೃತ್‌ಕಮಲದಲ್ಲಿರುವ ಆಕಾಶದಲ್ಲಿ ಪರಮಾತ್ಮನು ಉತ್ತಮರೀತಿಯಲ್ಲಿ ಪ್ರತಿಷ್ಠಿತನಾಗಿದ್ದಾನೆ' ಎಂದು; ಮತ್ತು 'ಯ ಏಷೋऽಂತರ್ಹೃದಯ ಆಕಾಶಸ್ತಸ್ಮಿನ್ನಯಂ ಪುರುಷಃ', 'ಹೃದಯದಲ್ಲಿರುವ ಆಕಾಶದಲ್ಲಿ ಗುಣಪೂರ್ಣನಾದ ಪರಮಾತ್ಮನು ವಾಸ ಮಾಡಿದ್ದಾನೆ'. ಇತ್ಯಾದಿ ವಾಕ್ಯದಲ್ಲಿಯೂ ಹೃತ್ಪದ್ಮಸ್ಥತ್ವಧರ್ಮವನ್ನು ಪರಮಾತ್ಮನಲ್ಲಿಯೇ ಹೇಳಲಾಗಿದೆ.

ಮುಂದಿನ ಶ್ರುತಿಗೆ ಅನ್ವಯವಿಲ್ಲವಲ್ಲ?

तत्वप्रकाशिका – अन्वयाभावस्तर्हि भवेदिति च न वाच्यम् ।

'ದಹರೋऽಸ್ಮಿನ್ ಅಂತರಾಕಾಶಃ' ಎಂಬಲ್ಲಿರುವ ಆಕಾಶದಲ್ಲಿ ಪರಮಾತ್ಮನು ಇದ್ದಾನೆಂದು ಒಪ್ಪಿದರೆ 'ಯಾವಾನ್ ವಾ ಅಯಮ್ ಆಕಾಶಃ' ಎಂಬ ಮುಂದಿನ ಶ್ರುತಿಗೆ ಅನ್ವಯವೇ ಕೂಡುವುದಿಲ್ಲವಲ್ಲ? ಎಂದು ಪ್ರಶ್ನಿಸಬಾರದು.

ಹೃತ್ಪದ್ಮದಲ್ಲಿರುವ ಬ್ರಹ್ಮನನ್ನು ಅನ್ವೇಷಣೆ ಮಾಡಬೇಕು

तत्वप्रकाशिका – तथा हि । तस्मिन् यदन्तरित्यत्र हृत्पद्मस्थाकाशगतं ब्रह्मान्वेष्टव्यमित्युच्यते । ब्रह्मपुरपदेनैव ब्रह्मस्थितिसिद्धेः ।

ಏಕೆಂದರೆ 'ತಸ್ಮಿನ್ ಯದಂತಃ ತದನ್ವೇಷ್ಟವ್ಯಂ' ಎಂಬ ಛಾಂದೋಗ್ಯಪನಿಷತ್ತಿನಲ್ಲಿ ಹೃತ್ಪದ್ಮದಲ್ಲಿರುವ ಆಕಾಶದಲ್ಲಿ ಬ್ರಹ್ಮನನ್ನು ಅನ್ವೇಷಣೆ ಮಾಡಬೇಕೆಂದು ಹೇಳಲಾಗಿದೆ. ಆ ಸ್ಥಿತಿಯಲ್ಲಿ 'ಅಂತಃ' ಎಂಬ ಪದವಿದ್ದರೂ ಕೂಡ ಹಿಂದಿನ ವಾಕ್ಯದಲ್ಲಿ 'ಬ್ರಹ್ಮಪುರಮ್' ಎಂಬ ವಾಕ್ಯವಿರುವುದರಿಂದ ಆ ಪದದಿಂದಲೇ ಬ್ರಹ್ಮನನ್ನು ಹುಡುಕಬೇಕೆಂದು ಸಿದ್ಧವಾಗುತ್ತದೆ.

'ಕಿಂ ತದತ್ರ ವಿದ್ಯತೇ' ?

तत्वप्रकाशिका – तथा च कीदृशं तदिति भावेन 'किं तदत्र विद्यते?' इति प्रश्ने तत्स्वरूपनिरूपणपरतया 'यावान्वाऽयमाकाशः' इत्यादिवाक्यान्वयः।

ಆದ್ದರಿಂದ ಬ್ರಹ್ಮನನ್ನು ಹುಡುಕಬೇಕೆಂದು ಹೇಳಿದಂತಾಯಿತು. ಆ ಬ್ರಹ್ಮನು ಹೇಗಿದ್ದಾನೆ? ಎಂಬ ಅಭಿಪ್ರಾಯದಿಂದ 'ಕಿಂ ತದತ್ರ ವಿದ್ಯತೇ' ಎಂದು ಶಿಷ್ಯರು ಪ್ರಶ್ನಿಸಿದ್ದಾರೆ. ಬ್ರಹ್ಮನ ಸ್ವರೂಪವನ್ನು ನಿರ್ಣಯಿಸುವುದಕ್ಕಾಗಿ ಗುರುಗಳು 'ಯಾವಾನ್ವಾऽಯಮಾಕಾಶಃ' ಎಂಬ ವಾಕ್ಯದಿಂದ ಉತ್ತರ ನೀಡಿದ್ದಾರೆ. ಹೀಗೆ 'ಯಾವಾನ್ವಾऽಯಮ್' ಎಂಬ ಶ್ರುತಿಯಿಂದ ಅನ್ವಯವನ್ನು ಹೇಳಿದಂತಾಗುತ್ತದೆ.

ಬ್ರಹ್ಮನ ಹೃದಯಾಕಾಶದಲ್ಲಿ ಬಾಹ್ಯಾಕಾಶವು ವ್ಯಾಪ್ತವಾಗಿದೆ

तत्वप्रकाशिका – यद् ब्रह्मान्वेष्टव्यतयोक्तं तस्यान्तर्हृदये यावानेष आकाशस्तावान् सर्वोऽपि विद्यते । तदाधारतया पृथिव्यादिकं च समाहितम् ।

ಯಾವ ಬ್ರಹ್ಮನನ್ನು ಹುಡುಕಬೇಕೆಂದು ಶ್ರುತಿಯು ಹೇಳಿದೆಯೋ ಅಂತಹ ಬ್ರಹ್ಮನ ಹೃದಯ ಪ್ರದೇಶದಲ್ಲಿ ಬಾಹ್ಯಾಕಾಶವು ವ್ಯಾಪ್ತವಾಗಿದೆ. ಭೂಲೋಕವೇ ಮೊದಲಾದವುಗಳೂ ಕೂಡ ಅದರಲ್ಲಿ ಆಶ್ರಿತವಾಗಿವೆ.

ದೇಹವು ನಾಶವಾದರೂ ಅಂತರ್ಯಾಮಿಯು ನಾಶವಾಗಲಾರ

तत्वप्रकाशिका – नष्टेऽपि देहे न नश्यति । अपहतपाप्मत्वादिगुणं चेति।

ದೇಹವು ನಾಶವಾದರೂ ಕೂಡ ಹೃದಯದಲ್ಲಿರುವ ಪರಮಾತ್ಮನು ನಾಶವಾಗುವುದಿಲ್ಲ ಮತ್ತು ಅಂತಹ ಪರಮಾತ್ಮನು ಅಪಹತಪಾಪ್ಮತ್ವ ಮೊದಲಾದ ಗುಣಗಳಿಂದ ಯುಕ್ತನಾಗಿದ್ದಾನೆ.

तत्वप्रकाशिका – अथवा हृत्पद्मगताकाशस्थमन्वेष्टव्यमिति सामान्येनोक्ते 'किं तदत्र विद्यते' इति प्रश्ने यावान् बहिः परमात्माऽऽकाशाख्यस्तिष्ठति तावान् हृदयपद्माकाशे विद्यते ।

ಅಥವಾ ಹೃತ್ಪದ್ಮದಲ್ಲಿರುವ ಆಕಾಶದಲ್ಲಿ ನೆಲಿಸಿರುವಂತಹ ವಸ್ತುವನ್ನು ಅನ್ವೇಷಣೆ ಮಾಡಬೇಕೆಂದು, ಸಾಮಾನ್ಯವಾಗಿ ಗುರುಗಳು ಹೇಳಿದ ಮೇಲೆ ಶಿಷ್ಯರು 'ಕಿಂ ತದತ್ರ ವಿದ್ಯತೇ' ಅದರಲ್ಲಿರುವ ಪದಾರ್ಥ ಯಾವುದು? ಎಂದು ಪ್ರಶ್ನಿಸುತ್ತಾರೆ. ಆವಾಗ 'ಯಾವಾನ್ವಾऽಯ ಮಾಕಾಶಃ' ಎಂಬುದರಿಂದ ಪರಮಾತ್ಮನು ಬಾಹ್ಯದಲ್ಲಿ ಆಕಾಶನಾಮಕನಾಗಿ ಎಷ್ಟು ವ್ಯಾಪ್ತನಾಗಿದ್ದಾನೋ ಅದೇರೀತಿ ಹೃದಯಪದ್ಮದ ಆಕಾಶದಲ್ಲಿಯೂ ವ್ಯಾಪ್ತನಾಗಿ ಇರುತ್ತಾನೆ.

ಅಪಹತಪಾಪ್ಮತ್ವಾದಿ ಗುಣಗಳುಳ್ಳವನು ಅಂತರ್ಯಾಮಿ

तत्वप्रकाशिका – स च पृथिव्याद्याश्रयत्वात् शरीरनाशेनाप्यनाश्यत्वाद् अपहतपाप्मत्वादेश्च अन्वेष्टव्य इत्यन्वयोपपत्तेः ।

ಅಂತಹ ಪರಮಾತ್ಮನು ಪೃಥಿವ್ಯಾದಿಪದಾರ್ಥಗಳಿಗೆ ಆಶ್ರಯನಾಗಿದ್ದಾನೆ. ಶರೀರ-ನಾಶವಾದರೂ ಕೂಡ ತಾನು ನಷ್ಟನಾಗುವುದಿಲ್ಲ. ಅಪಹತಪಾಪ್ಮಾದಿಗುಣಗಳಿಂದಲೂ ಯುಕ್ತನಾಗಿದ್ದಾನೆ. ಆದ್ದರಿಂದಲೇ ಅನ್ವೇಷಣೆ ಮಾಡಲು ಯೋಗ್ಯನಾಗಿರುತ್ತಾನೆ. ಈ ರೀತಿಯಾಗಿ ಹಿಂದಿನ ಮುಂದಿನ ವಾಕ್ಯಗಳಿಗೆ ಅನ್ವಯವನ್ನು ತೋರಿಸಲು ಬರುತ್ತದೆ.

'ಬ್ರಹ್ಮಪುರ' ಎಂದರೆ ಮಹಾವಿಷ್ಣು

तत्वप्रकाशिका – नच ब्रह्मपुरपदप्रयोगादात्मा न विष्णुः । ब्रह्मैव पूर्णत्वात् पुरमित्युपपत्तेः ।

ಶ್ರುತಿಯಲ್ಲಿರುವ 'ಬ್ರಹ್ಮಪುರ' ಎಂಬ ಪ್ರಯೋಗದಿಂದ ಆತ್ಮನು ವಿಷ್ಣುವಾಗುವುದಿಲ್ಲವಲ್ಲವೇ? ಎಂದು ಪ್ರಶ್ನಿಸಬಾರದು. ಬ್ರಹ್ಮನೇ ಪೂರ್ಣನಾದ್ದರಿಂದ 'ಪುರ' ಎಂಬ ಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆ. ಆದ್ದರಿಂದ ಬ್ರಹ್ಮಪುರಶಬ್ದಕ್ಕೆ ವಿಷ್ಣುವೆಂದೇ ಅರ್ಥ.

'ಏತತ್' ಶಬ್ದದಿಂದ ಶರೀರವು ಪ್ರಕೃತವಲ್ಲ

तत्वप्रकाशिका – एतच्छब्देन शरीरस्य प्रकृतत्वान्नेति चेन्न । शरीरनाशेनास्याविनाशोक्तेः ।

ಶ್ರುತಿಯಲ್ಲಿರುವ 'ಏತತ್' ಶಬ್ದದಿಂದ ಶರೀರ ಪ್ರಕೃತವಾಗಿದೆಯಲ್ಲವೇ? ಎಂದು ಪ್ರಶ್ನಿಸಬಾರದು. ಶರೀರನಾಶವಾದರೂ ಕೂಡ ಬ್ರಹ್ಮಪುರಕ್ಕೆ ನಾಶವಾಗುವುದಿಲ್ಲವೆಂದು ಹೇಳಿದ್ದರಿಂದ 'ಬ್ರಹ್ಮಪುರ' ಶಬ್ದದಿಂದ ವಿಷ್ಣುವೇ ಪ್ರತಿಪಾದ್ಯನಾಗುತ್ತಾನೆ.

ದಹರಕಾಶದಲ್ಲಿ ಭೂತಾಕಾಶವಿರಲು ಸಾಧ್ಯವೇ ?

तत्वप्रकाशिका – न चाऽऽकाशपक्षेऽन्वयोऽस्ति । 'दहराकशस्थमुपास्यम्' इत्युक्ते किं तदत्र विद्यते ? इति प्रश्ने यावान्वेत्यस्यान्वयादर्शनात् । नहि दहराकाशस्थो व्याप्ताकाशोऽन्वेष्टव्य इत्युपपद्यते । तदभावादयोगाच्च ।

'ದಹರೋಽಸ್ಮಿನ್ ಅಂತರಾಕಾಶೇ' ಎಂಬ ವಾಕ್ಯದಿಂದ ಭೂತಾಕಾಶವೇ ಪ್ರತಿಪಾದ್ಯವಾಗಿದೆಯಲ್ಲವೆ? ಎಂದು ಪ್ರಶ್ನಿಸಬಾರದು. ಹಾಗಾದಲ್ಲಿ ಮುಂದಿನ ವಾಕ್ಯದಿಂದ ಅನ್ವಯವು ಕೂಡುವುದಿಲ್ಲ. ಏಕೆಂದರೆ ಸೂಕ್ಷ್ಮಾಕಾಶದ ಉಪಾಸನೆಯನ್ನು ಮಾಡಬೇಕೆಂದು ಹೇಳಿದ್ದರಿಂದ, ಸೂಕ್ಷ್ಮಾಕಾಶದಲ್ಲಿ ಏನಿದೆ ಎಂದು ಪ್ರಶ್ನೆಯು ಪ್ರಾಪ್ತವಾದರೆ, ಅದಕ್ಕೆ ಉತ್ತರವನ್ನು ನೀಡಲು 'ಯಾವಾನ್ವಾ' ಎಂಬ ಮುಂದಿನ ವಾಕ್ಯವು ಹೊರಟಿದೆ, ಎಂದು ಉತ್ತರಿಸಲಾಗದು. ಏಕೆಂದರೆ ಸೂಕ್ಷ್ಮಾಕಾಶದಲ್ಲಿ ವ್ಯಾಪ್ತವಾದ ಭೂತಾಕಾಶವನ್ನು ಅನ್ವೇಷಣ ಮಾಡಬೇಕೆಂದು ಉಪಪನ್ನವಾಗುವುದಿಲ್ಲ. ಏಕೆಂದರೆ ವ್ಯಾಪ್ತವಾದ ಆಕಾಶವು ಭೂತಾಕಾಶದಲ್ಲಿ ಇರಲು ಸಾಧ್ಯವೇ ಇಲ್ಲ.

ದಹರಾಕಾಶಕ್ಕೆ ಪೃಥಿವ್ಯಾದ್ಯಶ್ರಯತ್ವವು ಸರ್ವಥಾ ಕೂಡುವುದಿಲ್ಲ

तत्वप्रकाशिका – नापि दहराकाशमेव विशिष्य, उभे अस्मिन् इत्यादिपरिहार इति युक्तम् । दहरस्य व्याप्तत्वायोगात्, मुख्यतः पृथिव्यादीनामनुपास्यत्वाच्च ।

ದಹರಾಕಾಶವೇ ಸ್ಥೂಲಾಕಾಶದಂತೆ ವ್ಯಾಪ್ತವಾಗಿದೆ ಎಂಬ ಪರಿಹಾರವನ್ನೂ ಕೂಡ ಹೇಳಲಾಗದು. ಸೂಕ್ಷ್ಮಾಕಾಶದಲ್ಲಿ ಏನು ವಿಶೇಷವಿದೆ? ಎಂಬ ಪ್ರಶ್ನೆಗೆ ಬಾಹ್ಯಾಕಾಶವು ಹೇಗೆ ವ್ಯಾಪ್ತವಾಗಿದೆಯೋ ಅದರಂತೆ ದಹರಾಕಾಶವೂ ಕೂಡ ವ್ಯಾಪ್ತವಾಗಿದೆ ಎಂಬ ಉತ್ತರವನ್ನು ನೀಡಲಾಗದು. ಏಕೆಂದರೆ ದಹರಾಕಾಶವು ಸ್ಥೂಲಾಕಾಶದಂತೆ ವ್ಯಾಪ್ತವಾಗಿರಲು ಸಾಧ್ಯವಿಲ್ಲ. ಮತ್ತು ಪೃಥಿವ್ಯಾದಿಗಳಿಗೆ ಉಪಾಸ್ಯತ್ವವೂ ಕೂಡ ಸರ್ವಥಾ ಸಾಧ್ಯವಿಲ್ಲ. ಆದ್ದರಿಂದ ಪೃಥಿವ್ಯಾದಿ ಆಧಾರತ್ವವನ್ನು ದಹರಾಕಾಶಕ್ಕೆ ಹೇಳಲು ಬರುವುದಿಲ್ಲ.

ವಿಷ್ಣುವಿಗೆ ಸರ್ವಾಧಾರತ್ವ ಹೇಳಿದಾಗ ಯಾವುದೇ ವಿರೋಧವಿಲ್ಲ

तत्वप्रकाशिका – नन्वेवं 'हृत्पद्मगताकाशस्थो विष्णुः' इत्यभ्युपेत्य तस्य सर्वाधारत्वाङ्गीकारोऽपि सुषिरश्रुतिविरोधः स्यात् । तत्र साक्षात् सुषिरस्य सर्वाधारत्वोक्तेरित्यत आह – तदिति ।।

ಹಾಗಾದರೆ ಹೃತ್ಪದ್ಮದಲ್ಲಿರುವ ಆಕಾಶದಲ್ಲಿ ವಿಷ್ಣುವಿದ್ದಾನೆಂದು ಅಂಗೀಕರಿಸಿ ಅಂತಹ ವಿಷ್ಣು ಸಕಲಕ್ಕೂ ಆಧಾರನಾಗಿದ್ದಾನೆಂದು ಅಂಗೀಕರಿಸಿದಂತಾಯಿತು. ಹೀಗೆ ಅಂಗೀಕಾರ ಮಾಡಿದರೂ ಸಹ ಸುಷಿರಶ್ರುತಿಯ ವಿರೋಧವು ಬರುತ್ತದೆ. ಏಕೆಂದರೆ ನೇರವಾಗಿ ಶ್ರುತಿಯಲ್ಲಿ ಸುಷಿರಕ್ಕೇ ಸರ್ವಾಧಾರತ್ವವನ್ನು ಹೇಳಲಾಗಿದೆ. ಹೀಗಿರುವಾಗ ವಿಷ್ಣುವಿನಲ್ಲಿ ಸರ್ವಾಧಾರತ್ವವನ್ನು ಹೇಳಿದರೆ ಈ ಶ್ರುತಿಯ ವಿರೋಧವು ಬರುತ್ತದೆ ಅಲ್ಲವೇ? ಎಂಬ ಪ್ರಶ್ನೆಗೆ 'ತತ್' ಎಂಬ ಭಾಷ್ಯದಿಂದ ಉತ್ತರಿಸುತ್ತಿದ್ದಾರೆ.

'ಮಂದಿರೇ ಮಣಿಮಾಲಾ' ನ್ಯಾಯದಂತೆ ವಿವಕ್ಷಿಸಬೇಕು

तत्वप्रकाशिका – न चैवमङ्गीकारेऽपि सुषिरश्रुतिविरोधः । 'मन्दिरे मणिमाला' इत्यत्र मन्दिरपदेन तदन्तस्थमञ्जूषाविवक्षावत् सुषिरश्रुतेरपि तदन्तःस्थभगवदपेक्षया प्रवृत्तत्वादित्यर्थः ।। १७ ।।

ವಿಷ್ಣುವೇ ಸಕಲಕ್ಕೆ ಆಧಾರನಾಗಿದ್ದಾನೆಂದು ಅಂಗೀಕಾರ ಮಾಡಿದರೂ ಕೂಡ ಸುಷಿರಶ್ರುತಿಯ ವಿರೋಧವು ಬರುವುದಿಲ್ಲ. 'ಮಂದಿರೇ ಮಣಿಮಾಲಾ' ಎಂಬ ನ್ಯಾಯದಿಂದ ತಿಳಿಯಬೇಕು.

ಅಂದರೆ 'ಮಂದಿರೇ ಮಣಿಮಾಲಾ' ಎಂಬಲ್ಲಿರುವ ಮಂದಿರ ಪದಕ್ಕೆ ಮಂದಿರದಲ್ಲಿರುವ ಆಭರಣದ ಪೆಟ್ಟಿಗೆಯಲ್ಲಿ ಎಂದೇ ಅರ್ಥ. ಅದರಂತೆ ಇಲ್ಲಿಯೂ ಸುಷಿರಪದಕ್ಕೆ ಸುಷಿರದಲ್ಲಿರುವ ಭಗವಂತನೆಂದೇ ಅರ್ಥ. ಈ ಅಭಿಪ್ರಾಯದಲ್ಲಿ ಭಾಷ್ಯದ ಮಾತುಗಳು ಹೊರಟಿವೆ.

ಭಾವದೀಪ

'ತತ್ರಾಪಿ' ಇತ್ಯಾದಿ ಭಾಷ್ಯದ ವ್ಯಾಖ್ಯಾನ

भावदीपः – प्रसिद्धेश्च ।।

भाष्योक्तश्रुतौ तत्रापीति तच्छब्दपरामर्श्यं दर्शयन् भाष्यं व्याचष्टे – दहरमिति ।।

ಭಾಷ್ಯದಲ್ಲಿ ಹೇಳಲ್ಪಟ್ಟ ಶ್ರುತಿಯಲ್ಲಿರುವ 'ತತ್ರಾಪಿ' ಎಂಬ ಪದದ 'ತತ್' ಶಬ್ದದಿಂದ ಯಾವುದನ್ನು ಪರಾಮರ್ಶಿಸಬೇಕೆಂಬುದನ್ನು ತೋರಿಸುವವರಾಗಿ, ಭಾಷ್ಯವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ 'ದಹರಮ್' ಇತ್ಯಾದಿ ಟೀಕೆಯಿಂದ.

'ನ ಸುಷಿರಶ್ರುತಿವಿರೋಧಃ' ಎಂಬ ಭಾಷ್ಯಕ್ಕೆ ವ್ಯಾಖ್ಯಾನ

भावदीपः – विष्णोरिति ।। 'सहस्रशीर्षं देवम्' इति तस्यैव प्रकृतत्वादिति भावः । न सुषिरश्रुतिविरोध इति भाष्यं व्याचष्टे – दहर इति ।।

'ವಿಷ್ಣೋಃ' ಎಂಬುದರಿಂದ 'ಸಹಸ್ರಶೀರ್ಷಂ ದೇವಮ್' ಎಂಬುದಾಗಿ ವಿಷ್ಣುವೇ ಪ್ರಕೃತನಾಗಿದ್ದಾನೆಂದು ತಿಳಿಸಿದ್ದಾರೆ. 'ನ ಸುಷಿರಶ್ರುತಿವಿರೋಧಃ' ಸುಷಿರಶ್ರುತಿವಿರೋಧಕ್ಕೆ ಅವಕಾಶವಿಲ್ಲ' ಎಂಬ ಭಾಷ್ಯವನ್ನು 'ದಹರೇ' ಇತ್ಯಾದಿ ಟೀಕೆಯಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ.

'ಆಕಾಶಸ್ತಲ್ಲಿಂಗಾತ್' ಎಂಬ ಸೂತ್ರದಲ್ಲಿ ಹೇಳಿದ ನ್ಯಾಯವು ವಿವಕ್ಷಿತ

भावदीपः – इत्यभ्युपगम इति ।। आकाशपदेन तल्लिङ्गादिति न्यायेन विष्णुमुपादाय तस्य हृत्पद्मस्थत्वाभ्युपगमे पूर्वोक्तदिशा सुषिरस्य सर्वाधारतया हृत्पद्मस्थत्वश्रुतिविरोध इत्यर्थः ।।

'ಆಕಾಶಸ್ತಲ್ಲಿಂಗಾತ್' ಎಂಬ ಸೂತ್ರದಲ್ಲಿ ಹೇಳಲ್ಪಟ್ಟ ನ್ಯಾಯದಿಂದ ಆಕಾಶಪದದಿಂದ ಪ್ರತಿಪಾದ್ಯನಾದವನು ಮಹಾವಿಷ್ಣುವೇ ಆಗಿದ್ದಾನೆಂದು ಅಂಗೀಕರಿಸಿ, ಅವನೇ ಹೃದಯಕಮಲದಲ್ಲಿದ್ದಾನೆಂದು ಒಪ್ಪಿದರೆ, ಹಿಂದೆ ಹೇಳಿದಂತೆ ಸುಷಿರವೇ ಸಕಲಕ್ಕೂ ಆಧಾರವಾದ ಹೃದಸ್ಥವಾಗಿದೆಯೆಂಬ ಶ್ರುತಿವಿರೋಧ ಬರುತ್ತದೆಂಬುದನ್ನು 'ಇತ್ಯಭ್ಯುಪಗಮೇ' ಎಂಬ ಟೀಕೆಯಿಂದ ಹೇಳಿದ್ದಾರೆ.

ಸೂತ್ರದ ಅಭಿಪ್ರಾಯವೇನು ?

ಭಾವದೀಪಃ – अनेनैवेति ।। 'तत्रापि दहरम्' इति श्रुतिग्राहिणा 'प्रसिद्धेश्च' इति सूत्रेणैवेत्यर्थः ।

न केवलं तस्य हृत्पद्मस्थत्वसामान्यस्य प्रसिद्धेश्चेति सूत्रार्थः । किन्तु हृत्पद्मस्थाकाशस्थत्वप्रसिद्धेश्चेत्यप्यर्थ इति भावेन इति प्रसिद्धेश्चेत्यस्य श्रुतिषु दहराकाशस्थत्वप्रसिद्धेश्चेत्यर्थकतया उत्तरभाष्येणान्वयमुपेत्य तदन्तःस्थेति तच्छब्दार्थमाह – तस्मिन्निति ।।

'ಅನೇನೈವ' ಎಂದರೆ 'ತತ್ರಾಪಿ ದಹರಮ್' ಎಂಬ ಶ್ರುತಿಯನ್ನು ಉಲ್ಲೇಖಿಸುವ 'ಪ್ರಸಿದ್ಧೇಶ್ಚ' ಎಂಬ ಸೂತ್ರದಿಂದ ಎಂದರ್ಥ.

ಹೃತ್ಕಮಲದಲ್ಲಿರುವವನು ಪರಮಾತ್ಮನೇ ಆಗಿದ್ದಾನೆಂಬುದು ಅತ್ಯಂತ ಪ್ರಸಿದ್ಧವಾದ ವಿಚಾರ. ಇಷ್ಟೇ ಸೂತ್ರಾರ್ಥವಲ್ಲ. ಹೊರತಾಗಿ, ಹೃತ್ಕಮಲದಲ್ಲಿರುವ ಆಕಾಶದಲ್ಲಿಯೂ ಸಹ ಪರಮಾತ್ಮನೇ ಇರುತ್ತಾನೆಂಬುದೂ ಕೂಡ ಸೂತ್ರದ ಅಭಿಪ್ರಾಯವೇ ಆಗಿದೆ. ಹಾಗಾಗಿ 'ಪ್ರಸಿದ್ಧೇಶ್ಚ' ಎಂಬ ಸೂತ್ರಕ್ಕೆ ಪರಮಾತ್ಮನೇ ದಹರಾಕಾಶದಲ್ಲಿರುತ್ತಾನೆಂಬುದು ಶ್ರುತಿಗಳಿಂದ ಪ್ರಸಿದ್ಧವಾಗಿದೆ ಎಂದರ್ಥ. ಈ ಅಭಿಪ್ರಾಯದಿಂದ ಉತ್ತರಭಾಷ್ಯದ ಜೊತೆಗೆ ಅನ್ವಯವನ್ನು ಒಪ್ಪಿ, 'ತದಂಸ್ಥ' ಎಂಬಲ್ಲಿರುವ 'ತತ್' ಶಬ್ದದ ಅರ್ಥವನ್ನು 'ತಸ್ಮಿನ್' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ.

ದಹರಾಕಾಶಸ್ಥತ್ವವನ್ನು ಪ್ರತಿಪಾದಿಸುವ ಎಲ್ಲಾ ಶ್ರುತಿಗಳ ಸಮನ್ವಯ

ಭಾವದೀಪಃ – श्रुतौ लिङ्गव्यत्ययं मत्वोक्तम् – विशोकमिति ।। भाष्ये हृत्पद्मस्थत्वोक्तेरिति शेषः । दहराकाशस्थत्वावेदकश्रुत्यन्तराणि भाष्योपलक्षितान्याह – दिव्य इति ।।

ಶ್ರುತಿಯಲ್ಲಿರುವ ಲಿಂಗವ್ಯತ್ಯಾಸವನ್ನು ಗಮನಿಸಿ 'ವಿಶೋಕಮ್' ಎಂದಿದ್ದಾರೆ. 'ಭಾಷ್ಯೇ ಹೃತ್ಪದ್ಮಸ್ಥತ್ವಕ್ತೋಃ' ಎಂಬುದನ್ನು ಶೇಷಪೂರಣ ಮಾಡಿಕೊಳ್ಳಬೇಕು. ದಹರಾಕಾಶಸ್ಥತ್ವವನ್ನು ಪ್ರತಿಪಾದನೆ ಮಾಡುವ ಬೇರೆ ಶ್ರುತಿಗಳನ್ನೂ ಭಾಷ್ಯದಲ್ಲಿ ಉಪಲಕ್ಷಣಯಾ ತಿಳಿಸಿದ್ದಾರೆ. ಅದನ್ನೇ 'ದಿವ್ಯೇ' ಇತ್ಯಾದಿ ಟೀಕೆಯಿಂದ ಹೇಳಿದ್ದಾರೆ.

ಅನೇಕ ಕಡೆ ಇರುವ ಶ್ರುತಿಗಳು

भावदीपः – आथर्वणे । य एष इति तैत्तिरीये । आदिपदेन 'य एषोऽन्तर्हृदय आकाशस्तस्मिन् शेते' 'यो वेद निहितं गुहायां परमे व्योमन्' इति पूर्वोक्तश्रुत्यादिग्रहः।

'ದಿವ್ಯೇ' ಎಂಬ ಶ್ರುತಿಯು ಆಥರ್ವಣದಲ್ಲಿದೆ. 'ಯ ಏಷ' ಎಂಬ ಶ್ರುತಿಯು ತೈತ್ತಿರೀಯಾದಲ್ಲಿದೆ. 'ಆದಿ' ಪದವು ಹಿಂದೆ ಹೇಳಲ್ಪಟ್ಟ 'ಯ ಏಷೋಽಂತರ್ಹೃದಯೇ ಆಕಾಶಸ್ತಸ್ಮಿನ್ ಶೇತೇ' ಎಂಬುದನ್ನು ಮತ್ತು 'ಯೋ ವೇದ ನಿಹಿತಂ ಗುಹಾಯಾಂ ಪರಮೇ ವ್ಯೋಮನ್' ಎಂಬ ಶ್ರುತಿಯನ್ನು ಇಟ್ಟುಕೊಳ್ಳಬೇಕು.

ಅನ್ವಯಾಭಾವಾದಿ ದೋಷಗಳಿಗೆ ದೋಷವಿಲ್ಲ

भावदीपः – भाष्ये श्रुतिविरोध इत्युपलक्षणं मत्वा प्रागुक्तानन्वयदोषं निराह – अन्वयाभाव इति ।। ''योऽन्वेष्टव्यो भगवांस्तस्यान्तर्हृदये यावान् वा अयमाकाशस्तावानेषोऽन्तर्हृदय आकाशस्तस्मिन् द्यावापृथिवी अन्तरेव समाहिते । स भगवानपहतपाप्मा'' इत्यन्वय इत्यन्यत्रोक्तं समाधिं व्यनक्ति – तस्मिन्निति।।

ಭಾಷ್ಯದಲ್ಲಿ ಹೇಳಲ್ಪಟ್ಟ ಶ್ರುತಿವಿರೋಧವು ಉಪಲಕ್ಷಣವಾಗಿದೆಯೆಂದು ತಿಳಿದು, ಹಿಂದೆ ಹೇಳಲ್ಪಟ್ಟ ಅನನ್ವಯದೋಷವನ್ನು ನಿರಾಕರಿಸುತ್ತಿದ್ದಾರೆ 'ಅನ್ವಯಾಭಾವ' ಇತ್ಯಾದಿ ವಾಕ್ಯದಿಂದ. 'ಯೋಽನ್ವೇಷ್ಟವ್ಯೋ ಭಗವಾಂಸ್ತಸ್ಯಾಂತರ್ಹೃದಯೇ ಯಾವಾನ್ ವಾ ಅಯಮಾಕಾಶಸ್ತಾವಾನೇಷೋ-ಽಂತರ್ಹೃದಯ ಆಕಾಶಸ್ತಸ್ಮಿನ್ ದ್ಯಾವಾಪೃಥಿವೀ ಅಂತರೇವ ಸಮಾಹಿತೇ । ಸ ಭಗವನಾಪಹತಪಾಪ್ಮ'

ಎಂಬುದಾಗಿ ಅನ್ವಯವನ್ನು ತಿಳಿಯಬೇಕೆಂದು ಬೇರೆಡೆ ಹೇಳಲ್ಪಟ್ಟ ಸಮಾಧಾನವನ್ನೇ 'ತಸ್ಮಿನ್' ಇತ್ಯಾದಿ ಟೀಕೆಯಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ.

'ಪುಂಡರೀಕಂ ವೇಶ್ಮ' ಎಂಬುದರ ವ್ಯಾಖ್ಯಾನ

ಭಾವದೀಪಃ – ಅಪ್ರಕೃತಬ್ರಹ್ಮಣಃ ಕಥಮುಕ್ತಿರಿತ್ಯತ ಆಹ – ಬ್ರಹ್ಮಪುರೇತಿ ।। ದೇಹಸ್ಯ ಬ್ರಹ್ಮ ಪ್ರತಿ ಪುರತ್ವೋಕ್ತ್ಯಾ ತಥಾ 'ಪುಣ್ಡರೀಕಂ ವೇಶ್ಮ' ಇತ್ಯತ್ರಾಪಿ ಬ್ರಹ್ಮಪದಾನ್ವಯಾವಶ್ಯಮ್ಭಾವೇ ಬ್ರಹ್ಮ ಪ್ರತಿ ಪುಣ್ಡರೀಕಸ್ಯ ವೇಶ್ಮತ್ವೋಕ್ತ್ಯಾ ಬ್ರಹ್ಮ ವೇಶ್ಮಪದೇನ ಚೇತ್ಯುಪಲಕ್ಷಣಮ್ । ತಥಾಚ ಯದ್ ಬ್ರಹ್ಮಾನ್ತಸ್ತದನ್ವೇಷ್ಟವ್ಯಮಿತಿ ಸಿದ್ಧೇರಿತ್ಯರ್ಥಃ ।

ಅಪ್ರಕೃತನಾದ ಬ್ರಹ್ಮನನ್ನು ಸ್ವೀಕರಿಸಬೇಕೆಂದು ಹೇಳಿದ್ದು ಹೇಗೆ ಸಮಂಜಸವಾಗುತ್ತದೆ? ಎಂಬ ಪ್ರಶ್ನೆಗೆ 'ಬ್ರಹ್ಮಪುರ' ಇತ್ಯಾದಿ ಟೀಕೆಯಿಂದ ಉತ್ತರಿಸುತ್ತಿದ್ದಾರೆ. ಬ್ರಹ್ಮನಿಗೆ ದೇಹವು ಪಟ್ಟಣವಾಗಿದೆ. ಮತ್ತು 'ಪುಂಡರೀಕಂ ವೇಶ್ಮ' ಎಂಬಲ್ಲಿಯೂ ಪುಂಡರೀಕವೇ ಬ್ರಹ್ಮನ ಮನೆಯೆಂದು ಹೇಳಲಾಗಿದೆ. ಏಕೆಂದರೆ, ಶ್ರುತಿಯಲ್ಲಿ ಬ್ರಹ್ಮಪದವನ್ನು ಅವಶ್ಯವಾಗಿ, ಅನ್ವಯ ಮಾಡಿಕೊಳ್ಳಬೇಕು. ಆದ್ದರಿಂದ 'ವೇಶ್ಮ' ಪದದಿಂದ ಬ್ರಹ್ಮಪದವನ್ನು ಉಪಲಕ್ಷಣಯಾ ತೆಗೆದುಕೊಂಡಂತಾಯಿತು. ಆದ್ದರಿಂದ ಒಳಗೆ ಯಾವ ಬ್ರಹ್ಮನಿದ್ದಾನೋ, ಅವನನ್ನು ಅನ್ವೇಷಣೆ ಮಾಡಬೇಕೆಂದು ಸಿದ್ಧವಾಯಿತು.

'ತಸ್ಯಾಂತರ್ಹೃದಯೇ' ಎಂಬುದರ ವ್ಯಾಖ್ಯಾನ

ಭಾವದೀಪಃ – ತಸ್ಯಾನ್ತರ್ಹೃದಯ ಇತಿ ಸಮಾನವಿಭಕ್ತಿಕತ್ವಾಭಾವೇऽಪಿ ಸಮಾನವಿಷಯತ್ವಮಾತ್ರೇಣಾಪಿ ಪ್ರಶ್ನೋತ್ತರಭಾವೋ ಯುಕ್ತ ಇತಿ ಭಾವಃ ।

''ತಸ್ಯಾಂತರ್ಹೃದಯೇ'' ಎಂಬಲ್ಲಿ ಸಮಾನವಿಭಕ್ತಿವಿಲ್ಲದಿದ್ದರೂ ಸಮಾನವಿಷಯತ್ವವಿರುವ ಪ್ರಯುಕ್ತ ಪ್ರಶ್ನೋತ್ತರಗಳು ಉಪಪನ್ನವಾಗುತ್ತವೆಂದು ತಿಳಿಯಬೇಕು.

'ಉಭೇ ಅಸ್ಮಿನ್' ಇತ್ಯಾದಿ ಶ್ರುತಿಯ ವ್ಯಾಖ್ಯಾನ

ಭಾವದೀಪಃ – ಉಭೇ ಅಸ್ಮಿನ್ ದ್ಯಾವಾಪೃಥಿವೀ ಇತ್ಯಾದೇರಿತ್ಯರ್ಥಃ – ತದಾಧಾರತಯೇತಿ।। ಬ್ರಹ್ಮಹೃದಯಸ್ಥಾಕಾಶಾಭಿಮಾನ್ಯಾಧಾರತಯಾ ಪೃಥಿವ್ಯಾದ್ಯಭಿಮಾನ್ಯಾದಿಕಮಿತ್ಯರ್ಥಃ ।

'नास्य जरयैतज्जीर्यते । न वधेनास्य हन्यते । तदेतत् सत्यम् ब्रह्मपुरमस्मिन् कामाः समाहिताः । एष आत्माऽपहतपाप्मा' इत्यादेरर्थमाह – नष्टेऽपीति।।

''ಉಭೇ ಅಸ್ಮಿನ್ ದ್ಯಾವಾಪೃಥಿವೀ'' ಎಂಬ ಶ್ರುತಿಯ ಅರ್ಥವನ್ನು ''ತದಾಧಾರತಯಾ'' ಇತ್ಯಾದಿ ಮಾತುಗಳಿಂದ ವಿವರಿಸುತ್ತಿದ್ದಾರೆ. ಬ್ರಹ್ಮನು ಹೃದಯಲ್ಲಿರುವ ಆಕಾಶಕ್ಕೆ ಪೃಥಿವ್ಯಾದಿಗಳಿಗೂ ಅಭಿಮಾನಿಯಾಗಿದ್ದಾನೆಂದು ತಿಳಿಯಬೇಕು. ''ನಾಸ್ಯ ಜರಯೈತಜ್ಜೀರ್ಯತೇ । ನ ವಧೇನಾಸ್ಯ ಹನ್ಯತೇ । ತದೇತತ್ಸತ್ಯಂ ಬ್ರಹ್ಮಪುರಮಸ್ಮಿನ್ಕಾಮಾಃ ಸಮಾಹಿತಾಃ । ಏಷ ಆತ್ಮಾಽಪಹತಪಾಪ್ಮಾ'' ಇತ್ಯಾದಿ ಶ್ರುತಿಯ ಅರ್ಥವನ್ನು ''ನಷ್ಟೇಽಪಿ'' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ.

ಛಾಂದೋಗ್ಯೋಪನಿಷತ್ತಿನಲ್ಲಿ ಹೇಳಿದ ಭಾಷ್ಯಾಂತರ

भावदीपः – अस्मिन् भूताकाशे ब्रह्माख्याकाशो वर्तते । स च यावान् बहिः परमात्मा व्याप्तोऽस्ति तावानेव विद्यत इति छान्दोग्यभाष्योक्तं पक्षान्तरं व्यनक्ति – अथवेति ।।

''ಅಸ್ಮಿನ್'' = ಭೂತಾಕಾಶದಲ್ಲಿ, ಆಕಾಶಸ್ವರೂಪಿಯಾದ ಬ್ರಹ್ಮನು ಇದ್ದಾನೆ. ಇವನು ಬಾಹ್ಯಾಕಾಶದಲ್ಲಿ ಎಷ್ಟು ವಿಶಾಲನಾಗಿದ್ದಾನೋ, ಅಷ್ಟೇ ವ್ಯಾಪ್ತಿಯನ್ನು ಹೊಂದಿರುತ್ತಾನೆ ಎಂಬ ಛಾಂದೋಗ್ಯೋಪನಿಷತ್ತಿನ ಭಾಷ್ಯದಲ್ಲಿ ಹೇಳಿದ ಪಕ್ಷಾಂತರವನ್ನು ''ಅಥವಾ'' ಇತ್ಯಾದಿ ಮಾತುಗಳಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ.

'ಸಂಗಮ್ಯಂತೇ ಗುರೋರ್ಗಿರಃ' ಎಂಬುದಕ್ಕೆ ಉದಾಹರಣೆ

भावदीपः – अस्मिन् पक्षे प्रश्नोत्तरयोस्तुल्यविभक्तिकत्वं चास्तीति भावः । एतद्व्याख्यानोक्तिश्चाल्पश्रुतेरित्यधिकाशङ्कोत्थानाय । 'सङ्गम्यन्ते गुरोर्गिरः' इति स्वप्रतिज्ञानुरोधाय चेति ज्ञेयम् ।

ಈ ಪಕ್ಷದಲ್ಲಿ ಪ್ರಶ್ನೋತ್ತರಗಳಿಗೆ ತುಲ್ಯವಿಭಕ್ತಿಗಳೂ ಸಹ ಕೂಡುತ್ತವೆಂದು ತಿಳಿಯಬೇಕು. ಈ ವ್ಯಾಖ್ಯಾನವನ್ನು ಆಶ್ರಯಿಸಿದ್ದರಿಂದ ''ಅಲ್ಪಶ್ರುತೇಃ'' ಎಂಬ ಸೂತ್ರದ ಭಾಗದಿಂದ ಹೆಚ್ಚಿನ ಆಶಂಕೆಯನ್ನು ತೋರಿಸಲು ಆಗುತ್ತದೆ. ಅಥವಾ ''ಸಂಗಮ್ಯಂತೇ ಗುರೋರ್ಗಿರಃ'' ಎಂಬ ತಮ್ಮ ಪ್ರತಿಜ್ಞೆಯನ್ನು ಅನುಸರಿಸಿದಂತಾಗುತ್ತದೆ.

ಬ್ರಹ್ಮನ ಪಟ್ಟಣವಾದ ಮಾತ್ರಕ್ಕೆ ಬ್ರಹ್ಮನಿರಬೇಕಾಗಿಲ್ಲ

ಭಾವದೀಪಃ – ದೇಹಾದೇರ್ಬ್ರಹ್ಮ ಪ್ರತಿ ಪುರತ್ವಾದ್ಯುಕ್ತಾವಪಿ ಸ್ಪಷ್ಟಂ ತತ್ರ ಬ್ರಹ್ಮಸ್ಥಿತೇರऽಪ್ರಾಪ್ತೇರನ್ಯಪುರಾದಾವನ್ಯಸ್ಯಾಪಿ ಸ್ಥಿತಿಸಮ್ಭವಾದಿತ್ಯಭಿಪ್ರೇತ್ಯ ಸಾಮಾನ್ಯೇನೋಕ್ತ ಇತ್ಯುಕ್ತಮ್ ।

ದೇಹವು ಬ್ರಹ್ಮನಿಗೆ "ಪುರ" ಎನಿಸಿದೆ ಎಂದು ಹೇಳಿದರೂ ದೇಹದಲ್ಲಿ ಬ್ರಹ್ಮನಿದ್ದಾನೆ ಎಂಬುದು ಸ್ಪಷ್ಟವಾಗಿ ತಿಳಿಯುವುದಿಲ್ಲ. ಏಕೆಂದರೆ ಬ್ರಹ್ಮನ ಪಟ್ಟಣವಾದ ಮಾತ್ರದಿಂದ ಬ್ರಹ್ಮನೇ ಇರಬೇಕೆಂದು ಏನಿಲ್ಲ. ಜೀವನೂ ಸಹ ಇರಬಹುದು. ಏಕೆಂದರೆ ಮತ್ತೊಬ್ಬರ ಪಟ್ಟಣದಲ್ಲಿ ಬೇರೊಬ್ಬರು ಇರಬಾರದೆಂದೇನಿಲ್ಲ. ಈ ಅಭಿಪ್ರಾಯದಿಂದ ಸಾಮಾನ್ಯವಾಗಿ "ಉಕ್ತಃ" ಎಂದು ಹೇಳಿದ್ದಾರೆ.

ಹೃದಯಪದದ ನಿಷ್ಪತ್ತಿ

ಭಾವದೀಪಃ – ತಸ್ಯೈತದೇವ ನಿರುಕ್ತಂ ಹೃದಯಮಿತ್ಯುತ್ತರವಾಕ್ಯೋಕ್ತರೀತ್ಯಾ ಹೃಯತ ಇತಿ ವ್ಯುತ್ಪತ್ತ್ಯಾ ಹೃದಯಪದೇನ ಹೃತ್ಪುಣ್ಡರೀಕಸ್ಥದಹರಭೂತಾಕಾಶಂ ಗೃಹ್ಯತ ಇತಿ ಭಾವೇನಾಹ – ಹೃದಯಪದ್ಮಾಕಾಶ ಇತಿ ।।

"ತಸ್ಯೈತದೇವ ನಿರುಕ್ತಃ" ಎಂದು ಉತ್ತರವಾಕ್ಯದಲ್ಲಿ ಹೇಳಿದಂತೆ "ಹೃದಿ ಅಯತೇ" ಎಂಬ ವ್ಯುತ್ಪತ್ತಿಯಿಂದ ಹೃದಯಪದಕ್ಕೆ ಹೃದಯಪುಂಡರೀಕದಲ್ಲಿರುವ ಅಲ್ಪವಾದ ಭೂತಾಕಾಶವನ್ನು ಸ್ವೀಕರಿಸಬೇಕೆಂಬ ಅಭಿಪ್ರಾಯದಿಂದ "ಹೃದಯಪದ್ಮಾಕಾಶ" ಎಂದು ಹೇಳಿದ್ದಾರೆ.

ಛಾಂದೋಗ್ಯಭಾಷ್ಯಕ್ಕೆ ಅನುಸಾರಿಯಾದ ವ್ಯಾಖ್ಯಾನ

ಭಾವದೀಪಃ – ತರ್ಹಿ ಕಿಂ ತದತ್ರೇತಿ ಪ್ರಶ್ನಸ್ಯ ಯಾವಾನಿತ್ಯನೇನೋತ್ತರಿತತ್ವಾತ್ । 'ಉಭೇ ಅಸ್ಮಿನ್ ದ್ಯಾವಾಪೃಥಿವೀ' ಇತ್ಯಾದಿ ವ್ಯರ್ಥಮಿತ್ಯತಃ ತತ್ತು ವಿಜಿಜ್ಞಾಸಿತವ್ಯತ್ವೇ ಹೇತುತ್ವೇನ ಸಾಮರ್ಥ್ಯಕಥನಮೇವೇತಿ ಛಾನ್ದೋಗ್ಯಭಾಷ್ಯಾನುರೋಧೇನ ವಾಕ್ಯಶೇಷಸ್ಯಾನ್ವಯಮಾಹ – ಸ ಚೇತಿ ।।

ಹಾಗಾದರೆ "ಕಿಂ ತದತ್ರ" ಎಂಬ ಪ್ರಶ್ನೆಗೆ "ಯಾವಾನ್ವಾ" ಇತ್ಯಾದಿ ವಾಕ್ಯದಿಂದ ಉತ್ತರಿಸಿದ್ದಾಯಿತು. ಆದ್ದರಿಂದ "ಉಭೇ ಅಸ್ಮಿನ್ ದ್ಯಾವಾಪೃಥಿವೀ" ಇತ್ಯಾದಿ ವಾಕ್ಯಗಳು ವ್ಯರ್ಥವಲ್ಲವೇ? ಎಂಬ ಪ್ರಶ್ನೆಗೆ

"ತತ್ತು ವಿಜಿಜ್ಞಾಸಿತವ್ಯತ್ವೇ ಹೇತುತ್ವೇನ ಸಾಮರ್ಥ್ಯಕಥನಮೇವ" ಎಂಬ ಛಾಂದೋಗ್ಯಭಾಷ್ಯಕ್ಕೆ ಅನುಸಾರಿಯಾಗಿ ವಾಕ್ಯಶೇಷಕ್ಕೆ ಅನ್ವಯವನ್ನು ತೋರಿಸುತ್ತಿದ್ದಾರೆ "ಸ ಚ" ಇತ್ಯಾದಿ ವಾಕ್ಯದಿಂದ.

ಬ್ರಹ್ಮಪುರ ಶಬ್ದಕ್ಕೂ ಛಾಂದೋಗ್ಯಭಾಷ್ಯದಲ್ಲಿ ಹೇಳಿದ ವ್ಯಾಖ್ಯಾನ

ಭಾವದೀಪಃ – ನಚೇತಿ ।। 'ತದೇತತ್ ಸತ್ಯಂ ಬ್ರಹ್ಮಪುರಮ್' ಇತಿ ಹೃತ್ಪದ್ಮಸ್ಥಾಕಾಶಸ್ಯೇ ಬ್ರಹ್ಮಪುರಪದಪ್ರಯೋಗಾದಿತ್ಯರ್ಥಃ । ಬ್ರಹ್ಮಾಖ್ಯಂ ಪುರಂ ಪೂರ್ಣತ್ವಾತ್ ಪುರಮಿತಿ ತಚ್ಛಾಷ್ಯೋಕ್ತಮೇವಾಹ – ಬ್ರಹ್ಮೈವೇತಿ ।।

"ತದೇತತ್ ಸತ್ಯಂ ಬ್ರಹ್ಮಪುರಂ" ಎಂದು ಹೃತ್ಪದ್ಮದಲ್ಲಿರುವ ಆಕಾಶದಲ್ಲಿರುವವನಿಗೆ ಬ್ರಹ್ಮಪುರ ಪದವನ್ನು ಪ್ರಯೋಗ ಮಾಡಿದ್ದರಿಂದ ಎಂದು "ನಚ" ಇತ್ಯಾದಿ ವಾಕ್ಯದ ಅರ್ಥ. ಇಲ್ಲಿರುವ 'ಬ್ರಹ್ಮಪುರ' ಶಬ್ದಕ್ಕೆ ಪೂರ್ಣನಾದ್ದರಿಂದ ಬ್ರಹ್ಮನೆಂಬ ಅರ್ಥವನ್ನೇ ವಿವಕ್ಷಿಸಬೇಕು ಎಂದು ಛಾಂದೋಗ್ಯಭಾಷ್ಯದ ಅಭಿಪ್ರಾಯವನ್ನೇ "ಬ್ರಹ್ಮೈವ" ಎಂಬುದರಿಂದ ಹೇಳಿದ್ದಾರೆ.

'ಏತತ್' ಶಬ್ದದಿಂದ ವಿಷ್ಣುವನ್ನೇ ವಿವಕ್ಷಿಸಬೇಕು

ಭಾವದೀಪಃ – ಏತಚ್ಛಬ್ದೇನ, 'ಯದಿದಮಸ್ಮಿನ್ ಬ್ರಹ್ಮಪುರೇ' ಇತಿ ಬ್ರಹ್ಮಪುರ-ಶಬ್ದೇನೇತ್ಯರ್ಥಃ ।। ಅಸ್ಯಾವಿನಾಶೇತಿ ।। ತಥಾಚ ನಾಶಾಭಾವರೂಪಲಿಙ್ಗೇನ ಶರೀರೇऽನುಪಪನ್ನೇನ ಬಾಧಕೇನ ಪ್ರಕೃತಶರೀರತ್ಯಾಗೇನ ವಿಷ್ಣುಗ್ರಹಣಂ ಯುಕ್ತಮ್ ।

"ಏತಚ್ಛಬ್ದೇನ" ಎಂದರೆ "ಯದಿದಮಸ್ಮಿನ್ ಬ್ರಹ್ಮಪುರೇ" ಎಂಬಲ್ಲಿರುವ 'ಬ್ರಹ್ಮಪುರ' ಶಬ್ದದಿಂದ ಎಂದರ್ಥ. "ಅಸ್ಯಾವಿನಾಶಿ" ಇತ್ಯಾದಿ ಮಾತಿನ ಅಭಿಪ್ರಾಯ ಹೀಗಿದೆ - 'ನಾಶಾಭಾವ' ಎಂಬ ಲಿಂಗವು ಶರೀರದಲ್ಲಿ ಅನುಪಪನ್ನವಾಗಿದೆ. ಆದ್ದರಿಂದ ಪ್ರಕೃತವಾದ ಶರೀರವನ್ನು ಬಿಟ್ಟು ವಿಷ್ಣು ಎಂಬ ಅರ್ಥವನ್ನೇ ವಿವಕ್ಷಿಸಬೇಕು.

ಅದೃಶ್ಯತ್ವಾಧಿಕರಣದಂತೆ ವ್ಯಾಖ್ಯಾನ

ಭಾವದೀಪಃ – ಯಥಾ ಅದೃಶ್ಯತ್ವನಯೇ 'ಅಕ್ಷರಾತ್ ಸಮ್ಭವತೀಹ ವಿಶ್ವಮ್' ಇತ್ಯತ್ರಾಕ್ಷರಶಬ್ದೇನ ಬ್ರಹ್ಮಣಃ ಪ್ರಕೃತತ್ವೇऽಪಿ 'ಅಕ್ಷರಾತ್ಪರತಃ ಪರಃ' ಇತ್ಯತ್ರ ಪರತ್ವಾವಧಿತ್ವಬಾಧಕೇನ ತತ್ರಾಕ್ಷರಪದೇನ ಪ್ರಕೃತಿಗ್ರಹಣಂ ತದ್ವದಿತಿ ಭಾವಃ ।

ಯಾವರೀತಿಯಾಗಿ ಅದೃಶ್ಯತ್ವಾಧಿಕರಣದಲ್ಲಿ ''ಅಕ್ಷರಾತ್ಸಂಭವತೀಹ ವಿಶ್ವಂ'' ಎಂಬ ವಾಕ್ಯದಲ್ಲಿ ಅಕ್ಷರಶಬ್ದದಿಂದ ಬ್ರಹ್ಮನು ಪ್ರಕೃತನಾಗಿದ್ದರೂ ''ಅಕ್ಷರಾತ್ಪರತಃ ಪರಃ'' ಎಂಬಲ್ಲಿ ಪರತ್ವಾವಧಿತ್ವವೆಂಬ ಬಾಧಕವಿರುವ ಕಾರಣ ಅಕ್ಷರಶಬ್ದದಿಂದ ಪ್ರಕೃತಿಯನ್ನೇ ಸ್ವೀಕರಿಸಲಾಗುತ್ತದೆಯೋ ಅದರಂತೆ ಇಲ್ಲಿಯೂ ಸಹ 'ನಾಶಾಭಾವ' ಎಂಬ ಬಾಧಕವಿರುವುದರಿಂದ 'ವಿಷ್ಣು' ಎಂಬ ಅರ್ಥವನ್ನು ಸ್ವೀಕರಿಸಬೇಕು.

ಬ್ರಹ್ಮಪುರ ಪದದಿಂದ ವಿಷ್ಣುವೇ ಪ್ರಕೃತ

भावदीपः – एतच्चोपलक्षणम् । बृहत्वात् पूर्णकामत्वाद् विष्णुः ब्रह्मपुराभिधः । तस्मिंस्तस्य पुरं देहः तस्मिन् हृदयमास्थितमित्युक्तदिशा पूर्वमपि ब्रह्मपुरपदेन विष्णोरपि प्रकृतत्वाद् द्वयोः प्रकृतत्वेऽपि बहूनां सह निर्देश इत्यानन्दमयनयटीकोक्तरीत्या सत्यं ब्रह्मपुरमित्यत्र विष्णुमात्रग्रहणं युक्तमित्यपि ज्ञेयम् ।

ಇದು ಉಪಲಕ್ಷಣ - ''ಬೃಹತ್ವಾತ್ ಪೂರ್ಣಕಾಮತ್ವಾತ್ ವಿಷ್ಣುಃ ಬ್ರಹ್ಮಪುರಾಭಿಧಃ । ತಸ್ಮಿನ್‌ಸ್ತಸ್ಯ ಪುರಂ ದೇಹಸ್ತಸ್ಮಿನ್ ಹೃದಯಮಾಸ್ಥಿತಂ'' ಎಂಬ ಉಕ್ತಿಯ ಪ್ರಕಾರ ಹಿಂದೆಯೂ ಬ್ರಹ್ಮಪುರಪದದಿಂದ ವಿಷ್ಣುವೇ ಪ್ರಕೃತನಾಗಿದ್ದಾನೆ. ಇಬ್ಬರು ಪ್ರಕೃತರಾದಾಗ ''ಬಹೂನಾಂ ಸಹ ನಿರ್ದೇಶಃ'' ಎಂದು ಆನಂದಮಯಾಧಿಕರಣದ ಟೀಕೆಯಲ್ಲಿ ಹೇಳಿದ ಪ್ರಕಾರ ''ಸತ್ಯಂ ಬ್ರಹ್ಮಪುರಂ'' ಎಂಬಲ್ಲಿ ಕೇವಲ ವಿಷ್ಣುವೆಂಬ ಅರ್ಥವನ್ನು ಸ್ವೀಕರಿಸುವುದು ತಪ್ಪಾಗುವುದಿಲ್ಲ.

ವಿಷ್ಣುವೇ ಬ್ರಹ್ಮಪುರ ಎನ್ನಲು ಏನು ನಿರ್ಬಂಧ ?

भावदीपः – तर्हि उभयत्र वाक्यान्वयसामञ्जस्ये विष्णुरेवेति निर्बन्धे को हेतुरित्यत आकाशपक्ष एवान्वयाभाव इति न्यायविवरणोक्तमन्वयाभावं व्यनक्ति – नचेत्यादिना ।।

ಹಾಗಾದರೆ ಆಕಾಶ ಹಾಗೂ ಬ್ರಹ್ಮ ಎರಡರ್ಥದಲ್ಲಿಯೂ ವಾಕ್ಯದ ಅನ್ವಯ ಸಮಂಜಸ-ವಾಗುತ್ತಿರಲು ವಿಷ್ಣುವೇ ಬ್ರಹ್ಮಪುರ ಎನಿಸಿದ್ದಾನೆಂದು ನಿರ್ಬಂಧ ಮಾಡಲು ಏನು ಕಾರಣ? ಎಂಬ ಪ್ರಶ್ನೆಗೆ ಆಕಾಶ ಪಕ್ಷದಲ್ಲಿಯೇ ಅನ್ವಯವು ಕೂಡುವುದಿಲ್ಲ ಎಂಬುದನ್ನು ''ಆಕಾಶಪಕ್ಷೇ ಏವ ಅನ್ವಯಾಭಾವಃ'' ಎಂಬ ನ್ಯಾಯವಿವರಣದಲ್ಲಿ ಹೇಳಿದ್ದನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ ''ನಚ'' ಇತ್ಯಾದಿ ಟೀಕೆಯಿಂದ.

ಅನೇಕ ವಿಕಲ್ಪಗಳ ನಿರಾಕರಣೆ

ಭಾವದೀಪಃ – तत्र किं यावानिति वाक्ये पूर्वोक्तहृत्पुण्डरीकस्थदहराकाशस्यैव हृदयेऽवस्थानमुच्यते । अथ आकाशपदं सप्तम्यन्तमुपेत्य हृदये हृत्स्थे आकाशे व्याप्ताकाशोऽस्तीत्युच्यते । किं वा हृदये आकाश इति दहरमनूद्य यावानिति बाह्याकाश तुल्यतया तदेव विशिष्यत इति विकल्पान् हृदि कृत्वा आद्यं निराह – यावान् वा इत्यस्येति ।।

"ಯಾವಾನ್ವಾ" ಎಂಬ ವಾಕ್ಯದಲ್ಲಿ ಹಿಂದೆ ಹೇಳಲ್ಪಟ್ಟ ಹೃತ್ಪುಂಡರೀಕದಲ್ಲಿ ದಹರಾಕಾಶವನ್ನೇ ಹೃದಯದಲ್ಲಿದೆ ಎಂದು ಹೇಳಲಾಗಿದೆಯೋ? ಅಥವಾ ಆಕಾಶಪದವನ್ನು ಸಪ್ತಮ್ಯಂತವಾಗಿ ವಿವಕ್ಷಿಸಿ ಹೃದಯದಲ್ಲಿರುವ ಆಕಾಶದಲ್ಲಿ ವ್ಯಾಪ್ತಾಕಾಶವಿದೆ ಎಂದು ಹೇಳಲಾಗಿದೆಯೋ? ಅಥವಾ 'ಆಕಾಶ' ಎಂದು ದಹರಾಕಾಶವನ್ನು ಅನುವಾದ ಮಾಡಿ "ಯಾವಾನ್ವಾ" ಎಂಬ ವಾಕ್ಯದಿಂದ ಬಾಹ್ಯಾಕಾಶದ ಸಮಾನತೆಯನ್ನು ಹೇಳಲಾಗಿದೆಯೋ? ಇದೇ ಮೊದಲಾದ ವಿಕಲ್ಪಗಳನ್ನು ಹೃಯದಲ್ಲಿಟ್ಟುಕೊಂಡು ಮೊದಲನೆಯ ವಿಕಲ್ಪವನ್ನು "ಯಾವಾನ್ವಾ ಇತ್ಯಸ್ಯ" ಎಂಬ ವಾಕ್ಯದಿಂದ ನಿರಾಕರಿಸುತ್ತಿದ್ದಾರೆ.

ಭೂತಾಕಾಶದಲ್ಲಿ ಅನ್ವೇಷಣವು ಅಯುಕ್ತ

ಭಾವದೀಪಃ – हृदये आकाश इत्येतावता पूर्तेरिति भावः । द्वितीयं निराह – नहीति ।। तदभावादिति ।। ईश्वरवदचिन्त्यशक्त्यभावेन व्याप्ताकाशस्य दहराकाशस्थत्वाभावात् । छान्दोग्यभाष्योक्तदिशा 'तमेवैकं जानथ' इति ब्रह्मण एवान्वेष्टव्यत्वोक्त्या आकाशे अन्वेष्टव्यत्वायोगाच्चेत्यर्थः ।

ಮೊದಲನೆಯ ಪಕ್ಷದಲ್ಲಿ "ಹೃದಯೇ ಆಕಾಶಃ" ಎಂದಷ್ಟೇ ಹೇಳಿದ್ದರೆ ಸಾಕಾಗುತ್ತಿತ್ತು ಎಂದು ಅಭಿಪ್ರಾಯ. ಎರಡನೆಯ ಪಕ್ಷವನ್ನು 'ನಹಿ' ಇತ್ಯಾದಿ ವಾಕ್ಯದಿಂದ ನಿರಾಕರಿಸುತ್ತಿದ್ದಾರೆ. 'ತದಭಾವಾತ್' ಎಂದರೆ ಈಶ್ವರನಂತೆ ಅಚಿಂತ್ಯಶಕ್ತಿ ಇಲ್ಲದ ಕಾರಣ ವ್ಯಾಪ್ತಾಕಾಶವು ದಹರಾಕಾಶದಲ್ಲಿರಲು ಸಾಧ್ಯವಿಲ್ಲ. ಛಾಂದೋಗ್ಯಭಾಷ್ಯದ ಪ್ರಕಾರ "ತಮೇವೈಕಂ ಜಾನಥ" ಎಂದು ಬ್ರಹ್ಮನಲ್ಲಿ ಮಾತ್ರ ಅನ್ವೇಷಣವನ್ನು ಹೇಳಿದ್ದರಿಂದ ಭೂತಾಕಾಶದಲ್ಲಿ ಅನ್ವೇಷಣವು ಅಯುಕ್ತವಾಗುತ್ತದೆಂದು ಅಭಿಪ್ರಾಯ.

ಹೃದಯಾಕಾಶವು ವ್ಯಾಪ್ತವಾಗುವುದಿಲ್ಲ

ಭಾವದೀಪಃ – तृतीयं निराह – नापीति ।। व्याप्तत्वेति ।। ईश्वरवदचिन्त्यशक्त्य भावादिति भावः ।

ಮೂರನೆಯ ಪಕ್ಷವನ್ನು ''ನಾಪಿ'' ಇತ್ಯಾದಿ ವಾಕ್ಯದಿಂದ ನಿರಾಕರಿಸುತ್ತಿದ್ದಾರೆ. ವ್ಯಾಪ್ತತ್ವವೆಂದರೆ ಈಶ್ವರನಂತೆ ಅಚಿಂತ್ಯಶಕ್ತಿ ಇಲ್ಲದ ಕಾರಣ ಹೃದಯಾಕಾಶವು ವ್ಯಾಪ್ತವಾಗಲು ಸಾಧ್ಯವಿಲ್ಲವೆಂದು ತಿಳಿಯಬೇಕು.

ದ್ಯಾವಾಪೃಥಿವ್ಯಾದಿಗಳಿಗೆ ಜಿಜ್ಞಾಸ್ಯತ್ವವೇ ಅಯುಕ್ತ

ಭಾವದೀಪಃ – नहि 'द्यावापृथिव्यादेर्जिज्ञास्यत्वं' 'तमेवैकं जानथ आत्मानम् अन्या वाचो विमुञ्चथ' इति हि श्रुतिरिति छान्दोग्यभाष्योक्तं दोषमाह – मुख्यत इति ।।

ದ್ಯಾವಾಪೃಥಿವ್ಯಾದಿಗಳಿಗೆ ಜಿಜ್ಞಾಸ್ಯತ್ವವೇ ಕೂಡುವುದಿಲ್ಲ. ಏಕೆಂದರೆ ''ತಮೇವೈಕಂ ಜಾನಥ ಆತ್ಮಾನಮ್ ಅನ್ಯಾ ವಾಚೋ ವಿಮುಂಚಥ'' ಎಂದಷ್ಟೇ ಶ್ರುತಿ ಇರುತ್ತದೆ. ಆದ್ದರಿಂದ ಛಾಂದೋಗ್ಯೋಪನಿಷತ್ತಿನಲ್ಲಿ ಹೇಳಲ್ಪಟ್ಟ ದೋಷವನ್ನು ''ಮುಖ್ಯತಃ'' ಇತ್ಯಾದಿ ವಾಕ್ಯಗಳಿಂದ ಹೇಳಿರುತ್ತಾರೆ.

ಮುಖ್ಯವಾದ ಜಿಜ್ಞಾಸ್ಯತ್ವ ಬ್ರಹ್ಮನಲ್ಲಿ ಮಾತ್ರ

ಭಾವದೀಪಃ – तदाधारतयेति प्रागुक्तदिशा ब्रह्मणि प्रकारतया जिज्ञास्यत्वमस्तीत्यतो मुख्यत इत्युक्तम् । वक्ष्यति च 'अवस्थितेरिति काशकृत्स्नः' इति सूत्रेऽमुख्यतो जिज्ञास्यत्वमिति भावः ।

ದ್ಯಾವಾಪೃಥಿವ್ಯಾದಿಗಳಲ್ಲಿಯೂ ಅಮುಖ್ಯವಾದ ಜಿಜ್ಞಾಸ್ಯತ್ವವನ್ನು ಹೇಳಬಹುದಲ್ಲವೇ? ''ತದಾಧಾರತಯಾ'' ಎಂದು ಹಿಂದೆ ಹೇಳಿದ ಪ್ರಕಾರ ಬ್ರಹ್ಮನಲ್ಲಿ ಪ್ರಕಾರವಾಗಿರುವುದರಿಂದ ಇವುಗಳ ಜಿಜ್ಞಾಸೆಯನ್ನು ಏಕೆ ಹೇಳಬಾರದು? ಎಂಬ ಪ್ರಶ್ನೆಗೆ ''ಮುಖ್ಯತಃ'' ಎಂದು ಉತ್ತರಿಸಿದ್ದಾರೆ. 'ಅವಸ್ಥಿತೇರಿತಿ ಕಾಶಕೃತ್ಸ್ನಃ'' ಎಂಬ ಸೂತ್ರದಲ್ಲಿ ಅಮುಖ್ಯವಾದ ಜಿಜ್ಞಾಸ್ಯತ್ವವನ್ನೇ ಇವುಗಳಿಗೆ ಹೇಳಿದಂತಾಗುತ್ತದೆ. ಮುಖ್ಯವಾದ ಜಿಜ್ಞಾಸ್ಯತ್ವವು ಬ್ರಹ್ಮನಲ್ಲಿ ಮಾತ್ರ ಬರುತ್ತದೆ ಎಂದು ಅಭಿಪ್ರಾಯ.

ಭಾಷ್ಯದಲ್ಲಿ ಅಪೇಕ್ಷಿತವಾದ ಪದಗಳ ಪೂರಣೆ

भावदीपः – पूर्वोक्तशङ्कापरिहारकत्वेनापि तदित्यादिभाष्यमवतार्य व्याचष्टे – नन्वेवमिति ।। अङ्गीकारेऽपीति ।। यथा साक्षाद् हृत्पद्मस्थत्वे विरोधस्तथैवमङ्गीकारेऽपीत्यपेरर्थः । भाष्येऽपेक्षितं पूरयति – नचैवमङ्गीकारेऽपीति ।। १७ ।।

ಹಿಂದಿನ ಶಂಕೆಯ ಪರಿಹಾರಕ್ಕಾಗಿ "ತತ್" ಇತ್ಯಾದಿ ಭಾಷ್ಯವು ಹೊರಟಿದೆ ಎಂದು ಅವತಾರಿಕೆಯನ್ನು ಹೇಳಿ ವ್ಯಾಖ್ಯಾನ ಮಾಡುತ್ತಿದ್ದಾರೆ "ನನ್ವೇಮ್" ಇತ್ಯಾದಿ ಟೀಕೆಯಿಂದ. "ಅಂಗೀಕಾರೇऽಪಿ" ಎಂದರೆ ಯಾವರೀತಿಯಾಗಿ ಹೃತ್ಪದ್ಮಸ್ಥತ್ವವನ್ನು ನೇರ ಹೇಳಿದರೆ ವಿರೋಧ ಬರುತ್ತದೆಯೋ ಅದರಂತೆ ಪರಂಪರೆಯಿಂದ ಹೃತ್ಪದ್ಮಸ್ಥಿತತ್ವವನ್ನು ಹೇಳಿದರೂ ಕೂಡ ವಿರೋಧ ಬರುತ್ತದೆಂದರ್ಥ. ಭಾಷ್ಯದಲ್ಲಿ ಅಪೇಕ್ಷಿತವಾದ ಪದಗಳನ್ನು ಪೂರ್ತಿಮಾಡಿಕೊಳ್ಳಬೇಕೆಂಬುದನ್ನು "ನಚೈವ ಮಂಗೀಕಾರೇऽಪಿ" ಎಂಬುದರಿಂದ ಹೇಳಿದ್ದಾರೆ.

ಬ್ರಹ್ಮಸೂತ್ರ

'ಇತರಪರಾಮರ್ಶಾತ್ಸ ಇತಿ ಚೇನ್ನಾಸಂಭವಾತ್' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – इतरपरामर्शात्स इति चेन्नासम्भवात् ।। १८ ।।

ಅನುವಾದ - 'स्वेन रूपेणाभिनिष्पद्यते' ಎಂಬುದಾ[illegible] ಪ್ರಕೃತನಾದ ಜೀವನನ್ನೇ 'ಏಷ ಆತ್ಮಾ' ಎಂಬಲ್ಲಿರುವ 'ಏತತ್' ಶಬ್ದದಿಂದ ಪರಾಮರ್ಶ[illegible]ಗಿದೆ. ಆದ್ದರಿಂದ ಜೀವನೇ ಹೃದಯಪದ್ಮಸ್ಥನಾಗಬೇಕಲ್ಲವೆ ? ಎಂದು ಪ್ರಶ್ನಿಸಬಾರದು. ಹೃದಯಪದ್ಮಸ್ಥನಲ್ಲಿ ಸ್ಥಿತವಾದ ಪಾಪಲೇಪರಾಹಿತ್ಯ ಮೊದಲಾದ ಧರ್ಮಗಳು ಜೀವನಲ್ಲಿ ಸ್ವತಂತ್ರವಾಗಿ ಬರಲು ಸಾಧ್ಯವೇ ಇಲ್ಲ.

ಅರ್ಥ -- ಇತರಪರಾಮರ್ಶಾತ್ = 'ಪರಂಜ್ಯೋತಿರುಪಸಂಪದ್ಯ' ಎಂಬುದಾಗಿ ಪ್ರಸಕ್ತನಾದ ಬ್ರಹ್ಮನಿಗಿಂತ ಭಿನ್ನನಾದ ಜೀವನು 'ಏಷ ಆತ್ಮಾ' ಎಂಬ ಪ್ರಕರಣದಲ್ಲಿರುವ 'ಏತತ್' ಶಬ್ದದಿಂದ ಪರಾಮರ್ಶಿಸಲ್ಪಟ್ಟಿದ್ದಾನೆ. ಆದ್ದರಿಂದ ಸಃ - ಇತಿ = ಚೇತ್, ಜೀವನೇ ಹೃದಯಪದಸ್ಥನಾಗಿದ್ದಾನೆಂದು ಆಕ್ಷೇಪ.

ನ = ಇದು ತಪ್ಪು . ಅಸಂಭವಾತ್ = ಜೀವನಿಗೆ ಇಲ್ಲಿ ಹೇಳಲ್ಪಟ್ಟ ಅಪಹತಪಾಪ್ಮತ್ವಾದಿ ಗುಣಗಳು ಸ್ವತಂತ್ರವಾಗಿ ಬರಲು ಸಾಧ್ಯವಿಲ್ಲ.

ಬ್ರಹ್ಮಸೂತ್ರಭಾಷ್ಯ

ಹೃದಯಕಮದಲ್ಲಿರುವ ಆತ್ಮನು ಜೀವನಲ್ಲ

ब्रह्मसूत्रभाष्यम् – ।। इतरपरामर्शात् स इति चेन्नासम्भवात् ।।

'परंज्योतिरुपसम्पद्य स्वेन रूपेणाभिनिष्पद्यते,'(छां.८-१२-३)
'एष आत्मेति होवाच' (छां.४-१५-१) इति जीवपरामर्शात् स इति चेत्,

ಅನುವಾದ - 'ಪರಂಜ್ಯೋತಿಸ್ವರೂಪನಾದ ಪರಮಾತ್ಮನನ್ನು ಹೊಂದಿ ತನ್ನ ಸ್ವಾಭಾವಿಕವಾದ ರೂಪದಿಂದ ಪ್ರಕಟನಾಗುತ್ತಾನೆ ಇವನೇ ಜೀವಾತ್ಮನು', ಹೀಗೆ 'ಯ ಆತ್ಮಾ ಅಪಹತಪಾಪ್ಮಾ' ಎಂಬುದಾಗಿ, ಪ್ರಕೃತನಾದ ಹೃದಯಸ್ಥನಾದ ಆತ್ಮನನ್ನು 'ಏಷ ಆತ್ಮಾ' ಎಂಬ ಶ್ರುತಿಯಲ್ಲಿ ಪರಾಮರ್ಶ ಮಾಡಲಾಗಿದೆ. ಆದ್ದರಿಂದ ಜೀವಾತ್ಮನೇ ಹೃತ್ಪದ್ಮಸ್ಥನಾಗುತ್ತಾನಲ್ಲವೇ ?

ಪ್ರತಿಪದಾರ್ಥ -- ಭಗವಂತನಲ್ಲಿರುವ ಹೃತ್ಪದ್ಮಸ್ಥತ್ವಲಿಂಗವನ್ನು ಆಕ್ಷೇಪಮಾಡಿ ಸಮಾಧಾನವನ್ನು ತೋರಿಸುತ್ತಾ ಸೂತ್ರದಲ್ಲಿರುವ ಆಕ್ಷೇಪ ಭಾಗವನ್ನಷ್ಟೇ ವ್ಯಾಖ್ಯಾನಿಸುತ್ತಿದ್ದಾರೆ -

ಪರಂಜ್ಯೋತಿಃ = ಪರಂಜ್ಯೋತಿಸ್ವರೂಪನಾದ ಪರಮಾತ್ಮನನ್ನು, ಉಪಸಂಪದ್ಯ = ಹೊಂದಿ, ಸ್ವೇನ ರೂಪೇಣ = ಸ್ವಾಭಾವಿಕವಾದ ತನ್ನ ರೂಪದಿಂದ, ಅಭಿನಿಷ್ಪದ್ಯತೇ = ಪ್ರಕಟಗೊಳ್ಳುತ್ತಾನೆ. ಏಷ ಆತ್ಮಾ = ಇವನೇ ಜೀವಾತ್ಮನು, ಇತಿ = ಹೀಗೆ, ಹೋವಾಚ = ಹೇಳಿದರು ಎಂದು ಪ್ರಸಿದ್ಧಿ, ಇತಿ = ಎಂದು, ಜೀವಪರಾಮರ್ಶಾತ್ = 'ಯ ಆತ್ಮಾ

ಅಪಹತಪಾಪ್ಮಾ' ಎಂಬಲ್ಲಿ ಜೀವನನ್ನು ಪರಾಮರ್ಶೆ ಮಾಡಿರುವುದರಿಂದ,
ಸಃ = ಜೀವನು, ಹೃತ್‌ಪದಸ್ಥನು, ಇತಿ ಚೇತ್ = ಹೀಗೆ ಆಕ್ಷೇಪವುಂಟಾದರೆ-

ಜೀವನಲ್ಲಿ ಅಪಹತಪಾಪಾತ್ಮವು ಸ್ವತಂತ್ರವಾಗಿಲ್ಲ

ಬ್ರಹ್ಮಸೂತ್ರಭಾಷ್ಯಮ್ – ನ । ತಸ್ಯ ಸ್ವತೋऽಪಹತಪಾಪ್ಮತ್ವಾದ್ಯಸಮ್ಭವಾತ್ ।।

ಅನುವಾದ - ಇದು ತಪ್ಪು. ಏಕೆಂದರೆ ಜೀವನು ಈಶ್ವರನನ್ನು ಅಪೇಕ್ಷಿಸದೇ ಸ್ವತಂತ್ರವಾಗಿ ಅಪಹತಪಾಪ್ಮನಾಗಲು ಸಾಧ್ಯವಿಲ್ಲ.

ಪ್ರತಿಪದಾರ್ಥ -- 'ಧೃತೇಶ್ಚ' ಸೂತ್ರದಿಂದ 'ಅಸ್ಯ ಅಸ್ಮಿನ್ನುಪಲಬ್ಧೇಃ' ಎಂಬುದನ್ನು ಅನುವೃತ್ತಿ ಮಾಡಿಕೊಂಡು, ಪರಿಹಾರ ಅಂಶವನ್ನಷ್ಟೇ ವ್ಯಾಖ್ಯಾನಿಸುತ್ತಿದ್ದಾರೆ.

ನ = ಇದು ತಪ್ಪು, ತಸ್ಯ = ಆ ಜೀವನಿಗೆ, ಸ್ವತಃ = ಸ್ವಾಭಾವಿಕವಾಗಿ, ಅಪಹತಪಾಪ್ಮತ್ವಾದಿ = ಅಪಹತಪಾಪ್ಮತ್ವ ಮೊದಲಾದ ಧರ್ಮಗಳು, ಅಸಂಭವಾತ್ = ಇರುವುದಿಲ್ಲ.

ಸತ್ತರ್ಕದೀಪಾವಳಿ

'ಇತರಪರಾಮರ್ಶಾತ್' ಎಂಬ ಸೂತ್ರದ ಅರ್ಥ

ಸತ್ತರ್ಕದೀಪಾವಲಿಃ – ಇತರಪರಾಮರ್ಶಾತ್ ಸ ಇತಿ ಚೇನ್ನಾಸಮ್ಭವಾತ್ ।। ೧೮ ।।

'ಏಷ ಆತ್ಮಾऽಪಹತ[illegible]ಪ್ಮಾ' ಇತ್ಯಾದಿವಾಕ್ಯವಶಾದ್ ದಹರಾಕಾಶಸ್ಥಿತೋ ವಿಷ್ಣುರೇವ ದ್ಯಾವಾಪೃಥಿವ್ಯಾಧಾರ ಇತ್ಯುಕ್ತಮ್, ತನ್ನ ।

'ಇತರ' ಇತ್ಯಾದಿ ಸೂತ್ರದ ಅರ್ಥ ಹೀಗಿದೆ - 'ಏಷ ಆತ್ಮಾ ಅಪಹತಪಾಪ್ಮಾ' ಇತ್ಯಾದಿ ವಾಕ್ಯದ ಬಲದಿಂದ ಹೃದಯದ ದಹರಾಕಾಶದಲ್ಲಿರುವವನು, ವಿಷ್ಣುವೇ ಆಗಿದ್ದಾನೆ. ಇವನು ದ್ಯಾವಾಪೃಥಿವ್ಯಾದಿಗಳಿಗೆ ಆಧಾರನಾಗಿದ್ದಾನೆಂದು ಹೇಳಲಾಯಿತು, ಇದು ತಪ್ಪು.

ಅರ್ಥ -- ಇತರಪರಾಮರ್ಶಾತ್ = 'ಪರಂಜ್ಯೋತಿರುಪಸಂಪದ್ಯ' ಎಂಬುದಾಗಿ ಪ್ರಸಕ್ತನಾದ ಬ್ರಹ್ಮನಿಗಿಂತ ಭಿನ್ನನಾದ ಜೀವನು 'ಏಷ ಆತ್ಮಾ' ಎಂಬ ಪ್ರಕರಣದಲ್ಲಿರುವ 'ಏತತ್' ಶಬ್ದದಿಂದ ಪರಾಮರ್ಶಿಸಲ್ಪಟ್ಟಿದ್ದಾನೆ. ಆದ್ದರಿಂದ ಸಃ - ಇತಿ = ಚೇತ್, ಜೀವನೇ ಹೃದಯಪದಸ್ಥನಾಗಿದ್ದಾನೆಂದು ಆಕ್ಷೇಪ.

ನ = ಇದು ತಪ್ಪು . ಅಸಂಭವಾತ್ = ಜೀವನಿಗೆ ಇಲ್ಲಿ ಹೇಳಲ್ಪಟ್ಟ ಅಪಹತಪಾಪ್ಮತ್ವಾದಿ ಗುಣಗಳು ಸ್ವತಂತ್ರವಾಗಿ ಬರಲು ಸಾಧ್ಯವಿಲ್ಲ.

ಬ್ರಹ್ಮಸೂತ್ರಭಾಷ್ಯ

ಹೃದಯಕಮದಲ್ಲಿರುವ ಆತ್ಮನು ಜೀವನಲ್ಲ

ब्रह्मसूत्रभाष्यम् – ।। इतरपरामर्शात् स इति चेन्नासम्भवात् ।।

'परंज्योतिरुपसम्पद्य स्वेन रूपेणाभिनिष्पद्यते,'(छां.८-१२-३)

'एष आत्मेति होवाच' (छां.४-१५-१) इति जीवपरामर्शात् स इति चेत्,

ಅನುವಾದ - 'ಪರಂಜ್ಯೋತಿಸ್ವರೂಪನಾದ ಪರಮಾತ್ಮನನ್ನು ಹೊಂದಿ ತನ್ನ ಸ್ವಾಭಾವಿಕವಾದ ರೂಪದಿಂದ ಪ್ರಕಟನಾಗುತ್ತಾನೆ ಇವನೇ ಜೀವಾತ್ಮನು', ಹೀಗೆ 'ಯ ಆತ್ಮಾ ಅಪಹತಪಾಪ್ಮಾ' ಎಂಬುದಾಗಿ, ಪ್ರಕೃತನಾದ ಹೃದಯಸ್ಥನಾದ ಆತ್ಮನನ್ನು 'ಏಷ ಆತ್ಮಾ' ಎಂಬ ಶ್ರುತಿಯಲ್ಲಿ ಪರಾಮರ್ಶ ಮಾಡಲಾಗಿದೆ. ಆದ್ದರಿಂದ ಜೀವಾತ್ಮನೇ ಹೃತ್ಪದ್ಮಸ್ಥನಾಗುತ್ತಾನಲ್ಲವೇ ?

ಪ್ರತಿಪದಾರ್ಥ -- ಭಗವಂತನಲ್ಲಿರುವ ಹೃತ್‌ಪದಸ್ಥತ್ವಲಿಂಗವನ್ನು ಆಕ್ಷೇಪಮಾಡಿ ಸಮಾಧಾನವನ್ನು ತೋರಿಸುತ್ತಾ ಸೂತ್ರದಲ್ಲಿರುವ ಆಕ್ಷೇಪ ಭಾಗವನ್ನಷ್ಟೇ ವ್ಯಾಖ್ಯಾನಿಸುತ್ತಿದ್ದಾರೆ -

ಪರಂಜ್ಯೋತಿಃ = ಪರಂಜ್ಯೋತಿಸ್ವರೂಪನಾದ ಪರಮಾತ್ಮನನ್ನು, ಉಪಸಂಪದ್ಯ = ಹೊಂದಿ, ಸ್ವೇನ ರೂಪೇಣ = ಸ್ವಾಭಾವಿಕವಾದ ತನ್ನ ರೂಪದಿಂದ, ಅಭಿನಿಷ್ಪದ್ಯತೇ = ಪ್ರಕಟಗೊಳ್ಳುತ್ತಾನೆ. ಏಷ ಆತ್ಮಾ = ಇವನೇ ಜೀವಾತ್ಮನು, ಇತಿ = ಹೀಗೆ, ಹೋವಾಚ = ಹೇಳಿದರು ಎಂದು ಪ್ರಸಿದ್ಧಿ, ಇತಿ = ಎಂದು, ಜೀವಪರಾಮರ್ಶಾತ್ = 'ಯ ಆತ್ಮಾ

ಅಪಹತಪಾಪ್ಮಾ' ಎಂಬಲ್ಲಿ ಜೀವನನ್ನು ಪರಾಮರ್ಶೆ ಮಾಡಿರುವುದರಿಂದ,
ಸಃ = ಜೀವನು, ಹೃತ್‌ಪದಸ್ಥನು, ಇತಿ ಚೇತ್ = ಹೀಗೆ ಆಕ್ಷೇಪವುಂಟಾದರೆ-

ಜೀವನಲ್ಲಿ ಅಪಹತಪಾಪಾತ್ಮವು ಸ್ವತಂತ್ರವಾಗಿಲ್ಲ

ಬ್ರಹ್ಮಸೂತ್ರಭಾಷ್ಯಮ್ – ನ । ತಸ್ಯ ಸ್ವತೋऽಪಹತಪಾಪ್ಮತ್ವಾದ್ಯಸಮ್ಭವಾತ್ ।।

ಅನುವಾದ - ಇದು ತಪ್ಪು. ಏಕೆಂದರೆ ಜೀವನು ಈಶ್ವರನನ್ನು ಅಪೇಕ್ಷಿಸದೇ ಸ್ವತಂತ್ರವಾಗಿ ಅಪಹತಪಾಪ್ಮನಾಗಲು ಸಾಧ್ಯವಿಲ್ಲ.

ಪ್ರತಿಪದಾರ್ಥ -- 'ಧೃತೇಶ್ಚ' ಸೂತ್ರದಿಂದ 'ಅಸ್ಯ ಅಸ್ಮಿನ್ನುಪಲಬ್ಧೇಃ' ಎಂಬುದನ್ನು ಅನುವೃತ್ತಿ ಮಾಡಿಕೊಂಡು, ಪರಿಹಾರ ಅಂಶವನ್ನಷ್ಟೇ ವ್ಯಾಖ್ಯಾನಿಸುತ್ತಿದ್ದಾರೆ.

ನ = ಇದು ತಪ್ಪು, ತಸ್ಯ = ಆ ಜೀವನಿಗೆ, ಸ್ವತಃ = ಸ್ವಾಭಾವಿಕವಾಗಿ, ಅಪಹತಪಾಪ್ಮತ್ವಾದಿ = ಅಪಹತಪಾಪ್ಮತ್ವ ಮೊದಲಾದ ಧರ್ಮಗಳು, ಅಸಂಭವಾತ್ = ಇರುವುದಿಲ್ಲ.

ಸತ್ತರ್ಕದೀಪಾವಳಿ

'ಇತರಪರಾಮರ್ಶಾತ್' ಎಂಬ ಸೂತ್ರದ ಅರ್ಥ

ಸತ್ತರ್ಕದೀಪಾವಳಿಃ – ಇತರಪರಾಮರ್ಶಾತ್ ಸ ಇತಿ ಚೇನ್ನಾಸಮ್ಭವಾತ್ ।। ೧೮ ।।

'ಏಷ ಆತ್ಮಾऽಪಹತ[illegible]ಪ್ಮಾ' ಇತ್ಯಾದಿವಾಕ್ಯವಶಾದ್ ದಹರಾಕಾಶಸ್ಥಿತೋ ವಿಷ್ಣುರೇವ ದ್ಯಾವಾಪೃಥಿವ್ಯಾಧಾರ ಇತ್ಯುಕ್ತಮ್, ತನ್ನ ।

'ಇತರ' ಇತ್ಯಾದಿ ಸೂತ್ರದ ಅರ್ಥ ಹೀಗಿದೆ - 'ಏಷ ಆತ್ಮಾ ಅಪಹತಪಾಪ್ಮಾ' ಇತ್ಯಾದಿ ವಾಕ್ಯದ ಬಲದಿಂದ ಹೃದಯದ ದಹರಾಕಾಶದಲ್ಲಿರುವವನು, ವಿಷ್ಣುವೇ ಆಗಿದ್ದಾನೆ. ಇವನು ದ್ಯಾವಾಪೃಥಿವ್ಯಾದಿಗಳಿಗೆ ಆಧಾರನಾಗಿದ್ದಾನೆಂದು ಹೇಳಲಾಯಿತು, ಇದು ತಪ್ಪು.

ದಹರಾಕಾಶಸ್ಥಿತನಾದವನು ಜೀವನಲ್ಲವೇ ?

सत्तर्कदीपावलिः – दहराकाशस्थितस्य जीवस्यैव 'परं ज्योतिरुपसम्पद्य स्वेन रूपेणाभिनिष्पद्यते, एष आत्मेति होवाच' इति परामर्शादिति चेत्,

ದಹರಾಕಾಶದಲ್ಲಿರುವ ಜೀವನೇ 'ಪರಂ ಜ್ಯೋತಿರುಪಸಂಪದ್ಯ ಸ್ವೇನ ರೂಪೇಣಾಭಿನಿಷ್ಪದ್ಯತೇ ಏಷ ಆತ್ಮೇತಿ ಹೋವಾಚ' ಎಂಬುದಾಗಿ ಪರಾಮರ್ಶಿಸಲ್ಪಟ್ಟಿದ್ದಾನೆ. ಹೀಗಿರುವಾಗ ಇಂತಹ ಜೀವನನ್ನೇ ದಹರಾಕಾಶಸ್ಥಿತನೆಂದು ಹೇಳಬೇಕಲ್ಲವೆ?

ಅಪಹತಪಾಪ್ಮತ್ವವಿಲ್ಲದ ಜೀವನಲ್ಲಿ ಅಸಂಭಾವಿತ

सत्तर्कदीपावलिः – मैवम् । जीवस्यापहतपाप्मत्वादिधर्मासम्भवेनात्रात्म-शब्देन निर्देशासम्भवात् ।

ಈ ಆಕ್ಷೇಪವು ತಪ್ಪು, ಜೀವನಲ್ಲಿ ಅಪಹತಪಾಪ್ಮತ್ವ ಮೊದಲಾದ ಧರ್ಮಗಳು ಅಸಂಭಾವಿತಗಳಾಗಿವೆ. ಆದ್ದರಿಂದ ಶ್ರುತಿಯಲ್ಲಿರುವ ಆತ್ಮಶಬ್ದದಿಂದ ಜೀವನನ್ನು ನಿರ್ದೇಶ ಮಾಡಲು ಸಾಧ್ಯವಿಲ್ಲ.

ಮುಕ್ತಜೀವನನ್ನು ಪರಾಮರ್ಶಿಸಲಾಗದು

सत्तर्कदीपावलिः – 'परं ज्योतिरुपसम्पद्य स्वेन रूपेणाभिनिष्पद्यते, स तत्र पर्येति जक्षन् क्रीडन् रममाणः' इत्युपरितनवाक्येन मुक्तजीवप्रतीतेः । मुक्तस्यापहतपाप्मत्वादिगुणकात्मत्व- सम्भव इति चेत्,

'ಪರಂ ಜ್ಯೋತಿರುಪಸಂಪದ್ಯ ಸ್ವೇನ ರೂಪೇಣಾಭಿನಿಷ್ಪದ್ಯತೇ, ಸ ತತ್ರ ಪರ್ಯೇತಿ ಜಕ್ಷನ್ ಕ್ರೀಡನ್ ರಮಮಾಣಃ' ಎಂಬ ಮುಂದಿನ ವಾಕ್ಯದ ಬಲದಿಂದ ಮುಕ್ತನಾದ ಜೀವನು ಪ್ರಸಕ್ತನಾಗಿದ್ದಾನೆಂದು ತಿಳಿಯುತ್ತದೆ. ಮುಕ್ತನಾದ ಜೀವನಲ್ಲಾದರೂ ಅಪಹತಪಾಪ್ಮತ್ವ ಮೊದಲಾದ ಗುಣಗಳಿರುವುದರಿಂದ ಆತ್ಮಶಬ್ದದಿಂದ ಅವನನ್ನು ನಿರ್ದೇಶ ಮಾಡಬಹುದಲ್ಲವೆ?

ಶ್ರುತಿಗೆ ಅಮುಖ್ಯಾರ್ಥವನ್ನು ಸ್ವೀಕರಿಸಿದಂತಾಗುತ್ತದೆ

सत्तर्कदीपावलिः – मैवम् । अमुख्यार्थत्वात् । नहि मुख्ये सत्यमुख्यं युज्यते ।

ಈ ಶಂಕೆಯು ಸರಿಯಲ್ಲ, ಹಾಗೇನಾದರೂ ಮುಕ್ತ ಜೀವನನ್ನು ನಿರ್ದೇಶ ಮಾಡಿದರೆ, ಅಮುಖ್ಯಾರ್ಥವನ್ನು ಶ್ರುತಿಗೆ ಹೇಳಿದಂತಾಯಿತು. ಮುಖ್ಯಾರ್ಥವನ್ನೇ ಸುಲಭವಾಗಿ ಹೇಳಲು ಬರುವಾಗ ಅಮುಖ್ಯಾರ್ಥವನ್ನು ಸ್ವೀಕರಿಸುವುದು ನ್ಯಾಯವಲ್ಲ. ಆದ್ದರಿಂದ ಪರಮಾತ್ಮನ ಪ್ರಸಾದದಿಂದ ಪಡೆಯಲ್ಪಟ್ಟ ಅಪಹತಪಾಪತ್ವವೇ ಮೊದಲಾದ ಗುಣಗಳುಳ್ಳ, ಅಮುಖ್ಯವಾದ ಆತ್ಮಶಬ್ದ ಪ್ರತಿಪಾದ್ಯನಾದ ಮುಖ್ಯಜೀವನನ್ನು ಪರಿತ್ಯಾಗ ಮಾಡಿ ಮುಖ್ಯನಾದ ಪರಮಾತ್ಮನೇ ಅಪಹತಪಾಪತ್ವಾದಿಗುಣಗಳಿಂದ ಶ್ರುತಿಯಲ್ಲಿ ಹೇಳಲ್ಪಟ್ಟಿದ್ದಾನೆ.

ಶ್ರುತಿಯಲ್ಲಿರುವ 'ಏತತ್' ಪದದಿಂದ ಪರಮಾತ್ಮನನ್ನೇ ಪರಾಮರ್ಶಿಸಬೇಕು

सत्तर्कदीपावलिः – नचैष य आत्मेति जीवपरामर्शविरोधः, यं परं ज्योतिश्शब्दाभिधेयमुपसम्पद्य स्वेन रूपेणाभिनिष्पद्यते । एष आत्मेति परमात्मन एव परामर्शोपपत्तेः।

।। इति श्रीपद्मनाभतीर्थविरचितसत्तर्कदीपावळ्याम्: दहराधिकरणम् ।।

ಹಾಗಾದರೆ 'ಏಷಃ ಯ ಆತ್ಮಾ' ಎಂಬ ವಾಕ್ಯದಿಂದ ಜೀವನನ್ನು ಪರಾಮರ್ಶ ಮಾಡಿದ್ದಕ್ಕೆ ವಿರೋಧ ಬರುತ್ತದಲ್ಲವೆ? ಎಂದು ಪ್ರಶ್ನಿಸಬಾರದು. ಯಾವ ಶ್ರೇಷ್ಠನಾದ 'ಜ್ಯೋತಿಃ' ಎಂಬ ಶಬ್ದದಿಂದ ಪ್ರತಿಪಾದ್ಯನಾದ ಪರಮಾತ್ಮನನ್ನು ಹೊಂದಿ ತನ್ನ ನೈಜಸ್ವರೂಪವನ್ನು ಪಡೆಯತ್ತಾನೋ ಅಂತಹ ವಿಷ್ಣುವೇ 'ಆತ್ಮಾ' ಎಂಬ ಶಬ್ದದಿಂದ ನಿರ್ದೇಶಿಸಲ್ಪಟ್ಟಿದ್ದಾನೆ. ಹೀಗೆ 'ಏಷ ಆತ್ಮಾ' ಎಂಬ ಶ್ರುತಿಯಲ್ಲಿರುವ 'ಏತತ್' ಪದದಿಂದ ಪರಮಾತ್ಮನನ್ನೇ ಪರಾಮರ್ಶೆ ಮಾಡಬೇಕು.

॥ ಇಲ್ಲಿಗೆ ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ ಸತ್ತರ್ಕದೀಪಾವಳಿಯಲ್ಲಿ
ದಹರಾಧಿಕರಣದ ಕನ್ನಡಾನುವಾದವು ಸಮಾಪ್ತವಾಯಿತು ॥

ತತ್ತ್ವಪ್ರಕಾಶಿಕಾ

ಹೃತ್ಪದ್ಮಸ್ಥವೆಂಬ ಲಿಂಗದ ಆಕ್ಷೇಪ

तत्वप्रकाशिका – इतरपरामर्शात् स इति चेन्नासम्भवात् ।। १८ ।।

भगवतो हृत्पद्मस्थत्वमाक्षिप्य समादधत्सूत्रमुपन्यस्याऽऽक्षेपांशं तावव्याचष्टे – इतरेति ।।

ಭಗವಂತನಲ್ಲಿ ಸಾಧಿಸಲ್ಪಟ್ಟ ಹೃತ್ಪದ್ಮಸ್ಥತ್ವವೆಂಬ ಲಿಂಗವನ್ನು ಆಕ್ಷೇಪ ಮಾಡಿ ಅದರ ಸಮಾಧಾನಕ್ಕಾಗಿ ಸೂತ್ರವನ್ನು ರಚಿಸಿ, ಆಕ್ಷೇಪಾಂಶವನ್ನು ಮೊದಲು ವ್ಯಾಖ್ಯಾನ ಮಾಡುತ್ತಿದ್ದಾರೆ 'ಇತರ' ಇತ್ಯಾದಿಯಾಗಿ.

ಹೃದಯಪದ್ಮಸ್ಥನು ಜೀವನೆಂಬ ಆಕ್ಷೇಪ

तत्वप्रकाशिका – 'परं ज्योतिरुपसम्पद्य स्वेन रूपेण अभिनिष्पद्यते' इत्युक्तस्य जीवस्य 'एष आत्मेति होवाच' इति हृत्पद्मस्थात्मतया परामर्शाज्जीव एव हृत्पद्मस्थ इत्यर्थः ।

'परंज्ಯೋತಿರುಪಸಂಪದ್ಯ ಸ್ವೇನ ರೂಪೇಣ ಅಭಿನಿಷ್ಪದ್ಯತೇ' ಎಂಬ ಶ್ರುತಿಯಲ್ಲಿ ಪ್ರತಿಪಾದಿಸಲ್ಪಟ್ಟ ಜೀವನನ್ನು 'ಏಷ ಆತ್ಮೇತಿ ಹೋವಾಚ' ಎಂಬುದಾಗಿ ಹೃದಯಪದ್ಮಸ್ಥನೆಂದು ಪರಾಮರ್ಶ ಮಾಡಲಾಗಿದೆ. ಹಾಗಾಗಿ ಹೃದಯಪದ್ಮಸ್ಥನಾದವನು ಜೀವನೇ ಆಗಿದ್ದಾನೆಂದು ಆಕ್ಷೇಪ.

ಜೀವನಲ್ಲಿ ಅಸಂಭಾವಿತವಾದ ಧರ್ಮಗಳು

तत्वप्रकाशिका – परिहारांशं व्याचष्टे – नेति ।। न जीवो हृत्पद्मस्थः । हृत्पद्मस्थेऽपहतपाप्मत्वादिगुणश्रवणात्तेषां जीवेऽसम्भवात् ।

ಈ ಆಕ್ಷೇಪಕ್ಕೆ ಪರಿಹಾರ ನೀಡುವ ಸೂತ್ರದ ಭಾಗವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ. 'ನ' ಇತ್ಯಾದಿ ಮಾತುಗಳಿಂದ. ಜೀವನು ಹೃತ್ಪದ್ಮಸ್ಥನಲ್ಲವೆಂದು ಅರ್ಥ. ಏಕೆಂದರೆ ಹೃತ್ಪದ್ಮಸ್ಥನಲ್ಲಿ ಅಪಹತಪಾಪ್ಮತ್ವವೇ ಮೊದಲಾದ ಗುಣಗಳು ಶ್ರುತವಾಗಿವೆ. ಇಂತಹ ಗುಣಗಳು ಜೀವನಲ್ಲಿ ಅತ್ಯಂತ ಅಸಂಭಾವಿತ.

ಮುಕ್ತಜೀವನಲ್ಲಿಯೂ ಕೂಡ ಅಸಂಭಾವಿತ

तत्वप्रकाशिका – नच वाच्यं मुक्तजीवे तत्सम्भवात् जीव एव भाविभावेनोच्यत इति ।

ಮುಕ್ತಜೀವನಲ್ಲಿ ಅಪಹತಪಾಪ್ಮತ್ವಾದಿಗುಣಗಳು ಇರುವುದರಿಂದ, ಮುಂದೆ ಬರುವ ಗುಣಗಳನ್ನು ವಿವಕ್ಷಿಸಿ ಸಂಸಾರಾವಸ್ಥೆಯಲ್ಲಿಯೇ ಅಂತಹ ಗುಣಗಳುಳ್ಳವನೆಂದು ಹೇಳಿರ-ಬಹುದಲ್ಲವೆ? ಎಂದು ಪ್ರಶ್ನಿಸಬಾರದು.

ಹೃತ್ಪದ್ಮಸ್ಥನಾದವನು ಶ್ರೀಹರಿ ಮಾತ್ರ

तत्वप्रकाशिका – मुक्तस्याप्यस्वातन्त्र्येण तदसम्भवात् । अतः स्वातन्त्र्येणापहतपाप्मत्वादिगुणो हरिरेव हृत्पद्मगत इति भावः ।।

ಮುಕ್ತನಲ್ಲಿ ಅಪಹತಪಾಪ್ಮತ್ವ ಮೊದಲಾದ ಗುಣಗಳು ಇರಬಹುದು, ಆದರೆ ಅಸ್ವಾತಂತ್ರ್ಯದಿಂದಷ್ಟೇ ಆ ಗುಣಗಳು ಬಂದಿರುತ್ತವೆ. ಸ್ವತಂತ್ರವಾಗಿ ಅಪಹತಪಾಪ್ಮತ್ವಾದಿ-ಗುಣಗಳುಳ್ಳ ಶ್ರೀಹರಿಯನ್ನು ವಿವಕ್ಷಿಸುವುದೇ ನ್ಯಾಯಸಮ್ಮತವಾದುದು. ಮುಖ್ಯವಾದ ಅರ್ಥವನ್ನು ಹೇಳಲು ಬರುವಾಗ ಅಮುಖ್ಯಾರ್ಥವನ್ನು ಸ್ವೀಕರಿಸುವುದು ತಪ್ಪು. ಆದ್ದರಿಂದ ಶ್ರೀಹರಿಯೇ ಹೃತ್ಪದ್ಮದಲ್ಲಿದ್ದಾನೆಂದು ಸಿದ್ಧವಾಯಿತು.

ಭಾವದೀಪ

ಯಾರನ್ನು ಪರಾಮರ್ಶಿಸ ಬೇಕು ?

ಭಾವದೀಪಃ – ಇತರಪರಾಮರ್ಶಾತ್ ಸ ಇತಿ ಚೇನ್ನಾಸಮ್ಭವಾತ್ ।। ೧೮ ।।

ಪರಾಮರ್ಶಾದಿತಿ ।। ''ಏಷ ಸಮ್ಪ್ರಸಾದೋऽಸ್ಮಾಚ್ಛರೀರಾತ್ ಸಮುತ್ಥಾಯ ಪರಂ ಜ್ಯೋತಿಃ'' ಇತಿ ಪೂರ್ವವಾಕ್ಯೇ ''ಸಮ್ಪ್ರಸಾದ'' ಪದೇನ ಪ್ರಕೃತಸ್ಯ ''ಅಭಿನಿಷ್ಪದ್ಯತೇ'' ಇತಿ ಕರ್ತೃತ್ವೇನೋಕ್ತಸ್ಯ ಜೀವಸ್ಯ ''ಏಷಃ'' ಇತಿ ಪರಾಮೃಶ್ಯ ಆತ್ಮಪದೇನ 'ಯ ಆತ್ಮಾऽಪಹತಪಾಪ್ಮಾ ವಿಜರೋ ವಿಮೃತ್ಯುಃ' ಇತ್ಯುಕ್ತ ಹೃತ್ಪದ್ಮಸ್ಥಾತ್ಮತ್ವವಿಧಾನಾದಿತ್ಯರ್ಥಃ।

ಟೀಕೆಯಲ್ಲಿ ''ಪರಾಮರ್ಶಾತ್'' ಎಂದು ಹೇಳಿದ್ದಾರೆ. ಇದರ ಅಭಿಪ್ರಾಯ ಹೀಗಿದೆ - ''ಏಷ ಸಂಪ್ರಸಾದೋऽಸ್ಮಾಚ್ಛರೀರಾತ್ಸಮುತ್ಥಾಯ ಪರಂ ಜ್ಯೋತಿಃ'' ಎಂಬ ಹಿಂದಿನ ವಾಕ್ಯದಲ್ಲಿ ''ಸಂಪ್ರಸಾದ'' ಪದದಿಂದ ಪ್ರಕೃತನಾದವನಿಗೆ ''ಅಭಿನಿಷ್ಪದ್ಯತೇ'' ಎಂದು ಕರ್ತೃತ್ವೇನ ಹೇಳಲಾದ ಜೀವನನ್ನೇ ''ಏಷಃ'' ಎಂದು ಪರಾಮರ್ಶ ಮಾಡಿ ಆತ್ಮಪದದಿಂದ ''ಯ ಆತ್ಮಾऽಪಹತಪಾಪ್ಮಾ ವಿಜರೋ ವಿಮೃತ್ಯುಃ'' ಎಂಬಲ್ಲಿ ಹೇಳಲ್ಪಟ್ಟ ಹೃತ್ಪದ್ಮದಲ್ಲಿರುವ ಆತ್ಮನೆಂದು ಹೇಳಲಾಗಿದೆ ಎಂದು ಅಭಿಪ್ರಾಯ.

ಪ್ರತಿಜ್ಞೆಯೊಂದಿಗೆ ಅನ್ವಯ

ಭಾವದೀಪಃ – ಶೇಷಪೂರ್ತ್ಯಾ ಸ ಇತಿ ಪ್ರತಿಜ್ಞಾರ್ಥಮಾಹ – ಜೀವ ಏವೇತಿ ।। ನೇತ್ಯಸ್ಯ ಪೂರ್ವತನಪ್ರತಿಜ್ಞಯಾऽನ್ವಯಂ ದರ್ಶಯನ್ ಹೇತುಸಾಧ್ಯಯೋರವೈಯ್ಯಧಿಕರಣ್ಯಾಯ ಭಾಷ್ಯಂ ವ್ಯಾಚಷ್ಟೇ – ನ ಜೀವ ಇತಿ ।।

ವಾಕ್ಯದ ಉಳಿದ ಪದಗಳನ್ನು ಪೂರ್ತಿ ಮಾಡುವ ಮೂಲಕ ''ಸಃ'' ಎಂಬ ಪ್ರತಿಜ್ಞಾರ್ಥವನ್ನು ಹೇಳುತ್ತಿದ್ದಾರೆ ''ಜೀವ ಏವ'' ಎಂಬುದಾಗಿ. ''ನ'' ಎಂಬುದಕ್ಕೆ ಹಿಂದಿನ ಪ್ರತಿಜ್ಞೆಯೊಂದಿಗೆ ಅನ್ವಯವನ್ನು ತೋರಿಸುತ್ತಾ ಹೇತು ಮತ್ತು ಸಾಧ್ಯಗಳಿಗೆ ವೈಯ್ಯಧಿಕರಣವನ್ನು ಪರಿಹರಿಸುತ್ತಾ ಭಾಷ್ಯವನ್ನು ವ್ಯಾಖ್ಯಾನಿಸುತ್ತಿದ್ದಾರೆ ''ನ ಜೀವ'' ಇತ್ಯಾದಿಯಾಗಿ.

ನಿರಪೇಕ್ಷವಾದ ಅರ್ಥವೇ ಗ್ರಾಹ್ಯ

भावदीपः – स्वत इति पदं शङ्कापूर्वं व्यनक्ति – नचेति ।। स्वातन्त्र्येणेति।। सापेक्षनिरपेक्षयोर्निरपेक्षमेव श्रुतौ स्वीकर्तव्यमिति भावः ।।१८।।

''ಸ್ವತಃ'' ಎಂಬ ಪದವನ್ನು ಶಂಕೆ ಮಾಡುವ ಮೂಲಕ ವ್ಯಾಖ್ಯಾನಿಸುತ್ತಿದ್ದಾರೆ ''ನಚ'' ಇತ್ಯಾದಿ ಟೀಕೆಯಿಂದ. ''ಸ್ವಾತಂತ್ರ್ಯೇಣ'' ಎಂದರೆ ಸಾಪೇಕ್ಷ ಹಾಗೂ ನಿರಪೇಕ್ಷಗಳಲ್ಲಿ ನಿರಪೇಕ್ಷವಾದದ್ದನ್ನೇ ಶ್ರುತ್ಯರ್ಥವೆಂದು ಪರಿಗಣಿಸಬೇಕೆಂದು ಅಭಿಪ್ರಾಯ.

ಬ್ರಹ್ಮಸೂತ್ರ

'ಉತ್ತರಾಚ್ಚೇದಾವಿರ್ಭೂತಸ್ವರೂಪಸ್ತು' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – उत्तराच्चेदाविर्भूतस्वरूपस्तु ।। ९ ।।

ಅನುವಾದ - 'ಸ ತತ್ರ ಪರ್ಯೇತಿ' ಎಂಬ ಮುಂದಿನ ವಾಕ್ಯದಲ್ಲಿ ಸತ್ಯಕಾಮತ್ವವೇ ಮೊದಲಾದ ಧರ್ಮಗಳನ್ನು ಜೀವನಲ್ಲಿ ಹೇಳಲಾಗಿದೆ. ಈ ಹೇತುವಿನಿಂದ ಅಪಹತಪಾಪ್ಮತ್ವ ಮೊದಲಾದವೂ ಸಹ ಜೀವನಲ್ಲಿ ಬರುತ್ತವಲ್ಲವೆ ? ಎಂದು ಪ್ರಶ್ನಿಸಬಾರದು. ಏಕೆಂದರೆ ಅದೇ ವಾಕ್ಯದಲ್ಲಿ ಮುಕ್ತನಾದ ಜೀವನ ಉಲ್ಲೇಖವಿದೆ ಹೊರತು ಸಂಸಾರಾವಸ್ಥೆಯಲ್ಲಿರುವ ಹೃದಯದಲ್ಲಿ ನೆಲೆಸಿರುವ ಜೀವನ ಉಲ್ಲೇಖವಿಲ್ಲ. ಮೋಕ್ಷವನ್ನು ಪಡೆದಾಗ ಪಾಪರಹಿತನಾಗಿದ್ದರೂ ಸಂಸಾರಕಾಲದಲ್ಲಿ ಪಾಪಗಳಿಂದ ಯುಕ್ತನೇ ಆಗಿರುತ್ತಾನೆ.

ಅರ್ಥ -- 'ತು' ಎಂಬ ಶಬ್ದವು 'ಏವ' ಎಂಬ ಅರ್ಥದಲ್ಲಿದೆ. 'ಣ' ಎಂಬುದನ್ನು ಶೇಷಪೂರಣ ಮಾಡಿಕೊಳ್ಳಬೇಕು. ಆದ್ದರಿಂದ ಉತ್ತರಾತ್= 'ಸ ತತ್ರ ಪರ್ಯೇತಿ' ಎಂಬ ಮುಂದಿನ ವಾಕ್ಯದಲ್ಲಿ ಜೀವನಿಗೆ ಸತ್ಯಕಾಮತ್ವಗಳು ಪ್ರತೀತವಾಗುತ್ತಿವೆ ಆದ್ದರಿಂದಲೇ ವಿಷ್ಣುಲೋಕತ್ವಾದಿಗಳನ್ನೂ ಕೂಡಿಸಬಹುದು. ಈ ಕಾರಣದಿಂದ ಜೀವನು ಹೃದಯಪದ್ಮಸ್ಥನಾಗುತ್ತಾನಲ್ಲವೆ? ಎಂದರೆ ಇದು ತಪ್ಪು. ಏಕೆಂದರೆ ಯಾವ ವಾಕ್ಯದಲ್ಲಿ ಸತ್ಯಕಾಮತ್ವಾದಿಗಳು ಶ್ರುತವಾಗಿವೆಯೋ ಅದೇ ವಾಕ್ಯದಲ್ಲಿ 'ಸ್ವೇನ ರೂಪೇಣ ಜೀವೋ ಅಭಿನಿಷ್ಪದ್ಯತೇ' ಎಂಬುದಾಗಿ ಆವಿರ್ಭೂತ ಸ್ವರೂಪನಾದ ಮುಕ್ತಜೀವನ ಉಲ್ಲೇಖವಿದೆ, ಹೊರತಾಗಿ ಜೀವಸಾಮಾನ್ಯನ ಉಲ್ಲೇಖವಿಲ್ಲ. ಮುಕ್ತನಾದರೂ ಸ್ವಾಭಾವಿಕವಾಗಿ ಅಪಹತಪಾಪ್ಮತ್ವ ಮುಂತಾದ ಗುಣಗಳಿಂದ ಕೂಡಿರುವವನು ಅಲ್ಲ. ಆದ್ದರಿಂದ ಮುಕ್ತನಿಗೂ ಕೂಡ ಹೃದಯಪದ್ಮಸ್ಥತ್ವವು ಬರುವುದಿಲ್ಲ.

.ಬ್ರಹ್ಮಸೂತ್ರಭಾಷ್ಯ

ಸ್ವೇಚ್ಛೆಯಿಂದ ವಿಹರಿಸುವ ಜೀವನೇಕೆ ಹೃತ್ಪದ್ಮಸ್ಥನಾಗಬಾರದು ?

ब्रह्मसूत्रभाष्यम् – ।। उत्तराच्चेदाविर्भूतस्वरूपस्तु ।।

'स तत्र पर्येति जक्षन् क्रीडन् रममाणः' (छां.८-१२-३)
इत्याद्युत्तरवचनाज्जीव एवेति चेत्,

ಅನುವಾದ - ಛಾಂದೋಗ್ಯದ ಮುಂದಿನ ನಾಲ್ಕನೆಯ ಖಂಡದಲ್ಲಿ, 'ಮುಕ್ತ ಜೀವನು ಭಗವಂತನ ಲೋಕದಲ್ಲಿ ಸ್ವೇಚ್ಛೆಯಿಂದ ತಿನ್ನುತ್ತಾ ಆಟವಾಡುತ್ತಾ ಸಂಚರಿಸುತ್ತಾನೆ' ಎಂದು ಹೇಳಲಾಗಿದೆ. ಆದ್ದರಿಂದಲೂ ಜೀವನೇ ಹೃತ್ಪದ್ಮಸ್ಥನಾಗಬೇಕಲ್ಲವೇ ?

ಪ್ರತಿಪದಾರ್ಥ -- ಜೀವನಲ್ಲಿ ಅಪಹತಪಾಪ್ಮತ್ವವನ್ನು ಏಕೆ ಹೇಳಬಾರದು? ಎಂದು ಆಕ್ಷೇಪಿಸಿ ಸಮಾಧಾನ ನೀಡುವ ಸೂತ್ರವನ್ನು ಉಪನ್ಯಾಸ ಮಾಡುತ್ತಾ ಆಕ್ಷೇಪಾಂಶವನ್ನಷ್ಟೇ ವ್ಯಾಖ್ಯಾನಿಸುತ್ತಿದ್ದಾರೆ.

'ಸಃ = ಜೀವನು, ತತ್ರ = ಮೋಕ್ಷದಲ್ಲಿ, ಜಕ್ಷನ್ = ಸ್ವೇಚ್ಛೆಯಿಂದ ತಿನ್ನುತ್ತಾ, ಕ್ರೀಡನ್ = ಆಟವಾಡುತ್ತಾ, ರಮಮಾಣಃ = ವಿಹಾರ ಮಾಡುತ್ತಾ, ಪರ್ಯೇತಿ = ಸಂಚರಿಸುತ್ತಾನೆ', ಇತ್ಯಾದಿ ವಚನಾತ್ = ಇವೇ ಮೊದಲಾದ ಛಾಂದೋಗ್ಯದ ಮುಂದಿನ ವಾಕ್ಯಗಳಿಂದ, ಜೀವ ಏವ = ಜೀವನೇ ಹೃತ್ಪದ್ಮಸ್ಥನು, ಇತಿ ಚೇತ್ = ಇಷ್ಟು ಆಕ್ಷೇಪವುಂಟಾದರೆ.

ಸತ್ಯಕಾಮತ್ವ, ಪಾಪಾದ್ಯಲೇಪ ಧರ್ಮಗಳು ಜೀವನಲ್ಲಿಲ್ಲ

ब्रह्मसूत्रभाष्यम् – न । तत्र हि परमेश्वरप्रसादादाविर्भूतस्वरूपो मुक्त उच्यते ।

ಅನುವಾದ - ಇದು ತಪ್ಪು. ಏಕೆಂದರೆ, ಪರಮಾತ್ಮನ ಅನುಗ್ರಹದಿಂದಷ್ಟೇ, ಜೀವನು ತನ್ನ ಸ್ವರೂಪದಲ್ಲಿರುವ ಸುಖವನ್ನು ಹೇಗೆ ಅನುಭವಿಸುತ್ತಾನೆಂಬುದನ್ನು ಈ ಶ್ರುತಿಯು ವರ್ಣಿಸುತ್ತಿದೆ.

ಪ್ರತಿಪದಾರ್ಥ -- 'ಪರಂಜ್ಯೋತಿರುಪಸಂಪದ್ಯ' ಎಂಬ ಶ್ರುತಿಯಲ್ಲಿ, ಜೀವನಿಗೆ ಅಪಹತಪಾಪ್ಮತ್ವಾದಿಗುಣಗಳು ಇವೆ ಎಂದಷ್ಟೇ ಹೇಳಲಾಗಿದೆ.

ಪರಮಾತ್ಮನ ಅಧೀನನೆಂದು ಹೇಳಿಲ್ಲವಲ್ಲ ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ -

ಪ್ರತಿಪದಾರ್ಥ -- ನ = ಇದು ತಪ್ಪು, ತತ್ರಹಿ = ಆ ಶ್ರುತಿಯಲ್ಲಿ, ಪರಮೇಶ್ವರಪ್ರಸಾದಾತ್ = ಭಗವಂತನ ಅನುಗ್ರಹದಿಂದಲೇ, ಆವಿರ್ಭೂತಸ್ವರೂಪಃ = ತನ್ನ ಸ್ವರೂಪಸುಖದ ಅಭಿವ್ಯಕ್ತಿಯುಳ್ಳವನು, ಮುಕ್ತಃ = ಮುಕ್ತನೆಂದು, ಉಚ್ಯತೇ = ಹೇಳಲ್ಪಟ್ಟಿದ್ದಾನೆ.

ಜೀವನು ಪರಮಾತ್ಮನ ಅಧೀನ

ಬ್ರಹ್ಮಸೂತ್ರಭಾಷ್ಯಮ್ – ಯತ್ಪ್ರಸಾದಾತ್ ಸ ಮುಕ್ತೋ ಭವತಿ ಸ ಭಗವಾನ್ ಪೂರ್ವೋಕ್ತಃ ।।

ಅನುವಾದ - ಯಾರ ಅನುಗ್ರಹದಿಂದ ಜೀವನು ಮೋಕ್ಷವನ್ನು ಪಡೆಯುತ್ತಾನೋ ಅಂತಹವನೇ ಪರಮಾತ್ಮನು. ಅವನೇ ಪರಂಜ್ಯೋತಿಯು ಎಂದು ಹಿಂದಿನ ವಾಕ್ಯದ ಅಭಿಪ್ರಾಯ.

ಪ್ರತಿಪದಾರ್ಥ -- ಯತ್ ಪ್ರಸಾದಾತ್ = ಯಾರ ಪ್ರಸಾದದಿಂದ, ಸಃ = ಜೀವನು, ಮುಕ್ತೋ ಭವತಿ = ಮೋಕ್ಷವನ್ನು ಪಡೆಯುತ್ತಾನೋ, ಸಃ = ಅಂತಹ, ಭಗವಾನ್ = ಭಗವಂತನು, ಪೂರ್ವೋಕ್ತಃ = ಹಿಂದೆ ಹೇಳಲ್ಪಟ್ಟ ಅಪಹತಪಾಪ್ಮತ್ವಾದಿ ಗುಣಗಳುಳ್ಳವನೆಂದು ಸಿದ್ಧವಾಗುವುದು.

ತತ್ತ್ವಪ್ರಕಾಶಿಕಾ

ಸೂತ್ರದಲ್ಲಿರುವ ಆಕ್ಷೇಪ ಭಾಗದ ವ್ಯಾಖ್ಯಾನ

ತತ್ವಪ್ರಕಾಶಿಕಾ –

उत्तराच्चेदाविर्भूतस्वरूपस्तु ।। ९ ।।

जीवस्यापहतपाप्मत्वाद्यसम्भवमाक्षिप्य समादधत्सूत्रं पठित्वाऽऽक्षेपांशं तावद् व्याचष्टे – उत्तरादिति ।।

ಜೀವನಲ್ಲಿ ಅಪಹತಪಾಪತ್ವಾದಿಗುಣಗಳು ಅಸಂಭಾವಿತವೆಂದು ಹಿಂದಿನ ಸೂತ್ರದಲ್ಲಿ ಸಮರ್ಥಿಸಲಾಯಿತು. ಅದನ್ನು ಆಕ್ಷೇಪ ಮಾಡಿ ಸಮಾಧಾನ ನೀಡುವ ಸೂತ್ರವನ್ನು ಪಠಿಸಿ ಮೊದಲು ಆಕ್ಷೇಪಭಾಗವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ 'ಉತ್ತರಾತ್' ಇತ್ಯಾದಿಯಾಗಿ.

ಸತ್ಯಕಾಮತ್ವಾದಿಗಳೂ ಕೂಡ ಜೀವನಲ್ಲಿ ಬರುತ್ತದಲ್ಲವೇ ?

तत्वप्रकाशिका – 'एष सम्प्रसादोऽस्माच्छरीरात् समुत्थाय' इत्युक्तजीवस्य 'स तत्र पर्येति' इत्यादिना सत्यकामत्वप्रतीतेस्तत एव विशोकत्वादिसिद्धेः उक्तगुणासम्भवाभावात्स एव हृत्पद्मस्थ इत्यर्थः ।

'ಏಷ ಸಂಪ್ರಸಾದೋಽಸ್ಮಾಚ್ಛರೀರಾತ್ ಸಮುತ್ಥಾಯ' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಜೀವನಿಗೆ 'ಸ ತತ್ರ ಪರ್ಯೇತಿ' ಇತ್ಯಾದಿ ವಾಕ್ಯಗಳಲ್ಲಿ ಸತ್ಯಕಾಮತ್ವಾದಿ ಗುಣಗಳು ಶ್ರುತವಾಗಿವೆ. ಆದ್ದರಿಂದಲೇ ಶೋಕರಾಹಿತ್ಯವೂ ಸಹ ಸಿದ್ಧವಾಗುತ್ತಿದೆ. ಆದ್ದರಿಂದ ಅಪಹತಪಾಪತ್ವಾದಿ ಗುಣಗಳನ್ನು ಜೀವನಲ್ಲಿ ಹೇಳಬಹುದಾದ್ದರಿಂದ ಅವನೇ ಹೃತ್ಪದ್ಮಸ್ಥನಾಗಿದ್ದಾನೆಂದು ಆಕ್ಷೇಪದ ಅಭಿಪ್ರಾಯ.

ಮುಕ್ತರಾದ ಜೀವರು ಪ್ರತಿಪಾದ್ಯರೆಂದು ಆಕ್ಷೇಪ

तत्वप्रकाशिका – नञध्याहारेण परिहारांशं व्याचष्टे – नेति ।। नैतद्वाक्यबलेन जीवस्य गुणान् सम्भाव्य हृत्पद्मस्थत्वं वाच्यम् । तद्वाक्ये मुक्तजीवस्योच्यमानत्वात्।

ಸೂತ್ರದಲ್ಲಿ 'ನಞ್' ಎಂಬುದನ್ನು ಅಧ್ಯಾಹಾರ ಮಾಡಿಕೊಂಡು ಪರಿಹಾರವನ್ನು ಹೇಳುವ ಸೂತ್ರದ ಭಾಗವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ 'ನ' ಇತ್ಯಾದಿಯಾಗಿ. 'ಸ ತತ್ರ ಪರ್ಯೇತಿ' ಎಂಬ ವಾಕ್ಯದ ಬಲದಿಂದ ಜೀವನಲ್ಲಿ ಸತ್ಯಕಾಮತ್ವಾದಿ ಗುಣಗಳನ್ನು ವಿವಕ್ಷಿಸಿ ಹೃತ್ಪದ್ಮಸ್ಥತ್ವವನ್ನು ಆಕ್ಷೇಪ ಮಾಡಲು ಸಾಧ್ಯವಿಲ್ಲ. ಏಕೆಂದರೆ ಈ ವಾಕ್ಯದಲ್ಲಿ ಮುಕ್ತರಾದ ಜೀವರೇ ಪ್ರತಿಪಾದ್ಯರಾಗಿದ್ದಾರೆ.

ಮುಕ್ತಧರ್ಮವು ಹೃದಯದಲ್ಲಿರುವ ಜೀವನಲ್ಲಿಲ್ಲ

तत्वप्रकाशिका – 'स्वेन रूपेणाभिनिष्पद्यते' इत्युक्तेः । हृत्पद्मस्थस्य च देहान्तर्वर्तितया मुक्तत्वायोगात् ।

ಏಕೆಂದರೆ 'ಸ್ವೇನ ರೂಪೇಣಾಭಿನಿಷ್ಪದ್ಯತೇ', ಎಂಬುದಾಗಿ ಮುಕ್ತಜೀವರ ಧರ್ಮವನ್ನು ಹೇಳಲಾಗಿದೆ. ಹೃತ್ಪದ್ಮಸ್ಥಜೀವನಾದರೋ ದೇಹದ ಒಳಗಡೆ ಇರುವುದರಿಂದ ಅಂತಹ ಮುಕ್ತಧರ್ಮವನ್ನು ಇವನಲ್ಲಿ ಹೇಳಲಾಗದು.

ಭಾವಿಭಾವಾಭಿಪ್ರಾಯದಿಂದೇಕೆ ಕೂಡಿಸಬಾರದು ?

तत्वप्रकाशिका – नच वक्तव्यं मुक्तविषयत्वेऽप्येतद्वाक्यस्य मुक्तस्यापि जीवत्वेनास्त्येव जीवेऽपहतपाप्मत्वादिसम्भवोऽतो जीव एव अपहतपाप्मत्वादिगुणो हृत्पद्मगततया भाविभावेनोच्यत इति ।

ಈ ವಾಕ್ಯವು ಮುಕ್ತವಿಷಯಕವಾಗಿರಬಹುದು, ಆದರೂ ಸಹ ಮುಕ್ತನು ಜೀವನೇ ಆಗಿರುವುದರಿಂದ, ಜೀವನಲ್ಲಿ ಅಪಹತಪಾಪ್ಮತ್ವಾದಿಗುಣಗಳನ್ನು ಹೇಳಿದಂತಾಯಿತು. ಹೀಗೆ ಅಪಹತಪಾಪ್ಮತ್ವಾದಿಗುಣಗಳನ್ನು ಹೇಳಿರುವ ಕಾರಣ ಅಂತಹ ಜೀವನು ಹೃತ್ಪದ್ಮಸ್ಥನಾಗುತ್ತಾನೆಂದು (ಮುಂದೆ ಬರುವ ಗುಣಗಳನ್ನು ಅಭಿಪ್ರಾಯದಲ್ಲಿಟ್ಟುಕೊಂಡು) ಭಾವಿಭಾವಾಭಿಪ್ರಾಯದಿಂದ ಹೇಳಬಹುದಲ್ಲವೆ? ಎಂದು ಪ್ರಶ್ನಿಸಬಾರದು.

ಸ್ವತಂತ್ರವಾದ ಗುಣಗಳು ಜೀವನಲ್ಲಿ ಸರ್ವಥಾ ಇಲ್ಲ

तत्वप्रकाशिका – मुक्तस्यापि परमेश्वरप्रसादादेव तद्गुणाविर्भावेन स्वतोऽपहत-पाप्मत्वाद्यसम्भवादिति भावः ।

ಏಕೆಂದರೆ ಮುಕ್ತನಾದ ಜೀವನೂ ಕೂಡ ಪರಮಾತ್ಮನ ಪ್ರಸಾದದಿಂದಲೇ, ಅಂತಹ ಗುಣಗಳನ್ನು ಪಡೆಯುತ್ತಾನೆ. ಮುಕ್ತನಾದ ಜೀವನಲ್ಲಿ ಸ್ವತಂತ್ರವಾಗಿ ಅಪಹತಪಾಪ್ಮತ್ವಾದಿಗುಣಗಳು ಬರಲು ಸಾಧ್ಯವೇ ಇಲ್ಲ.

ಸ್ವತಂತ್ರವಾಗಿ ಸತ್ಯಕಾಮತ್ವಾದಿಗಳು ಇರಬಹುದಲ್ಲವೇ ?

तत्वप्रकाशिका – नन्वत्र मुक्तस्य तद्गुणत्वमेवोच्यते नतु परमेश्वराधीनत्वम् अतस्तत्स्वत एवेत्यत आह – यदिति ।।

ಶ್ರುತಿಯಲ್ಲಿ ಮುಕ್ತನಿಗೆ ಸತ್ಯಕಾಮತ್ವಾದಿಗುಣಗಳಷ್ಟೇ ಇದೆ ಎಂದು ಹೇಳಲಾಗಿದೆ. ಅವು ಪರಮಾತ್ಮನ ಅಧೀನವಾಗಿದೆ ಎಂದು ಹೇಳಿಲ್ಲ. ಇದರಿಂದ ಸ್ವತಂತ್ರವಾಗಿಯೇ ಇವೆ ಎಂದು ತಿಳಿಯುತ್ತದಲ್ಲವೇ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ 'ಯತ್ರ' ಇತ್ಯಾದಿ ಭಾಷ್ಯದಿಂದ.

ಪರಮಾತ್ಮನೊಬ್ಬನೇ ಅಪಹತಪಾಪ್ಮತ್ವಾದಿ ಗುಣಗಳುಳ್ಳವನು

तत्वप्रकाशिका – नात्र मुक्तगुणप्राप्तेः परमेश्वराधीनत्वोक्त्यभावः । परमेश्वरस्य गुणप्रदातृतया 'परं ज्योतिरूपसम्पद्य' इति पूर्ववाक्योक्तत्वादिति भावः । ननु परमेश्वरप्रसादादपि जीवस्यास्त्येव तद्गुणजातमतः स एवापहतपाप्मत्वादिगुणो हृत्पद्मस्थोऽस्त्वित्यतो वाऽऽह – यदिति ।। न परमेश्वरप्रसादलब्धगुणो जीवः पूर्ववाक्येऽपहतपाप्मत्वादिनोक्तः । किन्तु यत्प्रसादात्स मुक्तो भूत्वाऽपहतपाप्मत्वादिगुणो भवति स भगवानेव ।

ಶ್ರುತಿಯಲ್ಲಿ ಮುಕ್ತನಲ್ಲಿರುವ ಗುಣಗಳಿಗೆ ಪರಮಾತ್ಮನ ಅಧೀನತ್ವವನ್ನು ಹೇಳಿಲ್ಲವೆಂದಿಲ್ಲ, 'ಪರಂಜ್ಯೋತಿರುಪಸಂಪದ್ಯ' ಎಂಬ ಹಿಂದಿನ ವಾಕ್ಯದಲ್ಲಿಯೇ ಪರಮಾತ್ಮನನ್ನು ಆಶ್ರಯಿಸಿ ಇಂತಹ ಗುಣಗಳನ್ನು ಪಡೆದಿದ್ದಾನೆಂದು ಹೇಳಿದ್ದಾಗಿದೆ. ಹಾಗಾದರೆ ಪರಮಾತ್ಮನ ಅಧೀನವಾಗಿಯಾದರೂ ಜೀವನಿಗೆ ಅಂತಹ ಗುಣಗಳು ಇದ್ದೇ ಇರುತ್ತವೆ. ಒಟ್ಟಾರೆ ಅಪಹತಪಾಪ್ಮತ್ವಾದಿಗುಣಗಳು ಇರುವ ಕಾರಣ ಜೀವನನ್ನು ಹೃತ್ಪದ್ಮಸ್ಥನೆಂದು ಹೇಳಬಹುದಲ್ಲವೆ? ಎಂಬ ಮತ್ತೊಂದು ಪ್ರಶ್ನೆಗೂ 'ಯತ್' ಇತ್ಯಾದಿ ಭಾಷ್ಯದಿಂದಲೇ ಸೂಚನೆ ನೀಡಿದ್ದಾರೆ.

ಹಿಂದಿನ ವಾಕ್ಯದಲ್ಲಿ ಪರಮಾತ್ಮನ ಪ್ರಸಾದದಿಂದ ಪಡೆಯಲ್ಪಟ್ಟ ಗುಣಗಳುಳ್ಳ ಜೀವನು ಪ್ರತಿಪಾದ್ಯನಾಗಿಲ್ಲ; ಹೊರತು ಯಾರ ಪ್ರಸಾದದಿಂದ ಜೀವರುಗಳು ಮುಕ್ತರಾಗುತ್ತಾರೋ ಅಂತಹ ಪರಮಾತ್ಮನೇ ಅಪಹತಪಾಪ್ಮತ್ವಾದಿ ಗುಣಗಳುಳ್ಳವನೆಂದು ಶ್ರುತಿಯ ಅಭಿಪ್ರಾಯ. ಆದ್ದರಿಂದ ಜೀವನನ್ನು ವಿವಕ್ಷಿಸಿ ಹೃತ್ಪದ್ಮಸ್ಥನೆಂದು ಹೇಳಬಾರದು.

ದಾತೃಪ್ರತಿಗ್ರಹೀತೃಗಳಲ್ಲಿ ದಾತೃವೇ ಪ್ರಧಾನ

तत्वप्रकाशिका – दातृप्रतिग्रहीत्रोर्दातुरेव मुख्यत्वात् मुख्यस्यैव ग्राह्यत्वादिति भावः ।।

ಅಪಹತಪಾಪ್ಮತ್ವಾದಿಗುಣಗಳನ್ನು ಜೀವನಿಗೆ ನೀಡಿದವನು ಭಗವಂತ. ಸ್ವೀಕರಿಸಿದವನು ಜೀವ. ದಾತೃ ಮತ್ತು ಪ್ರತಿಗಹೀತೃಗಳಲ್ಲಿ, ದಾತೃವೇ ಪ್ರಧಾನವಾದ್ದರಿಂದ ಎರಡೂ ಅರ್ಥಗಳನ್ನೂ ವಿವಕ್ಷಿಸಲು ಬರುತ್ತಿರುವಾಗ ಪ್ರಧಾನವಾದ ದಾತೃವಾದ ಪರಮಾತ್ಮನೆಂಬ ಅರ್ಥವನ್ನೇ ಸ್ವೀಕರಿಸುವುದು ನ್ಯಾಯಸಮ್ಮತವಾಗುತ್ತದೆ.

ಭಾವದೀಪ

ಟೀಕೆಯಲ್ಲಿರುವ ಕೆಲವು ಕಠಿಣ ಪದಗಳ ಅರ್ಥ

भावदीपः – उत्तराच्चेदाविर्भूतस्वरूपस्तु ।।

शेषोक्त्या भाष्यं व्याचष्टे – नैतदिति ।। आविर्भूतस्वरूप इत्यस्यार्थः – मुक्तजीवस्येति ।। परमेश्वरप्रसादादित्येतच्छङ्कापूर्वं व्यनक्ति – नच वक्तव्यमित्यादिना ।। मुक्तस्यापि जीवत्वेनेति ।। हृत्पद्मस्थत्वापहतपाप्मत्वयोः भिन्नकालत्वेपि ऐकाधिकरण्यात् अपहतपाप्मेत्याद्युक्तिर्युक्तेत्यर्थः ।। १९ ।।

ಉಳಿದ ಪದಗಳನ್ನು ಪೂರ್ತಿ ಮಾಡಿಕೊಳ್ಳಬೇಕೆಂದು ಹೇಳುತ್ತಾ ಭಾಷ್ಯವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ ''ನೈತತ್'' ಇತ್ಯಾದಿ ಟೀಕೆಯಿಂದ. ''ಆವಿರ್ಭೂತಸ್ವರೂಪಃ'' ಎಂಬುದರ ಅರ್ಥವನ್ನೇ ''ಮುಕ್ತಜೀವಸ್ಯ'' ಎಂದು ಹೇಳಿದ್ದಾರೆ. ''ಪರಮೇಶ್ವರಪ್ರಸಾದಾತ್'' ಎಂಬುದನ್ನು ಶಂಕಾಪೂರ್ವಕವಾಗಿ ವ್ಯಾಖ್ಯಾನ ಮಾಡುತ್ತಿದ್ದಾರೆ ''ನಚ ವಕ್ತವ್ಯಂ'' ಇತ್ಯಾದಿ ಮಾತಿನಿಂದ. ''ಮುಕ್ತಸ್ಯಾಪಿ ಜೀವತ್ವೇನ'' ಎಂದು ಟೀಕೆಯಲ್ಲಿದೆ. ಅಂದರೆ ಹೃತ್ಪದ್ಮಸ್ಥತ್ವ ಹಾಗೂ ಅಪಹತಪಾಪ್ಮತ್ವವು ಬೇರೆ ಬೇರೆ ಕಾಲದಲ್ಲಿದ್ದರೂ ಒಂದೇ ಅಧಿಕರಣದಲ್ಲಿರುವುದರಿಂದ ಅಪಹತಪಾಪ್ಮತ್ವಾದಿಗಳು ಯುಕ್ತವಾಗುತ್ತವೆಂದು ಇದರರ್ಥ.

ಬ್ರಹ್ಮಸೂತ್ರ

'ಅನ್ಯಾರ್ಥಶ್ಚಪರಾಮರ್ಶಃ' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – अन्यार्थश्चपरामर्शः ।।

ಅನುವಾದ - ಮತ್ತು 'स एष आत्मा' ಎಂಬುದಾಗಿ 'ಏತತ್' ಶಬ್ದದಿಂದ ಪರಾಮರ್ಶಿಸಲ್ಪಟ್ಟಿರುವವನು 'ಜ್ಯೋತಿರುಪಸಂಪದ್ಯ' ಎಂಬ ಅದೇ ವಾಕ್ಯದಲ್ಲಿ ಪ್ರಸ್ತುತನಾದ ಜ್ಯೋತಿಸ್ವರೂಪನಾದ ಬ್ರಹ್ಮನೇ ಹೊರತು ಜೀವನಲ್ಲ.

ಅರ್ಥ -- 'ಚ' ಎಂಬುದು ಅವಧಾರಣಾರ್ಥದಲ್ಲಿದೆ. ಪರಾಮರ್ಶಃ = 'ಏಷಃ ಆತ್ಮಾ' ಎಂಬ ವಾಕ್ಯದಲ್ಲಿರುವ 'ಏತತ್' ಶಬ್ದದಿಂದ ಪರಾಮರ್ಶಿಸಲ್ಪಟ್ಟವನು, ಅನ್ಯಾರ್ಥಃ = 'ಪರಂಜ್ಯೋತಿಃ' ಎಂಬಲ್ಲಿ ಉಕ್ತನಾದ ಪರಮಾತ್ಮನೇ ಹೊರತು ಜೀವನಲ್ಲ ಎಂದರೆ ಪರಾಮರ್ಶವು ಜೀವವಿಷಯಕವಲ್ಲ. ಪರಬ್ರಹ್ಮವಿಷಯಕ ಎಂದು ಭಾವ.

ಬ್ರಹ್ಮಸೂತ್ರಭಾಷ್ಯ

'ಏಷ ಆತ್ಮಾ' ಎಂಬ ಶ್ರುತಿ ಪರಮಾತ್ಮಪರ

ब्रह्मसूत्रभाष्यम् – ।। अन्यार्थश्च परामर्शः ।।

यं प्राप्य स्वेन रूपेण जीवोऽभिनिष्पद्यते स एष आत्मेति परमार्थश्च परामर्शः ।।

ಅನುವಾದ - ಜೀವನು ಯಾರನ್ನು ಪಡೆದು ತನ್ನ ಸ್ವಾಭಾವಿಕರೂಪವನ್ನು ಹೊಂದುತ್ತಾನೋ, ಅಂತಹವನು ಹೃತ್ಪದ್ಮದಲ್ಲಿರುವ ಪರಮಾತ್ಮನೇ ಆಗಿದ್ದಾನೆ. ಹೀಗೆ 'ಏಷ ಆತ್ಮಾ' ಎಂದು ಪರಾಮರ್ಶಿತನಾದವನು ಪರಮಾತ್ಮನೇ ಆಗಿದ್ದಾನೆ ಹೊರತು ಜೀವನಲ್ಲ.

ಪ್ರತಿಪದಾರ್ಥ -- 'ಏಷಃ' ಎಂಬುದರಿಂದ ಜೀವನನ್ನು ಪರಾಮರ್ಶೆ ಮಾಡಿ, 'ಆತ್ಮಾ' ಎಂದು ಹೇಳಿದ್ದರಿಂದ ಹೃತ್ಪದ್ಮಸ್ಥನಾದವನು ಜೀವನೇ ಆಗಬೇಕಲ್ಲವೇ ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ.

ಯಂ = ಯಾರನ್ನು, ಪ್ರಾಪ್ಯ = ಹೊಂದಿ, ಸ್ವೇನ ರೂಪೇಣ = ಸ್ವಾಭಾವಿಕ ರೂಪದಿಂದ, ಅಭಿನಿಷ್ಪದ್ಯತೇ = ಮುಕ್ತನೆಂದು ಕರೆಸಿಕೊಳ್ಳಲ್ಪಡುವ. ಸ ಏಷ ಆತ್ಮಾ = ಅಂತಹ ಆತ್ಮನೇ ಪರಮಾತ್ಮನು, ಇತಿ = ಹೀಗೆ, ಪರಮಾರ್ಥಶ್ಚ = ಶ್ರುತಿಪ್ರಮಾಣಪ್ರಸಿದ್ಧವಾದ ಪಾರಮಾರ್ಥಿಕ ಅರ್ಥವೇ, ಪರಾಮರ್ಶಃ = ಪರಾಮರ್ಶಯೋಗ್ಯವಾದದ್ದು, ಆದ್ದರಿಂದ ಜೀವನು ಹೃತ್‌ಪದ್ಮಸ್ಥನಾಗುವುದಿಲ್ಲ.

ತತ್ತ್ವಪ್ರದೀಪ

ಜೀವನೂ ಕೂಡ ದಹರಾಕಾಶಸ್ಥನಲ್ಲ

तत्वप्रदीपः – अन्यार्थश्च परामर्शः ।। ''एष सम्प्रसादोऽस्माच्छरीरात् समुत्थाय'' इत्यादिवाक्ये 'एष आत्मा' इति परामर्शः परमात्मविषय इति यत्, तस्माच्च न जीव उच्यते ।

'ಏಷ ಸಂಪ್ರಸಾದೋಽಸ್ಮಾಚ್ಛರೀರಾತ್ ಸಮುತ್ಥಾಯ' ಇತ್ಯಾದಿ ವಾಕ್ಯದಲ್ಲಿ 'ಏಷ' ಎಂಬ ಪದದಿಂದ ಆತ್ಮನನ್ನೇ ಪರಾಮರ್ಶ ಮಾಡಬೇಕು. ಆದ್ದರಿಂದ ಜೀವನು ದಹರಾಕಾಶದಲ್ಲಿ ಇದ್ದಾನೆಂದು ಉಪನಿಷತ್ತು ಹೇಳುತ್ತಿದೆ ಎಂಬ ಅಭಿಪ್ರಾಯವು ತಪ್ಪಾಗುತ್ತದೆ.

ಪರ್ಯಂಕೋಪಾಸನೆಯಲ್ಲಿ ಜೀವಪಕ್ಷ ನಿರಾಕರಣೆ

तत्वप्रदीपः –

''यस्य सम्यग्प्रसादोऽस्ति विष्णोरेव स उच्यते ।
सम्प्रसादः स उत्थाय शरीरात् प्राप्य केशवम् ।।
यथास्वरूपस्तु भवेद्यं प्राप्यासौ सरूपताम् ।
आप्नोति स परो ह्यात्मा भगवानिन्दिरापतिः ।
इत्याह सा रमादेवी पश्यन्ती परमं पदम्'' इति च पर्यङ्कोपासनायाम् ।।

ಯಸ್ಯ ಸಮ್ಯಕ್‌ಪ್ರಸಾದೋಽಸ್ತಿ ವಿಷ್ಣೋರೇವ ಸ ಉಚ್ಯತೇ ।
ಸಂಪ್ರಸಾದಃ ಸ ಉತ್ಥಾಯ ಶರೀರಾತ್‌ಪ್ರಾಪ್ಯ ಕೇಶವಮ್ ॥
ಯಥಾಸ್ವರೂಪಸ್ತು ಭವೇದ್ಯಂ ಪ್ರಾಪ್ಯಾಸೌ ಸರೂಪತಾಮ್ ।
ಆಪ್ನೋತಿ ಸ ಪರೋ ಹ್ಯಾತ್ಮಾ ಭಗವಾನಿಂದಿರಾಪತಿಃ ।
ಇತ್ಯಾಹ ಸಾ ರಮಾದೇವೀ ಪಶ್ಯಂತೀ ಪರಮಂ ಪದಮ್ ॥

ಯಾವ ಜ್ಞಾನಿಗೆ ವಿಷ್ಣುವಿನ ಉತ್ಕೃಷ್ಟವಾದ ಪ್ರಸಾದವು ಸಿದ್ಧಿಸಿರುತ್ತದೋ ಅವನು ಸಂಪ್ರಸಾದನೆನಿಸಿಕೊಂಡಿರುವನು. ಅವನು ತನ್ನ ಅಂತಿಮ ಶರೀರದಿಂದ ಹೊರಗೆ ಬಂದು ಪರಮಾತ್ಮನನ್ನು ಹೊಂದಿ, ತನ್ನ ಜ್ಞಾನಾನಂದಮಯವಾದ ಸ್ವರೂಪದ ಆವಿರ್ಭಾವ-ವುಳ್ಳವನಾಗುವನು. ಯಾರನ್ನು ಹೊಂದಿ ಆ ಜ್ಞಾನಿಯು ತನ್ನ ನಿಜರೂಪವನ್ನು ಹೊಂದುವನೋ ಅಂತಹ ಪರಂಜ್ಯೋತಿಯು ಭಗವಾನ್ ಲಕ್ಷ್ಮೀಪತಿಯೇ ಹೊರತು ಜೀವನಲ್ಲ ಎಂಬುದಾಗಿ ಪರಮಾತ್ಮನನ್ನು ಪ್ರತ್ಯಕ್ಷ ಕಾಣುವ ಮಂತ್ರದ್ರಷ್ಟಾರಳಾದ ಲಕ್ಷ್ಮೀದೇವಿಯು ಹೇಳಿದಳು. ಹೀಗೆ ಪರ್ಯಂಕೋಪಾಸನೆಯಲ್ಲಿ ಹೇಳಲಾಗಿದೆ.

ವಿಶೇಷವಿಚಾರ - ಛಾಂದೋಗ್ಯೋಪನಿಷತ್ತಿನ ಎಂಟನೆಯ ಅಧ್ಯಾಯದಲ್ಲಿ ಮೂರನೆಯ ಖಂಡದಲ್ಲಿ ಬರುವ ಉಪನಿಷತ್ತಿನ ಪ್ರಕರಣ ಹೀಗಿದೆ. ಇದೇ ಉಪನಿಷತ್ತಿಗೆ ಭಾಷ್ಯಕಾರರು ಮಾಡಿದ ವ್ಯಾಖ್ಯಾನವನ್ನೇ ಪ್ರಕೃತ ಪಂಡಿತಾಚಾರ್ಯರು 'ಯಸ್ಯ ಸಮ್ಯಕ್ ಪ್ರಸಾದೋಽಸ್ತಿ' ಇತ್ಯಾದಿ ಕಾರಿಕೆಯಿಂದ ತಿಳಿಸಿರುತ್ತಾರೆ.

ಅಥ ಯ ಏಷ ಸಂಪ್ರಸಾದೋಽಸ್ಮಾತ್ ಶರೀರಾತ್ ಸಮುತ್ಥಾಯ ಪರಂಜ್ಯೋತಿರುಪಸಂಪದ್ಯ ಸ್ವೇನ ರೂಪೇಣಾಭಿನಿಷ್ಪದ್ಯತೇ । ಏಷ ಆತ್ಮೇತಿ ಹೋವಾಚ । ಏತದಮೃತಮಭಯಂ ಏತತ್ ಬ್ರಹ್ಮೇತಿ । ತಸ್ಯ ಹ ವಾ ಏತಸ್ಯ ಬ್ರಹ್ಮಣೋ ನಾಮ ಸತ್ಯಮಿತಿ ॥

ಪರಮಾತ್ಮನ ಪರಮಪ್ರಸಾದಕ್ಕೆ ಪಾತ್ರನೆನಿಸಿದ ಈ ಪರಮಾತ್ಮಜ್ಞಾನಿಯು ತನ್ನ ಚರಮಶರೀರದಿಂದ ಹೊರಗೆ ಬಂದು ಪರಂಜ್ಯೋತಿಸ್ವರೂಪನಾದ ಪರಮಾತ್ಮನನ್ನು ಹೊಂದಿ, ಜ್ಞಾನಾನಂದಮಯವಾದ ತನ್ನ ಸ್ವರೂಪದಿಂದ ಪ್ರಕಟನಾಗುತ್ತಾನೆ. ಈ ಪರಂಜ್ಯೋತಿ ಜೀವನಲ್ಲ, ಪರಮಾತ್ಮನು. ಈ ಪರಮಾತ್ಮನು ನಿತ್ಯಮುಕ್ತನೂ, ಭಯರಹಿತನೂ, ಗುಣಪರಿಪೂರ್ಣನೂ ಆಗಿರುವನು ಎಂದು ಈ ಉಪನಿಷತ್ತಿನ ದ್ರಷ್ಟಾರಳಾದ ಲಕ್ಷ್ಮೀದೇವಿ ಹೇಳಿದ್ದಾಳೆ. ಈ ಪರಮಾತ್ಮನಿಗೆ ಸತ್ಯ ಎಂಬುದು ನಾಮಾಂತರ.

ಈ ಉಪನಿಷತ್ತಿನ ವಾಕ್ಯವು ಜೀವನ ಮುಖ್ಯಾವಸ್ಥೆಯನ್ನು ಮೇಲೆ ಹೇಳಿದಂತೆ ನಿರೂಪಣೆ ಮಾಡಿದೆ. ಕೊನೆಯಲ್ಲಿ 'ಏಷಃ' ಎಂಬ ಪದವಿದೆ. ಹಿಂದೆ 'ಯ ಆತ್ಮಾ ಅಪಹತಪಾಪ್ಮ' ಎಂಬುದಾಗಿ ಪ್ರಸಕ್ತವಾಗಿರುವುದರಿಂದ ಪಾಪರಹಿತನಾದ ಮುಕ್ತಜೀವನನ್ನೇಕೆ ಇಲ್ಲಿ ವಿವಕ್ಷಿಸಬಾರದು ? ಎಂಬ ಪ್ರಶ್ನೆ ಪ್ರಾಪ್ತವಾಗುತ್ತದೆ. ಆದರೆ 'ಏಷಃ' ಎಂಬ ಪದದಿಂದ ಮುಕ್ತಜೀವನನ್ನು ವಿವಕ್ಷಿಸಲು ಸಾಧ್ಯವಿಲ್ಲ. ಇದೇ ವಾಕ್ಯದಲ್ಲಿ 'ಪರಂಜ್ಯೋತಿ' ಎಂಬ ಪದವಿರುವುದರಿಂದ ಪರಮಾತ್ಮನನ್ನೇ ವಿವಕ್ಷಿಸಬೇಕು. ಅಂಥ ಪರಂಜ್ಯೋತಿಯೇ 'ಆತ್ಮಾ' ಎಂದು ಕರೆಸಿಕೊಳ್ಳುವುದರಿಂದ ಪರಮಾತ್ಮನೇ ಆತ್ಮಶಬ್ದದಿಂದಲೂ ಪ್ರತಿಪಾದ್ಯನಾಗುತ್ತಾನೆ. ಆದ್ದರಿಂದ ಹೃದಯಪದಸ್ಥನಾಗಿದ್ದಾನೆಂಬುದು ಭಾಷ್ಯಕಾರರ ಅಭಿಪ್ರಾಯ.

ತತ್ವಪ್ರಕಾಶಿಕಾ

ಅಪಹತಪಾಪ್ಮತ್ವಾದಿಗಳು ಅಮುಖ್ಯವಲ್ಲವೇ?

तत्वप्रकाशिका – ।। अन्यार्थश्च परामर्शः ।।

अमुख्यापहतपाप्मत्वादिगुणोऽपि जीवः परामर्शबलेन हृत्पद्मस्थात्मा किं न स्यात् ? इत्याशङ्कां परिहरत्सूत्रमुपन्यस्य व्याचष्टे – अन्येति ।।

ಹಿಂದಿನ ಸೂತ್ರದಲ್ಲಿ ಅಮುಖ್ಯವಾದ ಅಪಹತಪಾಪ್ಮತ್ವಾದಿ ಗುಣಗಳನ್ನು ವಿವಕ್ಷಿಸಿ ಜೀವನನ್ನು ಹೃತ್ಪದ್ಮಸ್ಥನೆಂದು ಹೇಳಬಾರದೆಂದು ಸಾಧಿಸಲಾಯಿತು, ಆದರೆ ಅಮುಖ್ಯವಾದ ಅಪಹತ-ಪಾಪ್ಮತ್ವಾದಿಗುಣಗಳುಳ್ಳ, ಜೀವನು ಪರಾಮರ್ಶದ ಬಲದಿಂದ ಹೃತ್ಪದ್ಮಸ್ಥನು ಏಕೆ ಆಗಬಾರದು? ಎಂಬ ಶಂಕೆಯು ಪ್ರಾಪ್ತವಾಗುತ್ತದೆ. ಇದನ್ನು ಪರಿಹರಿಸುವುದಕ್ಕಾಗಿ ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ - 'ಅನ್ಯಾರ್ಥಾಶ್ಚ' ಇತ್ಯಾದಿಯಾಗಿ.

ಆತ್ಮತತ್ವವು ಪರಮಾತ್ಮನಲ್ಲಿ ಮಾತ್ರ

तत्वप्रकाशिका – भवेदेतद्यद्येष इति जीवं परामृश्य तस्य हृत्पद्मस्थत्वं विधीयेत । नैतदस्ति । यं परं ज्योतिराख्यं भगवन्तमभिसम्पद्य जीवः स्वेन

ರೂಪೇಣಾऽಭಿನಿಷ್ಪದ್ಯತೇ, ಸ ಏಷ ಆತ್ಮೇತಿ ಪರಮಾತ್ಮಾನಮೇವೈಷ ಇತಿ ಪರಾಮೃಶ್ಯ ತಸ್ಯಾತ್ಮತ್ವೋಕ್ತೇಃ ।

ಒಂದು ವೇಳೆ 'ಏಷಃ' ಎಂದು ಪರಾಮರ್ಶಿಸಲ್ಪಟ್ಟವನು ಜೀವನೇ ಆಗಿದ್ದಲ್ಲಿ ಅವನಿಗೆ ಹೃತ್ಪದ್ಮಸ್ಥತ್ವವನ್ನು ವಿಧಿಸಬಹುದಿತ್ತು. ಆದರೆ ಜೀವನನ್ನು ಪರಾಮರ್ಶಿಸಲು ಸಾಧ್ಯವೇ ಇಲ್ಲ. ಯಾವ ಪರಂಜ್ಯೋತಿಸ್ವರೂಪನಾದ ಪರಮಾತ್ಮನನ್ನು ಪಡೆದು ಜೀವನು ಸ್ವಾಭಾವಿಕವಾದ ಸ್ವರೂಪವನ್ನು ಹೊಂದಿದ್ದಾನೋ ಅಂತಹವನೇ 'ಆತ್ಮಾ' ಎಂದು ಶ್ರುತಿ ಹೇಳಿದೆ. ಹಿಂದೆ ಹೇಳಿದಂತೆ ದಾತೃತ್ವೇನ ಪ್ರಧಾನನಾದ ಪರಮಾತ್ಮನೇ 'ಏತತ್' ಶಬ್ದದಿಂದ ಪರಾಮರ್ಶಿಸಲ್ಪಟ್ಟಿದ್ದಾನೆ. ಹೀಗೆ ಪರಾಮರ್ಶಿಸಲ್ಪಟ್ಟ ಭಗವಂತನಲ್ಲಿ ಆತ್ಮತ್ವವನ್ನು ಶ್ರುತಿಯು ಹೇಳುತ್ತಿದೆ.

ಜೀವನಲ್ಲಿ ಅಪಹತಪಾಪ್ಮತ್ವವು ಅಸಂಭಾವಿತ

ತತ್ತ್ವಪ್ರಕಾಶಿಕಾ – ಅತೋ ಜೀವೇऽಪಹತಪಾಪ್ಮತ್ವಾದ್ಯಸಮ್ಭವಾತ್, ಪರಾಮರ್ಶಸ್ಯ ಚೇಶ್ವರಾರ್ಥತ್ವಾತ್, ಸ ಏವಾಪಹತಪಾಪ್ಮತ್ವಾದಿಗುಣೋ ಹೃತ್ಪದ್ಮಸ್ಥ ಇತಿ ಭಾವಃ ।

ಆದ್ದರಿಂದ ಅಪಹತಪಾಪ್ಮತ್ವಾದಿಗುಣಗಳು ಜೀವನಲ್ಲಿ ಅಸಂಭಾವಿತವಾದ್ದರಿಂದ ಮತ್ತು ಶ್ರುತಿಯಲ್ಲಿರುವ 'ಏತತ್' ಶಬ್ದದಿಂದ ಪರಮಾತ್ಮನೇ ಪರಾಮರ್ಶಿಸಲ್ಪಟ್ಟಿದ್ದರಿಂದಲೂ ಈಶ್ವರನೇ ಅಪಹತಪಾಪ್ಮತ್ವಾದಿಗುಣಗಳುಳ್ಳವನಾಗುತ್ತಾನೆ. ಮತ್ತು ಹೃತ್ಪದ್ಮಸ್ಥನಾಗುತ್ತಾನೆಂದು ತಿಳಿಯಬೇಕು.

ನಿರವಕಾಶವಾದ ವಿಷ್ಣುಲಿಂಗಗಳು

ತತ್ತ್ವಪ್ರಕಾಶಿಕಾ – ನಚ ಮನ್ತವ್ಯಮುಭಯಥಾऽಪಿ ಸಮ್ಭವೇ ಕುತಃ ಪರಮಾತ್ಮಾರ್ಥತಾ ಪರಾಮರ್ಶಸ್ಯೇತಿ । ನಿರವಕಾಶೋಕ್ತಾನೇಕಹೇತ್ವಬಲಾದೇವ ।।

ಜೀವ ಹಾಗೂ ಪರಮಾತ್ಮರಿಬ್ಬರನ್ನೂ ಕೂಡ 'ಏತತ್' ಶಬ್ದದಿಂದ ಪರಾಮರ್ಶಿಸಲು ಬರುವಾಗ ಪರಮಾತ್ಮನನ್ನೇ ಏಕೆ ಪರಾಮರ್ಶಿಸಬೇಕು? ಎಂದು ಪ್ರಶ್ನಿಸಬಾರದು. ಹಿಂದೆ ಹೇಳಿದಂತೆ ನಿರವಕಾಶವಾದ ಅನೇಕ ವಿಷ್ಣುಲಿಂಗಗಳು ಇರುವ ಪ್ರಯುಕ್ತ ಪರಮಾತ್ಮನನ್ನೇ ಪರಾಮರ್ಶಿಸಬೇಕೆಂದು ಸಿದ್ಧವಾಗುತ್ತದೆ.

ಭಾವದೀಪ

'ಏಷ ಇತಿ' ಎಂಬ ಟೀಕೆಯ ವ್ಯಾಖ್ಯಾನ

भावदीपः – अन्यार्थश्च परामर्शः ।।

भगवन्तमिति ।। ज्योतिश्शब्दश्च 'आत्मा प्रकरणाद्' इति चतुर्थे भगवत्परो वक्ष्यत इति भावः ।। **एष इति परामृश्येति ।।** पुल्लिङ्गं तु 'शैत्यं हि यत् सा प्रकृतिर्जलस्येत्यादाविव विधेयात्मापेक्षया युक्तमिति भावः । स एवेत्येवकारतात्पर्यं हेतूक्त्या व्यनक्ति – **नच मन्तव्यमिति ।।** २० ।।

''ಭಗವಂತಂ'' ಎಂದರೆ ಜ್ಯೋತಿಃ ಶಬ್ದವನ್ನು ''ಆತ್ಮಾ ಪ್ರಕರಣಾತ್'' ಎಂಬ ನಾಲ್ಕನೇ ಭಾಗದ ಸೂತ್ರದಲ್ಲಿ ಭಗವತ್ಪರವೆಂದು ಸಮರ್ಥಿಸಲಾಗುತ್ತದೆ ಎಂದು ತಿಳಿಯಬೇಕು. ''ಏಷ ಇತಿ ಪರಾಮೃಶ್ಯ'' ಎಂದು ಟೀಕೆಯಲ್ಲಿ ಹೇಳಿರುತ್ತಾರೆ. ಪುಲ್ಲಿಂಗಪ್ರಯೋಗವು ತಪ್ಪಾಗುವುದಿಲ್ಲ. 'ಶೈತ್ಯಂ ಹಿ ಯತ್ಸಾ ಪ್ರಕೃತಿರ್ಜಲಸ್ಯ'' ಎಂಬಲ್ಲಿ ವಿಧೇಯವಾದ ಪ್ರಕೃತಿ ಶಬ್ದವು ಸ್ತ್ರೀಲಿಂಗದಲ್ಲಿರುವುದರಿಂದ ನಪುಂಸಕ-ಲಿಂಗದಲ್ಲಿರುವ ಶೈತ್ಯವನ್ನು ''ಸಾ'' ಎಂದು ಪರಾಮರ್ಶ ಮಾಡುವಂತೆ, ಇಲ್ಲಿಯೂ ಸಹ ವಿಧೇಯವಾದ ಪ್ರಕೃತಿ ಶಬ್ದವು ಸ್ತ್ರೀಲಿಂಗದಲ್ಲಿರುವುದರಿಂದ ನಪುಂಸಕದಲ್ಲಿರುವ ಶೈತ್ಯವನ್ನು ''ಸಾ'' ಎಂದು ಪರಾಮರ್ಶ ಮಾಡುವಂತೆ ಇಲ್ಲಿಯೂ ಕೂಡ ವಿಧೇಯವಾದ ಆತ್ಮನನ್ನು ವಿವಕ್ಷಿಸಿ ''ಏಷಃ'' ಎಂದು ಪರಾಮರ್ಶ ಮಾಡಿದ್ದಾರೆ. ''ಸ ಏವ'' ಎಂಬಲ್ಲಿರುವ ಏವಕಾರವನ್ನು ಕಾರಣಪುರಸ್ಸರವಾಗಿ ವ್ಯಾಖ್ಯಾನಿಸುತ್ತಿದ್ದಾರೆ ''ನಚ ಮಂತವ್ಯಂ'' ಇತ್ಯಾದಿಯಾಗಿ.

ಬ್ರಹ್ಮಸೂತ್ರ

ವ್ಯಾಪ್ತನಾದ ಪರಮಾತ್ಮನಿಗೆ ಅಣುರೂಪ ಅಚಿಂತ್ಯಾದ್ಭುತ

ब्रह्मसूत्रम् – अल्पश्रुतेरितिचेत्तदुक्तम् ।।

ಅನುವಾದ- 'ದಹರಮ್' ಎಂಬ ಪದಕ್ಕೆ ಅತ್ಯಂತ ಸಣ್ಣದಾದ ಆಕಾಶವೆಂದರ್ಥ. ಸರ್ವಗತನಾದ ಬ್ರಹ್ಮನಲ್ಲಿ ಅಲ್ಪದೇಶಸ್ಥತ್ವವನ್ನು ಹೇಳಲು ಹೇಗೆ ಸಾಧ್ಯ? ಎಂದರೆ ಅಲ್ಪದೇಶಸ್ಥತ್ವವು ದೇವತೆಗಳ ಉಪಾಸನೆಗೋಸ್ಕರ ಮಾತ್ರ ಹೇಳಲ್ಪಟ್ಟಿದೆ.

ಅರ್ಥ -- ಅಲ್ಪಶ್ರುತೇಃ = ಅಲ್ಪಸ್ಥಾನದಲ್ಲಿ ಇರುವಿಕೆಯನ್ನು ಹೇಳಿದ್ದರಿಂದ ಜೀವನೇ ಹೃದಯಪದಸ್ಥನಾಗುತ್ತಾನೆಂದು ಆಕ್ಷೇಪಿಸಬಾರದು. ಏಕೆಂದರೆ ತದುಕ್ತಂ = ಅಲ್ಪಸ್ಥಾನಸ್ಥಿತತ್ವವು ವ್ಯಾಪ್ತನಾದ ಪರಮಾತ್ಮನಲ್ಲಿಯೂ ಸಹ ಉಪಪನ್ನವಾಗುತ್ತದೆ. ದೇವತೆಗಳ ಉಪಾಸನೆಗೋಸ್ಕರ ಅಂತರ್‌ಹೃದಯಸ್ಥ ಪ್ರತಿಪಾದಕವಾದ ಶ್ರುತಿಗಳು ವ್ಯಾಪ್ತನಾದ ಪರಮಾತ್ಮನನ್ನು ಹೃದಯ ಪ್ರದೇಶದಲ್ಲಿ ಇದ್ದಾನೆಂದು ವರ್ಣನೆ ಮಾಡುತ್ತವೆ.

॥ ಶ್ರೀವೇದವ್ಯಾಸದೇವರಿಂದ ರಚಿಸಲ್ಪಟ್ಟ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ
ದಹರಾಧಿಕರಣವು ಸಮಾಪ್ತವಾಯಿತು ॥

ಬ್ರಹ್ಮಸೂತ್ರಭಾಷ್ಯ

ಪರಮಾತ್ಮನು ಹೃದಯಸ್ಥನಲ್ಲವೆಂದು ಪೂರ್ವಪಕ್ಷ

ब्रह्मसूत्रभाष्यम् – ।। अल्पश्रुतेरिति चेत् तदुक्तम् ।।

'दहरः' (छां. ८-१-१.) इत्यल्पश्रुतेर्नेति चेत्,

ಅನುವಾದ - 'ದಹರಃ' ಎಂದು ಛಾಂದೋಗ್ಯದಲ್ಲಿ ಹೃದಯಾಕಾಶವು ಅತ್ಯಂತ ಸೂಕ್ಷ್ಮವಾಗಿದೆ ಎಂದು ಹೇಳಲಾಗಿದೆ. ಆದ್ದರಿಂದ ವಿಷ್ಣುವು ಹೃದಯದಲ್ಲಿರಲು ಸಾಧ್ಯವಿಲ್ಲವಲ್ಲವೇ ?

ಪ್ರತಿಪದಾರ್ಥ -- ಹಿಂದಿನ ಸೂತ್ರದಲ್ಲಿ ಹೇಳಲ್ಪಟ್ಟ ಪ್ರಮೇಯವನ್ನು ಆಕ್ಷೇಪಿಸಿ ಸಮಾಧಾನ ನೀಡುವುದಕ್ಕಾಗಿ ಶ್ರುತಿಯನ್ನು ಉದಾಹರಿಸುತ್ತಾ ಆಕ್ಷೇಪಾಂಶವನ್ನಷ್ಟೇ ವ್ಯಾಖ್ಯಾನಿಸುತ್ತಿದ್ದಾರೆ-

ದಹರಃ = ದಹರವು, ಇತಿ = ಎಂದು, ಅಲ್ಪಶ್ರುತೇಃ = ಸೂಕ್ಷ್ಮವಾದ ಪ್ರದೇಶದಲ್ಲಿದ್ದಾನೆಂದು ಹೇಳಿದ್ದರಿಂದ, ನ = ಪರಮಾತ್ಮನು ಹೃತ್ ಪದ್ಮಸ್ಥನಲ್ಲ, ಇತಿ ಚೇತ್ = ಇಷ್ಟು ಆಕ್ಷೇಪವುಂಟಾದರೆ -

ವ್ಯಾಪ್ತನಾದ್ದರಿಂದ ಹೃದಯಸ್ಥನೂ ಹೌದು

ಬ್ರಹ್ಮಸೂತ್ರಭಾಷ್ಯಮ್ – ನ । 'निचाय्यत्वादेवं व्योमवच्च' इत्युक्तत्वात् ।

ಅನುವಾದ - ಇದು ತಪ್ಪು, 'ನಿಚಾಯ್ಯತ್ವಾದೇವಂ ವ್ಯೋಮವಚ್ಚ' ಎಂಬುದಾಗಿ ಈ ಹಿಂದೆಯೇ ಇದಕ್ಕೆ ಉತ್ತರಿಸಲಾಗಿದೆ.

ಪ್ರತಿಪದಾರ್ಥ -- ಸೂತ್ರದಲ್ಲಿ ಅನುವೃತ್ತವಾದ 'ನಞ್' ಎಂಬುದನ್ನು ಆವೃತ್ತಿ ಮಾಡಿಕೊಂಡು ಪರಿಹಾರಾಂಶವನ್ನು ವ್ಯಾಖ್ಯಾನಿಸುತ್ತಿದ್ದಾರೆ -

ನ = ಇದು ತಪ್ಪು, ಏಕೆಂದರೆ ವ್ಯೋಮವಚ್ಚ = ಆಕಾಶದಂತೆಯೂ, ನಿಚಾಯ್ಯತ್ವಾದೇವಂ = ಸರ್ವತ್ರ ವ್ಯಾಪ್ತನಾದ್ದರಿಂದಲೇ ಅಲ್ಪದೇಶದಲ್ಲಿಯೂ ಪರಮಾತ್ಮನು ಇರುತ್ತಾನೆ, ಇತ್ಯುಕ್ತತ್ವಾತ್ = ಎಂದು ಈ ಹಿಂದೆಯೇ ಸಮರ್ಥಿಸಿದ್ದಾಗಿದೆ.

ಆಕಾಶದ ದೃಷ್ಟಾಂತ ಹೇಗೆ ?

ಬ್ರಹ್ಮಸೂತ್ರಭಾಷ್ಯಮ್ – 'एष म आत्माऽन्तर्हृदये ज्यायान्' (छां.३-१४-३) इति श्रुत्युक्तत्वाच्च ।।

।। इति श्रीमदानन्दतीर्थभगवत्पादाचार्यविरचिते ब्रह्मसूत्रभाष्ये दहराधिकरणम्।। ९।।

ಅನುವಾದ - ಮತ್ತು ಸರ್ವಭೂತಗಳಲ್ಲಿಯೂ ಇವನೇ ನಿಯಾಮಕನಾಗಿ ಇರುತ್ತಾನೆಂದು, 'ಏಷ ಮೇ' ಎಂಬ ಶ್ರುತಿಯೂ ಹೇಳುತ್ತಿದೆ ಎಂದು ನಿರೂಪಿಸಿದೆ.

ಪ್ರತಿಪದಾರ್ಥ -- ಆಕಾಶವು ಒಂದು ಅಂಶದಿಂದ ಅಪೂರ್ಣವಾಗಬಹುದು, ಆದರೆ ಬ್ರಹ್ಮನ ವಿಷಯದಲ್ಲಿ ಅಂಶಗಳೂ ಸಹ ಪೂರ್ಣವಾಗಿರುವುದರಿಂದ ಆಕಾಶದಂತೆ ಹೇಳಲು ಹೇಗೆ ಸಾಧ್ಯ? ಎಂಬ ಪ್ರಶ್ನೆಗೆ ಸೂತ್ರದ ಭಾಗವನ್ನು ಮತ್ತೊಂದು ಪ್ರಕಾರದಿಂದ ವ್ಯಾಖ್ಯಾನಿಸುತ್ತಿದ್ದಾರೆ -

ಪ್ರತಿಪದಾರ್ಥ -- ಏಷಃ ಆತ್ಮಾ = ಈ ಪರಮಾತ್ಮನು, ಅಂತರ್ಹೃದಯೇ = ಸಕಲ ಜೀವಿಗಳ ಹೃದಯದಲ್ಲಿ, ಜ್ಯಾಯಾನ್ = ನಿಯಾಮಕನಾಗಿ ಶ್ರೇಷ್ಠನಾಗಿದ್ದಾನೆ, ಇತಿ = ಹೀಗೆ, ಶ್ರುತ್ಯುಕ್ತತ್ವಾತ್ = ಶ್ರುತಿಗಳು ಹೇಳುತ್ತಿರುವುದರಿಂದಲೂ, ಹೃತ್ಪದ್ಮಸ್ಥನಾದವನು ವಿಷ್ಣುವೇ ಆಗಿದ್ದಾನೆ. ಇವನೇ 'ದಹರ' ಎಂಬ ಶಬ್ದದಿಂದಲೂ ಪ್ರತಿಪಾದ್ಯನಾಗಿದ್ದಾನೆ. ಆಕಾಶವಾಗಲೀ, ಜೀವನಾಗಲೀ ಹೃತ್ಪದ್ಮಸ್ಥನಾಗಲು, ದಹರಶಬ್ದದಿಂದ ಪ್ರತಿಪಾದ್ಯರಾಗಲು ಸಾಧ್ಯವಿಲ್ಲ. ಇಂತಹ ವಿಷ್ಣುವೇ ಆನಂದಮಯನೂ, ಜಿಜ್ಞಾಸ್ಯನೂ ಆಗುತ್ತಾನೆಂದು ತಿಳಿಯಬೇಕು.

॥ ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ವಿರಚಿತವಾದ ಬ್ರಹ್ಮಸೂತ್ರಭಾಷ್ಯದ ಕನ್ನಡಾನುವಾದದಲ್ಲಿ ದಹರಾಧಿಕರಣವು ಸಮಾಪ್ತವಾಯಿತು ॥

ತತ್ತ್ವಪ್ರದೀಪ

ದಹರಾಕಾಶಸ್ಥನಾದವನು ಮಹಾವಿಷ್ಣುವೆಂದು ಸಿದ್ಧವಾಯಿತು

तत्वप्रदीपः – अल्पश्रुतेरिति चेत् तदुक्तम् ।। दहरे स्थित इत्यल्पौकस्त्वश्रुतेर्न परः किन्तु जीव इति चेन्नैवम् । सूत्रश्रुतिभ्यामुक्तोत्तरत्वात्।।

।। इति दहराधिकरणम् ।।

ದಹರಾಕಾಶವು ಅತ್ಯಂತ ಸೂಕ್ಷ್ಮವಾದ್ದರಿಂದ ಅಲ್ಲಿ ವ್ಯಾಪ್ತನಾದ ವಿಷ್ಣುವು ನೆಲೆಸಲು ಸಾಧ್ಯವಿಲ್ಲ ಎಂದು ಪ್ರಶ್ನಿಸಬಾರದು. ಸೂತ್ರ ಹಾಗೂ ಶ್ರುತಿಯ ಆಧಾರದಿಂದ ಈಗಾಗಲೇ ಇದನ್ನು ಸಮರ್ಥಿಸಿದ್ದೇವೆ.

ವಿವರಣೆ - 'ದಹರೋಽಸ್ಮಿನ್ ಅಂತರಾಕಾಶಃ' ಎಂಬ ಶ್ರುತಿಯು ಹೃದಯಾಕಾಶವು ಅತ್ಯಂತ ಕಿರಿದಾಗಿದೆ ಎಂದು ಹೇಳುತ್ತಿದೆ. ವ್ಯಾಪ್ತನಾದ ಮಹಾವಿಷ್ಣುವು ಇದರಲ್ಲಿ ಹೇಗೆ ಇರುತ್ತಾನೆ ? ಎಂಬ ಪ್ರಶ್ನೆಗೆ ಉತ್ತರಿಸಲು ಈ ಸೂತ್ರ ಹೊರಟಿದೆ. 'ನಿಚಾಯ್ಯತ್ವಾತ್ ಏವಂ ವ್ಯೋಮವಚ್ಚ' ಎಂಬ ಸರ್ವಗತತ್ವಾಧಿಕರಣದ ಸೂತ್ರದಲ್ಲಿ ಪರಮಾತ್ಮನು ವ್ಯಾಪ್ತನಾಗಿದ್ದರೂ ಅಣುರೂಪವನ್ನೂ ಕೂಡ ತಾಳಿದ್ದಾನೆ. ಉಪಾಸನೆಗಾಗಿ ನಾವು ಇಂಥ ಅಣುರೂಪವನ್ನೇ ಧ್ಯಾನ ಮಾಡಬೇಕು. ಮತ್ತು ಈ ವಿಷಯದಲ್ಲಿ ಶ್ರುತಿಯೂ ಕೂಡ ಆಧಾರವಾಗಿದೆ. ಆದ್ದರಿಂದ ದಹರಾಕಾಶದಲ್ಲಿ ನೆಲೆಸಿರುವವನು ಮಹಾವಿಷ್ಣುವೇ ಆಗಿದ್ದಾನೆ. ಇವನಲ್ಲಿ ಸಕಲವೂ ಆಶ್ರಿತವಾಗಿದೆ ಎಂಬ ಅಧಿಕರಣ ಪ್ರಯೋಜನವು ಸಿದ್ಧವಾಯಿತು.

॥ ಇಲ್ಲಿಗೆ ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ ತತ್ವಪ್ರದೀಪದಲ್ಲಿ
ದಹರಾಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ॥

ತತ್ವಪ್ರಕಾಶಿಕಾ

ಸೂತ್ರದಲ್ಲಿರುವ ಆಕ್ಷೇಪಭಾಗದ ವ್ಯಾಖ್ಯಾನ

तत्वप्रकाशिका – ।। अल्पश्रुतेरिति चेत् तदुक्तम् ।।

उक्तमाक्षिप्य समादधत्सूत्रमुपन्यस्याऽऽक्षेपांशं तावद् व्याचष्टे – अल्पेति।।

ಹಿಂದಿನ ಸೂತ್ರದಲ್ಲಿ ಹೇಳಿದ್ದನ್ನು ಆಕ್ಷೇಪ ಮಾಡಿ ಸಮಾಧಾನ ನೀಡುವಂತಹ ಸೂತ್ರವನ್ನು ಪಠಿಸಿ ಮೊದಲು ಆಕ್ಷೇಪ ಭಾಗವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ 'ಅಲ್ಪ' ಇತ್ಯಾದಿಯಾಗಿ.

ಹಿಂದಿನ ಸೂತ್ರದ ಪ್ರಮೇಯ

तत्वप्रकाशिका – यदुक्तं 'जीवेऽसम्भावितगुणश्रवणाद्विष्णुरेव हृदयपद्मस्थो न जीवः' इति ।

ಹಿಂದಿನ ಸೂತ್ರದಲ್ಲಿ ಜೀವನಿಗೆ ಅಸಂಭಾವಿತವಾದ ಪರಮಾತ್ಮನಲ್ಲಷ್ಟೇ ಇರುವಂತಹ ಗುಣಗಳು ಶ್ರುತವಾದ್ದರಿಂದ ವಿಷ್ಣುವೇ ಹೃದಯಕಮಲದಲ್ಲಿದ್ದಾನೆ, ಜೀವನಲ್ಲವೆಂದು ಸಮರ್ಥಿಸಲಾಯಿತು.

ಹಿಂದಿನ ಸೂತ್ರದಲ್ಲಿ ಹೇಳಿದ್ದು ತಪ್ಪು

तत्वप्रकाशिका – तदयुक्तम् । 'दहरोऽस्मिन्नन्तर आकाशस्तस्मिन् यदन्तः' इति परमात्मन्यसम्भाव्यमानजीवलिङ्गस्याल्पस्थानस्थितत्वस्य श्रुतत्वादित्यर्थः ।

ಇದು ತಪ್ಪು. ಏಕೆಂದರೆ, 'ದಹರೇऽಸ್ಮಿನ್ನಂತರ ಆಕಾಶಸ್ತಸ್ಮಿನ್ ಯದಂತಃ' ಎಂಬ ಶ್ರುತಿಯಲ್ಲಿ ಪರಮಾತ್ಮನಲ್ಲಿ ಅಸಂಭಾವಿತವಾದ ಜೀವನಲ್ಲಿ ಮಾತ್ರ ಬರುವಂತಹ ಅಲ್ಪಸ್ಥಾನಸ್ಥಿತತ್ವ (ಅಣು ಪ್ರದೇಶದಲ್ಲಿರುವಿಕೆ) ಎಂಬ ಧರ್ಮವನ್ನು ಹೇಳಲಾಗಿದೆ. ಸರ್ವತ್ರವ್ಯಾಪ್ತನಾದ ಪರಮಾತ್ಮನು ಅಣು ಪ್ರದೇಶದಲ್ಲಿರಲು ಸಾಧ್ಯವಿಲ್ಲ. ಆದ್ದರಿಂದ ಜೀವನೇ ಹೃದಯಕಮಲದಲ್ಲಿರುತ್ತಾನೆಂದು ಹೇಳಬೇಕೆಂದು ಆಕ್ಷೇಪ.

ಸೂತ್ರದಲ್ಲಿರುವ ಪರಿಹಾರ ಭಾಗದ ವ್ಯಾಖ್ಯಾನ

तत्वप्रकाशिका – नञध्याहारेण परिहारांशं व्याचष्टे – नेति ।। नाल्पस्थानस्थितिश्रुतिः विष्णावनुपपन्ना ।

'ನಞ್' ಎಂಬುದನ್ನು ಸೂತ್ರದಲ್ಲಿ ಅಧ್ಯಾಹಾರ ಮಾಡಿಕೊಂಡು ಸೂತ್ರದಲ್ಲಿರುವ ಪರಿಹಾರಭಾಗವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ. 'ನ' ಇತ್ಯಾದಿಯಾಗಿ. ಅಲ್ಪದೇಶದಲ್ಲಿ ಇರುವಿಕೆಯನ್ನು ಹೇಳುವಂತಹ ಶ್ರುತಿಯು ವಿಷ್ಣುವಿನಲ್ಲಿ ಅನುಪಪನ್ನವಾಗುವುದಿಲ್ಲ.

ಎಲ್ಲೆಡೆ ಇರುವವನು ಅಲ್ಪದೇಶದಲ್ಲೂ ಇರುತ್ತಾನೆ

तत्वप्रकाशिका – नाल्पस्थानस्थितिश्रुतिः विष्णावनुपपन्ना । 'निचाय्यत्वादेवं व्योमवत्' इत्यत्र सर्वगतस्यापि विष्णोः व्योमवदल्पस्थानस्थितेः उक्तत्वादित्यर्थः ।

ಅಲ್ಪವಾದ ಹೃದಯಗುಹೆಯಲ್ಲಿ ಇರುವಿಕೆಯನ್ನು ಹೇಳುವ ಶ್ರುತಿಯು ವಿಷ್ಣುವಿನಲ್ಲಿ ಅನುಪಪನ್ನವಾಗುವುದಿಲ್ಲ. ಏಕೆಂದರೆ 'ನಿಚಾಯ್ಯತ್ವಾದೇವಂ ವ್ಯೋಮವತ್' ಎಂಬ ಸೂತ್ರದಲ್ಲಿ ಸರ್ವತ್ರವ್ಯಾಪ್ತವಾದ ಆಕಾಶವು ಅಲ್ಪದೇಶದಲ್ಲೂ ಇರುವಂತೆ ಸರ್ವಗತನಾದ ವಿಷ್ಣು ಅಲ್ಪದೇಶದಲ್ಲಿಯೂ ಇರುತ್ತಾನೆಂದು ಹೇಳಿದ್ದಾಗಿದೆ.

ಅಂಶದಿಂದಲೂ ವಿಷ್ಣು ಸರ್ವಗತ

तत्वप्रकाशिका – न व्योमवदीश्वरस्य अल्पस्थानस्थितिः युक्ता । सर्वगतस्यापि व्योम्नोऽशतोऽल्पस्थानस्थित्युपपत्तेः, नच तथा विष्णोरुपपत्तिः। तस्यांशतोऽपि सर्वगतत्वात् ।

ಆಕಾಶದ ದೃಷ್ಟಾಂತದಂತೆ ಪರಮಾತ್ಮನಿಗೆ ಅಲ್ಪಪ್ರದೇಶದಲ್ಲಿರುವಿಕೆಯನ್ನು ಒಪ್ಪಲು ಸಾಧ್ಯವಿಲ್ಲ. ಏಕೆಂದರೆ ಆಕಾಶವು ಸರ್ವತ್ರವ್ಯಾಪ್ತವಾಗಿದ್ದರೂ ಅನೇಕ ಅಂಶಗಳಿರುವುದರಿಂದ ಒಂದಂಶದಿಂದ ಅಲ್ಪಸ್ಥಾನದಲ್ಲಿರುವಿಕೆಯನ್ನು ಹೇಳಬಹುದು. ಆದರೆ ವಿಷ್ಣುವಿನ ವಿಷಯದಲ್ಲಿ ಹೀಗೆ ಹೇಳಲಾಗದು. ಏಕೆಂದರೆ ಅಂಶಗಳಿಂದಲೂ ಕೂಡ ವಿಷ್ಣು ಸರ್ವಗತನೇ ಆಗಿದ್ದಾನೆ.

ಮತ್ತೊಂದು ಪ್ರಕಾರದಿಂದ ಪರಿಹಾರಭಾಗದ ವ್ಯಾಖ್ಯಾನ

तत्वप्रकाशिका – 'यावान्वा' इत्युक्तेश्चेत्यतः सूत्रशेषं प्रकारान्तरेण व्याचष्टे – एष इति ।।

ಹಾಗೂ 'ಯಾವಾನ್ವಾ ಅಯಮಾಕಾಶಃ' ಎಂಬ ಶ್ರುತಿಯಲ್ಲಿ ವಿಷ್ಣುವಿಗೆ ಸರ್ವಗತತ್ವವನ್ನು ಹೇಳಿದೆಯಲ್ಲವೆ? ಎಂಬ ಆಕ್ಷೇಪಕ್ಕೆ ಸೂತ್ರದ ಪರಿಹಾರಭಾಗವನ್ನು ಮತ್ತೊಂದು ಪ್ರಕಾರದಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ 'ಏಷಃ' ಇತ್ಯಾದಿಯಾಗಿ.

ಹೃದಯಸ್ಥನೆನ್ನಲು ಶ್ರುತಿಯ ಆಧಾರ

तत्वप्रकाशिका – सर्वगततयैव विष्णोरल्पस्थानस्थितिरुपपन्ना ।। 'एष मआत्मा' इति श्रुतौ सर्वज्यायस्त्वेनैव हृदयस्थत्वोक्तेरित्यर्थः ।

ಸರ್ವತ್ರವ್ಯಾಪ್ತನಾದ ವಿಷ್ಣುವಿನಲ್ಲಿಯೇ ಅಲ್ಪಸ್ಥಾನಸ್ಥಿತತ್ವವನ್ನೂ ಕೂಡ ಹೇಳಬಹುದು. ಏಕೆಂದರೆ 'ಏಷಃ ಆತ್ಮಾ' ಎಂಬ ಶ್ರುತಿಯಲ್ಲಿ, ಸಕಲ ಪದಾರ್ಥಗಳಿಂದ ಉತ್ತಮತ್ವವನ್ನು ಹೇಳುವುದರ ಜೊತೆಗೆ ಹೃದಯಸ್ಥಿತತ್ವವನ್ನೂ ಕೂಡ ಹೇಳಲಾಗಿದೆ.

ಹೃದಯದಲ್ಲಿರುವವನೇ ಸಕಲಪದಾರ್ಥಧಾರಕ

तत्वप्रकाशिका – नच एतद्युक्तिविरुद्धम् । 'यस्मिन् विरुद्धगतयोऽप्यनिशं पतन्ति' इत्यादेः । अतो विष्णुरेव हृत्पद्मस्थः सर्वाधारश्चेति सिद्धम् ।।

।। इति श्रीमज्जयतीर्थभिक्षुविरचितायां तत्वप्रकाशिकायाम् दहराधिकरणम् ।।

ವ್ಯಾಪ್ತನಲ್ಲಿ ಅಣುರೂಪವನ್ನು ಹೇಳುವುದು ವಿರುದ್ಧವಲ್ಲವೆ? ಎಂದು ಪ್ರಶ್ನಿಸಬಾರದು. 'ಯಸ್ಮಿನ್ವಿರುದ್ಧಗತಯೋऽಪ್ಯನಿಶಂ ಪತಂತಿ' ಎಂಬ ಭಾಗವತದ ಮಾತಿನಂತೆ ಪರಮಾತ್ಮನಲ್ಲಿರುವ ಯಾವ ಧರ್ಮಗಳಿಗೂ ವಿರೋಧವಿಲ್ಲ. ಆದ್ದರಿಂದ ವಿಷ್ಣುವೇ ಹೃದಯಕಮಲದಲ್ಲಿರುವ ಅಣುರೂಪವಾದ ಆಕಾಶದಲ್ಲಿ ನೆಲಸಿದ್ದಾನೆ, ಹಾಗೂ ಸಕಲಪದಾರ್ಥಗಳಿಗೂ ಧಾರಕನಾಗಿದ್ದಾನೆಂದು ಸಿದ್ಧವಾಯಿತು.

॥ ಇಲ್ಲಿಗೆ ಶ್ರೀಮಜ್ಜಯತೀರ್ಥಮುನಿಗಳಿಂದ ವಿರಚಿತವಾದ ತತ್ವಪ್ರಕಾಶಿಕಾಟೀಕೆಯಲ್ಲಿ ದಹರಾಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ॥

॥ ಶ್ರೀಕೃಷ್ಣಾರ್ಪಣಮಸ್ತು ॥

ಭಾವದೀಪ

'व्योमवत्' ಎಂಬ ಸೂತ್ರದಿಂದ ಪುನರುಕ್ತಿ ಪರಿಹಾರ

भावदीपः – अल्पश्रुतेरिति चेत् तदुक्तम् ।।

व्योमवदित्यनेनास्यागतार्थत्वाय विशेषाशङ्कोक्तिपूर्वं भाष्यं व्याचष्टे – न व्योमवदिति ।।

'व्योमवत्' ಎಂಬ ಸೂತ್ರದಿಂದ ಪುನರುಕ್ತಿಯನ್ನು ಪರಿಹರಿಸಲು ವಿಶೇಷವಾದ ಆಶಂಕೆಯನ್ನು ಮಾಡುತ್ತಾ ಭಾಷ್ಯವನ್ನು ವ್ಯಾಖ್ಯಾನಿಸುತ್ತಿದ್ದಾರೆ 'न व्योमवत्' ಇತ್ಯಾದಿ ಟೀಕೆಯಿಂದ.

'यावान्वा' ಎಂಬ ಶ್ರುತ್ಯರ್ಥ

भावदीपः – यावान्वा इति ।। पूर्वमथवेति द्वितीयव्याख्याने 'यावान् वा अयमाकाशस्तावानेषोऽन्तर्हृदय आकाशः' इति हृत्पद्मस्थदहराकाशस्थ-स्याऽकाशनाम्नो विष्णोर्व्याप्तबाह्यरूपतौल्येन व्याप्तत्वोक्तेरित्यर्थः ।

ಹಿಂದೆ "अथवा" ಎಂಬ ಎರಡನೆಯ ವ್ಯಾಖ್ಯಾನವನ್ನು ಅನುಸರಿಸಿದಾಗ "यावान्वा अयमाकाशस्तावानेषोऽन्तर्हृदय आकाशः" ಎಂದು ಹೃತ್ಪದ್ಮದಲ್ಲಿರುವ ದಹರಾಕಾಶದಲ್ಲಿ ಆಕಾಶನಾಮಕನಾದ ವಿಷ್ಣುವಿಗೆ ವ್ಯಾಪ್ತವಾದ ಬಾಹ್ಯಾಕಾಶದ ತೌಲ್ಯವನ್ನು ಹೇಳುವ ಮುಖಾಂತರ ವ್ಯಾಪ್ತತ್ವವನ್ನು ಹೇಳಲಾಗಿದೆ. ಇದನ್ನು ಇಲ್ಲಿ ವಿವಕ್ಷಿಸಬೇಕು.

'ज्यायान्' ಎಂಬುದರ ನಿಷ್ಪತ್ತಿ

भावदीपः – इति श्रुतौ छन्दोगश्रुतौ तृतीय इत्यर्थः । ज्यायस्त्वेन वृद्धतमत्वेन व्याप्तत्वेनेति यावत् । 'वृद्धस्य च' इति सूत्रेण ईयसुन्प्रत्यये ज्यादेशे च रूपमेतत् । छान्दोग्यभाष्यस्थं सर्वमत्रानुसन्धेयमिति भावेन किञ्चित् प्रदर्शयति – यस्मिन्निति ।।

"ಇತಿ ಶ್ರುತೌ" ಎಂದರೆ ಛಾಂದೋಗ್ಯದ ಮೂರನೆಯ ಅಧ್ಯಾಯದಲ್ಲಿ ಎಂದರ್ಥ. "ಜ್ಯಾಯಸ್ತ್ವೇನ" ಎಂದರೆ ಎಲ್ಲೆಡೆ ವ್ಯಾಪ್ತನಾದ್ದರಿಂದ ಎಂದು ಅಭಿಪ್ರಾಯ. "ವೃದ್ಧಸ್ಯ ಚ" ಎಂಬ ಸೂತ್ರದಿಂದ "ಈಯಸುನ್" ಪ್ರತ್ಯಯ ಬಂದು "ಜ್ಯಾ" ಆದೇಶವು ಪ್ರಾಪ್ತವಾದಾಗ ಈ ರೂಪವು ಸಿದ್ಧವಾಗಿದೆ. ಛಾಂದೋಗ್ಯಭಾಷ್ಯದಲ್ಲಿರುವ ಎಲ್ಲವನ್ನು ಇಲ್ಲಿ ಅನುಸಂಧಾನ ಮಾಡಿಕೊಳ್ಳಬೇಕೆಂಬ ಅಭಿಪ್ರಾಯದಿಂದ ಒಂದು ಮಾತನ್ನು ಮಾತ್ರ ಇಲ್ಲಿ ಪ್ರದರ್ಶಿಸುತ್ತಿದ್ದಾರೆ "ಯಸ್ಮಿನ್" ಇತ್ಯಾದಿಯಾಗಿ.

ವಿರುದ್ಧ ಧರ್ಮಗಳಿಗೆ ದೋಷವಿಲ್ಲ

ಭಾವದೀಪಃ – उक्तं हि तद्भाष्ये अल्पपरिमाणस्यापि महत्परिमाणं युज्यते, अचिन्त्य शक्तित्वात् । 'यस्मिन् विरुद्धगतयोऽप्यनिशं पतन्ति विद्यादयो विविधशक्तय आनुपूर्व्या' इति वचनात् । आनुपूर्व्येति श्रुतिप्रामाण्यादित्यर्थः इत्यादि । उपपादितमेतन्निपुणतरं वैशेषिकनयानुव्याख्यान इति भावः ।

ಛಾಂದೋಗ್ಯಭಾಷ್ಯದಲ್ಲಿ ಅಲ್ಪಪರಿಮಾಣನಿಗೂ ಮಹತ್ಪರಿಮಾಣವು ಯುಕ್ತವಾಗುತ್ತದೆಂದು ಸಮರ್ಥಿಸಲಾಗಿದೆ. ಅಚಿಂತ್ಯಶಕ್ತಿಯು ಪರಮಾತ್ಮನಿಗೆ ಇರುವುದರಿಂದ. "ಯಸ್ಮಿನ್ ವಿರುದ್ಧಗತಯೋऽಪ್ಯನಿಶಂ ಪತಂತಿ ವಿದ್ಯಾದಯೋ ವಿವಿಧಶಕ್ತಯ ಆನುಪೂರ್ವ್ಯಾ" ಎಂಬ ವಚನವು ಈ ವಿಷಯದಲ್ಲಿ ಆಧಾರವಾಗಿದೆ. "ಆನುಪೂರ್ವಿೀ" ಎಂದರೆ ಶ್ರುತಿಪ್ರಾಮಾಣ್ಯವಿರುವುದರಿಂದ ಎಂದರ್ಥ. ಇದನ್ನು ವೈಶೇಷಿಕಾಧಿಕರಣದ ಅನುವ್ಯಾಖ್ಯಾನದಲ್ಲಿ ಸ್ಪಷ್ಟವಾಗಿ ಪರಮಾತ್ಮನಲ್ಲಿ ವಿರುದ್ಧಧರ್ಮಗಳನ್ನು ಒಪ್ಪಿದರೆ ದೋಷವಿಲ್ಲವೆಂದು ಸಮರ್ಥಿಸಲಾಗಿದೆ.

ಸಕಲ ಸೂತ್ರಾರ್ಥಗಳ ಫಲ

ಭಾವದೀಪಃ – सर्वसूत्रार्थं फलोक्त्योपसंहरति – अत इति ।। आत्मशब्द-ब्रह्मशब्दापहतपाप्मत्वसुप्तगम्यत्व अरण्याख्य सुधासमुद्राश्रयलोकवत्त्व-सर्वधारकत्वरूपलिङ्गवाजसनेय तैत्तिरीयसमाख्यारूपसाधकभावात् सुषिरश्रुति-विरोध वाक्यानन्वयेतर परामर्श अल्पस्थानस्थत्वादिबाधकाभावाच्चेत्यर्थः ।

ಈ ಅಧಿಕರಣದ ಎಲ್ಲಾ ಸೂತ್ರಗಳ ಅರ್ಥವನ್ನು ಫಲವನ್ನು ಹೇಳುವ ಮೂಲಕ ಉಪಸಂಹಾರ ಮಾಡುತ್ತಿದ್ದಾರೆ ''ಅತಃ'' ಇತ್ಯಾದಿ ವಾಕ್ಯದಿಂದ. ''ಅತಃ'' ಶಬ್ದದ ಅರ್ಥ ಹೀಗಿದೆ - ಆತ್ಮಶಬ್ದ, ಬ್ರಹ್ಮ ಶಬ್ದ, ಅಪಹತಪಾಪತ್ವ, ಸುಪ್ತಗಮ್ಯತ್ವ, ''ಅರ'' ''ಣ್ಯ'' ಎಂಬ ಸುಧಾಸಮುದ್ರಾಶ್ರಯತ್ವ, ಸರ್ವಧಾರಕತ್ವ, ಇತ್ಯಾದಿ ಅನೇಕ ಲಿಂಗಗಳು ಇರುವುದರಿಂದ, ಬೃಹದಾರಣ್ಯಕ, ತೈತ್ತಿರೀಯ ಮೊದಲಾದ ಉಪನಿಷತ್ತುಗಳ ಸಮಾಖ್ಯಾಪ್ರಮಾಣವೆಂಬ ಸಾಧಕಪ್ರಮಾಣಗಳಿರುವುದರಿಂದ, ಸುಷಿರಶ್ರುತಿವಿರೋಧ, ವಾಕ್ಯಾನನ್ವಯ, ಇತರ ಪರಮಾರ್ಶ, ಅಲ್ಪಸ್ಥಾನಸ್ಥಿತತ್ವ ಮೊದಲಾದ ಬಾಧಕಗಳು ಇಲ್ಲದಿರುವುದರಿಂದ ಎಂದು.

ಚಂದ್ರಿಕೆಯನ್ನು ತಿಳಿದವರಿಗೆ ಏನು ಕಷ್ಟ?

भावदीपः – दहरे तत्त्वित्यस्यार्थः – विष्णुरेवेति ।। सर्वेति भाष्यलब्धफलोपसंहारः। अत्र पूर्वत्र च श्रुतसर्वाधारश्चेत्यर्थः । यत्त्वत्र केनचिद् दूषणमुत्प्रेक्षितम्, तत्तु चन्द्रिकार्थावमर्शिनां न दुरुद्धरमिति ग्रन्थगौरवभयान्नात्र प्रपञ्च्यते ।। २१ ।।

।। इति श्रीराघवेन्द्रयतिकृते भावदीपे दहराधिकरणम् ।।५।।

''ದಹರೇ ತತ್ತು'' ಹೃದಯಾಕಾಶದಲ್ಲಿ ವಿಷ್ಣುವೇ ಇದ್ದಾನೆಂಬುದರ ಅರ್ಥವನ್ನೇ ''ವಿಷ್ಣುರೇವ'' ಎಂದು ಹೇಳಿದ್ದಾರೆ. ''ಸರ್ವಾಧಾರಶ್ಚ'' ಎಂಬುದು ಭಾಷ್ಯದಿಂದ ತಿಳಿಯಲ್ಪಟ್ಟ ಅಧಿಕರಣಫಲದ ಉಪಸಂಹಾರವಾಗಿದೆ. ಈ ಶ್ರುತಿಯಲ್ಲಿ ಮತ್ತು ಹಿಂದಿನ ಶ್ರುತಿಯಲ್ಲಿ ಪ್ರತಿಪಾದಿತವಾದ ಸರ್ವಾಧಾರತ್ವವು ಎಂದರ್ಥ.

ಕೆಲವರು ಇಲ್ಲಿ ಅಪವ್ಯಾಖ್ಯಾನವನ್ನು ಮಾಡುತ್ತಾರೆ. ಅವರನ್ನು ಪ್ರತ್ಯೇಕವಾಗಿ ದೂಷಣೆ ಮಾಡಿಲ್ಲ. ತಾತ್ಪರ್ಯಚಂದ್ರಿಕೆಯಲ್ಲಿಯೇ ಅವರ ವ್ಯಾಖ್ಯಾನವನ್ನು ಸಂಪೂರ್ಣವಾಗಿ ನಿರಾಕರಣೆ ಮಾಡಲಾಗಿದೆ. ಚಂದ್ರಿಕೆಯ ಅರ್ಥವನ್ನು ಅವಮರ್ಶ ಮಾಡುವವರಿಗೆ ಅದನ್ನು ತಿಳಿಯುವುದೇನು ಕಷ್ಟವಲ್ಲ. ಆದ್ದರಿಂದ ಗ್ರಂಥಗೌರವ ಭಯದಿಂದ ಪುನಃ ಇಲ್ಲಿ ವಿವರಿಸುವುದಿಲ್ಲ.

।। ಇಲ್ಲಿಗೆ ಶ್ರೀಮದ್‌ರಾಘವೇಂದ್ರತೀರ್ಥರಿಂದ ವಿರಚಿತವಾದ ಭಾವದೀಪದ
ದಹರಾಧಿಕರಣದ ಕನ್ನಡ ಅನುವಾದವು ಮುಗಿಯಿತು ।।

ತಂತ್ರದೀಪಿಕೆಯಲ್ಲಿ ದಹರಾಧಿಕರಣದ ಸೂತ್ರಗಳು

।। श्रीजानकीवदनाम्भोजराजहंसाय रामचन्द्राय नमः ।।

।। श्री गुरुभ्यो नमः ।।

श्री राघवेन्द्रतीर्थविरचिता

तन्त्रदीपिका

दहराधिकरणम् (१।३।५)

सत्पदद अनुवृत्ति

।। दहर उत्तरेभ्यः ।। १-३-१४ ।।

अत्र हृत्पद्मस्थत्वलिङ्गं समन्वीयते । तत्त्वित्यस्ति । द्युभ्वाद्यायतनमिति मण्डूकप्लुत्याऽन्वेति । पूर्वस्मात् सदिति च ।

ಈ ಅಧಿಕರಣದಲ್ಲಿ 'ಹೃತ್ಪದ್ಮಸ್ಥತ್ವ' ಎಂಬ ಲಿಂಗವನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡಲಾಗಿದೆ. 'ತತ್' ಎಂಬ ಪದಗಳು ಈ ಅಧಿಕರಣದಲ್ಲಿಯೂ ಸಹ ಅನುವೃತ್ತವಾಗುತ್ತವೆ. 'ದುಭ್ವಾದ್ಯಾಯತನಮ್' ಎಂಬುದು ಮಂಡೂಕಪ್ಲುತಿಯಿಂದ ಹಿಂದಿನ ಅಧಿಕರಣದಲ್ಲಿ ಅನ್ವಯವಾಗದಿದ್ದರೂ ಇಲ್ಲಿ ಅನ್ವಿತವಾಗುತ್ತದೆ. ಹಿಂದಿನ ಅಧಿಕರಣದಿಂದ 'ಸತ್' ಎಂಬ ಪದವು ಅನುವೃತ್ತವಾಗುತ್ತದೆ.

'ದಹರೇ ಉತ್ತರೇಭ್ಯಃ' ಎಂಬ ಸೂತ್ರದ ಅರ್ಥ

''उभे अस्मिन् द्यावापृथिवी'' इत्यादिनोक्तं द्युभ्वाद्यायतनं सत् दहरे ''दहरं पुण्डरीकं वेश्म'' इत्याद्युक्तदहरे हृत्पद्मे तत्तु ब्रह्मैव न जीवादिः ।

उत्तरेभ्यः ''य आत्मा अपहतपाप्मा'' इत्याद्युत्तरवाक्यस्थापहतपाप्मत्वादि धर्मेभ्य इत्यर्थः ।।

ಸೂತ್ರಾರ್ಥ ಹೀಗಿದೆ - ದ್ಯುಭ್ವಾದ್ಯಾಯತನಮ್ ಸತ್ = 'ಉಭೇ ಅಸ್ಮಿನ್ ದ್ಯಾವಾಪೃಥಿವೀ' ಇತ್ಯಾದಿ ಶ್ರುತಿಯಲ್ಲಿ ಹೇಳಲ್ಪಟ್ಟ ದ್ಯುಭ್ವಾದ್ಯಾಯತನನು, ದಹರೇ = 'ದಹರಂ ಪುಂಡರೀಕಂ ವೇಶ್ಮ' ಇತ್ಯಾದಿ ಶ್ರುತಿಯಲ್ಲಿ ಹೇಳಲ್ಪಟ್ಟ ಸಣ್ಣದಾದ ಹೃತ್ಪದ್ಮದಲ್ಲಿರುವವನು 'ತತ್' ಬ್ರಹ್ಮನೇ ಆಗಿದ್ದಾನೆ ಹೊರತು, ಜೀವಾದಿಗಳಲ್ಲ. ಏಕೆಂದರೆ ಉತ್ತರೇಭ್ಯಃ = ''ಯ ಆತ್ಮಾ ಅಪಹತಪಾಪ್ಮಾ'' ಇತ್ಯಾದಿ ಮುಂದಿನ ವಾಕ್ಯದಲ್ಲಿ ಹೇಳಿರುವ ಅಪಹತಪಾಪ್ಮತ್ವ ಮೊದಲಾದ ಧರ್ಮಗಳಿರುವುದರಿಂದ ಎಂದು.

'ತತ್ತು' ಎಂಬದೂ ಅನುವೃತ್ತ

इतश्चैवमित्याह -

।। गतिशब्दाभ्यां तथा हि दृष्टं लिङ्गं च ।।

दहरे तत्त्वित्यस्ति । गतिः सुप्तप्राप्तिः । शब्दो ब्रह्मशब्दः ।

ಮತ್ತೊಂದು ಕಾರಣದಿಂದಲೂ ಹೃತ್ಪದ್ಮಸ್ಥನಾದವನು ಬ್ರಹ್ಮನೇ ಆಗಿದ್ದಾನೆಂದು ಹೇಳುತ್ತಿದ್ದಾರೆ 'ಗತಿಶಬ್ದಾಭ್ಯಾಂ ತಥಾ ಹಿ ದೃಷ್ಟಂ ಲಿಂಗಂ ಚ' ಈ ಸೂತ್ರದಲ್ಲಿಯೂ 'ದಹರೇ' ಎಂಬಲ್ಲಿ 'ತತ್ತು' ಎಂಬುದು ಅನುವೃತ್ತವಾಗುತ್ತದೆ. 'ಗತಿ' ಎಂದರೆ ಸುಪ್ತಜೀವನದಿಂದ ಹೊಂದುವಿಕೆ ಎಂದರ್ಥ. 'ಶಬ್ದ' ಎಂದರೆ ಬ್ರಹ್ಮಶಬ್ದ ಎಂದರ್ಥ.

ಹೃತ್ಪದ್ಮಸ್ಥನಲ್ಲಿ ಸುಪ್ತಪ್ರಾಪ್ಯತ್ವ ಹಾಗೂ ಬ್ರಹ್ಮಶಬ್ದವಾಚ್ಯತ್ವ

ताभ्यां सुप्तगम्यत्वलिङ्गब्रह्मशब्दाभ्यामुक्तरूपदहररस्थं ब्रह्मैवेत्यर्थः । ''अहरहर्गच्छन्त्य एतं ब्रह्मलोकं न विन्दन्ति'' इति हृत्पद्मस्थस्य सुप्तप्रजाप्राप्यत्वोक्त्या ब्रह्मणो लोकमिति ब्रह्मलोकत्वोक्त्या च तत्स्थस्य सुप्तप्राप्यत्वं ब्रह्मशब्दवाच्यत्वं च सिद्धमिति भावः ।

ಸೂತ್ರಾರ್ಥ ಹೀಗಿದೆ - ಗತಿ ಶಬ್ದಾಭ್ಯಾಂ = ಸುಪ್ತಗಮ್ಯತ್ವವೆಂಬ ಲಿಂಗ ಹಾಗೂ ಬ್ರಹ್ಮಶಬ್ದ ಇವುಗಳಿಂದ ಹಿಂದೆ ಹೇಳಿದ ಅಲ್ಪವಾದ ಹೃತ್ಪದ್ಮದಲ್ಲಿರುವವನು ಬ್ರಹ್ಮನೇ ಆಗಿದ್ದಾನೆ ಎಂದು 'ಗತಿಶಬ್ದಾಭ್ಯಾಂ' ಎಂಬ ಸೂತ್ರಾಂಶದ ಅರ್ಥ. ಏಕೆಂದರೆ 'ಅಹರಹರ್ಗಚ್ಛಂತ್ಯಃ ಏತಂ ಬ್ರಹ್ಮ ಲೋಕಂ ನ ವಿಂದಂತಿ' ಸುಪ್ತರಾದ ಪ್ರಜೆಗಳು ಪ್ರತಿನಿತ್ಯ ಬ್ರಹ್ಮನನ್ನು ಹೊಂದುವವರಾದರೂ ಬ್ರಹ್ಮನ ಸ್ಥಳವೆನಿಸಿದ ಹೃತ್ಪದ್ಮವನ್ನಾಗಲೀ, ಬ್ರಹ್ಮನನ್ನಾಗಲೀ ತಿಳಿಯುವುದಿಲ್ಲ ಎಂದು ಶ್ರುತಿಯು ಹೃತ್ಪದ್ಮಸ್ಥನಿಗೆ ಸುಪ್ತಜೀವಪ್ರಾಪ್ಯತ್ವವನ್ನು ಹೇಳುತ್ತಿದೆ. ಮತ್ತು 'ಬ್ರಹ್ಮಣಃ ಲೋಕಮ್' ಎಂಬುದಾಗಿ, ಹೃತ್ಪದ್ಮವನ್ನು ಬ್ರಹ್ಮಲೋಕವೆಂದು ಹೇಳುತ್ತಿದೆ. ಈ ಕಾರಣದಿಂದ ಹೃತ್ಪದ್ಮಸ್ಥನಲ್ಲಿ ಸುಪ್ತಪ್ರಾಪ್ಯತ್ವ ಹಾಗೂ ಬ್ರಹ್ಮಶಬ್ದವಾಚ್ಯತ್ವಗಳು ಸಿದ್ಧವಾಗುತ್ತವೆಂದು ಅಭಿಪ್ರಾಯ.

'ಹಿ' ಶಬ್ದದಿಂದ ವಿಷ್ಣುವಿನಲ್ಲೇ ಪ್ರಸಿದ್ಧಿ

इतश्चैवमित्याह तथाहीत्यादिना । यथा गतिशब्दौ हृत्पद्मस्थगौ तथा लिङ्गमरण्याख्यसुधासमुद्राश्रयलोकवत्त्वरूपं लिङ्गं च हृत्पद्मस्थगं दृष्टं यतोऽतोऽपि दहरस्थं ब्रह्मेत्यर्थः । एतल्लोकवत्त्वं च विष्णौ प्रसिद्धमिति हेरर्थः ।

'तथाहि दृष्टं लिंगं च' ಎಂಬ ಸೂತ್ರಭಾಗದ ಅರ್ಥ ಹೀಗಿದೆ - ಮತ್ತೊಂದು ಕಾರಣದಿಂದಲೂ ಹೃತ್ಪದ್ಮಸ್ಥನು ಬ್ರಹ್ಮನೇ ಆಗಿದ್ದಾನೆಂದು ಹೇಳಲಾಗಿದೆ. ಗತಿ ಮತ್ತು ಶಬ್ದಗಳು ಹೃತ್ಪದ್ಮಸ್ಥನಿಗೆ ಹೇಗೆ ಸಂಬಂಧಪಟ್ಟಿವೆಯೋ, ತಥಾ = ಅದರಂತೆ ಲಿಂಗಮ್ = 'ಅರ' ಮತ್ತು 'ಣ್ಯ' ಎಂಬ ಸುಧಾಸಮುದ್ರಾಶ್ರಯಲೋಕವತ್ವ ಎಂಬ ಲಿಂಗವು ಹೃತ್ಪದ್ಮಸ್ಥನಲ್ಲಿದೆ ಎಂದು, ದೃಷ್ಟಮ್ = ಶ್ರುತಿಯಿಂದ ಸಿದ್ಧವಾಗಿದೆ. ಆದ್ದರಿಂದಲೂ ದಹರಾಕಾಶಸ್ಥನು ಬ್ರಹ್ಮನೇ ಆಗಿದ್ದಾನೆಂದರ್ಥ. ಇಂತಹ ಲೋಕವನ್ನು ಹೊಂದಿರುವುದು ವಿಷ್ಣುವಿನಲ್ಲಿ ಪ್ರಸಿದ್ಧವಾಗಿದೆಯೆಂದು 'ಹಿ' ಶಬ್ದವು ಹೇಳುತ್ತಿದೆ.

ಸುಧಾಸಮುದ್ರಾಶ್ರಯತ್ವ

''अरश्च ह वै ण्यश्चार्णवौ ब्रह्मलोके'' इत्युत्तरवाक्येऽरण्याख्यसुधासमुद्राश्रये विष्णुलोके प्रयुक्तस्य ब्रह्मलोकशब्दस्य हृत्पद्मे ''एतं ब्रह्मलोकम्'' इति प्रयोगात् तत्स्थस्य तल्लोकवत्त्वमिति भावः ।

'ಅರಶ್ಚ ಹ ವೈ ಣ್ಯಶ್ಚಾರ್ಣವೌ ಬ್ರಹ್ಮಲೋಕೇ' 'ಅರ' ಮತ್ತು 'ಣ್ಯ' ಎಂಬ ಹೆಸರಿನ ಎರಡು ಸುಧಾಸಮುದ್ರಗಳು ವಿಷ್ಣುಲೋಕವಾದ ಶ್ವೇತದ್ವೀಪದಲ್ಲಿವೆ ಎಂಬುದಾಗಿ ಮುಂದಿನವಾಕ್ಯದಲ್ಲಿ 'ಅರ' ಮತ್ತು 'ಣ್ಯ' ಗಳೆಂಬ ಸುಧಾಸಮುದ್ರಗಳಿಗೆ ಆಶ್ರಯವಾದ ವಿಷ್ಣುಲೋಕವನ್ನು ಉದ್ದೇಶಿಸಿ ಪ್ರಯೋಗ ಮಾಡಿರುವ ಬ್ರಹ್ಮಲೋಕ ಶಬ್ದಕ್ಕೆ 'ಏತಂ ಬ್ರಹ್ಮಲೋಕಮ್' ಎಂಬುದಾಗಿ ಹೃತ್ಪದ್ಮದಲ್ಲಿ ಪ್ರಯೋಗ ಮಾಡಿದ್ದರಿಂದ, ಹೃತ್ಪದ್ಮಸ್ಥನು 'ಅರ' ಮತ್ತು 'ಣ್ಯ' ಎಂಬ ಸುಧಾಸಮುದ್ರಾಶ್ರಯವಾದ ಲೋಕವುಳ್ಳವನೆಂದು ಸಿದ್ಧವಾಗುತ್ತದೆ.

ಹೃತ್ಪದ್ಮಸ್ಥನಲ್ಲಿ ಮಾತ್ರ ಈ ಲಿಂಗ

अस्य लिङ्गस्य हृत्पद्मस्थगत्वं न स्पष्टमिति पृथगुक्तिः । अत एवास्य तत्स्थतां वक्तुं तथेत्युक्तिः ।

ಈ ಲಿಂಗವು ಹೃತ್ಪದ್ಮಸ್ಥನಿಗೆ ಸಂಬಂಧಿಸಿವೆಯೆಂದು ಸ್ಪಷ್ಟವಾಗಿ ತಿಳಿಯುವುದಿಲ್ಲ. ಆದ್ದರಿಂದಲೇ ಪ್ರತ್ಯೇಕವಾಗಿ ಗತಿಶಬ್ದಗಳಿಗಿಂತ ಲಿಂಗಶಬ್ದವನ್ನು ಹೇಳಿರುತ್ತಾರೆ. ಆದ್ದರಿಂದಲೇ ಈ ಲಿಂಗವು ಹೃತ್ಪದ್ಮಸ್ಥನಲ್ಲಿದೆ ಎಂದು ಹೇಳಲು 'ತಥಾ' ಎಂದು ಸೂತ್ರಕಾರರು ಹೇಳಿದ್ದಾರೆ.

ಇದು ಪರಂಪರೆಯಿಂದ ವಿಷ್ಣುತ್ವ ಸಾಧಕ

यद्वा ब्रह्मलोकमिति हृत्पद्मस्य विष्णुलोकत्वोक्त्या तत्स्थो विष्णुरित्युक्तम् । ब्रह्मलोकपदस्य विष्णुलोकवाचित्वं कुत इत्यत इदमुच्यते। लिङ्गं सुधासमुद्राश्रयलोकवत्त्वरूपलिङ्गं च दृष्टं तदाश्रयलोकवत्त्वं च विष्णुलोकलिङ्गं प्रसिद्धमिति हेरर्थः । हृत्पद्मे प्रयुक्तब्रह्मलोकपदमुत्तरत्र प्रयुज्य ''अरश्च ह वै ण्यश्चार्णवौ ब्रह्मलोके'' इति तदाश्रयलोकत्वोक्तेर्न

सत्यलोको ब्रह्मलोकपदार्थ इति भावः । अत्र पक्षे ब्रह्मशब्द रूपहेतुसाधकत्वादस्य लिङ्गस्य पृथगुक्तिः ।।

ಅಥವಾ 'ಬ್ರಹ್ಮಲೋಕಮ್' ಎಂಬಲ್ಲಿ ಹೃತ್ಪದ್ಮವನ್ನೇ ವಿಷ್ಣುಲೋಕವೆಂದೇ ಹೇಳಲಾಗಿದೆ. ಹೃತ್ಪದ್ಮದಲ್ಲಿರುವವನು ವಿಷ್ಣುವಾಗಿದ್ದಾನೆಂದೂ ಕೂಡ ಹೇಳಲಾಗಿದೆ. ಆದರೆ ಬ್ರಹ್ಮಲೋಕ ಪದವು ವಿಷ್ಣುಲೋಕವನ್ನು ಹೇಳುತ್ತದೆಂಬ ವಿಷಯದಲ್ಲಿ ಏನು ಪ್ರಮಾಣ? ಎಂಬ ಪ್ರಶ್ನೆಗೆ ಉತ್ತರರೂಪವಾಗಿ ಈ ಲಿಂಗವನ್ನು ಹೇಳಿದ್ದಾರೆ. 'ಲಿಂಗಮ್' = ಸುಧಾಸಮುದ್ರಾಶ್ರಯ-ಲೋಕವತ್ವ ಎಂಬ ಲಿಂಗವು, ದೃಷ್ಟಂ ಚ = ಸುಧಾಸಮುದ್ರಾಶ್ರಯಲೋಕವತ್ವವು ವಿಷ್ಣುಲೋಕದ ಧರ್ಮವೆಂದು ಪ್ರಸಿದ್ಧವಾಗಿದೆ. ಇದನ್ನು 'ಹಿ' ಶಬ್ದವು ಹೇಳುತ್ತಿದೆ. ಹೃತ್ಪದ್ಮದಲ್ಲಿ ಪ್ರಯೋಗ ಮಾಡುತ್ತಿರುವ ಬ್ರಹ್ಮಲೋಕಪದವನ್ನೇ ಮುಂದೆ ಪ್ರಯೋಗಿಸಿ 'ಅರಶ್ಚ ಹ ವೈ ಣ್ಯಶ್ಚಾರ್ಣವೌ ಬ್ರಹ್ಮಲೋಕೇ' ಎಂಬುದಾಗಿ ಬ್ರಹ್ಮಲೋಕವನ್ನು ಸುಧಾಸಮುದ್ರಾಶ್ರಯ-ಲೋಕವೆಂದು ಹೇಳಿದ್ದರಿಂದ, ಸತ್ಯಲೋಕವನ್ನೇ ಬ್ರಹ್ಮಲೋಕವೆಂದು ತಿಳಿಯಬಾರದೆಂದು ಸ್ಪಷ್ಟವಾಗುತ್ತದೆ. ಈ ಪಕ್ಷದಲ್ಲಿ ಬ್ರಹ್ಮಶಬ್ದವೆಂಬ ಹೇತುವಿಗೆ ಸಾಧಕವಾದ್ದರಿಂದ, ಅಂದರೆ ಬ್ರಹ್ಮಶಬ್ದವೆಂಬ ಹೇತು ವಿಷ್ಣುಪರವಾಗಿದೆಯೆಂದು ಸಾಧನೆ ಮಾಡಲು, 'ಸುಧಾಸಮುದ್ರಾಶ್ರಯ ಲೋಕವತ್ವ' ಎಂಬ ಲಿಂಗವನ್ನು ಹೇಳಿದ್ದರಿಂದ, ಈ ಲಿಂಗವು ನೇರವಾಗಿ ವಿಷ್ಣು ಹೃತ್ಪದ್ಮಸ್ಥನಾಗಿ-ದ್ದಾನೆಂದು ಸಾಧನೆ ಮಾಡುವುದಿಲ್ಲ. ಆದ್ದರಿಂದಲೇ ಇದನ್ನು ಪ್ರತ್ಯೇಕವಾಗಿ ಹೇಳಿರುತ್ತಾರೆ.

'ಧೃತೇಶ್ಚ' ಇತ್ಯಾದಿ ಸೂತ್ರದ ಅರ್ಥ

इतश्चैवमित्याह -

।। धृतेश्च महिम्नोऽस्यास्मिन्नुपलब्धेः ।।१-३-१६।।

धृतेर्धारणाच्च ''य आत्मा स सेतर्विधृतिः'' इति सर्वधारकत्वलिङ्गश्रवणाच्च दहरे ब्रह्मैव । एतल्लिङ्गं हृत्पद्मस्थगमिति । कुतः ? अस्य हृत्पद्मस्थस्य महिम्नोऽपहत-पाप्मत्वादेरस्मिन् वाक्ये उपलब्धेरित्येकोऽर्थः ।

ಮತ್ತೊಂದು ಕಾರಣದಿಂದಲೂ ಹೃತ್ಪದ್ಮಸ್ಥನು ಬ್ರಹ್ಮನೇ ಆಗಿದ್ದಾನೆಂದು ಸಮರ್ಥಿಸುತ್ತಿದ್ದಾರೆ 'ಧೃತೇಶ್ಚ ಮಹಿಮ್ನೋऽಸ್ಯಾಸ್ಮಿನ್ನುಪಲಬ್ಧೇಃ ' ಎಂಬುದಾಗಿ. ಸೂತ್ರಾರ್ಥ ಹೀಗಿದೆ - 'ಧೃತೇಃ' = ಧಾರಣೆ ಮಾಡಿದ್ದರಿಂದಲೂ, 'ಯ ಆತ್ಮಾ ಸ ಸೇತುರ್ವಿಧೃತಿಃ' 'ಹೃತ್ಪದ್ಮಸ್ಥನಾದ ಆತ್ಮನೇ ಸಕಲ ಲೋಕಗಳಿಗೆ ಆಶ್ರಯನು' ಎಂಬುದಾಗಿ 'ಸಕಲಧಾರಕತ್ವ' ಎಂಬ ಲಿಂಗವು ಶ್ರುತವಾಗಿದೆ. ಈ ಕಾರಣದಿಂದಲೂ ಅಲ್ಪವಾದ ಹೃತ್ಪದ್ಮದಲ್ಲಿರುವವನು ಬ್ರಹ್ಮನೇ ಆಗಿರುತ್ತಾನೆ. ಈ ಲಿಂಗವು ಹೃತ್ಪದ್ಮಸ್ಥನಲ್ಲಿದೆಯೆನ್ನಲು ಏನು ಪ್ರಮಾಣ? ಎಂದರೆ, ಅಸ್ಯ = ಹೃತ್ಪದ್ಮಸ್ಥನ, ಮಹಿಮ್ನಃ = ಅಪಹತಪಾಪ್ಮತ್ವವೇ ಮೊದಲಾದ ಮಹಿಮೆಗಳು, ಅಸ್ಮಿನ್ = ಈ ವಾಕ್ಯದಲ್ಲಿ ಉಪಲಬ್ಧವಾಗಿ-ರುವುದರಿಂದ, ಹೃತ್ಪದ್ಮಸ್ಥನು ಬ್ರಹ್ಮನೇ ಆಗಿರುತ್ತಾನೆ. ಇದು ಈ ಸೂತ್ರದ ಮೊದಲನೆಯ ಅರ್ಥ.

ಆತ್ಮನನ್ನು ಪರಾಮರ್ಶಿಸಬೇಕು

''य आत्मा'' इति प्रागुक्तहृत्पद्मस्थात्मपरामर्शेन ''स सेतुः'' इत्याद्युक्त्वा सर्वे पाप्मनोऽतो निवर्तन्ते इत्याद्युक्तेरिति भावः ।

'ಯ ಆತ್ಮಾ' ಎಂಬುದಾಗಿ ಹಿಂದೆ ಹೇಳಿದ ಹೃತ್ಪದ್ಮಸ್ಥನಾದ ಆತ್ಮನನ್ನು ಪರಾಮರ್ಶ ಮಾಡಿ, 'ಸ ಸೇತುಃ' ಇತ್ಯಾದಿಯಾಗಿ ಹೇಳಿ 'ಸರ್ವೇ ಪಾಪ್ಮನೋऽತೋ ನಿವರ್ತಂತೇ' ಇತ್ಯಾದಿಯಾಗಿ ಹೇಳಿದ್ದರಿಂದ 'ಯ ಆತ್ಮಾ' ಎಂಬುದಾಗಿ ಮೊದಲು ಹೇಳಿ, ಹೃತ್ಪದ್ಮಸ್ಥನಾದ ಆತ್ಮನನ್ನು ಪರಾಮರ್ಶ ಮಾಡುವ ಮೂಲಕ 'ಸ ಸೇತುಃ' ಇತ್ಯಾದಿಯಾಗಿ ಹೇಳಿ 'ಸರ್ವೇ ಪಾಪ್ಮನೋऽತೋ ನಿವರ್ತಂತೇ' ಎಂದು ಹೇಳಿದ್ದರಿಂದ ಎಂದು ಅಭಿಪ್ರಾಯ.

ಸೂತ್ರಕ್ಕೆ ಮತ್ತೊಂದು ಅರ್ಥ

अन्यस्तु धृतिपदेन धृतियुक्तं वाक्यं गृह्यते । अस्मिन्निति च तन्त्रम् । चशब्द उपलब्धेश्चेत्यन्वेति । धृतेर्धृतिप्रतिपादकादेषसेतुर्विधारण इति वाक्यात् वाजसनेयसमाख्यानाद्हरे ब्रह्मैवेति यावत् । तत्रापि ब्रह्मेति कुतः? अस्य विष्णोर्महिम्नः सर्वाधिपतित्वादेरस्मिन् हृत्पद्मस्थे अस्मिन् वाजसनेये उपलब्धेश्चेत्यर्थः ।

ಸೂತ್ರದ ಮತ್ತೊಂದು ಅರ್ಥ ಹೀಗಿದೆ - ಧೃತಿಪದದಿಂದ ಧೃತಿಯನ್ನು ಹೇಳುವ ವಾಕ್ಯವನ್ನು ತೆಗೆದುಕೊಳ್ಳಬೇಕು. 'ಅಸ್ಮಿನ್' ಎಂಬುದನ್ನು ಆವೃತ್ತಿ ಮಾಡಿಕೊಳ್ಳಬೇಕು. 'ಧೃತೇಶ್ಚ' ಎಂಬಲ್ಲಿರುವ 'ಚ' ಶಬ್ದವು 'ಉಪಲಬ್ಧೇಃ' ಎಂಬಲ್ಲಿ ಅನ್ವಯವನ್ನು ಹೊಂದುತ್ತದೆ.

ಧೃತೇಃ = ಧೃತಿಯನ್ನು ಪ್ರತಿಪಾದನೆ ಮಾಡುವ 'ಏಷ ಸೇತುರ್ವಿಧಾರಣಃ' ಎಂಬ ವಾಕ್ಯದಿಂದ ಬೃಹದಾರಣ್ಯಕದ ಸಮಾಖ್ಯಾನವಿರುವುದರಿಂದ, ಅಲ್ಪವಾದ ಹೃತ್ಪದ್ಮದಲ್ಲಿರುವವನು ಬ್ರಹ್ಮನೇ ಆಗಿದ್ದಾನೆ. ಬೃಹದಾರಣ್ಯಕದಲ್ಲಿ ಬ್ರಹ್ಮನೇ ಪ್ರತಿಪಾದಿತನಾಗಿದ್ದಾನೆಂಬುದು ಹೇಗೆ ಸಿದ್ಧವಾಗುತ್ತದೆ? ಎಂದರೆ, ಅಸ್ಯ = ವಿಷ್ಣುವಿನ, ಮಹಿಮ್ನಃ = ಸರ್ವಾಧಿಪತಿತ್ವ ಮೊದಲಾದ ಮಹಿಮೆಯು, ಅಸ್ಮಿನ್ = ಹೃತ್ಪದ್ಮಸ್ಥನಲ್ಲಿ, ಅಸ್ಮಿನ್ = ಈ ಬೃಹದಾರಣ್ಯಕೋಪನಿಷತ್ತಿನಲ್ಲಿ, ಉಪಲಬ್ಧೇಶ್ಚ = ಉಪಲಬ್ಧವಾಗಿರುವುದರಿಂದಲೂ ಕೂಡ ಎಂದು ಸೂತ್ರಾರ್ಥ.

ಸಾಮಾಖ್ಯಾ ಪ್ರಮಾಣದ ಆಧಾರ

''य एषोऽन्तर्हृदय आकाशस्तस्मिन् शेते सर्वस्य वशी'' इत्याद्युक्त्वा ''एष सर्वेश्वर एष भूतपालः'' इति विष्णुलिङ्गोक्त्या तस्य वैष्णवत्वं सिद्धमिति तत्समाख्यानाद्दहरे विष्णुरिति भावः ।

'य एषोऽन्तर्हृदय आकाशस्तस्मिन् शेते सर्वस्य वशी' ಇತ್ಯಾದಿಯಾಗಿ ಮೊದಲು ಹೇಳಿ, 'ಏಷ ಸರ್ವೇಶ್ವರ ಏಷ ಭೂತಪಾಲಃ' ಎಂದು ಮುಂದೆ ವಿಷ್ಣುಲಿಂಗಗಳನ್ನು ಹೇಳಿದ್ದರಿಂದ ಬೃಹದಾರಣ್ಯಕೋಪನಿಷತ್ತಿನಲ್ಲಿ ಸರ್ವಾಶ್ರಯನೆಂದು ಹೇಳಲ್ಪಟ್ಟವನು ವಿಷ್ಣುವೇ ಆಗಿದ್ದಾನೆಂದು ಸಿದ್ಧವಾಗುತ್ತದೆ. ಆದ್ದರಿಂದ ಬೃಹದಾರಣ್ಯಕೋಪನಿಷತ್ತಿನ ಸಮಾಖ್ಯಾ-ಪ್ರಮಾಣದಿಂದ ದಹರಾಕಾಶದಲ್ಲಿರುವವನು ವಿಷ್ಣುವೆಂದು ಸಿದ್ಧವಾಗುತ್ತದೆ.

'ಪ್ರಸಿದ್ಧೇಶ್ಚ' ಎಂಬ ಸೂತ್ರದ ಅರ್ಥ

इतश्चैवमित्याह -

॥ प्रसिद्धेश्च ॥ १-३-१७ ॥

''दहरं विपाप्मम्'' इत्यादितैत्तिरीये विष्णोर्हृत्पद्मस्थत्वप्रसिद्धेश्च तत्समाख्यानाद्दहरे ब्रह्मैवेत्यर्थः ।

ಮತ್ತೊಂದು ಕಾರಣದಿಂದಲೂ ಹೃತ್ಪದ್ಮಸ್ಥನಾದವನು ಬ್ರಹ್ಮನೇ ಆಗಿದ್ದಾನೆಂದು ಹೇಳುತ್ತಿದ್ದಾರೆ. ಸೂತ್ರಾರ್ಥ ಹೀಗಿದೆ - ಪ್ರಸಿದ್ಧೇಶ್ಚ = 'ದಹರಂ ವಿಪಾಪ್ಮಮ್' ಇತ್ಯಾದಿಯಾಗಿ ತೈತ್ತಿರೀಯೋಪನಿಷತ್ತಿನಲ್ಲಿ ವಿಷ್ಣುವಿಗೆ ಹೃತ್ಪದ್ಮಸ್ಥತ್ವದ ಪ್ರಸಿದ್ಧವಿರುವುದರಿಂದಲೂ ತೈತ್ತಿರೀಯೋಪನಿಷತ್ತಿನ ಸಮಾಖ್ಯಾಪ್ರಮಾಣವಿರುವುದರಿಂದ ಅಲ್ಪವಾದ ಹೃತ್ಪದ್ಮದಲ್ಲಿರುವವನು ಬ್ರಹ್ಮನೇ ಆಗಿದ್ದಾನೆಂದು ಸೂತ್ರಾರ್ಥ.

ಹಿಂದಿನ ಆಕ್ಷೇಪ ಪರಿಹಾರಕ್ಕಾಗಿ 'ಇತರ' ಇತ್ಯಾದಿ ಸೂತ್ರ

उक्तमाक्षिप्याह -

।। इतरपरामर्शात्स इति चेन्नासम्भवात् ।।१-३-१८।।

''परंज्योतिरुपसम्पद्य'' इति प्रकृतस्येतरस्य जीवस्य परामर्शात् ''एष आत्मा'' इत्येतच्छब्देन ''य आत्माऽपहतपाप्मा'' इत्यादिनोक्त-हृत्पद्मस्थस्यात्मत्वविधानाद्हरे स जीव इति चेन्न । असम्भवात् । अपहतपाप्मत्वादिधर्माणां हृत्पद्मस्थे श्रुतानां जीवे असम्भवात् ''एतदमृतमभयम्'' इत्युक्तामृतत्वादेश्च असम्भवादित्यर्थः ।

ಹಿಂದೆ ಹೇಳಿದ್ದನ್ನೇ ಆಕ್ಷೇಪ ಮಾಡಿ ಮುಂದಿನ ಸೂತ್ರ ಹೊರಟಿದೆ. 'ಇತರಪರಾಮರ್ಶಾತ್ಸ ಇತಿ ಚೇನ್ನಾಸಂಭವಾತ್' 'ಪರಂಜ್ಯೋತಿರುಪಸಂಪದ್ಯ' ಇತ್ಯಾದಿಯಾಗಿ ಪ್ರಕೃತನಾದ, ಇತರಸ್ಯ = ಜೀವನ, ಪರಾಮರ್ಶಾತ್ = 'ಏಷ ತೇ ಆತ್ಮಾ' ಎಂಬುದಾಗಿ 'ಏತತ್' ಶಬ್ದದಿಂದ, ಯ = ಜೀವನನ್ನು ಪರಾಮರ್ಶ ಮಾಡಿ 'ಯ ಆತ್ಮಾऽಪಹತಪಾಪ್ಮಾ' ಇತ್ಯಾದಿ ಶ್ರುತಿಯಿಂದ ಹೃತ್ಪದ್ಮಸ್ಥನಿಗೆ ಆತ್ಮತ್ವವನ್ನು ವಿಧಾನ ಮಾಡಿದ್ದರಿಂದ ಹೃತ್ಪದ್ಮಸ್ಥನು ಜೀವನೇ ಆಗಿದ್ದಾನೆ ಎಂದು ಶಂಕಿಸಬಾರದು. ಏಕೆಂದರೆ ಅಸಂಭವಾತ್ = ಹೃತ್ಪದ್ಮಸ್ಥನಲ್ಲಿ ಶ್ರುತವಾದ ಅಪಹತಪಾಪ್ಮತ್ವಾದಿ-ಧರ್ಮಗಳು ಜೀವನಲ್ಲಿ ಅಸಂಭಾವಿತವಾಗಿವೆ. 'ಏತದಮೃತಮಭಯಮ್' ಎಂಬಲ್ಲಿ ಹೇಳಿರುವ ಅಮೃತತ್ವ ಮೊದಲಾದ ಧರ್ಮಗಳೂ ಕೂಡ ಜೀವನಲ್ಲಿ ಅಸಂಭಾವಿತವಾಗಿವೆಯೆಂದು ಸೂತ್ರಾರ್ಥ.

ಅಸಂಭವ ಪರಿಹಾರಕ್ಕಾಗಿ 'ಉತ್ತರಾತ್' ಇತ್ಯಾದಿ ಸೂತ್ರ

उक्तासम्भवमाक्षिप्याह -

।। उत्तराच्चेदाविर्भूतस्वरूपस्तु ।।१-३-१९ ।।

तुरेव । स इति दहर इति चास्ति । नेति शेषः । उत्तरात् जीवस्य सत्यकामत्वप्रतिपादकात् ''स तत्र पर्येति'' इत्याद्युत्तरवाक्यात् । तत एवापहतपाप्मत्वादिसम्भवेन दहरे जीव इति चेन्न । आविर्भूतस्वरूपस्तु मुक्त एवोच्यते सत्यकामत्वेन तत्रेत्यर्थः । ''स्वेन रूपेणाभिनिष्पद्यते'' इत्युक्तेः । हृत्पद्मस्थस्य देहान्तर्वर्तितया मुक्तत्वायोगादिति भावः ।

ಹಿಂದಿನ ಸೂತ್ರದಲ್ಲಿ ಹೇಳಿದ ಅಸಂಭವದೋಷವನ್ನು ಆಕ್ಷೇಪ ಮಾಡಿ ಸಮಾಧಾನವನ್ನು ಹೇಳುವುದಕ್ಕಾಗಿ ಮುಂದಿನ ಸೂತ್ರವು ಹೊರಟಿದೆ. 'ಉತ್ತರಾಚ್ಚೇದಾವಿರ್ಭೂತ-ಸ್ವರೂಪಸ್ತು' ಸೂತ್ರದಲ್ಲಿರುವ 'ತು' ಶಬ್ದಕ್ಕೆ 'ಏವ' ಎಂದರ್ಥ. 'ಸಃ' ಎಂಬ ಪದವನ್ನು, 'ದಹರೇ' ಎಂಬ ಪದವನ್ನು ಅನುವೃತ್ತಿ ಮಾಡಿಕೊಳ್ಳಬೇಕು. 'ನ' ಎಂಬುದನ್ನು ಶೇಷಪೂರಣ ಮಾಡಿಕೊಳ್ಳಬೇಕು. ಸೂತ್ರಾರ್ಥ ಹೀಗಿದೆ - 'ಉತ್ತರಾಚ್ಚೇತ್' = ಜೀವನಿಗೆ ಸತ್ಯಕಾಮತ್ವವನ್ನು ಪ್ರತಿಪಾದನೆ ಮಾಡುವ 'ಸ ತತ್ರ ಪರ್ಯೇತಿ' ಎಂಬ ಮುಂದಿನ ವಾಕ್ಯದ ಬಲದಿಂದ, ಆ ವಾಕ್ಯದಿಂದಲೇ ಅಪಹತಪಾಪ್ಮತ್ವಾದಿಗಳು ಜೀವನಲ್ಲಿವೆಯೆಂದು ಸಿದ್ಧವಾಗುತ್ತವೆ. ಆದ್ದರಿಂದ ದಹರಾಕಾಶದಲ್ಲಿರುವವನು ಜೀವನೇ ಏಕಾಗಬಾರದು? ಎಂದು ಪ್ರಶ್ನಿಸಬಾರದು. ಆವಿರ್ಭೂತಸ್ವರೂಪಸ್ತು = ಆವಿರ್ಭೂತಸ್ವರೂಪನೆನಿಸಿದ ಮುಕ್ತಜೀವನೇ ಸತ್ಯಕಾಮತ್ವ ಮೊದಲಾದ ಧರ್ಮಗಳಿಂದ ಪ್ರತಿಪಾದ್ಯನಾಗಿದ್ದಾನೆ. ಏಕೆಂದರೆ 'ಸ್ವೇನ ರೂಪೇಣಾಭಿ-ನಿಷ್ಪದ್ಯತೇ' ಎಂಬ ಶ್ರುತಿಯು ಮುಕ್ತಜೀವನನ್ನು ಪ್ರತಿಪಾದನೆ ಮಾಡುತ್ತಿದೆ. ಆದರೆ ಹೃತ್ಪದ್ಮಸ್ಥನು ದೇಹದ ಒಳಗಿರುವುದರಿಂದ, ಮುಕ್ತಜೀವನು ದೇಹದಲ್ಲಿದ್ದಾನೆಂದು ಹೇಳುವುದು ಅಯುಕ್ತವಾಗುತ್ತದೆ.

'ಉತ್ತರಾತ್' ಎಂಬುದು ಸಾಧು

मुक्तस्त्विति वाच्ये श्रौतमुक्तिस्वरूपोक्त्यर्थैवमुक्तिः । ''पूर्वादिभ्यो नवभ्यो वा'' इत्युक्तेरुत्तरादिति साधु ।।

'ಮುಕ್ತಸ್ತು' ಎಂದೇ ಸೂತ್ರದಲ್ಲಿ ಹೇಳಬಹುದಿತ್ತು. ಆದರೂ ಸಹ ಶ್ರುತಿಪ್ರತಿಪಾದಿತವಾದ ಮುಕ್ತಿಸ್ವರೂಪವನ್ನು ತಿಳಿಸಲು 'ಆವಿರ್ಭೂತಸ್ವರೂಪಸ್ತು' ಎಂಬುದಾಗಿ ಹೇಳಿರುತ್ತಾರೆ. 'ಪೂರ್ವಾದಿಭ್ಯೋ ನವಭ್ಯೋ ವಾ' ಎಂಬ ಸೂತ್ರದಂತೆ 'ಉತ್ತರಾತ್' ಎಂಬ ಪದಪ್ರಯೋಗವು ಸಾಧುವಾಗಿದೆ. 'ಉತ್ತರತ್ವಾತ್' ಎಂದೇನೂ ಹೇಳಬೇಕಾಗಿಲ್ಲ.

'ಏಷಃ' ಎಂಬ ಪುಲ್ಲಿಂಗ ಪ್ರಯೋಗದ ಸಮರ್ಥನೆ

एष आत्मेति जीवपरामर्शबलात् कथञ्चिज्जीव एव दहरस्थ इत्यत आह - ।। **अन्यार्थश्च परामर्शः ।।१-३-२०।।**

च एव । अन्योऽर्थो विषयो यस्य सः । परंज्योतिरित्युक्तज्योतीरूप-ब्रह्मविषय एव परामर्शः । परामृश्यात्मत्वविधानमित्यर्थः । एष इति पुल्लिङ्गं त्वन्त्यात्मापेक्षयेति भावः ।

'ಏಷ ಆತ್ಮಾ' ಎಂಬಲ್ಲಿ ಜೀವನನ್ನು ಪರಾಮರ್ಶಿಸಿರುವ ಬಲದಿಂದಲೇ ಹೇಗಾದರೂ ಜೀವನೇ ದಹರಾಕಾಶದಲ್ಲಿದ್ದಾನೆಂದು ಏಕೆ ಹೇಳಬಾರದು? ಎಂಬ ಆಕ್ಷೇಪಕ್ಕೆ ಸಮಾಧಾನವನ್ನು ನೀಡುತ್ತಿದ್ದಾರೆ 'ಅನ್ಯಾರ್ಥಶ್ಚ ಪರಾಮರ್ಶಃ' ಎಂಬುದಾಗಿ. ಸೂತ್ರದಲ್ಲಿರುವ 'ಚ' ಶಬ್ದವು 'ಏವ' ಎಂಬರ್ಥದಲ್ಲಿದೆ. ಬೇರೆಯದಾದ ವಿಷಯವುಳ್ಳದ್ದೂ ಅನ್ಯಾರ್ಥವೆನಿಸುತ್ತದೆ. 'ಪರಂಜ್ಯೋತಿಃ' ಎಂಬುದಾಗಿ ಜ್ಯೋತಿರೂಪವಾದ ಬ್ರಹ್ಮವಿಷಯದಲ್ಲೇ 'ಏಷಃ' ಎಂದು ಪರಾಮರ್ಶ ಮಾಡಿ, ಆತ್ಮತ್ವವನ್ನು ವಿಧಾನ ಮಾಡಲಾಗಿದೆ. 'ಏಷಃ' ಎಂಬ ಪುಲ್ಲಿಂಗ ಪ್ರಯೋಗವು ಆತ್ಮಶಬ್ದಕ್ಕೆ ಅನುಸಾರಿಯಾಗಿದೆಯೆಂದು ತಿಳಿಯಬೇಕು.

'ಅಲ್ಪಶ್ರುತೇಃ' ಇತ್ಯಾದಿ ಸೂತ್ರದ ಅರ್ಥ

उक्तमाक्षिप्याह -।। अल्पश्रुतेरिति चेत्तदुक्तम् ।।१-३-२१।।

''दहरं पुण्डरीकम्'' इत्यादिना अल्पस्य स्थानस्य श्रवणाद्दहरे सः न ब्रह्मेति चेत् नेति शेषः । तत् अल्पस्थानस्थत्वमुक्तं निचाय्यत्वादित्यादिना समाहितमित्यर्थः ।

ಬ್ರಹ್ಮನೇ ಹೃತ್ಪದ್ಮಸ್ಥನಾಗಿದ್ದಾನೆಂಬುದನ್ನು ಆಕ್ಷೇಪ ಮಾಡಿ ಸಮಾಧಾನ ನೀಡುವ ಮುಂದಿನ ಸೂತ್ರ ಹೀಗಿದೆ - 'ಅಲ್ಪಶ್ರುತೇರಿತಿ ಚೇತ್ತದುಕ್ತಮ್'

'ದಹರಂ ಪುಂಡರೀಕಮ್' ಇತ್ಯಾದಿಯಾಗಿ ಅಲ್ಪವಾದ ಸ್ಥಾನವು ಶ್ರುತವಾಗಿರುವುದರಿಂದ, ಅಲ್ಪವಾದ ಹೃದಯದಲ್ಲಿರುವವನು ಬ್ರಹ್ಮನಲ್ಲ ಎಂದು ಹೇಳಬಾರದು. 'ನ' ಎಂಬುದನ್ನು ಇಲ್ಲಿಯೂ ಶೇಷಪೂರಣ ಮಾಡಿಕೊಳ್ಳಬೇಕು. 'ತತ್' = ಅಲ್ಪಸ್ಥಾನದಲ್ಲಿರುವಿಕೆಯೂ, 'ಉಕ್ತಮ್' = 'ನಿಚಾಯ್ಯತ್ವಾತ್' ಇತ್ಯಾದಿ ಸೂತ್ರದಿಂದ ಸಮಾಧಾನವನ್ನು ಹೇಳಿದ್ದಾಗಿದೆ ಯೆಂದು ಸೂತ್ರಾರ್ಥ.

ಅಚಿಂತ್ಯಶಕ್ತಿಯಿಂದ ವಿರೋಧ ಪರಿಹಾರ

व्योम्नोऽशतोऽल्पौकस्त्वं युक्तम् । विष्णोरंशस्यापि पूर्णत्वादिति विशेषशङ्कानिरासार्थमिदं स्मरणम् । तन्निरासश्च तदुक्तं तत्सर्वगतत्वेनैव हृत्पद्मस्थत्वं ''एष म आत्माऽन्तर्हृदये ज्यायान् पृथिव्या'' इत्यादिश्रुतावुक्तिमिति वृत्त्यन्तराद्बोध्यः। अचिन्त्यशक्तित्वाद्युज्यत इति भावः ।।५।।

ಭೂತಾಕಾಶಕ್ಕೆ ಅಂಶಗಳಿರುವುದರಿಂದ ಅಲ್ಪಸ್ಥಾನದಲ್ಲಿರುವಿಕೆಯನ್ನು ಕೂಡಿಸಬಹುದು. ಆದರೆ ವಿಷ್ಣುವಿನ ಅಂಶಗಳೂ ಕೂಡ ಪರಿಪೂರ್ಣವಾಗಿರುವುದರಿಂದ ಅಲ್ಪಸ್ಥಾನ-ದಲ್ಲಿರುವಿಕೆಯನ್ನು ಹೇಗೆ ಹೇಳಲು ಸಾಧ್ಯ ? ಎಂಬ ವಿಶೇಷವಾದ ಆಶಂಕೆಯನ್ನು ನಿರಾಕರಿಸು-

ವುದಕ್ಕಾಗಿ 'ನಿಚಾಯ್ಯತ್ವಾತ್'ಎಂಬ ಸೂತ್ರವು ಹೊರಟಿದೆ. ಈ ಶಂಕೆಯ ಪರಿಹಾರವನ್ನು 'ತದುಕ್ತಮ್' = ಸರ್ವಗತನಾದ್ದರಿಂದಲೇ ಹೃತ್ಪದ್ಮಸ್ಥನು ಆಗುತ್ತಾನೆಂಬುದು 'ಏಷ ಮ ಆತ್ಮಾಽಂತರ್ಹೃದಯೇ ಜ್ಯಾಯಾನ್ ಪೃಥಿವ್ಯಾಃ' ಇತ್ಯಾದಿ ಶ್ರುತಿಯಲ್ಲಿ ಹೇಳಲ್ಪಟ್ಟಿದೆಯೆಂದು ವ್ಯಾಖ್ಯಾನಾಂತರದಿಂದ ತಿಳಿಯಬೇಕು. ಅಚಿಂತ್ಯಶಕ್ತಿಯಿರುವುದರಿಂದ ಸರ್ವಗತನಾದ ಬ್ರಹ್ಮನು ಅಲ್ಪಸ್ಥಾನದಲ್ಲಿಯೂ ಇರುತ್ತಾನೆಂಬುದು ಅಭಿಪ್ರಾಯ.

॥ ಇಲ್ಲಿಗೆ ತಂತ್ರದೀಪಿಕಾ ಕನ್ನಡಾನುವಾದದಲ್ಲಿ ದಹರಾಧಿಕರಣವು ಮುಗಿಯಿತು ॥

ಅದ್ವೈತ-ವಿಶಿಷ್ಟಾದ್ವೈತಮತದಲ್ಲಿ ದಹರಾಧಿಕರಣ
ಮತ್ತು
ವಿಮರ್ಶೆ

ಅದ್ವೈತಭಾಷ್ಯದಲ್ಲಿ ಮತ್ತು ರಾಮಾನುಜ ಭಾಷ್ಯದಲ್ಲಿ ಈ ಅಧಿಕರಣದ ಶರೀರ ಹೀಗಿದೆ - ಶ್ರುತ್ಯುಕ್ತವಾದ ದಹರಾಕಾಶವು ಭೂತಾಕಾಶವೇ ಆಗಿದೆ. ಅಥವಾ ಜೀವನೇ ಆಗಿದ್ದಾನೆಂದು ಪೂರ್ವಪಕ್ಷ. ಬ್ರಹ್ಮನೆಂದು ಸಿದ್ಧಾಂತ. ಸೂತ್ರದಲ್ಲಿರುವ 'ದಹರ' ಪದವು ಪ್ರಥಮಾಂತವಾಗಿದೆ ಹೊರತು, 'ದಹರೇ' ಎಂಬುದಾಗಿ ಸಪ್ತಮ್ಯಂತವಾಗಿಲ್ಲವೆಂದು ಹೇಳುತ್ತಾರೆ.

ಇವರಿಬ್ಬರ ಅಭಿಪ್ರಾಯವೂ ಸರಿಯಲ್ಲ. ದಹರಾಕಾಶವನ್ನೇ ಬ್ರಹ್ಮನೆಂದು ಹೇಳುವುದಾದರೆ, 'ತಸ್ಮಿನ್ ಯದಂತಃ' ಎಂಬುದಾಗಿ ದಹರಾಕಾಶದಲ್ಲಿರುವ ವಸ್ತುವನ್ನು ಅನ್ವೇಷಣೆ ಮಾಡಬೇಕೆಂದು ಹೇಳುತ್ತಿರುವುದು ತಪ್ಪಾಗುತ್ತದೆ.

ಅದ್ವೈತಿಗಳು ಶ್ರುತ್ಯರ್ಥವನ್ನು ಹೀಗೆ ಹೇಳಿರುತ್ತಾರೆ. 'ತಸ್ಮಿನ್' ಎಂಬಲ್ಲಿರುವ 'ತತ್' ಶಬ್ದದಿಂದ ಹೃತ್ಪುಂಡರೀಕವನ್ನೇ ಪರಾಮರ್ಶಿಸಬೇಕು. ಹೃದಯಪುಂಡರೀಕದಲ್ಲಿರುವ ದಹರಾಕಾಶವನ್ನು ಅನ್ವೇಷಣ ಮಾಡಬೇಕೆಂದು ಶ್ರುತಿಯು ಹೇಳುತ್ತಿದೆ ಎಂದು.

ಇದು ತಪ್ಪು. 'ತಸ್ಮಿನ್' ಎಂಬಲ್ಲಿರುವ 'ತತ್' ಶಬ್ದದಿಂದ ಹಿಂದೆ ಬುದ್ಧಿಯಲ್ಲಿ ಪ್ರಸಕ್ತವಾದ ದಹರಾಕಾಶವನ್ನೇ ಪರಾಮರ್ಶಿಸಲು ಬರುವಾಗ ಅದನ್ನು ಬಿಟ್ಟು ದೂರದಲ್ಲಿರುವ ಹೃದಯ-ಪುಂಡರೀಕವನ್ನು ಪರಾಮರ್ಶ ಮಾಡುವುದು ಅಯುಕ್ತವಾಗಿದೆ.

ಸನ್ನಿಹಿತವಾದದ್ದನ್ನು ಪರಾಮರ್ಶಿಸಲು ಬರುವಾಗ ವ್ಯವಹಿತವಾದದ್ದನ್ನು ಪರಾಮರ್ಶ ಮಾಡಬಾರದೆನ್ನಲು ಪೂರ್ವಮೀಮಾಂಸೆಯ ದೃಷ್ಟಾಂತವು ಇರುತ್ತದೆ. ಏಳನೆಯ ಅಧ್ಯಾಯ ದಲ್ಲಿ ಚಾತುರ್ಮಾಸ್ಯದ ಮೂರನೆಯ ಪರ್ವದಲ್ಲಿ ಬರುವಂತಹ 'ಸಾಕಮೇಧೀಯ' ಎಂಬ ಯಾಗದಲ್ಲಿ 'ಏತದ್ಬ್ರಾಹ್ಮಣ ಏಕಕಪಾಲಃ' ಎಂಬ ವಾಕ್ಯವು ಶ್ರುತವಾಗಿದೆ. ಇಲ್ಲಿರುವ 'ಏತತ್' ಶಬ್ದದಿಂದ ದೂರದಲ್ಲಿರುವ ವೈಶ್ವದೇವಿಕವಾದ ಏಕಕಪಾಲವನ್ನು ಸ್ವೀಕರಿಸಬಾರದು. ಸನ್ನಿಹಿತವಾದ ವಾರುಣಪ್ರಘಾಸಿಕವಾದ ಏಕಕಪಾಲವನ್ನೇ ಪರಾಮರ್ಶಿಸಬೇಕು. ಹೀಗೆ ಪೂರ್ವಮೀಮಾಂಸೆಯಲ್ಲಿ ನಿರ್ಣಯಿಸಿದ್ದಾರೆ. ಇದರಂತೆ ಪ್ರಕೃತದಲ್ಲಿಯೂ ಸನ್ನಿಹಿತವಾದ ದಹರಾಕಾಶವನ್ನೇ ಪರಾಮರ್ಶ ಮಾಡಬೇಕು.

ಮತ್ತು ದಹರಾಕಾಶವು ಹೃದಯಪುಂಡರೀಕದಲ್ಲಿದೆಯೆಂದು 'ದಹರೋऽಸ್ಮಿನ್' ಎಂಬ ಹಿಂದಿನ ಶ್ರುತಿವಾಕ್ಯದಲ್ಲಿಯೇ ಹೇಳಿದ್ದಾಗಿದೆ. ಪುನಃ ಅದನ್ನೇ ಹೇಳುವುದು ವ್ಯರ್ಥವಾಗುತ್ತದೆ.

ಮತ್ತು 'ಯದಂತಃ' ಎಂಬಲ್ಲಿರುವ 'ಯತ್' ಶಬ್ದವು, 'ತದನ್ವೇಷ್ಟವ್ಯಮ್ ತದ್ವಾವ ವಿಜಿಜ್ಞಾಸಿತವ್ಯಂ' ಎಂಬಲ್ಲಿರುವ 'ತತ್' ಶಬ್ದವು ದಹರಾಕಾಶಪರವಾದರೆ ಪುಲ್ಲಿಂಗದಲ್ಲಿಯೇ ಪ್ರಯೋಗಮಾಡಬೇಕಿತ್ತು. ಆದ್ದರಿಂದ ಅದ್ವೈತಿಗಳ ವ್ಯಾಖ್ಯಾನವು ಅಸಾಧುವಾಗಿದೆ.

ರಾಮಾನುಜರ ಶ್ರುತ್ಯರ್ಥ ಹೀಗಿದೆ - 'ಯದಂತಃ' ಎಂಬಲ್ಲಿ 'ಯಃ' ಎಂಬ ಪುಲ್ಲಿಂಗ ಶಬ್ದವನ್ನೂ ಕೂಡ ಅಧ್ಯಾಹಾರ ಮಾಡಿಕೊಳ್ಳಬೇಕು. ಪುಲ್ಲಿಂಗದಲ್ಲಿರುವ 'ಯಃ' ಎಂಬ ಶಬ್ದದಿಂದ ದಹರಾಕಾಶವನ್ನು ಪರಾಮರ್ಶಿಸಬೇಕು. ಶ್ರುತಿಯಲ್ಲಿರುವ 'ಯತ್' ಎಂಬ ನಪುಂಸಕಲಿಂಗದ ಶಬ್ದದಿಂದ ದಹರಾಕಾಶದಲ್ಲಿರುವ ಗುಣಜಾತವನ್ನು (ಗುಣಗಳ ಸಮೂಹ) ಪರಾಮರ್ಶಿಸಬೇಕು.

ಅಥವಾ ಅಧ್ಯಾಹಾರ ಮಾಡಿಕೊಳ್ಳಬೇಕಾಗಿಲ್ಲ. 'ಯಃ' 'ಯತ್' ಎಂಬೆರಡು ಶಬ್ದಗಳಿಗೆ ಏಕಶೇಷ ಸಮಾಸ ಮಾಡಿದಾಗ ಕೇವಲ 'ಯತ್' ಎಂದೇ ಉಳಿಯುತ್ತದೆ. 'ಯಃ' ಎಂಬ ಶಬ್ದವು ಪುಲ್ಲಿಂಗದಲ್ಲಿದೆ. 'ಯತ್' ಎಂಬುದು ನಪುಂಸಕಲಿಂಗದಲ್ಲಿದೆ. ಈ ಎರಡೂ ಲಿಂಗಗಳ ಶಬ್ದಗಳಿಗೆ ವಿಗ್ರಹ ಮಾಡುವಾಗ 'ತ್ಯದಾದೀನಿ ಸರ್ವೈರ್ನಿತ್ಯಮ್' ಎಂಬ ಸೂತ್ರವು 'ತ್ಯತ್' ಮೊದಲಾದ ಸರ್ವನಾಮ ಶಬ್ದಗಳಿಗೆ ನಿತ್ಯವಾಗಿ ಏಕಶೇಷವನ್ನು ವಿಧಾನ ಮಾಡಿದೆ. ಅನಂತರ 'ನಪುಂಸಕಮನಪುಂಸಕೇನೈಕವಚ್ಚಾಸ್ಯಾನ್ಯತರ-ಸ್ಯಾಮ್' ಎಂಬ ಸೂತ್ರವು ನಪುಂಸಕಲಿಂಗವು

ಮತ್ತು ಏಕವಚನವು ಬರುತ್ತದೆಂದು ವಿಧಾನ ಮಾಡಿದೆ. ಆದ್ದರಿಂದ ನಪುಂಸಕಲಿಂಗ, ಏಕವಚನ ಎರಡೂ ಮಾಡಿದಾಗ 'ಯತ್' ಎಂದೇ ರೂಪವನ್ನು ಮಾಡಿದಂತಾಗುತ್ತದೆ.

ಆದ್ದರಿಂದ 'ಯಃ' ಎಂಬ ಪದದಿಂದ ವಾಚ್ಯವಾದ ದಹರಾಕಾಶವನ್ನು 'ಯತ್' ಎಂಬ ಪದದಿಂದ ವಾಚ್ಯವಾದ ದಹರಾಕಾಶದಲ್ಲಿರುವ ಗುಣಜಾತವನ್ನು ಅನ್ವೇಷಣ ಮಾಡಬೇಕೆಂದು ಶ್ರುತ್ಯರ್ಥ. ಇಷ್ಟು ರಾಮಾನುಜರ ಅಭಿಪ್ರಾಯ.

ಇದು ತಪ್ಪು. ಹಿಂದೆ ನಾವು ಸಿದ್ಧಾಂತ ಮಾಡಿದಂತೆ ಶ್ರುತಿಗೆ ಸುಲಭವಾಗಿ ವ್ಯಾಖ್ಯಾನಿಸಲು ಬರುವಾಗ 'ಯಃ' ಎಂಬ ಪದವನ್ನು ಅಧ್ಯಾಹಾರ ಮಾಡಿಕೊಳ್ಳುವುದಾಗಲೀ, ಅಥವಾ ಏಕಶೇಷ ವೃತ್ತಿಯನ್ನು ಮಾಡುವುದಾಗಲೀ, ತಪ್ಪಾಗುತ್ತದೆ.

ಮತ್ತು ಲೋಕದಲ್ಲಿ ಪ್ರಾತಿಪದಿಕಾರ್ಥದ ಏಕದೇಶಕ್ಕೆ ಪದಾರ್ಥಾನಂತರದಿಂದ ಅನ್ವಯ ಮಾಡುವುದು ಅವ್ಯುತ್ಪನ್ನವೆಂದು ಸಿದ್ಧವಾಗಿದೆ. ಪ್ರಕೃತ ಏಕಶೇಷವೃತ್ತಿಯನ್ನು ಹೊಂದಿರುವ 'ಯತ್' ಶಬ್ದದಿಂದ, ದಹರಾಕಾಶ ಮತ್ತು ಗುಣಜಾತಗಳೆರಡೂ ಅರ್ಥವೆಂದು ತಿಳಿಯುತ್ತದೆ. ಈ ಎರಡಕ್ಕೂ ಕೂಡ ಅಂತರ್ವರ್ತಿತ್ವದಲ್ಲಿ ಅನ್ವಯ ಮಾಡಬೇಕು ಹೊರತು ಕೇವಲ ಗುಣಜಾತಕ್ಕೆ ಮಾತ್ರ ಅಂತರ್ವರ್ತಿತ್ವದಲ್ಲಿ ಅನ್ವಯ ಮಾಡಬಾರದು. ಏಕೆಂದರೆ 'ಯೌ ಅಂತರ್ವರ್ತೇತೇ ತೌ ಆನಯ' ಯಾರಿಬ್ಬರು ಒಳಗಿದ್ದಾರೋ, ಅವರನ್ನು ಕರೆದುಕೊಂಡು ಬಾ ಎಂದು ಹೇಳಿದಾಗ. ಒಬ್ಬನು ಮಾತ್ರ ಒಳಗಿದ್ದಾನೆಂಬ ಪ್ರತೀತಿಯು ಬರಲು ಸಾಧ್ಯವಿಲ್ಲ. ಇಬ್ಬರು ಒಳಗಿದ್ದಾರೆಂಬ ಪ್ರತೀತಿಯೇ ಬರುತ್ತದೆ.

ಅದ್ವೈತ ಮತದಲ್ಲಿ ಮತ್ತು ವಿಶಿಷ್ಟಾದ್ವೈತ ಮತದಲ್ಲಿ 'ದಹರ ಉತ್ತರೇಭ್ಯಃ' ಎಂಬ ಸೂತ್ರದಲ್ಲಿರುವ 'ದಹರ' ಶಬ್ದವನ್ನು ಪ್ರಥಮಾವಿಭಕ್ಯಂತವೆಂದು ವಿವಕ್ಷಿಸಿ, ದಹರಾಕಾಶವನ್ನೇ ಬ್ರಹ್ಮನೆಂದು ಸಮರ್ಥಿಸುತ್ತಾರೆ. ಈಗಾಗಲೇ ಹೇಳಿದಂತೆ ಇದು ತಪ್ಪು. ಹಿಂದೆ ಹೇಳಿದ ದೋಷಗಳು ಬರುವುದಷ್ಟೇ ಅಲ್ಲದೇ ಅನೇಕ ಶ್ರುತಿಗಳ ವಿರೋಧವೂ ಕೂಡ ಬರುತ್ತದೆ. ಬೃಹದಾರಣ್ಯಕದ 'ಯ ಏಷೋऽಂತರ್ಹೃದಯ ಆಕಾಶಸ್ತಸ್ಮಿನ್ ಶೇತೇ ಸರ್ವಸ್ಯ ವಶೀ ಸರ್ವಸ್ಯೇಶಾನಃ' ಎಂಬ ವಾಕ್ಯದಲ್ಲಿ ಸ್ಪಷ್ಟವಾಗಿ ಹೃದಯದಲ್ಲಿ ಆಕಾಶವಿದೆ. ಅಂತಹ ಆಕಾಶದಲ್ಲಿ ಪರಮಾತ್ಮನಿದ್ದಾನೆ. ಅವನೇ ಎಲ್ಲರಿಗೂ ಸ್ವಾಮಿಯಾಗಿದ್ದಾನೆ. ಎಲ್ಲವೂ ಅವನ ಅಧೀನವಾಗಿದೆ ಎಂದು ಸ್ಪಷ್ಟವಾಗಿ ಹೃದಯಾಕಾಶದಲ್ಲಿ ಪರಮಾತ್ಮನಿದ್ದಾನೆಂದು ಹೇಳಲಾಗಿದೆ. ಮತ್ತು ಅಥರ್ವಣೋಪನಿಷತ್ತಿನಲ್ಲಿ 'ದಿವ್ಯೇ ಬ್ರಹ್ಮಪುರೇ ಹ್ಯೇಷ ವ್ಯೋಮ್ನ್ಯಾತ್ಮಾ ಸಂಪ್ರತಿಷ್ಠಿತಃ'

ಎಂಬುದಾಗಿ ದಿವ್ಯವಾದ ದೇಹದಲ್ಲಿ ಆಕಾಶವಿದೆ. ಅವನಲ್ಲಿ ಆತ್ಮ ಎನಿಸಿದ ಬ್ರಹ್ಮನಿದ್ದಾನೆಂದು ಹೇಳಲಾಗಿದೆ.

ಮತ್ತು ತೈತ್ತಿರೀಯೋಪನಿಷತ್ತಿನ ಶಿಕ್ಷಾವಲ್ಲಿಯಲ್ಲಿ 'ಯ ಏಷೋ೭ಂತರ್ಹೃದಯ ಆಕಾಶಃ ತಸ್ಮಿನ್ನಯಂ ಪುರುಷಃ' ಎಂಬುದಾಗಿ ಶರೀರದ ಒಳಗಿರುವ ಹೃದಯದಲ್ಲಿ ಆಕಾಶವಿದೆ. ಆಕಾಶದಲ್ಲಿ ಪುರುಷನಾಮಕನಾದ ಪರಮಾತ್ಮನಿದ್ದಾನೆಂದು ಹೇಳಲಾಗಿದೆ. ಬ್ರಹ್ಮವಲ್ಲಿಯಲ್ಲಿ 'ಯೋ ವೇದ ನಿಹಿತಂ ಗುಹಾಯಾಂ ಪರಮೇ ವ್ಯೋಮನ್' ಎಂಬುದಾಗಿ ಹೃದಯ ಗುಹೆಯಲ್ಲಿ ಇರುವಂತಹ ಆಕಾಶದಲ್ಲಿ ಪರಮಾತ್ಮನನ್ನು ತಿಳಿಯಬೇಕೆಂದು ಹೇಳಲಾಗಿದೆ. ಮಹಾನಾರಾಯಣೋಪನಿಷತ್ತಿನಲ್ಲಿಯೂ 'ದಹ್ರಂ ವಿಪಾಪ್ಮಂ ಪರವೇಶ್ಮಭೂತಂ ಯತ್ಪುಂಡರೀಕಂ ಪುರಮಧ್ಯಸಂಸ್ಥಮ್ । ತತ್ರಾಪಿ ದಹ್ರಂ ಗಗನಂ ವಿಶೋಕಃ ತಸ್ಮಿನ್ಯದಂತಃ ತದುಪಾಸಿತವ್ಯಮ್' ದೇಹದ ಹೃದಯದಲ್ಲಿ ಕಮಲವಿದೆ. ಅಂತಹ ಕಮಲದಲ್ಲಿ ದಹರಾಕಾಶವಿದೆ. ಅಂತಹ ದಹರಾಕಾಶದಲ್ಲಿ ಪಾಪರಾಹಿತ್ಯಾದಿಗಳಿಂದ ಕೂಡಿರುವ ಪರಮಾತ್ಮನನ್ನು ಉಪಾಸನೆ ಮಾಡಬೇಕು ಎಂದು ಹೇಳಲಾಗಿದೆ. ಹೀಗೆ ಎಲ್ಲಾ ಶ್ರುತಿಗಳಲ್ಲಿಯೂ ಹೃದಯಾಕಾಶದಲ್ಲಿರುವವನ್ನೇ ಬ್ರಹ್ಮನೆಂದು ಹೇಳಲಾಗಿದೆ ಹೊರತು, ಹೃದಯದಲ್ಲಿರುವ ಆಕಾಶವನ್ನೇ ಬ್ರಹ್ಮವೆಂದು ಎಲ್ಲಿಯೂ ಹೇಳಿಲ್ಲ.

'ಗತಿಶಬ್ದಾಭ್ಯಾಂ ತಥಾಹಿ ದೃಷ್ಟಂ ಲಿಂಗಂ ಚ' ಎಂಬ ಎರಡನೆಯ ಸೂತ್ರದಲ್ಲಿರುವ 'ತಥಾ ಹಿ ದೃಷ್ಟಮ್' ಎಂಬುದಕ್ಕೆ ಅದ್ವೈತಿಗಳ ವ್ಯಾಖ್ಯಾನ ಹೀಗಿದೆ - 'ಸತಾ ಸೋಮ್ಯ ತದಾ ಸಂಪನ್ನೋ ಭವತಿ' ಇತ್ಯಾದಿಯಾದ ಬೇರೆ ಶ್ರುತಿಯಲ್ಲಿ ಸುಪ್ತರಾದ ಜೀವರಿಗೆ ಬ್ರಹ್ಮವಿಷಯಕವಾದ ಗಮನವನ್ನು ಹೇಳಿರುವುದು ಕಂಡಿದೆ. ಆದ್ದರಿಂದ ಬ್ರಹ್ಮವಿಷಯಕ ಗಮನವು ದಹರಾಕಾಶವೇ ಬ್ರಹ್ಮನಾಗಿದ್ದಾನೆನ್ನಲು ಲಿಂಗವಾಗಿದೆಯೆಂದು ನಿಶ್ಚಯವಾಗುತ್ತದೆ ಎಂದು.

ಅದ್ವೈತಿಗಳ ಈ ವ್ಯಾಖ್ಯಾನ ಸರಿಯಲ್ಲ. 'ಗತಿ ಶಬ್ದಾಭ್ಯಾಂ' ಎಂಬ ದ್ವಂದ್ವಸಮಾಸದಲ್ಲಿ ಗರ್ಭಿತವಾದ 'ಗತಿ' ಶಬ್ದವು ಸಮಾಸದ ಏಕದೇಶವಾಗಿದೆ. ಮತ್ತು ಸ್ತ್ರೀಲಿಂಗದಲ್ಲಿದೆ. ಇಂತಹ 'ಗತಿ' ಶಬ್ದದಿಂದ ನಪುಂಸಕಲಿಂಗವಾದ ದೃಷ್ಟಪದದ ಜೊತೆಗೆ ಅನ್ವಯವನ್ನು ಮಾಡುವುದು ತಪ್ಪಾಗುತ್ತದೆ. ಎಂದರೆ ಸಮಾಸದ ಏಕದೇಶದಿಂದ ಅನ್ವಯ ಮಾಡುವುದು ಮತ್ತು ನಪುಸಂಕಲಿಂಗಶಬ್ದದಲ್ಲಿ ಸ್ತ್ರೀಲಿಂಗಪದದಿಂದ ಅನ್ವಯ ಮಾಡುವುದು ಎರಡೂ ಕೂಡ ಅಯುಕ್ತವಾಗಿದೆ.

ಹೀಗೆ ಅದ್ವೈತಮತವನ್ನು ನಿರಾಕರಣೆ ಮಾಡಿದ್ದರಿಂದ ರಾಮಾನುಜರ ವ್ಯಾಖ್ಯಾನವನ್ನೂ ಕೂಡ ನಿರಾಕರಿಸಿದಂತಾಯಿತು - 'ತಥಾ ಹಿ ದೃಷ್ಟಮ್' ಎಂಬಲ್ಲಿರುವ 'ದೃಷ್ಟ' ಶಬ್ದವು 'ಗತಿ' ಮತ್ತು 'ಶಬ್ದ' ಎರಡರಲ್ಲಿಯೂ ವಿಶೇಷಣವಾಗಿದೆಯೆಂದು ಇವರ ವ್ಯಾಖ್ಯಾನ. ಸುಪ್ತ ಪ್ರಜೆಗಳ ಗಮನ ಮತ್ತು ಬ್ರಹ್ಮಶಬ್ದ ಎರಡೂ ಕೂಡ ಶ್ರುತ್ಯಂತರದಲ್ಲಿ ಬ್ರಹ್ಮವಿಷಯಕವೆಂದು ಸಿದ್ಧವಾಗಿದೆಯೆಂದು ಅಭಿಪ್ರಾಯ. ಇದೂ ಸಹ ತಪ್ಪು.

ರಾಮಾನುಜರು ಹೇಳುವಂತೆ 'ದೃಷ್ಟ' ಶಬ್ದವು 'ಗತಿ' 'ಶಬ್ದ' ಇವುಗಳಲ್ಲಿ ವಿಶೇಷಣವಾಗುವುದಾದರೆ, ಪುಲ್ಲಿಂಗದಲ್ಲಿ ಮತ್ತು ದ್ವಿವಚನದಲ್ಲಿ ಪ್ರಯೋಗಿಸಬೇಕಿತ್ತು. ಏಕೆಂದರೆ 'ಗತಿಶಬ್ದಾಭ್ಯಾಂ' ಎಂಬುದು ಪುಲ್ಲಿಂಗದಲ್ಲಿಯೂ, ದ್ವಿವಚನದಲ್ಲಿಯೂ ಇರುವುದರಿಂದ ಅದಕ್ಕೆ ವಿಶೇಷಣವಾದ ದೃಷ್ಟಪದವೂ ಕೂಡ ಪುಲ್ಲಿಂಗದಲ್ಲಿ ಮತ್ತು ದ್ವಿವಚನದಲ್ಲಿಯೇ ಪ್ರಯೋಗಿಸಬೇಕಿತ್ತು.

ಇನ್ನು ಶಾಂಕರ-ರಾಮಾನುಜರು ಇಬ್ಬರೂ ಕೂಡ; ಸೂತ್ರದಲ್ಲಿರುವ 'ಲಿಂಗಮ್' ಎಂಬ ಪದವು ಶ್ರುತಿಯಲ್ಲಿರುವ ಬ್ರಹ್ಮಲೋಕ ಶಬ್ದಕ್ಕೆ ಕರ್ಮಧಾರಯ ಸಮಾಸವನ್ನೇ ಮಾಡಬೇಕೆಂದು ತಿಳಿಸುತ್ತಿದೆ. ಶ್ರುತಿಯಲ್ಲಿರುವ ಬ್ರಹ್ಮಲೋಕ ಶಬ್ದಕ್ಕೆ 'ಬ್ರಹ್ಮೈವ ಲೋಕಃ ಬ್ರಹ್ಮಲೋಕಃ' ಎಂದು ಕರ್ಮಧಾರಯ ಸಮಾಸವನ್ನು ಮಾಡಿದಾಗ ಬ್ರಹ್ಮನೇ ಲೋಕನೆನಿಸಿದ್ದಾನೆ. ಅಂತಹ ಬ್ರಹ್ಮನನ್ನು ಸುಪ್ತನಾದ ಜೀವನು ಹೊಂದುತ್ತಾನೆಂದು ವ್ಯಾಖ್ಯಾನಿಸಿದಂತಾಗುತ್ತದೆ. ಹೊರತು 'ಬ್ರಹ್ಮಣಃ ಲೋಕಃ' ಎಂದು ಷಷ್ಠೀ ತತ್ಪುರುಷ ಸಮಾಸವನ್ನು ಮಾಡಬಾರದು. 'ಬ್ರಹ್ಮಣಃ ಲೋಕಃ' ಎಂದು ಷಷ್ಠೀ ತತ್ಪುರುಷ ಸಮಾಸ ಮಾಡಿದಾಗ, ಬ್ರಹ್ಮನ ಲೋಕವನ್ನು ಕುರಿತು ಸುಪ್ತಜೀವನು ಹೋಗುತ್ತಾನೆಂದು ಹೇಳಿದಂತಾಗುತ್ತದೆ. ಆದರೆ ಪ್ರತಿನಿತ್ಯ ಸತ್ಯಲೋಕಕ್ಕೆ ಹೋಗಲು ಜೀವನಿಗೆ ಸಾಮರ್ಥ್ಯವಿಲ್ಲ. ಆದ್ದರಿಂದ ಷಷ್ಠೀ ತತ್ಪುರುಷ ಸಮಾಸವನ್ನು ಮಾಡದೇ, ಕರ್ಮಧಾರಯ ಸಮಾಸವನ್ನೇ ಆಶ್ರಯಿಸಿ ಬ್ರಹ್ಮನನ್ನು ಕುರಿತು ಹೋಗುತ್ತಾನೆಂಬ ವ್ಯಾಖ್ಯಾನವನ್ನೇ ವಿವಕ್ಷಿಸಬೇಕೆಂದು ಸೂತ್ರದಲ್ಲಿರುವ 'ಲಿಂಗಮ್' ಎಂಬ ಪದವು ತಿಳಿಸುತ್ತಿದೆ ಎಂದು ವ್ಯಾಖ್ಯಾನಿಸುತ್ತಾರೆ.

ಈ ವ್ಯಾಖ್ಯಾನವೂ ತಪ್ಪು. ಏಕೆಂದರೆ ಶ್ರುತಿಯ ಮುಂದಿನ ವಾಕ್ಯದಲ್ಲಿಯೂ ಬ್ರಹ್ಮಲೋಕ ಪದವಿದೆ. ಅಲ್ಲಿರುವ ಬ್ರಹ್ಮಲೋಕಪದಕ್ಕೆ ಷಷ್ಠೀತತ್ಪುರುಷ ಸಮಾಸವನ್ನೇ ಆಶ್ರಯಿಸುವುದು ಅನಿವಾರ್ಯ. 'ಅರಶ್ಚ ಹ ವೈ ಣ್ಯಶ್ಚಾರ್ಣವೌ ಬ್ರಹ್ಮಲೋಕೇ ತೃತೀಯಸ್ಯಾಮಿತೋ ದಿವಿ ತದ್ಧೈರಂ

ಮದೀಯಂ ಸರಃ ತದಶ್ವತ್ಥಃ ಸೋಮಸವನಸ್ತದಪರಾಜಿತಾಪೂಃ ಬ್ರಹ್ಮಣಃ' 'ಅರ' ಮತ್ತು 'ಣ್ಯ' ಎಂಬೆರಡು ಸುಧಾಸಮುದ್ರಗಳು ಬ್ರಹ್ಮಲೋಕದಲ್ಲಿವೆ. ಭೂಲೋಕದಿಂದ ಮೂರನೆಯ ಲೋಕವೆನಿಸಿದ ದ್ಯುಲೋಕದಲ್ಲಿ ಮಧ್ಯದಿಂದ ಕೂಡಿರುವ ಮದದಾಯಕವಾದ ಸರೋವರವಿದೆ. ಅಮೃತವನ್ನು ಸ್ರವಿಸುವ ಅಶ್ವತ್ಥ ಮರವಿದೆ, ಯಾರಿಂದಲೂ ಗೆಲ್ಲಲಾಗದ ಪಟ್ಟಣವೇ ಈ ಬ್ರಹ್ಮನ ಪಟ್ಟಣ' ಎಂದು ಬ್ರಹ್ಮನ ಲೋಕವನ್ನು ವರ್ಣನೆ ಮಾಡುತ್ತಿದೆ. ಆದ್ದರಿಂದ ಬ್ರಹ್ಮಲೋಕ ಶಬ್ದಕ್ಕೆ ಬ್ರಹ್ಮನೇ ಲೋಕನಾಗಿದ್ದಾನೆಂದು ವ್ಯಾಖ್ಯಾನಿಸಬಾರದು. ಬ್ರಹ್ಮನಿಗೆ ಸಂಬಂಧಪಟ್ಟ ಲೋಕವೆಂದೇ ವ್ಯಾಖ್ಯಾನಿಸಬೇಕು. ಮತ್ತು 'ಪರಸ್ಯ ಬ್ರಹ್ಮಣೋ ಲೋಕೇ ಶ್ವೇತದ್ವೀಪಾಭಿಧೇ ಪರೇ । ಅರೋ ಣ್ಯಶ್ಚಾರ್ಣವೌ ದಿವ್ಯೌ' ಎಂಬ ಛಾಂದೋಗ್ಯ ಭಾಷ್ಯದಲ್ಲಿ ಹೇಳಲ್ಪಟ್ಟ ಸ್ಮೃತಿಯೂ ಕೂಡ ಬ್ರಹ್ಮಲೋಕವನ್ನೇ ವರ್ಣನೆ ಮಾಡಿದೆ. ಈ ಸ್ಮೃತಿಯ ಆಧಾರದಿಂದಲೂ 'ಬ್ರಹ್ಮಣಃ ಲೋಕೇ' ಎಂಬುದಾಗಿ ಷಷ್ಠೀ ಸಮಾಸವೇ ಕೇಳಿಸುತ್ತಿದೆ. ಮತ್ತು 'ಅರ' ಮತ್ತು 'ಣ್ಯ' ಎಂಬೆರಡು ಸುಧಾಸಮುದ್ರಗಳಿಗೆ, ಸರೋವರಕ್ಕೆ, ಅಶ್ವತ್ಥವೃಕ್ಷಕ್ಕೆ ಆಶ್ರಯವಾಗಿರುವಿಕೆಯೆಂಬ ಲಿಂಗದ ಬಲದಿಂದಲೂ ಷಷ್ಠೀಸಮಾಸ ಮಾಡುವುದೇ ಅತ್ಯಂತ ಯುಕ್ತವಾಗಿದೆಯೆಂದು ತಿಳಿಯಬೇಕು.

'ಏತಯಾ ನಿಷಾದಸ್ಥಪತಿಮ್' ಎಂಬ ಶ್ರುತಿಯನ್ನು ವಿಚಾರ ಮಾಡುವಾಗ ಪೂರ್ವಮೀಮಾಂಸೆಯಲ್ಲಿ ಷಷ್ಠೀ ಸಮಾಸಕ್ಕಿಂತ ಕರ್ಮಧಾರಯ ಸಮಾಸವನ್ನೇ ಶ್ರೇಷ್ಠವೆಂದು ಪರಿಗಣಿಸಿದ್ದಾರಲ್ಲವೇ? ಆದ್ದರಿಂದ ಇಲ್ಲಿಯೂ ಕೂಡ ಕರ್ಮಧಾರಯ ಸಮಾಸವನ್ನು ಮಾಡುವುದೇ ಯುಕ್ತವಾಗುತ್ತದೆಂದು ಪ್ರಶ್ನಿಸಬಾರದು. ಏಕೆಂದರೆ 'ಏತಯಾ ನಿಷಾದಸ್ಥಪತಿಮ್' ಎಂಬ ಶ್ರುತಿಯ ವಾಕ್ಯಶೇಷದಲ್ಲಿ ಷಷ್ಠೀ ವಿಭಕ್ತಿಯು ಕೇಳಿಸುತ್ತಿಲ್ಲ. ಷಷ್ಠೀ ಸಮಾಸವನ್ನು ಆಶ್ರಯಿಸಬೇಕೆನ್ನಲು ಬೇರೆ ಯಾವ ಲಿಂಗಗಳೂ ಕೂಡ ಇರುವುದಿಲ್ಲ. ಸಮಾನಾಧಿಕರಣ ಸಮಾಸವೆನಿಸಿದ ಕರ್ಮಧಾರಯ ಸಮಾಸವನ್ನು ಮಾಡಬೇಕಾಗುತ್ತದೆ. ಆದರೆ ಪ್ರಕೃತ ವಾಕ್ಯಶೇಷದಲ್ಲಿ ಷಷ್ಠೀ ಸಮಾಸವು ಅನೇಕ ಲಿಂಗಗಳೂ ಇರುವ ಪ್ರಯುಕ್ತ, ಕರ್ಮಧಾರಯ ಸಮಾಸವನ್ನು ಆಶ್ರಯಿಸದೇ ಷಷ್ಠೀ ಸಮಾಸವನ್ನೇ ಮಾಡಬೇಕು.

ಆದ್ದರಿಂದ ಮುಂದಿನ ವಾಕ್ಯಕ್ಕೆ ಅನುಸಾರಿಯಾಗಿ 'ಅಹರಹರ್ಗಚ್ಛಂತ್ಯ ಏತಂ ಬ್ರಹ್ಮಲೋಕಮ್' ಎಂಬಲ್ಲಿಯೂ ಕೂಡ ಬ್ರಹ್ಮನಿಗೆ ಆವಾಸಸ್ಥಾನವಾದ ಕಾರಣ ದಹರಾಕಾಶವನ್ನೇ 'ಬ್ರಹ್ಮಲೋಕ' ಎಂದು ಕರೆಯಬೇಕು. ಹೊರತು ಬ್ರಹ್ಮನನ್ನೇ ಬ್ರಹ್ಮಲೋಕ ಶಬ್ದದ ಅರ್ಥವೆಂದು ಕರೆಯಬಾರದು.

ಯಾವರೀತಿಯಾಗಿ 'ಬ್ರಹ್ಮಪುರೇ ದಹರಮ್' ಎಂಬಲ್ಲಿ ಶರೀರವು ಬ್ರಹ್ಮಪುರ ಶಬ್ದದ ಅರ್ಥವಾಗಿದೆಯೋ, ಅದರಂತೆ 'ಏತಂ ಬ್ರಹ್ಮಲೋಕಮ್' ಎಂಬಲ್ಲಿಯೂ ಕೂಡ ಬ್ರಹ್ಮನ ಆವಾಸಸ್ಥಾನವೆನಿಸಿದ ಹೃದಯದಲ್ಲಿರುವ ದಹರಾಕಾಶವೇ ಬ್ರಹ್ಮಲೋಕವೆನಿಸಿದೆ.

ಬ್ರಹ್ಮಲೋಕವನ್ನು ಕುರಿತು ಹೋಗದವನು ಬ್ರಹ್ಮನನ್ನು ಕುರಿತೂ ಕೂಡ ಹೋಗಲು ಸಾಧ್ಯವಿಲ್ಲ. ಬ್ರಹ್ಮನನ್ನು ಸುಪ್ತನಾದ ಜೀವನು ಪಡೆಯುತ್ತಾನೆಂದು ಹೇಳುವ ಅದ್ವೈತಿಗಳು ಬ್ರಹ್ಮನ ಆವಾಸಸ್ಥಾನವನ್ನೂ ಕೂಡ ತೆರಳುತ್ತಾನೆಂದು ಕೂಡ ಒಪ್ಪಲೇ ಬೇಕು.

'ಧೃತೇಶ್ಚ ಮಹಿಮ್ನೋऽಸ್ಮಿನ್ನುಪಲಬ್ಧೇಃ ಎಂಬ ಮೂರನೆಯ ಸೂತ್ರದಲ್ಲಿ 'ಧೃತೇಃ ಮಹಿಮ್ನಾ' ಎಂಬೆರಡು ಪದಗಳು ಧಾರಕತ್ವವೆಂಬ ಮಹಿಮೆಯಿರುವುದರಿಂದ ಸಮಾನಾಧಿಕರಣದಲ್ಲಿ ಪ್ರಯುಕ್ತವಾಗಿವೆ ಎಂದು ಶಂಕರ-ರಾಮಾನುಜರಿಬ್ಬರೂ ಕೂಡ ವ್ಯಾಖ್ಯಾನ ಮಾಡುತ್ತಾರೆ. ದಹರಾಕಾಶನು ಬ್ರಹ್ಮನೇ ಆಗಿದ್ದಾನೆ. ಏಕೆಂದರೆ ಸಕಲ ವಸ್ತುಗಳಿಗೆ ಧಾರಕತ್ವ ಮಹಿಮೆಯು ಅವನಲ್ಲಿರುವುದರಿಂದ ಎಂದು ಇವರ ವ್ಯಾಖ್ಯಾನ.

ಇದೂ ಕೂಡ ತಪ್ಪು. 'ಧೃತೇಃ' ಎಂದಷ್ಟೇ ಹೇಳಿದರೆ ಸಾಕು. 'ಮಹಿಮಾ' ಎಂಬ ಪದವು ವ್ಯರ್ಥ. ಯಾವರೀತಿಯಾಗಿ 'ಅಂಬರಾಂತಧೃತೇಃ' ಇತ್ಯಾದಿ ಸ್ಥಳಗಳಲ್ಲಿ 'ಧೃತೇಃ' ಎಂಬ ಪದದಿಂದಲೇ 'ಸೇತುರ್ವಿಧೃತಿಃ' ಎಂಬ ಶ್ರುತಿಯಲ್ಲಿರುವ ಧಾರಕತ್ವ ಮಹಿಮೆಯನ್ನು ಹೇಳಿದಂತಾಗುತ್ತದೋ, ಅದರಂತೆ ಇಲ್ಲಿಯೂ ಕೂಡ 'ಧೃತೇಃ' ಎಂಬ ಪದದಿಂದಲೇ ಧಾರಕತ್ವ ಮಹಿಮೆಯನ್ನು ಹೇಳಿದಂತಾಗುತ್ತದೆ. ಪುನಃ 'ಮಹಿಮ್ನಃ' ಎಂಬ ಪದವು ಇವರಿಬ್ಬರ ಪ್ರಕಾರವೂ ವ್ಯರ್ಥವೇ ಆಗಿದೆ. ಬೇರೊಂದು ಕೃತ್ಯವನ್ನು ಇವರಿಬ್ಬರಿಂದಲೂ ಹೇಳಲು ಸಾಧ್ಯವಿಲ್ಲ. ಆದ್ದರಿಂದ ಮೂರನೆಯ ಸೂತ್ರವ್ಯಾಖ್ಯಾನವೂ ಕೂಡ ಅಸಾಧುವಾಗಿದೆ.

ಅದ್ವೈತಮತದಲ್ಲಿ ಮತ್ತು ವಿಶಿಷ್ಟಾದ್ವೈತಮತದಲ್ಲಿ ನಾಲ್ಕನೆಯ ಸೂತ್ರವನ್ನು ಹೀಗೆ ವ್ಯಾಖ್ಯಾನಿಸಿದ್ದಾರೆ - 'ಆಕಾಶ ಇತಿ ಹೋವಾಚ' ಇತ್ಯಾದಿ ಶ್ರುತಿಯಲ್ಲಿ ಇರುವಂತಹ ಆಕಾಶ ಶಬ್ದವು ಬ್ರಹ್ಮನಲ್ಲಿ ಪ್ರಸಿದ್ಧವಾಗಿದೆ ಎಂಬುದಾಗಿ 'ಪ್ರಸಿದ್ಧೇಃ' ಎಂಬ ಸೂತ್ರದ ಅಭಿಪ್ರಾಯವೆಂದು.

ಇದು ತಪ್ಪು. ನಾವು ಹೇಳುವಂತೆ ಸಮನ್ವಯ ಮಾಡುವಂತಹ ಆಕಾಶಸ್ಥತ್ವವು ಬ್ರಹ್ಮನಲ್ಲಿ ಪ್ರಸಿದ್ಧವಾಗಿದೆಯೆಂದೇ ವ್ಯಾಖ್ಯಾನಿಸಲು ಬರುವಾಗ ಸಮನ್ವಯ ಮಾಡದಿರುವ ದಹರಶಬ್ದಕ್ಕೆ ಸಮಾನಾಧಿಕರಣವಾದ ಆಕಾಶಶಬ್ದಕ್ಕೆ ಬ್ರಹ್ಮನಲ್ಲಿ ಪ್ರಸಿದ್ಧಿಯನ್ನು ಹೇಳುವುದು ಅಯುಕ್ತವಾಗುತ್ತದೆ.

ಐದನೆಯ ಸೂತ್ರದಲ್ಲಿ 'ಅಸಂಭವಾತ್' ಎಂಬ ಪದಕ್ಕೆ ಬುದ್ಧಿ ಮೊದಲಾದ ಉಪಾಧಿಗಳಿಂದ ಪರಿಚ್ಛಿನ್ನನಾದ ಜೀವನಿಗೆ 'ಯಾವಾನ್ವಾ ಅಯಮಾಕಾಶಃ' ಎಂಬುದಾಗಿ ಆಕಾಶದ ದೃಷ್ಟಾಂತವನ್ನು ನೀಡುವುದು ಅಸಂಭಾವಿತವಾಗುತ್ತದೆ. ಆದ್ದರಿಂದ ಜೀವನನ್ನು ದಹರಾಕಾಶನೆಂದು ಹೇಳಬಾರದು ಹೊರತಾಗಿ, ಅಪರಿಚ್ಛಿನ್ನನಾದ ಉಪಮೇಯಕ್ಕೆ ಅರ್ಹನಾದ ಬ್ರಹ್ಮನೇ ದಹರಾಕಾಶನೆನ್ನಬೇಕೆಂದು ವ್ಯಾಖ್ಯಾನಿಸುತ್ತಾರೆ.

ಇದೂ ಸಹ ತಪ್ಪು. ಬ್ರಹ್ಮನೂ ಕೂಡ 'ಜ್ಯಾಯಾನಾಕಾಶಾತ್' ಇತ್ಯಾದಿ ಶ್ರುತಿಯ ಬಲದಿಂದ ಭೂತಾಕಾಶಕ್ಕಿಂತ ಹೆಚ್ಚಿನ ಪರಿಮಾಣವುಳ್ಳವನಾಗಿದ್ದಾನೆಂದು ಹೇಳಲಾಗಿದೆ. ಆದ್ದರಿಂದ ಜೀವನು ಹೇಗೆ ಪರಿಚ್ಛಿನ್ನನಾದ ಕಾರಣ ಉಪಮೇಯನಾಗಲಾರನೆಂದು ಹೇಳುತ್ತೀರೋ, ಅದರಂತೆ ಆಕಾಶಕ್ಕಿಂತ ಹೆಚ್ಚಿನ ಪರಿಮಾಣವನ್ನು ಹೊಂದಿರುವ ಕಾರಣ ಬ್ರಹ್ಮನೂ ಕೂಡ ಉಪಮೇಯನಾಗಲು ಸಾಧ್ಯವಿಲ್ಲ.

ಶಂಕಾ - 'ಯಾವಾನ್ವಾ ಅಯಮಾಕಾಶಃ' ಎಂಬ ವಾಕ್ಯದ ಅಭಿಪ್ರಾಯವೇನೆಂದರೆ ಪುಂಡರೀಕದಲ್ಲಿ ಬ್ರಹ್ಮನಿದ್ದಾನೆಂದು ತಿಳಿಯುತ್ತಿದೆ. ಇದರಿಂದ ಅತ್ಯಂತ ಅಲ್ಪಪರಿಮಾಣವು ಬ್ರಹ್ಮನಲ್ಲಿ ಪ್ರಾಪ್ತವಾಗಿದೆ. ಇದನ್ನು ಅಲ್ಲಗಳೆಯುವುದಕ್ಕಾಗಿ ಅಪರಿಚ್ಛಿನ್ನವಾದ ಪರಿಮಾಣವನ್ನು ಹೊಂದಿರುತ್ತಾನೆಂದು ಸಮರ್ಥಿಸುವುದಕ್ಕಾಗಿ 'ಯಾವಾನ್ವಾ ಅಯಮಾಕಾಶಃ' ಇತ್ಯಾದಿ ಶ್ರುತಿಯು ಹೊರಟಿದೆ. ಆದ್ದರಿಂದ ಬ್ರಹ್ಮನಲ್ಲಿ ಈ ಶ್ರುತಿಯನ್ನು ಉಪಪಾದಿಸಬಹುದಲ್ಲವೇ ಎಂದು.

ಸಮಾಧಾನ - ಈ ಸಮರ್ಥನೆಯೂ ಸಹ ಸರಿಯಲ್ಲ. ಹೀಗೆ ಹೇಳುವುದಾದರೆ 'ಯಾವಾನ್ವಾ ಅಯಮಾಕಾಶಃ' ಎಂಬ ವಾಕ್ಯವು ಬ್ರಹ್ಮಪರವಾದಂತೆ ಜೀವಪರವೂ ಕೂಡ ಆಗುತ್ತದೆ. ಏಕೆಂದರೆ ಅದ್ವೈತಮತದಲ್ಲಿ ಸುಷುಪ್ತ್ಯಾದ್ಯವಸ್ಥೆಯಲ್ಲಿ ಅನುಗತವಾದ ಜೀವಭಾವದಲ್ಲಿ ಅನನುಗತವಾದ ಬುದ್ಧ್ಯಾದಿಗಳು ಉಪಾಧಿಯಾಗಲು ಸಾಧ್ಯವಿಲ್ಲ. ಆದ್ದರಿಂದ ಸುಷುಪ್ತ್ಯಾದ್ಯವಸ್ಥೆಯಲ್ಲಿ ಅನುಗತವಾದ ಅವಿದ್ಯೆಯೇ ಉಪಾಧಿಯಾಗಿದೆ ಎಂದು ಹೇಳಬೇಕು. ಅವಿದ್ಯೋಪಾಧಿಕನಾದ ಜೀವನನ್ನು ಅಪರಿಚ್ಛಿನ್ನನೆಂದು ಅದ್ವೈತಿಗಳೂ ಕೂಡ ಒಪ್ಪಿದ್ದಾರೆ. ಇಂತಹ ಅಪರಿಚ್ಛಿನ್ನನಾದ ಜೀವನಲ್ಲಿ ಪುಂಡರೀಕದಲ್ಲಿರುವಿಕೆ ಎಂಬ ಕಾರಣದಿಂದ ಅಲ್ಪಪರಿಮಾಣವು ಪ್ರಾಪ್ತವಾಗಿದೆ. ಅದರ ಪರಿಹಾರಕ್ಕಾಗಿ 'ಯಾವಾನ್ವಾ ಅಯಮಾಕಾಶಃ' ಎಂಬ ವಾಕ್ಯವು ಪ್ರವೃತ್ತವಾಗಿದೆಯೆಂದು ಹೇಳಬಹುದು. ಆದ್ದರಿಂದ ಐದನೆಯ ಸೂತ್ರವ್ಯಾಖ್ಯಾನವು ಸರಿಯಿಲ್ಲ.

'ಉತ್ತರಾಚ್ಚೇತ್ ಆವಿರ್ಭೂತಸ್ವರೂಪಸ್ತು' ಎಂಬ ಆರನೆಯ ಸೂತ್ರಕ್ಕೆ ಅದ್ವೈತಿಗಳು ಹೀಗೆ ವ್ಯಾಖ್ಯಾನಿಸುತ್ತಾರೆ. 'ಪರಂಜ್ಯೋತಿಃ' ಇತ್ಯಾದಿಯಾದ ಮುಂದಿನ ವಾಕ್ಯದಲ್ಲಿ ಆವಿರ್ಭೂತನಾದ ಜೀವನೇ ಪ್ರತಿಪಾದ್ಯನಾಗಿದ್ದಾನೆ ಹೊರತು, ಅವಿದ್ಯಾವೃತನಾದ ಜೀವನಲ್ಲ. ಆವಿರ್ಭೂತ-ಸ್ವರೂಪನಾದ ಜೀವನೆಂದರೆ ಬ್ರಹ್ಮನೇ ಆಗಿದ್ದಾನೆ. ಆದ್ದರಿಂದ 'ಪರಂಜ್ಯೋತಿ' ಇತ್ಯಾದಿ ವಾಕ್ಯವು ಶುದ್ಧಬ್ರಹ್ಮಪರವೇ ಆಗಿದೆ ಹೊರತು, ಉಪಹಿತನಾದ ಜೀವಪರವಲ್ಲ ಎಂದು.

ಈ ಸೂತ್ರವ್ಯಾಖ್ಯಾನವೂ ಕೂಡ ತಪ್ಪು. ಏಕೆಂದರೆ 'ಸ ತತ್ರ ಪರ್ಯೇತಿ ಜಕ್ಷನ್ ಕ್ರೀಡನ್ ರಮಮಾಣಃ' ಇತ್ಯಾದಿಯಾಗಿ ಅಲ್ಲಿಯೇ ಶ್ರುತವಾದ ವಾಕ್ಯದಿಂದ ವಿಶಿಷ್ಟಬ್ರಹ್ಮನೇ ಪ್ರತಿಪಾದ್ಯನಾಗಿದ್ದಾನೆಂದು ತಿಳಿಯುತ್ತದೆ. ಹೀಗಿರುವಾಗ ಶುದ್ಧಬ್ರಹ್ಮನು ಪ್ರತಿಪಾದ್ಯನೆಂದು ಹೇಳುವುದು ತಪ್ಪು. ಇನ್ನು ಹತ್ತು ಹಲವಾರು ದೋಷಗಳನ್ನು ಸ್ವತಃ ಶಿಷ್ಯಂದಿರೇ ಊಹಿಸಿಕೊಳ್ಳಬೇಕು. ಏಳನೆಯ, ಎಂಟನೆಯ ಸೂತ್ರವ್ಯಾಖ್ಯಾನದಲ್ಲಿರುವ ತಪ್ಪುಗಳನ್ನೂ ಸಹ ಇದರಂತೆ ಗಮನಿಸಿ ತಿಳಿದುಕೊಳ್ಳಬೇಕು.

ಉಳಿದ ಅಧಿಕರಣಗಳಂತೆ ಈ ಅಧಿಕರಣದಲ್ಲಿಯೂ ಸಹ ಅದ್ವೈತಿಗಳು ಜೀವಬ್ರಹ್ಮಭೇದವನ್ನೇ ಒಪ್ಪಿಕೊಂಡಿದ್ದಾರೆ. ಏಕೆಂದರೆ ದಹರಾಕಾಶವನ್ನು ಜೀವನೆಂದು ಒಪ್ಪದೇ ಬ್ರಹ್ಮನೆಂದು ಸಮರ್ಥಿಸಿದ್ದಾರೆ. ಮತ್ತು 'ಗತಿಶಬ್ದಾಭ್ಯಾಮ್' ಎಂಬ ವಿಶೇಷಣದಿಂದ ಜೀವನು ಬ್ರಹ್ಮನನ್ನು ಹೊಂದುತ್ತಾನೆಂದು ಒಪ್ಪಿದ್ದಾರೆ. ಇದರಿಂದ ಜೀವನೇ ಬೇರೆ, ಬ್ರಹ್ಮನೇ ಎಂದು ಒಪ್ಪಿಕೊಂಡಂತಾಯಿತು. 'ಸತ್ಯಕಾಮಃ ಸತ್ಯಸಂಕಲ್ಪಃ' ಇತ್ಯಾದಿಯಾಗಿ ದಹರವಾಕ್ಯಶೇಷದಲ್ಲಿ ಸತ್ಯಕಾಮತ್ವಾದಿ ಗುಣಗಳು ಕೇಳಿಸುತ್ತಿರುವುದರಿಂದ ಬ್ರಹ್ಮನು ನಿರ್ಗುಣನಾಗಿದ್ದಾನೆನ್ನಲೂ ಕೂಡ ಪ್ರತಿಕೂಲವೇ ಆಗಿದೆ. ಇದರಂತೆ ಮುಂದೆಯೂ ಕೂಡ ತಿಳಿಯಬೇಕು.

'ಗತಿಶಬ್ದಾಭ್ಯಾಂ ತಥಾಹಿ ದೃಷ್ಟಂ ಲಿಂಗಂ ಚ' ಎಂಬ ಸೂತ್ರದಲ್ಲಿ 'ತಥಾಹಿ ದೃಷ್ಟಂ ಲಿಂಗಂ ಚ' ಎಂಬುದನ್ನು ವ್ಯಾಖ್ಯಾನ ಮಾಡುವಾಗ 'ಅರಶ್ಚ' ಇತ್ಯಾದಿ ಭಾಷ್ಯಕ್ಕೆ ಟೀಕೆಯು ಮೊದಲು ಹೀಗೆ ವ್ಯಾಖ್ಯಾನಿಸಿದೆ. ಹೃತ್ಪದ್ಮಸ್ಥನಾದವನು ಬ್ರಹ್ಮನೇ ಆಗಿದ್ದಾನೆನ್ನಲು ಮತ್ತೊಂದು ಹೇತುವನ್ನು ಹೇಳುವುದಕ್ಕಾಗಿ ಸೂತ್ರದಲ್ಲಿರುವ ಲಿಂಗಪದವು ಪ್ರಯುಕ್ತವಾಗಿದೆ ಎಂದು. ಹೀಗೆ ವ್ಯಾಖ್ಯಾನ ಮಾಡಿ, ಪ್ರಕೃತ 'ಅರಶ್ಚ' ಇತ್ಯಾದಿ ಭಾಷ್ಯಕ್ಕೆ ಈಗ ಮತ್ತೊಂದು ಬಗೆಯಲ್ಲಿ ವ್ಯಾಖ್ಯಾನಿಸುತ್ತಿದ್ದಾರೆ - ಬ್ರಹ್ಮಲೋಕ ಶಬ್ದಕ್ಕೆ ಪ್ರಸಿದ್ಧಿಬಲದಿಂದ ಸತ್ಯಲೋಕ ಎಂಬರ್ಥವು ಪ್ರತೀತವಾಗುತ್ತದೆ. ಈ ಶಂಕೆಯನ್ನು ನಿರಾಸಮಾಡುವುದಕ್ಕಾಗಿ 'ಅರಣ್ಯಾಖ್ಯ ಸಮುದ್ರಾಶ್ರಯಲೋಕವತ್ವ' ಎಂಬ

ಲಿಂಗವನ್ನು ತಿಳಿಸುವುದಕ್ಕಾಗಿ ಸೂತ್ರದಲ್ಲಿರುವ ಲಿಂಗಪದವು ಪ್ರಯುಕ್ತವಾಗಿದೆ ಎಂದು ಭಾಷ್ಯವು ಹೇಳುತ್ತಿದೆಯೆಂದು ವ್ಯಾಖ್ಯಾನಿಸುತ್ತಿದ್ದಾರೆ - 'ಅಥವಾ ಬ್ರಹ್ಮಲೋಕಮ್' ಇತ್ಯಾದಿ ವಾಕ್ಯದಿಂದ

ಟೀಕೆಯಲ್ಲಿರುವ 'ತಲ್ಲಕ್ಷಣೋಕ್ತೋಶ್ಚ' ಎಂಬುದರ ಅಭಿಪ್ರಾಯ ಹೀಗಿದೆ - 'ಏಷ ಆತ್ಮಾ ಅಪಹತಪಾಪ್ಮಾ' ಎಂಬಲ್ಲಿ ಹೃತ್ಪದ್ಮಸ್ಥನ ಲಕ್ಷಣವನ್ನು ಅಪಹತಪಾಪತ್ವವೆಂದು ಹೇಳಿದ್ದಾರೆ. ಇದೇ ಲಕ್ಷಣವು 'ಸರ್ವೇ ಪಾಪ್ಮನೋऽತೋ ನಿವರ್ತಂತೇ' ಎಂಬುದರಿಂದ 'ಸ ಸೇತುಃ' ಎಂಬಲ್ಲಿ ಹೇಳಲ್ಪಟ್ಟ ಹೇತುವಿನ ಧರ್ಮವೆಂದು ಹೇಳಲಾಗಿದೆ. ಆದ್ದರಿಂದ ಅಪಹತಪಾಪತ್ವವು ಬ್ರಹ್ಮನ ಧರ್ಮವೇ ಎಂದು ನಿಶ್ಚಯವಾಗುತ್ತದೆಂದು.

'ಏತಸ್ಯೇತಿ ಪ್ರತೀಕಗ್ರಹಣೇನ' ಎಂದು ಟೀಕೆಯಲ್ಲಿದೆ. ಭಾಷ್ಯದಲ್ಲಿ 'ಏತಸ್ಯ' ಎಂದು ಪ್ರತೀಕವನ್ನು ಗ್ರಹಣ ಮಾಡಿದ್ದರಿಂದ ಅನೇಕ ಶ್ರುತಿವಾಕ್ಯಗಳನ್ನು ಸೂಚಿಸಿದಂತಾಯಿತು. ಅವು ಹೀಗಿವೆ - 'ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ ಸೂರ್ಯಾಚಂದ್ರಮಸೌ' ಎಂದು 'ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ ದ್ಯಾವಾಪೃಥಿವ್ಯೌ' ಇವೇ ಮೊದಲಾದ ಬಹುವಾಕ್ಯಗಳನ್ನು ಸೂಚಿಸಲಾಗಿದೆ ಎಂದರ್ಥ.

ಟೀಕೆಯಲ್ಲಿ 'ವಿಷ್ಣುರಿತ್ಯಭ್ಯುಪಗಮೇ ಸುಷಿರಶ್ರುತಿವಿರೋಧಃ' ಎಂದಿದೆ. ಇದರ ಅಭಿಪ್ರಾಯವನ್ನು ಹೀಗೆ ತಿಳಿಯಬೇಕು - ಬ್ರಹ್ಮನು ಹೃತ್ಪದ್ಮಸ್ಥನಾಗಿದ್ದಾನೆಂದು ಒಪ್ಪಿದರೆ 'ತಸ್ಯಾಂತೇ ಸುಷಿರಮ್' ಎಂಬ ಶ್ರುತಿಯಲ್ಲಿ ಸುಷಿರಕ್ಕೆ ಹೇಳಲ್ಪಟ್ಟ ಹೃತ್ಪದ್ಮಸ್ಥತ್ವದ ವಿರೋಧ ಬರುತ್ತದಲ್ಲವೇ? ಎಂಬ ಶಂಕೆಯನ್ನು ನಿರಾಕರಿಸಿದಂತಾಯಿತು. ಏಕೆಂದರೆ ಸುಷಿರಕ್ಕೆ 'ದಹರೋऽಸ್ಮಿನ್ನಂತರಾಕಾಶೇ' ಎಂಬ ವಾಕ್ಯದಲ್ಲಿ ಹೇಳಲ್ಪಟ್ಟ ಹೃತ್ಪದ್ಮಸ್ಥತ್ವವನ್ನು ಅಂಗೀಕಾರ ಮಾಡಿಯೇ ಬ್ರಹ್ಮನಿಗೆ 'ದಹರಂ ವಿಪಾಪ್ಮಮ್' ಇತ್ಯಾದಿ ಶ್ರುತಿಯ ಬಲದಿಂದ 'ತಸ್ಮಿನ್ ಯದಂತಃ' ಎಂಬ ವಾಕ್ಯದಲ್ಲಿ ಹೇಳಲ್ಪಟ್ಟ ಹೃತ್ಪದ್ಮದಲ್ಲಿರುವ ಸುಷಿರಸ್ಥತ್ವವನ್ನೇ ನಾವು ಅಂಗೀಕರಿಸಿದ್ದೇವೆ ಎಂದರ್ಥ. 'ತದಾಧಾರತಯಾ ಪೃಥಿವ್ಯಾದಿಕಮ್' ಎಂದು ಟೀಕೆಯಲ್ಲಿದೆ. ಜಡಕ್ಕೆ ಜಡವು ಆಶ್ರಯವಾಗಲು ಸಾಧ್ಯವಿಲ್ಲ. ಆದ್ದರಿಂದ ಆಕಾಶಾಭಿಮಾನಿಯಲ್ಲಿ ಆಶ್ರಿತವಾದ ಪೃಥಿವ್ಯಾದ್ಯಭಿಮಾನಿಗಳು ಎಂದು ಇದಕ್ಕೆ ಅರ್ಥೈಸಬೇಕು.

'ಬ್ರಹ್ಮೈವ ಪೂರ್ಣತ್ವಾತ್ ಪುರಮ್' ಎಂದು ಟೀಕೆಯಲ್ಲಿದೆ. ಇದರ ಅಭಿಪ್ರಾಯ ಹೀಗಿದೆ - 'ಏತತ್ ಸತ್ಯಂ ಬ್ರಹ್ಮಪುರಮ್' ಎಂದು ಪ್ರಕೃತವಾದ ಶರೀರವನ್ನು 'ಏಷ ಆತ್ಮಾ' ಎಂಬಲ್ಲಿರುವ 'ಏತತ್' ಶಬ್ದದಿಂದ ಪರಾಮರ್ಶ ಮಾಡಿರುವ ಕಾರಣ, ಶರೀರವೇ ಆತ್ಮವೆನಿಸುತ್ತದೆ ಹೊರತು,

ವಿಷ್ಣುವಲ್ಲ ಎಂದು ಶಂಕಿಸಬಾರದು. ಛಾಂದೋಗ್ಯಭಾಷ್ಯದಲ್ಲಿ ಹೇಳಿದ ಪ್ರಕಾರ 'ಯದಿದಮಸ್ಮಿನ್ ಬ್ರಹ್ಮಪುರೇ' ಎಂಬ ಮೊದಲಿನ ವಾಕ್ಯದಲ್ಲಿರುವ ಬ್ರಹ್ಮಪುರ ಶಬ್ದಕ್ಕೆ ಷಷ್ಠೀತತ್ಪುರುಷ ಸಮಾಸವನ್ನು ಅಥವಾ ಕರ್ಮಧಾರಯ ಸಮಾಸವನ್ನು ಆಶ್ರಯಿಸುವ ಪ್ರಯುಕ್ತ ಶರೀರ ಅಥವಾ ಬ್ರಹ್ಮ ಎಂಬೆರಡರ್ಥವನ್ನು ಹೇಳಬಹುದು. ಆದರೆ 'ಬ್ರಹ್ಮಪುರೇ ಸರ್ವಂ ಸಮಾಹಿತಮ್' ಎಂಬ ಎರಡನೆಯ ವಾಕ್ಯದಲ್ಲಿರುವ ಮತ್ತು 'ಏತತ್ ಸತ್ಯಂ ಬ್ರಹ್ಮಪುರಮ್' ಎಂಬ ಮೂರನೆಯ ವಾಕ್ಯದಲ್ಲಿರುವ ಬ್ರಹ್ಮಪುರ ಶಬ್ದಕ್ಕೆ ಕೇವಲ 'ಬ್ರಹ್ಮ' ಎಂದೇ ಅರ್ಥ.

ಇಲ್ಲಿಗೆ ದಹರಾಧಿಕರಣದಲ್ಲಿ ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ವಪ್ರದೀಪ, ತತ್ವಪ್ರಕಾಶಿಕಾ, ಭಾವದೀಪ ಇವುಗಳ ಅನುವಾದವು ಹಾಗೂ ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆಯು ಸಮಾಪ್ತವಾಯಿತು

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥

ಅನುಕೃತ್ಯಧಿಕರಣ

ಬ್ರಹ್ಮಸೂತ್ರ, ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ವಪ್ರದೀಪ, ತತ್ವಪ್ರಕಾಶಿಕಾ, ಭಾವದೀಪ

ವಿಶೇಷವಿಚಾರದೊಂದಿಗೆ ಕನ್ನಡಭಾಷೆಯಲ್ಲಿ ಅನುವಾದ

ಮತ್ತು

ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆ

॥ ಹರಿಃ ಓಂ ॥

॥ ಶ್ರೀವೇದವ್ಯಾಸಾಯ ನಮಃ ॥

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಗುರುಭ್ಯೋ ನಮಃ ॥

॥ ಶ್ರೀಮದ್ರಾಘವೇಂದ್ರತೀರ್ಥಗುರುಭ್ಯೋ ನಮಃ ॥

॥ ಶ್ರೀಗುರುಭ್ಯೋ ನಮಃ ॥

ಅನುಕೃತ್ಯಧಿಕರಣ

ಬ್ರಹ್ಮಸೂತ್ರ

॥ अथ अनुकृत्यधिकरणम् ॥

'ಅನುಕೃತೇಸ್ತಸ್ಯ ಚ' ಎಂಬ ಸೂತ್ರದ ವ್ಯಾಖ್ಯಾನ

ब्रह्मसूत्रम् – ॥ अनुकृतेस्तस्य च ॥ २२ ॥

ಸೂತ್ರಾರ್ಥ - ''ಕಥಂ ನು ತದ್ವಿಜಾನೀಯಾಂ' ಎಂಬ ಕಾಠಕದ ಶ್ರುತಿಯಲ್ಲಿ 'ಪ್ರಾರ್ಥಿತತ್ವ' ಎಂಬ 'ಆನುಕೂಲ್ಯೇನ ಗೃಹ್ಯಮಾಣ'ನಾದವನು ವಿಷ್ಣುವೇ ಆಗಿದ್ದಾನೆ. ಏಕೆಂದರೆ ಸೂರ್ಯ ಮುಂತಾದವರ ಪ್ರಕಾಶನ ಕ್ರಿಯೆಯು, ಭಗವದಧೀನವಾಗಿದೆ ಎಂದು 'ತಸ್ಯ ಭಾಸಾ ಸರ್ವಮಿದಂ ವಿಭಾತಿ' ಇತ್ಯಾದಿ ಶ್ರುತಿಗಳಿಂದ ಸಿದ್ಧವಾಗಿದೆ.

ಅರ್ಥ -- 'ಚ' ಎಂಬ ಶಬ್ದವು ಸಮುಚ್ಚಯಾರ್ಥದಲ್ಲಿದೆ, 'ತಸ್ಯ' ಎಂಬ ಪದವು 'ತಸ್ಯ ಭಾಸಾ' ಎಂಬ ಶ್ರುತಿಯ ಪ್ರತೀಕವಾಗಿದೆ, 'ಅನುಕೃತಿಃ' ಎಂಬ ಪದಕ್ಕೆ 'ಅನುಕ್ರಿಯಾ' ಪ್ರಾರ್ಥನೆ ಎಂದರ್ಥ. ಆದ್ದರಿಂದ 'ಕಥಂ ನು ತದ್ವಿಜಾನೀಯಾಂ' ಎಂಬ ಶ್ರುತಿಯಲ್ಲಿ ಜ್ಞಾನಕ್ಕೋಸ್ಕರ ಪ್ರಾರ್ಥಿತನಾದವನು (ಆನುಕೂಲ್ಯೇನ ಗೃಹ್ಯಮಾಣನಾದವನು) ಮಹಾವಿಷ್ಣುವೇ ಆಗಿದ್ದಾನೆ. ಏಕೆಂದರೆ 'ಅನುಕೃತೇಃ ತಮೇವ ಭಾಂತಂ ಅನುಭಾತಿ

ಸರ್ವಮ್' ಎಂಬ ಕಾಠಕದ ವಾಕ್ಯಶೇಷದಲ್ಲಿ ಸೂರ್ಯ ಮೊದಲಾದವರ ಪ್ರಕಾಶನಕ್ರಿಯೆಯು ಭಗವಂತನ ಕ್ರಿಯೆಗೆ ಅನುಸಾರಿಯಾಗಿದೆ ಎಂದು ಶ್ರುತವಾಗಿದೆ. ತಸ್ಯ ಚ = 'ತಸ್ಯ ಭಾಸಾ ಸರ್ವಮಿದಂ ವಿಭಾತಿ' ಎಂಬ ಶ್ರುತಿಯಿಂದ ಜಗತ್ತು ಭಗವಂತನ ತೇಜಸ್ಸಿನಿಂದಲೇ ಬೆಳಗುತ್ತಿದೆ ಎಂದು ತಿಳಿಯುತ್ತದೆ.

ಜಗದ್ಗುರು ಶ್ರೀಮಧ್ವಾಚಾರ್ಯರಿಂದ ವಿರಚಿತವಾದ

ಬ್ರಹ್ಮಸೂತ್ರಭಾಷ್ಯ

ಜ್ಞಾನಿಗಳ ಸುಖದಲ್ಲಿ ಅನುಕೂಲ್ಯೇಣ ಗೃಹ್ಯಮಾಣತ್ವವಿದೆ ಎಂದು ಪೂರ್ವಪಕ್ಷ

ಭಾಷ್ಯಮ್ – अदृश्यत्वादयः परमेश्वरगुणा उक्ताः । 'तेषां सुखं शाश्वतं नेतरेषाम् । तदेतदिति मन्यन्तेऽनिर्देश्यं परमं सुखम् कथं नु तद्विजानीम्' (कठ. ५, १२,१४) इत्यादिना ज्ञानिसुखस्याप्यनिर्देश्यत्वमज्ञेयत्वं चोच्यत इति ।।

ಅನುವಾದ - ಹಿಂದೆ ಆನಂದಮಯಾಧಿಕರಣದಲ್ಲಿ ಅದೃಶ್ಯತ್ವಾದಿಗುಣಗಳು ವಿಷ್ಣುವಿನಲ್ಲಿ ಮಾತ್ರ ಇರುತ್ತವೆಂದು ಸಮರ್ಥಿಸಲಾಯಿತು. ಆದರೆ ಇದು ಸರಿಯಲ್ಲ. ಜ್ಞಾನಿಗಳಿಗೆ ಮಾತ್ರ ಶಾಶ್ವತವಾದ ಸುಖವು ದೊರೆಯುತ್ತದೆ, ಬೇರೆಯವರಿಗೆ ದೊರೆಯುವುದಿಲ್ಲ. ಇಂತಹ ಶಾಶ್ವತವಾದ ಸುಖವೇ ಪರಮಸುಖವೆಂದು ಕರೆಯಲ್ಪಟ್ಟಿದೆ. 'ಹೀಗೆ ಕಾಠಕದಲ್ಲಿರುವ ವಾಕ್ಯಗಳಿಂದ ಅದೃಶ್ಯತ್ವಾದಿಗಳಲ್ಲಿ ಸೇರಿರುವ ಅನಿರ್ದೇಶ್ಯತ್ವವನ್ನು ಅಜ್ಞೇಯತ್ವವನ್ನೂ ಸಹ ಜ್ಞಾನಿಗಳ ಸುಖದಲ್ಲಿ ಹೇಳಲಾಗಿದೆ'. ಆದ್ದರಿಂದ ಜ್ಞಾನಿಗಳ ಸುಖವೇ ಅದೃಶ್ಯವಾಗುತ್ತದೆಂದು ಪೂರ್ವಪಕ್ಷ.

ಪ್ರತಿಪದಾರ್ಥ -- ಈ ಅಧಿಕರಣದಲ್ಲಿ 'ಆನುಕೂಲ್ಯೇನ ಗೃಹ್ಯಮಾಣತ್ವ' ಎಂಬ ಲಿಂಗವನ್ನು ಸಮನ್ವಯ ಮಾಡುತ್ತಿದ್ದಾರೆ. ಮೊದಲು ಶ್ರುತ್ಯಾದಿಸಂಗತಿ ವಿಷಯ ಮೊದಲಾದವುಗಳನ್ನು ಸೂಚಿಸುತ್ತಾ ಯುಕ್ತಿಬದ್ಧವಾದ ಪೂರ್ವಪಕ್ಷವನ್ನು ತೋರಿಸುತ್ತಾ ಇದ್ದಾರೆ -

ಅದೃಶ್ಯತ್ವಾದಯಃ = ಅದೃಶ್ಯತ್ವವೇ ಮೊದಲಾದ ಗುಣಗಳು, ಪರಮೇಶ್ವರಗುಣಾಃ = ವಿಷ್ಣುವಿನದ್ದೇ ಗುಣಗಳಾಗಿವೆ ಎಂದು, ಉಕ್ತಾಃ = ಆನಂದಮಯಾಧಿಕರಣದಲ್ಲಿ ಹೇಳಲಾಯಿತು.

ತೇಷಾಂ = ಜ್ಞಾನಿಗಳ, ಸುಖಂ = ಸುಖವು, ಶಾಶ್ವತಂ = ಶಾಶ್ವತವಾಗಿದೆ, ಇತರೇಷಾಂ = ಅಜ್ಞಾನಿಗಳ ಸುಖವು, ನ = ಶಾಶ್ವತವಲ್ಲ, ತದೇತತ್ = ಇಂತಹ ಜ್ಞಾನಿಗಳ ಸುಖವು, ಅನಿರ್ದೇಶ್ಯಂ = ಇಷ್ಟೇ ಎಂದು ನಿರ್ದೇಶ ಮಾಡಲು ಸಾಧ್ಯವಿಲ್ಲದ್ದು, ಪರಮಂ ಸುಖಂ = ಪರಮಸುಖ-ಸ್ವರೂಪವಾದದ್ದು, ಇತಿ = ಎಂದು, ಮನ್ಯಂತೇ = ತಿಳಿಯುತ್ತಾರೆ, ಇತ್ಯಾದಿನಾ = ಇವೇ ಮೊದಲಾದ ಕಾಠಕದ ಮಾತುಗಳಿಂದ, ಜ್ಞಾನಿಸುಖಸ್ಯಾಪಿ = ಜ್ಞಾನಿಗಳ ಸುಖಕ್ಕೂ ಸಹ, ಅನಿರ್ದೇಶ್ಯತ್ವಂ = ಇಷ್ಟೇ ಎಂದು ನಿರ್ದೇಶಿಸಲು ಸಾಧ್ಯವಿಲ್ಲದ್ದೆಂದು, ಅಜ್ಞೇಯತ್ವಂ = ಸಂಪೂರ್ಣವಾಗಿ ತಿಳಿಯಲು ಸಾಧ್ಯವಿಲ್ಲದ್ದೆಂದು, ಉಚ್ಯತೇ = ಹೇಳಲಾಗಿದೆ, ಇತಿ = ಇಷ್ಟು ಪೂರ್ವಪಕ್ಷ.

ಅನುಕೂಲ್ಯೇನ ಗೃಹ್ಯಮಾಣನಾದವನು ಪರಮಾತ್ಮನೇ

ब्रह्मसूत्रभाष्यम् – अतो वक्ति

।। अनुकृतेस्तस्य च ।।२२।।

'तमेव भान्तमनुभाति सर्वम्' (कठ.५-१५) इत्यनुकृतेः, 'तस्य भासा सर्वमिदं विभाति' (कठ. ५-१५) इति वचनाच्च परमात्मैवानिर्देश्यसुखरूपः ।

ಅನುವಾದ - ಈ ಪೂರ್ವಪಕ್ಷವನ್ನು ನಿರಾಕರಿಸುವುದಕ್ಕಾಗಿ ಸೂತ್ರಕಾರರು 'ಅನುಕೃತೇಸ್ತಸ್ಯ ಚ' ಎಂಬ ಸೂತ್ರವನ್ನು ರಚನೆ ಮಾಡಿದ್ದಾರೆ.

'ಪ್ರಕಾಶಸ್ವರೂಪನಾದ ಭಗವಂತನನ್ನು ಅನುಸರಿಸಿಯೇ ಸಕಲವೂ ಬೆಳಗುತ್ತದೆ'. ಹೀಗೆ ಪರಮಾತ್ಮನ ಪ್ರಕಾಶದಿಂದಲೇ ಎಲ್ಲವೂ ಬೆಳಗುತ್ತದೆಂದು ಹೇಳಿದ್ದರಿಂದಲೂ, ಅನಿರ್ದೇಶ್ಯ ಸುಖಸ್ವರೂಪನೆಂದು ಕಾಠಕವು ಪರಮಾತ್ಮನನ್ನೇ ಹೇಳುತ್ತಿದೆ.

ಪ್ರತಿಪದಾರ್ಥ -- ಸಿದ್ಧಾಂತಸ್ಥಾಪನೆಗಾಗಿ, ಸೂತ್ರವನ್ನು ಹೇಳುತ್ತಾ ವ್ಯಾಖ್ಯಾನಿಸುತ್ತಿದ್ದಾರೆ.

ಭಾಂತಂ = ಪ್ರಕಾಶಸ್ವರೂಪನಾದ, ತಮೇವ = ಪರಮಾತ್ಮನನ್ನೇ, ಅನು = ಅನುಸರಿಸಿ, ಸರ್ವಮ್ = ಸಕಲವೂ, ಭಾತಿ = ಪ್ರಕಾಶಿಸುತ್ತದೆ, ಇತಿ = ಹೀಗೆ, ಅನುಕೃತೇಃ = ಪರಮಾತ್ಮನ ಅನುಕರಣವೇ ಹೇಳಲ್ಪಟ್ಟಿದ್ದರಿಂದ: ಮತ್ತು, ತಸ್ಯ = ಪರಮಾತ್ಮನ, ಭಾಸಾ = ಕಾಂತಿಯಿಂದಲೇ, ಸರ್ವಮಿದಂ = ಸಕಲವೂ ಸಹ, ವಿಭಾತಿ = ಪ್ರಕಾಶಿಸುತ್ತದೆ, ಇತಿ = ಹೀಗೆ, ವಚನಾಚ್ಚ = ಕಾಠಕದಲ್ಲೇ ಹೇಳಿದ್ದರಿಂದಲೂ ಸಹ, ಪರಮಾತ್ಮೈವ = ಪರಮಾತ್ಮನೇ, ಅನಿರ್ದೇಶ್ಯಸುಖರೂಪಃ = ಇಷ್ಟೇ ಎಂದು ನಿರ್ದೇಶ ಮಾಡಲಾಗದ ಸುಖಸ್ವರೂಪನು ಆಗಿದ್ದಾನೆ.

ಜಗತ್ತಿನ ಬೆಳಕು ಜ್ಞಾನಿಸುಖದಿಂದಲ್ಲ

ब्रह्मसूत्रभाष्यम् – नहि ज्ञानिसुखमनुभाति सर्वं, नच तद्भासा ।

ಅನುವಾದ - ಜ್ಞಾನಿಸುಖವನ್ನು ಅನುಸರಿಸಿ ಜಗತ್ತು ಬೆಳಗಲು ಸಾಧ್ಯವಿಲ್ಲ ಅಥವಾ ಜ್ಞಾನಿಗಳ ಸುಖದಿಂದಲೂ ಜಗತ್ತು ಬೆಳಗುತ್ತಿಲ್ಲ.

ಪ್ರತಿಪದಾರ್ಥ -- 'ತಮೇವ ಭಾಂತಂ' ಎಂಬ ವಾಕ್ಯದಲ್ಲಿ ಸೂರ್ಯ-ಚಂದ್ರಾದಿಗಳು ಪರಮಾತ್ಮನ ಅಧೀನವಾಗಿ, ಬೆಳಗುತ್ತಿದ್ದಾರೆಂದು ಹೇಳಿ, ಅಂತಹ ಸೂರ್ಯಾದಿಗಳ ಬೆಳಕಿನಿಂದ ಜಗತ್ತು ಬೆಳಗುತ್ತಿದೆ ಎಂದು ಹೇಳಬಹುದಲ್ಲವೆ ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ -

ಜ್ಞಾನಿಸುಖಂ = ಜ್ಞಾನಿಗಳ ಸುಖವನ್ನು, ಅನು = ಅನುಸರಿಸಿ, ಸರ್ವಂ = ಸಕಲವೂ, ನಹಿ ಭಾತಿ = ಪ್ರಕಾಶಿಸುವುದಿಲ್ಲ, ತದ್ಭಾಸಾ = ಜ್ಞಾನಿಗಳ ಪ್ರಕಾಶದಿಂದಲೂ ಸಹ ನೇರವಾಗಿ, ನಚ = ಪ್ರಕಾಶಿಸುವುದಿಲ್ಲ.

ಅಪಿಶಬ್ದದಿಂದ ವಿವಕ್ಷಿಸಬೇಕಾದ ಶ್ರುತಿ

ब्रह्मसूत्रभाष्यम् – 'अहं तत् तेजो रश्मीत्' इति नारायणभासा हि सर्वं भाति ।

ಅನುವಾದ - 'ಅಹಂ ತತ್ ತೇಜೋ ರಶ್ಮೀತ್' ಎಂಬಂತೆ ನಾರಾಯಣನ ಕಾಂತಿಯಿಂದಲೇ ಸಮಸ್ತ ಜಗತ್ತೂ ಪ್ರಕಾಶಿಸುತ್ತಿದೆ.

ಪ್ರತಿಪದಾರ್ಥ -- ಜ್ಞಾನಿಗಳ ಸುಖದಿಂದ ಪ್ರಕಾಶಿಸುವುದು ಬೇಡ, ಅದರೂ ಸಹ ಪರಮಾತ್ಮನಿಂದ ಎಂದು ಕಾಠಕವು ಹೇಳುತ್ತಿದೆ ಎಂದು ಹೇಗೆ ನಿಶ್ಚಯಿಸುತ್ತೀರಿ? ಎಂಬ ಪ್ರಶ್ನೆಗೆ ಎರಡನೇ ಸೂತ್ರದಲ್ಲಿರುವ 'ಅಪಿ' ಪದದಿಂದ ಸೂಚಿತವಾದ ಶ್ರುತಿಯನ್ನು ಹೇಳುತ್ತಿದ್ದಾರೆ -

ಅಹಂ = ನಾನು, ತತ್ ತೇಜೋ ರಶ್ಮೀತ್ = ಪ್ರಕಾಶಕರಾದ ಸೂರ್ಯ, ಚಂದ್ರಾದಿಗಳಿಗೂ ಪ್ರಕಾಶರೂಪನು, ಇತಿ = ಹೀಗೆ ಹೇಳಿದ್ದರಿಂದ, ನಾರಾಯಣಭಾಸಾ = ವಿಷ್ಣುವಿನ ಪ್ರಕಾಶದಿಂದಲೇ, ಸರ್ವಂ = ಎಲ್ಲವೂ, ಭಾತಿ = ಪ್ರಕಾಶಿಸುತ್ತದೆ, ಆದ್ದರಿಂದ 'ಆನುಕೂಲ್ಯೇನ ಗೃಹ್ಯಮಾಣತ್ವ' ಹಾಗೂ 'ಅನಿರ್ದೇಶ್ಯತ್ವಗಳು' ಪರಮಾತ್ಮನ ಧರ್ಮವೆಂದು ಸಿದ್ಧವಾಗುತ್ತದೆ.

ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ

ಸತ್ತರ್ಕದೀಪಾವಳಿ

'ಅದೃಶ್ಯತ್ವಾದಿ' ಇತ್ಯಾದಿ ಭಾಷ್ಯದ ವ್ಯಾಖ್ಯಾನ

सत्तर्कदीपावलिः – अनुकृतेस्तस्य च ।।

अदृश्यत्वादेरयमर्थः । 'तमात्मस्थं येऽनुपश्यन्ति धीरास्तेषां सुखम्' 'कथं नु तद्विजानीयाम्' इति श्रुतौ ज्ञानिसुखस्यानिर्देश्यत्वादिकमुच्यते । अतः परमात्मैवादृश्यत्वादिगुणक इति यदुक्तं प्राक्, तन्न सिद्ध्यतीति चेत्,

'ಅದೃಶ್ಯತ್ವಾದೇಃ' ಇತ್ಯಾದಿ ಭಾಷ್ಯದ ಅರ್ಥ ಹೀಗಿದೆ - 'ತಮಾತ್ಮಸ್ಥಂ ಯೇऽನುಪಶ್ಯಂತಿ ಧೀರಾಸ್ತೇಷಾಂ ಸುಖಮ್' 'ಕಥಂ ನು ತದ್ವಿಜಾನೀಯಾಮ್' ಇತ್ಯಾದಿ ಶ್ರುತಿಯಲ್ಲಿ ಜ್ಞಾನಿಸುಖವನ್ನು ಅನಿರ್ದೇಶ್ಯವೆಂದು ಹೇಳಲಾಗಿದೆ. ಆದ್ದರಿಂದ ಹಿಂದೆ ಪರಮಾತ್ಮನೇ ಅದೃಶ್ಯತ್ವಾದಿಗುಣಗಳುಳ್ಳವನೆಂದು ಸಾಧಿಸಿದ್ದು ಸಿದ್ಧವಾಗುವುದಿಲ್ಲವಲ್ಲವೇ? ಎಂದು ಆಕ್ಷೇಪ.

ಅನಿರ್ದೇಶ್ಯಸುಖಸ್ವರೂಪನು ಪರಮಾತ್ಮನೇ ?

सत्तर्कदीपावलिः – मैवम् । 'तस्य भासा सर्वमिदं विभाति' इति वाक्यशेषाद् 'अहं तत्तेजो रश्मीन्नारायणम्' इति श्रुत्यन्तरविरोधात् । 'यदादित्यगतं तेजः' इत्यादिवाक्यविरोधात्

'तत्तेजो विद्धि मामकम्' इति मत्तेजसा प्रवर्तितमित्यर्थः ।।

।। इति सत्तर्कदीपावळ्याम् अनुकृत्यधिकरणम् ।।

ಇದು ತಪ್ಪು 'ತಸ್ಯ ಭಾಸಾ ಸರ್ವಮಿದಂ ವಿಭಾತಿ' ಎಂಬ ವಾಕ್ಯಶೇಷದಲ್ಲಿ ಮತ್ತು 'ಅಹಂ ತತ್ತೇಜೋ ರಶ್ಮೀನ್ನಾರಾಯಣಮ್' ಎಂಬ ಶ್ರುತ್ಯಂತರದಲ್ಲಿ ಪರಮಾತ್ಮನೇ ಅನಿರ್ದೇಶ್ಯಸುಖ-ಸ್ವರೂಪನೆಂದು ಹೇಳಲಾಗಿದೆ. ಅವನ ಅಧೀನವಾಗಿಯೇ ಜಗತ್ತು ಬೆಳಗುತ್ತದೆ ಎಂದು 'ಯದಾದಿತ್ಯಗತಂ ತೇಜಃ' ಇತ್ಯಾದಿ ಸ್ಮೃತಿವಾಕ್ಯಗಳಲ್ಲಿಯೂ ಹೇಳಲಾಗಿದೆ. ಒಂದು ವೇಳೆ ಜ್ಞಾನಿಸುಖವನ್ನೇ ಅನಿರ್ದೇಶ್ಯವೆಂದು ಹೇಳಿದರೆ ಈ ಎಲ್ಲಾ ಶ್ರುತಿ-ಸ್ಮೃತಿಗಳ ವಿರೋಧವು ಬರುತ್ತದೆ. ಅವನ ಸುಖವೇ ಅನಿರ್ದೇಶ್ಯವಾಗಿದೆ ಎಂದು ಸಿದ್ಧವಾಗುತ್ತದೆ.

ಆದ್ದರಿಂದ 'ತತ್ತೇಜೋ ವಿದ್ಧಿ ಮಾಮಕಮ್' ಎಂದರೆ ಪರಮಾತ್ಮನ ತೇಜಸ್ಸಿನಿಂದಲೇ ಎಲ್ಲವೂ ಬೆಳಗುತ್ತಿದೆ ಎಂದರ್ಥ.

।। ಇಲ್ಲಿಗೆ ಸತ್ತರ್ಕದೀಪಾವಳಿ ಕನ್ನಡಾನುವಾದದಲ್ಲಿ ಅನುಕೃತ್ಯಧಿಕರಣವು ಮುಗಿಯಿತು ।।

ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ

ತತ್ತ್ವಪ್ರದೀಪ

ಅಧಿಕರಣದ ಪೂರ್ವಪಕ್ಷಾದಿಗಳು

तत्वप्रदीपः – ''तमात्मस्थं येऽनुपश्यन्ति धीरास्तेषां सुखं शाश्वतं नेतरेषाम्'' इत्यत्र तेषां सुखं शाश्वतमिति हि प्रस्तुतिः पूर्वपक्षोत्थापिका । ''तमात्मस्थम्'' इति सिद्धान्तबीजम् । ''तदेतदिति मन्यन्तेऽनिर्देश्यं परमं सुखम् । कथं नु तद्विजानीयाम्'' इति विषयवाक्यम् ।।

'ತಮಾತ್ಮಸ್ಥಂ ಯೇಽನುಪಶ್ಯಂತಿ ಧೀರಾಸ್ತೇಷಾಂ ಸುಖಂ ಶಾಶ್ವತಂ ನೇತರೇಷಾಮ್' ಯಾವ ಜ್ಞಾನಿಗಳು ಆತ್ಮಸ್ಥನನ್ನು ಕಾಣುವರೋ, ಅವರಿಗೆ ಮಾತ್ರ ಶಾಶ್ವತವಾದ ಮೋಕ್ಷಸುಖವು ದೊರೆಯುತ್ತದೆ ಎಂಬ ವಿಷಯವಾಕ್ಯವು ಪೂರ್ವಪಕ್ಷಕ್ಕೆ ಉತ್ಥಾಪಕವಾಗಿದೆ. ಇದೇ ವಾಕ್ಯದಲ್ಲಿರುವ 'ತಮಾತ್ಮಸ್ಥಮ್' ಎಂಬ ಪದವು ಸಿದ್ಧಾಂತಕ್ಕೆ ಸ್ಥಾಪಕವಾಗಿದೆ. 'ತದೇತದಿತಿ ಮನ್ಯಂತೇಽನಿರ್ದೇಶ್ಯಂ ಪರಮಂ ಸುಖಮ್ । ಕಥಂ ನು ತದ್ವಿಜಾನೀಯಾಮ್' ಅದು ಸಮಗ್ರವಾಗಿ ತಿಳಿಯಲು ಅಸಾಧುವಾಗಿದೆ ಮತ್ತು ಶ್ರೇಷ್ಠ ಸುಖರೂಪವಾಗಿದೆ. ಇದನ್ನು ತಿಳಿಯಲು ನಾನು ಹೇಗೆ ಸಮರ್ಥನಾಗುವೆನು ? ಎಂಬುದು ಈ ಅಧಿಕರಣದ ವಿಷಯವಾಕ್ಯ.

ವಿವರಣೆ - ಕಾಠಕೋಪನಿಷತ್ತಿನ ದ್ವಿತೀಯಾಧ್ಯಾಯದಲ್ಲಿ ಈ ಅಧಿಕರಣದ ವಿಷಯವಾಕ್ಯವು ಪ್ರಸಕ್ತವಾಗಿದೆ ಆ ಪ್ರಕರಣ ಹೀಗಿದೆ -

ಏಕೋ ವಶೀ ಸರ್ವಭೂತಾಂತರಾತ್ಮಾ
ಏಕಂ ರೂಪಂ ಬಹುಧಾ ಯಃ ಕರೋತಿ ।
ತಮಾತ್ಮಸ್ಥಂ ಯೇಽನು ಪಶ್ಯಂತಿ ಧೀರಾ-
ಸ್ತೇಷಾಂ ಸುಖಂ ಶಾಶ್ವತಂ ನೇತರೇಷಾಮ್ ।।

ಎಲ್ಲವನ್ನೂ ತನ್ನ ವಶದಲ್ಲಿಟ್ಟುಕೊಂಡು ಎಲ್ಲ ಜೀವರ ಅಂತರ್ಯಾಮಿಯಾಗಿದ್ದು ಸ್ವತಂತ್ರನಾದ ಯಾರು ಅನೇಕ ಜೀವರಲ್ಲಿ ಅಂತರ್ಯಾಮಿಯಾಗಿ ಇರುವುದಕ್ಕಾಗಿ ತನ್ನ ಒಂದು ರೂಪವನ್ನೇ ಅನೇಕ ರೂಪವನ್ನಾಗಿ ಮಾಡುತ್ತಾನೆಯೋ ಅಂತಹ ಭಗವಂತನನ್ನು

ತಮ್ಮೊಳಗೆ ಯಾವ ಜ್ಞಾನಿಗಳು ಕಾಣುವರೋ ಅವರಿಗೆ ಮಾತ್ರ ಶಾಶ್ವತವಾದ ಮೋಕ್ಷಸುಖವು ದೊರೆಯುತ್ತದೆ. ಇತರರಿಗೆ ದೊರೆಯುವುದಿಲ್ಲ.

ನಿತ್ಯೋ ನಿತ್ಯಾನಾಂ ಚೇತನಶ್ಚೇತನಾನಾಂ
ಏಕೋ ಬಹೂನಾಂ ಯೋ ವಿದಧಾತಿ ಕಾಮಾನ್ ।
ತಮಾತ್ಮಸ್ಥಂ ಯೇऽನು ಪಶ್ಯಂತಿ ಧೀರಾ-
ಸ್ತೇಷಾಂ ಶಾಂತಿಃ ಶಾಶ್ವತೀ ನೇತರೇಷಾಮ್ ॥

ಪದಾರ್ಥಗಳಿಗೆ ನಿತ್ಯತ್ವವನ್ನು ಕೊಡುವ ಅಥವಾ ನಿತ್ಯ ಪದಾರ್ಥಗಳಿಗಿಂತಲೂ ಪರಮ ನಿತ್ಯನಾಗಿರುವ ಎಲ್ಲ ಚೇತನರಿಗಿಂತಲೂ ಪರಮ ಚೇತನನಾಗಿರುವ ಸ್ವತಂತ್ರನಾದ ಯಾರು ಅವರವರ ಅಭೀಷ್ಟಗಳನ್ನು ಕೊಡುತ್ತಾನೆಯೋ ಇಂಥ ಭಗವಂತನನ್ನು ಯಾವ ಧೀರರು ತಮ್ಮೊಳಗೇ ಕಾಣುವರೋ ಅವರಿಗೆ ಮಾತ್ರ ಮೋಕ್ಷಸುಖವು ಲಭಿಸುತ್ತದೆ. ಬೇರೆಯವರಿಗೆ ಲಭಿಸುವುದಿಲ್ಲ.

ಚೇತನಾಭಾಸಕೋ ಜೀವಃ ಪರಮಶ್ಚೇತನೋ ಹರಿಃ।
ಸ್ವತಂತ್ರತ್ವಾತ್ ಸ್ವತಂತ್ರೋ ಹಿ ನೈವ ದೋಷೇಣ ಲಿಪ್ಯತೇ ॥ ಇತಿ ಕೌರ್ಮೇ ॥

ಜೀವನು ಅಲ್ಪ ಚೇತನನಾಗಿದ್ದಾನೆ. ಶ್ರೀಹರಿಯು ಪರಮ ಚೇತನನಾಗಿದ್ದಾನೆ, ಏಕೆಂದರೆ ಅವನು ಸ್ವತಂತ್ರ. ಸ್ವತಂತ್ರನಾದವನು ದುಃಖಾದಿ ದೋಷವುಳ್ಳ ಜೀವನಲ್ಲಿ ಇದ್ದರೂ ಜೀವನ ಆ ದೋಷಗಳಿಂದ ಲಿಪ್ತನಾಗುವುದಿಲ್ಲ. ಈ ಎಲ್ಲ ವಿಷಯವು ಕೂರ್ಮ ಪುರಾಣದಲ್ಲಿ ಉಕ್ತವಾಗಿದೆ.

ಸ ಏಕ ಏವ ಸರ್ವಭೂತಾಂತರಾತ್ಮಾ। ತಸ್ಯ ರೂಪಂ ರೂಪಂ ಪ್ರತಿರೂಪಾಖ್ಯೋ ಜೀವೋ ಬಭೂವ। ಬಹಿಶ್ಚಾಸೌ ಪರಮಾತ್ಮನೋ ನಿತರಾಂ ಭಿನ್ನಃ। ಪರತಂತ್ರತ್ವಾತ್ ।

ಆ ಶ್ರೀಹರಿಯ ಒಬ್ಬನೇ ಎಲ್ಲ ಜೀವರ ಅಂತರ್ಯಾಮಿಯಾಗಿದ್ದಾನೆ. ಆ ಭಗವಂತನು ಒಬ್ಬನೇ ಆದರೂ ಅನೇಕ ರೂಪವುಳ್ಳವನಾಗಿದ್ದಾನೆ. ಎಲ್ಲ ಜೀವರೂ ಅವನ ಪ್ರತಿಬಿಂಬರಾಗಿದ್ದಾರೆ. ಜೀವನು ಪರಮಾತ್ಮನಿಗಿಂತ ಅತ್ಯಂತ ಭಿನ್ನನಾಗಿದ್ದಾನೆ. ಪರಮಾತ್ಮನು ಸ್ವತಂತ್ರ, ಜೀವನು ಪರತಂತ್ರ, ಜೀವನು ಪರತಂತ್ರನಾದುದರಿಂದಲೇ ಪರಮಾತ್ಮನಿಗಿಂತ ಅತ್ಯಂತ ಭಿನ್ನನಾಗಿದ್ದಾನೆ.

ಆತ್ಮೈವೇದಮಗ್ರ ಆಸೀತ್' ಇತ್ಯಾದಿವತ್ ಅನಾದಿತ್ವಾಪೇಕ್ಷಯಾ। ಆತ್ಮನಿಸ್ಥಂ ಹರಿಂ ಜಾನನ್ ಮುಚ್ಯತೇ ನಾತ್ರ ಸಂಶಯಃ। ಜೀವೈಕ್ಯೇನ ತು ತಂ ಧ್ಯಾಯನ್ ತಮಸ್ಯಂಧೇ ಪತೇದ್ ಧ್ರುವಂ॥ ಇತಿ ಚ ॥

ಆತ್ಮೈವೇದಮಗ್ರ ಆಸೀತ್', 'ಸೃಷ್ಟಿಗೆ ಮೊದಲು ಪರಮಾತ್ಮನೊಬ್ಬನೆ ಇದ್ದನು' ಎಂಬ ಶ್ರುತಿಯಲ್ಲಿ 'ಆಸೀತ್' ಎಂದು ಭೂತಕಾಲದಲ್ಲಿ ಪ್ರಯೋಗವಿದ್ದರೂ ಅನಾದಿಕಾಲದಿಂದಲೂ ಭಗವಂತನು ಇದ್ದಾನೆ ಎಂಬುದಾಗಿ ಹೇಗೆ ಅರ್ಥ ಮಾಡುವುದು ಸರ್ವ ಸಮ್ಮತವಾಗಿದೆಯೋ ಅದರಂತೆ 'ರೂಪಂ ರೂಪಂ ಪ್ರತಿರೂಪೋ ಬಭೂವ', 'ಜೀವರು ಪರಮಾತ್ಮನ ಪ್ರತಿಬಿಂಬರಾಗಿದ್ದರು' ಎಂಬ ಶ್ರುತಿವಾಕ್ಯದಲ್ಲಿಯೂ ಭೂತಕಾಲದಲ್ಲಿ ಇರುವ ಶಬ್ದಪ್ರಯೋಗಕ್ಕೆ, ಜೀವರು ಅನಾದಿ ಕಾಲದಿಂದಲೂ ಭಗವಂತನ ಪ್ರತಿಬಿಂಬರಾಗಿದ್ದಾರೆ ಎಂದೇ ಅರ್ಥ ಮಾಡಬೇಕು. 'ತಮಾತ್ಮಸ್ಥಂ ಯೇऽನು ಪಶ್ಯಂತಿ ಧೀರಾಸ್ತೇಷಾಂ ಸುಖಂ ಶಾಶ್ವತಂ ನೇತರೇಷಾಂ' ಎಂದರೆ ತನ್ನಲ್ಲಿ ಭಗವಂತನಿದ್ದಾನೆ ಎಂದು ತಿಳಿಯುವವನು ಮೋಕ್ಷವನ್ನು ಹೊಂದುತ್ತಾನೆ. ಈ ವಿಷಯದಲ್ಲಿ ಸಂಶಯವೇ ಇಲ್ಲ. ಬ್ರಹ್ಮನು ಜೀವನಿಂದ ಐಕ್ಯವುಳ್ಳವನೆಂದು ಚಿಂತಿಸುವವನು ಅಂಧಂತಮಸ್ಸಿನಲ್ಲಿ ಖಂಡಿತವಾಗಿಯೂ ಬೀಳುತ್ತಾನೆ ಎಂದೂ ಕೂರ್ಮ ಪುರಾಣದಲ್ಲಿ ಹೇಳಿದೆ.

ತದೇತದಿತಿ ಮನ್ಯಂತೇ ಅನಿರ್ದೇಶ್ಯಂ ಪರಮಂ ಸುಖಮ್ ।
ಕಥಂ ನು ತದ್ವಿಜಾನೀಯಾಂ ಕಿಮು ಭಾತಿ ನ ಭಾತಿ ವಾ ॥

'' 'ಗುಹ್ಯಂ ಬ್ರಹ್ಮ ಪ್ರವಕ್ಷ್ಯಾಮಿ' ಎಂಬಲ್ಲಿಂದ ಪ್ರಾರಂಭಿಸಿ 'ಏಕಂ ರೂಪಂ ಬಹುಧಾ' ಎಂಬಲ್ಲಿಯವರೆಗೆ ಹೇಳಿರುವ ಈ ಬ್ರಹ್ಮಸ್ವರೂಪವು ಹೀಗೆಯೇ ಇದೆ ಎಂದು ಸಮಗ್ರವಾಗಿ ತಿಳಿಸಲು ಅಸಾಧ್ಯವಾದುದು ಮತ್ತು ಶ್ರೇಷ್ಠ ಸುಖರೂಪವಾದುದು ಎಂದು ಜ್ಞಾನಿಗಳು ತಿಳಿಯುತ್ತಾರೆ. ಇಂಥ ಭಗವಂತನನ್ನು ಅವನ ಅನುಗ್ರಹವಿಲ್ಲದಿದ್ದರೆ ನಾನಾದರೂ ಹೇಗೆ ತಿಳಿದೇನು ?'' ಇದು ಯಮನ ಮಾತು. 'ಭಗವಂತನ ಅನುಗ್ರಹದಿಂದಲಾದರೂ ಅವನನ್ನು ಪೂರ್ತಿಯಾಗಿ ತಿಳಿಯಲು ಸಾಧ್ಯವೇ?' ಇದು ನಚಿಕೇತನ ಪ್ರಶ್ನೆ, 'ಇಲ್ಲ' ಭಗವಂತನ ಪ್ರಸಾದದಿಂದಲೂ ಅವನನ್ನು ಸಮಗ್ರವಾಗಿ ತಿಳಿಯಲು ಸಾಧ್ಯವೇ ಇಲ್ಲ' ಇದು ಯಮನ ಉತ್ತರ.

ಏತದೇವ ಭಗವದ್ರೂಪಂ ಪರಮಂ ಸುಖಮ್ । ಜ್ಞಾನಿಸುಖಂ ತು ತದ್ವಿಷ್ಣೋ ಮಾತ್ರಮ್ ।
ಬ್ರಹ್ಮಾದೀನಾಂ ಚ ಮುಕ್ತಾನಾಂ ಸುಖಂ ವಿಷ್ಣು ಸುಖಸ್ಯ ತು ।
ಪ್ರತಿಬಿಂಬಸ್ತು ವಿಷ್ಣುಟ್ ಕೋ ವಿಷ್ಣುರೇವ ಪರಂ ಸುಖಮ್ ॥
ಸಮ್ಯಗ್ಭಾತಿ ನ ಭಾತೀತಿ ಜಾನೀಯಾಂ ತತ್ಕಥಂ ನ್ವಹಮ್ ।
ತತ್ಪ್ರಸಾದಮೃತೇ ದಿವ್ಯಂ ಅನಿರ್ದೇಶ್ಯಂ ಪರಂ ಸುಖಮ್ ॥ ಇತಿ ಚ ಮಹಾವಾರಹೇ ॥

ಭಗವಂತನ ರೂಪವೇ ಪರಮ ಸುಖವಾಗಿದೆ. ಜ್ಞಾನಿಗಳ ಸುಖವು ಪರಮಾತ್ಮನ ಸುಖದಲ್ಲಿ ಕೇವಲ ಒಂದು ಸಣ್ಣ ಅಂಶ ಮಾತ್ರ.

'ಮುಕ್ತರಾದ ಚತುರ್ಮುಖ ಮೊದಲಾದವರ ಸುಖವೂ ಕೂಡ ವಿಷ್ಣುವಿನ ಸುಖಕ್ಕೆ ಪ್ರತಿಬಿಂಬವಾಗಿದ್ದು ಅದರಲ್ಲಿ ಕೇವಲ ಒಂದು ಸಣ್ಣ ಅಂಶಮಾತ್ರವೇ ಆಗಿದೆ. ವಿಷ್ಣುವೇ ಪರಮ ಸುಖರೂಪಿಯಾಗಿದ್ದಾನೆ, ಮುಕ್ತ ಬ್ರಹ್ಮಾದಿಗಳ ಸುಖವೇ ಪರಮಾತ್ಮನ ಸುಖದಲ್ಲಿ ಒಂದು ಸಣ್ಣ ಅಂಶ ಮಾತ್ರ ಎಂದು ಹೇಳಿದ ಮೇಲೆ, ಉಳಿದವರ ಸುಖವು ಮಹತ್ತಾದುದಲ್ಲ ಎಂದು ಹೇಳುವುದೇನಿದೆ ? ಮಾತಿಗೆ ನಿಲುಕದ ದಿವ್ಯ ಪರಮ ಸುಖಸ್ವರೂಪನಾದ ಭಗವಂತನನ್ನು ಅವನ ಅನುಗ್ರಹವಿಲ್ಲದೆ ನಾನು ಹೇಗೆ ತಾನೆ ತಿಳಿದೇನು ?' ಎಂದು ಯಮನು ಹೇಳಿದಾಗ, 'ಭಗವಂತನ ಪ್ರಸಾದದಿಂದಲಾದರೂ ಅವನನ್ನು ಪೂರ್ತಿಯಾಗಿ ತಿಳಿಯಲು ಸಾಧ್ಯವೇ?' ಎಂದು ನಚಿಕೇತನ ಪ್ರಶ್ನೆ. 'ಅವರವರ ಯೋಗ್ಯತೆಗೆ ತಕ್ಕಂತೆ ಭಗವಂತನ ಪ್ರಸಾದದಿಂದ ಭಗವಂತನನ್ನು ಸ್ವಲ್ಪವೆ ತಿಳಿಯಬಹುದೇ ಹೊರತು ಪೂರ್ತಿಯಾಗಿ ತಿಳಿಯಲು ಯಾರಿಂದಲೂ ಸಾಧ್ಯವಿಲ್ಲ, ಎಂದು ಯಮನು ಉತ್ತರಿಸುತ್ತಾನೆ. ಈ ವಿಷಯವು ಮಹಾವರಾಹ ಪುರಾಣದಲ್ಲಿ ಹೇಳಲ್ಪಟ್ಟಿದೆ.

ನ ತತ್ರ ಸೂರ್ಯೋ ಭಾತಿ ನ ಚಂದ್ರತಾರಕಮ್
ನೇಮಾ ವಿದ್ಯುತೋ ಭಾಂತಿ ಕುತೋಽಯಮಗ್ನಿಃ।
ತಮೇವ ಭಾಂತಮನು ಭಾತಿ ಸರ್ವಂ
ತಸ್ಯ ಭಾಸಾ ಸರ್ವಮಿದಂ ವಿಭಾತಿ ॥

ಬ್ರಹ್ಮನನ್ನುಸೂರ್ಯನುಪ್ರಕಾಶಗೊಳಿಸುವುದಿಲ್ಲ.ನಕ್ಷತ್ರಗಳೂಪ್ರಕಾಶಗೊಳಿಸುವುದಿಲ್ಲ. ಈ ಮಿಂಚುಗಳು ಪ್ರಕಾಶಗೊಳಿಸುವುದಿಲ್ಲ. ಅಗ್ನಿಯು ಪ್ರಕಾಶಗೊಳಿಸುವುದಿಲ್ಲವೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಭಗವಂತನು ಪ್ರಕಾಶಿಸುವುದರಿಂದಲೇ ಸೂರ್ಯಾದಿಗಳೆಲ್ಲವೂ ಕೂಡ ಪ್ರಕಾಶಿಸುತ್ತವೆ. ಭಗವಂತನ ಪ್ರಕಾಶದಿಂದಲೇ ಈ ಸಮಸ್ತ ಪ್ರಪಂಚವು ಕಾಣುತ್ತದೆ.

ಅನುಭಾನಾತ್' ಎಂದೇಕೆ ಶ್ರುತಿಯಲ್ಲಿ ಹೇಳಿಲ್ಲ ?

तत्वप्रदीपः – अनुकृतेस्तस्य च ।। अनुमानं नाम तदिच्छानुरोधेन भानम् । अनुकृतिशब्देन अनुभानमुच्यते। भानस्यापि क्रियारूपत्वात् । अन्यकृतीनामप्युसङ्ग्रहार्थमनुकृतेः इत्युक्तम् ।

'ಅನುಭಾನ' ಎಂದರೆ 'ಭಗವದಿಚ್ಛೆಗನುಸಾರಿಯಾಗಿ ಪ್ರಕಾಶಿಸುವಿಕೆ' ಎಂದರ್ಥ. 'ಅನುಕೃತೇಃ' ಶಬ್ದದಿಂದ ಅನುಭಾನವನ್ನು ವಿವಕ್ಷಿಸಿದ್ದಾರೆ. ಭಾನವೂ ಕೂಡ ಕ್ರಿಯಾರೂಪವಾಗಿರುವುದರಿಂದ ಅನುಕೃತಿ ಶಬ್ದಕ್ಕೆ ಅನುಭಾನ ಎಂಬರ್ಥವು ಸಮಂಜಸವಾಗುತ್ತದೆ. ಉಳಿದ ಕೃತಿಗಳನ್ನೂ ಕೂಡ ಉಪಸಂಗ್ರಹ ಮಾಡುವುದಕ್ಕಾಗಿ 'ಅನುಭಾನಾತ್' ಎಂದು ಹೇಳದೇ 'ಅನುಕೃತೇಃ' ಎಂದು ಹೇಳಿರುವರು.

ವಿವರಣೆ - ಪ್ರಶ್ನೆ - ಸೂತ್ರವು ಶ್ರುತಿಗೆ ಅನುಗುಣವಾಗಿರಬೇಕು. 'ತಮೇವ ಭಾಂತಂ ಅನುಭಾತಿ ಸರ್ವಂ' ಎಂಬ ಶ್ರುತಿಗೆ ಅನುಗುಣವಾಗಿ ಸೂತ್ರದಲ್ಲಿ 'ಅನುಭಾನಾತ್' ಎಂದೇ ಪ್ರಯೋಗಿಸಬೇಕಿತ್ತು. ಹೀಗಿರುವಾಗ 'ಅನುಕೃತೇಃ' ಎಂಬುದಾಗಿ ಶ್ರುತಿಗೆ ಅನುಗುಣವಾಗದಂತೆ ಏಕೆ ಹೇಳಿರುವರು ?

ಉತ್ತರ - ಕೃತಿ ಶಬ್ದಕ್ಕೆ ಕ್ರಿಯೆ ಎಂದರ್ಥ. ಪ್ರಕಾಶಿಸುವುದೂ ಕೂಡ ಕ್ರಿಯಾರೂಪವಾದ್ದರಿಂದ 'ಅನುಕೃತೇಃ' ಎಂಬ ಶಬ್ದಕ್ಕೆ ಅನುಸರಿಸಿ ಪ್ರಕಾಶಿಸುವುದರಿಂದ ಎಂಬರ್ಥವನ್ನೇ ಹೇಳಿದಂತಾಗುತ್ತದೆ. ಆದ್ದರಿಂದ 'ಅನುಕೃತೇಃ' ಎಂಬ ಪದವು ಶ್ರುತಿಗೆ ಅನುಗುಣವೇ ಆಗಿದೆ ಹೊರತು, ಅನನುಗುಣವಾಗಿರುವುದಿಲ್ಲ.

ಪ್ರಶ್ನೆ - ಆದರೂ ಸಹ 'ಅನುಭಾನಾತ್' ಎಂದು ಹೇಳಬಹುದಿತ್ತಲ್ಲವೇ? ಕೃತಿ ಶಬ್ದವನ್ನು ಪ್ರಯೋಗಿಸಲು ಏನು ಕಾರಣ?

ಉತ್ತರ - ಮಹತ್ಪ್ರಯೋಜನವಿದೆ. 'ಅನುಭಾನಾತ್' ಎಂದು ಹೇಳಿದರೆ ಪ್ರಕಾಶಿಸುವಿಕೆ ಎಂಬ ಕ್ರಿಯೆಯನ್ನಷ್ಟೇ ಸಂಗ್ರಹ ಮಾಡಿದಂತಾಗುತ್ತದೆ. ಉಳಿದ ಕ್ರಿಯೆಗಳನ್ನೂ ಕೂಡ ಸಂಗ್ರಹ ಮಾಡುವ ಉದ್ದೇಶಕ್ಕಾಗಿ ಭಾನ ಶಬ್ದವನ್ನು ಪ್ರಯೋಗ ಮಾಡದೇ ಕೃತಿಶಬ್ದವನ್ನು ಪ್ರಯೋಗಿಸಿರುತ್ತಾರೆ. ಆದ್ದರಿಂದ ಸೂರ್ಯಾದಿಗಳಲ್ಲಿರುವ ಪ್ರಕಾಶಿಸುವಿಕೆ ಎಂಬ ಕ್ರಿಯೆ ಮಾತ್ರ ಭಗವದಧೀನವಲ್ಲ. ಆ ಪ್ರಕಾಶದಲ್ಲಿರುವ ದಾಹಕತ್ವ ಮೊದಲಾದ ಕ್ರಿಯೆಗಳೂ ಕೂಡ ಹರಿಯ ಇಚ್ಛಾಧೀನವಾಗಿದೆ ಎಂದು ತಿಳಿಸುವುದೇ ಸೂತ್ರಕಾರರ ಉದ್ದೇಶವಾಗಿದೆ. ಆದುದರಿಂದ 'ಅನುಕೃತೇಃ' ಎಂದು ಹೇಳಿರುವುದು ಬಹಳ ಅರ್ಥಪೂರ್ಣವಾದದ್ದು.

'ಅನುಕೃತೇಃ' ಎಂಬ ಶಬ್ದಪ್ರಯೋಗದ ಸ್ವಾರಸ್ಯ

तत्वप्रदीपः – नहि काचिदपि कृतिर्हरीच्छानुरोधनमन्तरेण भवति । भानश्रुत्याऽपि कृतिरुपसङ्गृहीता । भानपूर्वकत्वात्कृतेः । अतोऽनुकृतेः इति

युक्तमुक्तम् । अहं तत्तेजो मदपेक्षया रश्मिरूपाणामल्पानामन्येषां तेजसां प्रेरकम् ।।

ಯಾವುದೇ ಒಂದು ಕೃತಿಯೂ ಕೂಡ ಶ್ರೀಹರಿಯ ಇಚ್ಛೆಗೆ ಅನುಸಾರಿಯಾಗದೇ ಇರಲು ಸಾಧ್ಯವಿಲ್ಲ. 'ತಮೇವ ಭಾಂತಂ' ಎಂಬ ಭಾನಶ್ರುತಿಯಿಂದಲೂ ಕೂಡ ಎಲ್ಲಾ ಕೃತಿಗಳನ್ನು ಉಪಲಕ್ಷಣಯಾ ವಿವಕ್ಷಿಸಬೇಕು. ಕೃತಿಯು ಭಾನಪೂರ್ವಕವಾಗಿರುವುದರಿಂದ 'ಅನುಕೃತೇಃ' ಎಂದು ಸೂತ್ರದಲ್ಲಿ ಹೇಳಿದ್ದು ಯುಕ್ತವಾಗಿದೆ.

'ಅಹಂ ತತ್ತೇಜೋ ರಶ್ಮೀತ್' ಎಂಬ ಶ್ರುತಿಯಲ್ಲಿ ನನ್ನ ಅಪೇಕ್ಷೆಯಿಂದ ಉಳಿದ ರಶ್ಮಿಗಳು ಅಲ್ಪವಾಗಿವೆ. ಅದಕ್ಕೂ ಕೂಡ ನಾನೇ ಪ್ರಕಾಶಕನಾಗಿದ್ದೇನೆ ಎಂದು ಹೇಳಲಾಗಿದೆ.

ವಿವರಣೆ - ಸೂತ್ರದಲ್ಲಿ ಮಾತ್ರವಲ್ಲದೇ 'ತಮೇವ ಭಾಂತಂ' ಎಂಬ ಶ್ರುತಿಯಲ್ಲೂ ಕೂಡ ಸಕಲ ಕೃತಿಗಳೂ ಭಗವದಿಚ್ಛಾಧೀನವಾಗಿವೆ ಎಂಬುದನ್ನು ತೋರಿಸುವುದಕ್ಕಾಗಿ ಸೂತ್ರಕಾರರು 'ಅನುಕೃತೇಃ' ಎಂದು ಹೇಳಿರುವರು. 'ಅಹಂ ತತ್ತೇಜೋ ರಶ್ಮಿತ್' ಎಂಬ ಶ್ರುತಿಯ ಅರ್ಥ ಹೀಗಿದೆ - ನಾನೇ ಸಮಸ್ತ ಜಗತ್ತಿಗೆ ಪ್ರಕಾಶಕನಾಗಿದ್ದೇನೆ. ನನ್ನ ಪ್ರಕಾಶದ ಮುಂದೆ ಉಳಿದೆಲ್ಲವೂ ಕೂಡ ಅಲ್ಪವಾಗಿದೆ. ಅವುಗಳಿಗೂ ಕೂಡ ಪ್ರಕಾಶಶಕ್ತಿಯನ್ನು ನಾನೇ ನೀಡುತ್ತಿರುವೆನು. ಮತ್ತು ಅವೆಲ್ಲದರ ಪ್ರಕಾಶವು ನನ್ನದೇ ಆಗಿದೆ ಎಂದು.

ಈ ಶ್ರುತಿಯಲ್ಲಿ ಒಟ್ಟು ಎರಡು ಅಂಶಗಳನ್ನು ಗಮನಿಸಬೇಕು.

೧. ಸೂರ್ಯಾದಿ ಸಕಲ ಪ್ರಕಾಶಗಳಿಗೆ ಶ್ರೀಹರಿಯು ನಿಯಾಮಕ.

೨. ಸೂರ್ಯಾದಿಗಳಲ್ಲಿರುವ ಪ್ರಕಾಶವೆಲ್ಲವೂ ಶ್ರೀಹರಿಯದ್ದೇ ಆಗಿದೆ.

ಸೂತ್ರದಲ್ಲಿರುವ 'ಅನುಕೃತೇಃ' ಎಂಬ ಪದದಿಂದ 'ತಮೇವ ಭಾಂತಂ' ಎಂಬ ಶ್ರುತಿಯಲ್ಲಿ ಹೇಳಿದ ಅನುಕೃತಿಯನ್ನು ಸಂಗ್ರಹಿಸಿದ್ದಾರೆ. 'ತಸ್ಯ' ಎಂಬ ಪದವು 'ತಸ್ಯ ಭಾಸಾ ಸರ್ವಮಿದಂ ವಿಭಾತಿ' ಎಂಬ ವಾಕ್ಯದ ಪ್ರತೀಕರೂಪವಾಗಿದೆ. ಆದ್ದರಿಂದ 'ಅನುಕೃತಿ' ಹಾಗೂ 'ತಸ್ಯ ಭಾಸಾ' ಎಂಬ ವಚನ ಈ ಎರಡು ಕಾರಣಗಳನ್ನು ಸೂತ್ರಕಾರರು ಉಲ್ಲೇಖಿಸಿ 'ತದೇತದಿತಿ ಮನ್ಯಂತೇ' ಎಂಬ ಶ್ರುತಿಯಿಂದ ಪರಮಾತ್ಮನ ಸುಖವೇ ಪ್ರತಿಪಾದ್ಯವಾಗಿದೆ ಎಂಬುದಾಗಿ ಸಮರ್ಥಿಸಿದ್ದಾರೆ.

ಶ್ರೀಮಜ್ಜಯತೀರ್ಥಭಿಕ್ಷುಗಳಿಂದ ವಿರಚಿತವಾದ

ತತ್ವಪ್ರಕಾಶಿಕಾ

ಅನುಕೂಲ್ಯೇನ ಗೃಹ್ಯಮಾಣತ್ವ ಲಿಂಗದ ಸಮನ್ವಯಕ್ಕಾಗಿ ಅನುಕೃತ್ಯಧಿಕರಣ

तत्वप्रकाशिका – ।। अनुकृतेस्तस्य च ।।

अत्राऽऽनुकूल्येन गृह्यमाणत्वलिङ्गस्य भगवति ज्ञानिसुखे च सुखशब्दवृत्त्या साधारणस्य विष्णौ समन्वयप्रतिपादनादस्ति शास्त्रादिसङ्गतिः ।

श्रुत्यादिसङ्गतिं विषयादिकं च सूचयन् सयुक्तिकं पूर्वपक्षं च दर्शयति – अदृश्यत्वादय इति ।।

ಈ ಅಧಿಕರಣದಲ್ಲಿ 'ಅನುಕೂಲ್ಯೇನ ಗೃಹ್ಯಮಾಣತ್ವ' ಲಿಂಗವನ್ನು ಸಮನ್ವಯ ಮಾಡಲಾಗಿದೆ. ಈ ಲಿಂಗವು ಭಗವಂತನಲ್ಲಿ ಮತ್ತು ಜ್ಞಾನಿಸುಖದಲ್ಲಿ ಸುಖಶಬ್ದದ ಇರುವಿಕೆಯಿಂದ ಉಭಯಸಾಧಾರಣವಾಗಿದೆ. ಇಂತಹ ಧರ್ಮವನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡುತ್ತಿರುವ ಕಾರಣ ಶಾಸ್ತ್ರಾದಿಸಂಗತಿಗಳು ಇರುತ್ತವೆಂದು ತಿಳಿಯಬೇಕು.

ಶ್ರುತಿಸಂಗತಿ, ಅಧಿಕರಣಸಂಗತಿ ಇತ್ಯಾದಿಗಳನ್ನು ಸೂಚನೆ ಮಾಡುತ್ತಾ ಯುಕ್ತಿಬದ್ಧವಾದ ಪೂರ್ವಪಕ್ಷವನ್ನು ತೋರಿಸುತ್ತಾ ಇದ್ದಾರೆ 'ಅದೃಶ್ಯತ್ವಾದಿ' ಎಂಬ ಭಾಷ್ಯದಿಂದ.

ಅದೃಶ್ಯತ್ವ, ಅಜ್ಞೇಯತ್ವಗಳು ಯಾರಲ್ಲಿವೆ ?

तत्वप्रकाशिका – पूर्वमदृश्यत्वादिगुणाः परमेश्वरस्योक्ताः । तेषामदृश्यत्वाज्ञेयत्वे कस्यचिदानुकूल्येन गृह्यमाणस्य काठके कथ्येते ।

ಅದೃಶ್ಯತ್ವಾಧಿಕರಣದಲ್ಲಿ ಅದೃಶ್ಯತ್ವಾದಿಗುಣಗಳು ಪರಮಾತ್ಮನಲ್ಲಿರುತ್ತವೆ ಎಂದು ಸಾಧಿಸಲಾಯಿತು. ಆದರೆ ಅನುಕೂಲ್ಯೇನ ಗೃಹ್ಯಮಾಣನಾದವನಲ್ಲಿ ಇಂತಹ ಅದೃಶ್ಯತ್ವ, ಅಜ್ಞೇಯತ್ವ ಗುಣಗಳು ಇರುತ್ತವೆಂದು ಕಾಠಕೋಪನಿಷತ್ತು ಹೇಳುತ್ತಿದೆ.

ಜ್ಞಾನಿಸುಖದಲ್ಲಿ ಅದೃಶ್ಯತ್ವಾದಿಗಳು ಇದೆಯೇ ?

तत्वप्रकाशिका – 'तदेतदिति मन्यन्तेऽनिर्देश्यं परमं सुखम् । कथं नु तद्विजानीयां किमु भाति न भाति वा' इति ।

'ಶಾಶ್ವತವಾದ ಸುಖವನ್ನೇ ಶಬ್ದದಿಂದ ಹೇಳಲಾಗದ ಪರಮಸುಖವೆನ್ನುತ್ತಾರೆ. ಇಂತಹ ಸುಖವನ್ನು ಜ್ಞಾನಿಗಳು ಹೇಗೆ ತಿಳಿಯಬೇಕೆಂದು ಪ್ರಾರ್ಥಿಸುತ್ತಾರೋ ಅಂತಹ ಸುಖವೇ ಅನಿರ್ದೇಶ್ಯವಾಗಿದೆ' ಎಂದು ಕಾಠಕೋಪನಿಷತ್ತು ಹೇಳಿದೆ.

'ಆನುಕೂಲ್ಯೇನ ಗೃಹ್ಯಮಾಣತ್ವ' ಎಂಬುದರ ಅರ್ಥ

तत्वप्रकाशिका – 'आनुकूल्येन गृह्यमाणत्वं' नाम 'कथं नु तद्विजानीयामिति ज्ञानार्थं प्रार्थितत्वम्'

'ಆನುಕೂಲ್ಯೇನ ಗೃಹ್ಯಮಾಣತ್ವಂ' ಎಂಬುದರ ಅರ್ಥಹೀಗಿದೆ -

'ಕಥಂ ನು ತದ್ವಿಜಾನೀಯಾಂ' ಎಂಬುದಾಗಿ ಜ್ಞಾನಕ್ಕಾಗಿ ಮಾಡುವ ಪ್ರಾರ್ಥನೆ ಎಂದು.

ಆನುಕೂಲ್ಯೇಣ ಗೃಹ್ಯಮಾಣತ್ವವಿದ್ದಲ್ಲೇ ಅಜ್ಞೇಯತ್ವಾದಿಗಳು

तत्वप्रकाशिका – तस्य चान्यनिष्ठत्वेऽनिर्देश्यत्वं 'न भाति' इत्युक्ताज्ञेयत्वं चान्यस्यैव प्रसज्येतेत्यवश्यं निर्णेतव्यत्वम् ।

ಇಂತಹ ಆನುಕೂಲ್ಯೇನ ಗೃಹ್ಯಮಾಣತ್ವವು ಬೇರೆಯವರಲ್ಲಿ ಬರುವುದಾದರೆ, ಅನಿರ್ದೇಶ್ಯತ್ವ, ಅಜ್ಞೇಯತ್ವ ಮೊದಲಾದುವುಗಳು ಬೇರೆಯವರಲ್ಲೂ ಬರುತ್ತವೆ. ಆದ್ದರಿಂದ ಆನುಕೂಲ್ಯೇನ ಗೃಹ್ಯಮಾಣತ್ವಲಿಂಗವನ್ನು ಅವಶ್ಯವಾಗಿ ನಿರ್ಣಯಿಸಬೇಕು.

ಆನುಕೂಲ್ಯೇಣ ಗೃಹ್ಯಮಾಣತ್ವಲಿಂಗಕ್ಕೆ ಉಭಯತ್ರಪ್ರಸಿದ್ಧತ್ವ

तत्वप्रकाशिका – तदानुकूल्येन गृह्यमाणत्वमत्र विषयः । विष्णोरन्यस्य वेति सन्देहः । प्रागुक्तसाधारण्यं सन्देहबीजम् । ज्ञानिसुखस्य एतल्लिङ्गमिति पूर्वः पक्षः ।

ಆನುಕೂಲ್ಯೇನ ಗೃಹ್ಯಮಾಣತ್ವವೇ ಈ ಅಧಿಕರಣದ ವಿಷಯ. ಈ ಧರ್ಮವು ವಿಷ್ಣುವಿನಲ್ಲಿದೆಯೋ ಬೇರೆಯವರಲ್ಲಿ ಇದೆಯೋ? ಎಂಬುದೇ ಸಂಶಯ. ಹಿಂದೆ ಹೇಳಿದಂತೆ ಜ್ಞಾನಿಸುಖ ಮತ್ತು ಪರಮಾತ್ಮ ಇಬ್ಬರಲ್ಲಿಯೂ ಸಾಧಾರಣವಾಗಿರುವುದು ಸಂದೇಹ ಬೀಜ. ಈ ಲಿಂಗವು ಜ್ಞಾನಿಸುಖದಲ್ಲಿ ಇರುತ್ತದೆಂಬುದು ಪೂರ್ವಪಕ್ಷ.

ಜ್ಞಾನಿಸುಖವು ಪ್ರಕೃತವಲ್ಲವೇ ?

तत्वप्रकाशिका – परमं सुखमिति सुखोक्तेः । नच सुखश्रुतिर्विष्णावपि सावकाशेति तद्ग्रहः । 'एको वशी सर्वभूतान्तरात्मा एकं रूपं बहुधा यः करोति । तमात्मस्थं येऽनुपश्यन्ति धीराः तेषां सुखं शाश्वतं नेतरेषाम्' इति ज्ञानिसुखस्य प्रकृतत्वात् ।

ಏಕೆಂದರೆ ಶ್ರುತಿಯಲ್ಲಿ 'ಪರಮಂ ಸುಖಮ್' ಎಂದು ಸ್ಪಷ್ಟವಾದ ಸುಖಶಬ್ದವಿದೆ. ಇನ್ನು ಸುಖಶ್ರುತಿಯು ವಿಷ್ಣುವಿನಲ್ಲಿಯೂ ಸಾವಕಾಶವಾಗಿದೆಯಲ್ಲವೇ ? ಎಂದು ಪ್ರಶ್ನಿಸಬಾರದು. ಏಕೆಂದರೆ 'ಏಕೋ ವಶೀ ಸರ್ವಭೂತಾಂತರಾತ್ಮಾ ಏಕಂ ರೂಪಂ ಬಹುಧಾ ಯಃ ಕರೋತಿ । ತಮಾತ್ಮಸ್ಥಂ ಯೇऽನುಪಶ್ಯಂತಿ ಧೀರಾಃ ತೇಷಾಂ ಸುಖಂ ಶಾಶ್ವತಂ ನೇತರೇಷಾಂ' ಯಾವಾತನು ಸ್ವಗತಭೇದ ವಿವರ್ಜಿತನೋ, ಸಕಲ ಪದಾರ್ಥಗಳಿಗೆ ಸ್ವಾಮಿಯೋ, ಸರ್ವಭೂತಾಂತರ್ಯಾಮಿಯೋ, ತನ್ನ ಸ್ವರೂಪದಿಂದ ಅನಂತ ಪ್ರಕಾರವನ್ನೂ ಹೊಂದಿದವನೋ, ಸಕಲ ಜೀವರ ಹೃದಯಪದ್ಮದಲ್ಲಿದ್ದಾನೋ, ಅಂತಹ ಪರಮಾತ್ಮನನ್ನು ಜ್ಞಾನಿಯಾದ ಅಧಿಕಾರಿಯು ಹೊಂದುತ್ತಾನೆ. ಅವನಿಗೆ ಶಾಶ್ವತವಾದ ಸುಖಸ್ವರೂಪವಾದ ಮೋಕ್ಷವೇ ದೊರೆಯುತ್ತದೆ. ಎಂದು ಶ್ರುತಿಯು ಹೇಳುತ್ತಿದೆ. ಇಲ್ಲಿ ಜ್ಞಾನಿಗಳ ಸುಖವೇ ಪ್ರಕೃತವಾಗಿವೆ.

ನಪುಂಸಕಲಿಂಗದ ಸುಖಶಬ್ದದಿಂದ ಯಾರನ್ನು ಪರಾಮರ್ಶಿಸಬೇಕು ?

तत्वप्रकाशिका – तस्यैव 'तदेतदिति मन्यन्ते' इति परामर्शात् । नच वाच्यं भगवतोऽपि प्रकृतत्वात् तत्परामर्शोऽयमस्तु? इति । तस्य नपुंसकसुखशब्देनाप्रकृतस्य तदित्यादिपरामर्शायोगात् ।

ಮತ್ತು ಜ್ಞಾನಿಗಳ ಸುಖವನ್ನೇ 'ತದೇತದಿತಿ ಮನ್ಯಂತೇ' ಎಂಬ ವಾಕ್ಯದಲ್ಲಿ 'ತದೇತತ್' ಎಂಬುದರಿಂದ ಪರಾಮರ್ಶ ಮಾಡಲಾಗಿದೆ. ಪರಮಾತ್ಮನೂ ಕೂಡ ಇದೇ ಪ್ರಕರಣದಲ್ಲಿ ಪ್ರಕೃತನಾದ್ದರಿಂದ 'ತದೇತತ್' ಎಂಬ ಶಬ್ದದಿಂದ ಅವನನ್ನು ಪರಾಮರ್ಶ ಮಾಡಬಹುದಲ್ಲವೇ? ಎಂದು ಪ್ರಶ್ನಿಸಬಾರದು. ನಪುಂಸಕಲಿಂಗದಲ್ಲಿರುವ ಸುಖಶಬ್ದದಿಂದ ಅಪ್ರಸಕ್ತನಾದ ಪರಮಾತ್ಮನನ್ನು ಪರಾಮರ್ಶ ಮಾಡುವುದು ತಪ್ಪಾಗುತ್ತದೆ.

ನಪುಂಸಕಲಿಂಗದಲ್ಲಿರುವ ಜ್ಞಾನಿಸುಖವನ್ನೇ ಪರಾಮರ್ಶಿಸಬೇಕೆಂದು ಪೂರ್ವಪಕ್ಷ

तत्वप्रकाशिका – सम्भवत्समीपस्थपरामर्शं विहाय दूरस्थपरामर्शग्रहणे कारणाभावाच्च । अतो ज्ञानिसुखस्यैवाऽऽनुकूल्येन गृह्यमाणत्त्वात्, तस्यैवा-निर्देश्यत्वादीत्यर्थः ।

'ತದೇತತ್' ಎಂಬ ಶಬ್ದಕ್ಕೆ ಹತ್ತಿರದಲ್ಲೇ ಇರುವ 'ತೇಷಾಂ ಸುಖಮ್' ಎಂಬಲ್ಲಿರುವ ಸುಖಪದವನ್ನು ತ್ಯಾಗಮಾಡಿ ದೂರದಲ್ಲಿರುವ 'ಏಕೋ ವಶೀ' ಎಂಬಲ್ಲಿ ಹೇಳಿರುವ ಪರಮಾತ್ಮನ ಪರಾಮರ್ಶಮಾಡಲು ಏನೂ ಕಾರಣವಿಲ್ಲ. ಆದ್ದರಿಂದ ಜ್ಞಾನಿಸುಖವೇ ಇಲ್ಲಿ ಆನುಕೂಲ್ಯೇನ ಗೃಹ್ಯಮಾಣವಾಗಿದೆ, ಅನಿರ್ದೇಶ್ಯತ್ವಾದಿ ಧರ್ಮಗಳಿಂದಲೂ ಯುಕ್ತವಾಗಿದೆ ಎಂದು ಪೂರ್ವಪಕ್ಷ.

ವಿಷ್ಣುವೇ ಆನುಕೂಲ್ಯೇನ ಗೃಹ್ಯಮಾಣನೆಂದು ಸಿದ್ಧಾಂತ

तत्वप्रकाशिका – सिद्धान्तयत्सूत्रमवतार्य व्याचष्टे – अत इति ।। 'कथं नु तद्विजानीयाम्' इत्यानुकूल्येन गृह्यमाणो विष्णुरेव । न सुखश्रुतिविरोधः ।

ಸಿದ್ಧಾಂತವನ್ನು ಸ್ಥಾಪನೆ ಮಾಡುವ ಸೂತ್ರವನ್ನು ಪಠಿಸಿ ವ್ಯಾಖ್ಯಾನಿಸುತ್ತಿದ್ದಾರೆ 'ಅತಃ' ಇತ್ಯಾದಿಯಾಗಿ. 'ಕಥಂ ನು ತದ್ವಿಜಾನೀಯಾಮ್' ಎಂಬ ಶ್ರುತಿಯಿಂದ ಆನುಕೂಲ್ಯೇನ ಗೃಹ್ಯಮಾಣನಾಗಿರುವನೆಂದು ಹೇಳಲ್ಪಟ್ಟವನು ವಿಷ್ಣುವೇ ಆಗಿದ್ದಾನೆ. ಸುಖಶ್ರುತಿಯ ವಿರೋಧಕ್ಕೆ ಈಗ ಅವಕಾಶವಿಲ್ಲ.

'ಪರಮಂ ಸುಖಮ್' ಎಂಬುದರಿಂದಲೂ ವಿಷ್ಣುವೇ ಪ್ರತಿಪಾದ್ಯ

तत्वप्रकाशिका – परमं सुखमिति सुखश्रुतेरपि तत्परत्वात् । तेषां सुखमिति ज्ञानिसुखस्य प्रकृतत्वात्तस्यैव तदेतदिति परामर्शान्नेति चेन्न । 'चेतनश्चेतनानाम्' इत्यादौ परमात्मनोऽपि प्रकृतत्वात् ।

ಏಕೆಂದರೆ 'ಪರಮಂ ಸುಖಮ್' ಎಂಬ 'ಸುಖ' ಶ್ರುತಿಯಲ್ಲಿರುವ ಸುಖ ಶಬ್ದದ ಅರ್ಥವೂ ಕೂಡ ವಿಷ್ಣುವೇ ಆಗಿದ್ದಾನೆ.

'ತೇಷಾಂ ಸುಖಂ' ಎಂಬಲ್ಲಿ ಜ್ಞಾನಿಸುಖವೇ ಪ್ರಸಕ್ತವಾದ್ದರಿಂದ ಅಂತಹ ಜ್ಞಾನಿಸುಖವನ್ನೇ 'ತದೇತತ್' ಎಂಬುದರಿಂದ ಪರಾಮರ್ಶ ಮಾಡಬೇಕಲ್ಲವೆ? ಇದು ವಿಷ್ಣುಪರವಾಗಲು ಹೇಗೆ ಸಾಧ್ಯ? ಎಂದು ಪ್ರಶ್ನಿಸಬಾರದು. 'ಚೇತನಶ್ಚೇತನಾನಾಮ್' ಇತ್ಯಾದಿ ವಾಕ್ಯದಿಂದ ಪರಮಾತ್ಮನೂ ಕೂಡ ಪ್ರಕೃತನೇ ಆಗಿದ್ದಾನೆ.

ಪರಮಾತ್ಮನು ಅಪ್ರಕೃತನಲ್ಲವೇ ?

तत्वप्रकाशिका – नच परमात्मनो नपुंसकसुखशब्देनाप्रकृतत्वात्तदेतदिति परामर्शायोग इति वाच्यम् ।

ನಪುಂಸಕಲಿಂಗದಲ್ಲಿರುವ ಸುಖಶಬ್ದದಿಂದ ಪರಮಾತ್ಮನನ್ನು ಪರಾಮರ್ಶಮಾಡಿ ಪ್ರಕೃತನೆಂದು ವಿವಕ್ಷಿಸಲು ಹೇಗೆ ಸಾಧ್ಯ? ಹೀಗೆ ಅಪ್ರಕೃತನಾದ ಪರಮಾತ್ಮನನ್ನು 'ತದೇತತ್' ಎಂಬ ಸರ್ವನಾಮದಿಂದ ಪರಾಮರ್ಶ ಮಾಡಲು ಸಾಧ್ಯವಿಲ್ಲವಲ್ಲವೆ? ಎಂದು ಪ್ರಶ್ನಿಸಬಾರದು.

ಪರಮಾತ್ಮನೇ ಪರಮಸುಖವೆನ್ನಲು ವಾಕ್ಯ ಯೋಜನೆ

तत्वप्रकाशिका – यदनिर्देश्यं परमं सुखं 'कथं नु तद्विजानीयामित्या-नुकूल्येन गृह्णन्ति तदनिर्देश्यं सुखमेतत् प्रकृतपरमात्मनो रुपमिति मन्यन्ते' इति वाक्ययोजनोपपत्तेः ।

ಯಾವುದನ್ನು ನಿರ್ದೇಶ್ಯ ಮಾಡಲು ಸಾಧ್ಯವಿಲ್ಲದ ಪರಮಸುಖವನ್ನು 'ಕಥಂ ನು ತದ್ವಿಜಾನೀಯಾಮ್' ಎಂಬುದಾಗಿ ಅನುಕೂಲ್ಯೇನ ಗ್ರಹಣ ಮಾಡಿದ್ದಾರೋ, ಆ ಅನಿರ್ದೇಶ್ಯಸುಖವೇ ಇಲ್ಲಿ ಪ್ರಸಕ್ತವಾದ ಪರಮಾತ್ಮನ ರೂಪವೆಂದು ಜ್ಞಾನಿಜನರು ತಿಳಿಯುತ್ತಾರೆ. ಹೀಗೆ ವಾಕ್ಯವನ್ನು ಯೋಜನೆ ಮಾಡಿಕೊಳ್ಳಬೇಕು.

ದೂರಸ್ಥನಾದ ಪರಮಾತ್ಮನನ್ನೇಕೆ ಪರಾಮರ್ಶಿಸಬೇಕು ?

तत्वप्रकाशिका – नच वक्तव्यं समीस्थपरामर्शं विहाय कथञ्चिदेव दूरस्थग्रहणे कारणाभाव इति ।

ಹತ್ತಿರದಲ್ಲೇ ಇರುವುದನ್ನು ಪರಾಮರ್ಶ ಮಾಡದೆ ದೂರದಲ್ಲಿರುವ ಪರಮಾತ್ಮನ ಸುಖವನ್ನು ಪರಾಮರ್ಶ ಮಾಡಲು ಏನೂ ಕಾರಣವಿಲ್ಲವಲ್ಲವೆ? ಎಂದು ಪ್ರಶ್ನಿಸಬಾರದು.

'ತಮೇವ ಭಾಂತಮ್ ಅನುಭಾತಿ ಸರ್ವಮ್' ಎಂಬ ವಾಕ್ಯಶೇಷದ ಬೆಂಬಲ

तत्वप्रकाशिका – 'तमेव भान्तमनुभाति सर्वम्' इति वाक्यशेषे सूर्यादीनामेतदधीनप्रकाशश्रवणात् 'तस्य भासा' इति सर्वजगतः तत्प्रभा-प्रकाश्यत्वप्रतीतेश्च ।

'ತಮೇವ ಭಾಂತಮನುಭಾತಿ ಸರ್ವಮ್' ಎಂಬ ಮುಂದಿನ ವಾಕ್ಯದಲ್ಲಿ ಸೂರ್ಯಾದಿಗಳಿಗೆ ಪರಮಾತ್ಮನ ಸುಖಪ್ರಕಾಶದ ಅಧೀನವಾದ ಪ್ರಕಾಶವನ್ನು ಹೇಳಲಾಗಿದೆ. ಮತ್ತು 'ತಸ್ಯ ಭಾಸಾ' ಎಂಬ ವಾಕ್ಯದಿಂದ ಭಗವತ್‌ಪ್ರಭಾದಿಂದ ಜಗತ್‌ಪ್ರಕಾಶ್ಯತ್ವವನ್ನು ಹೇಳಲಾಗಿದೆ.

ಸಮೀಪದಲ್ಲಿರುವುದನ್ನು ಪರಿತ್ಯಾಗ ಮಾಡಲು ಕಾರಣ

तत्वप्रकाशिका – अतः समीपोक्तपरित्यागे कारणसद्भावेन दूरोक्तपरमात्म-ग्रहणोपपत्तेः । तस्य च सुखरूपत्वातिशयेन नपुंसकसुखश्रुत्युपपत्तेः, 'विष्णुरेव आनुकूल्येन गृह्यमाणः' इति तस्यैव अनिर्देश्यत्वादीति भावः ।

ಆದ್ದರಿಂದ ಸಮೀಪದಲ್ಲೇ ಪ್ರಸಕ್ತವಾದ್ದನ್ನು ಪರಿತ್ಯಾಗ ಮಾಡಲು ಕಾರಣವಿರುವುದರಿಂದ ದೂರದಲ್ಲಿರುವ ಪರಮಾತ್ಮನನ್ನು ಗ್ರಹಣ ಮಾಡಿದ್ದು ಸೂಕ್ತವಾಗುತ್ತದೆ. ಮತ್ತು ಪರಮಾತ್ಮನು ಅತಿಶಯವಾದ ಸುಖಸ್ವರೂಪಿಯಾದ್ದರಿಂದ ನಪುಂಸಕಲಿಂಗದಲ್ಲಿರುವ ಸುಖಶಬ್ದದಿಂದ ವಿಷ್ಣುವನ್ನು ಸ್ವೀಕರಿಸಿದರೆ ಯಾವ ತೊಂದರೆಯೂ ಇಲ್ಲ. ಆದ್ದರಿಂದ ವಿಷ್ಣುವೇ ಅನುಕೂಲ್ಯೇನ ಗೃಹ್ಯಮಾಣನಾಗಿದ್ದಾನೆ. ಅವನಲ್ಲಿಯೇ ಅದೃಶ್ಯತ್ವಾದಿ ಧರ್ಮಗಳಿವೆ ಎಂಬುದು ಭಾಷ್ಯದ ಅಭಿಪ್ರಾಯ.

ಜ್ಞಾನಿಸುಖವನ್ನೇಕೆ ಪರಿತ್ಯಾಗ ಮಾಡುವಿರಿ ?

तत्वप्रकाशिका – नन्वेतदधीनतया सूर्यादीनां भानोक्तावेतस्य सर्वजगत्प्रकाशकत्वोक्तौ च कुतः समीपोक्तज्ञानिसुखपरामर्शपरित्यागः? इत्यत आह – न हीति ।।

ಸೂರ್ಯಾದಿಪ್ರಕಾಶವು ಪರಮಾತ್ಮನ ಅಧೀನವಾಗಿದೆ ಮತ್ತು ಪರಮಾತ್ಮನು ಸಕಲಜಗತ್ತಿಗೆ ಪ್ರಕಾಶಕನಾಗಿದ್ದಾನೆಂದು ಶ್ರುತಿಯಲ್ಲಿ ಹೇಳಲಾಗಿದೆ. ಆದರೂ ಕೂಡ 'ತದೇತದಿತಿ' ವಾಕ್ಯದ ಸಮೀಪದಲ್ಲಿರುವ ಜ್ಞಾನಿಸುಖವನ್ನು ಪರಿತ್ಯಾಗ ಮಾಡಲು ಏನು ಕಾರಣ? ಎಂಬ ಪ್ರಶ್ನೆಗೆ 'ನಹಿ' ಇತ್ಯಾದಿ ಗ್ರಂಥದಿಂದ ಉತ್ತರಿಸಿದ್ದಾರೆ.

ಜ್ಞಾನಿಸುಖದಲ್ಲಿ ಸರ್ವಜಗತ್‌ಪ್ರಕಾಶಿತತ್ವ ಇಲ್ಲ

तत्वप्रकाशिका – सर्वं 'सूर्यादिजगत् भाति' इति शेषः । अस्त्वेतदुभयं ज्ञानिसुखेऽनुपपन्नम् तथापि कुतोऽनेन परमात्मग्रहणमित्यत आह – अहमिति ।।

'ಸರ್ವಂ ಸೂರ್ಯಾದಿಜಗತ್ ಭಾತಿ' ಸಕಲವಾದ ಸೂರ್ಯಾದಿ ಜಗತ್ತು ಪ್ರಕಾಶಮಾನವಾಗಿದೆ ಎಂಬುದನ್ನು ಇಲ್ಲಿ ಅಧ್ಯಾಹಾರ ಮಾಡಿಕೊಳ್ಳಬೇಕು. ಸೂರ್ಯಾದಿ ಪ್ರಕಾಶಕತ್ವ ಮತ್ತು ಸರ್ವಜಗತ್ತನ್ನು ಪ್ರಕಾಶಪಡಿಸುವಿಕೆ ಇವೆರಡೂ ಜ್ಞಾನಿಸುಖದಲ್ಲಿ ಅನುಪಪನ್ನವಾಗಿದೆ ಎಂದು ಒಪ್ಪೋಣ. ಆದರೂ ಕೂಡ ಈ ಧರ್ಮಗಳನ್ನು ಈಶ್ವರನಲ್ಲಿ ಸ್ವೀಕರಿಸಲು ಹೇಗೆ ಸಾಧ್ಯ ? ಎಂಬ ಪ್ರಶ್ನೆಗೆ 'ಅಹಂ' ಇತ್ಯಾದಿ ಭಾಷ್ಯದಿಂದ ಉತ್ತರಿಸಿದ್ದಾರೆ.

ಅನುಪಪತ್ತಿಯಿದ್ದಾಗ ದೂರಸ್ಥವಾದ್ದನ್ನು ಪರಾಮರ್ಶಿಸಬಹುದು

तत्वप्रकाशिका – एतदुभयस्य ज्ञानिसुखेऽसम्भवात् परमात्मनि सम्भवाद् दूरोक्तस्यापि समीपोक्तपरित्यागेन ग्रहणमिति भावः ।

ಈ ಎರಡೂ ವಿಷಯಗಳು ಜ್ಞಾನಿಸುಖದಲ್ಲಿ ಅಸಂಭಾವಿತವಾದ್ದರಿಂದ, ಪರಮಾತ್ಮನಲ್ಲಿ ಸಂಭಾವಿತವಾದ್ದರಿಂದಲೂ, ಸಮೀಪದಲ್ಲಿರುವುದನ್ನು ಪರಿತ್ಯಾಗ ಮಾಡಿ ದೂರದಲ್ಲಿರುವುದನ್ನು ಸ್ವೀಕರಿಸುವುದು ಯುಕ್ತವೇ ಆಗಿದೆ.

ವ್ಯವಹಿತಾನ್ವಯಕ್ಕೆ ಆಧಾರ

तत्वप्रकाशिका – तदुक्तं – 'व्यवधानेनान्वयोऽपि योग्यतापेक्षया भवत्' इति। इति श्रुतेरिति शेषः ।

ಇದನ್ನೇ 'ವ್ಯವಧಾನೇನಾನ್ವಯೋಽಪಿ ಯೋಗ್ಯತಾಪೇಕ್ಷಯಾ ಭವೇತ್' ವ್ಯವಹಿತವಾಗಿದ್ದರೂ ಕೂಡ ಯೋಗ್ಯವಾದುದ್ದನ್ನು ಅನ್ವಯ ಮಾಡಬೇಕೆಂದು ಹೇಳಿದ್ದಾರೆ. 'ಇತಿ' ಎಂಬುದರ ನಂತರ, 'ಶ್ರುತೇಃ' ಎಂಬುದನ್ನು ಶೇಷಪೂರಣ ಮಾಡಿಕೊಳ್ಳಬೇಕು.

ಸೂರ್ಯಾದಿಗಳ ತೇಜಸ್ಸು ಭಗವದಧೀನ

तत्वप्रकाशिका – रश्मीदिति सूर्यादितेजसां नारायणाधीनत्वमुच्यते । 'तेजः' इति सर्वजगत्प्रकाशकत्वम् । नारायणभासा तदधीनभासा तदीयभासा च सर्वं सूर्यादिजगच्च भाति प्रकाशते प्रकाश्यते च ।।

'ರಶ್ಮೀತ್' ಈ ಶಬ್ದದಿಂದ ಸೂರ್ಯಾದಿಗಳ ದಿವ್ಯವಾದ ತೇಜಸ್ಸು ಭಗವಂತನ ಅಧೀನವಾಗಿದೆ ಎಂದು ಹೇಳಲಾಗಿದೆ. ತೇಜಸ್ಸೆಂದರೆ ಸಕಲಜಗತ್‌ಪ್ರಕಾಶಕತ್ವ ಎಂದರ್ಥ. 'ನಾರಾಯಣಭಾಸಾ' ಎಂದರೆ ಪರಮಾತ್ಮನ ಅಧೀನವಾದ ಸಕಲ ತೇಜಸ್ಸಿನಿಂದ ಅಥವಾ ನಾರಾಯಣನ ತೇಜಸ್ಸಿನಿಂದ, ಸರ್ವಂ = ಎಂದರೆ ಸಕಲ ಸೂರ್ಯಾದಿಜಗತ್ತು 'ಭಾತಿ' ಎಂದರೆ ಪ್ರಕಾಶಿತವಾಗುತ್ತದೆ, ಹಾಗೂ ಮತ್ತೊಂದನ್ನು ಪ್ರಕಾಶ ಮಾಡುತ್ತದೆ, ಇಷ್ಟು ಈ ಸೂತ್ರದ ಅಭಿಪ್ರಾಯ.

ಮಂತ್ರಾಲಯ ಪ್ರಭುಗಳಾದ ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ವಿರಚಿತವಾದ

ಭಾವದೀಪ

ನ್ಯಾಯವಿವರಣದ ಜೊತೆ ಭಾಷ್ಯದ ಅಧ್ಯಯನ

भावदीपः – अनुकृतेस्तस्य च ।।

अत्र न्यायविवरणे 'कथं नु तद् विजानीयाम्' इत्यानुकूल्येन ग्रहणं कस्येति विचार्यमित्युक्तम् । तत्र पूर्वस्माल्लिङ्गं साधारणमिति पदानुवृत्तिं सूचयन् आनुकूल्येन ग्रहणं कस्येत्युक्तयैव लब्धसाधारण्यं व्यनक्ति – **अत्रानुकूल्येनेति ।।**

'ಅನುಕೃತೇಸ್ತಸ್ಯ ಚ' ಎಂಬುದಾಗಿ ಅನುಕೃತ್ಯಧಿಕರಣವು ಪ್ರಾರಂಭವಾಗುತ್ತಿದೆ. ಈ ಅಧಿಕರಣದ ನ್ಯಾಯವಿವರಣದಲ್ಲಿ 'ಕಥಂ ನು ತದ್‌ವಿಜಾನೀಯಾಮ್ ಇತ್ಯಾನುಕೂಲ್ಯೇನ ಗ್ರಹಣಂ ಕಸ್ಯೇತಿ ವಿಚಾರ್ಯಮ್' 'ಕಥಂ ನು ತದ್‌ವಿಜಾನೀಯಾಮ್' ಎಂಬಲ್ಲಿ ಅನುಕೂಲ್ಯೇನ ಸ್ವೀಕರಿಸಲು ಅರ್ಹನಾದವನು ಯಾರು ? ಎಂದು ವಿಚಾರ ಮಾಡಲಾಗಿದೆ' ಎಂದು ಹೇಳಿದ್ದಾರೆ. ನ್ಯಾಯವಿವರಣದ ಈ ವಾಕ್ಯದಲ್ಲಿ ಹಿಂದಿನ 'ಲಿಂಗಂ ಸಾಧಾರಣಮ್' ಎಂಬ ಪದಗಳನ್ನು ಅನುವೃತ್ತಿ ಮಾಡಿಕೊಳ್ಳಬೇಕೆಂದು ಸೂಚಿಸುತ್ತಾ 'ಅನುಕೂಲ್ಯೇನ ಗ್ರಹಣಂ ಕಸ್ಯ' ಎಂದು ಹೇಳಿದ್ದರಿಂದಲೇ ಉಭಯಸಾಧಾರಣ್ಯವನ್ನು ಹೇಳಿದಂತಾಯಿತೆಂದು ವ್ಯಾಖ್ಯಾನ ಮಾಡುತ್ತಿದ್ದಾರೆ 'अत्र ಅನುಕೂಲ್ಯೇನ' ಇತ್ಯಾದಿ ಟೀಕೆಯಿಂದ.

ಜ್ಞಾನಿಜನರಿಗೆ ನಿರುಪಾಧಿಕ ಇಷ್ಟನೇ ಇಲ್ಲಿ ಪ್ರತಿಪಾದ್ಯ

भावदीपः – भगवति ज्ञानिसुखे च साधारणस्येत्यन्वयः । सुखे तावदुक्तलिङ्गं प्रसिद्धमेव । अनुकूलवेदनीयत्वं सुखत्वमिति सर्वसिद्धत्वात्। भगवतोऽपि ज्ञानिनं प्रति 'प्रियो हि ज्ञानिनोऽत्यर्थमहम्' इत्युक्तनिरुपाधीष्टत्वात् ।

ಭಗವಂತನಲ್ಲಿ ಮತ್ತು ಜ್ಞಾನಿಸುಖದಲ್ಲಿ ಅನುಕೂಲ್ಯೇನ ಗೃಹ್ಯಮಾಣತ್ವವು ಸಾಧಾರಣವಾಗಿದೆ-ಯೆಂದು ಅನ್ವಯ ಮಾಡಿಕೊಳ್ಳಬೇಕು. ಸುಖದಲ್ಲಾದರೂ ಈ ಅನುಕೂಲ್ಯೇನ ಗೃಹ್ಯಮಾಣತ್ವವು ಪ್ರಸಿದ್ಧವೇ ಆಗಿದೆ. ಏಕೆಂದರೆ ಇದು ನನಗೆ ಇಷ್ಟ ಎಂಬ ತಿಳುವಳಿಕೆಯು ಸುಖದಲ್ಲಿರುವುದು ಸರ್ವಸಿದ್ಧವಾದ ವಿಚಾರ. ಇದರಂತೆ ಭಗವಂತನೂ ಕೂಡ 'ಪ್ರಿಯೋ ಹಿ ಜ್ಞಾನಿನೋऽತ್ಯರ್ಥಮಹಮ್ ಸಚ ಮಮ ಪ್ರಿಯಃ' ಎಂಬ ಗೀತೆಯ ವಾಣಿಯಂತೆ ಜ್ಞಾನಿಜನರಿಗೆ ನಿರುಪಾಧಿಕನಾಗಿ ಇಷ್ಟನೇ ಆಗಿದ್ದಾನೆ.

ಅನುಕೂಲವೇದನೀಯತ್ವವು ಉಭಯಸಾಕಾರ

भावदीपः – ज्ञानिनं प्रति स्वसुख इव भगवत्यपि तल्लिङ्गं सिद्धमिति भगवति ज्ञानिसुखे च साधारणस्येत्युक्तम् । परमात्मैवानिर्देश्यसुखरूप इति भाष्योक्तिसूचितं साधारण्यमाह – सुखशब्दवृत्त्येति ।।

ಜ್ಞಾನಿಜನರನ್ನು ಕುರಿತು ತಮ್ಮ ಸುಖದಲ್ಲಿ ಅನುಕೂಲವೇದನೀಯತ್ವವು ಹೇಗೆ ಇದೆಯೋ, ಅದರಂತೆ ಜ್ಞಾನಿಜನರಿಗೆ ಭಗವಂತನು ಅನುಕೂಲವೇದನೀಯನಾದ್ದರಿಂದ ಸ್ವಸುಖದಲ್ಲಿ ಮತ್ತು ಭಗವಂತನಲ್ಲಿ ಈ ಅನುಕೂಲವೇದನೀಯತ್ವ ಎಂಬ ಲಿಂಗವು ಸಾಧಾರಣವಾಗಿದೆಯೆಂದು ತಿಳಿಯಬೇಕು. 'ಪರಮಾತ್ಮೈವ ಅನಿರ್ದೇಶ್ಯಸುಖರೂಪಃ' ಪರಮಾತ್ಮನೇ ಅನಿರ್ದೇಶ್ಯಸುಖಸ್ವರೂಪ-ನಾಗಿದ್ದಾನೆಂಬ ಭಾಷ್ಯದ ಮಾತಿನಿಂದ ಸೂಚಿತವಾದ ಸಾಧಾರಣ್ಯವನ್ನು 'ಸುಖಶಬ್ದವೃತ್ತ್ಯಾ' ಎಂಬ ಟೀಕೆಯಿಂದ ಹೇಳುತ್ತಿದ್ದಾರೆ.

ಉಭಯತ್ರಪ್ರಸಿದ್ಧನೆನ್ನಲು ಕಾರಣ

भावदीपः – प्राक्तनचशब्दोऽत्राप्यन्वेति । 'परमं सुखम्' इत्युक्तसुखशब्दस्य 'तेषां सुखं शाश्वतम्' इति पूर्वत्र ज्ञानिसुखे 'यो वै भूमा तत्सुखम्' इति भगवति च प्रयोगेण चेत्यर्थः ।

ಹಿಂದಿರುವ 'ಚ'ಶಬ್ದವನ್ನು ಇಲ್ಲಿಯೂ ಅನ್ವಯ ಮಾಡಿಕೊಳ್ಳಬೇಕು. 'ಪರಮಂ ಸುಖಮ್' ಎಂಬಲ್ಲಿರುವ ಸುಖಶಬ್ದವು 'ತೇಷಾಂ ಸುಖಂ ಶಾಶ್ವತಮ್' ಎಂಬುದಾಗಿ ಹಿಂದೆ ಪ್ರಸಕ್ತವಾದ ಜ್ಞಾನಿ-ಸುಖದಲ್ಲಿ ಪ್ರಸಿದ್ಧವಾಗಿದೆ. ಮತ್ತು 'ಯೋ ವೈ ಭೂಮಾ ತತ್ಸುಖಮ್' ಎಂಬಲ್ಲಿ ಭಗವಂತನಲ್ಲಿಯೂ ಪ್ರಸಿದ್ಧವಾಗಿದೆ.

ಸಂಗತಿಪರ ಭಾಷ್ಯಕ್ಕೆ ವ್ಯಾಖ್ಯಾನ

ಭಾವದೀಪಃ – ಭಾಷ್ಯಂ ಸಙ್ಗತಿಪರತ್ವೇನ ತಾವದ್ ವ್ಯಾಚಷ್ಟೇ – **ಪೂರ್ವಮಿತಿ** ।। ಅದೃಶ್ಯತ್ವನಯೇ ।। **ತೇಷಾಮದೃಶ್ಯತ್ವಾಜ್ಞೇಯತ್ವೇ ಇತಿ** ।। ತೇಷಾಂ ಮಧ್ಯೇ ಅದ್ರೇಶ್ಯಾಗ್ರಾಹ್ಯಪದೋಕ್ತೇ ಇತ್ಯರ್ಥಃ ।

ಭಾಷ್ಯವನ್ನು ಸಂಗತಿಪರವಾಗಿ ವ್ಯಾಖ್ಯಾನ ಮಾಡುತ್ತಿದ್ದಾರೆ 'ಪೂರ್ವಮ್' ಇತ್ಯಾದಿ ಟೀಕೆಯಿಂದ. 'ಪೂರ್ವಮ್' ಎಂದರೆ ಅದೃಶ್ಯತ್ವಾಧಿಕರಣದಲ್ಲಿ ಎಂದರ್ಥ. 'ತೇಷಾಮದೃಶ್ಯತ್ವಾಜ್ಜ್ಞೇಯತ್ವೇ' ಎಂದರೆ ಅವುಗಳ ಮಧ್ಯದಲ್ಲಿ ಅದ್ರೇಶ್ಯ ಮತ್ತು ಅಗ್ರಾಹ್ಯಪದಗಳಿಂದ ಹೇಳಲ್ಪಟ್ಟ ಎಂದರ್ಥ.

ಪೂರ್ವಪಕ್ಷದ ಸಮರ್ಥನೆ

ಭಾವದೀಪಃ – ಜ್ಞಾನಿಸುಖಸ್ಯೋಚ್ಯತ ಇತ್ಯಸ್ಯಾರ್ಥಃ – **ಕಸ್ಯಚಿದಿತಿ** ।। ಕೇನೇತ್ಯತಃ ತದೇತದಿತಿ ಪೂರ್ವಭಾಷ್ಯಮಿತಿ ಮತ್ವಾऽಹ – **ತದೇತದಿತಿ** ।। ಭಾಷ್ಯೇ ಪರ್ವಪಕ್ಷಯುಕ್ತಿ-ಸೂಚನಾಯ ಏಕದೇಶಮಾತ್ರೋಕ್ತಾವಪಿ ಆದಿಪದೋಪಾತ್ತಲಿಙ್ಗಾರ್ಪಕಾಂಶಮಾಹ – **ಕಥನ್ನು ತದಿತಿ** ।। ಪೂರ್ವಾರ್ಧೇನಾನಿರ್ದೇಶ್ಯತ್ವಸ್ಯ ಉತ್ತರಾರ್ಧೇನ ನ ಭಾತೀತ್ಯಜ್ಞೇಯತ್ವಸ್ಯ ಚೋಕ್ತೇರಿತಿ ಭಾವಃ ।

'ಜ್ಞಾನಿಸುಖಸ್ಯೋಚ್ಯತೇ' ಎಂಬುದರ ಅರ್ಥವನ್ನು 'ಕಸ್ಯಚಿತ್' ಇತ್ಯಾದಿಯಾಗಿ ಹೇಳುತ್ತಿದ್ದಾರೆ. ಎಲ್ಲಿ ಹೇಳಿದ್ದಾರೆ? ಎಂಬ ಪ್ರಶ್ನೆಗೆ 'ತದೇತತ್' ಎಂಬ ಪೂರ್ವಭಾಷ್ಯವನ್ನು ಉಲ್ಲೇಖ ಮಾಡಿ ವ್ಯಾಖ್ಯಾನ ಮಾಡುತ್ತಿದ್ದಾರೆ 'ತದೇತತ್' ಇತ್ಯಾದಿಯಾಗಿ. ಭಾಷ್ಯದಲ್ಲಿ ಪೂರ್ವಪಕ್ಷಯುಕ್ತಿಯನ್ನು ಸೂಚನೆ ಮಾಡುವುದಕ್ಕಾಗಿ ಶ್ರುತಿಯ ಏಕದೇಶವನ್ನಷ್ಟೇ ಹೇಳಿದ್ದರೂ ಆದಿಪದದಿಂದ ತಿಳಿಯಲ್ಪಟ್ಟ ಲಿಂಗವನ್ನು ತಿಳಿಸುವಂತಹ ಉಳಿದ ಶ್ರುತಿಯನ್ನು ಉಲ್ಲೇಖ ಮಾಡುತ್ತಿದ್ದಾರೆ 'ಕಥಂನು ತತ್' ಇತ್ಯಾದಿಯಾಗಿ. ಪೂರ್ವಾರ್ಧದಿಂದ ಅನಿರ್ದೇಶ್ಯತ್ವವು ಉತ್ತರಾರ್ಧದಿಂದ 'ನ ಭಾತಿ' ಎಂಬುದಾಗಿ ಅಜ್ಞೇಯತ್ವವು ಶ್ರುತಿಯಲ್ಲಿ ಹೇಳಿದೆಯೆಂದು ಅಭಿಪ್ರಾಯ.

ನ್ಯಾಯವಿವರಣದಿಂದ ವಿರೋಧ ಪರಿಹಾರ

ಭಾವದೀಪಃ – ಅತ್ರ ಭಾಷ್ಯೇ ಪರಮಾತ್ಮೈವಾನಿರ್ದೇಶ್ಯಸುಖರೂಪ ಇತ್ಯುಕ್ತ್ಯಾऽನುಕೂಲ್ಯೇನ ಗೃಹ್ಯಮಾಣತ್ವಂ ಸುಖತ್ವರೂಪಲಿಙ್ಗಮಿತಿ ಭಾತಿ । ತಥಾತ್ವೇ ನ್ಯಾಯವಿವರಣೇ 'ಕಥಂ ನು

तद् विजानीयाम्' इत्यानुकूल्येन ग्रहणमित्युक्तिर्न युक्ता । तद्वाक्ये सुखत्वलिङ्गाप्रतीतेरित्यतो लिङ्गस्वरूपं विविच्याऽह – आनुकूल्येनेति ।।

ಭಾಷ್ಯದಲ್ಲಿ ಪರಮಾತ್ಮನು ಅನಿರ್ದೇಶ್ಯಸುಖರೂಪನೆಂದು ಹೇಳಿದ್ದರಿಂದ ಅನುಕೂಲ್ಯೇನ ಗೃಹ್ಯಮಾಣತ್ವವು ಸುಖತ್ವರೂಪವಾದ ಲಿಂಗವೆಂದೆನಿಸುತ್ತದೆ. ಹಾಗಾದಲ್ಲಿ ನ್ಯಾಯವಿವರಣದಲ್ಲಿ ಹೇಳಲ್ಪಟ್ಟ 'ಕಥಂ ನು ತದ್ವಿಜಾನೀಯಾಮ್' ಎಂಬ ಅನುಕೂಲ್ಯೇನ ಗ್ರಹಣವು ಯುಕ್ತವಾಗುವುದಿಲ್ಲ. ಏಕೆಂದರೆ ಈ ವಾಕ್ಯದಲ್ಲಿ ಸುಖತ್ವವೆಂಬ ಲಿಂಗ ಪ್ರತೀತವಾಗುತ್ತಿಲ್ಲವಲ್ಲವೇ? ಎಂಬ ಪ್ರಶ್ನೆಗೆ ಲಿಂಗ-ಸ್ವರೂಪವನ್ನೇ ಸ್ಪಷ್ಟಪಡಿಸುತ್ತಿದ್ದಾರೆ 'ಅನುಕೂಲ್ಯೇನ' ಇತ್ಯಾದಿ ಟೀಕೆಯಿಂದ.

ವಿಜಾನೀಯಾಮ್ ಎಂಬ ಲಿಙ್ ಪ್ರಯೋಗದ ಬಗ್ಗೆ

भावदीपः – 'विधिनिमन्त्रणामन्त्रणाधीष्टसम्प्रश्नप्रार्थनेषु लिङ्' इति स्मरणात् । विजानीयामिति लिङ्ज्ञानार्थं ज्ञेयस्य प्रार्थनाप्रतीतेरिति वा । कथं पुत्रं पश्येयम् आयाति न वेत्यत्र दर्शनार्थं पुत्रागमनप्रार्थनप्रतीतेरिव कथं न्विति वाक्ये ज्ञानार्थमाविर्भावरूपभानप्रार्थनप्रतीतेरिति वाऽभिप्रायः। सुखरूप इति भाष्यं तु फलितोक्तिपरमिति भावः ।

ಶ್ರುತಿಯಲ್ಲಿ ವಿಜಾನೀಯಾಮ್ ಎಂಬುದಾಗಿ ಲಿಙ್ಪ್ರಯೋಗವಿದೆ. 'ವಿಧಿನಿಮಂತ್ರಣಾ-ಮಂತ್ರಣಾಧೀಷ್ಟಸಂಪ್ರಶ್ನಪ್ರಾರ್ಥನೇಷು ಲಿಙ್' ಎಂಬ ಪಾಣಿನೀಸೂತ್ರದಂತೆ ಪ್ರಾರ್ಥನಾ ಎಂಬರ್ಥದಲ್ಲಿ 'ಲಿಙ್' ಪ್ರತ್ಯಯವನ್ನು ತಿಳಿಯಬೇಕು. ಅಥವಾ 'ವಿಜಾನೀಯಾಮ್' ಎಂಬ 'ಲಿಙ್' ಪ್ರತ್ಯಯದಿಂದ ಜ್ಞಾನಕ್ಕೋಸ್ಕರ ಜ್ಞೇಯವಸ್ತುವಿನ ಪ್ರಾರ್ಥನೆಯನ್ನೂ ಕೂಡ ತಿಳಿಯಬಹುದು. ನನ್ನ ಮಗನನ್ನು ಯಾವಾಗ ನೋಡುತ್ತೇನೆ, ಅವನು ಬರುತ್ತಾನೋ ಇಲ್ಲವೋ ಎಂಬುದಾಗಿ, ಮಗನ ದರ್ಶನಕ್ಕೋಸ್ಕರ ಅವನ ಆಗಮನದ ಪ್ರಾರ್ಥನೆಯು ಹೇಗೆ ವಿವಕ್ಷಿತವಾಗಿರುತ್ತದೋ, ಅದರಂತೆ 'ಕಥಂ ನು ತತ್' ಎಂಬ ವಾಕ್ಯದಲ್ಲಿ ಜ್ಞಾನಕ್ಕೋಸ್ಕರ ಆವಿರ್ಭಾವರೂಪವಾದ ಜ್ಞಾನದ ಪ್ರಾರ್ಥನೆಯು ಪ್ರತೀತವಾಗಿದೆಯೆಂದು ಅಭಿಪ್ರಾಯ. 'ಸುಖರೂಪಃ' ಎಂಬ ಭಾಷ್ಯವಾದರೂ ಫಲವನ್ನು ಹೇಳುವುದಕ್ಕಾಗಿ ಎಂದು ತಿಳಿಯಬೇಕು.

ವಿಶೇಷವಿಚಾರ - ಅನುಕೃತೇಸ್ತಸ್ಯ ಚ' ಎಂಬುದಾಗಿ ಅನುಕೃತ್ಯಧಿಕರಣವು ಪ್ರಾರಂಭವಾಗುತ್ತಿದೆ. ಈ ಅಧಿಕರಣದ ಅನುವ್ಯಾಖ್ಯಾನದಲ್ಲಿ 'ಅನುಗ್ರಹ' ಎಂಬ ಲಿಂಗದ

ಸಮನ್ವಯವು ಉದ್ದೇಶಿತವಾಗಿದೆಯೆಂದು ಹೇಳಲಾಗಿದೆ. ನ್ಯಾಯವಿವರಣದಲ್ಲಿ 'ಅನುಗ್ರಹ' ಶಬ್ದಕ್ಕೆ 'ಆನುಕೂಲ್ಯೇನ ಗೃಹ್ಯಮಾಣತ್ವಂ' ಎಂದರ್ಥ ಎಂಬುದಾಗಿ ಅನುವ್ಯಾಖ್ಯಾನದ ಮಾತನ್ನು ವಿವರಿಸಲಾಗಿದೆ.

ನ್ಯಾಯವಿವರಣದ ಈ ಮಾತನ್ನು 'ಕಥಂ ನು ತದ್ವಿಜಾನೀಯಾಮಿತಿ ಜ್ಞಾನಾರ್ಥಂ ಪ್ರಾರ್ಥಿತತ್ವಮ್' ಎಂಬುದಾಗಿ ಟೀಕೆಯಲ್ಲಿ 'ಜ್ಞಾನಾರ್ಥಂ ಪ್ರಾರ್ಥಿತತ್ವಮ್' ಎಂಬುದಾಗಿ ವಿವರಿಸಿದ್ದಾರೆ.

ಟೀಕಾ ಮಾತಿನ ಅಭಿಪ್ರಾಯ ಹೀಗಿದೆ - 'ವಿಜಾನೀಯಾಮ್' ಎಂಬಲ್ಲಿ 'ಲಿಜ್' ಲಕಾರವು ಶ್ರುತವಾಗಿದೆ. ಈ 'ಲಿಜ್' ಲಕಾರದಿಂದ ಜ್ಞಾನಕ್ಕೋಸ್ಕರ ಜ್ಞೇಯವಾದ ವಸ್ತುವನ್ನು ಪ್ರಾರ್ಥನೆ ಮಾಡುವಂತಹ ಬುದ್ಧಿ ಎಂಬರ್ಥವು ತಿಳಿಯುತ್ತದೆ. ಅಥವಾ 'ಕಥಂ ನು ಪುತ್ರಂ ಪಶ್ಯೇಯಂ; ಸ ಆಗಚ್ಛತಿ ವಾ ನವಾ' 'ಮಗನನ್ನು ಹೇಗೆ ಕಾಣಲಿ ? ಅವನು ಬರುತ್ತಾನೋ ಇಲ್ಲವೋ? ಎಂದು ಹೇಳಿದಾಗ ಮಗನ ಆಗಮನವೇ ಮುಖ್ಯವಲ್ಲ. ಅವನ ದರ್ಶನವೂ ಮುಖ್ಯವಾಗಿದೆ. ಅದರಂತೆ ಪ್ರಕೃತದಲ್ಲಿ 'ಕಥಂ ನು ತದ್ವಿಜಾನೀಯಾಮ್' ಇತ್ಯಾದಿ ವಾಕ್ಯದಲ್ಲಿ ಭಗವಂತನ ಜ್ಞಾನಕ್ಕೋಸ್ಕರ ಜ್ಞಾನಿಯಾದವನು ಆವಿರ್ಭಾವರೂಪ ಜ್ಞಾನದ ಪ್ರಾರ್ಥನೆಯನ್ನು ಮಾಡುತ್ತಿದ್ದಾನೆ. ಈ ಪ್ರಾರ್ಥನಾ ಬುದ್ಧಿಯೇ ಆನುಕೂಲ್ಯೇನ ಗೃಹ್ಯಮಾಣವೆನಿಸುತ್ತದೆಂದು ತಿಳಿಯಬೇಕು.

ಹೀಗೆ ಈ ಅಧಿಕರಣದಲ್ಲಿ 'ಆನುಕೂಲ್ಯೇನ ಗೃಹ್ಯಮಾಣತ್ವ' ಎಂಬ ಲಿಂಗದ ಸಮನ್ವಯವನ್ನು ಮಾಡುತ್ತಿದ್ದಾರೆಂದು ಹೇಳಲಾಯಿತು. ಆದರೆ ಇದೇ ಅಧಿಕರಣದ ಸಿದ್ಧಾಂತ ಭಾಷ್ಯದಲ್ಲಿ 'ಪರಮಾತ್ಮೈವಾನಿರ್ದೇಶ್ಯಸುಖರೂಪಃ' ಎಂದು ಪರಮಾತ್ಮನೇ ಅನಿರ್ದೇಶ್ಯಸುಖರೂಪನಾಗಿದ್ದಾನೆಂದು, ಅನಿರ್ದೇಶ್ಯಸುಖರೂಪತ್ವವನ್ನು ಈ ಅಧಿಕರಣದಲ್ಲಿ ಸಮನ್ವಯ ಮಾಡಲಾಗಿದೆಯೆಂದು ಹೇಳಿದಂತೆ ಕಾಣಿಸುತ್ತಿದೆ. ಆದರೆ ಕೇವಲ ಈ ವಾಕ್ಯವು ಅಧಿಕರಣದ ಫಲವನ್ನಷ್ಟೇ ಹೇಳಲು ಹೊರಟಿದೆ ಹೊರತು, ಅಧಿಕರಣದ ಲಿಂಗವನ್ನು ಹೇಳುವುದಕ್ಕಾಗಲ್ಲ. ಆದ್ದರಿಂದ ಆನುಕೂಲ್ಯೇನ ಗೃಹ್ಯಮಾಣತ್ವಲಿಂಗದ ಸಮನ್ವಯವೇ ಈ ಅಧಿಕರಣದ ಉದ್ದೇಶ.

ಕೆಲವರು 'ಪರಮಾತ್ಮೈವಾನಿರ್ದೇಶ್ಯಸುಖರೂಪಮ್' ಎಂಬ ಭಾಷ್ಯಕ್ಕೆ ಅನುಸಾರಿಯಾಗಿ ನ್ಯಾಯವಿವರಣದ ಮಾತನ್ನು ಅರ್ಥೈಸುತ್ತಾರೆ. ಅಂದರೆ ಆನುಕೂಲ್ಯೇನ ಗೃಹ್ಯಮಾಣತ್ವವು ಸುಖಸ್ವರೂಪವಾಗಿದೆ. ಇಂತಹ ಸುಖತ್ವವು ಜ್ಞಾನಿಗಳ ಸುಖ ಮತ್ತು ಪರಮಾತ್ಮ ಇಬ್ಬರಲ್ಲಿಯೂ ಸಾಧಾರಣವಾಗಿದೆಯೆಂದು ಹೇಳುತ್ತಾರೆ.

ಪ್ರಕೃತ 'ಕಥಂ ನು ತದ್ವಿಜಾನೀಯಾಮ್' ಎಂಬುದು ಜ್ಞಾನಿಗಳ ಪ್ರಾರ್ಥನೆಯಾಗಿದೆ. ಈ ಪ್ರಾರ್ಥನೆಯು ತಮ್ಮ ಸುಖವು ಜ್ಞಾನಿಗಳಿಗೆ ಹೇಗೆ ಪ್ರಿಯವಾಗಿದೆಯೋ ಅದರಂತೆ ಪರಮಾತ್ಮನೂ ಕೂಡ ಅವರಿಗೆ ಪ್ರಿಯನಾಗಿದ್ದಾನೆ. ಆದ್ದರಿಂದ ಜ್ಞಾನಿಗಳ ಪ್ರಾರ್ಥನಾವಿಷಯತ್ವವು ಜ್ಞಾನಿಗಳ ಸುಖ ಮತ್ತು ಪರಮಾತ್ಮ ಇಬ್ಬರಲ್ಲಿಯೂ ಸಾಧಾರಣವಾಗುತ್ತದೆ. ಅಥವಾ 'ಪರಮಂ ಸುಖಮ್' ಎಂಬ ಶ್ರುತಿಯಲ್ಲಿ ಸುಖಶಬ್ದದ ಸಮಭಿವ್ಯಾಹಾರವಿರುವುದರಿಂದ; ಈ ಸುಖವು ಇಬ್ಬರಲ್ಲಿಯೂ ಸಾಧಾರಣವಾಗಿರುವುದರಿಂದ ಉಭಯತ್ರಪ್ರಸಿದ್ಧವೆಂದು ತಿಳಿಯಬೇಕು.

ಆದ್ದರಿಂದ ಆನುಕೂಲ್ಯೇನ ಗೃಹ್ಯಮಾಣತ್ವ ಎಂಬ ಲಿಂಗವು ಪರಮಾತ್ಮ ಹಾಗೂ ಜ್ಞಾನಿಸುಖ ಎರಡರಲ್ಲಿಯೂ ಸಾಧಾರಣವಾಗಿದೆಯೆಂದು ಅಭಿಪ್ರಾಯ. ಈ ಅಧಿಕರಣದಲ್ಲಿ ಹಿಂದಿನ ಅಧಿಕರಣದ ಸಿದ್ಧಾಂತ ನ್ಯಾಯವನ್ನೇ ಅವಲಂಬಿಸಿ ಪೂರ್ವಪಕ್ಷ ಮಾಡುತ್ತಿರುವುದರಿಂದ ಆಪವಾದಿಕೀ ಸಂಗತಿಯನ್ನು, ಹಾಗೂ ಪೂರ್ವಾಧಿಕರಣದ ವೈಷಮ್ಯಪ್ರದರ್ಶನದ ಮೂಲಕವಾಗಿ ಪೂರ್ವಪಕ್ಷ ಮಾಡುತ್ತಿರುವುದರಿಂದ ಪ್ರತ್ಯುದಾಹರಣ ರೂಪವಾದ ಸಂಗತಿಯನ್ನೂ ತಿಳಿಯಬೇಕು. ಹೀಗೆ ಪೂರ್ವಾಧಿಕರಣ ಆನಂತರ್ಯ ಸಂಗತಿ ಇರುತ್ತದೆ.

ಅನಿರ್ದೇಶ್ಯತ್ವ ಹಾಗೂ ಅಜ್ಞೇಯತ್ವಗಳು ಜ್ಞಾನಿಸುಖದಲ್ಲಿ ಹೇಳಲ್ಪಟ್ಟಿದೆ

भावदीपः – तेषां सुखमित्यादेर्भावमाह – तस्य चेति ।। प्रकृतज्ञानिसुखवाचिसुखश्रुत्या ज्ञानिसुखनिष्ठत्व इत्यर्थः । ज्ञानिसुखस्या-निर्देश्यत्वमज्ञेयत्वं चोच्यत इत्यस्य भावमाह – अनिर्देश्यत्वमिति ।।

'तेषाम् सुखम्' ಇತ್ಯಾದಿ ವಾಕ್ಯದ ಅಭಿಪ್ರಾಯವನ್ನು 'तस्य च' ಇತ್ಯಾದಿ ಟೀಕೆಯಿಂದ ಸ್ಪಷ್ಟಪಡಿಸುತ್ತಿದ್ದಾರೆ. ಜ್ಞಾನಿಸುಖವನ್ನು ಪ್ರತಿಪಾದನೆ ಮಾಡುವ ಸುಖಶ್ರುತಿಯಿಂದ, ಪ್ರಕೃತ ಜ್ಞಾನಿಸುಖ ಪ್ರತಿಪಾದಕವಾದ ಶ್ರುತಿಯು ಜ್ಞಾನಿಸುಖವನ್ನೇ ಪ್ರತಿಪಾದನೆ ಮಾಡುವುದಾದರೆ ಎಂದರ್ಥ. ಜ್ಞಾನಿಸುಖಕ್ಕೆ ಅನಿರ್ದೇಶ್ಯತ್ವ ಹಾಗೂ ಅಜ್ಞೇಯತ್ವಗಳು ಹೇಳಲ್ಪಟ್ಟಿವೆ ಎಂಬುದರ ಅಭಿಪ್ರಾಯವನ್ನು 'अनिर्देश्यत्वम्' ಎಂಬುದರಿಂದ ಸ್ಪಷ್ಟಪಡಿಸಿದ್ದಾರೆ.

ಆನುಕೂಲ್ಯೇನ ಗೃಹಮಾಣಸ್ಯ ಎಂಬುದನ್ನು ಅನುಷಂಗ ಮಾಡಬೇಕು

भावदीपः – प्राग् विष्णुधर्मतयोक्तमिति योज्यम् । इत्यवश्येत्युक्तार्थम्। निर्णेतव्यत्वम् । आनुकूल्येन गृह्यमाणस्येत्यनुषङ्गः । पूर्वपक्षादिपरत्वेनापि

व्याकुर्वन् ज्ञानिसुखस्येत्येतत्प्रतिज्ञापरत्वेन व्याचष्टे – ज्ञानिसुखस्यै-तल्लिङ्गमिति ।।

'ಹಿಂದೆ ವಿಷ್ಣುವಿನ ಧರ್ಮವೆಂದು ಹೇಳಲ್ಪಟ್ಟ' ಎಂಬುದನ್ನು ಯೋಜನೆ ಮಾಡಿಕೊಂಡು 'ಅನಿರ್ದೇಶ್ಯತ್ವಮ್' ಎಂಬುದರ ಅರ್ಥವನ್ನು ತಿಳಿಯಬೇಕು. 'ಇತ್ಯವಶ್ಯಂ' ಎಂಬುದು ಹಿಂದೆ ಹೇಳಿದ್ದರ ಸಮರ್ಥನೆಗಾಗಿ. 'ನಿರ್ದೇತವ್ಯತ್ವಮ್' ಎಂಬಲ್ಲಿ 'ಅನುಕೂಲ್ಯೇನ ಗೃಹ್ಯಮಾಣಸ್ಯ' ಎಂಬುದನ್ನು ಅನುಷಂಗ ಮಾಡಿಕೊಳ್ಳಬೇಕು. ಪೂರ್ವಪಕ್ಷಾದಿಪರವಾಗಿ ವ್ಯಾಖ್ಯಾನ ಮಾಡುತ್ತಾ 'ಜ್ಞಾನಿಸುಖಸ್ಯ' ಎಂಬುದು ಪ್ರತಿಜ್ಞಾರೂಪವಾಗಿದೆಯೆಂದು ಸಮರ್ಥಿಸುತ್ತಿದ್ದಾರೆ 'ಜ್ಞಾನಿಸುಖಸ್ಯ' ಇತ್ಯಾದಿ ಟೀಕೆಯಿಂದ.

'कथं नु तत्' ಎಂಬಲ್ಲಿ ತತ್ ಶಬ್ದದಿಂದ ಪರಾಮರ್ಶಿಸಬೇಕು

भावदीपः – 'कथं नु तद्' इति वाक्योक्तमानुकूल्येन गृह्यमाणत्वरूपमित्यर्थः । अनिर्देश्यमित्यादिपूर्वभाष्यलब्धं हेतुमाह – परमं सुखमितीति ।। तस्यैव च कथं नु तदिति तच्छब्देन परामर्शादिति भावः ।

'कथं नु तत्' ಎಂಬ ವಾಕ್ಯದಲ್ಲಿ ಅನುಕೂಲ್ಯೇನ ಗೃಹ್ಯಮಾಣತ್ವವೆಂಬ ಲಿಂಗವು ಹೇಳಲ್ಪಟ್ಟಿದೆ ಎಂದರ್ಥ. 'ಅನಿರ್ದೇಶ್ಯಮ್' ಇತ್ಯಾದಿ ಹಿಂದಿನ ಭಾಷ್ಯದಿಂದ ಲಬ್ಧವಾದ ಹೇತುವನ್ನು 'ಪರಮಂ ಸುಖಮ್' ಎಂದು ಹೇಳಿದ್ದಾರೆ. ಅಂತಹ ಜ್ಞಾನಿಸುಖವನ್ನೇ 'कथं नु तत्' ಎಂಬ 'तत्' ಶಬ್ದದಿಂದ ಪರಾಮರ್ಶಿಸಬೇಕೆಂದು ಅಭಿಪ್ರಾಯ.

ಜ್ಞಾನಿಸುಖದ ಗ್ರಹಣವೇ ಇಲ್ಲಿ ವಿವಕ್ಷಿತ

भावदीपः – 'तदेतदिति मन्यन्ते कथं नु तद् विजानीयाम्' इति 'तेषां सुखं शाश्वतम्' इत्युक्तज्ञानिसुखग्रहणमिति विपरीतश्रुतिभ्रम इत्यन्यत्रोक्तरीत्या सुखश्रुतेर्निरवकाशत्वाय तद्विशेषणभूततदादिसर्वनामश्रुतेर्निरवकाशत्वोक्ति-परतया तेषामित्यादिभाष्यं शङ्कापूर्वं व्याचष्टे – नचेति ।।

ಪ್ರಕೃತ 'ಕಥಂ ನು ತದ್ವಿಜಾನೀಯಾಮ್' ಎಂಬುದು ಜ್ಞಾನಿಗಳ ಪ್ರಾರ್ಥನೆಯಾಗಿದೆ. ಈ ಪ್ರಾರ್ಥನೆಯು ತಮ್ಮ ಸುಖವು ಜ್ಞಾನಿಗಳಿಗೆ ಹೇಗೆ ಪ್ರಿಯವಾಗಿದೆಯೋ ಅದರಂತೆ ಪರಮಾತ್ಮನೂ ಕೂಡ ಅವರಿಗೆ ಪ್ರಿಯನಾಗಿದ್ದಾನೆ. ಆದ್ದರಿಂದ ಜ್ಞಾನಿಗಳ ಪ್ರಾರ್ಥನಾವಿಷಯತ್ವವು ಜ್ಞಾನಿಗಳ ಸುಖ ಮತ್ತು ಪರಮಾತ್ಮ ಇಬ್ಬರಲ್ಲಿಯೂ ಸಾಧಾರಣವಾಗುತ್ತದೆ. ಅಥವಾ 'ಪರಮಂ ಸುಖಮ್' ಎಂಬ ಶ್ರುತಿಯಲ್ಲಿ ಸುಖಶಬ್ದದ ಸಮಭಿವ್ಯಾಹಾರವಿರುವುದರಿಂದ; ಈ ಸುಖವು ಇಬ್ಬರಲ್ಲಿಯೂ ಸಾಧಾರಣವಾಗಿರುವುದರಿಂದ ಉಭಯತ್ರಪ್ರಸಿದ್ಧವೆಂದು ತಿಳಿಯಬೇಕು.

ಆದ್ದರಿಂದ ಅನುಕೂಲ್ಯೇನ ಗೃಹ್ಯಮಾಣತ್ವ ಎಂಬ ಲಿಂಗವು ಪರಮಾತ್ಮ ಹಾಗೂ ಜ್ಞಾನಿಸುಖ ಎರಡರಲ್ಲಿಯೂ ಸಾಧಾರಣವಾಗಿದೆಯೆಂದು ಅಭಿಪ್ರಾಯ. ಈ ಅಧಿಕರಣದಲ್ಲಿ ಹಿಂದಿನ ಅಧಿಕರಣದ ಸಿದ್ಧಾಂತ ನ್ಯಾಯವನ್ನೇ ಅವಲಂಬಿಸಿ ಪೂರ್ವಪಕ್ಷ ಮಾಡುತ್ತಿರುವುದರಿಂದ ಆಪವಾದಿಕೀ ಸಂಗತಿಯನ್ನು, ಹಾಗೂ ಪೂರ್ವಾಧಿಕರಣದ ವೈಷಮ್ಯಪ್ರದರ್ಶನದ ಮೂಲಕವಾಗಿ ಪೂರ್ವಪಕ್ಷ ಮಾಡುತ್ತಿರುವುದರಿಂದ ಪ್ರತ್ಯುದಾಹರಣ ರೂಪವಾದ ಸಂಗತಿಯನ್ನೂ ತಿಳಿಯಬೇಕು. ಹೀಗೆ ಪೂರ್ವಾಧಿಕರಣ ಆನಂತರ್ಯ ಸಂಗತಿ ಇರುತ್ತದೆ.

ಅನಿರ್ದೇಶ್ಯತ್ವ ಹಾಗೂ ಅಜ್ಞೇಯತ್ವಗಳು ಜ್ಞಾನಿಸುಖದಲ್ಲಿ ಹೇಳಲ್ಪಟ್ಟಿದೆ

भावदीपः – तेषां सुखमित्यादेर्भावमाह – तस्य चेति ।। प्रकृतज्ञानिसुखवाचिसुखश्रुत्या ज्ञानिसुखनिष्ठत्व इत्यर्थः । ज्ञानिसुखस्या-निर्देश्यत्वमज्ञेयत्वं चोच्यत इत्यस्य भावमाह – अनिर्देश्यत्वमिति ।।

'तेषाम् सुखम्' ಇತ್ಯಾದಿ ವಾಕ್ಯದ ಅಭಿಪ್ರಾಯವನ್ನು 'तस्य च' ಇತ್ಯಾದಿ ಟೀಕೆಯಿಂದ ಸ್ಪಷ್ಟಪಡಿಸುತ್ತಿದ್ದಾರೆ. ಜ್ಞಾನಿಸುಖವನ್ನು ಪ್ರತಿಪಾದನೆ ಮಾಡುವ ಸುಖಶ್ರುತಿಯಿಂದ, ಪ್ರಕೃತ ಜ್ಞಾನಿಸುಖ ಪ್ರತಿಪಾದಕವಾದ ಶ್ರುತಿಯು ಜ್ಞಾನಿಸುಖವನ್ನೇ ಪ್ರತಿಪಾದನೆ ಮಾಡುವುದಾದರೆ ಎಂದರ್ಥ. ಜ್ಞಾನಿಸುಖಕ್ಕೆ ಅನಿರ್ದೇಶ್ಯತ್ವ ಹಾಗೂ ಅಜ್ಞೇಯತ್ವಗಳು ಹೇಳಲ್ಪಟ್ಟಿವೆ ಎಂಬುದರ ಅಭಿಪ್ರಾಯವನ್ನು 'ಅನಿರ್ದೇಶ್ಯತ್ವಮ್' ಎಂಬುದರಿಂದ ಸ್ಪಷ್ಟಪಡಿಸಿದ್ದಾರೆ.

ಅನುಕೂಲ್ಯೇನ ಗೃಹಮಾಣಸ್ಯ ಎಂಬುದನ್ನು ಅನುಷಂಗ ಮಾಡಬೇಕು

भावदीपः – प्राग् विष्णुधर्मतयोक्तमिति योज्यम् । इत्यवश्येत्युक्तार्थम्। निर्णेतव्यत्वम् । आनुकूल्येन गृह्यमाणस्येत्यनुषङ्गः । पूर्वपक्षादिपरत्वेनापि

व्याकुर्वन् ज्ञानिसुखस्येत्येतत्प्रतिज्ञापरत्वेन व्याचष्टे – ज्ञानिसुखस्यै-तल्लिङ्गमिति ।।

'ಹಿಂದೆ ವಿಷ್ಣುವಿನ ಧರ್ಮವೆಂದು ಹೇಳಲ್ಪಟ್ಟ' ಎಂಬುದನ್ನು ಯೋಜನೆ ಮಾಡಿಕೊಂಡು 'ಅನಿರ್ದೇಶ್ಯತ್ವಮ್' ಎಂಬುದರ ಅರ್ಥವನ್ನು ತಿಳಿಯಬೇಕು. 'ಇತ್ಯವಶ್ಯಂ' ಎಂಬುದು ಹಿಂದೆ ಹೇಳಿದ್ದರ ಸಮರ್ಥನೆಗಾಗಿ. 'ನಿರ್ಜ್ಞೇತವ್ಯತ್ವಮ್' ಎಂಬಲ್ಲಿ 'ಅನುಕೂಲ್ಯೇನ ಗೃಹ್ಯಮಾಣಸ್ಯ' ಎಂಬುದನ್ನು ಅನುಷಂಗ ಮಾಡಿಕೊಳ್ಳಬೇಕು. ಪೂರ್ವಪಕ್ಷಾದಿಪರವಾಗಿ ವ್ಯಾಖ್ಯಾನ ಮಾಡುತ್ತಾ 'ಜ್ಞಾನಿಸುಖಸ್ಯ' ಎಂಬುದು ಪ್ರತಿಜ್ಞಾರೂಪವಾಗಿದೆಯೆಂದು ಸಮರ್ಥಿಸುತ್ತಿದ್ದಾರೆ 'ಜ್ಞಾನಿಸುಖಸ್ಯ' ಇತ್ಯಾದಿ ಟೀಕೆಯಿಂದ.

'ಕಥಂ ನು ತತ್' ಎಂಬಲ್ಲಿ ತತ್ ಶಬ್ದದಿಂದ ಪರಾಮರ್ಶಿಸಬೇಕು

भावदीपः – 'कथं नु तद्' इति वाक्योक्तमानुकूल्येन गृह्यमाणत्वरूपमित्यर्थः । अनिर्देश्यमित्यादिपूर्वभाष्यलब्धं हेतुमाह – परमं सुखमितीति ।। तस्यैव च कथं नु तदिति तच्छब्देन परामर्शादिति भावः ।

'ಕಥಂ ನು ತತ್' ಎಂಬ ವಾಕ್ಯದಲ್ಲಿ ಅನುಕೂಲ್ಯೇನ ಗೃಹ್ಯಮಾಣತ್ವವೆಂಬ ಲಿಂಗವು ಹೇಳಲ್ಪಟ್ಟಿದೆ ಎಂದರ್ಥ. 'ಅನಿರ್ದೇಶ್ಯಮ್' ಇತ್ಯಾದಿ ಹಿಂದಿನ ಭಾಷ್ಯದಿಂದ ಲಬ್ಧವಾದ ಹೇತುವನ್ನು 'ಪರಮಂ ಸುಖಮ್' ಎಂದು ಹೇಳಿದ್ದಾರೆ. ಅಂತಹ ಜ್ಞಾನಿಸುಖವನ್ನೇ 'ಕಥಂ ನು ತತ್' ಎಂಬ 'ತತ್' ಶಬ್ದದಿಂದ ಪರಾಮರ್ಶಿಸಬೇಕೆಂದು ಅಭಿಪ್ರಾಯ.

ಜ್ಞಾನಿಸುಖದ ಗ್ರಹಣವೇ ಇಲ್ಲಿ ವಿವಕ್ಷಿತ

भावदीपः – 'तदेतदिति मन्यन्ते कथं नु तद् विजानीयाम्' इति 'तेषां सुखं शाश्वतम्' इत्युक्तज्ञानिसुखग्रहणमिति विपरीतश्रुतिभ्रम इत्यन्यत्रोक्तरीत्या सुखश्रुतेर्निरवकाशत्वाय तद्विशेषणभूततदादिसर्वनामश्रुतेर्निरवकाशत्वोक्ति-परतया तेषामित्यादिभाष्यं शङ्कापूर्वं व्याचष्टे – नचेति ।।

'ತದೇತದಿತಿ ಮನ್ಯಂತೇ ಕಥಂ ನು ತದ್ ವಿಜಾನೀಯಾಮ್' 'ತೇಷಾಂ ಸುಖಂ ಶಾಶ್ವತಮ್' ಎಂಬಲ್ಲಿ ಜ್ಞಾನಿಸುಖದ ಗ್ರಹಣವು ವಿವಕ್ಷಿತವಾಗಿದೆ. 'ವಿಪರೀತಶ್ರುತಿಭ್ರಮಃ' ಎಂಬುದಾಗಿ ಬೇರೆ ಕಡೆ ಹೇಳಲ್ಪಟ್ಟ ಸುಖಶ್ರುತಿಗೆ ನಿರವಕಾಶತ್ವವನ್ನು ಸಮರ್ಥನೆ ಮಾಡುವುದಕ್ಕಾಗಿ, ಅದಕ್ಕೆ ವಿಶೇಷಣಭೂತವಾದ 'ತತ್' ಮೊದಲಾದ ಸರ್ವನಾಮಶ್ರುತಿಗಳಿಗೆ ನಿರವಕಾಶತ್ವವನ್ನು ಸಮರ್ಥನೆ ಮಾಡುವುದಕ್ಕಾಗಿ 'ತೇಷಾಮ್' ಇತ್ಯಾದಿ ಭಾಷ್ಯವನ್ನು ಶಂಕಾಪೂರ್ವಕವಾಗಿ ವ್ಯಾಖ್ಯಾನ ಮಾಡುತ್ತಿದ್ದಾರೆ 'ನಚ' ಇತ್ಯಾದಿ ಗ್ರಂಥದಿಂದ.

'ಭೂಮಾ ಸಂಪ್ರಸಾದಾತ್' ಇತ್ಯಾದಿ ಸ್ಥಳದಲ್ಲಿ ಹೇಳಿದಂತೆ ವಿವಕ್ಷಿಸಬೇಕು

भावदीपः – 'सुखविशिष्टा' इति सूत्रे 'लक्षणं परमानन्दः' इत्युक्तदिशा वा 'भूमा सम्प्रसादाद्' इत्यत्रोक्तदिशा 'यो वै भूमा तत्सुखम्' इत्युक्त्या वेति भावः ।

'ಸುಖವಿಶಿಷ್ಟ' ಇತ್ಯಾದಿ ಸೂತ್ರದಲ್ಲಿ 'ಲಕ್ಷಣಂ ಪರಮಾನಂದಃ' ಎಂಬುದಾಗಿ ಹೇಳಿದಂತೆ, ಅಥವಾ 'ಭೂಮಾ ಸಂಪ್ರಸಾದಾತ್' ಎಂಬಲ್ಲಿ ಹೇಳಿದಂತೆ, ಅಥವಾ 'ಯೋ ವೈ ಭೂಮಾ ತತ್‌ಸುಖಮ್' ಎಂಬಲ್ಲಿ ಹೇಳಿದಂತೆ ಎಂದು ತಿಳಿಯಬೇಕು.

'ತತ್' ಎಂಬ ಪ್ರಾತಿಪದಿಕ ಶ್ರುತಿಯು ಸಾವಕಾಶವಲ್ಲವೇ?

भावदीपः – तेषामिति तच्छब्दार्थसूचनाय एको वशीति त्रिपाद्युक्तिः । आत्मस्थं स्वस्थितम् । तदिति प्रातिपदिकश्रुतेः सावकाशत्वमाशङ्क्य नपुंसकलिङ्गेन तस्या निरवकाशत्वमाह – नचेति ।।

'ತೇಷಾಮ್' ಎಂಬಲ್ಲಿರುವ 'ತತ್' ಶಬ್ದದ ಅರ್ಥವನ್ನು ಸೂಚನೆ ಮಾಡುವುದಕ್ಕಾಗಿ 'ಏಕೋ ವಶೀ' ಎಂಬ ಉಳಿದ ಮೂರು ಪಾದಗಳನ್ನು ಹೇಳಿರುತ್ತಾರೆ. 'ಆತ್ಮಸ್ಥಂ' ಎಂದರೆ ತನ್ನಲ್ಲಿರುವ ಎಂದರ್ಥ. 'ತತ್' ಎಂಬ ಪ್ರಾತಿಪದಿಕಶ್ರುತಿಗೆ ಸಾವಕಾಶತ್ವವನ್ನು ಆಶಂಕೆ ಮಾಡಿ, ನಪುಂಸಕಲಿಂಗದಿಂದ ಅಂತಹ ಶ್ರುತಿಗೆ ನಿರವಕಾಶತ್ವವನ್ನು ಸಮರ್ಥಿಸುತ್ತಿದ್ದಾರೆ 'ನಚ' ಇತ್ಯಾದಿ ಗ್ರಂಥದಿಂದ.

ಯಾವುದು ಪ್ರಕೃತ ?

भावदीपः – तथाच तस्यैवेत्ययुक्तमिति भावः ।। **प्रकृतत्वादिति** ।। तत्रैवं मन्त्रे । 'एको वशी' इति प्रकृतत्वादित्यर्थः ।

ಆದ್ದರಿಂದಲೇ 'तस्यैव' ಇತ್ಯಾದಿಯಾಗಿ ಹೇಳಿದ್ದು ಅಯುಕ್ತವೆಂದು ತಿಳಿಯಬೇಕು. 'ಪ್ರಕೃತತ್ವಾತ್' ಎಂದರೆ ಅದೇ ಮಂತ್ರದಲ್ಲಿ 'ಏಕೋ ವಶೀ' ಎಂಬುದಾಗಿ ಪ್ರಕೃತವಾದ್ದರಿಂದ ಎಂದರ್ಥ.

'ಏಷ ಆತ್ಮಾ' ಎಂಬಲ್ಲಿರುವ ಏತತ್ ಶಬ್ದದಿಂದ ಮಾಡಬೇಕಾದ ಪರಾಮರ್ಶ

भावदीपः – ननु पूर्वत्र 'एष आत्मा' इत्यत्र एतच्छब्दस्य पूर्वोक्तज्योतिःपरत्वेऽपि विधेयात्मापेक्षया पुल्लिङ्गत्ववदिहापि विधेयसुखापेक्षया नपुंसकत्वमस्त्वित्या शङ्कानिरासायोक्तं तदित्यादीत्यादिपदम् । तदेतच्छब्दयोरेकस्य तथात्वेऽप्येकस्यो द्देशकत्वावश्यम्भावेन द्वयोर्नपुंसकत्व ायोगादित्यर्थः । अङ्गीकृत्य चेदमुदितम्। वस्तुतस्तु तदिति प्रातिपदिकश्रुतिरेव स्वतो निरवकाशेति भावेनाह – **सम्भवदिति** ।

ಹಿಂದೆ 'ಏಷ ಆತ್ಮಾ' ಎಂಬಲ್ಲಿರುವ 'ಏತತ್' ಶಬ್ದದಿಂದ ಪೂರ್ವೋಕ್ತವಾದ ಜ್ಯೋತಿಸ್ಸನ್ನು ಪರಾಮರ್ಶ ಮಾಡಿದರೂ ವಿಧೇಯವಾದ ಆತ್ಮಶಬ್ದದ ಅಪೇಕ್ಷೆಯಿಂದ ಪುಲ್ಲಿಂಗದಲ್ಲಿರುವಂತೆ ಇಲ್ಲಿಯೂ ಸಹ ವಿಧೇಯವಾದ ಸುಖದ ಅಪೇಕ್ಷೆಯಿಂದ ನಪುಂಸಕಲಿಂಗವನ್ನು ಹೇಳಬಹುದಲ್ಲವೇ? ಎಂಬ ಆಶಂಕೆಯನ್ನು ಪರಿಹಾರ ಮಾಡುವುದಕ್ಕಾಗಿ 'ತದಿತ್ಯಾದಿ' ಎಂಬಲ್ಲಿ ಆದಿಪದವನ್ನು ಹೇಳಿರುತ್ತಾರೆ. 'ತದೇತತ್' ಶಬ್ದಗಳಲ್ಲಿ ಒಂದಕ್ಕೆ ನಪುಂಸಕಲಿಂಗತ್ವವನ್ನು ಕೂಡಿಸಬಹುದಾದರೂ ಎರಡೂ ಪದಗಳಿಗೆ ನಪುಂಸಕಲಿಂಗವನ್ನು ಕೂಡಿಸಲು ಸಾಧ್ಯವಿಲ್ಲ. ಈ ವಿಷಯವನ್ನು ಅಂಗೀಕಾರ ಮಾಡಿ ಹೇಳಿದ್ದು, ವಾಸ್ತವಿಕವಾಗಿ 'ತತ್' ಇತ್ಯಾದಿ ಪ್ರಾತಿಪದಿಕಶ್ರುತಿಯೇ ಸ್ವತಃ ನಿರವಕಾಶವಾಗಿದೆ ಎಂಬ ಅಭಿಪ್ರಾಯದಿಂದ, 'ಸಂಭವಾತ್' ಇತ್ಯಾದಿ ಟೀಕೆಯೂ ಹೊರಟಿದೆ.

ವ್ಯವಹಿತವಾದ ಪುಂಡರೀಕವನ್ನೇಕೆ ಪರಾಮರ್ಶಿಸಿಲ್ಲ ?

भावदीपः – दूरस्थेति ।। ज्ञानिसुखेन व्यवहितेत्यर्थः । अन्यथा पूर्वत्रापि 'तस्मिन् यदन्तः' इत्यत्राप्याकाशपरामर्शित्वं तच्छब्दस्य न स्यात् । व्यवहितपुण्डरीकपरत्वमेव स्यादिति भावः ।।

'ದೂರಸ್ಥ' ಎಂದರೆ 'ಜ್ಞಾನಿಸುಖಕ್ಕಿಂತ ವ್ಯವಹಿತವಾದ' ಎಂದರ್ಥ. ಇಲ್ಲದ್ದಿದ್ದರೆ ಹಿಂದೆಯೂ ಸಹ 'ತಸ್ಮಿನ್ ಯದಂತಃ' ಎಂಬಲ್ಲಿಯೂ ತತ್‌ಶಬ್ದದಿಂದ ಆಕಾಶದ ಪರಾಮರ್ಶವು ತಪ್ಪಾಗಬೇಕಾದೀತು. ವ್ಯವಹಿತವಾದ ಪುಂಡರೀಕದ ಪರಾಮರ್ಶವನ್ನೇ ಮಾಡಬೇಕಾದೀತು.

'ಆಕಾಶಾ ಚ' ಎಂಬುದರಿಂದ ಭಾಷ್ಯದ ಯೋಜನೆ

ಭಾವದೀಪಃ – अत इति ।। सन्निहितपरामर्शिनपुंसकं तदेतत् श्रुति-समानाधिकृतसुखश्रुत्यनुरोधादित्यर्थः ।। अनिर्देश्यत्वादीति ।। काठके आथर्वणे च श्रुतमिति योज्यम् । भाष्ये परमात्मैवेत्यनन्तरम् आनुकूल्येन गृह्यमाण इति शेषं मत्वा भाष्यमाकाङ्क्षाक्रमेण व्याचष्टे – कथन्नु तदिति ।।

'ಅತಃ' ಎಂದರೆ ಸನ್ನಿಹಿತವಾದದ್ದನ್ನು ಪರಾಮರ್ಶಿಸುವ ನಪುಂಸಕಲಿಂಗದಲ್ಲಿರುವ 'ತದೇತತ್' ಎಂಬ ಪದಗಳು ಸಮಾನಾಧಿಕರಣದಲ್ಲಿರುವುದರಿಂದ, ಇಂತಹ ಶ್ರುತಿಗೆ ಅನುಸಾರಿಯಾಗಿ ಎಂದು 'ಅತಃ' ಪದದ ಅರ್ಥ. 'ಅನಿರ್ದೇಶ್ಯತ್ವಾದಿ' ಎಂದು ಟೀಕೆಯಲ್ಲಿದೆ. ಕಾಠಕದಲ್ಲಿ ಮತ್ತು ಆಥರ್ವಣದಲ್ಲಿ ಅನಿರ್ದೇಶ್ಯತ್ವವು ಶ್ರುತವಾಗಿದೆಯೆಂದು ಯೋಜನೆ ಮಾಡಿಕೊಳ್ಳಬೇಕು. ಭಾಷ್ಯದಲ್ಲಿ ಪರಮಾತ್ಮನೇ ಎಂಬುದರ ಅನಂತರ 'ಆನುಕೂಲ್ಯೇನ ಗೃಹ್ಯಮಾಣೇ' ಎಂಬುದನ್ನು ಶೇಷಪೂರಣ ಮಾಡಿಕೊಳ್ಳಬೇಕೆಂಬ ಅಭಿಪ್ರಾಯದಿಂದ ಭಾಷ್ಯವನ್ನು ಆಕಾಂಕ್ಷಾಕ್ರಮದಿಂದ ಯೋಜನೆ ಮಾಡುತ್ತಿದ್ದಾರೆ 'ಕಥನ್ನು ತತ್' ಇತ್ಯಾದಿಯಾಗಿ.

ಸುಖಶ್ರುತಿಯು ಸಾವಕಾಶ

ಭಾವದೀಪಃ – सुखरूप इत्यस्यार्थ इति भ्रमनिरासाय कथं न्विति वाक्योक्तिः। अनिर्देश्यसुखरूप इति भाष्यं प्रागुक्तसुखश्रुतेः सावकाशत्वोक्तिपरतया तात्पर्यतो व्याचष्टे – नचेति ।।

'ಸುಖರೂಪಃ' ಎಂಬುದರ ಅರ್ಥವೇ 'ಕಥಂ ನು ತತ್' ಎಂಬ ಭ್ರಮೆಯನ್ನು ನಿರಾಸ ಮಾಡುವುದಕ್ಕಾಗಿ 'ಕಥಂ ನು ತತ್' ಇತ್ಯಾದಿ ವಾಕ್ಯವನ್ನು ಹೇಳಿದ್ದಾರೆ. 'ಅನಿರ್ದೇಶ್ಯಸುಖರೂಪಃ' ಎಂಬ ಭಾಷ್ಯವು ಹಿಂದೆ ಹೇಳಲ್ಪಟ್ಟ ಸುಖಶ್ರುತಿಯ ಸಾವಕಾಶತ್ವ ಸಮರ್ಥನೆಗಾಗಿ ಹೊರಟಿದೆಯೆಂದು ವ್ಯಾಖ್ಯಾನ ಮಾಡುತ್ತಿದ್ದಾರೆ 'ನಚ' ಇತ್ಯಾದಿ ಟೀಕೆಯಿಂದ.

ಶಾಶ್ವತವಾದ ಸುಖ ಯಾರಿಂದ ?

भावदीपः – ननु तदेतत् श्रुतिसामानाधिकरण्यात्साऽपि निरवकाशेत्युक्तमिति शङ्कते – तेषामिति ।। नेति चेदिति ।। सुखश्रुतेर्विष्णुपरत्वं नेति चेदित्यर्थः। यज्ज्ञानाच्छाश्वतं सुखं स भगवान् यद् ब्रह्म अनिर्देश्यं सुखमिति वदन्ति तदेतत् स्वरूपमिति मन्यन्त इत्यन्यत्रोक्तं वाक्यमत्र व्याकुर्वन् तदुत्तरत्वेन भगवानित्यन्तस्य भावमाह – चेतन इति ।।

'ತದೇತತ್' ಎಂಬ ಶ್ರುತಿಯ ಸಾಮಾನಾಧಿಕರಣ್ಯದಿಂದ 'ಕಥಂ ನು ತತ್' ಎಂಬ ಶ್ರುತಿಯೂ ಸಹ ನಿರವಕಾಶವಾಗಿದೆಯಲ್ಲವೇ? ಎಂಬ ಶಂಕೆಯನ್ನು 'ತೇಷಾಂ' ಎಂಬುದರಿಂದ ತೋರಿಸುತ್ತಿದ್ದಾರೆ. 'ನೇತಿ ಚೇತ್' ಎಂದರೆ ಸುಖಶ್ರುತಿಯು ವಿಷ್ಣುಪರವಾಗದಿದ್ದಲ್ಲಿ ಎಂದರ್ಥ. ಯಾರ ಜ್ಞಾನದಿಂದ ಶಾಶ್ವತವಾದ ಸುಖವು ದೊರೆಯುತ್ತದೋ, 'ಯಜ್ಞಾನಾತ್ ಶಾಶ್ವತಮ್ ಸುಖಂ ಸ ಭಗವಾನ್ ಯದ್ ಬ್ರಹ್ಮ ಅನಿರ್ದೇಶ್ಯಂ ಸುಖಮ್ ಇತಿ ವದಂತಿ ತದೇತತ್ ಸ್ವರೂಪಮಿತಿ ಮನ್ಯಂತೇ' ಎಂಬುದಾಗಿ ಬೇರೆ ಕಡೆ ಹೇಳಲ್ಪಟ್ಟ ವಾಕ್ಯವನ್ನು ಇಲ್ಲಿ ವ್ಯಾಖ್ಯಾನ ಮಾಡುತ್ತಾ 'ಭಗವಾನ್' ಎಂಬಲ್ಲಿಯ ತನಕ ಇರುವ ವಾಕ್ಯದ ಅಭಿಪ್ರಾಯವನ್ನು 'ಚೇತನೇ' ಇತ್ಯಾದಿ ಟೀಕೆಯಿಂದ ಸ್ಪಷ್ಟಪಡಿಸಿದ್ದಾರೆ.

ಅನಿರ್ದೇಶ್ಯತ್ವವು ಯಾರಲ್ಲಿದೆ ?

भावदीपः – 'यद् ब्रह्म' इत्यादेः पूर्वकृतशङ्कान्तरनिवर्तकत्वेनार्थमाह – नचेत्यादिना ।। यदिति ।। 'यतो वाचो निवर्तन्ते' इत्यादौ प्रसिद्धं यदनिर्देश्यम् इत्यर्थः । गृह्णन्ति ज्ञानार्थं प्रार्थयन्त इत्यर्थः ।

'ಯದ್ ಬ್ರಹ್ಮ' ಇತ್ಯಾದಿ ವಾಕ್ಯವು ಹಿಂದೆ ಮಾಡಲ್ಪಟ್ಟ ಶಂಕೆಯ ಪರಿಹಾರಕ್ಕಾಗಿ ಹೊರಟಿದೆಯೆಂಬ ಅರ್ಥವನ್ನು ಹೇಳುತ್ತಿದ್ದಾರೆ 'ನಚ' ಇತ್ಯಾದಿ ಟೀಕೆಯಿಂದ. 'ಯತ್' ಎಂದರೆ 'ಯತೋ ವಾಚೋ ನಿವರ್ತಂತೇ' ಇತ್ಯಾದಿಯಲ್ಲಿ ಪ್ರಸಿದ್ಧವಾದ ಅನಿರ್ದೇಶ್ಯತ್ವವು ಎಂದರ್ಥ. 'ಗೃಹ್ಣಂತಿ' ಎಂದರೆ ಜ್ಞಾನಕ್ಕೋಸ್ಕರ ಪ್ರಾರ್ಥಿಸುತ್ತಾರೆ ಎಂದರ್ಥ.

ಬ್ರಹ್ಮನ ರೂಪವು ನಪುಂಸಕಲಿಂಗದಿಂದ ವಿವಕ್ಷಿತವಲ್ಲವೇ ?

भावदीपः – काठकभाष्ये तु 'तदेव भगवद्रूपं परमं सुखं ज्ञानिसुखं तु विप्रुण्मात्रम्' इति सुखं विधेयमित्यर्थान्तरमुक्तम् । तत्र तद् गुह्यं

ब्रह्मेत्युपक्रान्तम् एतद् एकं रूपमिति मध्ये चोक्तं ब्रह्मणो रूपं परमं सुखमित्यर्थ इति नपुंसकोपपत्तिरुक्ता चन्द्रिकायाम् । इदानीं 'तमेव' इत्यादिभाष्यं सम्भवत्समीपेत्यादिना पूर्वोक्तशङ्काव्यावर्तकत्वेन व्याचष्टे – नच वक्तव्यमिति ।।

ಕಾಠಕಭಾಷ್ಯದಲ್ಲಿ 'ತದೇವ ಭಗವದ್ರೂಪಂ ಪರಮಂ ಸುಖಂ ಜ್ಞಾನಿಸುಖಂ ತು ವಿಷ್ಣ್ವಾತ್ಮಕಮ್ ಇತಿ ಸುಖಂ ವಿಧೇಯಮ್' ಎಂಬ ಅರ್ಥಾಂತರವನ್ನು ಹೇಳಿದ್ದಾರೆ. ಅಲ್ಲಿ 'ತತ್ ಗುಹ್ಯಂ ಬ್ರಹ್ಮ' ಎಂಬಲ್ಲಿ ಹೇಳಲ್ಪಟ್ಟ 'ಏತತ್ ಏಕಂ ರೂಪಂ' ಎಂಬುದಾಗಿ ಮಧ್ಯದಲ್ಲಿ ಹೇಳಲ್ಪಟ್ಟ ಬ್ರಹ್ಮನ ರೂಪವು 'ಪರಮಂ ಸುಖಮ್' ಎಂಬುದರ ಅರ್ಥವಾಗಿದೆ. ಹೀಗೆ ನಪುಂಸಕಲಿಂಗವು ಯುಕ್ತವಾಗುತ್ತದೆಂದು ಚಂದ್ರಿಕೆಯಲ್ಲಿ ಹೇಳಿದ್ದಾರೆ. ಈಗ 'ತಮೇವ' ಇತ್ಯಾದಿ ಭಾಷ್ಯವನ್ನು ಸಂಭವತ್‌ಸಮೀಪ' ಇತ್ಯಾದಿಯಾಗಿ ಹಿಂದೆ ಹೇಳಿದ ಶಂಕೆಯ ಪರಿಹಾರಕವಾಗಿ ವ್ಯಾಖ್ಯಾನ ಮಾಡುತ್ತಿದ್ದಾರೆ 'ನಚ ವಕ್ತವ್ಯಮ್' ಇತ್ಯಾದಿ ಟೀಕೆಯಿಂದ.

'ಏಕೋ ವವಶೀ' ಎಂಬಲ್ಲಿ ಪ್ರಸಕ್ತನಾದ ವಿಷ್ಣು ದೂರ ಅಲ್ಲವೇ ?

भावदीपः – दूरस्थेति ।। यद्यपि 'तेषां सुखम्' इत्युक्तज्ञानिसुखाद् 'एको वशी' इत्यादिनोक्तविष्णुर्दूरस्थः । 'चेतनश्चेतनानाम्' इत्युक्तस्तु सन्निहित एव । एतन्मन्त्रस्य 'तेषां सुखम्' इत्यतोऽनन्तरमाम्नानाद् अनेनैव मन्त्रेण पूर्वं प्रकृतत्वस्योक्तेः । तथाप्यभ्युपेत्य वादेन वा चेतन इति मन्त्रेऽपि 'तेषां शान्तिः शाश्वती नेतरेषाम्' इति श्रवणेन शान्तिशब्दितसुखव्यवधानं चेतन इत्यस्याप्यस्तीति वा दूरस्थेत्युक्तम् ।

ವಾಸ್ತವಿಕವಾಗಿ 'ತೇಷಾಂ ಸುಖಮ್' ಎಂಬಲ್ಲಿ ಹೇಳಲ್ಪಟ್ಟ ಜ್ಞಾನಿಸುಖಕ್ಕಿಂತ 'ಏಕೋ ವಶೀ' ಎಂಬಲ್ಲಿ ಹೇಳಲ್ಪಟ್ಟ ವಿಷ್ಣು ದೂರದಲ್ಲಿ ಪ್ರಸಕ್ತನಾಗಿದ್ದಾನೆ. 'ಚೇತನಶ್ಚೇತನಾನಾಮ್' ಎಂಬುದೇ ಸನ್ನಿಹಿತವಾಗಿದೆ. ಈ ಮಂತ್ರವು 'ತೇಷಾಂ ಸುಖಮ್' ಎಂಬುದರ ಅನಂತರ ಪಠಿತವಾದ್ದರಿಂದ, ಈ ಮಂತ್ರದಿಂದಲೇ ಪೂರ್ವಪ್ರಕೃತತ್ವವನ್ನು ಹೇಳಬಹುದು ಆದರೂ ಸಹ ಅಂಗೀಕಾರವಾದ ಮಾಡಿ, 'ಚೇತನಃ' ಎಂಬ ಮಂತ್ರದಲ್ಲಿಯೂ 'ತೇಷಾಂ ಶಾಂತಿಃ ಶಾಶ್ವತೀ ನೇತರೇಷಾಮ್' ಎಂಬುದಾಗಿ ಶ್ರುತವಾದ್ದರಿಂದ ಶಾಂತಿ

ಶಬ್ದದ ಅರ್ಥವೆನಿಸಿದ ಸುಖದ ವ್ಯವಧಾನವು 'ಚೇತನಃ' ಎಂಬುದಕ್ಕೂ ಇದೆ ಎಂಬುದಾಗಿ ತಿಳಿಸಲು 'ದೂರಸ್ಥ' ಎಂಬುದಾಗಿ ಹೇಳಿದ್ದಾರೆ.

ತತ್ತ್ವಪ್ರದೀಪದಲ್ಲಿ 'ಅನುಕೃತೇ' ಎಂಬ ಪದದ ಸ್ವಾರಸ್ಯ

ಭಾವದೀಪಃ – अनुभानं नाम तदिच्छानुरोधेन भानम्, अनुकृतिशब्देन अनुभानमुच्यते । भानस्यापि क्रियारूपत्वात् । अन्यकृतीनामप्युपसङ्ग्रहार्थ-मनुकृतेरित्युक्तमिति तत्त्वप्रदीपोक्त्या अनुकृतेरित्यस्य अनुभानादित्यर्थं मत्वाऽह – एतदधीनप्रकाशेति ।।

ಅನುಭಾನವೆಂದರೆ ಅವನ ಇಚ್ಛೆಗೆ ಅನುಸಾರಿಯಾಗಿ ತಿಳಿಯುವಿಕೆ ಎಂದರ್ಥ. ಇಂತಹ ಅನುಭಾನವು ಅನುಕೃತಿ ಶಬ್ದದಿಂದ ಪ್ರತಿಪಾದ್ಯವಾಗಿದೆ. ಭಾನವೂ ಕೂಡ ಕ್ರಿಯಾರೂಪವೇ ಆಗಿದೆ. ಇದರಿಂದ ಬೇರೆ ಕೃತಿಗಳನ್ನು ಸಂಗ್ರಹ ಮಾಡಲು 'ಅನುಕೃತೇಃ' ಎಂದೇ ಹೇಳಿದ್ದಾರೆಂದು ತತ್ತ್ವಪ್ರದೀಪದಲ್ಲಿ ಸೂತ್ರದ 'ಅನುಕೃತೇಃ' ಎಂಬ ಪದದ ಸಾರ್ಥಕ್ಯವನ್ನು ತಿಳಿಸಿಕೊಟ್ಟಿದ್ದಾರೆ. ಈ ಅಭಿಪ್ರಾಯದಿಂದ ಟೀಕೆಯಲ್ಲಿ 'ಏತದಧೀನಪ್ರಕಾಶ' ಇತ್ಯಾದಿ ಮಾತು ಹೊರಟಿದೆ.

ತಂತ್ರದೀಪಿಕಾದಲ್ಲಿ ಸ್ಪಷ್ಟವಾದ ನಮ್ಮ ವ್ಯಾಖ್ಯಾನ

ಭಾವದೀಪಃ – सर्वमित्यस्यार्थः – सूर्यादीनामिति ।। एतदधीनेत्युक्त्या सूत्रे तस्येति पदम् आनुकूल्येन गृह्यमाणपरं सद् अनुकृतेरित्यतः पूर्वमप्यन्वेति स्वस्थाने च स्थितं सत् 'तस्य भासा' इति वाक्यप्रतीकं च भवतीति दर्शितम् । स्पष्टीकृतं चैतत् तन्त्रदीपिकायामस्माभिः । भाष्ये अनिर्देश्य-सुखरूपत्वे च अनुकृत्यादेर्हेतुत्वोक्त्या समीपस्थदूरस्थत्यागोपादानयोर्हेतुत्वं लिङ्गसमन्वयहेतुत्वं च लब्धमिति दर्शयन् भाष्यस्य फलितोक्तिपरत्वेन भावमाह – अत इति ।।

'ಸರ್ವಮ್' ಎಂಬುದರ ಅರ್ಥವೇ 'ಸೂರ್ಯಾದೀನಾಮ್' ಎಂಬುದು, 'ಏತದಧೀನ' ಎಂದು ಹೇಳಿದ್ದರಿಂದ ಸೂತ್ರದಲ್ಲಿ 'ತಸ್ಯ' ಎಂಬ ಪದವು 'ಅನುಕೂಲ್ಯೇನ ಗೃಹ್ಯಮಾಣಪರಂ ಸತ್ ಅನುಕೃತೇಃ' ಎಂಬುದಕ್ಕಿಂತ ಮೊದಲು ಅನ್ವಯ ಹೊಂದುತ್ತದೆ. ಮತ್ತು ತನ್ನ ಸ್ಥಾನದಲ್ಲಿಟ್ಟುಕೊಂಡು 'ತಸ್ಯಭಾಸಾ' ಎಂಬ ವಾಕ್ಯಕ್ಕೂ ಕೂಡ ಪ್ರತೀಕವಾಗುತ್ತದೆಂದು ತಿಳಿಸಿದ್ದಾರೆ. ಇದನ್ನು ತಂತ್ರದೀಪಿಕಾದಿ ಗ್ರಂಥಗಳಲ್ಲಿ ನಾವೇ ಸ್ಪಷ್ಟಪಡಿಸಿದ್ದೇವೆ. ಭಾಷ್ಯದಲ್ಲಿ ಅನಿರ್ದೇಶ್ಯಸುಖರೂಪವಿಷಯದಲ್ಲಿ ಅನುಕೃತ್ಯಾದಿಗಳನ್ನು ಹೇತುವೆಂದು ಹೇಳಿದ್ದರಿಂದ, ಸಮೀಪದಲ್ಲಿರುವುದನ್ನು ಬಿಟ್ಟು ದೂರದಲ್ಲಿರುವುದನ್ನು ಸ್ವೀಕಾರ ಮಾಡಲು ಕಾರಣವನ್ನು ಹೇಳಿದ್ದರಿಂದ, ಲಿಂಗಸಮನ್ವಯದ ಹೇತುವನ್ನು ಹೇಳಿದಂತಾಯಿತು. ಹೀಗೆ ಸಮರ್ಥಿಸಿ, ಭಾಷ್ಯದ ಮಾತಿಗೆ ಫಲಪರವಾಗಿ ವ್ಯಾಖ್ಯಾನ ಮಾಡುತ್ತಿದ್ದಾರೆ 'ಅತಃ' ಇತ್ಯಾದಿಯಾಗಿ.

'ತಸ್ಯ ಭಾಸಾ' ಇತ್ಯಾದಿ ಶ್ರುತಿಯ ವ್ಯಾಖ್ಯಾನ

भावदीपः – उक्तलिङ्गद्वयाभावादित्यर्थः । सर्वं सूर्यादीत्युक्त्या श्रौतसर्वशब्दोऽपि सूर्यादितेजोमात्रपरो न सर्वजगत्पर इति व्याख्यातं भवति । नच तद्भासेति भाष्ये शेषमाह – जगद्भातीति शेष इति ।। तेन 'तस्य भासा' इति श्रुतौ सर्वशब्दो जगत्परो न तेजोमात्रपर इति दर्शितम्। नहीत्यादेर्भावमाह – एतदुभयस्येति ।। सर्वतेजोनियन्तृत्वसर्वजगत्प्रकाशक त्वरूपोभयस्येत्यर्थः ।।

'ಅತಃ' ಎಂದರೆ ಹಿಂದೆ ಹೇಳಿದ ಎರಡು ಲಿಂಗಗಳಿರುವುದರಿಂದ ಎಂದರ್ಥ. 'ಸರ್ವಮ್ ಸೂರ್ಯಾದಿ' ಎಂಬ ಟೀಕೆಯಿಂದ ಶ್ರುತಿಯಲ್ಲಿರುವ ಸರ್ವಶಬ್ದಕ್ಕೆ ಸೂರ್ಯಾದಿತೇಜಸ್ಸುಗಳನ್ನಷ್ಟೇ ವಿವಕ್ಷಿಸಬೇಕು. ಸರ್ವಜಗತ್ತನ್ನು ವಿವಕ್ಷಿಸಬಾರದೆಂದು ವ್ಯಾಖ್ಯಾನಿಸಿದಂತಾಯಿತು. 'ನಚ ತದ್ಭಾಸಾ' ಎಂಬ ಭಾಷ್ಯದಲ್ಲಿ ಮಾಡಬೇಕಾದ ಶೇಷಪೂರಣವನ್ನು 'ಜಗದ್ಭಾತೀತಿ ಶೇಷಃ' ಎಂಬುದರಿಂದ ಮಾಡುತ್ತಿದ್ದಾರೆ. ಹೀಗೆ ಹೇಳಿದ್ದರಿಂದ 'ತಸ್ಯ ಭಾಸಾ' ಎಂಬ ಶ್ರುತಿಯಲ್ಲಿರುವ ಸರ್ವಶಬ್ದವು ಜಗತ್ಪರವಾಗಿದೆ ಕೇವಲ ತೇಜೋಮಾತ್ರಪರವಾಗಿಲ್ಲವೆಂದು ಹೇಳಿದಂತಾಯಿತು. 'ನಹಿ' ಇತ್ಯಾದಿ ವಾಕ್ಯದ ಅಭಿಪ್ರಾಯವನ್ನು 'ಏತದುಭಯಸ್ಯ' ಎಂಬುದರಿಂದ ಹೇಳಿದ್ದಾರೆ. ಅಂದರೆ ಸಕಲ ತೇಜಸ್ಸುಗಳ ನಿಯಂತೃತ್ವವು ಸಕಲ ಜಗತ್ತಿನ ಪ್ರಕಾಶತ್ವಗಳೆರಡು ಎಂದರ್ಥ.

ಸನ್ನಿಧಿಯು ಯೋಗ್ಯತೆಗಿಂತ ಶ್ರೇಷ್ಠ

भावदीपः – तदुक्तमिति ।। चतुर्थस्कन्धतात्पर्ये विंशेऽध्याये भगवत्पादोदाहृत-शब्दनिर्णयवाक्ये सन्निधेरपि योग्यताया बलीयस्त्वमुक्तमित्यर्थः ।

ಚತುರ್ಥಸ್ಕಂಧತಾತ್ಪರ್ಯದ ಇಪ್ಪತ್ತನೆಯ ಅಧ್ಯಾಯದಲ್ಲಿ ಶ್ರೀಮದಾಚಾರ್ಯರೇ ಉಲ್ಲೇಖ ಮಾಡುವಂತಹ ಶಬ್ದನಿರ್ಣಯವಾಕ್ಯದಲ್ಲಿ ಸನ್ನಿಧಿಗೂ ಸಹ ಯೋಗ್ಯತೆಗಿಂತ ಬಲೀಯಸ್ತ್ವವನ್ನು ಹೇಳಿದ್ದಾರೆಂದು ಅಭಿಪ್ರಾಯ.

'ಶ್ರುತೇ' ಎಂಬುದನ್ನು ಶೇಷಪೂರಣ ಮಾಡಬೇಕು

भावदीपः – इति शब्दानन्तरं श्रुतेरिति शेषमाह – इति श्रुतेरिति शेष इति ।। प्रकृतार्थद्वयं श्रुतौ व्यनक्ति – रश्मीदिति ।।

'ಇತಿ' ಶಬ್ದದ ಅನಂತರ 'ಶ್ರುತೇಃ' ಎಂಬುದನ್ನು ಶೇಷಪೂರಣ ಮಾಡಿಕೊಳ್ಳಬೇಕೆಂಬ ಅಭಿಪ್ರಾಯದಿಂದ 'ಇತಿ ಶ್ರುತೇರಿತಿ ಶೇಷಃ' ಎಂದಿದ್ದಾರೆ. ಪ್ರಕೃತವಾದ ಎರಡು ಅರ್ಥಗಳನ್ನು ಶ್ರುತಿಯಲ್ಲಿ ಸಮನ್ವಯ ಮಾಡಿ ವ್ಯಾಖ್ಯಾನ ಮಾಡುತ್ತಿದ್ದಾರೆ 'ರಶ್ಮೀತ್' ಇತ್ಯಾದಿಯಾಗಿ.

'ನಾರಾಯಣಪುರುಷ' ಎಂಬ ವಾಕ್ಯಶೇಷದಿಂದ ನಾರಾಯಣನೇ ಪ್ರತಿಪಾದ್ಯ

भावदीपः – अग्नीदित्यस्य अग्निसमिन्धकत्वमिव रश्मीच्छब्दस्य रश्मिसमिन्धकत्वमर्थ इत्युपेत्योक्तम् – सूर्यादीति ।। नारायणेति ।। नारायणं पुरुषमिति वाक्यशेषादिति भावः । एषा च श्रुतिरन्तर्नयोक्ता व्याख्याता च । श्रुत्यनुरोधेन भाष्यस्थपदानामप्यर्थद्वयमाह – नारायणेति ।। २२ ।।

'ಅಗ್ನೀತ್' ಎಂಬುದಕ್ಕೆ 'ಅಗ್ನಿಸಮಿಂಧಕತ್ವಮ್' ಎಂಬರ್ಥವನ್ನು ಮಾಡುವಂತೆ, 'ರಶ್ಮೀತ್' ಎಂಬ ಪದಕ್ಕೆ 'ರಶ್ಮಿಸಮಿಂಧಕತ್ವಮ್' ಎಂಬರ್ಥವನ್ನೇ ಮಾಡಬೇಕೆಂದಂತಾಯಿತು. 'ನಾರಾಯಣಂ ಪುರುಷಮ್' ಎಂಬ ವಾಕ್ಯಶೇಷದ ಬಲದಿಂದ ನಾರಾಯಣನೇ ಪ್ರತಿಪಾದ್ಯನೆಂದು ತಿಳಿಯುತ್ತದೆ. ಈ ಶ್ರುತಿಯನ್ನು ಅಂತರಧಿಕರಣದಲ್ಲಿ ವ್ಯಾಖ್ಯಾನ ಮಾಡಿದ್ದಾಗಿದೆ. ಶ್ರುತಿಗೆ ಅನುಸಾರಿಯಾಗಿ ಭಾಷ್ಯದಲ್ಲಿರುವ ಅರ್ಥಗಳನ್ನು 'ನಾರಾಯಣ' ಇತ್ಯಾದಿ ಟೀಕೆಯನ್ನು ಹೇಳುತ್ತಿದ್ದಾರೆ.

ವಿಶೇಷವಿಚಾರ - ಸಿದ್ಧಾಂತ ಹೀಗಿದೆ - ಕಾಠಕೋಪನಿಷತ್ತಿನ ಪಂಚಮಖಂಡದ ಕೊನೆಯಲ್ಲಿ 'ನ ತತ್ರ ಸೂರ್ಯೋ ಭಾತಿ ನ ಚಂದ್ರತಾರಕಮ್' ಎಂಬ ವಾಕ್ಯದಿಂದ ಪರಮಾತ್ಮನು ಸೂರ್ಯ, ಚಂದ್ರ ಮೊದಲಾದ ಯಾವುದೇ ಬೆಳಗುವಂತಹ ವಸ್ತುಗಳಿಂದ ಪ್ರಕಾಶ್ಯನಾಗಿಲ್ಲವೆಂದು ಹೇಳಲಾಗಿದೆ. ಆದ್ದರಿಂದ ಸೂರ್ಯಾದ್ಯಪ್ರಕಾಶ್ಯತ್ವವು ಪರಮಾತ್ಮನಲ್ಲಿ ಮಾತ್ರ ಇರುವಂತಹ ಅಸಾಧಾರಣ ಧರ್ಮವಾಗಿದೆ. ಮತ್ತು 'ತಮೇವ ಭಾಂತಮನುಭಾತಿ ಸರ್ವಮ್' ಎಂಬ ಶ್ರುತಿಯಲ್ಲಿ ಸೂರ್ಯಚಂದ್ರಾದಿಗಳ ಪ್ರಕಾಶಕ್ಕೆ ಪರಮಾತ್ಮನೇ ಕಾರಣನೆಂದು ಹೇಳಲಾಗಿದೆ. ಇದರಿಂದ ಪರಮಾತ್ಮನಲ್ಲಿ ಮಾತ್ರ ಇರುವಂತಹ ಸೂರ್ಯಾದಿ ಪ್ರಕಾಶಹೇತುತ್ವವನ್ನು ಹೇಳಿದಂತಾಗುತ್ತದೆ. 'ತಸ್ಯ ಭಾಸಾ ಸರ್ವಮಿದಂ ವಿಭಾತಿ' ಎಂಬ ವಾಕ್ಯದಿಂದ, ಸಕಲ ಜಗತ್ತೂ ಕೂಡ ಪರಮಾತ್ಮನಿಂದಲೇ ಬೆಳಗುತ್ತಿದೆ ಎಂದು ಹೇಳಲಾಗಿದೆ. ಆದ್ದರಿಂದ ಸರ್ವಜಗತ್‌ಪ್ರಕಾಶಕತ್ವ ಲಕ್ಷಣವನ್ನು ಹೇಳಿದಂತಾಗುತ್ತದೆ. ಇಂತಹ 'ಸೂರ್ಯಾದ್ಯಪ್ರಕಾಶ್ಯತ್ವ', 'ಸೂರ್ಯಾದಿ ಪ್ರಕಾಶಾದಿ ಹೇತುತ್ವ', 'ಸರ್ವಜಗತ್ ಪ್ರಕಾಶಕತ್ವ' ಮೊದಲಾದ ಧರ್ಮಗಳೆಲ್ಲವೂ ಭಾಷ್ಯದಲ್ಲಿ ಉದಾಹರಿಸಿದ ಶ್ರುತಿ-ಸ್ಮೃತಿಗಳಿಂದ ಪರಮಾತ್ಮನಲ್ಲಿ ಮಾತ್ರವೇ ಇರುತ್ತವೆಂದು ಸಿದ್ಧವಾಗುತ್ತದೆ.

ಇದರಿಂದ ಏನಾಯಿತು ? ಎಂದರೆ, 'ನ ತತ್ರ ಸೂರ್ಯಃ' ಇತ್ಯಾದಿ ವಾಕ್ಯಗಳಿಂದಮತ್ತು 'ಕಥಂನುತದ್ವಿಜಾನೀಯಾಮ್' ಇತ್ಯಾದಿಯಾದಸನ್ನಿಹಿತವಾದವಾಕ್ಯದಲ್ಲಿ ಪ್ರಕೃತವಾದ ಅನುಕೂಲ್ಯೇನ ಗೃಹ್ಯಮಾಣವಾದ ವಸ್ತುವೇ ಇಲ್ಲಿ ಪ್ರತಿಪಾದ್ಯ-ವಾಗಿರುವುದರಿಂದ, ಬ್ರಹ್ಮನೇ ಅನುಕೂಲ್ಯೇನ ಗೃಹ್ಯಮಾಣನಾಗಿದ್ದಾನೆಂದು ಸಿದ್ಧವಾಗುತ್ತದೆ.

ಬ್ರಹ್ಮಸೂತ್ರ

'ಅಪಿ ಸ್ಮರ್ಯತೇ' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – ।। अपि स्मर्यते ।।

ಸೂತ್ರಾರ್ಥ - 'ಜಗತ್ತು ಭಗವಂತನ ತೇಜಸ್ಸಿನಿಂದ ಬೆಳಗುತ್ತಿದೆ' ಎಂಬುದು ಸ್ಮೃತಿಯಿಂದಷ್ಟೇ ಅಲ್ಲ; ಶ್ರುತಿಯಿಂದಲೂ ತೀರ್ಮಾನವಾಗಿದೆ. 'ಯದಾದಿತ್ಯಗತಂ ತೇಜಃ' ಇತ್ಯಾದಿ ಭಗವದ್ ಗೀತೆಯೇ ಈ ವಿಷಯದಲ್ಲಿ ಆಧಾರ.

ಅರ್ಥ -- ಅಪಿ = ಹೇತುವನ್ನಾಗಿ ಮಾಡಲ್ಪಟ್ಟ ಅನುಕೂಲ್ಯೇನ ಗೃಹ್ಯಮಾಣತ್ವವು ವಿಷ್ಣುವಿನ ಧರ್ಮವಾಗಿದೆಯೆಂದು ಶ್ರುತಿಯಿಂದಷ್ಟೇ ಶ್ರುತವಾಗಿಲ್ಲ ಹೊರತಾಗಿ, ಸ್ಮರ್ಯತೇ = ಶ್ರೀಕೃಷ್ಣನು ಭಗವದ್ಗೀತೆಯಲ್ಲಿ 'ಯದಾದಿತ್ಯಗತಂ ತೇಜಃ' ಇತ್ಯಾದಿಯಾಗಿ ಹೇಳಿದ್ದಾನೆ. ಈ ಸ್ಮೃತಿ ವಾಕ್ಯಗಳಿಂದಲೂ ಸೂರ್ಯಾದಿಗಳ ತೇಜಸ್ಸು ಭಗವದಧೀನವೆಂದು ತಿಳಿಯುತ್ತದೆ.

॥ ಶ್ರೀವೇದವ್ಯಾಸದೇವರಿಂದ ರಚಿಸಲ್ಪಟ್ಟ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ
ಅನುಕೃತ್ಯಧಿಕರಣವು ಸಮಾಪ್ತವಾಯಿತು ॥

ಬ್ರಹ್ಮಸೂತ್ರಭಾಷ್ಯ

ಸಕಲ ಜಗತ್‌ಪ್ರಕಾಶಕ ಶ್ರೀಹರಿಯೇ ಎನ್ನಲು ಗೀತೆಯ ಆಧಾರ

ब्रह्मसूत्रभाष्यम् – ।। अपि स्मर्यते ।। ।।

'यदादित्यगतं तेजो जगद् भासयतेऽखिलम् । यच्चन्द्रमसि यच्चाग्नौ तत् तेजो विद्धि मामकम् ।।' (गी. १५.१२) इति ।

ಅನುವಾದ - ಸ್ಮೃತಿ ಪ್ರಮಾಣವೂ ಸಹ ಈ ವಿಷಯದಲ್ಲಿ ಇರುತ್ತದೆ, 'ಸಮಸ್ತ ಜಗತ್ತನ್ನು ಬೆಳಗಿಸುವ ತೇಜಸ್ಸು ಸೂರ್ಯನಲ್ಲಿದೆ, ಚಂದ್ರ, ಅಗ್ನಿ ಮೊದಲಾದವರಲ್ಲೂ ಪ್ರಕಾಶಪಡಿಸುವ ಶಕ್ತಿಯು ಇದೆ. ಇದೆಲ್ಲವೂ ನನ್ನದೇ ಆಗಿದೆ' ಎಂದು ಶ್ರೀಕೃಷ್ಣನು ಹೇಳಿದ್ದಾನೆ.

ಪ್ರತಿಪದಾರ್ಥ -- ಹಿಂದೆ ಹೇಳಿದ 'ಅನುಕೂಲ್ಯೇನ ಗೃಹ್ಯಮಾಣತ್ವ' ಹಾಗೂ ಅನಿರ್ದೇಶ್ಯತ್ವಗಳಿಗೆ ಶ್ರುತಿಪ್ರಮಾಣವನ್ನೂ ಸಹ ಹೇಳುತ್ತಿದ್ದಾರೆ -

ಅಖಿಲಮ್ = ಸಮಸ್ತ ಜಗತ್ತು, ಮತ್ತು ಯತ್ = ಯಾವ, ಆದಿತ್ಯಗತಂ = ಸೂರ್ಯನಲ್ಲಿರುವ, ತೇಜಃ = ಕಾಂತಿಯು, ಯತ್ = ಯಾವ, ಚಂದ್ರಮಸಿ = ಚಂದ್ರನಲ್ಲಿರುವ, ಯತ್ = ಯಾವ, ಅಗ್ನೌ = ಅಗ್ನಿಯಲ್ಲಿರುವ, ಕಾಂತಿಯು, ಭಾಸಯತೇ = ಪ್ರಕಾಶಿಸುತ್ತಿದೆಯೋ, ತತ್ = ಅಂತಹ, ತೇಜಃ = ಕಾಂತಿಯು, ಮಾಮಕಮಿತಿ = ನನ್ನದೇ

ಆಗಿದೆಯೆಂದು, ವಿದ್ಧಿ = ಅರ್ಜುನನೇ ತಿಳಿ, ಇತಿ = ಹೀಗೆ, ಶ್ರೀಕೃಷ್ಣನು ಹೇಳಿದ್ದಾನೆ.

ಅನಿರ್ದೇಶ್ಯತ್ವಾದಿಗಳೂ ವಿಷ್ಣುಮಾತ್ರ ನಿಷ್ಠ

ಬ್ರಹ್ಮಸೂತ್ರಭಾಷ್ಯಮ್ – 'न तद् भासयते सूर्यो न शशाङ्को न पावकः ।
यद् गत्वा न निवर्तन्ते तद् धाम परमं मम ।।'(ಗೀ.೧೫.೬) इति च

।। इति श्रीमदानन्दतीर्थभगवत्पादाचार्यविरचिते
ब्रह्मसूत्रभाष्ये अनुकृत्यधिकरणम्।। ६।।

ಅನುವಾದ - 'ನನ್ನ ಯಾವ ಮಂದಿರವನ್ನು ಜ್ಞಾನಿಗಳು ಪಡೆಯುತ್ತಾರೋ ಪುನಃ ಅವರು ಹಿಂತಿರುಗುವುದಿಲ್ಲವೋ. ಅಂತಹ ಮಂದಿರವನ್ನು ಸೂರ್ಯ, ಚಂದ್ರ, ಅಗ್ನಿ ಮೊದಲಾದವರೂ ಸಹ ಬೆಳಗಲು ಸಾಧ್ಯವಿಲ್ಲ' ಹೀಗೆ ಗೀತೆಯಲ್ಲಿ ಹೇಳಿರುವುದರಿಂದ ಸೂರ್ಯ, ಚಂದ್ರ ಮೊದಲಾದವರು ಸ್ವತಃ ಬೆಳಗಲಾರರು ಮತ್ತು ಅವರನ್ನು ಅನುಸರಿಸಿ ಮತ್ತೊಂದೂ ಸಹ ಸ್ವತಂತ್ರವಾಗಿ ಬೆಳಗಲು ಸಾಧ್ಯವಿಲ್ಲವೆಂದು ತಿಳಿಯುತ್ತದೆ. ಆದ್ದರಿಂದ 'ಅನುಕೂಲ್ಯೇನ ಗೃಹ್ಯಮಾಣತ್ವ' ಮತ್ತು 'ಅನಿರ್ದೇಶ್ಯತ್ವ' ಮೊದಲಾದ ಧರ್ಮಗಳು ವಿಷ್ಣುವಿನಲ್ಲಿ ಮಾತ್ರ ಇರುತ್ತವೆಂದು ನಿರ್ಣಯಿಸಲಾಯಿತು.

ಪ್ರತಿಪದಾರ್ಥ -- ಸೂತ್ರದಲ್ಲಿರುವ 'ಅಪಿ' ಶಬ್ದಕ್ಕೆ ಯುಕ್ತಿ ಸಮುಚ್ಚಯಾರ್ಥತ್ವವನ್ನು ಸ್ವೀಕರಿಸಿ, ಸ್ಮೃತಿಯನ್ನು ಉದಾಹರಿಸುತ್ತಿದ್ದಾರೆ-

ಸೂರ್ಯಃ = ಸೂರ್ಯನು, ತತ್ = ಆ ನನ್ನ ಸ್ಥಾನವನ್ನು, ನ ಭಾಸಯತೇ = ಪ್ರಕಾಶಿಸಲು ಸಾಮರ್ಥ್ಯವನ್ನು ಹೊಂದಿಲ್ಲ. ಶಶಾಂಕಃ = ಚಂದ್ರನೂ ಸಹ, ನ = ಪ್ರಕಾಶಿಸಲಾರನು, ಪಾವಕಃ = ಅಗ್ನಿಯೂ ಸಹ, ನ = ಪ್ರಕಾಶಿಸಲಾರನು, ಯದ್ ಗತ್ವಾ = ಯಾವ ನನ್ನ ಸ್ಥಾನವನ್ನುಹೊಂದಿ, ನ ನಿವರ್ತಂತೇ = ಜ್ಞಾನಿಗಳು ಪುನಃ ಹಿಂತಿರುಗಲಾರರೋ, ತತ್ = ಅದು, ಮಮ = ನನ್ನ, ಪರಮಂ = ಶ್ರೇಷ್ಠವಾದ, ಧಾಮ = ಮನೆಯು ಆಗಿದೆ, ಇತಿ = ಹೀಗೆ ಸ್ಮೃತಿಗಳು ಹೇಳುತ್ತಿವೆ. ಆದ್ದರಿಂದ ಅನುಕೂಲ್ಯೇನ ಗೃಹ್ಯಮಾಣತ್ವಲಿಂಗವು

ಪರಮಾತ್ಮನನ್ನು ಬಿಟ್ಟು ಬೇರೆ ಯಾರಲ್ಲಿಯೂ ಇರುವುದಿಲ್ಲವೆಂದು ಸಿದ್ಧವಾಯಿತು.

॥ ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ವಿರಚಿತವಾದ ಬ್ರಹ್ಮಸೂತ್ರಭಾಷ್ಯದ ಕನ್ನಡಾನುವಾದದಲ್ಲಿ ಅನುಕೃತ್ಯಧಿಕರಣವು ಸಮಾಪ್ತವಾಯಿತು ॥

ತತ್ತ್ವಪ್ರದೀಪ

'ಮಾಮಕಂ' ಎಂಬುದರ ವ್ಯಾಖ್ಯಾನ

तत्वप्रदीपः – अपि स्मर्यते ।। मामकं मदधीनम् । मत्तेज एवादित्यादिस्थितं तत्तेजःप्रेरकत्वेनाखिलं भासयतीत्यर्थः ।।

।। इत्यनुकृत्याधिकरणम् ।।

'ತತ್ತೇಜೋ ವಿದ್ಯಮಾಮಕಂ' ಎಂಬ ಗೀತೆಯಲ್ಲಿರುವ 'ಮಾಮಕಂ' ಎಂಬ ಪದಕ್ಕೆ 'ನನ್ನ ಅಧೀನವಾದದ್ದು' ಎಂದರ್ಥ. ನನ್ನ ತೇಜಸ್ಸು ಸೂರ್ಯ ಮೊದಲಾದವುಗಳಲ್ಲಿ ನೆಲಸಿ ಸೂರ್ಯಾದಿ ತೇಜಸ್ಸನ್ನು ಪ್ರೇರಣೆ ಮಾಡುತ್ತದೆ. ಅದರಿಂದ ಸಮಸ್ತ ಜಗತ್ತು ಬೆಳಗುತ್ತದೆ ಎಂಬುದು ಗೀತೆಯ ಅಭಿಪ್ರಾಯ.

ತತ್ತ್ವಪ್ರಕಾಶಿಕಾ

'ಸೂರ್ಯಾದಿತೇಜೋನಿಯಾಮಕತ್ವ', 'ಜಗತ್ ಭಾಸಕತ್ವ' ಎಂಬೆರಡು ಲಿಂಗಗಳ ಸಮನ್ವಯ

तत्वप्रकाशिका – ।। अपि स्मर्यते ।।

यदेतल्लिङ्गद्वयस्य विष्णुनिष्ठत्वं श्रु(त्यो)त्युपपादितं तत्स्मृत्याप्युपपादयत्सूत्रं पठित्वा तां स्मृतिमुदाहरति – अपीति ।।

ಹಿಂದಿನ ಸೂತ್ರದಲ್ಲಿ ಹೇಳಲ್ಪಟ್ಟ 'ಸೂರ್ಯಾದಿತೇಜೋನಿಯಾಮಕತ್ವ' ಮತ್ತು 'ಜಗತ್ ಭಾಸಕತ್ವ' ಎಂಬೆರಡು ಲಿಂಗಗಳು ವಿಷ್ಣುನಿಷ್ಠವಾಗಿವೆ ಎಂದು ಶ್ರುತಿಯಿಂದ ಹಿಂದಿನ ಸೂತ್ರದಲ್ಲೇ ಉಪಪಾದನೆ ಮಾಡಿದ್ದಾಯಿತು. ಈಗ ಅದೇ ವಿಷಯವನ್ನು ಸ್ಮೃತಿಯಿಂದಲೂ ಕೂಡ ಉಪಪಾದನೆ ಮಾಡಲು ಹೊರಟಿದ್ದಾರೆ. ಹಾಗೆ ಹೇಳುವ ಸೂತ್ರವನ್ನು ಪಠಿಸಿ ಸ್ಮೃತಿಯನ್ನು ಉದಾಹರಿಸುತ್ತಿದ್ದಾರೆ 'ಅಪಿ' ಇತ್ಯಾದಿ ಭಾಷ್ಯದಿಂದ.

ಶ್ರುತಿಯ ಜೊತೆ ಸ್ಮೃತಿಯ ಆಧಾರ

तत्वप्रकाशिका – न केवलमेतच्छ्रूयते, अपि तु स्मर्यतेऽपीत्यर्थः । मामकं मदधीनं मदीयं च ।।

ಈ ಎರಡು ಲಿಂಗಗಳು ಕೇವಲ ಶ್ರುತಿಯಲ್ಲಷ್ಟೇ ಹೇಳಲ್ಪಟ್ಟಿಲ್ಲ, ಸ್ಮೃತಿಯಲ್ಲಿಯೂ ಕೂಡ ಹೇಳಲ್ಪಟ್ಟಿದೆ. ಎಂದು ಸೂತ್ರದ ಅರ್ಥ. 'ಮಾಮಕಂ' ಎಂಬ ಗೀತೆಯಲ್ಲಿರುವ ಪದಕ್ಕೆ ನನ್ನ ಅಧೀನವಾದ ಮತ್ತು ನನಗೆ ಸಂಬಂಧ ಪಟ್ಟ ಎಂದರ್ಥ.

ಪರಮಾತ್ಮನನ್ನು ಪ್ರಕಾಶಿಸುವ ವಸ್ತುವೇ ಇಲ್ಲ

तत्वप्रकाशिका – किञ्चतत 'न तत्र सूर्यो भाति न चन्द्रतारकं नेमा विद्युतो भान्ति कुतोऽयमग्निः' इत्यानुकूल्येन गृह्यमाणस्य सूर्याद्यप्रकाश्यत्वमुच्यते । तच्च विष्णोरेव स्मर्यते ।

ಮತ್ತು 'ನ ತತ್ರ ಸೂರ್ಯೋ ಭಾತಿ ನ ಚಂದ್ರತಾರಕಂ ನೇಮಾ ವಿದ್ಯುತೋ ಭಾಂತಿ ಕುತೋಽಯಮಗ್ನಿಃ', ಆ ಪರಮಾತ್ಮನನ್ನು ಸೂರ್ಯ, ಚಂದ್ರ, ನಕ್ಷತ್ರಗಳು ಪ್ರಕಾಶ ಪಡಿಸುವುದಿಲ್ಲವೆಂದ ಮೇಲೆ, ಅಗ್ನಿಯು ಹೇಗೆ ತಾನೆ ಪ್ರಕಾಶಪಡಿಸಿಯಾನು?ಎಂಬುದಾಗಿ ಅನುಕೂಲ್ಯೇನ ಗೃಹ್ಯಮಾಣನಾದವನಿಗೆ ಸೂರ್ಯಾದಿಗಳಿಂದ ಅಪ್ರಕಾಶ್ಯತ್ವವನ್ನು ಶ್ರುತಿಯು ಹೇಳಿದೆ. ಇದೇ ವಿಷಯವನ್ನು ಸ್ಮೃತಿಯೂ ಕೂಡ ವಿಷ್ಣುವಿನಲ್ಲೇ ಹೇಳುತ್ತಿದೆ.

ವಿಶೇಷವಿಚಾರ - ಪ್ರಶ್ನೆ - ಹಿಂದಿನ ಅಧಿಕರಣದಲ್ಲಿ ವಿಧೇಯವಾದ ಆತ್ಮಶಬ್ದದ ಸಮಾನಾಧಿಕರಣ್ಯದ ಬಲದಿಂದ 'ಏತತ್' ಶಬ್ದವು ಪುಲ್ಲಿಂಗದಲ್ಲಿ ಪ್ರಯುಕ್ತವಾಗಿದೆಯೆಂದು ಸಮರ್ಥಿಸಲಾಯಿತು. ಅದರಂತೆ ಇಲ್ಲಿಯೂ ಕೂಡ ವಿಧೇಯವಾದ ಸುಖಶಬ್ದವು

ನಪುಂಸಕಲಿಂಗದಲ್ಲಿರುವುದರಿಂದ ಅದಕ್ಕನುಸಾರಿಯಾಗಿ 'ತತ್' ಮತ್ತು 'ಏತತ್' ಶಬ್ದಗಳೂ ಕೂಡ ನಪುಂಸಕಲಿಂಗದಲ್ಲಿಯೇ ಪ್ರಯುಕ್ತವಾಗಿವೆ. ಇಂತಹ ನಪುಂಸಕಲಿಂಗದ ಶಬ್ದಗಳು ಪುಲ್ಲಿಂಗದಿಂದ ಪ್ರಸಕ್ತನಾದ ಪರಮಾತ್ಮನನ್ನು ಪರಾಮರ್ಶ ಮಾಡಬಹುದಲ್ಲವೇ?

ಉತ್ತರ – 'ತತ್' ಮತ್ತು 'ಏತತ್' ಶಬ್ದಗಳ ನಡುವೆ ಎಂದರೆ ಉದ್ದೇಶ್ಯ-ವಿಧೇಯಗಳ ಮಧ್ಯದಲ್ಲಿ ಒಂದು ಶಬ್ದ ಮಾತ್ರ ವಿಧೇಯವಾದ ಸುಖಶಬ್ದಕ್ಕೆ ಅನುಸಾರಿಯಾಗಿ ನಪುಂಸಕಲಿಂಗವಾಗ- ಬಹುದು. ಆದರೆ ಎರಡೂ ಶಬ್ದಗಳನ್ನು ವಿಧೇಯ ಶಬ್ದಕ್ಕೆ ಸಮಾನಾಧಿ-ಕರಣವಾಗಿ ನಪುಂಸಕಲಿಂಗದಲ್ಲಿ ಪ್ರಯೋಗಿಸಲು ಕಾರಣವಿಲ್ಲ. ಏಕೆಂದರೆ ಹಿಂದಿನ ಅಧಿಕರಣದಲ್ಲಿ ವಿಧೇಯವಾದ ಆತ್ಮಶಬ್ದಕ್ಕೆ ಅನುಸಾರಿಯಾಗಿ ಒಂದೇ 'ಏತತ್' ಶಬ್ದಕ್ಕೆ ಪುಲ್ಲಿಂಗವನ್ನು ಸಮರ್ಥಿಸಲಾಗಿತ್ತು.

ಆದ್ದರಿಂದಲೇ ಟೀಕೆಯಲ್ಲಿ 'ತದಿತ್ಯಾದಿ' ಎಂಬಲ್ಲಿ 'ಆದಿ' ಶಬ್ದವನ್ನು ಪ್ರಯೋಗಿಸಿದ್ದಾರೆ. ಅಂದರೆ 'ತತ್' ಮತ್ತು 'ಏತತ್' ಎಂಬೆರಡು ಶಬ್ದಗಳಿಗೆ ನಪುಂಸಕಲಿಂಗವನ್ನು ಸಮರ್ಥಿಸಲು ಸಾಧ್ಯವಿಲ್ಲವೆಂದು ಟೀಕೆಯ ಅಭಿಪ್ರಾಯ.

ಪ್ರಶ್ನೆ – 'ಅನಿರ್ದೇಶ್ಯಂ ಪರಮಂ ಸುಖಂ ತದೇತತ್ ಪರಮಾತ್ಮನೋ ರೂಪಮ್' ಯಾವ ಅನಿರ್ದೇಶ್ಯವಾದ ಪರಮಸುಖವಿದೆಯೋ ಅದು ಪರಮಾತ್ಮನ ಸ್ವರೂಪವಾಗಿದೆ ಎಂಬುದಾಗಿ ರೂಪಶಬ್ದವನ್ನು ಅಧ್ಯಾಹಾರ ಮಾಡುತ್ತೇವೆ. ಆವಾಗ ರೂಪಶಬ್ದವು ನಪುಂಸಕಲಿಂಗದಲ್ಲಿರುವುದರಿಂದ, ಅಂತಹ ನಪುಂಸಕಲಿಂಗದಿಂದ ಪ್ರಸಕ್ತನಾದ ಪರಮಾತ್ಮನು 'ತತ್' ಮತ್ತು 'ಏತತ್' ಎಂಬೆರಡು ನಪುಂಸಕದಲ್ಲಿರುವ ಶಬ್ದಗಳಿಂದಲೇ ಪರಾಮರ್ಶ ಮಾಡಬಹುದಲ್ಲವೇ?

ಉತ್ತರ – ಇದೂ ಸಹ ತಪ್ಪು. ಈ ಪಕ್ಷದಲ್ಲಿ ರೂಪಶಬ್ದವನ್ನು ಅಧ್ಯಾಹಾರ ಮಾಡಬೇಕಾಗುತ್ತದೆಂಬ ದೋಷವಿದೆ. ಏನನ್ನೂ ಅಧ್ಯಾಹಾರ ಮಾಡದೇ ಸಹಜವಾಗಿ ಜ್ಞಾನಿಸುಖಪರತ್ವವೆಂಬರ್ಥವನ್ನು ಹೇಳಲು ಬರುವಾಗ, ಇದು ಕ್ಲಿಷ್ಟಕಲ್ಪನೆಯಾಗಿದೆ.

ಮತ್ತು ಅಧ್ಯಾಹಾರ ಮಾಡುವ ಮೂಲಕ ನಪುಂಸಕಲಿಂಗವನ್ನು ನಿರ್ವಾಹ ಮಾಡುವುದು ಪೂರ್ವಮೀಮಾಂಸೆಗೆ ವಿರುದ್ಧವಾಗಿದೆ. ಏಕೆಂದರೆ 'ಪ್ರಾಸ್ಮಾ ಅಗ್ನಿಮ್' ಎಂಬಲ್ಲಿ 'ಪಶು' ಶಬ್ದವನ್ನು ಅಧ್ಯಾಹಾರ ಮಾಡುವ ಮೂಲಕ 'ಅಸ್ಮೈ' ಎಂಬ ಶಬ್ದಕ್ಕೆ ಪುಲ್ಲಿಂಗತ್ವವನ್ನು ನಿರ್ವಾಹ ಮಾಡಬಹುದಾದ್ದರಿಂದ, ಹೆಣ್ಣು ಪಶುವನ್ನೂ ಕೂಡ ಸ್ವೀಕರಿಸಬೇಕೆಂದಾಗುತ್ತದೆ. ಆದರೆ ಅಧ್ಯಾಹಾರ ಮಾಡಬಾರದಾದ್ದರಿಂದ ಹೆಣ್ಣುಪಶುವನ್ನು ಸ್ವೀಕರಿಸಬಾರದೆಂದು ಪೂರ್ವಮೀಮಾಂಸೆಯ ನವಮಾಧ್ಯಾಯದಲ್ಲಿ ನಿರ್ಣಯಿಸಿದ್ದಾರೆ. ಅದರಂತೆ ಇಲ್ಲೂ ಕೂಡ

'ತದೇತತ್' ಶಬ್ದಗಳಿಂದ ಪರಮಾತ್ಮನನ್ನು ಪರಾಮರ್ಶ ಮಾಡಬೇಕೆಂಬ ಅಪೇಕ್ಷೆಯಿಂದ, ರೂಪಶಬ್ದವನ್ನು ಅಧ್ಯಾಹಾರ ಮಾಡುವುದು ತಪ್ಪಾಗುತ್ತದೆ.

ಪ್ರಶ್ನೆ - 'ತಮೇವ ಭಾಂತಮ್ ಅನುಭಾತಿ ಸರ್ವಮ್' ಇತ್ಯಾದಿ ಶ್ರುತಿಯಲ್ಲಿ ಸೂರ್ಯಾದಿ ಪ್ರಕಾಶಗಳೆಲ್ಲವೂ ಪರಮಾತ್ಮನ ಅಧೀನವಾಗಿದೆ. ಪರಮಾತ್ಮನೇ ಪ್ರಥಮ ಪ್ರಕಾಶರೂಪನಾಗಿದ್ದಾನೆ. ಸೂರ್ಯಾದಿಗಳು ಪ್ರಕಾಶಸ್ವರೂಪರಲ್ಲ. ಇತ್ಯಾದಿಯಾಗಿ ಅನೇಕ ಹೇತುಗಳು ಹೇಳಲ್ಪಟ್ಟಿವೆ. ಈ ಎಲ್ಲಾ ಅಸಾಧಾರಣವಾದ ಪರಮಾತ್ಮನ ಲಿಂಗಗಳ ಬಲದಿಂದ, ಅನುಕೂಲ್ಯೇನ ಗೃಹ್ಯಮಾಣನಾದವನು ಪರಮಾತ್ಮನೇ ಆಗಿದ್ದಾನೆಂದು ಹೇಳಬಹುದಲ್ಲವೇ?

ಉತ್ತರ - ಅನುಕೃತಿವಾಕ್ಯದಲ್ಲಿ ಶ್ರುತವಾದ 'ತಮೇವ' ಎಂಬಲ್ಲಿರುವ 'ತತ್' ಶಬ್ದವು ಪುಲ್ಲಿಂಗದಲ್ಲಿರುವುದರಿಂದ ಈಶ್ವರ ಪರವಾಗಿದೆಯೆಂದೇ ಒಪ್ಪುತ್ತೇವೆ. ತನ್ಮಾತ್ರದಿಂದ ಅನುಕೂಲ್ಯೇನ ಗೃಹ್ಯಮಾಣನಾದವನು ಪರಮಾತ್ಮನೆಂದು ನಿರ್ಣಯಿಸಲಾಗದು. ಆದ್ದರಿಂದ 'ತಮೇವ ಭಾಂತಮ್' ಇತ್ಯಾದಿ ಶ್ರುತಿಯಲ್ಲಿ ಪರಮಾತ್ಮನೇ ಪ್ರತಿಪಾದ್ಯನಾಗಲಿ ಆದರೆ ಅನುಕೂಲ್ಯೇನ ಗೃಹ್ಯಮಾಣವಾದದ್ದು ಜ್ಞಾನಿಸುಖವೇ ಆಗುತ್ತದೆ.

ಈ ಅಭಿಪ್ರಾಯದಿಂದಲೇ ನ್ಯಾಯವಿವರಣದಲ್ಲಿ 'ತದೇತದಿತಿ ಮನ್ಯಂತೇ । ಕಥಂ ನು ತದ್ವಿಜಾನೀಯಾಮಿತಿ । ತೇಷಾಂ ಸುಖಂ ಶಾಶ್ವತಮಿತ್ಯುಕ್ತಜ್ಞಾನಿಸುಖಪರಾಮರ್ಶಃ' ಎಂದರೆ 'ತದೇತದಿತಿ ಮನ್ಯಂತೇ । ಕಥಂ ನು ತದ್ವಿಜಾನೀಯಾಮ್' ಎಂಬಲ್ಲಿ 'ತೇಷಾಂ ಸುಖಂ ಶಾಶ್ವತಮ್' ಎಂಬ ಹಿಂದಿನ ವಾಕ್ಯದಲ್ಲಿ ಪ್ರಸಕ್ತವಾದ ಜ್ಞಾನಿಸುಖವನ್ನು ಪರಾಮರ್ಶ ಮಾಡಬೇಕೆಂದು ಹೇಳಿರುತ್ತಾರೆ. ಹಾಗೂ ಭಾಷ್ಯದಲ್ಲೂ ಸಹ 'ಪರಮಾತ್ಮೈವಾನಿರ್ದೇಶ್ಯ ಸುಖರೂಪಃ' ಪರಮಾತ್ಮನೇ ಅನಿರ್ದೇಶ್ಯ ಸ್ವರೂಪನಾಗಿದ್ದಾನೆಂದು ಹೇಳಲಾಗಿದೆ.

ಇಲ್ಲಿಯ ತನಕ ಮಾಡಿದ ವಿಚಾರದಂತೆ 'ತದೇತತ್' ಎಂಬ ಶ್ರುತಿಯಲ್ಲಿರುವ 'ತತ್' ಎಂಬ ಪದವು ಸನ್ನಿಹಿತವಾದದ್ದನ್ನೇ ಪರಾಮರ್ಶ ಮಾಡುವಂತಹ ಪ್ರಾತಿಪಾದಿಕವಾಗಿದೆ. ಅದಕ್ಕನುಸಾರಿಯಾಗಿ ಪ್ರತ್ಯಯಾರ್ಥವೆನಿಸಿದ ಲಿಂಗವನ್ನು ಅರ್ಥೈಸಬೇಕು. ಮತ್ತು ಸಮಭಿವ್ಯಾಹೃತವಾದ ಸುಖಪದದ ಅನುಸಾರಿಯೂ ಆಗಿರುವುದರಿಂದ 'ತತ್' ಶಬ್ದವು ಸನ್ನಿಹಿತವಾದ ಜ್ಞಾನಿಸುಖವನ್ನೇ ಪರಾಮರ್ಶ ಮಾಡುತ್ತದೆ. ಆದ್ದರಿಂದ ಅನುಕೂಲ್ಯೇನ ಗೃಹ್ಯಮಾಣತ್ವವೂ ಕೂಡ ಜ್ಞಾನಿಗಳ ಸುಖದಲ್ಲೇ ಬರುತ್ತದೆ ಹೊರತು, ಪರಮಾತ್ಮನಲ್ಲವೆಂಬ ಪೂರ್ವಪಕ್ಷವು ದೃಢವಾಯಿತು.

ಆದ್ದರಿಂದ ವಿಷ್ಣುವೇ ಇಲ್ಲಿ ಪ್ರತಿಪಾದ್ಯ

तत्वप्रकाशिका – अतो विष्णुरेवात्र प्रतिपाद्य(त) इति सूत्रस्यार्थान्तरमभिप्रेत्य तां स्मृतिमुदाहरति ।। न तदिति ।।

ಆದ್ದರಿಂದ ವಿಷ್ಣುವೇ ಈ ಸ್ಮೃತಿಯಿಂದ ಪ್ರತಿಪಾದ್ಯನಾಗಿದ್ದಾನೆಂದು ಸೂತ್ರಕ್ಕೆ ಮತ್ತೊಂದು ಅರ್ಥವನ್ನು ಹೇಳುತ್ತಾ ಆ ಸ್ಮೃತಿಯನ್ನು ಉದಾಹರಿಸುತ್ತಾ ಇದ್ದಾರೆ 'ನ ತತ್' ಇತ್ಯಾದಿಯಾಗಿ.

ಧಾಮ ಶಬ್ದಕ್ಕೆ ಸ್ವರೂಪ ಎಂದರ್ಥ

तत्वप्रकाशिका – धाम स्वरुपम् । 'तेजः स्वरूपं च गृहं प्राज्ञैर्धामेति गीयते' इत्यभिधानात् । युक्तिसमुच्चयेऽपिपदम् ।

'ಧಾಮ' ಎಂಬ ಪದಕ್ಕೆ 'ಸ್ವರೂಪ' ಎಂದರ್ಥ, 'ತೇಜಃ ಸ್ವರೂಪಂ ಚ ಗೃಹಂ ಪ್ರಾಜ್ಞೈರ್ಧಾಮೇತಿ ಗೀಯತೇ' ಎಂಬುದಾಗಿ ಧಾಮ ಶಬ್ದಕ್ಕೆ ಸ್ವರೂಪ ಎಂಬರ್ಥದಲ್ಲಿ ಕೋಶ ಇದೆ. ಸೂತ್ರದಲ್ಲಿರುವ 'ಅಪಿ' ಶಬ್ದವು ಹಿಂದಿನ ಸೂತ್ರದಲ್ಲಿ ಹೇಳಲ್ಪಟ್ಟ, 'ಸೂರ್ಯಾದಿತೇಜೋನಿಯಾಮಕತ್ವ' ಮತ್ತು 'ಜಗತ್ ಪ್ರಕಾಶಕತ್ವ' ಎಂಬ ಯುಕ್ತಿಗಳನ್ನು ಸಮುಚ್ಚಯ ಮಾಡುತ್ತಿದೆ.

ಜ್ಞಾನಿಸುಖವನ್ನೇಕೆ ವಿವಕ್ಷಿಸಬಾರದು ?

तत्वप्रकाशिका – नच मन्तव्यं न तत्र सूर्यो भातीत्यादि पुलिङ्गेन प्रकृतपरमात्मा एवोच्यते, नतु आनुकूल्येन गृह्यमाणस्य । अतः 'स्तज्ज्ञानिसुखम्' इति ग्रहणेऽपि बाधकाभाव इति ।

'ನ ತತ್ರ ಸೂರ್ಯೋ ಭಾತಿ' ಎಂಬ ವಾಕ್ಯದಲ್ಲಿ 'ಏಕೋ ವಶೀ' ಎಂಬ ಹಿಂದಿನ ವಾಕ್ಯದಲ್ಲಿ ಹೇಳಲ್ಪಟ್ಟ ಪರಮಾತ್ಮನನ್ನೇ ಪುಲ್ಲಿಂಗದಲ್ಲಿ ಹೇಳಲಾಗಿದೆ ಹೊರತು ನಪುಂಸಕಲಿಂಗದಲ್ಲಿರುವ ಆನುಕೂಲ್ಯೇನ ಗೃಹ್ಯಮಾಣವಾದ ಸುಖವನ್ನು ಹೇಳಿರುವುದಿಲ್ಲ. ಆದ್ದರಿಂದ ಪರಮಾತ್ಮನಿಗೆ ಈ ಸುಖವು ಸಂಬಂಧಪಡದ ಕಾರಣ ಜ್ಞಾನಿಸುಖವನ್ನು ತೆಗೆದುಕೊಂಡರೆ ಏನೂ ಬಾಧಕವಿಲ್ಲವೆಂದು ಶಂಕಿಸಬಾರದು.

ಆನುಕೂಲ್ಯೇಣ ಗೃಹಣಮಾಣವಾದ ಸುಖ ಎಂದರೆ ಯಾವುದು ?

तत्वप्रकाशिका – 'किमु भाति न भाति वा' इति प्रकृतस्यैव न तत्रेत्यनुसन्धानप्रतीतेः, 'यस्यैवं सुखं रूपं तत्र' इति वाक्ययोजनोपपत्तेश्च ।

'न तत्र सूर्यो भाति' ಎಂಬುದರ ಹಿಂದಿನ ಮಂತ್ರದಲ್ಲಿ 'ಕಿಮು ಭಾತಿ ನ ಭಾತಿ ವಾ' ಎಂಬುದಾಗಿ ಪ್ರಸಕ್ತವಾದ ಆನುಕೂಲ್ಯೇನ ಗೃಹ್ಯಮಾಣವಾದ ಸುಖವನ್ನು 'ನ ತತ್ರ' ಎಂಬಲ್ಲಿ ಅನುಸಂಧಾನ ಮಾಡಬೇಕೆಂದು ಪ್ರತೀತವಾಗುತ್ತದೆ. ಮತ್ತು ಅನಿರ್ದೇಶ್ಯವಾದ ಸುಖವು ಯಾರ ಸ್ವರೂಪವೋ ಅವರನ್ನು ಸೂರ್ಯಾದಿಗಳು ಪ್ರಕಾಶ ಪಡಿಸುವುದಿಲ್ಲವೆಂದು ವಾಕ್ಯಯೋಜನೆ ಮಾಡಿದಾಗ ಅದೂ ಕೂಡ ಉಪಪನ್ನವಾಗುತ್ತದೆ.

ವಿಶೇಷವಿಚಾರ - ಪೂರ್ವಪಕ್ಷ ಹೀಗಿದೆ - ಕಾಠಕೋಪನಿಷತ್ತಿನ ಈ ಪ್ರಕರಣದಲ್ಲಿ ಕೇಳಿಸುತ್ತಿರುವ ಆನುಕೂಲ್ಯೇನ ಗೃಹ್ಯಮಾಣವು ಜ್ಞಾನಿಸುಖವೇ ಆಗಿದೆ ಹೊರತು, ಪರಮಾತ್ಮನಲ್ಲ. ಕಾರಣವೇನೆಂದರೆ 'ಕಥಂ ನು ತದ್ವಿಜಾನೀಯಾಮ್' ಎಂಬಲ್ಲಿರುವ ತತ್ ಶಬ್ದದಿಂದ ಹಿಂದಿನ ವಾಕ್ಯದಲ್ಲಿ 'ತದೇತದಿತಿ ಮನ್ಯಂತೇऽನಿರ್ದೇಶ್ಯಂ ಪರಮಂ ಸುಖಮ್' ಎಂದು ಪ್ರಕೃತವಾದ ಸುಖವನ್ನು ಪರಾಮರ್ಶ ಮಾಡಲಾಗಿದೆ. ಹಿಂದಿನ ವಾಕ್ಯದಲ್ಲಿ ಪ್ರಕೃತವಾದ ಸುಖವು ಜ್ಞಾನಿಸುಖವಾದ್ದರಿಂದ, ಆನುಕೂಲ್ಯೇನ ಗೃಹ್ಯಮಾಣವಾದದ್ದು ಜ್ಞಾನಿಸುಖವೆಂದೇ ಹೇಳಬೇಕು.

ಪ್ರಶ್ನೆ - 'ಹಂತ ತ ಇದಂ ಪ್ರವಕ್ಷ್ಯಾಮಿ ಗುಹ್ಯಂ ಬ್ರಹ್ಮ ಸನಾತನಮ್' 'ಏಲೈ ! ನಚಿಕೇತನೇ, ಗೂಢವಾದ ಸನಾತನವಾದ ಬ್ರಹ್ಮನ ಬಗ್ಗೆ ನಿನಗೆ ಉಪದೇಶಿಸುತ್ತೇನೆ' ಎಂಬ ಯಮದೇವರ ಮಾತಿನೊಂದಿಗೆ ಪ್ರಕರಣವು ಪ್ರಾರಂಭವಾಗುತ್ತಿದೆ. ಇದರಿಂದಲೇ ಇದು ಬ್ರಹ್ಮಪ್ರಕರಣವೆಂದು ನಿರ್ಣಯವಾಗುತ್ತದೆ. ಮತ್ತು 'ಅನಿರ್ದೇಶ್ಯಂ ಪರಮಂ ಸುಖಮ್' ಎಂದು, ಅನಿರ್ದೇಶ್ಯತ್ವ ಲಿಂಗವೂ ಕೂಡ ಶ್ರುತವಾಗಿದೆ. ಇದು ಬ್ರಹ್ಮನ ಅಸಾಧಾರಣ ಲಿಂಗ. ಹೀಗೆ ಪ್ರಕರಣ ಹಾಗೂ ಲಿಂಗಗಳ ಬಲದಿಂದ ಹಿಂದೆ ಪ್ರಕೃತವಾದ ಸುಖವೂ ಕೂಡ ಬ್ರಹ್ಮಸ್ವರೂಪವೆಂದೇ ಹೇಳಬಹುದಲ್ಲವೇ?

ಉತ್ತರ - ಪ್ರಕರಣ ಹಾಗೂ ಲಿಂಗಗಳ ಆಧಾರದಿಂದ ಬ್ರಹ್ಮಪರವೆಂದು ಹೇಳಬಹುದು. ಆದರೆ ಪ್ರಕರಣಲಿಂಗಗಳಿಗಿಂತಲೂ ಶ್ರುತಿಯು ಸ್ವಾಭಾವಿಕವಾಗಿ ಬಲಿಷ್ಠವಾಗಿವೆ. 'ತದೇತದಿತಿ ಮನ್ಯಂತೇ' ಎಂಬಲ್ಲಿರುವ 'ತತ್' ಮತ್ತು 'ಏತತ್' ಎಂಬೆರಡು ಸರ್ವನಾಮಶ್ರುತಿಗಳು

ಜ್ಞಾನಿಸುಖವನ್ನು ಪ್ರತಿಪಾದನೆ ಮಾಡುತ್ತಿರುವುದರಿಂದ, ಶ್ರುತಿಯ ಆಧಾರದಿಂದ ಜ್ಞಾನಿಸುಖವೇ ಅನುಕೂಲ್ಯೇನ ಗೃಹ್ಯಮಾಣವಾಗಿದೆಯೆಂದು ನಿರ್ಣಯಿಸುತ್ತೇವೆ.

'ತದೇತತ್' ಎಂಬ ಶ್ರುತಿಯಲ್ಲಿರುವ 'ತತ್' ಮತ್ತು 'ಏತತ್' ಎಂಬೆರಡು ಶಬ್ದಗಳು 'ಏಕಂ ರೂಪಂ ಬಹುಧಾ ಯಃ ಕರೋತಿ : ತಮಾತ್ಮಸ್ಥಂ ಯೇऽನುಪಶ್ಯಂತಿಧೀರಾಸ್ತೇಷಾಂ ಸುಖಂ ಶಾಶ್ವತಂ ನೇತರೇಷಾಮ್' ಎಂಬ ವಾಕ್ಯದಿಂದ ಪ್ರಕೃತವಾದ ಜ್ಞಾನಿಸುಖವನ್ನು ಪರಾಮರ್ಶ ಮಾಡುತ್ತಿವೆ.

ಪ್ರಶ್ನೆ - ಆದೇ ವಾಕ್ಯದಲ್ಲಿ 'ತಮಾತ್ಮಸ್ಥಂ' ಎಂಬುದಾಗಿ ಈಶ್ವರನೂ ಕೂಡ ಪ್ರಕೃತನೇ ಆಗಿದ್ದಾನಲ್ಲವೇ? ಹೀಗಿರುವಾಗ ಜ್ಞಾನಿಸುಖವನ್ನು ಮಾತ್ರ ಪರಾಮರ್ಶ ಮಾಡಲು ಏನು ಕಾರಣ?

ಉತ್ತರ - ಪರಮಾತ್ಮನು ಪುಲ್ಲಿಂಗವಾದ 'ತಮ್' ಎಂಬ ಶಬ್ದದಿಂದ ಪ್ರಕೃತನಾಗಿದ್ದಾನೆ. ಅಂತಹ ಪರಮಾತ್ಮನನ್ನು ಪರಾಮರ್ಶ ಮಾಡಬೇಕೆಂದರೆ 'ತತ್' ಮತ್ತು 'ಏತತ್' ಶಬ್ದಗಳೂ ಕೂಡ ಪುಲ್ಲಿಂಗದಲ್ಲೇ ಇರಬೇಕಾಗುತ್ತದೆ.

ಮತ್ತು ಹಿಂದಿನ ಅಧಿಕರಣದ ಸಿದ್ಧಾಂತದಲ್ಲಿ 'ತಸ್ಮಿನ್ ಯದಂತಃ' ಎಂಬಲ್ಲಿರುವ 'ತತ್' ಶಬ್ದದಿಂದ ಸನ್ನಿಹಿತವಾದ ಆಕಾಶವನ್ನು ಪರಾಮರ್ಶ ಮಾಡುವುದನ್ನು ಬಿಟ್ಟು, ವ್ಯವಹಿತವಾದ ಪುಂಡರೀಕವನ್ನು ಪರಾಮರ್ಶ ಮಾಡಬಾರದೆಂದು ನೀವು ಸಾಧಿಸಿದಿರಿ. ಅದರಂತೆ ಇಲ್ಲಿಯೂ ಕೂಡ ಸನ್ನಿಹಿತವಾದ ಜ್ಞಾನಿಸುಖವನ್ನೇ ಪರಾಮರ್ಶ ಮಾಡಲು ಬರುತ್ತಿರುವಾಗ ವ್ಯವಹಿತವಾದ ಈಶ್ವರನನ್ನು ಪರಾಮರ್ಶ ಮಾಡುವುದು ಅಯುಕ್ತವಾಗುತ್ತದೆ.

ಮತ್ತು 'ತೇಷಾಂ ಸುಖಮ್' ಎಂಬಲ್ಲಿರುವ ಸುಖಶಬ್ದದಿಂದ ಪ್ರಕೃತವಾದ ಜ್ಞಾನಿಸುಖವೇ 'ಪರಮಂ ಸುಖಮ್' ಎಂಬುದರ ಪ್ರತ್ಯಭಿಜ್ಞಾಕ್ಕೆ ವಿಷಯವಾಗುತ್ತದೆ.

'ಏಕೋ ವಶೀ' ಎಂಬಲ್ಲಿರುವ ಪರಮಾತ್ಮನನ್ನು ಪರಾಮರ್ಶಿಸಲು ಪೂರ್ವಪಕ್ಷಿಗಳಿಗೇಕೆ ಭಯವಿಲ್ಲ ?

तत्त्वप्रकाशिका – दूरोक्तग्रहणे बिभ्यतोऽतिदूरोक्तग्रहणे कथं न भीतिः । अनिर्देश्यत्वाद्ययोगाच्च ।।

'ತದೇತತ್' ಎಂಬಲ್ಲಿರುವ 'ತತ್' ಎಂಬ ಸರ್ವನಾಮಶಬ್ದದಿಂದ 'ಏಕೋ ವಶೀ' ಎಂಬ ದೂರದ ವಾಕ್ಯದಲ್ಲಿರುವ ಪರಮಾತ್ಮನನ್ನು, ಸ್ವೀಕಾರ ಮಾಡಲು ಪೂರ್ವಪಕ್ಷಕಾರರಿಗೆ ಹೆದರಿಕೆ

ಆಗುವುದಾದರೆ, 'ನ ತತ್ರ ಸೂರ್ಯೋ ಭಾತಿ' ಎಂಬ ವಾಕ್ಯದಲ್ಲಿ 'ತದೇತತ್' ಎಂಬ ವಾಕ್ಯಕ್ಕಿಂತ ಲೂ ಬಹಳದೂರದಲ್ಲಿರುವ 'ಏಕೋ ವಶೀ' ಇತ್ಯಾದಿ ವಾಕ್ಯದಲ್ಲಿರುವ ಪರಮಾತ್ಮನನ್ನು ಪರಾಮರ್ಶಮಾಡಲು ಭಯವಾಗುವುದಿಲ್ಲವೇನು? ಮತ್ತು ಜ್ಞಾನಿಸುಖದಲ್ಲಿ ಅದೃಶ್ಯತ್ವವು ಕೂಡುವುದಿಲ್ಲವಾದ್ದರಿಂದ 'ತದೇತತ್' ಎಂಬ ವಾಕ್ಯದಿಂದ ಜ್ಞಾನಿಸುಖವನ್ನು ಸ್ವೀಕರಿಸಲು ಸಾಧ್ಯವಿಲ್ಲ.

ಶ್ರೀಹರಿಯೇ ಆನುಕೂಲ್ಯೇನ ಗೃಹ್ಯಮಾಣನೆಂದು ಸಿದ್ಧವಾಯಿತು

तत्वप्रकाशिका – तस्मादानुकूल्येन गृह्यमाणो हरिरेवेति तस्यैव अनिर्देश्यत्वादीति सिद्धम् ।।

।। इति श्रीमज्जयतीर्थभिक्षुविरचितायां तत्वप्रकाशिकायाम् अनुकृत्यधिकरणम् ।।

ಈ ಎಲ್ಲಾಕಾರಣಗಳಿಂದ 'ಸೂರ್ಯಾದಿತೇಜೋನಿಯಾಮಕತ್ವ', 'ಜಗತ್‌ಪ್ರಕಾಶಕತ್ವ' ಮತ್ತು ಸೂರ್ಯಾದಿಗಳಿಂದ ಅಪ್ರಕಾಶ್ಯತ್ವ, ಈ ಎಲ್ಲ ಲಿಂಗಗಳೂ ಆನುಕೂಲ್ಯೇನ ಗೃಹ್ಯಮಾಣನಾದ ಪರಮಾತ್ಮನಲ್ಲಿ ಸಮಂಜಸವಾಗಿ ಉಪಪನ್ನವಾಗುವುದರಿಂದ ಶ್ರೀಹರಿಯೇ ಆನುಕೂಲ್ಯೇನ ಗೃಹ್ಯಮಾಣನಾಗುತ್ತಾನೆ. ಆದ್ದರಿಂದ ಅನಿರ್ದೇಶ್ಯತ್ವಾದಿಗುಣಗಳೂ ಕೂಡ ಅವನಲ್ಲಿಯೇ ಸಿದ್ಧವಾಗುತ್ತವೆ.

।। ಇಲ್ಲಿಗೆ ಶ್ರೀಮಜ್ಜಯತೀರ್ಥಮುನಿಗಳಿಂದ ವಿರಚಿತವಾದ ತತ್ವಪ್ರಕಾಶಿಕಾಟೀಕೆಯಲ್ಲಿ ಅನುಕೃತ್ಯಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ।।

ಭಾವದೀಪ

ಶ್ರುತಿಯ ಜೊತೆ ಸ್ಮೃತಿಯ ಸಮುಚ್ಚಯ

भावदीपः – अपि स्मर्यते।।

न केवलमिति ।। एतेन प्रागुक्ता श्रुतिरेतत्सूत्रस्थापिपदेन समुच्चितैवोक्तेति सूचितम् । भाष्यस्य सूत्रेणान्वय इति भावः ।

'ಅಪಿ ಸ್ಮರ್ಯತೇ'

ಟೀಕೆಯಲ್ಲಿ 'ನ ಕೇವಲಮ್' ಇತ್ಯಾದಿಯಾಗಿ ಹೇಳಿದ್ದರಿಂದ, ಹಿಂದಿನ ಸೂತ್ರದಲ್ಲಿ ಉಲ್ಲೇಖಿಸಲ್ಪಟ್ಟ ಶ್ರುತಿಯನ್ನು ಈ ಸೂತ್ರದಲ್ಲಿರುವ 'ಅಪಿ' ಪದದಿಂದ ಸಮುಚ್ಚಯ ಮಾಡಬೇಕೆಂದು ಸೂಚಿದಂತಾಯಿತು. ಭಾಷ್ಯದ ಮಾತಿಗೆ ಸೂತ್ರದ ಜೊತೆಗೆ ಅನ್ವಯ ಮಾಡಿಕೊಳ್ಳಬೇಕು.

'ಅಪಿ' ಪದದಿಂದ ಎರಡು ಲಿಂಗಗಳ ಸಮುಚ್ಚಯ

भावदीपः – अत्राद्यसूत्रे चशब्देन न तत्रेति वाक्यशेषोक्तलिङ्गं समुच्चीयते। तत्र सूर्याद्यप्रकाश्यत्वसूर्यादिनियन्तृत्वजगद्भासकत्वरूपलिङ्गानां मध्ये द्वयोरपि शब्देन प्रागुक्तश्रुतिसिद्धत्वमुक्त्वा त्रयाणामपि विष्णुनिष्ठत्वं स्मार्तं चेत्याहेति योजना तु स्फुटत्वान्नोक्तेत्याहुः ।

ಈ ಅಧಿಕರಣದ ಪ್ರಥಮಸೂತ್ರದಲ್ಲಿರುವ 'ಚ' ಶಬ್ದದಿಂದ 'ನ ತತ್ರ' ಇತ್ಯಾದಿ ವಾಕ್ಯಶೇಷದಲ್ಲಿ ಹೇಳಲ್ಪಟ್ಟ ಲಿಂಗವನ್ನು ಸಮುಚ್ಚಯ ಮಾಡಲಾಗಿದೆ. ಆ ಶ್ರುತಿಯಲ್ಲಿ ಸೂರ್ಯಾದ್ಯಪ್ರಕಾಶ್ಯತ್ವ, ಸೂರ್ಯಾದಿನಿಯಂತೃತ್ವ, ಜಗತ್‌ಭಾಸಕತ್ವ ಮೊದಲಾದ ಲಿಂಗಗಳ ಮಧ್ಯದಲ್ಲಿ ಎರಡನ್ನು 'ಅಪಿ' ಶಬ್ದದಿಂದ ಸ್ವೀಕರಿಸಿ, ಅವುಗಳನ್ನು ಹಿಂದೆ ಉಲ್ಲೇಖಿಸಿದ, ಶ್ರುತಿಯಿಂದ ಸಿದ್ಧವಾಗಿವೆಯೆಂದು ಸಮರ್ಥಿಸಿ, ಮೂರುಲಿಂಗಗಳೂ ಸಹ ವಿಷ್ಣುನಿಷ್ಠವಾಗಿವೆಯೆಂಬ ವಿಷಯದಲ್ಲಿ ಶ್ರುತಿಯು ಪ್ರಮಾಣವಾಗಿದೆಯೆಂದು ತಿಳಿಯಬೇಕು. ಈ ವಿಷಯವು ಸ್ಪಷ್ಟವಾದ್ದರಿಂದ ಪ್ರತ್ಯೇಕವಾಗಿ ಹೇಳಿಲ್ಲ.

'ಕಿಂಚ' ಇತ್ಯಾದಿ ಟೀಕೆಯ ಸೂತ್ರದ 'ಅಪಿ' ಪದಾರ್ಥ

ಭಾವದೀಪಃ – ನ ತದಿತಿ ಸ್ಮೃತ್ಯುಪಯೋಗಾಯ ಸೂತ್ರಸ್ಯಾರ್ಥಾನ್ತರಂ ವ್ಯಕ್ತೀಕುರ್ವನ್ನವತಾರಯತಿ – ಕಿಞ್ಚನೇತಿ ।। ಸೌತ್ರಾಪಿಶಬ್ದಾರ್ಥೋऽಯಮ್ । ಭಾತಿ ಭಾಸಯತಿ । ಸೂರ್ಯಾದಯಸ್ತಂ ನ ಭಾಸಯನ್ತೀತ್ಯಾಥರ್ವಣಭಾಷ್ಯೋಕ್ತೇಃ ।।

'ನ ತದ್ಭಾಸಯತೇ' ಎಂಬ ಸ್ಮೃತಿಗೆ ಉಪಯೋಗವಾಗುವುದಕ್ಕಾಗಿ ಸೂತ್ರಕ್ಕೆ ಮತ್ತೊಂದು ಅರ್ಥವನ್ನು ಹೇಳಲು ಅವತಾರಿಕೆ ನೀಡುತ್ತಿದ್ದಾರೆ 'ಕಿಂಚ' ಇತ್ಯಾದಿ ವಾಕ್ಯದಿಂದ. ಇದು ಸೂತ್ರದಲ್ಲಿರುವ 'ಅಪಿ' ಶಬ್ದದ ಅರ್ಥವಾಗಿದೆ. ಭಾತಿ' ಎಂಬುದಕ್ಕೆ ಪ್ರಕಾಶಪಡಿಸುತ್ತಾನೆ ಎಂದರ್ಥ. ಸೂರ್ಯಾದಿಗಳು ವಿಷ್ಣುವನ್ನು ಪ್ರಕಾಶಪಡಿಸುವುದಿಲ್ಲವೆಂದು ಆಥರ್ವಣ ಭಾಷ್ಯದಲ್ಲಿ ಹೇಳಿರುವುದರಿಂದ.

ಮೂರನೆಯ ಲಿಂಗವೂ ಅಪಿಶಬ್ದದಿಂದ ಸಮುಚ್ಚಿತ

ಭಾವದೀಪಃ – ಯುಕ್ತೀತಿ ।। ಪೂರ್ವಯೋಜನಾಯಾಮ್ ಆದ್ಯಸೂತ್ರೋಪಾತ್ತಸ್ಯ ಯುಕ್ತಿದ್ವಯಸ್ಯ ವಿಷ್ಣೌ ಶ್ರೌತತ್ವಸಮುಚ್ಚಯೇऽಪಿಶಬ್ದ ಇತಿ ದರ್ಶಿತಮ್ । ಇದಾನೀಂ ಸೂರ್ಯಾದ್ಯಪ್ರಕಾಶ್ಯತ್ವಸ್ಯಾಪಿ ಸ್ಮಾರ್ತತ್ವಮಿತಿ ಸೂರ್ಯಾದ್ಯಪ್ರಕಾಶ್ಯತ್ವಾಚ್ಚಾನುಕೂಲ್ಯೇನ ಗೃಹ್ಯಮಾಣೋ ವಿಷ್ಣುರೇವೇತಿ ಸೂರ್ಯಾದ್ಯಪ್ರಕಾಶ್ಯತ್ವರೂಪಯುಕ್ತಿ ಸಮುಚ್ಚಯೇऽಪಿ ಪದಮಿತ್ಯರ್ಥಃ ।

ಹಿಂದಿನ ಯೋಜನೆಯಲ್ಲಿ ಮೊದಲನೆಯ ಸೂತ್ರದಿಂದ ಸ್ವೀಕರಿಸಲ್ಪಟ್ಟ ಎರಡು ಯುಕ್ತಿಗಳಿಗೆ, ವಿಷ್ಣುವಿನಲ್ಲಿ ಶ್ರುತಿಸಿದ್ಧತ್ವವನ್ನು ಸಮುಚ್ಚಯ ಮಾಡುವುದಕ್ಕಾಗಿ 'ಅಪಿ' ಶಬ್ದವು ಉಕ್ತವಾಗಿದೆಯೆಂದು ಹೇಳಲಾಯಿತು. ಈಗ 'ಸೂರ್ಯಾದ್ಯಪ್ರಕಾಶ್ಯತ್ವ' ಎಂಬ ಲಿಂಗವೂ ಸಹ ಶ್ರುತಿಸಿದ್ಧವೇ ಆಗಿದೆ. ಆದ್ದರಿಂದ 'ಸೂರ್ಯಾದ್ಯಪ್ರಕಾಶ್ಯತ್ವ' ಎಂಬ ಲಿಂಗದ ಬಲದಿಂದಲೂ ಅನುಕೂಲ್ಯೇನ ಗೃಹ್ಯಮಾಣನಾದವನು ವಿಷ್ಣುವೇ ಆಗಿದ್ದಾನೆ ಎಂಬುದಾಗಿ 'ಸೂರ್ಯಾದ್ಯಪ್ರಕಾಶ್ಯತ್ವ' ಎಂಬ ಯುಕ್ತಿಯನ್ನು ಸಮುಚ್ಚಯ ಮಾಡುವುದಕ್ಕಾಗಿ ಅಪಿಶಬ್ದವನ್ನು ಪ್ರಯೋಗಿಸಲಾಗಿದೆಯೆಂದು ಈಗ ಯೋಜನೆ ಮಾಡಿಕೊಳ್ಳಬೇಕು.

'ನಚ ಮಂತವ್ಯಮ್' ಇತ್ಯಾದಿ ಟೀಕೆಯಿಂದ ವ್ಯಾವರ್ತವಾದ ಶಂಕೆ

ಭಾವದೀಪಃ – ಶ್ರುತೌ ನ ತತ್ರೇತಿ ವಾಕ್ಯಶೇಷೋಕ್ತಲಿಙ್ಗಸ್ಯ ಪ್ರಾಥಮ್ಯೇನ ಸೂರ್ಯಾದ್ಯಪ್ರಕಾಶ್ಯತ್ವಾದ್ 'ಅನುಕೃತೇಸ್ತಸ್ಯ ಚ' ಇತಿ ವಕ್ತವ್ಯೇ ಅನುಕೃತಿಶಬ್ದೇನ 'ತಮೇವ

भान्तम्' इति द्वितीय वाक्योक्तानुभानोक्त्या सूचितं चोद्यमाशङ्क्योत्तरयति – नचेति ।।

ಶ್ರುತಿಯಲ್ಲಿ 'न तत्र' ಎಂಬ ವಾಕ್ಯಶೇಷದಿಂದ ಹೇಳಲ್ಪಟ್ಟ ಲಿಂಗಕ್ಕೆ ಪ್ರಾಥಮ್ಯವಿರುವುದರಿಂದ, 'सूर्याद्यप्रकाश्यत्वात्' 'अनुकृतेस्तस्य च' ಎಂಬ 'अनुकृति' ಶಬ್ದದಿಂದ 'तमेव भान्तम्' ಎಂಬ ಎರಡನೆಯ ವಾಕ್ಯದಲ್ಲಿ ಹೇಳಲ್ಪಟ್ಟ ಅನುಭಾನದಿಂದ ಸೂಚಿತವಾದ ಆಶಂಕೆಯನ್ನು ತೋರಿಸಿ ಉತ್ತರಿಸುತ್ತಿದ್ದಾರೆ 'नच' ಇತ್ಯಾದಿ ಗ್ರಂಥದಿಂದ.

ಮೂರು ತತ್‌ಗಳಲ್ಲಿ ಯಾವುದು ?

भावदीपः – इत्यादि पुल्लिङ्गेनेति ।। तत्र तं तस्येति तच्छब्दत्रयगतेनेत्यर्थः। मध्ये तमिति पुल्लिङ्गश्रवणात् पूर्वोत्तरतच्छब्दयोरपि तथात्वमिति भावः ।। प्रकृतेति।। 'चेतनश्चेतनानाम्' इत्यनेनेत्यर्थः ।

'ಇತ್ಯಾದಿ ಪುಲ್ಲಿಂಗೇನ' ಎಂದರೆ 'तत्र तं तस्य' ಇತ್ಯಾದಿ ಸ್ಥಳಗಳಲ್ಲಿರುವ ಮೂರು 'ತತ್' ಶಬ್ದಗಳಿಂದ ಎಂದರ್ಥ. ಈ ಮೂರರ ಮಧ್ಯೇ 'ತಮ್' ಎಂಬುದು ಮಾತ್ರ ಪುಲ್ಲಿಂಗದಲ್ಲಿದೆ. ಹಿಂದಿನ-ಮುಂದಿನ ಪದಗಳಲ್ಲಿಯೂ ಪುಲ್ಲಿಂಗವನ್ನೇ ಪ್ರಯೋಗಿಸಬೇಕಾಗಿತ್ತು. 'ಪ್ರಕೃತ' ಎಂದರೆ 'ಚೇತನಶ್ಚೇತನಾನಾಮ್' ಎಂಬುದರಿಂದ ಪ್ರಕೃತವಾದ ಎಂದರ್ಥ.

ಮೂರುಲಿಂಗಗಳು ಪ್ರಕೃತ

भावदीपः – उच्यते । सूर्याद्यप्रकाश्यत्वतत्प्रकाशनियन्तृत्वजगत्प्रकाशकत्वरूप लिङ्गत्रयमित्यर्थः ।। प्रकृतस्यैवेति ।। दुर्ज्ञेयत्वेनोक्तस्यैव वस्तुनो 'न तत्र सूर्यो भाति' इत्यत्र प्रत्यभिज्ञानादित्यर्थः ।

'ಉಚ್ಯತೇ' ಎಂದರೆ ಸೂರ್ಯಾದ್ಯಪ್ರಕಾಶ್ಯತ್ವ, ತತ್‌ಪ್ರಕಾಶನಿಯಂತೃತ್ವ, ಜಗತ್‌ಪ್ರಕಾಶಕತ್ವ ಎಂಬ ಮೂರು ಲಿಂಗಗಳು ಹೇಳಲ್ಪಟ್ಟಿವೆ ಎಂದರ್ಥ. 'ಪ್ರಕೃತಸ್ಯೈವ' ಎಂದರೆ ದುರ್ಜ್ಞೇಯವೆಂದು ಹೇಳಲ್ಪಟ್ಟ ವಸ್ತುವೇ 'न तत्र सूर्यो भाति' ಎಂಬ ವಾಕ್ಯದಿಂದ ಪ್ರತ್ಯಭಿಜ್ಞಾನಮಾಯವಾಗಿದೆ ಎಂದರ್ಥ.

ಪುಲ್ಲಿಂಗನಿರ್ವಹಣಕ್ಕಾಗಿ 'ಯಸ್ಯ' ಇತ್ಯಾದಿ ಟೀಕೆ

ಭಾವದೀಪಃ – ತಥಾಚ ತದೈಕಾರ್ಥ್ಯಮೇವ ತಂ ತಸ್ಯೇತಿ ತಚ್ಛಬ್ದಯೋರಪೀತಿ ಭಾವಃ । ಕಥಂ ತರ್ಹಿ ತತ್ರ ತಮಿತ್ಯಾದಿಪುಲ್ಲಿಙ್ಗನಿರ್ವಾಹ ಇತ್ಯತ ಆಹ – ಯಸ್ಯೇತಿ ।।

ಆದ್ದರಿಂದ ಆ ಶ್ರುತಿಯ ಜೊತೆಗೆ 'ತಂ ತಸ್ಯ' ಎಂಬಲ್ಲಿರುವ ತತ್‌ಶ್ರುತಿಗಳೂ ಸಹ ಏಕಾರ್ಥತ್ವವನ್ನು ಹೊಂದುತ್ತವೆ. ಹಾಗಾದರೆ 'ತತ್ರ ತಮ್' ಇತ್ಯಾದಿಯಾಗಿ ಪುಲ್ಲಿಂಗವನ್ನು ಹೇಗೆ ನಿರ್ವಹಿಸುವುದು? ಎಂಬ ಪ್ರಶ್ನೆಗೆ 'ಯಸ್ಯ' ಎಂಬ ಟೀಕೆಯಿಂದ ಉತ್ತರಿಸಿದ್ದಾರೆ.

ಪುಲ್ಲಿಂಗಕ್ಕೆ ಸನ್ನಿಹಿತಪರತ್ವ ಸಮರ್ಥನೆ

ಭಾವದೀಪಃ – ಯದನಿರ್ದೇಶ್ಯಂ ಸುಖಮ್ ಆನುಕೂಲ್ಯೇನ ಗ್ರಾಹ್ಯಂ ಚ ತತ್ಪರಮಾತ್ಮನಃ ಏತತ್ಪ್ರಕೃತಂ ರೂಪಮ್ । ಯಸ್ಯ ಪರಮಾತ್ಮನೋ ರೂಪಮೇವಮನಿರ್ದೇಶ್ಯಪರಮಸುಖಾತ್ಮಕ-ಮಾನುಕೂಲ್ಯೇನ ಗ್ರಾಹ್ಯಂ ಚ ತತ್ರ ಪರಮಾತ್ಮನಿ ತಂ ಪರಮಾತ್ಮಾನಮ್ ಇತಿ ಚ ಪುಲ್ಲಿಙ್ಗಸ್ಯ ಸನ್ನಿಹಿತಪರತ್ವಸ್ಯ ಚೋಪಪತ್ತೇರಿತ್ಯರ್ಥಃ ।

ಯಾವ ಅನಿರ್ದೇಶ್ಯವಾದ ಸುಖವಿದೆಯೋ, ಮತ್ತು ಆನುಕೂಲ್ಯೇನ ಗೃಹ್ಯಮಾಣವಾಗಿದೆಯೋ, ಆ ಸುಖವು ಪರಮಾತ್ಮಸ್ವರೂಪವೇ ಆಗಿದೆ. ಯಾವ ಪರಮಾತ್ಮನ ರೂಪವು ಅನಿರ್ದೇಶ್ಯವಾದ ಪರಮಸುಖಸ್ವರೂಪವೂ ಆನುಕೂಲ್ಯೇನ ಗೃಹ್ಯಮಾಣವೂ ಆಗಿದೆಯೋ, ಅಂತಹ ತತ್ರ = ಪರಮಾತ್ಮನಲ್ಲಿ 'ತಂ' = ಪರಮಾತ್ಮನನ್ನು ಎಂಬುದಾಗಿ ಪುಲ್ಲಿಂಗಕ್ಕೆ ಸನ್ನಿಹಿತಪರತ್ವವು ಉಪಪನ್ನವಾಗುತ್ತ ದೆಂದರ್ಥ.

'ಯಸ್ಯ' ಎಂಬುದರ ಅಧ್ಯಾಹಾರ ಅನಿವಾರ್ಯವೇ ?

ಭಾವದೀಪಃ – ತರ್ಹಿ ಯಸ್ಯೇತ್ಯಧ್ಯಾಹಾರದೋಷಃ । ವ್ಯವಹಿತಪರತ್ವಪಕ್ಷೇ ತು 'ಯೋ ವಿದಧಾತಿ ಕಾಮಾನ್' 'ನ ತತ್ರ ಸೂರ್ಯೋ ಭಾತಿ' ಇತ್ಯುಪಪತ್ತೇರಿತ್ಯತ ಆಹ – ದೂರೋಕ್ತೇತಿ ।। 'ತದೇತದ್' ಇತಿ ಶ್ರುತೇರ್ವ್ಯವಹಿತೇಶ್ವರಪರತ್ವೇ ಬಿಭ್ಯತಃ ನ ತತ್ರೇತ್ಯಾದೇರತಿದೂರೋಕ್ತಸ್ಯ 'ಚೇತನಶ್ಚೇತನಾನಾಮ್' ಇತಿ ವಾಕ್ಯೋಕ್ತಗ್ರಹಣೇ ಕಥಂ ನ ಭೀತಿರಿತ್ಯರ್ಥಃ ।

ಹಾಗಾದರೆ 'ಯಸ್ಯ' ಎಂಬ ಪದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕಲ್ಲವೇ? ವ್ಯವಹಿತಪರತ್ವವನ್ನು ಒಪ್ಪುವ ಪಕ್ಷದಲ್ಲಿ 'ಯಸ್ಯ' ಎಂಬ ಪದವನ್ನು ಅಧ್ಯಾಹಾರ ಮಾಡಬೇಕಾಗಿಲ್ಲ. 'ಯೋ ವಿದಧಾತಿ ಕಾಮಾನ್ ನ ತತ್ರ ಸೂರ್ಯೋ ಭಾತಿ' ಎಂಬುದಾಗಿಯೇ ಅನ್ವಯವನ್ನು ಕೂಡಿಸಬಹುದಲ್ಲವೇ? ಎಂಬ ಪ್ರಶ್ನೆಗೆ 'ದೂರೋಕ್ತ' ಇತ್ಯಾದಿ ಟೀಕೆಯಿಂದ ಉತ್ತರಿಸಿದ್ದಾರೆ. 'ತದೇತತ್' ಎಂಬ ಶ್ರುತಿಗೆ ವ್ಯವಹಿತಪರತ್ವವನ್ನು ಒಪ್ಪಬೇಕಾಗುತ್ತದೆಂದು ಹೆದರುವವನು 'ನ ತತ್ರ' ಎಂಬ ವಾಕ್ಯಕ್ಕೆ ಅತ್ಯಂತ ದೂರದಲ್ಲಿರುವ 'ಚೇತನಶ್ಚೇತನಾನಾಮ್' ಎಂಬ ವಾಕ್ಯದಲ್ಲಿ ಪ್ರತಿಪಾದ್ಯನಾದವನನ್ನು ಪರಾಮರ್ಶ ಮಾಡಲು ಹೆದರುವುದಿಲ್ಲವೇನು?

ಜ್ಞಾನಿಸುಖವನ್ನು ಪರಾಮರ್ಶಿಸಿದರೆ ಮತ್ತೊಂದು ಬಾಧಕ

भावदीपः – सन्निहितपरामर्शित्वच्छब्दप्रातिपदिकस्वारस्यानुरोधेन गुणभूतं लिङ्गं कथञ्चिदुक्तदिशा निर्वाह्यमिति भावः । पुल्लिङ्गानुरोधेन 'न तत्र' इत्यादेर्व्यवहितपरत्वमुपेत्य 'तदेतद्' इत्यादेर्ज्ञानिसुखपरत्वोपगतौ बाधकान्तरं चाऽह – अनिर्देश्यत्वाद्ययोगाच्चेति ।।

ಸನ್ನಿಹಿತವಾದದ್ದನ್ನು ಪರಾಮರ್ಶಿಸುವ 'ತತ್' ಎಂಬ ಪ್ರಾತಿಪದಿಕದ ಸ್ವಾರಸ್ಯಕ್ಕೆ ಅನುಸಾರಿಯಾಗಿ ಗೌಣವಾದ ಲಿಂಗವನ್ನು ಹೇಗಾದರೂ ಕಷ್ಟದಿಂದ ನಿರ್ವಹಿಸಬೇಕೆಂದು ಅಭಿಪ್ರಾಯ. ಪುಲ್ಲಿಂಗವನ್ನೇ ಅನುಸರಿಸಿ 'ನ ತತ್ರ' ಇತ್ಯಾದಿ ವಾಕ್ಯಕ್ಕೆ ವ್ಯವಹಿತಪರತ್ವವನ್ನು ಅಂಗೀಕಾರ ಮಾಡಿ 'ತದೇತತ್' ಇತ್ಯಾದಿ ವಾಕ್ಯಕ್ಕೆ ಜ್ಞಾನಿಸುಖಪರತ್ವವನ್ನು ಒಪ್ಪಿದಾಗ ಮತ್ತೊಂದು ಬಾಧಕ ಬರುತ್ತದೆಂದು 'ಅನಿರ್ದೇಶ್ಯತ್ವಾದ್ಯ-ಯೋಗಾಚ್ಚ' ಎಂಬ ಟೀಕೆಯಿಂದ ಸಮರ್ಥಿಸುತ್ತಿದ್ದಾರೆ.

ಜ್ಞಾನಿಸುಖದಲ್ಲಿ ಪರಮತ್ವವಿಲ್ಲವೆನ್ನಲು ವರಾಹ ಪುರಾಣ

भावदीपः – 'यतो वाचो निवर्तन्ते' इत्यादि श्रुत्या ब्रह्मरूपानन्दस्यैवा-निर्देश्यत्वात् । 'एष परम आनन्दः' इत्यादिश्रुत्या तस्यैव परमानन्दत्वाच्च ज्ञानिसुखस्य च 'अव्यक्तादितृणान्तास्तु विप्लुतानन्दभागिनः' इति

पूर्वोक्तदिशा वा 'ब्रह्मादीनां तु युक्तानां सुखं विष्णुसुखस्य तु । प्रतिबिम्बस्तु विप्लुट्को विष्णोरेव परं सुखम् ।।' इति काठकभाष्योक्त-वाराहस्मृत्या वा अनिर्देश्यत्वपरमत्वयोरयोगाच्चेत्यर्थः ।।

'यतो वाचो निवर्तन्ते' ಇತ್ಯಾದಿ ಶ್ರುತಿಯ ಬಲದಿಂದ ಬ್ರಹ್ಮಸ್ವರೂಪವಾದ ಆನಂದವೇ ಅನಿರ್ದೇಶ್ಯವಾಗಿದೆಯೆಂದು ಸ್ಪಷ್ಟವಾಗುತ್ತದೆ. 'ಏಷ ಪರಮ ಆನಂದಃ' ಇತ್ಯಾದಿ ಶ್ರುತಿಯಿಂದ ಅಂತಹ ಪರಮಾತ್ಮನೇ ಪರಮಾನಂದಸ್ವರೂಪನೆಂದು ತಿಳಿಯುತ್ತದೆ. ಜ್ಞಾನಿಸುಖವಾದರೂ 'अव्यक्तादि-तृणान्तास्तु विप्लुडानन्दभागिनः' ಇತ್ಯಾದಿ ಹಿಂದೆ ಹೇಳಿದ ಮಾತಿನಂತೆ ಅನಿರ್ದೇಶ್ಯವೆಂದಾಗಲೀ, ಪರಮಾನಂದಸ್ವರೂಪವಾಗಿದೆಯೆಂದಾಗಲೀ ಹೇಳಲು ಸಾಧ್ಯವಿಲ್ಲ. 'ब्रह्मादीनाम् तु युक्तानाम् सुखं विष्णुसुखस्य तु । प्रतिबिंबस्तु विप्लुट्कोः विष्णोरेव परं सुखम् ॥' ಎಂಬ ಕಾಠಕಭಾಷ್ಯದಲ್ಲಿ ಉದಾಹರಿಸಿದ ವರಾಹಪುರಾಣದ ಮಾತಿನ ಬಲದಿಂದಲೂ ಜ್ಞಾನಿಸುಖಕ್ಕೆ ಪರಮತ್ವವನ್ನು ಹೇಳಲು ಸಾಧ್ಯವಿಲ್ಲ ಎಂದರ್ಥ.

ಶ್ರೀಹರಿಯಲ್ಲಿ ಮಾಡಿದ ಸಮನ್ವಯಕ್ಕೆ ಸಾಧಕವಿದೆ ಬಾಧಕವಿಲ್ಲ

भावदीपः – तस्मादिति ।। सूर्यादितेजोनियन्तृत्वजगत्प्रकाशकत्वसूर्याद्य-प्रकाश्यत्वरूपसूत्रोक्तसाधकभावात् सुखश्रुतिविरोधादिबाधकाभावाच्चेत्यर्थः । सूत्रेऽध्याहृतप्रतिज्ञार्थः – आनुकूल्येनेति ।। अदृश्यत्वादीति फलोक्तिः अज्ञेयत्वमादिपदार्थः । अत्र श्रुतं प्राक् श्रुतं चेत्यर्थः ।। २३ ।।

।। इति श्रीराघवेन्द्रयतिकृते भावदीपे अनुकृत्यधिकरणम् ।।

'तस्मात्' ಎಂದರೆ ಸೂರ್ಯಾದಿತೇಜೋನಿಯಂತೃತ್ವ, ಜಗತ್‌ಪ್ರಕಾಶಕತ್ವ, ಸೂರ್ಯಾದ್ಯಪ್ರಕಾಶ್ಯತ್ವ ಎಂಬ ಸೂತ್ರದಲ್ಲಿ ಹೇಳಿದ ಮೂರು ಸಾಧಕಲಿಂಗಗಳಿರುವುದರಿಂದ ಸುಖಶ್ರುತಿಗಳ ವಿರೋಧವೆಂಬ

ಬಾಧಕವೂ ಇಲ್ಲದ ಕಾರಣ ಎಂದರ್ಥ. ಸೂತ್ರದಲ್ಲಿ ಅಧ್ಯಾಹಾರ ಮಾಡಲ್ಪಟ್ಟ ಪ್ರತಿಜ್ಞೆಯ ಅರ್ಥವನ್ನು 'ಆನುಕೂಲ್ಯೇನ' ಎಂಬುದರಿಂದ ಹೇಳುತ್ತಿದ್ದಾರೆ. 'ಅದೃಶ್ಯತ್ವಾದಿ' ಎಂಬುದು ಅಧಿಕರಣದಫಲ. 'ಅಜ್ಞೇಯತ್ವ' ಎಂಬುದು ಆದಿಪದದ ಅರ್ಥ ಇಲ್ಲಿ ಶ್ರುತವಾದ ಮತ್ತು ಹಿಂದೆ ಶ್ರುತವಾದ ಧರ್ಮಗಳು ಎಂದು ತಿಳಿಯಬೇಕು.

॥ ಇಲ್ಲಿಗೆ ಶ್ರೀಮದ್‌ರಾಘವೇಂದ್ರತೀರ್ಥರಿಂದ ವಿರಚಿತವಾದ ಭಾವದೀಪದ
ಅನುಕೃತ್ಯಧಿಕರಣದ ಕನ್ನಡ ಅನುವಾದವು ಮುಗಿಯಿತು ॥

॥ ಶ್ರೀ ಮಧ್ವೇಶಾರ್ಪಣಮಸ್ತು ॥

ತಂತ್ರದೀಪಿಕೆಯಲ್ಲಿ ಅನುಕೃತ್ಯಧಿಕರಣದ ಸೂತ್ರಗಳು

।। श्रीजानकीवदनाम्भोजराजहंसाय रामचन्द्राय नमः ।।

।। श्री गुरुभ्यो नमः ।।

श्री राघवेन्द्रतीर्थविरचिता

तन्त्रदीपिका

अनुकृत्यधिकरणम् (१।३।६)

ಅಧಿಕರಣದ ಸಮನ್ವಯ

।। अनुकृतेस्तस्य च ।।१-३-२२

अत्र ज्ञानार्थं प्रार्थितत्वरूपमानुकूल्येन गृह्यमाणत्वं लिङ्गं समन्वीयते। आनुकूल्येन गृह्यमाणमिति योग्यतयाऽन्वेति ।

ಈ ಅಧಿಕರಣದಲ್ಲಿ 'ಜ್ಞಾನಾರ್ಥ೦ ಪ್ರಾರ್ಥಿತತ್ವ' ಎಂಬ 'ಆನುಕೂಲ್ಯೇನ ಗೃಹ್ಯಮಾಣತ್ವ' ಎಂಬ ಲಿಂಗವನ್ನು ಸಮನ್ವಯ ಮಾಡುತ್ತಿದ್ದಾರೆ. 'ಆನುಕೂಲ್ಯೇನ ಗೃಹ್ಯಮಾಣಮ್' ಎಂಬ ಪದಗಳು ಯೋಗ್ಯವಾದ್ದರಿಂದ ಅನ್ವಯವನ್ನು ಹೊಂದುತ್ತವೆ.

'ತಸ್ಯ' ಎಂಬ ಪದದ ಆವೃತ್ತಿಯ ಜೊತೆ ಸೂತ್ರಾರ್ಥ

अनुकृतिपदेनानुभानमुच्यते । तस्यापि क्रियात्वात् । तस्येति तन्त्रम्। ''कथं नु तद्विजानीयां किमु भाति न भाति वा'' इत्युक्तमानुकूल्येन

गृह्यमाणं तत्तु ब्रह्मैव । नतु ज्ञानिसुखम् । कुतः? तस्याऽनुकूल्येन गृह्यमाणस्यानुकृतेः सूर्यादिभिरनुभानात् । ''तमेव भान्तमनुभाति सर्वम्'' इति तदधीनभानश्रवणात् सूर्यादेरिति यावत् ।

'ಅನುಕೃತಿ' ಎಂದರೆ 'ಅನುಭಾನ' ಅಥವಾ ಭಗವಂತನ ಪ್ರಕಾಶವನ್ನು ಅನುಸರಿಸಿ ಪ್ರಕಾಶಿಸುವಿಕೆ ಎಂದರ್ಥ. ಇದು ಕ್ರಿಯಾರೂಪವಾಗಿದೆ. 'ತಸ್ಯ' ಎಂಬುದನ್ನು ಎರಡು ಬಾರಿ ಅನ್ವಯ ಮಾಡಿಕೊಳ್ಳಬೇಕು. 'ಕಥಂ ನು ತದ್ವಿಜಾನೀಯಾಮ್ ಕಿಮು ಭಾತಿ ನ ಭಾತಿ ವಾ' ಎಂಬ ಕಾಠಕೋಪನಿಷತ್ತಿನಲ್ಲಿ ಹೇಳಿರುವ ಆನುಕೂಲ್ಯೇನ ಗೃಹ್ಯಮಾಣನು, ತತ್ = ಬ್ರಹ್ಮನೇ ಆಗಿದ್ದಾನೆ ಹೊರತು, ಜ್ಞಾನಿಸುಖವಲ್ಲ. ಏಕೆಂದರೆ 'ತಸ್ಯ' = ಆನುಕೂಲ್ಯೇನ ಗೃಹ್ಯಮಾಣಕ್ಕೆ, 'ಅನುಕೃತೇಃ' = ಸೂರ್ಯಾದಿಗಳಿಂದ ಅನುಭಾನವನ್ನು ಹೇಳಿದ್ದರಿಂದ 'ತಮೇವ ಭಾಂತಂ ಅನುಭಾತಿ ಸರ್ವಮ್' ಎಂಬ ಶ್ರುತಿಯಲ್ಲಿ ಪರಮಾತ್ಮನ ಅಧೀನವಾದ ಪ್ರಕಾಶವನ್ನು ಸೂರ್ಯಾದಿಗಳಿಗೆ ಹೇಳಿರುವುದರಿಂದ ಎಂದು ಅಭಿಪ್ರಾಯ.

ಸೂತ್ರದ 'ತಸ್ಯ' ಪದವು ಶ್ರುತಿ ಪ್ರತೀಕ

किञ्च तस्य, वाक्यप्रतीकं चैतत्, ''तस्य भासा सर्वमिदं विभाति'' इति सर्वस्य तत्प्रकाश्यत्वोक्तेरित्यर्थः । चशब्देन ''न तत्र सूर्यो भाति'' इत्याद्युक्तसूर्याद्यप्रकाश्यत्वाच्चेति समुच्चीयते ।

ಮತ್ತು 'ತಸ್ಯ' ಎಂಬುದು ವಾಕ್ಯಪ್ರತೀಕವೂ ಆಗಿದೆ. 'ತಸ್ಯ ಭಾಸಾ ಸರ್ವಮಿದಂ ವಿಭಾತಿ' ಎಂಬುದಾಗಿ ಸಕಲವೂ ಸಹ ಅವನಿಂದ ಪ್ರಕಾಶಿಸುತ್ತದೆಂದು ಹೇಳಿರುವುದರಿಂದ ಎಂದರ್ಥ. ('ತಸ್ಯ' ಎಂಬ ಎರಡನೆಯ ಬಾರಿ ಅನ್ವಯ ಮಾಡಿಕೊಂಡ ಪದದ ಅರ್ಥ.)

'ಚ' ಶಬ್ದದಿಂದ 'ನ ತತ್ರ ಸೂರ್ಯೋ ಭಾತಿ' ಇತ್ಯಾದಿ ಶ್ರುತಿಯಲ್ಲಿ ಹೇಳಿರುವ ಸೂರ್ಯಾದಿಗಳಿಂದ ಪರಮಾತ್ಮನು ಪ್ರಕಾಶನಾಗಿಲ್ಲ ಎಂಬುದನ್ನೂ ಕೂಡ ಸಮುಚ್ಚಯ ಮಾಡಿಕೊಳ್ಳಬೇಕು.

ವಿಷ್ಣುವೇ ಆನುಕೂಲ್ಯೇನ ಗೃಹಮಾಣ

''कथं नु तद्विजानीयाम्'' इति वाक्यशेषे तमिति तस्येति तत्रेति तच्छब्दैरानुकूल्येन गृह्यमाणं परामृश्य सूर्यादितेजोनियन्तृत्वसर्वप्रकाशकत्व सूर्याद्यप्रकाश्यत्वाख्यनिरवकाशलिङ्गत्रयोक्तेर्ब्रह्मैवेति भावः ।

'ಕಥಂ ನು ತದ್ವಿಜಾನೀಯಾಮ್' ಎಂಬ ವಾಕ್ಯಶೇಷದಲ್ಲಿ 'ತಂ' 'ತಸ್ಯ' 'ತತ್ರ' ಎಂಬಲ್ಲಿರುವ 'ತತ್' ಶಬ್ದಗಳಿಂದ ಆನುಕೂಲ್ಯೇನ ಗೃಹ್ಯಮಾಣನನ್ನು ಪರಾಮರ್ಶ ಮಾಡಿ, 'ಸೂರ್ಯಾದಿ ತೇಜೋನಿಯಾಮಕತ್ವ', 'ಸರ್ವಪ್ರಕಾಶಕತ್ವ', 'ಸೂರ್ಯಾದ್ಯಪ್ರಕಾಶ್ಯತ್ವ' ಎಂಬ ನಿರವಕಾಶವಾದ ಮೂರು ಲಿಂಗವನ್ನು ಹೇಳಿರುವುದರಿಂದ, ಆನುಕೂಲ್ಯೇನ ಗೃಹಮಾಣನಾದವನು ಬ್ರಹ್ಮನೇ ಆಗಿದ್ದಾನೆಂದು ಅಭಿಪ್ರಾಯ.

'ಅನುಕೃತೇಃ 'ಎಂಬ ಪದ ಪ್ರಯೋಗದ ಸ್ವಾರಸ್ಯ'

अनुभानादिति वाच्ये अनुकृतेरित्युक्तिः सूर्यादिकृतमन्यदपि तपनादीशाधीनमिति दर्शयितुमित्युक्तं तत्त्वप्रदीपादौ । ''तापनी पाचनी चैव'' इत्यादिस्मृतेः । श्रुतौ सूर्याद्यप्रकाश्यत्वस्यादित्वेऽप्यनुकृत्युक्तिः तमिति पुल्लिङ्गत्वात् कथं ''कथं नु तत्'' इत्युक्तं तमित्यादिना परामृश्यत इति पूर्वपक्षमूलत्वाद्वा, क्रियान्तरमपि तदधीनमिति ज्ञापयितुं वेति ।

'ಅನುಭಾನಾತ್' ಎಂದೇ ಸೂತ್ರದಲ್ಲಿ ಹೇಳಬೇಕಿತ್ತು. ಆದರೆ 'ಅನುಕೃತೇಃ' ಎಂದು ಹೇಳಿದ್ದರಿಂದ ಸೂರ್ಯಾದಿಗಳ ತಾಪನೀ, ಪಾಚನೀ ಮೊದಲಾದ ಸ್ಮೃತಿಗಳೆಲ್ಲವೂ ಭಗವದಧೀನವಾಗಿವೆಯೆಂದು ತಿಳಿಸಲಾಗಿದೆ. 'ತಾಪನೀ', 'ಪಾಚನೀ' ಇತ್ಯಾದಿ ಸ್ಮೃತಿಗಳೇ ಈ ವಿಷಯದಲ್ಲಿ ಆಧಾರವೆಂದು ತತ್ವಪ್ರದೀಪಾದಿ ಗ್ರಂಥಗಳಲ್ಲಿ ಹೇಳಲಾಗಿದೆ. ಶ್ರುತಿಯಲ್ಲಿ ಸೂರ್ಯಾದ್ಯಪ್ರಕಾಶ್ಯತ್ವವನ್ನು ಹೇಳಲಾಗಿದೆ. ಅದಕ್ಕನುಸಾರಿಯಾಗಿ ಹೇಳದೆ, 'ಅನುಕೃತೇಃ' ಎಂದು ಏಕೆ ಹೇಳಿದ್ದಾರೆಂದರೆ, 'ತಮ್' ಎಂಬ ಪದವು ಪುಲ್ಲಿಂಗದಲ್ಲಿರುವುದರಿಂದ 'ಕಥಂ ನು ತದ್ವಿಜಾನೀಯಾಮ್' ಎಂದು ಹೇಳಿರುವುದನ್ನು ಪರಾಮರ್ಶ ಮಾಡಲು ಹೇಗೆ ಸಾಧ್ಯ ? ಎಂಬ

ಪೂರ್ವಪಕ್ಷಕ್ಕೆ ಮೂಲವಾದ್ದರಿಂದ, ಅಥವಾ ಬೇರೆ ಕ್ರಿಯೆಗಳೂ ಕೂಡ ಭಗವದಧೀನವಾಗಿವೆ-ಯೆಂಬುದನ್ನು ತಿಳಿಸುವ ಉದ್ದೇಶದಿಂದ.

'ತಸ್ಯ ಅನುಕೃತೇಃ' ಎಂದು ಹೇಳಲು ಕಾರಣ ?

अत एव ''किमु भाति'' इत्युक्तदुर्ज्ञेयस्य ''न तत्र सूर्यो भाति'' इति प्रत्यभिज्ञानात् सन्निहितपरामर्शिप्रातिपदिकप्राबल्याच्च तदेव परामृश्यत इति वक्तुं तस्यानुकृतेरित्याह । अन्यथाऽनुकृतेरित्येवावक्ष्यत् ।।

ಆದ್ದರಿಂದ ಶ್ರುತಿಯಲ್ಲಿ ಸೂರ್ಯಾದ್ಯಪ್ರಕಾಶ್ಯತ್ವವನ್ನು ಮೊದಲು ಹೇಳಿದ್ದರೂ ಸೂತ್ರದಲ್ಲಿ ಅನುಕೃತಿಯನ್ನು ಹೇಳಲಾಗಿದೆ. ಪುಲ್ಲಿಂಗದಲ್ಲಿರುವ 'ತತ್' ಶಬ್ದದಿಂದ 'ಕಥಂ ನು ತತ್' ಎಂಬಲ್ಲಿ ನಪುಂಸಕಲಿಂಗದ 'ತತ್' ಶಬ್ದದಿಂದ ಪರಾಮರ್ಶಿಸುವುದು ಯುಕ್ತವಾದ್ದರಿಂದಲೇ 'ಕಿಮು ಭಾತಿ' ಎಂಬಲ್ಲಿ ಹೇಳಿರುವ ದುರ್ಜ್ಞೇಯತ್ವವನ್ನು 'ನ ತತ್ರ ಸೂರ್ಯೋ ಭಾತಿ' ಎಂಬಲ್ಲಿ ಪ್ರತ್ಯಭಿಜ್ಞಾ ಮಾಡಬೇಕಾದ್ದರಿಂದ ಅಷ್ಟೇ ಅಲ್ಲದೆ ಸನ್ನಿಹಿತವಾದದ್ದನ್ನು ಪರಾಮರ್ಶ ಮಾಡುವ ಪ್ರಾತಿಪದಿಕದ ಬಲದಿಂದಲೂ ಅನುಕೂಲ್ಯೇನ ಗೃಹ್ಯಮಾಣನಾದವನೇ 'ತಮ್' ಎಂಬುದರಿಂದ ಪರಾಮರ್ಶಮಾಡಲು ಅರ್ಹನಾಗಿದ್ದಾನೆ. ಇದನ್ನು ಹೇಳಲು ಸೂತ್ರದಲ್ಲಿ 'ತಸ್ಯಾನುಕೃತೇಃ' ಎಂದೇ ಹೇಳಿದ್ದಾರೆ. ಇಲ್ಲದಿದ್ದರೆ 'ಅನುಕೃತೇಃ' ಎಂದಷ್ಟೇ ಹೇಳುತ್ತಿದ್ದರು.

ಮೂರು ಲಿಂಗಗಳು ವಿಷ್ಣುವಿನಲ್ಲಿ ಮಾತ್ರ ಎನ್ನಲು ಶ್ರುತಿ-ಸ್ಮೃತಿಗಳು

पूर्वोक्तलिङ्गत्रयस्य वैष्णवत्वं श्रुतिस्मृतिभ्यामाह -

।। अपि स्मर्यते ।। १-३-२३

अपिः श्रूयत इति समुच्चिनोति । ''अहं तत्तेजो रश्मीत्'' इत्यत्र तेज इति सर्वप्रकाशकत्वं रश्मीदिति सूर्यादितेजोनियन्तृत्वं श्रूयते ।

ಹಿಂದೆ ಹೇಳಿದ ಮೂರು ಲಿಂಗಗಳು ವಿಷ್ಣುವಿನಲ್ಲಿ ಮಾತ್ರ ಬರುತ್ತವೆಂಬುದನ್ನು ಶ್ರುತಿ-ಸ್ಮೃತಿಗಳ ಆಧಾರದಿಂದ ಸಮರ್ಥಿಸುತ್ತಿದ್ದಾರೆ 'ಅಪಿಸ್ಮರ್ಯತೇ'. 'ಅಪಿ' ಶಬ್ದವು

'ಶ್ರೂಯತೇ' ಎಂಬ ಪದವನ್ನು ಸಮುಚ್ಚಯ ಮಾಡುತ್ತಿದೆ. 'ಅಹಂ ತತ್ತೇಜೋ ರಶ್ಮೀತ್' ಎಂಬ ಶ್ರುತಿಯಲ್ಲಿ 'ತೇಜಸ್' ಶಬ್ದದಿಂದ ಸೂರ್ಯಪ್ರಕಾಶಕತ್ವವು 'ರಶ್ಮೀತ್' ಎಂಬುದರಿಂದ ಸೂರ್ಯಾದಿತೇಜೋನಿಯಾಮಕತ್ವವು ನಾರಾಯಣನಲ್ಲಿ ಶ್ರುತವಾಗಿದೆ.

ಗೀತೆಯಲ್ಲಿ ಹೇಳಿದ ಲಿಂಗಗಳು

''यदादित्यगतं तेजः'' इति स्मृतौ ''मामकम्'' इत्यनेन तद्द्वयं स्मर्यते । मामकं मदधीनं मदीयञ्चेत्यर्थात् । ''न तद्भासयते सूर्यः'' इति तृतीयं स्मर्यत इत्यर्थः ।

'ಯದಾದಿತ್ಯಗತಂ ತೇಜಃ' ಎಂಬ ಸ್ಮೃತಿಯಲ್ಲಿ 'ಮಾಮಕಮ್' ಎಂಬುದರಿಂದ ಈ ಎರಡು ಲಿಂಗಗಳು ಹೇಳಲ್ಪಟ್ಟಿವೆ. 'ಮಾಮಕಮ್' ಎಂಬ ಪದಕ್ಕೆ 'ನನ್ನ ಅಧೀನವಾಗಿವೆ' ಮತ್ತು 'ನನ್ನ ಸಂಬಂಧಿಯಾಗಿದೆ' ಎಂದು ಎರಡರ್ಥ. 'ನ ತದ್ಭಾಸೇತಿ ಸೂರ್ಯಃ' ಎಂಬ ಶ್ರುತಿಯಿಂದ ಮೂರನೆಯ ಲಿಂಗವು ಸಿದ್ಧವಾಗಿದೆ.

ಸ್ಮೃತಿಯನ್ನು ಕಂಠತಃ ಹೇಳಿ, ಶ್ರುತಿಯನ್ನೇಕೆ ಸಮುಚ್ಚಯ ಮಾಡಿದರು ?

यद्वा यथाटीकं सूत्रद्वयं लिङ्गद्वयपरम् । स्मृताविव श्रुतौ विवक्षितार्थस्या-स्फुटत्वात् सा अपिना समुच्चिता । स्मृतिस्तु स्वशब्दोक्ता ।

ಅಥವಾ ತತ್ವಪ್ರಕಾಶಿಕೆಗೆ ಅನುಸಾರಿಯಾಗಿ ಎರಡು ಸೂತ್ರಗಳು ಎರಡು ಲಿಂಗಗಳನ್ನು ಸಮರ್ಥಿಸಲು ಹೊರಟಿವೆ. ಸ್ಮೃತಿಯಲ್ಲಿ ಹೇಗೆ ಸ್ಪಷ್ಟವಾಗಿ ಅರ್ಥವು ತಿಳಿಯುತ್ತಿದೆಯೋ, ಅದರಂತೆ ಶ್ರುತಿಯಲ್ಲಿ ಸ್ಪಷ್ಟವಾಗಿ ತಿಳಿಯುತ್ತಿಲ್ಲ. ಆದ್ದರಿಂದಲೇ ಸ್ಮೃತಿಯನ್ನು ಕಂಠತಃ ಹೇಳಿ, 'ಅಪಿ' ಶಬ್ದದಿಂದ ಶ್ರುತಿಯನ್ನು ಸಮುಚ್ಚಯ ಮಾಡಲಾಗಿದೆ.

ಮತ್ತೊಂದು ಬಗೆಯಲ್ಲಿ ಸೂತ್ರವ್ಯಾಖ್ಯಾನ

यद्वा पूर्वत्र चशब्दोऽनुकृतेस्तस्येत्युक्तसर्वप्रकाशकत्वाच्चेति हेतुद्वयसमुच्चये। अत्रापि हेत्वन्तरसमुच्चये । ''न तद्भासयते'' इति सूर्याद्यप्रकाश्यत्वं

विष्णोः स्मर्यते । अतोऽप्यानुकूल्येन गृह्यमाणं ब्रह्मैवेत्यस्य वृत्त्यन्तरं बोध्यम् ।।६।।

ಅಥವಾ ಹಿಂದಿನ ಸೂತ್ರದಲ್ಲಿ 'ಚ' ಶಬ್ದವು ಅನುಕೃತಿಯಿಂದ ಮತ್ತು 'ತಸ್ಯ' ಎಂಬಲ್ಲಿ ಹೇಳಿರುವ ಸರ್ವಪ್ರಕಾಶಕತ್ವದಿಂದ ಎಂದು ಎರಡು ಹೇತುಗಳನ್ನು ಸಮುಚ್ಚಯ ಮಾಡುತ್ತಿದೆ. ಎರಡನೆಯ ಸೂತ್ರದಲ್ಲಿಯೂ 'ಅಪಿ' ಶಬ್ದವು ಸೂರ್ಯಾದ್ಯಪ್ರಕಾಶಕತ್ವ ಎಂಬ ಮತ್ತೊಂದು ಹೇತುವನ್ನು ಸಮುಚ್ಚಯ ಮಾಡುತ್ತಿದೆ. 'ನ ತದ್ಭಾಸಯತೇ' ಎಂಬ ಸ್ಮೃತಿಯಿಂದ ಸಿದ್ಧವಾದ ಸೂರ್ಯಾದ್ಯಪ್ರಕಾಶ್ಯತ್ವವು ವಿಷ್ಣುವಿನಲ್ಲಿದೆಯೆಂದು ಸಿದ್ಧವಾಗಿದೆ. ಆದ್ದರಿಂದಲೂ ಅನುಕೂಲ್ಯೇನ ಗೃಹ್ಯಮಾಣನು ಬ್ರಹ್ಮನೇ ಆಗಿದ್ದಾನೆಂದು ಮತ್ತೊಂದು ಬಗೆಯ ವ್ಯಾಖ್ಯಾನವನ್ನು ತಿಳಿಯಬೇಕು.

॥ ಇಲ್ಲಿಗೆ ತಂತ್ರದೀಪಿಕಾ ಕನ್ನಡಾನುವಾದದಲ್ಲಿ ಅನುಕೃತ್ಯಧಿಕರಣವು ಮುಗಿಯಿತು ॥

ಅದ್ವೈತ-ವಿಶಿಷ್ಟಾದ್ವೈತಮತದಲ್ಲಿ ಅನುಕೃತ್ಯಧಿಕರಣ ಮತ್ತು ವಿಮರ್ಶೆ

ಅದ್ವೈತಿಗಳು ಆಥರ್ವಣೋಪನಿಷತ್ತಿನಲ್ಲಿರುವ 'ನ ತತ್ರ ಸೂರ್ಯೋ ಭಾತಿ' ಇತ್ಯಾದಿ ವಾಕ್ಯವನ್ನು ಈ ಅಧಿಕರಣದ ವಿಷಯವೆಂದು ಹೇಳುತ್ತಾರೆ.

ಇದು ತಪ್ಪು. ಏಕೆಂದರೆ ಅದ್ವೈತಿಗಳಾದ ನೀವು ಈ ಅಧಿಕರಣದ ಸಾರ್ಥಕ್ಯವನ್ನು ಹೀಗೆ ಸಮರ್ಥನೆ ಮಾಡಬೇಕು - 'ಯತ್ತದದ್ರೇಶ್ಯಮ್' ಇತ್ಯಾದಿ ಪ್ರಕರಣವು ಬ್ರಹ್ಮಪರವಾಗಿದೆಯೆಂದು ಅದೃಶ್ಯತ್ವಾಧಿಕರಣದಲ್ಲಿ ಸಮರ್ಥನೆ ಮಾಡಿದ್ದಾಗಿದೆ. ಹೀಗಿರುವಾಗ ಅದೇ ಪ್ರಕರಣದಲ್ಲಿರುವ 'ಯಸ್ಮಿನ್ದ್ಯೌಃ' ಎಂಬ ವಾಕ್ಯವೂ ಕೂಡ ಬ್ರಹ್ಮಪರವೆಂದು ಸಿದ್ಧವಾಗುತ್ತದೆ. ಪುನಃ ಇದರ ಸಮನ್ವಯಕ್ಕಾಗಿ ದ್ಯುಭ್ವಾದ್ಯಧಿಕರಣವು ಹೊರಟಿದ್ದು ವ್ಯರ್ಥವಲ್ಲವೇ? ಎಂದು ಆಶಂಕಿಸಿ,

'ಯತ್ತದದ್ರೇಶ್ಯಮ್' ಇತ್ಯಾದಿ ಬ್ರಹ್ಮಪ್ರಕರಣದಲ್ಲಿ 'ಯಸ್ಮಿನ್‌ದ್ಯೌಃ' ಇತ್ಯಾದಿ ವಾಕ್ಯವು ಇಲ್ಲವೆಂದು ಇಟ್ಟುಕೊಂಡು ಆಶಂಕಿಸಬೇಕು. ಆಗ ಅದರ ಪರಿಹಾರಕ್ಕಾಗಿ ದ್ಯುಭ್ವಾದ್ಯಧಿಕರಣವು ಹೊರಟಿದೆಯೆಂದು ಅದ್ವೈತಿಗಳಾದ ನೀವು ದ್ಯುಭ್ವಾದ್ಯಧಿಕರಣದ ಸಾರ್ಥಕ್ಯವನ್ನು ಹೇಳುತ್ತೀರಿ.

ಇದೇ ನ್ಯಾಯದಿಂದಲೇ ಪ್ರಕೃತದಲ್ಲಿಯೂ ಆರ್ಥರ್ವಣೌಪನಿಷತ್ತಿನಲ್ಲಿರುವ 'ನ ತತ್ರ ಸೂರ್ಯೋ ಭಾತಿ' ಇತ್ಯಾದಿ ವಾಕ್ಯವು 'ಯತ್ತದದ್ರೇಶ್ಯಮ್' ಇತ್ಯಾದಿ ಪ್ರಕರಣದಲ್ಲಿಯೇ ಪ್ರಾಪ್ತವಾಗಿದೆ. ಅದೃಶ್ಯತ್ವಾಧಿಕರಣದ ನ್ಯಾಯದಿಂದಲೇ 'ಯತ್ತದದ್ರೇಶ್ಯಮ್' ಎಂಬ ವಾಕ್ಯವು ಬ್ರಹ್ಮಪರವೆಂದು ಸಿದ್ಧವಾದಾಗ, 'ನ ತತ್ರ ಸೂರ್ಯೋ ಭಾತಿ' ಇತ್ಯಾದಿ ವಾಕ್ಯವೂ ಕೂಡ ಬ್ರಹ್ಮಪರವೆಂದು ಸಿದ್ಧವಾದಂತಾಯಿತು. ಮತ್ತು 'ನ ತತ್ರ ಸೂರ್ಯೋ ಭಾತಿ' ಎಂಬ ವಾಕ್ಯದ ಹಿಂದಿನ ವಾಕ್ಯದಲ್ಲಿ 'ಯಸ್ಮಿನ್‌ದ್ಯೌಃ' ಎಂಬ ವಾಕ್ಯವು ಪ್ರಸಕ್ತವಾಗಿದೆ. ಇದು ದ್ಯುಭ್ವಾದ್ಯಧಿ-ಕರಣದಿಂದ ಬ್ರಹ್ಮಪರವೆಂದು ಸಿದ್ಧವಾಗಿದೆ. 'ನ ತತ್ರ ಸೂರ್ಯೋ ಭಾತಿ' ಎಂಬ ಮುಂದಿನ 'ಅನಶ್ನನ್ನನ್ಯಃ' ಎಂಬ ವಾಕ್ಯವು 'ಸ್ಥಿತ್ಯದನಾಭ್ಯಾಂ ಚ' ಎಂಬ ಅಧಿಕರಣದಿಂದ ಬ್ರಹ್ಮಪರವೆಂದು ಸಿದ್ಧವಾಗಿದೆ. ಹೀಗೆ 'ನ ತತ್ರ ಸೂರ್ಯೋ ಭಾತಿ' ಎಂಬ ವಾಕ್ಯದ ಪ್ರಾರಂಭದ ಪ್ರಕರಣವು ಮತ್ತು ಹಿಂದಿನ ಮುಂದಿನ ವಾಕ್ಯಗಳೆಲ್ಲವೂ ಬ್ರಹ್ಮಪರವೆಂದು ಸಿದ್ಧವಾಗಿರುವಾಗ, ಪುನಃ ಈ ಅಧಿಕರಣಕ್ಕೆ ಅದೃಶ್ಯತ್ವಾಧಿಕರಣ, ದ್ಯುಭ್ವಾದ್ಯಧಿಕರಣಗಳಿಂದ ಅಗತಾರ್ಥತ್ವವನ್ನು ಹೇಳುವ ಮೂಲಕ ಸಾರ್ಥಕ್ಯವನ್ನು ಹೇಗೆ ಹೇಳುವುದು? ಎಂಬ ಪ್ರಶ್ನೆಗೆ ಅದ್ವೈತಿಗಳಾದ ನೀವು ಹೀಗೆ ಉತ್ತರಿಸಬೇಕು. 'ನ ತತ್ರ ಸೂರ್ಯೋ ಭಾತಿ' ಇತ್ಯಾದಿ ವಾಕ್ಯವು 'ಯತ್ತದದ್ರೇಶ್ಯಮ್' ಇತ್ಯಾದಿ ಪ್ರಕರಣದಲ್ಲಿ ಮತ್ತು 'ಯಸ್ಮಿನ್‌ದ್ಯೌಃ' ಇತ್ಯಾದಿ ವಾಕ್ಯದ್ವಯಗಳ ಮಧ್ಯದಲ್ಲಿ ಇರುವುದೇ ಇಲ್ಲವೆಂದು ಕೃತ್ವಾಚಿಂತೆಯನ್ನು ಮಾಡಲಾಗಿದೆ. ಈ ಕೃತ್ವಾಚಿಂತೆಯ ಪರಿಹಾರಕ್ಕೋಸ್ಕರ ಈ ಅನುಕೃತ್ಯಧಿಕರಣವು ಹೊರಟಿರುತ್ತ. ಹೀಗೆ ಅದ್ವೈತಿಗಳು ಉತ್ತರಿಸಬೇಕು. ಆದರೆ ಈ ಕೃತ್ವಾಚಿಂತೆಯನ್ನು ಮಾಡಿಕೊಂಡು ಅಧಿಕರಣ ಸಾರ್ಥಕ್ಯವನ್ನು ಹೇಳುವುದು ಯುಕ್ತವಲ್ಲ.

ಪ್ರಕೃತ ಕಾಠಕವಾಕ್ಯವನ್ನೇ ಈ ಅಧಿಕರಣದ ವಿಷಯವೆಂದು ಹೇಳಬಹುದೆಂಬ ಗತ್ಯಂತರವಿರುವಾಗ ನೀವು ಮಾಡುವ ಕೃತ್ವಾಚಿಂತೆಯು ಯುಕ್ತವೇ ಆಗುವುದಿಲ್ಲ. ಒಂದು ವೇಳೆ ಗತ್ಯಂತರವಿದ್ದಾಗಲೂ ಕೃತ್ವಾಚಿಂತೆಯನ್ನು ಮಾಡುವುದಾದರೆ, 'ಅತ ಏವ ಪ್ರಾಣಃ' ಎಂಬ ಸೂತ್ರದ ವೃತ್ತಿಯಲ್ಲಿ 'ಪ್ರಾಣಬಂಧನಂ ಹಿ ಸೋಮ್ಯ ಮನಃ' ಎಂಬ ವಾಕ್ಯವನ್ನು ವಿಷಯವೆಂದು

ಪರಿಗಣಿಸಲಾಗಿದೆ. ಆದರೆ ಅದ್ವೈತಿಗಳಾದ ನೀವು 'ಪ್ರಾಣಬಂಧನಂ ಹಿ ಸೋಮ್ಯ ಮನಃ ಇತಿ ವಾಕ್ಯಂ ಬ್ರಹ್ಮಪ್ರಕರಣಸ್ಥತ್ವೇನಾಸಂದಿಗ್ಧತ್ವಾನ್ನ ವಿಷಯಃ। ಕಿಂತು ಪ್ರಾಣ ಇತಿ ಹೋವಾಚ' ಇತಿ ವಾಕ್ಯಮೇವ' ಎಂದು 'ಪ್ರಾಣಬಂಧನಂ ಹಿ ಸೋಮ್ಯ ಮನಃ' ಎಂಬ ವಾಕ್ಯವು ಬ್ರಹ್ಮಪ್ರಕರಣದಲ್ಲಿ ಸಂದಿಗ್ಧವೇ ಆಗಿಲ್ಲ. ಹಾಗಾಗಿ ಇದನ್ನು ವಿಷಯವೆಂದು ಪರಿಗಣಿಸದೇ 'ಪ್ರಾಣ ಇತಿ ಹೋವಾಚ' ಎಂಬ ವಾಕ್ಯವನ್ನೇ ವಿಷಯವೆನ್ನಬೇಕೆಂದು ಪ್ರಾಣಾಧಿಕರಣದಲ್ಲಿ ಅದ್ವೈತಿಗಳಾದ ನೀವು ಸಮರ್ಥನೆ ಮಾಡಿದ್ದೀರಿ. ಇದು ಅಯುಕ್ತವಾಗಬೇಕಾದೀತು. ಏಕೆಂದರೆ 'ಪ್ರಾಣಬಂಧನಂ ಹಿ ಸೋಮ್ಯ ಮನಃ' ಎಂಬ ವಾಕ್ಯವನ್ನು ಬ್ರಹ್ಮಪ್ರಕರಣದಲ್ಲಿ ಇಲ್ಲವೆಂದು ಕೃತ್ವಾಚಿಂತೆಯನ್ನು ಮಾಡಿಯೇ ವಿಷಯವೆಂದು ಪರಿಗಣಿಸಬಹುದು. ಆದರೂ ಕೂಡ ನೀವು ಹಾಗೇ ಮಾಡದೇ ಬೇರೆಗತಿಯನ್ನು ತೋರಿಸಿದ್ದೀರಿ. ಅದರಂತೆ ಇಲ್ಲಿಯೂ ಕೂಡ ಕಾಠಕವಾಕ್ಯವೆಂಬ ಗತ್ಯಂತರವಿರುವಾಗ ಅಥರ್ವಣೋಪನಿಷತ್ತಿನಲ್ಲಿರುವ ವಾಕ್ಯವನ್ನು ಕೃತ್ವಾಚಿಂತೆಯ ಮೂಲಕ ವಿಷಯವೆಂದು ಪ್ರತಿಪಾದಿಸುವುದು ತಪ್ಪಾಗುತ್ತದೆ.

ಮತ್ತು ನೀವು ವಿಷಯವಾಕ್ಯವೆಂದು ಪರಿಗಣಿಸುವ ಆಥರ್ವಣೋಪನಿಷತ್ತಿನ ವಾಕ್ಯದ ಹಿಂದಿನ ವಾಕ್ಯದಲ್ಲಿ 'ವಿರಜಂ ಬ್ರಹ್ಮ ನಿಷ್ಕಲಮ್' ಎಂಬ ವಾಕ್ಯವಿದೆ. ಮುಂದೆ 'ಬ್ರಹ್ಮೈವೇದಮಮೃತಂ ಪುರಸ್ತಾತ್' ಎಂದಿದೆ. ಹೀಗೆ ಬ್ರಹ್ಮಶ್ರುತಿಲಿಂಗಗಳೆಲ್ಲವೂ ಹಿಂದಿನ-ಮುಂದಿನ ವಾಕ್ಯಗಳಲ್ಲಿ ಅತ್ಯಂತ ಸ್ಪಷ್ಟವಾಗಿರುವಾಗ ನಮ್ಮ ಪಕ್ಷದಂತೆ ದೃಢವಾದ ಪೂರ್ವಪಕ್ಷಕ್ಕೆ ಕಾರಣವನ್ನೇ ನಿಮಗೆ ಸಮರ್ಥಿಸಲಾಗದು. ಆದ್ದರಿಂದ ಆಥರ್ವಣೋಪನಿಷತ್ತಿನ 'ನ ತತ್ರ ಸೂರ್ಯೋ ಭಾತಿ' ಎಂಬ ವಾಕ್ಯವನ್ನು ನೋಡಿದಾಗ ಸಂಶಯವೇ ಹುಟ್ಟುವುದಿಲ್ಲ. ಆದ್ದರಿಂದ ವಿಷಯವಾಕ್ಯವೂ ಕೂಡ ಆಗುವುದಿಲ್ಲ.

ಮತ್ತು ಅದ್ವೈತಿಗಳ ಮತದಲ್ಲಿ ಬ್ರಹ್ಮನು ಜ್ಞಾನಸ್ವರೂಪನಾಗಿದ್ದಾನೆ. ಭಾನರೂಪನಾದ ಬ್ರಹ್ಮನಲ್ಲಿ 'ಭಾಂತಮ್' ಎಂಬ ಶತ್ರಂತ ಶಬ್ದಪ್ರಯೋಗವೇ ತಪ್ಪಾಗುತ್ತದೆ. ಏಕೆಂದರೆ ಕರ್ತೃರ್ಥದಲ್ಲಿ ಶತೃ ಪ್ರತ್ಯಯವು ಬಂದು 'ಭಾಂತಮ್' ಎಂಬ ರೂಪವು ಸಿದ್ಧವಾಗಿದೆ. ಭಾನಸ್ವರೂಪನಾದ ಬ್ರಹ್ಮನು ಭಾನಕರ್ತೃವಾಗಲು ಸಾಧ್ಯವಿಲ್ಲ. ಮತ್ತು 'ತಸ್ಯಭಾಸಾ' ಎಂಬ ಷಷ್ಠೀಪ್ರಯೋಗವೂ ಕೂಡ ತಪ್ಪಾಗುತ್ತದೆ. ಭಾನಸ್ವರೂಪನಾದ ಬ್ರಹ್ಮನನ್ನು ಕುರಿತು ಅವನ ಕಾಂತಿಯಿಂದ ಎಂದು ಅರ್ಥವನ್ನು ಹೇಳಲಾಗದು.

ಮತ್ತು 'ಧಾವಂತಮನುಧಾವತಿ' ಎಂದು ಹೇಳಿದಾಗ ಓಡುವಂತಹ ಕಳ್ಳನನ್ನು ಅನುಸರಿಸಿ, ಆರಕ್ಷಕನು ಹಿಂದೆ ಓಡುತ್ತಾನೆ ಎಂಬ ಪ್ರಯೋಗವಿದೆ. ಹೀಗೆ ಎಲ್ಲಿ 'ಅನು' ಎಂಬ ಉಪಸರ್ಗ ಇರುತ್ತದೋ, ಅಲ್ಲಿ ಕ್ರಿಯಾಭೇದವು ನಿಯಮೇನ ಇದ್ದೇ ಇರುತ್ತದೆ. ಅಂದರೆ ಇಬ್ಬರು ಓಡುವವರಿದ್ದು, ಇಬ್ಬರ ಕ್ರಿಯೆಯೂ ಭಿನ್ನವಾಗಿರುತ್ತದೆ. ಅದರಂತೆ ಪ್ರಕೃತದಲ್ಲಿ 'ಭಾಂತಮ್ ಅನುಭಾತಿ' ಎಂಬ ಶ್ರುತಿಯಲ್ಲಿ 'ಅನು' ಎಂಬ ಉಪಸರ್ಗ ಮೂಲಕವಾಗಿ ಭಾನಕ್ರಿಯೆಯನ್ನು ಹೇಳಲಾಗಿದೆ. ಅಂದರೆ ಎರಡು ಪ್ರಕಾಶಗಳಿದ್ದಲ್ಲಿ ಮಾತ್ರ ಈ ಪ್ರಯೋಗವು ಸಾಧುವಾಗುತ್ತದೆ ಹೊರತು, ಒಂದೇ ಪ್ರಕಾಶವಿದ್ದರೆ ಸಾಧುವಾಗುವುದಿಲ್ಲ. ಬ್ರಹ್ಮನ ಪ್ರಕಾಶವೇ ಬೇರೆ, ಸೂರ್ಯಾದಿಗಳ ಪ್ರಕಾಶವೇ ಬೇರೆಯಾಗಿದ್ದಲ್ಲಿ, ಪ್ರಯೋಗವನ್ನು ಕೂಡಿಸಬಹುದು. ಆದರೆ ನಿಮ್ಮ ಪ್ರಕಾರ ಬ್ರಹ್ಮಭಾನಕ್ಕಿಂತ ಅತಿರಿಕ್ತವಾದ ಭಾನವೇ ಇಲ್ಲದ ಕಾರಣ 'ಅನು' ಶಬ್ದವು ಅಯುಕ್ತವಾಗುತ್ತದೆ.

ವಸ್ತುತಃ ಬ್ರಹ್ಮಭಾನಕ್ಕಿಂತ ಜಗತ್ತಿನಭಾನವು ಭಿನ್ನವಲ್ಲ. ಆದರೂ ಸಹ ಆರೋಪಿತವಾದ ಭೇದದಿಂದ 'ಅನು' ಎಂಬ ಶಬ್ದವನ್ನು ಪ್ರಯೋಗ ಮಾಡಬಹುದಲ್ಲವೇ? ಉದಾ : 'ವಹ್ನಿಂ ದಹಂತಮಯೋऽನುದಹತಿ' ಸುಡುವ ಬೆಂಕಿಯನ್ನು ಅನುಸರಿಸಿ, ಕಬ್ಬಿಣವು ಸುಡುತ್ತದೆ ಎಂಬ ಪ್ರಯೋಗವಿದೆ. ಇಲ್ಲಿ ಸುಡುವಿಕೆಯು ಬೆಂಕಿಯಲ್ಲಿ ಮಾತ್ರವಿದ್ದರೂ 'ಅಯಃ ಅನುದಹತಿ' ಎಂದು 'ಅನು' ಶಬ್ದದ ಪ್ರಯೋಗವಿದೆ. ಇಲ್ಲಿ ಅಯಸ್ಸಿನಲ್ಲಿರುವ ದಾಹಕ್ಕೂ, ಬೆಂಕಿಯಲ್ಲಿರುವ ದಾಹಕ್ಕೂ ಭೇದವಿಲ್ಲದಿದ್ದರೂ ಆರೋಪಿತವಾದ ಭೇದವನ್ನು ವಿವಕ್ಷಿಸಿ, 'ಅನುದಹತಿ' ಎಂಬ ಪ್ರಯೋಗ ಮಾಡುವಂತೆ ಪ್ರಕೃತಿಯಲ್ಲಿಯೂ 'ಭಾಂತಮ್ ಅನುಭಾತಿ' ಎಂಬ ಶ್ರೌತ ಪ್ರಯೋಗವನ್ನು ಕೂಡಿಸಬಹುದಲ್ಲವೇ? ಎಂದು ಪ್ರಶ್ನಿಸಬಾರದು. ಶ್ರುತಿಸಿದ್ಧವಾದ ಪ್ರಯೋಗವನ್ನು ಆರೋಪಿತ ವಿಷಯಕವೆಂದು ಹೇಳಬಾರದು. ಹಾಗೇ ಹೇಳಿದರೆ ಶ್ರುತಿಗೆ ಅಪ್ರಾಮಾಣ್ಯ ದೋಷವನ್ನು ಒಪ್ಪಿದಂತಾಗುತ್ತದೆ.

ಮತ್ತು 'ಅಪಿ ಸ್ಮರ್ಯತೇ' ಎಂಬ ಸೂತ್ರಕ್ಕೆ 'ನ ತದ್ಭಾಸಯತೇ ಸೂರ್ಯಃ' ಎಂದು, ಮತ್ತು 'ಯದಾದಿತ್ಯಗತಮ್ ತೇಜಃ' ಎಂಬ ಗೀತಾವಾಕ್ಯಗಳನ್ನು ವಿಷಯವೆಂದು ನೀವೂ ಕೂಡ ಹೇಳುತ್ತೀರಿ. 'ನ ತದ್ಭಾಸಯತೇ ಸೂರ್ಯಃ' ಎಂಬ ಗೀತಾವಾಕ್ಯದಲ್ಲಿ ಬ್ರಹ್ಮನಿಗೆ ಸೂರ್ಯಾದ್ಯಭಾಸ್ಯತ್ವವು ಹೇಳಲ್ಪಟ್ಟಿದೆ. 'ಯದಾದಿತ್ಯಗತಂ ತೇಜಃ' ಎಂಬ ವಾಕ್ಯದಲ್ಲಿ

ಸೂರ್ಯಾದಿ ತೇಜಸ್ಸುಗಳಿಗೆ ಭಗವದಧೀನತ್ವವು ಹೇಳಲ್ಪಟ್ಟಿದೆ. ಆದರೆ ನೀನು ವ್ಯಾಖ್ಯಾನ ಮಾಡುವಂತೆ ಬ್ರಹ್ಮನು ಜ್ಞಾನಾಂತರದಿಂದ ವೇದ್ಯವಲ್ಲವೆಂದಾಗಲೀ, ಅಥವಾ ಅಸ್ಮದಾದಿ ಸಂಬಂಧಿಯಾದ ಘಟಾದಿ ಜ್ಞಾನವು ಬ್ರಹ್ಮರೂಪವಾಗಿದೆಯೆಂದಾಗಲೀ, ಈ ವಾಕ್ಯದಲ್ಲಿ ಹೇಳುತ್ತಿಲ್ಲ. ಆದ್ದರಿಂದ ಯಾವ ಉದ್ದೇಶಕ್ಕೋಸ್ಕರ ಗೀತಾವಾಕ್ಯಗಳನ್ನು ವಿಷಯವೆಂದು ಹೇಳುತ್ತಿದ್ದೀರೋ, ಅದು ವ್ಯಧಿಕರಣವಾಗಿದೆ.

ರಾಮಾನುಜರ ವ್ಯಾಖ್ಯಾನ ಹೀಗಿದೆ - ಇವರು 'ಅನುಕೃತೇಸ್ತಸ್ಯ ಚ' ಎಂಬ ಸೂತ್ರದಿಂದ ಪ್ರತ್ಯೇಕ ಅಧಿಕರಣವೆಂದು ಹೇಳದೆ, ಹಿಂದಿನ ಸೂತ್ರಕ್ಕೆ ಶೇಷವೆಂದು ಹೇಳುತ್ತಾರೆ. ಛಾಂದೋಗ್ಯದ ಮುಂದಿನ ಪ್ರಜಾಪತಿ ವಾಕ್ಯದಲ್ಲಿ ಅಪಹತಪಾಪ್ಮತ್ವಾದಿ ರೂಪದಿಂದ, ಜೀವನನ್ನು ಪ್ರತಿಪಾದನೆ ಮಾಡಲಾಗಿದೆ. ಏಕೆಂದರೆ ಆ ವಾಕ್ಯದಲ್ಲಿ ಕರ್ಮಾದಿಗಳಿಂದ ತಿರೋಹಿತವಾದ ಅಪಹತಪಾಪ್ಮತ್ವಾದಿ ಗುಣಗಳ ಆವಿರ್ಭಾವವನ್ನು ಹೇಳಿದ್ದರಿಂದ ಜೀವನೇ ಮುಂದಿನ ಪ್ರಜಾಪತಿ ವಾಕ್ಯದಿಂದ ಪ್ರತಿಪಾದ್ಯನಾಗಿದ್ದಾನೆ.

ಹಿಂದಿನ 'ದಹರ' ವಾಕ್ಯದಿಂದ ಬ್ರಹ್ಮನು ಪ್ರತಿಪಾದ್ಯನಾಗಿದ್ದಾನೆ. ಏಕೆಂದರೆ ಆ ವಾಕ್ಯದಲ್ಲಿ ಅತಿರೋಹಿತವಾದ ಸ್ವಾಭಾವಿಕವಾದ ಅಪಹತಪಾಪ್ಮತ್ವಾದಿ ಗುಣಗಳನ್ನು ಹೇಳಲಾಗಿದೆ. ಸ್ವಾಭಾವಿಕವಾದ ಗುಣಗಳು ಬ್ರಹ್ಮನಲ್ಲಿ ಮಾತ್ರ ಬರುವುದರಿಂದ, 'ದಹರ' ವಾಕ್ಯದಿಂದ ಪ್ರತಿಪಾದ್ಯನಾದವನು ಬ್ರಹ್ಮನೇ ಆಗುತ್ತಾನೆ.

ಹೀಗೆ 'ಉತ್ತರಾಚ್ಚೇದಾವಿರ್ಭೂತಸ್ವರೂಪಸ್ತು' ಎಂಬ ಸೂತ್ರವನ್ನು ವ್ಯಾಖ್ಯಾನ ಮಾಡುವ ರಾಮಾನುಜರು 'ಅನುಕೃತೇಸ್ತಸ್ಯ ಚ' ಎಂಬ ಸೂತ್ರವನ್ನು ಮತ್ತು 'ಅಪಿ ಸ್ಮರ್ಯತೇ' ಎಂಬ ಸೂತ್ರವನ್ನು ಅದಕ್ಕೆ ಪೂರಕವಾಗಿಯೇ ವ್ಯಾಖ್ಯಾನಿಸುತ್ತಾರೆ. ಅಂದರೆ ಬ್ರಹ್ಮನ ಅನುಕರಣದ ಸಾದೃಶ್ಯದಿಂದ ಮತ್ತು ''ಮಮ ಸಾಧರ್ಮ್ಯಮಾಗತಾಃ'' ಎಂಬ ಸ್ಮೃತಿ ಪ್ರಮಾಣದಿಂದ ಪ್ರಜಾಪತಿ ವಾಕ್ಯಪ್ರತಿಪಾದ್ಯನಾದವನು ಜೀವನಾಗಿದ್ದಾನೆ. ಹಾಗೂ 'ದಹರ' ವಾಕ್ಯಪ್ರತಿಪಾದ್ಯನಾದವನು ಬ್ರಹ್ಮನಾಗಿದ್ದಾನೆಂದು ಹಿಂದಿನ ದಹರಾಧಿಕರಣಕ್ಕೆ ಅಂಗಭೂತವಾಗಿ ಈ ಸೂತ್ರಗಳನ್ನು ವ್ಯಾಖ್ಯಾನಿಸಿದ್ದಾರೆ.

ರಾಮಾನುಜರ ಈ ವ್ಯಾಖ್ಯಾನ ಸರಿಯಲ್ಲ. ಏಕೆಂದರೆ ದಹರವಾಕ್ಯದಲ್ಲಿ 'ಯ ಆತ್ಮಾಽಪಹತಪಾಪ್ಮಾ' 'ವಿಜರೋ ವಿಮೃತ್ಯುಃ' ಇತ್ಯಾದಿ ವಾಕ್ಯಗಳು ಹೇಗಿವೆಯೋ, ಅದೇ

ತರಹ ಪ್ರಜಾಪತಿವಾಕ್ಯದಲ್ಲಿಯೂ ಕೂಡ ಅಪಹತಪಾಪತ್ವಾದಿ ವಾಕ್ಯಗಳು ಶ್ರುತವಾಗಿವೆ. ಹೊರತು, ನೀವು ಹೇಳುವಂತೆ ಅಪಹತಪಾಪತ್ವಾದಿಗಳ ಪ್ರಾದುರ್ಭಾವವನ್ನು ಹೇಳಿಯೇ ಇಲ್ಲ. 'ಸ್ವೇನ ರೂಪೇಣಾಭಿನಿಷ್ಪದ್ಯತೇ' ಎಂಬ ವಾಕ್ಯಶೇಷದಿಂದ ಅಪಹತಪಾಪತ್ವಾದಿಗಳ ಆವಿರ್ಭಾವವು ಪ್ರಜಾಪತಿವಾಕ್ಯದಲ್ಲಿ ಇದೆಯಲ್ಲವೇ? ಎಂದರೆ, ಇದೇ ತರಹದ ವಾಕ್ಯವು 'ದಹರ' ವಾಕ್ಯದಲ್ಲಿಯೂ ಇರುತ್ತದೆ. ಆದ್ದರಿಂದ ದಹರವಾಕ್ಯಕ್ಕಿಂತ ವೈಲಕ್ಷಣ್ಯವನ್ನು ತೋರಿಸಲು ಸಾಧ್ಯವಿಲ್ಲ.

ದಹರವಾಕ್ಯವು ಹೇಳಲ್ಪಟ್ಟ ಜೀವಸ್ವರೂಪವನ್ನು ಬ್ರಹ್ಮನು ಅಭಿನಿಷ್ಪಾದನೆ ಮಾಡುತ್ತಾನೆಂದು ಹೇಳುವುದರಲ್ಲಿ ತಾತ್ಪರ್ಯವನ್ನು ಹೊಂದಿದೆ. ಇದರಿಂದ ಬ್ರಹ್ಮನ ಗುಣವನ್ನು ಹೇಳುವುದಕ್ಕಾಗಿಯೇ ಜೀವಸ್ವರೂಪದ ಆವಿರ್ಭಾವವನ್ನು ದಹರವಾಕ್ಯವು ಹೇಳುತ್ತಿದೆಯೆಂದು ಉತ್ತರಿಸಿದರೆ; ಪ್ರಜಾಪತಿವಾಕ್ಯದಲ್ಲಿಯೂ ಇದು ಸಮಾನ. ಅಲ್ಲಿಯೂ ಕೂಡ ಜೀವಸ್ವರೂಪದ ಅಭಿನಿಷ್ಪಾದಕತ್ವ ಧರ್ಮವನ್ನು ಬ್ರಹ್ಮನಲ್ಲಿ ಹೇಳುವುದಕ್ಕಾಗಿಯೇ ಆವಿರ್ಭಾವವನ್ನು ಹೇಳಿದ್ದಾರೆಂದು ವ್ಯಾಖ್ಯಾನಿಸಬಹುದು. ಹೀಗಿರುವಾಗ ಯಾವ ವೈಷಮ್ಯವನ್ನು ವಿವಕ್ಷಿಸಿ ದಹರವಾಕ್ಯವು ಬ್ರಹ್ಮಪರವೆಂದು, ಪ್ರಜಾಪತಿ ವಾಕ್ಯವು ಜೀವಪರವೆಂದು ನೀವು ವ್ಯಾಖ್ಯಾನಿಸುತ್ತೀರಿ.

ದಹರ ವಾಕ್ಯದಿಂದ ಪ್ರತಿಪಾದ್ಯನಾದ ಬ್ರಹ್ಮನೇ ಪ್ರಜಾಪತಿವಾಕ್ಯದಿಂದಲೂ ಕೂಡ ಪ್ರತಿಪಾದ್ಯನಾಗಿದ್ದಾನೆನ್ನಲು ಮತ್ತೊಂದು ಕಾರಣ ಹೀಗಿದೆ - ಅಪಹತಪಾಪತ್ವಾದಿ ಗುಣವುಳ್ಳ ಆತ್ಮನ ಬಗ್ಗೆ ಇಂದ್ರ ದೇವರು ಪುನಃ ಪುನಃ ಪ್ರಶ್ನಿಸುತ್ತಾರೆ. ಆವಾಗ ಚತುರ್ಮುಖಬ್ರಹ್ಮದೇವರು ಆತ್ಮನ ವಿಷಯದಲ್ಲಿ ಹೀಗೆ ಉಪದೇಶ ಮಾಡುತ್ತಾರೆ - 'ಯ ಏಷೋऽಂತರಕ್ಷಿಣಿ ಪುರುಷೋ ದೃಶ್ಯತೇ ಏಷ ಆತ್ಮಾ' ಚಕ್ಷುರಿಂದ್ರಿಯದಲ್ಲಿರುವ ಪುರುಷನೇ 'ಆತ್ಮಾ' ಎನಿಸಿದ್ದಾನೆ ಎಂದು. 'ಯ ಏಷ ಸ್ವಪ್ನೇ ಮಹಿಮಾನಶ್ಚರತ್ಯೇಷ ಆತ್ಮಾ' ಯಾವಾತನು ಸ್ವಪ್ನದಲ್ಲಿ ಅತ್ಯಂತ ಮಹಿಮೋಪೇತನಾಗಿ ಸಂಚಾರ ಮಾಡುತ್ತಾನೋ, ಅವನೇ ಆತ್ಮನು ಎಂದು. 'ಯತ್ರೈತತ್ಸುಪ್ತಃ ಸಮಸ್ತಃ ಸಂಪ್ರಸನ್ನಃ ಸ್ವಪ್ನಂ ನ ವಿಜಾನಾತ್ಯೇಷ ಆತ್ಮಾ' ಯಾವ ವಿಷಯದಲ್ಲಿ ಸುಪ್ತನು ಆಲಿಂಗಿತನಾಗಿರುತ್ತಾನೋ, ಅತ್ಯಂತ ಪ್ರಸನ್ನ ಮನಸ್ಕನಾಗಿರುತ್ತಾನೋ, ಸ್ವಪ್ನವನ್ನೂ ಕೂಡ ಕಾಣಲಾರನೋ ಅಂತಹ ಜೀವನಿಗೆ ಅಧಿಷ್ಠಾನಭೂತನಾದವನೇ ಆತ್ಮನು ಎಂದು ಮತ್ತು 'ತದಸ್ಯಾಮೃತಸ್ಯಾ-

ಶರೀರಸ್ಯಾತ್ಮನೋऽಧಿಷ್ಠಾನಮ್' ಅಮೃತಸ್ವರೂಪನಾದ ಅಶರೀರಿಯಾದ ಆತ್ಮನಿಗೆ ಅಧಿಷ್ಠಾನನಾಗಿದ್ದಾನೆ. ಹೀಗೆ ಅನೇಕ ಮಾತುಗಳಿಂದ ಆತ್ಮನ ಬಗ್ಗೆ ಉಪದೇಶ ಮಾಡಿದ್ದಾರೆ.

ಈ ಉಪದೇಶ ವಾಕ್ಯಗಳಲ್ಲಿ ಪ್ರಥಮಶ್ರುತವಾದ ಅಕ್ಷಿವಾಕ್ಯವು ಬ್ರಹ್ಮವಿಷಯಕವೇ ಆಗಿದೆ. 'ಅಂತಸ್ತದ್ಧರ್ಮೋಪದೇಶಾತ್' 'ಅಂತರ ಉಪಪತ್ತೇಃ' ಇತ್ಯಾದಿ ಸೂತ್ರಗಳಿಂದ ನಿರ್ಣೀತನಾದ ಬ್ರಹ್ಮನೇ 'ಯ ಏಷೊऽಂತರಕ್ಷಿಣಿ ಪುರುಷೋ ದೃಶ್ಯತೇ' ಎಂಬ ಶ್ರುತ್ಯಂತರದಿಂದಲೂ ಪ್ರತಿಪಾದ್ಯನಾದವನು. ಅಂತಹ ಬ್ರಹ್ಮನೇ ಇಲ್ಲಿ ಪ್ರತ್ಯಭಿಜ್ಞಾಕ್ಕೆ ವಿಷಯನಾಗಿದ್ದಾನೆ. ಜೀವನು ಹೃದಯದಲ್ಲಿರುವುದರಿಂದ ಕಣ್ಣಿನಲ್ಲಿರಲು ಸಾಧ್ಯವಿಲ್ಲ. ಆದ್ದರಿಂದ ಈ ಅಕ್ಷಿವಾಕ್ಯವು ಬ್ರಹ್ಮನನ್ನೇ ಪ್ರತಿಪಾದನೆ ಮಾಡುತ್ತದೆ.

'ಸ್ವಾಪ್ನ' ವಾಕ್ಯವೂ ಕೂಡ ಬ್ರಹ್ಮವಿಷಯಕವೇ ಆಗಿದೆ. ಏಕೆಂದರೆ 'ಸ್ವಪ್ನೇನ ಶಾರೀರಮಭಿ-ಪ್ರಹತ್ಯಾಸುಪ್ತಃ ಸುಪ್ತಾನಭಿಚಾಕಶೀತಿ' ಸ್ವಪ್ನಕಾಲದಲ್ಲಿ ಶಾರೀರನಾದ ಜೀವನನ್ನು ಹೊಂದಿ, ಸುಪ್ತರಾದ ಜೀವರನ್ನೆಲ್ಲಾ ನೋಡುತ್ತಾನೆ. ಹೀಗೆ ಶ್ರುತ್ಯಂತರ ಬಲದಿಂದ, ಸ್ವಪ್ನನಿಯಾಮಕನಾದ ಪರಮಾತ್ಮನೇ 'ಯ ಏಷಃ ಸ್ವಪ್ನ' ಎಂಬ ವಾಕ್ಯದಿಂದ ಪ್ರತಿಪಾದ್ಯನಾಗಿದ್ದಾನೆಂದು ತಿಳಿಯುತ್ತದೆ. ಏಕೆಂದರೆ ಮಹೀಯಮಾನತ್ವಲಿಂಗವು ಎರಡೂ ಕಡೆ ಶ್ರುತವಾಗಿರುವುದರಿಂದ.

ಸುಪ್ತವಾಕ್ಯವೂ ಕೂಡ ಬ್ರಹ್ಮಪ್ರತಿಪಾದಕವೇ ಆಗಿದೆ. ಏಕೆಂದರೆ 'ಪ್ರಾಜ್ಞೇನಾತ್ಮನಾ ಸಂಪರಿ ಷ್ವಕ್ತಃ' ಇತ್ಯಾದಿ ಶ್ರುತಿಯು ಸುಷುಪ್ತ್ಯವಸ್ಥಾ ಪ್ರೇರಕನಾದವನು ಬ್ರಹ್ಮನೆಂದೇ ಹೇಳಿದೆ. ಅದರ ಬಲದಿಂದ 'ಯತ್ರೈತತ್ಸುಪ್ತಃ' ಎಂಬ ವಾಕ್ಯವೂ ಕೂಡ ಬ್ರಹ್ಮಪ್ರತಿಪಾದಕವೇ ಆಗುತ್ತದೆ. ಏಕೆಂದರೆ 'ಯತ್ರ ಸುಪ್ತಃ' ಎಂಬಲ್ಲಿರುವ 'ಯತ್' ಶಬ್ದದಿಂದ ಪ್ರತಿಪಾದ್ಯನಾದವನೇ ಸಕಲವಿಧ ಸುಪ್ತಜೀವರಿಗೆ ಆಧಾರನಾಗಿದ್ದಾನೆ. ಅವನನ್ನೇ 'ಏಷ ಆತ್ಮಾ' ಎಂಬಲ್ಲಿರುವ 'ಏತತ್' ಶಬ್ದದಿಂದ ಪರಾಮರ್ಶಿಸಲಾಗಿದೆ.

ಬ್ರಹ್ಮದೇವರಿಂದ ಉಪದೇಶಿಸಲ್ಪಟ್ಟ ಅಶರೀರವಾಕ್ಯವೂ ಕೂಡ ಪರಮಾತ್ಮನನ್ನೇ ಪ್ರತಿಪಾದಿಸುತ್ತದೆ. ಏಕೆಂದರೆ ಅಶರೀರ ಶಬ್ದಕ್ಕೆ ನಿರಪೇಕ್ಷಿತವಾದ ಸಾರ್ವಕಾಲಿಕವಾದ ಶರೀರರಾಹಿತ್ಯ ಎಂಬ ಸಹಜವಾದ ಅರ್ಥವನ್ನೇ ವಿವಕ್ಷಿಸಲು ಬರುವಾಗ ಸಾಪೇಕ್ಷಿತವಾದ ತಾತ್ಕಾಲಿಕವಾದ ಶರೀರರಾಹಿತ್ಯದಿಂದ ಜೀವನೆಂಬ ಅರ್ಥವನ್ನು ವಿವಕ್ಷಿಸುವುದು ತಪ್ಪಾಗುತ್ತದೆ. ನಿರಪೇಕ್ಷಿತವಾದ ಸಾರ್ವಕಾಲಿಕವಾದ ಶರೀರರಾಹಿತ್ಯವು ಈಶ್ವರನಲ್ಲಷ್ಟೇ ಉಪಪನ್ನವಾಗುತ್ತದೆ.

ಮತ್ತು ಅಕ್ಷ್ಯಾದಿ ವಾಕ್ಯಗಳ ನಡುವೆ ಪ್ರತಿವಾಕ್ಯಗಳಲ್ಲಿಯೂ 'ಏಷ ಆತ್ಮೇತಿ ಹೋವಾಚ' 'ಏತದಮೃತಮಭಯಮೇತದ್ ಬ್ರಹ್ಮ' ಎಂಬುದಾಗಿ ಅಮೃತತ್ವ-ಅಭಯತ್ವಾದಿಲಿಂಗಗಳನ್ನು ಹೇಳಿರುವುದರಿಂದ ಇವೆಲ್ಲವೂ ಜೀವವಿಷಯಕವಾಗಲು ಹೇಗೆ ಸಾಧ್ಯ ?

ಮತ್ತು ಪ್ರಜಾಪತಿ ವಾಕ್ಯದಲ್ಲಿ 'ಯ ಆತ್ಮಾಽಪಹತಪಾಪ್ಮಾ' ಎಂದಿದೆ. ಪ್ರಸಿದ್ಧಾರ್ಥವಾದ ಪ್ರಕೃತವಾದದ್ದನ್ನು ಪರಾಮರ್ಶಿಸುವ ಇಲ್ಲಿರುವ 'ಯಃ' ಎಂಬ ಸರ್ವನಾಮಶಬ್ದದಿಂದ 'ಏಷ ಆತ್ಮಾ ಅಪಹತಪಾಪ್ಮಾ' ಎಂಬಲ್ಲಿ ಪ್ರಸ್ತುತವಾದ ದಹರವಾಕ್ಯದಲ್ಲಿ ಪ್ರಸಿದ್ಧನಾದ ಈಶ್ವರನನ್ನು ಪರಾಮರ್ಶ ಮಾಡುವುದೇ ಯುಕ್ತವಾಗುತ್ತದೆ.

ಮತ್ತು 'ತೇಷಾಂ ಸರ್ವೇಷು ಲೋಕೇಷು ಕಾಮಚಾರೋ ಭವತಿ' ಎಂಬುದಾಗಿ ಯಾವ ದಹರವಾಕ್ಯದಲ್ಲಿ ದಹರನ ತಿಳುವಳಿಕೆಯಿಂದ ಯಾವ ಮೋಕ್ಷವೆಂಬ ಫಲವನ್ನು ಹೇಳಲಾಗಿದೆಯೋ, ಅದೇ ಮೋಕ್ಷ ಫಲವನ್ನು 'ತೇಷಾಂ ಸರ್ವೇ ಲೋಕಾ ಆಪ್ತಾಃ' ಎಂಬ ಪ್ರಜಾಪತಿ ವಾಕ್ಯದಲ್ಲಿಯೂ ಹೇಳಲಾಗಿದೆ.

ಅದರಂತೆ ದಹರವಾಕ್ಯದಲ್ಲಿ 'ತಸ್ಮಿನ್ಯದಂತಃ ತದನ್ವೇಷ್ಟವ್ಯಮ್' ಎಂದು ಯಾವ ದಹರನಲ್ಲಿ ಅನ್ವೇಷಣ ವಿಷಯತ್ವವು ಶ್ರುತವಾಗಿದೆಯೋ, ಅವನಿಗೇ ಪ್ರಜಾಪತಿವಾಕ್ಯದಲ್ಲಿ 'ಸೋಽನ್ವೇಷ್ಟವ್ಯಃ ಸ ವಿಜಿಜ್ಞಾಸಿತವ್ಯಃ' ಎಂಬುದಾಗಿ ಅನ್ವೇಷಣವಿಷಯತ್ವವು ಶ್ರುತವಾಗಿದೆ.

'ಇಂದ್ರೋ ವಿರೋಚನಶ್ಚೈವ ಶ್ರುತ್ವಾ ತಂ ಬ್ರಹ್ಮಣೋಽಕ್ಷಿಗಮ್ । ವಿಷ್ಣುಮಾನಂದ-ರೂಪೇತಮ್' ಇತ್ಯಾದಿ ಸ್ಮೃತಿಯೂ ಕೂಡ ದಹರ ಬ್ರಹ್ಮನೇ ಪ್ರಜಾಪತಿವಾಕ್ಯದಿಂದಲೂ ಪ್ರತಿಪಾದ್ಯನಾಗಿದ್ದಾನೆನ್ನಲು ಪ್ರಮಾಣವಾಗಿದೆ. ಆದ್ದರಿಂದ ದಹರವಾಕ್ಯವು ಬ್ರಹ್ಮಪರವಾಗಿದೆ. ಪ್ರಜಾಪತಿ ವಾಕ್ಯವು ಜೀವಪರವಾಗಿದೆಯೆಂಬ ರಾಮಾನುಜರ ನಿಲುವು ಅತ್ಯಂತ ಅಸಾಧುವಾಗಿದೆ.

ರಾಮಾನುಜರ ಸೂತ್ರವ್ಯಾಖ್ಯಾನವು ಕೂಡ ಸರಿಯಿಲ್ಲ. ಏಕೆಂದರೆ 'ಅನುಕೃತೇಸ್ತಸ್ಯ ಚ' ಎಂಬ ಸೂತ್ರದಲ್ಲಿ ಮತ್ತು 'ಅಪಿ ಸ್ಮರ್ಯತೇ' ಎಂಬ ಸೂತ್ರದಲ್ಲಿ ಮುಕ್ತನಾದ ಜೀವನಿಗೆ ಅಪಹತಪಾಪತ್ವಾದಿ ರೂಪದಿಂದ ಈಶ್ವರನ ಜೊತೆಗಿರುವ ಸಾಮ್ಯವನ್ನು ಸಾಧಿಸಲಾಗಿದೆಯೋ, ಅಥವಾ ಅನ್ಯತ್ರಪ್ರಸಿದ್ಧವಾದ ಸಾಮ್ಯದಿಂದ ದಹರವಾಕ್ಯದಲ್ಲಿ ಪ್ರತಿಪಾದ್ಯನಾದವನು ಬ್ರಹ್ಮನೆಂದು ಮತ್ತು ಪ್ರಜಾಪತಿವಾಕ್ಯದಲ್ಲಿ ಪ್ರತಿಪಾದ್ಯನಾದವನು ಜೀವನೆಂದು ಸಾಧನೆ ಮಾಡುತ್ತೀರೋ?

ಮೊದಲನೆಯ ಪಕ್ಷ ಸರಿಯಿಲ್ಲ. ಏಕೆಂದರೆ ಮುಕ್ತಜೀವರಿಗೆ ಈಶ್ವರನಿಂದ ಸಾಮ್ಯವಿದೆಯೆಂದು ನಾಲ್ಕನೆಯ ಅಧ್ಯಾಯಲ್ಲಿರುವ 'ಸಂಪದ್ಯಾವಿಹಾಯ' ಇತ್ಯಾದಿ ಸೂತ್ರದಲ್ಲಿ ಸಮರ್ಥಿಸಲಾಗುತ್ತದೆ. ಪುನಃ ಇಲ್ಲಿ ಅದರ ಸಾಧನೆಯು ಅನಾವಶ್ಯಕ. ಮತ್ತು ಸಮನ್ವಯಾಧ್ಯಾಯದಲ್ಲಿ ಈ ವಿಚಾರವು ಅಪ್ರಸ್ತುತ. ಮತ್ತು ಸೂತ್ರದಲ್ಲಿ 'ಅನುಕೃತೇಃ' ಎಂಬುದಾಗಿ ಸಾಮ್ಯವನ್ನು ಹೇತುವನ್ನಾಗಿ ಮಾಡಿರುವಾಗ ಅದನ್ನೇ ಸಾಧ್ಯವೆಂದು ಹೇಳುವುದು ತಪ್ಪಾಗುತ್ತದೆ.

ಎರಡನೆಯ ಪಕ್ಷವೂ ಕೂಡ ಸರಿಯಿಲ್ಲ. ಏಕೆಂದರೆ ಅನುಕೃತಿಯಿಂದಷ್ಟೇ ಹಿಂದಿನ ದಹರವಾಕ್ಯದಲ್ಲಿ ಪ್ರತಿಪಾದ್ಯನಾದವನು ಬ್ರಹ್ಮನು. ಮುಂದಿನ ಪ್ರಜಾಪತಿವಾಕ್ಯದಲ್ಲಿ ಪ್ರತಿಪಾದ್ಯನಾದವನು ಜೀವನೆಂಬುದು ಸಿದ್ಧವಾಗುವುದಿಲ್ಲ. ಆದ್ದರಿಂದ ರಾಮಾನುಜರ ಅಧಿಕರಣಶರೀರ ಹಾಗೂ ಸೂತ್ರಾರ್ಥಗಳು ಅತ್ಯಂತ ಅಸಾಧುವಾಗಿದೆ. ಹಿಂದಿನ ಅಧಿಕರಣದ ಜೊತೆಗೇ ಈ ಎರಡು ಸೂತ್ರಗಳು ಸೇರಿವೆ ಎಂಬ ವಿಚಾರಗಳೂ ಕೂಡ ಅಸಾಧುವಾಗಿದೆ.

ಇಲ್ಲಿಗೆ ಅನುಕೃತ್ಯಧಿಕರಣದಲ್ಲಿ ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ವಪ್ರದೀಪ, ತತ್ವಪ್ರಕಾಶಿಕಾ, ಭಾವದೀಪ ಇವುಗಳ ಅನುವಾದವು ಹಾಗೂ ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆಯು ಸಮಾಪ್ತವಾಯಿತು

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥

ವಾಮನಾಧಿಕರಣ

ಬ್ರಹ್ಮಸೂತ್ರ, ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ವಪ್ರದೀಪ, ತತ್ವಪ್ರಕಾಶಿಕಾ ಭಾವದೀಪ

ವಿಶೇಷ ವಿಚಾರದೊಂದಿಗೆ ಕನ್ನಡಭಾಷೆಯಲ್ಲಿ ಅನುವಾದ

ಮತ್ತು

ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆ

॥ ಹರಿಃ ಓಂ ॥

॥ ಶ್ರೀವೇದವ್ಯಾಸಾಯ ನಮಃ ॥

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಗುರುಭ್ಯೋ ನಮಃ ॥

॥ ಶ್ರೀಮದ್ರಾಘವೇಂದ್ರತೀರ್ಥಗುರುಭ್ಯೋ ನಮಃ ॥

॥ ಶ್ರೀಗುರುಭ್ಯೋ ನಮಃ ॥

ವಾಮನಾಧಿಕರಣ

।। अथ वामनाधिकरणम् ।।

ಬ್ರಹ್ಮಸೂತ್ರ

'ಶಬ್ದಾದೇವ ಪ್ರಮಿತಃ' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – ।। अथ वामनाधिकरणम् ।।

।। शब्दादेव प्रमितः।। २४ ।।

ಸೂತ್ರಾರ್ಥ - 'ಈಶಾನೋ ಭೂತಭವ್ಯಸ್ಯ' ಎಂಬ ಕಾಠಕ ಶ್ರುತಿಯಲ್ಲಿ 'ಈಶಾನ' ಶಬ್ದದಿಂದ ಪ್ರತಿಪಾದ್ಯನಾದವನು ಮಹಾವಿಷ್ಣುವೇ ಆಗಿದ್ದಾನೆ ಹೊರತು ವಾಯುದೇವರಲ್ಲ. ಏಕೆಂದರೆ 'ಮಧ್ಯೇ ವಾಮನಮ್' ಇತ್ಯಾದಿಯಾದ ನಿರವಕಾಶ ವಾಮನಶ್ರುತಿ ಇರುವುದರಿಂದ .

ಅರ್ಥ -- ಪ್ರಮಿತಃ = 'ಈಶಾನೋ ಭೂತಭವ್ಯಸ್ಯ' ಎಂಬ ಕಾಠಕದಲ್ಲಿರುವ 'ಈಶಾನ' ಶಬ್ದದಿಂದ ಪ್ರತಿಪಾದ್ಯನಾದವನು ವಿಷ್ಣುವೇ ಆಗಿದ್ದಾನೆಂದು ಪ್ರಮಾಣ ಸಿದ್ಧವಾಗಿದೆ. ಹೊರತು ವಾಯುದೇವರಲ್ಲ. ಏಕೆಂದರೆ ಶಬ್ದಾದೇವ = 'ಮಧ್ಯೇ ವಾಮನಂ' ಎಂಬುದಾಗಿ ಮುಂದಿನ ಶ್ರುತಿಯಲ್ಲಿ ನಿರವಕಾಶವಾದ ವಾಮನಶ್ರುತಿ ಇರುವುದರಿಂದ.ಹೃದ್ಯಪೇಕ್ಷಯಾತುಮನುಷ್ಯಾಧಿಕಾರತ್ವಾತ್' ಹೃದಯದಲ್ಲಿರುವಅವಕಾಶಕೇವಲಅಂಗುಷ್ಠದಷ್ಟು. ಈ ದೃಷ್ಟಿಯಿಂದಲೇ ವಿಷ್ಣುವಿಗೆ ಅಂಗುಷ್ಠಪರಿಮಾಣವು ಹೇಳಲ್ಪಟ್ಟಿದೆ. ಅಂಗುಷ್ಠಮಾತ್ರ ಉಪಾಸನೆ ಎಂಬ ವಿದ್ಯೆಗೆ ಅಧಿಕಾರಿಗಳಾದವರು ಮನುಷ್ಯರು ಮಾತ್ರ, ಆದ್ದರಿಂದ ಪಶುಗಳಿಗೆ ಅಂಗುಷ್ಠಪರಿಮಾಣವಿಲ್ಲದಿದ್ದರೂ ಬಾಧಕವಿಲ್ಲ.

ಜಗದ್ಗುರು ಶ್ರೀಮಧ್ವಾಚಾರ್ಯರಿಂದ ವಿರಚಿತವಾದ

ಬ್ರಹ್ಮಸೂತ್ರಭಾಷ್ಯ

ವಾಮನಶಬ್ದದಿಂದ ಈಶಾನ ಶಬ್ದದ ಸಮನ್ವಯ

ब्रह्मसूत्रभाष्यम् – विष्णुरेव जिज्ञास्य इत्युक्तम् । तत्र
'ऊर्ध्वं प्राणमुन्नयत्यपानं प्रत्यगस्यति ।
मध्ये वामनमासीनं विश्वेदेवा उपासते ।।' (कठ.५.३)
इति सर्वदेवोपास्यः कश्चित् प्रतीयते ।

ಅನುವಾದ - ಈ ಅಧಿಕರಣದಲ್ಲಿ 'ಈಶಾನ' ಎಂಬ ಶಬ್ದದ ಸಮನ್ವಯವನ್ನು ಪರಮಾತ್ಮನಲ್ಲಿ ಮಾಡುತ್ತಿದ್ದಾರೆ. ॥ ಅಥಾತೋ ಬ್ರಹ್ಮಜಿಜ್ಞಾಸಾ ॥ ಎಂಬ ಮೊದಲನೆಯ ಸೂತ್ರದಲ್ಲಿ ವಿಷ್ಣುವನ್ನೇ ಜಿಜ್ಞಾಸೆಮಾಡಬೇಕೆಂದು ಸಾಧಿಸಲಾಯಿತು. ಆದರೆ ಕಾಠಕಶ್ರುತಿಯಲ್ಲಿ 'ಊರ್ಧ್ವಂ ಪ್ರಾಣಮುನ್ನಯತಿ' ಇತ್ಯಾದಿ ವಾಕ್ಯಗಳಿಂದ ಮತ್ತೊಬ್ಬನಲ್ಲಿ ಜಿಜ್ಞಾಸ್ಯತ್ವವನ್ನು ಹೇಳಲಾಗಿದೆ. ಯಾವಾತನು ಪ್ರಾಣನನ್ನು ಮೇಲಕ್ಕೆ ತರುತ್ತಾನೋ, ಅಪಾನವಾಯುವನ್ನು ಕೆಳಗೆ ತಳ್ಳುತ್ತಾನೋ, ಹೃದಯಮಧ್ಯದಲ್ಲಿ ನೆಲೆಸಿರುವ ಇಂತಹ ಸುಂದರನನ್ನು ಸಮಸ್ತ ದೇವತೆಗಳೂ ಉಪಾಸನೆ ಮಾಡುತ್ತಾರೆ ಎಂಬುದಾಗಿ 'ಸರ್ವದೇವೋಪಾಸ್ಯತ್ವ' ಎಂಬ ಧರ್ಮವನ್ನು ಹೊಂದಿರುವ ಮತ್ತೊಬ್ಬ ಯಾವುದೋ ವ್ಯಕ್ತಿಯಲ್ಲಿ ಜಿಜ್ಞಾಸ್ಯತ್ವವು ಶ್ರುತವಾಗಿದೆ.

ಪ್ರತಿಪದಾರ್ಥ -- ಈ ಅಧಿಕರಣದಲ್ಲಿ, 'ಈಶಾನ' ಎಂಬ ನಾಮಾತ್ಮಕಶಬ್ದದ ಸಮನ್ವಯವನ್ನು ಮಾಡಲಾಗಿದೆ. ಶ್ರುತ್ಯಾದಿಸಂಗತಿ, ವಿಷಯ, ಸಂಶಯಗಳನ್ನು ಮೊದಲು ತೋರಿಸುತ್ತಿದ್ದಾರೆ.

ವಿಷ್ಣುರೇವ = ವಿಷ್ಣುವೇ, ಜಿಜ್ಞಾಸ್ಯಃ = ಜಿಜ್ಞಾಸೆಗೆ ವಿಷಯನಾಗಿದ್ದಾನೆ, ಇತಿ = ಹೀಗೆ, ಉಕ್ತಂ = ಜಿಜ್ಞಾಸಾಧಿಕರಣದಲ್ಲಿ ಹೇಳಲಾಯಿತು, ತತ್ರ = ಆ ಜಿಜ್ಞಾಸಾವಿಷಯದಲ್ಲಿ, ಕಾಠಕವು, ಪ್ರಾಣಮ್ = ಪ್ರಾಣನನ್ನು, ಊರ್ಧ್ವಮ್ = ಮೇಲ್ಮುಖವಾಗಿ, ಉನ್ನಯತಿ = ತರುತ್ತಾನೆ, ಅಪಾನಂ = ಅಪಾನವಾಯುವನ್ನು, ಪ್ರತ್ಯಗಸ್ಯತಿ = ಕೆಳಮುಖನನ್ನಾಗಿ ನಿಯಂತ್ರಿಸುತ್ತಾನೆ, ಮಧ್ಯೇ = ಹೃದಯ ಮಧ್ಯದಲ್ಲಿದ್ದು, ಆಸೀನಮ್ = ಕುಳಿತಿರುವ,

ವಾಮನಂ = ಸುಂದರನಾದ ಇವನನ್ನು, ವಿಶ್ವೇದೇವಾಃ = ಸಮಸ್ತ-ದೇವತೆಗಳು, ಉಪಾಸತೇ = ಉಪಾಸಿಸುತ್ತಾರೆ, ಇತಿ = ಹೀಗೆ, ಸರ್ವದೇವೋಪಾಸ್ಯಃ = ಸಕಲದೇವತೆಗಳಿಂದ ಉಪಾಸ್ಯನಾದವನು, ಕಶ್ಚಿತ್ = ಒಬ್ಬ, ಪ್ರತೀಯತೇ = ತೋರುತ್ತಿದ್ದಾನೆ.

ಮುಖ್ಯಪ್ರಾಣನೇ ವಾಮನಶಬ್ದ ಪ್ರತಿಪಾದ್ಯನಾದ್ದರಿಂದ ಜಿಜ್ಞಾಸ್ಯನೆಂದು ಪೂರ್ವಪಕ್ಷ

ಬ್ರಹ್ಮಸೂತ್ರಭಾಷ್ಯಮ್ — ಸ ಚ 'ಏವಮೇವೈಷ ಪ್ರಾಣ ಇತರಾನ್ ಪ್ರಾಣಾನ್ ಪೃಥಕ್ ಪೃಥಗೇವ ಸನ್ನಿಧತ್ತೇ'

(ಪ್ರಶ್ನ. ೩೪.) 'ಯೋऽಯಂ ಮಧ್ಯಮಃ ಪ್ರಾಣಃ' (ಬೃ. ೩-೯-೨೧.)

'ಕುವಿದಙ್ಗ' (ಋ. ೭-೯-೧೧.) ಇತ್ಯಾದಿನಾ ಪ್ರಾಣವ್ಯವಸ್ಥಾಪಕತ್ವಾ-ನ್ಮಧ್ಯಮತ್ವಾತ್ ಸರ್ವದೇವೋಪಾಸ್ಯತ್ವಾಚ್ಚ ವಾಯುರೇವೇತಿ ಪ್ರತೀಯತೇ ।

ಅನುವಾದ - ಅವನು ಯಾರು ಎಂದರೆ ಮೂರು ಕಾರಣಗಳಿಂದ 'ವಾಯು' ಎಂದು ತಿಳಿಯುತ್ತಿದೆ. ಹೇಗೆಂದರೆ - 'ಏವಮೇವೈಷಃ' ಎಂಬ ಶ್ರುತಿಯು ಪ್ರಾಣ-ಅಪಾನಾದಿ ವಾಯುಗಳ ವ್ಯವಸ್ಥಾಪಕತ್ವವನ್ನು, ಹಾಗೂ 'ಯೋऽಯಂ ಮಧ್ಯಮಃ ಪ್ರಾಣಃ' ಎಂಬ ಬೃಹದಾರಣ್ಯಕವು ಮಧ್ಯಮತ್ವವನ್ನು 'ಕುವಿದಂಗ' ಎಂಬ ಋಗ್ವೇದವು ಸರ್ವದೇವೋಪಾಸ್ಯತ್ವವನ್ನು ಹೇಳುತ್ತಿದೆ. ಹೀಗೆ ಮೂರು ಧರ್ಮಗಳಿಂದ ಕೂಡಿರುವ ವ್ಯಕ್ತಿಯು ವಾಯುದೇವರು ಎಂದು ತಿಳಿಯುತ್ತದೆ. ಆದ್ದರಿಂದ ವಾಯುವೇ ಜಿಜ್ಞಾಸ್ಯನಾಗುತ್ತಾನೆ. ಈ ಆಕ್ಷೇಪದ ಪರಿಹಾರಕ್ಕಾಗಿ ಸೂತ್ರಕಾರರು ಸೂತ್ರವನ್ನು ರಚಿಸಿದ್ದಾರೆ.

ಪ್ರತಿಪದಾರ್ಥ -- ಯುಕ್ತಿಬದ್ಧವಾಗಿ ಪೂರ್ವಪಕ್ಷವನ್ನು ಮಾಡುತ್ತಿದ್ದಾರೆ-

ಸ ಚ = ಹೃದಯದಲ್ಲಿರುವವನು, ಏವಮೇವ = ಇದೇ ಪ್ರಕಾರದಲ್ಲಿ, ಏಷಃ = ಪ್ರಸಿದ್ಧನಾದ, ಪ್ರಾಣಃ = ಮುಖ್ಯ ಪ್ರಾಣನು, ಇತರಾನ್ = ಇತರೆ ತನ್ನ ಶಿಷ್ಯರಾದ, ಪ್ರಾಣಾನ್ = ಅಪಾನ, ವ್ಯಾನ ಮೊದಲಾದ ಪ್ರಾಣಗಳನ್ನು, ಪೃಥಕ್‌ಪೃಥಗೇವ = ಪ್ರತ್ಯೇಕ ಪ್ರತ್ಯೇಕವಾಗಿ, ಸನ್ನಿಧತ್ತೇ = ದೇಹದ ಅಂಗಾಂಗಗಳಲ್ಲಿ ಅವರನ್ನು ವ್ಯವಸ್ಥೆಗೊಳಿಸುತ್ತಾನೆ, ಯೋऽಯಂ = ಆ ಯಾವ, ಮಧ್ಯಮಃ ಪ್ರಾಣಃ = ಮಧ್ಯಮ ಪ್ರಾಣನು ಇತರ ಪ್ರಾಣಗಳ ನಿಯಾಮಕನಾಗಿದ್ದಾನೆ,

ಋಗ್ವೇದದಲ್ಲಿಯೂ ಕುವಿದಂಗ ನಮಸಾ ಯೇ ವೃಧಾಸಃ ಪುರಾ ದೇವಾ ಅನವದ್ಯಾಸ ಆಸನ್ । ತೇ ವಾಯವೇ ಮನವೇ ಬಾಧಿತಾಯಾ-ವಾಸಯನ್ ಉಷಸಂ ಸೂರ್ಯೇಣ ॥ ಎಂಬುದಾಗಿ ಹೇಳಲಾಗಿದೆ. ಅಂಗ = ಪ್ರಿಯನೇ, ಯೇ = ಯಾವ ದೇವತೆಗಳು, ನಮಸಾ = ನಮಸ್ಕಾರವೇ ಮೊದಲಾದ ಕ್ರಿಯೆಗಳಿಂದ, ವೃಧಾಸಃ = ಜ್ಞಾನಾದಿ-ಗುಣಗಳಿಂದ ಸಂಪನ್ನರಾಗಿದ್ದಾರೆಯೋ, ಅನವದ್ಯಾಸಃ = ಅಜ್ಞಾನಾದಿ ದೋಷಗಳಿಂದ ರಹಿತರಾಗಿದ್ದಾರೋ, ಪುರಾ = ಮೊದಲೇ, ಆಸನ್ = ಇದ್ದರೋ ಅಂತಹ ದೇವತೆಗಳು, ಸೂರ್ಯೇಣ ಸಹ = ಸೂರ್ಯನ ಜೊತೆಗೆ, ಕ್ವಚಿತ್ = ರಹಸ್ಯ ಸ್ಥಳದಲ್ಲಿ, ಮನವೇ = ಜ್ಞಾನಿಯಾದ, ಬಾಧಿತಾಯ = ಸಂಸಾರಬಾಧಿತರಿಂದ ಶರಣಾಗತನಾದ, ವಾಯವೇ = ವಾಯುದೇವನನ್ನು ಉದ್ದೇಶಿಸಿ, ಉಷಸಮ್ = ತಮ್ಮ ಬುದ್ಧಿಯನ್ನು, ಆವಾಸಯನ್ = ನೆಲೆಗೊಳಿಸಿದರು. ಇತ್ಯಾದಿನಾ = ಇವೇ ಮೊದಲಾದ ಪ್ರಮಾಣಗಳಿಂದ, ಪ್ರಾಣವ್ಯವಸ್ಥಾಪಕತ್ವಾತ್ = ಅಪಾನ ಮೊದಲಾದ ಪ್ರಾಣಗಳ ನಿಯಾಮಕತ್ವವು ಶ್ರುತವಾದ್ದರಿಂದ, ಮಧ್ಯಮತ್ವಾತ್ = ಹೃದಯದ ಮಧ್ಯದಲ್ಲಿರುವುದರಿಂದ, ಸರ್ವದೇವೋಪಾಸ್ಯತ್ವಾತ್= ಸಕಲ ದೇವತೆಗಳ ಉಪಾಸ್ಯತ್ವ ಇರುವುದರಿಂದಲೂ, ವಾಯುರೇವ = ಮುಖ್ಯಪ್ರಾಣನೇ, 'ಈಶಾನ' ಎಂಬ ಶಬ್ದ ಪ್ರತಿಪಾದ್ಯನು, ಇತಿ = ಎಂದು, ಪ್ರತೀಯತೇ = ಕಾಣಿಸುತ್ತದೆ.

ಮಹಾವಿಷ್ಣುವೇ ವಾಮನನೆಂದು ಸಿದ್ಧಾಂತ

ब्रह्मसूत्रभाष्यम् — अतोऽब्रवीत् ॥ शब्दादेव प्रमितः ॥

ಅನುವಾದ - ಹಿಂದಿನ ಆಕ್ಷೇಪವನ್ನು ನಿರಾಕರಿಸುವುದಕ್ಕಾಗಿಯೇ ಸೂತ್ರಕಾರರು 'ಶಬ್ದಾದೇವ ಪ್ರಮಿತಃ' ಎಂದು ಹೇಳಿದ್ದಾರೆ.

ಪ್ರತಿಪದಾರ್ಥ -- ಅತಃ = ಈ ಆಕ್ಷೇಪದ ಪರಿಹಾರಕ್ಕಾಗಿ, ಅಬ್ರವೀತ್ = ಸೂತ್ರಕಾರರು ಹೇಳುತ್ತಿದ್ದಾರೆ. ॥ ಶಬ್ದಾದೇವ ಪ್ರಮಿತಃ ॥ ಎಂದು.

ಲಿಂಗವು ಶ್ರುತಿಗಿಂತ ಪ್ರಬಲವಲ್ಲ

ब्रह्मसूत्रभाष्यम् – वामनशब्दादेव विष्णुरिति प्रमितः । नहि श्रुतेर्लिङ्गं बलवत् ।

ಅನುವಾದ - 'मध्ये वामनम् आसीनं' ಎಂಬ ಕಾಠಕದಲ್ಲಿ ವಾಮನ ಶಬ್ದವಿರುವುದರಿಂದಲೇ, ಲಿಂಗವು ಶ್ರುತಿಗಿಂತ ಪ್ರಬಲವಾಗಲು ಸಾಧ್ಯವಿಲ್ಲ.

ಪ್ರತಿಪದಾರ್ಥ -- ಸೂತ್ರದಲ್ಲಿ 'ಏವ' ಎಂದು ಪ್ರಯೋಗಿಸಿದ್ದರಿಂದ ಶ್ರುತಿಯು ಪ್ರಬಲವಾಗಿದೆ ಎಂದು ಸೂಚಿಸಿದಂತಾಯಿತು. ಇದರಿಂದ ಲಿಂಗದ ಪ್ರಾಬಲ್ಯವನ್ನು ನಿಷೇಧಿಸಿದಂತಾಯಿತು ಎಂದು ತೋರಿಸುತ್ತಿದ್ದಾರೆ-

ವಿಷ್ಣುರಿತಿ = ವಿಷ್ಣುವೇ ಈಶಾನ ಶಬ್ದದಿಂದ ಪ್ರತಿಪಾದ್ಯ ಎಂದು, ಪ್ರಮಿತಃ = ನಿಶ್ಚಯವಾಗುತ್ತದೆ. ಶ್ರುತೇಃ = ಶ್ರುತಿಗಿಂತಲೂ, ಲಿಂಗಂ = ಲಿಂಗವು, ನಹಿ ಬಲವತ್ = ಬಲಿಷ್ಠವಲ್ಲವಷ್ಟೇ.

ಸ್ಕಾಂದ ಪುರಾಣದಲ್ಲಿ ಪ್ರಾಬಲ್ಯ ದೌರ್ಬಲ್ಯ ವಿಚಾರ

ब्रह्मसूत्रभाष्यम् – 'श्रुतिर्लिङ्गं समाख्या च वाक्यं प्रकरणं तथा । पूर्वं पूर्वं बलीयः स्यादेवमागमनिर्णयः ।' इति स्कान्दे ।

ಅನುವಾದ - 'ಶ್ರುತಿ, ಲಿಂಗ, ಸಮಾಖ್ಯಾ, ವಾಕ್ಯ, ಪ್ರಕರಣ ಇವುಗಳಲ್ಲಿ ಮುಂದಿನವುಗಳಿಗಿಂತ ಹಿಂದಿನವು ಪ್ರಬಲವಾಗುತ್ತವೆ. ಇವುಗಳ ಪ್ರಾಬಲ್ಯ ದೌರ್ಬಲ್ಯಗಳಿಂದಲೇ, ಆಗಮದ ನಿಜವಾದ ಅರ್ಥವನ್ನು ನಿಶ್ಚಯಿಸಬೇಕು' - ಹೀಗೆ ಸ್ಕಾಂದ ಪುರಾಣವು ಹೇಳಿದೆ.

ಪ್ರತಿಪದಾರ್ಥ -- ಲಿಂಗವು ಶ್ರುತಿಗಿಂತ ಏಕೆ ಪ್ರಬಲವಲ್ಲ? ಒಂದು ವೇಳೆ ಶ್ರುತಿಗಿಂತ ಲಿಂಗವೇ ಪ್ರಬಲವಾದರೆ, ಸ್ಕಾಂದಪುರಾಣದ ವಿರೋಧ ಬರುತ್ತದೆ. ಅದು ಹೀಗೆ -

ಶ್ರುತಿಃ = ವೇದವು, ಲಿಂಗಂ = ಯುಕ್ತಿಯು, ಚ = ಮತ್ತು, ಸಮಾಖ್ಯಾ = ಸಮಾನವಾದ ಅರ್ಥದಲ್ಲಿರುವ ಮತ್ತೊಂದು ಪ್ರಮಾಣವು, ವಾಕ್ಯಂ = ಸ್ಮೃತಿವಾಕ್ಯವು, ತಥಾ = ಅದರಂತೆ, ಪ್ರಕರಣಂ = ಪ್ರಕರಣವು ಇವುಗಳಲ್ಲಿ, ಪೂರ್ವಂ ಪೂರ್ವಂ = ಹಿಂದಿನವುಗಳು, ಬಲೀಯಃ = ಬಲಿಷ್ಠವಾದ ಪ್ರಮಾಣಗಳು, ಏವಂ = ಹೀಗೆ, ಆಗಮನಿರ್ಣಯಃ =

ವೇದದಲ್ಲಿ ನಿರ್ಣೀತವಾಗಿದೆ. ಇತಿ = ಹೀಗೆ, ಸ್ಕಾಂದೇ = ಸ್ಕಾಂದಪುರಾಣದಲ್ಲಿ ಹೇಳಲಾಗಿದೆ.

ಪ್ರಾಣಶಬ್ದದಿಂದಲೂ ವಿಷ್ಣುವೇ ಪ್ರತಿಪಾದ್ಯ

ಬ್ರಹ್ಮಸೂತ್ರಭಾಷ್ಯಮ್ – तच्च लिङ्गं विष्णोरेव । तस्यैव प्राणत्वोक्तेः 'तद्वै त्वं प्राणो अभवः' इति ।।

ಅನುವಾದ - ವಾಯುದೇವನ ವಿಷಯದಲ್ಲಿ ಹೇಳಲ್ಪಟ್ಟ ಧರ್ಮಗಳು ವಿಷ್ಣುವಿನದ್ದೇ ಆಗಿವೆ. ಏಕೆಂದರೆ 'ತದ್ವೈ ತ್ವಂ ಪ್ರಾಣೋ ಅಭವಃ' ಎಂಬುದಾಗಿ ವಿಷ್ಣುವೇ ಪ್ರಾಣಶಬ್ದದಿಂದ ಪ್ರತಿಪಾದ್ಯನೆಂಬ ವಿಚಾರವನ್ನು, ಹಿಂದೆ ಪ್ರಾಣಾಧಿಕರಣದಲ್ಲಿ ಸಮರ್ಥಿಸಿದ್ದಾಗಿದೆ.

ಪ್ರತಿಪದಾರ್ಥ -- ಶ್ರುತಿಯು ಸ್ವಾಭಾವಿಕವಾಗಿ ಬಲಿಷ್ಠವಾಗಲಿ, ಆದರೂ ಸಹ ಪೂರ್ವಪಕ್ಷಲಿಂಗಗಳೂ ಸಹ ಪ್ರಬಲವಾಗಿರುವುದರಿಂದ ನಿರ್ಣಯವನ್ನು ಮಾಡಲಾಗುವುದಿಲ್ಲವಲ್ಲವೇ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ - ತಚ್ಚ ಲಿಂಗಂ = ಆ ಮುಖ್ಯಪ್ರಾಣನ ಧರ್ಮಗಳು, ವಿಷ್ಣೋರೇವ = ವಿಷ್ಣುವಿನದ್ದೇ ಆಗಿವೆ, ತಸ್ಯೈವ = ಆ ವಿಷ್ಣುವಿಗೆ, ತದ್ವೈ ತ್ವಂ ಅಭವಃ = ಆ ಪ್ರಸಿದ್ಧನಾದ ವಿಷ್ಣುವೇ ಪ್ರಾಣನಾದವನು, ಇತಿ = ಹೀಗೆ, ಪ್ರಮಾಣಗಳಿರುವುದರಿಂದ ಪ್ರಾಣತೋಕ್ತೇಃ = ಪ್ರಾಣಶಬ್ದಪ್ರತಿಪಾದ್ಯತ್ವವನ್ನು ಸಮರ್ಥಿಸಿದ್ದರಿಂದ ವಿಷ್ಣುವೇ ಸರ್ವದೇವೋಪಾಸ್ಯನು.

ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ

ಸತ್ತರ್ಕದೀಪಾವಳಿ

'ಊರ್ಧ್ವಂ ಪ್ರಾಣಮುನ್ನಯತಿ' ಎಂಬುದು ಮುಖ್ಯಪ್ರಾಣದೇವರ ಲಿಂಗ

सत्तर्कदीपावलिः – ।। शब्दादेव प्रमितः ।। १-३-२४ ।।

'विष्णुरेव जिज्ञास्यः' इत्यादेरयमर्थः । 'ऊर्ध्वं प्राणमुन्नयति' इत्याद्यामायते । तत्र तावल्लिङ्गान्मुख्यप्राणः प्रतीयते ।

'ವಿಷ್ಣುರೇವ ಜಿಜ್ಞಾಸ್ಯಃ' ಇತ್ಯಾದಿ ಭಾಷ್ಯದ ಅರ್ಥ ಹೀಗಿದೆ -

'ಊರ್ಧ್ವಂ ಪ್ರಾಣಮುನ್ನಯತಿ' ಇತ್ಯಾದಿಯಾಗಿ ಕಾಠಕೋಪನಿಷತ್ತಿನ ಪ್ರಕರಣ ಇದೆ. ಈ ವಾಕ್ಯವು ಮುಖ್ಯಪ್ರಾಣದೇವರ ಲಿಂಗದಿಂದ ಕೂಡಿರುವ ಕಾರಣ ಮುಖ್ಯಪ್ರಾಣದೇವರು ಪ್ರತಿಪಾದ್ಯರಾಗಿದ್ದಾರೆಂದು ಪ್ರತೀತವಾಗುತ್ತದೆ.

ಮುಖ್ಯಪ್ರಾಣದೇವರಲ್ಲಿರುವ ಲಿಂಗಗಳು

सत्तर्कदीपावलिः – यदत्र प्राणापानादिविनियोजकत्वं यन्मध्यस्थितत्वम्, यच्च सर्वदेवोपास्यत्वम्, तत् 'सर्वमेव प्राणः' इत्यादि श्रुत्यन्तरेषु मुख्यप्राणशब्दाभिधेयस्य प्रधानवायोर्लिङ्गत्वेन उच्यते ।

ಈ ಶ್ರುತಿಯಲ್ಲಿ ಕೇಳಿಸುತ್ತಿರುವ ಪ್ರಾಣಾಪಾನಾದಿಲಿಂಗನಿಯಾಮಕತ್ವ, ಮಧ್ಯಸ್ಥಿತತ್ವ, ಮತ್ತು ಸರ್ವದೇವೋಪಾಸ್ಯತ್ವ ಮೊದಲಾದ ಲಿಂಗಗಳು ಮುಖ್ಯಪ್ರಾಣದೇವರಲ್ಲಿ ಇರುತ್ತವೆಂದು ಬೇರೆ ಸ್ಮೃತಿಗಳಿಂದ ಸಿದ್ಧವಾಗಿವೆ. ಆದ್ದರಿಂದ ಮುಖ್ಯಪ್ರಾಣದೇವರ ಲಿಂಗಗಳು ಇರುವ ಕಾರಣ ಅವರೇ ಪ್ರತಿಪಾದ್ಯರಾಗುತ್ತಾರೆ.

'ಕುವಿದಂಗ' ಇತ್ಯಾದಿ ಶ್ರುತಿಯ ಅರ್ಥ

सत्तर्कदीपावलिः – कुविदङ्गेत्यस्यायमर्थः । अङ्गेति सम्बोधनम् । नमस्कारादिरूपया भक्त्या प्रवृद्धा अनवद्याः पुरा ये देवाः सूर्येण सहासन् ते ज्ञानिने क्लेशबाधितैः शरणत्वेन प्राप्ताय वायवे कचिदेकान्ते उषसः प्रकाशरूपाः बुद्धिं ध्यानाख्याम् आवसन् स्थापयामासुरकुर्वन्निति ।

'ಕುವಿದಂಗ' ಇತ್ಯಾದಿ ಋಕ್‌ಸಂಹಿತೆಯ ಶ್ರುತ್ಯರ್ಥಹೀಗಿದೆ -

'ಅಂಗ' ಎಂಬುದು ಸಂಬೋಧಕವಾಚಕಶಬ್ದ, ಸೂರ್ಯನ ಜೊತೆಗೆ ಸೇರಿಕೊಂಡು ದೇವತೆಗಳು ವಾಯುದೇವರಲ್ಲಿ ನಮಸ್ಕಾರವೇ ಮೊದಲಾದ ಸೇವೆಯಿಂದ ಭಕ್ತಿಮಾಡುತ್ತಾ ಜ್ಞಾನಾದಿಗುಣಗಳಿಂದ ಪ್ರವೃದ್ಧರಾಗಿ, ಅಜ್ಞಾನಾದಿ ದೋಷಗಳಿಂದ ವಿದೂರರಾದರು. ಅಂತಹ ದೇವತೆಗಳು ಒಮ್ಮೆ ಏಕಾಂತಸ್ಥಳದಲ್ಲಿ ಜ್ಞಾನಿಜನರು ಮತ್ತು ಸಂಸಾರದಲ್ಲಿ ಬಳಲಿದ ಜನರು ಯಾರನ್ನು ಶರಣು ಹೊಂದುತ್ತಾರೋ ಅಂತಹ ವಾಯುದೇವರಲ್ಲಿ ಧ್ಯಾನ ಮಾಡಲು ಬುದ್ಧಿಯನ್ನು ಇಟ್ಟರು.

ನಿದಿಧ್ಯಾಸನಕ್ಕೆ ಯಾರು ವಿಷಯ ?

सत्तर्कदीपावलिः – अतो यदुक्तम्, प्राग् विष्णुरेव निदिध्यासितव्य इति, तन्न सिद्ध्यतीति चेत्,

ಆದ್ದರಿಂದ ವಿಷ್ಣುವೇ ನಿದಿಧ್ಯಾಸನಕ್ಕೆ ವಿಷಯನಾಗಿದ್ದಾನೆಂದು ಹಿಂದೆ ಹೇಳಿದ್ದು ತಪ್ಪಾಯಿತಲ್ಲವೆ?

ಮುಖ್ಯಪ್ರಾಣಲಿಂಗವು ವಿಷ್ಣುಶ್ರುತಿಗಿಂತ ದುರ್ಬಲ

सत्तर्कदीपावलिः – मैवम् । विष्णुरेवात्र प्रतिपाद्यते । 'वामनमासीनम्' इति वामनश्रुतेः । यदुक्तं मुख्यप्राणलिङ्गम्, तच्छ्रुत्या बाध्यते, दुर्बलत्वात् ।

ಇದು ತಪ್ಪು. ವಿಷ್ಣುವೇ 'ಕುವಿದಂಗ' ಇತ್ಯಾದಿ ಶ್ರುತಿಯಿಂದ ಪ್ರತಿಪಾದ್ಯನಾಗಿದ್ದಾನೆ. 'ವಾಮನಮಾಸೀನಮ್' ಎಂಬ 'ವಾಮನ' ಶ್ರುತಿಯು ಈ ವಿಷಯದಲ್ಲಿ ಆಧಾರವಾಗಿದೆ. ಮುಖ್ಯಪ್ರಾಣಲಿಂಗವಿರುವುದರಿಂದ ಶ್ರುತಿಯು ಮುಖ್ಯಪ್ರಾಣಕಲಿಂಗಕವೆಂದು ಹೇಳಿದ್ದು ತಪ್ಪು. ಮುಖ್ಯಪ್ರಾಣಲಿಂಗವು ಶ್ರುತಿಗಿಂತ ದುರ್ಬಲವಾದ್ದರಿಂದ ಬಾಧಿತವಾಗುತ್ತದೆ.

ಜೈಮಿನಿ ಋಷಿಗಳು ಹೇಳಿದ ಸೂತ್ರದಲ್ಲಿ ಪ್ರಾಬಲ್ಯ ವಿಚಾರ

सत्तर्कदीपावलिः – तदुक्तं जैमिनिना 'श्रुतिलिङ्गवाक्यप्रकरणस्थान समाख्यानां समवाये परदौर्बल्यमर्थविप्रकर्षात्' इति ।

ಇದನ್ನೇ ಜೈಮಿನಿ ಋಷಿಗಳು 'ಶ್ರುತಿಲಿಂಗವಾಕ್ಯಪ್ರಕರಣಸ್ಥಾನಸಮಾಖ್ಯಾನಾಂ ಸಮವಾಯೇ ಪರದೌರ್ಬಲ್ಯಮರ್ಥವಿಪ್ರಕರ್ಷಾದ್' ಎಂಬ ಸೂತ್ರದಲ್ಲಿ ದುರ್ಬಲವಾದ ಲಿಂಗವು ಶ್ರುತಿಯಿಂದ ಬಾಧಿತವಾಗುತ್ತದೆಂದು ಹೇಳಿರುತ್ತಾರೆ.

ಸ್ಕಾಂದ ಪುರಾಣದಲ್ಲಿಯೂ ಅದನ್ನೇ ಹೇಳಿದೆ

सत्तर्कदीपावलिः – यत्र श्रुतिलिङ्गादयः परस्परं विरुद्धयन्ते, तत्र पूर्वपूर्वबलीयस्त्वं पुराणवचनेन साधयति श्रुतिरिति ।।

ಯಾವವಿಷಯದಲ್ಲಿ ಶ್ರುತಿಲಿಂಗಾದಿಗಳು ಪರಸ್ಪರವಿರುದ್ಧವಾಗಿರುತ್ತವೋ, ಅಂತಹ ಸಂದರ್ಭದಲ್ಲಿ ಮುಂದಿನವುಗಳಿಗಿಂತ ಹಿಂದಿನವುಗಳಿಗೆ ಪ್ರಾಬಲ್ಯವಿರುತ್ತದೆ ಎಂದು ಸ್ಕಾಂದಪುರಾಣದ ಮಾತಿನಿಂದ ಸಾಧನೆ ಮಾಡುತ್ತಿದ್ದಾರೆ 'ಶ್ರುತಿಃ' ಇತ್ಯಾದಿಯಾಗಿ.

ಈಶಾನಶಬ್ದದಿಂದ ವಿಷ್ಣುಪ್ರತಿಪಾದಕವೆನ್ನಲು ಬಾಧಕವಿಲ್ಲ

सत्तर्कदीपावलिः – अत्र समाख्या नाम समानप्रकरणमुच्यते । विष्णावप्युपपन्नत्वेनान्यथासिद्धत्वादप्यत्र मुख्यप्राणलिङ्गं न विरोधीत्याह – तच्चेति ।।

ಈ ಶ್ಲೋಕದಲ್ಲಿರುವ 'ಸಮಾಖ್ಯಾ' ಎಂಬ ಶಬ್ದಕ್ಕೆ ಸಮಾನವಾದ ಪ್ರಕರಣ ಎಂದರ್ಥ. ಮುಖ್ಯಪ್ರಾಣನ ಲಿಂಗಗಳೆಲ್ಲವೂ ವಿಷ್ಣುವಿನಲ್ಲೂ ಉಪಪನ್ನವಾಗುವುದರಿಂದ ಸಾವಕಾಶವಾಗಿವೆ.

ಆದ್ದರಿಂದ ಮುಖ್ಯಪ್ರಾಣನ ಲಿಂಗಗಳು ವಿಷ್ಣುವೇ 'ಈಶಾನ' ಶಬ್ದದಿಂದ ಪ್ರತಿಪಾದ್ಯನೆನ್ನಲು ಬಾಧಕಗಳಾಗುವುದಿಲ್ಲ.

ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ

ತತ್ತ್ವಪ್ರದೀಪ

ವಿಷ್ಣುವಿನ ಜಿಜ್ಞಾಸೆಯನ್ನೇ ಮಾಡಬೇಕು

तत्वप्रदीपः – मोक्षस्यैव परमपुरुषार्थत्वात्तस्य च समीचो विना विष्णुप्रसादादलम्यत्वात्, तस्य चातिमात्रस्य ज्ञानप्रसाध्यत्वात्, तस्य चापरोक्षस्य जिज्ञासासमायत्तत्वात् विष्णुरेव जिज्ञस्य इत्युक्तम् । जिज्ञास्यो मीसांस्यो विचार्य इत्यर्थः । ''जिज्ञासितं सुसम्पन्नम्'' इति भागवते । अर्थादुपास्य इत्यापद्यते ।

ಮೋಕ್ಷವೇ ಪರಮ ಪುರುಷಾರ್ಥ. ಅದನ್ನು ಪಡೆಯಲು ವಿಷ್ಣುಪ್ರಸಾದ ಬೇಕೇ ಬೇಕು. ವಿಷ್ಣುಪ್ರಸಾದವಿಲ್ಲದಿದ್ದರೆ ಆ ಮೋಕ್ಷ ದೊರಕದು. ವಿಷ್ಣುಪ್ರಸಾದ ಆಗಬೇಕೆಂದರೆ ಅಪರೋಕ್ಷಜ್ಞಾನವನ್ನು ಹೊಂದಬೇಕು. ಆ ಅಪರೋಕ್ಷಜ್ಞಾನ ಆಗಬೇಕೆಂದರೆ ವಿಷ್ಣುವಿನ ಜಿಜ್ಞಾಸೆಯನ್ನು ಮಾಡಬೇಕು. ಆದ್ದರಿಂದ ವಿಷ್ಣುವೇ ಜಿಜ್ಞಾಸನಾಗಿದ್ದಾನೆಂದು ಪ್ರಥಮಸೂತ್ರದಲ್ಲಿ ಹೇಳಲಾಗಿದೆ. 'ಜಿಜ್ಞಾಸ್ಯ' ಶಬ್ದಕ್ಕೆ ಮೀಮಾಂಸ್ಯ ಎಂದರ್ಥ. ವಿಚಾರ ಮಾಡಲು ಅರ್ಹನಾಗಿರುವನು ಎಂದಭಿಪ್ರಾಯ. 'ಜಿಜ್ಞಾಸಿತಂ ಸುಸಂಪನ್ನಮ್' ಎಂಬ ಭಾಗವತವು ಇದಕ್ಕೆ ಆಧಾರವಾಗಿದೆ. ಅರ್ಥಾತ್ ವಿಷ್ಣುವಿನ ಉಪಾಸನೆಯನ್ನು ಮಾಡಬೇಕೆಂದು ತಿಳಿಯಬೇಕು.

ಸಕಲ ದೇವತೆಗಳ ಉಪಾಸನೆಗೆ ಯಾರು ವಿಷಯ ?

तत्वप्रदीपः – तत्र काठकश्रुतो सर्वदेवोपास्यः कश्चित्प्रतीयते । स किं वायुरुत विष्णिुरिति संशयः। किं तावत्प्राप्तं ? वायुरेवेति । ऊर्ध्वमित्यादिश्रुतेः।

ಹೀಗಿರುವಾಗ ಕಾಠಕಶ್ರುತಿಯು ಸಕಲ ದೇವತೆಗಳಿಂದ ಉಪಾಸ್ಯನಾದವನ ಬಗ್ಗೆ ಹೇಳುತ್ತಿದೆ- ಆ ಕಾಠಕದ ಅಭಿಪ್ರಾಯವೇನು ಎಂಬುದನ್ನು ವಿಚಾರ ಮಾಡಬೇಕು. 'ಊರ್ಧ್ವಂ ಪ್ರಾಣಂ' ಇತ್ಯಾದಿ ಕಾಠಕಶ್ರುತಿಯು ವಾಯುದೇವರನ್ನು ಪ್ರತಿಪಾದನೆ ಮಾಡುತ್ತಿದೆಯೋ, ಅಥವಾ ಮಹಾವಿಷ್ಣುವನ್ನೋ ? ಎಂಬ ಸಂಶಯ ಪ್ರಾಪ್ತವಾಗುತ್ತದೆ. ವಾಯುದೇವನನ್ನು ಪ್ರತಿಪಾದನೆ ಮಾಡುತ್ತಿದೆ ಎಂಬುದು ಪೂರ್ವಪಕ್ಷ. ಈ ವಿಷಯದಲ್ಲಿ 'ಊರ್ಧ್ವಂ' ಇತ್ಯಾದಿ ಶ್ರುತಿಯು ಆಧಾರವಾಗಿದೆ.

ವಿವರಣೆ - ಊರ್ಧ್ವಂ ಪ್ರಾಣಮುನ್ನಯತಿ ಅಪಾನಂ ಪ್ರತ್ಯಗಸ್ಯತಿ।
ಮಧ್ಯೇ ವಾಮನಮಾಸೀನಂ ವಿಶ್ವೇದೇವಾ ಉಪಾಸತೇ ॥

ಎಲ್ಲ ಪ್ರಾಣಿಗಳ ಹೃದಯದಲ್ಲಿ ಅಂಗುಷ್ಠ ಪರಿಮಾಣದಲ್ಲಿ ಇರುವ ವಾಮನನು ಮುಖ್ಯಪ್ರಾಣ ಸ್ವರೂಪನಾದ ಪ್ರಾಣವಾಯುವನ್ನು ಮೇಲಕ್ಕೆ ಎಂದರೆ ಶ್ವಾಸೋಚ್ಛ್ವಾಸಕ್ಕೆ ಅನುಕೂಲಕರವಾಗುವಂತೆ ಪ್ರೇರಿಸುತ್ತಾನೆ. ಮುಖ್ಯ ಪ್ರಾಣ ಸ್ವರೂಪನಾದ ಅಪಾನ ವಾಯುವನ್ನು ಕೆಳಗೆ ಅಂದರೆ ಮಲ ಮೂತ್ರ ವಿಸರ್ಜನೆಗೆ ಅನುಕೂಲವಾಗುವಂತೆ ಪ್ರೇರಿಸುತ್ತಾನೆ, ಇಂಥ ವಾಮನನನ್ನು ಎಲ್ಲ ದೇವತೆಗಳು ಉಪಾಸಿಸುತ್ತಾರೆ.

ಅಸ್ಯ ವಿಸ್ರಂಸಮಾನಸ್ಯ ಶರೀರಸ್ಥಸ್ಯ ದೇಹಿನಃ।
ದೇಹಾದ್ವಿಮುಚ್ಯಮಾನಸ್ಯ ಕಿಮತ್ರ ಪರಿಶಿಷ್ಯತೇ ॥ ಏತದ್ವೈತತ್ ॥

''ಸ್ಥೂಲ ಶರೀರದಲ್ಲಿರುವ ಜೀವನು ಆ ಶರೀರವನ್ನು ಪರಿತ್ಯಾಗ ಮಾಡಿ ಸೂಕ್ಷ್ಮದೇಹದಿಂದಲೂ ಮುಕ್ತನಾದಾಗ, ಆ ಜೀವನಿಗೆ ಮುಕ್ತಿಯಲ್ಲಿ ನಿಯಾಮಕನಾದ ಭಗವಂತನು ಎಂಥ ಮಹಿಮೆಯುಳ್ಳವನು? ನನಗೆ ಇನ್ನೂ ವಿಶೇಷವಾಗಿ ಉಪದೇಶಿಸು'' ಎಂದು ಪುನಃ ಪ್ರಶ್ನಿಸಿದ ನಚಿಕೇತನಿಗೆ ಯಮನು ಉತ್ತರಿಸುತ್ತಾನೆ. 'ನಚಿಕೇತನೇ ನೀನು ಕೇಳಿದ ಭಗವಂತನ ಸ್ವರೂಪವು ಮುಂದೆ ಹೇಳುವ ರೀತಿಯಲ್ಲಿದೆ.

ನ ಪ್ರಾಣೇನ ನಾಪಾನೇನ ಮರ್ತ್ಯೋ ಜೀವತಿ ಕಶ್ಚನ।
ಇತರೇಣ ತು ಜೀವಂತಿ ಯಸ್ಮಿನ್ನೇತಾವುಪಾಶ್ರಿತೌ ॥

ಯಾವ ಮನುಷ್ಯನೂ ಪ್ರಾಣನಿಂದಲೂ ಬದುಕುವುದಿಲ್ಲ. ಅಪಾನನಿಂದಲೂ ಬದುಕುವುದಿಲ್ಲ. ಈ ಪ್ರಾಣಾಪಾನ ವಾಯುಗಳು ಯಾರಲ್ಲಿ ಆಶ್ರಿತಾರಗಿದ್ದಾರೆಯೋ, ಈ ಪ್ರಾಣಾಪಾನಗಳಿಗಿಂತ ಅತ್ಯಂತ ಭಿನ್ನನಾದ ಈ ಭಗವಂತನಿಂದಲೇ ಎಲ್ಲ ಜೀವರು ಬದುಕುತ್ತಾರೆ.

ನ ಕೇವಲಂ ಪ್ರಾಣ ಏವ ಚೇತನಾನಾಂ ವಿಧಾರಕಃ।
ಕಿಂತು ವಿಷ್ಣುಂ ಸಮಾಶ್ರಿತ್ಯ ಪ್ರಾಣೋ ಜೀವಾನ್ ಬಿಭರ್ತ್ಯಯಮ್ ।
ಅತೋ ಮುಖ್ಯಾಶ್ರಯೋ ವಿಷ್ಣುಃ ಚೇತನಾನಾಂ ಸ್ವತಂತ್ರತಃ ॥

ಭಗವಂತನ ಅಪೇಕ್ಷೆ ಇಲ್ಲದೇ ಮುಖ್ಯಪ್ರಾಣನು ಜೀವರ ಜೀವನಕ್ಕೆ ಸ್ವತಂತ್ರನಾಗಿ ಕಾರಣನಲ್ಲ. ಅವನು ವಿಷ್ಣುವನ್ನು ಆಶ್ರಯಿಸಿಕೊಂಡೇ ಜೀವರನ್ನು ಬದುಕಿಸುತ್ತಾನೆ. ಆದ್ದರಿಂದ ವಿಷ್ಣುವೇ ಚೇತನರಿಗೆ ಸ್ವತಂತ್ರವಾಗಿ ಹಾಗೂ ಮುಖ್ಯವಾಗಿ ಆಶ್ರಯನಾಗಿದ್ದಾನೆ.

ಮಧ್ಯಮಪ್ರಾಣನು ಉಪಾಸ್ಯನೆಂದು ಪೂರ್ವಪಕ್ಷ

तत्वप्रदीपः – योऽयं देहे देहिनामूर्ध्वं प्राणमुन्नयत्यपानमभिमुखमस्यति तं मध्य आसीनं देवा उपासत इति प्राणव्यवस्थापकत्वान्मध्यमत्वाच्च ।

ಯಾವಾತನು ಈ ದೇಹದಲ್ಲಿ ನಿಯಾಮಕನಾಗಿ ನೆಲಸಿ ಮೇಲೆ ಪ್ರಾಣನನ್ನು, ಕೆಳಗಡೆ ಅಪಾನನ್ನು ನಿಯಮನ ಮಾಡುತ್ತಾ ಮಧ್ಯದಲ್ಲಿ ಕುಳಿತಿರುವನೋ, ಅವನನ್ನೇ ದೇವತೆಗಳು ಉಪಾಸನೆ ಮಾಡುತ್ತಾರೆ ಎಂಬುದಾಗಿ ಪ್ರಾಣವ್ಯವಸ್ಥಾಪಕತ್ವಧರ್ಮವನ್ನು ಶ್ರುತಿಯು ಹೇಳುತ್ತಿರುವುದರಿಂದ ಮಧ್ಯಮಪ್ರಾಣನೇ ಜಿಜ್ಞಾಸೆಗೆ ಅರ್ಹನಾಗಿದ್ದಾನೆ.

ಮುಖ್ಯಪ್ರಾಣನೇ ಜಿಜ್ಞಾಸ್ಯನೆನ್ನಲು ಸಂವಾದಿ ಪ್ರಮಾಣ

तत्वप्रदीपः – ''यथा सम्राडेवाधिकृतान्विनियुक्तं एतान् ग्रामानधितिष्ठस्वेति, एवमेवैष प्राण'' इत्यादि श्रुत्यन्तरान्मुख्यप्राणस्यैव प्राणानां व्यवस्थापकत्वम्।

ಹೇಗೆ ಒಬ್ಬ ರಾಜನು ತನ್ನ ಸಾಮ್ರಾಜ್ಯದಲ್ಲಿ ಒಂದೊಂದು ಭಾಗವನ್ನು ಒಬ್ಬೊಬ್ಬರಿಗೆ ಆಡಳಿತ ವ್ಯವಸ್ಥೆಯನ್ನು ಹಂಚುವನೋ, ಅದರಂತೆ ಈ ಪ್ರಾಣನೂ ಕೂಡ ಪ್ರತ್ಯೇಕ ಕೆಲಸಗಳನ್ನು ಅಪಾನಾದಿಗಳಿಗೆ ನೀಡಿ, ತಾನು ಹೃದಯಮಧ್ಯದಲ್ಲಿ ನೆಲೆಸಿರುವನು ಇತ್ಯಾದಿಯಾಗಿ ಬೇರೆ ಶ್ರುತಿಗಳ ಆಧಾರದಿಂದ ಮುಖ್ಯಪ್ರಾಣನೇ ಪ್ರಾಣವ್ಯವಸ್ಥಾಪಕನಾಗಿದ್ದಾನೆಂದು ತಿಳಿಯುತ್ತದೆ.

ವಿವರಣೆ- ಕಾಠಕೋಪನಿಷತ್ತಿನಲ್ಲಿ ಉದಾಹರಣಪೂರ್ವಕವಾಗಿ ಪ್ರಾಣವ್ಯವಸ್ಥಾಪಕತ್ವವು ಮುಖ್ಯಪ್ರಾಣನ ಲಿಂಗವೆಂದು ಹೇಳಲಾಗಿದೆ. ಆದ್ದರಿಂದ ಮುಖ್ಯಪ್ರಾಣನೇ ಜಿಜ್ಞಾಸೆಗೆ

ಅರ್ಹನಾಗಿದ್ದಾನೆ ಎಂದು ಪೂರ್ವಪಕ್ಷಕಾರರ ಸಮರ್ಥನೆ. ಕಾಠಕೋಪನಿಷತ್ತಿನಲ್ಲಿ ಬರುವ ಪ್ರಾಣವ್ಯವಸ್ಥಾಪಕತ್ವದ ಪ್ರಕರಣ ಹೀಗಿದೆ -

(ಸಂಗ್ರಹ) ಅಥ ಹೈನಂ ಕೌಸಲ್ಯಶ್ಚಾಶ್ವಲಾಯನಃ ಪಪ್ರಚ್ಛ। ಭಗವನ್ ಕುತ ಏಷ ಪ್ರಾಣೋ ಜಾಯತೇ। ಕಥಮಾಯುತ್ಯಸ್ಮಿಂಚ್ಛರೀರೇ। ಆತ್ಮಾನಂ ವಾ ಪ್ರವಿಭಜ್ಯ ಕಥಂ ಪ್ರತಿಷ್ಠತೇ। ಕೇನೋತ್ಕ್ರಮತೇ। ಕಥಂ ಬಾಹ್ಯಮಭಿಧತ್ತೇ ಕಥಮಧ್ಯಾತ್ಮಮಿತಿ ॥

ಅನಂತರ ಅಶ್ವಲಾಯನ ಪುತ್ರನಾದ ಕೌಸಲ್ಯನು ಪಿಪ್ಪಲಾದರನ್ನು ಕುರಿತು 'ಪೂಜ್ಯರೇ, ಈ ಮುಖ್ಯಪ್ರಾಣನು ಯಾರಿಂದ ಹುಟ್ಟುತ್ತಾನೆ ? ಏಕೆಂದರೆ ಮಹಾ ಮಹಿಮನಾದ ಪ್ರಾಣನಿಗೆ ಭಗವಂತನಿಂದಲಾದರೂ ಉತ್ಪತ್ತಿ ಹೇಗೆ ತಾನೆ ಸಾಧ್ಯ ? ಈ ಶರೀರದಲ್ಲಿ ಈ ಪ್ರಾಣನು ಯಾವ ಕಾರಣದಿಂದ ಕಾರ್ಯಗಳನ್ನು ನಿರ್ವಹಿಸುತ್ತಾನೆ ? ತನ್ನನ್ನು ಐದು ರೂಪಗಳನ್ನಾಗಿ ವಿಭಾಗಿಸಿಕೊಂಡು ಯಾವ ರೀತಿಯಲ್ಲಿ, ಇರುತ್ತಾನೆ ? ಅಂದರೆ ಆ ರೂಪಗಳಾವುವು ? ಯಾವ ಯಾವ ರೂಪದಿಂದ ಯಾವ ಯಾವ ಕೆಲಸಗಳನ್ನು ಮಾಡುತ್ತ ಎಲ್ಲೆಲ್ಲಿರುತ್ತಾನೆ ? ಯಾವ ರೂಪದಿಂದ ಜೀವ-ಪರಮಾತ್ಮರನ್ನು ಹೊತ್ತುಕೊಂಡು, ಶರೀರದಿಂದ ಹೊರಟು ಹೋಗುತ್ತಾನೆ ? ಯಾವ ರೂಪದಿಂದ ಶರೀರದ ಹೊರಗೆ, ಅಧಿಭೂತ ಅಧಿದೈವಗಳನ್ನು ಧರಿಸುತ್ತಾನೆ ?' ಎಂದು ಪ್ರಶ್ನಿಸಿದನು.

ತಸ್ಮೈ ಸ ಹೋವಾಚ ಅತಿಪ್ರಶ್ನಾನ್ಪೃಚ್ಛಸಿ ಬ್ರಹ್ಮಿಷ್ಠೋಸೀತಿ । ತಸ್ಮಾತ್ತೇಹಂ ಬ್ರವೀಮಿ । ಆತ್ಮತ ಏಷ ಪ್ರಾಣೋ ಜಾಯತೇ । ಯಥೈಷಾ ಪುರುಷೇ ಛಾಯಾ ಏತಸ್ಮಿನ್ನೇತದಾತತಂ ॥

ಪಿಪ್ಪಲಾದರು ಅಶ್ವಲಾಯನನಿಗೆ ಉತ್ತರಿಸಿದರು 'ನೀನು ಒಳ್ಳೆಯ ಪ್ರಶ್ನೆಗಳನ್ನು ಕೇಳುತ್ತಿದ್ದಿ. ಬಹಳ ವೇದ ವಿಚಾರಗಳನ್ನು ಮಾತನಾಡುವವನಾಗಿದ್ದಿ. ಆದ್ದರಿಂದ ನಾನು ನಿನ್ನ ಪ್ರಶ್ನೆಗಳಿಗೆ ಉತ್ತರಿಸುತ್ತೇನೆ. ಮುಖ್ಯಪ್ರಾಣನು ಮಹಾಮಹಿಮನಾದರೂ ಅವನು ಪರಮಾತ್ಮನಿಂದ ಹುಟ್ಟುತ್ತಾನೆ. ಏಕೆಂದರೆ, ಹೇಗೆ ಈ ಶರೀರದ ನೆರಳು ಶರೀರದ ಅಧೀನವಾಗಿದೆಯೋ ಅದರಂತೆ ಎಲ್ಲವೂ ಪರಮಾತ್ಮನ ಅಧೀನ. ಅವನು ಮುಖ್ಯಪ್ರಾಣನಿಗಿಂತಲೂ ಹೆಚ್ಚು ಮಹಿಮೆ ಉಳ್ಳವಾದುದರಿಂದ, ಅವನಿಂದ ಮುಖ್ಯಪ್ರಾಣನು ಹುಟ್ಟುವುದು ಶಕ್ಯವೇ ಆಗಿದೆ.

'ಆತ್ಮತ ಏಷ ಪ್ರಾಣೋ ಜಾಯತೇ' ಎಂಬ ಉಪನಿಷತ್ತಿನಲ್ಲಿ, ಆತ್ಮ ಎಂದರೆ ಪರಮಾತ್ಮ. ಏಕೆಂದರೆ ಬೇರೆ ಯಾರಿಗೂ ಮುಖ್ಯಪ್ರಾಣನನ್ನು ಹುಟ್ಟಿಸುವ ಸಾಮರ್ಥ್ಯವಿಲ್ಲ.

ಮನೋಕೃತೇನಾಯಾತ್ಯಸ್ಮಿಂಚ್ಛರೀರೇ । ಯಥಾ ಸಮ್ರಾಡೇ ವ್ಯಾಧಿಕೃತಾನ್ ವಿನಿಯುಂಕ್ತ ಏತಾನ್ ಗ್ರಾಮಾನಧಿತಿಷ್ಠಸ್ವೈತಾನ್ ಗ್ರಾಮಾನಧಿತಿಷ್ಠ ಸ್ವೇತ್ಯೇವಮೇವೈಷ ಪ್ರಾಣ ಇತರಾನ್ ಪ್ರಾಣಾನ್ ಪೃಥಕ್ ಪೃಥಗೇನ ಸನ್ನಿಧತ್ತೇ ॥

ಪರಮಾತ್ಮನ ಪ್ರೇರಣೆಯಿಂದ ಈ ಶರೀರದಲ್ಲಿ ಮುಖ್ಯಪ್ರಾಣನು ಶರೀರಕಾರ್ಯಗಳನ್ನು ನಡೆಸಿಕೊಡುತ್ತಾನೆ. ಹೇಗೆ ಒಬ್ಬ ಚಕ್ರವರ್ತಿಯು ತನ್ನ ಸಾಮಂತರಾಜರಿಗೆ ನೀನು ಪಾಟಲೀ-ಪುತ್ರಾಧಿಪತಿಯಾಗು, ನೀನು ಕೌಶಂಬಿಗೆ ಅಧಿಪತಿಯಾಗು ಎಂದು ಮುಂತಾಗಿ ನೇಮಿಸುತ್ತಾನೋ ಹಾಗೇ ಮುಖ್ಯಪ್ರಾಣನು ಇತರ ಪ್ರಾಣಾಪಾನಾದಿಗಳಿಗೆ ಆಜ್ಞೆ ಮಾಡಿ ಬೇರೆ ಬೇರೆ ಸ್ಥಾನಗಳಲ್ಲಿ ಇರಿಸುತ್ತಾನೆ.

ವಿಷ್ಣೋರ್ವಾಯುಃ ಸಮುತ್ಪನ್ನೋ ವಾಯೋಃ ಸರ್ವಾಶ್ಚ ದೇವತಾಃ । ಪ್ರಾಣಾದ್ಯಾಸ್ತಾನ್ನಯನ್ ಪ್ರಾಣ ಆಜ್ಞಾಪಯತಿ ರಾಜವತ್ । ಸ್ವಯಂ ಚ ಪಂಚರೂಪಃ ಸನ್ ದದ್ಯಾನ್ಮೋಕ್ಷಾದಿಕಂ ಪ್ರಭುಃ । ಇತಿ ಪ್ರಭಂಜನೇ ॥

ವಿಷ್ಣುವಿನಿಂದ ಮುಖ್ಯಪ್ರಾಣನು ಹುಟ್ಟಿದನು. ಮುಖ್ಯಪ್ರಾಣನಿಂದ ಪ್ರಾಣಾದಿ ಇತರ ದೇವತೆಗಳು ಹುಟ್ಟಿದರು. ಮುಖ್ಯಪ್ರಾಣನು ತನಗಿಂತ ಭಿನ್ನರಾದ, ತನ್ನಿಂದಲೇ ಹುಟ್ಟಿದ ಪ್ರಾಣಾದಿಗಳನ್ನು ರಾಜನಂತೆ, ಅವರವರ ಕೆಲಸಗಳಲ್ಲಿ ಆಜ್ಞಾಪಿಸುತ್ತಾನೆ. ಸಮರ್ಥನಾದ ಆ ಮುಖ್ಯಪ್ರಾಣನೇ ತನಗಿಂತ ಭಿನ್ನರಾದ ಪ್ರಾಣಾಪಾನಾದಿಗಳಲ್ಲಿ, ತಾನು ಪ್ರಾಣಾದಿ ಪಂಚರೂಪದಿಂದ ಇದ್ದು, ಮೋಕ್ಷಾದಿ ಪುಣ್ಯಲೋಕಗಳನ್ನು ಭಗವಂತನ ಅನುಜ್ಞೆಯಿಂದ ಕೊಡುತ್ತಾನೆ ಎಂದು 'ಪ್ರಭಂಜನ' ಎಂಬ ಗ್ರಂಥದಲ್ಲಿ ಹೇಳಿದೆ.

ಪಾಯೂಪಸ್ಥೇऽಪಾನಂ ಚಕ್ಷುಃಶ್ರೋತ್ರೇ ಮುಖನಾಸಿಕಾಭ್ಯಾಂ ಪ್ರಾಣಃ ಸ್ವಯಂ ಪ್ರತಿಷ್ಠತೇ । ಮಧ್ಯೇ ತು ಸಮಾನಃ । ಏಷ ಹ್ಯೇತದ್ಧುತಮನ್ನಂ ಸಮಂ ನಯತಿ ತಸ್ಮಾದೇತಾಃ ಸಪ್ತಾರ್ಚಿಷೋ ಭವಂತಿ । ಹೃದಿ ಹ್ಯೇಷ ಆತ್ಮಾ ॥

ಮಲಾದಿಗಳನ್ನು ಹೊರಗೆ ಹಾಕುವುದರಿಂದ ಅಪಾನನೆನಿಸುವ ಅಪಾನ ವಾಯುವನ್ನು ಅನ್ನ ಅಪಾನವೆಂಬ ರೂಪದಿಂದ ಯುಕ್ತನನ್ನಾಗಿ ಮಾಡಿ, ವಾಯು ಉಪಸ್ಥಗಳಲ್ಲಿ ಇರಿಸುತ್ತಾನೆ. ಕಣ್ಣು ಕಿವಿಗಳಿಂದಲೂ, ಮುಖ ಮೂಗುಗಳಲ್ಲಿಯೂ ಮುಖ್ಯ ಪ್ರಾಣನು ತಾನೇ ಪ್ರಾಣರೂಪದಿಂದ ಪ್ರಾಣವಾಯುವಿನಲ್ಲಿದ್ದು ಕಾರ್ಯನಿರ್ವಹಿಸುತ್ತಾನೆ. ಸಮಾನನು ಸಮಾನವಾಯುವಿನಲ್ಲಿದ್ದು ಪ್ರಾಣಾಪಾನಗಳ ನಡುವೆ, ಅಂದರೆ ನಾಭಿಯ ಪ್ರದೇಶದಲ್ಲಿದ್ದಾನೆ. ಈ ಸಮಾನವಾಯುವು ಉಂಡ ಅನ್ನವನ್ನು ಶರೀರದ ಆಯಾಯ ಅಂಗಗಳಿಗೆ ಸರಿಯಾಗಿ ಕೊಂಡೊಯ್ಯುತ್ತಾನೆ. ಆದ್ದರಿಂದ ಈ ವಾಯುವಿಗೆ ಸಮಾನ ಎಂದು ಹೆಸರು. ಅನ್ನವನ್ನು ಎಲ್ಲ ಇಂದ್ರಿಯಗಳಿಗೂ ಸಮಾನವಾಗಿ ಕೊಂಡೊಯ್ಯುವುದರಿಂದಲೇ ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮ, ಮನಸ್ಸು ಮತ್ತು ಬುದ್ಧಿಗಳೆಂಬ ಏಳು ಜ್ಞಾನೇಂದ್ರಿಯಗಳು ತಮ್ಮ ಕಾರ್ಯಗಳನ್ನು ನಿರ್ವಹಿಸಲು ಸಮರ್ಥಗಳಾಗುತ್ತವೆ. ಏಕೆಂದರೆ ಆತ್ಮನು ತಾನೇ ವಿಷಯಪದಾರ್ಥಗಳನ್ನು

ಸಂಪರ್ಕಿಸಿ ಅನುಭವಿಸಲಾರ. ಆತ್ಮನು ಅಣುರೂಪನಾಗಿ ಹೃದಯಪ್ರದೇಶದಲ್ಲಿ ಇದ್ದಾನೆ. ಅವನಿಗೆ ವಿಷಯಪದಾರ್ಥಗಳ ಸಂಪರ್ಕ ಇಂದ್ರಿಯಗಳ ಮೂಲಕವಾದ್ದರಿಂದ, ಇಂದ್ರಿಯಗಳ ಸಹಾಯವು ಅತ್ಯಾವಶ್ಯಕ.

> ಅತ್ಯೃತದೇಕಶತಂ ನಾಡೀನಾಮ್ । ತಾಸಾಂ ಶತಮೇಕೈಕಸ್ಯಾಂ ದ್ವಾಸಪ್ತತಿಂ ಪ್ರತಿಶಾಖಾನಾಡೀಸಹಸ್ರಾಣಿ ಭವಂತ್ಯಾಸು ವ್ಯಾನಶ್ಚರತಿ ಅಥೈಕಯೋರ್ಧ್ವ ಉದಾನಃ ಪುಣ್ಯೇನ ಪುಣ್ಯಂ ಲೋಕಂ ನಯತಿ ಪಾಪೇನ ಪಾಪಮುಭಾಭ್ಯಾಮೇವ ಮನುಷ್ಯ ಲೋಕಮ್ ॥

ಈ ಶರೀರದಲ್ಲಿ ನೂರ ಒಂದು ಮುಖ್ಯನಾಡಿಗಳಿವೆ. ಪ್ರತಿಯೊಂದರಲ್ಲೂ ನೂರು ನೂರರಂತೆ ಉಪನಾಡಿಗಳಿವೆ. ಇವುಗಳಿಗೂ ತಿರುಗಿ ಉಪನಾಡಿಗಳು ಬೇರೆ ಇವೆ. ಒಟ್ಟು ಎಪ್ಪತ್ತೆರಡು ಸಾವಿರನಾಡಿಗಳು ಶರೀರದಲ್ಲಿ ಇರುತ್ತವೆ ಎಂದು ತಿಳಿಯಬೇಕು. ಅನ್ನರಸವನ್ನು ನಾನಾವಿಧದಿಂದ ನಾಡಿಗಳಲ್ಲಿ ಒಯ್ಯುವುದರಿಂದ ವ್ಯಾನ ಎಂಬ ಹೆಸರುಳ್ಳ ಮುಖ್ಯಪ್ರಾಣನು ವ್ಯಾನವಾಯುವಿನಲ್ಲಿದ್ದು, ಈ ನಾಡಿಗಳಲ್ಲಿ ಸಂಚರಿಸುತ್ತಾನೆ. ಉದಾನ ಎಂಬ ಮುಖ್ಯಪ್ರಾಣನು ಉದಾನವಾಯುವಿನಲ್ಲಿ ಇದ್ದು, ಈ ನಾಡಿಗಳಲ್ಲ ಮುಖ್ಯವಾದ ಸುಷುಮ್ನಾನಾಡಿಯಲ್ಲಿ ಮೇಲ್ಮುಖನಾಗಿ ಸಂಚರಿಸುತ್ತಾನೆ. ಜೀವನ ಪುಣ್ಯವನ್ನು ನಿಮಿತ್ತ ಮಾಡಿಕೊಂಡು ಅವನನ್ನು ಸ್ವರ್ಗಾದಿ ಪುಣ್ಯಲೋಕಗಳಿಗೂ, ತತ್ವಜ್ಞಾನವನ್ನು ನಿಮಿತ್ತಮಾಡಿಕೊಂಡು ಅವನನ್ನು ಮೋಕ್ಷಕ್ಕೂ ಒಯ್ಯುತ್ತಾನೆ. ಹೀಗೆ ಊರ್ಧ್ವಲೋಕಗಳಿಗೆ ಒಯ್ಯುವುದರಿಂದ ಉದಾನನೆನಿಸಿದ್ದಾನೆ. ಪಾಪವನ್ನು ನಿಮಿತ್ತ ಮಾಡಿಕೊಂಡು ನರಕಕ್ಕೂ, ಪುಣ್ಯಪಾಪಗಳು ಸಮನವಾಗಿದ್ದರೆ ಅದಕ್ಕನುಸಾರವಾಗಿ ಮನುಷ್ಯಲೋಕಕ್ಕೂ ಈ ಉದಾನನೇ ಜೀವನನ್ನು ಒಯ್ಯುತ್ತಾನೆ.

೧೦೧ X ೧೦೦ = ೧೦೧೦೦, ಹತ್ತುಸಾವಿರದ ನೂರು ಉಪನಾಡಿಗಳಾದವು. ಇವುಗಳಲ್ಲಿ ೧೦,೦೦೦ ನಾಡಿಗಳಲ್ಲಿ ಪ್ರತಿಯೊಂದಕ್ಕೂ ಎಳರಂತೆ ಮತ್ತೆ ಉಪನಾಡಿಗಳಿವೆ. ಉಳಿದ ನೂರರಲ್ಲಿ ಪ್ರತಿಯೊಂದರಲ್ಲೂ ೨೦ ರಂತೆ ಉಪನಾಡಿಗಳಿವೆ, ಹೀಗೆ ೧೦,೦೦೦ X ೭ = ೭೦೦೦೦ + ೧೦೦ X ೨೦ = ೨,೦೦೦ ಒಟ್ಟು ೭೨,೦೦೦ ನಾಡಿಗಳು ಶರೀರದಲ್ಲಿವೆ.

ಹೀಗೆ ಒಟ್ಟು ಎಪ್ಪತ್ತೆರಡು ಸಾವಿರ ನಾಡಿಗಳು ಶರೀರದಲ್ಲಿವೆ ಎಂದು ತಿಳಿಯಬೇಕು. ಅನ್ನರಸವನ್ನು ನಾನಾವಿಧದಿಂದ ನಾಡಿಗಳಲ್ಲಿ ಒಯ್ಯುವುದರಿಂದ ವ್ಯಾನ ಎಂಬ ಹೆಸರುಳ್ಳ ಮುಖ್ಯಪ್ರಾಣನು ವ್ಯಾನವಾಯುವಿನಲ್ಲಿದ್ದು ಈ ನಾಡಿಗಳಲ್ಲಿ ಸಂಚರಿಸುತ್ತಾನೆ. ಉದಾನ ಎಂಬ

ಹೆಸರುಳ್ಳ ಮುಖ್ಯಪ್ರಾಣನು ಉದಾನವಾಯುವಿನಲ್ಲಿದ್ದು ಈ ನಾಡಿಗಳಲ್ಲಿ ಮುಖ್ಯವಾದ ಸುಷುಮ್ನಾನಾಡಿಯಲ್ಲಿ ಮೇಲ್ಮುಖವಾಗಿ ಸಂಚರಿಸುತ್ತಾನೆ. ಇವನು ಜೀವನ ಪುಣ್ಯವನ್ನು ನಿಮಿತ್ತಮಾಡಿಕೊಂಡು ಅವನನ್ನು ಸ್ವರ್ಗಾದಿ ಪುಣ್ಯಲೋಕಗಳಿಗೂ ತತ್ವಜ್ಞಾನವನ್ನು ನಿಮಿತ್ತಮಾಡಿಕೊಂಡು ಅವನನ್ನು ಮೋಕ್ಷಕ್ಕೂ ಒಯ್ಯುತ್ತಾನೆ. ಹೀಗೆ ಊರ್ಧ್ವಲೋಕಗಳಿಗೆ ಒಯ್ಯುವುದರಿಂದ ಉದಾನನೆನಿಸಿದ್ದಾನೆ. ಪಾಪವನ್ನು ನಿಮಿತ್ತಮಾಡಿಕೊಂಡು ನರಕಕ್ಕೂ ಪುಣ್ಯಪಾಪಗಳು ಸಮನಾಗಿದ್ದರೆ ಅದಕ್ಕನುಸಾರವಾಗಿ ಮನುಷ್ಯಲೋಕಕ್ಕೂ ಈ ಉದಾನನೇ ಜೀವನನ್ನು ಒಯ್ಯುತ್ತಾನೆ.

ಆದಿತ್ಯೋ ಹ ವೈ ಬಾಹ್ಯಃ ಪ್ರಾಣ ಉದಯತ್ಯೇಷ ಹ್ಯೇನಂ ಚಾಕ್ಷುಷಂ ಪ್ರಾಣಮನುಗೃಹ್ಣನಃ ಪೃಥಿವ್ಯಾಂ ಯಾ ದೇವತಾ ಸೈಷಾ ಪುರುಷಸ್ಯಾಪಾನ-ಮವಷ್ಟಭ್ಯಾಂತರಾ ಯದಾಕಾಶಃ ಸ ಸಮಾನೋ ವಾಯುರ್ವ್ಯಾನಃ ತೇಜೋ ಹ ವಾ ಉದಾನಃ । ತಸ್ಮಾದುಪಶಾಂತತೇಜಾಃ ಪುನರ್ಭವಮಿಂದ್ರಿಯೈರ್ಮನಸಿ ಸಂಪದ್ಯ ಮಾನೈಃ ॥

ಪ್ರಾಣನಾಮಕನಾದ ಮುಖ್ಯಪ್ರಾಣನೇ ಶರೀರದ ಹೊರಗೆ ಸೂರ್ಯನಲ್ಲಿದ್ದು, ಸೂರ್ಯನೆಂಬ ಹೆಸರುಳ್ಳವನಾಗಿ ಉದಯಿಸುತ್ತಾನೆ. ಸೂರ್ಯನಲ್ಲಿರುವ ಪ್ರಾಣನೇ ಆ ಸೂರ್ಯನೊಂದಿಗೆ ಕಣ್ಣಿನಲ್ಲಿದ್ದು, ಕಣ್ಣಿನಲ್ಲಿರುವ ಪ್ರಾಣವಾಯುವನ್ನು ಅನುಗ್ರಹಿಸುತ್ತಾನೆ. ಶರೀರದ ಹೊರಗೆ ಪೃಥಿವಿಯನ್ನು ಧರಿಸುವ ಅಪಾನನಾಮಕನಾದ ಮುಖ್ಯಪ್ರಾಣನೇ, ಆ ಪೃಥಿವಿಯೊಂದಿಗೇ ದೇಹದಲ್ಲಿರುವ ಅಪಾನವಾಯುವಿನಲ್ಲಿದ್ದು, ಅಪಾನವಾಯುವನ್ನು ಧರಿಸಿ ದೇಹದೊಳಗಿದ್ದಾನೆ. ದ್ಯಾವಾ ಪೃಥಿವಿಗಳ ಮಧ್ಯದಲ್ಲಿರುವ ಆಕಾಶವನ್ನು ಧರಿಸುವ ಸಮಾನನೆಂಬ ಮುಖ್ಯಪ್ರಾಣನೇ ಆ ಆಕಾಶದೊಂದಿಗೆ ಶರೀರದಲ್ಲಿದ್ದು, ಶರೀರದಲ್ಲಿರುವ ಸಮಾನನ್ನು ಧರಿಸುತ್ತಾನೆ. ಹೊರಗಿನ ವಾಯುವಿಗೆ ಧಾರಕನಾದ ವ್ಯಾನನಾಮಕ ಮುಖ್ಯಪ್ರಾಣನೇ ವಾಯುವಿನೊಂದಿಗೆ ದೇಹದೊಳಗಿದ್ದು, ದೇಹದೊಳಗಿನ ವ್ಯಾನವಾಯುವನ್ನು ಧರಿಸುತ್ತಾನೆ. ಶರೀರದ ಹೊರಗೆ ತೇಜಸ್ಸನ್ನು ಧರಿಸುವ ಉದಾನನಾಮಕ ಮುಖ್ಯಪ್ರಾಣನೆ ಆ ತೇಜಸ್ಸಿನೊಂದಿಗೆ ಶರೀರದಲ್ಲಿದ್ದು, ಶರೀರದಲ್ಲಿರುವ ಉದಾನವಾಯುವನ್ನು ಧರಿಸುತ್ತಾನೆ ಎಂಬುದು ಪ್ರಸಿದ್ಧವೆ. ತೇಜಸ್ಸಿನಲ್ಲಿರುವ ಉದಾನನೆ ಆ ತೇಜಸ್ಸಿನೊಂದಿಗೆ ಶರೀರದಲ್ಲಿದ್ದು, ಜೀವಿಗಳ ಜೀವನಕಾರಣವಾಗಿ ಇರುವುದರಿಂದಲೇ, ಒಬ್ಬ ಮನುಷ್ಯನ ಶರೀರದಲ್ಲಿರುವ ತೇಜಸ್ಸು ಆರಿಹೋದರೆ ಆಗ ಉದಾನವಾಯುವು ಹೊರಟುಹೋದನೆಂದು ಊಹಿಸಿ, ಮನಸ್ಸಿನೊಡನೆ ಬೆರೆತು ಲೀನವಾದ ಇಂದ್ರಿಗಳೊಂದಿಗೆ ಆ ಮನುಷ್ಯನು ಜನ್ಮಾಂತರ ಪಡೆಯುವನು, ಅಂದರೆ ಮರಣಹೊಂದುವನೆಂದು ಲೋಕದಲ್ಲಿ ಜನರು ಊಹಿಸುತ್ತಾರೆ.

यच्चित्तस्तेनैष प्राणमायति । प्राणस्तेजसा युक्तः सहात्मना यथासंकल्पितं लोकं नयति । य एवं विद्वान् प्राणं वेद न हास्य प्रजा हीयतेऽमृतो भवति । तदेष श्लोकः ।

उत्पत्तिमायतिं स्थानं विभुत्वं चैव पंचधा ।
अध्यात्मं चैव प्राणस्य विज्ञायामृतमश्नुते ॥
विज्ञायामृत मश्नुत इति ॥

॥ इति तृतीय प्रश्न प्रतिवचनम् ॥

ಜೀವನು ಮರಣಕಾಲದಲ್ಲಿ ಯಾವ ಶರೀರದಲ್ಲಿ ಮನಸ್ಸಿನಿಂದ ಆಲೋಚಿಸುವನೋ, ತದ್ವಿಷಯಕವಾದ ಮನಸ್ಸಿನಿಂದ ಕೂಡಿಕೊಂಡು ಅವನು ಮುಖ್ಯಪ್ರಾಣನ ಸಮೀಪಕ್ಕೆ ಬರುತ್ತಾನೆ. ಮುಖ್ಯಪ್ರಾಣನು ತನ್ನ ಉದಾನರೂಪದಿಂದ ಕೂಡಿಕೊಂಡು, ಪರಮಾತ್ಮನೊಂದಿಗೆ ಆ ಜೀವನನ್ನು ಹೊತ್ತು, ಆ ಜೀವನಿಂದ ಸಂಕಲ್ಪಿತವಾದ ಶರೀರಕ್ಕೆ ಕೊಂಡೊಯ್ಯುವನು. ಯಾರು ಇಂಥ ಮಹಿಮೆಯುಳ್ಳ ಪ್ರಾಣವನ್ನು ತಿಳಿದುಕೊಳ್ಳುತ್ತಾನೋ ಅವನಿಗೆ ಈ ಲೋಕದಲ್ಲಿ ಅವಿಚ್ಛಿನ್ನವಾದ ಸಂತತಿಯೂ, ಮರಣಾನಂತರದಲ್ಲಿ ಮೋಕ್ಷವೂ ಲಭಿಸುವುದು. ಈ ವಿಷಯದಲ್ಲಿ ಬೇರೆ ಶ್ರುತಿವಾಕ್ಯದ ಸಮ್ಮತಿಯೂ ಇದೆ - 'ಪರಮಾತ್ಮನಿಂದ ಮುಖ್ಯಪ್ರಾಣನ ಉತ್ಪತ್ತಿಯನ್ನೂ, ಶರೀರದಲ್ಲಿ ಅವನ ಪ್ರವೃತ್ತಿಯನ್ನೂ, ಶರೀರದಲ್ಲಿ ಅವನ ಇರುವಿಕೆಯನ್ನೂ, ಪ್ರಾಣಾಪಾನಾದಿ ಐದುವಿಧ ರೂಪ ಸ್ವೀಕಾರವನ್ನೂ, ಅಧ್ಯಾತ್ಮಮತ್ತು ಬಾಹ್ಯಧಾರಕತ್ವವನ್ನೂ, ಶರೀರದಿಂದ ಉತ್ಕ್ರಮಣವನ್ನೂ ಯಾರು ಚೆನ್ನಾಗಿ ತಿಳಿಯುತ್ತಾನೋ ಅವನು ಮೋಕ್ಷವನ್ನು ಹೊಂದುತ್ತಾನೆ. (ಸಂಗ್ರಹ)

॥ ಇಲ್ಲಿಗೆ ಮೂರನೆಯ ಪ್ರಶ್ನೆಗೆ ಉತ್ತರದ ಕನ್ನಡ ಅನುವಾದ ಮುಗಿಯಿತು ॥

ಮುಖ್ಯಪ್ರಾಣನಲ್ಲಿ ಸರ್ವದೇವೋಪಾಸ್ಯತ್ವ

तत्वप्रदीपः – ''अथेममेव नाऽप्नोद्योऽयं मध्यमः प्राणः'' इति बृहदारण्यकवाक्यात् तस्यैव मध्यमत्वं च । सर्वदेवोपास्यत्वं चाविरुद्धं तस्य ।

ಅಥೇಮಮೇವ ನಾऽಪ್ನೋದ್ಯೋऽಯಂ ಮಧ್ಯಮಃ ಪ್ರಾಣ' ಎಂಬುದಾಗಿ ಬೃಹದಾರಣ್ಯಕವಾಕ್ಯದಿಂದಲೂ ಕೂಡ ಆ ಮುಖ್ಯಪ್ರಾಣನೇ ಹೃದಯಮಧ್ಯಪ್ರದೇಶದಲ್ಲಿ ನೆಲೆಸಿದ್ದಾನೆಂದು ತಿಳಯುತ್ತದೆ. ಆದ್ದರಿಂದ ಸರ್ವದೇವೋಪಾಸ್ಯತ್ವವನ್ನು ಮುಖ್ಯಪ್ರಾಣನಿಗೆ ಹೇಳುವುದು ವಿರುದ್ಧವಾಗುವುದಿಲ್ಲ.

ವಿವರಣೆ - ಕಥಂ ಚಾನ್ಯಥಾ ಕಾಮಾದೀನಾಂ ಪ್ರಸಿದ್ಧಮಹಿಮಾನಾಂ ಸ್ತ್ರೀಮಾತ್ರಾದಿಕಂ ದೇವತೋಚ್ಯತೇ ಪ್ರಸಿದ್ಧಂ ಚೈತತ್ ।

ಅಮೃತ ಸ್ತ್ರೀ ಸತ್ಯ ಇತ್ಯಾದಿ ಶಬ್ದಗಳು ವಾಯು ಲಕ್ಷ್ಮೀ ಸರಸ್ವತಿ ಪಾರ್ವತಿ ಬ್ರಹ್ಮ ಇತ್ಯಾದಿ ದೇವತೆಗಳನ್ನು ಹೇಳದಿದ್ದರೆ ಪ್ರಸಿದ್ಧ ಮಹಿಮೆಯುಳ್ಳ ಪ್ರದ್ಯುಮ್ನ ಮೊದಲಾದವರಿಗೆ ಕೇವಲ ಸ್ತ್ರೀಯರು ಮೊದಲಾದವರು ನಿಯಾಮಕರು ಎಂದು ಹೇಳಲು ಹೇಗೆ ಸಾಧ್ಯ ? ವಾಯು ಲಕ್ಷ್ಮಿ ಮುಂತಾದವರಿಗೆ ಇತರರಿಗಿಂತ ಹೆಚ್ಚು ಸಾಮರ್ಥ್ಯವಿದೆ ಎಂಬ ವಿಷಯವು ಪ್ರಮಾಣಸಿದ್ಧವಾಗಿದೆ

'ಆತ್ಮಾದೇವಾನಾಂ ಭುವನಸ್ಯಗರ್ಭಃ' 'ಆತ್ಮಾತೇ ವಾತಃ' 'ಇಂದ್ರೋ ವೈ ದೇವಾನಾಮೋಜಿಷ್ಠಃ' 'ಬ್ರಹ್ಮಾದೇವಾನಾಂ ಪ್ರಥಮಃ ಸಂಬಭೂವ' 'ಅಯಂ ವಾ ವ ಶಿಶುರ್ಯೋऽಯಂ ಮಧ್ಯಮಃ ಪ್ರಾಣಃ' 'ತಮೇತಾಃ ಸಪ್ತಾರ್ಚಿಷಯ ಉಪತಿಷ್ಠಂತೇ' 'ತದ್ ಯಾ ಇಮಾ ಅಕ್ಷನ್ ಲೋಹಿನ್ಯೋ ರಾಜಯಸ್ತಾಭಿರೇನಂ ರುದ್ರೋऽನ್ವಾಯತ್ತೋ ಯಚ್ಚುಕ್ಲಂ ತೇನೇಂದ್ರಃ'

ಲೋಕವನ್ನು ವ್ಯಾಪಿಸಿರುವ ವಾಯುವು ದೇವತೆಗಳ ನಿಯಾಮಕ ಇಂದ್ರನೇ ! ವಾಯುವು ನಿನಗೆ ನಿಯಾಮಕ. ಇಂದ್ರನು ದೇವತೆಗಳ ಮಧ್ಯೆ ಅತಿ ಹೆಚ್ಚು ಶಕ್ತಿಯನ್ನು ಹೊಂದಿರುವವನು. ಚತುರ್ಮುಖ ಬ್ರಹ್ಮನು ದೇವತೆಗಳಲ್ಲಿ ಮೊದಲು ಹುಟ್ಟಿದವನು. ಈ ಮುಖ್ಯಪ್ರಾಣನು ವಿಷ್ಣುವಿನ ಮಗನು. ಮುಖ್ಯಪ್ರಾಣನನ್ನು ಈ ಏಳು ದೇವತೆಗಳೂ ಉಪಾಸನೆ ಮಾಡುತ್ತಾರೆ. ಕಣ್ಣಿನಲ್ಲಿರುವ ಕೆಂಪುರೇಖೆಗಳನ್ನು ಆಶ್ರಯಿಸಿ ರುದ್ರನು ಮುಖ್ಯಪ್ರಾಣನನ್ನು ಉಪಾಸನೆ ಮಾಡುತ್ತಾನೆ. ಕಣ್ಣಿನಲ್ಲಿರುವ ಬಿಳಿಯಾದ ಸ್ಥಳವನ್ನು ಆಶ್ರಯಿಸಿ ಇಂದ್ರನು ಮುಖ್ಯಪ್ರಾಣನನ್ನು ಉಪಾಸನೆ ಮಾಡುತ್ತಾನೆ.

ಅಶ್ವಮೇದಃ ಕ್ರತುಶ್ರೇಷ್ಠೋ ಜ್ಯೋತಿಃ ಶ್ರೇಷ್ಠೋ ದಿವಾಕರಃ ।
ಬ್ರಾಹ್ಮಣೋ ದ್ವಿಪದಾಂ ಶ್ರೇಷ್ಠೋ ದೇವಶ್ರೇಷ್ಠಸ್ತು ಮಾರುತಃ ।

ವಾಯುರ್ಭೀಮೋ ಭಿಮನಾದೋ ಮಹೌಜಾಃ।
ಸರ್ವೇಷಾಂ ಚ ಪ್ರಾಣಿನಾಂ ಪ್ರಾಣಭೂತಃ।
ಅನಾವೃತ್ತಿರ್ದೇಹಿನಾಂ ದೇಹಪಾತೇ
ತಸ್ಮಾದ್ ವಾಯುರ್ದೇವದೇವೋ ವಿಶಿಷ್ಟಃ।
ಕ್ರತುಂ ಸಚಂತ ಮಾರುತಸ್ಯವೇಧಸಃ।

ಅಶ್ವಮೇಧವು ಯಾಗಗಳಲ್ಲಿ ಶ್ರೇಷ್ಠ, ಜ್ಯೋತಿಗಳಲ್ಲಿ ಸೂರ್ಯನು ಶ್ರೇಷ್ಠ. ಎರಡು ಕಾಲಿನ ಪ್ರಾಣಿಗಳಲ್ಲಿ ಬ್ರಾಹ್ಮಣ ಶ್ರೇಷ್ಠ. ಹಾಗೆಯೇ ದೇವತೆಗಳಲ್ಲಿ ವಾಯುವು ಶ್ರೇಷ್ಠ. ವಾಯುವು ಭಯಂಕರ, ಭಯಂಕರ ಗರ್ಜನೆ ಮಾಡುವವನು. ಮಹಾಬಲಶಾಲಿ, ಎಲ್ಲಾ ಪ್ರಾಣಿಗಳಿಗೂ ಪ್ರಾಣಪ್ರದ. ದೇಹಿಗಳ ದೇಹವು ಬೀಳಲು ವಾಯುವೇ ಕಾರಣ. ಆದ್ದರಿಂದ ವಾಯುವು ದೇವತೆಗಳ ಪ್ರಭು. ಅವರಿಗಿಂತ ಉತ್ತಮ. ವರುಣಾದಿ ದೇವತೆಗಳು ವಾಯುದೇವರ ಪ್ರೀತಿಗಾಗಿ ಯಾಗವನ್ನು ಮಾಡಿದರು.

'ವಾಯೋರಾತ್ಮಾನಂ ಕವಯೋ ನಿಚಿಕ್ಯುಃ' 'ಆತ್ಮತ ಏಷ ಪ್ರಾಣೋ ಜಾಯತೇ' 'ಯೋ ವಾಯೌ ತಿಷ್ಠನ್' 'ದೇವಾನಾಂ ದೇವತಾ' 'ವಾಯುರ್ವಾಯೋರ್ದೇವೋ ಜನಾರ್ದನಃ' 'ಸ ಪ್ರಾಣ ಮಸೃಜತ ಪ್ರಾಣಾಚ್ಛ್ರದ್ಧಾಮ್' 'ಏತಸ್ಮಾಜ್ಜಾಯತೇ ಪ್ರಾಣಃ'

ರುದ್ರಂ ಸಮಾಶ್ರಿತಾ ದೇವಾ ರುದ್ರೋ ಬ್ರಹ್ಮಾಣಮಾಶ್ರಿತಃ।
ಬ್ರಹ್ಮಾಮಾಮಾಶ್ರಿತೋ ನಿತ್ಯಂ ನಾಹಂ ಕಂಚಿದುಪಾಶ್ರಿತಃ।
ಇತ್ಯಾದಿಷು ಸರ್ವತ್ರ।

ಜ್ಞಾನಿಗಳು ವಿಷ್ಣುವನ್ನು ವಾಯುವಿನ ಪ್ರಭುವೆಂದು ತಿಳಿದು ಮುಖ್ಯಪ್ರಾಣನು ವಿಷ್ಣುವಿನಿಂದ ಹುಟ್ಟುತ್ತಾನೆ. ವಿಷ್ಣುವು ವಾಯುವಿನಲ್ಲಿದ್ದು ನಿಯಾಮಕನಾಗಿದ್ದಾನೆ. ದೇವತೆಗಳಿಗೆ ನಿಯಾಮಕ ವಾಯು. ವಾಯುವಿಗೆ ನಿಮಾಯಕ ವಿಷ್ಣು. ವಿಷ್ಣುವು ಪ್ರಾಣನನ್ನು ಸೃಷ್ಟಿಸಿದನು. ಅನಂತರ ಭಾರತಿಯನ್ನು ಸೃಷ್ಟಿಸಿದನು. ವಿಷ್ಣುವಿನಿಂದ ಮುಖ್ಯಪ್ರಾಣನು ಹುಟ್ಟುತ್ತಾನೆ. ದೇವತೆಗಳೆಲ್ಲರೂ ರುದ್ರನನ್ನು ಆಶ್ರಯಿಸಿದ್ದಾರೆ. ರುದ್ರನು ಚತುರ್ಮುಖ ಬ್ರಹ್ಮನನ್ನು ಆಶ್ರಯಿಸಿದ್ದಾನೆ. ಚತುರ್ಮುಖನು ಯಾವಾಗಲೂ ನನ್ನನ್ನು ಆಶ್ರಯಿಸಿದ್ದಾನೆ. ನಾನು ಯಾರನ್ನೂ ಆಶ್ರಯಿಸಿಲ್ಲ. ಇವೇ ಮೊದಲಾದ ಪ್ರಮಾಣಗಳಲ್ಲಿ ಎಲ್ಲ ಕಡೆ ವಾಯು ಮೊದಲಾದ ದೇವತೆಗಳು ಅಧಿಕಸಾಮರ್ಥ್ಯವುಳ್ಳವರೆಂದು ವರ್ಣಿತರಾಗಿರುವರು.

ಶ್ರಯಃ ಪ್ರಸಾದಂ ಸ ಕುಶೇಶಯೇಶಯಃ

ಶ್ರಿತಃ ಸ ಚಿಂತ್ಯ ಪ್ರಶಶಂಸ ಶೌರಿಮ್ । ಇತ್ಯಾದಿ ಚ ।

ಲಕ್ಷ್ಮಿಯ ಅನುಗ್ರಹವನ್ನು ಆಶ್ರಯಿಸಿರುವವ ಚತುರ್ಮುಖ. ಅವನು ಯಾವ ಶ್ರೀಕೃಷ್ಣನನ್ನು ಸ್ತುತಿಸಿದನೋ ಆ ಕೃಷ್ಣನನ್ನು ಧ್ಯಾನ ಮಾಡಬೇಕು. ಇತ್ಯಾದಿ ಪ್ರಮಾಣಗಳು ಕೂಡ ಲಕ್ಷ್ಮೀದೇವಿ ಬ್ರಹ್ಮಾದಿಗಳಿಗಿಂತ ಶ್ರೇಷ್ಠಳೂ, ಶ್ರೀಹರಿಗೆ ಅತ್ಯಂತ ಪ್ರಿಯಳೂ ಆಗಿರುವಳೆಂದು ಹೇಳುತ್ತವೆ.

ಶಾಕಲ್ಯೇತಿ ಹೋವಾಚ ಯಾಜ್ಞವಲ್ಕ್ಯಃ। ತ್ವಾಂ ಸ್ವಿದ್ ಇಮೇ ಬ್ರಾಹ್ಮಣಾ

ಅಂಗಾರಾವಕ್ರಯಣಮಕೃತ್ವಾ ಇತಿ ।

ಯಾಜ್ಞವಲ್ಕ್ಯರು ಹೇಳಿದರು ಶಾಕಲ್ಯ. ಈ ಬ್ರಾಹ್ಮಣರು ನಿಮ್ಮನ್ನು ಕಿಡಿಗಳನ್ನು ಅತ್ತಿತ್ತ ಚೆಲ್ಲುವ ಕೊಳ್ಳಿಯನ್ನಾಗಿ ಮಾಡಿದ್ದಾರೆ ಎಂದು ನನಗೆ ಅನಿಸುತ್ತದೆ. ಪಾಪ, ಅದು ನಿಮಗೆ ಗೊತ್ತಿಲ್ಲ.

ಈ ವಿದ್ವಾಂಸರ ಪ್ರೇರಣೆಯಿಂದ ವಾದಕ್ಕೆ ನಿಂತು ನೀವು ಬಹಳ ಅಬದ್ಧ ಪ್ರಶ್ನೆಗಳನ್ನು ಕೇಳುತ್ತಿದ್ದೀರಿ. ಕಿಡಿ ಉಗುಳತ್ತ ಉರಿವ ಕೊಳ್ಳಿಯಂತೆ ಆಗಿರುವಿರಿ. ಆದರೆ ಉರಿವ ಕೊಳ್ಳಿ ಕಿಡಿಗಳನ್ನುಗುಳುತ್ತ ಜ್ವಲಿಸಿದರೂ ಕೊನೆಯಲ್ಲಿ ತಾನೇ ನಷ್ಟವಾಗುತ್ತದೆ. ಬೇಡ, ಸಾಕು ಎಂದು ದಯೆಯಿಂದ ಯಾಜ್ಞವಲ್ಕ್ಯರು ಹೇಳಿದರು.

ಅಕೃತಾಃ ಎಂಬಲ್ಲಿ ಪ್ಲುತವು ದಯೆಯನ್ನು ಸೂಚಿಸುತ್ತದೆ.

ಕುವಿದಂಗ ಎಂಬ ಶ್ರುತ್ಯರ್ಥ

तत्वप्रदीपः – कुविदङ्गेत्यादौ प्रसिद्धत्वात् । तथाहि - पुरा कचिद्ये नमस्कारादिना वृद्धास्सन्तो देवा रागाद्यवद्यशून्या आसन्ते । वायवे ज्ञानिन बाधिभिः शरणार्थमितायाऽवासयन् स्वबुद्धिं सूर्येण सह । 'उष प्रकाशने' इति धातोर्बुद्धिरुषश्शषब्दोक्ता । वायुमुद्दिश्य बुद्धिमावासयन्नित्यर्थः तस्माद्वायुरपि जिज्ञास्य इति प्राप्ते प्रतिविधीयते ।

ಋಗ್ವೇದಲ್ಲಿರುವ 'ಕುವಿದಂಗ' ಇತ್ಯಾದಿ ಮಂತ್ರದಲ್ಲಿಯೂ ಮುಖ್ಯಪ್ರಾಣನಲ್ಲಿಯೇ ಇದು ಪ್ರಸಿದ್ಧವಾಗಿದೆ. 'ಕುವಿದಂಗ' ಇತ್ಯಾದಿ ಶ್ರುತಿಯ ಅರ್ಥವನ್ನು ಹೀಗೆ ತಿಳಿಯಬೇಕು - ಪುರಾ =

ಹಿಂದೆ, ಕುವಿತು = ರಹಸ್ಯಸ್ಥಳದಲ್ಲಿ, ಏ = ಯಾವ ದೇವತೆಗಳು, ನಮಸಾ = ನಮಸ್ಕಾರ ಮೊದಲಾದ ಉಪಾಸನೆಯಿಂದ, ವೃದ್ಧಾಸಃ = ಜ್ಞಾನಾದಿಗುಣದಿಂದ ಅಭಿವೃದ್ಧರಾದರೋ, ಅನವಧ್ಯಾಸಃ = ರಾಗಾದಿದೋಷಗಳಿಂದ ರಹಿತರಾದರೋ, ಅಂಥ ದೇವತೆಗಳು, ವಾಯವೇ = ವಾಯುದೇವನನ್ನು ಕುರಿತು, ಬಾಧಿತಾಯ = ಸಂಸಾರಬಾಧೆಯಿಂದ ಶರಣಾಗತರಾದ, ಉಷಸಂ = ತಮ್ಮ ಬುದ್ಧಿಯನ್ನು, ಸೂರ್ಯೇಣ ಸಃ = ಸೂರ್ಯನೊಂದಿಗೆ, ಆವಾಸಯನ್ = ನೆಲೆಗೊಳಿಸಿದರು.

'ಉಷಸಂ' ಎಂಬ ಪದಕ್ಕೆ ಬುದ್ಧಿಯನ್ನು ಎಂದರ್ಥ. 'ಉಷ ಪ್ರಕಾಶನೇ' ಎಂಬ ಧಾತುವಿನಿಂದ ನಿಷ್ಪನ್ನವಾಗಿರುವುದರಿಂದ ಈ ಅರ್ಥವು ದೊರೆಯುತ್ತದೆ. ವಾಯುದೇವರನ್ನು ಉದ್ದೇಶಿಸಿ ತಮ್ಮ ಬುದ್ಧಿಯನ್ನು ನೆಲೆಗೊಳಿಸಿದರು ಎಂಬುದು ಇದರ ಅಭಿಪ್ರಾಯ. ಆದ್ದರಿಂದ ವಾಯುದೇವರೂ ಕೂಡ ಜಿಜ್ಞಾಸ್ಯರಾಗುತ್ತಾರೆಂಬ ಪೂರ್ವಪಕ್ಷವನ್ನು ಈ ಅಧಿಕರಣದಲ್ಲಿ ನಿರಾಕರಣೆ ಮಾಡಲಾಗಿದೆ.

ಶ್ರುತಿಲಿಂಗಾದಿಗಳ ಲಕ್ಷಣ

तत्वप्रदीपः – शब्दादेव प्रमितः ।। एवमागमनिर्णयः । एवं पूर्वपूर्वबलीयोभिः श्रुत्यादिभिरागमार्थनिर्णयः ।

श्रुतिर्नाम समुद्दिष्टं लिङ्गं तल्लक्षणं स्मृतम् ।
पदानि निरपेक्षाणि वाक्यं प्रकरणं तथा ।।
एकस्य प्रतिपत्त्यङ्गवचनं स्थानमुच्यते ।
अन्यत्र तत्समोक्तिस्तु समाख्यास्थानमेव च ।।

अध्यायादिप्रबन्धास्तु प्रभेदा आगमस्य च'' इति सम्प्रदायविद्वचनादेतेषां भेदो वेदितव्यः ।।

ವಾಮನಶ್ರುತಿಯ ಆಧಾರದಿಂದ ವಿಷ್ಣುವೇ ಹೃದಯಮಧ್ಯಪ್ರದೇಶದಲ್ಲಿ ಉಪಾಸ್ಯನಾಗಿದ್ದಾನೆಂದು ತಿಳಿಯುತ್ತಿದೆ. ಏಕೆಂದರೆ ಪ್ರಾಣವ್ಯವಸ್ಥಾಪಕತ್ವ ಮೊದಲಾದ ಲಿಂಗಗಳಿಗಿಂತಲೂ ಶ್ರುತಿಯು ಬಲಿಷ್ಠವಾಗಿದೆ ಎಂಬುದಾಗಿ ಸ್ಕಂದವಚನವಿದೆ -

ಶ್ರುತಿ, ಲಿಂಗ, ಸಮಾಖ್ಯಾ, ವಾಕ್ಯ, ಪ್ರಕರಣ ಇವುಗಳಲ್ಲಿ ಮೊದಲನೆಯವುಗಳು ಮುಂದಿನವುಗಳಿಗಿಂತ ಬಲಿಷ್ಠವಾಗಿವೆ. ಹೀಗೆಯೇ ಆಗಮದ ಅರ್ಥವನ್ನು ನಿರ್ಣಯ ಮಾಡಬೇಕು.

ಶ್ರುತ್ಯಾದಿಗಳ ಲಕ್ಷಣವನ್ನು ಹೀಗೆ ತಿಳಿಯಬೇಕು -

ಶ್ರುತಿರ್ನಾಮ ಸಮುದ್ದಿಷ್ಟಂ ಲಿಂಗಂ ತಲ್ಲಕ್ಷಣಂ ಸ್ಮೃತಮ್ ।
ಪದಾನಿ ನಿರಪೇಕ್ಷಾಣಿ ವಾಕ್ಯಂ ಪ್ರಕರಣಂ ತಥಾ ॥

ಹೆಸರನ್ನು ಉಲ್ಲೇಖಿಸುವುದು ಶ್ರುತಿ. ಆ ವ್ಯಕ್ತಿಯ ಅಸಾಧಾರಣಲಕ್ಷಣವನ್ನು ಹೇಳುವುದು ಲಿಂಗ. ನಿರಪೇಕ್ಷಿತವಾದ ಅನೇಕ ಪದಗಳ ಸಮುದಾಯವೇ ವಾಕ್ಯ, ಅನೇಕ ವಾಕ್ಯಗಳ ಸಮುದಾಯವೇ ಪ್ರಕರಣ. ಒಂದು ತತ್ವದ ನಿರ್ಣಯಕ್ಕೆ ಅನುಕೂಲವಾದ ವಚನವು ಸ್ಥಾನ. ಬೇರೆಕಡೆ ಅದಕ್ಕೆ ಸಂವಾದಿಯಾದ ವಚನವು ಸಮಾಖ್ಯಾ. ಹೀಗೆ ಆಗಮದ ಪ್ರಭೇದವನ್ನು ತಿಳಿಯಬೇಕು. ಸಂಪ್ರದಾಯತಿಳಿದವರ ಮಾತಿನ ಆಧಾರದಿಂದ ಇವುಗಳಲ್ಲಿರುವ ವ್ಯತ್ಯಾಸವನ್ನು ಗಮನಿಸಬೇಕು.

ವಿಶೇಷ ವಿಚಾರ - ಬಿಳಿಯ ಬಟ್ಟೆ ತೊಟ್ಟವನು ಯಾವಾಗ ಬರುತ್ತಾನೆ? ಎಂದುಪ್ರಶ್ನಿಸದರೆ ಕೂಡಲೇ ಶಾಬ್ದಬೋಧ ಬರುವುದಿಲ್ಲ. ದೇವದತ್ತನು ಯಾವಾಗ ಬರುತ್ತಾನೆ ? ಎಂದು ಪ್ರಶ್ನಿಸಿದಾಗ ಕೂಡಲೇ ಶಾಬ್ದಬೋಧ ಬರುತ್ತದೆ. ಆದ್ದರಿಂದ ಲಿಂಗಕ್ಕಿಂತಲೂ ಶ್ರುತಿಯು ಪ್ರಬಲವಾಗಿರುತ್ತದೆ. ಪ್ರಕೃತ ಪ್ರಾಣವ್ಯವಸ್ಥಾಪಕತ್ವ ಎಂಬ ಅಸಾಧಾರಣ ಲಿಂಗಕ್ಕಿಂತ ವಾಮನಶಬ್ದವನ್ನು ಹೇಳಿದಾಗ ಕೂಡಲೇ ಶಾಬ್ದಬೋಧ ಬರುತ್ತದೆ. ಆದ್ದರಿಂದ ಪ್ರಾಣವ್ಯವಸ್ಥಾಪಕತ್ವಲಿಂಗಕ್ಕಿಂತಲೂ ವಾಮನ- ಶ್ರುತಿಯು ಪ್ರಬಲವಾಗಿದೆ. ಇದರ ಆಧಾರದಿಂದ ಮಹಾವಿಷ್ಣುವೇ ಉಪಾಸ್ಯನಾಗಿದ್ದಾನೆಂದು ತಿಳಿಯುತ್ತದೆ. ಇದೇ ಕ್ರಮದಲ್ಲಿ ಲಿಂಗಕ್ಕಿಂತಲೂ ವಾಕ್ಯವು ದುರ್ಬಲ. ಏಕೆಂದರೆ ಅನೇಕ ಪದಗಳನ್ನು ಕೇಳಿ ಶಾಬ್ದಬೋಧವನ್ನು ತಂದುಕೊಳ್ಳುವುದು ಮತ್ತಷ್ಟು ವಿಳಂಬವಾಗುತ್ತದೆ. ಅನೇಕ ಪ್ರಕರಣಗಳ ಸಮುದಾಯವನ್ನು ಅರ್ಥಮಾಡಿಕೊಂಡು, ಸ್ಥಾನಪ್ರಮಾಣದಿಂದ ಶಾಬ್ದಬೋಧ ತಂದುಕೊಳ್ಳುವುದು ಇನ್ನಷ್ಟು ವಿಳಂಬವಾಗುತ್ತದೆ. ಬೇರೆ ಶ್ರುತಿಯ ಸಂವಾದವನ್ನು ತಿಳಿಯುವುದು ಮತ್ತೂ ಕಷ್ಟ. ಈ ಕಾರಣದಿಂದ ಮುಂದಿನವುಗಳು ಹಿಂದಿನವುಗಳಿಗಿಂತ ದುರ್ಬಲವಾಗಿರುತ್ತದೆ.

ಸಮಾಖ್ಯೆಯ ಬಗ್ಗೆ ಒಂದು ವಿಮರ್ಶೆ

ಶ್ರುತಿರ್ಲಿಂಗಂ ಸಮಾಖ್ಯಾ ಚ ವಾಕ್ಯಂ ಪ್ರಕರಣೇ ತಥಾ।
ಪೂರ್ವಪೂರ್ವಂ ಬಲೀಯಃ ಸ್ಯಾದೇವಮಾಗಮನಿರ್ಣಯಃ॥

ಆಶಂಕೆ - ಈ ಸ್ಕಾಂದ ಪುರಾಣದ ವಚನವನ್ನು ನೋಡಿದಾಗ ಶ್ರುತಿಗಿಂತಲೂ ಲಿಂಗವು, ಲಿಂಗಕ್ಕಿಂತಲೂ ಸಮಾಖ್ಯೆಯು, ಸಮಾಖ್ಯೆಗಿಂತಲೂ ವಾಕ್ಯವು, ವಾಕ್ಯಕ್ಕಿಂತಲೂ ಪ್ರಕರಣವು ದುರ್ಬಲವೆಂದು ತಿಳಿಯುತ್ತದೆ. ಆದರೆ ಸಮಾಖ್ಯೆಯು ಪ್ರಕರಣಕ್ಕಿಂತಲೂ ದುರ್ಬಲವಾಗಿದೆ ಎಂಬುದೇ ಸಿದ್ಧಾಂತ. ಹೀಗಿರುವಾಗ ಸಮಾಖ್ಯೆಯನ್ನು ಸ್ಕಾಂದ ಪುರಾಣದ ಮಾತಿನಲ್ಲಿ ಕೊನೆಯದ್ದಾಗಿ ಹೇಳಬೇಕಿತ್ತು. ಶ್ರುತಿ ಹಾಗೂ ಲಿಂಗಗಳ ಅನಂತರ ಏಕೆ ಹೇಳಿದರು ? ಶ್ರುತ್ಯಂತರ ಸಂವಾದವನ್ನು ತಿಳಿಯುವುದು ಪ್ರಕರಣಕ್ಕಿಂತಲೂ ಕಠಿಣವಾದ್ದರಿಂದ ಸಮಾಖ್ಯೆಯು ಪ್ರಕರಣಕ್ಕಿಂತಲೂ ದುರ್ಬಲವಾಗಿದೆ ಎಂಬುದು ಅನುಭವಸಿದ್ಧವಾಗಿದೆ. ಹಾಗಿದ್ದಾಗ ಸಮಾಖ್ಯೆಯನ್ನು ವಾಕ್ಯ ಹಾಗೂ ಪ್ರಕರಣಕ್ಕಿಂತಲೂ ಬಲಿಷ್ಠವೆಂದು ನಿರ್ಣಯಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಮೂರನೆಯ ಸ್ಥಾನದಲ್ಲಿ ಸಮಾಖ್ಯೆಯನ್ನು ಸೇರಿಸಿದ್ದು ತಪ್ಪಲ್ಲವೇ?

ಸಮಾಧಾನ - ತತ್ವಪ್ರಕಾಶಿಕೆಯಲ್ಲಿ ಇದಕ್ಕೆ ಉತ್ತರವನ್ನು ನೀಡಿದ್ದಾರೆ. ಸಮಾಖ್ಯೆಯಲ್ಲಿ ಮಾತ್ರ ಕ್ರಮವು ಅವಿವಕ್ಷಿತವೆಂದು. ಆದ್ದರಿಂದ 'ಸಮಾಖ್ಯಾ' ಎಂಬ ಪದವನ್ನು 'ಪ್ರಕರಣಂ' ಎಂಬ ಪದದ ಅನಂತರ ಅನ್ವಯ ಮಾಡಿಕೊಳ್ಳಬೇಕು. ಆಗ ಸಮಸ್ಯೆ ಬರುವುದಿಲ್ಲ. ಪ್ರಕರಣಕ್ಕಿಂತಲೂ ಸಮಾಖ್ಯೆಯೇ ದುರ್ಬಲವೆಂದು ಹೇಳಿದಂತಾಗುತ್ತದೆ.

ಆಶಂಕೆ - ಹೀಗೆ ಸಮಾಧಾನ ಹೇಳಿದರೆ, 'ಪೂರ್ವಪೂರ್ವಂ ಬಲೀಯಃ ಸ್ಯಾತ್ ಏವಮಾಗಮನಿರ್ಣಯಃ' ಎಂಬ ವಾಕ್ಯಕ್ಕೆ ಅಸ್ವಾರಸ್ಯವನ್ನು ಒಪ್ಪಿದಂತಾಗುತ್ತದೆ. ಏಕೆಂದರೆ ಹಿಂದಿನದ್ದೇ ಪ್ರಬಲವೆಂದು ಸ್ಪಷ್ಟವಾಗಿ ಪ್ರತಿಯೊಂದಕ್ಕೂ ಅನ್ವಯವಾಗುವಂತೆ ಈ ವಚನ ಹೇಳುತ್ತಿದೆ. ಒಂದು ವೇಳೆ ಕ್ರಮವು ಅವಿವಕ್ಷಿತವೆಂದರೆ 'ಪೂರ್ವಪೂರ್ವಂ ಬಲೀಯಃ' ಎಂಬ ಮಾತಿಗೆ ಸ್ವಾರಸ್ಯವೇ ಇರುವುದಿಲ್ಲ ಅಲ್ಲವೇ ?

ಸಮಾಧಾನ - ಮೇಲೆ ಹೇಳಿದ ಸಮಾಧಾನ ಒಂದು ರೀತಿಯಲ್ಲಿ. ಮತ್ತೊಂದು ರೀತಿಯ ಸಮಾಧಾನವನ್ನು ಹೀಗೆ ಹೇಳಬಹುದು - ಸಮಾಖ್ಯೆಯು ಅನೇಕವಿಧವಾಗಿದೆ. ನಾಮಸಮಾಖ್ಯೆ, ಲಿಂಗಸಮಾಖ್ಯೆ, ವಾಕ್ಯಸಮಾಖ್ಯೆ, ಪ್ರಕರಣಸಮಾಖ್ಯೆ ಎಂದು. ಈ ವೈವಿಧ್ಯವು ಸಮಾಖ್ಯೆ ಬಿಟ್ಟು ಇತರ ಪ್ರಮಾಣಗಳಲ್ಲಿರುವುದಿಲ್ಲ. ನಾಮಸಮಾಖ್ಯಾ ಹಾಗೂ ಲಿಂಗಸಮಾಖ್ಯಾಗಳು ವಾಕ್ಯ ಹಾಗೂ ಪ್ರಕರಣಗಳಿಗಿಂತಲೂ ಪ್ರಬಲವಾಗಿರುತ್ತವೆ. ಆದರೆ

ಪ್ರಕರಣಸಮಾಖ್ಯಾ ಎಂಬುದು ಪ್ರಕರಣಕ್ಕಿಂತಲೂ ದುರ್ಬಲವಾಗಿರುತ್ತದೆ. ಈ ಒಂದು ಅಪೂರ್ವ ಪ್ರಮೇಯವನ್ನು ತಿಳಿಸುವುದಕ್ಕಾಗಿ ಶ್ರೀಮದಾಚಾರ್ಯರು ಸ್ಕಾಂದಪುರಾಣದ ಈ ವಚನವನ್ನು ಇದೇ ಕ್ರಮದಲ್ಲಿ ಉಲ್ಲೇಖಿಸಿದ್ದಾರೆಂದು ವಿವಕ್ಷಿಸಬಹುದು. ಹೀಗೆ ವಿವಕ್ಷಿಸಿದಾಗ 'ಪೂರ್ವಪೂರ್ವಂ ಬಲೀಯಃ ಸ್ಯಾತ್' ಎಂಬ ಮಾತಿಗೂ ಸ್ವರಸವಾದ ಅರ್ಥವನ್ನೇ ವಿವಕ್ಷಿಸಿದಂತಾಗುತ್ತದೆ.

'ನಮೋ ಯುವಭ್ಯೋ, ನಮ ಆಶಿನೇಭ್ಯಃ' ಎಂಬ ಉಪನಿಷತ್ತಿನ ಮಾತಿಗೆ 'ನಮ ಆವಟುಭ್ಯಃ' ಎಂಬ ಭಾಗವತದ ವಚನವು ಸಮಾಖ್ಯಾ ಎನಿಸುತ್ತದೆ. ಇದು ನಾಮಸಮಾಖ್ಯಾ ಆಗಿದೆ. ನಮಾಸಮಾಖ್ಯೆಯು ವಾಕ್ಯ ಹಾಗೂ ಪ್ರಕರಣಗಳಿಗಿಂತಲೂ ಪ್ರಬಲವೆಂದೇ ಹೇಳಬೇಕು.

ಅಥವಾ ತತ್ವಪ್ರಕಾಶಿಕೆಯಲ್ಲಿ ಕ್ರಮವು ಅವಿವಕ್ಷಿತ ಎಂಬ ಹೇಳಿಕೆಗೆ ಸ್ವರಸವಾಗಿ ಹೀಗೂ ಅರ್ಥ ಹೇಳಬಹುದು - ಪುರಾಣದಲ್ಲಿ ಕೆಲವೊಂದು ಮಾತುಗಳು ಮೋಹಕವಾಗಿರುತ್ತವೆ. ಅಯೋಗ್ಯರಿಗೆ ಅರ್ಥವಾಗಬಾರದೆಂಬ ದೃಷ್ಟಿಯಿಂದ ಆಪಾತತಃ ವಿರೋಧರೂಪವಾದ ವಾಕ್ಯಗಳನ್ನು ವ್ಯಾಸರು ಪುರಾಣಗಳಲ್ಲಿ ಪ್ರಯೋಗಿಸುತ್ತಾರೆ. ಪ್ರಕೃತ ಶ್ರುತಿ, ಲಿಂಗ, ಸಮಾಖ್ಯಾ, ವಾಕ್ಯ, ಪ್ರಕರಣ ಎಂಬ ಕ್ರಮದಲ್ಲಿ ತಾತ್ಪರ್ಯಲಿಂಗಗಳನ್ನು ಹೇಳಿ, ಮುಂದೆ 'ಪೂರ್ವಪೂರ್ವಂ ಬಲೀಯಃ ಸ್ಯಾತ್' ಎಂಬುದಾಗಿ ಹಿಂದಿನದ್ದೇ ಪ್ರಬಲವೆಂದು ಹೇಳಿದ್ದಾರೆ. ಇವುಗಳ ಮಧ್ಯದಲ್ಲಿ ಸಮಾಖ್ಯೆಯ ಕ್ರಮವನ್ನು ಪುರಾಣಕಾರರು ವಿವಕ್ಷಿಸಿಲ್ಲ. ಅದನ್ನು ತತ್ವಪ್ರಕಾಶಿಕಾಕಾರರು ಸಮಾಖ್ಯಾವಿಷಯದಲ್ಲಿ ಕ್ರಮವು ಅವಿವಕ್ಷಿತವೆಂದು ಸ್ಪಷ್ಟಪಡಿಸಿದ್ದಾರೆ. ಆದ್ದರಿಂದ 'ಪೂರ್ವಂ ಪೂರ್ವಂ ಬಲೀಯಃ ಸ್ಯಾತ್' ಎಂಬ ಮಾತಿಗೆ ಸಮಾಖ್ಯೆಯನ್ನು ಬಿಟ್ಟು ಉಳಿದ ವಿಷಯದಲ್ಲಿ ಹಿಂದಿನದಕ್ಕೆ ಪ್ರಾಬಲ್ಯವೆಂಬುದಾಗಿ ತಿಳಿಯಬೇಕು.

ಶ್ರುತಿ

ನಾಮಾತ್ಮಕವಾದ ಶಬ್ದವೇ ಶ್ರುತಿ. ದೇವದತ್ತ, ಯಜ್ಞದತ್ತ ಮೊದಲಾದ ಶಬ್ದಗಳೇ ಶ್ರುತಿಯೆಂದು ಕರೆಸಿಕೊಳ್ಳುತ್ತವೆ. ವೇದದಲ್ಲಿ ಪುರುಷ, ಆತ್ಮ ಮೊದಲಾದ ಶಬ್ದಗಳು ಭಗವಂತನ ಶ್ರುತಿರೂಪವಾಗಿದೆ.

ಲಿಂಗ

ಅಸಾಧಾರಣಧರ್ಮವೇ ಲಿಂಗ. ಬಿಳಿಬಟ್ಟೆ ತೊಟ್ಟವನು, ಕುಳಿತಿರುವವನು, ಅಡುಗೆಮಾಡುವವನು ಇವುಗಳೆಲ್ಲಾ ಲಿಂಗರೂಪವಾದ ಪ್ರಮಾಣವಾಗಿದೆ.

ಪರೋವರೀಯತ್ವ, ಸಮಸ್ತಲೋಕಧಾರಕತ್ವ ಮೊದಲಾದವುಗಳು ವೇದದಲ್ಲಿರುವ ಭಗವಂತನ ಅಸಾಧಾರಣಲಿಂಗಗಳು.

ವಾಕ್ಯ

ನಿರಾಕಾಂಕ್ಷವಾದ ಪದಗಳ ಸಮೂಹವೇ ವಾಕ್ಯ. ಬೃಹದಾರಣ್ಯಕದಲ್ಲಿ ಪ್ರಸಕ್ತವಾಗುವ 'ಪ್ರಾಣೇಷು ಹೃದ್ಯಂತಃ ಜ್ಯೋತಿಃ' ಎಂಬ ವಾಕ್ಯದಲ್ಲಿ ಹೇಳಲ್ಪಟ್ಟ ಜ್ಯೋತಿ ಎಂದರೆ ಪರಮಾತ್ಮ, ಏಕೆಂದರೆ 'ಕತಮಃ ಆತ್ಮಾ' ಎಂಬುದಾಗಿ ಆತ್ಮನು ಹೇಗಿದ್ದಾನೆ? ಎಂದು ಪಶ್ನಿಸಿದರೆ, 'ಯೋऽಯಂ ವಿಜ್ಞಾನಮಯಃ ಪ್ರಾಣೇಷು ಹೃದ್ಯಂತಃ' ಎಂಬ ಮುಂದಿನ ವಾಕ್ಯಗಳಿಂದ ನಿರ್ಣಯಿಸಲಾಗಿದೆ. 'ಯೋಯಂ ವಿಜ್ಞಾನಮಯಃ' ಇತ್ಯಾದಿ ಪದಗಳ ಸಮೂಹವಾದ್ದರಿಂದ ಇದು ವಾಕ್ಯ ಪ್ರಮಾಣವಾಗಿದೆ.

ಪ್ರಕರಣ

ಒಂದೇ ಅರ್ಥವನ್ನು ತಿಳಿಸುವ ಅನೇಕ ವಾಕ್ಯಗಳ ಗುಂಪು 'ಪ್ರಕರಣ' ಎನಿಸುತ್ತದೆ. 'ಸಃ ಯದ್ಯದೇವ ಅಸೃಜತ ತತ್ತದತ್ತುಮಧ್ರಿಯತ' ಇತ್ಯಾದಿ ಬೃಹದಾರಣ್ಯಕದಲ್ಲಿ ಬರುವ ಲೋಕಸಂಹಾರಕತ್ವ ಮೊದಲಾದ ಧರ್ಮಗಳನ್ನು ಹೇಳುವ ಅನೇಕ ವಾಕ್ಯಗಳ ಸಮೂಹರೂಪವಾದ್ದರಿಂದ ಇದು ಪ್ರಕರಣವಾಗಿದೆ.

ಸಮಾಖ್ಯಾ

ಮತ್ತೊಂದು ಕಡೆ ಸಮಾನವಾದ ವಚನವು 'ಸಮಾಖ್ಯಾ' ಎನಿಸುತ್ತದೆ. 'ಯ ಆತ್ಮನಿ ತಿಷ್ಠನ್ ಆತ್ಮನೋऽಂತರಃ' ಎಂದು ಹೇಳಿ, 'ಯಃ ವಿಜ್ಞಾನಿ ತಿಷ್ಠನ್' ಎಂದು ಮತ್ತೊಂದು ಕಡೆ ಹೇಳಿದರೆ ಇದು ಸಮಾನವಾದ ವಚನವಾದ್ದರಿಂದ 'ಸಮಾಖ್ಯಾ' ಎನಿಸುತ್ತದೆ.

ಈ ವಿಷಯದಲ್ಲಿ ವಿದ್ವಾಂಸರು ಇನ್ನೂ ಹೆಚ್ಚಿನ ವಿಚಾರವನ್ನು ಮಾಡುವ ಅವಶ್ಯಕತೆಯಿದೆ. ಇದು ಒಂದು ಮುಖದ ಚಿಂತನೆ ಮಾತ್ರ.

ಶ್ರುತ್ಯಾದಿಗಳ ಲಕ್ಷಣ

ಶ್ರುತ್ಯಾದಿಗಳಲ್ಲಿ ಪರಸ್ಪರ ವಿರೋಧವು ಪ್ರಾಪ್ತವಾದರೆ ಹಿಂದಿನದ್ದೇ ಅನುಸರಣೀಯವಾಗುತ್ತದೆ. ಮುಂದಿನದ್ದು ದುರ್ಬಲವಾಗುತ್ತದೆ. ಆಗ ಹಿಂದಿನ ಪ್ರಮಾಣವನ್ನು ಅನುಸರಿಸಿ ಮುಂದಿನ ಪ್ರಮಾಣಕ್ಕೆ ವ್ಯಾಖ್ಯಾನ ಮಾಡಬೇಕು. ಪ್ರಕೃತ ವಾಮನಶ್ರುತಿಯು

ಪ್ರಾಣವ್ಯವಸ್ಥಾಪಕತ್ವ ಎಂಬ ಲಿಂಗಕ್ಕಿಂತಲೂ ಪ್ರಬಲವಾಗಿದೆ. ಆದ್ದರಿಂದ ಈ ವಾಮನಶ್ರುತಿಗೆ ಅನುಸಾರಿಯಾಗಿ ಪ್ರಾಣವ್ಯವಸ್ಥಾಪಕತ್ವಲಿಂಗವನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡಬೇಕು.

ನಿರವಕಾಶವೇ ಪ್ರಬಲ

ವಾಸ್ತವಿಕವಾಗಿ ಶ್ರುತಿ, ಲಿಂಗ, ಪ್ರಕರಣ, ವಾಕ್ಯ, ಸಮಾಖ್ಯಾ ಇವುಗಳಲ್ಲಿ ಹಿಂದಿನದ್ದೇ ಪ್ರಬಲವಾಗಿರುತ್ತವೆ ಎಂಬುದು ಸಾಮಾನ್ಯ ನಿಯಮ. ಒಂದುವೇಳೆ ಲಿಂಗವು ನಿರವಕಾಶವಾಗಿ, ಶ್ರುತಿಯು ಸಾವಕಾಶವಾದರೆ ಲಿಂಗವೇ ಬಲಿಷ್ಠವೆಂದು ತಿಳಿಯಬೇಕು. ಇದರಂತೆ ಶ್ರುತಿ, ಲಿಂಗ, ವಾಕ್ಯ, ಪ್ರಕರಣ ಇವೆಲ್ಲವೂ ಸಾವಕಾಶವಾಗಿ, ಸಮಾಖ್ಯೆಯು ನಿರವಕಾಶವಾಗಿದ್ದರೆ. ಇವೆಲ್ಲಕ್ಕಿಂತ ಸಮಾಖ್ಯೆಯೇ ಪ್ರಬಲವೆಂದು ತಿಳಿಯಬೇಕು. ಆದ್ದರಿಂದ ಈ ಐದರಲ್ಲಿ ಯಾವುದು ನಿರವಕಾಶವೋ, ಅದಕ್ಕೆ ಪ್ರಾಬಲ್ಯವನ್ನು ಹೇಳಬೇಕು.

ಪ್ರಕೃತ ಪ್ರಾಣವ್ಯವಸ್ಥಾಪಕತ್ವ ಎಂಬ ಲಿಂಗವು ಮುಖ್ಯಪ್ರಾಣನಲ್ಲಿ ನಿರವಕಾಶವಾಗದ ಕಾರಣ ವಿಷ್ಣುವಿನಲ್ಲೇ ಸಾವಕಾಶವಾದ ಕಾರಣ ಲಿಂಗವನ್ನು ನಿರವಕಾಶತ್ವೇನ ಪ್ರಬಲವಾಗಿದೆ ಎಂದು ವಿವಕ್ಷಿಸಲು ಸಾಧ್ಯವಿಲ್ಲ. ಆದ್ದರಿಂದ ಸಾಮಾನ್ಯನಿಯಮದಂತೆ ಲಿಂಗಕ್ಕಿಂತಲೂ ವಾಮನಶ್ರುತಿಯೇ ಪ್ರಬಲವೆಂದು ವಿವಕ್ಷಿಸಬೇಕು. (ಸಂಗ್ರಹ)

ಶ್ರೀಮಜ್ಜಯತೀರ್ಥಭಿಕ್ಷುಗಳಿಂದ ವಿರಚಿತವಾದ

ತತ್ವಪ್ರಕಾಶಿಕಾ

ಅಧಿಕರಣ ಸಂಗತ್ಯಾದಿ ವಿಚಾರ

तत्वप्रकाशिका – ।। शब्दादेव प्रमितः ।। १-३-२४ ।।

अत्र प्रेरकत्वसाम्येन भगवति वायौ च साधारणस्येशाननाम्नो विष्णौ समन्वयप्रतिपादनादस्ति शास्त्रादिसङ्गतिः । श्रुत्यादिसङ्गतिं विषयसंशयौ च सूचयति – विष्णुरेवेति ।।

ಈ ಅಧಿಕರಣದಲ್ಲಿ 'ಈಶಾನ' ಎಂಬ ನಾಮಾತ್ಮಕಶಬ್ದವನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡಲಾಗಿದೆ. ವಿಷ್ಣು ಹಾಗೂ ವಾಯು ಇಬ್ಬರಲ್ಲಿಯೂ ಪ್ರೇರಕತ್ವಧರ್ಮವು ಸಮಾನವಾಗಿ

ಶ್ರುತವಾದ್ದರಿಂದ 'ಈಶಾನ' ಶಬ್ದವು ಉಭಯಸಾಧಾರಣವಾಯಿತು. ಆದ್ದರಿಂದಲೇ ಶಾಸ್ತ್ರಸಂಗತಿ, ಅಧ್ಯಾಯಸಂಗತಿ, ಪಾದಸಂಗತಿಗಳಿರುತ್ತವೆ ಎಂದು ತಿಳಿಯಬೇಕು. ಶ್ರುತಿಸಂಗತಿ, ಅಧಿಕರಣ-ಸಂಗತಿ ಹಾಗೂ ವಿಷಯ ಸಂಶಯಗಳನ್ನು ಸೂಚನೆ ಮಾಡುತ್ತಿದ್ದಾರೆ 'ವಿಷ್ಣುರೇವ' ಇತ್ಯಾದಿ ಭಾಷ್ಯದಿಂದ.

ಈಶಾನಶಬ್ದ ಪ್ರತಿಪಾದ್ಯನಾದ ವ್ಯಕ್ತಿಯೇ ಜಿಜ್ಞಾಸ್ಯ

तत्वप्रकाशिका – 'अथातो ब्रह्मजिज्ञासा' इति जिज्ञास्यत्वं विष्णोरुक्तम्। तज्जिज्ञास्यत्वमीशानस्य काठके प्रतीयते ।

'ಅಥಾತೋ ಬ್ರಹ್ಮಜಿಜ್ಞಾಸಾ' ಎಂಬ ಪ್ರಥಮಸೂತ್ರದಲ್ಲಿ ವಿಷ್ಣುವನ್ನೇ ಜಿಜ್ಞಾಸೆ ಮಾಡಬೇಕೆಂದು ಸಮರ್ಥಿಸಲಾಯಿತು. ಆದರೆ ಕಾಠಕದಲ್ಲಿ 'ಈಶಾನ' ಶಬ್ದ ಪ್ರತಿಪಾದ್ಯ-ವ್ಯಕ್ತಿಯನ್ನು ಜಿಜ್ಞಾಸ್ಯನೆಂದು ಹೇಳಲಾಗಿದೆ.

'ಅಂಗುಷ್ಠಮಾತ್ರಃ' ಇತ್ಯಾದಿ ವಿಷಯವಾಕ್ಯ

तत्वप्रकाशिका – 'अङ्गुष्ठमात्रः पुरुषो मध्य आत्मनि तिष्ठति । ईशानो भूतभव्यस्य' इत्युक्त्वा 'ऊर्ध्वं प्राणम्' इत्यादौ 'विश्वेदेवा उपासते' इति जिज्ञासोपासनायोरैक्यात् ।

'ಅಂಗುಷ್ಠಮಾತ್ರಃ ಪುರುಷೋ ಮಧ್ಯೇ ಆತ್ಮನಿ ತಿಷ್ಠತಿ । ಈಶಾನೋ ಭೂತಭವ್ಯಸ್ಯ' 'ಅಂಗುಷ್ಠಪ್ರಮಾಣವುಳ್ಳ ಭೂತಭವಿಷ್ಯತ್‌ಕಾಲೀನವಾದ ವಿಷಯಗಳನ್ನು ಪ್ರೇರಣೆ ಮಾಡುವ ದೇಹದ ಮಧ್ಯದಲ್ಲಿ ಕುಳಿತಿರುವವನೇ ಈಶಾನಶಬ್ದಪ್ರತಿಪಾದ್ಯನು' ಎಂದು ಹೇಳಿ ಮುಂದೆ 'ಊರ್ಧ್ವಂ ಪ್ರಾಣಮ್' ಇತ್ಯಾದಿ ಮಂತ್ರದಿಂದ ಆ ಈಶಾನನನ್ನು 'ವಿಶ್ವೇದೇವಾಃ ಉಪಾಸತೇ' ಎಂಬುದಾಗಿ ಸರ್ವದೇವತೆಗಳೂ, ಉಪಾಸನೆ ಮಾಡುತ್ತಾರೆಂದು ಹೇಳಲಾಗಿದೆ. ಜಿಜ್ಞಾಸೆಗೂ, ಉಪಾಸನೆಗೂ ಐಕ್ಯವಿರುವುದರಿಂದ ಇಂತಹ ಈಶಾನನನ್ನೇ ಜಿಜ್ಞಾಸೆ ಮಾಡಬೇಕೆಂದು ಹೇಳಿದಂತಾಯಿತು.

ಜಿಜ್ಞಾಸೆ ಹಾಗೂ ಉಪಾಸನೆ ಎರಡೂ ಒಂದೇ

तत्वप्रकाशिका – श्रवणादिरूपविचारो हि जिज्ञासोच्यते । उपासना च सैव ।

ಶ್ರವಣಾದಿರೂಪ ವಿಚಾರಣೆ ಜಿಜ್ಞಾಸೆ ಎನಿಸಿಕೊಳ್ಳುತ್ತದೆ. ಉಪಾಸನೆಯೂ ಶ್ರವಣಾದಿರೂಪದ ಜಿಜ್ಞಾಸೆಯಾದ್ದರಿಂದ, ಉಪಾಸನೆಗೆ ಹಾಗೂ ಜಿಜ್ಞಾಸೆನೆಗೆ ಐಕ್ಯವಿದೆ ಎಂದು ತಿಳಿಯಬೇಕು.

ಉಪಾಸನೆಯು ಎರಡು ವಿಧ

तत्वप्रकाशिका – यदाहुः ।

'सोपासना च द्विविधा शास्त्राभ्यासस्वरूपिणी ।
ध्यानरूपा परा चैव तदङ्गं धारणादिकम् ।।' इति।

ಉಪಾಸನೆಯು ಜಿಜ್ಞಾಸಾರೂಪವಾಗಿಯೇ ಇದೆ ಎನ್ನಲು ಶ್ರೀಮದಾಚಾರ್ಯರ ಮಾತೇ ಆಧಾರವಾಗಿದೆ. 'ಸೋಪಾಸನಾ ಚ ದ್ವಿವಿಧಾ ಶಾಸ್ತ್ರಾಭ್ಯಾಸಸ್ವರೂಪಿಣೀ । ಧ್ಯಾನರೂಪಾ ಪರಾ ಚೈವ ತದಂಗಂ ಧಾರಣಾದಿಕಮ್' ಉಪಾಸನೆ ಎರಡು ಪ್ರಕಾರದಲ್ಲಿರುತ್ತದೆ, ಒಂದು ಶಾಸ್ತ್ರಾಭ್ಯಾಸ ರೂಪವಾದದ್ದು, ಮತ್ತೊಂದು ಯಮ, ನಿಯಮ ಪ್ರಾಣಾಯಾಮಾದಿ ಅಂಗಗಳಿಂದ ಕೂಡಿರುವ ಧ್ಯಾನರೂಪವಾದದ್ದು.

ಸರ್ವದೇವೋಪಾಸ್ಯತ್ವಕ್ಕೆ ವಿಷಯನಾದ ಈಶಾನನೇ ಅಧಿಕರಣಕ್ಕೆ ವಿಷಯ

तत्वप्रकाशिका – स च यदि विष्णोरन्यः स्यात्तदा जिज्ञास्यत्वं चान्यस्यैव प्रसज्जते ? इत्यवश्यं निर्णेयः । स ईशानोऽत्र विषयः ।

ಹೀಗೆ ಉಪಾಸನೆಗೆ ಅಂದರೆ ಜಿಜ್ಞಾಸೆಗೆ ವಿಷಯನಾದವನು ವಿಷ್ಣುವಿಗಿಂತ ಬೇರೆಯವನಾದರೆ ಜಿಜ್ಞಾಸ್ಯತ್ವವೂ ಕೂಡ ಅವನಲ್ಲೇ ಬರುತ್ತದೆ. ಆದುದರಿಂದ ಸರ್ವದೇವೋಪಾಸ್ಯತ್ವವು ಯಾರ ಧರ್ಮವೆಂದು ಅವಶ್ಯವಾಗಿ ವಿವರಣೆ ಮಾಡಬೇಕು. ಆದ್ದರಿಂದ ಸರ್ವದೇವೋಪಾಸ್ಯತ್ವಕ್ಕೆ ವಿಷಯನಾದ ಈಶಾನನೇ ಈ ಅಧಿಕರಣಕ್ಕೆ ವಿಷಯನಾಗಿದ್ದಾನೆ.

ಅಧಿಕರಣದ ಸಂದೇಹ

तत्वप्रकाशिका – किं विष्णुर्वायुर्वेति सन्देहः । प्रागुक्तसाधारण्यमेव सन्देहबीजमिति भावः ।

'ಈಶಾನ' ಶಬ್ದಪ್ರತಿಪಾದ್ಯನಾದವನು ವಿಷ್ಣುವೋ ಅಥವಾ ವಾಯುವೋ ? ಎಂದು ಸಂದೇಹ. ಹಿಂದೆ ಹೇಳಲ್ಪಟ್ಟ ಪ್ರೇರಕತ್ವಧರ್ಮವು ಸಾಧಾರಣವಾಗಿ ಇಬ್ಬರಲ್ಲಿಯೂ ಇರುವುದೇ ಸಂದೇಹಕ್ಕೆ ಕಾರಣ.

ಗರ್ಭಸ್ರಾವದಿಂದಲೇ ರುದ್ರನು ವಿವಕ್ಷಿತನಲ್ಲ

तत्वप्रकाशिका – ईशानशब्दस्य रुद्रे प्रसिद्धावपि तद्विषयसंशयः सर्वदेवोपास्यत्वलिङ्गभिया गर्भस्रावेणैव निवृत्तः ।

ವಸ್ತುತಃ 'ಈಶಾನ' ಶಬ್ದವು ರುದ್ರದೇವರಲ್ಲೂ ಪ್ರಸಿದ್ಧವಾಗಿದೆ. ಆದ್ದರಿಂದ ರುದ್ರವಿಷಯಕವಾದ ಸಂಶಯವನ್ನೂ ಕೂಡ ತೋರಿಸಬೇಕಿತ್ತಲ್ಲವೆ? ಎಂಬ ಪ್ರಶ್ನೆಯು 'ಸರ್ವದೇವೋಪಾಸ್ಯತ್ವ' ಧರ್ಮ ಹೇಳಿರುವುದರಿಂದ ರುದ್ರನಲ್ಲಿ ಈ ಧರ್ಮವು ಇಲ್ಲದ ಕಾರಣ ರುದ್ರದೇವರು ಸಂದೇಹಕೋಟಿಯಲ್ಲಿ ವಿವಕ್ಷಿತರಾಗುವುದಿಲ್ಲವೆಂದು ಗರ್ಭಸ್ರಾವ-ದಿಂದಲೇ ಪರಿಹಾರವಾಯಿತು.

ಯುಕ್ತಿಬದ್ಧವಾದ ಪೂರ್ವಪಕ್ಷ

तत्वप्रकाशिका – य उन्नयति तमित्यन्वयः । सयुक्तिकं पूर्वपक्षयति – स चेति ।।

ಶ್ರುತಿಯಲ್ಲಿ 'ಯ ಉನ್ನಯತಿ ತಮ್' 'ಯಾರು ಮೇಲಕ್ಕೆ ಒಯ್ಯುತ್ತಾರೋ ಅವರು' ಎಂದು ಅನ್ವಯವನ್ನು ತಿಳಿಯಬೇಕು. ಯುಕ್ತಿಬದ್ಧವಾದ ಪೂರ್ವಪಕ್ಷವನ್ನು 'ಸ ಚ' ಇತ್ಯಾದಿ ಭಾಷ್ಯದ ಮಾತುಗಳಿಂದ ತೋರಿಸುತ್ತಿದ್ದಾರೆ.

ವಾಯುದೇವನೇ ಈಶಾನನೆಂದು ಪೂರ್ವಪಕ್ಷ

तत्वप्रकाशिका – स चेशानो वायुरेव भवेत् । ईशानस्योर्ध्वं प्राणमुन्नयतीति वाक्ये प्राणव्यवस्थापकत्वमध्यमत्वसर्वदेवोपास्यत्वश्रवणात्।

ಶ್ರುತ್ಯುಕ್ತನಾದ ಈಶಾನನು ವಾಯುದೇವರೇ ಆಗಿದ್ದಾರೆ. ಏಕೆಂದರೆ 'ಊರ್ಧ್ವಂ ಪ್ರಾಣಮ್ ಉನ್ನಯತಿ' ಎಂಬ ವಾಕ್ಯದಲ್ಲಿ 'ಪ್ರಾಣವ್ಯವಸ್ಥಾಪಕತ್ವ', 'ಮಧ್ಯಮತ್ವ' ಮತ್ತು 'ಸರ್ವದೇವೋಪಾಸತ್ವ' ಧರ್ಮಗಳನ್ನು ಈಶಾನನಲ್ಲಿ ಹೇಳಿರುವುದರಿಂದ.

ಈಶಾನಶಬ್ದಕ್ಕೆ

तत्वप्रकाशिका – न चैतल्लिङ्गश्रवणेऽपि कुतोऽयं वायुर्विष्णुः किं न स्यादिति ।

ಈ ಲಿಂಗಗಳು ಇದ್ದರೂ ಕೂಡ 'ಈಶಾನ' ಶಬ್ದಕ್ಕೆ ವಾಯುದೇವರೇ ಎಂಬ ಅರ್ಥವನ್ನು ಸ್ವೀಕರಿಸಲು ಏನು ಕಾರಣ? 'ಈಶಾನ' ಪದಕ್ಕೆ 'ವಿಷ್ಣು' ಎಂಬ ಅರ್ಥವನ್ನು ಏಕೆ ಸ್ವೀಕರಿಸಬಾರದು?

ಪ್ರಾಣವ್ಯವಸ್ಥಾಪಕತ್ವವು ಮುಖ್ಯಪ್ರಾಣನದ್ದೇ ಲಿಂಗ

तत्वप्रकाशिका – 'यथा सम्राडेवाधिकृतान्विनियुङ्क्ते एतान् ग्रामान् अधितिष्ठस्वैतान् ग्रामाधितिष्ठस्व इत्येवमेवैष प्राण इतरान् प्राणान् पृथक्पृथगेव सन्निधत्ते' इति प्राणव्यवस्थापकत्वस्य वायुलिङ्गत्वश्रवणात् ।

ಹೀಗೆ ಪ್ರಶ್ನಿಸಬಾರದು ಏಕೆಂದರೆ, 'ಯಥಾ ಸಮ್ರಾಡೇವಾಧಿಕೃತಾನ್ವಿನಿಯುಂಕ್ತ ಏತಾನ್ ಗ್ರಾಮಾನ್ ಅಧಿತಿಷ್ಠಸ್ವೈತಾನ್ ಗ್ರಾಮಾಧಿತಿಷ್ಠಸ್ವ ಇತ್ಯೇವಮೇವೈಷ ಪ್ರಾಣ ಇತರಾನ್ ಪ್ರಾಣಾನ್ ಪೃಥಕ್‌ಪೃಥಗೇವ ಸನ್ನಿಧತ್ತೇ' 'ಯಾವರೀತಿಯಾಗಿ ಸಾರ್ವಭೌಮನಾದ ರಾಜನು ತನ್ನ ಅಧಿಕಾರದಲ್ಲಿರುವ ಪುರುಷರನ್ನು ಕುರಿತು, ಈ ಊರುಗಳ ಮೇಲೆ ನೀನು ಅಧಿಕಾರನಿಯಂತ್ರಣ ಮಾಡು ಎಂದು ನಿಯೋಗ ಮಾಡುತ್ತಾನೆ. ಅದೇ ರೀತಿ ಮುಖ್ಯಪ್ರಾಣದೇವರು ಪ್ರಾಣ, ಅಪಾನ

ಮೊದಲಾದ ಅಧೀನ ವಾಯುದೇವತೆಗಳನ್ನು ಶರೀರದಲ್ಲಿ ಬೇರೆ ಬೇರೆ ಸ್ಥಳಗಳನ್ನು ನಿಯಂತ್ರಣ ಮಾಡಲು ಆಜ್ಞೆ ಮಾಡುತ್ತಾರೆ. ಈ ರೀತಿಯಾಗಿ ಪ್ರಾಣ, ಅಪಾನಾದಿಗಳನ್ನು ವ್ಯವಸ್ಥೆ ಮಾಡುವ ವಾಯುದೇವರ ಧರ್ಮವನ್ನು ಇಲ್ಲಿ ಹೇಳಲಾಗಿದೆ.

ಪ್ರಾಣನಲ್ಲಿ ಇರುವ ಮಧ್ಯಮತ್ವ ಧರ್ಮ

तत्वप्रकाशिका – 'अथेममेव नाप्नोद्योऽयं मध्यमः प्राणः' इति मध्यमत्वस्य तद्धर्मत्वोक्तेः ।

ಅದರಂತೆ 'ಅಥೇಮಮೇವ ನಾಪ್ನೋದ್ಯೋಯಂ ಮಧ್ಯಮಃ ಪ್ರಾಣಃ' 'ಮೃತ್ಯು' ಎಂಬ ಪ್ರಾಣನು ಮಧ್ಯಮ ಪ್ರಾಣನೆನಿಸಿದ್ದಾನೆ, ಅಂದರೆ ಚಕ್ರಾದಿ ದೇವತೆಗಳಿಗಿಂತ ಶ್ರೇಷ್ಠನೂ ಪರಮಾತ್ಮನಿಗಿಂತ ಕನಿಷ್ಠನೂ ಆಗಿದ್ದಾನೆಂದರ್ಥ. ಇಂಥಹ ಪ್ರಾಣನು ಪ್ರಾಪ್ತನಾಗಲಿಲ್ಲ'. ಈ ಶ್ರುತಿಯಲ್ಲಿ ಪ್ರಾಣನಿಗೆ ಮಧ್ಯಮತ್ವ ಧರ್ಮವನ್ನು ಹೇಳಲಾಗಿದೆ.

ಸರ್ವದೇವೋಪಾಸ್ಯತ್ವವು ವಾಯುದೇವನಲ್ಲಿಯೂ ಇದೆ

तत्वप्रकाशिका – कुविदङ्गेति तस्य सर्वदेवोपास्यत्वप्रतीतेश्च ।।

ಮತ್ತು 'ಕುವಿದಂಗ' ಎಂಬ ಮಂತ್ರದಿಂದ ಆ ವಾಯದೇವರಿಗೆ ಸರ್ವದೇವೋಪಾಸತ್ವವೂ ಕೂಡ ಶ್ರುತವಾಗಿದೆ.

'ಈಶಾನ' ಎಂದರೆ ವಾಯುದೇವರೇ ?

तत्वप्रकाशिका – अतो वाय्वेकनिष्ठलिङ्गश्रवणादीशानो वायुरेवेति हेतोस्तस्यैव जिज्ञास्यत्वम् ।

ಆದ್ದರಿಂದ ಕೇವಲ ವಾಯುದೇವರಲ್ಲಿ ಮಾತ್ರ ಇರುವ ಧರ್ಮವನ್ನು 'ಊರ್ಧ್ವಂ ಪ್ರಾಣಂ' ಎಂಬ ಶ್ರುತಿಯಲ್ಲಿ ಹೇಳಿರುವ ಕಾರಣ 'ಈಶಾನ' ಶಬ್ದದಿಂದ ಪ್ರತಿಪಾದ್ಯರಾದವರು ವಾಯುದೇವರೇ ಆಗುತ್ತಾರೆ. ಅವರೇ ಜಿಜ್ಞಾಸ್ಯರೂ ಕೂಡ ಆಗುತ್ತಾರೆ ಎಂದು ತಿಳಿಯಬೇಕು.

ವಿಷ್ಣುಜಿಜ್ಞಾಸ್ಯತ್ವಕ್ಕೆ ಇದು ವಿರುದ್ಧವಲ್ಲ

तत्वप्रकाशिका – नच वाच्यं नेदमनिष्टं, वायोरपि जिज्ञास्यताभ्युपगमाद् विष्णुजिज्ञास्यत्वस्यावाधादिति ।

ವಾಯುದೇವರು ಜಿಜ್ಞಾಸ್ಯರೇ ಆಗಿರಲಿ, ಆದರೂ ವಿಷ್ಣುಜಿಜ್ಞಾಸ್ಯತ್ವಕ್ಕೆ ಬಾಧವು ಬರುವುದಿಲ್ಲ ಆದ್ದರಿಂದ ಈ ಆಕ್ಷೇಪವು ಅನಿಷ್ಟ ಆಗಿಲ್ಲವಲ್ಲ? ಎಂದು ಪ್ರಶ್ನಿಸಬಾರದು.

ಮೋಕ್ಷಬಿಟ್ಟು ಇತರ ಪ್ರಯೋಜನ ದೇವತೆಗಳಿಗಿಲ್ಲ

तत्वप्रकाशिका – वायोः सर्वदेवोपास्यत्वे तस्य मोक्षदातृत्वापातात् । नहि प्राप्तसमस्तैश्वर्याणां देवानां प्रयोजनान्तरमस्ति ।

ವಾಯುದೇವರು ಸರ್ವದೇವೋಪಾಸ್ಯರೆಂದು ನಿಶ್ಚಯವಾದರೆ, ಮೋಕ್ಷದಾತೃತ್ವವೂ ಕೂಡ ಅವರಲ್ಲಿಯೇ ಬರುತ್ತದೆ. ಏಕೆಂದರೆ ಸಮಸ್ತ ಐಶ್ವರ್ಯವನ್ನು ಹೊಂದಿರುವಂತಹ ದೇವತೆಗಳಿಗೆ ಮೋಕ್ಷವನ್ನು ಬಿಟ್ಟ ಬೇರೆ ಯಾವ ಪ್ರಯೋಜನಗಳೂ ಕೂಡ ಇರುವುದಿಲ್ಲ.

ಮೋಕ್ಷಕ್ಕೋಸ್ಕರ ವಿಷ್ಣುವೇ ಜಿಜ್ಞಾಸ್ಯ ಎಂಬುದರ ಅಭಿಪ್ರಾಯ

तत्वप्रकाशिका – तथा च किं विष्णुजिज्ञासानियमेनेति विष्णुरेव मोक्षार्थं जिज्ञास्य इत्यस्यानुपपत्तिरिति भावः ।

ಆದ್ದರಿಂದ ಮೋಕ್ಷಕ್ಕೋಸ್ಕರ ವಿಷ್ಣು ಜಿಜ್ಞಾಸೆ ಮಾಡಬೇಕೆಂಬ ನಿಯಮವಾದರೂ ಏಕೆ? ಎಂಬುದಾಗಿ ಪ್ರಶ್ನೆಯು ಪ್ರಾಪ್ತವಾಗುತ್ತದೆ. ಹೀಗೆ ಮೋಕ್ಷಕ್ಕೋಸ್ಕರ ವಿಷ್ಣು ಜಿಜ್ಞಾಸ್ಯನಾಗಿದ್ದಾನೆಂಬ ಮಾತುಗಳಿಗೆ ವೈಯರ್ಥ್ಯದೋಷವು ಬರುತ್ತದೆಂಬುದು ಭಾಷ್ಯದ ಅಭಿಪ್ರಾಯ.

'ಕುವಿದಂಗ' ಎಂಬ ಮಂತ್ರದ ಅರ್ಥ

तत्वप्रकाशिका – अयं मन्त्रार्थः । अङ्गेति सम्बोधनम् । ये देवा वायोर्नमस्कारादिना ज्ञानादिगुणपूर्णा अज्ञानाद्यवद्यविधुराश्च पुरा आसंस्ते

क्वचिद्रहस्यस्थाने सूर्येण साकं ज्ञानिने संसारबाधवद्भिः शरणं प्राप्ताय यवे बुद्धिमावासयंस्तद्विषयामकुर्वन्निति ।

'ಕುವಿದಂಗ' ಇತ್ಯಾದಿ ಮಂತ್ರದ ಅರ್ಥ ಹೀಗಿದೆ - 'ಅಂಗ' ಎಂಬುದು ಸಂಬೋಧ-ವಾಚಕಪದ. ಯಾವ ದೇವತೆಗಳು ವಾಯುದೇವನ ಉಪಾಸನೆಯಿಂದ ಅಂದರೆ ನಮಸ್ಕಾರಾದಿ-ಸೇವೆಯಿಂದ ಜ್ಞಾನಾದಿಗುಣಪೂರ್ಣರಾಗಿದ್ದಾರೋ ಮತ್ತು ಅಜ್ಞಾನಾದಿದೋಷಗಳಿಂದ ರಹಿತರಾಗಿದ್ದಾರೋ ಅವರು ಒಮ್ಮೆ ಏಕಾಂತ ಸ್ಥಳದಲ್ಲಿ ಸೂರ್ಯನ ಜೊತೆಗೆ ಕೂಡಿಕೊಂಡು ಜ್ಞಾನಿಗಳು ಮತ್ತು ಸಂಸಾರಿಗಳು ಯಾರನ್ನು ಶರಣು ಹೊಂದುತ್ತಾರೋ ಅಂತಹ ವಾಯುದೇವರನ್ನು ಶರಣಾದರು. ಮತ್ತು ಅಂತಹ ವಾಯುದೇವರಲ್ಲಿ ತಮ್ಮ ಬುದ್ಧಿಯನ್ನಿಟ್ಟು ಧ್ಯಾನದಲ್ಲಿ ನಿರತರಾದರು ಎಂದು.

ವಾಮನಶ್ರುತಿಯ ಬಲದಿಂದ ವಿಷ್ಣುವೇ ಈಶಾನನೆಂದು ಸಿದ್ಧಾಂತ

तत्वप्रकाशिका – सिद्धान्तयत्सूत्रमवतार्य व्याचष्टे – अत इति ।। विष्णुरेवेशानो भवेत् । 'मध्ये वामनम्' इति वामनश्रुतेः ।

ಸಿದ್ಧಾಂತ ಸ್ಥಾಪಕವಾದ ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ, 'ಅತಃ' ಇತ್ಯಾದಿ ಭಾಷ್ಯದಿಂದ. 'ಮಧ್ಯೇ ವಾಮನಮ್' ಎಂಬ ವಾಮನಶ್ರುತಿಯ ಬಲದಿಂದ 'ಈಶಾನ' ಶಬ್ದಪ್ರತಿಪಾದ್ಯನಾದವನು ವಿಷ್ಣುವೇ ಆಗಿದ್ದಾನೆ.

ಅಂಥ ವಿಷ್ಣುವೇ ಜಿಜ್ಞಾಸ್ಯನು

तत्वप्रकाशिका – तस्याश्च विष्णौ महायोगरुढिसिद्धायास्तत्प्रमापकत्वात्। अतो विष्णोरीशानत्वेन तस्यैव जिज्ञास्यत्वमिति भावः ।

ವಾಮನಶಬ್ದವಾದರೂ ಮಹಾಯೋಗ ಮತ್ತು ವಿದ್ವದ್‌ರೂಢಿಗಳಿಂದ ವಿಷ್ಣುಪರವೇ ಆಗಿದೆ ಎಂದು ನಿಶ್ಚಯವಾಗುತ್ತದೆ. ಆದ್ದರಿಂದ ಶ್ರುತಿಯಲ್ಲಿರುವ 'ಈಶಾನ' ಪದದಿಂದ ವಿಷ್ಣುವೇ ಪ್ರತಿಪಾದ್ಯನಾಗುತ್ತಾನೆ. ಅವನೇ ಜಿಜ್ಞಾಸ್ಯನಾಗುತ್ತಾನೆಂದು ಅಭಿಪ್ರಾಯ.

ಶ್ರುತಿಯಲ್ಲಿರುವ ವಾಮನಶಬ್ದವು ನಿರವಕಾಶ

तत्वप्रकाशिका – अत्र प्रमितपदं श्रुतेर्निरवकाशत्वसूचनार्थम् । ननु वायुलिङ्गसद्भावादीशानो वायुरेव किं न स्यादित्यत आह – न हीति ।।

ಭಾಷ್ಯದಲ್ಲಿ 'ಪ್ರಮಿತ' ಎಂಬ ಪದವು ಶ್ರುತಿಯಲ್ಲಿರುವ 'ವಾಮನ' ಶಬ್ದಕ್ಕೆ ನಿರವಕಾಶತ್ವವನ್ನು ಸೂಚನೆ ಮಾಡುತ್ತಿದೆ.

ಶ್ರುತಿಯಲ್ಲಿ ವಾಯುದೇವರ ಲಿಂಗಗಳು ಇರುವುದರಿಂದ 'ಈಶಾನ' ಶಬ್ದಪ್ರತಿಪಾದ್ಯರು ವಾಯುದೇವರೇ ಏಕಾಗಬಾರದು? ಎಂಬ ಪ್ರಶ್ನೆಗೆ 'ನಹಿ' ಇತ್ಯಾದಿ ಭಾಷ್ಯದಿಂದ ಉತ್ತರಿಸಿದ್ದಾರೆ.

ಶಬ್ದಾದೇವ ಎಂಬ ಸೂತ್ರದಲ್ಲಿರುವ ಅವಧಾರಣದ ವ್ಯಾಖ್ಯಾನ

तत्वप्रकाशिका – भवेत्सत्यामपि श्रुतौ लिङ्गेन वायुत्वनिश्चयो यदि श्रुतेर्लिङ्गं बलवद्भवेन्न च तदस्तीत्यर्थः । अनेन शब्दादेव इत्येवकाराभिप्रायो वर्णितो भवति । कुतो न श्रुतेर्लिङ्गं बलवदित्यत आह – श्रुतिरिति ।।

ಶ್ರುತಿ ಇದ್ದರೂ ಕೂಡ ಲಿಂಗದ ಬಲದಿಂದ ವಾಯುದೇವರೇ ಪ್ರತಿಪಾದ್ಯರೆಂದು ನಿಶ್ಚಯಿಸಬಹುದಿತ್ತು, ಒಂದುವೇಳೆ ಶ್ರುತಿಗಿಂತ ಲಿಂಗವು ಬಲಿಷ್ಠವಾಗಿದ್ದ ಪಕ್ಷದಲ್ಲಿ, ನಿಮ್ಮ ಮಾತು ಸರಿಯಾಗುತ್ತಿತ್ತು. ಆದರೆ ಇದನ್ನು ಹೇಗೆ ಸಾಧಿಸುತ್ತೀರಿ? ಎಂಬ ಪ್ರಶ್ನೆಗೆ 'ಶ್ರುತಿ' ಇತ್ಯಾದಿ ಭಾಷ್ಯವು ಹೊರಟಿದೆ. ಹಾಗೆ ನಿಯಮವಿಲ್ಲ. ಹೀಗೆ ಹೇಳಿದ್ದರಿಂದ 'ಶಬ್ದಾದೇವ' ಎಂಬ ಸೂತ್ರದಲ್ಲಿರುವ 'ಏವ' ಶಬ್ದದ ಅಭಿಪ್ರಾಯವನ್ನು ವರ್ಣಿಸಿದಂತಾಯಿತು.

ವಾಕ್ಯ, ಪ್ರಕರಣ, ಸ್ಥಾನ, ಸಮಾಖ್ಯಾ ಇವುಗಳ ಅರ್ಥ

तत्वप्रकाशिका – नाममात्रेण निर्देशः श्रुतिः । असाधारणधर्मो लिङ्गम् । निराकाङ्क्षपदानि वाक्यम् । एकप्रमेयप्रतिपादकानेकवाक्यानि प्रकणम् । अनेकप्रमेयप्रतिपादकमेकार्थे तात्पर्ययुक्तं स्थानम् । समानोक्तिः समाख्या ।

ಸ್ಕಾಂದಪುರಾಣದ ಶ್ಲೋಕದಲ್ಲಿರುವ ಪ್ರತಿಯೊಂದು ಶಬ್ದಗಳ ಅರ್ಥ ಹೀಗಿದೆ - ನಾಮಮಾತ್ರದಿಂದ ಅರ್ಥವನ್ನು ನಿರ್ದೇಶ ಮಾಡುವುದೇ ಶ್ರುತಿ. ಅಸಾಧಾರಣಧರ್ಮವೇ ಲಿಂಗವಾಗಿದೆ. ಯಾವ ಪದಸಮೂಹಗಳಲ್ಲಿ ಪರಸ್ಪರ ಆಕಾಂಕ್ಷೆಯು ಶಾಂತವಾಗಿರುತ್ತದೋ, ಅಂತಹ ಪದಸಮೂಹವನ್ನೇ ವಾಕ್ಯವೆನ್ನುತ್ತಾರೆ. ಒಂದೇ ವಿಷಯವನ್ನು ಪ್ರತಿಪಾದನೆ ಮಾಡುವ ಅನೇಕ ವಾಕ್ಯಗಳ ಗುಂಪನ್ನು 'ಪ್ರಕರಣ'ವೆನ್ನುತ್ತಾರೆ. ಅನೇಕ ಪ್ರಮೇಯವನ್ನು ಪ್ರತಿಪಾದನೆ ಮಾಡುವ, ಒಂದೇ ಅರ್ಥದಲ್ಲಿ ತಾತ್ಪರ್ಯವುಳ್ಳ ಪ್ರಕರಣಗಳ ಗುಂಪನ್ನೇ 'ಸ್ಥಾನ'ವೆನ್ನುತ್ತಾರೆ. ಬೇರೆಕಡೆ ಸಮಾನವಾದ ಅರ್ಥವನ್ನು ಪ್ರತಿಪಾದಿಸುವಂತಹ ವಾಕ್ಯವನ್ನು 'ಸಮಾಖ್ಯಾ' ಎನ್ನುತ್ತಾರೆ.

ಶ್ರುತಿಯೇ ಸರ್ವಶ್ರೇಷ್ಠ

तत्वप्रकाशिका – तत्र श्रुतेः साक्षादर्थधीजनकत्वात् सर्वतः प्राबल्यम् । लिङ्गस्यानुमापकतयाऽर्थबोधकत्वात् तदानन्तर्यम् ।

ಶ್ರುತಿಯು ನೇರವಾಗಿ ಅರ್ಥಜ್ಞಾನವನ್ನು ತಂದುಕೊಡುವುದರಿಂದ ಎಲ್ಲಾ ಪ್ರಮಾಣಗಳಿಗಿಂತಲೂ ಅತ್ಯಂತ ಶ್ರೇಷ್ಠವಾಗಿದೆ. ಲಿಂಗವು ಅನುಮಾನದ ಮೂಲಕವಾಗಿ ಅಂದರೆ ವ್ಯಾಪ್ತಿಜ್ಞಾನ ಮೊದಲಾದುವುಗಳನ್ನು ಅನುಸರಿಸುವ ಮೂಲಕ ಅರ್ಥನಿಶ್ಚಯವನ್ನು ತಂದುಕೊಡುವ ಕಾರಣ ಎರಡನೆಯ ಸ್ಥಾನದಿಂದ ಪ್ರಾಬಲ್ಯವನ್ನು ಹೊಂದಿದೆ.

ಲಿಂಗಕ್ಕಿಂತಲೂ ವಾಕ್ಯವು ದುರ್ಬಲ

तत्वप्रकाशिका – वाक्यस्यानेकार्थकथनद्वाराऽर्थानुमापकत्वात् ततोऽपि दौर्बल्यम् ।

ವಾಕ್ಯದಲ್ಲಿ ಅನೇಕ ಪದಗಳಿರುವುದರಿಂದ ಆ ಎಲ್ಲಾ ಪದಗಳ ಅರ್ಥವನ್ನು ತಿಳಿಯುವ ಮೂಲಕ ಪ್ರಮೇಯವನ್ನು ತಿಳಿಯಬೇಕಾದ್ದರಿಂದ ಲಿಂಗಕ್ಕಿಂತಲೂ ದುರ್ಬಲವಾಗಿದೆ.

ಪ್ರಕರಣವು ವಾಕ್ಯಕ್ಕಿಂತಲೂ ದುರ್ಬಲ

तत्वप्रकाशिका – प्रकरणस्य बह्वर्थपरत्वेनार्थानुमितिहेतुत्वात्तदवमता ।

ಶ್ರುತಿಯಲ್ಲಿರುವ ವಾಮನಶಬ್ದವು ನಿರವಕಾಶ

तत्वप्रकाशिका – अत्र प्रमितपदं श्रुतेर्निरवकाशत्वसूचनार्थम् । ननु वायुलिङ्गसद्भावादीशानो वायुरेव किं न स्यादित्यत आह – न हीति ।।

ಭಾಷ್ಯದಲ್ಲಿ 'ಪ್ರಮಿತ' ಎಂಬ ಪದವು ಶ್ರುತಿಯಲ್ಲಿರುವ 'ವಾಮನ' ಶಬ್ದಕ್ಕೆ ನಿರವಕಾಶತ್ವವನ್ನು ಸೂಚನೆ ಮಾಡುತ್ತಿದೆ.

ಶ್ರುತಿಯಲ್ಲಿ ವಾಯುದೇವರ ಲಿಂಗಗಳು ಇರುವುದರಿಂದ 'ಈಶಾನ' ಶಬ್ದಪ್ರತಿಪಾದ್ಯರು ವಾಯುದೇವರೇ ಏಕಾಗಬಾರದು? ಎಂಬ ಪ್ರಶ್ನೆಗೆ 'ನಹಿ' ಇತ್ಯಾದಿ ಭಾಷ್ಯದಿಂದ ಉತ್ತರಿಸಿದ್ದಾರೆ.

ಶಬ್ದಾದೇವ ಎಂಬ ಸೂತ್ರದಲ್ಲಿರುವ ಅವಧಾರಣದ ವ್ಯಾಖ್ಯಾನ

तत्वप्रकाशिका – भवेत्सत्यामपि श्रुतौ लिङ्गेन वायुत्वनिश्चयो यदि श्रुतेर्लिङ्गं बलवद्भवेन्न च तदस्तीत्यर्थः । अनेन शब्दादेव इत्येवकाराभिप्रायो वर्णितो भवति । कुतो न श्रुतेर्लिङ्गं बलवदित्यत आह – श्रुतिरिति ।।

ಶ್ರುತಿ ಇದ್ದರೂ ಕೂಡ ಲಿಂಗದ ಬಲದಿಂದ ವಾಯುದೇವರೇ ಪ್ರತಿಪಾದ್ಯರೆಂದು ನಿಶ್ಚಯಿಸಬಹುದಿತ್ತು, ಒಂದುವೇಳೆ ಶ್ರುತಿಗಿಂತ ಲಿಂಗವು ಬಲಿಷ್ಠವಾಗಿದ್ದ ಪಕ್ಷದಲ್ಲಿ, ನಿಮ್ಮ ಮಾತು ಸರಿಯಾಗುತ್ತಿತ್ತು. ಆದರೆ ಇದನ್ನು ಹೇಗೆ ಸಾಧಿಸುತ್ತೀರಿ? ಎಂಬ ಪ್ರಶ್ನೆಗೆ 'ಶ್ರುತಿ' ಇತ್ಯಾದಿ ಭಾಷ್ಯವು ಹೊರಟಿದೆ. ಹಾಗೆ ನಿಯಮವಿಲ್ಲ. ಹೀಗೆ ಹೇಳಿದ್ದರಿಂದ 'ಶಬ್ದಾದೇವ' ಎಂಬ ಸೂತ್ರದಲ್ಲಿರುವ 'ಏವ' ಶಬ್ದದ ಅಭಿಪ್ರಾಯವನ್ನು ವರ್ಣಿಸಿದಂತಾಯಿತು.

ವಾಕ್ಯ, ಪ್ರಕರಣ, ಸ್ಥಾನ, ಸಮಾಖ್ಯಾ ಇವುಗಳ ಅರ್ಥ

तत्वप्रकाशिका – नाममात्रेण निर्देशः श्रुतिः । असाधारणधर्मो लिङ्गम् । निराकाङ्क्षपदानि वाक्यम् । एकप्रमेयप्रतिपादकानेकवाक्यानि प्रकणम् । अनेकप्रमेयप्रतिपादकमेकार्थे तात्पर्ययुक्तं स्थानम् । समानोक्तिः समाख्या ।

ಸ್ಕಾಂದಪುರಾಣದ ಶ್ಲೋಕದಲ್ಲಿರುವ ಪ್ರತಿಯೊಂದು ಶಬ್ದಗಳ ಅರ್ಥ ಹೀಗಿದೆ - ನಾಮಮಾತ್ರದಿಂದ ಅರ್ಥವನ್ನು ನಿರ್ದೇಶ ಮಾಡುವುದೇ ಶ್ರುತಿ. ಅಸಾಧಾರಣಧರ್ಮವೇ ಲಿಂಗವಾಗಿದೆ. ಯಾವ ಪದಸಮೂಹಗಳಲ್ಲಿ ಪರಸ್ಪರ ಆಕಾಂಕ್ಷೆಯು ಶಾಂತವಾಗಿರುತ್ತದೋ, ಅಂತಹ ಪದಸಮೂಹವನ್ನೇ ವಾಕ್ಯವೆನ್ನುತ್ತಾರೆ. ಒಂದೇ ವಿಷಯವನ್ನು ಪ್ರತಿಪಾದನೆ ಮಾಡುವ ಅನೇಕ ವಾಕ್ಯಗಳ ಗುಂಪನ್ನು 'ಪ್ರಕರಣ'ವೆನ್ನುತ್ತಾರೆ. ಅನೇಕ ಪ್ರಮೇಯವನ್ನು ಪ್ರತಿಪಾದನೆ ಮಾಡುವ, ಒಂದೇ ಅರ್ಥದಲ್ಲಿ ತಾತ್ಪರ್ಯವುಳ್ಳ ಪ್ರಕರಣಗಳ ಗುಂಪನ್ನೇ 'ಸ್ಥಾನ'ವೆನ್ನುತ್ತಾರೆ. ಬೇರೆಕಡೆ ಸಮಾನವಾದ ಅರ್ಥವನ್ನು ಪ್ರತಿಪಾದಿಸುವಂತಹ ವಾಕ್ಯವನ್ನು 'ಸಮಾಖ್ಯಾ' ಎನ್ನುತ್ತಾರೆ.

ಶ್ರುತಿಯೇ ಸರ್ವಶ್ರೇಷ್ಠ

तत्वप्रकाशिका – तत्र श्रुतेः साक्षादर्थधीजनकत्वात् सर्वतः प्राबल्यम् । लिङ्गस्यानुमापकतयाऽर्थबोधकत्वात् तदानन्तर्यम् ।

ಶ್ರುತಿಯು ನೇರವಾಗಿ ಅರ್ಥಜ್ಞಾನವನ್ನು ತಂದುಕೊಡುವುದರಿಂದ ಎಲ್ಲಾ ಪ್ರಮಾಣಗಳಿಗಿಂತಲೂ ಅತ್ಯಂತ ಶ್ರೇಷ್ಠವಾಗಿದೆ. ಲಿಂಗವು ಅನುಮಾನದ ಮೂಲಕವಾಗಿ ಅಂದರೆ ವ್ಯಾಪ್ತಿಜ್ಞಾನ ಮೊದಲಾದುವುಗಳನ್ನು ಅನುಸರಿಸುವ ಮೂಲಕ ಅರ್ಥನಿಶ್ಚಯವನ್ನು ತಂದುಕೊಡುವ ಕಾರಣ ಎರಡನೆಯ ಸ್ಥಾನದಿಂದ ಪ್ರಾಬಲ್ಯವನ್ನು ಹೊಂದಿದೆ.

ಲಿಂಗಕ್ಕಿಂತಲೂ ವಾಕ್ಯವು ದುರ್ಬಲ

तत्वप्रकाशिका – वाक्यस्यानेकार्थकथनद्वाराऽर्थानुमापकत्वात् ततोऽपि दौर्बल्यम् ।

ವಾಕ್ಯದಲ್ಲಿ ಅನೇಕ ಪದಗಳಿರುವುದರಿಂದ ಆ ಎಲ್ಲಾ ಪದಗಳ ಅರ್ಥವನ್ನು ತಿಳಿಯುವ ಮೂಲಕ ಪ್ರಮೇಯವನ್ನು ತಿಳಿಯಬೇಕಾದ್ದರಿಂದ ಲಿಂಗಕ್ಕಿಂತಲೂ ದುರ್ಬಲವಾಗಿದೆ.

ಪ್ರಕರಣವು ವಾಕ್ಯಕ್ಕಿಂತಲೂ ದುರ್ಬಲ

तत्वप्रकाशिका – प्रकरणस्य बह्वर्थपरत्वेनार्थानुमितिहेतुत्वात्तदवमता ।

ಪ್ರಕರಣವು ಅನೇಕ ವಾಕ್ಯಗಳ ಪುಂಜವಾದ್ದರಿಂದ ಅನೇಕ ಪದಗಳ ಅರ್ಥವನ್ನು ತಿಳಿಸುವ ಮೂಲಕ ವಾಕ್ಯಗಳ ಅರ್ಥವನ್ನು ತಿಳಿದು ಅನಂತರ ಪ್ರಮೇಯದ ಜ್ಞಾನವು ಬರುವ ಕಾರಣ ವಾಕ್ಯಕ್ಕಿಂತಲೂ ದುರ್ಬಲವಾಗಿದೆ.

ಪ್ರಕರಣಕ್ಕಿಂತಲೂ ಸ್ಥಾನವು ದುರ್ಬಲ

तत्वप्रकाशिका – स्थानस्यातिबह्वर्थकथनेनाभिप्रायतोऽर्थानुमितिजनकस्य ततोऽपि दौर्बल्यम् । समाख्यायाः स्थानान्तरगतायाः सादृश्यामात्रेण अर्थानुमापकत्वात् ततोऽपि दुर्बलत्वात् ।

ಸ್ಥಾನವಾದರೂ ಸಹ ಅನೇಕ ಪ್ರಕರಣಗಳ ಜ್ಞಾನವನ್ನು ಅಪೇಕ್ಷಿಸಿರುವ ಕಾರಣ ಅದರಿಂದ ಪ್ರತೀತವಾಗುವ ಅರ್ಥವು ಪ್ರಕರಣಕ್ಕಿಂತ ಅನಂತರ ಬರುವುದರಿಂದ ಸ್ಥಾನವು ಪ್ರಕರಣಕ್ಕಿಂತ ದುರ್ಬಲವಾಗಿದೆ.

ಒಂದು ಸ್ಥಾನದಲ್ಲಿರುವ ಅಭಿಧೇಯವಾದ ಅರ್ಥನಿಶ್ಚಯಕ್ಕೆ ಸಮಾನವಾದ ಮತ್ತೊಂದು ಸ್ಥಾನದಲ್ಲಿರುವ ವಾಕ್ಯದಿಂದ ಅರ್ಥನಿಶ್ಚಯವನ್ನು ಮಾಡಬೇಕು. ಅಂದರೆ ಸಮಾಖ್ಯಾಪ್ರಮಾಣವು ಸಾದೃಶ್ಯದಿಂದ ಅರ್ಥಕ್ಕೆ ಅನುಮಾಪಕವಾಗಿದೆ. ಆದ್ದರಿಂದ ಉಳಿದೆಲ್ಲಾ ಪ್ರಮಾಣಗಳಿಗಿಂತ ದುರ್ಬಲವಾಗಿದೆ.

ಮುಂದಿನ ಪ್ರಮಾಣಗಳಿಗಿಂತ ಹಿಂದಿನ ಪ್ರಮಾಣಗಳು ಶ್ರೇಷ್ಠ

तत्वप्रकाशिका – अत्रापि पूर्ववत् निरवकाशात् स्वभावदुर्बलादपि स्वभावप्रबलसावकाशस्य दौर्बल्यमित्यादि द्रष्टव्यम् ।

ಇಲ್ಲಿಯೂ ಸಹ 'ಉಪಕ್ರಮೋಪಸಂಹಾರೋ' ಎಂಬಲ್ಲಿ ಹೇಳಿದ ಪ್ರಕಾರ ಸ್ವಭಾವತಃ ದುರ್ಬಲವಾಗಿದ್ದರೂ ನಿರವಕಾಶವಾಗಿದ್ದರೆ ಬಲಿಷ್ಠವಾಗುತ್ತದೆ. ಸ್ವಭಾವತಃ ಪ್ರಬಲವಾಗಿದ್ದರೂ ಸಾವಕಾಶವಾಗಿದ್ದರೆ ದುರ್ಬಲವೇ ಆಗುತ್ತದೆ. ಅಂದರೆ ಮುಂದಿನ ಪ್ರಮಾಣಗಳಿಗಿಂತ ಹಿಂದಿನ ಪ್ರಮಾಣಗಳು ಶ್ರೇಷ್ಠವೇ ಆಗಿವೆ. ಒಂದು ವೇಳೆ ನಿರವಕಾಶವಾಗಿದ್ದಲ್ಲಿ ಮುಂದಿನ

ಪ್ರಮಾಣವಾಗಿದ್ದರೂ ಸಾವಕಾಶವಾದ ಹಿಂದಿನ ಪ್ರಮಾಣಕ್ಕಿಂತ ಶ್ರೇಷ್ಠವಾಗುತ್ತದೆಂದು ತಿಳಿಯಬೇಕು.

ಮುಂದಿನ ಪ್ರಮಾಣಗಳು ಬಾಧಿತವೆಂದು ನಿರ್ಣಯಿಸಬೇಕು

तत्वप्रकाशिका – अत्र विरुद्धैतेषां समवाये सत्येवं पूर्वपूर्वेणोत्तरोत्तरबाध्यागमार्थनिर्णयो भवतीत्यर्थः ।

ಸ್ಕಾಂದಪುರಾಣದ ಈ ವಚನದಲ್ಲಿ ವಿರುದ್ಧವಾದ ಶ್ರುತಿ ಲಿಂಗಾದಿಗಳು ಒಂದೇಕಡೆ ಸೇರಿದಾಗ ಹಿಂದಿನ ಪ್ರಮಾಣಗಳಿಗಿಂತ, ಮುಂದಿನ ಪ್ರಮಾಣಗಳು ಬಾಧಿತವಾಗುತ್ತವೆಂಬುದು ಆಗಮಾರ್ಥದ ನಿರ್ಣಯವೆಂದು ತಿಳಿಯಬೇಕು.

ಸಮಾಖ್ಯಾಪ್ರಮಾಣಕ್ಕೆ ಬಾಧ

तत्वप्रकाशिका – नच यथास्थित एव क्रमः । आत्मा प्रकरणदित्यत्र समाख्यायाः प्रकरणेन बाधितत्वात् ।

ಈ ಮಾತಿನಲ್ಲಿ ಪ್ರಮಾಣಗಳ ಕ್ರಮ ಹೇಗಿರುವುದೊ ಹಾಗೆಯೇ ಪ್ರಾಬಲ್ಯವನ್ನು ತಿಳಿಯಬಾರದು ಏಕೆಂದರೆ 'ಆತ್ಮಾಪ್ರಕರಣಾತ್' ಎಂಬ ಸೂತ್ರದಲ್ಲಿ ಭಾಷ್ಯಕಾರರು ಪ್ರಕರಣದಿಂದ ಸಮಾಖ್ಯಾಪ್ರಮಾಣಕ್ಕೆ ಬಾಧವನ್ನು ಹೇಳಿದ್ದಾರೆ. ಅಂದರೆ ಸ್ಕಾಂದಪುರಾಣದಲ್ಲಿ ಸಮಾಖ್ಯಾಪ್ರಮಾಣಕ್ಕಿಂತ ಅನಂತರ ಪ್ರಕರಣವು ಪಠಿತವಾಗಿರುವುದರಿಂದ ಸಮಾಖ್ಯಾಕ್ಕಿಂತ ಪ್ರಕರಣವು ಬಾಧಿತವಾಗಬೇಕಾದೀತು. ಆದ್ದರಿಂದ ಈ ಕ್ರಮವೇ ಎಲ್ಲೆಡೆ ಅನ್ವಯಿಸುತ್ತದೆಂಬುದು ಭಾಷ್ಯಕಾರರ ಅಭಿಪ್ರಾಯವಲ್ಲ.

ಜೈಮಿನಿಗಳು ಹೇಳಿದ ಸೂತ್ರ

तत्वप्रकाशिका – तदाह जैमिनिः 'श्रुतिलिङ्गवाक्यप्रकरणस्थानसमाख्यानां समवाये परदौर्बल्यमर्थविप्रकर्षात्' इति ।

ಪ್ರಕರಣವು ಅನೇಕ ವಾಕ್ಯಗಳ ಪುಂಜವಾದ್ದರಿಂದ ಅನೇಕ ಪದಗಳ ಅರ್ಥವನ್ನು ತಿಳಿಸುವ ಮೂಲಕ ವಾಕ್ಯಗಳ ಅರ್ಥವನ್ನು ತಿಳಿದು ಅನಂತರ ಪ್ರಮೇಯದ ಜ್ಞಾನವು ಬರುವ ಕಾರಣ ವಾಕ್ಯಕ್ಕಿಂತಲೂ ದುರ್ಬಲವಾಗಿದೆ.

ಪ್ರಕರಣಕ್ಕಿಂತಲೂ ಸ್ಥಾನವು ದುರ್ಬಲ

तत्वप्रकाशिका – स्थानस्यातिबह्वर्थकथनेनाभिप्रायतोऽर्थानुमितिजनकस्य ततोऽपि दौर्बल्यम् । समाख्यायाः स्थानान्तरगतायाः सादृश्यामात्रेण अर्थानुमापकत्वात् ततोऽपि दुर्बलत्वात् ।

ಸ್ಥಾನವಾದರೂ ಸಹ ಅನೇಕ ಪ್ರಕರಣಗಳ ಜ್ಞಾನವನ್ನು ಅಪೇಕ್ಷಿಸಿರುವ ಕಾರಣ ಅದರಿಂದ ಪ್ರತೀತವಾಗುವ ಅರ್ಥವು ಪ್ರಕರಣಕ್ಕಿಂತ ಅನಂತರ ಬರುವುದರಿಂದ ಸ್ಥಾನವು ಪ್ರಕರಣಕ್ಕಿಂತ ದುರ್ಬಲವಾಗಿದೆ.

ಒಂದು ಸ್ಥಾನದಲ್ಲಿರುವ ಅಭಿಧೇಯವಾದ ಅರ್ಥನಿಶ್ಚಯಕ್ಕೆ ಸಮಾನವಾದ ಮತ್ತೊಂದು ಸ್ಥಾನದಲ್ಲಿರುವ ವಾಕ್ಯದಿಂದ ಅರ್ಥನಿಶ್ಚಯವನ್ನು ಮಾಡಬೇಕು. ಅಂದರೆ ಸಮಾಖ್ಯಾಪ್ರಮಾಣವು ಸಾದೃಶ್ಯದಿಂದ ಅರ್ಥಕ್ಕೆ ಅನುಮಾಪಕವಾಗಿದೆ. ಆದ್ದರಿಂದ ಉಳಿದೆಲ್ಲಾ ಪ್ರಮಾಣಗಳಿಗಿಂತ ದುರ್ಬಲವಾಗಿದೆ.

ಮುಂದಿನ ಪ್ರಮಾಣಗಳಿಗಿಂತ ಹಿಂದಿನ ಪ್ರಮಾಣಗಳು ಶ್ರೇಷ್ಠ

तत्वप्रकाशिका – अत्रापि पूर्ववत् निरवकाशात् स्वभावदुर्बलादपि स्वभावप्रबलसावकाशस्य दौर्बल्यमित्यादि द्रष्टव्यम् ।

ಇಲ್ಲಿಯೂ ಸಹ 'ಉಪಕ್ರಮೋಪಸಂಹಾರೋ' ಎಂಬಲ್ಲಿ ಹೇಳಿದ ಪ್ರಕಾರ ಸ್ವಭಾವತಃ ದುರ್ಬಲವಾಗಿದ್ದರೂ ನಿರವಕಾಶವಾಗಿದ್ದರೆ ಬಲಿಷ್ಠವಾಗುತ್ತದೆ. ಸ್ವಭಾವತಃ ಪ್ರಬಲವಾಗಿದ್ದರೂ ಸಾವಕಾಶವಾಗಿದ್ದರೆ ದುರ್ಬಲವೇ ಆಗುತ್ತದೆ. ಅಂದರೆ ಮುಂದಿನ ಪ್ರಮಾಣಗಳಿಗಿಂತ ಹಿಂದಿನ ಪ್ರಮಾಣಗಳು ಶ್ರೇಷ್ಠವೇ ಆಗಿವೆ. ಒಂದು ವೇಳೆ ನಿರವಕಾಶವಾಗಿದ್ದಲ್ಲಿ ಮುಂದಿನ

ಪ್ರಮಾಣವಾಗಿದ್ದರೂ ಸಾವಕಾಶವಾದ ಹಿಂದಿನ ಪ್ರಮಾಣಕ್ಕಿಂತ ಶ್ರೇಷ್ಠವಾಗುತ್ತದೆಂದು ತಿಳಿಯಬೇಕು.

ಮುಂದಿನ ಪ್ರಮಾಣಗಳು ಬಾಧಿತವೆಂದು ನಿರ್ಣಯಿಸಬೇಕು

तत्वप्रकाशिका – अत्र विरुद्धैतेषां समवाये सत्येवं पूर्वपूर्वेणोत्तरोत्तरबाध्यागमार्थनिर्णयो भवतीत्यर्थः ।

ಸ್ಕಾಂದಪುರಾಣದ ಈ ವಚನದಲ್ಲಿ ವಿರುದ್ಧವಾದ ಶ್ರುತಿ ಲಿಂಗಾದಿಗಳು ಒಂದೇಕಡೆ ಸೇರಿದಾಗ ಹಿಂದಿನ ಪ್ರಮಾಣಗಳಿಗಿಂತ, ಮುಂದಿನ ಪ್ರಮಾಣಗಳು ಬಾಧಿತವಾಗುತ್ತವೆಂಬುದು ಆಗಮಾರ್ಥದ ನಿರ್ಣಯವೆಂದು ತಿಳಿಯಬೇಕು.

ಸಮಾಖ್ಯಾಪ್ರಮಾಣಕ್ಕೆ ಬಾಧ

तत्वप्रकाशिका – नच यथास्थित एव क्रमः । आत्मा प्रकरणदित्यत्र समाख्यायाः प्रकरणेन बाधितत्वात् ।

ಈ ಮಾತಿನಲ್ಲಿ ಪ್ರಮಾಣಗಳ ಕ್ರಮ ಹೇಗಿರುವುದೊ ಹಾಗೆಯೇ ಪ್ರಾಬಲ್ಯವನ್ನು ತಿಳಿಯಬಾರದು ಏಕೆಂದರೆ 'ಆತ್ಮಾಪ್ರಕರಣಾತ್' ಎಂಬ ಸೂತ್ರದಲ್ಲಿ ಭಾಷ್ಯಕಾರರು ಪ್ರಕರಣದಿಂದ ಸಮಾಖ್ಯಾಪ್ರಮಾಣಕ್ಕೆ ಬಾಧವನ್ನು ಹೇಳಿದ್ದಾರೆ. ಅಂದರೆ ಸ್ಕಾಂದಪುರಾಣದಲ್ಲಿ ಸಮಾಖ್ಯಾಪ್ರಮಾಣಕ್ಕಿಂತ ಅನಂತರ ಪ್ರಕರಣವು ಪಠಿತವಾಗಿರುವುದರಿಂದ ಸಮಾಖ್ಯಾಕ್ಕಿಂತ ಪ್ರಕರಣವು ಬಾಧಿತವಾಗಬೇಕಾದೀತು. ಆದ್ದರಿಂದ ಈ ಕ್ರಮವೇ ಎಲ್ಲೆಡೆ ಅನ್ವಯಿಸುತ್ತದೆಂಬುದು ಭಾಷ್ಯಕಾರರ ಅಭಿಪ್ರಾಯವಲ್ಲ.

ಜೈಮಿನಿಗಳು ಹೇಳಿದ ಸೂತ್ರ

तत्वप्रकाशिका – तदाह जैमिनिः 'श्रुतिलिङ्गवाक्यप्रकरणस्थानसमाख्यानां समवाये परदौर्बल्यमर्थविप्रकर्षात्' इति ।

ಜೈಮಿನಿಮಹರ್ಷಿಗಳು ಹೀಗೆ ಹೇಳಿದ್ದಾರೆ - 'ಶ್ರುತಿ, ಲಿಂಗ, ವಾಕ್ಯ, ಪ್ರಕರಣ, ಸ್ಥಾನ, ಸಮಾಖ್ಯಾನಾಂ ಸಮವಾಯೇ ಪಾರದೌರ್ಬಲ್ಯಮರ್ಥವಿಪ್ರಕರ್ಷಾತ್' ಶ್ರುತ್ಯಾದಿ ಪ್ರಮಾಣಗಳ ವಿರೋಧವು ಪೂರ್ಣವಾಗಿ ಒಂದೆಡೆ ಪ್ರಾಪ್ತವಾದರೆ ಮುಂದಿನ ಪ್ರಮಾಣಗಳು ಹಿಂದಿನ ಪ್ರಮಾಣಕ್ಕಿಂತ ದುರ್ಬಲವಾಗುತ್ತವೆ. ಏಕೆಂದರೆ ಅರ್ಥಪ್ರತೀತಿಯನ್ನು ತಂದುಕೊಡುವಲ್ಲಿ ಹಿಂದಿನ ಪ್ರಮಾಣಗಳಿಗಿಂತ ಮುಂದಿನ ಪ್ರಮಾಣಗಳಲ್ಲಿ ವಿಳಂಬವಿರುತ್ತದೆ.

ಭಾಷ್ಯಕಾರರು ಹೇಳಿದ ಪ್ರಾಬಲ್ಯ ತಾರತಮ್ಯ

तत्वप्रकाशिका – भाष्यकारोऽपि । 'वाक्यं प्रकरणं स्थानं समाख्या च तथाविधा' इति ।

ಭಾಷ್ಯಕಾರರೂ ಸಹ 'ವಾಕ್ಯಂ ಪ್ರಕರಣಂ ಸ್ಥಾನಂ ಸಮಾಖ್ಯಾ ಚ ತಥಾವಿಧಾ' ಎಂಬುದಾಗಿ ಕ್ರಮವನ್ನು ಹೇಳಿದ್ದಾರೆ.

ಶ್ರುತ್ಯಾದಿಗಳೇ ಅರ್ಥನಿಶ್ಚಾಯಕ

तत्वप्रकाशिका – श्रुतिलिङ्गवाक्यानां साक्षाद्विप्रतिपन्नार्थनिष्ठत्वे श्रुत्यादित्वेनैव ज्ञापकत्वम् ।

ಶ್ರುತಿ, ಲಿಂಗ, ವಾಕ್ಯಗಳಿಗೆ ವಿಪ್ರತಿಪನ್ನವಾದ ಅರ್ಥದಲ್ಲಿ, ಸಾಕ್ಷಾತ್ ಪ್ರವೃತ್ತಿ ಇದ್ದರೆ ಮಾತ್ರ ಶ್ರುತ್ಯಾದಿಗಳೇ ಸ್ವಭಾವದಿಂದ ಆಯಾ ಅರ್ಥಗಳನ್ನು ನಿಶ್ಚಯ ಮಾಡಿಕೊಡುತ್ತವೆ.

ವಿಪ್ರತಿಪನ್ನಾರ್ಥವನ್ನು ನಿಶ್ಚಯಿಸುವುದು ಹೇಗೆ ?

तत्वप्रकाशिका – उपक्रमोपसंहारयोः श्रुतत्वे तन्निश्चायकतया लिङ्गत्वमन्यत्र चेत्प्रकरणनिश्चायकत्वेन ।

ಉಪಕ್ರಮೋಪಸಂಹಾರಗಳಲ್ಲಿ ಈ ಪ್ರಮಾಣಗಳು ಪ್ರಾಪ್ತವಾದರೆ ಉಪಕ್ರಮೋಪಸಂಹಾರಗಳ ನಿಶ್ಚಯ ಮಾಡಿ ಅನಂತರ ಅವುಗಳ ಮೂಲಕ ವಿಪ್ರತಿಪನ್ನವಾದ ಅರ್ಥವನ್ನು ನಿಶ್ಚಯ ಮಾಡಲು ಇವು ಕಾರಣವಾಗುತ್ತವೆ. ಮತ್ತು ಉಪಕ್ರಮೋಪಸಂಹಾರಗಳನ್ನು ಬಿಟ್ಟು ಬೇರೆಕಡೆ ಪ್ರಾಪ್ತವಾದರೆ

ಆವಾಗ ಪ್ರಕರಣವನ್ನು ನಿಶ್ಚಯ ಮಾಡಿ ವಿಪ್ರತಿಪನ್ನವಾದ ಅರ್ಥದ ನಿಶ್ಚಯ ಮಾಡಲು ಕಾರಣಗಳಾಗುತ್ತವೆ.

ಎಂದೇಕೆ ವಿವಕ್ಷಿಸಿದ್ದಾರೆ ?

तत्वप्रकाशिका – उपक्रमोपसंहारावपि श्रुत्यादिना सत्यामर्थसिद्धौ तात्पर्यलिङ्गे । अन्यथा प्रकरणनिश्चायकौ । समाख्यापि साक्षाद्विप्रतिपन्ननिष्ठा समाख्यात्वेनैव लिङ्गम् । अन्यथा प्रकरणनिश्चायकत्वेन भवति । लिङ्गवाक्ययोः साक्षादसाक्षात्त्वेन भेदः । 'गोत्रभिदं प्रवक्षणा अभिनत्पर्वतानाम्' इत्यादिवदिति।

ಉಪಕ್ರಮೋಪಸಂಹಾರಗಳೂ ಸಹ ತಮಗಿಂತ ಬೇರೆ ಕಡೆ ಪ್ರಾಪ್ತವಾದ ಶ್ರುತ್ಯಾದಿ-ಪ್ರಮಾಣಗಳಿಂದ, ವಿಪ್ರತಿಪನ್ನವಾದ ಅರ್ಥವನ್ನು ನಿಶ್ಚಯ ಮಾಡಿದ ಮೇಲೆ ಆ ವಿಷಯದಲ್ಲಿ ತಾತ್ಪರ್ಯಸೂಚಕವಾಗುತ್ತವೆ. ಶ್ರುತ್ಯಾದಿ ಪ್ರಮಾಣಗಳು ವಿಪ್ರತಿಪನ್ನ ವಿಷಯದಲ್ಲಿ ನಿಶ್ಚಾಯಕ-ವಾಗದಿದ್ದಾಗ ಉಪಕ್ರಮ ಮತ್ತು ಉಪಸಂಹಾರಗಳು ಪ್ರಕರಣಕ್ಕೆ ನಿಶ್ಚಾಯಕಗಳಾಗುತ್ತವೆ. ಇದರಂತೆ ಸಮಾಖ್ಯಾಪ್ರಮಾಣವೂ ಕೂಡ ವಿಪ್ರತಿಪನ್ನವಿಷಯದಲ್ಲಿ ನೇರವಾಗಿದ್ದರೆ ಸ್ವತಃ ಅದೇ ವಿಪ್ರತಿಪನ್ನವಾದ ಅರ್ಥವನ್ನು ನಿಶ್ಚಯಮಾಡುತ್ತದೆ. ಒಂದು ವೇಳೆ ಸಾಕ್ಷಾತ್ತಾಗಿ ಇಲ್ಲದಿದ್ದರೆ ಪ್ರಕರಣನಿಶ್ಚಾಯಕತ್ವದ ಮೂಲಕವಾಗಿ ವಿಪ್ರತಿಪನ್ನವಾದ ಅರ್ಥವನ್ನು ನಿಶ್ಚಯ ಮಾಡುತ್ತದೆ. ಲಿಂಗ ಮತ್ತು ವಾಕ್ಯ ಇವುಗಳೆರಡರಲ್ಲಿ ಒಂದು ನೇರವಾಗಿ ಧರ್ಮಪ್ರತಿಪಾದಕ-ವಾಗುತ್ತದೆ. ಮತ್ತೊಂದು ಪರಂಪರೆಯಿಂದ ಧರ್ಮಪ್ರತಿಪಾದಕವಾಗುತ್ತದೆ. 'ಗೋತ್ರಭಿದಂ' ಮತ್ತು 'ಅಭಿನತ್ಪರ್ವತಾನಾಮ್' ಎಂಬುದು ಉದಾಹರಣೆ. ಅಸಾಧಾರಣಧರ್ಮ ವಾಚಕವಾದ 'ಗೋತ್ರಭಿತ್' ಎಂಬ ಪದವು ಬೇರೆ ಪದಾರ್ಥವನ್ನು ಅಪೇಕ್ಷೆ ಪಡದಿರುವುದರಿಂದ 'ಇಂದ್ರ' ಎಂಬರ್ಥವನ್ನು ತಿಳಿಸುವುದರಲ್ಲಿ ಲಿಂಗವಾಗುತ್ತದೆ. 'ಅಭಿನತ್ಪರ್ವತಾನಾಮ್' ಎಂಬ ವಾಕ್ಯವು ತನ್ನಲ್ಲಿರುವ ಪದಗಳ ಅರ್ಥವನ್ನು ತಿಳಿಸಿದ ಅನಂತರ 'ಪರ್ವತಭೇಧನ' ಎಂಬ ಧರ್ಮವನ್ನು ತಿಳಿಸುತ್ತದೆ. ಆದ್ದರಿಂದ ಇದಕ್ಕೆ ವಾಕ್ಯವೆಂದು ಹೆಸರು.

ಅನೇಕ ಲಿಂಗಗಳು ಸೇರಿದಾಗ ಶ್ರುತಿಯು ಬಾಧಕವಾಗುತ್ತದಲ್ಲವೇ ?

तत्वप्रकाशिका – नन्वस्तु श्रुतेः स्वभावप्राबल्यं तथापि बाहुल्येन लिङ्गानामपि प्राबल्यादनिर्णय एवेत्यत आह – तच्चेति ।।

ಶ್ರುತಿಗೆ ಸ್ವಾಭಾವಿಕವಾಗಿ ಪ್ರಾಬಲ್ಯವಿದೆ. ಆದರೂ ಸಹ ಬಲಿಷ್ಠವೇ ಆದ ಅನೇಕ ಲಿಂಗಗಳು ಸೇರಿದಾಗ ಶ್ರುತಿಯನ್ನು ಬಾಧಿಸಬಹುದಲ್ಲವೆ? ಆದ್ದರಿಂದ ಶ್ರುತಿಯು ಸ್ವಾಭಾವಿಕವಾಗಿ ಬಲಿಷ್ಠವಾಗಿದೆ, ಲಿಂಗಗಳು ಬಾಹುಲ್ಯಪ್ರಯುಕ್ತವಾಗಿ ಬಲಿಷ್ಠವಾಗಿವೆ ಇಂತಹ ಸಂದರ್ಭಗಳಲ್ಲಿ 'ಇದಮಿತ್ಥಂ' ಎಂಬ ನಿರ್ಣಯವು ಅಸಾಧ್ಯವಲ್ಲವೆ? ಎಂಬ ಪ್ರಶ್ನೆಗೆ 'ತಚ್ಚ' ಇತ್ಯಾದಿ ಭಾಷ್ಯದಿಂದ ಉತ್ತರಿಸಿದ್ದಾರೆ.

ನಿರವಕಾಶಶ್ರುತಿಯು ಸಾವಿರ ಲಿಂಗಗಳನ್ನು ಎದುರಿಸುತ್ತದೆ

तत्वप्रकाशिका – न बाहुल्येऽपि लिङ्गानां श्रुतिसाम्येनानिर्णयः । श्रुतेर्निरवकाशत्वात् । लिङ्गानां विष्णाववकाशात् । सावकाशतादपि निरवकास्यैकस्य प्राबल्यादिति भावः ।

ಲಿಂಗಗಳು ಬಹಳವಾಗಿದ್ದರೂ ಶ್ರುತಿಯ ಸಾಮ್ಯವನ್ನು ಹೊಂದಲು ಸಾಧ್ಯವಿಲ್ಲ. ಏಕೆಂದರೆ ಶ್ರುತಿಯು ನಿರವಕಾಶವಾಗಿದೆ, ಲಿಂಗಗಳು ಸಾವಕಾಶವಾಗಿವೆ. ಸಾವಕಾಶಪ್ರಮಾಣಕ್ಕಿಂತ ನಿರವಕಾಶಕ್ಕೆ ಹೆಚ್ಚಿನ ಪ್ರಾಬಲ್ಯವಿರುವುದರಿಂದ ಅನೇಕ ಲಿಂಗಗಳನ್ನು ನಿರವಕಾಶಶ್ರುತಿಯು ಬಾಧಿಸುತ್ತದೆ ಎಂದು ತಿಳಿಯಬೇಕು.

ಪ್ರಾಣಶಬ್ದದಿಂದ ವಾಯುಶಬ್ದವನ್ನು ವಿವಕ್ಷಿಸಬೇಕು

तत्वप्रकाशिका – श्रुत्यन्तरेण प्राणनिष्ठतया लिङ्गोक्तेः । कथं तद्विष्णोरित्यत आह – तस्यैवेति ।। वायुत्वमत्रोपलक्ष्यते ।।

'ಏವಮೇಷ ಪ್ರಾಣಃ' ಇತ್ಯಾದಿ ಶ್ರುತಿಗಳಿಂದಲೇ 'ಲಿಂಗಗಳು ಮುಖ್ಯಪ್ರಾಣನಲ್ಲಿವೆ' ಎಂದು ಸಿದ್ಧವಾಗುತ್ತಿರುವುದರಿಂದ ಲಿಂಗಗಳು ವಿಷ್ಣುವಿನಲ್ಲಿ ಹೇಗೆ ಸಾವಕಾಶವಾಗುತ್ತವೆ? ಎಂಬ ಪ್ರಶ್ನೆಗೆ

'ತಸ್ಯೈವ' ಇತ್ಯಾದಿ ಭಾಷ್ಯದಿಂದ ಉತ್ತರಿಸಿದ್ದಾರೆ. ಇಲ್ಲಿರುವ 'ಪ್ರಾಣ' ಶಬ್ದದಿಂದ ಉಪಲಕ್ಷಣಯಾ 'ವಾಯು' ಶಬ್ದವನ್ನೂ ಕೂಡ ತಿಳಿಯಬೇಕು.

ಮಂತ್ರಾಲಯ ಪ್ರಭುಗಳಾದ ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ವಿರಚಿತವಾದ

ಭಾವದೀಪ

ಅಕ್ಷರಾಧಿಕರಣನ್ಯಾಯದಿಂದ ಉಭಯಸಾಧಾರಣ್ಯ ಸಮರ್ಥನೆ

भावदीपः – ।। शब्दादेव प्रमितः ।।

अत्र न्यायविवरणे पुनरीशानशब्द इत्येतावन्मात्रोक्तावपि प्राणप्रेरक इति सङ्क्षेपभाष्योक्त्या सूचितम् 'ऊर्ध्वं प्राणमुन्नयतीति भाष्योक्तवाक्यशेषलब्धं धर्ममादाय साधारण्यमक्षरनयन्यायेनाह – प्रेरकत्वेति ।।

'ಶಬ್ದಾದೇವ ಪ್ರಮಿತಃ' ಎಂಬುದಾಗಿ ವಾಮನಾಧಿಕರಣವು ಪ್ರಾರಂಭವಾಗುತ್ತಿದೆ. ಈ ಅಧಿಕರಣದಲ್ಲಿ 'ಈಶಾನ' ಎಂಬ ಶಬ್ದವನ್ನು ಮಹಾವಿಷ್ಣುವಿನಲ್ಲಿ ಸಮನ್ವಯ ಮಾಡುತ್ತಿದ್ದಾರೆ. 'ಪ್ರೇರಕತ್ವ' ಎಂಬ 'ಈಶಾನ' ಶಬ್ದದ ಪ್ರವೃತ್ತಿನಿಮಿತ್ತವು ಮುಖ್ಯಪ್ರಾಣ ಹಾಗೂ ವಿಷ್ಣು ಇಬ್ಬರಲ್ಲಿಯೂ ಸಾಧಾರಣವಾಗಿದೆ ಎಂದು ಗೀತೆಯಲ್ಲಿ ಹೇಳಿದ್ದಾರೆ. ನ್ಯಾಯವಿವರಣದಲ್ಲಿ 'ಈಶಾನಶಬ್ದಃ' ಎಂದಷ್ಟೇ ಹೇಳಿದ್ದರೂ, ಅಣುಭಾಷ್ಯದಲ್ಲಿ 'ಪ್ರಾಣಪ್ರೇರಕಃ' ಎಂದು ಹೇಳಿದ್ದರಿಂದ ಪ್ರೇರಕತ್ವವು 'ಈಶಾನ' ಶಬ್ದದ ಪ್ರವೃತ್ತಿನಿಮಿತ್ತವೆಂದು ಸೂಚಿಸಿದಂತಾಗುತ್ತದೆ. ಮತ್ತು 'ಊರ್ಧ್ವಂ ಪ್ರಾಣಮುನ್ನಯತಿ' ಎಂಬ ಭಾಷ್ಯದ ವಾಕ್ಯಶೇಷದಿಂದ ಪ್ರೇರಕತ್ವವು ತಿಳಿಯುತ್ತದೆ. ಹೀಗೆ ಪ್ರೇರಕತ್ವ ಎಂಬ ಧರ್ಮವನ್ನು ವಿವಕ್ಷಿಸಿ ಅಕ್ಷರಾಧಿಕರಣದ ನ್ಯಾಯದಿಂದ ಇದು ಉಭಯಸಾಧಾರಣವಾಗಿದೆಯೆಂದು ತೋರಿಸುತ್ತಿದ್ದಾನೆ 'ಪ್ರೇರಕತ್ವಸಾಮ್ಯೇನ' ಇತ್ಯಾದಿ ಟೀಕೆಯಿಂದ.

ವಿಶೇಷವಿಚಾರ - 'ಶಬ್ದಾದೇವ ಪ್ರಮಿತಃ' ಎಂಬ ಸೂತ್ರದಿಂದ ವಾಮನಾಧಿಕರಣವು ಪ್ರಾರಂಭವಾಗುತ್ತಿದೆ.

ಪ್ರಶ್ನೆ - 'ಈಶಾನ' ಶಬ್ದವು ವಿಷ್ಣುಹಾಗೂ ವಾಯು ಇಬ್ಬರಲ್ಲಿ ಸಾಧಾರಣವಾಗಿದೆಯೆಂದು ವಿವಕ್ಷಿಸಿ ಸಮನ್ವಯವನ್ನು ಮಾಡುತ್ತಿದ್ದಾರೆ. ಪ್ರೇರಕತ್ವವು 'ಈಶಾನ' ಶಬ್ದದ ಪ್ರವೃತ್ತಿನಿಮಿತ್ತವಾಗಿದೆ. ಅಸಂಕುಚಿತವಾದ ಪ್ರೇರಕತ್ವವನ್ನು ವಿವಕ್ಷಿಸಿದರೆ ಕೇವಲ ವಾಯುದೇವರಲ್ಲಿ 'ಈಶಾನ' ಶಬ್ದವು ಬರುವುದಿಲ್ಲ. ಸಂಕುಚಿತವಾದ ಪ್ರೇರಕತ್ವವನ್ನು ವಿವಕ್ಷಿಸಿದರೆ ಉಳಿದ ಜೀವರಿಗೂ 'ಈಶಾನ' ಶಬ್ದ ಪ್ರತಿಪಾದ್ಯತ್ವವನ್ನು ಹೇಳಬಹುದು. ಆದ್ದರಿಂದಲೇ ರುದ್ರದೇವರನ್ನು ವಿವಕ್ಷಿಸಿದಾಗ 'ಈಶಾನ' ಶಬ್ದದ ರೂಢಿಯನ್ನೂ ಸಹ ಅಧಿಕವಾಗಿ ಹೇಳಿದಂತಾಗುತ್ತದೆ. ಹೀಗಿರುವಾಗ ವಿಷ್ಣು ಹಾಗೂ ವಾಯು ಇಬ್ಬರಲ್ಲಿ ಮಾತ್ರ ಸಾಧಾರಣವಾಗಿದೆಯೆಂದು ಹೇಗೆ ಹೇಳಿದರು?

ಉತ್ತರ - ಅಸಂಕುಚಿತವಾದ ಪ್ರೇರಕತ್ವವನ್ನು 'ಈಶಾನ' ಶಬ್ದದ ಪ್ರವೃತ್ತಿನಿಮಿತ್ತವೆಂದು ವಿವಕ್ಷಿಸದೇ ಕಿಂಚಿತ್ ಸಂಕುಚಿತತ್ವವನ್ನು ಪ್ರವೃತ್ತಿನಿಮಿತ್ತವೆಂದು ವಿವಕ್ಷಿಸಬೇಕು. ಕಿಂಚಿತ್ ಸಂಕುಚಿತತ್ವವೆಂಬ ಪ್ರವೃತ್ತಿನಿಮಿತ್ತವು ವಿಷ್ಣುವನ್ನು ಬಿಟ್ಟು ವಾಯುದೇವರಲ್ಲಿ ಮಾತ್ರ ಬರುತ್ತದೆ. ಎಂದರೆ ಉಳಿದ ರುದ್ರಾದಿ ದೇವತೆಗಳಲ್ಲಿ ಅತ್ಯಂತ ಸಂಕುಚಿತವಾದ ಪ್ರೇರಕತ್ವವೇ ಬರುತ್ತದೆ ಹೊರತು, ಕಿಂಚಿತ್ ಸಂಕುಚಿತವಾದ ಪ್ರೇರಕತ್ವವು ಬರುವುದಿಲ್ಲ ಎಂದರ್ಥ. ಮತ್ತು ಈಶಾನತ್ವದ ಜೊತೆಗೆ ಸಹಚರಿತವಾದ ಪ್ರಾಣಾದಿವ್ಯವಸ್ಥಾಪಕತ್ವವೂ ಕೂಡ ರುದ್ರಾದಿ ದೇವತೆಗಳಲ್ಲಿ ಅತ್ಯಂತ ಅಸಂಭಾವಿತವಾಗಿದೆ. ಆದ್ದರಿಂದ 'ಈಶಾನ' ಎಂಬ ಶಬ್ದವು ವಿಷ್ಣು ಹಾಗೂ ವಾಯು ಈ ಉಭಯರಲ್ಲಿ ಮಾತ್ರ ಸಾಧಾರಣವಾಗಿದೆಯೆಂದು ತಿಳಿಯಬೇಕು.

'ತಮಾತ್ಮಸ್ಥಂ ಯೇऽನುಪಶ್ಯಂತಿ ಧೀರಾಃ ತೇಷಾಂ ಸುಖಂ ಶಾಶ್ವತಮ್' ಎಂಬ ಶ್ರುತಿಯಲ್ಲಿ ಹಿಂದೆ ವಿಷ್ಣುವಿನ ಜ್ಞಾನದಿಂದಲೇ ಮೋಕ್ಷವಾಗುತ್ತದೆಂದು ಹೇಳಿದರು,

ಇದು ತಪ್ಪು. 'ವಿಶ್ವೇದೇವಾ ಉಪಾಸತೇ' ಎಂಬ ಶ್ರುತಿಯಲ್ಲಿ ಮುಖ್ಯಪ್ರಾಣನಲ್ಲಿಯೇ ದೇವೋಪಾಸ್ಯತ್ವವು ತಿಳಿಯುತ್ತಿದೆ. ಸಮಸ್ತ ಐಶ್ವರ್ಯವನ್ನು ಹೊಂದಿರುವಂತಹ ದೇವತೆಗಳು ಮೋಕ್ಷವನ್ನು ಬಿಟ್ಟು ಬೇರೆ ಪ್ರಯೋಜನಕ್ಕಾಗಿ ಉಪಾಸನೆ ಮಾಡಲಾರರು. ಆದ್ದರಿಂದ ವಾಯುದೇವರ ಜ್ಞಾನದಿಂದಲೂ ಮೋಕ್ಷವಾಗುತ್ತದೆಂದು ತಿಳಿಯುತ್ತದೆ.

ಯಾರದೋ ಉಪಾಸನೆಯಿಂದ ಯಾರದ್ದೋ ಜ್ಞಾನ ಬರುವುದಿಲ್ಲ. ಆದ್ದರಿಂದ ಮತ್ತೊಬ್ಬನ (ವಾಯುವಿನ) ಉಪಾಸನೆಯಿಂದ ವಿಷ್ಣುವಿನ ಜ್ಞಾನವು ಬರುವುದಿಲ್ಲ. ಆದ್ದರಿಂದ ವಿಷ್ಣುಜ್ಞಾನದಿಂದಲೇ ಮೋಕ್ಷವಾಗುವುದಿಲ್ಲ ಎಂದು. ಹಿಂದಿನ ಅಧಿಕರಣದ ಸಿದ್ಧಾಂತವನ್ನು ಆಕ್ಷೇಪ ಮಾಡಿ ಪೂರ್ವಪಕ್ಷವನ್ನು ಮಾಡುತ್ತಿರುವುದರಿಂದ ಆನಂತರ್ಯಸಂಗತಿಯನ್ನು ತಿಳಿಯಬೇಕು.

ಈಶಾನ ಶಬ್ದವು ವಾಯು ಹಾಗೂ ವಿಷ್ಣು ಇಬ್ಬರಲ್ಲಿಯೂ ಪ್ರಸಿದ್ಧ

ಭಾವದೀಪಃ – उपलक्षणमेतत् । रूढिसाम्येन चेत्यपि ध्येयम् । 'ईशानः प्राणदः प्राणः' इति विष्णाविव 'ईशानो मारुतः प्राणः वायुर्जिष्णुस्तथैव च' इति प्रथमाध्यायबृहद्भाष्योक्त्या वायावपि रूढेः सत्वात् ।

ಮುಖ್ಯಪ್ರಾಣ ಹಾಗೂ ಮಹಾವಿಷ್ಣು ಇಬ್ಬರಲ್ಲಿಯೂ ಪ್ರೇರಕತ್ವಧರ್ಮವು ಸಾಧಾರಣವಾಗಿದೆಯೆಂದು ಟೀಕೆಯಲ್ಲಿ ಹೇಳಿದ್ದು ಉಪಲಕ್ಷಣವಾಗಿದೆ. 'ಈಶಾನ' ಶಬ್ದದ ರೂಢಿಯೂ ಸಹ ಇಬ್ಬರಲ್ಲಿ ಸಾಧಾರಣವಾಗಿದೆ. ಏಕೆಂದರೆ 'ईशानः प्राणदः प्राणः' ಎಂಬ ವಿಷ್ಣುಸಹಸ್ರನಾಮದ ಮಾತಿನಿಂದ ಮಹಾವಿಷ್ಣುವಿನಲ್ಲಿ ಈಶಾನಶಬ್ದದ ರೂಢಿಯು ಪ್ರಸಿದ್ಧವಾದರೆ 'ईशानो मारुतः प्राणः वायुर्जिष्णुस्तथैव च' ಎಂಬ ಬೃಹದಾರಣ್ಯಕಭಾಷ್ಯದ ಪ್ರಥಮಾಧ್ಯಾಯದಲ್ಲಿ ಹೇಳಿದ ಮಾತಿನಂತೆ ಮುಖ್ಯಪ್ರಾಣದೇವರಲ್ಲಿಯೂ ಕೂಡ 'ಈಶಾನ' ಶಬ್ದದ ರೂಢಿಯು ಪ್ರಸಿದ್ಧವಾಗಿದೆ.

ಮೂರನೆಯ ಪಾದದಲ್ಲಿ ಈ ಅಧಿಕರಣವು ಸಂಗತ

ಭಾವದೀಪಃ – सङ्गतिपरत्वेन तावद् भाष्यं व्याकुर्वन् प्रतीयत इत्यन्तस्यार्थमाह – अथात इत्यादिना ।।

ಹೀಗೆ ಉಭಯತ್ರಪ್ರಸಿದ್ಧವಾದ 'ಈಶಾನ' ಶಬ್ದದ ಸಮನ್ವಯವನ್ನು ಈ ಅಧಿಕರಣದಲ್ಲಿ ಮಾಡುತ್ತಿರುವುದರಿಂದ ಮೂರನೇ ಪಾದದಲ್ಲಿ ಈ ಅಧಿಕರಣವು ಸಂಗತವಾಗಿದೆ ಎಂದು ಭಾಷ್ಯವನ್ನು ವ್ಯಾಖ್ಯಾನಿಸುವವರಾಗಿ 'ಪ್ರತೀಯತೇ' ಎಂಬಲ್ಲಿಯ ತನಕ ಇರುವ ಭಾಷ್ಯದ ವಾಕ್ಯಗಳ ಅರ್ಥವನ್ನು 'ಅಥಾತಃ' ಇತ್ಯಾದಿ ಟೀಕೆಯಿಂದ ತೋರಿಸುತ್ತಿದ್ದಾರೆ.

ಉಪಾಸನಾವಾಕ್ಯದ ಹಿಂದಿನ ವಾಕ್ಯವನ್ನು ಉಲ್ಲೇಖಿಸಲು ಕಾರಣ

ಭಾವದೀಪಃ – ईशानस्येति ।। तेन भाष्ये कश्चिदित्यस्यार्थो दर्शितः । सङ्गत्यादिद्योतनाय भाष्ये उपासनावाक्योक्तावपि समन्वेतव्यशब्दादि दर्शयितुं पूर्ववाक्यं चाऽह – अङ्गुष्ठेति ।।

'ಈಶಾನಸ್ಯ' ಎಂದು ಹೇಳಿದ್ದರಿಂದ ಭಾಷ್ಯದಲ್ಲಿರುವ 'ಕಶ್ಚಿತ್' ಎಂಬ ಪದದ ಅರ್ಥವನ್ನು ಹೇಳಿದಂತಾಯಿತು. ಭಾಷ್ಯದಲ್ಲಿ ಸಂಗತಿಯನ್ನು ತೋರಿಸುವುದಕ್ಕಾಗಿ ಉಪಾಸನಾವಾಕ್ಯವನ್ನು ಹೇಳಿರುತ್ತಾರೆ. ಆದರೆ ಸಮನ್ವಯ ಮಾಡಬೇಕಾದ ಶಬ್ದವನ್ನು ತೋರಿಸುವುದಕ್ಕಾಗಿ ಟೀಕೆಯಲ್ಲಿ ಉಪಾಸನಾವಾಕ್ಯದ ಹಿಂದಿನ ವಾಕ್ಯವನ್ನು 'ಅಂಗುಷ್ಠ' ಇತ್ಯಾದಿಯಾಗಿ ಹೇಳಿದ್ದಾರೆ.

'ವಿಶ್ವೇದೇವಾಃ' ಎಂದಷ್ಟೇ ಹೇಳಿದ್ದರೆ ಸಾಕಿತ್ತಲ್ಲವೇ ?

भावदीपः – इत्यादाविति ।। प्राणोन्नयनादिप्रतिपादकवाक्य इति योज्यम्। तेनोक्तेति युक्तम् । भाष्ये विश्वेदेवा इत्यादावेव वाच्ये ऊर्ध्वमित्यादि पूर्वशेषोक्तेरुपयोगोऽग्रे व्यक्तः ।।

'ಇತ್ಯಾದೌ' ಎಂಬಲ್ಲಿ 'ಪ್ರಾಣೋನ್ನಯನಾದಿಪ್ರತಿಪಾದಕವಾಕ್ಯೇ' ಎಂಬುದನ್ನು ಯೋಜನೆ ಮಾಡಿಕೊಳ್ಳಬೇಕು ಆದ್ದರಿಂದ 'ಉಕ್ತ' ಹೇಳಲಟ್ಟಿದೆ ಎಂದು ಹೇಳಿದ್ದು ಸಂಗತವಾಗುತ್ತದೆ. ಭಾಷ್ಯದಲ್ಲಿ 'ವಿಶ್ವೇದೇವಾಃ' ಎಂದಷ್ಟೇ ಹೇಳಿದ್ದರೆ ಸಾಕಾಗುತ್ತಿತ್ತು. 'ಊರ್ಧ್ವಮ್' ಇತ್ಯಾದಿಯಾದ ಹಿಂದಿನ ವಾಕ್ಯವನ್ನು ಏಕೆ ಹೇಳಿದ್ದಾರೆ ಎಂಬುದರ ಉಪಯೋಗವನ್ನು ಮುಂದೆ ಸ್ಪಷ್ಟಪಡಿಸುತ್ತೇವೆ.

ಪ್ರಾಣವ್ಯವಸ್ಥಾಪಕತ್ವಾದಿ ಧರ್ಮಗಳು ಮುಖ್ಯಪ್ರಾಣದೇವರದ್ದು

भावदीपः – यदाहुरिति ।। अनुभाष्ये तृतीये सर्ववेदान्तनय इत्यर्थः । स चेत्यादेर्भावमाह – स च यदीति ।। वक्ष्यमाणदिशा प्राणव्यवस्थापकत्वादिना वायुः स्यादित्यर्थः । उक्तमित्यन्तवाक्यस्य भावमाह – तदेति ।।

'ಯದಾಹುಃ' ಎಂದರೆ ಅನುವ್ಯಾಖ್ಯಾನದ ಮೂರನೇ ಅಧ್ಯಾಯದ ಸರ್ವವೇದಾಂತಾಧಿಕರಣದಲ್ಲಿ ಹೇಳಿದ್ದಾರೆಂದು ಅರ್ಥ. 'ಸ ಚ' ಇತ್ಯಾದಿಭಾಷ್ಯದ ಅಭಿಪ್ರಾಯವನ್ನು 'ಸ ಚ ಯದಿ' ಇತ್ಯಾದಿ ಶ್ರುತಿಯಿಂದ ಸ್ಪಷ್ಟಪಡಿಸುತ್ತಿದ್ದಾರೆ. ಮುಂದೆ ಹೇಳುವಂತೆ ಪ್ರಾಣವ್ಯವಸ್ಥಾಪಕತ್ವಾದಿ ಧರ್ಮಗಳಿರುವುದರಿಂದ ಮುಖ್ಯಪ್ರಾಣದೇವರೂ ಕೂಡ ಪ್ರತಿಪಾದ್ಯರಾಗಬಹುದು ಎಂದರ್ಥ. 'ಉಕ್ತಮ್' ಎಂಬಲ್ಲಿಯ ತನಕ ಇರುವ ಭಾಷ್ಯದ ಅಭಿಪ್ರಾಯವನ್ನು 'ಯದಾ' ಇತ್ಯಾದಿಯಾಗಿ ಹೇಳುತ್ತಿದ್ದಾರೆ.

'ಈಶಾನಃ' ಎಂಬ ಪದವನ್ನು ಅನುಷಂಗ ಮಾಡಬೇಕು

ಭಾವದೀಪಃ – इत्यवश्यमित्युक्तार्थम् । निर्णेयः ईशान इत्यनुषङ्गः । श्रुतौ देवमात्रोक्तावपि कैमुत्यलब्धं मत्वाऽह – अधिकारिसर्वेति ।।

'ಇತ್ಯವಶ್ಯಮ್' ಎಂಬುದು ಹಿಂದೆ ಹೇಳಿದ್ದರ ಸಮರ್ಥನೆಗಾಗಿ ಎಂದು ತಿಳಿಯಬೇಕು. 'ನಿರ್ಣೇಯಃ' ಎಂಬ ಪದದ ನಂತರ 'ಈಶಾನಃ' ಎಂಬುದನ್ನು ಅನುಷಂಗ ಮಾಡಿಕೊಳ್ಳಬೇಕು. ಶ್ರುತಿಗಳಲ್ಲಿ ದೇವತೆಗಳಿಂದಷ್ಟೇ ಉಪಾಸ್ಯನಾಗಿದ್ದಾನೆಯೆಂದು ಹೇಳಿದ್ದರೂ ಕೈಮುತ್ಯನ್ಯಾಯದಿಂದ ಅಧಿಕಾರಿಗಳಾದ ಸಕಲ ಜೀವರಿಂದಲೂ ಉಪಾಸ್ಯನಾಗಿದ್ದಾನೆಂಬುದು ಲಭ್ಯವಾಗುತ್ತದೆ. ಅದನ್ನೇ ಟೀಕೆಯಲ್ಲಿ 'ಅಧಿಕಾರಿ-ಸರ್ವೋಪಾಸ್ಯ' ಎಂದು ಹೇಳಿರುತ್ತಾರೆ.

ಸಕಲೋಪಾಸ್ಯತ್ವವು ವಾಯುದೇವರಲ್ಲಿದೆ

ಭಾವದೀಪಃ – 'इयदामननादित्यादौ रुद्रादप्यधिकाधिकारिणो वक्ष्यमाणत्वादिति भावः । स्वेतरेत्यधिकारिविशेषणं बोध्यम् । तेन न वायावप्यनुपपत्तिरिति ।

'ಇಯದಾಮನಾನಾದ್' ಎಂಬ ಅಧಿಕರಣದಲ್ಲಿ ರುದ್ರಾದಿಗಳಿಗಿಂತಲೂ ಹೆಚ್ಚಿನ ಯೋಗ್ಯತೆಯುಳ್ಳ ಅಧಿಕಾರಿಗಳು ಇರುತ್ತಾರೆಂದು ಸಮರ್ಥಿಸಲಾಗುತ್ತದೆ. ಆದ್ದರಿಂದ ರುದ್ರದೇವರನ್ನು ಇಲ್ಲಿ 'ಈಶಾನ' ಶಬ್ದದಿಂದ ವಿವಕ್ಷಿಸಲು ಬರುವುದಿಲ್ಲ. 'ಸ್ವೇತರ' ಎಂಬುದನ್ನು ಅಧಿಕಾರಿಯಲ್ಲಿ ವಿಶೇಷಣವನ್ನಾಗಿ ವಿವಕ್ಷಿಸಬೇಕು. ಆದ್ದರಿಂದ ವಾಯುದೇವರಲ್ಲೂ ಸಕಲೋಪಾಸ್ಯತ್ವವು ಬರುವುದಿಲ್ಲವೆಂಬ ಆಕ್ಷೇಪಕ್ಕೆ ಅವಕಾಶವಿಲ್ಲ. ಆದ್ದರಿಂದ ರುದ್ರದೇವರಲ್ಲಿ ಸರ್ವದೇವೋಪಾಸ್ಯತ್ವವೆಂಬ ಲಿಂಗವು ಇಲ್ಲದ ಕಾರಣ ಸಂಶಯಕೋಟಿಯಲ್ಲಿ ಅವರನ್ನು ಸೇರಿಸಲಾಗದು.

ಉಳಿದವರಲ್ಲಿ ಈ ಲಿಂಗವಿಲ್ಲ

ಭಾವದೀಪಃ – एतेन प्रेरकत्वस्यान्यत्रापि वृत्तेः कथं द्वयसाधारण्यमित्यपि शङ्काऽपास्ता ।

ಹೀಗೆ ಹೇಳಿದ್ದರಿಂದ ಪ್ರೇರಕತ್ವಧರ್ಮವು ಬೇರೆಯವರಲ್ಲಿಯೂ ಇರುವಾಗ ವಿಷ್ಣು ಹಾಗೂ ವಾಯು ಉಭಯಮಾತ್ರ ಸಾಧಾರಣವಾಗಿದೆಯೆಂದು ಹೇಗೆ ಹೇಳುತ್ತೀರಿ? ಎಂಬ ಶಂಕೆಯನ್ನು

ನಿರಾಕರಿಸಿದಂತಾಗುತ್ತದೆ. ಏಕೆಂದರೆ ಉಳಿದವರಲ್ಲಿ ಸರ್ವದೇವೋಪಾಸ್ಯತ್ವ ಮೊದಲಾದ ಲಿಂಗಗಳು ಇರುವುದಿಲ್ಲ.

ವಾಮನನಲ್ಲಿ ಪ್ರಾಣಪ್ರೇರಕತ್ವಾದಿಗಳು ಪ್ರತೀತವಾಗಿಲ್ಲ

भावदीपः – ननूर्ध्वं प्राणमुन्नयतीत्यत्र कर्तुरन्यस्याप्रतीतेः प्रकृतेशानस्यैव कर्तृत्वेनान्वयेऽपि नोत्तरार्धे । तत्र 'वामनमिति श्रुतेः अन्यस्यैवोपास्यत्व प्रतीतेः । अस्य तदप्रतीतेश्च कथं तल्लिङ्गतयेत्युक्तिरित्यत आह – य इति ।।

ಪ್ರಶ್ನೆ - 'ಊರ್ಧ್ವಂ ಪ್ರಾಣಮುನ್ನಯತಿ' ಎಂಬ ಕಾಠಕೋಪನಿಷತ್ತಿನ ಶ್ಲೋಕದಲ್ಲಿ ಪ್ರಾಣಪ್ರೇರಕನಾದ ಬೇರೆ ಕರ್ತೃ ಕಾಣಿಸುತ್ತಿಲ್ಲ, ಆದ್ದರಿಂದ ಪ್ರಕೃತನಾದ ಈಶಾನನೇ ಕರ್ತೃವೆಂದು ತಿಳಿಯುತ್ತದೆ. ಆದರೆ 'ಮಧ್ಯೇ ವಾಮನಮ್' ಇತ್ಯಾದಿ ಉತ್ತರಾರ್ಧದಲ್ಲಿ ಈಶಾನನೇ ಕರ್ತೃ ಎಂದು ವಿವಕ್ಷಿಸಲಾಗದು. ಏಕೆಂದರೆ 'ವಾಮನಮ್' ಎಂಬುದಾಗಿ ಈಶಾನನಿಗಿಂತ ಬೇರೆಯವನಾದ ವಾಮನನನ್ನೇ ಉಪಾಸ್ಯನೆಂದು ಹೇಳಲಾಗಿದೆ. ಇಂತಹ ವಾಮನನಲ್ಲಿ ಪ್ರಾಣಪ್ರೇರಕತ್ವಾದಿಗಳು ಪ್ರತೀತವಾಗುತ್ತಿಲ್ಲ. ಹೀಗಿರುವಾಗ ಪ್ರೇರಕತ್ವವು ಈಶಾನನ ಲಿಂಗವಾಗಿದೆಯೆಂದು ಹೇಗೆ ಹೇಳುತ್ತೀರಿ? ಎಂಬ ಪ್ರಶ್ನೆಗೆ ಟೀಕೆಯಲ್ಲಿ 'ಯಃ ಉನ್ನಯತಿ' ಇತ್ಯಾದಿಯಾಗಿ ಅನ್ವಯಕ್ರಮವನ್ನು ತೋರಿಸಿದ್ದಾರೆ. ಅಂದರೆ 'ಯಃ' ಎಂಬ ಪದವನ್ನು ಉತ್ತರಾರ್ಧದಲ್ಲಿ 'ತಮ್' ಎಂಬ ಪದವನ್ನು ಅನುವೃತ್ತಿ ಮಾಡಿಕೊಳ್ಳಬೇಕು.

'ಮಧ್ಯೇ ವಾಮನಮ್' ಎಂಬಲ್ಲಿ ಮಾಡಬೇಕಾದ ಪ್ರತ್ಯಭಿಜ್ಞಾನ

भावदीपः – अन्यथा समभिव्याहारेण प्रतीतैकवाक्यताभङ्गप्रसङ्गात् । 'मध्य आत्मनीत्युक्तस्य मध्ये वामनमिति प्रत्यभिज्ञानाच्चेत्यर्थः ।

ಹೀಗೆ ಅನ್ವಯವನ್ನು ಮಾಡದಿದ್ದರೆ 'ಸಮಭಿವ್ಯಾಹಾರ'ದಿಂದ ಪ್ರತೀತವಾಗುವ ಏಕವಾಕ್ಯತ್ವಕ್ಕೆ ಭಂಗ ಬರುತ್ತದೆ. 'ಮಧ್ಯೇ ಆತ್ಮನಿ' ಎಂಬಲ್ಲಿ ಹೇಳಿದವನನ್ನೇ 'ಮಧ್ಯೇ ವಾಮನಮ್' ಎಂಬುವುದರಿಂದ ಪ್ರತ್ಯಭಿಜ್ಞಾನ ಮಾಡಬೇಕು.

ಅಧಿಕರಣದ ಪೂರ್ವಪಕ್ಷಾದಿಗಳು

भावदीपः – पूर्वपक्षतद्युक्तितत्फलपरत्वेनापि भाष्यं व्याचक्षाणः स चेत्याद्यंशमवतार्य 'स च वायुरेवेति प्रतिज्ञांशार्थमाह सयुक्तिकमिति ।।

ಈ ಅಧಿಕರಣದ ಪೂರ್ವಪಕ್ಷ, ಪೂರ್ವಪಕ್ಷಯುಕ್ತಿ, ಪೂರ್ವಪಕ್ಷಫಲ ಇವುಗಳನ್ನು ತೋರಿಸುವಂತೆ ಭಾಷ್ಯಗಳಲ್ಲಿ ವ್ಯಾಖ್ಯಾನ ಮಾಡುವವರಾಗಿ 'ಸ ಚ' ಎಂಬ ಭಾಷ್ಯದ ಮಾತನ್ನು ಅನುವಾದ ಮಾಡುತ್ತಾ 'ಸ ಚ ವಾಯುರೇವ' ಎಂಬ ಪ್ರತಿಜ್ಞೆಯ ಅರ್ಥವನ್ನು ಸ್ಪಷ್ಟಪಡಿಸುತ್ತಿದ್ದಾರೆ 'ಸಯುಕ್ತಿಕಮ್' ಇತ್ಯಾದಿಯಾಗಿ.

'ಏವಮೇವೈಷ ಪ್ರಾಣಃ' ಇತ್ಯಾದಿ ವಾಕ್ಯತ್ರಯಗಳು

भावदीपः – स चेत्यनुवादः ईशान इति व्याख्या । कुतः इत्याकाङ्क्षायाम् 'एवमेवैष प्राणः' इत्यादिवाक्यत्रयं श्रवणोपलक्षणमुपेत्य तन्व्याचष्टे – ईशानस्येति।।

ಟೀಕೆಯಲ್ಲಿರುವ 'ಸ ಚ' ಎಂಬುದು ಭಾಷ್ಯದ ಅನುವಾದವಾಗಿದೆ. 'ಈಶಾನ' ಎಂಬುದು ಅದರ ವ್ಯಾಖ್ಯಾನವಾಗಿದೆ. ವಾಯುದೇವರೇ 'ಈಶಾನ' ಶಬ್ದಪ್ರತಿಪಾದ್ಯರೆಂದು ಏಕೆ ಒಪ್ಪಬೇಕು? ಎಂಬ ಆಕಾಂಕ್ಷೆಗೆ 'ಏವಮೇವೈಷ ಪ್ರಾಣಃ' ಇತ್ಯಾದಿ ಮೂರುವಾಕ್ಯಗಳಲ್ಲಿರುವ ಮಾತು ಉಪಲಕ್ಷಣವಾಗಿದೆ ಎಂದು ತಿಳಿದು ಶ್ರುತಿಯಲ್ಲಿ ವ್ಯಾಖ್ಯಾನಿಸುತ್ತಿದ್ದಾರೆ 'ಈಶಾನಸ್ಯ' ಇತ್ಯಾದಿಯಾಗಿ.

'ಊರ್ಧ್ವಂ' ಇತ್ಯಾದಿಯಾಗಿ ಹೇಳಿದ್ದರ ಉಪಯೋಗ

भावदीपः – अनेन ईशान एवात्र वाक्ये कर्तृत्वेनान्वेतीति दर्शितम् ।। इति वाक्य इति ।। एतेन भाष्ये पूर्वम् ऊर्ध्वमित्यादि त्रिपाद्युक्तेरुपयोगो दर्शितः ।

ಹೀಗೆ ಹೇಳಿದ್ದರಿಂದ 'ಊರ್ಧ್ವಂ ಪ್ರಾಣಮ್' ಎಂಬ ವಾಕ್ಯದಲ್ಲಿ ಈಶಾನನೇ ಕರ್ತೃವಾಗಿದ್ದಾನೆಂದು ಹೇಳಿದಂತಾಯಿತು. 'ಇತಿ ವಾಕ್ಯೇ' ಎಂದು ಹೇಳಿದ್ದರಿಂದ ಭಾಷ್ಯದಲ್ಲಿ 'ಊರ್ಧ್ವಂ' ಇತ್ಯಾದಿಯಾಗಿ ಮೂರುಭಾಗಗಳನ್ನು ಹೇಳಿದ್ದರ ಉಪಯೋಗವನ್ನು ತಿಳಿಸಿದಂತಾಯಿತು.

'ಊರ್ಧ್ವಂ ಪ್ರಾಣಮುನ್ನಯತಿ' ಇತ್ಯಾದಿಗಳು
ಮುಖ್ಯಪ್ರಾಣನಲ್ಲಿ ಮಾತ್ರ ಸಮನ್ವಯವಾಗುತ್ತದೆ

ಭಾವದೀಪಃ – ಇದಾನೀಮ್ 'ಊರ್ಧ್ವಂ ಪ್ರಾಣಮುನ್ನಯತೀತ್ಯಾದಿಲಿಙ್ಗಾನಾಂ ಪ್ರಾಣಾದನ್ಯತ್ರಾವ ಕಾಶರಾಹಿತ್ಯಮಿತ್ಯನ್ಯತ್ರೋಕ್ತಲಿಙ್ಗನಿರವಕಾಶತ್ವವಿವರಣಪರತಯಾ 'ಏವಮೇವೈಷಃ' ಇತ್ಯಾದಿ ಉಪಾಸ್ಯತ್ವಾಚ್ಚ' ಇತ್ಯನ್ತಂ ಭಾಷ್ಯಂ ಶಙ್ಕಾಪೂರ್ವಂ ವ್ಯಾಚಷ್ಟೇ – ನಚೇತಿ ।।

'ಊರ್ಧ್ವಂ ಪ್ರಾಣಮುನ್ನಯತಿ' ಇತ್ಯಾದಿ ವಾಕ್ಯದಿಂದ ಹೇಳಲ್ಪಟ್ಟ ಲಿಂಗಗಳು ಮುಖ್ಯಪ್ರಾಣದೇವರಲ್ಲಿ ಬಿಟ್ಟು ಬೇರೆ ಯಾರಲ್ಲಿಯೂ ಇರುವುದಿಲ್ಲವೆಂದು ನಿರವಕಾಶತ್ವವನ್ನು ಬೇರೆಕಡೆ ಹೇಳಲಾಗಿದೆ. ಅದನ್ನೇ ಈಗ ವಿವರಣೆ ಮಾಡುವ ಮೂಲಕ 'ಏವಮೇವೈಷಃ' ಎಂಬಲ್ಲಿಂದ ಪ್ರಾರಂಭಿಸಿ 'ಉಪಾಸ್ಯತ್ವಾಚ್ಚ' ಎಂಬಲ್ಲಿಯ ತನಕ ಇರುವ ಭಾಷ್ಯವನ್ನು ಆಕ್ಷೇಪ ಪರವಾಗಿದೆಯೆಂದು ವ್ಯಾಖ್ಯಾನ ಮಾಡುತ್ತಿದ್ದಾರೆ 'ನಚ' ಇತ್ಯಾದಿ ಗ್ರಂಥದಿಂದ.

ಭಾಷ್ಯದಲ್ಲಿರುವ 'ಏವಂ' ಪದದ ವ್ಯಾಖ್ಯಾನ

ಭಾವದೀಪಃ – ಭಾಷ್ಯಸ್ಯೈವಮ್ಪದಾರ್ಥವಿವರಣಾಯ ಷಟ್ಪ್ರಶ್ನಸ್ಥಪೂರ್ವಶೇಷಮಾಹ – ಯಥೇತಿ ।।

ಭಾಷ್ಯದಲ್ಲಿರುವ 'ಏವಂ' ಎಂಬ ಪದದ ಅರ್ಥವನ್ನು ವಿವರಿಸುವುದಕ್ಕಾಗಿ ಷಟ್‌ಪ್ರಶ್ನದಲ್ಲಿರುವ ಹಿಂದಿನ ವಾಕ್ಯವನ್ನು ಹೇಳುತ್ತಿದ್ದಾರೆ 'ಯಥಾ' ಇತ್ಯಾದಿಯಾಗಿ.

ಮುಖ್ಯಪ್ರಾಣದೇವರು ಮಾಡುವ ಆಜ್ಞೆಯ ಕ್ರಮ

ಭಾವದೀಪಃ – ಸಮ್ರಾಡ್ ಸಾರ್ವಭೌಮೋऽಧಿಕೃತಾನ್ನಿಯೋಗಿನೋ ವಿನಿಯುङ್ಕ್ತೇ । ಕಥಮ್ ಏತಾನ್ ಗ್ರಾಮಾನಧಿತಿಷ್ಠಸ್ವ, ತದಾಧಿಪತ್ಯೇನ ತಿಷ್ಠೇತಿ । ಏವಮೇವೈಷ ಆತ್ಮತ ಏಷ ಪ್ರಾಣೋ ಜಾಯತ ಇತಿ ಆತ್ಮಜಾತತ್ವೇನೋಕ್ತಃ ಪ್ರಾಣೋ ಮುಖ್ಯಪ್ರಾಣಃ ಇತರಾನ್ ಭಿನ್ನಾನ್ ಸ್ವಸ್ಮಾಜ್ಜಾತತ್ವೇನ ಉಪಚಾರೇಣ ಆತ್ಮಪ್ರವಿಭಾಗಾನ್ ಪ್ರಾಣಾನ್ವಾಯೂನ್ ಪೃಥಕ್‌ಪೃಥಗೇವ ಸ್ಥಾನೇಷು ಸ್ಥಾಪಯತೀತ್ಯರ್ಥಃ ।।

ಉದಾಹರಣೆ - ಸಾರ್ವಭೌಮನಾದ ರಾಜನು ತನ್ನ ಅಧಿಕಾರದಿಂದ ಉಳಿದ ಸಾಮಂತರಾಜರನ್ನು ಆಯಾಪ್ರದೇಶಗಳಲ್ಲಿ ನಿಯೋಗಿಸುತ್ತಾನೆ. ಹೇಗೆಂದರೆ ನೀನು ಈ ಗ್ರಾಮವನ್ನು ನಿಯಂತ್ರಣ ಮಾಡು, ಈ ಗ್ರಾಮಕ್ಕೆಲ್ಲ ಅಧಿಪತಿಯಾಗಿ ರಕ್ಷಣೆ ಮಾಡು ಎಂದು ಪ್ರತಿಯೊಬ್ಬರನ್ನು ನಿಯೋಜಿಸುತ್ತಾನೆ. ಅದರಂತೆ 'ಆತ್ಮತ ಏಷ ಪ್ರಾಣೋ ಜಾಯತೇ' ಇತ್ಯಾದಿ ಶ್ರುತಿಯಲ್ಲಿ ಮುಖ್ಯಪ್ರಾಣದೇವರೂ ಕೂಡ ತನಗಿಂತ ಭಿನ್ನರಾದ, ತನ್ನಿಂದ ಹುಟ್ಟಿದ ಕಾರಣ 'ಪ್ರಾಣ' ಶಬ್ದ ಪ್ರತಿಪಾದ್ಯರಾದ ಉಳಿದ ಪ್ರಾಣಗಳನ್ನು ಪ್ರತ್ಯೇಕ ಪ್ರತ್ಯೇಕ ಸ್ಥಾನಗಳಲ್ಲಿ ನಿಲ್ಲಿಸಿ ಆಯಾ ಕೆಲಸಗಳಲ್ಲಿ ನಿಯಂತ್ರಣ ಮಾಡುವಂತೆ ಆಜ್ಞೆ ಮಾಡುತ್ತಾರೆ ಎಂದು ಶ್ರುತಿಯ ಅಭಿಪ್ರಾಯ.

ಮುಖ್ಯಪ್ರಾಣದೇವರನ್ನು ಯಾರೂ ಸಂಹರಿಸುವುದಿಲ್ಲ

ಭಾವದೀಪಃ – अथेति ।। वाजसनेये तृतीये वागादीनां मृत्युनात्तत्वमुक्त्वा 'अथेमं वायुं मृत्युर्नाऽप्नोदिति वागादिश्रैष्ठ्यं प्राणस्योच्यत इति तस्य मुख्यप्राणत्वद्योतनाय पूर्वशेषोक्तिः ।

ಬೃಹದಾರಣ್ಯಕೋಪನಿಷತ್ತಿನ ಮೂರನೇ ಅಧ್ಯಾಯದಲ್ಲಿ ವಾಗಾದ್ಯಭಿಮಾನಿದೇವತೆಗಳನ್ನು ಮೃತ್ಯುವು ತಿನ್ನುತ್ತದೆಂದು ಹೇಳಲಾಗಿದೆ. ಆನಂತರ 'ಅಥೇಮಂ ವಾಯುಂ ಮೃತ್ಯುರ್ನಾಪ್ನೋತ್' 'ಮುಖ್ಯಪ್ರಾಣದೇವರನ್ನು ಮೃತ್ಯು ತಿನ್ನುವುದಿಲ್ಲ' ಎಂದು ವಾಗಾದ್ಯಮಾನಿದೇವತೆಗಳಿಗಿಂತಲೂ ಉತ್ತಮತ್ವವನು ಮುಖ್ಯಪ್ರಾಣದೇವರಿಗೆ ಹೇಳಲಾಗಿದೆ. ಆದ್ದರಿಂದ ಪ್ರಾಣಾದಿಪ್ರೇರಕರಾದವರು ಮುಖ್ಯಪ್ರಾಣದೇವರೇ ಆಗಿದ್ದಾರೆಂಬುದನ್ನು ತಿಳಿಸುವುದಕ್ಕಾಗಿ ಹಿಂದಿನ ವಾಕ್ಯವನ್ನು ಹೇಳಿರುತ್ತಾರೆ.

ಶಿಶು ಬ್ರಾಹ್ಮಣದಲ್ಲಿಯೂ ಮುಖ್ಯಪ್ರಾಣರೇ ಪ್ರತಿಪಾದ್ಯರು

ಭಾವದೀಪಃ – 'अयं वा शिशुः योऽयं मध्यमः प्राणः' 'प्राणः स्थूणेत्युपरि चतुर्थे शिशुब्राह्मणेऽप्यस्ति । फलितमाह – अत इति ।। तस्य व्याख्या वाय्वेकेति ।।

'ಅಯಂ ವಾ ಶಿಶುಃ ಯೋಽಯಂ ಮಧ್ಯಮಃ ಪ್ರಾಣಃ' ಎಂಬುದಾಗಿ ನಾಲ್ಕನೆಯ ಶಿಶುಬ್ರಾಹ್ಮಣದಲ್ಲಿಯೂ ಈ ವಾಕ್ಯವು ಇರುತ್ತದೆ. ಫಲಿತವಾದ ವಾಕ್ಯವನ್ನು 'ಅತಃ' ಇತ್ಯಾದಿಯಾಗಿ ಹೇಳಿದ್ದಾರೆ. ಅದರ ಅರ್ಥವನ್ನೇ 'ವಾಯ್ವೇಕ' ಇತ್ಯಾದಿಯಾಗಿ ಹೇಳಿದ್ದಾರೆ.

ಮತ್ತೊಂದು ವ್ಯಾಖ್ಯಾನ

ಭಾವದೀಪಃ – यद्वा अतः 'एवमेवैषः' इत्यादि समाख्यानादित्यर्थः । सर्वदेवोपास्यः कश्चित्प्रतीयत इत्यस्य तात्पर्यमाह – इति हेतोस्तस्यैवेति।।

ಅಥವಾ 'ಅತಃ' ಎಂದರೆ 'ಏವಮೇವೈಷಃ' ಇತ್ಯಾದಿ ಸಮಾಖ್ಯಾನ ಇರುವುದರಿಂದ ಎಂದರ್ಥ. 'ಸರ್ವದೇವೋಪಾಸ್ಯಃ ಕಶ್ಚಿತ್' ಎಂಬುದರ ಅಭಿಪ್ರಾಯವನ್ನು 'ಇತಿ ಹೇತೋಸ್ತಸ್ಯೈವ' ಎಂಬುದರಿಂದ ಹೇಳಿದ್ದಾರೆ.

'ವಿಷ್ಣೋರೇವ' ಎಂಬಲ್ಲಿರುವ ಅವಧಾರಣೆಯ ವ್ಯಾಖ್ಯಾನ

ಭಾವದೀಪಃ – उक्तमित्यन्तभाष्यभावं वक्तुं विष्णोरेव । इत्यवधारणोक्तेर्भावं शङ्कोत्तराभ्यां व्यनक्ति – नच वाच्यमिति ।।

'ಉಕ್ತಂ' ಎಂಬಲ್ಲಿಯ ತನಕ ಇರುವ ಭಾಷ್ಯದ ಅಭಿಪ್ರಾಯವನ್ನು ಹೇಳುವುದಕ್ಕಾಗಿ 'ವಿಷ್ಣೋರೇವ' ಎಂದು ಹೇಳಿದ್ದಾರೆ. 'ವಿಷ್ಣೋರೇವ' ಎಂಬಲ್ಲಿರುವ ಅವಧಾರಣೆಯ ಅಭಿಪ್ರಾಯವನ್ನು ಶಂಕೆ ಹಾಗೂ ಉತ್ತರಗಳಿಂದ ಸ್ಪಷ್ಟಪಡಿಸುತ್ತಿದ್ದಾರೆ 'ನಚ ವಾಚ್ಯಮ್' ಇತ್ಯಾದಿಯಾಗಿ.

'ಅಂಗಾವಬದ್ಧಾಸ್ತು' ಎಂಬುದರ ವ್ಯಾಖ್ಯಾನ

ಭಾವದೀಪಃ – वायोरपीति ।। 'अङ्गावबद्धास्तु न शाखासु हि प्रतिवेदम्' इति तृतीये वक्ष्यमाणत्वादिति भावः ।

'ವಾಯೋರಪಿ' ಎಂದು ಟೀಕೆಯಲ್ಲಿದೆ. 'ಅಂಗಾವಬದ್ಧಾಸ್ತು ನ ಶಾಖಾಸು ಹಿ ಪ್ರತಿವೇದಮ್' ಎಂಬುದಾಗಿ ಮೂರನೇ ಅಧ್ಯಾಯದಲ್ಲಿ ವಾಯುದೇವರಲ್ಲಿಯೂ ಇದನ್ನು ಸಮರ್ಥಿಸುತ್ತಾರೆ.

ಸರ್ವದೇವೋಪಾಸ್ಯತ್ವವನ್ನು ಏಕೆ ಹೇಳಿದ್ದಾರೆ ?

ಭಾವದೀಪಃ – भाष्ये उपास्यः कश्चित्प्रतीयत इत्युक्त्यैव पूर्तौ सर्वदेवेत्युक्तिलब्धमाह – न हीति ।।

ಭಾಷ್ಯದಲ್ಲಿ 'ಉಪಾಸ್ಯಃ ಕಶ್ಚಿತ್ ಪ್ರತೀಯತೇ' ಎಂದು ಹೇಳಿದ್ದರಿಂದಲೇ ಅರ್ಥವು ಸ್ಪಷ್ಟವಾಗುವಾಗ ಸರ್ವದೇವೋಪಾಸ್ಯತ್ವವನ್ನು ಏಕೆ ಹೇಳಿದ್ದಾರೆ? ಎಂಬ ಪ್ರಶ್ನೆಗೆ 'ನಹಿ' ಇತ್ಯಾದಿಯಾಗಿ ಉತ್ತರಿಸಿದ್ದಾರೆ.

ಸಕಲ ತಾತ್ಪರ್ಯ ಭಾಷ್ಯಾರೂಢ

ಭಾವದೀಪಃ – ಏವಮುಕ್ತೇಸ್ತಾತ್ಪರ್ಯಂ ಮೋಕ್ಷಾರ್ಥಮಿತಿ ಶೇಷಪೂರ್ತ್ಯಾ ಭಾಷ್ಯವಾಕ್ಯಾರೂಢಂ ಕರೋತಿ – ವಿಷ್ಣುರೇವೇತಿ ।।

ಇಲ್ಲಿಯ ತನಕ ಹೇಳಿದರ ತಾತ್ಪರ್ಯವನ್ನು ಮೋಕ್ಷಾರ್ಥವೆಂದು ಶೇಷಪೂರಣ ಮಾಡುವುದರ ಮೂಲಕ ಭಾಷ್ಯಾರೂಢ ಮಾಡುತ್ತಿದ್ದಾರೆ 'ವಿಷ್ಣುರೇವ' ಇತ್ಯಾದಿಯಾಗಿ.

'ಕುವಿದಂಗ' ಎಂಬ ಮಂತ್ರದಲ್ಲಿ ಹೇಳಿದ ಉಪಾಸ್ಯತ್ವ

ಭಾವದೀಪಃ – ಪೂರ್ವಂ 'ಕುವಿದಙ್ಗೇತಿ ತಸ್ಯ ಸರ್ವದೇವೋಪಾಸ್ಯತ್ವಪ್ರತೀತೇರಿತ್ಯುಕ್ತಂ ತದ್ವ್ಯಾಖ್ಯಾನೇನ ವ್ಯನಕ್ತಿ – ಅಯಂ ಮನ್ತ್ರಾರ್ಥ ಇತಿ ।।

ಹಿಂದೆ 'ಕುವಿದಂಗ' ಎಂಬ ಮಂತ್ರದಲ್ಲಿ ಸರ್ವದೇವೋಪಾಸ್ಯತ್ವವನ್ನು ಹೇಳಲಾಗಿದೆಯೆಂದು ಹೇಳಿದರು. ಅದನ್ನೇ ವ್ಯಾಖ್ಯಾನ ಮಾಡುವ ಮೂಲಕ ಸ್ಪಷ್ಟಪಡಿಸುತ್ತಿದ್ದಾರೆ 'ಅಯಂ ಮಂತ್ರಾರ್ಥಃ ಇತಿ' ಎಂಬುದಾಗಿ.

ಋಗ್ವೇದದಲ್ಲಿರುವ ಕುವಿದಂಗ ಮಂತ್ರ

ಭಾವದೀಪಃ – 'ಕುವಿದಂಗ ನಮಸಾ ಯೇ ವೃಧಾಸಃ ಪುರಾ ದೇವಾ ಅನವದ್ಯಾಸ ಆಸನ್ । ತೇ ವಾಯವೇ ಮನವೇ ಬಾಧಿತಾಯಾವಾಸಯನ್ನುಷಸಂಸೂರ್ಯೇಣ' ಇತಿ ಮನ್ತ್ರಃ ।

'ಕುವಿದಂಗ ನಮಸಾ ಯೇ ವೃಧಾಸಃ ಪುರಾ ದೇವಾ ಅನವದ್ಯಾಸ ಆಸನ್ । ತೇ ವಾಯವೇ ಮನವೇ ಬಾಧಿತಾಯಾವಾಸಯನ್ನುಷಸಂ ಸೂರ್ಯೇಣ' ಎಂಬುದು ಋಗ್ವೇದದಲ್ಲಿ ಬರುವ ಮಂತ್ರ.

ಬಾಧಿತಾಯ ಎಂಬುದರ ವ್ಯುತ್ಪತ್ತಿ

ಭಾವದೀಪಃ – ನಮಸೇತ್ಯುಪಲಕ್ಷಣಂ ಮತ್ವಾऽಹ – ನಮಸ್ಕಾರಾದಿನೇತಿ ।। ವೃಧಾಸಃ ಜ್ಞಾನಾದಿಗುಣಪೂರ್ಣಾಃ ಕುವಿತ್ ಕಶ್ಚಿತ್ । ಬಾಧ್ಲಿಃ ಇತಾಯೇತ್ಯುಪೇತ್ಯಾऽಹ – ಸಂಸಾರೇತಿ ।।

ಇಲ್ಲಿರುವ 'ನಮಸಾ' ಎಂಬುದು ಉಪಲಕ್ಷಣವಾಗಿದೆ ಎಂಬುದಾಗಿ 'ನಮಸ್ಕಾರಾದಿನಾ' ಇತ್ಯಾದಿಯಾಗಿ ಹೇಳಿದ್ದಾರೆ. 'ವೃಧಾಸಃ' ಎಂದರೆ ಜ್ಞಾನಾದಿಗುಣಗಳಿಂದ ಪೂರ್ಣರಾಗಿ, 'ಕುವಿತ್' ಎಂದರೆ 'ರಹಸ್ಯಸ್ಥಳದಲ್ಲಿ' ಎಂದರ್ಥ, 'ಬಾಧ್ಯಃ ಇತಾಯ ಬಾಧಿತಾಯ' ಎಂಬ ವ್ಯುತ್ಪತ್ತಿಯನ್ನು ವಿವಕ್ಷಿಸಿ 'ಸಂಸಾರ' ಇತ್ಯಾದಿಯಾಗಿ ಹೇಳಿದ್ದಾರೆ.

ಕುವಿದಂಗ ಎಂಬ ಮಂತ್ರವು ಮುಖ್ಯಪ್ರಾಣ ಪರ

भावदीपः – उषसं बुद्धिम् । त्रयोऽर्थाः सर्ववेदेष्वित्युक्त्या 'कल्पनोपदेशादित्यादिचतुर्थपादोक्तन्यायैरन्यपरत्वस्यापि सत्त्वाद्वा सर्व-सूक्तानां तत्र तत्रस्थवाय्वादि शब्दानां च ज्योतिरादिनयैर्वैष्णवत्व-सिद्धावपि इह मन्त्रे विष्णुलिङ्गाभावेन अन्तरादिनयन्यायाविषयत्वाद्वाऽयं मन्त्रोऽत्र वायुपरत्वेनोक्तो व्याख्यातश्च ।

'ಉಷಸಂ' = ಬುದ್ಧಿಯನ್ನು, ವೇದಗಳಲ್ಲಿರುವ ಪ್ರತಿಯೊಂದು ಮಂತ್ರಕ್ಕೂ, ಮೂರು ಅರ್ಥಗಳಿರುವುದರಿಂದ 'ಕಲ್ಪನೋಪದೇಶಾತ್' ಎಂಬ ನಾಲ್ಕನೇ ಪಾದದ ನ್ಯಾಯದಂತೆ ಅನ್ಯಪರತ್ವವನ್ನು ಹೇಳಬಹುದಾದ್ದರಿಂದ; ಅಥವಾ ಸಕಲಸೂಕ್ತಗಳಲ್ಲಿರುವ ವಾಯು ಮೊದಲಾದ ಶಬ್ದಗಳಿಗೆ ಜ್ಯೋತಿರಧಿಕರಣದ ನ್ಯಾಯದಂತೆ ವಿಷ್ಣುವಿನಲ್ಲಿ ಸಮನ್ವಯ ಮಾಡಬಹುದಾದರೂ, ಈ ಮಂತ್ರದಲ್ಲಿ ಯಾವುದೇ ವಿಷ್ಣುಲಿಂಗಗಳಿಲ್ಲದ ಕಾರಣ ಅಂತರಾಧಿಕರಣದ ನ್ಯಾಯಕ್ಕೆ ವಿಷಯವಾಗದ ಕಾರಣವೂ ಈ ಮಂತ್ರವು ಮುಖ್ಯಪ್ರಾಣಪರವೇ ಆಗಿದೆ ಎಂದು ಹೇಳಿದ್ದಾರೆ ಮತ್ತು ಮುಖ್ಯಪ್ರಾಣಪರವಾಗಿ ವ್ಯಾಖ್ಯಾನ ಮಾಡಿದ್ದಾರೆ.

ವಿಶೇಷವಿಚಾರ - 'ಈಶಾನ' ಶಬ್ದ ಪ್ರತಿಪಾದ್ಯರಾದವರು ಮುಖ್ಯಪ್ರಾಣದೇವರೇ ಆಗಿದ್ದಾರೆ ಹೊರತು, ವಿಷ್ಣುವಲ್ಲ. ಏಕೆಂದರೆ ಯಾವಾತನು 'ಈಶಾನ' ಎನಿಸಿದ್ದಾನೋ ಅವನಲ್ಲಿ 'ಊರ್ಧ್ವಂ ಪ್ರಾಣ ಉನ್ನಯತಿ' ಎಂಬ ಶ್ರುತಿಯು ಪ್ರಾಣವ್ಯವಸ್ಥಾಪಕತ್ವ ಎಂಬ ಲಿಂಗವನ್ನು 'ಮಧ್ಯೇ ವಾಮನಮಾಸೀನಮ್' ಎಂಬ ಶ್ರುತಿಯು 'ಮಧ್ಯಮತ್ವ' ಎಂಬ ಲಿಂಗವನ್ನು 'ವಿಶ್ವೇದೇವಾ ಉಪಾಸತೇ' ಎಂಬ ಶ್ರುತಿಯು 'ಸರ್ವದೇವೋಪಾಸ್ಯತ್ವ' ಎಂಬ ಲಿಂಗವನ್ನು ಹೇಳುತ್ತಿದೆ.

ಈ ಮೂರೂ ಲಿಂಗಗಳು ಮುಖ್ಯಪ್ರಾಣದೇವರಲ್ಲಿಯೇ ಅಸಾಧಾರಣವಾಗಿ ಇರುತ್ತವೆ. 'ಏವಮೇವೈಷ ಪ್ರಾಣಃ' ಎಂಬ ಶ್ರುತಿಯು ಮುಖ್ಯಪ್ರಾಣದೇವರಲ್ಲಿಯೇ ಪ್ರಾಣವ್ಯವಸ್ಥಾಪಕತ್ವ- ಲಿಂಗವಿದೆಯೆಂದು, 'ಯೋ೯ಯಂ ಮಧ್ಯಮಃ ಪ್ರಾಣಃ' ಎಂಬ ಶ್ರುತಿಯು ಮಧ್ಯಮತ್ವವು ಮುಖ್ಯಪ್ರಾಣದೇವರಲ್ಲಿದೆಯೆಂದು, 'ಕುವಿದಂಗ' ಎಂಬ ಮಂತ್ರವು 'ಸರ್ವದೇವೋಪಾಸ್ಯತ್ವವು' ಮುಖ್ಯಪ್ರಾಣದೇವರಲ್ಲಿ ಇದೆಯೆಂದು ಸಾಧಿಸುತ್ತಿವೆ. ಭಾಷ್ಯದಲ್ಲಿ ಉದಾಹರಿಸಿದ ಈ ಎಲ್ಲ ಶ್ರುತಿಗಳ ಆಧಾರದಿಂದ ಮೇಲಿನ ಮೂರು ಲಿಂಗಗಳು ಮುಖ್ಯಪ್ರಾಣದೇವರ ಅಸಾಧಾರಣಲಿಂಗಗಳೆಂದು ಸಿದ್ಧವಾಗುತ್ತದೆ.

'ಏವಮೇವ ಏಷಃ ಪ್ರಾಣಃ' ಎಂಬ ಶ್ರುತಿಯಲ್ಲಿರುವ ಪ್ರಾಣಶಬ್ದವು ಮುಖ್ಯಪ್ರಾಣದೇವರನ್ನೇ ಪ್ರತಿಪಾದಿಸುತ್ತದೆ. 'ಆತ್ಮತ ಏಷ ಪ್ರಾಣೋ ಜಾಯತೇ' ಎಂಬ ಹಿಂದಿನ ವಾಕ್ಯದಲ್ಲಿ ಹುಟ್ಟುವಿಕೆಯೆಂಬ ಧರ್ಮವನ್ನು ಹೊಂದಿರುವ ಮುಖ್ಯಪ್ರಾಣದೇವರೇ ಪ್ರಸಕ್ತರಾಗಿದ್ದಾರೆ. ಅವರನ್ನೇ ಇಲ್ಲಿ ಪರಾಮರ್ಶ ಮಾಡಬೇಕು. ಹುಟ್ಟುವಿಕೆ ಇಲ್ಲದ ವಿಷ್ಣುವನ್ನು 'ಏವಮೇವ' ಎಂಬ ಶ್ರುತಿಯಿಂದ ಪರಾಮರ್ಶ ಮಾಡಲು ಸಾಧ್ಯವಿಲ್ಲ.

ಮತ್ತು 'ಏವಮೇವ ಏಷಃ ಪ್ರಾಣಃ' ಇತ್ಯಾದಿ ಶ್ರುತಿಯಲ್ಲಿ ವಿಷ್ಣುವು ಪ್ರತಿಪಾದ್ಯನಾಗಿದ್ದಾನೆನ್ನಲು ಯಾವುದೇ ಲಿಂಗಗಳಿರುವುದಿಲ್ಲ.

ಹೀಗೆ 'ಏವಮೇವ ಏಷಃ ಪ್ರಾಣಃ' ಎಂಬ ಶ್ರುತಿಯಲ್ಲಿರುವ 'ಪ್ರಾಣ' ಶಬ್ದವು ಯಾವ ಕಾರಣದಿಂದ ಮುಖ್ಯಪ್ರಾಣದೇವರನ್ನೇ ಪ್ರತಿಪಾದಿಸುತ್ತದೋ, ಅದೇ ಕಾರಣದಿಂದ 'ಕುವಿದಂಗ' ಎಂಬ 'ಋಜ್' ಮಂತ್ರವೂ ಕೂಡ ಮುಖ್ಯಪ್ರಾಣದೇವರನ್ನೇ ಪ್ರತಿಪಾದಿಸುತ್ತದೆ ಹೊರತು ವಿಷ್ಣುವನ್ನಲ್ಲ.

'ಕುವಿದಂಗ' ಎಂಬ ಮಂತ್ರದಲ್ಲಿ ದೇವತೆಗಳಿಂದ ಮುಖ್ಯಪ್ರಾಣದೇವರು ಉಪಾಸ್ಯರಾಗಿದ್ದಾರೆಂದಷ್ಟೇ ತಿಳಿಯುತ್ತಿದೆ. ಆದರೆ 'ವಿಶ್ವೇ ದೇವಾ ಉಪಾಸತೇ' ಎಂಬ ಶ್ರುತಿಯಲ್ಲಿ ಸರ್ವದೇವೋಪಾಸ್ಯತ್ವವು ಶ್ರುತವಾಗಿದೆ. ಆದ್ದರಿಂದ ಸರ್ವದೇವೋಪಾಸ್ಯತ್ವವು ಮುಖ್ಯಪ್ರಾಣದೇವರ ಧರ್ಮವೆನ್ನಲು 'ಕುವಿದಂಗ' ಎಂಬ ಶ್ರುತಿಯು ಹೇಗೆ ಪ್ರಮಾಣವಾಗುತ್ತದೆ ? ಎಂದು ಪ್ರಶ್ನಿಸಬಾರದು. ಏಕೆಂದರೆ

'ಕುವಿದಂಗ' ಎಂಬ ಮಂತ್ರದಲ್ಲಿಯೂ 'ದೇವಾಃ' ಎಂಬ ಬಹುವಚನವಿದೆ. ಇಲ್ಲಿರುವ ಬಹುವಚನಕ್ಕೆ ಕೇವಲ ಮೂರು ದೇವತೆಗಳು ಎಂದು ಅರ್ಥಸಂಕೋಚ ಮಾಡಲು ಕಾರಣವಿಲ್ಲ. ಹೊರತಾಗಿ, ಸಕಲ ದೇವತೆಗಳು ಎಂದು ಕಾತ್ಸ್ನ್ರ್ಯಾರ್ಥದಲ್ಲಿಯೇ

ಬಹುವಚನವನ್ನು ಕೂಡಿಸಬೇಕು. ಕೇವಲ ಮೂರು ಎಂಬರ್ಥದಲ್ಲಿ ಬಹುವಚನವನ್ನು ಪರ್ಯವಸಾನ ಮಾಡಿದರೆ, ಅದರಿಂದ ಮುಖ್ಯಪ್ರಾಣದೇವರಲ್ಲಿ ಯಾವುದೇ ಗುಣಾತಿಶಯವು ಸಿದ್ಧವಾಗುವುದಿಲ್ಲ.

'ನರೇಂದ್ರಂ ಚರಾಃ ಸೇವಂತೇ' ಇತ್ಯಾದಿ ಪ್ರಯೋಗಗಳಲ್ಲಿ 'ಚರಾಃ' ಎಂಬಲ್ಲಿರುವ ಬಹುವಚನಕ್ಕೆ ಕೇವಲ ಮೂರುಮಂದಿ ಎಂದಷ್ಟೇ ಅರ್ಥವಲ್ಲ. ಅಂದರೆ ಮೂರುಮಂದಿ ಸೇವಕರಷ್ಟೇ ರಾಜನನ್ನು ಸೇವನೆ ಮಾಡುತ್ತಾರೆ ಎಂಬರ್ಥವನ್ನು ವಿವಕ್ಷಿಸದೇ, ಸಕಲ ಸೇವಕರು ರಾಜನನ್ನು ಸೇವಿಸುತ್ತಾರೆ ಎಂದೇ ಹೇಳಬೇಕು. ಆದ್ದರಿಂದ ಪ್ರಕೃತ 'ದೇವಾಃ' ಎಂಬಲ್ಲಿರುವ ಬಹುವಚನಕ್ಕೂ ಕೂಡ ಮೂವರು ಎಂಬಷ್ಟೇ ಅರ್ಥವನ್ನು ವಿವಕ್ಷೆ ಮಾಡದೇ, ಸಕಲ ಎಂಬರ್ಥವನ್ನು ವಿವಕ್ಷಿಸಬೇಕು.

ಪೂರ್ವಮೀಮಾಂಸೆಯಲ್ಲಿ 'ವಂಸತಾಯ ಕಪಿಂಜಲಾನ್' ಎಂಬಲ್ಲಿರುವ ಬಹುವಚನಕ್ಕೆ ಕೇವಲ ಮೂರು ಕಪಿಂಜಲ ಗೋವುಗಳನ್ನು ಆಲಂಭನ ಮಾಡಬೇಕೆಂದು ನಿರ್ಣಯಿಸಿದ್ದಾರೆ. ಒಂದು ವೇಳೆ ನೀವು ಹೇಳುವಂತೆ ಬಹುವಚನಕ್ಕೆ ಸಕಲವನ್ನು ಅರ್ಥವನ್ನಾಗಿ ಹೇಳಬೇಕೆಂದು ವಿವಕ್ಷಿಸುವುದಾದರೆ, ಇಲ್ಲಿಯೂ ಕೂಡ ಸಕಲ ಕಪಿಂಜಲಗೋವುಗಳ ಆಲಂಭನವನ್ನು ಮಾಡಬೇಕೆಂದಾಗುತ್ತದೆ. ಆದ್ದರಿಂದ ಪೂರ್ವಮೀಮಾಂಸೆಯ ಈ ದೃಷ್ಟಾಂತದಂತೆ ಪ್ರಕೃತದಲ್ಲಿಯೂ ಬಹುವಚನಕ್ಕೆ ಕೇವಲ ಮೂರು ದೇವತೆಗಳು ಎಂದಷ್ಟೇ ಅರ್ಥವನ್ನು ಸ್ವೀಕರಿಸಬಹುದಲ್ಲವೇ? ಎಂಬ ಪ್ರಶ್ನೆಗೂ ಈಗ ಅವಕಾಶವಿಲ್ಲ. ಏಕೆಂದರೆ 'ವಸಂತಾಯ ಕಪಿಂಜಲಾನ್' ಎಂಬಲ್ಲಿ ಶ್ರುತವಾದ ಬಹುವಚನಕ್ಕೆ ಮೂರು ಗೋವುಗಳು ಎಂದಷ್ಟೇ ಅರ್ಥವನ್ನು ವಿವಕ್ಷಿಸಬೇಕು. ಏಕೆಂದರೆ ಸಕಲ ಕಪಿಂಜಲಗಳ ಆಲಂಭನವು ಯಾಗದಲ್ಲಿ ಅಶಕ್ಯವಾಗಿದೆ. ಮೂರು ಕಪಿಂಜಲಗಳ ಆಲಂಭನ ಮಾಡುವಿಕೆಯಿಂದಲೇ 'ಕಪಿಂಜಲಾನ್' ಎಂಬ ಬಹುವಚನಕ್ಕೆ ಸಾರ್ಥಕ್ಯವನ್ನು ಉಪಪಾದಿಸಲು ಬರುವಾಗ ಅಶಕ್ಯವಾದ ಸಕಲ ಕಪಿಂಜಲಗಳ ಆಲಂಭನವನ್ನು ವಿಧಿಸುವುದು ತಪ್ಪಾಗುತ್ತದೆ. ಮತ್ತು ವಿಕಲ್ಪವು ಅಷ್ಟದೋಷಗಳಿಂದ ದುಷ್ಟವಾದ್ದರಿಂದ ಮೂರಕ್ಕಿಂತ ಹೆಚ್ಚು ಕಪಿಂಜಲಗೋವುಗಳ ಆಲಂಭನವು ಅನಾವಶ್ಯಕ.

ಮತ್ತು ಒಂದು ವೇಳೆ, 'ವಸಂತಾಯ ಕಪಿಂಜಲಾನ್' ಎಂಬಲ್ಲಿರುವ ಬಹುವಚನದಿಂದ ಸಕಲ ಕಪಿಂಜಲಗಳ ಆಲಂಭನವನ್ನು ವಿವಕ್ಷಿಸುವುದಾದರೆ 'ನ ಹಿಂಸ್ಯಾತ್' ಸರ್ವಾಭೂತಾನಿ' ಎಂಬ ನಿಷೇಧಶಾಸ್ತ್ರಕ್ಕೆ ಸಂಕೋಚ ಮಾಡಬೇಕಾಗುತ್ತದೆ. ಅಂದರೆ ಕಪಿಂಜಲ ಗೋವುಗಳ ಹಿಂಸೆಯನ್ನು ಬಿಟ್ಟು ಉಳಿದ ಪ್ರಾಣಿಗಳ ಹಿಂಸೆಯನ್ನು ಮಾಡಬಾರದು ಎಂದಂತಾಗುತ್ತದೆ. ಏಕೆಂದರೆ ಬಹುವಚನದಿಂದ ಸಕಲ ಕಪಿಂಜಲಗಳ ಆಲಂಭನವನ್ನು ನೀವು ವಿವಕ್ಷಿಸುವುದರಿಂದ. ಹೀಗೆ 'ನ ಹಿಂಸ್ಯಾತ್' ಎಂಬ ನಿಷೇಧವಾಕ್ಯದಲ್ಲಿ ಸಕಲ ಕಪಿಂಜಲ ಗೋವುಗಳನ್ನು ಬಿಟ್ಟು

ಉಳಿದ ಪ್ರಾಣಿಗಳ ಹಿಂಸೆಯ ನಿಷೇಧವನ್ನಷ್ಟೇ ವಿವಕ್ಷಿಸುವುದು ಅನಿವಾರ್ಯವಾಗುತ್ತದೆ. ಆದರೆ 'ನ ಹಿಂಸ್ಯಾತ್' ಎಂಬ ನಿಷೇಧಶಾಸ್ತ್ರಕ್ಕೆ ಸಂಕೋಚ ಮಾಡದೇ ಸಕಲ ಪ್ರಾಣಿಗಳ ಹಿಂಸಾ ನಿಷೇಧವೂ ವಿಹಿತವಾಗಿದೆಯೆಂದೇ ಹೇಳಲು ಬರುವಾಗ ಸಂಕೋಚ ಮಾಡುವುದು ತಪ್ಪಾಗುತ್ತದೆ. ಆದ್ದರಿಂದಲೂ 'ಕಪಿಂಜಲಾನ್' ಎಂಬಲ್ಲಿರುವ ಬಹುವಚನಕ್ಕೆ ಮೂರು ಗೋವುಗಳು ಎಂದಷ್ಟೇ ಅರ್ಥವನ್ನು ವಿವಕ್ಷಿಸಬೇಕು. ಆದರೆ ಪ್ರಕೃತ 'ಕುವಿದಂಗ' ಎಂಬ ಮಂತ್ರದಲ್ಲಿರುವ 'ದೇವಾಃ' ಎಂಬ ಬಹುವಚನಕ್ಕೆ ಸಂಕೋಚ ಮಾಡಿ ಅರ್ಥೈಸಲು ಯಾವುದೇ ಇಂತಹ ಕಾರಣಗಳಿರುವುದಿಲ್ಲ. ಆದ್ದರಿಂದ ಸಕಲದೇವೋಪಾಸ್ಯತ್ವವೇ 'ಕುವಿದಂಗ' ಎಂಬ ವೇದಮಂತ್ರ ವಿವಕ್ಷಿತವಾಗಿದೆಯೆಂದು ತಿಳಿಯಬೇಕು.

'ವಿಷ್ಣುರೇವ' ಇತ್ಯಾದಿ ಭಾಷ್ಯಕ್ಕೆ ಪೀಠಿಕೆ

ಭಾವದೀಪಃ – ವಕ್ಷ್ಯತೇ ಚೈತತ್ತೃತೀಯೇ 'ಮನ್ತ್ರಾದಿವದ್ಧಾऽವಿರೋಧ ಇತಿ ಸೂತ್ರೇ । ಉಕ್ತಂ ಚ ಋಗ್ಭಾಷ್ಯೇ 'ಪೂರ್ವಪ್ರಸಿದ್ಧವರ್ಜಂ ತು ಶಕ್ರಾನ್ತಾ ದೇವತಾ ಮತಾ' ಇತಿ । ಪ್ರಮಿತ ಇತ್ಯತ್ರ ವಿಶೇಷಾಕಾಙ್ಕ್ಷಾಯಾಮ್ ಈಶಾನಶಬ್ದೋಕ್ತೋ ವಿಷ್ಣುರೇವೇತ್ಯನ್ಯತ್ರೋಕ್ತೇನೈವ ಪೂರಯನ್ ಭಾಷ್ಯಂ ವ್ಯಾಚಷ್ಟೇ – ವಿಷ್ಣುರೇವೇತಿ ।।

ಇದರ ಬಗ್ಗೆ ಮುಂದೆ 'ಮಂತ್ರಾದಿವದ್ವಾऽವಿರೋಧಃ' ಎಂಬ ಮೂರನೇ ಅಧ್ಯಾಯದಲ್ಲಿ ವಿವರಿಸುತ್ತೇವೆ. ಋಗ್ಭಾಷ್ಯದಲ್ಲಿ ಹೀಗೆ ಹೇಳಿದ್ದಾರೆ - 'ಪೂರ್ವಪ್ರಸಿದ್ಧವರ್ಜಂ ತು ಶಕ್ರಾಂತಾ ದೇವತಾ ಮತಾ' ಮುಖ್ಯ ಪ್ರಾಣದೇವರನ ತನಕ ಪ್ರಸಿದ್ಧವಾದ ವೇದಮಂತ್ರಗಳನ್ನು ಬಿಟ್ಟು ಉಳಿದೆಲ್ಲ ಮಂತ್ರಗಳಿಂದ ಇಂದ್ರದೇವರ ತನಕ ಸಕಲದೇವತೆಗಳೂ ಪ್ರತಿಪಾದ್ಯರಾಗಿದ್ದಾರೆ ಎಂದು. 'ಪ್ರಮಿತಃ' ಎಂಬಲ್ಲಿ ವಿಶೇಷದ ಆಕಾಂಕ್ಷೆಯು ಪ್ರಾಪ್ತವಾದರೆ 'ಈಶಾನ' ಶಬ್ದಪ್ರತಿಪಾದ್ಯ ವಿಷ್ಣುವೇ ವಿಶೇಷ್ಯನಾಗಿದ್ದಾನೆಂದು ಹೇಳುವ ಮೂಲಕ ಭಾಷ್ಯವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ 'ವಿಷ್ಣುರೇವ' ಇತ್ಯಾದಿಯಾಗಿ.

ವಾಮನಶ್ರುತಿಯು ವಿಷ್ಣುವಿನಲ್ಲಿ ಮಾತ್ರ ನಿರವಕಾಶ

ಭಾವದೀಪಃ – ನನು ವಾಮನಶ್ರುತಿರಪ್ಯಣುಶ್ಚೇತಿ ಸೂತ್ರೇ ದ್ವಿತೀಯೇ ವಕ್ಷ್ಯಮಾಣದಿಶಾऽ-ಣುಭೂತಪ್ರಾಣರೂಪಾದ್ಯಭಿಪ್ರಾಯೇಣ ವಾಯಾವಪಿ ಸಾವಕಾಶೇತ್ಯತೋ ವಾಮನಶ್ರುತೇರೇವಾನವಕಾಶ ಇತ್ಯನ್ಯತ್ರೋಕ್ತಮನವಕಾಶತ್ವಂ ಸೌತ್ರಪ್ರಮಿತಪದೋಕ್ತಮಿತಿ ದರ್ಶಯನ್ ಭಾಷ್ಯಸ್ಥ-ಪ್ರಮಿತಪದತಾತ್ಪರ್ಯಮಾಹ – ತಸ್ಯಾಶ್ಚೇತಿ ।।

ಪ್ರಶ್ನೆ - ವಾಮನಶ್ರುತಿಯು ವಿಷ್ಣುವನ್ನೇ ಪ್ರತಿಪಾದಿಸುತ್ತದೆಂದು ಹೇಳುವುದು ಸರಿಯಲ್ಲ. ಏಕೆಂದರೆ ಎರಡನೇ ಅಧ್ಯಾಯದಲ್ಲಿ ಇರುವಂತಹ 'ಅಣುಶ್ಚ' ಎಂಬ ಸೂತ್ರದಲ್ಲಿ ಮುಖ್ಯಪ್ರಾಣದೇವರು ಅಣುಸ್ವರೂಪರೆಂದು ಸಮರ್ಥಿಸಲಾಗುತ್ತದೆ. ಅಂತಹ ಮುಖ್ಯಪ್ರಾಣದೇವರನ್ನು ಪ್ರತಿಪಾದಿಸುವುದಕ್ಕಾಗಿ ಶ್ರುತಿಯು ವಾಮನಶಬ್ದವನ್ನು ಹೇಳಿದೆ. ಆದ್ದರಿಂದ ವಾಮನಶ್ರುತಿಯು ಮುಖ್ಯಪ್ರಾಣದೇವರಲ್ಲಿ ಸಾವಕಾಶವಾಗಿದೆಯಲ್ಲವೆ?

ಉತ್ತರ - ವಾಮನಶ್ರುತಿಯು ವಿಷ್ಣುವಿನಲ್ಲಿ ಮಾತ್ರ ಇರುವಂತಹ ನಿರವಕಾಶಶ್ರುತಿಯಾಗಿದೆ. ಈ ವಿಚಾರವನ್ನು ಬೇರೆ ಗ್ರಂಥಗಳಲ್ಲಿ ಪ್ರತಿಪಾದಿಸಲಾಗಿದೆ. ಇದೇ ನಿರವಕಾಶವಾಗಿದೆ ಎಂಬುದನ್ನು ಸೂತ್ರದಲ್ಲಿರುವ 'ಪ್ರಮಿತ' ಪದವು ಹೇಳುತ್ತದೆ. ಅದನ್ನೇ ವ್ಯಾಖ್ಯಾನ ಮಾಡುತ್ತಾ ಭಾಷ್ಯದಲ್ಲಿರುವ ಪ್ರಮಿತಪದದ ತಾತ್ಪರ್ಯವನ್ನೂ ಸಹ ಹೇಳುತ್ತಿದಾರೆ 'ತಸ್ಮಾಚ್ಚ' ಇತ್ಯಾದಿ ವಾಕ್ಯದಿಂದ.

ವಾಮನಿ ಶಬ್ದದ ನಿಷ್ಪತ್ತಿ

भावदीपः – अन्तरनये स्थानादीति गुणसूत्रोक्ते 'एष उ एव वामनिरेष हि सर्वाणि वामानि नयति' इत सावधारणश्रुतिवाक्ये वामनिशब्दनिरुक्त्या 'एकदेशविकृतमनन्यवद्भवतीति न्यायेन 'देवासो देवा' इत्यादेरिव वामनिवामनशब्दयोरैकार्थ्येन महायोगस्य 'स वामनः स आनन्दः सोऽच्युतः' इति तद्भाष्योक्तश्रौतप्रयोगस्य 'उपेन्द्रो वामनः प्रांशुरिति सहस्रनामोक्तस्मार्तप्रयोगस्य च सत्त्वेन रूढेश्च सत्वादिति भावः ।

ಅಂತರಾಧಿಕರಣದ ಸ್ಥಾನಾದಿ ಗುಣಸೂತ್ರದಲ್ಲಿ 'ಏಷ ಉ ಏವ ವಾಮನಿರೇಷ ಹಿ ಸರ್ವಾಣಿ ವಾಮಾನಿ ನಯತಿ' ಎಂಬ ಶ್ರುತಿಯನ್ನು ಹೇಳಲಾಗಿದೆ. ಈ ಸಾವಧಾರಣ ಶ್ರುತಿವಾಕ್ಯದಲ್ಲಿ 'ವಾಮನಿ' ಶಬ್ದದ ನಿರುಕ್ತಿಯನ್ನು ಪ್ರತಿಪಾದಿಸಲಾಗಿದೆ. ಸಕಲ ಸ್ತ್ರೀಯರ ಸೌಂದರ್ಯವನ್ನು ನೀಡುವವನಾದ್ದರಿಂದ ಪರಮಾತ್ಮನು 'ವಾಮನಿ' ಎಂಬ ಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆ. 'ಏಕದೇಶವಿಕೃತಮನನ್ಯವದ್ಭವತಿ' ಏಕದೇಶದ ವಿಕಾರದಿಂದ ತನ್ನ ಸ್ವರೂಪವನ್ನು ಕಳೆದುಕೊಳ್ಳುವುದಿಲ್ಲ ಎಂಬ ನ್ಯಾಯದಂತೆ 'ವಾಮನಿ' ಹಾಗೂ 'ವಾಮನ' ಶಬ್ದಗಳು ಒಂದೇ ಅರ್ಥವನ್ನು ಪ್ರತಿಪಾದಿಸುತ್ತವೆ. 'ದೇವಾಸಃ' ಎಂಬ ಶಬ್ದವು 'ದೇವಾಃ' ಎಂಬ ಪದದ ಅರ್ಥವನ್ನು ಹೇಗೆ ಪ್ರತಿಪಾದಿಸುತ್ತದೋ ಅದರಂತೆ. ಮತ್ತು 'ಸ ವಾಮನಃ ಸ

ಆನಂದಃ ಸೋಽಚ್ಯುತಃ' ಎಂಬುದಾಗಿ ಉಪನಿಷದ್‌ಭಾಷ್ಯದ ಮಾತಿನಂತೆ ವಾಮನಶಬ್ದದ ಮಹಾಯೋಗವು ಪರಮಾತ್ಮನಲ್ಲಿ ಮಾತ್ರ ಇರುತ್ತದೆ. ಅಷ್ಟೇ ಅಲ್ಲದೆ 'ಉಪೇಂದ್ರೋ ವಾಮನಃ ಪ್ರಾಂಶುಃ' ಎಂಬ ವಿಷ್ಣುಸಹಸ್ರನಾಮದ ಪ್ರಯೋಗವು ಮಹಾವಿಷ್ಣುವಿನಲ್ಲಿರುವುದರಿಂದ ರೂಢಿಯು ಇರುತ್ತದೆ ಹೀಗೆ ಮಹಾಯೋಗ ಮತ್ತು ರೂಢಿಗಳ ಬಲದಿಂದ 'ವಾಮನ' ಶಬ್ದ ಪ್ರತಿಪಾದ್ಯನಾದವನು ಮಹಾವಿಷ್ಣುವೇ ಆಗಿದ್ದಾನೆಂದು ಸ್ಪಷ್ಟವಾಗುತ್ತದೆ.

ವಿಶೇಷವಿಚಾರ - ಸಿದ್ಧಾಂತ ಹೀಗಿದೆ -

ಸಹಸ್ರಾದಪಿ ಲಿಂಗಾನಾಂ ಶ್ರುತಿರ್ಬಲವತೀ ಸ್ವತಃ।
ಅವಕಾಶೋಜ್ಝಿತಾ ಸಾವಕಾಶಾತ್ತು ಕಿಮು ಲಿಂಗತಃ ॥೧॥

ಶ್ರುತಿಯು ಸಾವಿರ ಲಿಂಗಗಳಿಗಿಂತಲೂ ಸ್ವಾಭಾವಿಕವಾಗಿಯೇ ಬಲಿಷ್ಠವಾಗಿವೆ. ಹೀಗಿರುವಾಗ ಸಾವಕಾಶವಾದ ಲಿಂಗಗಳಿಗಿಂತಲೂ ಬಲಿಷ್ಠವಾಗಿದೆಯೆಂದು ಪ್ರತ್ಯೇಕವಾಗಿ ಹೇಳಬೇಕೇನು?

ವಾಮನಶ್ರುತಿಯು ವಿಷ್ಣುವಿನಲ್ಲಿ ನಿರವಕಾಶವಾಗಿದೆ. ಏಕೆಂದರೆ 'ಏಷ ಉ ಏವ ವಾಮನಿಃ, ಏಷ ಹಿ ಸರ್ವಾಣಿ ವಾಮಾನಿ ನಯತಿ' ಇಂತಹ ಮಹಾವಿಷ್ಣುವೇ ವಾಮನಿಯೆನಿಸಿದ್ದಾನೆ. 'ಯಾವಾತನು ಸಕಲ ಸುಂದರ ವಸ್ತುಗಳನ್ನು ನೀಡುವ ಮೂಲಕ ಪ್ರೇರಣೆ ಮಾಡುತ್ತಾನೋ' ಎಂಬುದಾಗಿ ಬೇರೆ ಶ್ರುತಿಯಲ್ಲಿ ಅವಧಾರಣಪುರಸ್ಸರವಾಗಿ ವಿಷ್ಣುವನ್ನೇ 'ವಾಮನ' ಎಂದು ಕರೆಯಲಾಗಿದೆ.

ವಿಷ್ಣುಸಹಸ್ರನಾಮದಲ್ಲಿ 'ಉಪೇಂದ್ರೋ ವಾಮನಃ ಪ್ರಾಂಶುಃ' ಎಂಬುದಾಗಿ ಮಹಾವಿಷ್ಣುವನ್ನೇ 'ವಾಮನ' ಎಂದು ಕರೆಯಲಾಗಿದೆ. ಇದೂ ಸಹ ಈ ವಿಷಯದಲ್ಲಿ ಆಧಾರವಾಗಿದೆ. ಮತ್ತು ಜ್ಞಾನಿಜನರೆಲ್ಲರೂ ಭಗವಂತನನ್ನೇ 'ವಾಮನ' ಎಂದು ಕರೆಯುತ್ತಾರೆ.

'ಏಷ ಉ ಏವ ವಾಮನಿಃ' ಎಂಬ ಶ್ರುತಿಯು ವಿಷ್ಣುವನ್ನು 'ವಾಮನಿ' ಎಂದು ಕರೆಯುತ್ತಿದೆ. ಆದರೆ ನೀವು ವಾಮನನಾಗಿದ್ದಾನೆನ್ನಲು ಪ್ರಮಾಣವನ್ನಾಗಿ ಹೇಳುತ್ತಿದ್ದೀರಿ. 'ವಾಮನಿ' ಶಬ್ದವೇ ಬೇರೆ, ವಾಮನ ಶಬ್ದವೇ ಬೇರೆ? ಹೀಗಿರುವಾಗ ವಾಮನನು ವಿಷ್ಣುವಾಗಿದ್ದಾನೆನ್ನಲು ಇದು ಹೇಗೆ ಆಧಾರವಾಗುತ್ತದೆ?

ಹೀಗೆ ಪ್ರಶ್ನಿಸಬಾರದು. ಲೋಕವೇದಾಧಿಕರಣ ನ್ಯಾಯದಿಂದ ಶಬ್ದಗಳಲ್ಲಿ ಸ್ವಲ್ಪ ಅಧಿಕ್ಯವಿದ್ದ ಮಾತ್ರದಲ್ಲಿ ಅರ್ಥದಲ್ಲಿ ವ್ಯತ್ಯಾಸ ಬರುವುದಿಲ್ಲವೆಂದು ನಿರ್ಣಯಿಸಲಾಗಿದೆ. ಆದ್ದರಿಂದ 'ವಾಮನ' ಶಬ್ದದಿಂದಲೂ 'ವಾಮನಿ' ಎಂಬ ಶಬ್ದದಲ್ಲಿ ಸ್ವಲ್ಪ ವ್ಯತ್ಯಾಸವಿರಬಹುದು.

ಇಂತಹ ವರ್ಣವಿಕಾರದಿಂದ ಏಕದೇಶವು ಅನ್ಯಥಾಭೂತವಾದ ಮಾತ್ರಕ್ಕೆ 'ವಾಮನ' ಹಾಗೂ 'ವಾಮನಿ' ಎಂಬೆರಡೂ ಶಬ್ದಗಳ ಅರ್ಥದಲ್ಲಿ ವ್ಯತ್ಯಾಸ ಬರುವುದಿಲ್ಲ.

ಉದಾ: 'ದೇವಾಸಃ' 'ದೇವಾಃ' ಎಂಬೆರಡು ಶಬ್ದಗಳು ಒಂದೇ ಅರ್ಥದಲ್ಲಿ ಪ್ರಸಿದ್ಧವಾಗಿವೆ. ಈ ಎರಡು ವಿಧ ಶಬ್ದಗಳಲ್ಲಿ ಪ್ರತ್ಯಭಿಜ್ಞಾನದಿಂದ ಒಂದೇ ಅರ್ಥವನ್ನು ವಿವಕ್ಷಿಸಲು ಬರುವಾಗ, ಶಬ್ದಗಳು ಭಿನ್ನವಾದ ಮಾತ್ರದಿಂದ ಅರ್ಥವೂ ಕೂಡ ಭಿನ್ನವಾಗುತ್ತದೆಂದು ಕಲ್ಪಿಸುವುದು ಯುಕ್ತವಾಗುವುದಿಲ್ಲ.

ವೇದದಲ್ಲಿಯೂ ಕೂಡ 'ನ ಕಿರಿಂದ್ರಃ' ಎಂಬ ಪ್ರಯೋಗವಿದೆ. ಇಲ್ಲಿರುವ 'ಕಿಃ' ಎಂಬ ಪದವು 'ಸಃ' ಎಂಬ ಶಬ್ದದ ಅರ್ಥವನ್ನೇ ನೀಡುತ್ತಿದೆ. ಲೋಕದಲ್ಲಿ 'ಕಃ' ಎಂಬ ಯಾವ ಶಬ್ದವಿದೆಯೋ, ಅದಕ್ಕಿಂತಲೂ ವರ್ಣವಿಕಾರವು ಇಲ್ಲಿ ಕಾಣಿಸುತ್ತಿರುವುದರಿಂದ ಇದು ಬೇರೆಯೇ ಅರ್ಥವನ್ನು ನೀಡುತ್ತದೆಂದು ಹೇಳಬಾರದು. ಹೊರತಾಗಿ, ಸ್ವಲ್ಪ ವ್ಯತ್ಯಾಸವಿದ್ದರೂ ಲೋಕಪ್ರಸಿದ್ಧವಾಗಿರುವ 'ಸಃ' ಎಂಬ ಪದದ ಅರ್ಥವನ್ನೇ ಇದೂ ಸಹ ಹೇಳುತ್ತಿದೆಯೆಂದೇ ಒಪ್ಪಬೇಕು.

ಇದನ್ನೇ ಪೂರ್ವಮೀಮಾಂಸೆಯ ತಂತ್ರವಾರ್ತಿಕದಲ್ಲಿ ಹೀಗೆ ಹೇಳಲಾಗಿದೆ -

ಆಕೃತೀನಾಮಭಿವ್ಯಕ್ತ್ಯರ್ಥಾ ಕಥಂಚಿನ್ನಿರೂಪಿತಾ ।
ನಾಸಾವವಯವಾಧಿಕ್ಯವಿನಾಶೇಷು ವಿನಶ್ಯತಿ ॥

ದೇವತಾತ್ವ ಮೊದಲಾದ ಧರ್ಮಗಳಿಂದ ಉತ್ಪನ್ನವಾದ ಯಾವ ಅಯವವಾಧಿಕ್ಯ-ವಿದೆಯೋ ಅದರ ವಿನಾಶಮಾತ್ರದಿಂದ ಶಬ್ದಗಳ ಅರ್ಥದಲ್ಲಿ ನಾಶವಾಗುವುದಿಲ್ಲ ಎಂದು.

ಆದ್ದರಿಂದ ಪೂರ್ವಮೀಮಾಂಸೆಯ 'ಯದ್ಯೋನ್ಯಾಂತದುತ್ತರಯೋರ್ಗಾಯತಿ' ಎಂಬ ಅಧಿಕರಣದಲ್ಲಿ 'ಉತ್ತರಾ' ಎಂಬ ಶಬ್ದವನ್ನು 'ಉತ್ತರಾ' ಎಂಬ ಗ್ರಂಥದಲ್ಲಿ ಸಂಜ್ಞಾರೂಪವಾಗಿ ಪ್ರಸಿದ್ಧವಾಗಿದೆ. ಈ 'ಉತ್ತರಾ' ಎಂಬ ಗ್ರಂಥವಿಶೇಷವನ್ನು 'ಉತ್ತರಾ' ಶಬ್ದದಿಂದ ವಿವಕ್ಷಿಸುವುದು ಅನ್ಯನಿರಪೇಕ್ಷಿತವಾದ್ದರಿಂದ ಸಾಧುವಾಗಿದೆ.

ಹೊರತು, 'ಉತ್ತರಾ' ಎಂಬ 'ಋಜ್' ಮಂತ್ರವನ್ನು ವಿವಕ್ಷಿಸಿರುವುದಿಲ್ಲ. 'ಯೋನಿ' ಎಂಬ 'ಋಜ್' ಮಂತ್ರಕ್ಕಿಂತ ಮುಂದಿರುವುದನ್ನು 'ಉತ್ತರಾ' ಎಂಬ ಶಬ್ದದಿಂದ ಸ್ವೀಕರಿಸಿದರೆ ಅನ್ಯಸಾಪೇಕ್ಷಿತವಾಗುವುದರಿಂದ ಸಾವಕಾಶವಾಗುತ್ತದೆ. ಸಾಪೇಕ್ಷಕ್ಕಿಂತಲೂ ನಿರಪೇಕ್ಷವೇ ಪ್ರಬಲವಾದ್ದರಿಂದ 'ಉತ್ತರಾ' ಎಂಬ ಗ್ರಂಥವಿಶೇಷವನ್ನೇ 'ಉತ್ತರಯೋರ್ಗಾಯತಿ' ಎಂಬಲ್ಲಿರುವ 'ಉತ್ತರಾ' ಎಂಬ ಶಬ್ದದಿಂದ ಸ್ವೀಕರಿಸಬೇಕೆಂದು ಪೂರ್ವಮೀಮಾಂಸೆಯಲ್ಲಿ ನಿರ್ಣಯಿಸಲಾಗಿದೆ.

ಅದರಂತೆ ಪ್ರಕೃತ 'ವಾಮನ' ಶಬ್ದವೂ ಪ್ರತಿಯೋಗಿನಿರಪೇಕ್ಷಿತವಾಗಿ ರೂಢಿಯಿಂದ ವಿಷ್ಣುಪರವಾಗಿದೆಯೆಂದೇ ಸ್ವೀಕರಿಸಬೇಕು. ಹೊರತಾಗಿ, ದೀರ್ಘಕ್ಕೆ ಪ್ರತಿಯೋಗಿಯಾದ ಹ್ರಸ್ವ ಎಂಬರ್ಥವನ್ನು ಸ್ವೀಕರಿಸಿ ಸಣ್ಣದಾದ ವಸ್ತು ಎಂಬರ್ಥವನ್ನು ಹೇಳಬಾರದು. ಆದ್ದರಿಂದ 'ವಾಮನ' ಶಬ್ದಕ್ಕೆ ಜ್ಞಾನಿಗಳ ಪ್ರಯೋಗವಿರುವಂತೆ ವಿಷ್ಣುವೆಂಬರ್ಥವನ್ನೇ ಸ್ವೀಕರಿಸುವುದು ನ್ಯಾಯಸಮ್ಮತವಾಗಿದೆ.

ಈ ಅಭಿಪ್ರಾಯದಿಂದಲೇ ನ್ಯಾಯವಿವರಣದಲ್ಲಿ 'ವಾಮನಶ್ರುತೇರೇವಾನವಕಾಶಃ' ವಿಷ್ಣುವಿಷಯಕವಾದ ವಾಮನಶ್ರುತಿಯು ನಿರವಕಾಶವಾಗಿದೆಯೆಂದು ಹೇಳಿರುತ್ತಾರೆ.

ಜಿಜ್ಞಾಸಾ ನಿಯಮದ ಆಕ್ಷೇಪಕ್ಕೆ ಏನು ಉತ್ತರ ?

भावदीपः – अस्त्वेवं प्रागुक्तजिज्ञासानियमाक्षेपे किमुक्तमुत्तरमित्यत आह –**अत इति** ।।

ಹಾಗಾದರೆ ಹಿಂದೆ ಹೇಳಲ್ಪಟ್ಟ ಜಿಜ್ಞಾಸಾನಿಯಮದ ಆಕ್ಷೇಪಕ್ಕೆ ಏನು ಉತ್ತರವನ್ನು ನೀಡಿದಂತಾಯಿತು ಎಂಬ ಪ್ರಶ್ನೆಗೆ 'ಅತಃ' ಎಂಬುದರಿಂದ ಉತ್ತರಿಸುತ್ತಿದ್ದಾರೆ.

ಪ್ರಮಿತ ಪದದಿಂದ ತಿಳಿಯುವ ಮೂಲ

भावदीपः – निरवकाशश्रुतेरेवेत्यर्थः । निरवकाशत्वं भाष्ये कुतो नोक्तमित्यत आह – **अत्रेति** ।। भाष्ये सूत्रे चेत्यर्थः ।

ನಿರವಕಾಶಶ್ರುತಿ ಇರುವುದರಿಂದಲೇ ಎಂದರ್ಥ. ವಾಮನ ಶ್ರುತಿಗೆ ನಿರವಕಾಶತ್ವವನ್ನು ಭಾಷ್ಯದಲ್ಲಿ ಏಕೆ ಹೇಳಲಿಲ್ಲ ? ಎಂಬ ಪ್ರಶ್ನೆಗೆ 'ಅತ್ರ 'ಇತ್ಯಾದಿ ಟೀಕೆಯಿಂದ ಉತ್ತರಿಸುತ್ತಿದ್ದಾರೆ. 'ಅತ್ರ' ಎಂಬ ಪದಕ್ಕೆ ಭಾಷ್ಯದಲ್ಲಿ ಹಾಗೂ ಸೂತ್ರದಲ್ಲಿ ಎಂದರ್ಥ. ಅಂದರೆ ಭಾಷ್ಯ ಹಾಗೂ ಸೂತ್ರಗಳಲ್ಲಿ 'ಪ್ರಮಿತ' ಪದದಿಂದ ನಿರವಕಾಶತ್ವವನ್ನು ತಿಳಿಸಿದ್ದಾರೆಂದು ಅಭಿಪ್ರಾಯ.

ಸೂತ್ರದಲ್ಲಿರುವ ಏವಕಾರದ ವ್ಯಾಖ್ಯಾನ

भावदीपः – यद्वा 'अत एव प्राणः' इत्यत्र 'लिङ्गं बलवदेव स्यात्' इत्यनुभाष्ये लिङ्गनिरवकाशत्वस्यैवकारार्थत्वोक्त्या तत्रेवात्राप्येवकारो निरवकाशत्वार्थ इति भ्रमनिरासायोक्तम् – **अत्रेति** ।।

ಅಥವಾ 'अत एव प्राणः' ಎಂಬ ಸೂತ್ರವನ್ನು ವ್ಯಾಖ್ಯಾನಿಸುವಾಗ ಅನುವ್ಯಾಖ್ಯಾನದಲ್ಲಿ 'ಲಿಂಗಂ ಬಲವದೇವ ಸ್ಯಾತ್' ಎಂದು ಹೇಳಿದ್ದಾರೆ. ಅಂದರೆ ಸೂತ್ರದಲ್ಲಿರುವ 'ಏವ' ಕಾರವು ಲಿಂಗಕ್ಕೆ ನಿರವಕಾಶತ್ವವನ್ನು ಹೇಳುತ್ತಿದೆ ಎಂದು ವ್ಯಾಖ್ಯಾನಿಸುತ್ತಿದ್ದಾರೆ. ಅದರಂತೆ ಇಲ್ಲಿಯೂ ಸಹ 'ಶಬ್ದಾದೇವ' ಎಂಬಲ್ಲಿರುವ ಏವಕಾರವೇ ನಿರವಕಾಶತ್ವವನ್ನು ಪ್ರತಿಪಾದಿಸುತ್ತಿದೆಯೆಂಬ ಭ್ರಮೆಯನ್ನು ನಿರಾಕರಿಸುವುದಕ್ಕಾಗಿಯೂ 'अत्र' ಇತ್ಯಾದಿ ಟೀಕಾಮಾತು ಹೊರಟಿದೆ.

ಶ್ರುತಿಗೆ ನಿರವಕಾಶತ್ವ ಹೇಳಿದ್ದು ಅಭ್ಯುಚ್ಚಯಕ್ಕಾಗಿ

भावदीपः – एवकारस्तु श्रुतेर्लिङ्गादितोऽपि जात्या प्राबल्योक्त्यर्थ इत्याह – **अनेनेति** ।। एवं सति श्रुत्यैव निर्णयोपपत्तौ तन्निरवकाशत्व-मभ्युच्चयत्वेनोक्तमिति भावः ।

ಸೂತ್ರದಲ್ಲಿರುವ ಪ್ರಮಿತಪದವೇ ನಿರವಕಾಶತ್ವವನ್ನು ಹೇಳುವುದಾದರೆ ಏವಕಾರದ ಅರ್ಥವೇನು ಎಂದರೆ ಶ್ರುತಿಯು ಲಿಂಗಾದಿಗಳಿಗಿಂತಲೂ ಸ್ವಾಭಾವಿಕವಾಗಿ ಬಲಿಷ್ಠವಾಗಿದೆ ಎಂಬ ವಿಚಾರವನ್ನು ಏವಕಾರವು ಪ್ರತಿಪಾದಿಸುತ್ತಿದೆಯೆಂದು 'अनेन' ಇತ್ಯಾದಿ ಟೀಕೆಯಿಂದ ಹೇಳುತ್ತಿದ್ದಾರೆ. ಹಾಗಾದರೆ ಶ್ರುತಿಯಿಂದಲೇ ಸ್ವಾಭಾವಿಕವಾಗಿ ನಿರ್ಣಯವು ಉಂಟಾಗುವಾಗ ಶ್ರುತಿಗೆ ನಿರವಕಾಶತ್ವವನ್ನು ಹೇಳಿದ್ದು ಕೇವಲ 'ಅಭ್ಯುಚ್ಚಯ' ಯುಕ್ತಿಯೆಂದು ತಿಳಿಯಬೇಕು.

ವಾಕ್ಯಾದಿಗಳ ಲಕ್ಷಣ

भावदीपः – स्मार्तक्रमो न विवक्षित इति भावेन 'श्रुतिर्नाम समुद्दिष्टं लिङ्गं तल्लक्षणं स्मृतम् । पदानि निरपेक्षाणि वाक्यं प्रकरणं तथा ।। एकस्य प्रतिपत्त्यङ्गवचनं स्थानमुच्यते । अन्यत्र तत्समोक्तिस्तु समाख्या स्थानमेव च ।। अध्यायादिप्रबन्धास्तु प्रभेदा आगमस्य च' इति तत्त्वप्रदीपोक्त वचनानुरोधेन क्रममुपेत्य लक्षणान्याह – **नाममात्रेणेति** ।।

ಶ್ರುತಿ ಲಿಂಗಾದಿಗಳ ಸ್ವರೂಪ ಹಾಗೂ ಲಕ್ಷಣಗಳು ಹೀಗಿವೆ - ' श्रुतिर्नाम समुद्दिष्टं लिंगं तल्लक्षणं स्मृतम् । पदानि निरपेक्षाणि वाक्यं प्रकरणं तथा ॥ एकस्य प्रतिपत्त्यंगवचनं

ಸ್ಥಾನಮುಚ್ಯತೇ । ಅನ್ಯತ್ರ ತತ್ಸಮೋಕ್ತಿಸ್ತು ಸಮಾಖ್ಯಾ ಸ್ಥಾನಮೇವ ಚ ॥ ಅಧ್ಯಾಯಾದಿ ಪ್ರಬಂಧಾಸ್ತು ಪ್ರಭೇದಾ ಆಗಮಸ್ಯ ಚ ॥' ನಾಮಾತ್ಮಕ ಶಬ್ದವೇ ಶ್ರುತಿ. ಅಸಾಧಾರಣಧರ್ಮವೇ ಲಿಂಗ, ಪೂರ್ಣವಾದ ಆಕಾಂಕ್ಷಾದಿಗಳುಳ್ಳ ಪದಗಳ ಸಮುಹವೇ ವಾಕ್ಯ, ಪೂರ್ಣವಾದ ಆಕಾಂಕ್ಷಾದಿಗಳುಳ್ಳ ವಾಕ್ಯಗಳ ಸಮೂಹವೇ ಪ್ರಕರಣ, ಅಂತಹ ಅನೇಕ ಪ್ರಕರಣಗಳ ಸಮೂಹವೇ ಸ್ಥಾನ, ಸಮಾನವಾದ ಮತ್ತೊಂದು ವಚನವೇ ಸಮಾಖ್ಯಾ.

ಶ್ರುತಿಯ ಲಕ್ಷಣ

भावदीपः – आपाततः धर्मद्वारं विना धर्मिनिर्देशकः शब्द इत्यर्थः । यथा द्युभ्वाद्यायतनं स्वशब्दादित्यत्र तमेवैकं जानथ अत्मानम् इत्यत्राऽऽत्मश्रुतिः। यथा वा अत्रैव वामनश्रुतिः ।।

ಆಪಾತತಃ ಧರ್ಮವನ್ನು ಅಪೇಕ್ಷೆ ಪಡದೆ ನೇರವಾಗಿ ಧರ್ಮಿಯನ್ನು ನಿರ್ದೇಶಿಸುವಂತಹ ಶಬ್ದವೇ 'ಶ್ರುತಿ' ಎನಿಸುತ್ತದೆ. ಉದಾಹರಣೆ 'ದ್ಯುಭ್ವಾದ್ಯಾಯತನಂ ಸ್ವಶಬ್ದಾತ್' ಎಂಬ ಸೂತ್ರದಲ್ಲಿ 'ತಮೇವೈಕಂ ಜಾನಾಥ ಆತ್ಮಾನಂ' ಎಂಬ ಆತ್ಮಶ್ರುತಿಯು ಧರ್ಮವನ್ನು ಉಪಸ್ಥಾಪನೆ ಮಾಡದೆ ಧರ್ಮಿಯನ್ನೇ ನಿರ್ದೇಶ ಮಾಡುತ್ತಿರುವುದರಿಂದ ಶ್ರುತಿರೂಪವಾದ ಪ್ರಮಾಣವಾಗಿದೆ. ಅಥವಾ ಇದೇ ಅಧಿಕರಣದ ವಾಮನ ಶ್ರುತಿಯೂ ಸಹ ಇದಕ್ಕೆ ಉದಾಹರಣೆ.

ಲಿಂಗದ ಲಕ್ಷಣ

भावदीपः – असाधारणेति ।। एकपदार्पितो वाऽनेकपदार्पितो वेत्यर्थः। तथा च तादृशधर्मबोधशब्दोऽपि लिङ्गमित्युच्यते । योग्यतावद्वाक्यमपि तथेति भावः ।

ಅಸಾಧಾರಣಧರ್ಮವೇ ಲಿಂಗವೆಂದು ಟೀಕೆಯಲ್ಲಿ ಹೇಳಿದ್ದಾರೆ. ಅಂತಹ ಲಿಂಗವು ಒಂದು ಪದದಿಂದಲೂ ತಿಳಿಯಬಹುದು ಅಥವಾ ಅನೇಕ ಪದದಿಂದಲೂ ತಿಳಿಯಬಹುದು. ಆದ್ದರಿಂದ ಅಂತಹ ಅಸಾಧಾರಣಧರ್ಮಬೋಧಕವಾದ ಶಬ್ದಕ್ಕೂ ಲಿಂಗವೆಂದೇ ಹೆಸರು. ಯೋಗ್ಯತಾದಿಗಳುಳ್ಳ ವಾಕ್ಯದ ಲಕ್ಷಣವು ಹೀಗೆಯೇ ಇರುತ್ತದೆ.

ಶ್ರುತಿಪ್ರತಿಪಾದ್ಯವಾದ ಅನಂತತ್ವಲಿಂಗ

भावदीपः – तत्राऽद्यं यथा 'आकाशस्तल्लिङ्गात्' इत्यत्र 'स एषोऽनन्तः' इत्यनन्तत्वम् । द्वितीयं तु 'अत एव प्राणः' इत्यत्र 'श्रीश्च ते लक्ष्मीश्च पत्न्याविति श्रीपत्नीकत्वादिकम् ।

ಏಕಪದಾರ್ಪಿತ ಲಿಂಗಕ್ಕೆ ಉದಾಹರಣೆ ಹೀಗಿದೆ - 'ಆಕಾಶಸ್ತಲ್ಲಿಂಗಾತ್' ಎಂಬ ಸೂತ್ರದಲ್ಲಿ 'ತಲ್ಲಿಂಗಾತ್' ಎಂಬುದರಿಂದ 'ಸ ಏಷೋಽನಂತಃ'ಎಂಬ ಶ್ರುತಿಪ್ರತಿಪಾದ್ಯವಾದ ಅನಂತತ್ವಪ್ರತಿಪಾದಿತವಾದ ಲಿಂಗವನ್ನು ಹೇಳಿದ್ದಾರೆ. 'ಅನಂತಃ' ಎಂಬ ಒಂದೇ ಪದದಿಂದ ತಿಳಿಯುವಂತಹ ಅನಂತತ್ವವೆಂಬುವ ಲಿಂಗವು ಏಕಪದಾರ್ಪಿತ ಲಿಂಗಕ್ಕೆ ಉದಾಹರಣೆಯಾಗಿದೆ. ಅನೇಕಪದಾರ್ಪಿತಲಿಂಗಕ್ಕೆ ಉದಾಹರಣೆ ಹೀಗಿದೆ - 'ಅತ ಏವ ಪ್ರಾಣಃ' ಎಂಬ ಸೂತ್ರದಲ್ಲಿ 'ಶ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ' ಎಂಬ ಅನೇಕ ಪದಗಳಿಂದ ಶ್ರೀಲಕ್ಷ್ಮೀಪತಿತ್ವವೆಂಬ ಲಿಂಗವು ತಿಳಿಯುತ್ತದೆ.

'ಶ್ರೀಶ್ಚ ತೇ' ಎಂಬ ವಾಕ್ಯದಿಂದ ಪ್ರತಿಪಾದ್ಯವಾದ ಲಿಂಗ

भावदीपः – एतेन 'श्रीश्च ते' इत्यादेर्वाक्यत्वेऽपि तद्बोध्यस्यासाधारण धर्मत्वात् तदभिप्रायेण तत्र सूत्रभाष्यादौ लिङ्गत्वोक्तिर्युक्तेति भावः ।।

ಹೀಗೆ ಹೇಳಿದ್ದರಿಂದ 'ಶ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ' ಎಂಬುದು ವಾಕ್ಯರೂಪವಾಗಿದ್ದರೂ ಇದರಿಂದ ಪ್ರತಿಪಾದ್ಯವಾದದ್ದು ಅಸಾಧಾರಣಧರ್ಮವಾದ್ದರಿಂದ ಸೂತ್ರ ಹಾಗೂ ಭಾಷ್ಯಗಳಲ್ಲಿ ಇದನ್ನು ಲಿಂಗವೆಂದು ಹೇಳಿದ್ದು ಸಮಂಜಸವಾಗಿದೆ ಎಂದು ಸಮರ್ಥಿಸಿದಂತಾಯಿತು.

ನಿರಾಕಾಂಕ್ಷಿತವೆಂದರೇನು ?

भावदीपः – निराकाङ्क्षेति ।। स्वस्मिन्नेव पूर्णाकाङ्क्षत्वेनान्यत्र निराकाङ्क्षाणि पदानीत्यर्थः ।

ನಿರಾಕಾಂಕ್ಷಿತವಾದ ಪದಗಳ ಸಮೂಹವೇ ವಾಕ್ಯವೆಂದು ಟೀಕೆಯಲ್ಲಿ ಹೇಳಿದ್ದಾರೆ. ಅಂದರೆ ತನ್ನಲ್ಲಿರುವ ಪದಗಳಿಂದಲೇ ಆಕಾಂಕ್ಷೆಯು ಪೂರ್ಣವಾಗಿ ಮತ್ತೊಂದು ಪದದ ಅಪೇಕ್ಷೆ ಇಲ್ಲದ ಕಾರಣ ಪದಗಳು ನಿರಾಕಾಂಕ್ಷಿತವೆನಿಸುತ್ತವೆ.

ಎರಡು ಬಗೆಯ ವಾಕ್ಯಗಳ ಬಗ್ಗೆ

भावदीपः – एतच्च वाक्यं विप्रतिपन्नस्वान्तर्गतपदार्थनिर्णायकं वा समभिव्याहृतवाक्यान्तर्गतविप्रतिपन्नपदार्थनिर्णायकं वा भवति ।

ಇಂತಹ ವಾಕ್ಯವು ಎರಡು ವಿಧ - ೧. ವಿಪ್ರತಿಪನ್ನವಾದ ಅರ್ಥವನ್ನು ಸ್ವಾಂತರ್ಗತವಾದ ಪದಗಳಿಂದಲೇ ನಿರ್ಣಯ ಮಾಡುವುದು. ೨. ಸಮಭಿವ್ಯಾಹೃತವಾದ ವಾಕ್ಯಗಳಿಂದ ವಿಪ್ರತಿಪನ್ನವಾದ ಪದಗಳ ಅರ್ಥವನ್ನು ನಿರ್ಣಯಿಸುವುದು.

ಸ್ವಾಂತರ್ಗತವಾದ ಪದಗಳಿಂದಲೇ ಅರ್ಥನಿರ್ಣಯ

भावदीपः – आद्यं यथा हेयत्वावचनाच्चेति सूत्रे 'जानथ आत्मानम्' इति वाक्यम् अहेयत्वरूपलिङ्गोपस्थापनद्वारा जीवं निवार्य परमात्मानम् आत्मपदार्थं निर्णाययति ।

ಸ್ವಾಂತರ್ಗತವಾದ ಪದಗಳೇ ಅರ್ಥ ನಿರ್ಣಾಯಕವಾಗುತ್ತವೆಂಬುದಕ್ಕೆ ದೃಷ್ಟಾಂತ ಹೀಗಿದೆ - 'ಹೇಯತ್ವಾವಚನಾಚ್ಚ' ಎಂಬ ಸೂತ್ರದಲ್ಲಿ 'ತಮೇವೈಕಮ್ ಜಾನಥ ಆತ್ಮಾನಮ್' ಎಂಬ ಶ್ರುತಿಯನ್ನು ಉಲ್ಲೇಖಿಸಲಾಗಿದೆ. ಇದು 'ಅಹೇಯತ್ವ' ಎಂಬ ಲಿಂಗವನ್ನು ಉಪಸ್ಥಾಪನೆ ಮಾಡುವ ಮೂಲಕ ಜೀವನನ್ನು ನಿರಾಕರಿಸಿ ಪರಮಾತ್ಮನೇ ಆತ್ಮಶಬ್ದಪ್ರತಿಪಾದ್ಯನಾಗಿದ್ದಾನೆಂದು ನಿರ್ಣಯಿಸುತ್ತದೆ. ಹೀಗೆ ಸ್ವಾಂತರ್ಗತವಾದ ಪದಗಳಿಂದಲೇ ಅರ್ಥವು ನಿರ್ಣಯವಾಗಿದೆ.

ಎರಡನೆಯ ಪಕ್ಷದಲ್ಲಿಯೇ ವಿಕಲ್ಪ

भावदीपः – द्वितीयमपि वाक्यान्तरनिर्णायकश्रुत्यादियुक्तत्वेन वा सहपाठमात्रेण वेति द्वेधा ।

ಸಮಭಿವಾಹೃತವಾದ ವಾಕ್ಯಾಂತರ್ಗದ ಪದಗಳಿಂದಲೂ ಅರ್ಥನಿರ್ಣಯವಾಗುತ್ತದೆಂಬುದು ಎರಡುವಿಧ, ವಾಕ್ಯಾಂತರನಿರ್ಣಾಯಕವಾದ ಶ್ರುತ್ಯಾದಿಗಳಿಂದ ಕೂಡಿರುವಿಕೆ ಅಥವಾ ಸಹಪಾಠ-ಮಾತ್ರದಿಂದ ಕೂಡಿರುವಿಕೆ ಎಂದು.

'ಅಮೃತಸ್ಯೈಷ ಸೇತುಃ' ಎಂಬುದರಿಂದ ನಿರ್ಣಯವಾಗದ ವಿಷಯ

ಭಾವದೀಪಃ – ಆದ್ಯಂ ಯಥಾ ತತ್ರೈವ 'ಸ ಏಷೋऽನ್ತಶ್ಚರತೇ ಬಹುಧಾ ಜಾಯಮಾನಃ' ಇತಿ ಜೀವಲಿಙ್ಗೋಪಸ್ಥಾಪಕವಾಕ್ಯಸಮಭಿವ್ಯಾಹಾರೇಣ ಪುನರಾತ್ಮಶಬ್ದೇ ಜೀವಪರತ್ವೇ ವಿಪ್ರತಿಪತ್ತೌ 'ಅಮೃತಸ್ಯೈಷ ಸೇತುಃ' ಇತಿ ಮುಕ್ತೋಪಸೃಪ್ಯತ್ವಲಿಙ್ಗೋಪೇತವಾಕ್ಯಾನ್ತರಸ್ಯ 'ಜಾನಥ ಆತ್ಮಾನಮ್' ಇತಿ ವಾಕ್ಯಸ್ಥಾತ್ಮಪದಾರ್ಥಸ್ಯ ಪರಮಾತ್ಮತ್ವನಿರ್ಣಾಯಕತ್ವಮ್।

ಮೊದಲನೆಯದಕ್ಕೆ ಉದಾಹರಣೆ ಹೀಗಿದೆ - 'ಸ ಏಷೋऽಂತಶ್ಚರತೇ ಬಹುಧಾ ಜಾಯಮಾನಃ' ಎಂಬಲ್ಲಿ ಜೀವಲಿಂಗಕ್ಕೆ ಉಪಸ್ಥಾಪಕವಾದ ವಾಕ್ಯದ ಸಮಭಿವ್ಯಾಹಾರದಿಂದ 'ಆತ್ಮ' ಶಬ್ದವು ಜೀವಪರವಾಗಿದೆಯೆಂದು 'ವಿಪ್ರತಿಪತ್ತಿ' ಬಂದಾಗ 'ಅಮೃತಸ್ಯೈಷ ಸೇತುಃ' ಎಂಬ ಶ್ರುತಿಯು 'ಮುಕ್ತೋಪಸೃಪ್ಯತ್ವ' ಎಂಬ ಲಿಂಗದಿಂದ 'ಜಾನಥ ಆತ್ಮಾನಮ್' ಎಂಬಲ್ಲಿರುವ 'ಆತ್ಮ' ಶಬ್ದದಿಂದ ಪರಮಾತ್ಮನೇ ಪ್ರತಿಪಾದ್ಯನಾಗಿದ್ದಾನೆಂದು ನಿರ್ಣಯಿಸುತ್ತದೆ.

ಎರಡನೆಯದ್ದಕ್ಕೆ ದೃಷ್ಟಾಂತ

ಭಾವದೀಪಃ – ದ್ವಿತೀಯಂ ಯಥಾ – ದಹರನಯೇ 'ಕಿಂ ತದತ್ರ ವಿದ್ಯತೇ?' ಇತಿ ಪ್ರಶ್ನವಾಕ್ಯಮ್ 'ಏಷೋऽನ್ತರ್ಹೃದಯ ಆಕಾಶಃ' ಇತಿ ವಾಕ್ಯಸ್ಥಾಕಾಶಪದಸ್ಯ ಬ್ರಹ್ಮರೂಪಾರ್ಥತ್ವಂ ನಿರ್ಣಾಯಯತಿ

ಎರಡನೆಯದ್ದಕ್ಕೆ ದೃಷ್ಟಾಂತ ಹೀಗಿದೆ - ದಹರಾಧಿಕರಣದಲ್ಲಿ 'ಕಿಂ ತದತ್ರ ವಿದ್ಯತೇ?' ಎಂಬ ಪ್ರಶ್ನ ವಾಕ್ಯವು 'ಏಷೋऽಂತರ್ಹೃದಯೇ ಆಕಾಶಃ' ಎಂಬ ವಾಕ್ಯದಲ್ಲಿರುವ 'ಆಕಾಶ' ಪದದಿಂದ ಬ್ರಹ್ಮನೇ ಪ್ರತಿಪಾದ್ಯನಾಗಿದ್ದಾನೆಂದು ನಿರ್ಣಯಿಸುತ್ತದೆ.

ಪ್ರಕರಣದ ಲಕ್ಷಣ

ಭಾವದೀಪಃ – ಏಕೇತಿ ।। ಏಕಪ್ರಮೇಯತಾತ್ಪರ್ಯಕಾನೇಕವಾಕ್ಯಾನೀತ್ಯರ್ಥಃ । ಯಥಾ ಛ್ವಾದಿನಯೇ 'ಪ್ರಕರಣಾದ್' ಇತ್ಯತ್ರ 'ಜುಷ್ಟಂ ಯದಾ ಪಶ್ಯತ್ಯನ್ಯಮೀಶಮ್' ಇತೀಶಶಬ್ದಾರ್ಥೇ ವಿಪ್ರತಿಪತ್ತೌ 'ದ್ವೇ ವಿದ್ಯೇ' ನಿರ್ಬಾಧೋಪಕ್ರಮೇಣ ಬ್ರಹ್ಮಪರತಯಾ ನಿರ್ಣೀತಂ ಪ್ರಕರಣಂ ಸ್ವಾನ್ತರ್ಗತೇಶಶಬ್ದಾರ್ಥಬ್ರಹ್ಮೇತಿ ನಿರ್ಣಾಯಯತಿ ।

ಒಂದೇ ಪ್ರಮೇಯದಲ್ಲಿ ತಾತ್ಪರ್ಯವುಳ್ಳ ಅನೇಕ ವಾಕ್ಯಗಳೇ ಪ್ರಕರಣವೆನಿಸುತ್ತದೆ. ಉದಾಹರಣೆ - ದ್ಯುಭ್ವಾದ್ಯಧಿಕರಣದಲ್ಲಿರುವ 'ಪ್ರಕರಣಾತ್' ಸೂತ್ರದಲ್ಲಿ 'ಜುಷ್ಟಂ ಯದಾ ಪಶ್ಯತ್ಯನ್ಯಮೀಶಮ್' ಎಂಬ ಶ್ರುತಿಯಲ್ಲಿರುವ 'ಈಶ' ಶಬ್ದವು ವಿಷ್ಣುವನ್ನು ಪ್ರತಿಪಾದಿಸುತ್ತದೋ ರುದ್ರನನ್ನೋ ? ಎಂಬ ವಿಪ್ರತಿಪತ್ತಿಯು ಉಂಟಾದಾಗ 'ದ್ವೇ ವಿದ್ಯೇ' ಎಂಬ ನಿರ್ಬಾಧಿತವಾದ ಉಪಕ್ರಮದ ಬಲದಿಂದ ಬ್ರಹ್ಮಪರವೇ ಆಗಿದೆ ಎಂದು ನಿರ್ಣಯಿಸಲಾಗಿದೆ. ಹೀಗೆ ಪ್ರಕರಣವು ಸ್ವಾಂತರ್ಗತವಾದ 'ಈಶ' ಶಬ್ದದಿಂದ ಬ್ರಹ್ಮನೇ ಪ್ರತಿಪಾದ್ಯನಾಗಿದ್ದಾನೆಂದು ನಿರ್ಣಯಿಸುತ್ತದೆ.

ಸ್ಥಾನದ ಲಕ್ಷಣ

भावदीपः – स्मृतौ ऐकस्येत्यादिकमुत्तरेणाप्यन्वेतीति मत्वाऽह – अनेकेति ।। एकार्थे तात्पर्ययुक्तानेकप्रमेयप्रतिपादकप्रकरणजातं स्थानमित्यर्थः।

ಸ್ಮೃತಿಯಲ್ಲಿರುವ 'ಏಕಸ್ಯಾ' ಎಂಬುದು ಮುಂದಿನ ವಾಕ್ಯದಲ್ಲಿಯೂ ಅನ್ವಯವಾಗುತ್ತದೆಂದು ಅನೇಕ ಇತ್ಯಾದಿ ಟೀಕೆಯು ಹೊರಟಿದೆ. ಒಂದೇ ಅರ್ಥದಲ್ಲಿ ತಾತ್ಪರ್ಯವುಳ್ಳ ಅನೇಕ ಪ್ರಮೇಯವನ್ನು ಪ್ರತಿಪಾದಿಸುವಂತಹ ಪ್ರಕರಣಗಳ ಸಮೂಹವೇ 'ಸ್ಥಾನ' ಎನಿಸುತ್ತದೆ.

ಸ್ಥಾನಕ್ಕೆ ಉದಾಹರಣೆ

भावदीपः – यथा 'शन्नोमित्रादिभिर्वाक्यैस्तैरेव हरिमस्तुवत् । भृगुः पञ्चात्मकं पूर्णमन्नादिमयच्युतम् । मुक्तगीतावसनैस्तु' इति स्मृत्या ब्रह्मपरत्वेनावधारितवल्लीत्रयात्मकस्थानस्य स्वान्तर्गतान्नमयादीनां ब्रह्मत्व-निर्णायकत्वम् ।

ಉದಾಹರಣೆ - 'ಶನ್ನೋ ಮಿತ್ರಾದಿಭಿರ್ವಾಕ್ಯೈಸ್ತೈರೇವ ಹರಿಮಸ್ತುವತ್ । ಭೃಗುಃ ಪಂಚಾತ್ಮಕಂ ಪೂರ್ಣಮನ್ನಾದಿಮಯಚ್ಯುತಮ್ । ಮುಕ್ತಾಗೀತಾವಸಾನೈಸ್ತು' ಎಂಬ ಸ್ಮೃತಿಯಿಂದ ಬ್ರಹ್ಮಪರವೆಂದು ನಿರ್ಣೀತವಾದ ಮೂರು ವಲ್ಲಿಗಳೆಂಬ ಸ್ಥಾನವು ಸ್ವಾಂತರ್ಗತವಾದ ಅನ್ನಮಯಾದಿ ಶಬ್ದಗಳು ಬ್ರಹ್ಮಪರವೇ ಆಗಿವೆಯೆಂದು ನಿರ್ಣಯಿಸುತ್ತವೆ.

'ಅಮೃತಸ್ಯೈಷ ಸೇತುಃ' ಎಂಬುದರಿಂದ ನಿರ್ಣಯವಾಗದ ವಿಷಯ

भावदीपः – आद्यं यथा तत्रैव 'स एषोऽन्तश्चरते बहुधा जायमानः' इति जीवलिङ्गोपस्थापकवाक्यसमभिव्याहारेण पुनरात्मशब्दे जीवपरत्वे विप्रतिपत्तौ 'अमृतस्यैष सेतुः' इति मुक्तोपसृप्यत्वलिङ्गोपेतवाक्यान्तरस्य 'जानथ आत्मानम्' इति वाक्यस्थात्मपदार्थस्य परमात्मत्वनिर्णायकत्वम्।

ಮೊದಲನೆಯದಕ್ಕೆ ಉದಾಹರಣೆ ಹೀಗಿದೆ - 'ಸ ಏಷೋಽಂತಶ್ಚರತೇ ಬಹುಧಾ ಜಾಯಮಾನಃ' ಎಂಬಲ್ಲಿ ಜೀವಲಿಂಗಕ್ಕೆ ಉಪಸ್ಥಾಪಕವಾದ ವಾಕ್ಯದ ಸಮಭಿವ್ಯಾಹಾರದಿಂದ 'ಆತ್ಮ' ಶಬ್ದವು ಜೀವಪರವಾಗಿದೆಯೆಂದು 'ವಿಪ್ರತಿಪತ್ತಿ' ಬಂದಾಗ 'ಅಮೃತಸ್ಯೈಷ ಸೇತುಃ' ಎಂಬ ಶ್ರುತಿಯು 'ಮುಕ್ತೋಪಸೃಪ್ಯತ್ವ' ಎಂಬ ಲಿಂಗದಿಂದ 'ಜಾನಥ ಆತ್ಮಾನಮ್' ಎಂಬಲ್ಲಿರುವ 'ಆತ್ಮ' ಶಬ್ದದಿಂದ ಪರಮಾತ್ಮನೇ ಪ್ರತಿಪಾದ್ಯನಾಗಿದ್ದಾನೆಂದು ನಿರ್ಣಯಿಸುತ್ತದೆ.

ಎರಡನೆಯದ್ದಕ್ಕೆ ದೃಷ್ಟಾಂತ

भावदीपः – द्वितीयं यथा – दहरनये 'किं तदत्र विद्यते?' इति प्रश्नवाक्यम् 'एषोऽन्तर्हृदय आकाशः' इति वाक्यस्थाकाशपदस्य ब्रह्मरूपार्थत्वं निर्णाययति

ಎರಡನೆಯದ್ದಕ್ಕೆ ದೃಷ್ಟಾಂತ ಹೀಗಿದೆ - ದಹರಾಧಿಕರಣದಲ್ಲಿ 'ಕಿಂ ತದತ್ರ ವಿದ್ಯತೇ?' ಎಂಬ ಪ್ರಶ್ನ ವಾಕ್ಯವು 'ಏಷೋಽಂತರ್ಹೃದಯೇ ಆಕಾಶಃ' ಎಂಬ ವಾಕ್ಯದಲ್ಲಿರುವ 'ಆಕಾಶ' ಪದದಿಂದ ಬ್ರಹ್ಮನೇ ಪ್ರತಿಪಾದ್ಯನಾಗಿದ್ದಾನೆಂದು ನಿರ್ಣಯಿಸುತ್ತದೆ.

ಪ್ರಕರಣದ ಲಕ್ಷಣ

भावदीपः – एकेति ।। एकप्रमेयतात्पर्यकानेकवाक्यानीत्यर्थः । यथा द्युभ्वादिनये 'प्रकरणाद्' इत्यत्र 'जुष्टं यदा पश्यत्यन्यमीशम्' इतीशशब्दार्थे विप्रतिपत्तौ 'द्वे विद्ये' निर्बाधोपक्रमेण ब्रह्मपरतया निर्णीतं प्रकरणं स्वान्तर्गतेशशब्दार्थब्रह्मेति निर्णाययति ।

ಒಂದೇ ಪ್ರಮೇಯದಲ್ಲಿ ತಾತ್ಪರ್ಯವುಳ್ಳ ಅನೇಕ ವಾಕ್ಯಗಳೇ ಪ್ರಕರಣವೆನಿಸುತ್ತದೆ. ಉದಾಹರಣೆ - ದ್ಯುಭ್ವಾದ್ಯಧಿಕರಣದಲ್ಲಿರುವ 'ಪ್ರಕರಣಾತ್' ಸೂತ್ರದಲ್ಲಿ 'ಜುಷ್ಟಂ ಯದಾ ಪಶ್ಯತ್ಯನ್ಯಮೀಶಮ್' ಎಂಬ ಶ್ರುತಿಯಲ್ಲಿರುವ 'ಈಶ' ಶಬ್ದವು ವಿಷ್ಣುವನ್ನು ಪ್ರತಿಪಾದಿಸುತ್ತದೋ ರುದ್ರನನ್ನೋ ? ಎಂಬ ವಿಪ್ರತಿಪತ್ತಿಯು ಉಂಟಾದಾಗ 'ದ್ವೇ ವಿದ್ಯೇ' ಎಂಬ ನಿರ್ಬಾಧಿತವಾದ ಉಪಕ್ರಮದ ಬಲದಿಂದ ಬ್ರಹ್ಮಪರವೇ ಆಗಿದೆ ಎಂದು ನಿರ್ಣಯಿಸಲಾಗಿದೆ. ಹೀಗೆ ಪ್ರಕರಣವು ಸ್ವಾಂತರ್ಗತವಾದ 'ಈಶ' ಶಬ್ದದಿಂದ ಬ್ರಹ್ಮನೇ ಪ್ರತಿಪಾದ್ಯನಾಗಿದ್ದಾನೆಂದು ನಿರ್ಣಯಿಸುತ್ತದೆ.

ಸ್ಥಾನದ ಲಕ್ಷಣ

भावदीपः – स्मृतौ ऐकस्येत्यादिकमुत्तरेणाप्यन्वेतीति मत्वाऽह – अनेकेति ।। एकार्थे तात्पर्ययुक्तानेकप्रमेयप्रतिपादकप्रकरणजातं स्थानमित्यर्थः।

ಸ್ಮೃತಿಯಲ್ಲಿರುವ 'ಏಕಸ್ಯಾ' ಎಂಬುದು ಮುಂದಿನ ವಾಕ್ಯದಲ್ಲಿಯೂ ಅನ್ವಯವಾಗುತ್ತದೆಂದು ಅನೇಕ ಇತ್ಯಾದಿ ಟೀಕೆಯು ಹೊರಟಿದೆ. ಒಂದೇ ಅರ್ಥದಲ್ಲಿ ತಾತ್ಪರ್ಯವುಳ್ಳ ಅನೇಕ ಪ್ರಮೇಯವನ್ನು ಪ್ರತಿಪಾದಿಸುವಂತಹ ಪ್ರಕರಣಗಳ ಸಮೂಹವೇ 'ಸ್ಥಾನ' ಎನಿಸುತ್ತದೆ.

ಸ್ಥಾನಕ್ಕೆ ಉದಾಹರಣೆ

भावदीपः – यथा 'शन्नोमित्रादिभिर्वाक्यैस्तैरेव हरिमस्तुवत् । भृगुः पञ्चात्मकं पूर्णमन्नादिमयच्युतम् । मुक्तगीतावसनैस्तु' इति स्मृत्या ब्रह्मपरत्वेनावधारितवल्लीत्रयात्मकस्थानस्य स्वान्तर्गतान्नमयादीनां ब्रह्मत्व-निर्णायकत्वम् ।

ಉದಾಹರಣೆ - 'ಶನ್ನೋ ಮಿತ್ರಾದಿಭಿರ್ವಾಕ್ಯೈಸ್ತೈರೇವ ಹರಿಮಸ್ತುವತ್ । ಭೃಗುಃ ಪಂಚಾತ್ಮಕಂ ಪೂರ್ಣಮನ್ನಾದಿಮಯಚ್ಯುತಮ್ । ಮುಕ್ತಾಗೀತಾವಸಾನೈಸ್ತು' ಎಂಬ ಸ್ಮೃತಿಯಿಂದ ಬ್ರಹ್ಮಪರವೆಂದು ನಿರ್ಣೀತವಾದ ಮೂರು ವಲ್ಲಿಗಳೆಂಬ ಸ್ಥಾನವು ಸ್ವಾಂತರ್ಗತವಾದ ಅನ್ನಮಯಾದಿ ಶಬ್ದಗಳು ಬ್ರಹ್ಮಪರವೇ ಆಗಿವೆಯೆಂದು ನಿರ್ಣಯಿಸುತ್ತವೆ.

ಸಮಾಖ್ಯಾ ಲಕ್ಷಣದ ಬಗ್ಗೆ

भावदीपः – समानेति ।। निर्णीतस्थले समानोक्तिरित्यर्थः । सा च शब्दतोऽर्थतश्चेति द्वेधा ।

ನಿರ್ಣೀತವಾದ ಸ್ಥಾನದಲ್ಲಿ ಸಮಾನವಾದ ವಚನವನ್ನು ಹೇಳುವಿಕೆಯೇ ಸಮಾಖ್ಯಾ ಎನಿಸುತ್ತದೆ. ಇದು 'ಅರ್ಥತಃ ಸಮಾಖ್ಯಾ', 'ಶಬ್ದತಃ ಸಮಾಖ್ಯಾ' ಎಂದು ಎರಡುವಿಧ.

ಸಮಾಖ್ಯೆಯು ಎರಡುವಿಧ

भावदीपः – आद्या यथा अन्तर्यामिनये 'शारीरश्च' इति सूत्रे 'य आत्मनि तिष्ठन्नात्मनोऽन्तरः' इत्यादिसमाख्याया 'यो विज्ञाने तिष्ठन्' इत्यादिवाक्यस्थविज्ञानस्य जीवत्वनिर्णायकत्वम् ।

'ಶಬ್ದತಃ' ಸಮಾಖ್ಯೆಗೆ ಉದಾಹರಣೆ ಹೀಗಿದೆ - ಅಂತರ್ಯಾಮ್ಯಧಿಕರಣದಲ್ಲಿರುವ 'ಶಾರೀರಶ್ಚ' ಎಂಬ ಸೂತ್ರದಲ್ಲಿ 'ಯ ಆತ್ಮನಿ ತಿಷ್ಠನ್ನಾತ್ಮನೋಽಂತರ' ಇತ್ಯಾದಿ ಸಮಾಖ್ಯೆಯು 'ಯೋ ವಿಜ್ಞಾನೇ ತಿಷ್ಠನ್' ಎಂಬ ವಾಕ್ಯದಲ್ಲಿರುವ ವಿಜ್ಞಾನಶಬ್ದದಿಂದ ಜೀವನೇ ಪ್ರತಿಪಾದ್ಯನಾಗಿದ್ದಾನೆಂದು ನಿರ್ಣಯಿಸುತ್ತದೆ.

ಎರಡು ಬಗೆಯ ಸಮಾಖ್ಯೆಗಳಿಗೆ ಉದಾಹರಣೆ

भावदीपः – उक्तं च तट्टीकायाम् विज्ञानपदेन शारीरः कुतः? इति चेद् उदाहृतश्रुतिसमाख्यानादेवेति । द्वितीया तु वैश्वानरनये वैश्वानरस्य विष्णुत्वे पुरुषसूक्तसमाख्यानिर्णायिकेत्याद्यूह्यम् ।

ಅದೇ ಅಧಿಕರಣದ ಟೀಕೆಯಲ್ಲಿ 'ವಿಜ್ಞಾನಪದೇನ ಶಾರೀರಃ ಕುತಃ? ಇತಿ ಚೇದ್ ಉದಾಹೃತಶ್ರುತಿ-ಸಮಾಖ್ಯಾನಾದೇವ' ಎಂದು ಹೇಳಿದ್ದಾರೆ. ಅರ್ಥತಃ ಸಮಾಖ್ಯೆಗೆ ಉದಾಹರಣೆ ಹೀಗಿದೆ - ವೈಶ್ವಾನರಾಧಿಕರಣದಲ್ಲಿ ವಿಷ್ಣುವೇ ವೈಶ್ವಾನರಶ್ರುತಿಯಿಂದ ಪ್ರತಿಪಾದ್ಯನಾಗಿದ್ದಾನೆನ್ನಲು ಪುರುಷಸೂಕ್ತದ ಸಮಾಖ್ಯೆಯನ್ನು ಹೇಳಲಾಗಿದೆ. ವೈಶ್ವಾನರ ಸೂಕ್ತದಲ್ಲಿರುವ ಪದಗಳೇ ಬೇರೆ, ಪುರುಷಸೂಕ್ತದಲ್ಲಿರುವ ಪದಗಳೇ ಬೇರೆ. ಆದರೂ ಅರ್ಥದಲ್ಲಿ ವ್ಯತ್ಯಾಸವಿಲ್ಲದ ಕಾರಣ ಪುರುಷಸೂಕ್ತವು ಸಮಾಖ್ಯಾ-ಪ್ರಮಾಣವಾಗುತ್ತದೆ.

ಶ್ರುತ್ಯಾದಿಗಳಲ್ಲಿ ಯಾವುದು ಪ್ರಬಲ ?

भावदीपः – अत्र लक्षणेषु विशेषणकृत्यं स्पष्टम् । तेषु पूर्वबलीयस्त्वं बीजोक्त्या व्यनक्ति – तत्रेति ।। साक्षात् लिङ्गवद्व्याप्त्यादिबुद्धिमनपेक्ष्य शब्दविधयेत्यर्थः ।।

ಈ ಶ್ರುತಿಲಿಂಗಾದಿಗಳ ಲಕ್ಷಣಗಳಲ್ಲಿರುವ ವಿಶೇಷಣಗಳ ಸಾರ್ಥಕ್ಯವು ಸ್ಪಷ್ಟವಾಗಿರುವುದರಿಂದ ಸ್ವತಃ ತಾವೇ ತಿಳಿದುಕೊಳ್ಳಬೇಕು. ಇವುಗಳಲ್ಲಿ ಮುಂದಿನ ಪ್ರಮಾಣಗಳಿಗಿಂತ ಹಿಂದಿನ ಪ್ರಮಾಣಗಳು ಬಲಿಷ್ಠವಾಗಿದೆ. ಈ ವಿಷಯದಲ್ಲಿ ಕಾರಣವನ್ನು ಸ್ಪಷ್ಟಪಡಿಸುತ್ತಿದ್ದಾರೆ 'ತತ್ರ' ಇತ್ಯಾದಿ ಟೀಕೆಯಿಂದ. ಸಾಕ್ಷಾತ್ ಎಂದರೆ ಲಿಂಗದಂತೆ ವ್ಯಾಪ್ತಿಜ್ಞಾನ ಮೊದಲಾದವುಗಳನ್ನು ಅಪೇಕ್ಷೆಪಡದೆ ಶಬ್ದರೂಪವಾಗಿಯೇ ಅರ್ಥನಿರ್ಣಾಯಕಗಳಾಗಿದೆ ಎಂದರ್ಥ.

ಶ್ರುತಿಗಿಂತ ಲಿಂಗವು ದುರ್ಬಲವೆನ್ನಲು ಕಾರಣ

भावदीपः – अनुमापकतयेति ।। 'इदमेतदर्थकं तदसाधारणधर्मबोधकशब्द-समानाधिकृतत्वात् य एवं स एवं यथाऽमुक' इति वा । 'अयमेतत्पदार्थः तत्समानाधिकृतपदबोध्यासाधारणधर्मवत्त्वात् य एवं स एवं यथाऽमुकः' इति वाऽनुमापकतयेत्यर्थः । व्याप्त्यादिबुद्धिव्यवधानेनानुमापकत्वात् तदानन्तर्यमित्यर्थः ।

ಶ್ರುತಿಯು ಸ್ವಾಭಾವಿಕವಾಗಿ ಅರ್ಥನಿರ್ಣಾಯಕವಾದರೆ, ಲಿಂಗವು ವ್ಯಾಪ್ತಿಜ್ಞಾನವನ್ನು ಅಪೇಕ್ಷಪಡುವ ಮೂಲಕ ಅರ್ಥನಿರ್ಣಾಯಕವಾಗುತ್ತದೆ. ಅದು ಹೀಗೆ - 'ಇದಮೇತದರ್ಥಕಂ ತದಸಾಧಾರಣಧರ್ಮ-ಬೋಧಕಶಬ್ದಸಮಾನಾಧಿಕೃತತ್ವಾತ್ । ಯ ಏವಂ ಸ ಏವಂ ಯಥಾऽಮುಕಃ' ಅಸಾಧಾರಣ ಧರ್ಮಬೋಧಕವಾದ ಶಬ್ದದ ಸಾಮಾನಾಧಿಕರಣ್ಯವಿರುವ ಪ್ರಯುಕ್ತ ಈ ಪದವು ಇಂತಹ ಅರ್ಥವನ್ನೇ ಪ್ರತಿಪಾದಿಸಬೇಕು. ಇದೇತರಹ ಅನೇಕ ದೃಷ್ಟಾಂತಗಳು ಕಂಡಿವೆ' ಎಂಬ ಅನುಮಾನದಿಂದ ಲಿಂಗವು ಅರ್ಥನಿರ್ಣಾಯಕವಾಗುತ್ತದೆ. ಅಥವಾ 'ಅಯಮೇತತ್ಪದಾರ್ಥಃ ತತ್ಸಮಾನಾಧಿಕೃತಪದಬೋಧ್ಯಾ-ಸಾಧಾರಣಧರ್ಮವತ್ತ್ವಾತ್ ಯ ಏವಂ ಸ ಏವಂ ಯಥಾऽಮುಕಃ' 'ಆ ಪದದ ಸಾಮಾನ್ಯಾಧಿಕರಣವು ಈ ಪದದಲ್ಲಿರುವದರಿಂದ. ಅದೇ ಪದ ಪ್ರತಿಪಾದನೆ ಮಾಡುವ ಅಸಾಧಾರಣಧರ್ಮವನ್ನೇ ಈ ಪದವೂ

ಸಹ ಪ್ರತಿಪಾದನೆ ಮಾಡುವುದರಿಂದ ಈ ಅರ್ಥವು ಇಂಥಹ ಪದದ ಅರ್ಥವೇ ಆಗುತ್ತದೆ. ಈ ವಿಷಯದಲ್ಲೂ ಅನೇಕ ದೃಷ್ಟಾಂತಗಳು ಕಂಡಿವೆ' ಎಂಬ ಅನುಮಾನವೂ ಸಹ ಅರ್ಥನಿರ್ಣಾಯಕವಾಗುತ್ತದೆ. ಹೀಗೆ ವ್ಯಾಪ್ತ್ಯಾದಿ ಬುದ್ಧಿಗಳನ್ನು ಅಪೇಕ್ಷಿಸಿ, ಅನಂತರ ಅರ್ಥನಿರ್ಣಯವನ್ನು ಹುಟ್ಟಿಸುವುದರಿಂದ ಶ್ರುತಿಗಿಂತ ಲಿಂಗವು ದುರ್ಬಲವಾಗಿದೆ ಎಂದು ತಿಳಿಯಬೇಕು.

ವಾಮನಾಧಿಕರಣವೇ ಉದಾಹರಣೆ

ಭಾವದೀಪಃ – ಯಥಾऽತ್ರೈವ ವಾಮನಶ್ರುತಿತಃ ಪ್ರಾಣಾದಿವ್ಯವಸ್ಥಾಪಕತ್ವಲಿಙ್ಗಸ್ಯ ।

ಉದಾಹರಣೆ ಇದೇ ಅಧಿಕರಣದ ವಾಮನಶ್ರುತಿಯು ಪ್ರಾಣಾದಿವ್ಯವಸ್ಥಾಪಕತ್ವವೆಂಬ ಲಿಂಗಕ್ಕಿಂತಲೂ ಶೀಘ್ರವಾಗಿ ಅರ್ಥೋಪಸ್ಥಾಪಕತ್ವವಾಗಿ ಪ್ರಬಲವಾಗಿದೆ.

ಭಾವದೀಪಃ – ಯದೋರ್ಧ್ವಂ ಪ್ರಾಣಮುನ್ನಯತೀತಿ ಶಬ್ದಾವಗತೋ ಧರ್ಮಃ ವಾಯ್ವವಿನಾಭಾವಾನು ಸನ್ಧಾನವತ ಏವ, ಈಶಾನಶಬ್ದಾರ್ಥೋ ವಾಯುರೇವ । ತತ್ಸಮಾನಾಧಿಕೃತಶಬ್ದ-ಬೋಧ್ಯತದವಿನಾಭೂತ ಪ್ರಾಣವ್ಯವಸ್ಥಾಪಕತ್ವರೂಪಧರ್ಮವತ್ತ್ವಾತ್ । ಯೋ ಯತ್ಸಮಾನಾಧಿಕೃತ-ಶಬ್ದಬೋಧ್ಯಾಸಾಧಾರಣಧರ್ಮವಾನ್, ಸ ತಚ್ಛಬ್ದಾರ್ಥಃ ।

'ಯದೋರ್ಧ್ವಂ ಪ್ರಾಣಮುನ್ನಯತಿ' ಎಂಬ ಶಬ್ದದಿಂದ ತಿಳಿಯಲ್ಪಟ್ಟ ಯಾವ ಪ್ರಾಣವ್ಯವಸ್ಥಾಪಕತ್ವ ಧರ್ಮವಿದೆಯೋ ಅಂತಹ ಧರ್ಮದಿಂದ ಅವಿನಾಭೂತರಾದ ಕಾರಣ 'ಈಶಾನ' ಶಬ್ದಪ್ರತಿಪಾದ್ಯರಾದವರು ವಾಯುದೇವರೇ ಆಗುತ್ತಾರೆ. ಏಕೆಂದರೆ ತತ್ಸಮಾನಾಧಿಕೃತಶಬ್ದಬೋಧ್ಯವಾದ ಅವಿನಾಭೂತವಾದ ಪ್ರಾಣವ್ಯವಸ್ಥಾಪಕತ್ವವೆಂಬ ಧರ್ಮವನ್ನು ಹೊಂದಿರುವುದರಿಂದ ಯಾರು ಯಾವ ಶಬ್ದದ ಸಾಮಾನಾಧಿ-ಕರಣ್ಯದಿಂದ ಬೋಧ್ಯವಾದ ಅಸಾಧಾರಣಧರ್ಮವುಳ್ಳವನೋ ಅವನು ಆ ಶಬ್ದದಿಂದ ಪ್ರತಿಪಾದ್ಯನಾಗುತ್ತಾನೆ.

ಶ್ರುತಿಯು ಲಿಂಗಕ್ಕಿಂತ ಪ್ರಬಲ

ಭಾವದೀಪಃ – ಯಥಾ 'ತಲ್ಲಿಙ್ಗಾದ್' ಇತ್ಯಾದೌ 'ಸ ಏಷोऽನನ್ತಃ' ಇತ್ಯಾಕಾಶಶಬ್ದ-ಸಮಾನಾಧಿಕೃತಾನನ್ತಶಬ್ದಬೋಧ್ಯಾಸಾಧಾರಣಧರ್ಮವಾನ್ ವಿಷ್ಣುಃ ಆಕಾಶಶಬ್ದಾರ್ಥ ಇತಿ ಈಶಾನಶಬ್ದಾರ್ಥೇ ವಾಯುರಿತಿ ನಿರ್ಣಾಯಯಿತುಂ ಪ್ರವರ್ತನ್ತೇ, ತತಃ ಪ್ರಾಗೇವ

ईशानशब्दसमानाधिकृता वामनश्रुतिः व्याप्तिधियं विनैवेशान् शब्दार्थरूपं स्वार्थं स्वनिष्ठशक्त्यैव निश्चाययतीति प्राबल्यमित्यर्थः ।।

ಉದಾಹರಣೆ - 'ಆಕಾಶಸ್ತಲ್ಲಿಂಗಾತ್' ಎಂಬ ಸೂತ್ರದಲ್ಲಿ 'ತಲ್ಲಿಂಗಾತ್' ಎಂಬ ಪದದಿಂದ 'ಸ ಏಷೋऽನಂತಃ' ಎಂಬಲ್ಲಿರುವ ಆಕಾಶಶಬ್ದದ ಸಾಮಾನಾಧಿಕರಣ್ಯ ಇರುವಂತಹ ಅನಂತ ಶಬ್ದ ಪ್ರತಿಪಾದ್ಯವಾದ ಅಸಾಧಾರಣಧರ್ಮವುಳ್ಳ ಯಾವ ವಿಷ್ಣುವಿದ್ದಾನೋ ಆವನೇ 'ಆಕಾಶ' ಶಬ್ದ ಪ್ರತಿಪಾದ್ಯನಾಗಿದ್ದಾನೆಂದು ಸಮರ್ಥಿಸಲಾಗುತ್ತದೆ. ಯಾವಾಗ 'ಈಶಾನ' ಶಬ್ದವು ವಾಯುವನ್ನು ಪ್ರತಿಪಾದನೆ ಮಾಡುತ್ತದೋ ಆದಕ್ಕಿಂತ ಮೊದಲೇ 'ಈಶಾನ' ಶಬ್ದದ ಸಮಾನ್ಯಾಧಿಕರಣ್ಯವನ್ನು ಹೊಂದಿರುವಂತಹ ವಾಮನಶ್ರುತಿಯು ವ್ಯಾಪ್ತಿಜ್ಞಾನವನ್ನು ಅಪೇಕ್ಷಪಡದೆ ವಿಷ್ಣುವೇ ಈಶಾನಪದಪ್ರತಿಪಾದ್ಯನಾಗಿದ್ದಾನೆಂದು ನಿಶ್ಚಯಿಸಿಬಿಡುತ್ತದೆ. ಹೀಗೆ ಶ್ರುತಿಯು ಲಿಂಗಕ್ಕಿಂತ ಪ್ರಬಲವಾಗಿದೆ ಎಂಬುದನ್ನು ತಿಳಿಯಬೇಕು.

ವಾಕ್ಯಕ್ಕಿಂತಲೂ ಲಿಂಗವೇ ಪ್ರಬಲವೆನ್ನಲು ಕಾರಣ

ಭಾವದೀಪಃ – अनेकेति ।। अनेकपदार्थकथनद्वारा स्वार्थान्वययोग्य एव समभिव्याहृतवाक्यान्तरार्थ इत्यादिरूपेणानुमापकत्वादित्यर्थः ।

ಲಿಂಗಕ್ಕಿಂತಲೂ ವಾಕ್ಯವು ವಿಳಂಬವಾಗಿ ಅರ್ಥನಿರ್ಣಾಯಕವಾಗುತ್ತದೆ. ಆದ್ದರಿಂದ ವಾಕ್ಯಕ್ಕಿಂತ ಲಿಂಗವೇ ಪ್ರಬಲವಾಗಿದೆ. ಏಕೆಂದರೆ ಅನೇಕ ಪದಾರ್ಥಗಳನ್ನು ತಿಳಿಸುವ ಮೂಲಕ ವಿಪ್ರತಿಪನ್ನವಾದ ವಾಕ್ಯದ ಅರ್ಥವನ್ನು ನಿರ್ಣಯಿಸಬೇಕಾಗಿರುವುದರಿಂದ ವಿಳಂಬವಾಗಿ ಅರ್ಥನಿರ್ಣಾಯಕವಾಗುತ್ತದೆ.

ಎಲ್ಲಾ ವಾಕ್ಯಗಳು ವಿಷ್ಣುಪರ

ಭಾವದೀಪಃ – यथा दहरनये 'एषोऽन्तर्हृदय आकाशः' इति वाक्यं हृत्स्थ दहराकाशस्थितब्रह्मार्थकम् । तद्गतान्वेष्टव्यवस्तुप्रश्नार्थककिंतदत्रेत्यादिवाक्य समभिव्याहारात् । यद्यदर्थकवाक्यसमभिव्याहृतं तद्वाक्यं तदर्थान्वय-योग्यार्थकम् । यथा स य एवंविदिति ब्रह्मज्ञानिवाक्यसमभिव्याहृतम् 'अन्नमयमात्मानमुपसङ्क्रामतीत्यादिवाक्यं ब्रह्मप्राप्त्यर्थकमिति सामान्य-व्याप्त्या वा यथा 'अधीहि भगवो ब्रह्म' इति ब्रह्मप्रश्नार्थकवाक्यसमभिव्याहृतं

चक्षुःश्रोत्रमित्याद्युत्तरवाक्यं ब्रह्मार्थकमित्यादिरूपेण विशिष्य वाऽनुमापकत्वादित्यर्थः ।

ಅನುಮಾನದ ಸ್ವರೂಪ ಹೀಗಿದೆ - ದಹರಾಧಿಕರಣದಲ್ಲಿರುವಂತಹ 'ಏಷೋऽಂತರ್ಹೃದಯೇ ಆಕಾಶಃ' ಎಂಬ ವಾಕ್ಯವು ಹೃದಯದಲ್ಲಿರುವ ದಹರಾಕಾಶದಲ್ಲಿರುವವನು ಬ್ರಹ್ಮನೇ ಆಗಿದ್ದಾನೆಂದು ಹೇಳುತ್ತಿದೆ ಏಕೆಂದರೆ ಹೃದಯದಲ್ಲಿ ಅನ್ವೇಷಣೆ ಮಾಡಲು ಯೋಗ್ಯವಾದ ವಸ್ತುವಿನ ಬಗ್ಗೆ ಪ್ರಶ್ನೆ ಹಾಗೂ ಉತ್ತರಗಳು ಇರುವುದರಿಂದ. 'ಏಷೋऽಂತರ್ಹೃದಯ ಆಕಾಶಃ ಇತಿ ವಾಕ್ಯಂ ಹೃತ್ಸ್ಥದಹರಾಕಾಶಸ್ಥಿತ-ಬ್ರಹ್ಮಾರ್ಥಕಮ್ । ತದ್ಗತಾನ್ವೇಷ್ಟವ್ಯವಸ್ತುಪ್ರಶ್ನಾರ್ಥಕಕಿಂತದತ್ರೇತ್ಯಾದಿವಾಕ್ಯಸಮಭಿವ್ಯಾಹಾರಾತ್ । ಯದ್ ಯದರ್ಥಕವಾಕ್ಯಸಮಭಿವ್ಯಾಹೃತಮ್, ತದ್ ವಾಕ್ಯಂ ತದರ್ಥಾನ್ವಯಯೋಗ್ಯಾರ್ಥಕಮ್ । ಯಥಾ ಸ ಯ ಏವಂವಿದ್ ಇತಿ ಬ್ರಹ್ಮಜ್ಞಾನಿವಾಕ್ಯಸಮಭಿವ್ಯಾಹೃತಮ್ ಅನ್ನಮಯಮಾತ್ಮಾನಮುಪಸಂಕ್ರಾಮತಿ ಇತ್ಯಾದಿವಾಕ್ಯಂ ಬ್ರಹ್ಮಪ್ರಾಪ್ತ್ಯರ್ಥಕಮ್ । ಎಂದು. ಯಾವರೀತಿಯಾಗಿ ಬ್ರಹ್ಮಜ್ಞಾನಿವಾಕ್ಯದ ಸಮಭಿವ್ಯಾಹಾರವಿರುವುದರಿಂದ 'ಅನ್ನಮಯಮಾತ್ಮಾನಮುಪಸಂಕ್ರಾಮತಿ' ಎಂಬ ವಾಕ್ಯವು ಬ್ರಹ್ಮನ ಪ್ರಾಪ್ತಿಯನ್ನೇ ಹೇಳುತ್ತದೆಯೋ ಅದರಂತೆ 'ಕಿಂ ತದತ್ರ' ಎಂಬ ವಾಕ್ಯದ ಸಮಭಿವ್ಯಾಹಾರವಿರುವುದರಿಂದ ಅನ್ವೇಷಣವಾಕ್ಯವು ಹೃದಯಾಕಾಶದಲ್ಲಿರುವವನು ಬ್ರಹ್ಮನೇ ಆಗಿದ್ದಾನೆಂದು ಹೇಳುತ್ತದೆ. ಮತ್ತೊಂದು ಉದಾಹರಣೆ - 'ಅಧೀಹಿ ಭಗವೋ ಬ್ರಹ್ಮ' ಎಂಬಲ್ಲಿರುವ ಬ್ರಹ್ಮನ ಬಗ್ಗೆ ಪ್ರಶ್ನಿಸುವ ವಾಕ್ಯದ ಸಮಭಿವ್ಯಾಹಾರವಿರುವುದರಿಂದ 'ಚಕ್ಷುಃ ಶ್ರೋತ್ರಮ್' ಇವೇ ಮೊದಲಾದ ಮುಂದಿನ ವಾಕ್ಯಗಳು ಬ್ರಹ್ಮ ಪ್ರತಿಪಾದಕವೇ ಆಗಿವೆಯೆಂದು ತಿಳಿಯುತ್ತದೆ.

ಶ್ರುತ್ಯಾದಿಗಳು ವಿಷ್ಣುವೊಬ್ಬನನ್ನೇ ಪ್ರತಿಪಾದನೆ ಮಾಡುತ್ತದೆ

भावदीपः – तथा 'जानथ आत्मानमित्याद्यपि वाक्यं अन्या वाचो विमुञ्चथ इत्यादिवाक्यसहपाठात् ब्रह्मार्थकम् । तथा 'एतमेव ब्रह्मेत्याचक्षते' इतिवाक्यं ब्रह्मपदं मुख्यपरब्रह्मार्थकम् । अन्यत्रायोग्यान्वयप्रतियोग्यर्थकसावधारणपद समभिव्याहारात् । सामान्यव्याप्त्या सम्मतवदिति स्वान्तर्गतपदार्थानुमापकमित्याद्यूह्यम् ।

ಮೇಲಿನ ಉದಾಹರಣೆಯಂತೆ 'ತಮೇವೈಕಮ್ ಜಾನಥ ಆತ್ಮಾನಮ್' ಎಂಬ ವಾಕ್ಯವೂ ಕೂಡ 'ಅನ್ಯ ವಾಚೋ ವಿಮುಂಚಥಾ' ಎಂಬ ವಾಕ್ಯದ ಸಹಪಾಠವಿರುವುದರಿಂದ ಬ್ರಹ್ಮಪ್ರತಿಪಾದಕವೇ ಆಗಿದೆ. ಅದರಂತೆ 'ಏತಮೇವ ಬ್ರಹ್ಮೇತ್ಯಾಚಕ್ಷತೇ' ಎಂಬ ವಾಕ್ಯದಲ್ಲಿರುವ ಬ್ರಹ್ಮಪದವೂ ಕೂಡ ಮುಖ್ಯವಾಗಿ ಪರಬ್ರಹ್ಮನನ್ನೇ ಪ್ರತಿಪಾದಿಸುತ್ತದೆ. ಇದನ್ನು ಅನುಮಾನ ರೂಪದಲ್ಲಿ ಹೀಗೆ ಹೇಳಬಹುದು. 'ಏತಮೇವ ಬ್ರಹ್ಮೇತ್ಯಾಚಕ್ಷತೇ ಇತಿ ವಾಕ್ಯಮ್ ಬ್ರಹ್ಮಪದಂ ಮುಖ್ಯಪರಬ್ರಹ್ಮಾರ್ಥಕಮ್'. 'ಅನ್ಯತ್ರಾಯೋಗ್ಯಾನ್ವಯ-ಪ್ರತಿಯೋಗ್ಯರ್ಥಕ ಸಾವಧಾರಣಪದ ಸಮಭಿವ್ಯಾಹಾರಾತ್' 'ಸಮ್ಮತವತ್'. ಎಂದು ಹೀಗೆ ಸ್ವಾಂತರ್ಗತವಾದ ಪದಾರ್ಥಗಳನ್ನು ನಿರ್ಣಯಿಸುವ ಮೂಲಕ ವಾಕ್ಯತಾತ್ಪರ್ಯವಿಷಯವನ್ನು ನಿರ್ಣಯಿಸಬೇಕಾಗಿರುವುದರಿಂದ ವಿಳಂಬವಾಗಿ ಅರ್ಥನಿರ್ಣಾಯಕವಾಗುತ್ತದೆಂಬುದನ್ನು ಸ್ವತಃ ಊಹಿಸಿಕೊಳ್ಳಬೇಕು.

ವಾಕ್ಯ ಹಾಗೂ ಪ್ರಕರಣಗಳಲ್ಲಿರುವ ವ್ಯತ್ಯಾಸ

भावदीपः – बह्वर्थेति ।। अनेकवाक्यात्मकस्य प्रकरणस्यानेक-वाक्यार्थधीपूर्वकमिदं प्रकरणमेतत्परमिति यज्ज्ञानं तज्ज्ञानपूर्वकं स्वान्तर्गतविप्रतिपन्नवाक्यस्य प्रकरणानुगुण एवार्थ इत्यनेकवाक्यार्थधीद्वारा लिङ्गत्वादित्यर्थः । यथा प्रागुक्तप्रकरणं अन्यमीशमिति वाक्यं जीवब्रह्मभेदा र्थकमित्यस्यानुमापकमित्यादि बोध्यम् ।।

ವಾಕ್ಯಕ್ಕಿಂತಲೂ ಪ್ರಕರಣ ಮತ್ತಷ್ಟು ವಿಳಂಬವಾಗಿ ಅರ್ಥನಿರ್ಣಾಯಕವಾಗಿದೆ. ಏಕೆಂದರೆ ಪ್ರಕರಣವು ಅನೇಕವಾಕ್ಯಸಮೂಹರೂಪವಾಗಿದೆ. ಆ ಎಲ್ಲಾ ವಾಕ್ಯಗಳ ಅರ್ಥಜ್ಞಾನವನ್ನು ಹುಟ್ಟಿಸಿ ತನ್ಮೂಲಕ ಪದಾರ್ಥಗಳ ಜ್ಞಾನವನ್ನು ಹುಟ್ಟಿಸಿ, ತನ್ಮೂಲಕ ಅರ್ಥವನ್ನು ನಿರ್ಣಯಿಸಬೇಕು. ಅಂದರೆ ಸ್ವಾಂತರ್ಗತ ವಿಪ್ರತಿಪನ್ನವಾಕ್ಯವು ಪ್ರಕರಣಕ್ಕೆ ಅನುಗುಣವಾಗಿದೆಯೆಂದು ಸಮರ್ಥಿಸಬೇಕು. ಹೀಗೆ ಅನೇಕ ವಾಕ್ಯಾರ್ಥಜ್ಞಾನವನ್ನು ತಂದು ಕೊಡುವ ಮುಖಾಂತರ ಲಿಂಗರೂಪವಾಗಿರುವುದರಿಂದ ವಾಕ್ಯಕ್ಕಿಂತ ವಿಳಂಬವಾಗಿ ಅರ್ಥೋಪಸ್ಥಾಪಕವಾಗಿದೆಯೆಂದು ಅಭಿಪ್ರಾಯ. ಹಿಂದೆ ಹೇಳಲ್ಪಟ್ಟ ಪ್ರಕರಣವು 'ಅನ್ಯಮೀಶಮ್' ಎಂಬಲ್ಲಿರುವ ವಾಕ್ಯವು ಜೀವ-ಬ್ರಹ್ಮ ಭೇದ ಪ್ರತಿಪಾದಕವಾಗಿದೆ ಎಂಬುದಕ್ಕೆ ಅನುಮಾಪಕವಾಗಿದೆಯೆಂಬುದನ್ನು ಈ ವಿಷಯದಲ್ಲಿ ದೃಷ್ಟಾಂತವಾಗಿ ತಿಳಿಯಬೇಕು.

ಸ್ಥಾನವು ಪ್ರಕರಣಾದಿಗಳಿಗಿಂತ ದುರ್ಬಲವೆನ್ನಲು ಕಾರಣ

भावदीपः – अतिबलत्वेति ।। अनेकप्रकरणार्थधीपूर्वकमिदं स्थानमेतत्परमिति यज्ज्ञानं तत्पूर्वकं स्वान्तर्गतस्य विप्रतिपन्नवाक्यस्य स्थानानुगुण एवार्थ इत्यनेकप्रकरणार्थधीद्वाराऽनुमापकत्वादित्यर्थः ।

ಅನೇಕ ಪ್ರಕರಣಗಳ ಅರ್ಥಜ್ಞಾನವನ್ನು ತಂದುಕೊಡುವ ಮೂಲಕ ಸ್ಥಾನವು ಅರ್ಥನಿರ್ಣಾಯಕವಾಗುವುದರಿಂದ ಪ್ರಕರಣಗಳಿಗಿಂತ ಸ್ಥಾನವು ದುರ್ಬಲವಾಗಿದೆ. ಹೀಗೆ ಪ್ರಕರಣದ ಜ್ಞಾನವನ್ನು ತಂದುಕೊಡುವ ಮೂಲಕ ಸ್ವಾಂತರ್ಗತವಿಪ್ರತಿಪನ್ನವಾಕ್ಯವು ಸ್ಥಾನಕ್ಕೆ ಅನುಗುಣವಾಗಿದೆಯೆಂದು ತಿಳಿಸಬೇಕಾದ್ದರಿಂದ ಇದೂ ಕೂಡ ಅನುಮಾಪಕವಾಗಿದೆಯೆಂದು ತಿಳಿಯಬೇಕು.

ಸಮಾಖ್ಯಾಪ್ರಮಾಣವು ಅತ್ಯಂತ ದುರ್ಬಲವೆನ್ನಲು ಕಾರಣ

भावदीपः – प्रागुक्तमेवोदाहरणम् – स्थानान्तरेति ।। स्थानान्तरस्थाया अत्रोक्तमेव स्थानान्तरस्थविप्रतिपन्नवाक्येनापि बोध्यमिति स्थानद्वयानुसन्धानपूर्वकं तत्सदृशत्वादिदं तत्परमित्येवं सादृश्यमात्रेण लिङ्गत्वादित्यर्थः ।

ಈ ವಿಷಯದಲ್ಲೂ ಹಿಂದಿನದ್ದೇ ಉದಾಹರಣೆ. ಒಂದು ಸ್ಥಾನದಲ್ಲಿರುವ ವಾಕ್ಯಕ್ಕೆ ಮತ್ತೊಂದು ಸ್ಥಾನದಲ್ಲಿರುವ ಸಮಾನವಾಕ್ಯವು ಸಮಾಖ್ಯಾ ಪ್ರಮಾಣವೆನಿಸುತ್ತದೆ. ಮತ್ತೊಂದು ಸ್ಥಾನದಲ್ಲಿರುವ ವಾಕ್ಯದ ಬಲದಿಂದ ವಿಪ್ರತಿಪನ್ನವಾದ ವಾಕ್ಯದ ಅರ್ಥವನ್ನು ನಿರ್ಣಯಿಸಬೇಕಾದ್ದರಿಂದ ಸ್ಥಾನಭೇದ ಅನುಸಂಧಾನದ ಮೂಲಕ 'ತತ್ಸದೃಶತ್ವಾದಿದಂ ತತ್ಪರಮ್' ಎಂಬ ಸಾದೃಶ್ಯದಿಂದ ಅರ್ಥವು ನಿಶ್ಚಯವಾಗುವುದರಿಂದ ಸ್ಥಾನಕ್ಕಿಂತಲೂ ವಿಳಂಬವಾಗಿ ಅರ್ಥನಿರ್ಣಾಯಕವಾಗುತ್ತದೆ. ಹೀಗೆ ಎಲ್ಲಾ ಪ್ರಮಾಣಗಳಿಗಿಂತಲೂ ಸಮಾಖ್ಯಾಪ್ರಮಾಣವು ಅತ್ಯಂತ ದುರ್ಬಲವಾಗುತ್ತೆಂದು ತಿಳಿಯಬೇಕು. ಈ ವಿಷಯದಲ್ಲೂ ಹಿಂದೆ ಹೇಳಿದ್ದನ್ನೇ ಉದಾಹರಣೆಯಾಗಿ ತಿಳಿಯಬೇಕು.

ಅಂತರಾಧಿಕರಣದಲ್ಲಿ ಶ್ರುತಿಯು ದುರ್ಬಲವೆಂದು ಹೇಗೆ ಹೇಳಿದರು ?

ಭಾವದೀಪಃ – उक्तमेवोदाहरणम् । नन्वेवं कथमन्तरादिनयेषु लिङ्गात् श्रुतेर्दौर्बल्योक्तिः । कथं वा वैश्वानरनये असम्भवात्पुरुषविधमिति प्रकरणादिना पाचकत्वादिलिङ्गबाधः इत्यत आह – अत्रापीति ।।

ಹಾಗಾದರೆ ಅಂತರಾಧಿಕರಣದಲ್ಲಿ ಲಿಂಗಕ್ಕಿಂತ ಶ್ರುತಿಯು ದುರ್ಬಲವಾಗಿದೆಯೆಂದು ಹೇಳಿದ್ದು ಹೇಗೆ ಯುಕ್ತವಾಗುತ್ತದೆ? ಮತ್ತು ವೈಶ್ವಾನರಾಧಿಕರಣದಲ್ಲಿರುವ 'ಅಸಂಭವಾತ್ಪುರುಷವಿಧಮ್' ಇತ್ಯಾದಿ ಸೂತ್ರದಲ್ಲಿ ಪ್ರಕರಣ ಪ್ರಮಾಣದಿಂದ 'ಪಾಚಕತ್ವ' ವೆಂಬ ಲಿಂಗಗಳಿಗೆ ಬಾಧವನ್ನು ಹೇಳಿದ್ದು ಹೇಗೆ ಯುಕ್ತವಾಗುತ್ತದೆ? ಇತ್ಯಾದಿ ಪ್ರಶ್ನೆಗೆ 'ಅತ್ರಾಪಿ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ.

'ಏವಮಾಗಮನಿರ್ಣಯಃ' ಎಂಬುದರ ವ್ಯಾಖ್ಯಾನ

ಭಾವದೀಪಃ – नोपक्रमादावेवेत्यपेरर्थः । पूर्ववत्समन्वयसूत्रोक्तोपक्रमादाविवेत्यर्थः। एवं त्रिपादीं व्याख्याय अस्त्वेवं ततश्च किमित्यत एवमागमनिर्णय इति चतुर्थपादं व्याचष्टे – अत्र विरुद्धेति ।।

ಉಪಕ್ರಮಾದಿಗಳಲ್ಲಷ್ಟೇ ಅಲ್ಲ ಎಂಬುದು 'ಅಪಿ' ಶಬ್ದದ ಅರ್ಥ. ಹಿಂದೆ ಸಮನ್ವಯ ಸೂತ್ರದಲ್ಲಿ ಹೇಳಲ್ಪಟ್ಟ ಉಪಕ್ರಮಾದಿ ಪ್ರಮಾಣಗಳಂತೆ ಎಂದು ಹೇಳಿದಂತಾಯಿತು. ಹೀಗೆ ಶ್ಲೋಕದಲ್ಲಿರುವ ಮೂರು ಪಾದಗಳನ್ನು ವ್ಯಾಖ್ಯಾನ ಮಾಡಿ ಮುಂದೇನು? ಎಂಬ ಪ್ರಶ್ನೆಗೆ 'ಏವಮಾಗಮನಿರ್ಣಯಃ' ಎಂಬ ನಾಲ್ಕನೆಯ ಪಾದವನ್ನು ವ್ಯಾಖ್ಯಾನಿಸುತ್ತಿದ್ದಾರೆ 'ಅತ್ರ ವಿರುದ್ಧ' ಇತ್ಯಾದಿ ಟೀಕೆಯಿಂದ.

ಆಗಮಾರ್ಥದಲ್ಲಿ ಮಾತ್ರ ನಿರ್ಣಯಕಲಿಂಗಗಳು

ಭಾವದೀಪಃ – एवमित्यनुवादः पूर्वेणोत्तरेण च वाक्यद्वयेन व्याख्येयतयान्वेति । एवं विरुद्धैतेषां समवाये सतीति । एवं पूर्वपूर्वेण उत्तरोत्तरबाधायेति च । आगमार्थविनिर्णय इत्युक्त्या श्रुत्यादिषट्कम् आगमार्थ एव लिङ्गतया निर्णायकम् ।

'ಏವಂ' ಎಂಬುದು ಅನುವಾದರೂಪವಾಗಿದೆ. ಹಿಂದಿನ ಮುಂದಿನ ವಾಕ್ಯಗಳಿಂದ ವ್ಯಾಖ್ಯೇಯರೂಪವಾಗಿ ಅನ್ವಯವನ್ನು ಹೊಂದುತ್ತದೆ. 'ಏವಂ' ಎಂದರೆ ವಿರುದ್ಧವಾದ ವಿಷಯದಲ್ಲಿ ಇತ್ಯಾದಿಗಳು ಸೇರಿದಾಗ ಹಿಂದಿನವುಗಳಿಗಿಂತ ಮುಂದಿನ ಪ್ರಮಾಣಗಳಿಗೆ ಬಾಧವನ್ನು ಹೇಳಬೇಕು ಎಂದಂತಾಯಿತು. 'ಆಗಮಾರ್ಥವಿನಿರ್ಣಯೇ' ಎಂದು ಹೇಳಿದ್ದರಿಂದ ಶ್ರುತ್ಯಾದಿ ಆರು ಪ್ರಮಾಣಗಳು ಆಗಮಾರ್ಥದ ನಿರ್ಣಯದಲ್ಲಷ್ಟೇ ಲಿಂಗರೂಪವಾಗಿ ನಿರ್ಣಾಯಕವಾಗಿದೆ.

'ಲಿಂಗಂ ತಾತ್ಪರ್ಯನಿರ್ಣಯೇ' ಎಂಬುದರ ವ್ಯಾಖ್ಯಾನ

भावदीपः – उपक्रमादिकं तु तात्पर्यानुमापकमिति दर्शितम् । अत एव तत्र 'लिङ्गं तात्पर्यनिर्णये' इत्युक्तम् । 'समाख्यावाक्यप्रकरणस्थानानि च' इति प्रमाणलक्षणटीकायां उपक्रमादीनां तात्पर्यलिङ्गत्वम् एतेषां पुनरर्थ एवेति योगविभाग इति ।

ಉಪಕ್ರಮಾದಿಗಳಾದರೂ ಆಗಮದ ತಾತ್ಪರ್ಯಕ್ಕೆ ಅನುಮಾಪಕವಾಗಿದೆಯೆಂದು ಹೇಳಿದಂತಾಯಿತು. ಆದ್ದರಿಂದಲೇ ಉಪಕ್ರಮಾದಿಗಳನ್ನು ಉಲ್ಲೇಖಿಸುವಾಗ 'ಲಿಂಗಂ ತಾತ್ಪರ್ಯನಿರ್ಣಯೇ' ಎಂಬುದಾಗಿ 'ತಾತ್ಪರ್ಯ' ಶಬ್ದವನ್ನು ಉಪಯೋಗಿಸಿದ್ದಾರೆ. 'ಸಮಾಖ್ಯಾವಾಕ್ಯಪ್ರಕರಣಸ್ಥಾನಾನಿ ಚ' ಎಂದು ಪ್ರಮಾಣಲಕ್ಷಣಟೀಕೆಯಲ್ಲಿ ಉಪಕ್ರಮಾದಿಗಳಿಗೆ ತಾತ್ಪರ್ಯವಿಷಯಲ್ಲಿ ಲಿಂಗತ್ವವನ್ನು ಶ್ರುತ್ಯಾದಿಗಳಲ್ಲಿ ಲಿಂಗವಿಷಯದಲ್ಲಿ ಲಿಂಗತ್ವವನ್ನು ಹೇಳುವ ಮೂಲಕ ಯೋಗವಿಭಾಗ ಮಾಡಿದ್ದಾರೆ.

ಶ್ರುತಿಲಿಂಗಾದಿಗಳ ಬಗ್ಗೆ ತಾತ್ಪರ್ಯಚಂದ್ರಿಕೆಯಲ್ಲಿ ಹೆಚ್ಚಿನ ವಿಚಾರ

भावदीपः – वक्ष्यते चात्रैवाग्रे उपक्रमेत्यादिना ।। अत्रैषामुदाहरणानि तु चन्द्रिकायामुक्तानि । विवृतानि च तानि चन्द्रिकाप्रकाशेऽस्माभिः । तत्र श्रुत्यादिलिङ्गबाधोऽत्रैव स्पष्टः ।

ಈ ವಿಷಯವು ಮುಂದೆ ಉಪಕ್ರಮಾದಿಟೀಕೆಯಿಂದ ಸ್ಪಷ್ಟಪಡಿಸಲಾಗುತ್ತದೆ. ಈ ಎಲ್ಲಾವಿಷಯಗಳಲ್ಲಿ ಉದಾಹರಣೆಗಳನ್ನು ತಾತ್ಪರ್ಯಚಂದ್ರಿಕೆಯಲ್ಲಿ ತಿಳಿಯಬೇಕು. ನಾವೂ ಸಹ ಚಂದ್ರಿಕಾಪ್ರಕಾಶದಲ್ಲಿ ವಿವರಿಸಿದ್ದೇವೆ. ಶ್ರುತ್ಯಾದಿಗಳಿಂದ ಲಿಂಗ ಮೊದಲಾದವು ಹೇಗೆ ಬಾಧಿತವಾಗುತ್ತವೆಂಬುದು ಮಾತ್ರ ಇಲ್ಲಿ ಸ್ಪಷ್ಟವಾಗಿ ನಿರೂಪಿಸಲಾಗಿದೆ.

ಸ್ಮೃತಿಕಾರರಿಗೂ ಈ ತಾರತ್ಯಮವು ವಿವಕ್ಷಿತ

भावदीपः – स्मृतावुक्तक्रमो न विवक्षितः, किन्तु सौत्र एवेति वक्तुमाह – न चेति ।।

ಸ್ಮೃತಿಯಲ್ಲಿ ಮೇಲೆ ಹೇಳಿದ ಕ್ರಮವು ವಿವಕ್ಷಿತವಾಗಿಲ್ಲ ಸೂತ್ರಕಾರರಿಗಷ್ಟೇ ಈ ಅರ್ಥವು ಸಮ್ಮತವಾಗಿದೆ 'ನಚ' ಇತ್ಯಾದಿ ಟೀಕೆಯಿಂದ ಸಮರ್ಥಿಸಲಾಗಿದೆ.

ಸಮಾಖ್ಯಾಪ್ರಮಾಣದ ಆಧಾರದಲ್ಲಿ

भावदीपः – आत्मेति ।। चतुर्थस्य चतुर्थपादे 'आत्मा प्रकरणादिति नये परं ज्योतिरुपसंपद्येति दहरविद्यास्थवाक्यगतं ज्योतिः किं सूर्यः विष्णुर्वेति सन्देहे 'सूर्यमगन्मज्योतिरिति ज्योतिःपदस्य सूर्य इव विष्णावपि तद्देवान् ज्योतिषां ज्योतिः' इत्यादौ प्रयोगसत्त्वेऽपि स तेजसि सूर्ये संपन्नो यथा पादोदरस्त्वचा विनिर्मुच्यते । एव हैव स पाप्मना विनिर्मुक्त इति श्रुतिसमाख्यानात् सूर्य इति प्राप्ते सिद्धान्तितम् । ज्योतिः परमात्मैव। य आत्माऽपहतपाप्मेति परमात्मप्रकरणात् । समाख्या तु विष्णौ सावकाशेति । तथा च तद्विरोधः स्यादिति भावः ।

ನಾಕನೇ ಅಧ್ಯಾಯದ ನಾಕನೇ ಪಾದದಲ್ಲಿ 'ಆತ್ಮಾ ಪ್ರಕರಣಾತ್' ಎಂಬ ಸೂತ್ರವಿದೆ. ಇದರಲ್ಲಿ 'ಪರಂಜ್ಯೋತಿರುಪಸಂಪದ್ಯಾ' ಎಂಬ ದಹರವಿದ್ಯೆಯಲ್ಲಿರುವ ವಾಕ್ಯದ 'ಜ್ಯೋತಿ' ಶಬ್ದವು ಸೂರ್ಯನನ್ನು ಪ್ರತಿಪಾದಿಸುತ್ತದೋ, ವಿಷ್ಣುವನ್ನು ಪ್ರತಿಪಾದಿಸುತ್ತದೋ ? ಎಂಬ ಸಂಶಯವು ಪ್ರಾಪ್ತವಾಗುತ್ತದೆ. 'ಸೂರ್ಯಮಗನ್ಮ ಜ್ಯೋತಿಃ' ಎಂಬ ಶ್ರುತಿಯಲ್ಲಿ 'ಜ್ಯೋತಿಃ' ಎಂಬ ಪದವು ಸೂರ್ಯನಲ್ಲಿ ಪ್ರಯುಕ್ತವಾದಂತೆ 'ತದ್ದೇವಾ ಜ್ಯೋತಿಷಾಮ್ ಜ್ಯೋತಿಃ' ಎಂಬಲ್ಲಿ ವಿಷ್ಣುವಿನಲ್ಲೂ ಕೂಡ ಪ್ರಸಿದ್ಧವಾಗಿದೆ. ಹೀಗೆ ವಿಷ್ಣುವಿನಲ್ಲಿ 'ಜ್ಯೋತಿಸ್' ಶಬ್ದದ ರೂಢಿ ಇರಬಹುದು. 'ಸ ತೇಜಸಿ ಸೂರ್ಯೇ ಸಂಪನ್ನೋ ಯಥಾ ಪಾದೋದರಸ್ತ್ವಚಾ ವಿನಿರ್ಮುಚ್ಯತೇ । ಏವ ಹೈವ ಸ ಪಾಪ್ಮನಾ ವಿನಿರ್ಮುಕ್ತಃ' ಎಂಬ ಶ್ರುತಿ ಸಮಾಖ್ಯಾನದಿಂದ 'ಅಪಹತಪಾಪ್ಮತ್ವವೆಂಬ ಗುಣವು ಸೂರ್ಯನಲ್ಲಿ ಮಾತ್ರ ಬರುವುದರಿಂದ ಸಮಾಖ್ಯಾ ಶ್ರುತಿಯ ಬಲದಿಂದ ಸೂರ್ಯನೇ 'ಜ್ಯೋತಿಸ್' ಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆಂದು ಪೂರ್ವಪಕ್ಷ.

'ಜ್ಯೋತಿಸ್' ಶಬ್ದದಿಂದ ಪರಮಾತ್ಮನೇ ಪ್ರತಿಪಾದ್ಯನು. ಏಕೆಂದರೆ 'ಯ ಆತ್ಮಾ ಅಪಹತಪಾಪ್ಮಾ' ಎಂಬುದು ಪರಮಾತ್ಮನ ಪ್ರಕರಣವಾಗಿದೆ ಸಮಾಖ್ಯಾಪ್ರಮಾಣವಾದರೂ ವಿಷ್ಣುವಿನಲ್ಲಿ ಸಾವಕಾಶವಾಗಿದೆ. ಆದ್ದರಿಂದ ಸಮಾಖ್ಯಾಪ್ರಮಾಣದ ವಿರೋಧದಿಂದ ಪ್ರಕರಣಕ್ಕೆ ಬಾಧವನ್ನು ಹೇಳಲು ಸಾಧ್ಯವಿಲ್ಲ, ಆದ್ದರಿಂದ ಪ್ರಕರಣದಿಂದ ಸಮಾಖ್ಯೆಗೆ ವಿರೋಧವನ್ನು ಹೇಳಿದಂತಾಗುತ್ತದೆ.

ಶ್ರುತಿಲಿಂಗಾದಿಗಳ ಬಗ್ಗೆ ಮೂರನೆಯ ಅಧ್ಯಾಯದಲ್ಲೂ ಹೆಚ್ಚಿನ ವಿಚಾರ

भावदीपः – तर्हि स्वोक्त एव क्रमः कुतः इत्यत आह – तदाहेति ।। अस्माभिरुक्तं श्रुत्यादिपौर्वापर्यं तृतीयेऽध्याय इत्यर्थः ।

ಹಾಗಾದರೆ ನೀವು ಹೇಳಿದ ಕ್ರಮವನ್ನು ಏಕೆ ಅನುಸರಿಸಬೇಕು? ಎಂಬ ಪ್ರಶ್ನೆಗೆ 'ತದಾಹ' ಎಂಬ ಟೀಕೆಯಿಂದ ಉತ್ತರಿಸಿದ್ದಾರೆ. ಮೂರನೇ ಅಧ್ಯಾಯದಲ್ಲಿ ಶ್ರುತಿಲಿಂಗಾದಿಗಳಲ್ಲಿರುವಂತಹ ಪೌರ್ವಾಪರ್ಯ ವಿಚಾರವನ್ನು ವಿವರವಾಗಿ ನಿರೂಪಣೆ ಮಾಡಿದ್ದೇವೆ.

ಜೈಮಿನಿ ಋಷಿಗಳಿಗೂ ಇದು ಸಮ್ಮತ

भावदीपः – यद्वा श्रुत्यादिबलाबलबीजमस्माभिरुक्तमेव जैमिनिसूत्रेऽप्यभिमतं न तु पूर्वमीमांसाकारैरुक्तमित्यभिप्रेत्याऽह – तदाह जैमिनिरिति ।।

ಅಥವಾ ಶ್ರುತಿಲಿಂಗಾದಿಗಳ ಪ್ರಾಬಲ್ಯದೌರ್ಬಲ್ಯಕ್ಕೆ ಕಾರಣವನ್ನು ನಾವು ಹೇಳಿದ್ದೇ ಜೈಮಿನಿಸೂತ್ರದ ಅಭಿಪ್ರಾಯ ಹೊರತು ಪೂರ್ವಮೀಮಾಂಸಕಾರರು ಹೇಳಿದ್ದು ಜೈಮಿನಿಸೂತ್ರದ ಅಭಿಪ್ರಾಯವಲ್ಲವೆಂಬ ದೃಷ್ಟಿಯಿಂದ 'ತದಾಹ ಜೈಮಿನಿಃ' ಎಂಬ ಮಾತನ್ನು ಹೇಳಿರುತ್ತಾರೆ.

'ತದಾಹ ಜೈಮಿನಿಃ' ಎಂಬುದರ ಅಭಿಪ್ರಾಯ

भावदीपः – श्रुत्यादिबलाबलबीजमित्यर्थः । परोक्तबलाबलबीजखण्डनं तु तर्कताण्डवे द्वितीयपरिच्छेदान्ते प्रपञ्चितम् । सूत्रे विरुद्धानामिति योज्यम् । भाष्यमपि स्वोक्तक्रमे संवादयति – भाष्यकारोऽपीति ।।

ಶ್ರುತಿಲಿಂಗಾದಿಗಳ ಬಲಾಬಲಬೀಜವನ್ನು ಜೈಮಿನಿಋಷಿಗಳು ಹೇಳಿದ್ದಾರೆಂದು 'ತದಾಹ ಜೈಮಿನಿಃ' ಎಂಬುದರ ಅಭಿಪ್ರಾಯ. ಪೂರ್ವಮೀಮಾಂಸಕರು ಹೇಳುವಂತಹ ಪ್ರಾಬಲ್ಯ-ದೌರ್ಬಲ್ಯಗಳ ಕಾರಣವನ್ನು ತರ್ಕತಾಂಡವದ ಎರಡನೇ ಪರಿಚ್ಛೇದದ ಕೊನೆಯಲ್ಲಿ ವಿವರಿಸಿದ್ದೇವೆ. ಸೂತ್ರದಲ್ಲಿ ವಿರುದ್ಧವಾದವುಗಳನ್ನು ಎಂಬುದನ್ನು ಯೋಜನೆ ಮಾಡಿಕೊಳ್ಳಬೇಕು, ಭಾಷ್ಯವೂ ಸಹ ಈ ವಿಷಯದಲ್ಲಿ ಸಂವಾದವಾಗಿದೆ ಎಂಬುದನ್ನು 'ಭಾಷ್ಯಕಾರೋಽಪಿ' ಎಂಬ ಟೀಕೆಯಿಂದ ಹೇಳುತ್ತಿದ್ದಾರೆ.

ಭಕ್ತಿಪಾದದ ಅನುವ್ಯಾಖ್ಯಾನದಲ್ಲಿ

ಭಾವದೀಪಃ – ಭಕ್ತಿಪಾದೀಯಾನುವ್ಯಾಖ್ಯಾನಕಾರೋऽಪ್ಯಾಹೇತ್ಯರ್ಥಃ । 'ಆಗಮಾರ್ಥಾವಸಿತ್ಯರ್ಥಾ ನಿಯತವ್ಯಾಪ್ತಯೋऽಖಿಲಾಃ ।' ಇತಿ ಪೂರ್ವಶೇಷಃ ।

ಭಕ್ತಿಪಾದದ ಅನುವ್ಯಾಖ್ಯಾನದಲ್ಲೂ ಶ್ರೀಮದಾಚಾರ್ಯರು ಹೇಳಿರುತ್ತಾರೆಂದು ತಿಳಿಯಬೇಕು. 'ಆಗಮಾರ್ಥಾವಸಿತ್ಯರ್ಥಾ ನಿಯತವ್ಯಾಪ್ತಯೋऽಖಿಲಾಃ' ಎಂಬ ಹಿಂದಿನ ವಾಕ್ಯವನ್ನು ಶೇಷಪೂರಣ ಮಾಡಿಕೊಳ್ಳಬೇಕು.

'ಶ್ರುತಿಲಿಂಗವಾಕ್ಯಾನಾಮ್' ಎಂಬ ಟೀಕೆಗೆ ವ್ಯಾಖ್ಯಾನ

ಭಾವದೀಪಃ – ನನು ವೈಶ್ವಾನರನಯೇ 'ಅಸಮ್ಭವಾತ್' ಇತಿ ಗುಣಸೂತ್ರೇ 'ಕೋ ನ ಆತ್ಮಾ ಕಿಂ ಬ್ರಹ್ಮೇತಿ ಶ್ರುತಾತ್ಮಾದಿಶ್ರುತೇರುಪಕ್ರಮನಿಶ್ಚಯದ್ವಾರಾ ಪ್ರಕರಣ-ನಿಶ್ಚಾಯಕತ್ವಮುಕ್ತಮ್ । ಅತ್ರ ತೂಚ್ಯತೇ ವಿಪ್ರತಿಪನ್ನೇಶಾನಶಬ್ದಾರ್ಥಪ್ರಮಾಪಕತ್ವಂ ವಾಮನಶ್ರುತೇಃ । ತಥಾ 'ತಲ್ಲಿಙ್ಗಾದಿತ್ಯಾದೌ ಅನನ್ತತ್ವಾದಿಲಿಙ್ಗಸ್ಯ ವಿಪ್ರತಿಪನ್ನಾರ್ಥನಿರ್ಣಾಯಕತ್ವಮುಕ್ತಮ್ । 'ಅತ್ತಾ ಚರಾಚರಗ್ರಹಣಾತ್' ಇತ್ಯಾದೌ ಅಪ್ಸಂವತ್ಸರಸೃಷ್ಟ್ಯಾದೇರ್ಲಿಙ್ಗಸ್ಯ ಪ್ರಕರಣನಿರ್ಣಾಯಕತ್ವಮುಕ್ತಮ್ । ತಥಾ ಮಾನ್ತ್ರವರ್ಣಿಕಸೂತ್ರೇ 'ಬ್ರಹ್ಮವಿದಾಪ್ನೋತಿ ಪರಮಿತಿ ವಾಕ್ಯಂ ಬ್ರಹ್ಮಪ್ರಕರಣನಿರ್ಣಾಯಕ (ಮಿತ್ಯು)ಮುಕ್ತಮ್ । ದಹರನಯಾದೌ 'ಕಿಂ ತದತ್ರೇತ್ಯಾದಿವಾಕ್ಯಂ ಸಮಭಿವ್ಯಾಹೃತವಾಕ್ಯಾನ್ತರಾರ್ಥನಿರ್ಣಾಯಕಂ ಭವತಿ । ತತ್ಕಥಮಿತ್ಯತ ಆಹ – **ಶ್ರುತಿಲಿಙ್ಗವಾಕ್ಯಾನಾಮಿತಿ** ।।

ವೈಶ್ವಾನರಾಧಿಕರಣದ 'ಅಸಂಭವಾತ್' ಎಂಬ ಗುಣಸೂತ್ರದಲ್ಲಿ 'ಕೋ ನ ಆತ್ಮಾ ಕಿಂ ಬ್ರಹ್ಮ' ಇತ್ಯಾದಿ ಶ್ರುತಿಯಲ್ಲಿ ಕೇಳಿಸುತ್ತಿರುವ ಆತ್ಮಾದಿ ಶಬ್ದಗಳು ಉಪಕ್ರಮದ ವಾಕ್ಯವನ್ನು ನಿರ್ಣಯಿಸುವ ಮೂಲಕ ಪ್ರಕರಣಕ್ಕೆ ನಿಶ್ಚಾಯಕವಾಗುವುದೆಂದು ಹೇಳಲಾಗಿದೆ. ಈ ಅಧಿಕರಣದಲ್ಲೂ ವಿಪ್ರತಿಪನ್ನವಾದ 'ಈಶಾನ' ಶಬ್ದದ ಅರ್ಥವನ್ನು ವಾಮನ ಶ್ರುತಿಯು ನಿರ್ಣಯಿಸುತ್ತದೆಂದು ಹೇಳಲಾಗಿದೆ. ಇದರಂತೆ 'ಆಕಾಶಾಸ್ತಲ್ಲಿಂಗಾತ್' ಎಂಬ ಸೂತ್ರದಲ್ಲಿ ಅನಂತತ್ವವೆಂಬ ಲಿಂಗವು ವಿಪ್ರತಿಪನ್ನವಾದ ಅರ್ಥನಿರ್ಣಾಯಕವಾಗುತ್ತದೆಂದು ಹೇಳಲಾಗಿದೆ. 'ಅತ್ತಾ ಚರಾಚರಗ್ರಹಣಾತ್' ಎಂಬ ಸೂತ್ರದಲ್ಲಿ 'ಅಪ್ಸಂವತ್ಸರಸೃಷ್ಟಿ' ಎಂಬ ಲಿಂಗವು ಪ್ರಕರಣಕ್ಕೆ ನಿಶ್ಚಾಯಕವಾಗುತ್ತದೆಂದು ಹೇಳಲಾಗಿದೆ. ಮತ್ತು ಮಾಂತ್ರವರ್ಣಿಕಸೂತ್ರದಲ್ಲಿ 'ಬ್ರಹ್ಮವಿದಾಪ್ನೋತಿ ಪರಮ್' ಎಂಬ ವಾಕ್ಯಕ್ಕೆ ಬ್ರಹ್ಮಪ್ರಕರಣನಿರ್ಣಾಯಕತ್ವವನ್ನು ಹೇಳಲಾಗಿದೆ. ಅದರಂತೆ ದಹರಾಧಿಕರಣದಲ್ಲಿ 'ಕಿಂ ತದತ್ರ' ಎಂಬ ವಾಕ್ಯವು ಸಮಭಿವ್ಯಾಹೃತವಾದ ವಾಕ್ಯಾಂತರಾರ್ಥಕ್ಕೆ ನಿರ್ಣಾಯಕವಾಗಿದೆಯೆಂದು ಹೇಳಲಾಗಿದೆ. ಇದೆಲ್ಲ ಹೇಗೆ ಕೂಡುತ್ತದೆ? ಎಂಬ ಪ್ರಶ್ನೆಗೆ 'ಶ್ರುತಿಲಿಂಗವಾಕ್ಯಾನಾಮ್' ಇತ್ಯಾದಿ ಟೀಕೆಯಿಂದ ಉತ್ತರಿಸಿದ್ದಾರೆ.

ಉಪಕ್ರಮೋಪಸಂಹಾರ ವಾಕ್ಯಗಳಲ್ಲಿ ಅರ್ಥನಿರ್ಣಯದ ಕ್ರಮ

भावदीपः – एतेषामुदाहरणानि चन्द्रिकायां व्यक्तानि । तर्हि उपक्रमादिकं व्यर्थमित्यत आह – **उपक्रमेति ।। अन्यथेति ।। अर्थसिद्ध्यभावे ।**

ಶ್ರುತಿ, ಲಿಂಗ, ವಾಕ್ಯಗಳು ನೇರವಾಗಿ ವಿಪ್ರತಿಪನ್ನವಾದ ವಾಕ್ಯದಲ್ಲಿದ್ದರೆ, ಶ್ರುತಿ, ಲಿಂಗ ಮೊದಲಾದ ಸ್ವರೂಪದಿಂದಲೇ ನಿರ್ಣಾಯಕವಾಗುತ್ತವೆ. ಉಪಕ್ರಮ, ಉಪಸಂಹಾರಗಳಲ್ಲಿ ಶ್ರುತವಾಗಿದ್ದರೆ ಉಪಕ್ರಮ, ಉಪಸಂಹಾರ ವಾಕ್ಯಗಳ ಅರ್ಥವನ್ನು ನಿರ್ಣಯಿಸುವ ಮೂಲಕ ಪ್ರತಿಪನ್ನವಾದ ವಾಕ್ಯಕ್ಕೆ ನಿಶ್ಚಾಯಕವಾಗುತ್ತದೆಯೆಂಬ ವಿಚಾರವನ್ನು ಚಂದ್ರಿಕೆಯಲ್ಲಿ ಸ್ಪಷ್ಟಪಡಿಸಲಾಗಿದೆ. ಮತ್ತು ಪ್ರತಿಯೊಂದಕ್ಕೂ ಉದಾಹರಣೆಯನ್ನು ತೋರಿಸಲಾಗಿದೆ. ಹಾಗಾದರೆ ಉಪಕ್ರಮಾದಿಗಳನ್ನು ಹೇಳಿದ್ದು ವ್ಯರ್ಥವಲ್ಲವೇ? ಎಂಬ ಪ್ರಶ್ನೆಗೆ 'ಉಪಕ್ರಮ' ಇತ್ಯಾದಿ ಟೀಕೆಯಿಂದ ಉತ್ತರಿಸಲಾಗಿದೆ. 'ಅನ್ಯಥಾ' ಎಂದರೆ ಅರ್ಥವೇ ಸಿದ್ಧವಾಗದಿದ್ದರೆ ಎಂದರ್ಥ.

ನಿರಾಕಾಂಕ್ಷಪದವನ್ನು ವಾಕ್ಯವೆಂದು ಹೇಳಲಾಗದು

भावदीपः – नन्वसाधारणधर्मो लिङ्गमिति निराकाङ्क्षपदानि वाक्यमिति चोक्तम्। तदयुक्तमिव । तथात्वे श्रीश्च त इत्यादेर्लिङ्गत्वेनोक्तस्य वाक्यतापत्तेरित्यत आह – **लिङ्गेति ।।**

ಅಸಾಧಾರಣಧರ್ಮವನ್ನೇ ಲಿಂಗವೆಂದು ಹೇಳಿದಿರಿ, ನಿರಾಕಾಂಕ್ಷ ಪದಗಳನ್ನೇ ವಾಕ್ಯವೆಂದು ಹೇಳಿದಿರಿ, ಇದು ತಪ್ಪು. ಹಾಗಾದರೆ 'ಶ್ರೀಶ್ಚತೇ, ಲಕ್ಷ್ಮೀಶ್ಚ' ಇತ್ಯಾದಿ ವಾಕ್ಯಗಳಿಂದ ತಿಳಿಯುವಂತಹ ಲಿಂಗವು ವಾಕ್ಯರೂಪವಾಗಬೇಕಾದೀತಲ್ಲವೆ? ಎಂಬ ಪ್ರಶ್ನೆಗೆ 'ಲಿಂಗ' ಇತ್ಯಾದಿ ಟೀಕೆಯಿಂದ ಉತ್ತರಿಸಿದ್ದಾರೆ.

ಲಿಂಗವು ವಾಕ್ಯಕ್ಕಿಂತ ಪ್ರಬಲವೆನ್ನಲು ಕಾರಣ

भावदीपः – असाधारणधर्मबोधकत्वाविशेषेऽपि एकः कर्ता वर्तमानकाले स्वार्थं पाकक्रियां निर्वर्तयतीत्यस्य पचते इत्यस्य चैकार्थत्वेऽपि एक इत्यादिवाक्यात् पचते इति पदस्यैव झडित्यर्थबोधकत्वादेकपदात्मकं लिङ्गम्, अन्यत्तु वाक्यमिति भेद इत्यर्थः ।

ವಾಕ್ಯ ಹಾಗೂ ಲಿಂಗ ಎರಡೂ ಸಹ ಅಸಾಧಾರಣಧರ್ಮವನ್ನೇ ಬೋಧಿಸುತ್ತದೆ. ಆದರೂ ಸಹ ವಾಕ್ಯದಿಂದ ತಿಳಿಯುವಂತಹ ಅರ್ಥವು ವಿಳಂಬವಾಗುತ್ತದೆ. ಲಿಂಗದಿಂದ ತಿಳಿಯುವಂತಹ ಅರ್ಥವು ಶೀಘ್ರವಾಗಿರುತ್ತದೆ. ಉದಾಹರಣೆ - 'ಏಕಃ ಕರ್ತಾ ವರ್ತಮಾನಕಾಲೇ ಸ್ವಾರ್ಥಂ ಪಾಕಕ್ರಿಯಾಂ ನಿರ್ವರ್ತಯತಿ' 'ಒಬ್ಬ ಕರ್ತೃವು ವರ್ತಮಾನ ಕಾಲದಲ್ಲಿ ತನಗಾಗಿ ಪಾಕಕ್ರಿಯೆಯಲ್ಲಿ ತೊಡಗುತ್ತಾನೆ' ಎಂಬ ವಾಕ್ಯದಿಂದ ಯಾವ ಶಾಬ್ದಬೋಧ ಬರುತ್ತದೋ, 'ಪಚತೇ' ಎಂಬ ಒಂದೇ ಧಾತುವಿನಿಂದ ಅದೇ ಶಾಬ್ದಬೋಧವು ಬರುತ್ತದೆ. 'ಏಕಃ ಕರ್ತಾ' ಎಂಬ ವಾಕ್ಯಕ್ಕಿಂತಲೂ 'ಪಚತೇ' ಎಂಬ ಪದದಿಂದ ಶೀಘ್ರವಾಗಿ ಅರ್ಥಜ್ಞಾನವು ಬರುವುದರಿಂದ ಪದರೂಪವಾದ ಲಿಂಗವು ವಾಕ್ಯಕ್ಕಿಂತಲೂ ಪ್ರಬಲವಾಗಿದೆ ಎಂದು ತಿಳಿಯಬೇಕು. ಹೀಗೆ ವಾಕ್ಯ ಹಾಗೂ ಲಿಂಗಗಳಲ್ಲಿರುವ ವ್ಯತ್ಯಾಸವನ್ನು ಗಮನಿಸಬೇಕು.

'ಶ್ರೀಶ್ಚತೇ' ಎಂಬ ವಾಕ್ಯಕ್ಕೆ ಲಿಂಗತ್ವವನ್ನು ಏಕೆ ಸಮರ್ಥಿಸಲಾಯಿತು ?

भावदीपः – तथा चान्तरादिनये यस्याण्डकोशं शुष्मम् श्रीश्च ते लक्ष्मीश्च पत्न्यौ । वि मे कर्णा पतयतो' इत्यादीनां वाक्यत्वेऽपि लिङ्गत्वोक्तिः तद्बोध्यस्य असाधारणधर्मत्वात्तद्विवक्षयेति भावः ।

ಇದರಂತೆ ಅಂತರಾಧಿಕರಣದಲ್ಲಿ 'ಯಸ್ಯಾಂಡಕೋಶಂ ಶುಷ್ಮಮ್', 'ಶ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ', 'ವಿಮೇ ಕರ್ಣಾ ಪತಯತೋ' ಇವೇ ಮೊದಲಾದ ವಾಕ್ಯಗಳಿಗೆ ಲಿಂಗತ್ವವನ್ನು ಏಕೆ ಹೇಳಿದ್ದಾರೆಯೆಂದರೆ ಈ ವಾಕ್ಯಗಳಿಂದ ತಿಳಿಯಲ್ಪಡುವ ಧರ್ಮವು ಅಸಾಧಾರಣಧರ್ಮವಾಗಿರುವುದರಿಂದ.

'ಅನಂತಃ' ಎಂಬುದೇ ಲಿಂಗವಾಗಿದೆ

भावदीपः – प्रवक्षणाः पक्षान् । इत्यादिवत् इत्यादौ यथा साक्षादसाक्षादर्थबोधकत्वेन लिङ्गं वाक्यमिति व्यवहारः । तथा अनन्तः श्रीश्च त इत्यादाविति भावः ।

'प्रवक्षणाः पक्षान्' ಇತ್ಯಾದಿ ಸ್ಥಳಗಳಲ್ಲಿ ಹೇಗೆ ನೇರವಾಗಿ ಮತ್ತು ಪರಂಪರೆಯಿಂದ ಅರ್ಥಬೋಧಕವಾದ ಲಿಂಗ ಮತ್ತು ವಾಕ್ಯವೆಂಬ ವ್ಯವಹಾರವಿದೆಯೋ ಅದರಂತೆ ಅನಂತಃ ಎಂಬುದು ಲಿಂಗವಾಗಿದೆ, 'ಶ್ರೀಶ್ಚತೇ' ಎಂಬುದು ವಾಕ್ಯವಾಗಿದೆಯೆಂದು ತಿಳಿಯಬೇಕು.

'ಊರ್ಧ್ವಂ ಪ್ರಾಣಮುನ್ನಯತಿ' ಎಂಬುದೂ ಕೂಡ ಲಿಂಗರೂಪವಾಗಿದೆ

भावदीपः – एतेन ऊर्ध्वं प्राणमुन्नयतीत्यादेः शब्दस्य वाक्यत्वेऽपि तद्बोध्यस्य लिङ्गत्वाभिप्रायेण भाष्यादौ लिङ्गत्वोक्तिर्युक्तेति भावः ।

ಹೀಗೆ ಹೇಳಿದ್ದರಿಂದ 'ಊರ್ಧ್ವಂ ಪ್ರಾಣಮುನ್ನಯತಿ' ಶಬ್ದವು ವಾಕ್ಯರೂಪವಾಗಿದ್ದರೂ ತದ್ಬೋಧ್ಯವಾದ ಪ್ರಾಣವ್ಯವಸ್ಥಾಪಕತ್ವವು ಲಿಂಗರೂಪವಾದ್ದರಿಂದ ಭಾಷ್ಯಾದಿಗಳಲ್ಲಿ ಲಿಂಗವೆಂದೇ ಇದನ್ನು ಪರಿಗಣಿಸಿದ್ದಾರೆ.

ಲಿಂಗಕ್ಕೆ ಸಾವಕಾಶತ್ವವನ್ನೇಕೆ ಹೇಳುವರು ?

भावदीपः – ननु सौत्रैवकारसूचितस्वभावप्राबल्येनैव श्रुतेर्लिङ्ग-बाधकत्वोपपत्तौ भाष्ये तच्च लिङ्गमित्यादिना लिङ्गस्य सावकाशत्वोक्तिर-युक्तेत्यतो व्यावर्त्यचोद्यमाह – नन्विति ।।

ಪ್ರಶ್ನೆ - ಸೂತ್ರದಲ್ಲಿ ಏವಕಾರದಿಂದ ಸೂಚಿತವಾದ ಸ್ವಭಾವಿಕವಾದ ಪ್ರಾಬಲ್ಯವು ಶ್ರುತಿಯಲ್ಲಿರುವುದರಿಂದ ಇಂತಹ ಶ್ರುತಿಯು ಲಿಂಗಕ್ಕೆ ಬಾಧಕವಾಗುತ್ತದೆಂದು ಸ್ಪಷ್ಟವಾಗಿ ತಿಳಿಯುತ್ತದೆ. ಹೀಗಿರುವಾಗ ಭಾಷ್ಯದಲ್ಲಿ 'ತಚ್ಚ ಲಿಂಗಮ್' ಇತ್ಯಾದಿ ವಾಕ್ಯದಿಂದ ಲಿಂಗಕ್ಕೆ ಸಾವಕಾಶತ್ವವನ್ನು ಹೇಳಿದ್ದು ತಪ್ಪಲ್ಲವೆ? ಎಂಬ ಪ್ರಶ್ನೆಗೆ 'ನನು' ಇತ್ಯಾದಿ ವಾಕ್ಯದಿಂದ ಆಶಂಕಿಸಿ ಉತ್ತರಿಸುತ್ತಿದ್ದಾರೆ.

ಪ್ರಾಬಲ್ಯವು ಎರಡು ವಿಧ

भावदीपः – बाहुल्येनेति ।। द्विविधं बलवत्त्वं च बहुत्वाच्च स्वभावत इत्युक्तेरिति भावः ।

'द्विविधं बलवत्त्वं च बहुत्वाच्च स्वभावतः' ಎಂಬ ಮಾತಿನಂತೆ ಪ್ರಾಬಲ್ಯವನ್ನು ಸ್ವಾಭಾವಿಕವಾಗಿ ಮತ್ತು ಬಹುತ್ವ ಪ್ರಯುಕ್ತವಾಗಿ ಎರಡು ಬಗೆಯಲ್ಲಿ ಹೇಳಬಹುದು.

स्वभावतः ಬಲಿಷ್ಠವಾದುದ್ದಕ್ಕೆ ಪ್ರಾಶಸ್ತ್ಯ

भावदीपः – यद्यपि तयोः स्वभावो बलवानित्युक्त्या अनेकलिङ्गानामप्येक-श्रुत्या बाधो युज्यते । उक्तश्चायमर्थः पादान्त्यप्राणनयटीकायाम् ।

ವಾಸ್ತವಿಕವಾಗಿ 'तयोः स्वभावो बलवान्' ಎಂಬ ಮಾತಿನಿಂದ ಸ್ವಭಾವತಃ ಬಲಿಷ್ಠವಾದ ಅನೇಕ ಲಿಂಗಗಳಿಗೂ ಸ್ವಭಾವತಃ ಬಲಿಷ್ಠವಾದ ಒಂದೇ ಶ್ರುತಿಯಿಂದ ಬಾಧವನ್ನು ಹೇಳಬಹುದು. ಇದರ ಬಗ್ಗೆ ಅಂತಿಮಪ್ರಾಣಾಧಿಕರಣದ ಟೀಕೆಯಲ್ಲಿ ಹೇಳಿದ್ದಾಗಿದೆ

ಸೂತ್ರದಲ್ಲಿರುವ ಪ್ರಮಿತ ಪದದಿಂದ ತಿಳಿಯುವ ಪ್ರಮೇಯ

भावदीपः – तथापि सौत्रप्रमितपदसूचितश्रुतिनिरवकाशत्व-वैयर्थ्यायाभ्युपेत्यवादेन वा प्रागुक्तदिशा लिङ्गानां निरवकाशत्वमप्यस्तीति हृदि कृत्वा लिङ्गानामपि प्राबल्यादनिर्णय एवेत्युक्तम् । ततश्च किमित्यतो भावमाह – न बाहुल्येऽपीति ।।

ಆದರೂ ಸಹ ಸೂತ್ರದಲ್ಲಿರುವ 'ಪ್ರಮಿತ' ಪದದಿಂದ ಸೂಚಿತವಾದ ಶ್ರುತಿಯ ನಿರವಕಾಶತ್ವಕ್ಕೆ ವೈಯರ್ಥ್ಯ ಬರಬಾರದೆಂದು ಅಂಗೀಕರಿಸಿ ಹಿಂದೆ ಹೇಳಿದಂತೆ ಲಿಂಗಗಳಿಗೆ ನಿರವಕಾಶತ್ವವು ಇರುತ್ತದೆಂದು ಮನಸ್ಸಿನಲ್ಲಿ ಇಟ್ಟುಕೊಂಡು ಲಿಂಗಗಳೂ ಪ್ರಬಲವಾದ್ದರಿಂದ ನಿರ್ಣಯಿಸುವುದು ಕಷ್ಟವೆಂದು ಹೇಳಿದ್ದಾರೆ. ಇದರಿಂದೇನಾಯಿತು ? ಎಂಬುದಕ್ಕೆ 'न बाहुल्येऽपि' ಇತ್ಯಾದಿ ವಾಕ್ಯದಿಂದ ಉತ್ತರಿಸಿದ್ದಾರೆ.

ಮಹಾಯೋಗವೃತ್ತಿಯಿಂದ ವಿಷ್ಣುವಿನಲ್ಲಿ ಶಬ್ದಸಮನ್ವಯ

ಭಾವದೀಪಃ – निरवकाशादिति ।। तस्याश्च विष्णौ महायोगेति प्रागुक्तदिशेति भावः – अवकाशादिति ।। वक्ष्यमाणदिशेति भावः ।

'ತಸ್ಯಾಶ್ಚ ವಿಷ್ಣೌ ಮಹಾಯೋಗ' ಇತ್ಯಾದಿಯಾಗಿ ಹಿಂದೆ ಹೇಳಿದಂತೆ ವಿಷ್ಣುವಿನಲ್ಲಿ ಮಹಾಯೋಗವೃತ್ತಿಯಿಂದ ಶಬ್ದವು ಇರುತ್ತದೆಂದು ತಿಳಿಯಬೇಕು. 'ಅವಕಾಶಾತ್' ಎಂಬುದನ್ನು ಮುಂದೆ ಹೇಳುವ ಪ್ರಕಾರ ತಿಳಿಯಬೇಕು.

ವಾಮನಶ್ರುತಿಯು ನಿರವಕಾಶವಾಗಿದೆ

ಭಾವದೀಪಃ – एतेन लिङ्गानां परमात्मन्यवकाशो विद्यत एव वामनश्रुतेरेवानवकाश इत्यन्यत्र श्रुतिलिङ्गयोर्निरवकाशत्वसावकाशत्वोक्ते-रप्यभिप्रायो विवृतः ।।

ಹೀಗೆ ಹೇಳಿದ್ದರಿಂದ ಲಿಂಗಗಳಿಗೆ ಪರಮಾತ್ಮನಲ್ಲಿ ಅವಕಾಶವಿದೆ ಆದರೆ ವಾಮನಶ್ರುತಿಗೆ ಬೇರೆ ಕಡೆ ಅವಕಾಶವಿಲ್ಲ ಎಂಬುದಾಗಿ ಶ್ರುತಿ ಹಾಗೂ ಲಿಂಗಗಳಿಗೆ ನಿರವಕಾಶತ್ವ ಹಾಗೂ ಸಾವಕಾಶತ್ವಗಳನ್ನು ಹೇಳಿದ ಅಭಿಪ್ರಾಯವನ್ನು ವಿವರಿಸಿದಂತಾಯಿತು.

'ಮಧ್ಯೇ ವಾಮನಂ' ಎಂಬ ಶ್ರುತಿಯು ಬೇರೆಯವರಲ್ಲಿ ಕೂಡದು

ಭಾವದೀಪಃ – इत्यत आहेति ।। तद्वै त्वमिति वाक्ये यद्देवान्प्राणयो नव तस्मात्त्वं प्राणोऽभवः इत्युक्तप्राणनेतृत्वरूपप्राणत्वस्यात एव प्राण इत्यत्र विष्णौ साधितत्वात् । समाख्याया वायुपरत्वे प्राणमुन्नयतीत्याद्यं विष्णोरेव। तथा योऽयं मध्यम इत्युक्तमध्यमत्वस्य वायुधर्मत्वेऽपि इह न तत्प्रतीयते । मध्ये वामनमिति मध्यदेशस्थत्वस्यैव प्रतीतेः । तच्चाल्पश्रुतेरित्युक्तदिशा विष्णोरेवेति भावः ।

'ತದ್ವೈ ತ್ವಮ್' ಎಂಬ ವಾಕ್ಯದಲ್ಲಿ 'ಯದ್ದೇವಾನ್ ಪ್ರಾಣಯೋ ನವ', 'ತಸ್ಮಾತ್ತ್ವಂ ಪ್ರಾಣೋऽಭವಃ' ಇತ್ಯಾದಿಯಾಗಿ ಹೇಳಲ್ಪಟ್ಟ 'ಪ್ರಾಣನೇತೃತ್ವ' ಮೊದಲಾದ ಲಿಂಗಗಳಿಗೆ 'ಅತ ಏವ ಪ್ರಾಣಃ' ಎಂಬ

ಸೂತ್ರದಲ್ಲಿ ವಿಷ್ಣುಪರತ್ವವನ್ನು ಸಮರ್ಥಿಸಿದ್ದಾಯಿತು. ಸಮಾಖ್ಯೆಯು ವಾಯುಪರವಾದಲ್ಲಿ 'ಪ್ರಾಣಮ್ ಉನ್ನಯತಿ' ಇತ್ಯಾದಿ ವಾಕ್ಯಗಳು ವಿಷ್ಣುಪರವೇ ಆಗುತ್ತವೆ. ಅದರಂತೆ 'ಯೋऽಯಂ ಮಧ್ಯಮಃ' ಎಂಬ ವಾಕ್ಯದಿಂದ ಹೇಳಲ್ಪಟ್ಟ ಮಧ್ಯಮತ್ವವು ವಾಯುಧರ್ಮವಾಗಿದ್ದರೂ ಸಹ ಇಲ್ಲಿ ಆ ಧರ್ಮವು ತೋರುತ್ತಿಲ್ಲ. ಏಕೆಂದರೆ 'ಮಧ್ಯೇ ವಾಮನಂ' ಎಂಬುದಾಗಿ ಮಧ್ಯದೇಶಸ್ಥತ್ವವನ್ನೇ ಹೇಳಲಾಗಿದೆ. ಇದು 'ಅಲ್ಪಶ್ರುತೇಃ' ಎಂಬ ಸೂತ್ರದಂತೆ ವಿಷ್ಣುವಿನಲ್ಲಿ ಮಾತ್ರ ಉಪಪನ್ನವಾಗುತ್ತದೆ.

ಕುವಿದಂಗ ಶ್ರುತಿಯು ವಾಯುಪ್ರತಿಪಾದಕವಲ್ಲ

भावदीपः – अथापि कुविदङ्गेति मन्त्रे वायोर्देवोपास्यत्वमुक्तमित्यत आह – वायुत्वमिति ।। अत्र प्राणत्वेति भाष्ये अन्तर्नये आधिदैविक-सर्वशब्दानां महायोगविद्बृढिभ्यां विष्णावुक्तत्वेन वायुशब्दस्याप्युक्तेरित्यर्थो बोध्य इति भावः ।।

ಆದರೂ ಸಹ 'ಕುವಿದಂಗ' ಎಂಬ ಮಂತ್ರವು ವಾಯುದೇವರಲ್ಲಿ ದೇವೋಪಾಸ್ಯತ್ವವನ್ನು ಹೇಳಿದೆಯಲ್ಲವೆ? ಎಂಬ ಪ್ರಶ್ನೆಗೆ 'ವಾಯುತ್ವಮ್' ಎಂಬುದರಿಂದ ಉತ್ತರಿಸಿದ್ದಾರೆ. 'ಅತ್ರ ಪ್ರಾಣತು' ಎಂಬ ಭಾಷ್ಯದಲ್ಲಿ ಅಂತರಧಿಕರಣದಲ್ಲಿ ಆಧಿದೈವಿಕವಾದ ಸಕಲ ಶಬ್ದಗಳಿಗೆ ಮಹಾಯೋಗ ಮತ್ತು ವಿದ್ವದ್ರೂಢಿಯಿಂದ ವಿಷ್ಣುವಿನಲ್ಲಿ ಸಮನ್ವಯವನ್ನು ಹೇಳಿದ್ದರಿಂದ ವಾಯುಶಬ್ದವೂ ವಿಷ್ಣುವಿನಲ್ಲೇ ಸಮನ್ವಯವಾಗುತ್ತದೆಂದು ತಿಳಿಯಬೇಕು. ಹೀಗೆ ಈ ಸೂತ್ರದಲ್ಲಿ ವಾಮನಶಬ್ದಬಲದಿಂದ 'ಈಶಾನ' ಶಬ್ದಪ್ರತಿಪಾದ್ಯನಾದವನು ಮಹಾವಿಷ್ಣುವೇ ಆಗಿದ್ದಾನೆಂದು ನಿರ್ಣಯಿಸಿದಂತಾಯಿತು.

ವಿಶೇಷವಿಚಾರ - 'ಅಂಗುಷ್ಠಮಾತ್ರತ್ವ' ಎಂಬ ಲಿಂಗವೂ ಸಹ ವಿಷ್ಣುವಿನಲ್ಲಿ ಸಾವಕಾಶವಾಗಿವೆ. ಹೃದಯದಲ್ಲಿರುವ ಪರಮಾತ್ಮನ ಮೂರ್ತಿವಿಶೇಷವು ಅಂಗುಷ್ಠಪರಿಮಾಣದಷ್ಟೇ ಇರುತ್ತದೆ. ವಸ್ತುತಃ ಪರಮಾತ್ಮನ ಎಲ್ಲಾ ರೂಪಗಳಲ್ಲಿಯೂ ಅಣುತ್ವ-ಮಹತ್ವಗಳಿದ್ದರೂ ವ್ಯಕ್ತಾತ್ಮನಾ ಅಂಗುಷ್ಠಪರಿಮಾಣಮಾತ್ರ ಹೃದಯದಲ್ಲಿರುತ್ತದೆಂದು ತಿಳಿಯಬೇಕು. ಅಥವಾ ಹೃದಯ ಪ್ರದೇಶವು ಅಂಗುಷ್ಠದಷ್ಟೇ ಪರಿಮಾಣವನ್ನು ಹೊಂದಿರುವುದರಿಂದಲೂ ಪರಮಾತ್ಮನ ರೂಪವನ್ನು ಅಂಗುಷ್ಠಮಾತ್ರ ಪರಿಮಾಣವೆಂದು ಶ್ರುತಿಯು ಹೇಳಿದೆ. ಸ್ಥಾನದಲ್ಲಿ ಪ್ರಯೋಗಿಸಲ್ಪಟ್ಟ 'ಅಂಗುಷ್ಠಮಾತ್ರ' ಎಂಬ ಶಬ್ದವನ್ನು ಸ್ಥಾನಿಯಾದ ಬ್ರಹ್ಮನಲ್ಲಿ ಔಪಚಾರಿಕವಾಗಿ ಪ್ರಯೋಗಿಸಲಾಗಿದೆ. ಆದ್ದರಿಂದ ಅಂಗುಷ್ಠಮಾತ್ರ ಪರಿಮಾಣವನ್ನು ಪರಮಾತ್ಮನಿಗೆ ಹೇಳುವುದು ತಪ್ಪಾಗುವುದಿಲ್ಲ.

ಪ್ರಶ್ನೆ - 'ಮಾತ್ರಚ್' ಪ್ರತ್ಯಯವನ್ನು ಇತರ ವ್ಯಾವರ್ತಕದಲ್ಲಿ ಪ್ರಯೋಗಿಸಿ, ಅಂಗುಷ್ಠದಷ್ಟೇ ಪರಿಮಾಣವನ್ನು ಹೇಳಬೇಕೆಂದು ಏಕೆ ವಿವಕ್ಷಿಸುತ್ತಿದ್ದೀರಿ? ಅವಧಾರಣಾರ್ಥದಲ್ಲಿ 'ಮಾತ್ರಚ್' ಪ್ರತ್ಯಯವನ್ನು ವಿವಕ್ಷಿಸುವುದು ಬೇಡ. ಇಲ್ಲಿರುವ 'ಮಾತ್ರಚ್' ಪ್ರತ್ಯಯವು ಪರಿಮಾಣಾರ್ಥದಲ್ಲಿದೆಯೆಂದು ಹೇಳಬಹುದು. 'ದೇಹಾಂಗುಷ್ಠಮಿತೋ ದೇಹೇ ಜೀವಾಂಗುಷ್ಠಮಿತೋ ಹೃದಿ' ಎಂಬ ಶ್ರುತಿಯಲ್ಲಿ 'ಮಿತ' ಎಂಬ ಪದವನ್ನು 'ಪರಿಮಾಣ' ಎಂಬರ್ಥದಲ್ಲಿ ಪ್ರಯೋಗಿಸಲಾಗಿದೆ. ಆದ್ದರಿಂದ ಅದೇ ಅರ್ಥದಲ್ಲಿರುವ 'ಮಾತ್ರಚ್' ಪ್ರತ್ಯಯವನ್ನೂ ಕೂಡ 'ಪರಿಮಾಣ' ಎಂಬರ್ಥದಲ್ಲಿಯೇ ಪ್ರಯೋಗಿಸಬಹುದು. ಆದ್ದರಿಂದ ಅಂಗುಷ್ಠಪರಿಮಾಣವೆಂದು ಸರ್ವಗತನಾದ ಪರಮಾತ್ಮನಿಗೂ ಕೂಡ ಆಕಾಶದಂತೆ ಹೇಳಬಹುದು. ಹೀಗೆಯೇ ಸೂತ್ರದ ಅಭಿಪ್ರಾಯವೆಂದು ಏಕೆ ಸಮಾಧಾನವನ್ನು ನೀಡುತ್ತಿಲ್ಲ?

ಉತ್ತರ - ಇದು ಸರಿಯಲ್ಲ. 'ಮಾತ್ರಚ್' ಪ್ರತ್ಯಯಕ್ಕೆ ಪರಿಮಾಣವೆಂಬರ್ಥವನ್ನು ವಿವಕ್ಷಿಸುವುದಾದಲ್ಲಿ 'ಅಂಗುಷ್ಠಮಾತ್ರ' ಎಂಬ ವಾಕ್ಯದಲ್ಲಿ 'ಮಧ್ಯೇ ಆತ್ಮನಿ' ಎಂದು ಮತ್ತು 'ಹೃದಿ' ಎಂದು ಹೇಳಿದ್ದು ವ್ಯರ್ಥವಾಗಬೇಕಾಗುತ್ತದೆ. ಆದ್ದರಿಂದ ಅವಧಾರಣಾರ್ಥದಲ್ಲಿಯೇ 'ಮಾತ್ರಚ್' ಪ್ರತ್ಯಯವನ್ನು ವಿವಕ್ಷಿಸಬೇಕು.

'ಮಧ್ಯೇ ಆತ್ಮನಿ' ಎಂಬುದಕ್ಕೆ ಮತ್ತು 'ಹೃದಿ' ಎಂಬುದಕ್ಕೆ ಏಕೆ ವೈಯರ್ಥ್ಯ ಬರುತ್ತದೆಂದರೆ 'ಅಂಗುಷ್ಠಮಾತ್ರಃ ಪುರುಷೋऽಂಗುಷ್ಠಂ ಚ ಸಮಾಶ್ರಿತಃ' ಎಂಬ ಮತ್ತೊಂದು ಶ್ರುತಿಯಲ್ಲಿ ಅಂಗುಷ್ಠಮಾತ್ರ ಪರಿಮಾಣವುಳ್ಳ ಹೃದಯಪ್ರದೇಶದಲ್ಲಿ ಪರಮಾತ್ಮನಿರುತ್ತಾನೆಂದು ಹೇಳಲಾಗಿದೆ. ಅಂದರೆ ಹೃದಯಪ್ರದೇಶವು ಅಂಗುಷ್ಠದಷ್ಟೇ ಪರಿಮಾಣವನ್ನು ಹೊಂದಿರುವುದರಿಂದ ಅಲ್ಲಿರುವ ಪರಮಾತ್ಮನೂ ಕೂಡ ಅಂಗುಷ್ಠಪರಿಮಾಣದಷ್ಟೇ ಇರುತ್ತಾನೆಂದು ಶ್ರುತಿಯು ಹೇಳಿದೆ.

'ದೇಹಾಂಗುಷ್ಠಮಿತೋ ದೇಹೇ' ಇತ್ಯಾದಿ ಸ್ಮೃತಿವಾಕ್ಯದಲ್ಲಿಯೂ ಸಹ 'ಹೃದಿ' ಇತ್ಯಾದಿ ಪದಗಳಿಗೆ ವೈಯರ್ಥ್ಯವು ಬರಬಾರದೆಂದರೆ 'ಅವಧಾರಣ' ಎಂಬರ್ಥವನ್ನೇ ವಿವಕ್ಷಿಸಬೇಕು.

ಹೃದಯಪ್ರದೇಶದಲ್ಲಿ ಅಂಗುಷ್ಠಪರಿಮಾಣದಷ್ಟು ಪರಮಾತ್ಮನಿರುತ್ತಾನೆಂದು ಹೇಳಿದಿರಿ. ಬೇರೆ ಪ್ರಾಣಿಗಳಿಗೆ, ಅಂಗುಷ್ಠವೇ ಇಲ್ಲದ ಕಾರಣ, ಅಂಗುಷ್ಠಪರಿಮಾಣವನ್ನು ಹೃದಯಕ್ಕೆ ಹೇಳಲು ಹೇಗೆ ಸಾಧ್ಯ? ಎಂದರೆ, ಬೇರೆ ಪ್ರಾಣಿಗಳಿಗೆ ಅಂಗುಷ್ಠವಿಲ್ಲದಿದ್ದರೂ ಈ ಶಾಸ್ತ್ರವು ಮನುಷ್ಯಾಧಿಕಾರಿಕವಾದ್ದರಿಂದ ಮನುಷ್ಯರನ್ನು ಉದ್ದೇಶಿಸಿಯೇ ಸೂತ್ರದಲ್ಲಿ

ಅಂಗುಷ್ಠಪರಿಮಾಣವನ್ನು ಪರಮಾತ್ಮನಿಗೆ ಹೇಳಲಾಗಿದೆ. ಮನುಷ್ಯರಿಗೆ ಅಂಗುಷ್ಠವು ಇರುವುದರಿಂದ ತತ್ಪರಿಣಾಮವನ್ನು ಹೃದಯದಲ್ಲಿರುವ ಪರಮಾತ್ಮನಿಗೆ ಹೇಳಬಹುದಾದ್ದರಿಂದ ಯಾವುದೇ ದೋಷಕ್ಕೂ ಅವಕಾಶವಿಲ್ಲ.

ಬ್ರಹ್ಮಸೂತ್ರ

'ಹೃದ್ಯಪೇಕ್ಷಯಾ ತು ಮನುಷ್ಯಾಧಿಕಾರತ್ವಾತ್' ಎಂಬ ಸೂತ್ರ ವ್ಯಾಖ್ಯಾನ

ಬ್ರಹ್ಮಸೂತ್ರಮ್ – ।। ಹೃದ್ಯಪೇಕ್ಷಯಾ ತು ಮನುಷ್ಯಾಧಿಕಾರತ್ವಾತ್ ।। ೨೯ ।।

ಸೂತ್ರಾರ್ಥ - ವಿಷ್ಣು ಎಲ್ಲೆಡೆ ವ್ಯಾಪ್ತನಾಗಿದ್ದಾನೆ, ಆದರೂ ಸಹ ನಮ್ಮ ಹೃದಯದಲ್ಲಿ ಅಂಗುಷ್ಠ ಪರಿಮಾಣದ ಅವಕಾಶವಿರುವ ಪ್ರಯುಕ್ತ ಅವನಿಗೂ ಸಹ ಅಂಗುಷ್ಠಪರಿಮಾಣವನ್ನು ಹೇಳಿದ್ದು ಯುಕ್ತವಾಗುತ್ತದೆ.

ಅರ್ಥ - 'ತು' ಶಬ್ದವು 'ಏವ' ಎಂಬರ್ಥದಲ್ಲಿದೆ. ಅಥವಾ 'ಅಪಿ' ಶಬ್ದದ ಅರ್ಥದಲ್ಲಿಯೂ ಇರುತ್ತದೆ. ಹೃದ್ಯಪೇಕ್ಷಯಾ ತು = ವಿಷ್ಣುಸರ್ವಗತನಾಗಿದ್ದರೂ ಅಂಗುಷ್ಠಪರಿಮಾಣವನ್ನು ಏಕೆ ಹೇಳಿದ್ದಾರೆಂದರೆ ಮನುಷ್ಯರ ಹೃದಯಾಕಾಶವು ಅಂಗುಷ್ಠದಷ್ಟೇ ಇರುವುದರಿಂದ, ಇದರಿಂದ ವಿಷ್ಣುವಿಗೆ ಪರಿಚ್ಛೇದವನ್ನು ತಿಳಿಯಬಾರದು. ಪಶು-ಪ್ರಾಣಿಗಳಿಗೆ ಅಂಗುಷ್ಠಪರಿಮಾಣವಿಲ್ಲದಿದ್ದರೂ, ಅಂಗುಷ್ಠಪರಿಮಾಣಪರಿಮಿತಿಯನ್ನು ಸರ್ವಾಧಿಕಾರಿಕವಾಗಿ ಹೇಳುವುದು ತಪ್ಪಲ್ಲವೇ? ಎಂದು ಪ್ರಶ್ನಿಸಬಾರದು, ಮನುಷ್ಯಾಧಿಕಾರತ್ವಾತ್ = 'ಅಂಗುಷ್ಠಮಾತ್ರಃ ಪುರುಷಃ' ಎಂಬ ವಿದ್ಯೆಯ ಉಪಾಸನೆಗೆ ಮನುಷ್ಯರು ಮಾತ್ರ ಅಧಿಕಾರಿಗಳಾಗಿರುತ್ತಾರೆ. ಅವರನ್ನು ಕುರಿತು ಈ ಉಪಾಸನೆಯು ಹೊರಟಿರುವುದರಿಂದ ಪಶು ಪ್ರಾಣಿಗಳಿಗೆ ಅಂಗುಷ್ಠಪರಿಮಾಣವಿಲ್ಲದಿದ್ದರೂ ದೋಷವಿಲ್ಲ.

।। ಶ್ರೀವೇದವ್ಯಾಸದೇವರಿಂದ ರಚಿಸಲ್ಪಟ್ಟ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ
ವಾಮನಾಧಿಕರಣವು ಸಮಾಪ್ತವಾಯಿತು ।।

ಬ್ರಹ್ಮಸೂತ್ರಭಾಷ್ಯ

ಹೃದಯವು ಅಂಗುಷ್ಠಪರಿಮಾಣವಾದ್ದರಿಂದ ಈಶಾನನಿಗೆ ಅಂಗುಷ್ಠಪರಿಮಾಣ

ब्रह्मसूत्रभाष्यम् – ।। हृद्यपेक्षया तु मनुष्याधिकारत्वात् ।। सर्वगतस्यापि तस्याङ्गुष्ठमात्रत्वं हृद्यवकाशापेक्षया युज्यते ।

ಅನುವಾದ - ವಿಷ್ಣು ಎಲ್ಲೆಡೆ ವ್ಯಾಪ್ತನಾಗಿದ್ದಾನೆ, ಆದರೂ ಸಹ ನಮ್ಮ ಹೃದಯದಲ್ಲಿ ಅಂಗುಷ್ಠ ಪರಿಮಾಣದ ಅವಕಾಶವಿರುವ ಪ್ರಯುಕ್ತ ಅವನಿಗೂ ಸಹ ಅಂಗುಷ್ಠಪರಿಮಾಣವನ್ನು ಹೇಳಿದ್ದು ಯುಕ್ತವಾಗುತ್ತದೆ.

ಪ್ರತಿಪದಾರ್ಥ -- ಸರ್ವಗತನಾದ ಶ್ರೀಹರಿಯಲ್ಲಿ, ಅಂಗುಷ್ಠಪರಿಮಾಣವನ್ನು ಹೇಳುವುದು ತಪ್ಪಲ್ಲವೇ? ಎಂಬ ಪ್ರಶ್ನೆಗೆ ಸೂತ್ರಕಾರರೇ ಉತ್ತರಿಸುತ್ತಿದ್ದಾರೆ -

ಸರ್ವಗತಸ್ಯಾಪಿ = ಪರಮಾತ್ಮನು ಎಲ್ಲೆಡೆ ನೆಲೆಸಿದ್ದರೂ, ತಸ್ಯ = ವಿಷ್ಣುವಿಗೆ, ಅಂಗುಷ್ಠಮಾತ್ರತ್ವಂ = ಅಂಗುಷ್ಠಪರಿಮಾಣವು, ಹೃದ್ಯವಕಾಶಾಪೇಕ್ಷಯಾ = ಹೃದಯದ ಅವಕಾಶವೂ ಸಹ ಅಂಗುಷ್ಠದಷ್ಟೇ ಇರುವ ಪ್ರಯುಕ್ತ ತದಪೇಕ್ಷೆಯಿಂದ, ಯುಜ್ಯತೇ = ಯುಕ್ತವಾಗುತ್ತದೆ.

ಮನುಷ್ಯರಷ್ಟೇ ಉಪಾಸನೆಗೆ ಅಧಿಕಾರಿಗಳು

ब्रह्मसूत्रभाष्यम् – इतरप्राणिनामङ्गुष्ठाभावेऽपि मनुष्याधिकारत्वान्न विरोधः ।।

।। इति श्रीमदानन्दतीर्थभगवत्पादाचार्यविरचिते ब्रह्मसूत्रभाष्ये वामनाधिकरणम्।। ७।।

ಅನುವಾದ - ಉಪನಿಷತ್ತಿನಲ್ಲಿ ಪ್ರತಿಪಾದನೆ ಮಾಡಲ್ಪಟ್ಟ ಇಂತಹ ಉಪಾಸನೆಗೆ ಮನುಷ್ಯರಷ್ಟೇ ಅಧಿಕಾರಿಗಳು. ಆದ್ದರಿಂದ ಬೇರೆ ಪ್ರಾಣಿಗಳಲ್ಲಿ ಅಂಗುಷ್ಠವಿಲ್ಲದಿದ್ದರೂ ಅಲ್ಲಿ ಆ ಪರಿಮಾಣದಷ್ಟು ಪರಮಾತ್ಮನು ಇಲ್ಲದಿದ್ದರೂ ವಿರೋಧವು ಬರುವುದಿಲ್ಲ.

ಪ್ರತಿಪದಾರ್ಥ -- ಅಂಗುಷ್ಠಪರಿಮಾಣವನ್ನು ಹೇಗೆ ಹೇಳುತ್ತೀರಿ? ಇರುವೆ ಮೊದಲಾದ ಪ್ರಾಣಿಗಳಲ್ಲಿ ಅಂಗುಷ್ಠದಷ್ಟು ಪರಿಮಾಣದ

ಪರಮಾತ್ಮನು ನೆಲೆಸಲು ಸಾಧ್ಯವಿಲ್ಲವಲ್ಲವೇ? ಎಂಬ ಪ್ರಶ್ನೆಗೆ ಉತ್ತರಿಸುತ್ತಾ ಇದ್ದಾರೆ -

ಇತರಪ್ರಾಣಿನಾಂ = ಇರುವೆ ಮೊದಲಾದ ಜೀವಿಗಳಿಗೆ, ಅಂಗುಷ್ಠಾऽಭಾವೇऽಪಿ = ಅಂಗುಷ್ಠದಷ್ಟು ಹೃದಯವು ಇಲ್ಲದೇ ಇದ್ದರೂ ಸಹ, ಮನುಷ್ಯಾಧಿಕಾರತ್ವಾತ್ = ಅಂಗುಷ್ಠದಷ್ಟು ಪರಿಮಾಣದ ಪರಮಾತ್ಮನನ್ನು ಉಪಾಸಿಸುವ ಅಧಿಕಾರ ಮನುಷ್ಯನಿಗೆ ಮಾತ್ರ ಇರುವುದರಿಂದ, ನ ವಿರೋಧಃ = ವಿಷ್ಣುವಿಗೆ ಅಂಗುಷ್ಠಪರಿಮಾಣ ಹೇಳಿದ್ದರ ಮಾತಿನ ವಿರೋಧ ಬರುವುದಿಲ್ಲ. ಆದ್ದರಿಂದ ಸಕಲ ದೇವತೆಗಳಿಂದ ಉಪಾಸ್ಯನಾದ ಪರಮಾತ್ಮನೇ, ವಾಮನ, ಪ್ರಾಣ ಮೊದಲಾದ ಶಬ್ದಗಳಿಂದ ಪ್ರತಿಪಾದ್ಯನೂ, ಜಿಜ್ಞಾಸ್ಯನೂ, ಉಪಾಸ್ಯನೂ_ ಸಹ ಆಗುತ್ತಾನೆಂದು ನಿರ್ಣಯವಾಯಿತು.

॥ ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ವಿರಚಿತವಾದ ಬ್ರಹ್ಮಸೂತ್ರಭಾಷ್ಯದ ಕನ್ನಡಾನುವಾದದಲ್ಲಿ ವಾಮನಾಧಿಕರಣವು ಸಮಾಪ್ತವಾಯಿತು ॥

ಸತ್ತರ್ಕದೀಪಾವಳಿ

ಹೃದಯದಲ್ಲಿ ವಾಮನನ ಉಪಾಸನೆ

सत्तर्कदीपावलिः – ।। हृद्यपेक्षया तु मनुष्याधिकारत्वात् ।।

यदत्राङ्गुष्ठमात्रः पुरुषो मध्य आत्मनि तिष्ठतीत्यङ्गुष्ठमात्रत्वश्रवणं सर्वव्यापकस्य वामनस्य तद्घटयति । हृदीत्यादिना । हृदयाकाशेऽगुष्ठ-परिमाणत्वेन मनुष्याणां वामनोपास्तिं विधातुमङ्गुष्ठरिमाणत्वं वामनस्योक्तमित्यर्थः ।।२५।।

।। इति श्रीपद्मनाभतीर्थविरचितसत्तर्कदीपावळ्याम्: वामनाधिकरणम् ।।

'ಅಂಗುಷ್ಠಮಾತ್ರಃ' - ಅಂಗುಷ್ಠಪರಿಮಾಣವುಳ್ಳ ಈಶಾನನು ಆತ್ಮನ ಮಧ್ಯದಲ್ಲಿ ನಿಂತಿರುತ್ತಾನೆಂದು, ಸರ್ವವ್ಯಾಪಕನಾದ ವಾಮನನಿಗೆ ಅಂಗುಷ್ಠಪರಿಮಾಣವು ಶ್ರುತವಾಗಿದೆ. ಇದನ್ನು ಉಪಪಾದನೆ ಮಾಡುವುದಕ್ಕಾಗಿ 'ಹೃದ್ಯಪೇಕ್ಷಯಾ' ಇತ್ಯಾದಿ ಸೂತ್ರವು ಹೊರಟಿದೆ. ಹೃದಯಾಕಾಶದಲ್ಲಿ ಅಂಗುಷ್ಠಪರಿಮಾಣದಷ್ಟು ಅವಕಾಶವಿರುವುದರಿಂದ ಅಲ್ಲಿ ವಾಮನನನ್ನು ಮನುಷ್ಯರು ಉಪಾಸನೆ ಮಾಡಬೇಕೆಂದು ವಿಧಾನ ಮಾಡಲು ಅಂಗುಷ್ಠಪರಿಮಾಣವನ್ನು ವಾಮನನಿಗೆ ಶ್ರುತಿಯು ಹೇಳಿದೆ.

॥ ಇಲ್ಲಿಗೆ ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ ಸತ್ತರ್ಕದೀಪಾವಳಿಯಲ್ಲಿ
ವಾಮನಾಧಿಕರಣದ ಕನ್ನಡಾನುವಾದವು ಸಮಾಪ್ತವಾಯಿತು ॥

.

ತತ್ತ್ವಪ್ರದೀಪ

ಈಶಾನನಿಗೆ ಅಂಗುಷ್ಠ ಪರಿಮಾಣ

तत्वप्रदीपः –

''अङ्गुष्ठमात्रः पुरुषो मध्य आत्मनि तिष्ठति ।
ईशानो भूतभव्यस्य न ततो विजुगुप्सते''

इति तस्य सर्वदेवोपास्यस्येशानस्याङ्गुष्ठमात्रत्वं श्रूयते ।

ಅಂಗುಷ್ಠಮಾತ್ರಃ ಪುರುಷೋ ಮಧ್ಯ ಆತ್ಮನಿ ತಿಷ್ಠತಿ ।
ಈಶಾನೋ ಭೂತಭವ್ಯಸ್ಯ ನ ತತೋ ವಿಜುಗುಪ್ಸತೇ ॥

ಅಂಗುಷ್ಠಪರಿಮಾಣದ ಪುರುಷನು ದೇಹದಲ್ಲಿ ಮಧ್ಯಪ್ರದೇಶದಲ್ಲಿ ನೆಲೆಸಿರುವನು. ಹಿಂದಿನ ಮುಂದಿನ ಸಮಸ್ತ ಪದಾರ್ಥಗಳಿಗೆ ಇವನೇ ಒಡೆಯನಾಗಿರುವನು. ಹೀಗೆ ಸಕಲದೇವತೆಗಳಿಂದ ಉಪಾಸ್ಯನಾದ ಈಶಾನನಿಗೆ ಅಂಗುಷ್ಠಪರಿಮಾಣವು ಶ್ರುತವಾಗಿದೆ.

ಭಾಷ್ಯಾರ್ಥದ ಒಂದು ತುಣುಕಷ್ಟೇ ನಮಗೆ ಸ್ಪಷ್ಟ

तत्वप्रदीपः – नच विश्वव्याप्तस्य। विष्णोरङ्गुष्ठमात्रत्वं युज्यत इत्यत आह – हृद्यपेक्षया तु मनुष्याधिकारत्वात् ।। भाष्यं स्पष्टार्थम् । अस्मद्विवक्षितस्यार्थलेशस्य मुखतः प्रतीतेः स्पष्टत्वमुच्यते । न पुनः सर्वेषां भाष्यार्थानां स्पष्टत्वं प्रतिज्ञायते। अपरिमितार्थत्वात् भाष्यस्य । अत्रेशानस्य विषयत्वेऽप्ययमेव न्यायः ।।

।। इति वामनाधिकरणम् ।।

ಸಮಸ್ತ ಜಗತ್ತಿನಲ್ಲಿ ವ್ಯಾಪ್ತನಾದ ವಿಷ್ಣುವು ಅಂಗುಷ್ಠಪರಿಮಾಣವುಳ್ಳವನಾಗಲು ಸಾಧ್ಯವಿಲ್ಲ ಎಂಬ ಪ್ರಶ್ನೆಗೆ 'ಹೃದ್ಯಪೇಕ್ಷಯಾ ತು ಮನುಷ್ಯಾಧಿಕಾರತ್ವಾತ್' ಎಂಬ ಮುಂದಿನ ಸೂತ್ರವು ಉತ್ತರಿಸುತ್ತಿದೆ. ಈ ಸೂತ್ರದ ಭಾಷ್ಯವು ಅತ್ಯಂತ ಸ್ಪಷ್ಟವಾಗಿದೆ.

ಉತ್ತರ - ಭಾಷ್ಯವು ಸ್ಪಷ್ಟಾರ್ಥವುಳ್ಳದ್ದು ಎಂದರೆ ನಮಗೆ ಹೊಳೆದ ಒಂದು ಅರ್ಥದ ತುಣುಕು ಭಾಷ್ಯದ ವಾಕ್ಯದಿಂದ ನೇರವಾಗಿ ತಿಳಿಯುತ್ತದೆ ಎಂದಷ್ಟೇ ಅಭಿಪ್ರಾಯ ಹೊರತು, ಭಾಷ್ಯದಲ್ಲಿರುವ ಸಂಪೂರ್ಣ ಅರ್ಥವು ಸ್ಪಷ್ಟವಾಗಿದೆ ಎಂಬುದಾಗಿ ನಾವು ಪ್ರತಿಜ್ಞೆ ಮಾಡುತ್ತಿಲ್ಲ. ಏಕೆಂದರೆ ಭಾಷ್ಯವು ಅಪರಿಮಿತವಾದ ಅರ್ಥವುಳ್ಳದ್ದಾಗಿದೆ. ಈಶಾನನು ಇದಕ್ಕೆ ವಿಷಯನಾಗಿದ್ದಾನೆ ಎಂಬ ವಿಷಯದಲ್ಲೂ ಕೂಡ ಇದೇ ನ್ಯಾಯವನ್ನು ವಿವಕ್ಷಿಸಬೇಕು.

।। ಇಲ್ಲಿಗೆ ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ ತತ್ವಪ್ರದೀಪದಲ್ಲಿ
ವಾಮನಾಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ।।

ತತ್ತ್ವಪ್ರಕಾಶಿಕಾ

ಸರ್ವಗತನಿಗೆ ಅಂಗುಷ್ಠ ಪರಿಮಾಣ ಹೇಗೆ ?

तत्वप्रकाशिका – ।। हृदपेक्षया तु मनुष्याधिकारत्वात् ।।

तथापि कथमीशानो विष्णुर्भवेत् । अङ्गुष्ठमात्रत्वोक्तेः । नच विष्णोरङ्गुष्ठमात्रत्वं युक्तम् । सर्वगतत्वात् ।

ಹಿಂದಿನ ಸೂತ್ರದಲ್ಲಿ ಸಮರ್ಥಿಸಿದ ಈಶಾನಪದವಾಚ್ಯತ್ವವು ವಿಷ್ಣುವಿನಲ್ಲಿ ಹೇಗೆ ಕೂಡುತ್ತದೆ? ಏಕೆಂದರೆ ಅದೇ ಶ್ರುತಿಯಲ್ಲಿ ಈಶಾನನಿಗೆ ಅಂಗುಷ್ಠಪರಿಮಾಣವನ್ನು ಹೇಳಲಾಗಿದೆ. ವಿಷ್ಣುವಿಗೆ ಅಂಗುಷ್ಠಪರಿಮಾಣವು ಯುಕ್ತವಾಗುವುದಿಲ್ಲ. ಏಕೆಂದರೆ ಅವನು ಸರ್ವಗತನಾಗಿದ್ದಾನೆ.

'ಅಂಗುಷ್ಠಮಾತ್ರಃ' ಎಂಬಲ್ಲಿರುವ 'ಮಾತ್ರ' ಪದದ ವ್ಯಾಖ್ಯಾನ

तत्वप्रकाशिका – नच वक्तव्यं व्योमवत्सर्वगतस्याप्यणुत्वं प्रत्यपादीति। 'अङ्गुष्ठमात्रः' इति तन्मात्रत्वोक्तेरित्याशङ्कां परिहरत्सूत्रमुपन्यस्य तदक्षराणि व्याचष्टे – हृदीति ।।

ಸರ್ವಗತನಾಗಿದ್ದರೂ ಆಕಾಶದಂತೆ ಅಣುಪರಿಮಾಣವನ್ನು ಹಿಂದೆ ಪ್ರತಿಪಾದನೆ ಮಾಡಿದ್ದಾರಲ್ಲವೆ? ಎಂದು ಪ್ರಶ್ನಿಸಬಾರದು. ಶ್ರುತಿಯಲ್ಲಿ 'ಅಂಗುಷ್ಠಮಾತ್ರಃ' ಎಂಬುದಾಗಿ 'ಮಾತ್ರ' ಶಬ್ದದ ಮೂಲಕ ಕೇವಲ ಅಂಗುಷ್ಠಪರಿಮಾಣ ಇರುತ್ತದೆ ಹೊರತು, ಸರ್ವಗತತ್ವ ಇರುವುದಿಲ್ಲವೆಂದು ನಿಷೇಧ ಮಾಡಲಾಗಿದೆ. ಈ ಆಶಂಕೆಯನ್ನು ಪರಿಹಾರ ಮಾಡುವ ಸೂತ್ರವನ್ನು ಉಪನ್ಯಾಸ ಮಾಡಿ ಸೂತ್ರಾಕ್ಷರಗಳನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ 'ಹೃದಿ' ಇತ್ಯಾದಿಯಾಗಿ.

ಭಗವಂತನಿಗೆ ಅನಂತಮೂರ್ತಿಗಳಿರುವುದರಿಂದ ವಿರೋಧವಿಲ್ಲ

तत्वप्रकाशिका – सर्वगतस्यापि विष्णोरङ्गुष्ठमात्रत्वोक्तिर्युक्ता । हृदि विद्यमानावकाशस्याङ्गुष्ठमात्रत्वेन तदपेक्षया भगवन्मूर्तिविशेषस्याभिव्यक्त्या तन्मात्रपरिमाणत्वादित्यर्थः ।

ವಿಷ್ಣುವು ಸರ್ವಗತನಾಗಿದ್ದರೂ ಅಂಗುಷ್ಠಮಾತ್ರತ್ವದ ಉಕ್ತಿಯು ಅವನಲ್ಲಿ ಯುಕ್ತವೇ ಆಗುತ್ತದೆ. ಏಕೆಂದರೆ ಹೃದಯದಲ್ಲಿರುವ ಅವಕಾಶವು ಅಂಗುಷ್ಠದಷ್ಟೇ ಇರುವುದರಿಂದ ಅದರ ಅಪೇಕ್ಷೆಯಿಂದ ಭಗವನ್ಮೂರ್ತಿಯ ವಿಶೇಷವು ಅಭಿವ್ಯಕ್ತವಾಗುತ್ತದೆ. ಆದ್ದರಿಂದ ಭಗವನ್ಮೂರ್ತಿಯು ಅಷ್ಟೇ ಪರಿಮಾಣದಲ್ಲಿರುತ್ತದೆ ಎಂದು ಶ್ರುತಿ ಹೇಳಿದೆ.

ಸ್ಥಾನೈಕ್ಯದಿಂದ ಅರ್ಥವನ್ನು ಕೂಡಿಸಬಹುದೇ ?

तत्वप्रकाशिका – भिन्नेष्वपि स्थानैक्येनैक्योक्तिवद् हृदयाकाशस्याङ्गुष्ठ - मात्रत्वेन तत्सम्बन्धात् सर्वगतेऽपि हरावुपचारेणाङ्गुष्ठमात्रत्वोक्तिरिति वाऽर्थः।

ಅಥವಾ ಭಿನ್ನಪದಾರ್ಥವಾಗಿದ್ದರೂ ಸ್ಥಾನೈಕ್ಯದಿಂದ ಆ ಪದಾರ್ಥಗಳಿಗೆ ಐಕ್ಯವನ್ನು ಹೇಳುವಂತೆ ಹೃದಯಾಕಾಶವು ಅಂಗುಷ್ಠ ಪರಿಮಾಣವಿರುವುದರಿಂದ ಅದರ ಸಂಬಂಧವನ್ನು ಹೊಂದಿದ ಸರ್ವಗತನಾದ ಹರಿಯಲ್ಲಿಯೂ, ಔಪಚಾರಿಕವಾಗಿ ಅಂಗುಷ್ಠಪರಿಮಾಣವನ್ನು ಹೇಳಲಾಗಿದೆ ಎಂದರ್ಥ.

ಅಂಗುಷ್ಠಪರಿಮಾಣವೆಂದರೇನು ?

तत्वप्रकाशिका – तुशब्दः परिच्छिन्नतयाऽङ्गुष्ठमात्रत्वनिवृत्त्यर्थमेवार्थः । तथापि नाङ्गुष्ठमात्रत्वं विष्णोर्युक्तम् । तथाहि – किं तत्तदङ्गुष्ठमात्रत्वं वा यत् किञ्चिदङ्गुष्ठमात्रत्वं वा ।

ಸೂತ್ರದಲ್ಲಿರುವ 'ತು' ಶಬ್ದವು ಭಗವಂತನಿಗೆ ಕೇವಲ ಪರಿಚ್ಛಿನ್ನವಾದ ಅಂಗುಷ್ಠಪರಿಮಾಣದಷ್ಟೇ ಇದೆ ಎಂದು ನಿವೃತ್ತಿ ಮಾಡುತ್ತಿದೆ.

ಆದರೂ ಸಹ ಕೇವಲ ಅಂಗುಷ್ಠಪರಿಮಾಣವಿರುವುದು ವಿಷ್ಣುವಿಗೆ ಯುಕ್ತವಾಗುವುದಿಲ್ಲ. ಏಕೆಂದರೆ ಈ ಅಂಗುಷ್ಠಪರಿಮಾಣವು ಆಯಾ ಪ್ರಾಣಿಯ ಅಂಗುಷ್ಠದಷ್ಟು ಪರಿಮಾಣವೆಂದೋ ಅಥವಾ ಯಾವುದಾದರೂ ಅಂಗುಷ್ಠದಷ್ಟು ಇದ್ದರೆ ಸಾಕೆಂದೋ.

ಉಳಿದ ಪ್ರಾಣಿಗಳಿಗೆ ಅಂಗುಷ್ಠವಿಲ್ಲದಿದ್ದಾಗ ಹೇಗೆ ?

तत्वप्रकाशिका – नाद्यः । पश्वादीनामङ्गुष्ठाभावेन तदन्तर्गतविष्णोरङ्गुष्ठ-मात्रत्वायोगात् ।

ಮೊದಲನೆಯ ಪಕ್ಷ ತಪ್ಪು. ಪಶು ಮೊದಲಾದವುಗಳಿಗೆ ಅಂಗುಷ್ಠವೇ ಇಲ್ಲದ ಕಾರಣ ತದಂತರ್ಗತನಾದ ವಿಷ್ಣುವಿಗೆ ಅಂಗುಷ್ಠಪರಿಮಾಣತ್ವವನ್ನು ಹೇಳಲು ಸಾಧ್ಯವಿಲ್ಲ.

ಎರಡು ವಿಕಲ್ಪಗಳಿಗೆ ಉತ್ತರ

तत्वप्रकाशिका – न द्वितीयः । तत्कथनवैयर्थ्यादसम्भवाच्चेत्याशङ्कां परिहरत्सूत्रशेषं व्याचष्टे – इतरेति ।।

ಎರಡನೆಯ ಪಕ್ಷವೂ ತಪ್ಪು. ಯಾವುದಾದರೂ ಅಂಗುಷ್ಠದ ಪರಿಮಾಣವನ್ನು ಹೇಳುವುದು ವ್ಯರ್ಥವೇ ಆಗಿದೆ. ಹಾಗೂ ಅದು ಅಸಂಭಾವಿತವೂ ಆಗಿದೆ. ಈ ಆಶಂಕೆಯನ್ನು ಪರಿಹಾರ ಮಾಡುವುದಕ್ಕಾಗಿ ಸೂತ್ರದ ಉಳಿದ ಭಾಗವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ 'ಇತರ' ಇತ್ಯಾದಿಯಾಗಿ.

ಆಯಾ ಪ್ರಾಣಿಗಳ ಅಂಗುಷ್ಠಪರಿಮಾಣವನ್ನೊಪ್ಪಬೇಕು

तत्वप्रकाशिका – युक्तं विष्णोरङ्गुष्ठमात्रत्वम् । तत्तदङ्गुष्ठमात्रत्वाभ्युपगमेन विकल्पानवकाशात् ।

ವಿಷ್ಣುವಿಗೆ ಅಂಗುಷ್ಠಪರಿಮಾಣವು ಯುಕ್ತವೇ ಆಗಿದೆ. ಆಯಾ ಪ್ರಾಣಿಗಳ ಅಂಗುಷ್ಠ-ಪರಿಮಾಣವನ್ನು ಹೊಂದಿದ್ದಾನೆಂದು ಒಪ್ಪಿದ್ದರಿಂದ ವಿಕಲ್ಪಕ್ಕೆ ಅವಕಾಶವೇ ಇಲ್ಲ.

ಪಶುಗಳಿಗೆ ಅಂಗುಷ್ಠವೇ ಇಲ್ಲದಿದ್ದಾಗ !

तत्वप्रकाशिका – नच तत्पक्षोक्तविरोधः । मनुष्याणामेव वेदविद्योपासनाधिकारित्वेन तान्प्रत्येतद्विद्याप्रवृत्त्या पश्वादीनामङ्गुष्ठाभावेऽपि विष्णोरङ्गुष्ठमात्रत्वोक्तिसम्भवादिति भावः ।

ಹಾಗಾದರೆ ಪ್ರಾಣಿಗಳಿಗೆ ಅಂಗುಷ್ಟವೇ ಇಲ್ಲವಲ್ಲ ? ಎಂಬ ಶಂಕೆಗೂ ಅವಕಾಶವೇ ಇಲ್ಲ. ಏಕೆಂದರೆ ಮನುಷ್ಯರಿಗೆ ಮಾತ್ರ ವೇದವಿದ್ಯೋಪಾಸನೆಯಲ್ಲಿ ಅಧಿಕಾರವಿರುವುದರಿಂದ ಅವರನ್ನು ಕುರಿತೇ ಅಂಗುಷ್ಟಮಾತ್ರ ಉಪಾಸನೆಯನ್ನು ಶ್ರುತಿಯು ವಿಧಿಸಿದೆ. ಪಶು ಮೊದಲಾದವುಗಳಿಗೆ ಅಂಗುಷ್ಟವಿಲ್ಲದಿದ್ದರೂ ಮನುಷ್ಯರ ದೃಷ್ಟಿಯಿಂದ ಹೇಳಿರುವ ಕಾರಣ ವಿಷ್ಣುವಿಗೆ ಅಂಗುಷ್ಟಮಾತ್ರತ್ವವು ಯುಕ್ತವಾಗುತ್ತದೆಂದು ತಿಳಿಯಬೇಕು.

ಈಶಾನ್ಯನಾದ ವಿಷ್ಣುವೇ ಜಿಜ್ಞಾಸ್ಯನೆಂದು ಸಿದ್ಧಾಂತ

तत्वप्रकाशिका – तुशब्दोऽपिशब्दार्थः । तस्मादीशानो विष्णुरेवेति स एव जिज्ञास्य इति सिद्धम् ।।

।। इति श्रीमज्जयतीर्थभिक्षुविरचितायां तत्वप्रकाशिकायाम्
वामनाधिकरणं संपूर्णम्।।

ಇಲ್ಲಿ ಸೂತ್ರದಲ್ಲಿರುವ 'ತು' ಶಬ್ದವು 'ಅಪಿ' ಎಂಬರ್ಥದಲ್ಲಿದೆ. ಅಂದರೆ ಅಂಗುಷ್ಠಾಭಾವೇಪಿ ಎಂದರ್ಥ. ಆದ್ದರಿಂದ ನಿರವಕಾಶವಾದ ವಾಮನಶ್ರುತಿ ಇರುವುದರಿಂದ ಮತ್ತು ಅಂಗುಷ್ಠಪರಿಮಾಣಕ್ಕೆ ಯಾವುದೇ ಬಾಧಕವಿಲ್ಲದ್ದರಿಂದ ಈಶಾನಶಬ್ದದಿಂದ ವಾಚ್ಯನಾದವನು ವಿಷ್ಣುವೇ ಆಗಿದ್ದಾನೆ, ಅವನೇ ಜಿಜ್ಞಾಸ್ಯನಾಗಿದ್ದಾನೆಂದು ಈ ಅಧಿಕರಣದಿಂದ ಸಿದ್ಧವಾಯಿತು.

।। ಇಲ್ಲಿಗೆ ಶ್ರೀಮಜ್ಜಯತೀರ್ಥಮುನಿಗಳಿಂದ ವಿರಚಿತವಾದ ತತ್ವಪ್ರಕಾಶಿಕಾಟೀಕೆಯಲ್ಲಿ
ವಾಮನಾಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ।।

ಭಾವದೀಪ

ಲಿಂಗಗಳ ವಿರೋಧವಿಲ್ಲದ ಮಾತ್ರಕ್ಕೆ ಏನಾಯಿತು ?

भावदीपः – हृद्यपेक्षया तु मनुष्याधिकारत्वात् ।।

तथापीति ।। प्राणव्यवस्थापकत्वादिलिङ्गविरोधाभावेऽपीत्यर्थः ।।

ಪ್ರಾಣವ್ಯವಸ್ಥಾಪಕತ್ವಾದಿಲಿಂಗಗಳ ವಿರೋಧವಿಲ್ಲದಿದ್ದರೂ 'ಈಶಾನ' ಶಬ್ದಪ್ರತಿಪಾದ್ಯನು ವಿಷ್ಣುವೇ ಏಕಾಗಬೇಕು? ಎಂದು 'ತಥಾಪಿ' ಇತ್ಯಾದಿ ವಾಕ್ಯದಿಂದ ಪ್ರಶ್ನಿಸುತ್ತಿದ್ದಾರೆ.

'ಅಂಗುಷ್ಠಮಾತ್ರತ್ವೋಕ್ತೇಃ' ಎಂಬುದರ ಅರ್ಥ

भावदीपः – अङ्गुष्ठेति ।। 'अङ्गुष्ठमात्रः पुरुषो मध्य आत्मनि तिष्ठति । ईशानो भूतभव्यस्य' इति ईशानस्याङ्गुष्ठमात्रत्वोक्तेरित्यर्थः ।।

'ಅಂಗುಷ್ಠಮಾತ್ರಃ ಪುರುಷೋ ಮಧ್ಯೇ ಆತ್ಮನಿ ತಿಷ್ಠತಿ । ಈಶಾನೋ ಭೂತಭವ್ಯಸ್ಯ' ಇತ್ಯಾದಿ ಶ್ರುತಿಯಲ್ಲಿ 'ಈಶಾನ' ಶಬ್ದ ಪ್ರತಿಪಾದ್ಯನಿಗೆ ಅಂಗುಷ್ಠಪರಿಮಾಣವನ್ನು ಹೇಳಿದ್ದರಿಂದ ಎಂದು 'ಅಂಗುಷ್ಠಮಾತ್ರತ್ವೋಕ್ತೋಃ' ಎಂಬ ಪದದ ಅರ್ಥ.

'ಸರ್ವಗತತ್ವಾತ್' ಎಂಬುದರ ಅರ್ಥ

भावदीपः – सर्वेति ।। अदृश्यत्वनये सर्वगतं सुसूक्ष्ममिति श्रवणेन तत्र सिद्धत्वात्सर्वगतत्वस्येत्यर्थः ।।

ಅದೃಶ್ಯತ್ವಾಧಿಕರಣದಲ್ಲಿ 'ಸರ್ವಗತಂ ಸುಸೂಕ್ಷ್ಮಮ್' ಎಂದು ಹೇಳಿದ್ದರಿಂದ ಪರಮಾತ್ಮನು ಸರ್ವಗತನಾಗಿದ್ದಾನೆಂದು ತಿಳಿಯುತ್ತದೆಂದು 'ಸರ್ವಗತತ್ವಾತ್' ಎಂದು ಹೇಳಿದ್ದಾರೆ.

ಪರಮಾತ್ಮನು ಅಣುತ್ವರೂಪನೇ ?

ಭಾವದೀಪಃ – व्योमवदिति ।। यद्यपि 'निचाय्यत्वादेवं व्योमवच्चेत्यत्र व्योमवत्सर्वगतस्याल्पदेशस्थितिरुक्ता न त्वणुत्वम् । अक्षरनये 'अन्यभावव्यावृत्तेश्चेति गुणसूत्र एवाणुत्वमुक्तं विरुद्धैर्लक्षणैर्युतम् । ब्रह्मेत्येवेत्यनुभाष्योक्तेः ।

'ನಿಚಾಯ್ಯತ್ವಾದೇವಂ ವ್ಯೋಮವಚ್ಚ' ಎಂಬ ಸೂತ್ರದಲ್ಲಿ ಆಕಾಶದಂತೆ ಸರ್ವಗತನಾದ ಪರಮಾತ್ಮನಿಗೆ ಅಲ್ಪದೇಶದಲ್ಲಿರುವಿಕೆಯನ್ನು ಹೇಳಿದ್ದಾರೆ ಹೊರತು ಅಣುಸ್ವರೂಪವನ್ನು ಹೇಳಿಲ್ಲ. ಅಕ್ಷರಾಧಿಕರಣದಲ್ಲಿ 'ಅನ್ಯಭಾವವ್ಯಾವೃತ್ತೇಶ್ಚ' ಗುಣಸೂತ್ರದಲ್ಲಿ 'ವಿರುದ್ಧೈರ್ಲಕ್ಷಣೈರ್ಯುತಮ್ ಬ್ರಹ್ಮ' ಎಂದು ಅನುವ್ಯಾಖ್ಯಾನದಲ್ಲಿ ಹೇಳಿದಂತೆ ಅಣುತ್ವವನ್ನು ಹೇಳಿದ್ದಾರಲ್ಲವೆ ?

ಅಣುತ್ವ ಮಹತ್ವಗಳೆರಡೂ ಪರಮಾತ್ಮನಲ್ಲಿದೆ

ಭಾವದೀಪಃ – तथाप्यणुपरिमाणस्यैवाल्पदेशस्थत्वं भवतीति भावेन वा 'महतोऽल्पत्वमपि हि व्योमवत्प्राह वेदविदिति वैशेषिकनयानुभाष्ये व्योमदृष्टान्तेनै वेश्वरेऽणुत्वमहत्त्वयोः साधितत्वाद्वा व्योमवदणुत्वं प्रतिपादितमित्युक्तम् ।।

ಉತ್ತರ - ಅಣುಪರಿಮಾಣ ಇರುವಂತಹ ವ್ಯಕ್ತಿಯಲ್ಲಿ ಮಾತ್ರ ಅಲ್ಪದೇಶಸ್ಥಿತತ್ವವು ಬರುತ್ತದೆ ಎಂಬ ಅಭಿಪ್ರಾಯದಿಂದ 'ಮಹತೋऽಲ್ಪತ್ವಮಪಿ ಹಿ ವ್ಯೋಮವತ್ ಪ್ರಾಹ ವೇದವಿತ್' ಎಂಬ ವೈಶೇಷಿಕಾಧಿಕರಣದ ಅನುವ್ಯಾಖ್ಯಾನವು ಹೇಳುತ್ತಿದೆ. ಆಕಾಶದ ದೃಷ್ಟಾಂತದಿಂದ ಪರಮಾತ್ಮನಲ್ಲಿ ಅಣುತ್ವ ಹಾಗೂ ಮಹತ್ವಗಳೆಂಬ ಧರ್ಮಗಳನ್ನು ಸಾಧಿಸಲಾಗಿದೆ. ಆದ್ದರಿಂದ ಆಕಾಶದಂತೆ ಪರಮಾತ್ಮನೂ ಕೂಡ ಅಣುರೂಪನಾಗಿದ್ದಾನೆಂದು ಇಲ್ಲಿ ಪ್ರತಿಪಾದಿಸಿದ್ದು ತಪ್ಪಲ್ಲ.

ಅಂಗುಷ್ಠಮಾತ್ರ ಎಂಬಲ್ಲಿರುವ 'ಮಾತ್ರ' ಪದದ ಅರ್ಥ

ಭಾವದೀಪಃ – तन्मात्रत्वेति ।। अवधारणार्थकमात्रपदेनाङ्गुष्ठेतरपरिमाण राहित्योक्तिपूर्वम् अङ्गुष्ठपरिमाणत्वोक्तेरित्यर्थः ।

ಅಂಗುಷ್ಠಮಾತ್ರ ಎಂಬಲ್ಲಿರುವ 'ಮಾತ್ರ' ಪದಕ್ಕೆ ಅಂಗುಷ್ಠಪರಿಮಾಣವನ್ನು ಬಿಟ್ಟು ಬೇರೆ ಪರಿಮಾಣವಿಲ್ಲವೆಂದು ಹೇಳಿದ್ದರಿಂದ ಎಂದರ್ಥ.

ಹೃದಯಪದದಿಂದ ತಿಳಿಯುವ ಸಾಮರ್ಥ್ಯ

ಭಾವದೀಪಃ – एतेन पूर्वस्मादभ्यधिकाशङ्का प्रदर्शिता । यद्यत्र मात्रशब्दो नावधारणार्थः, किन्तु 'प्रमाणे द्वयसजिति परिमाणार्थो मात्रच्प्रत्ययः । तदा 'अङ्गुष्ठमात्रः पुरुषोऽन्तरात्मा सदा जनानां हृदये सन्निविष्टः इति हृदयपदवैय्यर्थ्यमिति भावः ।

ಹೀಗೆ ಹೇಳಿದ್ದರಿಂದ ಹಿಂದಿನ ಸೂತ್ರಕ್ಕಿಂತಲೂ ಅಭ್ಯಧಿಕಾಶಂಕೆಯನ್ನು ತೋರಿಸಿದಂತಾಯಿತು. ಒಂದು ವೇಳೆ ಮಾತ್ರಶಬ್ದಕ್ಕೆ 'ಅವಧಾರಣ' ಎಂಬ ಅರ್ಥವನ್ನು ಸ್ವೀಕರಿಸದೆ ಪರಿಮಾಣವೆಂಬ ಅರ್ಥವನ್ನು ಸ್ವೀಕರಿಸಿ 'ದ್ವಯಸಚ್' ಇತ್ಯಾದಿಸೂತ್ರದಿಂದ 'ಮಾತ್ರಚ್' ಪ್ರತ್ಯಯವು ಬಂದಿದೆ ಎಂದು ಹೇಳುವುದಾದರೆ 'ಅಂಗುಷ್ಠಮಾತ್ರಃ ಪುರುಷೋಂತರಾತ್ಮಾ ಸದಾ ಜನಾನಾಂ ಹೃದಯೇ ಸನ್ನಿವಿಷ್ಟಃ' ಎಂಬಲ್ಲಿರುವಂತಹ 'ಹೃದಯ' ಪದವು ವ್ಯರ್ಥವಾಗುತ್ತದೆಂದು ಅಭಿಪ್ರಾಯ.

ಹೆಚ್ಚಿನ ವಿಚಾರ ತಾತ್ಪರ್ಯಚಂದ್ರಿಕೆಯಲ್ಲಿ

ಭಾವದೀಪಃ – अधिकं चन्द्रिकायां बोध्यम् । एतेनैव वक्ष्यमाणलक्षणाबीज मुख्यार्थानुपपत्तिरुपन्यस्ताध्येया ।

ಹೆಚ್ಚಿನ ವಿಚಾರವನ್ನು ತಾತ್ಪರ್ಯಚಂದ್ರಿಕೆಯಲ್ಲಿ ತಿಳಿಯಬೇಕು. ಹೀಗೆ ಹೇಳಿದ್ದರಿಂದ ಮುಂದೆ ಹೇಳುವಂತಹ ಲಕ್ಷಣಾ ಬೀಜವೆನಿಸಿದ ಮುಖ್ಯಾರ್ಥಾನುಪಪತ್ತಿಯನ್ನು ಉಪನ್ಯಾಸ ಮಾಡಿದಂತಾಯಿತು.

ಕಾಠಕಭಾಷ್ಯಕ್ಕೆ ಅನುಸಾರಿಯಾಗಿ ಬ್ರಹ್ಮಸೂತ್ರ ಭಾಷ್ಯ

ಭಾವದೀಪಃ – सूत्रे हृदपेक्षयेत्यनुक्त्वा हृदीत्युक्तिः दहरनये प्रसिद्धेश्चेत्यत्रोक्त-दिशाहृत्स्थाकाशस्थितत्वं विष्णोर्वक्तुमिति भावेन प्रवृत्तं

हृद्यवकाशापेक्षयेति भाष्यं 'देहाङ्गुष्ठमितो देहे जीवाङ्गुष्ठमितो हृदि । जीवस्य स तु विज्ञेयो जीवाद्भेदेन मुक्तय इति काठकभाष्ये अङ्गुष्ठपरिमितत्वोक्त्यनुरोधेन मुख्यार्थपरतया तावद्व्याचष्टे – हृदीति ।।

ಸೂತ್ರದಲ್ಲಿ 'ಹೃದಪೇಕ್ಷಯಾ' ಎಂದು ಹೇಳದೆ 'ಹೃದಿ' ಎಂದು ಏಕೆ ಹೇಳಿದ್ದಾರೆಂದರೆ ದಹರಾಧಿಕರಣದಲ್ಲಿ 'ಪ್ರಸಿದ್ಧೇಶ್ಚ' ಎಂಬ ಸೂತ್ರವನ್ನು ವ್ಯಾಖ್ಯಾನ ಮಾಡುವಾಗ ಹೃದಯದಲ್ಲಿರುವಂತಹ ಆಕಾಶದಲ್ಲಿ ವಿಷ್ಣುವಿನ ಸ್ಥಿತಿಯನ್ನು ಹೇಳಿದ್ದಾರೆಂಬ ಅಭಿಪ್ರಾಯದಿಂದ. 'ಹೃದ್ಯವಕಾಶಾಪೇಕ್ಷಯಾ' ಎಂಬ ಭಾಷ್ಯವು 'ದೇಹಾಂಗುಷ್ಟಮಿತೋ ದೇಹೇ ಜೀವಾಂಗುಷ್ಠಮಿತೋ ಹೃದಿ । ಜೀವಸ್ಯ ಸ ತು ವಿಜ್ಞೇಯೋ ಜೀವಾದ್ಭೇದೇನ ಮುಕ್ತಯೇ' ಎಂಬ ಕಾಠಕಭಾಷ್ಯದ ಅಂಗುಷ್ಠಪರಿಮಾಣವನ್ನು ಅನುಸರಿಸಿ ಮುಖ್ಯಾರ್ಥ-ಪರವಾಗಿ ಹೊರಟಿದೆಯೆಂದು ವ್ಯಾಖ್ಯಾನುಸುತ್ತಿದ್ದಾರೆ 'ಹೃದಿ' ಇತ್ಯಾದಿ ಟೀಕೆಯಿಂದ.

ಭಗವನ್ಮೂರ್ತಿವಿಶೇಷವೇ ಅಂಗುಷ್ಠ ಪರಿಮಾಣವುಳ್ಳದ್ದು

भावदीपः – भगवन्मूर्तिविशेषस्य तन्मात्रपरिमाणत्वेन तादृशहृदयावकाशे व्यक्तत्वेनाङ्गुष्ठमात्रपरिमाणत्वोक्तिरित्यर्थः ।

ಭಗವನ್ಮೂರ್ತಿವಿಶೇಷವು ಅಂಗುಷ್ಠದಷ್ಟೇ ಪರಿಮಾಣವನ್ನು ಹೊಂದಿದ್ದರಿಂದ ಅಂಗುಷ್ಠದಷ್ಟೇ ಅವಕಾಶವಿರುವ ಹೃದಯದಲ್ಲಿ ಅಂಗುಷ್ಠಪರಿಮಾಣದಷ್ಟೇ ಪ್ರಾದುರ್ಭಾವನಾಗುತ್ತಾನೆಂದು ಅಭಿಪ್ರಾಯ.

ಶಕ್ತಿ ವ್ಯಕ್ತಿರೂಪದಿಂದ ವಿರೋಧ ಪರಿಹಾರ

भावदीपः – शक्त्यात्मनाऽपरिमितपरिमाणस्यापि रूपविशेषे व्यक्त्यात्मनाऽङ्गुष्ठमात्रपरिमाणत्वोक्तिपरतया व्याख्यायेदानीम् ईश्वरे तन्मात्रपरिमाणाभावेऽपि उपचारात्तदुक्तिर्युक्तेत्यर्थान्तरपरतया व्याचष्टे – भिन्नेष्विति।।

ಭಗವಂತನು ಶಕ್ತಿರೂಪದಿಂದ ಅಪರಿಮಿತ ಪರಿಮಾಣ ಉಳ್ಳವನಾಗಿದ್ದರೂ, ರೂಪವಿಶೇಷದಲ್ಲಿ ವ್ಯಕ್ತಿರೂಪದಿಂದ ಅಂಗುಷ್ಠಪರಿಮಾಣವನ್ನು ಹೇಳಬಹುದೆಂದು ಇಲ್ಲಿಯ ತನಕ ವ್ಯಾಖ್ಯಾನಿಸಿದ್ದಾಯಿತು. ಈಗ ಈಶ್ವರನಲ್ಲಿ ಅಂಗುಷ್ಠಪರಿಮಾಣ ಇಲ್ಲದಿದ್ದರೂ ಔಪಚಾರಿಕವಾಗಿ ಹಾಗೆ ಶ್ರುತಿಯು ಹೇಳಿದೆಯೆಂದು ಮತ್ತೊಂದು ಬಗೆಯ ವ್ಯಾಖ್ಯಾನವನ್ನು ಮಾಡುತ್ತಿದ್ದಾರೆ 'ಭಿನ್ನೇಷು' ಇತ್ಯಾದಿ ಟೀಕೆಯಿಂದ.

ಸ್ಥಾನೈಕ್ಯದಿಂದ ಐಕ್ಯಪ್ರಯೋಗವನ್ನು ಕೂಡಿಸಬೇಕು

ಭಾವದೀಪಃ – 'यथा गावः सायं गोष्ठ एकीभवन्ति, परेऽव्यये सर्व एकीभवन्तित्यादौ स्थानगतैक्येन तद्गतेष्वैक्याभावेऽप्यैक्योक्तिस्तथेत्यर्थः ।

ಯಾವರೀತಿಯಾಗಿ ಹಸುಗಳು ಸಾಯಂಕಾಲದ ಸಮಯದಲ್ಲಿ ಕೊಟ್ಟಿಗೆಯಲ್ಲಿ ಒಂದಾಗುತ್ತದೆಂದು ಸ್ಥಾನೈಕ್ಯದಿಂದ ಹಸುಗಳು ಒಂದಾದವು ಎಂದು ಹೇಳಲಾಗುತ್ತದೋ ಆದರಂತೆ ಇಲ್ಲಿಯೂ ಸ್ಥಾನೈಕ್ಯದಿಂದ ಐಕ್ಯಪ್ರಯೋಗವನ್ನು ಕೂಡಿಸಬೇಕು.

ಆನಂದಯಮಯಾಧಿಕರಣದಂತೆ ಮತ್ತೊಂದು ಪರಿಹಾರ

ಭಾವದೀಪಃ – एतेनानन्दमयनये प्राणमयादेरन्यत्वान्तरत्वादिधर्माः कोशगता एव तद्गतभगवद्रूपेषूपचर्यन्त इति समाध्यन्तरमपि सूचितम् ।

ಹೀಗೆ ಹೇಳಿದ್ದರಿಂದ ಆನಂದಮಯಾಧಿಕರಣದಲ್ಲಿ ಪ್ರಾಣಮಯಾದಿಗಳಿಗೆ ಹೇಳಲ್ಪಟ್ಟ ಅನ್ಯತ್ವ ಮತ್ತು ಅಂತರತ್ವಾದಿಧರ್ಮಗಳು ಕೋಶದಲ್ಲೇ ಇರುತ್ತವೆ. ಭಗವದ್ರೂಪಗಳಲ್ಲಿ ಔಪಚಾರವಾಗಿ ಹೇಳಿದ್ದರಿಂದ ಮತ್ತೊಂದು ಸಮಾಧಾನವನ್ನು ಸೂಚಿಸಿದಂತಾಯಿತು.

ಭೇದವ್ಯಪದೇಶವನ್ನು ಹೇಗೆ ಕೂಡಿಸಬೇಕು ?

ಭಾವದೀಪಃ – तथा च न स्थानतोऽपि परस्योभयलिङ्गमित्यधिकरणे भाष्ये अभेदेऽपि भेदव्यपदेशः स्थानभेदादैश्वर्ययोगाच्च युज्यत इति । वैश्वानरनयोदाहरणे श्रुतं प्रादेशमात्रत्वमप्यनेनैव समाहितं बोध्यम् ।

'न स्थानतोऽपि परस्योभयलिंगम्' ಎಂಬ ಅಧಿಕರಣದ ಭಾಷ್ಯದಲ್ಲಿ ಅಭೇದವಿದ್ದರೂ ಸ್ಥಾನಭೇದಾದಿಗಳಿಂದ ಭೇದವ್ಯಪದೇಶವು ಮತ್ತು ಐಶ್ವರ್ಯಶಕ್ತಿಯಿಂದಲೂ ಭೇದವ್ಯಪದೇಶವು ಯುಕ್ತವಾಗುತ್ತದೆಂದು ಹೇಳಲಾಗಿದೆ. ವೈಶ್ವಾನರಾಧಿಕರಣದಲ್ಲಿ ಉದಾಹರಿಸಿದ ಶ್ರುತಿಯಲ್ಲಿ ಹೇಳಲ್ಪಟ್ಟ ಪ್ರಾದೇಶಮಾತ್ರತ್ವವೂ ಕೂಡ ಇದರಿಂದಲೇ ಉಪಪಾದಿಸಿದಂತಾಯಿತು.

ಕೆಲವರ ಆಕ್ಷೇಪ ಹಾಗೂ ಸಮಾಧಾನ

ಭಾವದೀಪಃ – यत्तु एवमुपचरितार्थत्वे श्रुतेर्वर्ण्यमाने वेदवाक्यस्य तु वाचनिकार्थं विना नैवान्यो युज्यत इति कर्मनिर्णयोक्तिविरोध इति तन्न ।

'स्वातन्त्र्ये च विशिष्टत्वे स्थानमत्यैक्ययोरपि । सादृश्ये चैक्यवाक्सम्यक् सावकाशा यथेष्टतः ।।' इति जिज्ञासानयानुव्याख्यानादौ भगवत्पादैरेव श्रुतेर्गौणार्थत्वोक्तेः ।

ಕೆಲಪರ ಆಕ್ಷೇಪ - ಹೀಗೆ ಔಪಚಾರಿಕವಾಗಿ ವಿಷ್ಣುಪರತ್ವವನ್ನು ಶ್ರುತಿಗೆ ಹೇಳುವುದಾದರೆ ಮುಖ್ಯಾರ್ಥವನ್ನು ಬಿಟ್ಟು ಗೌಣಾರ್ಥವನ್ನು ಮಾಡಬಾರದೆಂದು 'वाचनिकार्थं विना नैवान्यो युज्यते' ಎಂಬ ಕರ್ಮನಿರ್ಣಯತ್ವದ ವಾಕ್ಯತ್ವಕ್ಕೆ ವಿರೋಧ ಬರುತ್ತದಲ್ಲವೆ?

ಸಮಾಧಾನ - ಇದು ತಪ್ಪು. 'स्वातंत्र्ये च विशिष्टत्वे स्थानमत्यैक्ययोरपि । सादृश्ये चैक्यवाक्सम्यक् सावकाशा यथेष्टतः' ಎಂಬ ಜಿಜ್ಞಾಸಾಧಿಕರಣದ ಅನುವ್ಯಾಖ್ಯಾನದಲ್ಲಿ ಶ್ರೀಮದಾಚಾರ್ಯರೇ ಸ್ವತಃ ಶ್ರುತಿಗೆ ಗೌಣಾರ್ಥವನ್ನು ಹೇಳಿರುತ್ತಾರೆ.

ಕರ್ಮನಿರ್ಣಯದ ಅಭಿಪ್ರಾಯವು ವಿವಕ್ಷಿತ

भावदीपः – अत एव टीकायां स्थानैक्येनैक्योक्तिवदिति दृष्टान्तोक्तिः । कर्मनिर्णयवाक्यं तु तट्टीकायां सम्यग् व्याख्यातमिति भावः ।।

ಆದ್ದರಿಂದಲೇ ಟೀಕೆಯಲ್ಲಿ ಸ್ಥಾನೈಕ್ಯದ ದೃಷ್ಟಾಂತವನ್ನು ನೀಡಿ ಗೌಣಾರ್ಥವನ್ನು ಸಮರ್ಥಿಸಿದ್ದಾರೆ. ಕರ್ಮನಿರ್ಣಯವಾಕ್ಯದ ಅಭಿಪ್ರಾಯವನ್ನು ಅದೇ ಗ್ರಂಥದ ಟೀಕೆಯಲ್ಲಿ ಸ್ಪಷ್ಟಪಡಿಸಲಾಗಿದೆ.

ಅಂಗುಷ್ಠಪರಿಮಾಣವನ್ನು ಹೇಳಿದ್ದು ವ್ಯರ್ಥವೇ ?

भावदीपः – कथनेति ।। अङ्गुष्ठवद्व्यक्तिविशेषनिर्धारणं विना यत्किञ्चिदङ्गुष्ठमात्रत्वेनोपासनायोगात्तत्कथनं व्यर्थमित्यर्थः ।।

ಅಂಗುಷ್ಠವುಳ್ಳ ವ್ಯಕ್ತಿವಿಶೇಷನನ್ನು ನಿರ್ಧಾರ ಮಾಡದೆ ಯಾವನೋ ಒಬ್ಬನ ಅಂಗುಷ್ಠಮಾತ್ರತ್ವವನ್ನು ಹೇಳಿದರೆ ಉಪಾಸನೆಯು ಕೂಡುವುದಿಲ್ಲ ಆದ್ದರಿಂದ ಅಂಗುಷ್ಠಪರಿಮಾಣವನ್ನು ಹೇಳಿದ್ದು ವ್ಯರ್ಥವೆಂದು 'ಕಥನ' ಇತ್ಯಾದಿ ಮಾತಿನಿಂದ ಹೇಳಿದ್ದಾರೆ.

ಇರುವೆಗೆ ಅಂಗುಷ್ಠಪರಿಮಾಣ ಹೇಗೆ ?

भावदीपः – असम्भवाच्चेति ।। पिपीलिकाहृदयस्ये अङ्गुष्ठमात्र-सामान्यस्यैवाभावादित्यर्थः ।

ಇರುವೆಯ ಹೃದಯದಲ್ಲಿ ಅಂಗುಷ್ಠಪರಿಮಾಣಸಾಮಾನ್ಯವನ್ನೇ ಹೇಳಲು ಸಾಧ್ಯವಿಲ್ಲವೆಂದು 'ಅಸಂಭವಾಚ್ಚ' ಎಂಬುದರಿಂದ ಹೇಳಿದ್ದಾರೆ.

'ಅಂಗುಷ್ಠೇಭಾವೇತಿ' ಎಂಬಲ್ಲಿರುವ 'ಅಪಿ' ಶಬ್ದದ ಅರ್ಥವೇನು ?

भावदीपः – सूत्रे भाष्ये च मनुष्यपदं मनुष्यमात्रपरामुपेत्यार्थमाह – मनुष्याणामेवेति ।। पूर्वं सौत्रस्तुशब्दो हृद्यपेक्षयेति भाष्यानुरोधादेवकारार्थो व्याख्यातः । इदानीम् अङ्गुष्ठाभावेऽपीति भाष्यानुरोधादपिशब्दार्थतया व्याचष्टे – तुशब्दोऽपिशब्दार्थ इति ।।

ಸೂತ್ರ ಹಾಗೂ ಭಾಷ್ಯಗಳಲ್ಲಿರುವಂತಹ ಮನುಷ್ಯಪದಕ್ಕೆ ಮನುಷ್ಯರನ್ನು ಮಾತ್ರ ವಿವಕ್ಷಿಸಬೇಕೆಂಬ ಅಭಿಪ್ರಾಯದಿಂದ 'ಮಾನುಷ್ಯಾಣಾಂ ಏವ' ಎಂದು ಟೀಕೆಯಲ್ಲಿ ಹೇಳಿದ್ದಾರೆ. ಹಿಂದೆ ಸೂತ್ರದಲ್ಲಿರುವ 'ತು' ಶಬ್ದಕ್ಕೆ 'ಹೃದ್ಯಪೇಕ್ಷಯಾ' ಎಂಬ ಭಾಷ್ಯಕ್ಕೆ ಅನುಸಾರಿಯಾಗಿ 'ಏವ' ಎಂಬರ್ಥವನ್ನು ಹೇಳಿದರು. ಈಗ 'ಅಂಗುಷ್ಠಾಭಾವೇಪಿ' ಎಂಬ ಭಾಷ್ಯಕ್ಕೆ ಅನುಸಾರಿಯಾಗಿ 'ಅಪಿ' ಎಂಬರ್ಥವನ್ನು ಹೇಳುತ್ತಿದ್ದಾರೆ 'ತು ಶಬ್ದಃ ಅಪಿಶಬ್ದಾರ್ಥಃ' ಇತ್ಯಾದಿಯಾಗಿ.

ಎರಡು ಸೂತ್ರಗಳ ಒಟ್ಟು ಅಭಿಪ್ರಾಯ

भावदीपः – सूत्रद्वयार्थं फलोक्त्योपसंहरति – तस्मादिति ।। निरवकाशत्वा लवद्ग्रामनशब्दादङ्गुष्ठमात्रत्वादिबाधकाभावाच्चेत्यर्थः । आद्येतिशब्दो हेत्वर्थः।

ಎರಡು ಸೂತ್ರಗಳಿಂದ ದೊರೆತ ಒಟ್ಟು ಅಭಿಪ್ರಾಯವನ್ನು ಹೇಳುತ್ತಾ ಉಪಸಂಹಾರ ಮಾಡುತ್ತಿದ್ದಾರೆ 'ತಸ್ಮಾತ್' ಇತ್ಯಾದಿ ಟೀಕೆಯಿಂದ. 'ತಸ್ಮಾತ್' ಎಂದರೆ ನಿರವಕಾಶ ಪ್ರಯುಕ್ತವಾಗಿ ಬಲಿಷ್ಠವಾದ 'ವಾಮನ' ಶಬ್ದವಿರುವುದರಿಂದ ಅಂಗುಷ್ಠಮಾತ್ರತ್ವ ಮೊದಲಾದವುಗಳಿಗೆ ಬಾಧವಿಲ್ಲದಿರುವುದುಯೆಂದರ್ಥ. ಮೊದಲಿರುವ 'ಇತಿ' ಶಬ್ದವು ಹೇತ್ವರ್ಥದಲ್ಲಿದೆ.

ಈಶಾನಪದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕೆಂದು ಕೆಲವರ ಆಕ್ಷೇಪ

ಭಾವದೀಪಃ – यत्तु कश्चिदाह, प्रथमे सूत्रे ईशान इति पदाध्याहारदोषः। प्रमितपदवैय्यर्थ्यं च । द्वितीये हृच्छब्दस्य अवकाशलक्षणाप्रसङ्गः अङ्गुष्ठमात्रत्वमित्यध्याहारप्रसङ्गश्चेति ।

ಕೆಲವರ ಆಕ್ಷೇಪ - ಪ್ರಥಮಸೂತ್ರದಲ್ಲಿ 'ಈಶಾನ' ಎಂಬ ಪದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕು, ಮತ್ತು ಪ್ರಮಿತಪದಕ್ಕೆ ಸಾರ್ಥಕ್ಯವು ಇರುವುದಿಲ್ಲ. ಎರಡನೆಯ ಸೂತ್ರದಲ್ಲಿ 'ಹೃತ್' ಎಂಬ ಶಬ್ದಕ್ಕೆ ಅವಕಾಶ ಎಂಬರ್ಥದಲ್ಲಿ ಲಕ್ಷಣಾ ಮಾಡಬೇಕು 'ಅಂಗುಷ್ಠಮಾತ್ರತ್ವಮ್' ಎಂಬುದನ್ನು ಅಧ್ಯಾಹಾರ ಮಾಡಿಕೊಳ್ಳಬೇಕಾಗುತ್ತದೆ. ಹೀಗೆ ಎರಡು ಸೂತ್ರಗಳಲ್ಲಿಯೂ ವೈಯರ್ಥ್ಯ ಹಾಗೂ ಅಧ್ಯಾಹಾರ ಮೊದಲಾದ ದೋಷಗಳು ಇವೆಯಲ್ಲವೆ?

ಪ್ರಮಿತಾದಿ ಪದಗಳಿಗೆ ಅಸ್ವಾರಸ್ಯವಿದೆ ಎಂದು ನಿರಾಕರಣೆ

ಭಾವದೀಪಃ – तन्न । अपेक्षिताध्याहारस्य सूत्रे सर्वतान्त्रिकसिद्धत्वात् । त्वन्मतरीत्या प्रमित इत्यस्य पक्षत्वे पूर्वोत्तरवैरूप्याय प्रमितः शब्दादेवेति निर्देशापातात् । श्रुतिनिरवकाशत्वद्योतकतया प्रमितपदस्य सार्थक्योक्तेश्च। द्वितीये हृदपेक्षयेति वाच्ये हृद्यपेक्षयेति निर्देशादेव हृत्स्थावकाशापेक्षयेति लाभेन लक्षणानापत्तेः । त्वन्मते प्रमितपदास्वारस्याच्चेत्याद्यूह्यम् ।।

।। इति श्रीराघवेन्द्रयतिकृते भावदीपे वामनाधिकरणम् ।।

ಸಮಾಧಾನ - ಇದು ತಪ್ಪು. ಅಪೇಕ್ಷಿತವಾದ ಪದಗಳನ್ನು ಸೂತ್ರದಲ್ಲಿ ಅಧ್ಯಾಹಾರ ಮಾಡಿಕೊಳ್ಳುವುದು, ಎಲ್ಲಾ ಸೂತ್ರಕಾರರ ಭಾಷ್ಯಕಾರರ ಅಭಿಪ್ರಾಯವೇ ಆಗಿದೆ. ಆಕ್ಷೇಪ ಮಾಡುವವರೂ ಸಹ 'ಪ್ರಮಿತಃ' ಎಂಬುದನ್ನು ಪಕ್ಷವನ್ನಾಗಿ ಮಾಡಿದರೆ, ಹಿಂದಿನ ಮುಂದಿನ ವಾಕ್ಯಗಳಿಂದ ವಿರೋಧ ಬರಬಾರದೆನ್ನಲು 'ಪ್ರಮಿತಃ ಶಬ್ದಾದೇವ' ಎಂದೇ ಸೂತ್ರವನ್ನು ನಿರ್ದೇಶಿಸಬೇಕಾಗುತ್ತದೆ. ಮತ್ತು ಶ್ರುತಿಗೆ

ನಿರವಕಾಶತ್ವವನ್ನು ದ್ಯೋತನೆ ಮಾಡುವುದಕ್ಕಾಗಿ ಪ್ರಮಿತಪದವಿರುತ್ತದೆಂದು ಸಾರ್ಥಕ್ಯವನ್ನು ನಾವು ಈಗಾಗಲೇ ಹೇಳಿದ್ದೇವೆ. ಎರಡನೆಯ ಸೂತ್ರದಲ್ಲಿಯೂ ಸಹ 'ಹೃದ್ಯಪೇಕ್ಷಯಾ' ಎಂದು ಹೇಳಲು ಬರುವುದರಿಂದ, 'ಹೃದ್ಯಪೇಕ್ಷಯಾ' ಎಂದು ಹೇಳಿದ್ದರಿಂದ ಹೃದಯದಲ್ಲಿರುವ 'ಅವಕಾಶಾಪೇಕ್ಷಯಾ' ಎಂಬ ಅರ್ಥವು ತಿಳಿಯುತ್ತದೆ. ಆದ್ದರಿಂದ ಲಕ್ಷಣಾವೃತ್ತಿಯನ್ನು ನಾವು ಒಪ್ಪುತ್ತಿಲ್ಲ. ನಿಮ್ಮ ಮತದಲ್ಲಿಯೇ ಪ್ರಮಿತಪದಕ್ಕೆ ಅಸ್ವಾರಸ್ಯವಿದೆ. ಹೀಗೆ ದೋಷಗಳನ್ನು ತಿಳಿಯಬೇಕು.

॥ ಇಲ್ಲಿಗೆ ಶ್ರೀಮದ್‌ರಾಘವೇಂದ್ರತೀರ್ಥರಿಂದ ವಿರಚಿತವಾದ ಭಾವದೀಪದಲ್ಲಿ
ವಾಮನಾಧಿಕರಣದ ಕನ್ನಡ ಅನುವಾದವು ಮುಗಿಯಿತು ॥

॥ ಶ್ರೀ ಮಧ್ವೇಶಾರ್ಪಣಮಸ್ತು ॥

ತಂತ್ರದೀಪಿಕೆಯಲ್ಲಿ ದಹರಾಧಿಕರಣದ ಸೂತ್ರಗಳು

।। श्रीजानकीवदनाम्भोजराजहंसाय रामचन्द्राय नमः ।।

।। श्री गुरुभ्यो नमः ।।

श्री राघवेन्द्रतीर्थविरचिता

तन्त्रदीपिका

वामनाधिकरणम् (१।३।७)

'ಈಶಾನ' ಎಂಬ ನಾಮಾತ್ಮಕಶಬ್ದ ಸಮನ್ವಯಕ್ಕಾಗಿ ವಾಮನಾಧಿಕರಣ

।। शब्दादेव प्रमितः ।। १-३-२४

अत्र नये ईशाननाम समन्वीयते । तच्च योग्यतयाऽन्वेति । तत्त्वित्यस्ति। ''अङ्गुष्ठमात्रः पुरुषो मध्य आत्मनि तिष्ठति, ''ईशानो भूतभव्यस्य'' इत्युक्त ईशानो ब्रह्मैव प्रमितः । ईशानशब्दो ब्रह्ममात्रवाचित्वेन प्रमितो नतु वायुवाचित्वेनेत्यर्थः । ''मध्ये वामानमासीनम्'' इति वामनशब्दादेवेत्यर्थः ।

ಈ ಅಧಿಕರಣದಲ್ಲಿ 'ಈಶಾನ' ಎಂಬ ನಾಮಾತ್ಮಕಶಬ್ದವನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡುತ್ತಿದ್ದಾರೆ. ಸೂತ್ರದಲ್ಲಿ 'ಈಶಾನ' ಎಂಬ ಶಬ್ದವು ಯೋಗ್ಯತಾದಿಗಳಿರುವುದರಿಂದ ಅನ್ವಯವನ್ನು ಹೊಂದುತ್ತದೆ. 'ತತ್' ಎಂಬ ಪದಗಳು ಅನುವೃತ್ತವಾಗುತ್ತದೆ.

ಸೂತ್ರಾರ್ಥ ಹೀಗೆ - 'ಈಶಾನಃ' = 'ಅಂಗುಷ್ಠಮಾತ್ರಃ ಪುರುಷೋ ಮಧ್ಯ ಆತ್ಮನಿ ತಿಷ್ಠತಿ, ಈಶಾನೋ ಭೂತಭವ್ಯಸ್ಯ' ಎಂಬಲ್ಲಿ ಪ್ರತಿಪಾದ್ಯನಾದ ಈಶಾನನು ಬ್ರಹ್ಮನೇ ಆಗಿದ್ದಾನೆಂದು

ಮಹಾಯೋಗ ಹಾಗೂ ವಿದ್ವದ್ಬೂಢಿಗಳಿಂದ ಸಿದ್ಧನಾಗಿದ್ದಾನೆ. ಏಕೆಂದರೆ 'ಪ್ರಮಿತಃ' = 'ಈಶಾನ' ಶಬ್ದವು ಬ್ರಹ್ಮನನ್ನು ಮಾತ್ರ ಪ್ರತಿಪಾದನೆ ಮಾಡುತ್ತದೆ ಹೊರತು, ಮುಖ್ಯಪ್ರಾಣಾದಿಗಳನ್ನು ಪ್ರತಿಪಾದನೆ ಮಾಡುವುದಿಲ್ಲ ಎಂದು ಅರ್ಥ. 'ಮಧ್ಯೇ ವಾಮನಮಾಸೀನಂ' ವಾಮನಶಬ್ದ ಇರುವುದರಿಂದಲೇ ಎಂದು ಅರ್ಥ.

ಪ್ರಮುಖ ಪದದಿಂದ ತಿಳಿಯುವ ನಿರವಕಾಶತ್ವ

एवेति प्राणादिव्यवस्थापकत्वादिवायुलिङ्गाच्छ्रुतेः प्राबल्यमुच्यते । प्रमित इति निरवकाशत्वम् ।।

'ಏವ' ಶಬ್ದವು ಪ್ರಾಣಾದಿವ್ಯವಸ್ಥಾಪಕತ್ವವೇ ಮೊದಲಾದ ಮುಖ್ಯಪ್ರಾಣದೇವರ ಲಿಂಗಗಳಿಗಿಂತಲೂ ಶ್ರುತಿಯು ಪ್ರಬಲವಾಗಿದೆಯೆಂದು ಹೇಳುತ್ತಿದೆ. 'ಪ್ರಮಿತ' ಎಂಬ ಪದವು ಶ್ರುತಿಯ ನಿರವಕಾಶತ್ವವನ್ನು ಹೇಳುತ್ತಿದೆ.

ಹೃದ್ಯಪೇಕ್ಷಯಾ ಎಂಬುದರ ವ್ಯಾಖ್ಯಾನ

ननु कथमङ्गुष्ठमात्र इत्युक्तन्मात्रत्वं ब्रह्मण इत्यत आह -

।। हृद्यपेक्षया तु मनुष्याधिकारत्वात् ।। १-४-२५

''अङ्गुष्ठमात्रः'' इति योग्यतयाऽन्वेति । तत्त्वित्यस्ति । तुरेव । अप्यर्थे च । हृदीति तत्स्थावकाश उच्यते । हृत्स्थावकाशापेक्षयैव ब्रह्माख्यपुरुषोऽङ्गुष्ठमात्र उच्यते नतु स्वत इत्यर्थः ।

'ಅಂಗುಷ್ಠಮಾತ್ರಃ' ಎಂಬಲ್ಲಿ ಹೇಳಿರುವ ಅಂಗುಷ್ಠ ಪರಿಮಾಣವು ಬ್ರಹ್ಮನಲ್ಲಿ ಮಾತ್ರ ಇದೆಯೆಂದು, ಹೇಳಲು ಹೇಗೆ ಸಾಧ್ಯ ? ಎಂಬ ಪ್ರಶ್ನೆಗೆ ಉತ್ತರಿಸುವುದಕ್ಕಾಗಿ ಮುಂದಿನ ಸೂತ್ರವು ಹೊರಟಿದೆ.

'ಹೃದ್ಯಪೇಕ್ಷಯಾ ತು ಮನುಷ್ಯಾಧಿಕಾರತ್ವಾತ್' 'ಅಂಗುಷ್ಠಮಾತ್ರಃ' ಎಂಬುದು ಸೂತ್ರದಲ್ಲಿ ಯೋಗ್ಯತಾದಿಗಳಿರುವುದರಿಂದ ಅನ್ವಯವನ್ನು ಹೊಂದುತ್ತದೆ. 'ತತ್' ಎಂಬ ಪದಗಳು

ಅನುವೃತ್ತವಾಗುತ್ತದೆ. 'ತು' ಶಬ್ದಕ್ಕೆ 'ಏವ' ಎಂದರ್ಥ. 'ಅಪಿ' ಎಂಬರ್ಥವನ್ನು ವಿವಕ್ಷಿಸಬಹುದು. 'ಹೃದಿ' ಎಂಬುದು ಹೃದಯದಲ್ಲಿರುವ ಅವಕಾಶವನ್ನು ಹೇಳುತ್ತಿದೆ. ಹೃದಯದಲ್ಲಿರುವ ಅವಕಾಶದ ಅಪೇಕ್ಷೆಯಿಂದಲೇ ಬ್ರಹ್ಮನೆಂಬ ಪುರುಷನು ಅಂಗುಷ್ಠಪರಿಮಾಣವುಳ್ಳವನಾಗಿದ್ದಾನೆಂದು ಹೇಳಲಾಗಿದೆ ಹೊರತು, ಸರ್ವತ್ರವ್ಯಾಪ್ತನಾದ ಬ್ರಹ್ಮನಿಗೆ ಅಂಗುಷ್ಠಪರಿಮಾಣವನ್ನು ಸ್ವಾಭಾವಿಕವಾಗಿ ಹೇಳುವುದಕ್ಕಾಗಲ್ಲ ಎಂದು ಸೂತ್ರದ ಅಭಿಪ್ರಾಯ.

ಪರಮಾತ್ಮನಿಗೆ ಅಂಗುಷ್ಠಮಾತ್ರತ್ವವನ್ನು ಹೇಳಿದ್ದು ತಪ್ಪಲ್ಲ ?

हृदयाकाशरूपस्थानगतं तद्गते विष्णावुपचयर्त इति भावः । तन्मात्रपरिमाणतया व्यक्तहृत्स्थरूपापेक्षयेत्यपि मुख्योऽर्थः टीकातो भाति।

ಹೃದಯಾಕಾಶರೂಪವಾದ ಸ್ಥಾನದಲ್ಲಿರುವುದನ್ನು ಹೃದಯಾಕಾಶದಲ್ಲಿರುವ ವಿಷ್ಣುವಿನಲ್ಲಿ ಔಪಚಾರಿಕವಾಗಿ ಹೇಳಲಾಗಿದೆಯೆಂದು ಅಭಿಪ್ರಾಯ. ಅಭಿವ್ಯಕ್ತವಾಗುವ ಹೃದಯದಲ್ಲಿರುವ ಭಗವಂತನ ರೂಪವು ಅಂಗುಷ್ಠಪರಿಮಾಣದಷ್ಟು ವ್ಯಕ್ತವಾಗುತ್ತದೆ. ಈ ದೃಷ್ಟಿಯಿಂದ ಪರಮಾತ್ಮನಿಗೆ ಅಂಗುಷ್ಠಮಾತ್ರತ್ವವನ್ನು ಹೇಳಿದ್ದು ತಪ್ಪಾಗುವುದಿಲ್ಲವೆಂದು ಟೀಕೆಯಿಂದ ತಿಳಿಯುತ್ತದೆ.

'ಅಂಗುಷ್ಠಮಾತ್ರಃ ಪುರುಷಃ' ಎಂದು ಹೇಳಿದ್ದು ಮನುಷ್ಯರ ವಿವಕ್ಷೆಯಿಂದ

पश्वादीनामङ्गुष्ठाभावेऽप्यङ्गुष्ठमात्र इति विद्यया मनुष्याधिकारत्वात् ''अङ्गुष्ठमात्रः पुरुषः'' इति युक्तमित्यर्थः । पश्वादिगतस्याङ्गुष्ठमात्रत्वानुक्तेरिति भावः ।।७।।

'ಪಶು' ಮೊದಲಾದವುಗಳಿಗೆ ಅಂಗುಷ್ಠವಿಲ್ಲದಿದ್ದರೂ 'ಅಂಗುಷ್ಠಮಾತ್ರಃ' ಎಂದು ತಿಳಿಸುವ ವೇದವಿದ್ಯೆಗೆ ಮನುಷ್ಯರಷ್ಟೇ ಅಧಿಕಾರಿಗಳಾದ್ದರಿಂದ 'ಅಂಗುಷ್ಠಮಾತ್ರಃ ಪುರುಷಃ' ಎಂದು ಹೇಳಿದ್ದು ಯುಕ್ತವಾಗಿದೆ ಎಂದರ್ಥ. ಪಶ್ವಾದಿಗಳಲ್ಲಿರುವ ಭಗವದ್‌ರೂಪಕ್ಕೆ ಅಂಗುಷ್ಠಮಾತ್ರತ್ವವನ್ನು ಹೇಳಿಲ್ಲವೆಂದು ಅಭಿಪ್ರಾಯ.

॥ ಇಲ್ಲಿಗೆ ತಂತ್ರದೀಪಿಕಾ ಕನ್ನಡಾನುವಾದದಲ್ಲಿ ವಾಮನಾಧಿಕರಣವು ಮುಗಿಯಿತು ॥

ಮಹಾಯೋಗ ಹಾಗೂ ವಿದ್ವದ್ಬೂಢಿಗಳಿಂದ ಸಿದ್ಧನಾಗಿದ್ದಾನೆ. ಏಕೆಂದರೆ 'ಪ್ರಮಿತಃ' = 'ಈಶಾನ' ಶಬ್ದವು ಬ್ರಹ್ಮನನ್ನು ಮಾತ್ರ ಪ್ರತಿಪಾದನೆ ಮಾಡುತ್ತದೆ ಹೊರತು, ಮುಖ್ಯಪ್ರಾಣಾದಿಗಳನ್ನು ಪ್ರತಿಪಾದನೆ ಮಾಡುವುದಿಲ್ಲ ಎಂದು ಅರ್ಥ. 'ಮಧ್ಯೇ ವಾಮನಮಾಸೀನಂ' ವಾಮನಶಬ್ದ ಇರುವುದರಿಂದಲೇ ಎಂದು ಅರ್ಥ.

ಪ್ರಮುಖ ಪದದಿಂದ ತಿಳಿಯುವ ನಿರವಕಾಶತ್ವ

एवेति प्राणादिव्यवस्थापकत्वादिवायुलिङ्गाच्छ्रुतेः प्राबल्यमुच्यते । प्रमित इति निरवकाशत्वम् ।।

'ಏವ' ಶಬ್ದವು ಪ್ರಾಣಾದಿವ್ಯವಸ್ಥಾಪಕತ್ವವೇ ಮೊದಲಾದ ಮುಖ್ಯಪ್ರಾಣದೇವರ ಲಿಂಗಗಳಿಗಿಂತಲೂ ಶ್ರುತಿಯು ಪ್ರಬಲವಾಗಿದೆಯೆಂದು ಹೇಳುತ್ತಿದೆ. 'ಪ್ರಮಿತ' ಎಂಬ ಪದವು ಶ್ರುತಿಯ ನಿರವಕಾಶತ್ವವನ್ನು ಹೇಳುತ್ತಿದೆ.

ಹೃದ್ಯಪೇಕ್ಷಯಾ ಎಂಬುದರ ವ್ಯಾಖ್ಯಾನ

ननु कथमङ्गुष्ठमात्र इत्युक्तन्मात्रत्वं ब्रह्मण इत्यत आह -

।। हृद्यपेक्षया तु मनुष्याधिकारत्वात् ।। १-४-२५

''अङ्गुष्ठमात्रः'' इति योग्यतयाऽन्वेति । तत्त्वित्यस्ति । तुरेव । अप्यर्थे च । हृदीति तत्स्थावकाश उच्यते । हृत्स्थावकाशापेक्षयैव ब्रह्माख्यपुरुषोऽङ्गुष्ठमात्र उच्यते नतु स्वत इत्यर्थः ।

'ಅಂಗುಷ್ಠಮಾತ್ರಃ' ಎಂಬಲ್ಲಿ ಹೇಳಿರುವ ಅಂಗುಷ್ಠ ಪರಿಮಾಣವು ಬ್ರಹ್ಮನಲ್ಲಿ ಮಾತ್ರ ಇದೆಯೆಂದು, ಹೇಳಲು ಹೇಗೆ ಸಾಧ್ಯ ? ಎಂಬ ಪ್ರಶ್ನೆಗೆ ಉತ್ತರಿಸುವುದಕ್ಕಾಗಿ ಮುಂದಿನ ಸೂತ್ರವು ಹೊರಟಿದೆ.

'ಹೃದ್ಯಪೇಕ್ಷಯಾ ತು ಮನುಷ್ಯಾಧಿಕಾರತ್ವಾತ್' 'ಅಂಗುಷ್ಠಮಾತ್ರಃ' ಎಂಬುದು ಸೂತ್ರದಲ್ಲಿ ಯೋಗ್ಯತಾದಿಗಳಿರುವುದರಿಂದ ಅನ್ವಯವನ್ನು ಹೊಂದುತ್ತದೆ. 'ತತ್' ಎಂಬ ಪದಗಳು

ಅನುವೃತ್ತವಾಗುತ್ತದೆ. 'ತು' ಶಬ್ದಕ್ಕೆ 'ಏವ' ಎಂದರ್ಥ. 'ಅಪಿ' ಎಂಬರ್ಥವನ್ನು ವಿವಕ್ಷಿಸಬಹುದು. 'ಹೃದಿ' ಎಂಬುದು ಹೃದಯದಲ್ಲಿರುವ ಅವಕಾಶವನ್ನು ಹೇಳುತ್ತಿದೆ. ಹೃದಯದಲ್ಲಿರುವ ಅವಕಾಶದ ಅಪೇಕ್ಷೆಯಿಂದಲೇ ಬ್ರಹ್ಮನೆಂಬ ಪುರುಷನು ಅಂಗುಷ್ಠಪರಿಮಾಣವುಳ್ಳವನಾಗಿದ್ದಾನೆಂದು ಹೇಳಲಾಗಿದೆ ಹೊರತು, ಸರ್ವತ್ರವ್ಯಾಪ್ತನಾದ ಬ್ರಹ್ಮನಿಗೆ ಅಂಗುಷ್ಠಪರಿಮಾಣವನ್ನು ಸ್ವಾಭಾವಿಕವಾಗಿ ಹೇಳುವುದಕ್ಕಾಗಲ್ಲ ಎಂದು ಸೂತ್ರದ ಅಭಿಪ್ರಾಯ.

ಪರಮಾತ್ಮನಿಗೆ ಅಂಗುಷ್ಠಮಾತ್ರತ್ವವನ್ನು ಹೇಳಿದ್ದು ತಪ್ಪಲ್ಲ?

हृदयाकाशरूपस्थानगतं तद्गते विष्णावुपचयर्त इति भावः । तन्मात्रपरिमाणतया व्यक्तहृत्स्थरूपापेक्षयेत्यपि मुख्योऽर्थः टीकातो भाति।

ಹೃದಯಾಕಾಶರೂಪವಾದ ಸ್ಥಾನದಲ್ಲಿರುವುದನ್ನು ಹೃದಯಾಕಾಶದಲ್ಲಿರುವ ವಿಷ್ಣುವಿನಲ್ಲಿ ಔಪಚಾರಿಕವಾಗಿ ಹೇಳಲಾಗಿದೆಯೆಂದು ಅಭಿಪ್ರಾಯ. ಅಭಿವ್ಯಕ್ತವಾಗುವ ಹೃದಯದಲ್ಲಿರುವ ಭಗವಂತನ ರೂಪವು ಅಂಗುಷ್ಠಪರಿಮಾಣದಷ್ಟು ವ್ಯಕ್ತವಾಗುತ್ತದೆ. ಈ ದೃಷ್ಟಿಯಿಂದ ಪರಮಾತ್ಮನಿಗೆ ಅಂಗುಷ್ಠಮಾತ್ರತ್ವವನ್ನು ಹೇಳಿದ್ದು ತಪ್ಪಾಗುವುದಿಲ್ಲವೆಂದು ಟೀಕೆಯಿಂದ ತಿಳಿಯುತ್ತದೆ.

'ಅಂಗುಷ್ಠಮಾತ್ರಃ ಪುರುಷಃ' ಎಂದು ಹೇಳಿದ್ದು ಮನುಷ್ಯರ ವಿವಕ್ಷೆಯಿಂದ

पश्वादीनामङ्गुष्ठाभावेऽप्यङ्गुष्ठमात्र इति विद्याया मनुष्याधिकारत्वात् ''अङ्गुष्ठमात्रः पुरुषः'' इति युक्तमित्यर्थः । पश्वादिगतस्याङ्गुष्ठमात्रत्वानुक्तेरिति भावः ।।७।।

'ಪಶು' ಮೊದಲಾದವುಗಳಿಗೆ ಅಂಗುಷ್ಠವಿಲ್ಲದಿದ್ದರೂ 'ಅಂಗುಷ್ಠಮಾತ್ರಃ' ಎಂದು ತಿಳಿಸುವ ವೇದವಿದ್ಯೆಗೆ ಮನುಷ್ಯರಷ್ಟೇ ಅಧಿಕಾರಿಗಳಾದ್ದರಿಂದ 'ಅಂಗುಷ್ಠಮಾತ್ರಃ ಪುರುಷಃ' ಎಂದು ಹೇಳಿದ್ದು ಯುಕ್ತವಾಗಿದೆ ಎಂದರ್ಥ. ಪಶ್ವಾದಿಗಳಲ್ಲಿರುವ ಭಗವದ್‌ರೂಪಕ್ಕೆ ಅಂಗುಷ್ಠಮಾತ್ರತ್ವವನ್ನು ಹೇಳಿಲ್ಲವೆಂದು ಅಭಿಪ್ರಾಯ.

॥ ಇಲ್ಲಿಗೆ ತಂತ್ರದೀಪಿಕಾ ಕನ್ನಡಾನುವಾದದಲ್ಲಿ ವಾಮನಾಧಿಕರಣವು ಮುಗಿಯಿತು ॥

ಅದ್ವೈತ-ವಿಶಿಷ್ಟಾದ್ವೈತಮತದಲ್ಲಿ ವಾಮನಾಧಿಕರಣ ಮತ್ತು ವಿಮರ್ಶೆ

ಅದ್ವೈತಿಗಳ ಅಧಿಕರಣ ಶರೀರ ಹೀಗಿದೆ - 'ಅಂಗುಷ್ಠಮಾತ್ರಃ ಪುರುಷಃ' ಎಂಬ ಶ್ರುತಿಯಲ್ಲಿ ಕೇಳಿಸುತ್ತಿರುವ ಅಂಗುಷ್ಠಮಾತ್ರ ಸ್ವರೂಪನು ಜೀವನೇ ಆಗಿದ್ದಾನೆ. ಪರಿಚ್ಛಿನ್ನನಾದ ಜೀವನಲ್ಲಿ ಅಂಗುಷ್ಠಮಾತ್ರತ್ವವನ್ನು ಹೇಳುವುದು ತಪ್ಪಾಗುವುದಿಲ್ಲ.

ಹಾಗಾದರೆ 'ಈಶಾನೋ ಭೂತಭವ್ಯಸ್ಯ' ಎಂಬುದಾಗಿ ಕೊನೆಯಲ್ಲಿ ಈಶಾನತ್ವಧರ್ಮವು ಶ್ರುತವಾಗುತ್ತಿದೆ. ಇದನ್ನು ಜೀವನಲ್ಲಿ ಹೇಳಲು ಹೇಗೆ ಸಾಧ್ಯ ? ಎಂದು ಪ್ರಶ್ನಿಸಬಾರದು. ಪ್ರಥಮಶ್ರುತವಾದ ಅಂಗುಷ್ಠಮಾತ್ರತ್ವಕ್ಕೆ ಅನುಸಾರಿಯಾಗಿ ಕೊನೆಯಲ್ಲಿರುವ ಈಶಾನತ್ವವನ್ನು ಸಂಕೋಚ ಮಾಡಬೇಕು.

'ಅಲ್ಪಶ್ರುತೇSರಿತಿ ಚೇತ್ ತದುಕ್ತಮ್' ಎಂಬ ಸೂತ್ರದಲ್ಲಿ ಹೇಳಿದ ನ್ಯಾಯದಂತೆ ಈಶ್ವರನಲ್ಲಿಯೂ ಕೂಡ ಅಂಗುಷ್ಠಮಾತ್ರತ್ವವನ್ನು ಹೇಳಬಹುದಲ್ಲವೇ? ಎಂದು ಪ್ರಶ್ನಿಸಬಾರದು. 'ಅಲ್ಪಶ್ರುತೇಃ' ಎಂಬ ಸೂತ್ರದಲ್ಲಿ ಹೃತ್ಪುಂಡರೀಕವನ್ನು ಪರಮಾತ್ಮನ ವಾಸಸ್ಥಳವೆಂದು ನಿರ್ದೇಶಿಸಲಾಗಿತ್ತು. ಅದರಂತೆ ಇಲ್ಲಿ ಅಂತಹ ಸ್ಥಾನವಿಶೇಷವನ್ನೇನೂ ನಿರ್ದೇಶ ಮಾಡಿರುವುದಿಲ್ಲ. ಆದ್ದರಿಂದ ಜೀವನೇ ಅಂಗುಷ್ಠಮಾತ್ರ-ನಾಗಿದ್ದಾನೆಂದು ಪೂರ್ವಪಕ್ಷ.

ಬ್ರಹ್ಮನ ಬಗ್ಗೆ ಪ್ರಶ್ನಿಸಿದಾಗ 'ಈಶಾನೋ ಭೂತಭವ್ಯಸ್ಯ' ಇತ್ಯಾದಿಯಾಗಿ ಉತ್ತರಿಸಲಾಗಿದೆ. ಆದ್ದರಿಂದ ಈಶಾನತ್ವವನ್ನು ಸಂಕೋಚ ಮಾಡಲು ಸಾಧ್ಯವೇ ಇಲ್ಲ. ಆದ್ದರಿಂದ ಈಶಾನತ್ವವನ್ನೇ ಮುಖ್ಯವನ್ನಾಗಿ ಸ್ವೀಕರಿಸಿ ಅಂಗುಷ್ಠಮಾತ್ರತ್ವವನ್ನು ಗೌಣವನ್ನಾಗಿ ವ್ಯಾಖ್ಯಾನ ಮಾಡಬೇಕು. ಅಂದರೆ ಅಂಗುಷ್ಠಪರಿಮಾಣವು ಜೀವನಲ್ಲಿ ಮಾತ್ರವಿದ್ದರೂ ಅಂತಹ ಜೀವನಿಂದ ಬ್ರಹ್ಮನಿಗೆ ಐಕ್ಯವಿರುವುದರಿಂದ, ಬ್ರಹ್ಮನೂ ಕೂಡ ಅಂಗುಷ್ಠಮಾತ್ರನಾಗಿದ್ದಾನೆಂದು ವ್ಯಾಖ್ಯಾನಿಸಬಹುದು. ಆದ್ದರಿಂದ ಬ್ರಹ್ಮನೇ ಈ ಪ್ರಕರಣದಲ್ಲಿ ಪ್ರತಿಪಾದ್ಯನಾಗಿದ್ದಾನೆಂದು ಸಿದ್ಧಾಂತ. ಇಷ್ಟು ಅದ್ವೈತಿಗಳ ಅಧಿಕರಣ ಶರೀರ.

ಅದ್ವೈತಿಗಳ ಈ ಅಧಿಕರಣಶರೀರದಲ್ಲಿ ಪೂರ್ವಪಕ್ಷವೇ ಅಯುಕ್ತವಾಗಿವೆ. ಏಕೆಂದರೆ 'ಈಶಾನೋ ಭೂತಭವ್ಯಸ್ಯ' ಎಂಬ ವಾಕ್ಯವು 'ಅಂಗುಷ್ಠಮಾತ್ರಃ ಪುರುಷಃ' ಎಂಬ ವಾಕ್ಯಕ್ಕಿಂತ ಚರಮಶ್ರುತ ವಾಗಿರಬಹುದು. ಆದರೆ ಅಂಗುಷ್ಠವಾಕ್ಯಕ್ಕಿಂತಲೂ ಮೊದಲು 'ಈಶಾನಂ ಭೂತಭವ್ಯಸ್ಯ' ಎಂಬ ವಾಕ್ಯವು ಶ್ರುತವಾಗಿದೆ. ಆದ್ದರಿಂದ ಅಂಗುಷ್ಠವಾಕ್ಯಕ್ಕಿಂತ ಮೊದಲು ಮತ್ತು ಕೊನೆಯಲ್ಲಿ 'ಈಶಾನ' ಶಬ್ದವಿರುವ ಶ್ರುತಿಗಳು ಯುಕ್ತವಾಗಿರುವುದರಿಂದ ಸಂದಂಶ ನ್ಯಾಯದಿಂದ ಅಂಗುಷ್ಠವಾಕ್ಯವನ್ನೂ ಕೂಡ ಬ್ರಹ್ಮಪರವೆಂದೇ ಹೇಳಬೇಕಾಗುತ್ತದೆ.

ಮತ್ತು 'ಅಂಗುಷ್ಠಮಾತ್ರಃ ಪುರುಷಃ ಮಧ್ಯ ಆತ್ಮನಿ' ಹಾಗೂ 'ಅಂಗುಷ್ಠಮಾತ್ರಃ ಪುರುಷೋ ಜ್ಯೋತಿರಿವ' ಎಂಬೆರಡು ವಾಕ್ಯಗಳಲ್ಲಿ ಅಂಗುಷ್ಠಮಾತ್ರಪರಿಮಾಣವುಳ್ಳ ಪುರುಷನಿಗೆ ಸ್ಥಾನವನ್ನು ನಿರ್ದೇಶ ಮಾಡದಿರಬಹುದು. ಆದರೆ 'ಅಂಗುಷ್ಠಮಾತ್ರಃ ಪುರುಷೋऽಂತರಾತ್ಮಾ ಸದಾ ಜನಾನಾಂ ಹೃದಯೇ ಸನ್ನಿವಿಷ್ಟಃ' ಎಂಬ ಮೂರನೆಯ ವಾಕ್ಯದಲ್ಲಿ ಹೃದಯಸ್ಥಾನವನ್ನು ನಿರ್ದೇಶಿಸಲಾಗಿದೆ. ಹಾಗಾಗಿ 'ಅಲ್ಪಶ್ರುತೇಃ' ಎಂಬ ಸೂತ್ರನ್ಯಾಯದಂತೆ ಇಲ್ಲಿ ಸ್ಥಾನವಿಶೇಷವನ್ನೇ ನಿರ್ದೇಶ ಮಾಡಿರುವುದಿಲ್ಲವೆಂದು ಹೇಳಲಾಗದು. ಆದ್ದರಿಂದ ಅದ್ವೈತಿಗಳು ಮಾಡಿಕೊಂಡ ಪೂರ್ವಪಕ್ಷವು ಅಸಾಧುವಾಗಿದೆ.

ಅದ್ವೈತಿಗಳ ಸಿದ್ಧಾಂತವೂ ಕೂಡ ಅಯುಕ್ತವಾಗಿದೆ. ಏಕೆಂದರೆ ಅದ್ವೈತಸಿದ್ಧಾಂತದಲ್ಲಿ ಉಪನಿಷತ್ತನ್ನು ಹೀಗೆ ವ್ಯಾಖ್ಯಾನಿಸಲಾಗಿದೆ. 'ಅನ್ಯತ್ರ ಧರ್ಮಾದನ್ಯತ್ರಾಧರ್ಮಾತ್' ಎಂಬ ವಾಕ್ಯದಲ್ಲಿ ಬ್ರಹ್ಮನ ಬಗ್ಗೆ ಹೇಗೆ ಪ್ರಶ್ನಿಸಲಾಗಿದೆಯೋ, ಅದರಂತೆ 'ಯೇऽಯಂ ಪ್ರೇತೇ ವಿಚಿಕಿತ್ಸಾ ಮನುಷ್ಯೇ' ಎಂಬ ವಾಕ್ಯದಲ್ಲಿ ಜೀವನ ಬಗ್ಗೆಯೂ ಕೂಡ ಪ್ರಶ್ನಿಸಲಾಗಿದೆ. ಅದಕ್ಕನುಗುಣವಾಗಿ ಜೀವನ ಬಗ್ಗೆಯೇ 'ಅಂಗುಷ್ಠಮಾತ್ರಃ ಪುರುಷಃ' ಎಂಬ ವಾಕ್ಯದಿಂದ ಯಮದೇವರು ಉತ್ತರಿಸಿದ್ದಾರೆಂದು ಹೇಳಿದರೆ ಏನೂ ತಪ್ಪಾಗುವುದಿಲ್ಲ.

ಮತ್ತು ಅದ್ವೈತಿಗಳ ಪ್ರಕಾರ ಈ ಪಾದವು ನಿರ್ವಿಶೇಷಬ್ರಹ್ಮ ಪ್ರತಿಪಾದಕವಾಗಿದೆ. ಇಂತಹ ನಿರ್ವಿಶೇಷಬ್ರಹ್ಮನಲ್ಲಿ ಈಶಾನತ್ವಧರ್ಮವನ್ನು ಹೇಗೆ ಹೇಳುತ್ತಿದ್ದೀರಿ? ಸ್ವಲ್ಪ ಈಶಿತೃತ್ವವೂ ಸಹ ನಿರ್ವಿಶೇಷಬ್ರಹ್ಮನಲ್ಲಿ ಬರುವುದಿಲ್ಲ. ಜೀವನಿಗಾದರೂ ತನ್ನಿಂದ ನಿಯಮ್ಯವಾದ ದೇಹ, ಇಂದ್ರಿಯಾದಿಗಳನ್ನು ಕುರಿತಾದರೂ ಈಶಿತೃತ್ವವು ಬರಬಹುದು. ಬ್ರಹ್ಮನಿಗಂತೂ ಸುತರಾಂ ಬರುವುದಿಲ್ಲ.

ಆದ್ದರಿಂದ ಅದ್ವೈತಿಗಳ ಸಿದ್ಧಾಂತದ ಅಸ್ವಾರಸ್ಯದ ಸಾರ ಹೀಗಿದೆ -

ಈಶಾನೋ ಜೀವ ಏವ ಸ್ಯಾತ್ ಸ್ವದೇಹಾದೇರ್ನಿಯಾಮಕಃ।
ನಿರ್ವಿಶೇಷಂ ತು ನೇಶಾನಮೇಕಸ್ಯಾಪ್ಯನಿಯಾಮಕಮ್ ॥೧॥

ಜೀವನಿಗೆ ತನ್ನ ದೇಹಾದಿಗಳನ್ನು ಕುರಿತು ಸ್ವಲ್ಪವಾದರೂ ಸ್ವಾಮ್ಯವು ಬರಬಹುದು. ನಿರ್ವಿಶೇಷಬ್ರಹ್ಮನಿಗೆ ಒಂದೇ ಒಂದು ಪದಾರ್ಥದ ಸ್ವಾಮ್ಯತ್ವವೂ ಬರಲು ಸಾಧ್ಯವೇ ಇಲ್ಲ.

ಮತ್ತು ತಮ್ಮ ಸಿದ್ಧಾಂತದಲ್ಲಿ ಅದ್ವೈತಿಗಳು ಅಂಗುಷ್ಠಮಾತ್ರತ್ವವನ್ನು ಜೀವೈಕ್ಯದಿಂದ ಬ್ರಹ್ಮನಲ್ಲಿ ಉಪಪಾದನೆ ಮಾಡಿದರು. ಇದೂ ಸಹ ತಪ್ಪು. 'ಅಂಗುಷ್ಠಮಾತ್ರಃ ಪುರುಷಃ' ಎಂಬ ಶ್ರುತಿಗೆ ಮುಖ್ಯಾರ್ಥತ್ವವನ್ನು ಸ್ವೀಕರಿಸುವುದಕ್ಕಾಗಿ ಹೀಗೆ ಐಕ್ಯವನ್ನು ಕಲ್ಪಿಸುವುದು ಸರಿಯಾಗುವುದಿಲ್ಲ. ಏಕೆಂದರೆ ಎರಡೂ ಶಬ್ದಗಳ ವಾಚ್ಯಾರ್ಥಗಳಿಗೆ ಐಕ್ಯವನ್ನು ಅದ್ವೈತಿಗಳು ಒಪ್ಪುವುದಿಲ್ಲ.

ಶ್ರುತಿಯ ಪ್ರಾಮಾಣ್ಯಕ್ಕೋಸ್ಕರವೂ ಸಹ ಐಕ್ಯವನ್ನು ಕಲ್ಪಿಸಬಾರದು. ಏಕೆಂದರೆ ಜೀವಬ್ರಹ್ಮರಿಗೆ ಭೇದವಿದ್ದರೂ ಕೂಡ ಹೃದಯದಲ್ಲಿ ಅಂಗುಷ್ಠಮಾತ್ರ ಇರುವ ಕಾರಣ, ಬ್ರಹ್ಮನಿಗೆ ಗೌಣವಾದ ಅಂಗುಷ್ಠಪರಿಮಾಣವನ್ನು ಹೇಳುವುದು ಯುಕ್ತವಾಗುತ್ತದೆ.

ಮತ್ತು ಐಕ್ಯದ ರಕ್ಷಣೆಗೋಸ್ಕರ ಅಂಗುಷ್ಠಮಾತ್ರಾದಿ ಶ್ರುತಿಗಳಿಗೆ ಮತ್ತು ಈಶಾನಾದಿ ಶ್ರುತಿಗಳಿಗೆಲ್ಲಾ ಅಮುಖ್ಯಾರ್ಥತ್ವವನ್ನು ಒಪ್ಪುವುದಕ್ಕಿಂತ ಭೇದವನ್ನು ಒಪ್ಪಿ ಅಂಗುಷ್ಠಮಾತ್ರತ್ವ ಶ್ರುತಿಗಷ್ಟೇ ಗೌಣಾರ್ಥತ್ವವನ್ನು ಹೇಳುವುದು ಯುಕ್ತವಾಗುತ್ತದೆ.

ಮತ್ತು ಅದ್ವೈತಿಗಳ ಸಿದ್ಧಾಂತದಲ್ಲಿಯೂ ಜೀವನಿಗೆ ಸ್ವಾಭಾವಿಕವಾಗಿ ಅಂಗುಷ್ಠಮಾತ್ರಪರಿಮಾಣವು ಇರುವುದಿಲ್ಲ ಹೊರತು, ಔಪಾಧಿಕವಾಗಿ ಹೃತ್ಕಮಲಕೋಶವು ಅಂಗುಷ್ಠಪರಿಮಾಣದಷ್ಟು ಇದೆ. ಮನಸ್ಸೂ ಎಂದರೆ ಪ್ರಾಯಶಃ ಸಣ್ಣದಾಗಿರುವುದರಿಂದ ಹೃತ್ಕಮಲಕೋಶದಲ್ಲಿ ಇದೆ. ಜೀವನನ್ನು ಅಂಗುಷ್ಠಪರಿಮಾಣವೆಂದು ಹೇಳಲಾಗಿದೆ. ಅಂಗುಷ್ಠಪರಿಮಾಣವುಳ್ಳ ಮನಸ್ಸಿನಿಂದ ಜೀವನು ಅವಚ್ಛಿನ್ನನಾಗಿರುವುದರಿಂದ ಜೀವನು ಅಂಗುಷ್ಠಪರಿಮಾಣವುಳ್ಳವನಾಗಿದ್ದಾನೆ. ಹೀಗೆ ಔಪಾಧಿಕ-ವಾಗಿಯೇ ನೀವೂ ಸಹ ಅಂಗುಷ್ಠಪರಿಮಾಣವನ್ನು ಜೀವನಿಗೆ ಹೇಳಬೇಕು.

ಆದ್ದರಿಂದ ಈಶ್ವರನಿಗೆ ಜೀವಾಭೇದವನ್ನು ಒಪ್ಪದಿದ್ದರೂ ದಹರಾಧಿಕರಣದಲ್ಲಿ ಹೇಳಿದಂತೆ ಅಂಗುಷ್ಠಮಾತ್ರವಾದ ಹೃತ್ಕಮಲಕೋಶದಲ್ಲಿರುವುದರಿಂದ ಬ್ರಹ್ಮನೂ ಸಹ ಅಂಗುಷ್ಠಮಾತ್ರ-ಪರಿಮಾಣವುಳ್ಳವನಾಗಿದ್ದಾನೆಂದೇ ಒಪ್ಪಲು ಬರುವಾಗ ಬ್ರಹ್ಮನಿಗೆ ಜೀವಾಭೇದವನ್ನು ಏಕೆ ಕಲ್ಪನೆ ಮಾಡಬೇಕು?

ಮತ್ತು ಹಿಂದಿನ ಮುಂದಿನ ಶ್ರುತಿ ವಾಕ್ಯಗಳಲ್ಲೆಲ್ಲಾ ಜೀವಬ್ರಹ್ಮರ ಭೇದವೇ ಪ್ರತಿಪಾದಿತವಾಗಿದೆ. 'ಆತ್ಮಾನಂ ಜೀವಮಂತಿಕಾತ್' ಎಂಬ ಶ್ರುತಿಯಲ್ಲಿ ಜೀವನಿಗಿಂತಲೂ ಆತ್ಮಶಬ್ದವಾಚ್ಯನಾದ ಪರಮಾತ್ಮನಿಗೆ ಸಾಮೀಪ್ಯವನ್ನು ಹೇಳಿದ್ದರಿಂದ ಭೇದವು ನಿರ್ದಿಷ್ಟವಾಗಿದೆ. 'ತಂ ದೇವಾಃ ಸರ್ವೇSರ್ಪಿತಾಃ' ಎಂಬುದಾಗಿ ಹಿಂದಿನ ವಾಕ್ಯಗಳಲ್ಲಿ; ಮುಂದಿನ ವಾಕ್ಯದಲ್ಲಿಯೂ, 'ಅಂಗುಷ್ಠಮಾತ್ರಃ ಪುರುಷೋ ಮಧ್ಯ ಆತ್ಮನಿ ತಿಷ್ಠತಿ'ಎಂಬ ಶ್ರುತಿಯಲ್ಲಿ, ಮತ್ತು 'ತಾದೃಗೇವ ಭವತಿ' ಎಂಬ ಶ್ರುತಿಯಲ್ಲಿ, 'ಇತರೇಣ ತು ಜೀವಂತಿ' ಎಂಬಲ್ಲಿ, 'ಸುಪ್ತೇಷು ಜಾಗರ್ತಿ' ಎಂಬಲ್ಲಿ, 'ನಿತ್ಯೋ ನಿತ್ಯಾನಾಂ ಚೇತನಶ್ಚೇತನಾನಾಮ್ ಏಕೋ ಬಹೂನಾಂ ಯೋ ವಿದಧಾತಿ ಕಾಮಾನ್' ಎಂಬಲ್ಲಿ 'ತಮಾತ್ಮಸ್ಥಮ್' ಎಂಬಲ್ಲಿ, 'ಭಯಾದಸ್ಯಾಗ್ನಿಸ್ತಪತಿ' ಎಂಬಲ್ಲಿ ಹೀಗೆ ಪರಮಾತ್ಮನಿಗೆ ಜೀವನಿಂದ ಭೇದವೇ ಶ್ರುತವಾಗಿದೆ. ಹೀಗಿರುವಾಗ ಅಭೇದವನ್ನು ನೀವು ಹೇಳುವುದು ಹೇಗೆ ಯುಕ್ತವಾಗುತ್ತದೆ?

ಮತ್ತು ಅಂಗುಷ್ಠಮಾತ್ರದಲ್ಲಿ ಸರ್ವದೇವೋಪಾಸ್ಯತ್ವವು ಶ್ರುತಿಯಲ್ಲಿ ಹೇಳಲ್ಪಟ್ಟಿದೆ. ಅದ್ವೈತಿಗಳು ಮಾಡಿದ ಈ ಸರ್ವದೇವೋಪಾಸ್ಯತ್ವವು ಜೀವನಲ್ಲಿ ಕಥಂಚಿದಪಿ ಯುಕ್ತವಾಗುವುದೇ ಇಲ್ಲ.

ಸಿದ್ಧಾಂತಕ್ಕೂ ಸಹ ಈ ಸರ್ವದೇವೋಪಾಸ್ಯತ್ವವು ಯುಕ್ತವಾಗುವುದಿಲ್ಲ. ಏಕೆಂದರೆ ನಿರ್ವಿಶೇಷ-ಬ್ರಹ್ಮನನ್ನು ಅದ್ವೈತಿಗಳು ಜ್ಞೇಯನೆಂದು ಹೇಳುತ್ತಾರೆ ಹೊರತು, ಉಪಾಸ್ಯನೆಂದು ಹೇಳುವುದಿಲ್ಲ. ಆದ್ದರಿಂದ ಅಂಗುಷ್ಠಮಾತ್ರನಲ್ಲಿ ಶ್ರುತವಾದ ದೇವೋಪಾಸ್ಯತ್ವವು ಪೂರ್ವಪಕ್ಷಕ್ಕೂ ಅನುಕೂಲವಾಗಿಲ್ಲ, ಸಿದ್ಧಾಂತಕ್ಕೂ ಸಹ ಅನುಕೂಲವಾಗಿರುವುದಿಲ್ಲವೆಂದು ಭಾವಿಸಬೇಕು.

ರಾಮಾನುಜರ ಅಧಿಕರಣ ಶರೀರ ಹೀಗಿದೆ – 'ಪ್ರಾಣಾಧಿಪಃ ಸಂಚರತಿ ಸ್ವಕರ್ಮಭಿರಂಗುಷ್ಠಮಾತ್ರಃ' ಎಂಬ ಬೇರೊಂದು ಶ್ರುತಿಯಲ್ಲಿ ಜೀವನಿಗೆ ಅಂಗುಷ್ಠಪರಿಮಾಣವನ್ನು ಹೇಳಲಾಗಿದೆ. ಆದರೆ ಇಂತಹ ಪರಿಮಾಣವನ್ನು ಈಶ್ವರನಿಗೆ ಯಾವುದೇ ಶ್ರುತಿಯಲ್ಲಿಯೂ ಹೇಳಿರುವುದಿಲ್ಲ. ಆದ್ದರಿಂದ ಪ್ರಕೃತ ಕಾಠಕೋಪನಿಷತ್ತಿನಲ್ಲಿ 'ಅಂಗುಷ್ಠಮಾತ್ರಃ' ಇತ್ಯಾದಿ ವಾಕ್ಯದಿಂದ ಜೀವನೇ ಪ್ರತಿಪಾದ್ಯನಾಗಿದ್ದಾನೆಂದು ಪೂರ್ವಪಕ್ಷ.

ಬೇರೆ ಶ್ರುತಿಯಲ್ಲಿ ಅಂಗುಷ್ಠಪರಿಮಾಣವನ್ನು ಈಶ್ವರನಿಗೆ ಹೇಳದಿದ್ದರೂ 'ಅಂಗುಷ್ಠಮಾತ್ರಃ' ಇತ್ಯಾದಿ ವಾಕ್ಯವು ಅವನನ್ನೇ ಪ್ರತಿಪಾದಿಸುತ್ತದೆ. ಕಾರಣವೇನೆಂದರೆ 'ಭೂತಭವಸ್ಯ ಈಶಾನಃ' ಇತ್ಯಾದಿಯಾಗಿ

ಭೂತಭವಿಷ್ಯತ್ ಪದಾರ್ಥಗಳ ಒಡೆತನವನ್ನು ಶ್ರುತಿಯು ಹೇಳುತ್ತಿದೆ. ಇದು ಈಶ್ವರನ ಅಸಾಧಾರಣ ಧರ್ಮವಾದ್ದರಿಂದ ಈಶ್ವರನೇ ಈಶಾನ ಶಬ್ದಪ್ರತಿಪಾದ್ಯನಾಗಿದ್ದಾನೆಂದು ಸಿದ್ಧಾಂತ.

ರಾಮಾನುಜರ ಈ ಅಧಿಕರಣ ಶರೀರವು ತಪ್ಪು. ಏಕೆಂದರೆ - ಬೇರೆ ಶ್ರುತಿಗಳಲ್ಲಿ ಪರಮಾತ್ಮನಿಗೆ ಅಂಗುಷ್ಠಪರಿಮಾಣವನ್ನು ಹೇಳಿಯೇ ಇಲ್ಲವೆಂದು ಪೂರ್ವಪಕ್ಷ ಮಾಡಿದ್ದು ತಪ್ಪು. ಏಕೆಂದರೆ 'ಅಂಗುಷ್ಠಮಾತ್ರಃ ಪುರುಷೋऽಂತರಾತ್ಮಾ ಸದಾ ಜನಾನಾಂ ಹೃದಯೇ ಸನ್ನಿವಿಷ್ಟಃ । ಹೃದಾ ಮನೀಷಾ ಮನಸಾऽಭಿಕ್ಲೃಪ್ತೋ ಯ ಏನಂ ವಿದುರಮೃತಾಸ್ತೇ ಭವಂತಿ' ಎಂಬ ಶ್ವೇತಾಶ್ವತರೋಪನಿಷತ್ತಿನಲ್ಲಿ ಸಕಲ ಮನುಷ್ಯರ ಹೃದಯದಲ್ಲಿ ಅಂತರಾತ್ಮನಾಗಿರುವಂತಹ ಪುರುಷನಾದ ಪರಮಾತ್ಮನು ಅಂಗುಷ್ಠ ಪರಿಮಾಣವುಳ್ಳವನಾಗಿದ್ದಾನೆ. ಜ್ಞಾನಿಜನರು ಇವನನ್ನು ತಿಳಿದು ಮೋಕ್ಷವನ್ನು ಪಡೆಯುತ್ತಾರೆಂದು ಹೇಳಲಾಗಿದೆ. ಹೀಗೆ ಸ್ಪಷ್ಟವಾಗಿ ಅಂಗುಷ್ಠಪರಿಮಾಣವನ್ನು ಈಶ್ವರನಿಗೂ ಸಹ ಶ್ರುತಿಯು ಹೇಳುತ್ತಿದೆ.

ಮತ್ತು ತೈತ್ತಿರೀಯೋಪನಿಷತ್ತಿನಲ್ಲಿಯೂ ಸಹ

ಅಂಗುಷ್ಠಮಾತ್ರಃ ಪುರುಷೋऽಂಗುಷ್ಠಂ ಚ ಸಮಾಶ್ರಿತಃ ।
ಈಶಃ ಸರ್ವಸ್ಯ ಜಗತಃ ಪ್ರಭುಃ ಪ್ರೀಣಾತಿ ವಿಶ್ವಭುಕ್ ॥

ಪುರುಷನ ಅಂಗುಷ್ಠದಂತೆ ಪರಿಮಾಣವನ್ನು ಹೊಂದಿ, ಈಶ್ವರನು ಮನುಷ್ಯರ ಹೃದಯದಲ್ಲಿ ವಾಸಮಾಡುತ್ತಾನೆ. ಇವನೇ ಜಗದೊಡೆಯನಾಗಿದ್ದಾನೆ. ಸಮಸ್ತ ಜಗತ್ತನ್ನು ಸಂಹಾರ ಮಾಡುವ ಇವನು ಪ್ರೀತನಾಗುತ್ತಾನೆ.

ಹೀಗೆ ಬೇರೆ ಶ್ರುತಿಯಲ್ಲಿಯೂ ಈಶ್ವರನಿಗೆ ಅಂಗುಷ್ಠಪರಿಮಾಣವನ್ನು ಹೇಳಿದ್ದು ಕಾಣಿಸುತ್ತಿದೆ.

ಬೇರೆ ಶ್ರುತಿಗಳಲ್ಲಿ ಅಂಗುಷ್ಠಪರಿಮಾಣವನ್ನು ಈಶ್ವರನಿಗೆ ಹೇಳಿರಬಹುದು. ಆದರೆ ಈ ಅಧಿಕರಣದ ಪೂರ್ವಪಕ್ಷದ ಸಂದರ್ಭದಲ್ಲಿ ಬೇರೆ ಶ್ರುತಿಗಳಲ್ಲಿ ಈಶ್ವರನಿಗೆ ಅಂಗುಷ್ಠಪರಿಮಾಣವನ್ನು ಹೇಳಿಲ್ಲವೆಂದು ಅನುಸಂಧಾನ ಮಾಡಿಕೊಂಡು (ಕೃತ್ವಾಚಿಂತೆಯನ್ನು ಮಾಡಿಕೊಂಡು) ಆಕ್ಷೇಪಿಸಬೇಕು ಎಂದು ಹೇಳಬಾರದು. ಏಕೆಂದರೆ ಬೇರೆ ಗತಿಯಿಲ್ಲದಿದ್ದಾಗ ಮಾತ್ರ, ಕೃತ್ವಾಚಿಂತೆಯನ್ನು ಮಾಡುವುದು ಯುಕ್ತವಾಗುತ್ತದೆ. ಆದರೆ ನಾವು ಹೇಳುವಂತೆ ಪೂರ್ವಪಕ್ಷವನ್ನು ಮಾಡಲು ಬರುವಾಗ (ಬೇರೆಗತಿಯಿರುವಾಗ) ಹೀಗೆ ಕೃತ್ವಾಚಿಂತೆಯನ್ನು ಮಾಡುವುದು ತಪ್ಪಾಗುತ್ತದೆಂದು ಭಾವಿಸಬೇಕು.

ಒಂದು ವೇಳೆ, ಶ್ವೇತಾಶ್ವೇತಾಶ್ವತರೋಪನಿಷತ್ತು ಈಶ್ವರ ವಿಷಯಕವೇ ಅಲ್ಲವೆಂದು ಆಕ್ಷೇಪಿಸುವುದಾದರೆ, ಆವಾಗ 'ಪ್ರಾಣಾದಿಪಃ ಸಂಚರತಿ' ಇತ್ಯಾದಿ ವಾಕ್ಯವೂ ಸಹ ಜೀವವಿಷಯಕವೆಂದು ಸಿದ್ಧಾಂತಿಗಳಾದ ನಾವೂ ಒಪ್ಪುವುದಿಲ್ಲ. ಆದ್ದರಿಂದ ಶ್ವೇತಾಶ್ವೇತಾಶ್ವತರೋಪನಿಷತ್ತು ಈಶ್ವರ ವಿಷಯಕವೆಂದು ರಾಮಾನುಜರು ಒಪ್ಪಲೇಬೇಕು.

ಈ ರಾಮಾನುಜರ ಈ ನಿರಾಕರಣೆಯು ಕೇವಲ ದಿಕ್‌ಪ್ರದರ್ಶನವಾಗಿದೆ. ಇನ್ನೂ ಹೆಚ್ಚಿನ ದೋಷಗಳನ್ನು ಸ್ವತಃ ಊಹಿಸಿಕೊಳ್ಳಬೇಕು.

ಇಲ್ಲಿಗೆ ವಾಮನಾಧಿಕರಣದಲ್ಲಿ ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ವಪ್ರದೀಪ, ತತ್ವಪ್ರಕಾಶಿಕಾ, ಭಾವದೀಪ ಇವುಗಳ ಅನುವಾದವು ಹಾಗೂ ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆಯು ಸಮಾಪ್ತವಾಯಿತು

ವಿವರವಾದ ವಿಷಯಾನುಕ್ರಮಣಿಕೆ

ಭೂಮಾಧಿಕರಣ

ಬ್ರಹ್ಮಸೂತ್ರ

'ಭೂಮಾ ಸಂಪ್ರಸಾದಾದಧ್ಯುಪದೇಶಾತ್' ಎಂಬ ಸೂತ್ರವ್ಯಾಖ್ಯಾನ ೨

'ಭೂಮಾ' ಎಂದರೆ ವಾಯು ಎಂದು ಪೂರ್ವಪಕ್ಷ ೩

ವಾಯುದೇವನೇ ಪ್ರತಿಪಾದ್ಯನೆನ್ನಲು ಕಾರಣ ೪

ಪೂಣಸುಖಸ್ವರೂಪನಾದ ವಿಷ್ಣುವೇ 'ಭೂಮಾ' ೪

ಪೂರ್ಣಸುಖತ್ವಾದಿಗಳು ವಿಷ್ಣುವಿನದ್ದೇ ಧರ್ಮ ೫

ಸತ್ತರ್ಕದೀಪಾವಳಿ

'ಯೋ ವೈ ಭೂಮಾ ತತ್ಸುಖಮ್' ಎಂಬ ವಿಷಯವಾಕ್ಯದಿಂದ ಯಾರು ಪ್ರತಿಪಾದ್ಯರು? ೭

ಮುಖ್ಯಪ್ರಾಣಪ್ರತಿಪಾದಕವಾದ ಯಾವುದೇ ನಿಂದೆಗಳು ಕೇಳಿಸುತ್ತಿಲ್ಲ ೭

ಮಹಾವಿಷ್ಣುವೇ ಭೂಮಾ ೮

ಪೂರ್ಣಸುಖಾಶ್ರಯತ್ವ ಸರ್ವೋತ್ತಮತ್ವಗಳು ವಿಷ್ಣುವಿನ ಧರ್ಮ ೯

ಇಯದಾಮನನಾತ್ ಎಂಬಲ್ಲಿ ಪ್ರಾಣಶಬ್ದವಾಚ್ಯತ್ವದ ವಿಚಾರವಿದೆ ೯

ತತ್ತ್ವಪ್ರದೀಪ

ಛಾಂದೋಗ್ಯೋಪನಿಷತ್ತಿನಲ್ಲಿರುವ 'ಭೂಮಾ' ಎಂದರೆ ಯಾರು ? ೧೦

ಉತ್ತಮಣಲಿಂಗದಿಂದ ಮುಖ್ಯಪ್ರಾಣನೇ ಭೂಮಾ ೧೦

ವಿಷ್ಣುವೇ ಭೂಮಾ ಎನ್ನಲು ಅಸಾಧಾರಣವಾದ ಎರಡು ಹೇತುಗಳು ೪೦

ಮಹಾವಿಷ್ಣುವೇ ಪೂರ್ಣಸುಖಸ್ವರೂಪನು, ಪೂರ್ಣಗುಣಗಳುಳ್ಳ ಭೂಮನೂ ಅವನೇ ೪೦

ನಾರಾಯಣ ಶ್ರುತ್ಯರ್ಥ ೪೦

ತತ್ತ್ವಪ್ರಕಾಶಿಕಾ

ಛಾಂದೋಗ್ಯೋಪನಿಷತ್ತಿನ 'ಪ್ರಾಣೋ ವಾ' ಎಂಬುದು ವಿಷಯವಾಕ್ಯ ೪೨

ಯುಕ್ತಿಬದ್ಧವಾದ ಪೂರ್ವಪಕ್ಷ ೪೨

ಆನಂದಮಯಾಧಿಕರಣದ ಪೂರ್ಣಾನಂದತ್ವವು ಭೂಮನಲ್ಲಿದೆ ೪೩

ಭೂಮಾ ಎಂದರೆ ವಿಷ್ಣುವೋ, ವಾಯುವೋ ? ೪೩

ಸಂದೇಹ ಹಾಗೂ ಸಂದೇಹಬೀಜ ೪೩

ಆಶಾಗಿಂತ ಶ್ರೇಷ್ಠನಾದವನು ಮುಖ್ಯಪ್ರಾಣ ೪೪

ವಿಷ್ಣುವಿಷಯಕಸಮಾಖ್ಯಪ್ರಮಾಣವು ದುರ್ಬಲ ೪೪

ಪೂರ್ಣಪ್ರಾಣನೇ ಭೂಮಾ ಹಾಗೂ ಆನಂದಮಯ ೪೪

ವಿಷ್ಣುವು ಭೂಮಾ ಎನಿಸಲಾರ ೪೫

ಮುಖ್ಯಪ್ರಾಣನಲ್ಲಿ ಅಸಾಧಾರಣಲಿಂಗ ೪೫

ವಿಷ್ಣುವೇ 'ಭೂಮಾ' ಎಂದು ಸಿದ್ಧಾಂತ ೪೬

'ಭೂಮಾ' ಎಂದರೆ ಸುಖಸ್ವರೂಪ; ಪೂರ್ಣಸುಖವುಳ್ಳವನಲ್ಲ ೪೬

'ವಿಶ್ವತಃ ಪರಮಾಂ ವಿಷ್ಣುಂ' ಎಂಬುದರ ಅರ್ಥ ೪೬

ಇಬ್ಬರೂ ಸರ್ವೋತ್ತಮರಾಗಲು ಸಾಧ್ಯವಿಲ್ಲ ೪೭

ಉತ್ತಮಣ ಎಂಬ ಮುಖ್ಯಪ್ರಾಣನ ಲಿಂಗ ವಿರೋಧವಿಲ್ಲ ೪೭
ದೇವರಲ್ಲಿಯೇ ಉತ್ತಮಣಲಿಂಗ ಅಸಾಧಾರಣವಾಗಿದೆ ೪೮
ಮುಖ್ಯಪ್ರಾಣನು ಪ್ರಾಣನೆನಿಸಿದರೂ ಭೂಮಾ ಎನಿಸಲಾರ ೪೮
ಭಾವದೀಪ
ಉಭಯತ್ರಪ್ರಸಿದ್ಧವಾದ 'ಭೂಮಾ' ಎಂಬ ನಾಮಾತ್ಮಕಶಬ್ದ ಸಮನ್ವಯ ೪೯
ಭೂಮಾ ಶಬ್ದಕ್ಕೆ ಉಭಯತ್ರಪ್ರಸಿದ್ಧತ್ವ ಸಮರ್ಥನೆ ೪೯
ಅಜ್ಞಾನಿಗಳಿಗೆ ಉಭಯಸಾಧಾರಣ ಎಂದರೇನು ? ೫೦
'ಯೋ ವೈ ಭೂಮಾ ತತ್ ಸುಖಮ್' ೫೧
ಛಾಂದೋಗ್ಯದ ಏಳನೇ ಅಧ್ಯಾಯದ ವಿಷಯವಾಕ್ಯ ೫೫
ಪ್ರಾಣಶಬ್ದವಾಚ್ಯರು ಯಾರು ? ೫೬
ಪ್ರತಿಜ್ಞಾಭಾಗದ ವ್ಯಾಖ್ಯಾನ ೫೬
'ಅಧ್ಯುಪದೇಶಾತ್' ಎಂಬುದರಿಂದ ವ್ಯಾವರ್ತ್ಯ ಪೂರ್ವಪಕ್ಷ ೫೭
ಸನತ್ಕುಮಾರರು ಉಪದೇಶಿಸಿದ ದೇವತಾ ತಾರತಮ್ಯ ೫೭
ಮುಖ್ಯಪ್ರಾಣನಿಗಿಂತ ಶ್ರೇಷ್ಠನಾದವನು ಯಾರು ? ೫೮
ಅನುಕ್ತಿಯು ಪೂರ್ವಪಕ್ಷಲಿಂಗ ೫೮
ಭೂಮನೇ ಸರ್ವೋತ್ತಮ ೫೯
ಪ್ರಾಣನನ್ನು ಭೂಮನೆನ್ನಬೇಕೆಂದು ಪೂರ್ವಪಕ್ಷ ೫೯
ಭೂಮಾ ಹಾಗೂ ಪ್ರಾಣರ ನಡುವೆ ಯಾರಿದ್ದಾರೆ ? ೬೦
ಅನುಕ್ತಿಸಹಿತ ಉಪಕ್ರಮವೇ ಬಲಿಷ್ಠ ೬೦
ಪ್ರಾಣನಿಗಿಂತ ಭೂಮನು ಭಿನ್ನ ೬೧
ಪ್ರಾಣಪದವೂ ಕೂಡ ವಿಷ್ಣುಪರ ೬೧
ತಂದೆ-ತಾಯಿಯೆಂದರೆ ಪ್ರಾಣನೇ ೬೨
ತತ್ತು ಎಂಬುದು ಬೇಕು ೬೨
ಪುರುಷಶಬ್ದಕ್ಕೆ ತತ್ತ್ವಪ್ರದೀಪದಲ್ಲಿ ಮಾಡಿದ ನಿಷ್ಪತ್ತಿ ೬೩
ಯೋ ವೈ ಭೂಮಾ ಎಂಬುದರ ಭಾವ ೬೩
ಎಲ್ಲಾ ದೇವತೆಗಳಿಗಿಂತ ವಿಷ್ಣುವೇ ಸರ್ವೋತ್ತಮ ೬೩
'ಅಧ್ಯುಪದೇಶಾತ್' ಎಂಬ ಹೇತುವು ಅಸಿದ್ಧವಲ್ಲ ೬೪
ಮುಂದಿನ ಸೂತ್ರದ ಚಕಾರವು ಇಲ್ಲಿ ಆಕರ್ಷಣೀಯ ೬೪
'ಮುಖ್ಯಾಮುಖ್ಯಯೋರ್ಮುಖ್ಯೇ ಸಂಪ್ರತ್ಯಯಃ' ೬೫
'ಸಂಪ್ರಸಾದಾತ್' ಎಂಬುದರ ವ್ಯಾಖ್ಯಾನ ೬೫
ಆಂಧ್ರಪಾಠವೇ ಸರಿ ೬೬
'ವಿಶಾಕ್ಷಮ್' ಇತ್ಯಾದಿ ಶ್ರುತಿಯ ಅರ್ಥ ೬೬
ಮುಖ್ಯಪ್ರಾಣದೇವರು ಸರ್ವೋತ್ತಮರಲ್ಲ ೬೭
ಇಬ್ಬರು ಸರ್ವೋತ್ತಮರಲ್ಲ ೬೭
ಭಗವಂತನಲ್ಲಿ ಅಣುತ್ವ ಮಹತ್ವಗಳೆರಡೂ ಇವೆ ೬೮
ಪರಮಾತ್ಮಾದಿಗಳಿಗಿಂತ ಉತ್ತಮತ್ವವನ್ನು ಮುಖ್ಯಪ್ರಾಣದೇವರಿಗೆ ಹೇಳಿಯೇ ಇಲ್ಲವಲ್ಲ ? ೬೯
ನೇರವಾಗಿ ವಿಷ್ಣುವಿನ ಉತ್ತಮತ್ವ ಹೇಳಿದ್ದಕ್ಕೆ ವಿರೋಧವಿಲ್ಲ ೭೦

ಭೂಯಸ್ತ್ವದ ಅನುಕ್ತಿಯು ಪೂರ್ವಪಕ್ಷಕಾರರಿಗೆ ಬಾಧಕ ೭೨
'ಏಷ ತು ವಾ ಅತಿವದತಿ' ಎಂಬುದರ ವ್ಯಾಖ್ಯಾನ ೭೨
ಈ ಅಧಿಕರಣವು ಪುನರುಕ್ತವಲ್ಲ ೭೩
ಅಂತರ್ಯಾಮಿಯಾದ ವಿಷ್ಣುವೇ ಪ್ರಾಣಶಬ್ದ ಪ್ರತಿಪಾದ್ಯ ೭೩
ಬ್ರಹ್ಮಸೂತ್ರ
'ಧರ್ಮೋಪಪತ್ತೇಶ್ಚ' ಎಂಬ ಸೂತ್ರ ವ್ಯಾಖ್ಯಾನ ೭೪
ಬ್ರಹ್ಮಸೂತ್ರಭಾಷ್ಯ
ಸರ್ವಗತತ್ವ - ಸ್ವಾತಂತ್ರ್ಯ ಮೊದಲಾದ ಲಿಂಗಗಳ ಆಧಾರ ೭೪
ತತ್ವಪ್ರದೀಪ
ಸರ್ವಗತತ್ವ ಸ್ವಾತಂತ್ರ್ಯಗಳುಳ್ಳವನೇ ಭೂಮಾ ೭೫
ಛಾಂದೋಗ್ಯದ ಏಳನೆಯ ಅಧ್ಯಾಯ ಸಂಪೂರ್ಣ ವಿಷ್ಣುವನ್ನೇ ಹೇಳುತ್ತಿದೆಯೇ? ೭೬
ಪಾಠಾಂತರದ ಬಗ್ಗೆ ೭೭
ತತ್ವಪ್ರಕಾಶಿಕಾ
ವಿಷ್ಣುವೇ ಭೂಮನೆನ್ನಲು ಮತ್ತೊಂದು ಯುಕ್ತಿ ೭೮
ವಿಷಯವಾಕ್ಯದಲ್ಲಿರುವ ವಿಷ್ಣುವಿನ ಅಸಾಧಾರಣ ಧರ್ಮಗಳು ೭೮
ಭಾವದೀಪ
ಸರ್ವಗಗತ್ವಾದಿ ಎಂಬಲ್ಲಿರುವ ಆದಿಪದ ವ್ಯಾಖ್ಯಾನ ೭೯
ಸೂತ್ರದಲ್ಲಿರುವ ಉಪಪತ್ತಿ ಪದದ ವ್ಯಾಖ್ಯಾನ ೮೦
ಸಕಲ ಸೂತ್ರಗಳ ಸಾರವೇನು ? ೮೦
ಭೂಮನಾದ ಮಹಾವಿಷ್ಣುವೇ ಆನದಂದಮಯ ೮೦
ತಂತ್ರದೀಪಿಕಾ
ಛಾಂದ್ಯೋಗ್ಯದಲ್ಲಿ ಭೂಮಾ ಎಂದರೆ ಮಹಾವಿಷ್ಣು ೮೨
ಭೂಮಾ ಸಂಪ್ರಸಾದಾತ್ ಎಂಬ ಸೂತ್ರದ ಪ್ರತಿಪದಾರ್ಥ ೮೨
ಭೂಮಾ ಎಂಬುದು ಪುಲ್ಲಿಂಗ ಶಬ್ದ ೮೩
ಪೂರ್ಣಸುಖತ್ವಾತ್ ಎಂದೇಕೆ ಸೂತ್ರದಲ್ಲಿ ಹೇಳಲಿಲ್ಲ? ೮೩
ಭೂಮಾಧಿಕರಣದ ಎರಡನೆಯ ಸೂತ್ರ ೮೪
'ಧರ್ಮೋಪಪತ್ತೇಶ್ಚ' ಎಂಬ ಸೂತ್ರದ ಪ್ರತಿಪದಾರ್ಥ ೮೪
ಸೂತ್ರದಲ್ಲೇಕೆ ಭೂಮಾ ಶಬ್ದವನ್ನು ಪ್ರಯೋಗಿಸಿದ್ದಾರೆ ? ೮೪
ಅದ್ವೈತಮತ ಹಾಗೂ ರಾಮಾನುಜಮತದಲ್ಲಿ ಭೂಮಾಧಿಕರಣ ೮೫

ಅಕ್ಷರಾಧಿಕರಣ

ಬ್ರಹ್ಮಸೂತ್ರ
'ಅಕ್ಷರಮಂಬರಾಂತಧೃತೇಃ' ಎಂಬ ಸೂತ್ರವ್ಯಾಖ್ಯಾನ ೯೨
ಬ್ರಹ್ಮಸೂತ್ರಭಾಷ್ಯ
ಮಹಾಲಕ್ಷ್ಮೀ ಅಕ್ಷರಳೆಂದು ಪೂವಪಕ್ಷ ೯೩
ಅಕ್ಷರ ಎಂದರೆ ಮಹಾವಿಷ್ಣುವೇ ? ೯೪
ಸರ್ವಾಧಾರನೇ ಅಕ್ಷರ ೯೫

ಸರ್ವಾಧಾರನಾದವನು ಮಹಾವಿಷ್ಣು ೯೬
ಮಹಾವಿಷ್ಣುವೇ ಅಕ್ಷರನೆನ್ನಲು ಅನೇಕ ಶ್ರುತಿಗಳು ೯೬
ಸರ್ವಾಧಾರತ್ವ ಇತರರಲ್ಲಿ ಸರ್ವಥಾ ಇರುವುದಿಲ್ಲ ೯೭
ಸತ್ತರ್ಕದೀಪಾವಳಿ
ಲಕ್ಷ್ಮೀ ಅಕ್ಷರಳೆನ್ನಲು ಆಧಾರ ೯೮
ಅಂಭ್ರಣೀಸೂಕ್ತದಲ್ಲಿ ರುದ್ರಾದ್ಯಾಧಾರತ್ವ ೯೮
ಸಿದ್ಧಾಂತ ಮಂಡನೆ ೯೯
'ಸಪ್ತಾರ್ಧಗರ್ಭಾ' ಎಂಬ ಶ್ರುತಿಯಲ್ಲಿರುವ ಕಠಿಣಪದಾರ್ಥ ೧೦೦
ತತ್ವಪ್ರದೀಪ
ಮಹಾಲಕ್ಷ್ಮ್ಯಯು ಅಕ್ಷರಳೆಂದು ಪೂರ್ವಪಕ್ಷ ೧೦೦
ಬೃಹದಾರಣ್ಯಕೋಪನಿಷತ್ತಿನ ಅಕ್ಷರಬ್ರಾಹ್ಮಣದಲ್ಲಿ ಯಾರು ಪ್ರತಿಪಾದ್ಯರು ? ೧೦೨
ಎಲ್ಲವನ್ನೂ ಧರಿಸಿದ ಮಹಾವಿಷ್ಣುವೇ ಅಕ್ಷರನಾಗುತ್ತಾನೆ ೧೦೭
ಸಕಲಧಾರಕತ್ವ ಇತರರಲ್ಲಿ ಇಲ್ಲ ೧೦೮
'ಏತಸ್ಮಿನ್ನು' ಎನ್ನಲು ಕಾರಣವೇನು ? ೧೦೮
ನಿಜವಾದ ಆಧಾರ ಮಹಾವಿಷ್ಣುವೇ ೧೦೮
ಪಾಠಾಂತರದ ಬಗ್ಗೆ ೧೦೯
ತತ್ವಪ್ರಕಾಶಿಕಾ
ಉಭಯತ್ರಪ್ರಸಿದ್ಧವಾದ ಅಕ್ಷರ ಎಂಬ ನಾಮಸಮನ್ವಯ ೧೧೦
ಶ್ರುತ್ಯಾದಿಸಂಗತಿಗಳು ೧೧೦
ಅದೃಶ್ಯತ್ವಾದಿಗುಣಗಳುಳ್ಳವನು ಅಕ್ಷರ ೧೧೦
ಬೃಹದಾರಣ್ಯಕದಲ್ಲಿ ಏನು ಹೇಳಿದೆ ? ೧೧೧
ಅಕ್ಷರ ಯಾರು ? ೧೧೧
ಸಂಶಯ ಹಾಗೂ ಸಂಶಯಬೀಜ ೧೧೨
ಮಧ್ಯಮಾಕ್ಷರಳೆಂದು ಪೂರ್ವಪಕ್ಷ ೧೧೨
'ಅಹಂ ಸೋಮಮಾಹನಸಂ ಬಿಭರ್ಮಿ' ೧೧೨
ಅದೃಶ್ಯತ್ವಾದಿ ಧರ್ಮಗಳೂ ಸಹ ಮಧ್ಯಮಾಕ್ಷರದಲ್ಲಿಯೇ ೧೧೩
ಲಕ್ಷ್ಮ್ಯಯೇ ಅದೃಶ್ಯಳೆನ್ನಲು ಶ್ರುತಿಪ್ರಮಾಣ ೧೧೩
ಅದೃಶ್ಯತ್ವವು ಉಭಯತ್ರ ಸಮಾನವಲ್ಲವೇ ? ೧೧೪
ಲಕ್ಷ್ಮೀಯಲ್ಲಿ ಮಾತ್ರ ಅದೃಶ್ಯತ್ವ ೧೧೫
'ಸೋಮ ಮಾಹನಸಂ' ಎಂಬುದರ ವ್ಯಾಖ್ಯಾನ ೧೧೫
ಲಕ್ಷ್ಮೀಗೂ ಆಧಾರನಾದವನೇ ಅಕ್ಷರ ೧೧೬
ಸರ್ವಾಧಾರತ್ವ ವಿಷ್ಣುವಿನದ್ದೇ ಧರ್ಮ ೧೧೬
ಇತರರದ್ದಲ್ಲ ೧೧೭
ಭಾವದೀಪ
ಅವಿನಾಶಿತ್ವವು ಅಕ್ಷರಶಬ್ದದ ಪ್ರವೃತ್ತಿನಿಮಿತ್ತ ೧೧೭
ಲಕ್ಷ್ಮೀಯಲ್ಲಿ ಅಕ್ಷರಶಬ್ದದ ರೂಢಿಯೂ ಸಹ ಇದೆ ೧೧೮

ಬೃಹದಾರಣ್ಯಕದ ಐದನೆಯ ಅಧ್ಯಾಯದ ವಿಷಯ ೧೨೦
ಟೀಕೆಯಲ್ಲಿ ಉಲ್ಲೇಖಿಸಿದ ವಿಷಯವಾಕ್ಯದ ಬಗ್ಗೆ ೧೨೦
ನಿರ್ಧರಿಸಲೇ ಬೇಕಾದ ವಿಷಯ ೧೨೧
ಜಡಪ್ರಕೃತಿ ಹಾಗೂ ಓಂಕಾರಗಳನ್ನೇಕೆ ಪರಿಗಣಿಸಿಲ್ಲ ೧೨೧
ಅದ್ವೈತಿಗಳು ಓಂಕಾರವನ್ನು ವಿವಕ್ಷಿಸಿದ್ದಾರೆ ೧೨೩
'ಜಡಪ್ರಕೃತೇಃ ಆಕಾಶಸ್ಯ ಚ' ಎಂಬ ಪಾಠ ಅಸಾಧು ೧೨೩
ಮುಂದಿನ ಅಧಿಕರಣದಲ್ಲಿ ಜಡಪ್ರಕೃತಿಯು ಸೇರಿದೆ ೧೨೪
ಅಂತರ್ಯಾಮ್ಯಧಿಕರಣದಲ್ಲಿಯೂ ಜಡಪ್ರಕೃತಿಯು ಸೇರಿದೆ ೧೨೪
ಸಂಗತಿಪರಭಾಷ್ಯವೇ ಪೂರ್ವಪಕ್ಷ ಪರ ೧೨೪
ಅಕ್ಷರಶಬ್ದವು ಶ್ರೀತತ್ವದಲ್ಲಿಯೇ ಪ್ರಸಿದ್ಧ ೧೨೫
ಭಾಷ್ಯದಲ್ಲೇಕೆ ಮಧ್ಯಮಾಕ್ಷರ ಎಂದರು ? ೧೨೫
ಚಂದ್ರಾದ್ಯಾಧಾರತ್ವವೆಂಬ ಗುಣವೂ ವಿವಕ್ಷಿತ ೧೨೬
'ಅಂಭ್ರಣೀ' ಸೂಕ್ತದ ಬಗ್ಗೆ ೧೨೬
ವಾಕ್ಯಶೇಷದಂತೆ ಸ್ಮೃತಿಯೂ ಗ್ರಾಹ್ಯ ೧೨೬
ಅದೃಶ್ಯತ್ವಾಧಿಕರಣದ ನ್ಯಾಯವಷ್ಟೇ ವಿವಕ್ಷಿತವಲ್ಲ ೧೨೭
'ಯೇತತ್ಸ್ವರಮನಿರ್ದೇಶ್ಯಮ್' ಎಂಬುದರ ವ್ಯಾಖ್ಯಾನ ೧೨೭
'ಇದಂ ತಮಃ' ಎಂಬುದರ ವ್ಯಾಖ್ಯಾನ ೧೨೭
'ನ ತದಶ್ನಾತಿ' ಎಂಬುದರ ವ್ಯಾಖ್ಯಾನ ೧೨೮
ಲಕ್ಷ್ಮೀದೇವಿಯಲ್ಲಿ ಸರ್ವಾತ್ಮತ್ವವು ಇರುವುದಿಲ್ಲ ೧೨೯
ವಿಷ್ಣುವಿನಲ್ಲಿ ವಿರೋಧವಿಲ್ಲ ೧೨೯
'ಅಭಿಷೂಯಮಾಣಮ್' ಎಂಬುದರ ನಿಷ್ಪತ್ತಿ ೧೨೯
'ಸೋಮಂ ರಾಜಾನಮ್' ಎಂದರೇನು ? ೧೩೦
ನ್ಯಾಯವಿವರಣದ ಆಧಾರದಲ್ಲಿ ಅನುಷಂಗ ೧೩೦
ಆಕಾಶವು ಅಕ್ಷರತತ್ವದಲ್ಲಿ ಆಶ್ರಿತ ೧೩೧
'ಆಕಾಶ' ಎಂದರೆ ಲಕ್ಷ್ಮೀದೇವಿ ೧೩೧
ಜನ್ಮಾಧಿಕರಣದಲ್ಲಿ 'ಯ ಏವ' ಎಂಬ ಶ್ರುತ್ಯರ್ಥ ೧೩೫
'ಭರ್ತಾ ಸನ್' ಎಂಬುದರ ವ್ಯಾಖ್ಯಾನ ೧೩೫
'ತತ್'ಶಬ್ದದಿಂದ ವಿಷ್ಣುವೇ ವಿವಕ್ಷಿತ ೧೩೫
ಲಕ್ಷ್ಮೀಪತಿತ್ವಲಿಂಗವು ನಿರ್ಣಾಯಕ ೧೩೬
'ವಿಧಿ' ಎಂಬ ಪ್ರಯೋಗದ ಬಗ್ಗೆ ೧೩೬
'ಯಸ್ಮಿನ್' ಇತ್ಯಾದಿ ಶ್ರುತಿಯೂ ವಿಷ್ಣುಪರ ೧೩೬
'ಯ ಉ ತ್ರಿಧಾತು' ಎಂಬ ಶ್ರುತಿಯಂತೆ 'ಭರ್ತಾ' ಇತ್ಯಾದಿ ಶ್ರುತಿಯನ್ನು ವ್ಯಾಖ್ಯಾನಿಸಬೇಕು ೧೩೭

ಬ್ರಹ್ಮಸೂತ್ರ

'ಸಾ ಚ ಪ್ರಶಾಸನಾತ್' ಎಂಬ ಸೂತ್ರವ್ಯಾಖ್ಯಾನ ೧೪೦

ಬ್ರಹ್ಮಸೂತ್ರಭಾಷ್ಯ

ಸಕಲರೂ ವಿಷ್ಣುವಿನ ಅಧೀನ ೧೪೨
ಬ್ರಹ್ಮರುದ್ರಾದಿಗಳನ್ನು ಚಕ್ರದಂತೆ ತಿರುಗಿಸುವನು ೧೪೩

ವಿಷ್ಣುವೊಬ್ಬನೇ ಶಾಸಕ ೧೪೩
ಇತಿಹಾಸ ಪುರಾಣಗಳೇ ಇದಕ್ಕೆ ಆಧಾರ ೧೪೪
ತತ್ತ್ವಪ್ರದೀಪ
'ಸಪ್ತಾರ್ಧಗರ್ಭಾ' ಎಂಬ ಶ್ರುತ್ಯರ್ಥ ೧೪೫
'ಭುವನಸ್ಯ ರೇತಃ' ಇತ್ಯಾದಿ ಶ್ರುತ್ಯರ್ಥ ೧೪೬
'ಏಕಃ ಶಾಸ್ತಾ' ಇತ್ಯಾದಿ ಶ್ರುತ್ಯರ್ಥ ೧೪೬
ಪಾಠಾಂತರದ ಬಗ್ಗೆ ೧೪೭
ಪ್ರಾಮಾದಿಕ ಪಾಠ ೧೪೭
ತತ್ತ್ವಪ್ರಕಾಶಿಕಾ
ವಿಷ್ಣುವೇ ಅಕ್ಷರನೆನ್ನಲು ಮತ್ತೊಂದು ಯುಕ್ತಿ ೧೪೭
ಪ್ರಶಾಸನವೂ ವಿಷ್ಣುವಿನದ್ದೇ ಧರ್ಮ ೧೪೭
ಈ ವಿಷಯದಲ್ಲಿ ಪ್ರಮಾಣ ೧೪೮
ಸಪ್ತಾರ್ಧಗರ್ಭ ಎಂಬ ಶ್ರುತ್ಯರ್ಥ ೧೪೮
'ಏಕಃ ಶಾಸ್ತಾ' ಎಂಬ ಶ್ರುತಿಯ ಉಲ್ಲೇಖಕ್ಕೆ ಕಾರಣ ೧೪೯
ಭಾವದೀಪ
ಸೂತ್ರದ ಚ ಶಬ್ದ ವ್ಯಾಖ್ಯಾನ ೧೪೯
'ಸರ್ವಧೃತಿಕಾರಣಂ' ಎಂಬುದು 'ತತ್' ಶಬ್ದ ವ್ಯಾಖ್ಯಾನ ೧೪೯
ಶ್ರುತಿಯಲ್ಲಿರುವ 'ರೇತಃ' ಎಂಬುದರ ವ್ಯಾಖ್ಯಾನ ೧೫೦
'ಸ ವೈ ಬಲಮ್' ಎಂಬುದಕ್ಕೆ ಪ್ರಕೃತ ಉಪಯೋಗ ೧೫೦
ಬ್ರಹ್ಮಸೂತ್ರ
'ಅನ್ಯಭಾವವ್ಯಾವೃತ್ತೇಶ್ಚ' ಎಂಬ ಸೂತ್ರ ವ್ಯಾಖ್ಯಾನ ೧೫೧
ಬ್ರಹ್ಮಸೂತ್ರಭಾಷ್ಯ
ಬೇರೆ ವಸ್ತುಗಳ ಸ್ವಭಾವ ಶ್ರೀಹರಿಗಿಲ್ಲ ೧೫೧
ವಿಷ್ಣುವಿನ ಅಸಾಧಾರಣ ಧರ್ಮಗಳು ೧೫೨
ವಿರುದ್ಧಧರ್ಮಗಳುಳ್ಳವನು ವಿಷ್ಣು ಮಾತ್ರ ೧೫೩
ಸತ್ತರ್ಕದೀಪಾವಳಿ
'ಅಸ್ಥೂಲಮನಣು' ಎಂಬ ಶ್ರುತಿಯ ಆಧಾರದಿಂದ ಅಕ್ಷರಶಬ್ದ ವಾಚ್ಯತ್ವದ ಸಮರ್ಥನೆ ೧೫೪
ತತ್ತ್ವಪ್ರದೀಪ
ಬೃಹದಾರಣ್ಯಕದಲ್ಲಿ ಅನ್ಯಭಾವವ್ಯಾವೃತ್ತಿ ೧೫೫
'ಅಸ್ಥೂಲೋ ಅನಣುಃ' ಇತ್ಯಾದಿ ಶ್ರುತ್ಯರ್ಥ ೧೫೬
'ಸ ವಿಶ್ವಃ ಅವಿಶ್ವವಿವ ಚ' ಎಂಬುದೇ ಸರಿಯಾದ ಪಾಠ ೧೫೭
ಶ್ರೀಹರಿಯಲ್ಲಿ ವಿರುದ್ಧಧರ್ಮಗಳ ಸಮಾವೇಶ ೧೫೭
ಈಶ್ವರ ಪ್ರದೇಶದಿಂದ ಈಶ್ವರನಿಗೆ ಅಭೇದ ೧೫೭
ತತ್ತ್ವಪ್ರಕಾಶಿಕಾ
ವಿಷ್ಣುವೇ ಅಕ್ಷರನೆನ್ನಲು ಮೂರನೆಯ ಹೇತು ೧೫೯
'ಅಸ್ಥೂಲಮನಣು' ಇತ್ಯಾದಿ ಶ್ರುತಿಯ ಆಧಾರ ೧೫೯
ಅಸ್ಥೂಲಂ ಇತ್ಯಾದಿ ಪದಗಳ ವ್ಯಾಖ್ಯಾನ ೧೬೦

'ಅತಮಃ', 'ಅದುಃಖಂ', 'ಅಸುಖಂ' ಇತ್ಯಾದಿ ಪದಗಳ ವ್ಯಾಖ್ಯಾನ ೧೬೧
ವಿಷ್ಣುವಿನ ಪರಿಮಾಣವು ಅಪ್ರಾಕೃತವೇ ? ೧೬೧
ಲಕ್ಷ್ಮೀದೇವಿಯೂ ಕೂಡ ಅಪ್ರಾಕೃತಳಲ್ಲವೇ? ೧೬೨
ವಿಷ್ಣುವೇ ಅಕ್ಷರಶಬ್ದದಿಂದ ಮುಖ್ಯಪ್ರತಿಪಾದ್ಯ ೧೬೨
ಭಾವದೀಪ
ಸೂತ್ರದಲ್ಲಿರುವ ಚ ಶಬ್ದ ವ್ಯಾಖ್ಯಾನ ೧೬೩
'ಅಣು' ಮುಂತಾದ ಶಬ್ದಗಳು ಭಾವಪ್ರಧಾನ ನಿರ್ದಿಷ್ಟ ೧೬೩
ವೈಶೇಷಿಕಾಧಿಕರಣದ ಅನುವ್ಯಾಖ್ಯಾನದಲ್ಲಿ ಅಸ್ಥೂಲಂ ಇತ್ಯಾದಿ ಶ್ರುತಿಯ ವ್ಯಾಖ್ಯಾನ ೧೬೪
ಪ್ರಾಕೃತಸ್ಥೌಲ್ಯಾದಿಗಳ ನಿರಾಕರಣೆಯ ಬಗ್ಗೆ ೧೬೪
'ಅಸುಖಮ್' ಹಾಗೂ 'ಅದುಃಖಮ್' ಎಂಬೆರಡು ಪದಗಳ ಅರ್ಥದಲ್ಲಿ ವ್ಯತ್ಯಾಸ ೧೬೪
ದಹರಾಧಿಕರಣದ ಭಾಷ್ಯದಲ್ಲಿ ಪರಿಹಾರ ೧೬೫
ಸ್ಥೌಲ್ಯಾದಿರಾಹಿತ್ಯವು ಇತರರಲ್ಲಿ ಸಾಪೇಕ್ಷಿತ ೧೬೫
ಅನಶನಶ್ರುತಿಯು ಸಾವಕಾಶ ೧೬೫
ಏಕಾದಶಸ್ಕಂಧ ತಾತ್ಪರ್ಯದಲ್ಲಿ ಅನಶನಶ್ರುತಿಯ ವ್ಯಾಖ್ಯಾನ ೧೬೬
'ಧರ್ಮಾಂತರೇಣ ವಾಕ್ಯಶೇಷಾತ್' ಎಂಬ ನ್ಯಾಯ ೧೬೬
ನಾಕುಬಗೆಯ ನಾಶಗಳು ೧೬೭
ಅಕ್ಷರಶಬ್ದ ವಾಚ್ಯತ್ವದ ಬಗ್ಗೆ ನಿರವಕಾಶಲಿಂಗಗಳು ೧೬೭
'ಅಕ್ಷರಂ ವಿಷ್ಣುರೇವ' ೧೬೮
'ಅಂಬರಾಂತಧೃತೇಃ' ಎಂಬಲ್ಲಿರುವ ಅಂತಪದವು ವ್ಯರ್ಥವಲ್ಲ ೧೬೮
ಸೂತ್ರದ ಪ್ರತಿಪದಾರ್ಥ ೧೬೯
'ಅಂಬರ ಧೃತೇಃ' ಎಂದಷ್ಟೇ ಏಕೆ ಹೇಳಿಲ್ಲ ? ೧೭೦
'ಸಾ ಚ ಪ್ರಶಾಸನಾತ್' ಎಂಬ ಸೂತ್ರದ ಪ್ರತಿಪದಾರ್ಥ ೧೭೧
'ಪ್ರಶಾಸನಾತ್' ಎಂಬಲ್ಲಿರುವ 'ಪ್ರ' ಉಪಸರ್ಗದ ಬಗ್ಗೆ ೧೭೧
'ಅನ್ಯಭಾವವ್ಯಾವೃತ್ತೇಶ್ಚ' ಎಂಬ ಸೂತ್ರದ ಪ್ರತಿಪದಾರ್ಥ ೧೭೨
ಸ್ಥೌಲ್ಯಾದಿರಹಿತನಾದರೆ ಶೂನ್ಯನಾಗಲಾರ ೧೭೨
ನ್ಯಾಯಸುಧೆಯ ಪ್ರಕಾರ ವ್ಯಾಖ್ಯಾನ ೧೭೩
ಅದ್ವೈತಮತ ಹಾಗೂ ರಾಮಾನುಜಮತದಲ್ಲಿ ಅಕ್ಷರಾಧಿಕರಣ ೧೭೪

ಸದಧಿಕರಣ

ಬ್ರಹ್ಮಸೂತ್ರ
'ಈಕ್ಷತಿಕರ್ಮವ್ಯಪದೇಶಾತ್ಸಃ' ಎಂಬ ಸೂತ್ರ ವ್ಯಾಖ್ಯಾನ ೧೮೦
ಬ್ರಹ್ಮಸೂತ್ರಭಾಷ್ಯ
ಜ್ಞಾನಪೂರ್ವಕ ಸೃಷ್ಟಿಕ್ರಿಯೆಯುಳ್ಳ ಶ್ರೀಹರಿಯಲ್ಲಿ ಸ್ಥಾನ ಸಮನ್ವಯ ೧೮೧
'ಸತ್' ಎಂದರೆ ವಿಷ್ಣುವಲ್ಲವೆಂದು ಪೂರ್ವಪಕ್ಷ ೧೮೧
ಯಾವುದೇ ವಿಕಾರವಿಲ್ಲದ್ದರಿಂದ ಸತ್ ಎನಿಸಲಾರ ೧೮೨
'ಸತ್' ಶಬ್ದದಿಂದ ಪ್ರತಿಪಾದ್ಯನಾದವನು ಮಹಾವಿಷ್ಣುವೆಂದು ಸಿದ್ಧಾಂತ ೧೮೩

ಸ್ವತಂತ್ರದ್ರಷ್ಟೃತ್ವವು ವಿಷ್ಣುವಿನ ಅಸಾಧಾರಣ ಲಕ್ಷಣ ೧೮೩
ವಿಕಾರವಿಲ್ಲದಿದ್ದರೂ ಬಹುಭವನವುಳ್ಳವನು ೧೮೪
ಸತ್ತರ್ಕದೀಪಾವಳಿ
'ಸದೇವ ಸೋಮ್ಯೇದಮಗ್ರ ಆಸೀತ್' ಎಂಬ ವಾಕ್ಯವು ಯಾರನ್ನು ಪ್ರತಿಪಾದಿಸುತ್ತಿದೆ ? ೧೮೫
ತತ್ತ್ವಪ್ರದೀಪ
ಸತ್ ಎಂದರೆ ಜಡಪ್ರಕೃತಿ ಹಾಗೂ ಚೇತನಪ್ರಕೃತಿ ಎಂದು ಪೂರ್ವಪಕ್ಷ ೧೮೭
ಈಕ್ಷತಿ ಮತ್ತು ಕರ್ಮಗಳು ಜಡಪ್ರಕೃತಿಯಲ್ಲಿ ಸರ್ವಥಾ ಕೂಡುವುದಿಲ್ಲ ೧೯೦
ತತ್ತ್ವಪ್ರಕಾಶಿಕಾ
'ಸತ್' ಎಂಬ ಶಬ್ದವು ಬ್ರಹ್ಮಪ್ರತಿಪಾದಕವೋ, ಪ್ರಕೃತಿಪ್ರತಿಪಾದಕವೋ ? ೧೯೨
ಅಧಿಕರಣದ ವಿಷಯವಾಕ್ಯ ೧೯೨
ಜಗತ್ಕರ್ತೃತ್ವವು 'ಸತ್' ಪದಾರ್ಥದಲ್ಲಿ ಪ್ರತೀತವಾಗುತ್ತಿದೆ ೧೯೩
'ಸತ್' ಪದಾರ್ಥವನ್ನು ನಿರ್ಣಯ ಮಾಡಲೇಬೇಕು ೧೯೩
'ಸತ್' ಪದಾರ್ಥದಲ್ಲಿ ಪ್ರತೀತವಾಗುತ್ತಿದೆ ೧೯೩
ಯುಕ್ತಿಬದ್ಧವಾದ ಪೂರ್ವಪಕ್ಷ ೧೯೩
ಅನೇಕ ಪದಾರ್ಥಗಳ ಪರಿಣಾಮವುಳ್ಳದ್ದು ಸತ್ ಪದಾರ್ಥ ೧೯೪
ಪ್ರಧಾನವೇ ಸತ್‌ಪದಾರ್ಥವೆಂದು ಪೂರ್ವಪಕ್ಷ ೧೯೪
ಈ ಅಧಿಕರಣವು ವ್ಯರ್ಥವಲ್ಲ ೧೯೪
ಪ್ರಧಾನವು ಪ್ರತಿಪಾದ್ಯವಲ್ಲ ೧೯೫
ಬ್ರಹ್ಮನ ಅನೇಕ ಅಸಾಧಾರಣ ಧರ್ಮಗಳು ೧೯೫
ಸಿದ್ಧಾಂತ ಮಂಡನೆ ೧೯೫
ಜಡಪ್ರಕೃತಿಗೆ ಈಕ್ಷಣವೇ ಕೂಡದು ೧೯೬
ಜಡಪ್ರಕೃತಿಯಲ್ಲಿ ಈಕ್ಷಣವು ಉಪಪನ್ನವಾಗುವುದಿಲ್ಲ ೧೯೬
ಪ್ರಧಾನಶಬ್ದಕ್ಕೆ ಲಕ್ಷ್ಮೀದೇವಿಯೆಂದರ್ಥ ೧೯೬
ನಿರವಕಾಶವಾದ ಲಿಂಗ ೧೯೭
ಬಹುಭವನವೆಂಬ ಲಿಂಗವು ಸಾವಕಾಶ ೧೯೭
ಸತ್‌ಪದಾರ್ಥವಾದ ಮಹಾವಿಷ್ಣುವೇ ಜಗತ್‌ಕಾರಣನು ೧೯೭
ಭಾವದೀಪ
ಸೃಷ್ಟಿಸ್ಥಾನ ಸಮನ್ವಯವೇ ಅಧಿಕರಣದ ಉದ್ದೇಶ ೧೯೮
'ಸತ್' ಎಂಬ ನಾಮಾತ್ಮಕ ಶಬ್ದದ ಮೂಲಕ ಸ್ಥಾನ ಸಮನ್ವಯ ೨೦೦
ಸ್ಥಿತಿ ಹಾಗೂ ಸಂಹಾರ ಸ್ಥಾನಗಳ ಸಮನ್ವಯವು ವಿವಕ್ಷಿತ ೨೦೧
ಜಗತ್ಕಾರಣತ್ವವು ವಿಷ್ಣು ಹಾಗೂ ಪ್ರಕೃತಿ ಉಭಯಸಾಧಾರಣ ೨೦೨
ಸ್ರಷ್ಟೃಪದದಿಂದ ಸೂಚಿತವಾದ ಆಕ್ಷೇಪ ೨೦೫
ಕಾರಣತ್ವದ ಜೊತೆ ಇತರ ಗುಣಗಳೂ ವಿವಕ್ಷಿತ ೨೦೬
ಸದೇವ ಎಂಬ ವಿಷಯವಾಕ್ಯವು ಛಾಂದೋಗ್ಯದ ಆರನೆಯ ಅಧ್ಯಾಯದಲ್ಲಿದೆ ೨೦೬
ಜನ್ಮಾಧಿಕರಣದಿಂದ ಸಂಗತಿ ೨೦೬
ವಿಷ್ಣುವಿನಲ್ಲಿ ಕೂಡಿಸಲಾಗದ ಜಗತ್ಕಾರಣತ್ವ ೨೦೭
ಪ್ರಧಾನವನ್ನು ಸಂದೇಹಕೋಟಿಯಲ್ಲಿ ವಿಪಕ್ಷಿಸಲು ಆತಂಕವಿಲ್ಲ ೨೦೭

ಸಂಗತಿಪರ ಭಾಷ್ಯವು ಪೂರ್ವಪಕ್ಷ ಪರ ೨೦೮
ಬಹುಭಾವ ಎಂದರೇನು ? ೨೦೮
'ಬಹು ಸ್ಯಾಮ್ ಪ್ರಜಾಯೇಯ' ಎಂಬುದಕ್ಕೆ ನ್ಯಾಯವಿವರಣದಲ್ಲಿ ವ್ಯಾಖ್ಯಾನ ೨೦೮
ಶ್ರೀಹರಿಗೆ ಬಹುಭವನವೆಂಬ ವಿಕಾರವಿಲ್ಲ ೨೦೯
ಸ್ವಪ್ರತ್ವಪದಕ್ಕೆ ವಿನರ್ಥ ? ೨೦೯
ಅನನ್ಯಾಧೀನಕಾರಣತ್ವವನ್ನು ಪ್ರಕೃತಿಯಲ್ಲಿ ಹೇಗೆ ಕೂಡಿಸುವುದು ? ೨೦೯
ಉಪಾದಾನಕಾರಣತ್ವವನ್ನು ವಿವಕ್ಷಿಸಬಹುದು ೨೧೨
'ಸದೇವ' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಕಾರಣತ್ವವು ವಿಷ್ಣುಮಾತ್ರ ನಿಷ್ಠ ೨೧೨
ವಿಷ್ಣುವಿನ ಸರ್ವೋತ್ತಮತ್ವಕ್ಕಾಗಿ ಜಗತ್ಕಾರಣತ್ವ ೨೧೨
ಸುಪ್ತಗಮ್ಯತ್ವಾದಿ ಧರ್ಮಗಳು ವಿವಕ್ಷಿತ ೨೧೩
ಲಯಕರ್ತೃತ್ವವು ಸಿದ್ಧವಾಯಿತು ೨೧೩
ಭಾಷ್ಯದಲ್ಲಿ ಕೆಲವು ಪದಗಳ ಅಧ್ಯಾಹಾರ ೨೧೩
ಸೂತ್ರದಲ್ಲಿರುವ ಕರ್ಮಪದದ ವ್ಯಾಖ್ಯಾನ ೨೧೫
ಈಕ್ಷಣವೆಂಬ ಲಿಂಗವು ನಿರವಕಾಶ ೨೧೭
'ತತ್ತೇಜ ಐಕ್ಷತ' ಎಂಬುದರ ಅರ್ಥವೇನು ? ೨೧೮
ಸೋಮಶಬ್ದದಂತೆ ವ್ಯಾಖ್ಯಾನಿಸಬೇಕು ೨೧೮
ಭಾಷ್ಯದ ಸಂಪೂರ್ಣ ಅಭಿಪ್ರಾಯ ೨೧೯
ತೈತ್ತಿರೀಯಭಾಷ್ಯದಲ್ಲಿ 'ಬಹು ಸ್ಯಾಮ್' ಎಂಬ ಶ್ರುತಿಯ ವ್ಯಾಖ್ಯಾನ ೨೧೯
ಪ್ರಥಮಾಧ್ಯಾಯದ ನಾಕನೆಯ ಪಾದದ ಅನುವ್ಯಾಖ್ಯಾನದಲ್ಲಿಯೂ ವ್ಯಾಖ್ಯಾನ ೨೨೦
ತಾತ್ಪರ್ಯಚಂದ್ರಿಕೆಯಲ್ಲಿ ಇದೇ ವಿಷಯದ ವಿವರಣೆ ೨೨೧
ನಪುಂಸಕಲಿಂಗದಲ್ಲಿರುವ ಸತ್‌ಪದಕ್ಕೆ ಅನುಸಾರಿಯಾಗಿ ಬ್ರಹ್ಮ ಎಂದಿದ್ದಾರೆ ೨೨೪
ಇತಿಶಬ್ದವು ಹೇತ್ವರ್ಥದಲ್ಲಿದೆ ೨೨೪
'ತತ್ತೇಜೋ೭ಸೃಜತ' ಇತ್ಯಾದಿ ವಾಕ್ಯಗಳೆಲ್ಲವೂ ಸೃಷ್ಟಿಪರ ೨೨೪
ಕೆಲವರ ವ್ಯಾಖ್ಯಾನ ೨೨೫
ನಿರಾಕರಣೆ ೨೨೫
ಈಕ್ಷಣವೆಂಬ ವ್ಯಾಪಾರವನ್ನು ಹೇಳಿದ್ದು ಸಮಂಜಸವಾಗಿದೆ ೨೨೫
ತಂತ್ರದೀಪಿಕೆಯಲ್ಲಿ ಸದಧಿಕರಣದ ಸೂತ್ರಗಳು ೨೨೬
ಸೂತ್ರದಲ್ಲಿರುವ 'ಸಃ' ಎಂಬ ಪದಕ್ಕೆ ಅನ್ವಯಕ್ರಮ ೨೨೬
'ಈಕ್ಷತಿಕರ್ಮವ್ಯಪದೇಶಾತ್ಸಃ' ಎಂಬ ಸೂತ್ರದ ಪ್ರತಿಪದಾರ್ಥ ೨೨೭
ಸೂತ್ರದಲ್ಲೇಕೆ ಕರ್ಮಪದವನ್ನು ವಿವಕ್ಷಿಸಿದರು ೨೨೭
ತತ್ತ್ವಪ್ರದೀಪ ಹಾಗೂ ತಾತ್ಪರ್ಯಚಂದ್ರಿಕೆಗಳಲ್ಲಿ ಕರ್ಮಪದದ ಸಾರ್ಥಕ್ಯ ೨೨೭
ಅದ್ವೈತಮತ ಹಾಗೂ ರಾಮಾನುಜಮತದಲ್ಲಿ ಸದಧಿಕರಣ ೨೨೮

ದಹರಾಧಿಕರಣ

ಬ್ರಹ್ಮಸೂತ್ರ

'ದಹರ ಉತ್ತರೇಭ್ಯಃ' ಎಂಬ ಸೂತ್ರ ವ್ಯಾಖ್ಯಾನ ೨೩೪

ಬ್ರಹ್ಮಸೂತ್ರಭಾಷ್ಯ

ಸಕಲಕ್ಕೂ ಆಧಾರವಾದದ್ದು ಆಕಾಶವೆಂದು ಪೂರ್ವಪಕ್ಷ ೨೩೫
ಆಕಾಶವೆಂದರೆ ವಿಷ್ಣುವಲ್ಲ ೨೩೭

ಹೃತ್ಪದ್ಮದಲ್ಲಿರುವ ಸಣ್ಣ ಆಕಾಶದಲ್ಲಿರುವವನು ನಾರಾಯಣನೇ ೨೩೮
ಅಪಹತಪಾಪ್ಮತ್ವಾದಿಗುಣಗಳೆಲ್ಲವೂ ವಿಷ್ಣುವಿನದ್ದೇ ಆಗಿದೆ ೨೩೯
ಹಸಿವು ನೀರಡಿಕೆಗಳನ್ನು ಗೆದ್ದವನು ಶ್ರೀಹರಿ ಮಾತ್ರ ೨೪೦
ಸಾಪೇಕ್ಷನಿರಪೇಕ್ಷಗಳಲ್ಲಿ ನಿರಪೇಕ್ಷವು ಸ್ವೀಕಾರಾರ್ಹ ೨೪೦
ಸತ್ಯಸಂಕಲ್ಪವೆಂದರೆ ಮಹಾವಿಷ್ಣು ಮಾತ್ರ ೨೪೧
ಸತ್ತರ್ಕದೀಪಾವಳಿ
ಆಕಾಶಶಬ್ದದಿಂದ ವಾಚ್ಯವಾದ ಭೂತಾಕಾಶವು ವಿಷ್ಣುವಲ್ಲ ೨೪೨
ಆಕಾಶಶಬ್ದವು ಭೂತಾಕಾಶವೆನ್ನಲು ಸಂವಾದ ಪ್ರಮಾಣ ೨೪೨
ಪೂರ್ವಪಕ್ಷದ ಸಮಾಪ್ತಿ ೨೪೩
ಚಂದ್ರಾದಿತ್ಯಾದ್ಯಾಧಾರನಾದವನು ಮಹಾವಿಷ್ಣುವೆಂದು ಸಿದ್ಧಾಂತ ೨೪೩
ಸತ್ಯಸಂಕಲ್ಪತ್ವಾದಿಗಳು ವಿಷ್ಣುವಿನದ್ದೇ ಧರ್ಮ ೨೪೩
ದಹರಾಕಾಶದಲ್ಲಿರುವವನು ಮಹಾವಿಷ್ಣುವೇ ೨೪೪
ಆದರೂ ಸರ್ವಗತನಾಗಿರುವನು ೨೪೪
ವ್ಯಾಪ್ತನಾದವನು ಮಹಾವಿಷ್ಣುವೇ ಹೊರತು ಬಾಹ್ಯಾಕಾಶವಲ್ಲ ೨೪೪
ಹಸಿವು ನೀರಡಿಕೆಗಳನ್ನು ದಾಟಿದ್ದು ಭೂತಾಕಾಶವಲ್ಲ ೨೪೫
ಮುಕ್ತರಲ್ಲಿಯೂ ಕೂಡ ನಿತ್ಯತೀರ್ಣಾತ್ವಾದಿಗಳು ಇರುವುದಿಲ್ಲ ೨೪೫
ದಹರಾಕಾಶದಲ್ಲಿ ಅಪಹತಪಾಪ್ಮತ್ವಾದಿಗಳು ಕೂಡುವುದಿಲ್ಲ ೨೪೫
ತತ್ತ್ವಪ್ರದೀಪ
ದಹರಾಕಾಶದಲ್ಲಿ ಏನಿದೆ ? ೨೪೬
ದಹರಾಕಾಶವೇ ಸಕಲಕ್ಕೂ ಆಶ್ರಯ, ಅಲ್ಲಿ ನೆಲೆಸಿರುವವನು ಜೀವನೆಂಬುದು ಅಧಿಕರಣದ ಪೂರ್ವಪಕ್ಷ ೨೪೭
ದಹರಾಕಾಶದ ಜಿಜ್ಞಾಸೆ ಅಸಂಗತ ೨೪೭
ಬೃಹದಾರಣ್ಯಕ ಹಾಗೂ ಛಾಂದೋಗಗಳ ಅಭಿಪ್ರಾಯ ಮಹಾವಿಷ್ಣುವೇ ೨೪೯
ಉಪನಿಷತ್ತಿನಲ್ಲಿ ಶ್ರೀಮದಾಚಾರ್ಯರ ವ್ಯಾಖ್ಯಾನ ನೈಪುಣ್ಯ ೨೪೯
ಆಕಾಶನು ವಿಷ್ಣುವೆನ್ನಲು ನಾಕು ಬಗೆಯ ನಿಷ್ಪತ್ತಿಗಳು ೨೪೯
ಆಕಾಶರೂಪಿಯಾದ ಭಗವಂತನು ಗುಣತಃ ವ್ಯಾಪ್ತಿಯುಳ್ಳವನು ೨೪೯
'ಯಸ್ಮಿನ್ ವಿರುದ್ಧಗತಯಃ' ಎಂಬ ಭಾಗವತದ ವ್ಯಾಖ್ಯಾನ ೨೪೯
ಬ್ರಹ್ಮಾಕಾಶವೇ ವಿವಕ್ಷಿತ ೨೪೮
ದಹರಾಕಾಶ ಎಂದರೆ ಬ್ರಹ್ಮ ೨೪೮
ತತ್ತ್ವಪ್ರಕಾಶಿಕಾ
ಹೃತ್ಪದ್ಮಸ್ಥಿತತ್ವವು ವಿಷ್ಣು, ಆಕಾಶ, ಜೀವ ಮೂವರಲ್ಲೂ ಸಮಾನ ೨೪೦
ಯುಕ್ತಿಬದ್ಧವಾದ ಪೂರ್ವಪಕ್ಷ ೨೪೦
ಹೃತ್ಪದ್ಮಸ್ಥನಲ್ಲಿ ಚಂದ್ರಾದ್ಯಾಧಾರತ್ವ ೨೪೧
ಅಧಿಕರಣದ ಸಂಪೂರ್ಣ ವಿಷಯವಾಕ್ಯ ೨೪೧
ಹೃತ್ಪದ್ಮಸ್ಥನಾದವನು ಯಾರು ? ೨೪೨
ಅಧಿಕರಣದ ಸಂದೇಹ, ಸಂದೇಹಬೀಜಗಳು ೨೪೨
ಹೃತ್ಪದ್ಮಸ್ಥವಾದದ್ದು ಭೂತಾಕಾಶವೆಂದು ಪೂರ್ವಪಕ್ಷ ೨೪೨
ಆಕಾಶಸ್ತಲ್ಲಿಂಗಾತ್ ಎಂಬ ಸೂತ್ರದಲ್ಲಿ ನಿರ್ಣಯವಾಗಿದೆ ಅಲ್ಲವೇ? ೨೪೩

ನಾರಾಯಣೋಪನಿಷತ್ತಿನ ಸಮಾಪ್ಯಾನ ೨೮೩
ಷಿರವು ಆಕಾಶಶಬ್ದವಾಚ್ಯವೆಂದು ಹೇಳಲು ಸಾಧ್ಯವಿಲ್ಲ ೨೮೩
ಹೃತ್ಪದ್ಮಸ್ಥವಾದ ಆಕಾಶದಲ್ಲಿ ವಿಷ್ಣುವಿದ್ದಾನೆಯೇ ? ೨೮೪
ಭೂತಾಕಾಶವನ್ನು ವಿವಕ್ಷಿಸಿದಾಗ ಬಾಧಕವಿಲ್ಲ ೨೮೪
ಯಾರು ಸರ್ವಾಧಾರ ? ೨೮೫
ಷಿರವೇ ಸಕಲಕ್ಕೂ ಆಧಾರ ೨೮೫
ಹೃತ್ಪದ್ಮಸ್ಥನಾದವನು ಜೀವನೆಂದು ಎರಡನೆಯ ಪೂರ್ವಪಕ್ಷ ೨೮೫
ವ್ಯಾಪ್ತನಾದ ಪರಮಾತ್ಮನು ಅಣುರೂಪನಾಗಲಾರ ೨೮೬
ಇಬ್ಬರಲ್ಲಿ ಸಮಾನವಾದ ದೋಷ ದೋಷವೇ ಅಲ್ಲ ೨೮೬
ದಹರಾಕಾಶದಲ್ಲಿರುವವನು ಮಹಾವಿಷ್ಣುವೇ ಆಗಿದ್ದಾನೆಂದು ಸಿದ್ಧಾಂತ ೨೮೬
ಅಪಹತಪಾಪ್ಮತ್ವವು ವಿಷ್ಣುತ್ವ ನಿಶ್ಚಾಯಕ ೨೮೭
ಶ್ರುತಿಯಲ್ಲಿರುವ 'ಅತ್ಯೇತಿ' ಎಂಬುದರ ವ್ಯಾಖ್ಯಾನ ೨೮೭
ಸತ್ಯಕಾಮತ್ವಾದಿಗಳು ಭೂತಾಕಾಶದಲ್ಲಿ ಅತ್ಯಂತ ಅಸಂಭಾವಿತ ೨೮೭
ಸತ್ಯಕಾಮ ಇತ್ಯಾದಿ ಭಾಷ್ಯದ ವ್ಯಾಖ್ಯಾನ ೨೮೮
ಭೂತಾಕಾಶದಲ್ಲಿ ಅಪಹತಪಾಪ್ಮತ್ವಾದಿಗಳು ಸರ್ವಥಾ ಇಲ್ಲ ೨೮೮

ಭಾವದೀಪ

ವಿಷಯವಾಕ್ಯವನ್ನೇಕೆ ನ್ಯಾಯವಿವರಣದಲ್ಲಿ ಉದಾಹರಿಸಿಲ್ಲ ೨೮೯
'ಯೋ ವೇದ' ಎಂಬ ಶ್ರುತ್ಯರ್ಥವು ಆನಂದಮಯಾಧಿಕರಣದಲ್ಲಿ ೨೯೨
ಮಂದಿರೇ ಮಣಿಮಾಲಾನ್ಯಾಯದಿಂದ ಗುಹಾಸ್ಥತ್ವವನ್ನು ಹೇಳಿರುತ್ತಾರೆ ೨೯೩
ತೈತ್ತಿರೀಯದಲ್ಲಿ ಹೃದಯಗುಹಾಸ್ಥತ್ವ ವಿಚಾರ ೨೯೩
ಷಟ್‌ಪ್ರಶ್ನದಲ್ಲಿ ಹೃದಯಗುಹಾಸ್ಥತ್ವ ವಿಚಾರ ೨೯೪
'ಅವಸ್ಥಿತಿವೈಶೇಷ್ಯಾತ್' ಎಂಬ ಸೂತ್ರದಲ್ಲಿ ಹೃದಯಗುಹಾಸ್ಥತ್ವ ವಿಚಾರ ೨೯೪
ಹೃದಯಪದ್ಮಸ್ಥತ್ವ ಎಂದರೇನು ? ೨೯೫
ಸಂಗತಿಪರ ಭಾಷ್ಯದ ವ್ಯಾಖ್ಯಾನ ೨೯೫
ಛಾಂದೋಗ್ಯಶ್ರುತಿಯ ಎಂಟನೆಯ ಅಧ್ಯಾಯದಲ್ಲಿ ಹೇಳಿದ ವಿಚಾರ ೨೯೫
ಪ್ರಕರಣದ ಸಂಪೂರ್ಣ ವಾಕ್ಯ ೨೯೬
ಹೃದಯಕಮಲದ ಆಕಾಶದಲ್ಲಿ ಏನಿದೆ ? ೨೯೬
ಯಾವ ಕಾರಣಕ್ಕಾಗಿ ಹೀಗೆ ಜಿಜ್ಞಾಸೆ ಮಾಡಬೇಕು ? ೨೯೬
ಹೃದಯಶಬ್ದದ ನಿಷ್ಪತ್ತಿ ೨೯೭
ಹೃತ್ಪದ್ಮಸ್ಥನು ಯಾವ ಧರ್ಮ ವಿಶಿಷ್ಟನಾಗಿದ್ದಾನೆ ? ೨೯೭
ಪೂರ್ವಪಕ್ಷಿಗಳ ಅಭಿಪ್ರಾಯ ೨೯೮
ಆಕಾಶಶ್ರುತಿಯು ಭೂತಾಕಾಶಪರವೆಂದು ಪೂರ್ವಪಕ್ಷ ೨೯೮
ಟೀಕಾವಾಕ್ಯಗಳ ವ್ಯಾಖ್ಯಾನ ೨೯೯
ಸಾಕ್ಷಾತ್ತಾಗಿ ಅಥವಾ ಪರಂಪರಾದಿಂದಲೂ ಲಿಂಗಸಮನ್ವಯವು ವಿವಕ್ಷಿತ ೨೯೯
ಜೀವಪರಾಮರ್ಶಾತ್ ಎಂಬ ಮುಂದಿನ ಭಾಷ್ಯಕ್ಕೆ ಅನುಗುಣವಾದ ವ್ಯಾಖ್ಯಾನ ೩೦೦
ಸಾಕ್ಷಾತ್ತಾದ ಲಿಂಗವನ್ನು ವಿವಕ್ಷಿಸಿದಾಗ ೩೦೦
ಷಿರ ಶ್ರುತಿಯಲ್ಲಿ ಹೇಳಲ್ಪಟ್ಟ ಸರ್ವಾಧಾರತ್ವ ೩೦೦

ಶ್ರುತಿಗಳ ನಿಜಾಭಿಪ್ರಾಯ ೩೦೧
'ಯ ಏಷೋಽಂತರ್ಹೃದಯೇ ಆಕಾಶಃ' ಎಂಬ ವಾಕ್ಯವು ವಿವಕ್ಷಿತ ೩೦೧
'ತಸ್ಯಾಂತೇ' ಎಂಬುದರ ಅಭಿಪ್ರಾಯ ೩೦೨
'ತಸ್ಮಿನ್' ಇತ್ಯಾದಿ ವಾಕ್ಯಗಳ ಅಭಿಪ್ರಾಯ ೩೦೨
ವಿಷ್ಣುವು ಶಿಖಾಮಧ್ಯಸ್ಥನಾಗಿರುವನು ೩೦೨
ಹೃತ್ಪದಸ್ಥತ್ವವನ್ನು ಪರಂಪರೆಯಿಂದ ವಿವಕ್ಷಿಸಿದಾಗ ೩೦೨
ನ್ಯಾಯವಿವರಣದಲ್ಲಿ ಹೇಳಲ್ಪಟ್ಟ ವಿಚಾರ ೩೦೩
ಆಕಾಶಶಬ್ದವು ಆಕಾಶಪರವೋ, ಬ್ರಹ್ಮಪರವೋ ? ೩೦೩
ಪೂರ್ವಪಕ್ಷಕಾರರಿಗೆ ಅನ್ಯಾಭಾವದೋಷವಿಲ್ಲ ೩೦೪
'ಏತಸ್ಮಿನ್ ಬ್ರಹ್ಮಪುರೇ' ಇತ್ಯಾದಿ ಭಾಷ್ಯದ ಯೋಜನೆ ೩೦೪
'ಕಂ ತದತ್ರ' ಇತ್ಯಾದಿ ಭಾಷ್ಯದ ಅಭಿಪ್ರಾಯ ೩೦೫
ಆಕಾಶಶಬ್ದವು ಬ್ರಹ್ಮಪರ ೩೦೫
ಆಕಾಶಶಬ್ದವಾಚ್ಯನು ವಿಷ್ಣುವೇ ಆಗಿದ್ದಾನೆ ೩೦೫
'ತಸ್ಮಾತ್' ಎಂಬುದರ ವ್ಯಾಖ್ಯಾನ ೩೦೬
ವಿಷ್ಣುವು ಆಕಾಶಶಬ್ದ ಪ್ರತಿಪಾದ್ಯನಾದಾಗ ೩೦೬
'ಇತರಪರಾಮರ್ಶಾತ್ ಸಃ' ಇತ್ಯಾದಿ ಸೂತ್ರಭಾಷ್ಯದಲ್ಲಿ ಹೇಳಿದ್ದರ ವ್ಯಾಖ್ಯಾನ ೩೦೬
ಹೃತ್ಪದ್ಮಸ್ಥನಲ್ಲಿ ಅಪಹತಪಾಪ್ಮತ್ವಾದಿ ಗುಣಗಳು ೩೦೭
'ಅರ್ಭಕೌಕಸ್ತ್ವಾತ್' ಎಂಬ ಸೂತ್ರದಲ್ಲಿ ಹೇಳಿದ ವಿಚಾರ ೩೦೮
ಅಲ್ಪಸ್ಥಾನಸ್ಥಿತತ್ವವು ಜೀವದ ಧರ್ಮ ೩೦೯
ಶ್ರುತಿಯ ಅಭಿಪ್ರಾಯ ೩೦೯
'ಯಾವಾನ್ ವಾ' ಎಂಬ ಶ್ರುತಿಯಲ್ಲಿ ಹೇಗೆ ಅನ್ವಯ ? ೩೦೯
ಪೂರ್ವಪಕ್ಷವು ಸಂದೇಹ ಸ್ವರೂಪವೇ ? ೩೧೦
ಸಾಕ್ಷಾತ್ತಾಗಿ ಅಥವಾ ಪರಂಪರೆಯಿಂದಲೇ ವಿಷ್ಣುವಿಗೆ ಹೃತ್ಪದ್ಮಸ್ಥತ್ವವಿಲ್ಲ ೩೧೦
ಹಾಗಾದರೆ ದಹರಾಕಾಶತ್ವವನ್ನು ಹೇಳಬಹುದಲ್ಲವೇ ? ೩೧೦
ಪರಂಪರೆಯಿಂದಲೂ ಹೃತ್ಪದ್ಮಸ್ಥತ್ವವು ಲಿಂಗವಾಗುತ್ತದೆ ೩೧೧
ಆಕಾಶಾದಿಗಳಲ್ಲಿ ಅಪಹತಪಾಪ್ಮತ್ವಾದಿಗಳು ಬರುತ್ತದಲ್ಲವೇ ? ೩೧೩
ತರ್ಕತಾಂಡವದಲ್ಲಿ ಹೇಳಿದಂತೆ ಸಾಪೇಕ್ಷಧರ್ಮವೂ ಕೂಡ ಮುಖ್ಯವಲ್ಲವೇ ? ೩೧೩
'ಗತಿಶಬ್ದಾಭ್ಯಾಂ ತಥಾಹಿ' ಇತ್ಯಾದಿ ಸೂತ್ರದ ವ್ಯಾಖ್ಯಾನ ೩೧೪

ಬ್ರಹ್ಮಸೂತ್ರಭಾಷ್ಯ

ದಹರಶಬ್ದವು ವಿಷ್ಣುವೆನ್ನಲು ಬ್ರಹ್ಮಶಬ್ದವು ಕಾರಣ ೩೧೫
ಸುಪ್ತಪ್ರಾಪ್ಯತ್ವವು ಎರಡನೆಯ ಕಾರಣ ೩೧೬
ಅರಣ್ಯಾಶ್ರಯತ್ವವು ಮೂರನೆಯ ಕಾರಣ ೩೧೬
ಎಲ್ಲಾ ಲಿಂಗಗಳು ವಿಷ್ಣುತ್ವ ನಿಶ್ಚಾಯಕಗಳು ೩೧೭

ಸತ್ತರ್ಕದೀಪಾವಳಿ

'ಇಮಾಃ ಸರ್ವಾಃ' ಎಂಬ ಶ್ರುತಿಯಿಂದ ವಿಷ್ಣುವೇ ಪ್ರತಿಪಾದ್ಯನು ೩೧೮
ಸುಪ್ತಪ್ರಾಪ್ಯತ್ವವು ವಿಷ್ಣುವಿನದ್ದೇ ಅಸಾಧಾರಣಲಿಂಗ ೩೧೮
ಅರಣ್ಯಾಶ್ರಯತ್ವವು ವಿಷ್ಣುವಿನದ್ದೇ ಲಿಂಗವೆಂದು ಪುರುಷೋತ್ತಮ ತಂತ್ರ ೩೧೯

ತತ್ತ್ವಪ್ರದೀಪ
ಸುಪ್ತಪ್ರಾಪ್ಯತ್ವವು ವಿಷ್ಣುವಿನ ಅಸಾಧಾರಣಲಿಂಗ ೩೧೯
ಅರಣ್ಯಾಶ್ರಯತ್ವವು ವಿಷ್ಣುವಿನ ಅಸಾಧಾರಣಲಿಂಗ ೩೨೦
ತತ್ತ್ವಪ್ರಕಾಶಿಕಾ
ದಹರಸ್ಥನು ವಿಷ್ಣುವೆನ್ನಲು ಮತ್ತೊಂದು ಯುಕ್ತಿ ೩೨೨
ಶ್ರುತಿಯಲ್ಲಿ ಹೇಳಲ್ಪಟ್ಟ ಅಸಾಧಾರಣಲಿಂಗಗಳು ೩೨೨
ಲೋಕಪದದಿಂದ ವಿಷ್ಣುವೇ ಪ್ರತಿಪಾದ್ಯ ೩೨೨
ಸುಪ್ತಪ್ರಾಪ್ಯತ್ವವು ಹೇಗೆ ವಿಷ್ಣುತ್ವ ನಿಶ್ಚಾಯಕ ? ೩೨೩
ಬ್ರಹ್ಮಶಬ್ದವು ವಿಷ್ಣ್ವೇಕಪರ ೩೨೩
'ಅರ' ಮತ್ತು 'ಣ್ಯ' ಎಂಬೆರಡು ಸುಧಾಸಮುದ್ರಗಳು ೩೨೩
ಅರಣ್ಯಾಶ್ರಯಲೋಕವತ್ವವು ಹೇಗೆ ವಿಷ್ಣುತ್ವ ನಿಶ್ಚಾಯಕ ? ೩೨೩
'ಹಿ' ಶಬ್ದದ ವ್ಯಾಖ್ಯಾನ ೩೨೪
ಅರಣ್ಯಾಶ್ರಯತ್ವವು ಸತ್ಯಲೋಕದ ಲಿಂಗವಲ್ಲ ೩೨೪
'ಅಹರಹರ್ಗಚ್ಛಂತ್ಯಃ' ಎಂಬ ವಾಕ್ಯವು ಹೃತ್ಪದ್ಮಸ್ಥ ವಿಷಯಕ ೩೨೪
ಬ್ರಹ್ಮಲೋಕಪದವು ವಿಷ್ಣುಲೋಕ ಪರ ೩೨೫
ಅರಣ್ಯಾಶ್ರಯತ್ವಲಿಂಗವು ಭಗವಲ್ಲೋಕಲಿಂಗವಾಗಿದೆ ೩೨೫
ಭಾವದೀಪ
'ಯುಕ್ತಂತರೇಣ' ಎಂಬಲ್ಲಿರುವ ಏಕವಚನವು ಸಮುದಾಯಾಭಿಪ್ರಾಯದಲ್ಲಿ ೩೨೬
'ಗಚ್ಛಂತ್ಯಃ' ಎಂಬ ಸ್ತ್ರೀಲಿಂಗಪ್ರಯೋಗಕ್ಕೆ ಕಾರಣ ೩೨೬
ಬ್ರಹ್ಮಲೋಕಪದದಿಂದ ಯಾರು ಪ್ರತಿಪಾದ್ಯರು ? ೩೨೬
ಬ್ರಹ್ಮಲೋಕ ಶಬ್ದಕ್ಕೆ ಮತ್ತೊಂದು ವ್ಯುತ್ಪತ್ತಿ ೩೨೭
ಮುಕ್ತನಾದ ಜೀವನು ಏಕ್ಯಹೊಂದಲಾರ ೩೨೭
ಅರಣ್ಯಲೋಕದಲ್ಲಿ ಪ್ರಯೋಗಿಸಿದ ಶಬ್ದವನ್ನೇ ಹೃತ್ಪದ್ಮದಲ್ಲಿಯೂ ಪ್ರಯೋಗಿಸಲಾಗಿದೆ ೩೨೮
'ತತ್‌ಪ್ರಸಂಗಾತ್' ಎಂಬುದರ ವ್ಯಾಖ್ಯಾನ ೩೨೮
'ಅರಶ್ಚ ವೈ ಣ್ಯಶ್ಚ' ಎಂಬ ಭಾಷ್ಯವಾಕ್ಯದ ವ್ಯಾಖ್ಯಾನ ೩೨೮
ವರಾಹಾದಿಪುರಾಣಗಳಲ್ಲಿ ಹೇಳಲ್ಪಟ್ಟ ಲಿಂಗ ೩೨೯
ಸೂತ್ರದಲ್ಲಿ 'ತಥಾ' ಪದದ ವ್ಯಾಖ್ಯಾನ ೩೨೯
'ಗತಿಶಬ್ದಲಿಂಗೇಭ್ಯಃ' ಎಂದೇಕೆ ಒಟ್ಟಿಗೆ ಹೇಳಿಲ್ಲ ? ೩೨೯
ಸೂತ್ರದಲ್ಲಿರುವ ಲಿಂಗಪದದ ವ್ಯಾಖ್ಯಾನ ೩೩೦
ಭಾಷ್ಯಕಾರರ ಅಭಿಪ್ರಾಯ ೩೩೦
ಅರಶ್ಚ ಇತ್ಯಾದಿ ಭಾಷ್ಯದ ವ್ಯಾಖ್ಯಾನ ೩೩೧
'ಲಿಂಗಂ ಚ' ಇತ್ಯಾದಿ ಭಾಷ್ಯಕ್ಕೆ ಟೀಕೆಯ ವ್ಯಾಖ್ಯಾನ ೩೩೧
ಟೀಕೆಯಲ್ಲಿರುವ ಕೆಲವು ಕಠಿಣಪದಗಳ ಅರ್ಥ ೩೩೧
'ಧೃತೇಶ್ಚ ಮಹಿಮ್ನೋಽಸ್ಯಾಸ್ಮಿನ್ನುಪಲಬ್ಧೇಃ' ಇತ್ಯಾದಿ ಸೂತ್ರದ ವ್ಯಾಖ್ಯಾನ ೩೩೪
ಮಹಾವಿಷ್ಣುವೇ ಸಕಲಕ್ಕೂ ಧಾರಕ ೩೩೫
ಶ್ರೀಹರಿಯ ಮಹಿಮೆ ಛಾಂದೋಗ್ಯದಂತೆ ಬೃಹದಾರಣ್ಯಕದಲ್ಲೂ ಇದೆ ೩೩೫
ಸರ್ವಾಧಾರತ್ವವು ವಿಷ್ಣುತ್ವ ನಿಶ್ಚಾಯಕ ೩೩೬

ಸರ್ವೇಶ್ವರತ್ವಾದಿ ಮಹಿಮೆಗಳು ವಿಷ್ಣುತ್ವ ನಿಶ್ಚಾಯಕ ೩೩೬
ಸರ್ವೇಶ್ವರತ್ವಾದಿಗಳು ಇತರರಲ್ಲಿ ಸರ್ವಥಾ ಇರುವುದಿಲ್ಲ ೩೩೭
ಹೃತ್ಪದ್ಮಸ್ಥನು ವಿಷ್ಣುವೇ ಹೊರತು, ದಹರಾಕಾಶವಲ್ಲ ೩೩೮
ದಹರಾಕಾಶದಲ್ಲಿರುವವನು ಸಮಸ್ತ ಜಗದ್ಧಾರಕ ೩೩೮
ಸಕಲ ಜಗದ್ಧಾರಕತ್ವವು ವಿಷ್ಣುವಿನ ಅಸಾಧಾರಣ ಗುಣ ೩೩೮
ಸಮಸ್ತಧಾರಕತ್ವಗುಣ ಮಹಾವಿಷ್ಣುವಿನಲ್ಲಿ ಮಾತ್ರ ೩೩೯
ಭಾಷ್ಯಕಾರರು ಶ್ರುತಿಯ ವಾಕ್ಯವನ್ನೇಕೆ ವ್ಯತ್ಯಾಸ ಮಾಡುವರು ? ೩೪೦
ದಹರಾಕಾಶಸ್ಯ ವಿಷ್ಣುವೆಂದು ಬೃಹದಾರಣ್ಯಕ ೩೪೧
ಲಕ್ಷ್ಮೀಧಾರಕನೂ ಕೂಡ ಮಹಾವಿಷ್ಣುವೇ ೩೪೧

ತತ್ತ್ವಪ್ರಕಾಶಿಕಾ

ಹೃತ್ಪದ್ಮಸ್ಥನು ವಿಷ್ಣುವೆನ್ನಲು ಮತ್ತೊಂದು ಹೇತು ೩೪೨
ಭೂಲೋಕಾದಿಗಳನ್ನು ಧರಿಸಿದವನು ಹೃತ್ಪದ್ಮಸ್ಥನು ೩೪೩
ಸಂಪ್ರದಾಯಜ್ಞಾನಿಗಳ ಅಭಿಪ್ರಾಯ ೩೪೩
'ಏಷ ಸೇತುಃ ವಿಧೃತಿಃ' ಎಂಬ ಸೂತ್ರದ ವ್ಯಾಖ್ಯಾನ ೩೪೩
ಸಮಾಖ್ಯಾಶ್ರುತಿಯ ಆಧಾರ ೩೪೪
ಬೃಹದಾರಣ್ಯಕೋಪನಿಷತ್ತಿನಲ್ಲಿ ಹೇಳಲ್ಪಟ್ಟ ಸರ್ವಾಶ್ರಯತ್ವ ೩೪೪
ಸಮಾಖ್ಯಾಶ್ರುತಿಯಷ್ಟೇ ಕಾರಣವಲ್ಲ ೩೪೪
ಸರ್ವಾಧಾರತ್ವವು ವಿಷ್ಣುವಿನ ಅಸಾಧಾರಣಧರ್ಮ ೩೪೫
ಅನೇಕ ಶ್ರುತಿವಾಕ್ಯಗಳು ವಿವಕ್ಷಿತ ೩೪೫
ಸರ್ವೇಶ್ವರತ್ವಾದಿ ಮಹಿಮೆಗಳೆಲ್ಲವೂ ಹೇಗೆ ವಿಷ್ಣುತ್ವ ನಿಶ್ಚಾಯಕ ? ೩೪೫
ಇತರರಲ್ಲಿ ಇಂಥ ಮಹಿಮೆ ಸರ್ವಥಾ ಇರುವುದಿಲ್ಲ ೩೪೬

ಭಾವದೀಪ

'ಧೃತೇಶ್ಚ' ಎಂಬ ಸೂತ್ರದ ಭಾಗದ ವ್ಯಾಖ್ಯಾನ ೩೪೬
'ಅಸ್ಮಿನ್‌ಬ್ರಹ್ಮಪುರೇ' ಎಂದು ಹೇಳದೇ 'ಏತಸ್ಮಿನ್' ಎಂದೇಕೆ ಹೇಳಿದರು ? ೩೪೭
ಟೀಕಾಕೃತ್ಪಾದರು ತತ್ತ್ವಪ್ರದೀಪವನ್ನು ಉಲ್ಲೇಖಿಸಿದ್ದಕ್ಕೆ ದಾಖಲೆ ೩೪೭
ಛಾಂದೋಗ್ಯೋಪನಿಷತ್ತಿನ ವಾಕ್ಯಶೇಷವು ಗ್ರಾಹ್ಯ ೩೪೮
ಟೀಕೆಯಲ್ಲಿ ಸಮಗ್ರ ವಿಷಯವಾಕ್ಯ ೩೪೮
'ಇತ್ಯಾದಿ' ಎಂಬುದು ವಿಭಕ್ತಿಯಿಲ್ಲದ ಪದ ೩೪೯
ಆಕಾಶಪದಕ್ಕೆ ಚಿತ್‌ಪ್ರಕೃತಿ ಎಂದರ್ಥ ೩೪೯
ಆತ್ಮ ಹಾಗೂ ಈಶ್ವರ ಎಂಬೆರಡು ಪದಗಳಿಗೆ ವೈಯರ್ಥ್ಯವಿಲ್ಲ ೩೫೦

ಬ್ರಹ್ಮಸೂತ್ರ

'ಪ್ರಸಿದ್ಧೇಶ್ಚ' ಎಂಬ ಸೂತ್ರವ್ಯಾಖ್ಯಾನ ೩೫೧

ಬ್ರಹ್ಮಸೂತ್ರಭಾಷ್ಯ

ಸುಷಿರಶ್ರುತಿ ವಿರೋಧವಿಲ್ಲ ೩೫೨

ಸತ್ತರ್ಕದೀಪಾವಳಿ

ದಹರಾಕಾಶದಲ್ಲಿರುವ ವಿಷ್ಣುವನ್ನೇ ಉಪಾಸನೆ ಮಾಡಬೇಕು ೩೫೩
'ದಹರಂ ವಿಪಾಪ್ಮಂ' ಎಂಬ ಶ್ರುತಿ ೩೫೩
ಸರ್ವಾಧಾರತ್ವ ಹೇಳುವ ಸುಷಿರಶ್ರುತಿಗೆ ವಿರೋಧವಿಲ್ಲ ೩೫೪

ತತ್ತ್ವಪ್ರದೀಪ
ಮಹಾನಾರಾಯಣೋಪನಿಷತ್ತಿನಲ್ಲಿ ಸ್ಪಷ್ಟವಾದ ವಚನ ೩೫೪
ಲಿಂಗವ್ಯತ್ಯಾಸಕ್ಕೆ ಎರಡು ಕಾರಣ ೩೫೫
ಮಂದಿರೇ ಮಣಿಮಾಲಾನ್ಯಾಯದಿಂದ ವ್ಯಾಖ್ಯಾನಿಸಬೇಕು ೩೫೬
ತತ್ತ್ವಪ್ರಕಾಶಿಕಾ
ಹೃತ್ಪದ್ಮಸ್ಥನಾದವನು ವಿಷ್ಣುವೆನ್ನಲು ಮತ್ತೊಂದು ಯುಕ್ತಿ ೩೫೮
ವಿಷ್ಣುವು ಹೃತ್ಪದ್ಮಸ್ಥನಾಗಿದ್ದಾನೆಂಬುದು ಪ್ರಸಿದ್ಧವಾಗಿದೆ ೩೫೮
ಸುಷಿರಶ್ರುತಿ ವಿರೋಧವು ಇರುವುದಿಲ್ಲ ೩೫೮
ಶ್ರುತ್ಯರ್ಥ ೩೫೯
'ದಿವ್ಯೇ ಬ್ರಹ್ಮಪುರೇ' ಎಂಬ ಶ್ರುತಿಯು ಇದನ್ನು ಹೇಳಿದೆ ೩೫೯
ಮುಂದಿನ ಶ್ರುತಿಗೆ ಅನ್ವಯವಿಲ್ಲವಲ್ಲ? ೩೫೯
ಹೃತ್ಪದ್ಮದಲ್ಲಿರುವ ಬ್ರಹ್ಮನನ್ನು ಅನ್ವೇಷಣೆ ಮಾಡಬೇಕು ೩೫೯
'ಕಂ ತದತ್ರ ವಿದ್ಯತೇ' ? ೩೬೦
ಬ್ರಹ್ಮನ ಹೃದಯಾಕಾಶದಲ್ಲಿ ಬಾಹ್ಯಾಕಾಶವು ವ್ಯಾಪ್ತವಾಗಿದೆ ೩೬೦
ದೇಹವು ನಾಶವಾದರೂ ಅಂತರ್ಯಾಮಿಯು ನಾಶವಾಗಲಾರ ೩೬೦
ಅಪಹತಪಾಪ್ಮತ್ವಾದಿ ಗುಣಗಳುಳ್ಳವನು ಅಂತರ್ಯಾಮಿ ೩೬೧
'ಬ್ರಹ್ಮಪುರ' ಎಂದರೆ ಮಹಾವಿಷ್ಣು ೩೬೧
'ವಿತತ್'ಶಬ್ದದಿಂದ ಶರೀರವು ಪ್ರಕೃತವಲ್ಲ ೩೬೨
ದಹರಾಕಾಶದಲ್ಲಿ ಭೂತಾಕಾಶವಿರಲು ಸಾಧ್ಯವೇ ? ೩೬೨
ದಹರಾಕಾಶಕ್ಕೆ ಪೃಥಿವ್ಯಾದ್ಯಕಾಶ್ರಯತ್ವವು ಸರ್ವಥಾ ಕೂಡುವುದಿಲ್ಲ ೩೬೨
ವಿಷ್ಣುವಿಗೆ ಸರ್ವಾಧಾರತ್ವ ಹೇಳಿದಾಗ ಯಾವುದೇ ವಿರೋಧವಿಲ್ಲ ೩೬೩
'ಮಂದಿರೇ ಮಣಿಮಾಲಾ' ನ್ಯಾಯದಂತೆ ವಿವಕ್ಷಿಸಬೇಕು ೩೬೩
ಭಾವದೀಪ
'ತತ್ರಾಪಿ' ಇತ್ಯಾದಿ ಭಾಷ್ಯದ ವ್ಯಾಖ್ಯಾನ ೩೬೪
'ನ ಸುಷಿರಶ್ರುತಿವಿರೋಧಃ' ಎಂಬ ಭಾಷ್ಯಕ್ಕೆ ವ್ಯಾಖ್ಯಾನ ೩೬೪
'ಆಕಾಶಸ್ತಲ್ಲಿಂಗಾತ್' ಎಂಬ ಸೂತ್ರದಲ್ಲಿ ಹೇಳಿದ ನ್ಯಾಯವು ವಿವಕ್ಷಿತ ೩೬೪
ಸೂತ್ರದ ಅಭಿಪ್ರಾಯವೇನು ? ೩೬೫
ದಹರಾಕಾಶಶ್ಚತ್ವವನ್ನು ಪ್ರತಿಪಾದಿಸುವ ಎಲ್ಲಾ ಶ್ರುತಿಗಳ ಸಮನ್ವಯ ೩೬೫
ಅನೇಕ ಕಡೆ ಇರುವ ಶ್ರುತಿಗಳು ೩೬೬
ಅನ್ವಯಾಭಾವಾದಿ ದೋಷಗಳಿಗೆ ದೋಷವಿಲ್ಲ ೩೬೬
'ಪುಂಡರೀಕಂ ವೇಶ್ಮ' ಎಂಬುದರ ವ್ಯಾಖ್ಯಾನ ೩೬೭
'ತಸ್ಮಾಂತರ್ಹೃದಯೇ' ಎಂಬುದರ ವ್ಯಾಖ್ಯಾನ ೩೬೭
'ಉಭೇ ಅಸ್ಮಿನ್' ಇತ್ಯಾದಿ ಶ್ರುತಿಯ ವ್ಯಾಖ್ಯಾನ ೩೬೭
ಛಾಂದೋಗ್ಯೋಪನಿಷತ್ತಿನಲ್ಲಿ ಹೇಳಿದ ಭಾಷ್ಯಾಂತರ ೩೬೮
'ಸಂಗಮ್ಯಂತೇ ಗುರೋರ್ಗಿರಃ' ಎಂಬುದಕ್ಕೆ ಉದಾಹರಣೆ ೩೬೮
ಬ್ರಹ್ಮನ ಪಟ್ಟಾವಾದ ಮಾತ್ರಕ್ಕೆ ಬ್ರಹ್ಮನಿರಬೇಕಾಗಿಲ್ಲ ೩೬೯
ಹೃದಯಪದದ ನಿಷ್ಪತ್ತಿ ೩೬೯

ಛಾಂದೋಗ್ಯಭಾಷ್ಯಕ್ಕೆ ಅನುಸಾರಿಯಾದ ವ್ಯಾಖ್ಯಾನ ೩೬೯
ಬ್ರಹ್ಮಪುರ ಶಬ್ದಕ್ಕೂ ಛಾಂದೋಗ್ಯಭಾಷ್ಯದಲ್ಲಿ ಹೇಳಿದ ವ್ಯಾಖ್ಯಾನ ೩೭೦
'ಏತತ್' ಶಬ್ದದಿಂದ ವಿಷ್ಣುವನ್ನೇ ವಿವಕ್ಷಿಸಬೇಕು ೩೭೦
ಅದೃಶ್ಯತ್ವಾದ್ಯಧಿಕರಣದಂತೆ ವ್ಯಾಖ್ಯಾನ ೩೭೦
ಬ್ರಹ್ಮಪುರ ಪದದಿಂದ ವಿಷ್ಣುವೇ ಪ್ರಕೃತ ೩೭೧
ವಿಷ್ಣುವೇ ಬ್ರಹ್ಮಪುರ ಎನ್ನಲು ಏನು ನಿರ್ಬಂಧ ? ೩೭೧
ಅನೇಕ ವಿಕಲ್ಪಗಳ ನಿರಾಕರಣೆ ೩೭೨
ಭೂತಾಕಾಶದಲ್ಲಿ ಅನ್ವೇಷಣವು ಅಯುಕ್ತ ೩೭೨
ಹೃದಯಾಕಾಶವು ವ್ಯಾಪ್ತವಾಗುವುದಿಲ್ಲ ೩೭೩
ದ್ಯಾವಾಪೃಥಿವ್ಯಾದಿಗಳಿಗೆ ಜಿಜ್ಞಾಸ್ಯತ್ವವೇ ಅಯುಕ್ತ ೩೭೩
ಮುಖ್ಯವಾದ ಜಿಜ್ಞಾಸ್ಯತ್ವ ಬ್ರಹ್ಮನಲ್ಲಿ ಮಾತ್ರ ೩೭೩
ಭಾಷ್ಯದಲ್ಲಿ ಅಪೇಕ್ಷಿತವಾದ ಪದಗಳ ಪೂರಣೆ ೩೭೪

ಬ್ರಹ್ಮಸೂತ್ರ

'ಇತರಪರಾಮರ್ಶಾತ್ಸ ಇತಿ ಚೇನ್ನಾಸಂಭವಾತ್' ಎಂಬ ಸೂತ್ರ ವ್ಯಾಖ್ಯಾನ ೩೭೪

ಬ್ರಹ್ಮಸೂತ್ರಭಾಷ್ಯ

ಹೃದಯಕಮಲದಲ್ಲಿರುವ ಆತ್ಮನು ಜೀವನಲ್ಲ ೩೭೫
ಜೀವನಲ್ಲಿ ಅಪಹತಪಾಪಾತ್ಮವು ಸ್ವತಂತ್ರವಾಗಿಲ್ಲ ೩೭೬
ದಹರಾಕಾಶಸ್ಥನಾದವನು ಜೀವನಲ್ಲವೇ ? ೩೭೭
ಅಪಹತಪಾಪ್ಮತ್ವವಿಲ್ಲದ ಜೀವನಲ್ಲಿ ಅಸಂಭಾವಿತ ೩೭೭
ಮುಕ್ತಜೀವನನ್ನು ಪರಾಮರ್ಶಿಸಲಾಗದು ೩೭೭
ಶ್ರುತಿಗೆ ಅಮುಖ್ಯಾರ್ಥವನ್ನು ಸ್ವೀಕರಿಸಿದಂತಾಗುತ್ತದೆ ೩೭೮
ಶ್ರುತಿಯಲ್ಲಿರುವ 'ಏತತ್' ಪದದಿಂದ ಪರಮಾತ್ಮನನ್ನೇ ಪರಾಮರ್ಶಿಸಬೇಕು ೩೭೮

ತತ್ತ್ವಪ್ರಕಾಶಿಕಾ

ಹೃದ್ಗತ್ವವೆಂಬ ಲಿಂಗದ ಆಕ್ಷೇಪ ೩೭೯
ಹೃದಯಪದ್ಮಸ್ಥನು ಜೀವನೆಂಬ ಆಕ್ಷೇಪ ೩೭೯
ಜೀವನಲ್ಲಿ ಅಸಂಭಾವಿತವಾದ ಧರ್ಮಗಳು ೩೭೯
ಮುಕ್ತಜೀವನಲ್ಲಿಯೂ ಕೂಡ ಅಸಂಭಾವಿತ ೩೮೦
ಹೃದ್ಗತ್ವನಾದವನು ಶ್ರೀಹರಿ ಮಾತ್ರ ೩೮೦

ಭಾವದೀಪ

ಯಾರನ್ನು ಪರಾಮರ್ಶಿಸ ಬೇಕು ? ೩೮೧
ಪ್ರತಿಜ್ಞೆಯೊಂದಿಗೆ ಅನ್ವಯ ೩೮೧
ನಿರಪೇಕ್ಷವಾದ ಅರ್ಥವೇ ಗ್ರಾಹ್ಯ ೩೮೨

ಬ್ರಹ್ಮಸೂತ್ರ

'ಉತ್ತರಾಚ್ಚೇದಾವಿರ್ಭೂತಸ್ವರೂಪಸ್ತು' ಎಂಬ ಸೂತ್ರ ವ್ಯಾಖ್ಯಾನ ೩೮೨
ಸ್ವೇಚ್ಛೆಯಿಂದ ವಿಹರಿಸುವ ಜೀವನೇಕೆ ಹೃದ್ಗತ್ವನಾಗಬಾರದು ? ೩೮೩
ಸತ್ಯಕಾಮತ್ವ, ಪಾಪಾದ್ಯಲೇಪ ಧರ್ಮಗಳು ಜೀವನಲ್ಲಿಲ್ಲ ೩೮೩
ಜೀವನು ಪರಮಾತ್ಮನ ಅಧೀನ ೩೮೪

ತತ್ವಪ್ರಕಾಶಿಕಾ
ಸೂತ್ರದಲ್ಲಿರುವ ಆಕ್ಷೇಪ ಭಾಗದ ವ್ಯಾಖ್ಯಾನ ೩೮೪
ಸತ್ಯಕಾಮತ್ವಾದಿಗಳೂ ಕೂಡ ಜೀವನಲ್ಲಿ ಬರುತ್ತದಲ್ಲವೇ ? ೩೮೫
ಮುಕ್ತರಾದ ಜೀವರು ಪ್ರತಿಪಾದ್ಯರೆಂದು ಆಕ್ಷೇಪ ೩೮೫
ಮುಕ್ತಧರ್ಮವು ಹೃದಯದಲ್ಲಿರುವ ಜೀವನಲ್ಲಿಲ್ಲ ೩೮೬
ಭಾವಿಭಾವಾಭಿಪ್ರಾಯದಿಂದೇಕೆ ಕೂಡಿಸಬಾರದು ? ೩೮೬
ಸ್ವತಂತ್ರವಾದ ಗುಣಗಳು ಜೀವನಲ್ಲಿ ಸರ್ವಥಾ ಇಲ್ಲ ೩೮೬
ಸ್ವತಂತ್ರವಾಗಿ ಸತ್ಯಕಾಮತ್ವಾದಿಗಳು ಇರಬಹುದಲ್ಲವೇ ? ೩೮೭
ಪರಮಾತ್ಮನೊಬ್ಬನೇ ಅಪಹತಪಾಪ್ಮತ್ವಾದಿ ಗುಣಗಳುಳ್ಳವನು ೩೮೭
ದಾತೃಪ್ರತಿಗ್ರಹೀತೃಗಳಲ್ಲಿ ದಾತೃವೇ ಪ್ರಧಾನ ೩೮೮
ಭಾವದೀಪ
ಟೀಕೆಯಲ್ಲಿರುವ ಕೆಲವು ಕಠಿಣ ಪದಗಳ ಅರ್ಥ ೩೮೮
ಬ್ರಹ್ಮಸೂತ್ರ
'ಅನ್ಯಾರ್ಥಶ್ಚಪರಾಮರ್ಶಃ' ಎಂಬ ಸೂತ್ರ ವ್ಯಾಖ್ಯಾನ ೩೮೯
ಬ್ರಹ್ಮಸೂತ್ರಭಾಷ್ಯ
'ಏಷ ಆತ್ಮಾ' ಎಂಬ ಶ್ರುತಿ ಪರಮಾತ್ಮಪರ ೩೮೯
ತತ್ವಪ್ರದೀಪ
ಜೀವನೂ ಕೂಡ ದಹರಾಕಾಶಸ್ಥನಲ್ಲ ೩೯೦
ಪರ್ಯಂಕೋಪಾಸನೆಯಲ್ಲಿ ಜೀವಪಕ್ಷ ನಿರಾಕರಣೆ ೩೯೦
ತತ್ವಪ್ರಕಾಶಿಕಾ
ಅಪಹತಪಾಪ್ಮತ್ವಾದಿಗಳು ಅಮುಖ್ಯವಲ್ಲವೇ? ೩೯೨
ಆತ್ಮತ್ವವು ಪರಮಾತ್ಮನಲ್ಲಿ ಮಾತ್ರ ೩೯೨
ಜೀವನಲ್ಲಿ ಅಪಹತಪಾಪ್ಮತ್ವವು ಅಸಂಭಾವಿತ ೩೯೩
ನಿರವಕಾಶವಾದ ವಿಷ್ಣುಲಿಂಗಗಳು ೩೯೩
ಭಾವದೀಪ
'ಏಷ ಇತಿ' ಎಂಬ ಟೀಕೆಯ ವ್ಯಾಖ್ಯಾನ ೩೯೪
ಬ್ರಹ್ಮಸೂತ್ರ
ವ್ಯಾಪ್ತನಾದ ಪರಮಾತ್ಮನಿಗೆ ಅಣುರೂಪ ಅಚಿಂತ್ಯಾದ್ಭುತ ೩೯೫
ಬ್ರಹ್ಮಸೂತ್ರಭಾಷ್ಯ
ಪರಮಾತ್ಮನು ಹೃದಯಸ್ಥನಲ್ಲವೆಂದು ಪೂರ್ವಪಕ್ಷ ೩೯೫
ವ್ಯಾಪ್ತನಾದ್ದರಿಂದ ಹೃದಯಸ್ಥನೂ ಹೌದು ೩೯೬
ಆಕಾಶದ ದೃಷ್ಟಾಂತ ಹೇಗೆ ? ೩೯೬
ತತ್ವಪ್ರದೀಪ
ದಹರಾಕಾಶಸ್ಥನಾದವನು ಮಹಾವಿಷ್ಣುವೆಂದು ಸಿದ್ಧವಾಯಿತು ೩೯೭
ತತ್ವಪ್ರಕಾಶಿಕಾ
ಸೂತ್ರದಲ್ಲಿರುವ ಆಕ್ಷೇಪಭಾಗದ ವ್ಯಾಖ್ಯಾನ ೩೯೮
ಹಿಂದಿನ ಸೂತ್ರದ ಪ್ರಮೇಯ ೩೯೮

ಹಿಂದಿನ ಸೂತ್ರದಲ್ಲಿ ಹೇಳಿದ್ದು ತಪ್ಪು ೩೯೯
ಸೂತ್ರದಲ್ಲಿರುವ ಪರಿಹಾರ ಭಾಗದ ವ್ಯಾಖ್ಯಾನ ೩೯೯
ಎಲ್ಲೆಡೆ ಇರುವವನು ಅಲ್ಪದೇಶದಲ್ಲೂ ಇರುತ್ತಾನೆ ೩೯೯
ಅಂಶದಿಂದಲೂ ವಿಷ್ಣು ಸರ್ವಗತ ೪೦೦
ಮತ್ತೊಂದು ಪ್ರಕಾರದಿಂದ ಪರಿಹಾರಭಾಗದ ವ್ಯಾಖ್ಯಾನ ೪೦೦
ಹೃದಯಸ್ಥನೆನ್ನಲು ಶ್ರುತಿಯ ಆಧಾರ ೪೦೦
ಹೃದಯದಲ್ಲಿರುವವನೇ ಸಕಲಪದಾರ್ಥಧಾರಕ ೪೦೧
ಭಾವದೀಪ
'ವ್ಯೋಮವತ್' ಎಂಬ ಸೂತ್ರದಿಂದ ಪುನರುಕ್ತಿ ಪರಿಹಾರ ೪೦೨
'ಯಾವಾನ್ವಾ' ಎಂಬ ಶ್ರುತ್ಯರ್ಥ ೪೦೨
'ಜ್ಯಾಯಾನ್' ಎಂಬುದರ ನಿಷ್ಪತ್ತಿ ೪೦೨
ವಿರುದ್ಧ ಧರ್ಮಗಳಿಗೆ ದೋಷವಿಲ್ಲ ೪೦೩
ಸಕಲ ಸೂತ್ರಾರ್ಥಗಳ ಫಲ ೪೦೩
ಚಂದ್ರಿಕೆಯನ್ನು ತಿಳಿದವರಿಗೆ ಏನು ಕಷ್ಟ? ೪೦೪
ಸತ್‌ಪದದ ಅನುವೃತ್ತಿ ೪೦೫
'ದಹರೇ ಉತ್ತರೇಭ್ಯಃ' ಎಂಬ ಸೂತ್ರದ ಅರ್ಥ ೪೦೫
'ತತ್ತು' ಎಂಬದೂ ಅನುವೃತ್ತ ೪೦೬
ಹೃತ್ಪದ್ಮಸ್ಥನಲ್ಲಿ ಸುಪ್ತಪ್ರಾಪ್ಯತ್ವ ಹಾಗೂ ಬ್ರಹ್ಮಶಬ್ದವಾಚ್ಯತ್ವ ೪೦೬
'ಹಿ' ಶಬ್ದದಿಂದ ವಿಷ್ಣುವಿನಲ್ಲೇ ಪ್ರಸಿದ್ಧಿ ೪೦೭
ಸುಧಾಸಮುದ್ರಾಶ್ರಯತ್ವ ೪೦೮
ಹೃತ್ಪದ್ಮಸ್ಥನಲ್ಲಿ ಮಾತ್ರ ಈ ಲಿಂಗ ೪೦೮
ಇದು ಪರಂಪರೆಯಿಂದ ವಿಷ್ಣುತ್ವ ಸಾಧಕ ೪೦೮
'ಧೃತೇಶ್ಚ' ಇತ್ಯಾದಿ ಸೂತ್ರದ ಅರ್ಥ ೪೦೯
ಆತ್ಮನನ್ನು ಪರಾಮರ್ಶಿಸಬೇಕು ೪೧೦
ಸೂತ್ರಕ್ಕೆ ಮತ್ತೊಂದು ಅರ್ಥ ೪೧೦
ಸಾಮಾಖ್ಯಾ ಪ್ರಮಾಣದ ಆಧಾರ ೪೧೧
'ಪ್ರಸಿದ್ಧೇಶ್ಚ' ಎಂಬ ಸೂತ್ರದ ಅರ್ಥ ೪೧೧
ಹಿಂದಿನ ಆಕ್ಷೇಪ ಪರಿಹಾರಕ್ಕಾಗಿ 'ಇತರ' ಇತ್ಯಾದಿ ಸೂತ್ರ ೪೧೨
ಅಸಂಭವ ಪರಿಹಾರಕ್ಕಾಗಿ 'ಉತ್ತರಾತ್' ಇತ್ಯಾದಿ ಸೂತ್ರ ೪೧೩
'ಉತ್ತರಾತ್' ಎಂಬುದು ಸಾಧು ೪೧೪
'ಏಷಃ' ಎಂಬ ಪುಲ್ಲಿಂಗ ಪ್ರಯೋಗದ ಸಮರ್ಥನೆ ೪೧೪
'ಅಲ್ಪಶ್ರುತೇಃ' ಇತ್ಯಾದಿ ಸೂತ್ರದ ಅರ್ಥ ೪೧೫
ಅಚಿಂತ್ಯಶಕ್ತಿಯಿಂದ ವಿರೋಧ ಪರಿಹಾರ ೪೧೫
ಅದ್ವೈತಮತ ಹಾಗೂ ರಾಮಾನುಜಮತದಲ್ಲಿ ದಹರಾಧಿಕರಣ ೪೧೬

ಅನುಕೃತ್ಯಧಿಕರಣ

ಬ್ರಹ್ಮಸೂತ್ರ

'ಅನುಕೃತೇಸ್ತಸ್ಯ ಚ' ಎಂಬ ಸೂತ್ರದ ವ್ಯಾಖ್ಯಾನ ೪೨೮

ಬ್ರಹ್ಮಸೂತ್ರಭಾಷ್ಯ

ಜ್ಞಾನಿಗಳ ಸುಖದಲ್ಲಿ ಅನುಕೂಲ್ಯೇಣ ಗೃಹ್ಯಮಾಣತ್ವವಿದೆ ಎಂದು ಪೂರ್ವಪಕ್ಷ ೪೨೯

ಅನುಕೂಲ್ಯೇನ ಗೃಹ್ಯಮಾಣನಾದವನು ಪರಮಾತ್ಮನೇ ೪೩೦

ಜಗತ್ತಿನ ಬೆಳಕು ಜ್ಞಾನಿಸುಖದಿಂದಲ್ಲ ೪೩೧

ಅಪಿಶಬ್ದದಿಂದ ವಿವಕ್ಷಿಸಬೇಕಾದ ಶ್ರುತಿ ೪೩೧

ಸತರ್ಕದೀಪಾವಳಿ

'ಅದೃಶ್ಯತ್ವಾದಿ' ಇತ್ಯಾದಿ ಭಾಷ್ಯದ ವ್ಯಾಖ್ಯಾನ ೪೩೨

ಅನಿರ್ದೇಶ್ಯಸುಖಸ್ವರೂಪನು ಪರಮಾತ್ಮನೇ ? ೪೩೩

ತತ್ತ್ವಪ್ರದೀಪ

ಅಧಿಕರಣದ ಪೂರ್ವಪಕ್ಷಾದಿಗಳು ೪೩೪

ಅನುಭಾನಾತ್' ಎಂದೇಕೆ ಶ್ರುತಿಯಲ್ಲಿ ಹೇಳಿಲ್ಲ ? ೪೩೭

'ಅನುಕೃತೇಃ' ಎಂಬ ಶಬ್ದಪ್ರಯೋಗದ ಸ್ವಾರಸ್ಯ ೪೩೮

ತತ್ತ್ವಪ್ರಕಾಶಿಕಾ

ಅನುಕೂಲ್ಯೇನ ಗೃಹ್ಯಮಾಣತ್ವ ಲಿಂಗದ ಸಮನ್ವಯಕ್ಕಾಗಿ ಅನುಕೃತ್ಯಧಿಕರಣ ೪೪೦

ಅದೃಶ್ಯತ್ವ, ಅಜ್ಞೇಯತ್ವಗಳು ಯಾರಲ್ಲಿವೆ ? ೪೪೦

ಜ್ಞಾನಿಸುಖದಲ್ಲಿ ಅದೃಶ್ಯತ್ವಾದಿಗಳು ಇದೆಯೇ ? ೪೪೧

'ಅನುಕೂಲ್ಯೇನ ಗೃಹ್ಯಮಾಣತ್ವ' ಎಂಬುದರ ಅರ್ಥ ೪೪೧

ಅನುಕೂಲ್ಯೇಣ ಗೃಹ್ಯಮಾಣತ್ವವಿದ್ದಲ್ಲೇ ಅಜ್ಞೇಯತ್ವಾದಿಗಳು ೪೪೧

ಅನುಕೂಲ್ಯೇಣ ಗೃಹ್ಯಮಾಣತ್ವಲಿಂಗಕ್ಕೆ ಉಭಯತ್ರಪ್ರಸಿದ್ಧತ್ವ ೪೪೧

ಜ್ಞಾನಿಸುಖವು ಪ್ರಕೃತವಲ್ಲವೇ ? ೪೪೨

ನಪುಂಸಕಲಿಂಗದ ಸುಖಶಬ್ದದಿಂದ ಯಾರನ್ನು ಪರಾಮರ್ಶಿಸಬೇಕು ? ೪೪೨

ನಪುಂಸಕಲಿಂಗದಲ್ಲಿರುವ ಜ್ಞಾನಿಸುಖವನ್ನೇ ಪರಾಮರ್ಶಿಸಬೇಕೆಂದು ಪೂರ್ವಪಕ್ಷ ೪೪೩

ವಿಷ್ಣುವೇ ಅನುಕೂಲ್ಯೇನ ಗೃಹ್ಯಮಾಣನೆಂದು ಸಿದ್ಧಾಂತ ೪೪೩

'ಪರಮಂ ಸುಖಮ್' ಎಂಬುದರಿಂದಲೂ ವಿಷ್ಣುವೇ ಪ್ರತಿಪಾದ್ಯ ೪೪೪

ಪರಮಾತ್ಮನು ಅಪ್ರಕೃತನಲ್ಲವೇ ? ೪೪೪

ಪರಮಾತ್ಮನೇ ಪರಮಸುಖವೆನ್ನಲು ವಾಕ್ಯ ಯೋಜನೆ ೪೪೪

ದೂರಸ್ಥನಾದ ಪರಮಾತ್ಮನನ್ನೇಕೆ ಪರಾಮರ್ಶಿಸಬೇಕು ? ೪೪೫

'ತಮೇವ ಭಾಂತಮ್ ಅನುಭಾತಿ ಸರ್ವಮ್' ಎಂಬ ವಾಕ್ಯಶೇಷದ ಬೆಂಬಲ ೪೪೫

ಸಮೀಪದಲ್ಲಿರುವುದನ್ನು ಪರಿತ್ಯಾಗ ಮಾಡಲು ಕಾರಣ ೪೪೫

ಜ್ಞಾನಿಸುಖವನ್ನೇಕೆ ಪರಿತ್ಯಾಗ ಮಾಡುವಿರಿ ? ೪೪೬

ಜ್ಞಾನಿಸುಖದಲ್ಲಿ ಸರ್ವಜಗತ್‌ಪ್ರಕಾಶಿತತ್ವ ಇಲ್ಲ ೪೪೬

ಅನುಪಪತ್ತಿಯಿದ್ದಾಗ ದೂರಸ್ಥವಾದ್ದನ್ನು ಪರಾಮರ್ಶಿಸಬಹುದು ೪೪೭

ವ್ಯಪಹಿತಾನ್ವಯಕ್ಕೆ ಆಧಾರ ೪೪೭
ಸೂರ್ಯಾದಿಗಳ ತೇಜಸ್ಸು ಭಗವದಧೀನ ೪೪೭
ಭಾವದೀಪ
ನ್ಯಾಯವಿವರಣದ ಜೊತೆ ಭಾಷ್ಯದ ಅಧ್ಯಯನ ೪೪೮
ಜ್ಞಾನಿಜನರಿಗೆ ನಿರುಪಾಧಿಕ ಇಷ್ಟನೇ ಇಲ್ಲಿ ಪ್ರತಿಪಾದ್ಯ ೪೪೮
ಅನುಕೂಲವೇದನೀಯತ್ವವು ಉಭಯಸಾಕಾರ ೪೪೯
ಉಭಯತ್ರಪ್ರಸಿದ್ಧನೆನ್ನಲು ಕಾರಣ ೪೪೯
ಸಂಗತಿಪರ ಭಾಷ್ಯಕ್ಕೆ ವ್ಯಾಖ್ಯಾನ ೪೫೦
ಪೂರ್ವಪಕ್ಷದ ಸಮರ್ಥನೆ ೪೫೦
ನ್ಯಾಯವಿವರಣದಿಂದ ವಿರೋಧ ಪರಿಹಾರ ೪೫೦
ವಿಜಾನೀಯಾಮ್ ಎಂಬ ಲಿಜ್ ಪ್ರಯೋಗದ ಬಗ್ಗೆ ೪೫೧
ಅನಿರ್ದೇಶ್ಯತ್ವ ಹಾಗೂ ಅಜ್ಞೇಯತ್ವಗಳು ಜ್ಞಾನಿಸುಖದಲ್ಲಿ ಹೇಳಲ್ಪಟ್ಟಿದೆ ೪೫೫
ಅನುಕೂಲ್ಯೇನ ಗೃಹಮಾಣಸ್ಯ ಎಂಬುದನ್ನು ಅನುಷಂಗ ಮಾಡಬೇಕು ೪೫೫
'ಕಥಂ ನು ತತ್' ಎಂಬಲ್ಲಿ ತತ್ ಶಬ್ದದಿಂದ ಪರಾಮರ್ಶಿಸಬೇಕು ೪೫೪
ಜ್ಞಾನಿಸುಖದ ಗ್ರಹಣವೇ ಇಲ್ಲಿ ವಿವಕ್ಷಿತ ೪೫೪
'ಭೂಮಾ ಸಂಪ್ರಸಾದಾತ್' ಇತ್ಯಾದಿ ಸ್ಥಳದಲ್ಲಿ ಹೇಳಿದಂತೆ ವಿವಕ್ಷಿಸಬೇಕು ೪೫೫
'ತತ್' ಎಂಬ ಪ್ರಾತಿಪದಿಕ ಪ್ರತಿಯು ಸಾವಕಾಶವಲ್ಲವೇ? ೪೫೫
ಯಾವುದು ಪ್ರಕೃತ ? ೪೫೬
'ಏಷ ಆತ್ಮಾ' ಎಂಬಲ್ಲಿರುವ ಏತತ್ ಶಬ್ದದಿಂದ ಮಾಡಬೇಕಾದ ಪರಾಮರ್ಶ ೪೫೬
ವ್ಯಪಹಿತವಾದ ಪುಂಡರೀಕವನ್ನೇಕೆ ಪರಾಮರ್ಶಿಸಿಲ್ಲ ? ೪೫೬
'ಆಕಾಶಾ ಚ' ಎಂಬುದರಿಂದ ಭಾಷ್ಯದ ಯೋಜನೆ ೪೫೭
ಸುಪ್ತಿಶ್ರುತಿಯು ಸಾವಕಾಶ ೪೫೭
ಶಾಶ್ವತವಾದ ಸುಪ್ತಿ ಯಾವುದು ? ೪೫೮
ಅನಿರ್ದೇಶ್ಯತ್ವವು ಯಾರಲ್ಲಿದೆ ? ೪೫೮
ಬ್ರಹ್ಮನ ರೂಪವು ನಪುಂಸಕಲಿಂಗದಿಂದ ವಿವಕ್ಷಿತವಲ್ಲವೇ ? ೪೫೮
'ಏಕೋ ದೇವಃ' ಎಂಬಲ್ಲಿ ಪ್ರಸಕ್ತನಾದ ವಿಷ್ಣು ದೂರ ಅಲ್ಲವೇ ? ೪೫೯
ತತ್ಪ್ರದೀಪದಲ್ಲಿ 'ಅನುಕೃತೇ' ಎಂಬ ಪದದ ಸ್ವಾರಸ್ಯ ೪೬೦
ತಂತ್ರದೀಪಿಕಾದಲ್ಲಿ ಸ್ಪಷ್ಟವಾದ ನಮ್ಮ ವ್ಯಾಖ್ಯಾನ ೪೬೦
'ತಸ್ಯ ಭಾಸಾ' ಇತ್ಯಾದಿ ಶ್ರುತಿಯ ವ್ಯಾಖ್ಯಾನ ೪೬೧
ಸನ್ನಿಧಿಯು ಯೋಗ್ಯತೆಗಿಂತ ಶ್ರೇಷ್ಠ ೪೬೨
'ಪ್ರತೇ' ಎಂಬುದನ್ನು ಶೇಷಪೂರಣ ಮಾಡಬೇಕು ೪೬೨
'ನಾರಾಯಣಪುರುಷ' ಎಂಬ ವಾಕ್ಯಶೇಷದಿಂದ ನಾರಾಯಣನೇ ಪ್ರತಿಪಾದ್ಯ ೪೬೨
ಬ್ರಹ್ಮಸೂತ್ರ
'ಅಪಿ ಸ್ಮರ್ಯತೇ' ಎಂಬ ಸೂತ್ರ ವ್ಯಾಖ್ಯಾನ ೪೬೫
ಬ್ರಹ್ಮಸೂತ್ರಭಾಷ್ಯ
ಸಕಲ ಜಗತ್ಪ್ರಕಾಶಕ ಶ್ರೀಹರಿಯೇ ಎನ್ನಲು ಗೀತೆಯ ಆಧಾರ ೪೬೪
ಅನಿರ್ದೇಶ್ಯತ್ವಾದಿಗಳೂ ವಿಷ್ಣುಮಾತ್ರ ನಿಷ್ಠ ೪೬೫

ತತ್ವಪ್ರದೀಪ
'ಮಾಮಕಂ' ಎಂಬುದರ ವ್ಯಾಖ್ಯಾನ ೪೬೬
ತತ್ವಪ್ರಕಾಶಿಕಾ
'ಸೂರ್ಯಾದಿತೇಜೋನಿಯಾಮಕತ್ವ', 'ಜಗತ್ ಭಾಸಕತ್ವ' ಎಂಬೆರಡು ಲಿಂಗಗಳ ಸಮನ್ವಯ ೪೬೬
ಶ್ರುತಿಯ ಜೊತೆ ಸ್ಮೃತಿಯ ಆಧಾರ ೪೬೭
ಪರಮಾತ್ಮನನ್ನು ಪ್ರಕಾಶಿಸುವ ವಸ್ತುವೇ ಇಲ್ಲ ೪೬೭
ಆದ್ದರಿಂದ ವಿಷ್ಣುವೇ ಇಲ್ಲಿ ಪ್ರತಿಪಾದ್ಯ ೪೭೦
ಧಾಮ ಶಬ್ದಕ್ಕೆ ಸ್ವರೂಪ ಎಂದರ್ಥ ೪೭೦
ಜ್ಞಾನಿಸುಖವನ್ನೇಕೆ ವಿವಕ್ಷಿಸಬಾರದು ? ೪೭೦
ಅನುಕೂಲ್ಯೇನ ಗೃಹಣಮಾಣವಾದ ಸುಖ ಎಂದರೆ ಯಾವುದು ? ೪೭೧
'ಏಕೋ ವಶೀ' ಎಂಬಲ್ಲಿರುವ ಪರಮಾತ್ಮನನ್ನು ಪರಾಮರ್ಶಿಸಲು
ಪೂರ್ವಪಕ್ಷಿಗಳಿಗೇಕೆ ಭಯವಿಲ್ಲ ? ೪೭೨
ಶ್ರೀಹರಿಯೇ ಅನುಕೂಲ್ಯೇನ ಗೃಹ್ಯಮಾಣನೆಂದು ಸಿದ್ಧವಾಯಿತು ೪೭೩
ಭಾವದೀಪ
ಶ್ರುತಿಯ ಜೊತೆ ಸ್ಮೃತಿಯ ಸಮುಚ್ಚಯ ೪೭೪
'ಅಪಿ' ಪದದಿಂದ ಎರಡು ಲಿಂಗಗಳ ಸಮುಚ್ಚಯ ೪೭೪
'ಕಿಂಚ' ಇತ್ಯಾದಿ ಟೀಕೆಯ ಸೂತ್ರದ 'ಅಪಿ' ಪದಾರ್ಥ ೪೭೫
ಮೂರನೆಯ ಲಿಂಗವೂ ಅಪಿಶಬ್ದದಿಂದ ಸಮುಚ್ಚಿತ ೪೭೫
'ನಚ ಮಂತವ್ಯಮ್' ಇತ್ಯಾದಿ ಟೀಕೆಯಿಂದ ವ್ಯಾವರ್ತವಾದ ಶಂಕೆ ೪೭೫
ಮೂರು ತತ್‌ಗಳಲ್ಲಿ ಯಾವುದು ? ೪೭೬
ಮೂರುಲಿಂಗಗಳು ಪ್ರಕೃತ ೪೭೬
ಪುಲ್ಲಿಂಗನಿರ್ದೇಶಕ್ಕಾಗಿ 'ಯಸ್ಯ' ಇತ್ಯಾದಿ ಟೀಕೆ ೪೭೭
ಪುಲ್ಲಿಂಗಕ್ಕೆ ಸನ್ನಿಹಿತಪರತ್ವ ಸಮರ್ಥನೆ ೪೭೭
'ಯಸ್ಯ' ಎಂಬುದರ ಅಧ್ಯಾಹಾರ ಅನಿವಾರ್ಯವೇ ? ೪೭೭
ಜ್ಞಾನಿಸುಖವನ್ನು ಪರಾಮರ್ಶಿಸಿದರೆ ಮತ್ತೊಂದು ಬಾಧಕ ೪೭೮
ಜ್ಞಾನಿಸುಖದಲ್ಲಿ ಪರಮತ್ವವಿಲ್ಲವೆನ್ನಲು ವರಾಹ ಪುರಾಣ ೪೭೮
ಶ್ರೀಹರಿಯಲ್ಲಿ ಮಾಡಿದ ಸಮನ್ವಯಕ್ಕೆ ಸಾಧಕವಿದೆ ಬಾಧಕವಿಲ್ಲ ೪೭೯
ತಂತ್ರದೀಪಿಕೆಯಲ್ಲಿ ಅನುಕೃತ್ಯಧಿಕರಣದ ಸೂತ್ರಗಳು ೪೮೧
ಅಧಿಕರಣದ ಸಮನ್ವಯ ೪೮೧
'ತಸ್ಯ' ಎಂಬ ಪದದ ಆವೃತ್ತಿಯ ಜೊತೆ ಸೂತ್ರಾರ್ಥ ೪೮೧
ಸೂತ್ರದ 'ತಸ್ಯ' ಪದವು ಶ್ರುತಿ ಪ್ರತೀಕ ೪೮೨
ವಿಷ್ಣುವೇ ಅನುಕೂಲ್ಯೇನ ಗೃಹಮಾಣ ೪೮೩
'ಅನುಕೃತೇಃ 'ಎಂಬ ಪದ ಪ್ರಯೋಗದ ಸ್ವಾರಸ್ಯ ೪೮೩
'ತಸ್ಯ ಅನುಕೃತೇಃ' ಎಂದು ಹೇಳಲು ಕಾರಣ ? ೪೮೪
ಮೂರು ಲಿಂಗಗಳು ವಿಷ್ಣುವಿನಲ್ಲಿ ಮಾತ್ರ ಎನ್ನಲು ಶ್ರುತಿ-ಸ್ಮೃತಿಗಳು ೪೮೪
ಗೀತೆಯಲ್ಲಿ ಹೇಳಿದ ಲಿಂಗಗಳು ೪೮೫
ಸ್ಮೃತಿಯನ್ನು ಕಂಠತಃ ಹೇಳಿ, ಶ್ರುತಿಯನ್ನೇಕೆ ಸಮುಚ್ಚಯ ಮಾಡಿದರು ? ೪೮೫

ಮತ್ತೊಂದು ಬಗೆಯಲ್ಲಿ ಸೂತ್ರವ್ಯಾಖ್ಯಾನ ೪೮೫
ಅದ್ವೈತಮತ ಹಾಗೂ ರಾಮಾನುಜಮತದಲ್ಲಿ ಅನುಕೃತ್ಯಧಿಕರಣ ೪೮೬

ವಾಮನಾಧಿಕರಣ

ಬ್ರಹ್ಮಸೂತ್ರ
'ಶಬ್ದಾದೇವ ಪ್ರಮಿತಃ' ಎಂಬ ಸೂತ್ರ ವ್ಯಾಖ್ಯಾನ ೪೯೬
ಬ್ರಹ್ಮಸೂತ್ರಭಾಷ್ಯ
ಜಗದ್ಗುರು ಶ್ರೀಮಧ್ವಾಚಾರ್ಯರಿಂದ ವಿರಚಿತವಾದ ೪೯೭
ವಾಮನಶಬ್ದದಿಂದ ಈಶಾನ ಶಬ್ದದ ಸಮನ್ವಯ ೪೯೭
ಮುಖ್ಯಪ್ರಾಣನೇ ವಾಮನಶಬ್ದ ಪ್ರತಿಪಾದ್ಯನಾದ್ದರಿಂದ ಜಿಜ್ಞಾಸ್ಯನೆಂದು ಪೂರ್ವಪಕ್ಷ ೪೯೮
ಮಹಾವಿಷ್ಣುವೇ ವಾಮನನೆಂದು ಸಿದ್ಧಾಂತ ೪೯೯
ಲಿಂಗವು ಶ್ರುತಿಗಿಂತ ಪ್ರಬಲವಲ್ಲ ೫೦೦
ಸ್ಕಾಂದ ಪುರಾಣದಲ್ಲಿ ಪ್ರಾಬಲ್ಯ ದೌರ್ಬಲ್ಯ ವಿಚಾರ ೫೦೦
ಪ್ರಾಣಶಬ್ದದಿಂದಲೂ ವಿಷ್ಣುವೇ ಪ್ರತಿಪಾದ್ಯ ೫೦೧
ಸತ್ತರ್ಕದೀಪಾವಳಿ
ಮುಖ್ಯಪ್ರಾಣದೇವರಲ್ಲಿರುವ ಲಿಂಗಗಳು ೫೦೨
'ಕುವಿದಂಗ' ಇತ್ಯಾದಿ ಶ್ರುತಿಯ ಅರ್ಥ ೫೦೩
ನಿದಿಧ್ಯಾಸನಕ್ಕೆ ಯಾರು ವಿಷಯ ? ೫೦೩
ಮುಖ್ಯಪ್ರಾಣಲಿಂಗವು ವಿಷ್ಣುಶ್ರುತಿಗಿಂತ ದುರ್ಬಲ ೫೦೩
ಜೈಮಿನಿ ಋಷಿಗಳು ಹೇಳಿದ ಸೂತ್ರದಲ್ಲಿ ಪ್ರಾಬಲ್ಯ ವಿಚಾರ ೫೦೪
ಸ್ಕಾಂದ ಪುರಾಣದಲ್ಲಿಯೂ ಅದನ್ನೇ ಹೇಳಿದೆ ೫೦೪
ಈಶಾನಶಬ್ದದಿಂದ ವಿಷ್ಣುಪ್ರತಿಪಾದಕವೆನ್ನಲು ಬಾಧಕವಿಲ್ಲ ೫೦೪
ತತ್ತ್ವಪ್ರದೀಪ
ವಿಷ್ಣುವಿನ ಜಿಜ್ಞಾಸೆಯನ್ನೇ ಮಾಡಬೇಕು ೫೦೫
ಸಕಲ ದೇವತೆಗಳ ಉಪಾಸನೆಗೆ ಯಾರು ವಿಷಯ ? ೫೦೫
ಮಧ್ಯಮಪ್ರಾಣನು ಉಪಾಸ್ಯನೆಂದು ಪೂರ್ವಪಕ್ಷ ೫೦೭
ಮುಖ್ಯಪ್ರಾಣನೇ ಜಿಜ್ಞಾಸ್ಯನೆನ್ನಲು ಸಂವಾದಿ ಪ್ರಮಾಣ ೫೦೭
ಮುಖ್ಯಪ್ರಾಣನಲ್ಲಿ ಸರ್ವದೇವೋಪಾಸ್ಯತ್ವ ೫೦೨
ಕುವಿದಂಗ ಎಂಬ ಶ್ರುತ್ಯರ್ಥ ೫೦೫
ಶ್ರುತಿಲಿಂಗಾದಿಗಳ ಲಕ್ಷಣ ೫೦೬
ಸಮಾಖ್ಯೆಯ ಬಗ್ಗೆ ಒಂದು ವಿಮರ್ಶೆ ೫೦೮
ಶ್ರುತಿ ೫೦೯
ಲಿಂಗ ೫೦೯
ವಾಕ್ಯ ೫೧೦
ಪ್ರಕರಣ ೫೧೦
ಸಮಾಖ್ಯಾ ೫೧೦

ಶ್ರುತ್ಯಾದಿಗಳ ಲಕ್ಷಣ ೫೨೦
ನಿರವಕಾಶವೇ ಪ್ರಬಲ ೫೨೧
ತತ್ತ್ವಪ್ರಕಾಶಿಕಾ
ಅಧಿಕರಣ ಸಂಗತ್ಯಾದಿ ವಿಚಾರ ೫೨೧
ಈಶಾನಶಬ್ದ ಪ್ರತಿಪಾದ್ಯನಾದ ವ್ಯಕ್ತಿಯೇ ಜಿಜ್ಞಾಸ್ಯ ೫೨೨
'ಅಂಗುಷ್ಠಮಾತ್ರಃ' ಇತ್ಯಾದಿ ವಿಷಯವಾಕ್ಯ ೫೨೨
ಜಿಜ್ಞಾಸೆ ಹಾಗೂ ಉಪಾಸನೆ ಎರಡೂ ಒಂದೇ ೫೨೩
ಉಪಾಸನೆಯು ಎರಡು ವಿಧ ೫೨೩
ಸರ್ವದೇವೋಪಾಸ್ಯತ್ವಕ್ಕೆ ವಿಷಯನಾದ ಈಶಾನನೇ ಅಧಿಕರಣಕ್ಕೆ ವಿಷಯ ೫೨೩
ಅಧಿಕರಣದ ಸಂದೇಹ ೫೨೪
ಗರ್ಭಸ್ರಾವದಿಂದಲೇ ರುದ್ರನು ವಿವಕ್ಷಿತನಲ್ಲ ೫೨೪
ಯುಕ್ತಿಬದ್ಧವಾದ ಪೂರ್ವಪಕ್ಷ ೫೨೪
ವಾಯುದೇವನೇ ಈಶಾನನೆಂದು ಪೂರ್ವಪಕ್ಷ ೫೨೫
ಈಶಾನಶಬ್ದಕ್ಕೆ ೫೨೫
ಪ್ರಾಣವ್ಯವಸ್ಥಾಪಕತ್ವವು ಮುಖ್ಯಪ್ರಾಣನದ್ದೇ ಲಿಂಗ ೫೨೫
ಪ್ರಾಣನಲ್ಲಿ ಇರುವ ಮಧ್ಯಮತ್ವ ಧರ್ಮ ೫೨೬
ಸರ್ವದೇವೋಪಾಸ್ಯತ್ವವು ವಾಯುದೇವನಲ್ಲಿಯೂ ಇದೆ ೫೨೬
'ಈಶಾನ' ಎಂದರೆ ವಾಯುದೇವರೇ ? ೫೨೬
ವಿಷ್ಣುಜಿಜ್ಞಾಸ್ಯತ್ವಕ್ಕೆ ಇದು ವಿರುದ್ಧವಲ್ಲ ೫೨೭
ಮೋಕ್ಷಬಿಟ್ಟು ಇತರ ಪ್ರಯೋಜನ ದೇವತೆಗಳಿಗಿಲ್ಲ ೫೨೭
ಮೋಕ್ಷಕ್ಕೊಸ್ಕರ ವಿಷ್ಣುವೇ ಜಿಜ್ಞಾಸ್ಯ ಎಂಬುದರ ಅಭಿಪ್ರಾಯ 527
'ಕುವಿದಂಗ' ಎಂಬ ಮಂತ್ರದ ಅರ್ಥ ೫೨೭
ವಾಮನಶ್ರುತಿಯ ಬಲದಿಂದ ವಿಷ್ಣುವೇ ಈಶಾನನೆಂದು ಸಿದ್ಧಾಂತ ೫೨೮
ಅಂಥ ವಿಷ್ಣುವೇ ಜಿಜ್ಞಾಸ್ಯನು ೫೨೮
ಶ್ರುತಿಯಲ್ಲಿರುವ ವಾಮನಶಬ್ದವು ನಿರವಕಾಶ ೫೨೯
ಶಬ್ದಾದೇವ ಎಂಬ ಸೂತ್ರದಲ್ಲಿರುವ ಅವಧಾರಣದ ವ್ಯಾಖ್ಯಾನ ೫೨೯
ವಾಕ್ಯ, ಪ್ರಕರಣ, ಸ್ಥಾನ, ಸಮಾಖ್ಯಾ ಇವುಗಳ ಅರ್ಥ ೫೨೯
ಶ್ರುತಿಯೇ ಸರ್ವಶ್ರೇಷ್ಠ ೫೩೦
ಲಿಂಗಕ್ಕಿಂತಲೂ ವಾಕ್ಯವು ದುರ್ಬಲ ೫೩೦
ಪ್ರಕರಣವು ವಾಕ್ಯಕ್ಕಿಂತಲೂ ದುರ್ಬಲ ೫೩೦
ಪ್ರಕರಣಕ್ಕಿಂತಲೂ ಸ್ಥಾನವು ದುರ್ಬಲ ೫೩೧
ಮುಂದಿನ ಪ್ರಮಾಣಗಳಿಗಿಂತ ಹಿಂದಿನ ಪ್ರಮಾಣಗಳು ಶ್ರೇಷ್ಠ ೫೩೧
ಮುಂದಿನ ಪ್ರಮಾಣಗಳು ಬಾಧಿತವೆಂದು ನಿರ್ಣಯಿಸಬೇಕು ೫೩೨
ಸಮಾಖ್ಯಾಪ್ರಮಾಣಕ್ಕೆ ಬಾಧ ೫೩೨
ಜೈಮಿನಿಗಳು ಹೇಳಿದ ಸೂತ್ರ ೫೩೨
ಭಾಷ್ಯಕಾರರು ಹೇಳಿದ ಪ್ರಾಬಲ್ಯ ತಾರತಮ್ಯ ೫೩೩
ಶ್ರುತ್ಯಾದಿಗಳೇ ಅರ್ಥನಿಶ್ಚಾಯಕ ೫೩೩

ವಿಶ್ರುತಿಪನ್ನಾರ್ಥವನ್ನು ನಿಶ್ಚಯಿಸುವುದು ಹೇಗೆ ? ೫೩೩
ಎಂದೇಕೆ ವಿವಕ್ಷಿಸಿದ್ದಾರೆ ? ೫೩೪
ಅನೇಕ ಲಿಂಗಗಳು ಸೇರಿದಾಗ ಶ್ರುತಿಯು ಬಾಧಕವಾಗುತ್ತದಲ್ಲವೇ ? ೫೩೫
ನಿರವಕಾಶಶ್ರುತಿಯು ಸಾವಿರ ಲಿಂಗಗಳನ್ನು ಎದುರಿಸುತ್ತದೆ ೫೩೫
ಪ್ರಾಣಶಬ್ದದಿಂದ ವಾಯುಶಬ್ದವನ್ನು ವಿವಕ್ಷಿಸಬೇಕು ೫೩೫
ಭಾವದೀಪ
ಅಕ್ಷರಾಧಿಕರಣನ್ಯಾಯದಿಂದ ಉಭಯಸಾಧಾರಣ್ಯ ಸಮರ್ಥನೆ ೫೩೬
ಈಶಾನ ಶಬ್ದವು ವಾಯು ಹಾಗೂ ವಿಷ್ಣು ಇಬ್ಬರಲ್ಲಿಯೂ ಪ್ರಸಿದ್ಧ ೫೩೮
ಮೂರನೆಯ ಪಾದದಲ್ಲಿ ಈ ಅಧಿಕರಣವು ಸಂಗತ ೫೩೮
ಉಪಾಸನಾವಾಕ್ಯದ ಹಿಂದಿನ ವಾಕ್ಯವನ್ನು ಉಲ್ಲೇಖಿಸಲು ಕಾರಣ ೫೩೮
'ವಿಶ್ವೇದೇವಾಃ' ಎಂದಷ್ಟೇ ಹೇಳಿದ್ದರೆ ಸಾಕಿತ್ತಲ್ಲವೇ ? ೫೩೯
ಪ್ರಾಣವ್ಯವಸ್ಥಾಪಕತ್ವಾದಿ ಧರ್ಮಗಳು ಮುಖ್ಯಪ್ರಾಣದೇವರದ್ದು ೫೩೯
'ಈಶಾನಃ' ಎಂಬ ಪದವನ್ನು ಅನುಷಂಗ ಮಾಡಬೇಕು ೫೪೦
ಸಕಲೋಪಾಸ್ಯತ್ವವು ವಾಯುದೇವರಲ್ಲಿದೆ ೫೪೦
ಉಳಿದವರಲ್ಲಿ ಈ ಲಿಂಗವಿಲ್ಲ ೫೪೦
ವಾಮನನಲ್ಲಿ ಪ್ರಾಣಪ್ರೇರಕತ್ವಾದಿಗಳು ಪ್ರತೀತವಾಗಿಲ್ಲ ೫೪೧
'ಮಧ್ಯೇ ವಾಮನಮ್' ಎಂಬಲ್ಲಿ ಮಾಡಬೇಕಾದ ಪ್ರತ್ಯಭಿಜ್ಞಾನ ೫೪೧
ಅಧಿಕರಣದ ಪೂರ್ವಪಕ್ಷಾದಿಗಳು ೫೪೨
'ಏವಮೇವೈಷ ಪ್ರಾಣಃ' ಇತ್ಯಾದಿ ವಾಕ್ಯತ್ರಯಗಳು ೫೪೨
'ಊರ್ಧ್ವಂ' ಇತ್ಯಾದಿಯಾಗಿ ಹೇಳಿದ್ದರ ಉಪಯೋಗ ೫೪೨
'ಊರ್ಧ್ವಂ ಪ್ರಾಣಮುನ್ನಯತಿ' ಇತ್ಯಾದಿಗಳು
ಮುಖ್ಯಪ್ರಾಣನಲ್ಲಿ ಮಾತ್ರ ಸಮನ್ವಯವಾಗುತ್ತದೆ ೫೪೩
ಭಾಷ್ಯದಲ್ಲಿರುವ 'ಏಪಂ' ಪದದ ವ್ಯಾಖ್ಯಾನ ೫೪೩
ಮುಖ್ಯಪ್ರಾಣದೇವರು ಮಾಡುವ ಆಜ್ಞೆಯ ಕ್ರಮ ೫೪೩
ಮುಖ್ಯಪ್ರಾಣದೇವರನ್ನು ಯಾರೂ ಸಂಹರಿಸುವುದಿಲ್ಲ ೫೪೪
ಶಿಶು ಬ್ರಾಹ್ಮಣದಲ್ಲಿಯೂ ಮುಖ್ಯಪ್ರಾಣರೇ ಪ್ರತಿಪಾದ್ಯರು ೫೪೪
ಮತ್ತೊಂದು ವ್ಯಾಖ್ಯಾನ ೫೪೫
'ವಿಷ್ಣೋರೇವ' ಎಂಬಲ್ಲಿರುವ ಅವಧಾರಣೆಯ ವ್ಯಾಖ್ಯಾನ ೫೪೫
'ಅಂಗಾವಬದ್ಧಾಸ್ತು' ಎಂಬುದರ ವ್ಯಾಖ್ಯಾನ ೫೪೫
ಸರ್ವದೇವೋಪಾಸ್ಯತ್ವವನ್ನು ಏಕೆ ಹೇಳಿದ್ದಾರೆ ? ೫೪೫
ಸಕಲ ತಾತ್ಪರ್ಯ ಭಾಷ್ಯಾರೂಢ ೫೪೬
'ಕುವಿದಂಗ' ಎಂಬ ಮಂತ್ರದಲ್ಲಿ ಹೇಳಿದ ಉಪಾಸ್ಯತ್ವ ೫೪೬
ಋಗ್ವೇದದಲ್ಲಿರುವ ಕುವಿದಂಗ ಮಂತ್ರ ೫೪೬
ಬಾಧಿತಾಯ ಎಂಬುದರ ವ್ಯುತ್ಪತ್ತಿ ೫೪೬
ಕುವಿದಂಗ ಎಂಬ ಮಂತ್ರವು ಮುಖ್ಯಪ್ರಾಣ ಪರ ೫೪೭
'ವಿಷ್ಣುರೇವ' ಇತ್ಯಾದಿ ಭಾಷ್ಯಕ್ಕೆ ಪೀಠಿಕೆ ೫೫೦
ವಾಮನಶ್ರುತಿಯು ವಿಷ್ಣುವಿನಲ್ಲಿ ಮಾತ್ರ ನಿರವಕಾಶ ೫೫೦

ವಾಮನಿ ಶಬ್ದದ ನಿಷ್ಪತ್ತಿ	೫೫೧
ಜಿಜ್ಞಾಸಾ ನಿಯಮದ ಆಕ್ಷೇಪಕ್ಕೆ ಏನು ಉತ್ತರ ?	೫೫೪
ಪ್ರಮಿತ ಪದದಿಂದ ತಿಳಿಯುವ ಮೂಲ	೫೫೪
ಸೂತ್ರದಲ್ಲಿರುವ ಏವಕಾರದ ವ್ಯಾಖ್ಯಾನ	೫೫೪
ಶ್ರುತಿಗೆ ನಿರವಕಾಶತ್ವ ಹೇಳಿದ್ದು ಅಭ್ಯುಚ್ಚಯಕ್ಕಾಗಿ	೫೫೫
ವಾಕ್ಯಾದಿಗಳ ಲಕ್ಷಣ	೫೫೫
ಶ್ರುತಿಯ ಲಕ್ಷಣ	೫೫೬
ಲಿಂಗದ ಲಕ್ಷಣ	೫೫೬
ಶ್ರುತಿಪ್ರತಿಪಾದ್ಯವಾದ ಅನಂತತ್ವಲಿಂಗ	೫೫೭
'ಶ್ರೀಶ್ಚತೇ' ಎಂಬ ವಾಕ್ಯದಿಂದ ಪ್ರತಿಪಾದ್ಯವಾದ ಲಿಂಗ	೫೫೭
ನಿರಾಕಾಂಕ್ಷಿತವೆಂದರೇನು ?	೫೫೭
ಎರಡು ಬಗೆಯ ವಾಕ್ಯಗಳ ಬಗ್ಗೆ	೫೫೮
ಸ್ವಾಂತರ್ಗತವಾದ ಪದಗಳಿಂದಲೇ ಅರ್ಥನಿರ್ಣಯ	೫೫೮
ಎರಡನೆಯ ಪಕ್ಷದಲ್ಲಿಯೇ ವಿಕಲ್ಪ	೫೫೮
'ಅಮೃತಸ್ಯೈಷ ಸೇತುಃ' ಎಂಬುದರಿಂದ ನಿರ್ಣಯವಾಗದ ವಿಷಯ	೫೫೯
ಎರಡನೆಯದ್ದಕ್ಕೆ ದೃಷ್ಟಾಂತ	೫೫೯
ಪ್ರಕರಣದ ಲಕ್ಷಣ	೫೫೯
ಸ್ಥಾನದ ಲಕ್ಷಣ	೫೬೦
ಸ್ಥಾನಕ್ಕೆ ಉದಾಹರಣೆ	೫೬೦
ಸಮಾಖ್ಯಾ ಲಕ್ಷಣದ ಬಗ್ಗೆ	೫೬೧
ಸಮಾಖ್ಯೆಯು ಎರಡುವಿಧ	೫೬೧
ಎರಡು ಬಗೆಯ ಸಮಾಖ್ಯೆಗಳಿಗೆ ಉದಾಹರಣೆ	೫೬೧
ಶ್ರುತ್ಯಾದಿಗಳಲ್ಲಿ ಯಾವುದು ಪ್ರಬಲ ?	೫೬೨
ಶ್ರುತಿಗಿಂತ ಲಿಂಗವು ದುರ್ಬಲವೆನ್ನಲು ಕಾರಣ	೫೬೨
ವಾಮನಾಧಿಕರಣವೇ ಉದಾಹರಣೆ	೫೬೩
ಶ್ರುತಿಯು ಲಿಂಗಕ್ಕಿಂತ ಪ್ರಬಲ	೫೬೩
ವಾಕ್ಯಕ್ಕಿಂತಲೂ ಲಿಂಗವೇ ಪ್ರಬಲವೆನ್ನಲು ಕಾರಣ	೫೬೪
ಎಲ್ಲಾ ವಾಕ್ಯಗಳು ವಿಷ್ಣುಪರ	೫೬೪
ಶ್ರುತ್ಯಾದಿಗಳು ವಿಷ್ಣುವೊಬ್ಬನನ್ನೇ ಪ್ರತಿಪಾದನೆ ಮಾಡುತ್ತದೆ	೫೬೫
ವಾಕ್ಯ ಹಾಗೂ ಪ್ರಕರಣಗಳಲ್ಲಿರುವ ವ್ಯತ್ಯಾಸ	೫೬೬
ಸ್ಥಾನವು ಪ್ರಕರಣಾದಿಗಳಿಗಿಂತ ದುರ್ಬಲವೆನ್ನಲು ಕಾರಣ	೫೬೭
ಸಮಾಖ್ಯಾಪ್ರಮಾಣವು ಅತ್ಯಂತ ದುರ್ಬಲವೆನ್ನಲು ಕಾರಣ	೫೬೭
ಅಂತರಾಧಿಕರಣದಲ್ಲಿ ಶ್ರುತಿಯು ದುರ್ಬಲವೆಂದು ಹೇಗೆ ಹೇಳಿದರು ?	೫೬೮
'ಏವಮಾಗಮನಿರ್ಣಯಃ' ಎಂಬುದರ ವ್ಯಾಖ್ಯಾನ	೫೬೮
ಆಗಮಾರ್ಥದಲ್ಲಿ ಮಾತ್ರ ನಿರ್ಣಯಕಲಿಂಗಗಳು	೫೬೮
'ಲಿಂಗಂ ತಾತ್ಪರ್ಯನಿರ್ಣಯೇ' ಎಂಬುದರ ವ್ಯಾಖ್ಯಾನ	೫೬೯
ಶ್ರುತಿಲಿಂಗಾದಿಗಳ ಬಗ್ಗೆ ತಾತ್ಪರ್ಯಚಂದ್ರಿಕೆಯಲ್ಲಿ ಹೆಚ್ಚಿನ ವಿಚಾರ	೫೬೯

ಸ್ಮೃತಿಕಾರರಿಗೂ ಈ ತಾರತ್ಯಮವು ವಿವಕ್ಷಿತ ೫೭೦
ಸಮಾಖ್ಯಾಪ್ರಮಾಣದ ಆಧಾರದಲ್ಲಿ ೫೭೦
ಶ್ರುತಿಲಿಂಗಾದಿಗಳ ಬಗ್ಗೆ ಮೂರನೆಯ ಅಧ್ಯಾಯದಲ್ಲೂ ಹೆಚ್ಚಿನ ವಿಚಾರ ೫೭೧
ಜೈಮಿನಿ ಋಷಿಗಳಿಗೂ ಇದು ಸಮ್ಮತ ೫೭೧
'ತದಾಹ ಜೈಮಿನಿಃ' ಎಂಬುದರ ಅಭಿಪ್ರಾಯ ೫೭೧
ಭಕ್ತಿಪಾದದ ಅನುವ್ಯಾಖ್ಯಾನದಲ್ಲಿ ೫೭೨
'ಶ್ರುತಿಲಿಂಗವಾಕ್ಯಾನಾಮ್' ಎಂಬ ಟೀಕೆಗೆ ವ್ಯಾಖ್ಯಾನ ೫೭೨
ಉಪಕ್ರಮೋಪಸಂಹಾರ ವಾಕ್ಯಗಳಲ್ಲಿ ಅರ್ಥನಿರ್ಣಯದ ಕ್ರಮ ೫೭೩
ನಿರಾಕಾಂಕ್ಷಪದವನ್ನು ವಾಕ್ಯವೆಂದು ಹೇಳಲಾಗದು ೫೭೩
ಲಿಂಗವು ವಾಕ್ಯಕ್ಕಿಂತ ಪ್ರಬಲವೆನ್ನಲು ಕಾರಣ ೫೭೪
'ಶ್ರೀಶ್ಚ ತೇ' ಎಂಬ ವಾಕ್ಯಕ್ಕೆ ಲಿಂಗತ್ವವನ್ನು ಏಕೆ ಸಮರ್ಥಿಸಲಾಯಿತು ? ೫೭೪
'ಅನಂತಃ' ಎಂಬುದೇ ಲಿಂಗವಾಗಿದೆ ೫೭೫
'ಊರ್ಧ್ವಂ ಪ್ರಾಣಮುನ್ನಯತಿ' ಎಂಬುದೂ ಕೂಡ ಲಿಂಗರೂಪವಾಗಿದೆ ೫೭೫
ಲಿಂಗಕ್ಕೆ ಸಾವಕಾಶತ್ವವನ್ನೇಕೆ ಹೇಳುವರು ? ೫೭೫
ಪ್ರಾಬಲ್ಯವು ಎರಡು ವಿಧ ೫೭೬
ಸ್ವಭಾವತಃ ಬಲಿಷ್ಠವಾದುದಕ್ಕೆ ಪ್ರಾಶಸ್ತ್ಯ ೫೭೬
ಸೂತ್ರದಲ್ಲಿರುವ ಪ್ರಮಿತ ಪದದಿಂದ ತಿಳಿಯುವ ಪ್ರಮೇಯ ೫೭೬
ಮಹಾಯೋಗವೃತ್ತಿಯಿಂದ ವಿಷ್ಣುವಿನಲ್ಲಿ ಶಬ್ದಸಮನ್ವಯ ೫೭೭
ವಾಮನಶ್ರುತಿಯು ನಿರವಕಾಶವಾಗಿದೆ ೫೭೭
'ಮಧ್ಯೇ ವಾಮನಂ' ಎಂಬ ಶ್ರುತಿಯು ಬೇರೆಯವರಲ್ಲಿ ಕೂಡದು ೫೭೭
ಕುವಿದಂಗ ಶ್ರುತಿಯು ವಾಯುಪ್ರತಿಪಾದಕವಲ್ಲ ೫೭೮

ಬ್ರಹ್ಮಸೂತ್ರ

'ಹೃದ್ಯಪೇಕ್ಷಯಾ ತು ಮನುಷ್ಯಾಧಿಕಾರತ್ವಾತ್' ಎಂಬ ಸೂತ್ರ ವ್ಯಾಖ್ಯಾನ ೫೮೦

ಬ್ರಹ್ಮಸೂತ್ರಭಾಷ್ಯ

ಹೃದಯವು ಅಂಗುಷ್ಠಪರಿಮಾಣವಾದ್ದರಿಂದ ಈಶಾನನಿಗೆ ಅಂಗುಷ್ಠಪರಿಮಾಣ ೫೮೧
ಮನುಷ್ಯರಷ್ಟೇ ಉಪಾಸನೆಗೆ ಅಧಿಕಾರಿಗಳು ೫೮೧
ಈಶಾನನಿಗೆ ಅಂಗುಷ್ಠ ಪರಿಮಾಣ ೫೮೩
ಭಾಷ್ಯಾರ್ಥದ ಒಂದು ತುಣುಕಷ್ಟೇ ನಮಗೆ ಸ್ಪಷ್ಟ ೫೮೪

ತತ್ತ್ವಪ್ರಕಾಶಿಕಾ

ಸರ್ವಗತನಿಗೆ ಅಂಗುಷ್ಠ ಪರಿಮಾಣ ಹೇಗೆ ? ೫೮೫
'ಅಂಗುಷ್ಠಮಾತ್ರಃ' ಎಂಬಲ್ಲಿರುವ 'ಮಾತ್ರ' ಪದದ ವ್ಯಾಖ್ಯಾನ ೫೮೫
ಭಗವಂತನಿಗೆ ಅನಂತಮೂರ್ತಿಗಳಿರುವುದರಿಂದ ವಿರೋಧವಿಲ್ಲ ೫೮೬
ಸ್ವಾನೈಕ್ಯದಿಂದ ಅರ್ಥವನ್ನು ಕೂಡಿಸಬಹುದೇ ? ೫೮೬
ಅಂಗುಷ್ಠಪರಿಮಾಣವೆಂದರೇನು ? ೫೮೬
ಉಳಿದ ಪ್ರಾಣಿಗಳಿಗೆ ಅಂಗುಷ್ಠವಿಲ್ಲದಿದ್ದಾಗ ಹೇಗೆ ? ೫೮೭
ಎರಡು ವಿಕಲ್ಪಗಳಿಗೆ ಉತ್ತರ ೫೮೭
ಆಯಾ ಪ್ರಾಣಿಗಳ ಅಂಗುಷ್ಠಪರಿಮಾಣವನ್ನೊಪ್ಪಬೇಕು ೫೮೭

ಪಶುಗಳಿಗೆ ಅಂಗುಷ್ಠವೇ ಇಲ್ಲದಿದ್ದಾಗ ! ೫೮೮
ಈಶಾನ್ಯನಾದ ವಿಷ್ಣುವೇ ಜಿಜ್ಞಾಸ್ಯನೆಂದು ಸಿದ್ಧಾಂತ ೫೮೮
ಭಾವದೀಪ
ಲಿಂಗಗಳ ವಿರೋಧವಿಲ್ಲದ ಮಾತ್ರಕ್ಕೆ ಏನಾಯಿತು ? ೫೮೯
'ಅಂಗುಷ್ಠಮಾತ್ರತ್ವೋಕ್ತೇಃ' ಎಂಬುದರ ಅರ್ಥ ೫೮೯
'ಸರ್ವಗತತ್ವಾತ್' ಎಂಬುದರ ಅರ್ಥ ೫೮೯
ಪರಮಾತ್ಮನು ಅಣುತ್ವರೂಪನೇ ? ೫೯೦
ಅಣುತ್ವ ಮಹತ್ವಗಳೆರಡೂ ಪರಮಾತ್ಮನಲ್ಲಿದೆ ೫೯೦
ಅಂಗುಷ್ಠಮಾತ್ರ ಎಂಬಲ್ಲಿರುವ 'ಮಾತ್ರ' ಪದದ ಅರ್ಥ ೫೯೦
ಹೃದಯಪದದಿಂದ ತಿಳಿಯುವ ಸಾಮರ್ಥ್ಯ ೫೯೧
ಹೆಚ್ಚಿನ ವಿಚಾರ ತಾತ್ಪರ್ಯಚಂದ್ರಿಕೆಯಲ್ಲಿ ೫೯೧
ಕಾಠಕಭಾಷ್ಯಕ್ಕೆ ಅನುಸಾರಿಯಾಗಿ ಬ್ರಹ್ಮಸೂತ್ರ ಭಾಷ್ಯ ೫೯೧
ಭಗವನ್ಮೂರ್ತಿವಿಶೇಷವೇ ಅಂಗುಷ್ಠ ಪರಿಮಾಣವುಳ್ಳದ್ದು ೫೯೨
ಶಕ್ತಿ ವ್ಯಕ್ತಿರೂಪದಿಂದ ವಿರೋಧ ಪರಿಹಾರ ೫೯೨
ಸ್ಥಾನೈಕ್ಯದಿಂದ ಐಕ್ಯಪ್ರಯೋಗವನ್ನು ಕೂಡಿಸಬೇಕು ೫೯೩
ಆನಂದಯಮಯಾಧಿಕರಣದಂತೆ ಮತ್ತೊಂದು ಪರಿಹಾರ ೫೯೩
ಭೇದವ್ಯಪದೇಶವನ್ನು ಹೇಗೆ ಕೂಡಿಸಬೇಕು ? ೫೯೩
ಕೆಲವರ ಆಕ್ಷೇಪ ಹಾಗೂ ಸಮಾಧಾನ ೫೯೩
ಕರ್ಮನಿರ್ಣಯದ ಅಭಿಪ್ರಾಯವು ವಿವಕ್ಷಿತ ೫೯೪
ಅಂಗುಷ್ಠಪರಿಮಾಣವನ್ನು ಹೇಳಿದ್ದು ವ್ಯರ್ಥವೇ ? ೫೯೪
ಇರುವೆಗೆ ಅಂಗುಷ್ಠಪರಿಮಾಣ ಹೇಗೆ ? ೫೯೫
'ಅಂಗುಷ್ಠೇಭ್ಯಾವೇತಿ' ಎಂಬಲ್ಲಿರುವ 'ಅಪಿ' ಶಬ್ದದ ಅರ್ಥವೇನು ? ೫೯೫
ಎರಡು ಸೂತ್ರಗಳ ಒಟ್ಟು ಅಭಿಪ್ರಾಯ ೫೯೫
ಈಶಾನಪದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕೆಂದು ಕೆಲವರ ಆಕ್ಷೇಪ ೫೯೬
ಪ್ರಮಿತಾದಿ ಪದಗಳಿಗೆ ಅಸ್ವಾರಸ್ಯವಿದೆ ಎಂದು ನಿರಾಕರಣೆ ೫೯೬
ತಂತ್ರದೀಪಿಕೆಯಲ್ಲಿ ದಹರಾಧಿಕರಣದ ಸೂತ್ರಗಳು ೫೯೭
'ಈಶಾನ' ಎಂಬ ನಾಮಾತ್ಮಕಶಬ್ದ ಸಮನ್ವಯಕ್ಕಾಗಿ ವಾಮನಾಧಿಕರಣ ೫೯೭
ಪ್ರಮುಖ ಪದದಿಂದ ತಿಳಿಯುವ ನಿರವಕಾಶತ್ವ ೫೯೯
ಹೃದ್ಯಪೇಕ್ಷಯಾ ಎಂಬುದರ ವ್ಯಾಖ್ಯಾನ ೫೯೯
ಪರಮಾತ್ಮನಿಗೆ ಅಂಗುಷ್ಠಮಾತ್ರತ್ವವನ್ನು ಹೇಳಿದ್ದು ತಪ್ಪಲ್ಲ ? ೬೦೦
'ಅಂಗುಷ್ಠಮಾತ್ರಃ ಪುರುಷಃ' ಎಂದು ಹೇಳಿದ್ದು ಮನುಷ್ಯರ ವಿವಕ್ಷೆಯಿಂದ ೬೦೦
ಅದ್ವೈತಮತ ಹಾಗೂ ರಾಮಾನುಜಮತದಲ್ಲಿ ವಾಮನಾಧಿಕರಣ ೬೦೧

ರಾಯರ ಹೃದಯಾಕಾಶದಲ್ಲಿ ಕಾಂತಿ ತುಂಬಿದೆ

ದಿನಕರ, ನಿಶಾಕರ, ಉಷ್ಣಕರರ ಪ್ರಕಾಶವೇನು, ಗ್ರಹಗಳೇನು,

ಅಗಣಿತ ನಕ್ಷತ್ರಗಳೇನು, ಮಿಂಚುಗಳ ಸಮೂಹವೇನು,

ಮುತ್ತು ರತ್ನ ಹವಳಾದಿಗಳ ರಾಶಿಗಳೇನು,

ಎಲ್ಲದರ ಒಟ್ಟೂ ಕಾಂತಿಯನ್ನೂ ಮೀರಿದೆ.

ಈ ಎಲ್ಲಾ ಬೆಳಕುಗಳೂ ಅನಂತ ಪದಾರ್ಥಗಳನ್ನು ತೋರಬಲ್ಲವು.

ರಾಯರ ಅಂತರಂಗದ ಬೆಳಕು

ಅನಂತಾನಂತ ಕಲ್ಯಾಣಗುಣೈಕಧಾಮನ

ಚರಣ ಕಮಲವ ತೋರುವುದು !!

ಇಂದು ಶ್ರೀರಾಘವೇಂದ್ರ ಗುರುಸಾರ್ವಭೌಮರ

ಅಮೃತಮಯಕೃತಿಗಳಿಂದ ಫಲಗಳುಂಟಾಗಿ

ಮಧ್ವಸಿದ್ಧಾಂತವೆಂಬ ಮಹಾವೃಕ್ಷವು ಸೊಬಗಿನಿಂದ ಕಂಗೊಳಿಸುತ್ತಿದೆ.

ಸ್ಫೂರ್ತಿ :- ಗುರುಗುಣಸ್ತವನ

ಪ್ರಕಾಶನ

ಶ್ರೀ ಗುರುಸಾರ್ವಭೌಮ ಸಂಶೋಧನ ಮಂದಿರ

ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ

ಶ್ರೀ ರಾಘವೇಂದ್ರಸ್ವಾಮಿಗಳ ಮಠ

ಮಂತ್ರಾಲಯ - 518 345 (ಆಂಧ್ರ ಪ್ರದೇಶ)